ಡಾ. ಎಂ. ಎಂ. ಕಲಬುರ್ಗಿ
ಸಮಗ್ರ ಸಾಹಿತ್ಯ

ಸಂಪುಟ
೩

ಸಂಶೋಧನ ಸಾಹಿತ್ಯ



ವಚನಪಿತಾಮಹ ಡಾ. ಫ.ಗು.ಹಳಕಟ್ಟಿ ಸಂಶೋಧನ ಕೇಂದ್ರ
ಬಿ.ಎಲ್.ಡಿ.ಇ.ಸಂಸ್ಥೆ, ವಿಜಯಪುರ - ೫೮೬೧೦೩

Imp

(1) intro

(2) KVRM

(2) write

ಡಾ. ಎಂ.ಎಂ. ಕಲಬುರ್ಗಿ ಸಮಗ್ರ ಸಾಹಿತ್ಯ

ಸಂಪುಟ–೩ : ಸಂಶೋಧನ ಸಾಹಿತ್ಯ

❖

• ಕವಿರಾಜಮಾರ್ಗ ಪರಿಸರದ ಕನ್ನಡ ಸಾಹಿತ್ಯ

❖

ಪ್ರಧಾನ ಸಂಪಾದಕರು

ಡಾ. ವೀರಣ್ಣ ರಾಜೂರ

ಧಾರವಾಡ

ಸಂಪಾದಕರು

ಶಶಿಧರ ತೋಡಕರ

ಧಾರವಾಡ

ವಚನಪಿತಾಮಹ ಡಾ.ಫ.ಗು.ಹಳಕಟ್ಟಿ ಸಂಶೋಧನ ಕೇಂದ್ರ

ಬಿ. ಎಲ್. ಡಿ. ಇ. ಸಂಸ್ಥೆ

ವಿಜಯಪುರ

೨೦೧೯

COMPLETE WORK OF DR. M.M.KALBURGI

VOLUME - 3 : SAMSHODHANA SAHITYA

Edited by : Shashidhar Todakar, Dharwad

Published by : Dr. P.G. Halakatti Research Centre
B.L.D.E. Association, Vijayapur, Karnatak

First Edition : 2019
Pages : xxiv + 358=392

Copies: 1000
Price Rs: 200/-

❖❖

Cover page design : K.K. Makali, Hampi.
Type set : Dr. Hanumanth Melinamani, Dr. Sarsawatidevi Bhagawati, Dharwad.
Printer : The PrintPoint, No. 9/8 6th Cross, 4th Main, Rajajinagar, Industrial Town,
Bangalore-560044. Ph. 97390 67359

ಆರ್ಥಿಕ ನೆರವು : ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಕರ್ನಾಟಕ ಸರ್ಕಾರ

ಡಾ.ಎಂ.ಎಂ.ಕಲಬುರ್ಗಿ ಸಮಗ್ರ ಸಾಹಿತ್ಯ, ಸಂಪುಟ : ೩-ಸಂಶೋಧನ ಸಾಹಿತ್ಯ

ಸಂಪಾದಕರು : ಶಶಿಧರ ತೋಡಕರ, ಧಾರವಾಡ

ಪ್ರಕಾಶಕರು : ವಚನಪಿತಾಮಹ ಡಾ.ಫ.ಗು.ಹಳಕಟ್ಟಿ ಸಂಶೋಧನ ಕೇಂದ್ರ
ಬಿ. ಎಲ್. ಡಿ. ಇ. ಸಂಸ್ಥೆ, ವಿಜಯಪುರ

ಪ್ರಥಮ ಮುದ್ರಣ: ೨೦೧೯
ಪುಟಗಳು: xxxiv + ೩೫೮=೩೯೨

ಪ್ರತಿಗಳು: ೧೦೦೦
ಬೆಲೆ ರೂ: ೨೦೦/-

❖❖

ಮುಖಪುಟ ವಿನ್ಯಾಸ: ಕೆ. ಕೆ. ಮಕಾಳಿ, ಹಂಪಿ
ಅಕ್ಷರ ಸಂಯೋಜನೆ: ಡಾ. ಹನುಮಂತ ಮೇಲಿನಮನಿ, ಡಾ. ಸರಸ್ವತಿದೇವಿ ಭಗವತಿ, ಧಾರವಾಡ
ಮುದ್ರಣ: **ಪ್ರಿಂಟ್ ಪಾಯಿಂಟ್**, ನಂ. ೯/೮ ೬ನೆಯ ಕ್ರಾಸ್, ೪ನೆಯ ಮುಖ್ಯರಸ್ತೆ, ರಾಜಾಜಿನಗರ,
ಇಂಡಸ್ಟ್ರಿಯಲ್ ಟೌನ್, ಬೆಂಗಳೂರು-೫೬೦೦೪೪. ಫೋನ್ : ೯೭೩೯೦ ೬೭೩೫೯

ಡಾ. ಎಂ. ಎಂ. ಕಲಬುರ್ಗಿ ಸಮಗ್ರ ಸಾಹಿತ್ಯ ಪ್ರಕಟನ ಯೋಜನೆ

ಸಲಹಾ ಸಮಿತಿ

❖

ಗೌರವಾಧ್ಯಕ್ಷರು

ಡಾ. ಎಂ. ಬಿ. ಪಾಟೀಲ, ವಿಜಯಪುರ

ಅಧ್ಯಕ್ಷರು, ಬಿ.ಎಲ್.ಡಿ.ಇ.ಸಂಸ್ಥೆ ಮತ್ತು ಗೃಹ ಸಚಿವರು, ಕರ್ನಾಟಕ ಸರ್ಕಾರ

ಅಧ್ಯಕ್ಷರು

ಶ್ರೀ ಜಿ. ಕೆ. ಪಾಟೀಲ, ವಿಜಯಪುರ

ಕಾರ್ಯದರ್ಶಿಗಳು

ಡಾ. ಎಂ. ಎಸ್. ಮದಭಾವಿ, ವಿಜಯಪುರ

ಪ್ರಧಾನ ಸಂಪಾದಕರು

ಡಾ. ವೀರಣ್ಣ ರಾಜೂರ, ಧಾರವಾಡ

ಯೋಜನಾ ಸಂಯೋಜಕರು

ಡಾ. ಕೃಷ್ಣ ಕೊಲ್ಹಾರಕುಲಕರ್ಣಿ, ವಿಜಯಪುರ

❖

ಸಲಹಾ ಸದಸ್ಯರು

ಡಾ. ಗುರುಲಿಂಗ ಕಾಪಸೆ, ಧಾರವಾಡ

ಶ್ರೀ ಶ್ರೀವಿಜಯ ಕಲಬುರ್ಗಿ, ಧಾರವಾಡ

ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಪ್ರತಿನಿಧಿಗಳು

❖❖

ಡಾ. ಎಂ. ಎಂ. ಕಲಬುರ್ಗಿ ಸಮಗ್ರ ಸಾಹಿತ್ಯ ಪ್ರಕಟನ ಯೋಜನೆ

❖❖

*

ಪ್ರಧಾನ ಸಂಪಾದಕರ ಮಾತು

ಡಾ. ವೀರಣ್ಣ ರಾಜೂರ

ಮಾರ್ಗಕ್ಕೆ ಕೊನೆಯಿಲ್ಲ.....

ಡಾ. ಎಂ. ಎಂ. ಕಲಬುರ್ಗಿ ಅವರು ಕನ್ನಡ ಸಂಶೋಧನ ಮಹಾಮಾರ್ಗದ ಮಹಾಶಿಲ್ಪಿ; ಕನ್ನಡ ವಿದ್ವತ್ ಪರಂಪರೆಯ ಪ್ರಥಮ ಶ್ರೇಣಿಯ ಗಟ್ಟಿ ವಿದ್ವಾಂಸರು; ಕನ್ನಡ ಭಾಷೆ–ಸಾಹಿತ್ಯ–ಸಂಸ್ಕೃತಿಗಳ ಬಹುಶಿಸ್ತೀಯ ಅಧ್ಯಯನದ ಸವ್ಯಸಾಚಿ ಸತ್ಯಶೋಧಕರು. ಅವರ ಘನವ್ಯಕ್ತಿತ್ವ, ಕರ್ತೃತ್ವಶಕ್ತಿ, ಕಾರ್ಯಕ್ಷಮತೆ, ನಾಡು–ನುಡಿ–ಸಂಸ್ಕೃತಿ ಪ್ರೀತಿ, ಸಾಮಾಜಿಕ ಕಳಕಳಿ, ಶೈಕ್ಷಣಿಕ ಶಿಸ್ತು, ಸಾಹಿತ್ಯಿಕ–ಸಾಧನೆ, ಸಂಶೋಧನ ಸಿದ್ಧಿ, ಆಡಳಿತ ದಕ್ಷತೆ ಹಾಗೂ ಮಾನವೀಯ ಮೌಲ್ಯಗಳ ಅನುಷ್ಠಾನ ಅಪೂರ್ವ–ಅದ್ವಿತೀಯ–ಅನುಕರಣೀಯ.

ಡಾ. ಎಂ. ಎಂ. ಕಲಬುರ್ಗಿ ಅವರದು ಬಹುಮುಖ ವ್ಯಕ್ತಿತ್ವ; ಬಹುಮುಖ ಪ್ರತಿಭೆ–ಪಾಂಡಿತ್ಯ–ಪ್ರಭುತ್ವ; ಬಹುಮುಖ ಕಾರ್ಯ ಯೋಜನೆ, ಕಾರ್ಯಸಾಧನೆ, ಕಾರ್ಯಸಿದ್ಧಿ. ಕನ್ನಡದ ಶ್ರೇಷ್ಠ ಪ್ರಾಧ್ಯಾಪಕರಾಗಿ, ಪ್ರಥಮ ಶ್ರೇಣಿಯ ಸಂಶೋಧಕರಾಗಿ, ಸಮರ್ಥ ಸಂಶೋಧನ ಮಾರ್ಗದರ್ಶಕರಾಗಿ, ವಿಭಾಗದ ದಕ್ಷ ಅಧ್ಯಕ್ಷರಾಗಿ, ವಿಶ್ವವಿದ್ಯಾಲಯದ ಮಾದರಿಯ ಕುಲಪತಿಗಳಾಗಿ, ಉನ್ನತ ಶಿಕ್ಷಣ ತಜ್ಞರಾಗಿ, ಅನೇಕ ವಿನೂತನ ಯೋಜನೆಗಳ ಯೋಜಕರಾಗಿ, ಹಲವಾರು ಧಾರ್ಮಿಕ, ಸಾಮಾಜಿಕ, ಶೈಕ್ಷಣಿಕ, ಸಾಂಸ್ಕೃತಿಕ ಸಂಘಸಂಸ್ಥೆಗಳ ನಿರ್ದೇಶಕರಾಗಿ ಅವರು ಮಾಡಿದ ಕಾರ್ಯ, ಕೊಟ್ಟ ಕೊಡುಗೆ ಅಚ್ಚರಿ ಮೂಡಿಸುವಂತಹವು; ಅಭಿಮಾನ ಉಕ್ಕಿಸುವಂತಹವು.

ಜೀವನ–ಸಾಧನೆ :

ಡಾ. ಎಂ. ಎಂ. ಕಲಬುರ್ಗಿ (ಮಲ್ಲೇಶಪ್ಪ ಮಡಿವಾಳಪ್ಪ ಕಲಬುರ್ಗಿ) ಅವರು ೧೯೩೮ ನವ್ಹೆಂಬರ್ ೨೮ ರಂದು ತಾಯಿಯ ತವರೂರು ಗುಬ್ಬೇವಾಡ(ತಾ. ಸಿಂದಗಿ, ಜಿ: ವಿಜಯಪುರ)ದಲ್ಲಿ ಜನಿಸಿದರು. ತಂದೆ ಮಡಿವಾಳಪ್ಪ; ತಾಯಿ ಗುರಮ್ಮ. ಶ್ರಮಸಂಸ್ಕೃತಿಯ ಒಕ್ಕಲುತನ ಮನೆತನ. ಮಧ್ಯಮವರ್ಗದ ಸುಸಂಸ್ಕೃತ–ಅವಿಭಕ್ತ ಕುಟುಂಬ. ಇಂಥ ಪರಿಸರದಲ್ಲಿ ಬೆಳೆದ ಕಲಬುರ್ಗಿ ಅವರಿಗೆ ಶ್ರಮಗೌರವ ಹಾಗೂ ಸಹಬಾಳ್ವೆಯ ಪಾಠ ಬಾಲ್ಯದಿಂದಲೇ ಬಳುವಳಿಯಾಗಿ ದೊರೆಯಿತು.

ಕಲಬುರ್ಗಿ ಅವರ ಪ್ರಾಥಮಿಕ ಶಿಕ್ಷಣ (ಮುಲ್ಕೀ ಪರೀಕ್ಷೆಯವರೆಗೆ) ತಂದೆಯವರ ಊರಾದ ಯರಗಲ್ಲ (ತಾ. ಸಿಂದಗಿ, ಜಿ. ವಿಜಯಪುರ)ದಲ್ಲಿ ನಡೆಯಿತು. ಮಾಧ್ಯಮಿಕ ವ್ಯಾಸಂಗವನ್ನು ಸಿಂದಗಿಯ ಎಚ್.ಜಿ. ಬಾಡ ಹೈಸ್ಕೂಲಿನಲ್ಲಿ ಪೂರೈಸಿದರು. ೧೯೫೬ ರಲ್ಲಿ ಮ್ಯಾಟ್ರಿಕ್ ಪರೀಕ್ಷೆಗೆ ಕುಳಿತು ಉಚ್ಚಶ್ರೇಣಿಯಲ್ಲಿ ತೇರ್ಗಡೆ ಹೊಂದಿದರು.

ಕಲಬುರ್ಗಿ ಅವರ ಉನ್ನತವ್ಯಾಸಂಗ ವಿಜಯಪುರ ಮತ್ತು ಧಾರವಾಡದಲ್ಲಿ ನೆರವೇರಿತು. ವಿಜಯಪುರದ ಬಿಎಲ್‌ಡಿಇ ಸಂಸ್ಥೆಯ ವಿಜಯ ಕಾಲೇಜಿನಿಂದ ಬಿ.ಎ. ಪದವಿಯನ್ನು (೧೯೬೦) ಪ್ರಥಮಶ್ರೇಣಿಯಲ್ಲಿ, ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯದ ಕನ್ನಡ ವಿಭಾಗದಿಂದ ಎಂ.ಎ. ಪದವಿಯನ್ನು (೧೯೬೨) ಪ್ರಶಸ್ತಿ ಸಹಿತ ಪ್ರಥಮ ಶ್ರೇಣಿಯಲ್ಲಿ ಗಳಿಸಿಕೊಂಡರು. ಮೊದಲಿನಿಂದಲೂ ಪ್ರತಿಭೆ–ಪರಿಶ್ರಮಗಳ ಸಂಗಮವೆನಿಸಿದ್ದ ಕಲಬುರ್ಗಿ ಅವರಿಗೆ ಕಾಲೇಜಿನಲ್ಲಿ ಪ್ರೊ. ಬಿ.ಟಿ. ಸಾಸನೂರ ಅವರು, ವಿಶ್ವವಿದ್ಯಾಲಯದಲ್ಲಿ ಡಾ. ಆರ್.ಸಿ. ಹಿರೇಮಠ ಅವರು ಪ್ರೀತಿಯ ಗುರುಗಳಾಗಿ ದೊರೆತು ತಮ್ಮ ವಿದ್ವತ್ತಿನ ಜ್ಞಾನಾಮೃತವನ್ನು ನೆಚ್ಚಿನ ವಿದ್ಯಾರ್ಥಿಗೆ ಧಾರಾಳವಾಗಿ ಧಾರೆಯೆರೆದರು. ಗುರುಗಳ ಸಮರ್ಥ ಮಾರ್ಗದರ್ಶನ, ಕಲಬುರ್ಗಿ ಅವರ ಪ್ರತಿಭೆ–ಪರಿಶ್ರಮ–ಪ್ರಯತ್ನಗಳಿಂದ ಮುಪ್ಪುರಿಗೊಂಡ ಸ್ವಸಾಮರ್ಥ್ಯದ ಬಲದಿಂದ ಅವರೊಬ್ಬ ಸಶಕ್ತ–ಮಾದರಿಯ–ಆದರ್ಶ ವಿದ್ಯಾರ್ಥಿಯಾಗಿ ರೂಪುಗೊಂಡರು.

ಎಂ. ಎ. ಅಧ್ಯಯನ ಮುಗಿಯುತ್ತಲೆ ಕಲಬುರ್ಗಿ ಅವರಿಗೆ ಕಲಿತ ವಿಶ್ವವಿದ್ಯಾಲಯದಲ್ಲಿಯೇ ಕೆಲಸ ದೊರೆಯಿತು. ಕನ್ನಡ ವಿಭಾಗದಲ್ಲಿ ಆಗ ತಾನೆ ಆರಂಭವಾಗಿದ್ದ 'ಸಮಗ್ರ ವಚನ ವಾಙ್ಮಯ ಸಂಶೋಧನ ಸಂಸ್ಕರಣ ಪ್ರಕಟಣ ಯೋಜನೆ'ಯಲ್ಲಿ ಸಹಾಯಕ ಸಂಶೋಧಕರಾಗಿ ವೃತ್ತಿಜೀವನ(೧೯೬೨) ಆರಂಭಿಸಿದರು. ಕೆಲವೇ ದಿವಸಗಳಲ್ಲಿ ಕರ್ನಾಟಕ ವಿಶ್ವವಿದ್ಯಾಲಯದ ಪ್ರತಿಷ್ಠಿತ ಕಾಲೇಜು ಎನಿಸಿದ ಕರ್ನಾಟಕ ಕಲಾ ಮಹಾವಿದ್ಯಾಲಯದಲ್ಲಿ ಕನ್ನಡ ಅಧ್ಯಾಪಕರಾಗಿ ಸ್ಥಾನ ಪಡೆದರು. ತಮ್ಮ ಸತತಾಭ್ಯಾಸ ಪ್ರವೃತ್ತಿ, ವ್ಯವಸ್ಥಿತ ಅಚ್ಚುಕಟ್ಟಾದ ಪ್ರಭಾವಶಾಲಿ ಪಾಠಬೋಧನೆ, ಶಿಸ್ತಿನ ನಡೆ–ನುಡಿಗಳಿಂದ ವಿದ್ಯಾರ್ಥಿಗಳ–ಸಹೋದ್ಯೋಗಿಗಳ ವಿಶೇಷ ಪ್ರೀತಿ–ವಿಶ್ವಾಸ–ಗೌರವಗಳಿಗೆ ಪಾತ್ರರಾದರು.

ಪಾಠಬೋಧನೆಯ ಜೊತೆಗೆ ಕಲಬುರ್ಗಿ ಅವರು ತಮ್ಮ ನೆಚ್ಚಿನ ಗುರುಗಳಾಗಿದ್ದ ಡಾ. ಆರ್.ಸಿ. ಹಿರೇಮಠ ಅವರ ಮಾರ್ಗದರ್ಶನದಲ್ಲಿ 'ಕವಿರಾಜಮಾರ್ಗ ಪರಿಸರದ ಕನ್ನಡ ಸಾಹಿತ್ಯ' ಎಂಬ ವಿಷಯದ ಮೇಲೆ ಪಿಎಚ್.ಡಿ. ಸಂಶೋಧನೆಯನ್ನೂ ಕೈಕೊಂಡರು. ಆ ಸಮಯದಲ್ಲಿ ಕರ್ನಾಟಕ ಕಾಲೇಜಿನ ಗ್ರಂಥಾಲಯವನ್ನು ಪೂರ್ಣ ಪ್ರಮಾಣದಲ್ಲಿ ಬಳಸಿಕೊಂಡು ತಮ್ಮ ವಿಭಿನ್ನ ಆಸಕ್ತಿಯ ಜ್ಞಾನ ಕ್ಷೇತ್ರಗಳನ್ನು ಫಲಭರಿತಗೊಳಿಸಿಕೊಂಡರು. ೧೯೬೮ ರಲ್ಲಿ ಡಾಕ್ಟರೇಟ್ ಪದವಿ ಪಡೆದರು.

ನಾಲ್ಕು ವರ್ಷ (೧೯೬೨–೬೬) ಕರ್ನಾಟಕ ಕಾಲೇಜಿನಲ್ಲಿ ಯಶಸ್ವಿಯಾಗಿ ಸೇವೆ ಪೂರೈಸಿದ ನಂತರ ಕಲಬುರ್ಗಿ ಅವರನ್ನು ಕರ್ನಾಟಕ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನಪೀಠ ತನ್ನತ್ತ ಕರೆದುಕೊಂಡಿತು. ಅಲ್ಲಿ ಅವರು ಅಧ್ಯಾಪಕರಾಗಿ, ಪ್ರವಾಚಕರಾಗಿ, ಪ್ರಾಧ್ಯಾಪಕರಾಗಿ, ವಿಭಾಗದ ಅಧ್ಯಕ್ಷರಾಗಿ, ಬಸವಪೀಠದ ಪ್ರಾಧ್ಯಾಪಕರಾಗಿ ಅಖಂಡ ೩೨ ವರ್ಷ (೧೯೬೬–೯೮) ಅದ್ವಿತೀಯವಾದ

ಶೈಕ್ಷಣಿಕ ಸೇವೆ ಸಲ್ಲಿಸಿದರು. 'ಕನ್ನಡ ವಿಭಾಗ' ಅನೇಕ ಅಧ್ಯಯನ ಶಾಖೆಗಳನ್ನು ಹೊಂದಿ, 'ಕನ್ನಡ ಅಧ್ಯಯನಪೀಠ'ವೆಂಬ ಮಹಾವೃಕ್ಷವಾಗಿ ಬೆಳೆದು ನಿಲ್ಲುವಲ್ಲಿ ಕಲಬುರ್ಗಿ ಅವರು ಪಟ್ಟ ಶ್ರಮದ ಪಾಲು ಅತ್ಯಧಿಕವಾಗಿದೆ. ಬಸವೇಶ್ವರಪೀಠವನ್ನು ಕಟ್ಟಿ ಬೆಳೆಸುವಲ್ಲಿ ಅವರು ತೋರಿದ ನಿಷ್ಠೆ ನಿಬ್ಬೆರಗು ಹುಟ್ಟಿಸುವಂತಿದೆ.

ವಿಶ್ವವಿದ್ಯಾಲಯದ ಸೇವೆಯಲ್ಲಿದ್ದಾಗ ಕಲಬುರ್ಗಿ ಅವರು ನಿರ್ವಹಿಸಿದ ಹುದ್ದೆಗಳು ಹಲವಾರು. ಕಲಾನಿಕಾಯದ ಡೀನರಾಗಿ, ವಿದ್ಯಾವಿಷಯಕ ಮಂಡಳಿ, ಪರೀಕ್ಷಾ ಮಂಡಳಿ, ಅಭ್ಯಾಸ ಮಂಡಳಿಗಳ ಅಧ್ಯಕ್ಷರಾಗಿ, ಸಿಂಡಿಕೇಟ್ ಸದಸ್ಯರಾಗಿ, ಕನ್ನಡ ಸಂಶೋಧನ ಸಂಸ್ಥೆಯ ಪ್ರಭಾರ ನಿರ್ದೇಶಕರಾಗಿ, ಸ್ನಾತಕೋತ್ತರ ವಿದ್ಯಾರ್ಥಿ ಕೂಟದ ಅಧ್ಯಕ್ಷರಾಗಿ, ಅನೇಕ ಶೈಕ್ಷಣಿಕ ಸಲಹಾ ಮಂಡಳಿಗಳ ಸದಸ್ಯರಾಗಿ ಅವರು ಮಾಡಿದ ಕಾರ್ಯ, ನೀಡಿದ ಮಾರ್ಗದರ್ಶನ, ಕಾರ್ಯರೂಪಕ್ಕೆ ತಂದ ನೀತಿ-ನಿಯಮಾವಳಿಗಳು ಮೌಲಿಕವಾಗಿದ್ದು, ವಿಶ್ವವಿದ್ಯಾಲಯದ ಶೈಕ್ಷಣಿಕ ಗುಣಮಟ್ಟವನ್ನು ಹೆಚ್ಚಿಸುವಲ್ಲಿ ವಿಶೇಷ ನೆರವು ನೀಡಿವೆ.

ಡಾ. ಎಂ. ಎಂ. ಕಲಬುರ್ಗಿ ಅವರು ೧೯೯೮ರಲ್ಲಿ ಕರ್ನಾಟಕ ವಿಶ್ವವಿದ್ಯಾಲಯದ ಸೇವೆಯಿಂದ ನಿವೃತ್ತಿ ಹೊಂದಿದರು. ಅಷ್ಟರಲ್ಲಿ ಅವರಿಗೆ ಮತ್ತೊಂದು ಉನ್ನತ ಅವಕಾಶದ ಬಾಗಿಲು ತೆರೆದುಕೊಂಡಿತ್ತು. ಹಂಪಿ ಕನ್ನಡ ವಿಶ್ವವಿದ್ಯಾಲಯದ ಕುಲಪತಿಗಳಾಗಿ ನೇಮಕಗೊಂಡರು. ಅದು ಅವರ ಅನೇಕ ನೂತನ ಯೋಜನೆಗಳಿಗೆ ಕಾರ್ಯರಂಗವೆನಿಸಿತು. ತಾವು ಕಂಡ ಕನಸುಗಳನ್ನೆಲ್ಲ ಅಲ್ಲಿ ನನಸುಗೊಳಿಸಲು ತಕ್ಷಣದಲ್ಲಿಯೇ ಕಾರ್ಯ ಪ್ರವೃತ್ತರಾದರು. ಹಿಂದೆ ಇದ್ದ ಕೆಲವು ಶಾಖೆಗಳ ಜೊತೆಗೆ ಮತ್ತೆ ಹಲವು ನೂತನ ಶಾಖೆಗಳನ್ನು ಆರಂಭಿಸಿ, ಎಲ್ಲ ಶಾಖೆಗಳಿಗೂ ಸಮಾನಸ್ಥಾನ-ಮಾನ, ಆರ್ಥಿಕ ಸಹಾಯ, ಮಾನವ ಸಂಪನ್ಮೂಲಗಳನ್ನು ಒದಗಿಸಿ, ಎಲ್ಲರೂ ಶಿಸ್ತುಬದ್ಧವಾಗಿ, ಸಮಯ ನಿಷ್ಠವಾಗಿ ಕೆಲಸ ಮಾಡಲು ತೊಡಗುವಂತೆ ಮಾಡಿದರು. ಅದರಿಂದಾಗಿ ಎಲ್ಲರಲ್ಲಿ ನವಚೈತನ್ಯ ತುಂಬಿಕೊಂಡಿತು. ಸಾಂಘಿಕ, ವೈಯಕ್ತಿಕ ಸಂಶೋಧನ ಯೋಜನೆಗಳಿಂದಾಗಿ ಅನೇಕ ಹೊಸ ಕ್ಷೇತ್ರಗಳಿಗೆ ಸಂಬಂಧಿಸಿದ ಅಪೂರ್ವ ಗ್ರಂಥಗಳು ಪ್ರಕಟವಾದವು. ಅದರಿಂದಾಗಿ ಕನ್ನಡ ವಿಶ್ವವಿದ್ಯಾಲಯದ ಕೀರ್ತಿ ಇಮ್ಮಡಿಗೊಂಡಿತು. ಹಗಲಿರುಳೆನ್ನದೆ ತಾವೂ ದುಡಿದು, ಇತರೆಲ್ಲರನ್ನೂ ದುಡಿಸಿ-ಶ್ರಮಸಂಸ್ಕೃತಿಯನ್ನು ಅಲ್ಲಿ ಗಟ್ಟಿಗೊಳಿಸಿ ಮೂರು ವರ್ಷಗಳಲ್ಲಿ ಅದನ್ನೊಂದು ಮಾದರಿಯ ವಿಶ್ವವಿದ್ಯಾಲಯವನ್ನಾಗಿಸಿ-೨೦೦೧ ರಲ್ಲಿ ನಿವೃತ್ತಿ ಹೊಂದಿದರು. ಹಿಂದಿನವರಂತೆ ಕಲಬುರ್ಗಿಯವರ ಸೇವೆಯನ್ನೂ ಇನ್ನೂ ಮೂರು ವರ್ಷ ವಿಸ್ತರಿಸಿದ್ದರೆ, ಕನ್ನಡ ವಿಶ್ವವಿದ್ಯಾಲಯವನ್ನು ಜಾಗತಿಕ ಮಟ್ಟದಲ್ಲಿ ಗಮನ ಸೆಳೆಯುವ ಒಂದು ಮಹಾಸಂಸ್ಥೆಯನ್ನಾಗಿ ಬೆಳೆಸಿ ನಿಲ್ಲಿಸುತ್ತಿದ್ದರು.

ನಿವೃತ್ತಿಯ ನಂತರ ಡಾ. ಕಲಬುರ್ಗಿ ಅವರ ಕಾರ್ಯಕ್ಷೇತ್ರ ಇನ್ನೂ ವಿಸ್ತಾರಗೊಂಡಿತು. ಮುಕ್ತವಾಗಿ ಅವರು ಸಾಹಿತ್ಯ-ಸಂಶೋಧನೆ-ಸಮಾಜಸೇವೆ-ಸಾಂಸ್ಕೃತಿಕ ಕಾರ್ಯಗಳಲ್ಲಿ ತಮ್ಮನ್ನು ತೊಡಗಿಸಿಕೊಂಡರು. ಅನೇಕ ಸಂಘ-ಸಂಸ್ಥೆಗಳಿಗೆ ಸಾಹಿತ್ಯಿಕವಾಗಿ, ಸಾಮಾಜಿಕವಾಗಿ ಮಾರ್ಗದರ್ಶನ ನೀಡುತ್ತ, ಭಾಷಣ-ಬರಹಗಳ ಮೂಲಕ ಅಸತ್ಯ, ಅನ್ಯಾಯ, ಮೂಢಾಚಾರಗಳನ್ನು ಖಂಡಿಸುತ್ತ, ಶರಣರು ಕಂಡ ಸಮಾನತೆಯ-ಸದಾಚಾರದ-ಸ್ವಸ್ಥ ಸಮಾಜ ನಿರ್ಮಾಣವಾಗಬೇಕೆಂದು ಸಾಮಾಜಿಕರಲ್ಲಿ ಜಾಗೃತಿಯನ್ನು ಮೂಡಿಸುವ ಕಾರ್ಯದಲ್ಲಿ ತೊಡಗಿದರು. ಸ್ಥಾವರಗೊಂಡ ವ್ಯವಸ್ಥೆಯನ್ನು

ಚಲನಶೀಲಗೊಳಿಸಬೇಕು, ಜಂಗಮಗೊಳಿಸಬೇಕು ಎಂದು ನಿರಂತರ ಸಮಾಜ ಶುದ್ಧಿಯ ಕಾರ್ಯದಲ್ಲಿ ನಿರತರಾಗಿದ್ದರು. ಅವರ ಪ್ರಖರ ವಿಚಾರಗಳು, ವೈಚಾರಿಕ ನಿಲವುಗಳು, ನಿಷ್ಠುರ ಸತ್ಯಗಳು ಪಟ್ಟ ಭದ್ರ ಹಿತಾಸಕ್ತಿಗಳಿಗೆ, ಸಂಕುಚಿತ ಭಾವದ ಸನಾತನಿಗಳಿಗೆ ರುಚಿಸಲಿಲ್ಲ; ಅಪಥ್ಯವೆನಿಸಿದವು. ಹೀಗಾಗಿ ಸತ್ಯ ಶೋಧಕರಾದ ಡಾ. ಎಂ. ಎಂ. ಕಲಬುರ್ಗಿ ಅವರು ದುಷ್ಟಶಕ್ತಿಗಳ ಗುಂಡೇಟಿಗೆ ಬಲಿಯಾಗಬೇಕಾಯಿತು. ೩೦-೦೮-೨೦೧೫ ಕರ್ನಾಟಕದ ಇತಿಹಾಸದಲ್ಲಿ ಒಂದು ಕರಾಳದಿನ. ಸಾಂಸ್ಕೃತಿಕ ಶ್ರೀಮಂತ ನಗರವೆನಿಸಿದ ಧಾರವಾಡದಲ್ಲಿ ಹಾಡುಹಗಲೇ ವಿದ್ಯಾರ್ಥಿ ವೇಷದಲ್ಲಿ ಮನೆಯೊಳಗೆ ನುಗ್ಗಿ ಸಾತ್ವಿಕ ಶರಣ, ಸ್ವತಂತ್ರ ವಿಚಾರವಾದಿ, ನ್ಯಾಯ ನಿಷ್ಠುರಿಯ ಅಮಾನುಷ ಹತ್ಯೆ ಮಾಡಲಾಯಿತು. ಇದು ಸತ್ಯದ ಕೊಲೆ; ಅಭಿವ್ಯಕ್ತಿ ಸ್ವಾತಂತ್ರ್ಯದ ಕಗ್ಗೊಲೆ. ಇದರಿಂದ ನಾಡು ಒಬ್ಬ ಅಪ್ರತಿಮ ವಿಚಾರವಾದಿಯನ್ನು ಕಳೆದುಕೊಂಡು ಬಡವಾಯಿತು. ಲಿಂಗಾಯತ ಸಮಾಜ ಒಬ್ಬ ತತ್ವನಿಷ್ಠ ಚಿಂತಕನ ಅಗಲಿಕೆಯಿಂದ ಅನಾಥವಾಯಿತು. ವಿದ್ವತ್‌ಲೋಕ ಒಬ್ಬ ಸತ್ಯನಿಷ್ಠ ಸಂಶೋಧಕನನ್ನು ಕಳೆದುಕೊಂಡು ಭರಿಸಲಾರದ ಹಾನಿಗೊಳಗಾಯಿತು.

* * * *

ಡಾ. ಎಂ. ಎಂ. ಕಲಬುರ್ಗಿ ಅವರ ಬೋಧಕೇತರ ಸಾಹಿತ್ಯಿಕ-ಸಾಂಸ್ಕೃತಿಕ ಕ್ಷೇತ್ರಗಳ ಕಾರ್ಯವ್ಯಾಪ್ತಿ ಬಹು ದೊಡ್ಡದು. ಧಾರವಾಡ ಕರ್ನಾಟಕ ವಿದ್ಯಾವರ್ಧಕ ಸಂಘದ ಪ್ರಧಾನ ಕಾರ್ಯದರ್ಶಿಯಾಗಿ, ಅಖಿಲ ಕರ್ನಾಟಕ ಕೇಂದ್ರ ಕ್ರಿಯಾ ಸಮಿತಿಯ ಕಾರ್ಯದರ್ಶಿಯಾಗಿ; ಯುಜಿಸಿ ಭಾರತೀಯ ಭಾಷೆಗಳ ಸಲಹಾ ಸಮಿತಿ, ಕನ್ನಡ ಸಾಹಿತ್ಯ ಪರಿಷತ್ತಿನ ನಿಘಂಟು ರಚನಾ ಸಮಿತಿ, ಕೇಂದ್ರ ಸಾಹಿತ್ಯ ಅಕಾಡೆಮಿ ಸದಸ್ಯರಾಗಿ; ದ.ರಾ.ಬೇಂದ್ರೆ ಟ್ರಸ್ಟ್, ಬಸವರಾಜ ಕಟ್ಟೀಮನಿ ಪ್ರತಿಷ್ಠಾನ, ಆದಿಲ್‌ಶಾಹಿ ಸಾಹಿತ್ಯ ಅನುವಾದ ಯೋಜನೆಯ ಅಧ್ಯಕ್ಷರಾಗಿ; ಗದಗ ಲಿಂಗಾಯತ ಅಧ್ಯಯನ ಸಂಸ್ಥೆ, ಬೆಳಗಾವಿ ಲಿಂಗಾಯತ ಅಧ್ಯಯನ ಅಕಾಡೆಮಿ, ನಿಡಸೋಸಿ ಶರಣ ಸಂಸ್ಕೃತಿ ಅಕಾಡೆಮಿ, ಕೊಡೆಕಲ್ಲ ಬಸವೇಶ್ವರ ಅಧ್ಯಯನ ಸಂಸ್ಥೆ, ಮೈಸೂರು ಸಮಗ್ರ ಸ್ವರವಚನ ಸಾಹಿತ್ಯ ಪ್ರಕಟಣ ಮಾಲೆ, ಶಿವಮೊಗ್ಗ ಮಲೆನಾಡು ವೀರಶೈವ ಅಧ್ಯಯನ ಸಂಸ್ಥೆಗಳ ನಿರ್ದೇಶಕರಾಗಿ; ಸಮಗ್ರ ವಚನ ಸಾಹಿತ್ಯ ಪ್ರಕಟಣ ಯೋಜನೆ, ಪ್ರಾಚೀನ ಅಪ್ರಕಟಿತ ಕನ್ನಡ ಸಾಹಿತ್ಯ ಪ್ರಕಟಣ ಯೋಜನೆ, ಪ್ರಾಚೀನ ಗದ್ಯ ಸಾಹಿತ್ಯ ಪ್ರಕಟಣ ಯೋಜನೆ, ವಚನ ಬಹುಭಾಷಾ ಭಾಷಾಂತರ ಯೋಜನೆ, ಫ.ಗು.ಹಳಕಟ್ಟಿ ಸಮಗ್ರ ಸಾಹಿತ್ಯ ಪ್ರಕಟಣ ಯೋಜನೆ, ಬಸವರಾಜ ಕಟ್ಟೀಮನಿ ಸಮಗ್ರ ಸಾಹಿತ್ಯ ಪ್ರಕಟಣ ಯೋಜನೆ, ಗಳಗನಾಥ ಸಮಗ್ರ ಕಾದಂಬರಿ ಪ್ರಕಟಣ ಯೋಜನೆ, ಕೆರೂರ ವಾಸುದೇವಾಚಾರ್ಯ ಸಮಗ್ರ ಸಾಹಿತ್ಯ ಪ್ರಕಟಣ ಯೋಜನೆಗಳ ಪ್ರಧಾನ ಸಂಪಾದಕರಾಗಿ ಅವರು ಮಾಡಿದ ಕಾರ್ಯಗಳು ಚಿರಸ್ಮರಣೀಯವೆನಿಸಿವೆ.

ಡಾ. ಕಲಬುರ್ಗಿ ಅವರ ಈ ಬಹುಮುಖ-ಮೌಲಿಕ ಸಾಹಿತ್ಯ-ಸಂಶೋಧನ ಕಾರ್ಯ ಸಾಧನೆಗಾಗಿ ಸಾಹಿತ್ಯ ಅಕಾಡೆಮಿ, ಸರ್ಕಾರ ಹಾಗೂ ಅನೇಕ ಸಂಘ ಸಂಸ್ಥೆಗಳು ಉನ್ನತ-ಪ್ರತಿಷ್ಠಿತ ಪ್ರಶಸ್ತಿ-ಪುರಸ್ಕಾರಗಳನ್ನು ನೀಡಿ ಗೌರವಿಸಿವೆ. ಅವರಿಗೆ ದೊರೆತ ೨೫ ಕ್ಕೂ ಹೆಚ್ಚು ಪ್ರಶಸ್ತಿಗಳಲ್ಲಿ ಕರ್ನಾಟಕ ಸರ್ಕಾರದ ರಾಜ್ಯೋತ್ಸವ ಪ್ರಶಸ್ತಿ, ಪಂಪ ಪ್ರಶಸ್ತಿ, ರಾಷ್ಟ್ರೀಯ ಬಸವ ಪುರಸ್ಕಾರ, ಕನ್ನಡ ಸಾಹಿತ್ಯ ಪರಿಷತ್ತಿನ ನೃಪತುಂಗ ಪ್ರಶಸ್ತಿ, ರಾಜ್ಯ ಹಾಗೂ ಕೇಂದ್ರ ಸಾಹಿತ್ಯ ಅಕಾಡೆಮಿಗಳ ಗ್ರಂಥ ಪುರಸ್ಕಾರ, ಹಂಪಿ ಕನ್ನಡ ವಿಶ್ವವಿದ್ಯಾಲಯದ ನಾಡೋಜ ಪ್ರಶಸ್ತಿ ಪ್ರಮುಖವಾದವು.

ಸಾಹಿತ್ಯ ರಾಶಿ :

ಡಾ. ಎಂ. ಎಂ. ಕಲಬುರ್ಗಿ ಅವರ ಆಸಕ್ತಿ ಕ್ಷೇತ್ರಗಳ ಹರಹು ಬಲು ದೊಡ್ಡದು; ಬರವಣಿಗೆಯ ವ್ಯಾಪ್ತಿ ಬಹು ವಿಸ್ತಾರ. ಸೃಜನ-ಸೃಜನೇತರ ಉಭಯ ಕ್ಷೇತ್ರಗಳಲ್ಲಿ ಸಮರ್ಥ ಕೃಷಿ. ಅದರಲ್ಲಿಯೇ ಸಂಶೋಧನ ಕ್ಷೇತ್ರದ ಬೆಳೆ ತುಂಬ ಹುಲುಸು; ಫಲಭರಿತ. ಅದಕ್ಕೆ ಗರಿಷ್ಠ ಬೆಲೆ-ಬೇಡಿಕೆ.

ಕನ್ನಡ ಸಂಶೋಧನ ಕ್ಷೇತ್ರವನ್ನು ಸಂಪದ್ಭರಿತಗೊಳಿಸಿ, ಅದಕ್ಕೊಂದು ನೂತನ ಆಯಾಮ ಆವಿಷ್ಕಾರವನ್ನು ನೀಡಿದ ಕಲಬುರ್ಗಿ ಅವರು ಅಧ್ಯಯನಕ್ಕೆ ಆಯ್ಕೆ ಮಾಡಿಕೊಂಡ ವಿಷಯಗಳ ವೈವಿಧ್ಯತೆ ಬೆರಗುಗೊಳಿಸುತ್ತದೆ: ಶಾಸನ, ಹಳಗನ್ನಡ-ನಡುಗನ್ನಡ-ಹೊಸಗನ್ನಡ ಸಾಹಿತ್ಯ, ಚರಿತ್ರೆ, ಜಾನಪದ, ಹಸ್ತಪ್ರತಿಶಾಸ್ತ್ರ, ಗ್ರಂಥಸಂಪಾದನೆ, ನಾಮವಿಜ್ಞಾನ, ಛಂದಸ್ಸು, ವ್ಯಾಕರಣ, ಪ್ರಾಚ್ಯವಸ್ತುಶಾಸ್ತ್ರ ಸಂಶೋಧನೆ, ವಿಮರ್ಶೆ, ನಾಡು-ನುಡಿ-ಸಂಸ್ಕೃತಿ-ಹೀಗೆ ಅದು ಅನಂತಮುಖಿಯಾಗಿದೆ.

ಡಾ. ಕಲಬುರ್ಗಿ ಅವರು ತಮ್ಮ ಆಸಕ್ತಿಯ ಕ್ಷೇತ್ರಗಳು, ಅಧ್ಯಯನದ ಸ್ವರೂಪ-ವ್ಯಾಪ್ತಿ ಮತ್ತು ವಿಧಾನ ಕುರಿತು ಬೇರೆ ಬೇರೆ ಕೃತಿಗಳ ಅರಿಕೆ, ಲೇಖಕರ ನುಡಿ, ಮಾರ್ಗಕ್ಕೆ ಮೊದಲು ಇತ್ಯಾದಿ ಬರಹಗಳಲ್ಲಿ ಹೀಗೆ ಹೇಳಿಕೊಂಡಿದ್ದಾರೆ:

"ನನ್ನದು ಬಹುಮುಖಿ ಅಧ್ಯಯನ. ಪ್ರಾಚೀನ ಭಾಷೆ, ಸಾಹಿತ್ಯ, ಸಂಸ್ಕೃತಿಗಳ ಮೈ-ಮನಸ್ಸುಗಳನ್ನು ಅಭ್ಯಸಿಸುತ್ತಲೇ ವ್ಯಾಕರಣ, ಅಲಂಕಾರ, ಛಂದಸ್ಸು ಇತ್ಯಾದಿ ಶಾಸ್ತ್ರಗಳನ್ನು ತೆಕ್ಕೆಗೆ ಅಳವಡಿಸಿಕೊಂಡ ಬಳಿಕ, ನಾನು ಪ್ರವೇಶಿಸಿದ ಹೊಸ ಕ್ಷೇತ್ರ ಶಾಸನ. ಆಮೇಲೆ ಆಧುನಿಕ ಶೈಕ್ಷಣಿಕ ಶಿಸ್ತುಗಳೆನಿಸಿದ ಜಾನಪದ, ನಾಮವಿಜ್ಞಾನ, ಗ್ರಂಥಸಂಪಾದನೆ ಇತ್ಯಾದಿಗಳತ್ತ ನನ್ನ ಒಲವು ಬೆಳೆಯಿತು. ಹೀಗಾಗಿ ಈ ಎಲ್ಲ ಕ್ಷೇತ್ರಗಳಿಗೆ ಸಂಬಂಧಿಸಿದ ಪುಸ್ತಕ, ಲೇಖನ ಬರವಣಿಗೆ ನನ್ನಿಂದ ಸಾಧ್ಯವಾಯಿತು. ಈ ಎಲ್ಲ ಬರವಣಿಗೆಯ ಹಿಂದೆ ಸಂಶೋಧನೆಯ ಸಶಬ್ದ ಶ್ರುತಿ, ಕೆಲವೊಮ್ಮೆ ನಿಃಶಬ್ದ ಶ್ರುತಿ ಕೆಲಸಮಾಡಿದೆ."

"ಸಾಹಿತ್ಯವನ್ನು ಘಟಿತವಸ್ತು (Fact) ಕೇಂದ್ರಿತ ಮತ್ತು ಕಲ್ಪಿತವಸ್ತು (Fiction) ಕೇಂದ್ರಿತವೆಂದು ವರ್ಗೀಕರಿಸಬಹುದಾಗಿದೆ. ಇವುಗಳಲ್ಲಿ ಸಂಭವಿಸಿದ ಜೀವನವನ್ನು, ಜೀವನ ಮೌಲ್ಯಗಳನ್ನು ನಮ್ಮ ಮುಂದೆ ಕಲಾತ್ಮಕವಾಗಿ ಸ್ಥಾಪಿಸುವ ಘಟಿತವಸ್ತು ಸಾಹಿತ್ಯವೇ ಸಮಾಜಕ್ಕೆ ಹೆಚ್ಚು ಮಾರ್ಗದರ್ಶಕ, ಹೆಚ್ಚು ಪ್ರಯೋಜಕವೆಂದು ನನ್ನ ಭಾವನೆ. ಹೀಗಾಗಿ ನನಗೆ ಸಂಭವನೀಯ ವಸ್ತುವನ್ನೊಳಗೊಂಡ ಕಥೆ, ಕಾದಂಬರಿ ಸಾಹಿತ್ಯಕ್ಕಿಂತ, ಸಂಭವಿಸಿದ ವಸ್ತುವನ್ನೊಳಗೊಂಡ ಆತ್ಮಚರಿತ್ರೆ, ಜೀವನ ಚರಿತ್ರೆ, ಸಾಹಿತ್ಯ ಹೆಚ್ಚು ಪ್ರಿಯವಾದುದು. ಈ ಕಾರಣದಿಂದಾಗಿ ನಾನು ಕಲ್ಪಿತ ಸಾಹಿತ್ಯದ ಜೊತೆಗೆ ಘಟಿತ ಸಾಹಿತ್ಯದತ್ತ ವಿಶೇಷ ಒಲವು ಬೆಳೆಸಿಕೊಂಡಿದ್ದೇನೆ"(ಕನ್ನಡ ಶಾಸನ ಸಾಹಿತ್ಯ-ಲೇಖಕರ ಮಾತು).

"ಕನ್ನಡ ಸೃಜನ ಸಾಹಿತ್ಯ ನವೋದಯ, ನವ್ಯ, ನವ್ಯೋತ್ತರವೆಂಬ ಘಟ್ಟಗಳನ್ನು ರೂಪಿಸಿಕೊಳ್ಳುತ್ತ ಬಂದ ಹಾಗೆ, ಕನ್ನಡ ಸಂಶೋಧನ ಸಾಹಿತ್ಯವೂ ರೂಪಿಸಿಕೊಳ್ಳುತ್ತ ಬಂದ ಸಾಮಗ್ರಿ ಶೋಧನಿಷ್ಠ, ಸಾಮಗ್ರಿ ವಿಶ್ಲೇಷಣನಿಷ್ಠ, ಸಾಮಗ್ರಿವ್ಯಾಖ್ಯಾನ ನಿಷ್ಠ ಘಟ್ಟಗಳಲ್ಲಿ ನಾನು ದುಡಿಯುತ್ತ ಬಂದಿದ್ದೇನೆ. ಇದೇ ರೀತಿ ಕನ್ನಡ ಸಂಶೋಧನೆ ಆಗಾಗ ಅಳವಡಿಸಿಕೊಳ್ಳುತ್ತ ಬಂದ ಸಂಸ್ಕೃತಿ, ಶಾಸನ, ಜಾನಪದ, ನಾಮವಿಜ್ಞಾನ ಇತ್ಯಾದಿ ಹೊಸ ಹೊಸ ಕ್ಷೇತ್ರಗಳಲ್ಲಿಯೂ ನಾನು ಬಿಚ್ಚಿಕೊಂಡಿದ್ದೇನೆ. ಹೀಗೆ ಈ

ಮೂರು ಆಯಾಮಗಳನ್ನೊಳಗೊಂಡ ಕನ್ನಡ ಸಂಶೋಧನ 'ಮಹಾಮಾರ್ಗ'ದಲ್ಲಿ ನಡೆದು ಬಂದವನಾದುದರಿಂದ ನನ್ನ (ಸಂಪ್ರಬಂಧಗಳ ಸಂಕಲನ) ಕೃತಿಗಳಿಗೆ 'ಮಾರ್ಗ' ಎಂದು ಹೆಸರಿಟ್ಟಿದ್ದೇನೆ. ಕನ್ನಡ ಸಂಶೋಧನೆಯ ಎಲ್ಲ ಮಾದರಿಗಳನ್ನು ಈ ಪ್ರಬಂಧಗಳು ಪ್ರತಿನಿಧಿಸುತ್ತವೆ ಎಂದು ಸೂಚಿಸಬಯಸುತ್ತೇನೆ."

"ಸಂಶೋಧನೆ ಎನ್ನುವುದು ಅಲ್ಪ ವಿರಾಮ, ಅರ್ಧವಿರಾಮಗಳ ಮೂಲಕ ಪೂರ್ಣವಿರಾಮಕ್ಕೆ ಸಾಗುವ ಕ್ರಿಯೆಯಾಗಿದೆ. ಹೀಗಾಗಿ ಹೊಸ ಹೊಸ ಆಕರಗಳು ಲಭ್ಯವಾದಂತೆ ಸಂಶೋಧಕ ತನ್ನ ಅಭಿಪ್ರಾಯಗಳನ್ನು ತಿದ್ದಿಕೊಳ್ಳಬೇಕಾಗುತ್ತದೆ.'ಸಂಶೋಧಕ ತಪ್ಪು ಹೇಳಿರಬಹುದು, ಸುಳ್ಳು ಹೇಳಿರಲಾರ' ಎನ್ನುವುದು ಈ ಅರ್ಥದಲ್ಲಿ. ಸಂಶೋಧನ ಪ್ರಬಂಧಗಳನ್ನು ಬರೆಯುವಾಗ ಈ ಎಲ್ಲ ಆದರ್ಶಗಳು ನನ್ನ ಮನಸ್ಸಿನಲ್ಲಿರುತ್ತವೆ. 'ಜನಮೆಚ್ಚೆ ನಡಕೊಂಡರೇನುಂಟು ಲೋಕದಿ ಮನಮೆಚ್ಚೆ ನಡಕೊಂಬುದೇ ಚೆಂದವು' ಎಂಬುದಂತೂ ನನ್ನನ್ನು ಸದಾ ಎಚ್ಚರಿಸುತ್ತಲಿರುತ್ತದೆ"(ಮಾರ್ಗ-೧, ೨ ಅರಿಕೆ).

"೨೦ನೆಯ ಶತಮಾನದ ಉತ್ತರಾರ್ಧದಲ್ಲಿ 'ಚಾರಿತ್ರಿಕ ಶೋಧ'ದೊಂದಿಗೆ 'ಸಾಂಸ್ಕೃತಿಕ ಶೋಧ' ಹೆಸರಿನ ಹೊಸಬಗೆಯ 'ಸಾಮಾಜಿಕ ಪ್ರಕ್ರಿಯಾ ಶೋಧ' ಕರ್ನಾಟಕದ ತುಂಬ ಕಣ್ಣು ತೆರೆಯಿತು. ಕಾಲಗತಿಸಿದಂತೆ ಇದರ ಹಿಂದಿರುವ 'ಸಾಮಾಜಿಕ ಕಾರಣ ಶೋಧ'ದ ಮೇಲೆ ಹೆಚ್ಚು ಒತ್ತು ಬಿದ್ದಿತು. ಹೀಗಾಗಿ ಇಂದು ಕರ್ನಾಟಕದಲ್ಲಿ ಆಕರಶೋಧ, ಚಾರಿತ್ರಿಕ ಶೋಧ, ಸಾಮಾಜಿಕ ಶೋಧ, ಸಾಮಾಜಿಕ ಪ್ರಕ್ರಿಯಾ ಶೋಧ ಮತ್ತು ಸಾಮಾಜಿಕ ಕಾರಣಶೋಧಗಳೆಂಬ ಐದು ಆಯಾಮಗಳು ನಮ್ಮ ಸಂಶೋಧನೆಯಲ್ಲಿ ಕಾಣಿಸಿಕೊಂಡಿವೆ. ನಾನು ಈ ಐದೂ ಆಯಾಮಗಳಲ್ಲಿ ಬಿಚ್ಚಿಕೊಂಡುದರ ಫಲಿತಗಳನ್ನು 'ಮಾರ್ಗ' ಹೆಸರಿನ ನನ್ನ ಮೂರು ಸಂಪುಟಗಳಲ್ಲಿ, ಅದೇ ರೀತಿ ಈ ನಾಲ್ಕನೆಯ ಸಂಪುಟದಲ್ಲಿ ಕಾಣಬಹುದು".

"ಇತ್ತೀಚೆ ಸಮಾಜದಲ್ಲಿ ಸಹಜ ಬದಲಾವಣೆಯ ಜೊತೆಗೆ, ರಾಜಕೀಯ-ಧಾರ್ಮಿಕ-ಧುರೀಣರಿಂದಾಗಿ ಕೃತಕ ಬದಲಾವಣೆಗಳು ಸಂಭವಿಸುತ್ತಲಿವೆ. ಇವರು ಸುಳ್ಳು ಇತಿಹಾಸದ ಮೂಲಕ ವರ್ತಮಾನದಲ್ಲಿ ಹುಟ್ಟುಹಾಕುತ್ತಲಿರುವ ಶೋಷಣೆಯನ್ನು ಹತ್ತಿಕ್ಕಲು ನಿಜ ಇತಿಹಾಸವನ್ನು ಶೋಧಿಸಿಕೊಡುವುದು ಸಂಶೋಧಕನ ಕರ್ತವ್ಯವಾಗಿದೆ. ಅಂದರೆ ಸಂಶೋಧನೆ ಎನ್ನುವುದು ಕೇವಲ ಇತಿಹಾಸದ ಶೋಧವಲ್ಲ, ಸುಳ್ಳು ಇತಿಹಾಸವನ್ನು ಮುಂದುಮಾಡಿಕೊಂಡು ವರ್ತಮಾನವನ್ನು ದುರುಪಯೋಗ ಮಾಡಿಕೊಳ್ಳುವವರೊಂದಿಗೆ ನಡೆಸುವ ಹೋರಾಟವಾಗಿದೆ. ಸತ್ಯವೆಂಬ ಭೂತಕಾಲದ ಬಲದಿಂದ ಅಸತ್ಯವೆಂಬ ವರ್ತಮಾನಕಾಲವನ್ನು ಸರಿಪಡಿಸುವುದಾಗಿದೆ. ಹೀಗಾಗಿ ನನ್ನ ಸುತ್ತಲಿನ ವರ್ತಮಾನದ ಅಸತ್ಯಗಳು ಭೂತದ ಸತ್ಯವನ್ನು ಹುಡುಕಲು ನನ್ನನ್ನು ಒತ್ತಾಯಿಸಿದ ಫಲವಾಗಿ, ಇಲ್ಲಿಯ ಬಹಳಷ್ಟು ಲೇಖನಗಳು ಹುಟ್ಟಿಕೊಂಡಿವೆ. ಸಮಾಜದ ಪ್ರಚಲಿತ ಸಮಸ್ಯೆಗಳನ್ನು ಎತ್ತಿಕೊಂಡುದಲ್ಲದೆ, ಶಿಷ್ಟ ಆಕರಗಳೊಂದಿಗೆ ಪರಿಶಿಷ್ಟ ಆಕರಗಳನ್ನೂ ಬಳಸಿಕೊಂಡ ಕಾರಣ, ಇವು ಒಂದಿಷ್ಟು ಸಾಮಾಜಿಕ ಹೊಳಪನ್ನು ಒಳಗೊಂಡಿವೆ"(ಮಾರ್ಗ-೪, ಅರಿಕೆ).

ಈ ಮೇಲಿನ ಉದ್ಧರಣೆಗಳು ಡಾ. ಎಂ. ಎಂ. ಕಲಬುರ್ಗಿ ಅವರ ಒಟ್ಟು ಸಂಶೋಧನೆಯ ಸ್ವರೂಪ-ವ್ಯಾಪ್ತಿ-ವಿಧಾನ-ದೃಷ್ಟಿ ಧೋರಣೆಗಳನ್ನು ಸ್ಪಷ್ಟಪಡಿಸುತ್ತವೆ. ಅಂದರೆ ಅವರು ಆಕರಮುಖಿ ಶೋಧದ ಮೂಲಕ ಹೊರಟು, ವಿಶ್ಲೇಷಣಮುಖಿ ಶೋಧದಲ್ಲಿ ಮುಂದುವರೆದು, ವ್ಯಾಖ್ಯಾನಮುಖಿ

ಶೋಧವನ್ನು ತಲುಪಿದ ರೀತಿಯನ್ನು; ವಸ್ತುನಿಷ್ಠ ಸಂಶೋಧನೆಯಿಂದ ತೊಡಗಿ, ಸಂಸ್ಕೃತಿನಿಷ್ಠ ಸಂಶೋಧನೆಯಲ್ಲಿ ಸಾಗಿ, ಕೊನೆಗೆ ಸಮಾಜನಿಷ್ಠ ಸಂಶೋಧನೆಯಲ್ಲಿ ನೆಲೆನಿಂತ ನಿಲವನ್ನು ನಿಚ್ಚಳವಾಗಿ ನಿರ್ವಚಿಸುತ್ತವೆ.

* * * *

ಡಾ. ಕಲಬುರ್ಗಿ ಅವರ ಸಾಹಿತ್ಯ ಸೃಷ್ಟಿ ಎರಡು ಬಗೆಯಾಗಿ ನಡೆದಿದೆ. ಒಂದು ಇಡಿಯಾದ ಗ್ರಂಥ ರೂಪದಲ್ಲಿ; ಮತ್ತೊಂದು-ಬಿಡಿಯಾದ ಸಂಪ್ರಬಂಧ ಸ್ವರೂಪದಲ್ಲಿ. ಅವರು ತಮ್ಮ ಎಪ್ಪತ್ತೇಳು ವರ್ಷದ ಜೀವಿತಾವಧಿಯಲ್ಲಿ-ಸು. ೫೦ ವರ್ಷ ಸಾಹಿತ್ಯ ಕೃಷಿಯಲ್ಲಿ ತೊಡಗಿದ್ದಾರೆ. ೧೯೬೭ ರಲ್ಲಿ ಪ್ರಕಟವಾದ 'ಬಸವಣ್ಣನವರ ಜೀವನ ಚರಿತ್ರೆ' ಅವರ ಮೊದಲ ಲೇಖನವೆನಿಸಿದರೆ, ೧೯೬೮ ರಲ್ಲಿ ಹೊರ ಬಂದ 'ಬಸವಣ್ಣನವರನ್ನು ಕುರಿತ ಶಾಸನಗಳು' ಎಂಬುದು ಮೊದಲ ಕೃತಿಯಾಗಿದೆ. ಹಾಗೆಯೇ 'ನಾಲ್ಕು ಜಾತಿವಿಡಿದು ಬಂದ ಜಂಗಮವೆ ಶ್ರೇಷ್ಠ?' ಎಂಬುದು ಅವರ ಕೊನೆಯ ಲೇಖನ; 'ವಚನ ವರ್ಷ' ಎಂಬುದು ಕೊನೆಯ ಕೃತಿ. ಈ ಮಧ್ಯದ ಅವಧಿಯಲ್ಲಿ ಅವರು ಒಟ್ಟು ೧೧೬ ಕೃತಿಗಳನ್ನು ಮತ್ತು ೮೯೩ ಲೇಖನಗಳನ್ನು ಪ್ರಕಟಿಸಿದ್ದಾರೆ.

ಡಾ. ಕಲಬುರ್ಗಿ ಅವರ ಒಟ್ಟು ಕೃತಿಗಳನ್ನು ಸೃಜನ ಮತ್ತು ಸೃಜನೇತರ ಎಂದು ಎರಡು ಭಾಗಗಳಲ್ಲಿ ವಿಂಗಡಿಸಬಹುದು. ಸೃಜನ ಸಾಹಿತ್ಯದಲ್ಲಿ ಅವರ ಕಾವ್ಯ ಮತ್ತು ನಾಟಕ ಕೃತಿಗಳು ಸೇರುತ್ತವೆ. ಸೃಜನೇತರದಲ್ಲಿ ಸ್ವತಂತ್ರ ಕೃತಿಗಳು, ಸಂಪಾದಿತ ಕೃತಿಗಳು ಎಂದು; ಸಂಪಾದಿತ ಕೃತಿಗಳಲ್ಲಿ ಪ್ರಾಚೀನ-ಆಧುನಿಕ ಎಂದು ಮತ್ತೆ ಎರಡೆರಡು ವಿಭಾಗಗಳನ್ನು ಮಾಡಬಹುದು. ಸ್ವತಂತ್ರ ಕೃತಿಗಳಲ್ಲಿ ಶಾಸನ, ಶಾಸ್ತ್ರ, ಸಂಶೋಧನೆ ಮತ್ತು ಜಾನಪದಕ್ಕೆ ಸಂಬಂಧಿಸಿದ ಕೃತಿಗಳು ಸೇರಿದರೆ, ಪ್ರಾಚೀನ ಸಂಪಾದಿತ ಕೃತಿಗಳಲ್ಲಿ ಶಾಸನ, ಕಾವ್ಯ, ವಚನ, ದಾಖಲು ಸಾಹಿತ್ಯ ಕೃತಿಗಳು ಮತ್ತು ಆಧುನಿಕ ಸಂಪಾದಿತ ಕೃತಿಗಳಲ್ಲಿ ಲೇಖನ ಸಂಗ್ರಹ, ಜೀವನ ಚರಿತ್ರೆ ಮತ್ತು ಅಭಿನಂದನ ಗ್ರಂಥಗಳು ಸೇರುತ್ತವೆ. ಅವುಗಳ ವಿವರ ಹೀಗಿದೆ :

ಸೃಜನ ಸಾಹಿತ್ಯ

೧. ನೀರು ನೀರಡಿಸಿತ್ತು (ಕವನ), ೨. ನೀರಾಗ ನಿಂತೀನಿ ನೀರಡಿಸಿ (ಕವನ), ೩. ಕೆಟ್ಟಿತ್ತು ಕಲ್ಯಾಣ (ನಾಟಕ), ೪. ಖರೇ ಖರೇ ಸಂಗ್ಯಾ ಬಾಳ್ಯಾ (ನಾಟಕ), ೫. ಖರೇ ಖರೇ ಕಿತ್ತೂರ ಬಂಡಾಯ(ನಾಟಕ).

ಸೃಜನೇತರ ಸಾಹಿತ್ಯ (ಸ್ವತಂತ್ರ ಕೃತಿಗಳು) :

ಶಾಸನ ಸಾಹಿತ್ಯ

೬. ಬಸವಣ್ಣನವರನ್ನು ಕುರಿತ ಶಾಸನಗಳು, ೭. ಶಾಸನಗಳಲ್ಲಿ ಶಿವಶರಣರು, ೮. ಸಮಾಧಿ-ಬಲಿದಾನ-ವೀರಮರಣ ಸ್ಮಾರಕಗಳು, ೯. ಮಹಾರಾಷ್ಟ್ರದ ಕನ್ನಡ ಶಾಸನಗಳು.

ಶಾಸ್ತ್ರ ಸಾಹಿತ್ಯ

೧೦. ಕನ್ನಡ ಗ್ರಂಥಸಂಪಾದನಶಾಸ್ತ್ರ, ೧೧. ಪ್ರತಿಬಿಂಬ, ೧೨. ಸಾಹಿತ್ಯ ಸಂಪಾದನೆ, ೧೩. ಕನ್ನಡ ನಾಮವಿಜ್ಞಾನ, ೧೪. ಕನ್ನಡ ಸಂಶೋಧನಶಾಸ್ತ್ರ, ೧೫. ಕನ್ನಡ ಹಸ್ತಪ್ರತಿಶಾಸ್ತ್ರ.

ಸಂಶೋಧನ ಸಾಹಿತ್ಯ

೧೬. ಕವಿರಾಜಮಾರ್ಗ ಪರಿಸರದ ಕನ್ನಡ ಸಾಹಿತ್ಯ, ೧೭. ಶಾಸನ ವ್ಯಾಸಂಗ-೧, ೧೮. ಶಾಸನ ವ್ಯಾಸಂಗ-೨, ೧೯. ಕನ್ನಡ ಶಾಸನ ಸಾಹಿತ್ಯ, ೨೦. ಐತಿಹಾಸಿಕ, ೨೧. ವೀರಶೈವ : ಇತಿಹಾಸ ಭೂಗೋಳ, ೨೨. ಶುದ್ಧಶೈವ ಮತ್ತು ಗೋಳಕಿಮಠ ಸಂಪ್ರದಾಯ, ೨೩. ಪರಿಕಲ್ಪನೆ, ೨೪. ಪಂಚಾಚಾರ್ಯರ ನಿಜಸ್ವರೂಪ, ೨೫. ಸಂಸ್ಕೃತಿ-ವಿಕೃತಿ, ೨೬. ಕನ್ನಡ ಅರಸರ ಅಕನ್ನಡ ಪ್ರಜ್ಞೆ, ೨೭. ನಿರ್ವಚನ.

ಜಾನಪದ ಸಾಹಿತ್ಯ

೨೮. ಉತ್ತರಕರ್ನಾಟಕದ ಜನಪದ ಪದ್ಯ ಸಾಹಿತ್ಯ, ೨೯. ಜಾನಪದ ಮಾರ್ಗ.

ಲೇಖನ ಸಂಪುಟ

೩೦. ಮಾರ್ಗ-೧, ೩೧. ಮಾರ್ಗ-೨, ೩೨. ಮಾರ್ಗ-೩, ೩೩. ಮಾರ್ಗ-೪, ೩೪. ಮಾರ್ಗ-೫, ೩೫. ಮಾರ್ಗ-೬, ೩೬. ಮಾರ್ಗ-೭, ೩೭. ಮಾರ್ಗ-೮.

ಸೃಜನೇತರ ಸಾಹಿತ್ಯ (ಪ್ರಾಚೀನ ಸಂಪಾದಿತ ಕೃತಿಗಳು):

ಶಾಸನ ಸಾಹಿತ್ಯ

೩೮. ಶಾಸನ ಸಂಪದ, ೩೯. ಧಾರವಾಡ ಜಿಲ್ಲೆಯ ಶಾಸನ ಸೂಚಿ, ೪೦. ವಿಜಾಪುರ ಜಿಲ್ಲೆಯ ಶಾಸನ ಸೂಚಿ, ೪೧. ಧಾರವಾಡ ತಾಲೂಕಿನ ಶಾಸನಗಳು, ೪೨. ಶಾಸನ ಸೂಕ್ತಿಸುಧಾರ್ಣವ.

ದಾಖಲು ಸಾಹಿತ್ಯ

೪೩. ಕರ್ನಾಟಕದ ಕೈಫಿಯತ್ತುಗಳು, ೪೪. ಕೊಲ್ಹಾಪೂರ ಲಕ್ಷ್ಮೀಸೇನ ಭಟ್ಟಾರಕ ಜೈನ ಬಸದಿ ಹಸ್ತಪ್ರತಿಸೂಚಿ, ೪೫. ವಚನ ಸಾಹಿತ್ಯ ಆಕರ ಕೋಶ, ೪೬. ತೋಂಟದಾರ್ಯ ಮಠದ ದಾಖಲು ಸಾಹಿತ್ಯ-೧.

ವಚನ ಸಾಹಿತ್ಯ

೪೭. ಬಸವಸ್ತೋತ್ರದ ವಚನಗಳು, ೪೮. ಬಸವಣ್ಣನವರ ಟೀಕಿನ ವಚನಗಳು ಭಾಗ-೧, ೪೯. ಬಸವಣ್ಣನವರ ಟೀಕಿನ ವಚನಗಳು ಭಾಗ-೨, ೫೦. ವಚನ ಸಂಕಲನ ಸಂಪುಟ-೪, ೫೧. ವಚನ ಸಂಕಲನ ಸಂಪುಟ-೬, ೫೨. ಬಸವಣ್ಣನವರ ವಚನ ಸಂಪುಟ, ೫೩. ಸಂಕೀರ್ಣ ವಚನ ಸಂಪುಟ, ೫೪. ಚೆನ್ನಬಸವಣ್ಣನವರ ವಚನ ಮಹಾಸಂಪುಟ, ೫೫. ಸಿದ್ಧರಾಮಯ್ಯದೇವರ ವಚನಗಳು, ೫೬. ಪರಮಾನಂದ ಸುಧೆ, ೫೭. ವಚನ, ೫೮. ಏಕೋತ್ತರಶತಸ್ಥಲ, ೫೯. ಶೂನ್ಯಸಂಪಾದನೆ, ೬೦. ವಚನ ವರ್ಷ, ೬೧. ವಚನಶಾಸ್ತ್ರಸಾರ(ಸಂಪುಟ-೧), ೬೨ ಡಾ. ಫ. ಗು. ಹಳಕಟ್ಟಿ ಸಮಗ್ರ ಸಾಹಿತ್ಯ ಸಂ.೫.

ಕಾವ್ಯ ಸಾಹಿತ್ಯ

೬೩. ಮಲ್ಲಿನಾಥ ಪುರಾಣ ಸಂಗ್ರಹ, ೬೪. ಶಬ್ದಮಣಿದರ್ಪಣ ಸಂಗ್ರಹ, ೬೫. ಶಿವಯೋಗ ಪ್ರದೀಪಿಕಾ, ೬೬. ಇಮ್ಮಡಿ ಚಿಕ್ಕಭೂಪಾಲನ ಸಾಂಗತ್ಯ, ೬೭. ಕೊಂಡಗುಳಿ ಕೇಶಿರಾಜನ ಕೃತಿಗಳು, ೬೮. ತೋಂಟದ ಸಿದ್ಧಲಿಂಗೇಶ್ವರ ಭಾವರತ್ನಾಭರಣ ಸ್ತೋತ್ರ, ೬೯. ಆದಯ್ಯನ ಲಘುಕೃತಿಗಳು, ೭೦. ನಿಂಬಸಾಮಂತ ಚರಿತೆ, ೭೧. ಸಿರುಮಣ ನಾಯಕನ ಸಾಂಗತ್ಯ, ೭೨. ಸಿರುಮನ ಚರಿತೆ, ೭೩. ಗೊಲ್ಲ ಸಿರುಮನ ಚರಿತೆ, ೭೪. ಷಟ್‌ಸ್ಥಲ ಶಿವಾಯಣ, ೭೫. ಹರಿಹರನ ರಗಳೆಗಳು, ೭೬. ಹರಿಹರ ವಿರಚಿತ ಕನ್ನಡ ಶರಣರ ಕಥೆಗಳು, ೭೭. ಹೊಸಕುಮಾರರಾಮನ ಸಾಂಗತ್ಯ, ೭೮. ಕೊಮಾರ ರಾಮಯ್ಯನ ಚರಿತ್ರೆ, ೭೯. ಬಾಲರಾಮಯ್ಯನ ಸಾಂಗತ್ಯ, ೮೦. ಹಳೆಯಕುಮಾರ ರಾಮನ ಸಾಂಗತ್ಯ, ೮೧. ಸಿದ್ಧಮಂಕ ಚರಿತೆ, ೮೨. ತಗರ ಪವಾಡ, ೮೩. ಗುಂಡಬಸವೇಶ್ವರ ಪುರಾಣ, ೮೪. ಕೊಡೆಕಲ್ಲ ವಚನ ವಾಕ್ಯ, ೮೫. ಕಿತ್ತೂರ ಸಂಸ್ಥಾನ ಸಾಹಿತ್ಯ-೧, ೮೬. ಕಿತ್ತೂರ ಸಂಸ್ಥಾನ ಸಾಹಿತ್ಯ-೨, ೮೭. ಕಿತ್ತೂರ ಸಂಸ್ಥಾನ ಸಾಹಿತ್ಯ-೩.

ಸೃಜನೇತರ ಸಾಹಿತ್ಯ (ಆಧುನಿಕ ಸಂಪಾದಿತ ಕೃತಿಗಳು):

ಲೇಖನ ಸಂಗ್ರಹಗಳು :

೮೮. ದಿಗಂಬರ(ಕವನ ಸಂಗ್ರಹ), ೮೯. ಬಸವ ಮಾರ್ಗ-೧(ಲೇಖನ ಸಂಗ್ರಹ), ೯೦. ಬಸವ ಮಾರ್ಗ-೨, ೯೧. ಬಸವ ಮಾರ್ಗ-೩, ೯೨. ವಚನಸಾಹಿತ್ಯದ ಪ್ರಕಟಣೆಯ ಇತಿಹಾಸ, ೯೩. ಕರ್ನಾಟಕ ಗಾಂಧಿ ಹರ್ಡೇಕರ ಮಂಜಪ್ಪ, ೯೪. ಕೆಳದಿ ಸಂಸ್ಥಾನ : ಸಮಗ್ರ ಅಧ್ಯಯನ, ೯೫. ಮಾನಸೋಲ್ಲಾಸ ಪರಿಚಯ, ೯೬. ಮಾನಸೋಲ್ಲಾಸ ಸಂಪುಟ ೧-೨, ೯೭. ಸ್ವಾದಿ ಅರಸು ಮನೆತನ, ೯೮. ಬೀಳಗಿ ಅರಸು ಮನೆತನ, ೯೯. ಸ್ವರವಚನ ವಿಚಾರ ಸಂಕಿರಣ ಸಂಪುಟ, ೧೦೦. ಭಾರತಸ್ವಾತಂತ್ರ್ಯ ಮತ್ತು ಕರ್ನಾಟಕ ಏಕೀಕರಣ : ಲಿಂಗಾಯತರ ಪಾತ್ರ, ೧೦೧. ಪ್ರಾಚೀನ ಕರ್ನಾಟಕದ ಆಡಳಿತ ವಿಭಾಗಗಳು.

ಜೀವನ ಚರಿತ್ರೆಗಳು

೧೦೨. ಅರಟಾಳ ರುದ್ರಗೌಡರ ಚರಿತ್ರೆ, ೧೦೩. ರಾಷ್ಟ್ರಧರ್ಮದ್ರಷ್ಟಾರ ಹರ್ಡೇಕರ ಮಂಜಪ್ಪ ಸಂಪುಟ-೨, ೧೦೪. ಹಾಲಭಾವಿ ವೀರಭದ್ರಪ್ಪನವರ ಆತ್ಮಚರಿತ್ರೆ, ೧೦೫. ಡಾ. ಫ.ಗು. ಹಳಕಟ್ಟಿ ಆತ್ಮಚರಿತ್ರೆ, ೧೦೬. ಮಡಿವಾಳಪ್ಪ ಸಾಸನೂರ ಬದುಕು-ಬರೆಹ, ೧೦೭. ಶಿವಾನುಭವ ಪತ್ರಿಕೆ.

ಅಭಿನಂದನ ಗ್ರಂಥಗಳು

೧೦೮. ಬೆಳ್ವೊಲ, ೧೦೯. ಸಾರಂಗಶ್ರೀ, ೧೧೦. ವಜ್ರಕುಸುಮ, ೧೧೧. ಲಿಂಗಾಯತ, ೧೧೨. ಕಲ್ಯಾಣದೀಪ್ತಿ, ೧೧೩. ಶರಣಶ್ರೀ.

ಇತರೆ

೧೧೪. ನನ್ನ ಜೀವನ ಚರಿತ್ರೆ(ಷಣ್ಮುಖಪ್ಪ ಅಂಗಡಿಯವರ ಆತ್ಮಚರಿತ್ರೆ), 115. My Autobiography, 116. Heaven of Equality.

ಇವುಗಳಲ್ಲಿ ಸಂಶೋಧನ ಸಾಹಿತ್ಯ ವಿಭಾಗಕ್ಕೆ ಸೇರಿರುವ ಶಾಸನ ವ್ಯಾಸಂಗ ೧,೨, ಕನ್ನಡ ಶಾಸನ ಸಾಹಿತ್ಯ, ಐತಿಹಾಸಿಕ, ವೀರಶೈವದ ಇತಿಹಾಸ ಭೂಗೋಳ, ಶುದ್ಧಶೈವ ಮತ್ತು ಗೋಳಕಿಮಠ ಸಂಪ್ರದಾಯ, ಪರಿಕಲ್ಪನೆ, ಪಂಚಾಚಾರ್ಯರ ನಿಜಸ್ವರೂಪ, ಸಂಸ್ಕೃತಿ–ವಿಕೃತಿ, ಕನ್ನಡ ಅರಸರ ಅಕನ್ನಡ ಪ್ರಜ್ಞೆ, ನಿರ್ವಚನ ಎಂಬ ೧೧ ಕೃತಿಗಳು ಮಾರ್ಗ ಸಂಪುಟಗಳಲ್ಲಿನ ಲೇಖನಗಳನ್ನು ಆಯ್ದು ಸಂಗ್ರಹಿಸಿದ ಸಂಕಲನಗಳಾಗಿರುವುದರಿಂದ ಅವು ಸ್ವತಂತ್ರ ಕೃತಿಗಳಲ್ಲ; ಹಾಗೆಯೇ ವಚನ ಸಾಹಿತ್ಯ ಸಂಪಾದನೆಗಳಲ್ಲಿ ಸೇರಿದ ಡಾ. ಫ.ಗು.ಹಳಕಟ್ಟಿ ಸಮಗ್ರ ಸಾಹಿತ್ಯ ಸಂ.೫ ಅದೇ ಭಾಗಕ್ಕೆ ಸೇರಿದ ವಚನಶಾಸ್ತ್ರಸಾರದ ಪುನರ್ ಮುದ್ರಣವಾಗಿದೆ. ಕಾವ್ಯ ಸಂಪಾದನೆಗಳಲ್ಲಿ ಸೇರಿದ 'ಹರಿಹರ ವಿರಚಿತ ಕನ್ನಡ ಶರಣರ ಕಥೆಗಳು' ಹರಿಹರನ ರಗಳೆಗಳು ಗ್ರಂಥದಿಂದ ಆಯ್ದ ಸಂಗ್ರಹರೂಪದ ಕೃತಿಯಾಗಿದೆ. ಜೀವನ ಚರಿತ್ರೆ ಭಾಗದಲ್ಲಿ ಸೇರಿದ 'ಶಿವಾನುಭವ ಪತ್ರಿಕೆ' ಎಂಬುದನ್ನು 'ಡಾ. ಫ.ಗು. ಹಳಕಟ್ಟಿ ಆತ್ಮಚರಿತ್ರೆ'ಯಲ್ಲಿ ಅಳವಡಿಸಲಾಗಿದೆ. ಹೀಗಾಗಿ ಈ ೧೪ ಕೃತಿಗಳನ್ನು ಕೈಬಿಟ್ಟರೆ ಕಲಬುರ್ಗಿ ಅವರ ಒಟ್ಟು ಕೃತಿಗಳ ಸಂಖ್ಯೆ ೧೦೨ ಆಗುತ್ತದೆ.

ಡಾ. ಎಂ. ಎಂ. ಕಲಬುರ್ಗಿ ಅವರು ತಮ್ಮ ಬಿಡಿ ಬರಹ (ಸಂಪ್ರಬಂಧ–ಲೇಖನ)ಗಳನ್ನು 'ಮಾರ್ಗ' ಹೆಸರಿನ ೮ ಸಂಪುಟಗಳಲ್ಲಿ (ಇವುಗಳಲ್ಲಿ ೭ ಮತ್ತು ೮ ಎರಡು ಸಂಪುಟಗಳು ಮರಣೋತ್ತರ ಪ್ರಕಟಿಸಿದವು) ಪ್ರಕಟಿಸಿದ್ದಾರೆ. ಅವುಗಳಲ್ಲಿ ವಿವಿಧ ವಿಷಯಗಳಿಗೆ ಸಂಬಂಧಿಸಿದ ಸಂಪ್ರಬಂಧಗಳು, ಸಂಪಾದಿತ ಕೃತಿಗಳಿಗೆ ಬರೆದ ಪ್ರಸ್ತಾವನೆ, ಅರಿಕೆ, ಇತರರ ಕೃತಿಗಳಿಗೆ ಬರೆದ ಮುನ್ನುಡಿ, ಬೆನ್ನುಡಿ, ವ್ಯಕ್ತಿಚಿತ್ರ, ಭಾಷಣ, ಸಂದರ್ಶನ, ಸಂಪಾದಕೀಯ, ಕೃತಿ ವಿಮರ್ಶೆ, ಇತ್ಯಾದಿ ಸಮಾವೇಶಗೊಂಡಿವೆ. ಇವುಗಳನ್ನು ಆಧರಿಸಿ ನಿರ್ದಿಷ್ಟ ವಿಷಯಗಳಿಗೆ ಸಂಬಂಧಿಸಿದ ಲೇಖನಗಳನ್ನು ಆಯ್ಕೆ ಮಾಡಿ ಕೆಲವು ಪ್ರತ್ಯೇಕ ಕೃತಿಗಳನ್ನು ಸಿದ್ಧಪಡಿಸಿ ಪ್ರಕಟಿಸುವ ಕಾರ್ಯವನ್ನು ಸ್ವತಃ ಕಲಬುರ್ಗಿಯವರೇ ಮಾಡುತ್ತ ಬಂದಿದ್ದಾರೆ. ಮೇಲೆ ಹೆಸರಿಸಿದ ೧೧ ಕೃತಿಗಳು ಆ ಮಾದರಿಯವು. ಅಲ್ಲದೆ ಇತರರಿಗೂ ಅಂಥ ಆಯ್ದ ಲೇಖನಗಳ ಸಂಗ್ರಹಗಳನ್ನು ಸಿದ್ಧಪಡಿಸಲು ಅವರು ಪ್ರೇರಣೆ ನೀಡಿದ್ದಾರೆ. ಹಾಗೆ ರೂಪಿತವಾದ ೧೬ ಕೃತಿಗಳು ಈ ಕೆಳಗಿನಂತಿವೆ :

ಜಂಗಮದಿಂದ ಸ್ಥಾವರಕ್ಕೆ (ಡಾ. ಮೃತ್ಯುಂಜಯ ರುಮಾಲೆ), ಹಾಲುಮತ ಅಧ್ಯಯನಗಳು (ಡಾ. ಎಫ್.ಟಿ. ಹಳ್ಳಿಕೇರಿ), ನಾಟಕದ ನೆಲೆಗಳು (ಡಾ. ರಾಮಕೃಷ್ಣ ಮರಾಠೆ), ಪಂಪನ ಅಧ್ಯಯನಗಳು (ಡಾ. ಎನ್. ಎಸ್. ತಾರಾನಾಥ), ಕನ್ನಡ ಭಾಷಾವಲೋಕನ (ಡಾ. ಎಸ್. ಎಸ್. ಅಂಗಡಿ), ಛಂದಸ್ಸಿನ ಅಧ್ಯಯನದ ನೆಲೆಗಳು (ಡಾ. ಎಸ್. ಎಸ್. ಅಂಗಡಿ), ಬಸವಣ್ಣ ಮತ್ತು... (ಡಾ. ನಂದೀಶ ಹಂಜೆ), ಸಿದ್ಧರಾಮ ಮತ್ತು...(ಡಾ. ಎಸ್.ಕೆ. ಕೊಪ್ಪ), ರೇವಣಸಿದ್ಧ ಮತ್ತು... (ಡಾ. ಕೆ. ರವೀಂದ್ರನಾಥ), ಶರಣರು ಮತ್ತು...(ಡಾ. ವಿ.ಎಸ್. ಮಾಳಿ), ಗ್ರಂಥಸಂಪಾದನ ವ್ಯಾಸಂಗ (ಡಾ. ವಾಯ್.ಸಿ. ಭಾನುಮತಿ), ಜೈನ ಅಧ್ಯಯನಗಳು (ಡಾ. ಶಾಂತಿನಾಥ ದಿಬ್ಬದ), ನಾಮವ್ಯಾಸಂಗ (ಡಾ. ಎಚ್. ಶಶಿಕಲಾ), ಮಹಾಮರಣ(ಡಾ. ಜೆ. ಎಂ. ನಾಗಯ್ಯ), ಇತಿಹಾಸ ಮತ್ತು... (ಡಾ. ಎನ್.ಎಸ್. ಮಹಾಂತೇಶ), ಸಂಘರ್ಷದ ನೆಲೆಗಳು (ಡಾ. ಪಿ.ಕೆ. ರಾಠೋಡ).

ಇವುಗಳನ್ನು ಗಮನಿಸಿದರೆ ಡಾ. ಕಲಬುರ್ಗಿ ಅವರ ಅಧ್ಯಯನದ ವ್ಯಾಪ್ತಿ, ಬರವಣಿಗೆಯ ಹರಹು, ಅದಕ್ಕಾಗಿ ಅವರು ತೋರಿದ ನಿಷ್ಠೆ, ಪಟ್ಟ ಪರಿಶ್ರಮ, ವಹಿಸಿದ ತಾಳ್ಮೆ, ತನ್ಮೂಲಕ ಈ

ಕ್ಷೇತ್ರದಲ್ಲಿ ಅವರು ಏರಿದ ಎತ್ತರ, ಪಡೆದ ಪ್ರಸಿದ್ಧಿ, ನೀಡಿದ ಕೊಡುಗೆ ಎಲ್ಲವೂ ಏಕಕಾಲಕ್ಕೆ ಕಣ್ಣ ಮುಂದೆ ಬಂದು ನಿಲ್ಲುತ್ತವೆ.

ಸಮಗ್ರ ಸಾಹಿತ್ಯ ಪ್ರಕಟಣ ಯೋಜನೆ :

ಡಾ. ಎಂ. ಎಂ. ಕಲಬುರ್ಗಿ ಅವರ ಈ ಸಮೃದ್ಧ ಸಾಹಿತ್ಯವನ್ನು ಸಮಗ್ರ ಸಂಪುಟಗಳಲ್ಲಿ ಪ್ರಕಟಿಸುವ ಯೋಜನೆಯೊಂದನ್ನು ವಿಜಯಪುರದ ಡಾ. ಫ.ಗು.ಹಳಕಟ್ಟಿ ಸಂಶೋಧನ ಕೇಂದ್ರ-ಕರ್ನಾಟಕ ಸರ್ಕಾರದ ಧನ ಸಹಾಯದಿಂದ-ಕೈಗೆತ್ತಿಕೊಂಡಿತು. ಯೋಜನೆಯ ವ್ಯವಸ್ಥಿತ ಪೂರೈಕೆಗಾಗಿ ಎಂಟು ಜನರ ಒಂದು ಸಲಹಾ ಸಮಿತಿಯನ್ನು ರಚಿಸಲಾಯಿತು. ಅದರಲ್ಲಿ ಶ್ರೀ ಎಂ.ಬಿ. ಪಾಟೀಲ ಅವರನ್ನು ಗೌರವಾಧ್ಯಕ್ಷರೆಂದು, ಶ್ರೀ ಜಿ.ಕೆ.ಪಾಟೀಲ ಅವರನ್ನು ಅಧ್ಯಕ್ಷರೆಂದು, ಡಾ. ಎಂ.ಎಸ್. ಮದಭಾವಿ ಅವರನ್ನು ಕಾರ್ಯದರ್ಶಿಯೆಂದು, ಡಾ. ವೀರಣ್ಣ ರಾಜೂರ ಅವರನ್ನು ಪ್ರಧಾನ ಸಂಪಾದಕರೆಂದು, ಡಾ. ಕೃಷ್ಣಕೊಲ್ಹಾರ ಕುಲಕರ್ಣಿ ಅವರನ್ನು ಯೋಜನಾ ಸಂಯೋಜಕರೆಂದು, ಡಾ. ಗುರುಲಿಂಗ ಕಾಪಸೆ, ಶ್ರೀ ವಿಜಯ ಕಲಬುರ್ಗಿ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕರನ್ನು ಸದಸ್ಯರೆಂದು ಗುರುತಿಸಲಾಯಿತು.

ಸಲಹಾ ಸಮಿತಿ ೧೪-೭-೨೦೧೭ ರಂದು ತನ್ನ ಮೊದಲ ಸಭೆ ಕರೆಯಿತು. ಅದರಲ್ಲಿ ಭಾಗವಹಿಸಲು ನಾಡಿನ ಹಲವು ವಿದ್ವಾಂಸರನ್ನು ಆಹ್ವಾನಿಸಿತು. ಅವರೆಲ್ಲರ ಅಭಿಪ್ರಾಯಗಳ ಹಿನ್ನೆಲೆಯಲ್ಲಿ ಕಲಬುರ್ಗಿಯವರ ಸಮಗ್ರ ಸಾಹಿತ್ಯ ಪ್ರಕಟಣೆಯ ರೂಪ-ರೇಷೆ, ಸಂಪುಟಗಳ ಸ್ವರೂಪ, ಸಂಪಾದಕರ ಆಯ್ಕೆ ಕುರಿತು ಒಂದು ನೀಲನಕ್ಷೆಯನ್ನು ಸಿದ್ಧಪಡಿಸಿತು. ಅದನ್ನು ಪ್ರಧಾನ ಸಂಪಾದಕರಿಗೆ ಒಪ್ಪಿಸಿ, ಅಂತಿಮ ಸ್ವರೂಪ ಕೊಡಲು ತಿಳಿಸಿತು.

೨೩-೯-೨೦೧೭ ರಂದು ಪ್ರಧಾನ ಸಂಪಾದಕರು ಎರಡನೆಯ ಸಭೆ ಕರೆದರು, ಯೋಜನೆಯ ಒಟ್ಟು ಸ್ವರೂಪವನ್ನು ೫ ಅಂಶಗಳಲ್ಲಿ ಅಳವಡಿಸಿ ಕೆಳಗಿನಂತೆ ನಿರೂಪಿಸಿದರು.

೧. ಡಾ. ಕಲಬುರ್ಗಿ ಅವರ ಒಟ್ಟು ಸಾಹಿತ್ಯವನ್ನು (ಪ್ರಕಟಿತ-ಅಪ್ರಕಟಿತ)೪೦ ಸಂಪುಟಗಳಲ್ಲಿ ಪ್ರಕಟಿಸುವುದು. ಅವುಗಳ ಸಂಪಾದನ ಕಾರ್ಯವನ್ನು ಒಟ್ಟು ೧೬ ಜನ ವಿದ್ವಾಂಸರಿಗೆ ವಹಿಸುವುದು.

೨. ಒಟ್ಟು ಸಾಹಿತ್ಯವನ್ನು ವಿಷಯಾನುಗುಣವಾಗಿ ವರ್ಗೀಕರಿಸುವುದು.

೩. ಸ್ವತಂತ್ರ ಮತ್ತು ಪ್ರಾಚೀನ ಗ್ರಂಥ ಸಂಪಾದನ ಕೃತಿಗಳನ್ನು ಮಾತ್ರ ಪ್ರಕಟಣೆಗೆ ಆಯ್ದುಕೊಳ್ಳುವುದು. ಆಧುನಿಕ ಸಂಪಾದಿತ ಕೃತಿಗಳನ್ನು (ವಿಚಾರ ಸಂಕಿರಣಗಳಲ್ಲಿ ವಿವಿಧ ವಿದ್ವಾಂಸರು ಮಂಡಿಸಿದ ಪ್ರಬಂಧಗಳ ಸಂಗ್ರಹ), ಅಭಿನಂದನ ಗ್ರಂಥಗಳನ್ನು ಕೈಬಿಡುವುದು.

೪. ಒಂದೊಂದು ಸಂಪುಟದ ವ್ಯಾಪ್ತಿಯನ್ನು ೫೦೦ ಪುಟಗಳಿಗೆ ಮಿತಿಗೊಳಿಸುವುದು.

೫. ಎರಡು ವರ್ಷಗಳ ಕಾಲಾವಧಿಯಲ್ಲಿ ಯೋಜನೆಯನ್ನು ಪೂರ್ಣಗೊಳಿಸಿ, ೨೦೧೯ ನವ್ಹೆಂಬರ್ ೨೮ ರಂದು ಎಲ್ಲ ಸಂಪುಟಗಳನ್ನು ಏಕಕಾಲಕ್ಕೆ ಬಿಡುಗಡೆಗೊಳಿಸುವುದು.

ಒಟ್ಟು ಸಂಪುಟಗಳ ವಿಸ್ತೃತ ಸ್ವರೂಪ ಹೀಗಿದೆ :

ನಾಲ್ವತ್ತು ಸಂಪುಟಗಳನ್ನು ವ್ಯಾಪಕವಾದ ಹಿನ್ನೆಲೆಯಲ್ಲಿ ಸ್ವತಂತ್ರ ಕೃತಿ ಸಂಪುಟಗಳು, ಸಂಪಾದಿತ ಕೃತಿ ಸಂಪುಟಗಳು, ಲೇಖನ ಸಾಹಿತ್ಯ ಸಂಪುಟಗಳು ಮತ್ತು ಪ್ರಾತ್ಯಕ್ಷಿಕೆ ಸಾಹಿತ್ಯ ಸಂಪುಟಗಳು ಎಂದು ನಾಲ್ಕು ಭಾಗಗಳಲ್ಲಿ ವಿಂಗಡಿಸಲಾಗಿದೆ. ಮೊದಲ ಭಾಗದಲ್ಲಿ ಮತ್ತೆ ಶಾಸನ ಸಾಹಿತ್ಯ, ಶಾಸ್ತ್ರ ಸಾಹಿತ್ಯ, ಸಂಶೋಧನ ಸಾಹಿತ್ಯ, ಜನಪದ ಸಾಹಿತ್ಯ ಮತ್ತು ಸೃಜನ ಸಾಹಿತ್ಯ ಎಂದು ನಾಲ್ಕು ವಿಭಾಗಗಳನ್ನು ಕಲ್ಪಿಸಲಾಗಿದೆ. ಎರಡನೆಯ ಭಾಗದಲ್ಲಿ ಸಂಪಾದಿತ ಕೃತಿಗಳನ್ನು ಶಾಸನ ಸಾಹಿತ್ಯ, ದಾಖಲು ಸಾಹಿತ್ಯ, ವಚನ ಸಾಹಿತ್ಯ, ಕಾವ್ಯ ಸಾಹಿತ್ಯ ಮತ್ತು ಜೀವನ ಚರಿತ್ರ ಸಾಹಿತ್ಯ ಎಂದು ವಿಭಜಿಸಲಾಗಿದೆ. ಮೂರನೆಯದಾದ ಲೇಖನ ಸಂಪುಟಗಳಲ್ಲಿ ಶಾಸನ ಸಾಹಿತ್ಯ, ಶಾಸ್ತ್ರ ಸಾಹಿತ್ಯ, ವಚನಸಾಹಿತ್ಯ, ಕಾವ್ಯಸಾಹಿತ್ಯ ಮತ್ತು ವ್ಯಕ್ತಿಚಿತ್ರಣ, ಮುನ್ನುಡಿ, ಬೆನ್ನುಡಿ, ಅರಿಕೆ, ಭಾಷಣ, ಸಂದರ್ಶನ ಎಂದು ಐದು ಭಾಗಗಳನ್ನು ಮಾಡಲಾಗಿದೆ. ಕೊನೆಯದಾದ ಪ್ರಾತ್ಯಕ್ಷಿಕೆ ಸಂಪುಟಗಳಲ್ಲಿ ಚಿತ್ರ, ಪತ್ರ–ವರದಿಗಳು, ಆಡಿಯೋ–ವಿಡಿಯೋ ಎಂದು ಮೂರು ಭಾಗಗಳನ್ನು ಯೋಜಿಸಲಾಗಿದೆ.

ಸಂಪುಟಗಳು, ಅದರಲ್ಲಿ ಅಳವಟ್ಟ ಕೃತಿಗಳು ಮತ್ತು ಸಂಪಾಕರ ವಿವರ ಕೆಳಗಿನಂತಿದೆ:

I. ಸ್ವತಂತ್ರ ಕೃತಿ ಸಂಪುಟಗಳು

ಸಂಪುಟ ೧ : ಶಾಸನ ಸಾಹಿತ್ಯ **–ಸಂ. ಡಾ. ಎಸ್.ಕೆ. ಕೊಪ್ಪಾ**

೧. ಬಸವಣ್ಣನವರನ್ನು ಕುರಿತ ಶಾಸನಗಳು
೨. ಶಾಸನಗಳಲ್ಲಿ ಶಿವಶರಣರು
೩. ಸಮಾಧಿ–ಬಲಿದಾನ–ವೀರಮರಣ ಸ್ಮಾರಕಗಳು
೪. ಮಹಾರಾಷ್ಟ್ರದ ಕನ್ನಡ ಶಾಸನಗಳು

ಸಂಪುಟ ೨ : ಶಾಸ್ತ್ರ ಸಾಹಿತ್ಯ **–ಸಂ. ಡಾ. ಬಿ.ವ್ಹಿ. ಶಿರೂರ**

೧. ಕನ್ನಡ ಗ್ರಂಥಸಂಪಾದನಶಾಸ್ತ್ರ
೨. ಪ್ರತಿಬಿಂಬ
೩. ಸಾಹಿತ್ಯ ಸಂಪಾದನೆ
೪. ಕನ್ನಡ ನಾಮವಿಜ್ಞಾನ
೫. ಕನ್ನಡ ಸಂಶೋಧನಶಾಸ್ತ್ರ
೬. ಕನ್ನಡ ಹಸ್ತಪ್ರತಿಶಾಸ್ತ್ರ

ಸಂಪುಟ ೩ : ಸಂಶೋಧನ ಸಾಹಿತ್ಯ **–ಸಂ. ಶಶಿಧರ ತೋಡಕರ**

೧. ಕವಿರಾಜಮಾರ್ಗ ಪರಿಸರದ ಕನ್ನಡ ಸಾಹಿತ್ಯ

ಸಂಪುಟ : ೪ ಜನಪದ ಸಾಹಿತ್ಯ **–ಸಂ. ಶಶಿಧರ ತೋಡಕರ**

೧. ಉತ್ತರಕ ರ್ನಾಟಕದ ಜನಪದ ಪದ್ಯಸಾಹಿತ್ಯ

೨. ಜಾನಪದ ಮಾರ್ಗ

ಸಂಪುಟ : ೫ ಸೃಜನ ಸಾಹಿತ್ಯ **–ಸಂ. ಡಾ. ಗುರುಪಾದ ಮರಿಗುದ್ದಿ**

೧. ನೀರು ನೀರಡಿಸಿತ್ತು (ಕವನ ಸಂಕಲನ)

೨. ನೀರಾಗ ನಿಂತೀನಿ ನೀರಡಿಸಿ (ಕವನ ಸಂಕಲನ)

೩. ಕೆಟ್ಟಿತ್ತು ಕಲ್ಯಾಣ (ನಾಟಕ)

೪. ಖರೇ ಖರೇ ಸಂಗ್ಯಾಬಾಳ್ಯಾ (ನಾಟಕ)

೫. ಖರೇ ಖರೇ ಕಿತ್ತೂರ ಬಂಡಾಯ(ನಾಟಕ)

II. ಸಂಪಾದಿತ ಕೃತಿ ಸಂಪುಟಗಳು

ಸಂಪುಟ ೬ : ಶಾಸನ ಸಾಹಿತ್ಯ **–ಸಂ. ಡಾ. ಎಸ್. ಕೆ. ಕೊಪ್ಪಾ**

೧. ಶಾಸನ ಸಂಪದ

೨. ಧಾರವಾಡ ಜಿಲ್ಲೆಯ ಶಾಸನ ಸೂಚಿ

೩. ವಿಜಾಪುರ ಜಿಲ್ಲೆಯ ಶಾಸನ ಸೂಚಿ

೪. ಧಾರವಾಡ ತಾಲೂಕಿನ ಶಾಸನಗಳು

೫. ಶಾಸನ ಸೂಕ್ತಿಸುಧಾರ್ಣವ

ಸಂಪುಟ : ೭ ದಾಖಲು ಸಾಹಿತ್ಯ : ಭಾಗ–೧ **–ಸಂ. ಡಾ. ಪಂಡಿತ ರಾಠೋಡ**

೧. ಕರ್ನಾಟಕದ ಕೈಫಿಯತ್ತುಗಳು

ಸಂಪುಟ : ೮ ದಾಖಲು ಸಾಹಿತ್ಯ : ಭಾಗ– ೨ **–ಸಂ. ಡಾ. ಪಂಡಿತ ರಾಠೋಡ**

೧. ಕೊಲ್ಹಾಪೂರ ಲಕ್ಷ್ಮೀಸೇನ ಭಟ್ಟಾರಕ
ಜೈನ ಬಸದಿ ಹಸ್ತಪ್ರತಿಸೂಚಿ

೨. ವಚನ ಸಾಹಿತ್ಯ ಆಕರ ಕೋಶ

೩. ತೋಂಟದಾರ್ಯ ಮಠದ ದಾಖಲು ಸಾಹಿತ್ಯ–೧

ಸಂಪುಟ : ೯ ವಚನ ಸಾಹಿತ್ಯ : ಭಾಗ–೧ **–ಸಂ. ಡಾ. ವೀರಣ್ಣ ರಾಜೂರ**

೧. ಬಸವಸ್ತೋತ್ರದ ವಚನಗಳು

೨. ಬಸವಣ್ಣನವರ ವಚನ ಸಂಪುಟ

ಸಂಪುಟ : ೧೦ ವಚನ ಸಾಹಿತ್ಯ : ಭಾಗ–೨ **–ಸಂ. ಡಾ. ಗುರುಲಿಂಗ ಕಾಪಸೆ**

೧. ಚೆನ್ನಬಸವಣ್ಣನವರ ಷಟ್ಸ್ಥಲವಚನ ಮಹಾಸಂಪುಟ

೨. ಸಿದ್ಧರಾಮಯ್ಯದೇವರ ವಚನಗಳು

ಸಂಪುಟ : ೧೧ ವಚನ ಸಾಹಿತ್ಯ : ಭಾಗ–೩ **–ಸಂ. ಡಾ. ವೀರಣ್ಣ ರಾಜೂರ**

೧. ಸಂಕೀರ್ಣ ವಚನ ಸಂಪುಟ

ಸಂಪುಟ : ೧೨ ವಚನ ಸಾಹಿತ್ಯ : ಭಾಗ–೪ **–ಸಂ. ಡಾ. ವೀರಣ್ಣ ರಾಜೂರ**

೧. ವಚನ

ಸಂಪುಟ : ೧೩ ವಚನ ಸಾಹಿತ್ಯ : ಭಾಗ–೫ **–ಸಂ. ಡಾ. ವೀರಣ್ಣ ರಾಜೂರ**

೧. ಶೂನ್ಯಸಂಪಾದನೆ

ಸಂಪುಟ : ೧೪ ವಚನ ಸಾಹಿತ್ಯ : ಭಾಗ–೬ **–ಸಂ. ಡಾ. ವೀರಣ್ಣ ರಾಜೂರ**

೧. ಪರಮಾನಂದ ಸುಧೆ

೨. ಏಕೋತ್ತರಶತಸ್ಥಲ

ಸಂಪುಟ : ೧೫ ವಚನ ಸಾಹಿತ್ಯ : ಭಾಗ–೭ **–ಸಂ. ಡಾ. ಪಂಡಿತ ರಾಠೋಡ**

೧. ಬಸವಣ್ಣನವರ ಟೀಕಿನ ವಚನಗಳು, ಭಾಗ–೧

ಸಂಪುಟ : ೧೬ ವಚನ ಸಾಹಿತ್ಯ : ಭಾಗ–೮ **–ಸಂ. ಡಾ. ಪಂಡಿತ ರಾಠೋಡ**

೧. ಬಸವಣ್ಣನವರ ಟೀಕಿನ ವಚನಗಳು, ಭಾಗ–೨

ಸಂಪುಟ : ೧೭ ವಚನ ಸಾಹಿತ್ಯ : ಭಾಗ–೯ **–ಸಂ. ಶಶಿಧರ ತೋಡಕರ**

೧. ವಚನ ಸಂಕಲನ–೪

೨. ವಚನ ಸಂಕಲನ–೬

೩. ವಚನ ವರ್ಷ

ಸಂಪುಟ : ೧೮ ವಚನ ಸಾಹಿತ್ಯ : ಭಾಗ–೧೦ **–ಸಂ. ಡಾ. ವೀರಣ್ಣ ರಾಜೂರ**

೧. ವಚನಶಾಸ್ತ್ರಸಾರ(ಸಂಪುಟ–೧)

ಸಂಪುಟ : ೧೯ ಕಾವ್ಯ ಸಾಹಿತ್ಯ : ಭಾಗ–೧ **–ಸಂ. ಡಾ. ಗುರುಪಾದ ಮರಿಗುದ್ದಿ**

೧. ಹರಿಹರನ ರಗಳೆಗಳು, ಭಾಗ–೧

ಸಂಪುಟ : ೨೦ ಕಾವ್ಯ ಸಾಹಿತ್ಯ : ಭಾಗ-೨ **-ಸಂ. ಡಾ. ಗುರುಪಾದ ಮರಿಗುದ್ದಿ**

೧. ಹರಿಹರನ ರಗಳೆಗಳು, ಭಾಗ-೨

ಸಂಪುಟ: ೨೧ ಕಾವ್ಯ ಸಾಹಿತ್ಯ : ಭಾಗ-೩ **-ಸಂ. ಡಾ. ಬಿ.ವ್ಹಿ. ಶಿರೂರ**

೧. ಮಲ್ಲಿನಾಥ ಪುರಾಣ ಸಂಗ್ರಹ
೨. ಶಬ್ದಮಣಿದರ್ಪಣ ಸಂಗ್ರಹ
೩. ತೋಂಟದ ಸಿದ್ಧಲಿಂಗೇಶ್ವರ ಭಾವರತ್ನಾಭರಣ ಸ್ತೋತ್ರ
೪. ಆದಯ್ಯನ ಲಘುಕೃತಿಗಳು
೫. ಕೊಂಡಗುಳಿ ಕೇಶಿರಾಜನ ಕೃತಿಗಳು

ಸಂಪುಟ: ೨೨ ಕಾವ್ಯ ಸಾಹಿತ್ಯ : ಭಾಗ-೪ **-ಸಂ. ಡಾ. ಎಫ್. ಟಿ. ಹಳ್ಳಿಕೇರಿ**

೧. ಷಟ್‌ಸ್ಥಲ ಶಿವಾಯಣ
೨. ಶಿವಯೋಗ ಪ್ರದೀಪಿಕಾ

ಸಂಪುಟ: ೨೩ ಕಾವ್ಯ ಸಾಹಿತ್ಯ : ಭಾಗ-೫ **-ಸಂ. ಡಾ. ಎಫ್. ಟಿ. ಹಳ್ಳಿಕೇರಿ**

೧. ತಗರ ಪವಾಡ
೨. ಸಿದ್ಧಮಂಕ ಚರಿತೆ
೩. ಗುಂಡಬಸವೇಶ್ವರ ಪುರಾಣ
೪. ಕೊಡೆಕಲ್ಲ ವಚನ ವಾಕ್ಯ

ಸಂಪುಟ: ೨೪ ಕಾವ್ಯ ಸಾಹಿತ್ಯ : ಭಾಗ-೬ **-ಸಂ. ಡಾ. ಹನುಮಂತ ಮೇಲಿನಮನಿ**

೧. ಹೊಸಕುಮಾರರಾಮನ ಸಾಂಗತ್ಯ
೨. ಹಳೆಯಕುಮಾರ ರಾಮನ ಸಾಂಗತ್ಯ

ಸಂಪುಟ: ೨೫ ಕಾವ್ಯ ಸಾಹಿತ್ಯ : ಭಾಗ-೭ **-ಸಂ. ಡಾ. ಹನುಮಂತ ಮೇಲಿನಮನಿ**

೧. ಕೊಮಾರ ರಾಮಯ್ಯನ ಚರಿತ್ರೆ
೨. ಬಾಲರಾಮನ ಸಾಂಗತ್ಯ

ಸಂಪುಟ: ೨೬ ಕಾವ್ಯ ಸಾಹಿತ್ಯ : ಭಾಗ-೮ **-ಸಂ. ಡಾ. ಸರಸ್ವತಿದೇವಿ ಭಗವತಿ**

೧. ಸಿರುಮಣ ನಾಯಕನ ಸಾಂಗತ್ಯ
೨. ಸಿರುಮನ ಚರಿತೆ
೩. ಗೊಲ್ಲ ಸಿರುಮನ ಚರಿತೆ

ಸಂಪುಟ: ೨೭ ಕಾವ್ಯ ಸಾಹಿತ್ಯ : ಭಾಗ–೯ –ಸಂ. ಡಾ. ಸರಸ್ವತಿದೇವಿ ಭಗವತಿ

೧. ಇಮ್ಮಡಿ ಚಿಕ್ಕಭೂಪಾಲನ ಸಾಂಗತ್ಯ

೨. ನಿಂಬಸಾಮಂತ ಚರಿತೆ

ಸಂಪುಟ: ೨೮ ಕಾವ್ಯ ಸಾಹಿತ್ಯ : ಭಾಗ–೧೦ –ಸಂ. ಡಾ. ಎಂ ಎಸ್. ಮದಭಾವಿ

೧. ಕಿತ್ತೂರ ಸಂಸ್ಥಾನ ಸಾಹಿತ್ಯ–೧

೨. ಕಿತ್ತೂರ ಸಂಸ್ಥಾನ ಸಾಹಿತ್ಯ–೨

೩. ಕಿತ್ತೂರ ಸಂಸ್ಥಾನ ಸಾಹಿತ್ಯ–೩

ಸಂಪುಟ: ೨೯ ಜೀವನ ಚರಿತ್ರೆ ಸಾಹಿತ್ಯ : ಭಾಗ–೧ –ಸಂ. ಡಾ. ಎಂ ಎಸ್. ಮದಭಾವಿ

೧. ಹಾಲಭಾವಿ ವೀರಭದ್ರಪ್ಪನವರ ಆತ್ಮಚರಿತ್ರೆ

೨. ಫ.ಗು.ಹಳಕಟ್ಟಿಯವರ ಆತ್ಮಚರಿತ್ರೆ

೩. ಮಡಿವಾಳಪ್ಪ ಸಾಸನೂರ ಬರೆಹ–ಬದುಕು

ಸಂಪುಟ: ೩೦ ಜೀವನ ಚರಿತ್ರೆ ಸಾಹಿತ್ಯ : ಭಾಗ–೨ –ಸಂ. ಡಾ. ಮಲ್ಲಿಕಾರ್ಜುನ ಮೇತ್ರಿ

೧. ರಾಷ್ಟ್ರಧರ್ಮ ದ್ರಷ್ಟಾರ ಹರ್ಡೇಕರ
ಮಂಜಪ್ಪ, ಭಾಗ : ೧

ಸಂಪುಟ: ೩೧ ಜೀವನ ಚರಿತ್ರೆ ಸಾಹಿತ್ಯ : ಭಾಗ–೩ –ಸಂ. ಡಾ. ಮಲ್ಲಿಕಾರ್ಜುನ ಮೇತ್ರಿ

೧. ರಾಷ್ಟ್ರಧರ್ಮ ದ್ರಷ್ಟಾರ ಹರ್ಡೇಕರ
ಮಂಜಪ್ಪ, ಭಾಗ : ೨

ಸಂಪುಟ: ೩೨ ಜೀವನ ಚರಿತ್ರೆ ಸಾಹಿತ್ಯ : ಭಾಗ–೪ –ಸಂ. ಡಾ. ವಿ.ಎಸ್. ಮಾಳಿ

೧. ಅರಟಾಳ ರುದ್ರಗೌಡರ ಚರಿತ್ರೆ

III. ಲೇಖನ ಸಾಹಿತ್ಯ ಸಂಪುಟಗಳು(ಮಾರ್ಗ ಸಂಪುಟಗಳು)

ಸಂಪುಟ: ೩೩. ಲೇಖನ ಸಾಹಿತ್ಯ : ಭಾಗ–೧ –ಸಂ. ಡಾ. ಕೆ. ರವೀಂದ್ರನಾಥ

ಶಾಸನ ಸಾಹಿತ್ಯ

ಸಂಪುಟ: ೩೪. ಲೇಖನ ಸಾಹಿತ್ಯ : ಭಾಗ–೨ –ಸಂ. ಡಾ. ಕೆ. ರವೀಂದ್ರನಾಥ

ಶಾಸ್ತ್ರ ಸಾಹಿತ್ಯ

ಸಂಪುಟ: ೩೫. ಲೇಖನ ಸಾಹಿತ್ಯ : ಭಾಗ–೩ –ಸಂ. ಡಾ. ಕೆ. ರವೀಂದ್ರನಾಥ
ವಚನ ಸಾಹಿತ್ಯ

ಸಂಪುಟ: ೩೬. ಲೇಖನ ಸಾಹಿತ್ಯ : ಭಾಗ–೪ –ಸಂ. ಡಾ. ಕೆ. ರವೀಂದ್ರನಾಥ
ಕಾವ್ಯ ಸಾಹಿತ್ಯ

ಸಂಪುಟ: ೩೭. ಲೇಖನ ಸಾಹಿತ್ಯ : ಭಾಗ–೫ –ಸಂ. ಡಾ. ಕೆ. ರವೀಂದ್ರನಾಥ
ವ್ಯಕ್ತಿಚಿತ್ರಣ–ಮುನ್ನುಡಿ–ಬೆನ್ನುಡಿ
ಅರಿಕೆ–ಭಾಷಣ–ಸಂದರ್ಶನ

IV. ಪ್ರಾತ್ಯಕ್ಷಿಕೆ ಸಾಹಿತ್ಯ ಸಂಪುಟಗಳು

ಸಂಪುಟ : ೩೮–ಪ್ರಾತ್ಯಕ್ಷಿಕೆ ಸಾಹಿತ್ಯ ಭಾಗ–೧ –ಸಂ. ಡಾ. ಕೃಷ್ಣ ಕೊಲ್ಹಾರಕುಲಕರ್ಣಿ
ಚಿತ್ರ –ಡಾ. ವಿ.ಡಿ. ಐಹೊಳ್ಳಿ

ಸಂಪುಟ : ೩೯–ಪ್ರಾತ್ಯಕ್ಷಿಕೆ ಸಾಹಿತ್ಯ ಭಾಗ–೨ –ಸಂ. ಡಾ. ಕೃಷ್ಣ ಕೊಲ್ಹಾರಕುಲಕರ್ಣಿ
ಪತ್ರ–ವರದಿಗಳು –ಡಾ. ವಿ.ಡಿ. ಐಹೊಳ್ಳಿ

ಸಂಪುಟ : ೪೦–ಪ್ರಾತ್ಯಕ್ಷಿಕೆ ಸಾಹಿತ್ಯ ಭಾಗ–೩ –ಸಂ. ಡಾ. ಕೃಷ್ಣ ಕೊಲ್ಹಾರಕುಲಕರ್ಣಿ
ಆಡಿಯೋ–ವಿಡಿಯೋ –ಡಾ. ವಿ.ಡಿ. ಐಹೊಳ್ಳಿ

ಹೀಗೆ ೪೦ ಸಂಪುಟಗಳಲ್ಲಿ ೭೯ ಕೃತಿಗಳನ್ನು ಅಳವಡಿಸಲಾಗಿದೆ. ಮಾರ್ಗ ಸಂಪುಟದಿಂದಾಯ್ದು ಡಾ. ಕಲಬುರ್ಗಿಯವರೇ ಸಿದ್ಧಪಡಿಸಿದ ೧೧ ಸಂಕಲನ ಕೃತಿಗಳನ್ನು, ಹರಿಹರನ ರಗಳೆ ಸಂಪುಟದಿಂದಾಯ್ದು ಸಿದ್ಧಪಡಿಸಿದ 'ಕನ್ನಡ ಶರಣರ ಕಥೆಗಳು' ಎಂಬ ಕೃತಿಯನ್ನು, ವಚನ ಶಾಸ್ತ್ರಸಾರದ ಪುನರ್ ಮುದ್ರಣವಾದ 'ಡಾ. ಫ.ಗು.ಹಳಕಟ್ಟಿ ಸಮಗ್ರ ಸಾಹಿತ್ಯ ಸಂಪುಟ–೫'ನ್ನು; 'ಶಿವಾನುಭವ ಪತ್ರಿಕೆ'ಯನ್ನು, ವಿಚಾರ ಸಂಕಿರಣಗಳಲ್ಲಿ ಮಂಡಿಸಿದ ವಿವಿಧ ವಿದ್ವಾಂಸರ ಪ್ರಬಂಧಗಳ ಸಂಕಲನಗಳೆನಿಸಿದ ಆಧುನಿಕ ಸಂಪಾದಿತ ೧೪ ಕೃತಿಗಳನ್ನು ಮತ್ತು ೬ ಅಭಿನಂದನಗ್ರಂಥ, ಎರಡು ಇಂಗ್ಲಿಷ್‌ಗ್ರಂಥ ಹೀಗೆ ಒಟ್ಟು ೩೫ ಗ್ರಂಥಗಳನ್ನು–ಪುನರುಕ್ತಿಕಾರಣವಾಗಿ–ಈ ಸಂಪುಟಗಳಲ್ಲಿ ಸೇರಿಸದೆ ಕೈಬಿಡಲಾಗಿದೆ.

ಸಂಪುಟಗಳ ಸಂಯೋಜನೆಯಲ್ಲಿ ಈ ಕೆಳಗಿನ ಕ್ರಮವನ್ನು ಅನುಸರಿಸಲಾಗಿದೆ:

ಒಂದು ಕೃತಿ ೫೦೦ ಪುಟ ವ್ಯಾಪ್ತಿಯನ್ನು ಹೊಂದಿದ್ದರೆ ಅದನ್ನು ಒಂದು ಸ್ವತಂತ್ರ ಸಂಪುಟವೆಂದು ಪರಿಗಣಿಸಲಾಗಿದೆ(ಉದಾ: ಶೂನ್ಯಸಂಪಾದನೆ, ವಚನ). ಪುಟ ಸಂಖ್ಯೆ ಕಡಿಮೆ

ಇದ್ದಲ್ಲಿ ಒಂದಕ್ಕಿಂತ ಹೆಚ್ಚು ಕೃತಿಗಳನ್ನು ಸೇರಿಸಿ ೫೦೦ ಪುಟಕ್ಕೆ ಹೊಂದುವಂತೆ ಜೋಡಿಸಲಾಗಿದೆ(ಉದಾ: ಹೊಸ ಕುಮಾರರಾಮನ ಸಾಂಗತ್ಯ, ಹಳೆಯ ಕುಮಾರಾಮನ ಸಾಂಗತ್ಯ). ಹಾಗೆ ಜೋಡಿಸುವಲ್ಲಿ ವಿಷಯದ ಏಕತೆಯನ್ನು ದೃಷ್ಟಿಯಲ್ಲಿಟ್ಟುಕೊಳ್ಳಲಾಗಿದೆ. ಒಂದು ಕೃತಿ ಸಾವಿರ ಅಥವಾ ಅದಕ್ಕಿಂತ ಹೆಚ್ಚು ಪುಟ ವ್ಯಾಪ್ತಿಯನ್ನು ಪಡೆದಿದ್ದರೆ, ಅದನ್ನು ಎರಡು ಭಾಗಗಳಾಗಿ ವಿಭಜಿಸಿ ಪ್ರತ್ಯೇಕ ಸಂಪುಟವೆಂದು ಗಣಿಸಲಾಗಿದೆ(ಉದಾ: ಬಸವಣ್ಣನವರ ಟೀಕಿನ ವಚನಗಳು, ಧರ್ಮದ್ರಷ್ಟಾರ ಹರ್ಡೇಕರ ಮಂಜಪ್ಪನವರು).

ಡಾ. ಕಲಬುರ್ಗಿ ಅವರ ಬಿಡಿ ಲೇಖನಗಳು (ಸಂಪ್ರಬಂಧಗಳು) ಮೂಲದಲ್ಲಿ 'ಮಾರ್ಗ' ಹೆಸರಿನ ೮ ಸಂಪುಟಗಳಲ್ಲಿ ಪ್ರಕಟವಾಗಿವೆ. ಕಾಲಕಾಲಕ್ಕೆ ಪ್ರಕಟವಾದ ಅವುಗಳಲ್ಲಿ ಒಂದೇ ವಿಷಯ ಕ್ಷೇತ್ರಕ್ಕೆ ಸಂಬಂಧಿಸಿದ ಲೇಖನಗಳು ಬೇರೆಬೇರೆ ಸಂಪುಟಗಳಲ್ಲಿ ಹಂಚಿ ಹೋಗಿವೆ. ಅವುಗಳನ್ನು ಒಂದೆಡೆ ತರುವ ಉದ್ದೇಶದಿಂದ ಎಲ್ಲ ಲೇಖನಗಳನ್ನು ವಿಷಯಾನುಗುಣವಾಗಿ ಮರುವರ್ಗೀಕರಣ ಮಾಡಿ ೫ ಸಂಪುಟಗಳಲ್ಲಿ ಅಳವಡಿಸಲಾಗಿದೆ. ಹಾಗೆ ಮಾಡುವಲ್ಲಿ ಮೂಲ ಮಾರ್ಗ ಸಂಪುಟ ೫ ರಲ್ಲಿ ಅಳವಡಿಸಿದ್ದ ಪ್ರಾಚೀನ ಸಂಪಾದಿತ ಕೃತಿಗಳ ಪ್ರಸ್ತಾವನೆಗಳನ್ನು-ಅವು ಆಯಾ ಕೃತಿಗಳಲ್ಲಿ ಅಲ್ಲಲ್ಲಿಯೇ ಪ್ರಕಟವಾಗುವುದರಿಂದ-ಕೈಬಿಡಲಾಗಿದೆ. ಆಧುನಿಕ ಸಂಪಾದಿತ ಕೃತಿಗಳು ಈ ಯೋಜನೆಯಿಂದ ಹೊರಗುಳಿದಿರುವುದರಿಂದ ಅವುಗಳ ಅರಿಕೆ, ಸಂಪಾದಕರ ಮಾತು, ಪ್ರಧಾನ ಸಂಪಾದಕರ ಮಾತು-ಇವುಗಳನ್ನು ಮಾತ್ರ ಹಾಗೇ ಉಳಿಸಿಕೊಳ್ಳಲಾಗಿದೆ. ಮರು ಹೊಂದಾಣಿಕೆ ಮಾಡಿದ ಲೇಖನಗಳ ಮೂಲ ಆಕರಗಳನ್ನು ಆಯಾ ಲೇಖನದ ಕೆಳಗೆ ನಮೂದಿಸಲಾಗಿದೆ.

ಪ್ರಾತ್ಯಕ್ಷಿಕೆ ಸಾಹಿತ್ಯ ಸಂಪುಟಗಳಲ್ಲಿ ಒಂದು-ಡಾ. ಕಲಬುರ್ಗಿಯವರಿಗೆ ಸಂಬಂಧಿಸಿದ ಚಿತ್ರ ಸಂಪುಟವಾಗಿದೆ. ಇದರಲ್ಲಿ ಅವರ ವೈಯಕ್ತಿಕ ಬದುಕು ಮತ್ತು ಶೈಕ್ಷಣಿಕ, ಸಾಮಾಜಿಕ ಹಾಗೂ ಸಾಂಸ್ಕೃತಿಕ ಬದುಕಿಗೆ ಸಂಬಂಧಿಸಿದ ಆಯ್ದ ಭಾವ ಚಿತ್ರಗಳನ್ನು ಅಳವಡಿಸಲಾಗಿದೆ. ಎರಡನೆಯದಾದ ಪತ್ರ-ವರದಿ ಸಂಪುಟದಲ್ಲಿ ಕಲಬುರ್ಗಿ ಅವರು ಇತರರಿಗೆ ಬರೆದ, ಇತರರು ಕಲಬುರ್ಗಿಯವರಿಗೆ ಬರೆದ ಮಹತ್ವದ ಪತ್ರಗಳನ್ನು ಮತ್ತು ಕಲಬುರ್ಗಿಯವರು ಭಾಗವಹಿಸಿದ ಕಾರ್ಯಕ್ರಮಗಳ ಪತ್ರಿಕಾ ವರದಿಗಳನ್ನು ಸಂಗ್ರಹಿಸಲಾಗಿದೆ. ಮೂರನೆಯ ಸಂಪುಟದಲ್ಲಿ ಕಲಬುರ್ಗಿ ಅವರನ್ನು ಕುರಿತ ಸಾಕ್ಷ್ಯಚಿತ್ರ, ದೂರದರ್ಶನ ಸಂದರ್ಶನ ಮತ್ತು ಭಾಷಣಗಳು; ಅವರ ನಾಟಕಗಳ ಪ್ರದರ್ಶನದ ಚಿತ್ರೀಕರಣ ಮಾಡಿದ ಆಡಿಯೋ-ವಿಡಿಯೋಗಳನ್ನು ಒಂದುಗೂಡಿಸಲಾಗಿದೆ.

ಡಾ. ಕಲಬುರ್ಗಿ ಅವರ ಕೃತಿಗಳಲ್ಲಿ ಕೆಲವು ಒಂದೇ ಮುದ್ರಣ ಕಂಡಿದ್ದರೆ, ಮತ್ತೆ ಕೆಲವು ಒಂದಕ್ಕಿಂತ ಹೆಚ್ಚು ಮುದ್ರಣ ಹೊಂದಿವೆ. ಹೀಗಾಗಿ ಈ ಸಂಪುಟಗಳನ್ನು ಸಿದ್ಧಪಡಿಸುವಲ್ಲಿ ಎಲ್ಲ ಆವೃತ್ತಿಗಳನ್ನೂ ಅವಲೋಕಿಸಿ, ಕೊನೆಯ ಆವೃತ್ತಿಯನ್ನು ಆಧಾರವಾಗಿಟ್ಟುಕೊಳ್ಳಲಾಗಿದೆ.

ಒಂದು ಕೃತಿಯಲ್ಲಿ ಒಪ್ಪೋಲೆ ಇದ್ದರೆ ಮೊದಲು ಅದನ್ನು ಸರಿಪಡಿಸಿಕೊಳ್ಳುವುದು. ಕೃತಿಯ ಅಥವಾ ಲೇಖನದ ಒಳಗೆ ಕೆಲವು ಭಾಗ ಅಥವಾ ಪುಟ ಅಥವಾ ಪದ-ವಾಕ್ಯ ಬಿಟ್ಟುಹೋಗಿದ್ದರೆ ಮೂಲ ಆವೃತ್ತಿಯನ್ನು ನೋಡಿ ಸೇರಿಸಿಕೊಳ್ಳುವುದು. ಅಕ್ಷರ ದೋಷಗಳನ್ನು ತಿದ್ದುಪಡಿಮಾಡುವುದು. ಅಡಿಟಿಪ್ಪಣಿ, ಅನುಬಂಧಗಳಲ್ಲಿ ವ್ಯತ್ಯಾಸಗಳಾಗಿದ್ದರೆ ಹೊಂದಾಣಿಕೆ ಮಾಡುವುದು. ಆಕರಗಳು

ಬಿಟ್ಟು ಹೋಗಿದ್ದರೆ ಬೇರೆ ಮೂಲಗಳಿಂದ ಹುಡುಕಿ ಅಳವಡಿಸಿಕೊಳ್ಳುವುದು. ಈ ಹಿನ್ನೆಲೆಯಲ್ಲಿ ಆಯಾ ಸಂಪುಟಗಳ ಸಂಪಾದಕರು ತಮ್ಮ ತಮ್ಮ ಸಂಪುಟಗಳನ್ನು ಆಮೂಲಾಗ್ರವಾಗಿ ಪರಿಶೀಲಿಸಿ, ಶುದ್ಧರೂಪದಲ್ಲಿ ಸಿದ್ಧಪಡಿಸುವುದು. ಅನಂತರ ಆ ಸಂಪುಟದ ಸ್ವರೂಪ-ವಿಶೇಷತೆ ಕುರಿತು ನಾಲ್ಕಾರು ಪುಟದ ಸಂಪಾದಕರ ಮಾತು ಬರೆದು ಜೋಡಿಸುವುದು-ಇದು ಈ ಸಂಪುಟಗಳನ್ನು ರೂಪಿಸುವಲ್ಲಿ ಅನುಸರಿಸಿದ ವಿಧಾನ.

ಗ್ರಂಥ ವಿನ್ಯಾಸ ಕುರಿತಂತೆ-ಕೃತಿಯ ಆರಂಭದ ಪುಟಗಳು (ಪ್ರಿಲಿಮ್ಸ್) ಮುಗಿದು ಮೂಲ ಗ್ರಂಥ ಆರಂಭವಾಗುವಲ್ಲಿ ಮೊದಲ ಆವೃತ್ತಿಯ ಮೊದಲ ಪುಟವನ್ನು (ಕೃತಿಯ ಹೆಸರು, ಲೇಖಕರು/ಸಂಪಾದಕರು, ಪ್ರಕಾಶಕರು, ಪ್ರಕಟಣ ವರ್ಷಗಳನ್ನೊಳಗೊಂಡಂತೆ) ಹಾಗೆಯೇ ಇಟ್ಟುಕೊಳ್ಳಲಾಗಿದೆ. ಮೂಲದಲ್ಲಿನ ಪ್ರಕಾಶಕರ ಮಾತು, ಮುನ್ನುಡಿಗಳನ್ನು ತೆಗೆದುಹಾಕಿ ಲೇಖಕರ ಮಾತು, ಪ್ರಸ್ತಾವನೆಗಳನ್ನು ಮಾತ್ರ ಉಳಿಸಿಕೊಳ್ಳಲಾಗಿದೆ. ಒಂದು ಸಂಪುಟದಲ್ಲಿ ಒಂದಕ್ಕಿಂತ ಹೆಚ್ಚು ಕೃತಿಗಳಿದ್ದರೆ ಒಂದೊಂದು ಕೃತಿಯ ಮೂಲ ಸ್ವರೂಪವನ್ನು ಹಾಗೆಯೇ ಉಳಿಸಿಕೊಂಡು ಪುಟ ಸಂಖ್ಯೆಯನ್ನು ಮಾತ್ರ ಮೊದಲಿನಿಂದ ಕೊನೆಯವರೆಗೆ ಬೆಳೆಸಲಾಗಿದೆ. ಪರಿವಿಡಿಯಲ್ಲಿ ಎಲ್ಲ ಕೃತಿಗಳ ವಿವರವನ್ನು ಕೊಡಲಾಗಿದೆ.

ಒಟ್ಟಿನಲ್ಲಿ ಅಚ್ಚುಕಟ್ಟಾದ ವಿನ್ಯಾಸ, ಅರ್ಥಪೂರ್ಣ-ಆಕರ್ಷಕ ಮುಖಪುಟ, ದೋಷರಹಿತ ಸುಂದರ ಮುದ್ರಣ, ಭಾರವೆನಿಸದ ಗಾತ್ರ ಮತ್ತು ಸುಲಭವಾದ ಬೆಲೆಯಲ್ಲಿ ಡಾ. ಕಲಬುರ್ಗಿ ಅವರ ಅಮೂಲ್ಯವಾದ ಸಮಗ್ರ ಸಾಹಿತ್ಯ ಒಂದೆಡೆ ಎಲ್ಲರಿಗೂ ದೊರಕುವಂತೆ ಮಾಡುವುದು ಈ ಯೋಜನೆಯ ಉದ್ದೇಶವಾಗಿದೆ. ಅದನ್ನು ಬಹುಮಟ್ಟಿಗೆ ಈಡೇರಿಸಿದ್ದೇವೆ ಎಂಬ ತೃಪ್ತಿ ನಮ್ಮದಾಗಿದೆ.

ಕೃತಜ್ಞತೆಗಳು :

'ಡಾ. ಎಂ. ಎಂ. ಕಲಬುರ್ಗಿ ಸಮಗ್ರ ಸಾಹಿತ್ಯ ಪ್ರಕಟಣ ಯೋಜನೆ' ಕನ್ನಡದ ಒಂದು ಮಹತ್ವಾಕಾಂಕ್ಷೆಯ ಪ್ರತಿಷ್ಠಿತ ಗ್ರಂಥಪ್ರಕಟಣ ಯೋಜನೆ. ಇದನ್ನು ಯಶಸ್ವಿಯಾಗಿ ಪೂರೈಸುವಲ್ಲಿ ಹಲವಾರು ವ್ಯಕ್ತಿಗಳು ನೆರವಾಗಿದ್ದಾರೆ. ಅವರನ್ನು ಈ ಸಂದರ್ಭದಲ್ಲಿ ಗೌರವಪೂರ್ವಕವಾಗಿ ನೆನೆಯುವುದು ನನ್ನ ಪರಮ ಕರ್ತವ್ಯವೆಂದು ಭಾವಿಸಿದ್ದೇನೆ.

ಈ ಯೋಜನೆಗೆ ಅನುಮೋದನೆ ನೀಡಿ, ಧನ ಸಹಾಯ ಮಾಡಿದವರು ಕರ್ನಾಟಕ ಸರ್ಕಾರದ ಅಂದಿನ ಮುಖ್ಯ ಮಂತ್ರಿಗಳಾಗಿದ್ದ ಮಾನ್ಯ ಶ್ರೀ ಸಿದ್ಧರಾಮಯ್ಯನವರು. ಅದಕ್ಕೆ ಪೂರ್ವಭಾವಿಯಾಗಿ ಸಹಾಯ ಮಾಡಿದವರು ಕನ್ನಡ ಮತ್ತು ಸಂಸ್ಕೃತಿ ಖಾತೆಯ ಸಚಿವರು ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕರು. ಅವರಿಗೆ ಹೃತ್ಪೂರ್ವಕ ಧನ್ಯವಾದಗಳನ್ನು ಅರ್ಪಿಸುತ್ತೇನೆ.

ಈ ಮಹತ್ವದ ಯೋಜನೆ ಕಾರ್ಯರೂಪಕ್ಕೆ ಬರಲು ಮುಖ್ಯಮಂತ್ರಿಗಳ ಮನ ಒಲಿಸಿ ಹಣ ಬಿಡುಗಡೆ ಮಾಡಿಸುವುದರ ಜೊತೆಗೆ ತಮ್ಮ ಬಿಎಲ್‌ಡಿಇ ಸಂಸ್ಥೆಯ ಅಡಿಯಲ್ಲಿರುವ 'ವಚನ ಪಿತಾಮಹ ಡಾ. ಫ.ಗು. ಹಳಕಟ್ಟಿ ಸಂಶೋಧನ ಕೇಂದ್ರ'ದ ಮೂಲಕ ಇದು ಸಾಕಾರಗೊಳ್ಳಲು ಕಾರಣರಾದವರು ಕರ್ನಾಟಕ ಸರ್ಕಾರದ ಪ್ರಭಾವೀ ಗೃಹಸಚಿವರೂ, ಉತ್ಕಟ ಬಸವತತ್ವಾಭಿಮಾನಿಗಳೂ ಲಿಂಗಾಯತ ಸ್ವತಂತ್ರ ಧರ್ಮ ಮಾನ್ಯತೆಯ ಹೋರಾಟದ ಮುಂಚೂಣಿ ನಾಯಕರೂ ಆದ

ಮಾನ್ಯ ಶ್ರೀ ಎಂ.ಬಿ. ಪಾಟೀಲ ಅವರು. ಡಾ. ಎಂ. ಎಂ. ಕಲಬುರ್ಗಿ ಅವರ ಬಗೆಗೆ ಪಾಟೀಲರಿಗೆ ಅನನ್ಯವಾದ ಪ್ರೀತಿ–ವಿಶ್ವಾಸ–ಗೌರವ. ಅವರ ಮಾರ್ಗದರ್ಶನದಲ್ಲಿ ತಮ್ಮ ಬಿ.ಎಲ್.ಡಿ.ಇ. ಸಂಸ್ಥೆಯಿಂದ 'ಡಾ. ಫ.ಗು. ಹಳಕಟ್ಟಿ ಸಮಗ್ರ ಸಾಹಿತ್ಯ', 'ಆದಿಲ್‌ಶಾಹಿ ಸಮಗ್ರ ಸಾಹಿತ್ಯ' ಪ್ರಕಟಿಸಿದ ಕೀರ್ತಿ ಅವರದು. ಈಗ ಕಲಬುರ್ಗಿ ಅವರ ಸಮಗ್ರ ಸಾಹಿತ್ಯ ಪ್ರಕಟಿಸುವ ಮೂಲಕ ಅವರಿಗೆ ತಮ್ಮ ಕೃತಜ್ಞತಾಪೂರ್ವಕ ಗೌರವ ಸಲ್ಲಿಸುತ್ತಿರುವುದು ಅಪೇಕ್ಷಣೀಯ ಉಪಕ್ರಮವೆನಿಸಿದೆ. ಶ್ರೀ ಎಂ.ಬಿ. ಪಾಟೀಲ ಅವರ ಈ ಕಾರ್ಯಕ್ಷಮತೆಗೆ ಅನಂತ ಶರಣಾರ್ಥಿಗಳನ್ನು ಸಲ್ಲಿಸುತ್ತೇನೆ.

ಈ ಯೋಜನೆ ನಿಗದಿತ ವೇಳೆಯಲ್ಲಿ ಸಮಯಬದ್ಧವಾಗಿ ಮತ್ತು ವ್ಯವಸ್ಥಿತವಾಗಿ ಪೂರ್ಣಗೊಳ್ಳಲು ಅರ್ಪಣಾಭಾವದಿಂದ ನಿರಂತರ ಶ್ರಮಿಸಿದವರು ಹಳಕಟ್ಟಿ ಸಂಶೋಧನ ಕೇಂದ್ರದ ಹಾಗೂ ಈ ಯೋಜನೆಯ ಕಾರ್ಯದರ್ಶಿಗಳಾದ ಡಾ. ಎಂ. ಎಸ್. ಮದಭಾವಿ ಮತ್ತು ಯೋಜನಾ ಸಂಯೋಜಕರಾದ ಡಾ. ಕೃಷ್ಣ ಕೊಲ್ಹಾರಕುಲಕರ್ಣಿ ಅವರು ಹಾಗೂ ಸಂಶೋಧನ ಕೇಂದ್ರದ ಎಲ್ಲ ಸಿಬ್ಬಂದಿ ವರ್ಗ. ಅವರ ಅವಿರತ ಪರಿಶ್ರಮಕ್ಕೆ ಅನಂತ ವಂದನೆಗಳು.

ಈ ಯೋಜನೆಗೆ ಬೇಕಾದ ಆಕರ ಸಾಮಗ್ರಿಯನ್ನು, ಅಂದರೆ ಗ್ರಂಥಗಳನ್ನು ಒದಗಿಸಿದವರು ಡಾ. ಎಂ. ಎಂ. ಕಲಬುರ್ಗಿ ಅವರ ಕುಟುಂಬವರ್ಗದವರು. ಈ ಸಂದರ್ಭದಲ್ಲಿ ಶ್ರೀಮತಿ ಉಮಾದೇವಿ ಕಲಬುರ್ಗಿ, ಶ್ರೀ ವಿಜಯ ಕಲಬುರ್ಗಿ ಮತ್ತು ರೂಪಾ ಕಲಬುರ್ಗಿ ಅವರು ಅನೇಕ ವಿಧದಲ್ಲಿ ಸಹಾಯ–ಸಹಕಾರ ಮತ್ತು ಮಾರ್ಗದರ್ಶನ ನೀಡಿದ್ದಾರೆ. ಅವರಿಗೆ ನಾವು ಚಿರಋಣಿಯಾಗಿದ್ದೇವೆ.

ಒಂದು ಯೋಜನೆ ನಿರೀಕ್ಷಿತ ಮಟ್ಟದಲ್ಲಿ ತೃಪ್ತಿಕರವಾಗಿ ಕೈಗೂಡಬೇಕಾದರೆ ಬದ್ಧತೆಯುಳ್ಳ ವಿದ್ವಾಂಸರ ನಿಶ್ಚಿತ ನೆರವು ಮತ್ತು ಪ್ರಾಮಾಣಿಕ ಪ್ರಯತ್ನ ಅಗತ್ಯ. ಅಂಥ ೧೬ ಜನ ವಿದ್ವಾಂಸರು ನಮಗೆ ಸಂಪಾದಕರಾಗಿ ದೊರೆತುದು ಈ ಯೋಜನೆ ಸುಗಮವಾಗಿ ಪೂರ್ಣಗೊಳ್ಳಲು ಸಹಕಾರಿಯಾಗಿದೆ. ಅವರೆಲ್ಲರ ವಿದ್ವತ್ ಪ್ರೀತಿಗೆ, ಕಲಬುರ್ಗಿ ಸರ್ ಮೇಲಿನ ಅಭಿಮಾನಕ್ಕೆ ತುಂಬು ಹೃದಯದ ಅಭಿನಂದನೆಗಳು.

ಸಂಪುಟಗಳು ಸುಂದರವಾಗಿ–ಬಂಧುರವಾಗಿ ಹೊರಬರಲು ಕಾರಣರಾದವರು ಛಾಯಾಕ್ಷರ ಜೋಡಿಸಿ, ಗ್ರಂಥವಿನ್ಯಾಸಗೊಳಿಸಿದ ಡಾ. ಹನುಮಂತ ಮೇಲಿನಮನಿ, ಡಾ. ಸರಸ್ವತಿದೇವಿ ಭಗವತಿ, ಮುಖಪುಟ ರೂಪಿಸಿದ ಕೆ.ಕೆ. ಮಕಾಳಿ ಮತ್ತು ಮುದ್ರಣಗೊಳಿಸಿದ ಪ್ರಿಂಟ್‌ಪಾಯಿಂಟ್ ಮಾಲಿಕರಾದ ಬಸವರಾಜ ಪಾಟೀಲ(ಹೆಬ್ಬಾಳ) ಅವರು. ಇವರೆಲ್ಲರಿಗೆ ಅನಂತ ಕೃತಜ್ಞತೆಗಳು.

ಡಾ. ಕಲಬರ್ಗಿ ಅವರು ಅನೇಕ ಯೋಜನೆಗಳ ಮಹಾಯೋಜಕರು. ಅವರು ನೆರವೇರಿಸಿದ ಹಲವಾರು ಯೋಜನೆಗಳಲ್ಲಿ ಜೊತೆಗೂಡಿ ಕೆಲಸ ಮಾಡುವ ಅವಕಾಶ ದೊರಕಿಸಿಕೊಂಡ ನನಗೆ ಈಗ ಅವರ ಸಮಗ್ರಸಾಹಿತ್ಯ ಪ್ರಕಟಣ ಯೋಜನೆಯ ಪ್ರಧಾನ ಸಂಪಾದಕನಾಗಿ ಕಾರ್ಯ ಮಾಡುವ ಯೋಗ ಒದಗಿ ಬಂದುದು ನನ್ನ ಬದುಕಿನ ಮಹಾಭಾಗ್ಯವೆಂದು ಭಾವಿಸಿದ್ದೇನೆ. ಈ ಕಾರ್ಯಗೌರವವನ್ನು ಆ ಗುರುವಿನ ದಿವ್ಯಚೇತನಕ್ಕೆ ವಿನಮ್ರವಾಗಿ ಅರ್ಪಿಸುತ್ತೇನೆ.

❖❖

*

ಸಂಯೋಜಕರ ನುಡಿ

ಡಾ. ಕೃಷ್ಣ ಕೊಲ್ಹಾರಕುಲಕರ್ಣಿ

ಡಾ. ಎಂ.ಎಂ. ಕಲಬುರ್ಗಿಯವರು ತಮ್ಮ ಅಮೂಲ್ಯ ಸಾಹಿತ್ಯದ ಮೂಲಕ ನಾಡು, ನುಡಿ ಸೇವೆಗೈದು ದೇಶ–ವಿದೇಶದಲ್ಲಿ ದಟ್ಟವಾದ ಪ್ರಭಾವವನ್ನು ಬೀರಿದ ವ್ಯಕ್ತಿ. ೨೦ನೆಯ ಶತಮಾನದ ಉತ್ತರಾರ್ಧ ಹಾಗೂ ೨೧ನೆಯ ಶತಮಾನದ ಪೂರ್ವಾರ್ಧದ ಹೊಸ್ತಿಲಲ್ಲಿ ನಿಂತು ಸಾಹಿತ್ಯ ವಾರಸುದಾರರಿಗೆ ಮಾರ್ಗ ತೋರಿದ ಮಹಾನ್ ವಿದ್ವಾಂಸ, ಸಂಶೋಧಕ, ವಿಮರ್ಶಕ, ಚಿಂತಕ ಹಾಗೂ ಸಾಹಿತ್ಯದ ಆರಾಧಕರವರು.

ಇಂಥ ಅಪರೂಪದ ವ್ಯಕ್ತಿಯ ವ್ಯಕ್ತಿತ್ವದ ಬಹುಮುಖಗಳನ್ನು ಒಂದೆಡೆ ಸೇರಿಸಿ ಅಕ್ಷರ, ದೃಶ್ಯ, ಧ್ವನಿ, ಚಿತ್ರ ಮಾಧ್ಯಮಗಳ ಮೂಲಕ ಪರಿಚಯಿಸುವುದು, ಅಕ್ಷರ ಮಾಧ್ಯಮದಲ್ಲಿ ಬಂದ ಅವರ ಸಮಗ್ರ ಸಾಹಿತ್ಯವನ್ನು ವಿಷಯವಾರು ವಿಂಗಡಿಸಿ ೪೦ ಸಂಪುಟಗಳಲ್ಲಿ ಪ್ರಕಟಿಸುವುದು ಈ ಯೋಜನೆಯ ಮುಖ್ಯ ಉದ್ದೇಶವಾಗಿದೆ.

- ❖ ಅವರು ನುಡಿದ ಮಾತುಗಳು(ದೃಶ್ಯ ಮತ್ತು ಧ್ವನಿ) ರೇಡಿಯೊ, ದೂರದರ್ಶನದಲ್ಲಿ ಅಲ್ಲದೆ ಹಲವಾರು ಮಹತ್ವದ ಕಾರ್ಯಕ್ರಮಗಳಲ್ಲೂ ದಾಖಲಾಗಿವೆ. ಅವುಗಳನ್ನು ಇದ್ದ ರೀತಿಯಲ್ಲೆ ಸಂಗ್ರಹಿಸುವುದರ ಜೊತೆಗೆ, ಅವುಗಳನ್ನು ಅಕ್ಷರ ಮಾಧ್ಯಮಕ್ಕೆ ತಂದು ಸಂಪುಟ ರೂಪದಲ್ಲಿ ಪ್ರಕಟಿಸುವುದು.
- ❖ ಡಾ. ಕಲಬುರ್ಗಿಯವರ ವಿಪುಲವಾದ ಅಪ್ರಕಟಿತ ಸಾಹಿತ್ಯವು ಆತ್ಮಚರಿತ್ರೆಯ ರೂಪದ ದಿನಚರಿಯ ಪುಟಗಳಲ್ಲಿ ಲಭ್ಯವಿವೆ ಎಂದು ಬಲ್ಲ ಮೂಲಗಳಿಂದ ತಿಳಿದುಬಂದಿದೆ. ಅದನ್ನು ವಿವಿಧ ಮೂಲಗಳಿಂದ ಸಂಗ್ರಹಿಸಿ ಪ್ರಕಟಿಸುವುದು.
- ❖ ಐದು ದಶಕಗಳ ಕಾಲದಿಂದಲೂ ದಿನಪತ್ರಿಕೆಯಲ್ಲಿ, ನಿಯತಕಾಲಿಕೆಗಳಲ್ಲಿ ಪ್ರಕಟವಾದ ಅವರ ಲೇಖನಗಳನ್ನು ಮತ್ತು ಸಭೆ, ಸಮಾರಂಭಗಳಲ್ಲಿ ನೀಡಿರುವ ವಿದ್ವತ್ಪೂರ್ಣವಾದ ಮಾತುಗಳನ್ನು ಪತ್ರಿಕೆಯವರು ಪ್ರಕಟಿಸಿರುವುದುಂಟು. ಇವುಗಳನ್ನು ಸಂಗ್ರಹಿಸಿ ಪ್ರಕಟಿಸುವುದು.

- ❖ ಸಾವಿರಾರು ವಿದ್ಯಾರ್ಥಿಗಳಿಗೆ, ಸಹೋದ್ಯೋಗಿ ಬಂಧುಗಳಿಗೆ, ವಿದ್ವಾಂಸರುಗಳಿಗೆ, ಗುರುಗಳಿಗೆ, ಮಠಮಾನ್ಯಗಳಿಗೆ ಅವರು ಹಲವಾರು ಪತ್ರಗಳನ್ನು ಬರೆದವರಾಗಿದ್ದಾರೆ. ಅವುಗಳೆಲ್ಲವನ್ನು ಒಂದೆಡೆ ಸೇರಿಸಿ ಪತ್ರ ಸಂಪುಟಗಳನ್ನು ಪ್ರಕಟಿಸುವುದು.
- ❖ ಸರಕಾರ ಮತ್ತು ಸರಕಾರೇತರ ಪ್ರತಿಷ್ಠಾನಗಳು, ಸಂಘ–ಸಂಸ್ಥೆಗಳು, ವಿಶ್ವವಿದ್ಯಾಲಯ ಇವುಗಳಲ್ಲಿ ಹಲವಾರು ಸಾಹಿತ್ಯಿಕ ಕೃತಿಗಳನ್ನು ಪ್ರಕಟಿಸಿದ್ದಾರೆ. ಅವುಗಳು ಕನ್ನಡ ನಾಡು ಮತ್ತು ಹೊರನಾಡುಗಳಲ್ಲಿ ಚದುರಿವೆ. ಅವುಗಳನ್ನು ಸಂಗ್ರಹಿಸಿ ಪ್ರಕಟಿಸುವುದು.
- ❖ ಡಾ. ಕಲಬುರ್ಗಿಯವರ ಹಲವಾರು ಶೈಕ್ಷಣಿಕ, ಸಾಹಿತ್ಯಿಕ, ಸಾಮಾಜಿಕ ಮತ್ತು ಸಂಶೋಧನಾತ್ಮಕ ಲೇಖನಗಳು ನಿಯತಕಾಲಿಕೆಗಳಲ್ಲಿ ಪ್ರಕಟಗೊಂಡಿವೆ. ಅವುಗಳನ್ನು ಸಂಗ್ರಹಿಸಿ ಪ್ರಕಟಿಸುವುದು.
- ❖ ಭಾಷಣಗಳು, ಉಪನ್ಯಾಸಗಳು, ಹಲವಾರು ವಿಚಾರಸಂಕಿರಣದಲ್ಲಿ ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಮಟ್ಟದ ವೇದಿಕೆಗಳಲ್ಲಿ ಮಂಡಿಸಿದ ಪ್ರಬಂಧಗಳನ್ನು ಒಂದೆಡೆ ಸಂಗ್ರಹಿಸುವುದಲ್ಲದೆ, ರಾಷ್ಟ್ರೀಯ ಪತ್ರಿಕೆಗಳಲ್ಲಿ ಪ್ರಕಟವಾಗಿದ್ದ ವರದಿಗಳನ್ನು ಸಂಗ್ರಹಿಸಿ ಪ್ರಕಟಿಸುವುದು.
- ❖ ಅವರ ಸಾವಿರಾರು ಶಿಷ್ಯವರ್ಗದ ಗ್ರಂಥಗಳಿಗೆ ಬರೆದ ಮುನ್ನುಡಿ, ಹಿನ್ನುಡಿ, ಮಾರ್ಗದರ್ಶಕ ಟಿಪ್ಪಣಿಗಳು, ಪ್ರಸ್ತಾವನೆಗಳು ಮತ್ತು ಸಂಪಾದಕ ನುಡಿಗಳು ಇವುಗಳೆಲ್ಲವನ್ನು ಸಂಗ್ರಹಿಸಿ ಪ್ರಕಟಿಸುವುದು.
- ❖ ಡಾ. ಕಲಬುರ್ಗಿಯವರು ಜಾನಪದ ಸಾಹಿತ್ಯದಲ್ಲೂ ಅಪರೂಪದ ಕೆಲಸ ಮಾಡಿದ್ದಾರೆ. ಹಲವಾರು ಹಾಡುಗಳನ್ನು ಸಂಗ್ರಹಿಸಿದ್ದಾರೆ. ಅವುಗಳನ್ನು ಸಂಗ್ರಹಿಸಿ, ಪ್ರಕಟಿಸುವುದು.
- ❖ ಐದು ದಶಕಗಳ ಅವರ ನಿರಂತರ ಕಾರ್ಯಚಟುವಟಿಕೆಗಳ ಭಾವಚಿತ್ರಗಳನ್ನು ಸಂಗ್ರಹಿಸಿ ಚಿತ್ರ ಸಂಪುಟಗಳನ್ನು ಪ್ರಕಟಿಸುವುದು.
- ❖ ಅವರು ಬರೆದ, ರಂಗಪ್ರದರ್ಶನ ಕಂಡ ನಾಟಕಗಳನ್ನು ಪುನರ್ ಪ್ರದರ್ಶಿಸಿ ದೃಶ್ಯಮಾಧ್ಯಮದಲ್ಲಿ ಸೆರೆಹಿಡಿದು ಪ್ರಕಟಿಸುವುದು.
- ❖ ಮುಂದುವರೆದ ಈ ತಾಂತ್ರಿಕ ಯುಗದಲ್ಲಿ ಅವರ ಸಮಗ್ರ ಸಾಹಿತ್ಯವನ್ನು ಅಂತರ್ಜಾಲಕ್ಕೆ ರವಾನಿಸುವುದು.

ಹಳಕಟ್ಟಿ ಸಂಶೋಧನ ಕೇಂದ್ರವು ಕಳೆದ ಸುಮಾರು ೨ ದಶಕಗಳ ಸಂಶೋಧನ ಕ್ಷೇತ್ರದಲ್ಲಿ ಅಪರೂಪದ ಕೆಲಸವನ್ನು ಮಾಡುತ್ತಿದೆ. ಡಾ. ಫ.ಗು.ಹಳಕಟ್ಟಿ ಸಮಗ್ರ ಸಾಹಿತ್ಯವನ್ನು ೧೫ ಸಂಪುಟಗಳಲ್ಲಿ ಆದಿಲಶಾಹಿ ಕಾಲದ ಸಾಹಿತ್ಯವನ್ನು ೧೮ ಸಂಪುಟಗಳಲ್ಲಿ ಅನುವಾದಿಸಿ ಪ್ರಕಟಿಸಿದೆ. ೯ ವಿದ್ಯಾರ್ಥಿಗಳು ವಿವಿಧ ವಿಷಯದಲ್ಲಿ ಪಿಎಚ್.ಡಿ.ಪದವಿಯನ್ನು ಪಡೆದಿದ್ದಾರೆ. ಇನ್ನು ಕೆಲವರು ಪದವಿಯನ್ನು ಪಡೆಯುವ ದಾರಿಯಲ್ಲಿ ಇದ್ದಾರೆ. ಇದಕ್ಕೆಲ್ಲ ಬಿ.ಎಲ್.ಡಿ.ಇ.ಸಂಸ್ಥೆಯ ಅಧ್ಯಕ್ಷರಾದ ಡಾ. ಎಂ.ಬಿ.ಪಾಟೀಲ ಅವರ ನಿರಂತರ ಬೆಂಬಲವೇ ಕಾರಣವಾಗಿದೆ. ಈ ಯೋಜನೆಯ ಕರಡು ಪ್ರತಿಯನ್ನು ಕನ್ನಡ ಮತ್ತು ಸಂಸ್ಕೃತಿ ಇಲಾಖೆಗೆ ಕಳುಹಿಸಿತು. ಈ ಯೋಜನೆಗೆ ಅನುದಾನ

ನೀಡುವಲ್ಲಿ ತೀವ್ರ ಆಸಕ್ತಿ ವಹಿಸಿದವರು ಈ ಹಿಂದೆ ಕರ್ನಾಟಕ ರಾಜ್ಯದ ಮುಖ್ಯಮಂತ್ರಿಗಳಾಗಿದ್ದ ಸನ್ಮಾನ್ಯ ಶ್ರೀ ಸಿದ್ಧರಾಮಯ್ಯನವರು ಮತ್ತು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕರು ಮತ್ತು ಅಧಿಕಾರಿಗಳು. ಇವರಿಗೆಲ್ಲ ನಮ್ಮ ಕೃತಜ್ಞತೆಗಳು ಸಲ್ಲುತ್ತವೆ.

ಯೋಜನೆಯಲ್ಲಿ ಬಿ.ಎಲ್.ಡಿ.ಇ. ಸಂಸ್ಥೆಯ ಅಧ್ಯಕ್ಷರು, ನಾಡಿನ ಹಿರಿಯ ರಾಜಕಾರಣಿಗಳು ಆದ ಡಾ. ಎಂ.ಬಿ.ಪಾಟೀಲ ಗೌರವ ಅಧ್ಯಕ್ಷರಾಗಿ, ಶ್ರೀ ಜಿ.ಕೆ.ಪಾಟೀಲರು ಅಧ್ಯಕ್ಷರಾಗಿ, ಡಾ. ಎಂ.ಎಸ್. ಮದಭಾವಿ ಕಾರ್ಯದರ್ಶಿಗಳಾಗಿ, ಡಾ. ವೀರಣ್ಣ ರಾಜೂರ ಪ್ರಧಾನ ಸಂಪಾದಕರಾಗಿ, ಡಾ. ಕೃಷ್ಣ ಕೊಲ್ಹಾರಕುಲಕರ್ಣಿ ಸಂಯೋಜಕರಾಗಿ ಹಾಗೂ ಡಾ. ಗುರುಲಿಂಗ ಕಾಪಸೆ, ಶ್ರೀವಿಜಯ ಕಲಬುರ್ಗಿ, ಡಾ. ವಿ.ಡಿ.ಐಹೊಳ್ಳಿ ಮತ್ತು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಿರ್ದೇಶಕರು, ಸಲಹಾ ಸಮಿತಿಯ ಸದಸ್ಯರಾಗಿ ಕಾರ್ಯನಿರ್ವಹಿಸಿದ್ದಾರೆ. ಇವರೆಲ್ಲರನ್ನು ಪ್ರೀತಿಯಿಂದ ನೆನೆಯುತ್ತೇವೆ.

ಪ್ರಸ್ತುತ ಸಂಪುಟದ ಸಂಪಾದಕರಾದ ಶಶಿಧರ ತೋಡಕರ, ಮುಖಪುಟ ವಿನ್ಯಾಸಗೊಳಿಸಿದ ಶ್ರೀ ಕೆ.ಕೆ.ಮಕಾಳಿ ಹಾಗೂ ಸುಂದರವಾಗಿ ಅಕ್ಷರ ಸಂಯೋಜನೆ ಮಾಡಿದ ಡಾ. ಹನುಮಂತ ಮೇಲಿನಮನಿ, ಡಾ. ಸರಸ್ವತಿದೇವಿ ಭಗವತಿ ಮತ್ತು ಅಂದವಾಗಿ ಮುದ್ರಿಸಿದ ಬೆಂಗಳೂರಿನ ಪ್ರಿಂಟ್ ಪಾಯಿಂಟಿನ ಶ್ರೀ ಬಿ.ಸಿ.ಪಾಟೀಲ(ಹೆಬ್ಬಾಳ) ಹಾಗೂ ಅವರ ಸಿಬ್ಬಂದಿಗೆ ಕೃತಜ್ಞತೆಗಳು.

❖❖

*

ಸಂಪಾದಕರ ನುಡಿ

ಶಶಿಧರ ತೋಡಕರ

"ಕವಿರಾಜಮಾರ್ಗ ಪರಿಸರದ ಕನ್ನಡ ಸಾಹಿತ್ಯದ ಮೂಲಕ ಡಾ. ಕಲಬುರ್ಗಿಯವರು ಕನ್ನಡ ಸಾಹಿತ್ಯ ಚರಿತ್ರೆಯ ಸೌಧಕ್ಕೆ ಅಡಿಪಾಯ ಹಾಕಿಕೊಟ್ಟಿದ್ದಾರೆ" ಈ ಮಾತು ಡಾ. ಎಂ. ಎಂ. ಕಲಬುರ್ಗಿಯವರ ಗುರುಗಳೂ ಹಾಗೂ ಅವರ ಸಂಶೋಧನ ಸಂಪ್ರಬಂಧಕ್ಕೆ ಮಾರ್ಗದರ್ಶಕರೂ ಆಗಿದ್ದ ಮಹಾಮಹೋಪಾಧ್ಯಾಯರಾದ ಡಾ. ಆರ್. ಸಿ. ಹಿರೇಮಠ ಅವರದು. ಈ ಮಾತನ್ನು ಅವರು ಶಿಷ್ಯವಾತ್ಸಲ್ಯದಿಂದ ಬರೆದುದಲ್ಲ. ಡಾ. ಎಂ. ಎಂ. ಕಲಬುರ್ಗಿಯವರ ಸಂಪ್ರಬಂಧದ ಬಂಧ ಮತ್ತು ಅದು ಒಳಗೊಂಡಿರುವ ಆಳವಾದ ವಿದ್ವತ್ತು, ಅಪಾರ ಆಕರಗಳ ಸಂಗ್ರಹ, ಅವುಗಳನ್ನು ಬಳಸಿಕೊಳ್ಳುವಲ್ಲಿ ತೋರಿದ ನಿಶಿತಮತಿ ಮತ್ತು ತರ್ಕ ವಿವೇಕದಿಂದ ಹೊರಹೊಮ್ಮಿದ ಸತ್ಯಪ್ರಕಾಶದ ಅನೇಕಾನೇಕ ಒಳನೋಟಗಳಿಂದ ಇಡಿಕಿರಿದ ಲಾಲಿತ್ಯಪೂರ್ಣ ಮಂಡನೆಯ ರೀತಿಗೆ ಬೆರಗಾಗಿ ಬರೆದದ್ದು. ಡಾ. ಎಂ. ಎಂ. ಕಲಬುರ್ಗಿಯವರು ಇಂದಿಗೆ ಅರ್ಧಶತಕದ ಹಿಂದೆ ಕರ್ನಾಟಕ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ ಈ ಪ್ರಬಂಧ, ಇಂದಿಗೂ ಡಾ. ಆರ್. ಸಿ. ಅವರು ಹೇಳಿದ ಮಾತಿನ ಮೌಲ್ಯವನ್ನು ಕಳೆದುಕೊಂಡಿಲ್ಲ. ಈ ಸಂಪ್ರಬಂಧಕ್ಕೆ ಮುನ್ನುಡಿ ಬರೆದ ಡಾ. ಆರ್.ಸಿ. ಅವರು 'ಇಷ್ಟು ವ್ಯಾಪಕವಾದ ವಿಷಯವನ್ನು ಮರಹು, ಆಲಸ್ಯಗಳಿಗೆ ಎಡೆಕೊಡದೆ ಕೈ ಹಿಡಿದು ನಡೆಸಿಕೊಂಡು ಬಂದುದು ಒಂದು ಅಪೂರ್ವಸಾಧನೆ' ಎನ್ನುತ್ತಾ ಪ್ರಸ್ತುತ ಸಂಪ್ರಬಂಧ ರೂಪಿಸುವಲ್ಲಿ ಡಾ. ಎಂ. ಎಂ. ಕಲಬುರ್ಗಿಯವರು 'ಸಂಸ್ಕೃತ, ಪ್ರಾಕೃತ, ತಮಿಳು, ತೆಲಗು ಮೊದಲಾದ ಸಾಹಿತ್ಯಗಳ ಅಪಾರ ರಾಶಿಯನ್ನು ಬೆಂಗಾವಲಿಟ್ಟುಕೊಂಡು ಬರೆದ ಈ ಕೃತಿ ಕನ್ನಡ ಸಾಹಿತ್ಯದ ಪ್ರಥಮ ಯುಗದ ಪರಿಪೂರ್ಣ ದರ್ಶನವನ್ನೀಯುತ್ತದೆ' ಎನ್ನುವ ಮಾತನ್ನು ದಾಖಲಿಸುತ್ತಾರೆ.

ಡಾ. ಎಂ. ಎಂ. ಕಲಬುರ್ಗಿಯವರು ಪ್ರಸ್ತುತ ಪ್ರಬಂಧವನ್ನು ಕನ್ನಡ ಸಾರಸ್ವತ ಲೋಕಕ್ಕೆ ಅರ್ಪಿಸುವ ಮುನ್ನ ಪಂಪ ಪೂರ್ವಯುಗದ ಕನ್ನಡ ಸಾಹಿತ್ಯ ಚರಿತ್ರೆ ಕತ್ತಲೆಯ ದಾರಿಯಾಗಿತ್ತು. ಸಾಮಾನ್ಯ ಪ್ರಯತ್ನಗಳಿಗೆ ತೆರೆಯದ ಭಾಂಡಾರದ ಬಾಗಿಲಾಗಿತ್ತು. ಸುಮಾರು ಒಂದು ದಶಕದ ಕಾಲ ಪ್ರಸ್ತುತ ವಿಷಯ ಡಾ. ಎಂ. ಎಂ. ಕಲಬುರ್ಗಿಯವರ ಮನೋಲೋಕವನ್ನು ಆವರಿಸಿಕೊಂಡು ಅವರನ್ನು ದುಡಿಸಿ ದಣಿಸಿ ಹನಿಸಿದ ತೇವ ಈ ಸಂಪ್ರಬಂಧದ ಪ್ರತಿಪುಟಗಳಿಗೆ ಇನ್ನೂ ಅಂಟಿಕೊಂಡಿದೆ ಎಂದರೆ ಉತ್ಪ್ರೇಕ್ಷೆಯ ಮಾತಾಗಲಾರದು. ಅವರ ಕಟುಟೀಕಾಕಾರರಿಗೆ ಕವಿ ಕುವೆಂಪು ಹೇಳುವಂತೆ 'ನಾ ಏರುವ ಎತ್ತರಕ್ಕೆ ನೀ ಏರಬಲ್ಲೆಯಾ' ಎನ್ನುವ ಸವಾಲನ್ನು ಇಂದಿಗೂ ಅದು ಒಡ್ಡುತ್ತದೆ. ಈ

ಸಂಪ್ರಬಂಧ ಮಂಡನೆಗೆ ಅವರು ಮಾಡಿಕೊಂಡ ತಯಾರಿ ಒಂದುಕಡೆ, ಕನ್ನಡ ಸಾಹಿತ್ಯ ಸೌಧಕ್ಕೆ ಹಾಕಿದ ಅಡಿಪಾಯವಾದರೆ ಮತ್ತೊಂದುಕಡೆ, ಡಾ. ಎಂ. ಎಂ. ಕಲಬುರ್ಗಿಯವರು ತಮ್ಮ ಜೀವಮಾನದುದ್ದಕ್ಕೂ ಸಾಧಿಸಿದ ಸಾಧನೆಗಳ ಅಡಿಪಾಯವೂ ಹೌದು. ಆಧುನಿಕ ಕನ್ನಡ ಸಾಹಿತ್ಯಕ್ಕೆ ನವೋದಯ, ಪ್ರಗತಿಶೀಲ, ನವ್ಯ, ದಲಿತ –ಬಂಡಾಯಗಳೆಂಬ ರೆಂಬೆಕೊಂಬೆಗಳು ಹೇಗೆ ಚಿಗುರಿ ಚೆಲ್ಲುವರಿದಿವೆಯೋ ಹಾಗೆ ಪ್ರಾಚೀನ ಕನ್ನಡ ಸಾಹಿತ್ಯಕ್ಕೆ ಶಾಸನ, ವ್ಯಾಕರಣ, ಛಂದಸ್ಸು, ಅಲಂಕಾರ ಮುಂತಾದ ಇತರ ಶಾಸ್ತ್ರಕೃತಿಗಳು. ಇವುಗಳ ಅಂತರ್–ಶಿಸ್ತೀಯ ಅಧ್ಯಯನಕ್ಕೆ ವಿದ್ವತ್ ಪೂರ್ಣ ಚೌಕಟ್ಟನ್ನು ರೂಪಿಸಿದವರಲ್ಲಿ ಡಾ. ಎಂ. ಎಂ. ಕಲಬುರ್ಗಿಯವರು ಮುಖ್ಯರು.

ಡಾ. ಆರ್. ಸಿ. ಯವರು ಈ ಸಂಪ್ರಂಬಂಧಕ್ಕೆ ಬರೆದ ತಮ್ಮ ಮುನ್ನುಡಿಯಲ್ಲಿ ಈ ಸಂಪ್ರಬಂಧದ ಹೆಚ್ಚುಗಾರಿಕೆಯ ಪಟ್ಟಿಯನ್ನೆ ಮಾಡಿದ್ದಾರೆ:

* ಕವಿರಾಜಮಾರ್ಗದ ಕರ್ತೃ ಸಮಸ್ಯೆ ಬಗೆಹರಿಸಿದ್ದು.

* 'ಕಾವೇರಿಯಿಂದಮಾ ಗೋದಾವರಿ' ವರೆಗಣ ನಾಡು ಕುಂತಳದೇಶ. ಅದರಲ್ಲಿನ ಎರಡಱುನೂಱಿರ ಜನಪದದ ವಿವರಣೆ.

* ಪ್ರಾಚೀನ ಕರ್ನಾಟಕದ ರಾಜಕೀಯ ವಿಭಾಗಗಳನ್ನು ಗುರುತಿಸಿದ್ದು.

* ಕವಿರಾಜಮಾರ್ಗದಲ್ಲಿ ಹುದುಗಿದ ಕಾವ್ಯಪ್ರಭೇದಗಳ ತಲಸ್ಪರ್ಶಿ ಅಧ್ಯಯನ.

* ಚತ್ತಾಣ–ಬೆದಂಡೆಗಬ್ಬ, ಪಗರಣಗಳು ಮೂಲತಹ ಜಾನಪದ ಮಟ್ಟುಗಳೆಂದೂ ಇವುಗಳಲ್ಲಿ ಚತ್ತಾಣ ಬೆದಂಡೆಗಬ್ಬಗಳನ್ನು ಕನ್ನಡ ಕವಿಗಳು ಮಹಾಕಾವ್ಯದ ಮಟ್ಟಕ್ಕೆ ಏರಿಸಿದರೆಂದು ಹೇಳಿದ್ದು.

* ವಸ್ತುಕವು ಪುರಾಣ ಸಂಬಂಧಿ; ವರ್ಣಕವು ಲೋಕಸಂಬಂಧಿ. ಕನ್ನಡದ ಪದ, ಮೇಲ್ವಾಡು, ಪಾಡು, ಪಾಡುಗಬ್ಬ, ಮೊದಲಾದವು ಸಂಸ್ಕೃತದ ಮುಕ್ತಕ, ಕುಲಕ, ಕೋಶ ಇತ್ಯಾದಿಗಳ ಅನುಕರಣ ಪರಿಭಾಷೆಗಳೆಂದು ಸಾಧಿಸಿದುದು ಕಾವ್ಯಮೀಮಾಂಸೆಯ ಚರಿತ್ರೆಗೆ ಹೊಸವಿಚಾರ.

* ಕವಿರಾಜಮಾರ್ಗೋಕ್ತ ಕವಿಗಳಲ್ಲಿ ವಿಮಲೋದಯ, ನಾಗಾರ್ಜುನ, ದುರ್ವಿನೀತ, ಲೋಕಪಾಲ ಕುರಿತಾಗಿ ಹಾಗೂ ವ್ಯಾಕರಣ, ಅಲಂಕಾರ, ಛಂದಸ್ಸುಗಳ ವಿಷಯವಾಗಿ ಹೇಳಿದ ಕೆಲವು ಹೊಸಸಂಗತಿಗಳು.

* ಈ ಕಾಲದ ಶಾಸನಗಳ ಸಾಹಿತ್ಯಕ ಅಧ್ಯಯನ ಮೊಟ್ಟ ಮೊದಲನೆಯ ಸಲ ಇಲ್ಲಿ ನಡೆದಿದೆ.

* ಪಂಪ ಪೂರ್ವಯುಗದ ಕವಿಸಾಹಿತ್ಯದ ಅನುಪಲಬ್ಧತೆಯ ಕಾರಣ ಈ ಕಾಲದ ಶಾಸನಗಳ ಗಂಭೀರ ಅಧ್ಯಯನದ ಮೂಲಕ ಆ ಕಾಲದ ಕನ್ನಡ ಸಾಹಿತ್ಯದ ಗತಿ–ಪ್ರಗತಿಗಳನ್ನರಿಯುವ ಪ್ರಯತ್ನ ಹೊಸದು.

* ನೃಪತುಂಗನ ಕಾಲದಲ್ಲಿ ಕನ್ನಡ ಸಾಹಿತ್ಯ ಪಡೆದುಕೊಂಡ ತಿರುವು ಮತ್ತು ಅಲ್ಲಿಂದಲೇ ಪಂಪಯುಗ ಪ್ರಾರಂಭವಾಯಿತು ಎನ್ನುವ ಮಾತು ಹಾಗೂ ತನ್ನ ಹಿಂದಿನ ಸಾಹಿತ್ಯಕ್ಕೆ ಮಾನದಂಡವೆಂಬಂತೆ ಕಾವ್ಯಮೀಮಾಂಸೆಯಾದ ಕವಿರಾಜಮಾರ್ಗದ ಅವತಾರವಾಯಿತು ಎನ್ನುವ ಸಂಗತಿ.

* ಕವಿರಾಜಮಾರ್ಗದ ಹಿಂದೆ ಪ್ರಖರ ಮತ್ತು ಪ್ರಚುರವಾಗಿದ್ದುದು ಜೈನಧರ್ಮ ಮತ್ತು ಜೈನ ಸಾಹಿತ್ಯ.

* ಗ್ರಾಮ್ಯವಾಗಿದ್ದ ಕನ್ನಡವನ್ನು ಗ್ರಂಥಸ್ಥ ಭಾಷೆಯ ಎತ್ತರಕ್ಕೆ ಏರಿಸಿದ ಶ್ರೇಯಸ್ಸು ಅಂದಿನ ಜೈನ ಕವಿಗಳು ಮತ್ತು ಜಿಜ್ಞಾಸುಗಳಿಗೆ ಸಲ್ಲುತ್ತದೆ.

* ಶಾಮಕುಂದ, ತಂಬಳೂರಾಚಾರ್ಯ, ಶ್ರೀವರ್ಧದೇವ ಮುಂತಾದ ಜೈನಕವಿಗಳು ಮತ್ತು ಜಿಜ್ಞಾಸುಗಳ ವಿಷಯವಾಗಿ ಪ್ರಕಟಗೊಂಡ ಅನೇಕ ಹೊಸವಿಚಾರಗಳು.

* ವಿದ್ವಾಂಸರ ವಿವೇಚನೆಯಿಂದ ತೊಡಕುಗೊಂಡಿದ್ದ ಚೂಡಾಮಣಿತ್ರಯದ ಸಮಸ್ಯೆ ಬಗೆಹರಿಸಿದ್ದು.

* ಶಿವಮಾರ, ಅಸಗ, ಕನ್ನಮಯ್ಯ ಮುಂತಾದ ಕವಿಗಳ ಚರಿತ್ರೆ ವಿಸ್ತಾರಗೊಂಡು ಹೊಸಸಂಗತಿಗಳು ಹೊರಹೊಮ್ಮಿದ್ದು.

* ವಡ್ಡಾರಾಧನೆಯ ಕರ್ತೃವಿನ ಕಠಿಣ ಸಮಸ್ಯೆ ಕೈಗೆತ್ತಿಕೊಂಡು ಆ ಸಮಸ್ಯೆಯ ಮೂಲ ನಿವೇದಕರನ್ನೆ ಮೆಚ್ಚಿಸಿದ್ದು.

* 'ಇತರ ಸಾಹಿತ್ಯ' ಎಂಬ ಶೀರ್ಷಿಕೆಯಲ್ಲಿ ಕವಿರಾಜಮಾರ್ಗದ ಹಿಂದಿನ ಕನ್ನಡ ಸಾಹಿತ್ಯದ ಬಗೆಗೆ ವಿದ್ವಾಂಸರು ಮಾಡಿದ ಊಹೆ-ಪ್ರತ್ಯೂಹೆಗಳನ್ನು ಚರ್ಚಿಸಿ ಹೊಸ ಅಂಶಗಳನ್ನು ಸೇರಿಸಿ ಅದರ ವ್ಯಾಪ್ತಿಯನ್ನು ಅಣು-ಅಣುವಾಗಿ ಅಭ್ಯಾಸಿಸಿದ್ದು.

* ಇಡುಕಂಗಬ್ಬ ತಮಿಳು ಸಂಘಂ ಸಾಹಿತ್ಯವನ್ನು ಹೋಲುವಂತಹದು ಎಂದಿದ್ದು.

* ಉತ್ತರ ಪುರಾಣದ ಗುಣಭದ್ರದೇವನು ಕನ್ನಡದಲ್ಲಿಯೂ ಪಳಗಿದ ವ್ಯಕಿಯೆಂದು ಸಾಧಿಸಿದ್ದು.

ಹೀಗೆ ಇನ್ನು ಅನೇಕಾನೇಕ ವಿಷಯಗಳನ್ನು ಡಾ. ಆರ್.ಸಿ. ಹಿರೇಮಠವರು ಹೇಳಬಹುದಾಗಿದ್ದರೂ ಹೇಳಿದ ಈ ಮೇಲಿನ ಮಾತುಗಳು ಡಾ. ಎಂ. ಎಂ. ಕಲಬುರ್ಗಿ ಅವರ ಸಂಶೋಧನೋಪಾಸನೆಗೆ ನೀಡಿದ ಪ್ರಶಸ್ತಿ ಫಲಕಗಳೇ ಆಗಿವೆ.

ಕವಿರಾಜಮಾರ್ಗದ ಕುರಿತಾಗಿ ಕನ್ನಡ ಕಣ್ವರೆಂದೇ ಹೆಸರಾದ ಪ್ರಾಥಸ್ಮರಣೀಯ ಬಿ. ಎಂ. ಶ್ರೀ ಕಂಠಯ್ಯನವರ 'Kavirajmarga is not a wonderful masterpiece in either matter or style' ಎಂಬ ಮಾತಿಗೆ ಎದುರು ಮಾತನಾಡುವುದೇ ಪಾಪ ಎಂದುಕೊಂಡ ಕಾಲದಲ್ಲಿ ಡಾ. ಎಂ. ಎಂ. ಕಲಬುರ್ಗಿಯವರು ಬಿ. ಎಂ. ಶ್ರೀ. ಅವರ ಬಗ್ಗೆ ಅಪಾರ ಗೌರವವನ್ನು ಹೊಂದಿಯೂ 'ಶ್ರೀ ಅವರು ಶಾಸ್ತ್ರಗ್ರಂಥವನ್ನು ಕಾವ್ಯದೃಷ್ಟಿಯಿಂದ ನೋಡಿದ ವಿಪರೀತ ವಿಮರ್ಶೆ ಇದಾಗಿದೆ, ಹಾಗೆ ನೋಡಿದರೆ ಕನ್ನಡದ ಕೆಲವು ಕೃತಿಗಳಿಗಿಲ್ಲದ ಕಾವ್ಯ ಸೌಂದರ್ಯ ಕವಿರಾಜಮಾರ್ಗದಲ್ಲಿ ಹಸಿರು ಮುರಿಯುತ್ತಿದೆ', ಎಂಬ ಗಮನಾರ್ಹ ಮಾತುಗಳನ್ನು ಹೇಳುತ್ತಾರೆ. ಮುಂದುವರೆದು 'ಎಂಥ ಮಹಾಕವಿಯಿದ್ದರೂ ಶಾಸ್ತ್ರಸೀಮೆಯಲ್ಲಿ ಕಾಲಿಟ್ಟರೆ ಶುಷ್ಕನಾಗಲೇಬೇಕು. ಆದರೆ ಮಾರ್ಗಕಾರ ದೇಸಿ ಬಳಕೆಯಿಂದ ಶಾಸ್ತ್ರಬೋಧೆಯನ್ನು ಹೆಚ್ಚು ಪರಿಣಾಮಕಾರಿಗೊಳಿಸಿದ್ದಾನೆ' ಎನ್ನುತ್ತಾರೆ. ಅವರ ಈ ಬಗೆಯ ಅಧ್ಯಯನ ಶೀಲತೆ ಎಂಥವರನ್ನೂ ವಿದ್ವತ್ ಕಾರಣಕ್ಕೆ ಎದುರು ಹಾಕಿಕೊಳ್ಳಬಲ್ಲರು ಎಂಬುದಕ್ಕೆ ಸಾಕ್ಷಿಯಾಗಿದೆ.

ಶ್ರೀ ವಿಜಯ ಮತ್ತು ಶ್ರೀ ವಿಜಯಕೃತ ಕವಿರಾಜಮಾರ್ಗ ಅವರ ಬಾಳಬದುಕಿನ ಮಾರ್ಗವಾದುದರ ಕುರಿತು ಪ್ರತ್ಯೇಕವಾಗಿಯೇ ಬರೆಯಬೇಕಾದ ವಿಷಯ. ಆದಾಗ್ಯೂ ಹೇಳಬೇಕಾದ ಮಾತೆಂದರೆ ಶ್ರೀವಿಜಯ ಅವರ ಸರ್ವಾಂಗವನ್ನು ಆವರಿಸಿಕೊಂಡ ಕಾರಣ ಅವರು ತಮ್ಮ ಮಗನಿಗೆ 'ಶ್ರೀವಿಜಯ' ಎಂದೇ ನಾಮಕರಣ ಮಾಡಿದರು. ಹಾಗೆಯೆ ತಾವು ಬರೆದ ಪ್ರತಿಯೊಂದು ಬಿಡಿ ಲೇಖನವನ್ನು ಸಂಕಲಿಸುತ್ತ ಕನ್ನಡ ಸಾಹಿತ್ಯ ಸಂಶೋಧನೆಯಲ್ಲಿ ಹೊಸ ಮಾರ್ಗ ಆರಂಭಿಸಿ, ಮಾರ್ಗ ೧, ೨, ೩, ೪, ೫, ೬, ೭, ೮ ಸಂಪುಟಗಳನ್ನು ಪ್ರಕಟಿಸಿ ತಮ್ಮ ಉಸಿರಿನುದ್ದಕ್ಕೂ ಶ್ರೀವಿಜಯ ಮತ್ತು ಕವಿರಾಜಮಾರ್ಗವನ್ನು ನಿತ್ಯಾನುಸಂಧಾನ ಮಾಡುತ್ತಲೇ ಇದ್ದರು.

ಶ್ರೀವಿಜಯನ ಕುರಿತಾಗಿ ಡಾ. ಎಂ. ಎಂ. ಕಲಬುರ್ಗಿಯವರು ಬರೆದ ಕೆಲವು ಮಾತುಗಳು ಹೀಗಿವೆ: ಶ್ರೀವಿಜಯನೆಂಬ ಅಲಂಕಾರಿಕನು ರಚಿಸಿದ 'ಕವಿಮಾರ್ಗ' ಹೆಸರಿನ ಕೃತಿಯನ್ನು ಆ ಅಲಂಕಾರಿಕರ ಸಮ್ಮುಖದಲ್ಲಿಯೇ ಆಸ್ಥಾನದಲ್ಲಿ ಸಾಮೂಹಿಕ ಚರ್ಚೆಗೆ ಒಳಪಡಿಸಿ, ಅಲ್ಲಲ್ಲಿ ಪರಿಷ್ಕರಿಸಿ, ಎಲ್ಲ ವಿದ್ವಾಂಸರಿಗೆ ಸರಿ ಎನಿಸಿದ ಬಳಿಕ ಅದಕ್ಕೆ ತನ್ನ 'ಅನುಮತಿ' ನೀಡಿ ಚಲಾವಣೆಗೆ ಅವಕಾಶ ಕೊಟ್ಟಂತಿದೆ. ಹೀಗಾಗಿ ಇದು ಆ ಕಡೆ 'ಶ್ರೀವಿಜಯ ಕೃತ'ವೂ ಈ ಕಡೆ 'ನೃಪತುಂಗಾನುಮತ'ವೂ ಎಂಬಂತೆ ಆಕಾರ ಪಡೆದು ಕನ್ನಡಕ್ಕೆ ಒಂದು ಅಪೂರ್ವ ಕಾಣಿಕೆಯಾಗಿ ಸಂದಿತು. 'ಕವಿಗಳೂ ರಾಜನೂ ಸೇರಿ ರೂಪಿಸಿದ ಕಾರಣ 'ಕವಿರಾಜಮಾರ್ಗ' ಎಂದು ಹೆಸರಾಯಿತು. ಎಂದು ಹೇಳಿದ ಮಾತು ಹಾಗೆಯೇ 'ಬೆಳ್ವಲ ೩೦೦ + ಪುಲಿಗೆರೆ ೩೦೦ ಮೇಲ್ನೋಟಕ್ಕೆ ಎರಡಾಗಿ ಕಂಡರೂ ಅವುಗಳ ಹೊಕ್ಕಳ ಹುರಿ ಒಂದೇ ಅದು 'ಬೆಳ್ವಲ' ಎಂಬ ಮಾತು (ಅವರ ಪೂಜ್ಯ ಗುರುಗಳಾದ ಡಾ. ಆರ್.ಸಿ. ಹಿರೇಮಠರಿಗೆ ಅರ್ಪಿಸಿದ ಅಭಿನಂದನ ಗ್ರಂಥದ ಹೆಸರು 'ಬೆಳ್ವಲ'). ವಸ್ತುಕ–ವರ್ಣಕದ ಕುರಿತಾಗಿ ಚರ್ಚಿಸಿದ ಮಾತುಗಳು, ಚಂಪುವಿನ ಉಗಮದ ಕುರಿತಾಗಿ "ಸಂಸ್ಕೃತದವರು ಈ 'ಗದ್ಯಕಥೆ' ರಚನೆಯಲ್ಲಿಯೇ ನಿರತರಾದರೆ, ಕನ್ನಡಿಗರು ಮಾತ್ರ ಸಂಸ್ಕೃತದವರಿಗಿಂತ ಒಂದು ಹೆಜ್ಜೆ ಮುಂದುಹೋಗಿ ಅಂದರೆ, ಪದ್ಯಗಳನ್ನು ಹೆಚ್ಚು ಸೇರಿಸಿ ಅದರಿಂದ ಚಂಪೂವನ್ನು ರೂಪಿಸಿಕೊಂಡಂತಿದೆ. ಅದಕ್ಕಾಗಿಯೇ ಚಂಪುವಿನ ಪ್ರಾಚೀನತೆ, ವೈಭವಗಳು ಕನ್ನಡದ ಹೆಸರು ಹೇಳಿ ಬದುಕುವಂತಾಯಿತು." ಎಂಬ ಮಾತುಗಳೂ ಕನ್ನಡ ಭಾಷೆಯ ನಡೆಯ ಕುರಿತಾಗಿ 'ಭಾಷೆ ಬರೆವಣಿಗೆಯಲ್ಲಿ ನುರಿತು, ಬರೆವಣಿಗೆ ಗದ್ಯಪದ್ಯಗಳಲ್ಲಿ ಹದಗೊಂಡು, ಕನ್ನಡ ಸಾಹಿತ್ಯ ಉದಿತೋದಿತವಾಗಿ ಕವಿರಾಜಮಾರ್ಗದ ಹೊತ್ತಿಗೆ ಒಂದು ಅವಸ್ಥೆಯನ್ನು ಪೂರ್ಣಗೊಳಿಸಿಕೊಂಡಿದೆ. ಇಲ್ಲಿಂದ ಮುಂದೆ ಸಾಹಿತ್ಯದ ಮತ್ತೊಂದು ಅವಸ್ಥೆ ಪ್ರಾರಂಭವಾಗಿರುವದು ಕವಿರಾಜ ಮಾರ್ಗದ ತರುವಾಯದ ಶಾಸನಗಳ ಅಭ್ಯಾಸದಿಂದ ತಿಳಿದುಬರುತ್ತದೆ. ಲಕ್ಷಣ ಗ್ರಂಥವಾದ ಕವಿರಾಜಮಾರ್ಗ ಕಣ್ಣು ತೆರೆದುದು ಈ ಎರಡು ಅವಸ್ಥೆಗಳ ಮಧ್ಯ" ಎಂಬ ಮಾತುಗಳು ಡಾ. ಎಂ. ಎಂ. ಕಲಬುರ್ಗಿಯವರ ಪ್ರಾಮಾಣಿಕ ಅಧ್ಯಯನದ ಪ್ರತಿಫಲನವಾಗಿವೆ. ಅವರು ಅಧ್ಯಯನ, ಅಧ್ಯಾಪನ ವೃತ್ತಿಯುದ್ದಕ್ಕೂ ಹೇಳಿಕೊಂಡು ಬಂದ 'ಸಂಶೋಧಕ ತಪ್ಪು ಹೇಳಿರಬಹುದು, ಆದರೆ ಸುಳ್ಳು ಹೇಳಿರಲಾರ' ಎಂಬ ವಿವೇಕಕ್ಕೆ ತಕ್ಕುದಾದ ಮಾತುಗಳೇ ಆಗಿವೆ.

* * *

ಸಂಪಾದನೆಯ ಕಾರ್ಯದಲ್ಲಿ ಸಹಕರಿಸಿದ ಪ್ರಧಾನ ಸಂಪಾದಕರಾದ ಡಾ. ವೀರಣ್ಣ ರಾಜೂರ ಅವರಿಗೆ, ಪೂರಕ ಸಾಹಿತ್ಯ ಒದಗಿಸಿದ ಬಿ. ಎಲ್.ಡಿ. ಇ. ಶಿಕ್ಷಣ ಸಂಸ್ಥೆಯ ಫ.ಗು. ಹಳಕಟ್ಟಿ ಕೇಂದ್ರದ ನಿರ್ದೇಶಕರಾದ ಡಾ. ಎಂ. ಎಸ್. ಮದಭಾವಿಯವರಿಗೆ, ಯೋಜನಾ ಸಂಯೋಜಕರಾದ ಡಾ. ಕೃಷ್ಣ ಕೊಲ್ಹಾರಕುಲಕರ್ಣಿ ಅವರಿಗೆ, ಅಚ್ಚುಕಟ್ಟಾಗಿ ಅಕ್ಷರ ಸಂಯೋಜನೆ ಮಾಡಿದ ಡಾ. ಹನುಮಂತ ಮೇಲಿನಮನಿ, ಡಾ. ಸರಸ್ವತಿದೇವಿ ಭಗವತಿ ಅವರಿಗೆ, ಸುಂದರವಾಗಿ ಸಂಪುಟ ಮುದ್ರಿಸಿದ ಶ್ರೀ ಬಸವರಾಜ ಪಾಟೀಲ(ಹೆಬ್ಬಾಳ) ಅವರಿಗೆ ಕೃತಜ್ಞತೆಗಳು.

❖❖

ಕವಿರಾಜಮಾರ್ಗ ಪರಿಸರದ

ಕನ್ನಡ ಸಾಹಿತ್ಯ

ಡಾ. ಎಂ. ಎಂ. ಕಲಬುರ್ಗಿ

ಎಂ.ಎ., ಪಿಎಚ್.ಡಿ.

ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

೧೯೭೩

*

ನಿವೇದನೆ

ಹತ್ತು ವರುಷಗಳ ಹಿಂದಿನ ಮಾತು. ೧೯೬೨ರಲ್ಲಿ ಎಂ.ಎ. ಪದವಿ ಲಭಿಸಿತು. ಅದೇ ವರುಷ ಕರ್ನಾಟಕ ಕಾಲೇಜದಲ್ಲಿ ಪ್ರಾಧ್ಯಾಪಕನಾಗುವ ಪ್ರಸಂಗ ಒದಗಿತು. ೧೯೬೩ರಲ್ಲಿ ಜನವರಿ ತಿಂಗಳು ಡಾ. ಆರ್.ಸಿ. ಹಿರೇಮಠ ಅವರ ಮಾರ್ಗದರ್ಶನದಲ್ಲಿ 'ಕವಿರಾಜಮಾರ್ಗ: ಒಂದು ವಿವೇಚನೆ' ಎಂಬ ವಿಷಯವನ್ನು ಕುರಿತು ಪಿಎಚ್.ಡಿ. ಅಧ್ಯಯನ ಪ್ರಾರಂಭಿಸಿದೆ. ಅಧ್ಯಾಪನ ಅಧಿಕವಾಗಿ, ಪಿಎಚ್.ಡಿ. ಅಧ್ಯಯನ ಮಂದವಾಯಿತು. ಆದರೂ ಸಿಕ್ಕಷ್ಟು ಸಮಯದಲ್ಲಿ ಪಠ್ಯವಾಚನ, ವಿಷಯಸಂಗ್ರಹ ಮುಂದುವರಿಸಿದೆ. ಓದು ಬೆಳೆದಂತೆ ಕವಿರಾಜಮಾರ್ಗದ ಒಂದು ಪ್ರಾಮಾಣಿಕ ಪರಿಷ್ಕರಣ ಮೊದಲು ಬೇಕೆನಿಸಿತು. ಓದು ನಿಲ್ಲಿಸಿದೆ. ಕವಿರಾಜಮಾರ್ಗದ ನಾಲ್ಕು ಹಸ್ತಪ್ರತಿಗಳನ್ನು ಸಂಗ್ರಹಿಸಿದೆ. ಪರಿಷ್ಕರಣ ಮತ್ತು ಮುದ್ರಣ ಕಾರ್ಯ ಸಮಸಮವಾಗಿ ನಡೆದವು. ಎಂಟು ಪುಟ ಅಚ್ಚಾಯಿತು. ಪಾಠ ನಿರ್ಣಯದಲ್ಲಿ ಸಮಸ್ಯೆಗಳು ಎದುರಾಗಹತ್ತಿದವು. ಸಂದೇಹದೊಂದಿಗೆ ಒಂದೆರಡು ಪಾಠ ಒಪ್ಪಿಕೊಂಡೆ. ಮತ್ತೆ ಎಂಟು ಪುಟ ಅಚ್ಚಾಯಿತು. ಮತ್ತೂ ಪಾಠ ನಿರ್ಣಯ ಸಮಸ್ಯೆ ಎದುರಾಯಿತು. ಕವಿರಾಜಮಾರ್ಗದ ಇನ್ನೊಂದು ಸಮಗ್ರ ಮತ್ತು ಶುದ್ಧ ಹಸ್ತಪ್ರತಿ ಸಿಗುವ ವರೆಗೆ ಅಚ್ಚು ಹಾಕುವುದೇ ಬೇಡವೆಂದು ನನ್ನ ಪ್ರಾಮಾಣಿಕತೆ ಎಚ್ಚರಿಸಹತ್ತಿತು. ಒಂದು ಪರಿಚ್ಛೇದ ಅಚ್ಚುಹಾಕಿಸಿ ಕೈಬಿಟ್ಟೆ. ಇಲ್ಲಿಗೆ ಮೂರು ವರುಷ ಕಳೆದವು.

೧೯೬೬ರಲ್ಲಿ ವಿಶ್ವವಿದ್ಯಾಲಯಕ್ಕೆ ಪ್ರಾಧ್ಯಾಪಕನಾಗಿ ಬಂದೆನು. ಮತ್ತೆ ಅಧ್ಯಾಪನದತ್ತ ಹೆಚ್ಚು ಗಮನಕೊಡುವ ಪ್ರಸಂಗವೊದಗಿತು. ೧೯೬೭ ಕಳೆಯುವುದರೊಳಗಾಗಿ ನನ್ನ ವಿಷಯ ಸಂಗ್ರಹ ಇನ್ನೊಂದು ನಿಟ್ಟಿನಲ್ಲಿ ಬೆಳೆದುನಿಂತಿತು. ಆದುದರಿಂದ ಡಾ. ಆರ್.ಸಿ. ಹಿರೇಮಠ ಅವರ ಸಲಹೆಯ ಮೇರೆಗೆ 'ಪಂಪಪೂರ್ವಯುಗದ ಕನ್ನಡಸಾಹಿತ್ಯ' ಎಂಬ ಅರ್ಥ ಬರುವಂತೆ 'ಕವಿರಾಜಮಾರ್ಗ ಪರಿಸರದ ಕನ್ನಡಸಾಹಿತ್ಯ' ಎಂದು ೧೯೬೮ ರ ಮೇ ತಿಂಗಳಲ್ಲಿ ಮೊದಲಿನ ಶಿರೋನಾಮೆಯನ್ನು ತಿದ್ದಿಕೊಂಡೆನು. ಈ ಐದು ವರುಷಗಳ ಕಾಲ ಆಗಾಗ ಸಂಗ್ರಹಿಸಿದ್ದ ವಿಷಯವನ್ನು, ಮುಂದೆ ಎರಡು ವರುಷಗಳ ಕಾಲ ಒಂದು ವ್ಯವಸ್ಥೆಗೆ ಒಳಪಡಿಸಿ, ಚರಿತ್ರೆಯ ಚೌಕಟ್ಟಿನಲ್ಲಿ ಎರಕ ಹೊಯ್ದು ಬರೆದ ಈ ಪ್ರಬಂಧಕ್ಕೆ ೧೯೭೦ರಲ್ಲಿ ಪಿಎಚ್.ಡಿ. ಪದವಿ ಲಭಿಸಿತು.

ಪ್ರಬಂಧ ಬರೆವಣಿಗೆ ಎರಡು ವರುಷಗಳಲ್ಲಿ ಮುಗಿದರೂ ಅದರ ಹಿಂದೆ ಐದು ವರುಷಗಳ ದುಡಿಮೆ ಇದೆ. EC, SII, EI, KI, MAR ಮೊದಲಾದ ಶಾಸನ ಸಂಪುಟಗಳನ್ನು ಕೈಮುಟ್ಟಿ ಓದಿದ್ದೇನೆ. JRAS, JBBRAS, Ind-Ant, Jain Gezetteer, Jain Antiquary, Mythic Society Journal ಮೊದಲಾದ ಇಂಗ್ಲಿಷ್ ಪತ್ರಿಕೆಗಳ, ಕಸಾಪ, ಪ್ರಕ, ಕನು, ಶಸಾ, ಜಕ, ಸುಬೋಧ, ವಾಗ್ಭೂಷಣ ಮೊದಲಾದ ಕನ್ನಡ ಪತ್ರಿಕೆಗಳ, ಬೇರೆ ಬೇರೆ ಭಾಷೆಯ ನೂರಾರು ಗ್ರಂಥಗಳ ನೆರವನ್ನು ಪಡೆದಿದ್ದೇನೆ.

ಇವುಗಳಿಗೆ ಮಿಗಿಲಾಗಿ ಪೂಜ್ಯಗುರುಗಳಾದ ಡಾ. ಆರ್.ಸಿ. ಹಿರೇಮಠ ಅವರ ಮಾರ್ಗದರ್ಶನ ದೊಡ್ಡದು. "ವೀರನಾರಾಯಣನೆ ಕವಿ, ಲಿಪಿಕಾರ ಕುಮಾರವ್ಯಾಸ" ಎಂಬ ಭಾವದಿಂದ ಅವರ ಉಪಕಾರವನ್ನು ಸ್ಮರಿಸುತ್ತೇನೆ. ಆಗಾಗ ಪತ್ರಗಳ ಮುಖಾಂತರ ಸಲಹೆ ಸೂಚನೆ ನೀಡಿ ನನ್ನ ಸಂದೇಹಗಳನ್ನು ನಿವಾರಿಸಿದ ಡಾ. ಎ.ಎನ್. ಉಪಾಧ್ಯೆ, ಪ್ರೊ. ಎಂ. ಮರಿಯಪ್ಪ ಭಟ್ಟ ಮತ್ತು ಡಾ. ಡಿ.ಎಲ್. ನರಸಿಂಹಾಚಾರ್ ಅವರ ಘನವಾತ್ಸಲ್ಯಕ್ಕೆ ಋಣಿಯಾಗಿದ್ದೇನೆ.

ಈ ಪ್ರಬಂಧದ ರಚನಾಕಾರ್ಯದಲ್ಲಿ, ಹಸ್ತಪ್ರತಿಗಳನ್ನು ತುಲನಿಸಿ ನೋಡುವಲ್ಲಿ, ಗ್ರಂಥ ಋಣವನ್ನು ಸಿದ್ಧಪಡಿಸುವಲ್ಲಿ ಗೆಳೆಯರಾದ ಶ್ರೀ ಜೆ.ಎಸ್. ಕುಳ್ಳಿ, ಶ್ರೀ ಬಿ.ವ್ಹಿ. ಮಲ್ಲಾಪೂರ, ಶ್ರೀ ಎಸ್.ಜಿ. ಇಮ್ರಾಪೂರ ಇವರು ನೀಡಿದ ಸಹಾಯಕ್ಕೆ ಕೃತಜ್ಞನಾಗಿದ್ದೇನೆ. ಮಿತ್ರರಾದ ಶ್ರೀ ಬಿ.ವ್ಹಿ. ಗುಂಜೆಟ್ಟಿ, ಶ್ರೀ ವ್ಹಿ.ಆರ್. ಸಂಗೊಂದಿಮಠ, ನನ್ನ ವಿದ್ಯಾರ್ಥಿಗಳಾಗಿದ್ದ ಶ್ರೀ ಎಸ್.ಜಿ. ಮುಕ್ಕುಂದಿಮಠ, ಕುಮಾರಿ ಎಂ.ಆರ್. ಉಮಾದೇವಿ ಮತ್ತು ಆತ್ಮೀಯರಾದ ಶ್ರೀ ಮೇವುಂಡಿ ಮಲ್ಲಾರಿ, ಶ್ರೀ ಮುಳಗುಂದಮಠ ಅವರು ಈ ಪ್ರಬಂಧದ ಶುದ್ಧಪ್ರತಿಗಳನ್ನು ಬರೆದುಕೊಡುವಲ್ಲಿ ವಹಿಸಿದ ಶ್ರಮ, ತೋರಿದ ವಿಶ್ವಾಸಗಳಿಗೆ ಋಣಿಯಾಗಿದ್ದೇನೆ.

ಪಿಎಚ್.ಡಿ. ಪದವಿ ಲಭಿಸಿದ ಎರಡು ವರುಷಗಳ ತರುವಾಯ ಈ ಪ್ರಬಂಧ ಪ್ರಕಟವಾಗುತ್ತಲಿದೆ. ಈ ಅವಧಿಯಲ್ಲಿ 'ಕವಿರಾಜಮಾರ್ಗ ಪರಿಸರದ ಕನ್ನಡಸಾಹಿತ್ಯ'ಕ್ಕೆ ಸಂಬಂಧಪಟ್ಟ ಹೊಸ ಸಂಗತಿಗಳು ಬೆಳಕಿಗೆ ಬಂದಿಲ್ಲ; ನನ್ನ ಅಭಿಪ್ರಾಯಗಳೂ ಬದಲಾವಣೆ ಹೊಂದಿಲ್ಲ. ಹೀಗಾಗಿ ಅಲ್ಲಲ್ಲಿ ಮಾಡಿದ ಶಾಬ್ದಿಕ ವ್ಯತ್ಯಾಸಗಳನ್ನು ಬಿಟ್ಟರೆ; ಯಾವ ತಿದ್ದುಪಡಿಯೂ ಇಲ್ಲದೆ ಈ ಪ್ರಬಂಧ ಹೊರಬರುತ್ತಲಿದೆ. ಮಾರ್ಗದರ್ಶಕರಾಗಿ ನಿಂತು ಉದ್ದಕ್ಕೂ ಕೈಹಿಡಿದು ನಡೆಸಿದ ನನ್ನ ವಿದ್ಯಾಗುರುಗಳಾದ ಡಾ. ಆರ್.ಸಿ. ಹಿರೇಮಠ ಅವರ ಅಂತಃ ಕರಣಕ್ಕೆ ಈ ಕೃತಿಯನ್ನು ಅರ್ಪಿಸುವಲ್ಲಿ 'ಕೆರೆಯ ನೀರ ಕೆರೆಗೆ ಚೆಲ್ಲಿ ವರವಪಡೆದ' ಸಾರ್ಥಕತೃಪ್ತಿ ನನಗುಂಟಾಗಿದೆ. ಈ ಪ್ರಬಂಧವನ್ನು ಪುಸ್ತಕರೂಪದಲ್ಲಿ ಹೊರತರಲು ಮೊದಲಿನಿಂದ ಕೊನೆಯವರೆಗೂ ಆಸಕ್ತಿ ತೋರಿಸಿದ ಪ್ರಕಟನ ವಿಭಾಗದ ನಿರ್ದೇಶಕರಾದ ಶ್ರೀ ಚೆನ್ನವೀರ ಕಣವಿ ಅವರಿಗೆ, ಉಪನಿರ್ದೇಶಕರಾದ ಶ್ರೀ ಎಸ್.ಬಿ. ನಾಯಕ ಅವರಿಗೆ ನನ್ನ ವಂದನೆಗಳು ಸಲ್ಲಬೇಕು. ಆಸ್ಥೆಯಿಂದ ಅಚ್ಚಿನ ಕಾರ್ಯವನ್ನು ಪೂರೈಸಿದ ಶ್ರೀ ಸೋಮಣ್ಣ ಆಕಳವಾಡಿ ಮತ್ತು ಅವರ ಮಕ್ಕಳಾದ ರವಿ, ಚಂದ್ರು ಅವರಿಗೆ ನನ್ನ ಕೃತಜ್ಞತೆಗಳು.

ಇನ್ನೊಂದು ಮಾತು. ನನ್ನೊಂದಿಗೆ ಜೀವನದುದ್ದಕ್ಕೂ ಸಾಗಿಬರುವ ಈ ಕೃತಿಯನ್ನು ವಿದ್ವಾಂಸರ ಉಚಿತ ಸಲಹೆಗಳ ಮತ್ತು ಹೊಸ ಹೊಸ ಸಂಶೋಧನೆಗಳ ಬೆಳಕಿನಲ್ಲಿ ಆಗಾಗ ಮಾರ್ಪು-ನೇರ್ಪುಗೊಳಿಸಬೇಕಾಗುತ್ತದೆ ಎಂಬ ಅರಿವು ನನಗಿದೆ. ಅಂತಹ ವಿಧಾಯಕ ವಿಮರ್ಶೆಗಳನ್ನು ಸಂತೋಷದಿಂದ ಸ್ವಾಗತಿಸುತ್ತೇನೆ. ಇಷ್ಟು ಮಾತುಗಳೊಂದಿಗೆ 'ಪಂಪಪೂರ್ವಯುಗದ ಕನ್ನಡಸಾಹಿತ್ಯ ಚರಿತ್ರೆ' ಎಂಬ ಅರ್ಥದ ನನ್ನ ಈ ಪ್ರಬಂಧವನ್ನು ಸಾರಸ್ವತಪ್ರಪಂಚಕ್ಕೆ ನೀಡುತ್ತೇನೆ.

- ಎಂ.ಎಂ. ಕಲಬುರ್ಗಿ

ಕನ್ನಡ ಅಧ್ಯಯನ ಪೀಠ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ
೧ ಮಾರ್ಚ, ೧೯೭೩

❖❖

ದ್ವಿತೀಯ ಆವೃತ್ತಿ

"ಕವಿರಾಜಮಾರ್ಗ ಪರಿಸರದ ಕನ್ನಡ ಸಾಹಿತ್ಯ"ದ ಪ್ರಥಮ ಆವೃತ್ತಿ (೧೯೭೩) ಕರ್ನಾಟಕ ವಿಶ್ವವಿದ್ಯಾಲಯದ ಮೂಲಕ ಪ್ರಕಟವಾಗಿ ೩೦ ವರ್ಷ ಗತಿಸಿದವು. ಮುಂದೆ ಒಂದು ದಶಕದಲ್ಲಿಯೇ ಈ ಆವೃತ್ತಿಯ ೨೦೦೦ ಪ್ರತಿಗಳು ಮುಗಿದು ಹೋಗಿ, ಬೇಡಿಕೆ ವರ್ಧಿಸುತ್ತಲೇ ಇದ್ದಿತು. ಮರು ಮುದ್ರಣಕ್ಕಾಗಿ ವಿಶ್ವವಿದ್ಯಾಲಯವನ್ನು ನಂಬಿ ಕುಳಿತುಕೊಳ್ಳುವಲ್ಲಿ ಮತ್ತೆ ಒಂದು ದಶಕ ಉರುಳಿತು. ಆಮೇಲಿನ ನನ್ನ ನಿರಂತರ ಅಧ್ಯಯನ-ಲೇಖನ-ಪ್ರಕಟನ ಇತ್ಯಾದಿ ಕಾರ್ಯಗಳ ನಡುವೆ ಈ ಕಡೆ ವಿಚಾರಿಸಲು ಪುರುಸೊತ್ತು ಸಿಗಲಿಲ್ಲ. ಕನ್ನಡ ವಿದ್ಯೆ-ವಿದ್ಯಾಸಂಸ್ಥೆ-ವಿದ್ಯಾರ್ಥಿಗಳ ಹಿತವನ್ನು ಕಾಪಾಡಲು ಹೋಗಿ ಆಗಾಗ ಅನುಭವಿಸಿದ ನೋವು-ಹಿಂಸೆಗಳು, ಇವುಗಳನ್ನು ದಾಟಿಯೂ ವಹಿಸಿಕೊಂಡ ಕನ್ನಡ ವಿಶ್ವವಿದ್ಯಾಲಯದ ಕುಲಪತಿ ಹುದ್ದೆಯ ಜವಾಬ್ದಾರಿ, ಇತ್ಯಾದಿಗಳಿಂದಾಗಿ ಈ ಕೆಲಸ ಮತ್ತೂ ಹಿಂದೆ ಬಿದ್ದಿತು. ನಿವೃತ್ತನಾದ ಬಳಿಕ ಇದನ್ನು ಪರಿಷ್ಕರಿಸಲು ಸಮಯ ಲಭಿಸಿತು.

೧೯೭೩ರಿಂದೀಚೆಗೆ 'ನೃಪತುಂಗಾಭ್ಯುದಯ' ಹೆಸರಿನ ಕವಿರಾಜಮಾರ್ಗದ ಹಸ್ತಪ್ರತಿ ನನಗೆ ಲಭ್ಯವಾಯಿತು. ಧರ್ಮಸ್ಥಳದ ಶ್ರೀ ಮಂಜುನಾಥೇಶ್ವರ ಹಸ್ತಪ್ರತಿಗ್ರಂಥ ಭಂಡಾರದಲ್ಲಿ ಒಂದು ಅಪೂರ್ಣಹಸ್ತ ಪ್ರತಿ ಗಮನಿಸಿದೆ. ಪ್ರಬಂಧ ಸಿದ್ಧಗೊಳ್ಳುತ್ತಿರುವಾಗ ನೋಡಲು ಸಾಧ್ಯವಾಗದ ಮದ್ರಾಸ ಓ.ಆರ್. ಆಯ್. ಹಸ್ತಪ್ರತಿಯನ್ನು ಅವಲೋಕಿಸಿದೆ.

೧೯೭೪ರಲ್ಲಿ ಪ್ರಕಟವಾದ ಇಮ್ಮಡಿ ನಾಗವರ್ಮನ ವರ್ಧಮಾನಪುರಾಣದ ಪೀಠಿಕಾಭಾಗದಲ್ಲಿ ಶ್ರೀವಿಜಯನ ರಘುವಂಶಮಹಾಪುರಾಣದ, ಬಹುಶಃ ಇನ್ನೊಬ್ಬ ನಾಗವರ್ಮನ ವತ್ಸರಾಜ ಚರಿತೆಯ ಸೂಚನೆಗಳಿವೆ.

ವಡ್ಡಾರಾಧನೆಯ ಕರ್ತೃ ಭ್ರಾಜಿಷ್ಣುವಾಗಿರಬಹುದೆಂಬ ನನ್ನ ಊಹೆಗೆ ಒಂದಿಷ್ಟು ಬಲತರುವ ರೀತಿಯಲ್ಲಿ ಒಂದು ಕಥೆಯ ತಲೆಯ ಮೇಲೆ ಭ್ರಾಜಿಷ್ಣು ಹೆಸರನ್ನೊಳಗೊಂಡ ವಡ್ಡಾರಾಧನೆಯ ಹಸ್ತಪ್ರತಿಯನ್ನು ಡಾ.ಹಂಪನಾ ಹುಡುಕಿದ್ದಾರೆ.

ಅಶೋಕನ ಹೊಸ ಶಾಸನಗಳನ್ನೊಳಗೊಂಡಂತೆ ಇತ್ತೀಚೆ ಸನ್ನತಿ ಮೊದಲಾದ ಸ್ಥಳಗಳಲ್ಲಿ ಬ್ರಾಹ್ಮೀ ಶಾಸನಗಳು ಮತ್ತೆ ಮತ್ತೆ ಲಭ್ಯವಾಗಿವೆ.

ಡಾ. ಎಂ.ಬಿ. ನೇಗಿನಹಾಳ ಅವರ "ಪೂರ್ವದ ಹಳಗನ್ನಡ ಶಾಸನಗಳ ಸಾಹಿತ್ಯಿಕ ಅಧ್ಯಯನ" ಕೃತಿ (೧೯೯೪) ಯಲ್ಲಿ ಒಂದಿಷ್ಟು ಹೊಸ ಅಂಶಗಳಿವೆ.

ಇತ್ತೀಚೆ ಶ್ರೀ ಕೆ.ವಿ. ಸುಬ್ಬಣ್ಣ ಅವರು ಪ್ರಕಟಿಸಿದ "ಕವಿರಾಜಮಾರ್ಗ ಜಗತ್ತು" ಪುಸ್ತಕದಲ್ಲಿ ಕೆಲವು ಒಳನೋಟಗಳಿವೆ. ಅವಶ್ಯವೆನಿಸಿದಲ್ಲಿ ಇವೆಲ್ಲವನ್ನು ಕೃತಜ್ಞತೆಯೊಂದಿಗೆ ಬಳಸಿಕೊಂಡಿದ್ದೇನೆ.

ಇಷ್ಟು ಪರಿಷ್ಕರಣದೊಂದಿಗೆ ಪ್ರಸ್ತುತ ದ್ವಿತೀಯ ಆವೃತ್ತಿ ಹೊರಬರುತ್ತಲಿದೆ. ಈ ಆವೃತ್ತಿಯ ಪ್ರಕಟನೆಗೆ ಅನುಮತಿ ನೀಡಿದ ಕರ್ನಾಟಕ ವಿಶ್ವವಿದ್ಯಾಲಯದ ಅಧಿಕಾರಿಗಳಿಗೆ, ಅದರಲ್ಲಿಯೂ ಪ್ರಸಾರಾಂಗದ ಅಂದಿನ ನಿರ್ದೇಶಕರಾಗಿದ್ದ ಶ್ರೀ ಎಚ್. ವಿ. ನಾಗೇಶ ಅವರಿಗೆ ಕೃತಜ್ಞನಾಗಿದ್ದೇನೆ. ಇದನ್ನು ಪ್ರಕಟಿಸುತ್ತಿರುವ

ಬೆಂಗಳೂರಿನ 'ಕರ್ನಾಟಕ ಬುಕ್ ಏಜನ್ಸಿ' ಮಾಲಕರಾದ ಆತ್ಮೀಯ ಶ್ರೀ ನಿತಿನ್ ಶಹಾ, ಶ್ರೀ ದೀಪಕ್ ಶಹಾ, ಪರೇಶ್ ಶಹಾ ಸಹೋದರರ ಔದಾರ್ಯವನ್ನು ದಾಖಲಿಸಲು ನನ್ನಲ್ಲಿ ಶಬ್ದಗಳಿಲ್ಲ. ಕನ್ನಡ ಸಾಹಿತ್ಯದ ಸುಪ್ರಸಿದ್ಧರ ಕೃತಿಗಳ ಪ್ರಕಟನೆ ವಿಷಯವಾಗಿ ಇವರು ತೋರುತ್ತಲಿರುವ ಉತ್ಸಾಹ ಐತಿಹಾಸಿಕವಾದುದು. ಶ್ರೀ ಶಹಾ ಸಹೋದರರಿಗೂ,'ಸಪ್ನಾ ಬುಕ್ ಡಿಪೋ'ದ ಕನ್ನಡ ವಿಭಾಗದ ಮ್ಯಾನೇಜರ್ ಆತ್ಮೀಯ ಶ್ರೀ ದೊಡ್ಡೇಗೌಡ ಅವರಿಗೂ ವಂದನೆಗಳು. ಈ ಆವೃತ್ತಿ ಪ್ರಕಟನೆಯಲ್ಲಿ ವಿಶೇಷ ಶ್ರಮವಹಿಸಿದ ಡಾ. ಶ್ರೀನಿವಾಸ ಕುಲಕರ್ಣಿ ಅವರಿಗೆ, ಅಂದವಾಗಿ ಮುದ್ರಿಸಿದವರಿಗೆ ಧನ್ಯವಾದಗಳು.

ಧಾರವಾಡ

- ಎಂ.ಎಂ. ಕಲಬುರ್ಗಿ

೧ ನವೆಂಬರ್ ೨೦೦೩

❖❖

*

ಪರಿವಿಡಿ

❖❖

೧

ಅಧ್ಯಯನದ ಉದ್ದೇಶ

ಅಧ್ಯಯನದ ಉದ್ದೇಶ

ಶ್ಲಾಘ್ಯಃ ಸ ಏವ ಗುಣವಾನ್ ರಾಗದ್ವೇಷಬಹಿಷ್ಕೃತಾ ।
ಭೂತಾರ್ಥ ಕಥನೇ ಯಸ್ಯ ಸ್ಥೇಯಸ್ಯೇವ ಸರಸ್ವತೀ ॥[೧]

ನಡೆದುಹೋದ ಸಂಗತಿಗಳನ್ನು ಹೇಳುವಲ್ಲಿ, ನ್ಯಾಯಾಧೀಶನಂತೆ ರಾಗದ್ವೇಷರಹಿತವಾದ ಭಾಷೆಯನ್ನು ಬಳಸುವವನೇ ಶ್ಲಾಘ್ಯನು[೨]- ಎಂಬ ಕಲ್ಹಣನ ಮಾತು, 'ಪ್ರಾಮಾಣಿಕತೆ' ಇತಿಹಾಸಕಾರನ ಮುಖ್ಯಲಕ್ಷಣವೆಂದು ಸಾರುತ್ತದೆ. ಇಂಥ ಪ್ರಾಮಾಣಿಕಪ್ರಜ್ಞೆಯೊತ್ತಟ್ಟಿಗಿರಲಿ, ಇತಿಹಾಸ ರಚಿಸುವ ಪ್ರವೃತ್ತಿಯನ್ನು ಸಹ ನಮ್ಮ ಪ್ರಾಚೀನರು ಬೆಳೆಸಿಕೊಂಡು ಬರಲಿಲ್ಲ. ಇದಕ್ಕೆ ಕಾರಣ 'ನಾಯಕನನ್ಯನಾಗೆ ಕೃತಿ ವಿಶ್ರುತಮಾಗದು'[೩] ಎಂಬ ಭಾರತೀಯ ಮನೋಭಾವ. ಹೀಗಾಗಿ ನಮ್ಮವರಿಗೆ ಅಲೋಕಚರಿತ್ರೆಯ ಎದುರು ಲೋಕಚರಿತ್ರೆ ಅಪ್ರಿಯವೆನಿಸಿತು. ಕೆಲವರು ರಾಜಕೀಯದ ಮಟ್ಟಿಗೆ ಲೋಕಚರಿತ್ರೆಯನ್ನು ಬರೆಯಲು ನಿರತರಾದರೂ 'ಹೊಲ್ಲದ ನೃಪರಿಗೆ ಇಲ್ಲದ ಗುಣಗಳನಿಟ್ಟ'[೪] ಕಾರಣ ಕಟ್ಟುಕಥೆ ತೇಲಿನಿಂತು, ಸತ್ಯಕಥೆ ಸಾಗರದ ತಳಕ್ಕಿಳಿದ ಮುತ್ತಾಯಿತು.

ನಮ್ಮ ಕವಿಗಳಿಗೆ ಆತ್ಮಚರಿತ್ರೆಗಿಂತ ಆತ್ಮಪ್ರಶಂಸೆ ಇಷ್ಟವಸ್ತು. ಈ ಪ್ರಶಂಸೆಯ ಹುಚ್ಚು ಹೊಳೆಯಲ್ಲಿ ಕೊಚ್ಚಿಹೋಯಿತು, ಅವರ ಚರಿತ್ರೆ. 'ವೀರನಾರಾಯಣನೆ ಕವಿ ಲಿಪಿಕಾರ ಕುಮಾರವ್ಯಾಸ'[೫] ಎಂಬ ಸಮರ್ಪಣಭಾವದ ಕವಿಗಳಂತೂ ತಮ್ಮ ಚರಿತ್ರೆಯ ಬಗೆಗೆ ಚಕಾರ ಶಬ್ದವನ್ನೆತ್ತಲಿಲ್ಲ. ಬಸವರಾಜದೇವರ ರಗಳೆಯನ್ನು ಹರಿಹರ, ಹರಿಹರಮಹತ್ವವನ್ನು ರಾಘವಾಂಕ, ರಾಘವಾಂಕಚಾರಿತ್ರವನ್ನು ಸಿದ್ಧನಂಜೇಶ ಬರೆಯುವುದರ ಮೂಲಕ ವೀರಶೈವ ಕವಿಗಳು ಚಾರಿತ್ರಿಕಸಾಹಿತ್ಯನಿರ್ಮಾಣದ ಹೊಸಹೆಜ್ಜೆ ತುಳಿದರೂ ಅಲ್ಲಿ ಅರ್ಧ ಹಾಲು, ಅರ್ಧ ನೀರು, ಸಾಲದುದಕ್ಕೆ ಆ ಆ ಮತಮುಗ್ಧರು ಸುಳ್ಳುಕಥೆಗಳ ಮುಳ್ಳುಮರಗಳನ್ನೇ ಬಿತ್ತಿಬೆಳೆದರು. ಹೀಗಾಗಿ ಕನ್ನಡಿಗರ ಸತ್ಯಕಥೆ ಕಟ್ಟುಕಥೆಯಲ್ಲಿ ಕರಗುತ್ತ ಬಂದಿತು.

"ಯಾದೃಶಂ ಪುಸ್ತಕಂ ದೃಷ್ಟಂ ತಾದೃಶಂ ಲಿಖಿತಂ ಮಯಾ"[೬] ಎಂದು ಬಾಯಿಯಿಂದ ಹೇಳುತ್ತ, ಕೈಯಿಂದ ಪ್ರಕ್ಷೇಪ-ವಿಕ್ಷೇಪಗೆಯ್ದು ಲಿಪಿಕಾರರ ಮೂಲಕ ನಮ್ಮ ಹಸ್ತಪ್ರತಿಗಳು ಕುಲಗೆಟ್ಟವು. ಹಲವು ಹತ್ತು

೧. ರಾಜತರಂಗಿಣಿ (ಕಲ್ಹಣ), ೧-೭

೨. "That noble minded [poet] is alone worthy of praise, whose word like that of a judge, keeps
free from love or hatred in relating the facts of the past". (M.S. Stain).

೩. ಪಂ. ರಾ. ೧-೩೭

೪. ಭ.ವೈ. ೧-೨೨

೫. ಕು.ಭಾ. ಪೀಠಿಕಾ ಸಂಧಿ ೭

೬. ಕ.ಗ್ರ. ಸಂ.ಪು. ೫೩

ಸಂಖ್ಯೆಯಲ್ಲಿ ಸಿಗುವ ಛಂದೋಂಬುಧಿಯ ಎರಡು ಹಸ್ತಪ್ರತಿಗಳು ಒಂದನ್ನೊಂದು ಹೋಲುವುದಿಲ್ಲ, ಶರಣರ ವಚನ. ದಾಸರ ಹಾಡುಗಳ ಸಂಖ್ಯೆ ಇನ್ನೂ ಹಿಡಿತಕ್ಕೆ ಸಿಕ್ಕಿಲ್ಲ ಎಂಬುದನ್ನು ನೆನೆದರೆ ಈ ಅಪ್ರಾಮಾಣಿಕ ನಕಲುಕಾರ್ಯದ ಆಧಿಕ್ಯ ಸ್ಪಷ್ಟವಾಗುತ್ತದೆ. ಇದರಿಂದ ಮೂಲ ಪ್ರತಿಯಲ್ಲಿದ್ದಿರಬಹುದಾದ ಇತಿಹಾಸ ಇನ್ನೂ ಕಡಿಮೆಯಾಯಿತು.

'ತೈಲಾದ್ರಕ್ಷೇತ್ ಜಲಾದ್ರಕ್ಷೇತ್ ರಕ್ಷೇತ್ ಶಿಥಿಲಬಂಧನಾತ್'[೭] ಎಂದು ಗ್ರಂಥರಕ್ಷಣೆಯ ಕಳಕಳಿಯನ್ನು ಒಬ್ಬಿಬ್ಬರು ವ್ಯಕ್ತಪಡಿಸಿದರೂ ಭೌತಿಕಸಂಪತ್ತಿನ ಎದುರು ಗ್ರಂಥಸಂಪತ್ತಿಯ ಬೆಲೆ ಸಾಮಾನ್ಯನಿಗೆ ಆಗದೆ ಹೋಯಿತು. ಹಸ್ತಪ್ರತಿಗಳು ರಾಷ್ಟ್ರದ ಸಂಪತ್ತು ಎಂಬ ವಿಚಾರ ನಮ್ಮ ರಾಜಕೀಯ ವರ್ಗಕ್ಕೆ ಹೊಳೆಯಲಿಲ್ಲ. ಹೀಗಾಗಿ ಎಷ್ಟೋ ಗ್ರಂಥಗಳು ನಿಸರ್ಗ ಪ್ರಕೋಪಕ್ಕೆ ಗುರಿಯಾದವು, ಮೂಢರ ಅಜ್ಞಾನಕ್ಕೆ ಆಹುತಿಯಾದವು. ಹುಳುಗಳ ಬಾಯಿಗೆ ತುತ್ತಾದವು. ಪಂಪಪೂರ್ವದ ಕಾವ್ಯಗಳು ಹೋಗಲಿ ತರುವಾಯದ ಕವಿತಾವಿಲಾಸ, ವಾದಿರಾಜಮುನಿ, ಕವಿ ಸುಮನೋಬಾಣಾದಿಗಳ ಒಂದೂ ಕೃತಿ ಸಿಕ್ಕಿಲ್ಲ. ರನ್ನ, ಪೊನ್ನ, ಕೇಶಿರಾಜ, ರಾಘವಾಂಕ, ಶ್ರೀಧರಾಚಾರ್ಯ, ಕರ್ಣಪಾರ್ಯ, ಕವಿಕಾಮರ ಮಿಕ್ಕ ಕೃತಿಗಳು ದೊರೆತಿಲ್ಲ. ನಾಗವರ್ಮನ ಕಾದಂಬರಿ, ಚೌಂಡರಸನ ನಳಚಂಪೂ ಉಪಲಬ್ಧವಾದುದು ಒಂದೊಂದೇ ಹಸ್ತಪ್ರತಿ. ಮಧುರನ ಧರ್ಮನಾಥ ಪುರಾಣ ಮೊದಲಾದುವು ಒಂದೊಂದೇ ಹಸ್ತಪ್ರತಿ ಸಿಕ್ಕರೂ ಅಪೂರ್ಣ. ಗದಾಯುದ್ಧ, ಮದನ ತಿಲಕಗಳ ಮೂರು ನಾಲ್ಕು ಪ್ರತಿ ಲಭಿಸಿದರೂ ಪೂರ್ಣಪಾಠ ಸಿದ್ಧವಾಗುವುದಿಲ್ಲ.

ಹೀಗೆ ನಮ್ಮ ಚರಿತ್ರಕಾರರ ಐತಿಹಾಸಿಕ ಅವಜ್ಞೆ, ಲಿಪಿಕಾರರ ಅಪ್ರಾಮಾಣಿಕ ನಕಲು ಕಾರ್ಯ ಮತ್ತು ಜನತೆಯ ಹಸ್ತಪ್ರತಿರಕ್ಷಣೆಯ ಅನಾದರಗಳೆಂಬ ಶಾಪತ್ರಯವನ್ನು ಬೆನ್ನಿಗೆ ಕಟ್ಟಿಕೊಂಡು ಕನ್ನಡ ಸಾಹಿತ್ಯಚರಿತ್ರೆಯನ್ನು ಬರೆಯಬೇಕಾಗಿದೆ. ಅದರಲ್ಲಿ 'ಕವಿರಾಜಮಾರ್ಗ ಪರಿಸರದ ಕನ್ನಡ ಸಾಹಿತ್ಯ' ಪರಿಶೀಲನೆಯಂತೂ ಅಭ್ಯಾಸಿಗೆ ದಿಕ್ಕುಗೆಡಿಸುವ ವಿಷಯ.

ಭಾರತೀಯ ಭಾಷಾ ಬಳಗದಲ್ಲಿ ಕನ್ನಡದ ಕವಿಸಾಹಿತ್ಯಕ್ಕೆ ಸತ್ವ, ಸಂಖ್ಯೆ ಮತ್ತು ಪ್ರಾಚೀನತೆಯ ದೃಷ್ಟಿಯಿಂದ ಸಂಸ್ಕೃತ ಪ್ರಾಕೃತ ತಮಿಳುಗಳ ತರುವಾಯದ ನಾಲ್ಕನೆಯ ಸ್ಥಾನ; ಶಾಸನಸಾಹಿತ್ಯಕ್ಕೆ ಸತ್ವದೃಷ್ಟಿಯಿಂದ ಸಂಸ್ಕೃತದ ತರುವಾಯದ, ಸಂಖ್ಯಾದೃಷ್ಟಿಯಿಂದ ತಮಿಳಿನ ತರುವಾಯದ ಸ್ಥಾನ ಸಲ್ಲುತ್ತದೆ. ಕನ್ನಡದ ಚಂಪೂಸಾಹಿತ್ಯ ಭಾರತೀಯ ಮಹತ್ವವನ್ನು, ವಚನಸಾಹಿತ್ಯ ಜಾಗತಿಕ ಮನ್ನಣೆಯನ್ನು ಗಳಿಸುವ ಅರ್ಹತೆ ಪಡೆದಿವೆ. ಇಂಥ ಉಜ್ವಲ ಸಾಹಿತ್ಯಸೃಷ್ಟಿಗೆ ಕಾರಣರಾದ ಪಂಪ-ಹರಿಹರ-ಕುಮಾರವ್ಯಾಸ ಮೊದಲಾದ ಮಹಾಕವಿಗಳು, ಬಸವ-ಪುರಂದರ ಮೊದಲಾದ ಅನುಭಾವಿ-ಸಂತ ಕವಿಗಳು ಬಾಳಿದುದು ಕನ್ನಡಕ್ಕೆ ಒಂದು ದೊಡ್ಡ ಗೌರವ. ಈ ಘನಚರಿತ್ರೆಯ ಶೋಧ, ವಿಮರ್ಶೆ ಪಂಪೋತ್ತರ 'ಜ್ಞಾತಯುಗ'ವನ್ನು ಕುರಿತು ನಡೆದಿದೆ, ನಡೆಯುತ್ತಲಿದೆ. ಆದರೆ ಪಂಪಪೂರ್ವದ 'ಅಜ್ಞಾತಯುಗ'ವನ್ನು ಕುರಿತು ನಿಷ್ಠೆಯ ಅಧ್ಯಯನ ಅಷ್ಟಾಗಿ ನಡೆದಿಲ್ಲವೆಂದು ಹೇಳಬಹುದು.[೮]

---

೭. ಕ.ಗ್ರ.ಸಂ.ಪು. ೫೫

೮. ಕರ್ಣಾಟಕ ಕವಿಚರಿತೆ (ಆರ್. ನರಸಿಂಹಾಚಾರ್), ಕವಿರಾಜಮಾರ್ಗ ವಿವೇಕ, ಭಾಗ ೧ (ಮುಳಿಯ), ಸಾಹಿತ್ಯ ಸಂಶೋಧನೆ (ಸದಾನಂದ ನಾಯಕ), ಕನ್ನಡ ಸಾಹಿತ್ಯದ ಪ್ರಾಚೀನತೆ (ಗೋವಿಂದ ಪೈ), ಕನ್ನಡ ಸಾಹಿತ್ಯಚರಿತ್ರೆ (ಟಿ.ಎಸ್. ವೆಂಕಣ್ಣಯ್ಯ)-ಇವು ಪಂಪಪೂರ್ವದ ವಿಷಯವನ್ನೊಳಗೊಂಡ ಗ್ರಂಥ ಮತ್ತು ಲೇಖನಗಳು.

ಕವಿರಾಜಮಾರ್ಗ ಈ 'ಕತ್ತಲು ಯುಗ'ದ ದಾರಿದೀಪ. ಕಾವ್ಯಾದರ್ಶದ ಆದರ್ಶದಲ್ಲಿ ನಡೆದರೂ ಅನುಕರಣೆಯೆನಿಸದ, ಕಾವ್ಯಮೀಮಾಂಸೆಯಾಗಿದ್ದರೂ ಕನ್ನಡನಾಡು, ನುಡಿ, ಸಾಹಿತ್ಯಗಳ ಪ್ರಮುಖಲಕ್ಷಣಗಳನ್ನು ಬಿಡದ ಅದು ವಿಶಿಷ್ಟಕೃತಿ. ಬೇರೊಂದು ಮಹಾಪ್ರಬಂಧಕ್ಕೆ ವಸ್ತುವಾಗಬಲ್ಲ ಇಲ್ಲಿಯ ಅಲಂಕಾರ ರೀತಿ ರಸ ಧ್ವನಿ ವಿಚಾರಗಳ ಐತಿಹಾಸಿಕ ಮತ್ತು ತೌಲನಿಕ ಅಧ್ಯಯನವನ್ನು ಬಿಟ್ಟರೂ ಸಾಹಿತ್ಯಚರಿತ್ರೆಯ ದೃಷ್ಟಿಯಿಂದ ಪರಿಶೀಲಿಸಬಹುದಾದ ಹತ್ತಾರು ಸಮಸ್ಯೆಗಳು ಇದರಲ್ಲಿವೆ. ಸಂಶೋಧನೆ ನಡೆದಷ್ಟು ಹಳೆಯ ತೊಡಕುಗಳೊಂದಿಗೆ ಹೊಸ ತೊಡಕುಗಳು ಹುಟ್ಟಿ, ಇಲ್ಲಿ ಸಮಸ್ಯೆಗಳ ಒಂದು ಅರಣ್ಯವೇ ತಲೆಯೆತ್ತಿ ನಿಂತಿದೆ. ದೃಷ್ಟಿಯೆತ್ತಿ ಆಚೆ ಈಚೆ ನೋಡಿದರಂತೂ ಅದು ಇನ್ನೂ ದೊಡ್ಡದಾಗಿ, ದುರ್ಗಮವಾಗಿ ಕಾಣುತ್ತಿದೆ. ಈ ಅರಣ್ಯಗರ್ಭವನ್ನು ಭೇದಿಸುವ ಪವನಪ್ರಯತ್ನ ನಡೆಯಬೇಕಾದುದು ಅತ್ಯವಶ್ಯ.

ಕಾವ್ಯಸೃಷ್ಟಿ ಮುಂದು, ಕಾವ್ಯಮೀಮಾಂಸೆ ಹಿಂದು. ಈ ನಿಯಮದಂತೆ ತನ್ನ ಹಿಂದಣ ಕಾವ್ಯಸೃಷ್ಟಿಗೆ ಸಾಕ್ಷಿದರ್ಪಣವಾಗಿ, ಅದರ ಓರೆ-ಕೋರೆಗಳನ್ನು ಎತ್ತಿತೋರಿಸುವುದರ ಮೂಲಕ ಮುಂದಣ ಸಾಹಿತ್ಯಕ್ಕೆ ಓರಣವನ್ನು ಒದಗಿಸುವುದು ಕಾವ್ಯಮೀಮಾಂಸೆಯ ಕರ್ತವ್ಯ. ಅನ್ಯಭಾಷೆಗಳಾದ ಸಂಸ್ಕೃತ, ಪ್ರಾಕೃತಗಳ ಸಾಹಿತ್ಯವನ್ನು ಉಸಿರಾಡಿಸಿದ ಪ್ರಾಚೀನ ಕನ್ನಡಿಗರು, ತಮ್ಮ ಉಸಿರಾದ ಕನ್ನಡದ ಸಾಹಿತ್ಯವನ್ನುಸುರಿದುದು ಸ್ವಾಭಾವಿಕ. ಇದರ ಫಲ ಗದ್ಯಪದ್ಯ ಸಮ್ಮಿಶ್ರಣವಾದ ಗದ್ಯಕಥೆ ಮತ್ತು ಕಂದವೃತ್ತಜಾತಿಗಳ ಸಮುದಾಯವಾದ ಚತ್ತಾಣ, ಬೆದಂಡೆಗಬ್ಬ. ಇವುಗಳಲ್ಲಿ ಒಂದು: 'ಪ್ರಕಟತರ ವಸ್ತುವಿಸ್ತರ'. ಇದರ ಕರ್ತೃಗಳು ವಿಮಲೋದಯ, ನಾಗಾರ್ಜುನ, ಜಯಬಂಧು, ದುರ್ವಿನೀತರು. ಇನ್ನೊಂದು : 'ನಿರತಿಶಯ ವಸ್ತುವಿಸ್ತರ'. ಇದರ ಕರ್ತೃಗಳು ಶ್ರೀವಿಜಯ, ಕವೀಶ್ವರ, ಪಂಡಿತ, ಚಂದ್ರ, ಲೋಕಪಾಲರು ಎಂದು ಮುಂತಾಗಿ ತನ್ನ ಹಿಂದಣ ಸಾಹಿತ್ಯವನ್ನು ಸಮೀಕ್ಷಿಸಿದುದು ಮಾರ್ಗಕಾರನ ಇತಿಹಾಸ ದೃಷ್ಟಿಯ ದ್ಯೋತಕ. ಸಾಲದುದಕ್ಕೆ ಕಾವ್ಯಪರಿಕರಗಳಾದ ಛಂದಸ್ಸು ವ್ಯಾಕರಣ, ಅಲಂಕಾರಗಳನ್ನು ಕುರಿತು ಹೇಳಿದ-

"ಪಟಿಗನ್ನಡಮಂ ಪೊಲಗೆಡಿಸಿ ನುಡಿವರಾಗಮಬಲಹೀನರ್"[೯]
"ಸಮಸಂಸ್ಕೃತಂಗಳೊಳ್ ಸಯ್ತುಮರ್ದಿರೆ ಕನ್ನಡಮನಜೆದು ಪೇಟ್ಗೆ"[೧೦]
"ಖಂಡಪ್ರಾಸಮನತಿಶಯಮಿದೆಂದು ಯತಿಯಂ ಮಿಕ್ಕರ್"[೧೧]
"ನುತಶಬ್ದಾಳಂಕಾರದೊಳತಿಶಯಮೀ ಕನ್ನಡಕ್ಕೆ ಸತತಂ ಪ್ರಾಸಂ"[೧೨]

ಎಂಬ ನಿರ್ಣಾಯಕ ಮಾತುಗಳು, ಈತನ ಭಾಷೆ-ಸಾಹಿತ್ಯಗಳ ತಿಳಿವಳಿಕೆಗೆ ನಿದರ್ಶನ. ಹೀಗೆ ಹಿಂದಣ ಸಾಹಿತ್ಯಕ್ಕೆ ಓರೆಗಲ್ಲಾಗಿ ನಿಲ್ಲುವುದರ ಮೂಲಕ ಕವಿರಾಜಮಾರ್ಗ, ಮುಂದಣ ಸಾಹಿತ್ಯಕ್ಕೆ ರಾಜಮಾರ್ಗವಾಗಿ ಪರಿಣಮಿಸಿತು. ಈ ರಾಜಮಾರ್ಗದಲ್ಲಿ ವಿಕಾಸಗೊಳ್ಳುತ್ತ ಮುನ್ನಡೆದ ಕನ್ನಡಸಾಹಿತ್ಯ ಮತ್ತೆ ರೂಪ ಬದಲಿಸಿಕೊಂಡುದು ಬಸವಯುಗದಲ್ಲಾದರೂ ಸಿದ್ಧಿ ಶಿಖರವನ್ನು ಮುಟ್ಟಿದುದು ಮಹಾಕವಿ ಪಂಪನಲ್ಲಿ.[೧೩] ಅದಕ್ಕಾಗಿ ನಮ್ಮ ಪ್ರಬಂಧದ ಉತ್ತರ ಮೇರೆ ಪಂಪನ ವರೆಗೆ ಮೈಚಾಚಿದೆ.

---

೯. ಕ.ಮಾ. ೧-೪೮
೧೦. ಕ.ಮಾ. ೧-೫೧
೧೧. ಕ.ಮಾ. ೧-೭೫
೧೨. ಕ.ಮಾ. ೨-೩೦
೧೩. ಕನ್ನಡಸಾಹಿತ್ಯದ ಸೂಕ್ಷ್ಮಪರಿಶೀಲನೆಯಿಂದ 'ಪಂಪಯುಗ'ವು ನೃಪತುಂಗನಿಂದ ಪ್ರಾರಂಭವಾಗಿ ಬಸವಣ್ಣನಿಗೆ ಕೊನೆಗೊಳ್ಳುವುದೆಂದೂ, ಪಂಪನು ಮಾತ್ರ ಈ ಹಗಲಿನಲ್ಲಿ ಮಧ್ಯಾಹ್ನದ ಸೂರ್ಯನೆಂದೂ ತಿಳಿದುಬರುತ್ತದೆ.

ಹೀಗೆ ತನ್ನ ಹಿಂದಣ ಸಾಹಿತ್ಯವನ್ನು ಮುಟ್ಟಿನೋಡಿ, ಮುಂದಣ ಸಾಹಿತ್ಯಕ್ಕೆ ಬಟ್ಟೆಯಾಗಿ ನಿಂತ ಕವಿರಾಜಮಾರ್ಗ, ಎರಡು ಪಾರ್ಶ್ವಗಳುಳ್ಳ ಸರಸ್ವತೀ ಮಂದಿರದ ಒಂದು ಶಿಖರ. ಈಗ ಶಿಖರ ಮಾತ್ರ ಉಳಿದು ಎಡ-ಬಲದ ಪಾರ್ಶ್ವಗಳು ಭೂಗತವಾಗಿವೆ. ಆದುದರಿಂದ ಕವಿರಾಜಮಾರ್ಗ ಪರಿಸರದ ಸಂಶೋಧನೆಯೆಂದರೆ ಕನ್ನಡ ಸರಸ್ವತೀಮಂದಿರದ ಭೂಗತವಾದ ಉಭಯಪಾರ್ಶ್ವಗಳನ್ನು ಉತ್ಖನನಗೊಳಿಸಿದಂತೆ. ಎದ್ದು ಕಾಣುವ ಶಿಖರದ ಮೂಲಕ ಮುಳುಗಿದ ದೇವಾಲಯದ ವಿಸ್ತಾರ-ವೈಭವಗಳನ್ನು ಊಹಿಸಲು ಬರುವಂತೆ, ಕವಿರಾಜಮಾರ್ಗದ ಮೂಲಕ ಅದರ ಹಿಂದುಮುಂದಣ ಸಾಹಿತ್ಯದ ಸತ್ವ ಮೊತ್ತಗಳನ್ನು ಊಹಿಸಬಹುದಾಗಿದೆ. ಕವಿರಾಜಮಾರ್ಗವಾದರೋ ಈ ನೆಲದ ಮರೆಯ ನಿಧಾನವನ್ನು ಸ್ಥೂಲವಾಗಿ ಸೂಚಿಸುವ ಅಂಜನಬಿಂದು. ಎಲ್ಲಿ ಏನುಂಟು ಏನಿಲ್ಲವೆಂದು ಬೆರಳಿಟ್ಟು ವಿವರ ನೀಡುವದಿಲ್ಲ. ಅದಕ್ಕಾಗಿ ಸೂಕ್ಷ್ಮ ಅಂಗಾಂಗಗಳನ್ನೆಲ್ಲ ಕಾಣಬೇಕೆನ್ನುವವರು ಭೂಗತ ದೇಗುಲವನ್ನು ಅಗಿಯಬೇಕು; ಸಾಧ್ಯವಾಗದಿದ್ದರೆ ಕಣ್ಣಾರೆ ಕಂಡ, ಕಿವಿಯಾರೆ ಕೇಳಿದ ನೆರೆ-ಹೊರೆಯವರನ್ನು ಮೊರೆಹೊಗಬೇಕು. ಅಂದರೆ ಕವಿರಾಜಮಾರ್ಗವನ್ನಷ್ಟೇ ಅಲ್ಲದೆ ಮಿಕ್ಕ ಕವಿಕೃತಿಗಳನ್ನು, ಶಾಸನಗಳನ್ನು, ಅನ್ಯಭಾಷಾಸಾಹಿತ್ಯವನ್ನು ಅವಲೋಕಿಸಬೇಕು; ಸುತ್ತಲಿನ ಕತ್ತಲೆಯನ್ನು ಕರಗಿಸಬೇಕು. ಆಗ ಅದರ ಎಡಬಲದ ಸಾಹಿತ್ಯದ ಬಗೆಗೆ ಒಟ್ಟು ಅಭಿಪ್ರಾಯಕ್ಕೆ ಬರಲು ಸಾಧ್ಯವಿದೆ. ಈ ದಿಶೆಯಲ್ಲಿ ಮುಂದುವರಿಯಬೇಕಾದ ನಾವು, ನಮ್ಮ ಅಧ್ಯಯನದ ಕೇಂದ್ರಕೃತಿಯಾದ ಕವಿರಾಜಮಾರ್ಗದ ವಿವೇಚನೆಯನ್ನೇ ಮೊದಲು ಕೈಗೆತ್ತಿಕೊಳ್ಳುವುದು ನ್ಯಾಯಸಮ್ಮತ. ಹಾಗೆ ಮಾಡುವಲ್ಲಿ ಅದರ ಸ್ಥೂಲಪರಿಚಯವನ್ನು ಮಾಡಿಕೊಂಡು, ಕರ್ತೃವಿಚಾರವನ್ನು ಬಗೆಹರಿಸಿಕೊಂಡು, ಅಲ್ಲಿ ತುಂಬಿನಿಂತ ವಿಷಯವನ್ನು ವಿವೇಚಿಸಬೇಕು. ಹೀಗಾಗಿ ಮುಂದಿನ ಪ್ರಕರಣದಲ್ಲಿ,

ಕವಿರಾಜಮಾರ್ಗ : ಒಂದು ಪರಿಚಯ
ಕವಿರಾಜಮಾರ್ಗದ ಕರ್ತೃ
ಕವಿರಾಜಮಾರ್ಗ : ವಿವೇಚನೆ

ಎಂಬ ಮೂರು ಘಟ್ಟಗಳನ್ನು ಕಲ್ಪಿಸಿಕೊಳ್ಳಲಾಗಿದೆ. ಈಗ ಈ ಒಂದೊಂದು ಘಟ್ಟವನ್ನು ಅಭ್ಯಾಸಕ್ಕೆ ಅಳವಡಿಸಿಕೊಳ್ಳಬಹುದು.

❖❖

೨

ಕವಿರಾಜಮಾರ್ಗ

ಕವಿರಾಜಮಾರ್ಗ : ಒಂದು ಪರಿಚಯ

'ವ್ಯಾಕರಣಕಾವ್ಯನಾಟಕಲೋಕಕಳಾಸಮಯಮಾದಳಂಕೃತಿ'[೧]ಗಳಲ್ಲಿ ವ್ಯಾಕುಳನಲ್ಲದವನಿಗೆ ಮಾತ್ರ ರಾಜಧಾನಿಯೊಳಗೆ, 'ಕವಿವೃಷಭರಾ ಪ್ರಯೋಗಂಗಳೊಳಂ ಕೃತಪರಿಚಯಬಲನಪ್ಪ'[೨]ವನಿಗೆ ಮಾತ್ರ ರಾಜಸಭೆಯೊಳಗೆ ಪ್ರವೇಶವನ್ನು ದಯಪಾಲಿಸುತ್ತಿದ್ದ 'ಪರಮಸರಸ್ವತೀತೀರ್ಥಾವತಾರ'ನ ಸಾರಸ್ವತಪರಿಸರದಲ್ಲಿ ಕವಿರಾಜಮಾರ್ಗ ಅವತಾರವೆತ್ತಿತು. ಪೂರ್ವಪುರಾಣದ ಜಿನಸೇನ,[೩] ಉತ್ತರಪುರಾಣದ ಗುಣಭದ್ರ,[೪] ಕಲ್ಯಾಣಕಾರಕದ ಉಗ್ರಾದಿತ್ಯ,[೫] ಗಣಿತಸಾರಸಂಗ್ರಹದ ಮಹಾವೀರಾಚಾರ್ಯ,[೬] ಶಬ್ದಾನುಶಾಸನದ ಶಾಕಟಾಯನರು[೭] -ಈತನ ಪಂಡಿತ ಪರಿವಾರವೆಂದು ನೆನೆದರೆ, ಮೇಲಣ ಮಾತು ಬಹುಮಟ್ಟಿಗೆ ಸತ್ಯವೆನಿಸುತ್ತದೆ. ಈ ಪರಿಸರವನ್ನು ಕಟ್ಟಿನಿಲ್ಲಿಸಿದ ವ್ಯಕ್ತಿಯನ್ನು ಕವಿರಾಜಮಾರ್ಗದಲ್ಲಿ ಅತಿಶಯಧವಳ, ಅಮೋಘವರ್ಷ, ವೀರನಾರಾಯಣ, ಕೃತಕೃತ್ಯಮಲ್ಲ, ನೀತಿನಿರಂತರ, ವಿವೇಕಬೃಹಸ್ಪತಿ, ನರಲೋಕಚಂದ್ರ, ಗುಣೋದಯ, ನಿತ್ಯಮಲ್ಲವಲ್ಲಭ, ಪರಮೋದಯ, ಪರಮಸರಸ್ವತೀತೀರ್ಥಾವತಾರ, ನೃಪತುಂಗ-ಎಂದು ಸಂಬೋಧಿಸಲಾಗಿದೆ. ಈತನು ರಾಷ್ಟ್ರಕೂಟ ಚಕ್ರವರ್ತಿಯೆಂಬುದು ಸತ್ಯ. ಈ ಮನೆತನದ ಅರಸುಗಳಿಗೆ ಶಾಸನಗಳಲ್ಲಿ,

---

೧. ಕ.ಮಾ. ೧-೬

೨. ಕ.ಮಾ. ೧-೫.

೩. "ಅಮೋಘವರ್ಷರಾಜೇಂದ್ರಪ್ರಾಜ್ಯರಾಜ್ಯಗುಣೋದಯಾ........ಃ ಸಮಾಪ್ತಾ ಜಯಧವಲಾಪ್ರಾಭೃತವ್ಯಾಖ್ಯಾ"
-ಜಯಧವಲಾ ಅಂತ್ಯ.

"ಭುವನಮವತು ದೇವಸ್ಸರ್ವದಾಮೋಘವರ್ಷಃ"- ಪಾರ್ಶ್ವಾಭ್ಯುದಯ, IV- ೭೦.

೪. ಸಂಸ್ಮರ್ತಾ ಸ್ವಯಮೋಘವರ್ಷನೃಪತಿಃ ಪೂತೋಽಹಮದ್ಯೇತ್ಯಲಂ।
ಸ ಶ್ರೀಮಾನ್ ಜಿನಸೇನಪೂಜ್ಯಭಗವತ್ಪಾದೋ ಜಗನ್ಮಂಗಲಮ್॥-ಉತ್ತರಪುರಾಣದ ಅಂತ್ಯ.

೫. 'ಉಗ್ರಾದಿತ್ಯಾಚಾರ್ಯೈಃ ನೃಪತುಂಗವಲ್ಲಭೇಂದ್ರಸಭಾಯಾಮುದ್ಘೋಷಿತಂ ಪ್ರಕರಣಂ'-ಹಿತಾಹಿತಾಧ್ಯಾಯದ ಅಂತ್ಯ.

೬. ಶ್ರೀಮದಮೋಘವರ್ಷೇಣ ಯೇನ ಸ್ವೇಷ್ಟ ಹಿತೈಷಿಣಾ ।
....
ವಿಧ್ವಸ್ತೈಕಾಂತ ಪಕ್ಷಸ್ಯ ಸ್ಯಾದ್ವಾದನ್ಯಾಯವಾದಿನಃ।
ದೇವಸ್ಯ ನೃಪತುಂಗಸ್ಯ ವರ್ಧತಾಂ ತಸ್ಯ ಶಾಸನಂ॥ - ಗಣಿತಸಾರಸಂಗ್ರಹ (ಮಂಗಲಾಚರಣ).

೭. ಅಮೋಘವರ್ಷನ ಮೇಲಣ ಪ್ರೀತಿಯ ದ್ಯೋತಕವಾಗಿ, ಶಾಕಟಾಯನನು ತನ್ನ ಶಬ್ದಾನುಶಾಸನಕ್ಕೆ ಬರೆದ 'ಅಮೋಘವೃತ್ತಿ'
ಎಂಬ ವ್ಯಾಖ್ಯಾನ ಗ್ರಂಥದಲ್ಲಿ 'ಅದಹದಮೋಘವರ್ಷೋಽರಾತೀನ್' (IV. III.೨೦೭) ಎಂಬ ಮಾತು ಬರುತ್ತದೆ.

೧. ಅಮೋಘವರ್ಷ I - ನೃಪತುಂಗ, ಅತಿಶಯಧವಳ, ವೀರನಾರಾಯಣ.
೨. ಗೋವಿಂದ IV - ನೃಪತುಂಗ.
೩. ಅಮೋಘವರ್ಷ II
೪. ಬದ್ದೆಗ-ಅಮೋಘವರ್ಷ III.
೫. ಕೃಷ್ಣ-III ಅಮೋಘವರ್ಷ.
೬. ಕಕ್ಕ-ಅಮೋಘವರ್ಷ, ನೃಪತುಂಗ, ವೀರನಾರಾಯಣ.

ಎಂಬ ಹೆಸರು ಮತ್ತು ಬಿರುದುಗಳು ಕಂಡುಬರುತ್ತವೆ. ಕವಿರಾಜಮಾರ್ಗದಲ್ಲಿ ಹೇಳಿದ ಎಲ್ಲ ಬಿರುದುಗಳು ಇವರಲ್ಲಿ ಒಬ್ಬನಿಗೂ ಇಲ್ಲ. ಒಂದುವೇಳೆ ಯಾವುದೇ ಶಾಸನದಲ್ಲಿ ಕಕ್ಕನಿಗೆ 'ಅತಿಶಯಧವಳ' ಎಂಬ ಬಿರುದು ಲಭಿಸಿದರೆ, ಅಮೋಘವರ್ಷ I ನಿಗೂ ಈತನಿಗೂ ವ್ಯತ್ಯಾಸವುಳಿಯದು. ಆಗ ಕವಿರಾಜಮಾರ್ಗದಲ್ಲಿ ಉಕ್ತನಾದವನು ಕಕ್ಕನೇ? ಎಂಬ ಸಂದೇಹ ಹುಟ್ಟುತ್ತದೆ. ಮೇಲಾಗಿ ಕವಿರಾಜಮಾರ್ಗದ ಕಂದಪದ್ಯಗಳ ಸಹಜ ಬಂಧ, ಭಾಷೆಯ ಸ್ವರೂಪ, ಇವು ಅದರ ಕಾಲವನ್ನು ಈಗಿನಕಿಂತ ಕೊಂಚ ಮುಂದು ಎಳೆಯಲು ಪ್ರಚೋದಿಸುತ್ತವೆ. ಭವಿಷ್ಯತ್ತಿನಲ್ಲಿ ಲಭಿಸುವ ಆಧಾರಗಳ ಮೇಲೆ ಬಿಡಿಸಬೇಕಾದ ಈ ಪ್ರಶ್ನೆಯನ್ನು ಕೈಬಿಟ್ಟು, ಕವಿರಾಜಮಾರ್ಗೋಕ್ತನಾದ ಅರಸು, ಅಮೋಘವರ್ಷ I ನೆಂದಿಟ್ಟುಕೊಳ್ಳುವುದು, ಈಗಿನಮಟ್ಟಿಗೆ ಹೆಚ್ಚು ಸಾಧು.

ಕವಿರಾಜಮಾರ್ಗ, ಒಂದು ಅರ್ಥಪೂರ್ಣ ಹೆಸರು. ಈ ಪದವನ್ನು ಕವಿಗಳ+ರಾಜಮಾರ್ಗ, ಕವಿರಾಜನ+ಮಾರ್ಗ ಎಂದು ಬಿಡಿಸಬಹುದು. ಇವುಗಳಲ್ಲಿ ಕವಿಗಳ+ರಾಜಮಾರ್ಗ ಎಂಬ ವ್ಯಾಪಕ ಅರ್ಥವೇ ಕರ್ತೃವಿಗೆ ಸಮ್ಮತವಾಗಿರಬೇಕು. ಇತ್ತೀಚೆ ಕವಿಗಳೂ ರಾಜನೂ ಸೇರಿ ರೂಪಿಸಿದ ಮಾರ್ಗವೆಂದು ದ್ವಂದ್ವಸಮಾಸ ರೀತಿಯಲ್ಲಿ ಅರ್ಥೈಸುತ್ತಿರುವುದು (ಶ್ರೀ ಕೆ.ವಿ. ಸುಬ್ಬಣ್ಣ) ಇನ್ನೂ ಹೆಚ್ಚು ಅರ್ಥಪೂರ್ಣವೆನಿಸುತ್ತದೆ. ಇಂಥ ವಿಶಾಲ ಅರ್ಥದಲ್ಲಿ ಅರಳಿದ ಈ ಕೃತಿಗೆ ಮೂಲಮೃತ್ತಿಕೆ, ಸಂಸ್ಕೃತ ಅಲಂಕಾರಸಾಹಿತ್ಯವಾಗಿದ್ದರೂ, ಇದರ ಕನ್ನಡ ಸ್ವಂತಿಕೆಯನ್ನು ಮರೆಯುವಂತಿಲ್ಲ.

ರಸಪ್ರಸ್ಥಾನದ ಮೂಲಪ್ರವರ್ತಕನಾದ ಭರತನಿಗೆ ಪೂರ್ವದಲ್ಲಿ[೮] ಉಗಮಗೊಂಡ ಭಾರತೀಯ ಕಾವ್ಯಮೀಮಾಂಸೆ, ಮುಂದಣ ತತ್ತ್ವಾನ್ವೇಷಣ ಪ್ರಯತ್ನಗಳಿಂದಾಗಿ ಅಲಂಕಾರ, ರೀತಿ, ಧ್ವನಿ ಪ್ರಸ್ಥಾನಗಳ ಮಹಾಸಂಗಮವೆನಿಸಿತು. ಇವುಗಳಲ್ಲಿ ಅಲಂಕಾರ ಪ್ರಸ್ಥಾನಕ್ಕೆ ಔತ್ತರೇಯ ಭಾಮಹ, ರೀತಿ ಪ್ರಸ್ಥಾನಕ್ಕೆ ದಾಕ್ಷಿಣಾತ್ಯ ದಂಡಿ ಪ್ರತಿಷ್ಠಾಪನಾಚಾರ್ಯರೆನಿಸಿ, ತಮ್ಮ 'ಕಾವ್ಯಾಲಂಕಾರ' 'ಕಾವ್ಯಾದರ್ಶಗಳ' ಮೂಲಕ ಭಾರತೀಯ ಕಾವ್ಯಮೀಮಾಂಸೆಗೆ ಪ್ರಥಮ ಘಟ್ಟವನ್ನು ಕಲ್ಪಿಸಿದರು.[೯] ಮುಂದೆ ಕಾಶ್ಮೀರದ ಜಯಾಪೀಡರಾಜ (ಕ್ರಿ.ಶ. ೭೭೬-೮೦೭)ನ ಆಸ್ಥಾನಪಂಡಿತರಾಗಿದ್ದ 'ಕಾವ್ಯಾಲಂಕಾರಸಂಗ್ರಹ'ದ ಉದ್ಭಟನು ಭಾಮಹನ ಅಲಂಕಾರ ಪ್ರಸ್ಥಾನವನ್ನು, 'ಕಾವ್ಯಾಲಂಕಾರಸೂತ್ರ'ದ ವಾಮನನು ದಂಡಿಯ ರೀತಿ ಪ್ರಸ್ಥಾನವನ್ನು ಬಲವಾಗಿ ಪುರಸ್ಕರಿಸುವಲ್ಲಿ ಈ ಶಾಸ್ತ್ರ ಹೆಚ್ಚು ಕ್ರಿಯಾಶೀಲಗೊಂಡಿತು. ತರುವಾಯ ಕ್ರಿ.ಶ. ೮೫೦ರ ಸುಮಾರಿಗೆ ಕಾಶ್ಮೀರದಲ್ಲಿ ಒಂದು ಕಡೆ 'ಕಾವ್ಯಾಲಂಕಾರ'ದ ರುದ್ರಟನು ಅಲಂಕಾರಗಳನ್ನು ಕ್ರಮಗೊಳಿಸಲು, ಇನ್ನೊಂದು ಕಡೆ 'ಧ್ವನ್ಯಾಲೋಕ'ದ

೮-೯. ಭರತನಿಗೆ ಪೂರ್ವದ, ಭರತ ಮತ್ತು ಭಾಮಹ ದಂಡಿಗಳ ಮಧ್ಯಕಾಲದ, ಕಾವ್ಯಮೀಮಾಂಸೆಯ ಪರಿಚಯಕ್ಕೆ 'ಭಾರತೀಯ ಕಾವ್ಯಮೀಮಾಂಸೆ' (ತಿ.ನಂ.ಶ್ರೀ) ಯ ಮೊದಲಿನ ಮೂರು ಪ್ರಕರಣಗಳನ್ನು ನೋಡಬಹುದು.

ಆನಂದವರ್ಧನನು ಧ್ವನಿರಹಸ್ಯವನ್ನು ಹೊರಗೆಡವಲು ನಿರತರಾದ ಜಾಗೃತ ಸಂದರ್ಭದಲ್ಲಿ ಕನ್ನಡದ ಕವಿರಾಜಮಾರ್ಗ ತಲೆಯೆತ್ತಿತು. ಮುಂದೆ ೧೦ನೆಯ ಶತಮಾನದಲ್ಲಿ 'ಕಾವ್ಯಮೀಮಾಂಸೆ'ಯ ರಾಜಶೇಖರ, 'ದಶರೂಪಕ'ದ ಧನಂಜಯ, ೧೧ನೆಯ ಶತಮಾನದಲ್ಲಿ 'ವಕ್ರೋಕ್ತಿಜೀವಿತ'ದ ಕುಂತಕ, 'ಕಾವ್ಯಾನುಶಾಸನ'ದ ಹೇಮಚಂದ್ರ, 'ಕಾವ್ಯಪ್ರಕಾಶ'ದ ಮಮ್ಮಟರು ಒಬ್ಬರ ಮೇಲೊಬ್ಬರು ಹುಟ್ಟಿ ಬಂದು ಚಿಂತನ-ಮಂಥನ ನಡೆಸಿ, ಪಕ್ಷ-ಪರಪಕ್ಷ ವಹಿಸಿ, ಶಾಸ್ತ್ರಸಂಘರ್ಷಣೆ ಹೂಡಿದರು. ಈ ಬೌದ್ಧಿಕದೈತ್ಯರ ಕೈಯಲ್ಲಿ ಕ್ರಿ.ಶ. ೮೦೦-೧೧೦೦ರ ಅವಧಿಯ ಕಾವ್ಯಮೀಮಾಂಸೆ ಕಡೆಗೋಲಿಗೆ ಸಿಕ್ಕಂತೆ ಕದಡಿಹೋಯಿತು. ಇಂತಹ ಕೆರಳಿದ ಆಂದೋಲನೆಯ ನಡುವೆ ಅರಳಿತು ಕವಿರಾಜಮಾರ್ಗ.

ಕವಿರಾಜಮಾರ್ಗಕ್ಕೆ ನೇರ ಆದರ್ಶವಾಗಿರುವ ದಂಡಿಯ ಕಾವ್ಯಾದರ್ಶವು ಕಾವ್ಯಾಲಂಕಾರಕ್ಕಿಂತ ಹೆಚ್ಚು ಸೊಗಸಾದ ಕೃತಿ. ಮೇಲಾಗಿ ದಂಡಿ ದ್ರಾವಿಡದೇಶದ ಕಂಚೀಪುರನಿವಾಸಿ. ಈ ಕಾರಣಗಳಿಂದ ಇದು ದಕ್ಷಿಣಭಾರತದ ಓದುಗರ ತೀವ್ರಗಮನವನ್ನು ಸೆಳೆಯುತ್ತಿದ್ದ ಸಂದರ್ಭದಲ್ಲಿ, ರಾಷ್ಟ್ರಕೂಟರು ಚಕ್ರವರ್ತಿಗಳಾಗಿ ನಿಂತು ಕರ್ನಾಟಕವನ್ನಾಳಿದರು. ಈಗ ಮಾರ್ಗಕಾರನು ಕವಿರಾಜಮಾರ್ಗದ ಮೂಲಕ ಕಾವ್ಯಾದರ್ಶವನ್ನು ಕನ್ನಡಕ್ಕೆ ತಂದು, ದಕ್ಷಿಣದ ಒಂದು ದೇಶಭಾಷೆಯಲ್ಲಿ ದಂಡಿಯನ್ನು ಸ್ವಾಗತಿಸಿದ ಪ್ರಥಮವ್ಯಕ್ತಿ ಎನಿಸಿದನು.[೧೦-೧೧] ಕಾವ್ಯಾದರ್ಶದೊಂದಿಗೆ ಕಾವ್ಯಾಲಂಕಾರದ ಕೆಲವು ವಿಚಾರಗಳನ್ನೂ, ಆಗಾಗ ಕನ್ನಡದ ಮುಖ್ಯ ಜೀವತಂತುಗಳನ್ನೂ ಸಮೀಕರಿಸಿ, ಮೂರು ಪರಿಚ್ಛೇದಗಳ ಕವಿರಾಜಮಾರ್ಗವನ್ನು ರಚಿಸಿದನು.

ಪ್ರಥಮ ಪರಿಚ್ಛೇದ - ದೋಷಾದೋಷಾನುವರ್ಣನ ನಿರ್ಣಯಂ:

೧-೪ ಸ್ತುತಿ; ೫-೬ ನೃಪತುಂಗನ ರಾಜಧಾನಿ ಮತ್ತು ರಾಜಸಭೆ; ೭-೨೧ ಕಾವ್ಯಹೇತು, ಕಾವ್ಯಪ್ರಯೋಜನ; ೨೨-೩೫ ಕಾವ್ಯಲಕ್ಷಣ, ಕಾವ್ಯಶರೀರ, ಸಂಸ್ಕೃತ-ಕನ್ನಡ ಕಾವ್ಯಪ್ರಕಾರಗಳು ಮತ್ತು ಕವಿಗಳು; ೩೬-೪೦ ಕನ್ನಡನಾಡು, ಕನ್ನಡಿಗರ ವೈದುಷ್ಯ; ೪೧-೪೨ ಸಂಸ್ಕೃತ, ಪ್ರಾಕೃತ, ಕನ್ನಡಗಳಲ್ಲಿ ಶಾಸ್ತ್ರರಚನೆ; ೪೩-೪೫ ಕಾವ್ಯದೋಷ ಮತ್ತು ನಿವಾರಣೆ; ೪೬-೬೧ ಕನ್ನಡ, ಸಂಸ್ಕೃತ, ಸಮಸಂಸ್ಕೃತ; ೬೨-೬೮ ಶ್ರುತಿದುಷ್ಟ, ಅರ್ಥದುಷ್ಟ, ಶ್ರುತಿಕಷ್ಟ, ಕಲ್ಪನೋಕ್ತಿಕಷ್ಟ; ೬೯-೧೦೩ ಯತಿಭಂಗ, ಅರ್ಥಶೂನ್ಯ, ವಿರುದ್ಧಾರ್ಥ, ಪುನರುಕ್ತ, ಯಥಾಸಂಖ್ಯೆ, ವ್ಯವಹಿತ, ಛಂದೋಭಂಗ, ವಿಸಂಧಿ, ನೇಯಾರ್ಥ; ೧೦೪-೧೧೨ ಆಗಮ-ಸಮಯ-, ನ್ಯಾಯ, ಕಲಾ-, ಕಾಲ-, ಲೋಕ-, ದೇಶವಿರುದ್ಧದೋಷಗಳು; ೧೧೩-೧೪೨ ಕಾರಕ-,ವಚನ-,ಗುರು-,ಲಘು-, ಸಮುಚ್ಚಯ, ವಿಕಲ್ಪ-, ಅವಧಾರಣ-,ವಿಶಂಕಾದೋಷಗಳು; ೧೪೩-೧೪೬ ಅಭ್ಯುಪಗಮೋಕ್ತಿ; ೧೪೭-೧೫೦ ಸಮಾಪ್ತಿ ವಾಕ್ಯಗಳು.

ದ್ವಿತೀಯ ಪರಿಚ್ಛೇದ - ಶಬ್ದಾಲಂಕಾರವರ್ಣನ ನಿರ್ಣಯಂ :

೧-೩ ಪ್ರಸ್ತಾವನೆ; ೪-೨೯ ಪದಪ್ರಯೋಗದ ಗುಣದೋಷ; ೩೦-೪೫ ಪ್ರಾಸಪ್ರಭೇದ; ೪೬-೯೭ ಗುಣನಿಷ್ಠ ಮಾರ್ಗವಿಚಾರ; ೯೮-೧೦೦ ಗುಣನಿಷ್ಠ ರಸವಿಚಾರ; ೧೦೧-೧೦೭ ಕ್ರಿಯಾಪದನಿಷ್ಠ

---

೧೦. ಕಾವ್ಯಾದರ್ಶವು ರಾಷ್ಟ್ರಕೂಟ ನೃಪತುಂಗನ ಕಾಲದಲ್ಲಿ ಕವಿರಾಜಮಾರ್ಗವಾಗಿ ಕನ್ನಡಕ್ಕೆ ಬಂದರೆ, ಇದೇ ವಂಶದ 'ತುಂಗನರಾಧಿಪ' ಅಥವಾ 'ತುಂಗಮಹೀಧರ' ಎಂಬವನ ಆಶ್ರಯದಲ್ಲಿ ರತ್ನಶ್ರೀಜ್ಞಾನ ಎಂಬ ಬೌದ್ಧವಿದ್ವಾಂಸನು ಇದಕ್ಕೆ ಸಂಸ್ಕೃತಟೀಕೆ ಬರೆದಿದ್ದು, 'ಕಾವ್ಯಲಕ್ಷಣಂ' ಎಂಬ ಹೆಸರಿನಲ್ಲಿ ಅಚ್ಚಾಗಿದೆ. (ಸಂಪಾದಕರು: ಅನಂತಲಾಲ ಠಾಕೂರ ಮತ್ತು ಉಪೇಂದ್ರ ಝಾ. ಪ್ರಕಾಶಕರು: ಡೈರೆಕ್ಟರ್ ಮಿಥಿಲಾ ವಿದ್ಯಾಪೀಠ).

೧೧. ಕಾವ್ಯಾದರ್ಶವು 'ದಂಡ್ಯಳಂಕಾರಂ' ಎಂಬ ಹೆಸರಿನಿಂದ ೧೨ನೆಯ ಶತಮಾನದಲ್ಲಿ ತಮಿಳಿಗೆ ಭಾಷಾಂತರಗೊಂಡಿದೆ.

ಮಾರ್ಗವಿಚಾರ; ೧೦೮-೧೧೧ ಸಮುಚ್ಚಯ, ವಚನ, ಲಿಂಗನಿಷ್ಠ (?) ಮಾರ್ಗವಿಚಾರ; ೧೧೨-೧೪೨ ಚಿತ್ರಬಂಧಗಳು; ೧೪೩-೧೫೨ ಪ್ರಹೇಳಿಕೆಗಳು; ೧೫೩-೧೫೫ ಸಮಾಪ್ತಿ ವಾಕ್ಯಗಳು.

ತೃತೀಯ ಪರಿಚ್ಛೇದ - ಅರ್ಥಾಲಂಕಾರ ಪ್ರಕರಣಂ :

೧-೫ ಪ್ರಸ್ತಾವನೆ; ೬-೧೧ ಜಾತಿ; ೧೨-೨೭ ರೂಪಕ; ೨೮-೩೮ ಅರ್ಥಾಂತರನ್ಯಾಸ; ೩೮-೪೮ ವ್ಯತಿರೇಕ; ೪೯-೫೨ ಯಥಾಸಂಖ್ಯೆ; ೫೩-೫೮ ದೀಪಕ; ೫೯-೯೧ ಉಪಮಾ; ೯೨-೯೫ ಅತಿಶಯೋಕ್ತಿ; ೯೬-೯೯ ಸದೃಶಯೋಗಿತ; ೧೦೦-೧೦೮ ಆಕ್ಷೇಪ; ೧೦೯-೧೧೪ ಶ್ಲೇಷ; ೧೧೫-೧೧೭ ಉತ್ಪ್ರೇಕ್ಷೆ; ೧೧೮-೧೨೦ ಸೂಕ್ಷ್ಮ; ೧೨೧-೧೨೩ ವಿಶೇಷ; ೧೨೪-೧೨೬ ಸಮಾಹಿತ; ೧೨೭-೧೩೧ ಸಮಾಸೋಕ್ತಿ; ೧೩೨-೧೩೪ ಪರ್ಯಾಯೋಕ್ತಿ; ೧೩೫-೧೩೮ ವಿರೋಧ; ೧೩೯-೧೪೧ ಅಪ್ರಸ್ತುತ; ೧೪೨-೧೫೪ ನಿದರ್ಶನ (ದೃಷ್ಟಾಂತ); ೧೫೫-೧೫೬ ಸಹೋಕ್ತಿ; ೧೫೭-೧೫೮ ಸಂಕೀರ್ಣ; ೧೫೯-೧೬೦ ಪರಿವೃತ್ತಿ; ೧೬೧-೧೬೩ ವ್ಯಾಜಸ್ತುತಿ; ೧೬೪-೧೬೮ ಹೇತು; ೧೭೬-೧೮೦ ವಿಭಾವನಾ; ೧೮೧-೧೮೩ ಲೇಶ; ೧೮೪-೧೮೨ ಉದಾತ್ತ; ೧೮೩-೧೮೭ ಅಪಹ್ನುತಿ; ೧೮೮-೧೯೮ ರಸವತ್ ಮತ್ತು ರಸಪ್ರಭೇದ; ೧೯೯-೨೦೦ ಊರ್ಜಿತ ; ೨೦೧-೨೦೩ ವ್ಯಾವೃತ್ತಿ ; ೨೦೪-೨೦೫ ಪ್ರಿಯತರ; ೨೦೬-೨೦೭ ಆಶೀಃ;೨೦೮ ವಿಭಾವನಾ; ೨೦೯ ಧ್ವನ್ಯಳಂಕಾರ; ೧೧೦-೨೧೮ ವರ್ಣನೆಗಳು; ೨೧೯-೨೩೧ ಮತ್ತು ೨೩೭ ಸಮಾಪ್ತಿವಾಕ್ಯಗಳು; ೨೩೨-೨೩೬ ಶಬ್ದಾಲಂಕಾರ (ಪ್ರಕ್ಷೇಪ?).

ಈ ವಿವರಗಳು ಕವಿರಾಜಮಾರ್ಗದ ಪ್ರಕರಣ ವಿಭಜನೆ ಮತ್ತು ಪ್ರತಿಯೊಂದು ಪ್ರಕರಣದ ವಿಷಯ ವೈವಿಧ್ಯವನ್ನು ಬಿಚ್ಚಿ ತೋರಿಸುತ್ತವೆ. ಇದಕ್ಕೆ ಮಾತೃಕೆಯಾದ ಕಾವ್ಯಾದರ್ಶದ ಪ್ರಥಮ ಪರಿಚ್ಛೇದದಲ್ಲಿ ಕಾವ್ಯಲಕ್ಷಣ, ಕಾವ್ಯಪ್ರಭೇದ, ವೈದರ್ಭಿಮಾರ್ಗ, ಗೌಡಿಮಾರ್ಗ, ಅನುಪ್ರಾಸಾದಿ ಶಬ್ದಾಲಂಕಾರ, ಕಾವ್ಯಹೇತು; ದ್ವಿತೀಯಪರಿಚ್ಛೇದದಲ್ಲಿ ೩೫ ಅಲಂಕಾರಗಳು;ತೃತೀಯಪರಿಚ್ಛೇದದಲ್ಲಿ ಯಮಕ, ಚಿತ್ರಬಂಧ, ಪ್ರಹೇಳಿಕೆ, ೧೦ ವಿಧದ ಕಾವ್ಯದೋಷಗಳು ವಿವೇಚಿಸಲ್ಪಟ್ಟಿವೆ. ದಂಡಿ ಹೇಳುವ ಈ ಒಂದನೆಯ ಮತ್ತು ಮೂರನೆಯ ಪರಿಚ್ಛೇದಗಳ ವಿಷಯ ಕ್ರಮದಲ್ಲಿಯ ಅವ್ಯವಸ್ಥೆ ಮಾರ್ಗಕಾರನಿಗೆ ಹೊಳೆದಿರಬೇಕು. ಅದಕ್ಕಾಗಿ ಒಂದನೆಯ ಪರಿಚ್ಛೇದದ ವೈದರ್ಭಿ-ಗೌಡಿಮಾರ್ಗ ಮತ್ತು ಅನುಪ್ರಾಸಾದಿ ಶಬ್ದಾಲಂಕಾರಗಳನ್ನು ತನ್ನ ಎರಡನೆಯ ಪರಿಚ್ಛೇದಕ್ಕೂ, ಮೂರನೆಯ ಪರಿಚ್ಛೇದದ ೧೦ ವಿಧದ ಕಾವ್ಯದೋಷಗಳನ್ನು ತನ್ನ ಮೊದಲನೆಯ ಪರಿಚ್ಛೇದಕ್ಕೂ ಎಳೆದು ತಂದು ಕವಿರಾಜಮಾರ್ಗದಲ್ಲಿ ಕ್ರಮಗೊಳಿಸಿದ್ದಾನೆ. ಹೀಗಾಗಿ ಪ್ರಥಮ ಪರಿಚ್ಛೇದದಲ್ಲಿ ಕಾವ್ಯಲಕ್ಷಣ, ಕಾವ್ಯದೋಷ, ದ್ವಿತೀಯ ಪರಿಚ್ಛೇದದಲ್ಲಿ ಶಬ್ದಾಲಂಕಾರ, ಮಾರ್ಗವಿಚಾರ, ತೃತೀಯ ಪರಿಚ್ಛೇದದಲ್ಲಿ ಅರ್ಥಾಲಂಕಾರಗಳು ನೆಲೆನಿಂತು ವಿಷಯ ವ್ಯವಸ್ಥೆಗೊಂಡಿದೆ. ಕಾವ್ಯಾದರ್ಶದ ಚೌಕಟ್ಟನ್ನು ಮುರಿದು ತಕ್ಕಮಟ್ಟಿಗೆ ನೀಟಾಗಿ ಹೊಂದಿಸಿದ ಈ ಪುನರ್ವಿರಚನಾ ಕೌಶಲ ಶ್ಲಾಘ್ಯವಾಗಿದೆ. ಇದು ಈತನು ಸಾಧಿಸಿದ ಮೊಟ್ಟಮೊದಲ ಲೇಸು ಕಾರ್ಯ. ಸಮಯ ಸಿಕ್ಕಾಗಲೆಲ್ಲ ಪರಿಚ್ಛೇದಗಳ ಒಡಲಲ್ಲಿಯೂ ಇಂತಹ ಉಪಕ್ರಮಕ್ಕೆ ಎಡೆ ಲಭಿಸಿದೆ.

ಪ್ರಥಮಪರಿಚ್ಛೇದದ ಕಾವ್ಯಹೇತು, ಕಾವ್ಯಪ್ರಯೋಜನಗಳು ಸಂಸ್ಕೃತದ ಚರ್ವಿತಚರ್ವಣಗಳಾದರೂ ಇಲ್ಲಿಯ ಮಾತಱಿವಂ, ನಿಪುಣಂ, ಜಾಣಂ, ಬಲ್ಲಂ, ಕವಿವೃಷಭಂ ಇತ್ಯಾದಿ ವಿಷಯ ತೀರ ಹೊಸದು. 'ಪ್ರಕಟತರ ವಸ್ತುವಿಸ್ತರ', ನಿರತಿಶಯ ವಸ್ತುವಿಸ್ತರ' ಎಂಬ ವಸ್ತುನಿಷ್ಠ ಕಾವ್ಯವಿಭಜನೆ ಈತನ ನವೀನ ವಿಚಾರ. ಈ ಸಂದರ್ಭದಲ್ಲಿ ಸಂಸ್ಕೃತದ ಗದ್ಯಕೃತಿಗಳನ್ನು, ಪದ್ಯಕವಿಗಳನ್ನು ಹೇಳಿ ನಿಲ್ಲದೆ, ನಮ್ಮ ಗದ್ಯಕಥೆಯ

ವಿಮಲೋದಯ ನಾಗಾರ್ಜುನರನ್ನೂ ಪದ್ಯ ಪ್ರಕಾರಗಳಾದ ಚತ್ತಾಣ ಬೆದಂಡೆಗಬ್ಬಗಳ ಶ್ರೀವಿಜಯ, ಕವೀಶ್ವರ, ಪಂಡಿತರನ್ನೂ ಹೆಸರಿಸಿ ಕನ್ನಡನಿಷ್ಠೆಯನ್ನು ತೋರಿದ್ದಾನೆ. ನಾಡಿನ ಸೀಮೆ ಕಾವೇರಿಯಿಂದ ಗೋದಾವರಿ ವರೆಗೆ, ನಾಡವರು ಚದುರರು ಕಾವ್ಯಪ್ರಯೋಗಪರಿಣತಮತಿಗಳು; ನಾನಾಮುಖವಾಗಿ ಬೆಳೆದ ಕನ್ನಡ ಭಾಷೆ-ಸಾಹಿತ್ಯಗಳ ಗುಣದೋಷ ನಿರ್ಣಯಕ್ಕೆ ನಾಡವರೇ ಪ್ರಮಾಣಪುರುಷರು ಎಂದು ಹೇಳಿದುದು ಮಾರ್ಗಕಾರನ ಕನ್ನಡ ಅಭ್ಯಾಸಕ್ಕೆ ನಿದರ್ಶನ. ತನ್ನ ಕಾಲಕ್ಕೆ ಆಭಾಸವೆನಿಸುವ 'ಪಟಿಗನ್ನಡ' ಶೈಲಿಯನ್ನು ನಿರಾಕರಿಸಿ, ಕನ್ನಡ ಸಂಸ್ಕೃತ ಸಮಸಂಸ್ಕೃತಗಳ ಬೆರಕೆಗೆ ನೀಡಿದ ನ್ಯಾಯನಿರ್ಣಯ ಈತನ ಆಧುನಿಕ ಪ್ರಜ್ಞೆಯ ದ್ಯೋತಕ. ಮುಂದೆ ಹೇಳಲಾದ ಶ್ರುತಿದುಷ್ಟ, ಶ್ರುತಿಕಷ್ಟ, ಅರ್ಥದುಷ್ಟ, ಕಲ್ಪನೋಕ್ತಿ ಕಷ್ಟಗಳಲ್ಲಿ ಭಾಮಹನ, ಯತಿಭಂಗ ಅರ್ಥಶೂನ್ಯ ವಿರುದ್ಧಾರ್ಥ ಪುನರುಕ್ತ ಯಥಾಸಂಖ್ಯೆ ವ್ಯವಹಿತ ಅಚ್ಛಂದ ವಿಸಂಧಿ ನೇಯಾರ್ಥಗಳಲ್ಲಿ ದಂಡಿ ಭಾಮಹರ ಅನುಕರಣೆಯಿದ್ದರೂ ಸಂಸ್ಕೃತ ವಿಚಾರಗಳನ್ನು ಕನ್ನಡಕ್ಕೆ ಅನ್ವಯಿಸಿಕೊಂಡಿರುವ ಪ್ರಯತ್ನ ಮೆಚ್ಚುವಂತಿದೆ. ಆದರೆ ಸಮಯ-,ನ್ಯಾಯ-,ಕಲಾ-, ಕಾಲ-,ಲೋಕ-,ದೇಶವಿರುದ್ಧಗಳು ಸಂಸ್ಕೃತದ ಕೇವಲ ಅನುಕರಣೆ. ಪದ್ಯ ೧೧೩ರ ಮುಂದಣ ಕಾರಕ-, ವಚನ-, ಅವಧಾರಣ-, ವಿಕಲ್ಪ-, ಸಮುಚ್ಚಯಾದಿ ಗುಣದೋಷ ಚರ್ಚೆಯಲ್ಲಿ, ಸಂಸ್ಕೃತವನ್ನು ಕೈಬಿಟ್ಟು ಕನ್ನಡವನ್ನು ಎತ್ತಿಕೊಂಡು ಮಾಡಿದ ಹೊಸ ವಿಚಾರ ಇಂಬುಗೊಂಡಿದೆ. ಕನ್ನಡಭಾಷೆಯ ಮೂಲಭೂತತತ್ವಗಳನ್ನು ಹುಡುಕಿ ಹೇಳಿದ ಈತನ ಅನ್ವೇಷಣದೃಷ್ಟಿ ಇಲ್ಲಿ ಬೆರಗುಗೊಳಿಸುತ್ತದೆ. ಹೀಗೆ "ಪುರಾಣ ಕವಿಗಳ ಸಂತತಗತಮಾರ್ಗಗದಿತದೋಷಂಗಳುಮಂ ಚಿಂತಿಸಿ, ಮತ್ತೆನ್ನಱಿವುದುಮಂ.... ಕೆಲವಂ ಪೇೞ್ವೆಂ"[೧೨] ಎಂಬ ಪೀಠಿಕೆ ಹಾಕಿಕೊಂಡು ಮಾಡಿದ ಈ ದೋಷ-ಅದೋಷ ವಿಚಾರಗಳು, ತರುವಾಯದ ಕನ್ನಡ ಅಲಂಕಾರ, ಛಂದಸ್ಸು, ವ್ಯಾಕರಣ ಕೃತಿಗಳಿಗೆ ಹಾಕಿದ ಭದ್ರ ಬುನಾದಿಯಾಗಿವೆ. ಹೀಗಾಗಿ ಈ ಪರಿಚ್ಛೇದಕ್ಕೆ ಮಿಕ್ಕವುಗಳಿಗಿಂತ ಒಂದು ಹೆಚ್ಚಿನ ತೂಕ, ಒಂದು ಹೆಚ್ಚಿನ ಸೊಗಸು ಸಂಪ್ರಾಪ್ತವಾಗಿದೆ.

ಎರಡನೆಯ ಪರಿಚ್ಛೇದದ ವಿಷಯ ಶಬ್ದಾಲಂಕಾರ. 'ಇಲ್ಲಿಗಿದು ತಕ್ಕುದು, ಇಲ್ಲಿಗೆ ಪೊಲ್ಲದಿದು' ಎಂಬ ಪ್ರಯೋಗ ನಿರೂಪಣೆ ಪ್ರಾರಂಭದ ೨೯ ಪದ್ಯಗಳ ವಸ್ತು. ಇಲ್ಲಿ ಅಡಕವಾಗಿರುವ ಶಬ್ದಸಾರೂಪ್ಯ, ಅರ್ಥಸಾರೂಪ್ಯ, ಸಂಧಿ-, ಕ್ರಿಯಾವಿಶೇಷಣ-ನಿಪಾತ-ದ್ವಿತೀಯಾವಿಭಕ್ತಿ-, ಷಷ್ಠೀ ವಿಭಕ್ತೀ-,ಸಂಬೋಧನಾವಿಭಕ್ತಿ, ಪುನರುಕ್ತ-, ಬಹುವಿಶೇಷಣಗಳ ಗುಣದೋಷ ಕನ್ನಡಭಾಷೆಯ ದೃಷ್ಟಿಯಿಂದ ಅಮೂಲ್ಯವಿಚಾರಗಳೆನಿಸಿವೆ. ೧೦೨-೧೦೭ ವರೆಗಣ ಪದ್ಯಗಳಲ್ಲಿ ದಂಡಿಯಿಂದ ಸ್ವಲ್ಪ ದೂರಸರಿದು, ಕ್ರಿಯಾರೂಪಭೇದಗಳನ್ನಾಧರಿಸಿ ದಕ್ಷಿಣೋತ್ತರಮಾರ್ಗಭೇದಗಳನ್ನು ಗುರುತಿಸಿದ್ದು, ಇದು ಕನ್ನಡಶಬ್ದಗಳ ವಿಕಲ್ಪರೂಪಗಳನ್ನು ಗಮನಿಸಿದುದರ ಕುರುಹು. ಶಾಂತರಸದ ಕಲ್ಪನೆಗೆ ಉಗಮಸ್ಥಾನ ಕಾವ್ಯಾಲಂಕಾರದ ಉದ್ಭಟ. ಈ ಸುಮಾರಿಗೆ ಬಾಳಿದ ಮಾರ್ಗಕಾರನ 'ಪ್ರಶಾಂತರಸ'ದ ಪ್ರಸ್ತಾಪ, ಸ್ವತಂತ್ರ ವಿಚಾರವಾಗಿರಬೇಕು. ಪ್ರಾಸಪ್ರಸಂಗದಲ್ಲಿ "ಅತಿಶಯಮೀ ಕನ್ನಡಕ್ಕೆ ಸತತಂ ಪ್ರಾಸಂ" ಎಂದು ಕನ್ನಡದ ಆರು ಪ್ರಾಸಗಳನ್ನು ಹೇಳಿ, "ಪ್ರಾಸಾನುಪ್ರಾಸಾಂತಪ್ರಾಸಂಗಳ್ ಮೂಱುಮತಿಶಯಂಗಳ್" ಎಂದುದು ಔಚಿತ್ಯಪೂರ್ಣ ತೀರ್ಮಾನ. ಮಿಕ್ಕ ಗುಣನಿರೂಪಣೆ, ಚಿತ್ರಬಂಧ, ಪ್ರಹೇಳಿಕೆಗಳೆಲ್ಲ ಕಾವ್ಯಾದರ್ಶದ ಪಡಿಯಚ್ಚುಗಳು.

---

೧೨. ಕ.ಮಾ. ೧-೪೭

ಮೂರನೆಯ ಪರಿಚ್ಛೇದ ಅರ್ಥಾಲಂಕಾರ ವಿವೇಚನೆ. ಭಾಮಹನ ೩೨, ದಂಡಿಯ ೩೫ ಅಲಂಕಾರಗಳ ಜೊತೆಗೆ ಧ್ವನ್ಯಳಂಕಾರವನ್ನು ಸೇರಿಸಿ, ಈತನು ಹೇಳುವ ಅಲಂಕಾರಗಳು ೩೬. ಇವುಗಳ ಕ್ರಮ ಮತ್ತು ಹೆಸರು ಕೆಲವು ಸಲ ದಂಡಿಯಿಂದ ಭಿನ್ನವಾಗಿವೆ. ದೃಷ್ಟಾಂತ, ಧ್ವನ್ಯಳಂಕಾರ, ಶಾಂತರಸಗಳ ವಿಷಯದಲ್ಲಿ ಹೊಸತನವಿದೆ. ಮುಂದಣ ಅಷ್ಟಾದಶವರ್ಣನೆ, ಚತುರ್ವಿಧಪ್ರಾಸ (ಪ್ರಕ್ಷೇಪ?)ಗಳು ಮಾತ್ರ ಸಂಸ್ಕೃತದ ಅನುಕರಣೆಯೆನಿಸಿವೆ.

ಒಟ್ಟಿನಲ್ಲಿ ಕಾವ್ಯಾದರ್ಶ ಕಾವ್ಯಾಲಂಕಾರಗಳನ್ನು ಅನುಸರಿಸಿಯೂ ಇವುಗಳ ಶಕ್ತಿಯುತವಾದ ಪ್ರಭಾವಪರಿಘುವನ್ನು ಆಗಾಗ ದಾಟಿನಿಂತಿದ್ದಾನೆ. ಸಂಸ್ಕೃತ ಅಲಂಕಾರಗ್ರಂಥಗಳ ಆದರ್ಶದಲ್ಲಿ ಮುಂದುವರಿದರೂ ತಾನು ಬರೆಯುತ್ತಿರುವುದು ಕನ್ನಡಿಗರಿಗಾಗಿ ಎಂಬ ಜಾಗೃತಪ್ರಜ್ಞೆ ತಾಳಿದ್ದಾನೆ. ಹೀಗಾಗಿ ಅನುವಾದವಾಗಬೇಕಿದ್ದ ಕೃತಿ, ಸ್ವಂತಿಕೆಯಿಂದ ಶೋಭಿಸಿದೆ. ಕನ್ನಡದ ಯಾವುದೇ ಕಾವ್ಯ ಮೀಮಾಂಸೆಗಳಿಗಿಲ್ಲದ ವ್ಯಕ್ತಿವೈಶಿಷ್ಟ್ಯ ಇದಕ್ಕೆ ಸಂದಿದೆ.

ಕವಿರಾಜಮಾರ್ಗವನ್ನು ಅನುವಾದ ಭಾಗ, ಸ್ವತಂತ್ರ ಭಾಗ ಎಂದು ವಿಂಗಡಿಸಿ ನೋಡಿದರೆ ಮೊದಲಿನ ಎರಡು ಪರಿಚ್ಛೇದಗಳಲ್ಲಿ ಅವುಗಳ ಪ್ರಮಾಣ ೨೦:೮೦, ಮೂರನೆಯದರಲ್ಲಿ ೫೦:೫೦ ಇದೆ. ಲಕ್ಷ್ಯಪದ್ಯಗಳಿಗಿಂತ ಲಕ್ಷಣಪದ್ಯಗಳಲ್ಲಿ ಅನುವಾದ ಹೆಚ್ಚು. ನವೀನ ಲಕ್ಷಣಗಳಿಗೆ, ಕೆಲವು ಸಲ ದಂಡಿಯ ಲಕ್ಷಣಗಳಿಗೆ ನವೀನ ಉದಾಹರಣೆಗಳಿವೆ. ಇನ್ನು ಕೆಲವು ಸಲ ಮೂಲ ಉದಾಹರಣೆಗಳನ್ನು ಅಲ್ಪವ್ಯತ್ಯಾಸಗೊಳಿಸಿದ್ದಾನೆ. ರಸದೃಷ್ಟಿಯಿಂದ ನೋಡಿದರೆ ಅನುವಾದ ಪದ್ಯಗಳಿಗಿಂತ ದೇಶಿಯಿಂದ ಶೋಭಿಸುವ ಸ್ವಂತಪದ್ಯಗಳಲ್ಲಿ ಸೊಗಸು ಹೆಚ್ಚು. ಆದರೆ "ಅನುವಾದದಲ್ಲಿ ಮೂಲದ ವಾಕ್ಯಗಳ ಸೊಗಸು ತಪ್ಪದೆ ಬಂದಿದೆಯೆಂದು ಎಲ್ಲ ಸಂದರ್ಭಗಳಲ್ಲಿ ಹೇಳಲಾಗುವುದಿಲ್ಲ"[೧೩] ಎಂದು ತೀ.ನಂ. ಶ್ರೀ ಅವರ ಅಭಿಮತ. ಇದನ್ನು ವಿಮರ್ಶಿಸುತ್ತ "ತೀ.ನಂ. ಶ್ರೀ ಯವರ ಮಾತಿನಲ್ಲಿಯೆ ಕೆಲವು ಸಂದರ್ಭಗಳಲ್ಲಿಯಾದರೂ ಬಂದಿದೆ ಎಂಬ ಧ್ವನಿ ಇದ್ದೇ ಇದೆ"[೧೪] ಎಂದು ಹೇಳುವ ಎಂ.ವಿ. ಸೀತಾರಾಮಯ್ಯನವರ ಮಾತಿಗೆ, ಕೆಲವು ವಾಕ್ಯಗಳ ಸೊಗಸು ಮೂಲಕ್ಕಿಂತ ಮಿಗಿಲಾಗಿದೆ ಎಂಬ ಮಾತನ್ನೂ ಜೋಡಿಸಬಹುದಾಗಿದೆ. ಉದಾ:

ಮುಖಪಂಕಜರಂಗೇಽಸ್ಮಿನ್ ಭ್ರೂಲತಾನರ್ತಕೀ ತವ।
ಲೀಲಾನೃತ್ತಂ ಕರೋತೀತಿ ರಮ್ಯಂ ರೂಪಕರೂಪಕಂ ॥[೧೫]

ವದನಾಂಬುಜರಂಗದೊಳೀ । ಮದಾಲಸಭ್ರೂಲತಾ ವಿಲಾಸಿನಿ ಲೀಲಾ ॥
ಸ್ಪದನೃತ್ಯಮನಾಗಿಸಿದ । ಪ್ಪುದಿದೆಂಬುದು ರೂಪಕೋರುರೂಪಕಮಕ್ಕುಂ ॥[೧೬]

ಇಲ್ಲಿ ಮೂಲಭಾವದ ಸೊಗಸು ಕೆಡದಂತೆ ಮಾರ್ಗಕಾರ ತನ್ನ ಅನುವಾದ ಕೌಶಲವನ್ನು ಮೆರೆದಿರುವನು.

ಗುಣದೋಷಾನಶಾಸ್ತ್ರಜ್ಞಃ ಕಥಂ ವಿಭಜತೇ ಜನಃ ।
ಕಿಮಂಧಕಸ್ಯಾಧಿಕಾರೋಽಸ್ತಿ ರೂಪಭೇದೋಪಲಬ್ಧಿಷು ॥[೧೭]

ಗುಣಮಿದು ದೋಷಮಿದೆಂಬೀ । ಗಣಿದಮನೆತ್ತಱಿಗುಮಶ್ರುತ ಪ್ರಕೃತಿಜನಂ।
ತೃಣಸಸ್ಯಘಾಸವಿಷಯ । ಪ್ರಣಯಂ ಸಮವೃತ್ತಿಯಪ್ಪವೊಲ್ ಮೃಗಗಣದೊಳ್ ॥[೧೮]

---

೧೩. ಭಾ.ಕಾ. ಮೀ. ಪು. ೪೭೨
೧೪. ಕ.ಮಾ. ಪೀಠಿಕೆ LXXIV
೧೫. ಕಾ.ದ. ೨-೯೩
೧೬. ಕ.ಮಾ. ೩-೨೩
೧೭. ಕಾ.ದ. ೧-೮
೧೮. ಕ.ಮಾ. ೧-೮

ಇಲ್ಲಿ ಮಾರ್ಗಕಾರ, ದಂಡಿಯನ್ನು ದಾಟಿ ಬಹುದೂರ ಹೋಗಿರುವನು; ಪರಿಣಾಮಕಾರಿ ಹೊಸ ಭಾವವನ್ನು ಎರಕಹೊಯ್ದು ತನ್ನ ಪ್ರತಿಭಾಶಕ್ತಿಯನ್ನು ಬೆಳಗಿರುವನು.

೧. ತುಂಡೈರಾತಾಮ್ರಕುಟಿಲೈಃ ಪಕ್ಷೈರ್ಹರಿತಕೋಮಲೈಃ।
ತ್ರಿವರ್ಣರಾಜಿಭಿಃ ಕಂಠೈರೇತೇ ಮಂಜುಗಿರಾಶ್ಶುಕಾಃ ॥[೧೯]

ಧವಳಾಪಾಂಗಂ ಕೇಕಾ । ರವಮುಖರಂ ಹರಿತಶಾಬಲಾಂಕಕಳಾಪಂ ।
ನವಿಲಾಟಂ ಸೊಗಯಿಸುಗುಂ । ಸುವಿನೀಲಾಯತಗಳಂ ಪಯೋದಾಗಮದೊಳ್ ॥[೨೦]

೨. ಕಲಕ್ವಣಿತಗರ್ಭೇಣ ಕಂಠೇನಾಘೂರ್ಣಿತೇಕ್ಷಣಃ।
ಪಾರಾವತಃ ಪರಿಭ್ರಮ್ಯ ರಿರಂಸುಶ್ಚುಂಬತಿ ಪ್ರಿಯಾಮ್ ॥[೨೧]

ಅರೆಮುಚ್ಚಿ ಕಣ್ಗಳಂ ವನ।ಕರಿ ಮೆಲ್ಲದೆ ಲಲಿತಸಲ್ಲಕೀಪಲ್ಲವಮಂ।
ಸ್ಮರವಶದಿಂದಿರ್ದುದು ನಿಜ।ಕರೇಣು ಪೇಚಕ ನಿರೂಪಿತಾಯತಹಸ್ತಂ ॥[೨೨]

ಇಲ್ಲಿ ಉದ್ದೇಶಪೂರ್ವಕವಾಗಿ ದಂಡಿಯನ್ನು ಕೈಬಿಟ್ಟು ಅನುವಾದಕನೆಂಬ ಅಪವಾದವನ್ನು ತಪ್ಪಿಸಿಕೊಂಡಿರುವನು. ಮೂಲಕ್ಕೆ ಸಮನಾಗಿ ತೂಗುವ ಭಾವಗಳನ್ನೇ ತುಂಬಿರುವನು. ಅದಕ್ಕಾಗಿ ಈತನು ಅಂಧ ಅನುಕರ್ತನಲ್ಲವೆನಿಸುತ್ತದೆ. ಈ ಪ್ರಸಂಗದಲ್ಲಿ "ಕವಿರಾಜಮಾರ್ಗದ ಒಟ್ಟು ಪದ್ಯಸಂಖ್ಯೆ ೫೩೬(ಪ್ರಕ್ಷಿಪ್ತವಾದುದನ್ನು ಬಿಟ್ಟು); ಇವುಗಳಲ್ಲಿ ಸುಮಾರು ೪೫ ಪದ್ಯಗಳಿಗೆ ಭಾಮಹನ ಕಾವ್ಯಾಲಂಕಾರವೂ, ಸುಮಾರು ೨೩೦ಕ್ಕೆ ದಂಡಿಯ ಕಾವ್ಯಾದರ್ಶವೂ ಆಕರಗ್ರಂಥಗಳು. ಎಂದಮೇಲೆ, ಸುಮಾರು ಅರ್ಧದಷ್ಟು ಗ್ರಂಥ ಸ್ವಂತ ರಚನೆ. ಉಳಿದರ್ಧದಲ್ಲಿ ಮಾರ್ಗಕಾರನು ಮೂಲ ಶ್ಲೋಕಗಳನ್ನು ಪದಶಃ ಭಾಷಾಂತರ ಮಾಡಿಲ್ಲ; ಭಾವವನ್ನು, ವಿಚಾರವನ್ನು ಸ್ವೀಕರಿಸಿ ತನ್ನದೇ ಆದ ಧಾಟಿಯಲ್ಲಿ ಅಚ್ಚುಕಟ್ಟಾಗಿ ಬರೆದಿದ್ದಾನೆ. ಹಲವು ಕಡೆ ಮೂಲಶ್ಲೋಕದ ಲಕ್ಷಣಸ್ವರೂಪವನ್ನು ವಿಶದಪಡುವಂತೆ ವಿಸ್ತರಿಸಿದ್ದಾನೆ; ಸಂಕ್ಷೇಪ ಮಾಡಿರುವ ಸಂದರ್ಭಗಳೂ ಉಂಟು. ಶಾಸ್ತ್ರವಿಚಾರವಾದ್ದರಿಂದ, ಮೂಲದ ಶಾಸ್ತ್ರೀಯ ಪದಪುಂಜಗಳನ್ನು ಸಂದರ್ಭೋಚಿತವಾಗಿ ಇದ್ದ ಹಾಗೆಯೇ ಬಳಸಿಕೊಂಡಿದ್ದಾನೆ; ಇದು ಸಹಜ, ಅನಿವಾರ್ಯ. ಲಕ್ಷ್ಯಪದ್ಯಗಳನ್ನು ಅನುವಾದ ಮಾಡುವಾಗ ಸಾಕಷ್ಟು ಸ್ವಾತಂತ್ರ್ಯವಹಿಸಿದ್ದಾನೆ; ಮೂಲಶ್ಲೋಕದ ಕಲ್ಪನೆಗಳಿಗೆ ತನ್ನತನವನ್ನು ಬೆರಸಿದ್ದಾನೆ. ಕೆಲವೆಡೆ ಕಳೆಯೇರಿಸಿದ್ದಾನೆ. ಪ್ರತಿ ಪ್ರಕರಣದಲ್ಲಿಯೂ ಸ್ವಂತ ಲಕ್ಷ್ಯಪದ್ಯಗಳಿಗೆ ಕೊರತೆಯಿಲ್ಲ. ಲಕ್ಷಣ ಪದ್ಯವಾಗಲಿ, ಲಕ್ಷ್ಯಪದ್ಯವಾಗಲಿ, ಅನುವಾದ ಮಾಡಿರುವ ಸಂದರ್ಭಗಳಲ್ಲಿ ಕೂಡ ಅವನ್ನು ಅನುವಾದ ಎಂದು ಹೇಳಲಾಗದಂತೆ 'ಸ್ವಂತಿಕೆ'ಯನ್ನು ಮೆರೆದು ಮುಂದಿನ ಅನುವಾದಕರಿಗೆ ಮೇಲ್ಪಂಕ್ತಿಯೆನಿಸಿದ್ದಾನೆ"[೨೩]ಎಂಬ ಶ್ರೀ ಎಂ.ವಿ. ಸೀತಾರಾಮಯ್ಯನವರ ಹೇಳಿಕೆ ಬಹುಮಟ್ಟಿಗೆ ಸತ್ಯವಾಗಿದೆ.

ಕವಿರಾಜಮಾರ್ಗದ ವಿಷಯಸಂಪತ್ತಿ ಮತ್ತು ಕಾವ್ಯಗುಣವನ್ನು ಕುರಿತು "Kavirajamarga is not a wonderful masterpiece in either matter or style"[೨೪] ಎಂದು ದಿ. ಬಿ.ಎಂ. ಶ್ರೀ ಅವರ

---

೧೯. ಕಾ.ದ. ೨-೯
೨೦. ಕ.ಮಾ. ೩-೭
೨೧. ಕಾ.ದ. ೧-೧೦
೨೨. ಕ.ಮಾ. ೩-೮
೨೩. ಕ.ಮಾ. (ಎಂ.ವಿ. ಸೀತಾರಾಮಯ್ಯ) ಪೀಠಿಕೆ LXXIII
೨೪. Karnataka Kavirajamargam-QJMS. XXIII-II. P.436.

ಅಭಿಪ್ರಾಯ. ಆದರೆ ಕನ್ನಡದ ಕಾಲು ಅದೇ ಆಗ ಗಟ್ಟಿಗೊಂಡ ಸಮಯದಲ್ಲಿ, ಸಂಸ್ಕೃತದ ಪ್ರಭಾವ ದಟ್ಟವಾಗಿದ್ದ ಕಾಲದಲ್ಲಿ, 'ಕನ್ನಡಭಾಷೆಯ ಅಂತಃಸತ್ವವನ್ನು ಮರೆಯದೆ, ಸಂಸ್ಕೃತ ಆದರ್ಶಗಳ ಅಗತ್ಯಗಳನ್ನು ತೃಣೀಕರಿಸದೆ' ಕವಿರಾಜಮಾರ್ಗ ತನ್ನ ಇತಿಮಿತಿಯಲ್ಲಿ ಪಡೆದ ಸಿದ್ಧಿ ವಿಷಯದೃಷ್ಟಿಯಿಂದ ಬಹುಮಟ್ಟಿಗೆ ಯಶಸ್ವಿಯೆಂದೇ ಹೇಳಬೇಕು. ಇನ್ನು ಬಿ.ಎಂ.ಶ್ರೀ ಯವರು ಕವಿರಾಜಮಾರ್ಗ ಶೈಲಿದೃಷ್ಟಿಯಿಂದ 'Master piece' ಅಲ್ಲ ಎಂದಿರುವುದು ಶಾಸ್ತ್ರಗ್ರಂಥವನ್ನು ಕಾವ್ಯದೃಷ್ಟಿಯಿಂದ ನೋಡಿದ ವಿಪರೀತವಿಮರ್ಶೆಯಾಗಿದೆ. ಹಾಗೆ ನೋಡಿದರೆ ಕನ್ನಡದ ಕೆಲವು ಕೃತಿಗಳಿಗಿಲ್ಲದ ಕಾವ್ಯಸೌಂದರ್ಯ ಕವಿರಾಜಮಾರ್ಗದಲ್ಲಿ ಹಸಿರುಮುರಿಯುತ್ತಿದೆ. ಶಬ್ದಮಣಿದರ್ಪಣದ ಪ್ರಯೋಗಗಳ ಒಡಲಲ್ಲಿ ಕಾವ್ಯಾಂಶವೇನೋ ವೆಗ್ಗಳವಾಗಿ ಪ್ರವಹಿಸಿದೆ. ಆದರೆ ಇವೆಲ್ಲ ಇನ್ನೊಬ್ಬರಿಂದ ಆರಿಸಿಕೊಂಡ ಕಾರಣ, ಇದು ಕೇಶಿರಾಜನ ಸಹೃದಯ ಪ್ರತೀಕವೇ ಹೊರತು ಕವಿಹೃದಯ ದ್ಯೋತಕವಲ್ಲ. ಆರಿಸಿಕೊಂಡ ಪ್ರಯೋಗಗಳಲ್ಲಿ ತುಣುಕುಗಳೇ ಅಧಿಕವಾಗಿರುವುದರಿಂದ ದರ್ಪಣ, ಓದುಗರಿಗೆ ಆಗಾಗ ರಸಭಂಗವನ್ನುಂಟುಮಾಡುತ್ತದೆ. ಈ ದೃಷ್ಟಿಯಿಂದ, ಸುಮಾರು ೭೦೦ ಪೂರ್ಣಪದ್ಯಗಳನ್ನೊಳಗೊಂಡು ರಸವರ್ಷ ಕರೆವ ಕಾವ್ಯಾವಲೋಕನ ಮೇಲು. ಒಂದರ್ಥದಲ್ಲಿ ಅದು ಕನ್ನಡದ ಪ್ರಥಮ ಸೂಕ್ತಿ-ಸುಧಾರ್ಣವ. ಆದರೆ ಈ ಎರಡು ಕೃತಿಗಳ ಲಕ್ಷ್ಯಪದ್ಯಗಳು ಅನ್ಯಕೃತ. ಇವುಗಳನ್ನು ಬಿಟ್ಟರೆ ನಾಗವರ್ಮ ಕೇಶಿರಾಜರು ಕೈಯಾರೆ ಕಟ್ಟಿದ ಸೂತ್ರಗಳಲ್ಲಿ ಕಾವ್ಯಜೀವವಿಲ್ಲ. ಕವಿರಾಜಮಾರ್ಗಕಾರನಾದರೂ ಕೆಳಗಿನಂತೆ ಸೂತ್ರಶರೀರದಲ್ಲಿ ಕಾವ್ಯಜೀವ ತುಂಬಿ ಅವುಗಳನ್ನು ಹೀಗೆ ಸಜೀವಗೊಳಿಸಿದ್ದಾನೆ:

"ತೃಣಸಸ್ಯಘಾಸ ವಿಷಯಪ್ರಣಯಂ ಸಮವೃತ್ತಿಯಪ್ಪವೊಲ್ ಮೃಗಗಣದೊಳ್"[೨೫] ಹೀಗೆ ಮೂರ್ಖಸಮಾಜದಲ್ಲಿ ಗುಣದೋಷಗಳು ಸಮಾನ ಬೆಲೆಪಡೆಯುತ್ತವೆ. "ಕಲ್ತೊಡನೋದುವುವಲ್ತೆ ಗಿಳಿಗಳುಂ ಪುರಳಿಗಳುಂ"[೨೬] ಹಾಗೆ ಗಿಳಿಪಾಠಕರ ಓದು. ಪರೋಕ್ತಿಚೋರರ ಮಾತು "ನಗದ ಗುಹಾಧ್ವನಿವೊಲನರ್ಥವಚನಂ"[೨೭]. ಸೊಗೆಯಿಸುವ ವಚನರಚನೆ "ಹೃದಯದೊಳೆ ತಾಳ್ದ ಮಣಿಹಾರಂಬೋಲ್ ನೆಗೞ್ಗುಂ"[೨೮]. ಕಾವ್ಯದಲ್ಲಿ ಅವಗುಣ ತಿಲಮಾತ್ರ ಉಳಿದರೂ "ಸವಿಳಾಸ ಲೋಲಲೋಚನ ವಿವರಮನೆಡೆವೆತ್ತ ಕಸದವೊಲ್"[೨೯] ತ್ಯಾಜ್ಯವೆ. "ಕಾಣದಂತೆಂದುಂ ಕಣ್ಗಳ್ ತಮ್ಮ ಕಾಡಿಗೆಯಂ"[೩೦] ಎಂಬಂತೆ ತಮ್ಮ ದೋಷ ತಮಗೆ ಕಾಣದು. ಜೀರ್ಣಶೈಲಿ (ಪಟಗನ್ನಡ)ಯ ಬಳಕೆ "ಜರದ್ವಧೂವಿಷಯ ಸುರತರಸರಸಿಕತೆವೋಲ್"[೩೧] ಅಸುಖಕರ. ಸಂಸ್ಕೃತ ಅವ್ಯಯ ಮತ್ತು ಕನ್ನಡಪದಗಳ ಸಮಾಸ "ಒತ್ತುಂಗರಡೆಯ ಮದ್ದಳೆಯ ಜರ್ಝರಧ್ವನಿಗಳವೋಲ್"[೩೨] ಕರ್ಣಕಠೋರ. ಆದರೆ ಸಮಾಸಯುಕ್ತ ಸಂಸ್ಕೃತಾವ್ಯಯ ಮತ್ತು ಕನ್ನಡಪದ ಸಮಾಸ "ಮೃದಂಗ ಸಂಗೀತಕಾದಿ ಮಧುರರವಂಬೋಲ್"[೩೩] ಕರ್ಣಮಧುರ. ಸಂಸ್ಕೃತ ಕನ್ನಡಪದಗಳ ವಿಫಲಸಮಾಸ "ಮಱುಗುವ ಪಾಲ್ಗಳೆಯ ಪನಿಗಳಂ ಬೆರಸಿದವೋಲ್".[೩೪] ಆದರೆ ಸಂಸ್ಕೃತಸಮಾಸ ಕನ್ನಡಪದಗಳ ಸಫಲ ಬಳಕೆ "ಒಂದಿದವೋಲ್ ಕನಕರಚನೆಯೊಳ್ ಮಣಿನಿಕರಂ"[೩೫]. "ತೊಜೆವಂತಸಾಧುಜನ ಸಂಗತಿಯಂ"[೩೬] ಕಾವ್ಯದೋಷಗಳನ್ನು ತೊರೆಯುವುದು ಲೇಸು. ಆಗಮವಿರುದ್ಧಾದಿಗಳು ಕಾವ್ಯವಧುವನ್ನು

---

೨೫. ಕ.ಮಾ. ೧-೮
೨೬. ಕ.ಮಾ. ೧-೧೦
೨೭. ಕ.ಮಾ. ೧-೧೪
೨೮. ಕ.ಮಾ. ೧-೧೩
೨೯. ಕ.ಮಾ. ೧-೪೩
೩೦. ಕ.ಮಾ. ೧-೪೫
೩೧. ಕ.ಮಾ. ೧-೫೦
೩೨. ಕ.ಮಾ. ೧-೫೩
೩೩. ಕ.ಮಾ. ೧-೫೫
೩೪. ಕ.ಮಾ.೧-೫೮
೩೫. ಕ.ಮಾ. ೧-೬೧
೩೬. ಕ.ಮಾ. ೧-೬೨



ತಿಬೇಟದಲ್ಲಿ ದೊರೆತ ದಂಡಿಯ ಕಾಷ್ಠಚಿತ್ರ

ಕೃಪೆ : ಕಾವ್ಯಲಕ್ಷಣಂ(ಮಿಥಿಲಾ ವಿದ್ಯಾಪೀಠದ ಪ್ರಕಟನೆ)

"ಭೋಗಿವಿಷಂಬೋಲ್ ಪ್ರಾಣತ್ಯಾಗಮನಾಗಿಸುಗುಂ"[೩೭]. ಕನ್ನಡಕ್ಕೆ ಯತಿವಿಲಂಘನವು "ಗುರುಜಘನಸ್ತನಭರ ಮಂಥರಲೀಲಾಲಸ ವಿಳಾಸಿನೀಚಳಿತಂಬೋಲ್"[೩೮] ಸೊಗಸು. ಅರ್ಥಶೂನ್ಯವನ್ನು "ಮರುಳಂ ಮದಿರಾಪರವಶಶರೀರನುಂ ಪೇಟ್ಗು"[೩೯]. ವಿರೂಪಸಂಧಿಯು "ದೋಷಾ ಬಂಧುಗೆ ಶಶಲಕ್ಷ್ಮದಂತೆ ಕಱೆಯಂ ತರ್ಕ್ಯಂ."[೪೦] "ದುರ್ಜನದೊಳಾದ ಪರಿಚಯಂ ಮಾಸಿಸಿ ಕಿಡಿಸುವವೊಲೊಪ್ಪುವ ಕೃತಿವಧುವಂ"[೪೧] ದೋಷವು ಕಾವ್ಯವನ್ನು ಕೆಡಿಸುತ್ತದೆ. "ತೂಱಿ ಪಿಂಗಿಸುವವೋಲ್ ಪೊಸನೆಲ್ಲಿರೆ ಪೊಳ್ಗಳಂ"[೪೨] ಗುಣವಿಟ್ಟುಕೊಂಡು ದೋಷಗಳನ್ನು ದೂರಗೊಳಿಸಬೇಕು. ಅನುಗುಣವಲ್ಲದ ಪದಪ್ರಯೋಗ "ನೆಲ್ಲಂ ಮೊಸರುಂಗುಡಿದಂತೆ."[೪೩] ಸಾಂಗತ್ಯವಲ್ಲದ ಶಬ್ದಾರ್ಥ "ಮುತ್ತುಂ ಮೆಣಸುಂ ಕೋದಂತೆ."[೪೪] ಲಘುವಿನ ಮುಂದೆ ದ್ವಿತ್ವವಿಟ್ಟು ಮಾಡಿದ ಸಂಧಿ "ಕೂಸಿನ ತಲೆಯೊಳ್ ಬೆಣ್ಪೊಱೆಯನಿಟ್ಟವೋಲ್ ಅಸುಖಕರಂ."[೪೫] ಎರಡು ಕ್ರಿಯಾವಿಶೇಷಣಗಳ ಜೊತೆಯ ಒಂದು ಕ್ರಿಯಾಪದ "ಎರಡಕ್ಕೆ ಬಿಟ್ಟ ಕಱುವಂ ಪೋಲ್ಗುಂ."[೪೬] ಹಲವು ಸಂಬೋಧನೆಗಳ ಬಳಕೆ "ಬಾಯಟಿದೊಳ್ಪವೋಲ್ ಕರಂ ವಿರಸತರಂ"[೪೭]. ಶಬ್ದಾಲಂಕಾರ ವಿರಚನೆಗಳ ಮೂಲಭೂತ ತತ್ವ ಒಂದೇ ಆಗಿದ್ದರೂ "ನರರೋರ್ವರೊರ್ವರಂ ಪೋಲದವೋಲ್"[೪೮] ಅವು ಬೇರೆ ಬೇರೆಯಾಗಿವೆ. ಸಮಾಸದ ಮುಂದೆ ಅಸಮಾಸ ಬಂದರೆ "ಕರ್ಬಿನ ತುದಿಯಂತಿರೆ ವಿರಸಂ."[೪೯] ಈ ಮೊದಲಾದ ಲಕ್ಷಣಪದ್ಯಗಳ ಒಡಲಿನಿಂದ ದೇಸಿ ತೂರಿಬಂದು ಕಣ್ಣು ಕುಕ್ಕಿಸುತ್ತದೆ. ಈ ಸಂದರ್ಭದಲ್ಲಿ, ನಾಗವರ್ಮನ ಸೂತ್ರಗಳಲ್ಲಿ "ದಿವಾಕರರ್ ವ್ಯಾಕೃತಿನಾಮಿಗಳವೋಲ್"[೫೦], "ವ್ಯಂಜನದಂತನವದ್ಯರ್ ಮೂವತ್ತುಮೂವರಾದರ್ ದೇವರ್,"[೫೧] ಕೇಶಿರಾಜನ ಸೂತ್ರಗಳಲ್ಲಿ "ಕಹಳೆಯ ಪಾಂಗಿನವೊಲ್"[೫೨] "ಕವೆಯಾರಮಂ ಬೀಸಿದಂತೆ "[೫೩] ಎಂಬ ಸುಂದರ ಮಾತುಗಳು ೪-೬ ಮಾತ್ರ ಇವೆ ಎಂಬುದನ್ನು ನೆನೆದರೆ ಕವಿರಾಜಮಾರ್ಗ ಶಾಸ್ತ್ರದೊಳಗಿನ ಕಾವ್ಯಪಾಲು ಮಿಗಿಲೆನಿಸುತ್ತದೆ. ಕವಿಗಳ ಪ್ರತಿಭಾವಿಲಾಸಕ್ಕೆ ಶಾಸ್ತ್ರ ತಕ್ಕ ವೇದಿಕೆಯಲ್ಲ. ಎಂಥ ಮಹಾಕವಿಯಿದ್ದರೂ ಶಾಸ್ತ್ರಸೀಮೆಯಲ್ಲಿ ಕಾಲಿಟ್ಟರೆ ಶುಷ್ಕನಾಗಲೇಬೇಕು. ಆದರೆ ಮಾರ್ಗಕಾರ ಮಾತ್ರ ದೇಸಿ ಬಳಕೆಯಿಂದ ಶಾಸ್ತ್ರಬೋಧೆಯನ್ನು ಹೆಚ್ಚು ಪರಿಣಾಮಕಾರಿಗೊಳಿಸಿದ್ದಾನೆ.

ಈ ಲಕ್ಷಣಪದ್ಯಗಳಲ್ಲದೆ ಅನುವಾದಿತ ಮತ್ತು ಸ್ವರಚಿತ ಲಕ್ಷ್ಯಪದ್ಯಗಳಲ್ಲಿಯೂ ಈತನ ಕವಿ ಮನೋಭಾವ ಸ್ಫುಟಗೊಂಡಿದೆ. ಕೌಸ್ತುಭಜಾತದ್ಯುತಿಯು ವಕ್ಷವೇಷ್ಟಿತ ಕಾಂಡಪಟ,[೫೪] ಸರಸ್ವತಿಯು ಮಾನಸದ ಹಂಸಿ,[೫೫] ಸಂಧ್ಯಾಗಗನವು "ಪಾರಿಜಾತಕುಸುಮೋತ್ಕರಸಾಂದ್ರಪರಾಗವಿಸರಪಿಂಜರಿತಂ,"[೫೬] ನಮಸ್ಕರಿಸಿದ ವೈರಿಗಳ ಕಿರೀಟದಿಂದ ಮಣಿಗಳುದುರೆ "ವೀರನಾರಾಯಣನ್ ಆ ತಾರಕಿತನಭದವೋಲ್ ಸೊಗಯಿಸುಗುಂ"[೫೭] ಎಂಬ

---

೩೭. ಕ.ಮಾ. ೧-೭೦

೩೮. ಕ.ಮಾ. ೧-೭೬

೩೯. ಕ.ಮಾ. ೧-೮೦

೪೦. ಕ.ಮಾ. ೧-೯೮

೪೧. ಕ.ಮಾ. ೧-೧೧೨

೪೨. ಕ.ಮಾ. ೧-೧೩೧

೪೩. ಕ.ಮಾ. ೨-೪

೪೪. ಕ.ಮಾ. ೨-೫

೪೫. ಕ.ಮಾ. ೨-೬

೪೬. ಕ.ಮಾ.೨-೯

೪೭. ಕ.ಮಾ. ೨-೨೩

೪೮. ಕ.ಮಾ. ೨-೪೭

೪೯. ಕ.ಮಾ. ೨-೮೮

೫೦. ಕಾ.ಲೋ.ಪ. ೧೩

೫೧. ಕಾ.ಲೋ.ಪ. ೯

೫೨. ಶ.ಮ.ದ.ಸೂ.೯

೫೩. ಶ.ಮ.ದ.ಸೂ. ೨೭ ವೃತ್ತಿ

೫೪. ಕ.ಮಾ. ೧-೧

೫೫. ಕ.ಮಾ. ೧-೩

೫೬. ಕ.ಮಾ. ೧-೧೦೨

೫೭. ಕ.ಮಾ. ೩-೧೮೦

ಅಲಂಕೃತ ಮಾತುಗಳಲ್ಲಿ ಈತನ ಕವಿಮನ ಪ್ರತಿಧ್ವನಿಸಿದೆ. ಇವಲ್ಲದೆ ನಿದರ್ಶನಾಲಂಕಾರ ಸಂದರ್ಭದ ಆರೆಂಟು ರಾಜನೀತಿ ಪದ್ಯಗಳು,[೫೮] ಉದಾತ್ತಾಲಂಕಾರ ಸಂದರ್ಭದ ನಾಲ್ಕಾರು ಲೋಕನೀತಿ ಪದ್ಯಗಳು,[೫೯] ಗುಣನಿರೂಪಣ ಸಂದರ್ಭದ ಕೆಲವು ಪ್ರಕೃತಿವರ್ಣನ ಪದ್ಯಗಳು ಒಂದರಮೇಲೊಂದು ಸಾಲುಗಟ್ಟಿ ಬಂದು, ಓದುಗರ ರಸಾನುಭೂತಿಯನ್ನು ಕೆಲಹೊತ್ತು ಉಳಿಸಿಕೊಡುತ್ತವೆ. ಒಟ್ಟು ಲಕ್ಷ್ಯಪದ್ಯಗಳಲ್ಲಿ ಕೆಲವನ್ನು ಬಿಟ್ಟರೆ ಅರ್ಧ ಶೃಂಗಾರ-ವಿರಹವರ್ಣನೆಗೆ, ಮಿಕ್ಕರ್ಧ ಪ್ರಕೃತಿವರ್ಣನೆಗೆ ಮೀಸಲು. ಹೀಗಾಗಿ ಶಾಸ್ತ್ರಜ್ಞನಾದ ಕವಿರಾಜ ಮಾರ್ಗಕಾರನ ಹೃದಯದಲ್ಲಿ ಒಬ್ಬ ರಸಿಕಕವಿ ಅಡಗಿರುವನೆನಿಸುತ್ತದೆ.

ಕವಿರಾಜಮಾರ್ಗಕಾರನು ವಾಮನನಂತೆ ಕೇವಲ ಪ್ರಾಚೀನ ಪದ್ಯಗಳನ್ನು ಕೊಟ್ಟು ತತ್ಪೂರ್ವದ ಸಾಹಿತ್ಯಲೋಕದ ಮುಚ್ಚಿದ ಬಾಗಿಲನ್ನು ತೆರೆದು ತೋರಿಸದೆ, ಕೆಲವು ಅನುವಾದ ಪದ್ಯಗಳೊಂದಿಗೆ ಸ್ವರಚಿತ ಪದ್ಯಗಳನ್ನು ಕೊಟ್ಟು, ತನ್ನ ಪ್ರತಿಭೆಯ ಪರಿಚಯವನ್ನೊದಗಿಸಿರುವನು. ಶುಷ್ಕಶಾಸ್ತ್ರಜ್ಞನಂತೆ ಕೇವಲ ತರ್ಕಲೋಕದಲ್ಲಿ ತಿರುಗಾಡದೆ, ಈ ಪದ್ಯಗಳಲ್ಲಿ ತಾನು ಕಂಡ ಸಮಾಜ, ಉಂಡ ಅನುಭವಗಳನ್ನು ಬಿತ್ತಿ ಬೆಳೆದಿರುವನು. ಹೀಗಾಗಿ ಪ್ರಾಚೀನಕರ್ನಾಟಕದ ಸಮಾಜ, ಸಂಸ್ಕೃತಿಗಳ ತಕ್ಕಮಟ್ಟಿನ ಅವಲೋಕನೆಗೆ ಈ ಕೃತಿ ಒಂದು ಸಣ್ಣ ಗವಾಕ್ಷವಾಗಿ ಪರಿಣಮಿಸಿದೆ. ಅದಕ್ಕಾಗಿ "India as known to Panini"[೬೦] "India in the time of Patanjali"[೬೧] ಎಂಬ ರೀತಿಯಲ್ಲಿ 'ಕವಿರಾಜಮಾರ್ಗಕಾರ ಕಂಡ ಕರ್ನಾಟಕ' ಎಂದೋ 'ಕವಿರಾಜಮಾರ್ಗಕಾರನ ಕಾಲದ ಕರ್ನಾಟಕ' ಎಂದೋ ಈ ಕೃತಿಯನ್ನು ಅಭ್ಯಸಿಸಬಹುದು. ಆದರೆ ಇದರ ಒಡಲಲ್ಲಿ ದಂಡಿಯ ಪಾಲೂ ಇರುವುದರಿಂದ ಇಂಥ ಅಭಿಪ್ರಾಯಕ್ಕೆ ಬರಲು ಸ್ವಲ್ಪ ವ್ಯತ್ಯಯವಾಗುತ್ತದೆ.[೬೨] ಕಾರಣ 'ಹರ್ಷಚರಿತ ಏಕ ಸಾಂಸ್ಕೃತಿಕ ಅಧ್ಯಯನ'[೬೩] ಎಂಬ ಮಾದರಿಯಲ್ಲಿ 'ಕವಿರಾಜಮಾರ್ಗ-ಒಂದು ಸಾಂಸ್ಕೃತಿಕ ವಿವೇಚನೆ' ಎಂದು ಅಭ್ಯಸಿಸಿ, ಅದರಲ್ಲಿ ಮೂಡಿದ ಸಮಾಜ, ಸಂಸ್ಕೃತಿಗಳ ಒಂದು ಸ್ಥೂಲಚಿತ್ರವನ್ನು ಹೀಗೆ ಬಿಡಿಸಬಹುದಾಗಿದೆ:

ವನ, ರಾಷ್ಟ್ರ, ಅದ್ರಿಗಳಿಂದ ಕೂಡಿದುದು ದೇಶ[೬೪] (ಉದಾ-ಭಾರತ); ದೇಶದ ಒಂದು ವಿಶಾಲ ಭಾಗ ರಾಷ್ಟ್ರ[೬೫] (ಉದಾ-ದಕ್ಷಿಣಾಪಥ); ರಾಷ್ಟ್ರದ ಒಂದು ಭಾಗ ನಾಡು[೬೬](ಉದಾ-ಕನ್ನಡ ನಾಡು); ನಾಡಿನ ಒಂದು ಭಾಗ ಜನಪದ ಅಥವಾ ವಿಷಯ[೬೭](ಉದಾ-ತರ್ದವಾಡಿ ವಿಷಯ).

---

೫೮. ಕ.ಮಾ. ೩-೧೪೩ ರಿಂದ ೧೫೧

೫೯. ಕ.ಮಾ. ೩-೧೭೪ ರಿಂದ ೧೭೯

೬೦. ಡಾ. ವ್ಹಿ.ಎಸ್. ಅಗರವಾಲ.

೬೧. ಡಾ. ಬಿ.ಎನ್. ಪುರಿ.

೬೨. ದಂಡಿ ಮತ್ತು ಮಾರ್ಗಕಾರರು ಒಂದೇ ಸಂಸ್ಕೃತಿಯ ಬುಡಕಟ್ಟಿಗೆ ಸೇರಿದವರು. ಇವರು ಬಾಳಿದ ಸ್ಥಳ, ಸಮಯಗಳಲ್ಲಿ ಅಂತರ ಬಹಳವಿಲ್ಲ. ಮೇಲಾಗಿ ದಂಡಿಯ ಕಾವ್ಯಾದರ್ಶದಲ್ಲಿ ಸಮಾಜದರ್ಶನ ಇಲ್ಲವೆನ್ನುವಷ್ಟು ಕಡಿಮೆ. ಅದಕ್ಕಾಗಿ ಒಟ್ಟು ಕವಿರಾಜಮಾರ್ಗವನ್ನಿಟ್ಟುಕೊಂಡು ಸಂಸ್ಕೃತಿಯ ರೂಪರೇಷೆಗಳನ್ನೆಳೆದರೂ ಅಷ್ಟಾಗಿ ವ್ಯತ್ಯಯ ಬರಲಿಕ್ಕಿಲ್ಲ.

೬೩. ಡಾ. ವ್ಹಿ.ಎಸ್. ಅಗರವಾಲ

೬೪. 'ದೇಶಂ [ವನ] ರಾಷ್ಟ್ರಾದಿ ನಿವೇಶಾಂತಂ'-ಕ. ಮಾ. ೧-೧೧೦

೬೫. 'ರಾಷ್ಟ್ರಂ ದಕ್ಷಿಣಾಪಥಾದಿಕಂ'-ಕಾವ್ಯಾದರ್ಶ ಟೀಕೆ (ರತ್ನಶ್ರೀಜ್ಞಾನ) ೩-೧೬೨

೬೬. 'ಕಾವೇರಿಯಿಂದಮಾ ಗೋದಾವರಿವರಮಿರ್ದ್ದ ನಾಡದಾ ಕನ್ನಡ'-ಕ.ಮಾ. ೧-೩೬

೬೭. 'ಆ ಕನ್ನಡದೊಳ್ ಭಾವಿಸಿದ ಜನಪದಂ'-ಕ.ಮಾ. ೧-336

'ಕಾವೇರಿಯಿಂದಮಾ ಗೋದಾವರಿವರಂ' ಕನ್ನಡನಾಡು ಮೈಚಾಚಿದೆ. ಇದರ ಹಲವು ಜನಪದಗಳಲ್ಲಿ ಒಂದು ಮಾತ್ರ 'ವಸುಧಾವಲಯವಿಲೀನವಿಶದವಿಷಯವಿಶೇಷಂ' ಎನಿಸಿದೆ. ಈ ಜನಪದದೊಳಗಿನ ಕಿಸುವೊಳಲ್, ಕೊಪಣನಗರ, ಪುಲಿಗೆಱೆ, ಒಂಕುಂದಗಳ ಮಧ್ಯಪ್ರದೇಶ 'ಕನ್ನಡದ ತಿರುಳ್'[68] ಆಗಿದೆ.

ಈ ತಿರುಳ್ಗನ್ನಡದ ಭಾಷೆ ಕನ್ನಡದ ಕೆನೆ. ಬರಿಸುವೆನ್, ಬರಿಪೆನ್, ಬರಿಪ್ಪೆನ್ ಇತ್ಯಾದಿಗಳು ಕನ್ನಡದ ದೇಶೀವಿಕಲ್ಪರೂಪಗಳು.[69] ಸ್ವಕೀಯವಾಗಿದ್ದರೂ ಕಾಲಧರ್ಮಕ್ಕೆ ಅನುಗುಣವಲ್ಲದ 'ಪಟಗನ್ನಡ'ದ ಬಳಕೆ ಅಮಾನ್ಯ;[70] ಪರಕೀಯವಿದ್ದರೂ ಕಾಲಧರ್ಮಕ್ಕೆ ಅನುಗುಣವಾದ ಸಂಸ್ಕೃತ, ಸಮಸಂಸ್ಕೃತಗಳ ಬಳಕೆ ಸರ್ವಮಾನ್ಯ.[71]

ಗುಣಸೂರಿ (ಗುಣಭದ್ರ?), ನಾರಾಯಣ (ಭಟ್ಟನಾರಾಯಣ?), ಭಾರವಿ, ಕಾಳಿದಾಸ, ಮಾಘರು ಸಂಸ್ಕೃತದ ಸುಪ್ರಸಿದ್ಧ ಪದ್ಯಕವಿಗಳು.[72] ಹರ್ಷಚರಿತ, ಕಾದಂಬರಿಗಳು ಸಂಸ್ಕೃತದ ಸುಪ್ರಸಿದ್ಧ ಗದ್ಯಕೃತಿಗಳು.[73] ಗದ್ಯಕಥೆ, ಚತ್ತಾಣ-ಬೆದಂಡೆಗಬ್ಬಗಳು ಕನ್ನಡದ ಸಾಹಿತ್ಯಪ್ರಕಾರಗಳು.[74] ಇವನ್ನು ಬಿತ್ತಿ ಬೆಳೆದವರು ವಿಮಲೋದಯ ನಾಗಾರ್ಜುನಾದಿಗಳು,[75] ಶ್ರೀವಿಜಯ ಕವೀಶ್ವರಾದಿಗಳು.[76] ಪಗರಣ ಒಂದು ರೂಪಕವಿಶೇಷ. ದೋಷವೆನಿಸುವ ಶ್ರುತಿಕಷ್ಟ ಈ ಪಗರಣದಲ್ಲಿ ಗುಣವೆನಿಸುತ್ತದೆ.[77]

ಅರಿತು ಮಾತನಾಡುವಲ್ಲಿ, ಅನ್ಯರು ಆಡಿದುದನ್ನು ಒರೆದು ನೋಡುವಲ್ಲಿ ಸಮರ್ಥರಾದ ಈ ಚದುರ ನಾಡವರು 'ಕುಱಿತೋದದೆಯುಂ ಕಾವ್ಯಪ್ರಯೋಗಪರಿಣತಮತಿಗಳ್'[78]. ಈ ಮಾತಿನ ಮರ್ಮ ಕಾವ್ಯಕರ್ಮಗಳಿಗೆ ಕಳಸವಿಟ್ಟಂತೆ. ಈ ಜನರು "ಸುಭಟರ್ಕಳ್, ಕವಿಗಳ್, ಸುಪ್ರಭುಗಳ್, ಚೆಲ್ವರ್ಕಳ್, ಅಭಿಜನರ್ಕಳ್, ಗುಣಿಗಳ್, ಅಭಿಮಾನಿಗಳ್, ಅತ್ಯುಗ್ರರ್, ಗಭೀರಚಿತ್ತರ್, ವಿವೇಕಿಗಳ್."[79]

"ವ್ಯಾಕರಣಕಾವ್ಯನಾಟಕಲೋಕಕಳಾಸಮಯಮಾದಳಂಕೃತಿ"[80] ಗಳಲ್ಲಿ ವ್ಯಾಕುಳನಲ್ಲದವನಿಗೆ ಮಾತ್ರ ಪ್ರವೇಶವೆನ್ನುವಷ್ಟರ ಮಟ್ಟಿಗೆ, ರಾಜಧಾನಿ (ಮಳಖೇಡ) ಪಂಡಿತರ ಪ್ರಸ್ಥಭೂಮಿಯೆನಿಸಿತ್ತು. "ಕವಿವೃಷಭರಾ ಪ್ರಯೋಗಂಗಳೊಳಂ ಕೃತಪರಿಚಯಬಲನಪ್ಪ"[81]ವನಿಗೆ ಮಾತ್ರ ರಾಜಸಭೆಯಲ್ಲಿ ಮನ್ನಣೆಯಿದ್ದಿತು. ಅರಿಭೂಪಾಲರು ಕಾಣಿಕೆಯಾಗಿ ಕಳಿಸುತ್ತಿರುವ ಆನೆಗಳ ಮದೋದಕದಿಂದ, ನರಲೋಕಚಂದ್ರನ ಮಂದಿರ ಎಲ್ಲ ಕಾಲಗಳಲ್ಲಿಯೂ ಕೆಸರುಗೊಳ್ಳುತ್ತಿತ್ತು.[82] ನಮಸ್ಕರಿಸಿದ ವೈರಿಗಳ ಶಿರೋಭೂಷಣದಿಂದ ಮುತ್ತು ಸಭಾಂಗಣದಲ್ಲಿ ಸುತ್ತಲೂ ಸುರಿಯುತ್ತಿರಲು, ವೀರನಾರಾಯಣನು ನಕ್ಷತ್ರಗಳಿಂದ ಶೋಭಿಸುವ ಆಕಾಶದಂತೆ ತೋರುತ್ತಿದ್ದನು.[83]

---

೬೮. ಕ.ಮಾ. ೧-೩೬, ೩೭

೬೯. ಕ.ಮಾ. ೨-೧೦೪, ೧೦೫, ೧೦೬.

೭೦. ಕ.ಮಾ. ೧-೪೯

೭೧. ಕ.ಮಾ. ೧-೫೧ ರಿಂದ ೬೧

೭೨. ಕ.ಮಾ. ೧-೩೧

೭೩. ಕ.ಮಾ. ೧-೨೬

೭೪. ಕ.ಮಾ. ೧-೨೭, ೩೩.

೭೫. ಕ.ಮಾ. ೧-೨೯

೭೬. ಕ.ಮಾ. ೧-೩೨

೭೭. ಕ.ಮಾ. ೧-೬೮

೭೮. ಕ.ಮಾ. ೧-೩೮;೩೯, ೪೦

೭೯.ಕ.ಮಾ. ೨-೨೮

೮೦. ಕ.ಮಾ. ೧-೬

೮೧. ಕ.ಮಾ. ೧-೫

೮೨. ಕ.ಮಾ. ೩-೧೮೧

೮೩. ಕ.ಮಾ. ೩-೧೮೦

ಪ್ರತಿಭೆ-ಪಾಂಡಿತ್ಯ, ಪರಾಕ್ರಮ-ಪ್ರಜಾಪ್ರೇಮಗಳ ಸಂಕೇತವೆನಿಸುವ ಪರಮಸರಸ್ವತೀ ತೀರ್ಥಾವತಾರ, ಅಮೋಘವರ್ಷ, ವೀರನಾರಾಯಣ ಮೊದಲಾದುವು ನೃಪತುಂಗನ ಬಿರುದುಗಳು. 'ನೃಪತುಂಗದೇವಮತ' 'ನೃಪತುಂಗದೇವವಿದಿತಕ್ರಮ' 'ನುತಸರಸ್ವತೀತೀರ್ಥಾವತಾರಮಾರ್ಗ' ಗಳಲ್ಲಿಯ ಮತ, ಕ್ರಮ, ಮಾರ್ಗ ಎಂಬಿವು, ಕಾವ್ಯಮೀಮಾಂಸೆಗೆ ಸಂಬಂಧಿಸಿದಂತೆ ಈತನವೇ ಆದ ಕೆಲವು ವಿಶೇಷವಿಚಾರಗಳಿದ್ದುದರ ಸೂಚನೆಗಳು. ವಿದ್ವಾಂಸರು ಹೇಳುವಂತೆ ಎರಡನೆಯ ಪರಿಚ್ಛೇದದ ೮೦, ೧೨೭, ಮೂರನೆಯ ಪರಿಚ್ಛೇದದ ೩೦, ೪೨-೪೪, ೧೧೦, ೧೧೨, ೧೩೦, ೧೪೪-೧೫೨, ೧೫೫, ೧೫೭, ೧೬೨, ೧೮೧, ೧೯೭ನೆಯ ಪದ್ಯಗಳು ನೃಪತುಂಗನ ರಾಜಕೀಯ ಜೀವನದ ವಿವಿಧ ಪ್ರಸಂಗಗಳ ಸೂಚನೆಯಾಗಿರಬೇಕು.[೮೪] ಇದಲ್ಲದೆ,

ನೃಪನನಭಿಮಾನಧನನ ಅ।ನುಪಮನನತಿಶಯವಿಶಾಲಕೀರ್ತಿಧ್ವಜನಾ।
ನುಪಚಿತಗುಣನಾನುಚಿತನ।ನಪೇತ ದೋಷನನುದಾರಚರಿತೋದಯನಂ॥[೮೫]

ನೃಪತೀ ಪರೋಪಕಾರೀ।ವಿಪುಳಗುಣೀ ವಿಶದಶಶಧರಾಯತಕೀರ್ತೀ।
ವ್ಯಪಗತಭಯಾ ದಯಾಲೂ । ರಿಪುವರ್ಗಮನಲೆದು ಗೆಲ್ವೆಯಾಗಾಹವದೊಳ್॥[೮೬]

ವಿಪುಳತರಕಟಕನುದ್ಯದ್।ದ್ವಿಪಹ[ರಿ]ಮಹಿಷೀ ನಿಷೇವ್ಯನುನ್ನತಪಾದಂ।
ವ್ಯಪನೀತಶ್ರೀಫಲದಂ। ವಿಪರೀತಕನಪ್ಪನಂತು ಭೂಭೃನ್ನಾಥಂ॥[೮೭]

ಈ ಪದ್ಯಗಳಲ್ಲಿ, ಆ ಕಾಲದ ಜನತೆ ಅರಸನಲ್ಲಿ ಅಪೇಕ್ಷಿಸುತ್ತಿದ್ದ ರಾಜ್ಯಸಂಪತ್ತು, ಶೌರ್ಯಸಂಪತ್ತು, ಸದ್ಗುಣಸಂಪತ್ತುಗಳು ನೆಲೆನಿಂತಿವೆ.

ಅರಸುಕುಮಾರನನ್ನು ಕಡೆಗಣ್ಣಿನಿಂದ ನೋಡಿ ನಾನು ಪರಿಗತ ನಗೆಯಿಂದಿದ್ದೆನು.[೮೮] ಅರಸನು ಪರಿವಾರದ ವಾರವನಿತೆಯರೊಡನೆ ಅರಮನೆಯಲ್ಲಿದ್ದನು.[೮೯] ನೃಪನನ್ನು, ನೃಪನಂದನರನ್ನು ನೃಪವಧುಗಳು ನೆರೆದು ಸುಖಿಯಿದ್ದರು.[೯೦] ಧರಾಧಿಪನು ಲೋಲಲೋಚನಯುಗೆಯನ್ನು ನೋಡಿದನು.[೯೧] ವಿನಿಮೀಳಿತಲೋಲಲೋಚನೆಯನ್ನು ಜನಪತಿಯು ಬಾಹುಗಳಿಂದ ಬಿಗಿಯಪ್ಪಿದನು...[೯೨] ಇದು ರಾಜರ ಶೃಂಗಾರಜೀವನ. "ಅರಸರ್ ಸರಸಮನಱಿವರೆ ಸರಸಮನಾಡರಸರಲ್ಲದವರೊಳ್ ಮಗಳೆ"[೯೩] ಎಂಬುದು ಅರಸರ ಅರಸಿಕತೆಯ, "ಪರಿಜನಮಂ ಹುಡುಕಿ...... ಈಗಲೇ ನಿನ್ನರಸಿಯನ್ನು ನನ್ನ ಕೈವಶಗೊಳಿಸು"[೯೪] ಎಂಬುದು ಅರಸರ ಸ್ತ್ರೀಲಂಪಟತ್ವದ ಸೂಚನೆಗಳು.

ಕೃತಕಾದ್ರಿ, ಅರಮನೆ, ಕಂದುಕಕ್ರೀಡೆ, ಉದ್ಯಾನ, ಅಂತಃಪುರಗಳು ಅರಸರ ವಿಲಾಸಸ್ಥಳಗಳು; ವಿಲಾಸವಸ್ತುಗಳು.[೯೫] ಜನಪತಿಗೆ ಪುರಜನರು ಒಸಗೆಯನ್ನು ಬೀರುವಾಗ ಧ್ವಜಸಮೂಹ ಉತ್ಸಾಹದಿಂದ ಕುಣಿಯುತ್ತಿದ್ದವು.[೯೬] 'ಮಹೋತ್ಸವ'ಪ್ರಸಂಗದಲ್ಲಿ ಅರಸ-ಅರಸಿಯರು ಪರಿಜನರೊಂದಿಗೆ ಸಂತೋಷದಿಂದ

---

೮೪. ಕ.ಮಾ. ವಿವೇಕ (ಶ್ರೀ ಮುಳಿಯ); ಕ.ಮಾ. ಟಿಪ್ಪಣಿಗಳು (ಎಂ.ವಿ. ಸೀತಾರಾಮಯ್ಯ)
೮೫. ಕ.ಮಾ. ೨-೧೭
೮೬. ಕ.ಮಾ. ೨-೨೪
೮೭. ಕ.ಮಾ. ೩-೧೧೦
೮೮. ಕ.ಮಾ. ೧-೫೯
೮೯. ಕ.ಮಾ. ೨-೧೨
೯೦. ಕ.ಮಾ. ೨-೨೧
೯೧. ಕ.ಮಾ. ೨-೫೮
೯೨. ಕ.ಮಾ. ೨-೭೬
೯೩. ಕ.ಮಾ. ಅನು ಪು. ೧(ಎಂ.ವಿ. ಸೀತಾರಾಮಯ್ಯ)
೯೪. ಕ.ಮಾ. ೨-೧೪೧
೯೫. ಕ.ಮಾ. ೧-೯೯
೯೬. ಕ.ಮಾ. ೧-೯೬

ಕುಣಿಯುತ್ತಿದ್ದರು.[೯೭] ಅರಸನು ಇಂದು ಮನೆಗೆ ಬರುವನೆಂದು ತಿಳಿದು ಅನೇಕ ವಸ್ತುವಾಹನಗಳನ್ನರ್ಪಿಸಲು ಸಿದ್ಧನಾಗಿದ್ದೆನು.[೯೮] ಬಂದುವು ಪಾವುಡಂ ನೃಪತಿಗೆ, ಭೂಪತಿಗೆ ಕಪ್ಪವನೀಗ್[೯೯]- ಎಂಬಿವು ಅರಸನು ಪಡೆಯುತ್ತಿದ್ದ ಕಾಣಿಕೆಗಳು. ಅರಸನಿಂದ ನನ್ನ ಗಂಡಾಂತರವನ್ನು ಪರಿಹರಿಸಿಕೊಳ್ಳುವೆನು,[೧೦೦] 'ಅರ್ಥಿಗಣಾರ್ಥಿತ ಕಲ್ಪವೃಕ್ಷ'ನಾದ ಅರಸನಿಂದ ಅರ್ಥ (ಧನ)ವನ್ನು ಬೇಡುವೆನು[೧೦೧] - ಎಂಬಿವು ಅರಸನು ನೀಡುತ್ತಿದ್ದ ಅಭಯದಾನ, ಅರ್ಥದಾನಗಳು.

'ನೃಪತಿ......ಗೆಲ್ವೆಯಾಗಾಹವದೊಳ್',[೧೦೨] 'ಅರಿನೃಪಬಲಮಂ ಗೆಲ್ದು.....ಶೌರ್ಯಮಂ ಪ್ರಕಟಿಸು'[೧೦೩] ಎಂದು ಜನತೆ ಅರಸನಿಗೆ ಜಯವನ್ನು ಹಾರೈಸುತ್ತಿದ್ದರು.

ಪೊಳೆವ ಮಿಂಚುಗಳಂತಿರೆ ಕೇತುಗಳ್।
ಜಳದ ವೃಂದದವೋಲಿರೆ ಹಸ್ತಿಗಳ್।
ಗಳಿತ ಧಾರೆಗಳಂತಿರೆ ಪತ್ತಿಗಳ್।
ಬಳಸಿ ಕಾರ್ಗೆಣೆಯಾಯ್ತು ಮಹಾಹವಂ।[೧೦೪]

ಇದು ರಣಭೂಮಿಯ ರುದ್ರಸಂದರ್ಭ. "ಕುದಿಕುದಿದತ್ತಣಿಂ ಕುದುರೆ ನೂಱಿಜೊಳಾ ಬಲದಾನೆ ಪತ್ತುತಾಗಿದುವು"[೧೦೫]- ಇದು ಹಯ, ಗಜ ಯುದ್ಧಸನ್ನಿವೇಶ.

ಮಸಗಿ ಬೆಸೆದಿರ್ದು ವಿವರಮ। ನಸಿಯದಱಿಡೆವೊತ್ತಿ ಪೊಕ್ಕು ಕೆಲನಂ ಕೊರ್ಬು।
ತ್ತೆಸೆದು ಬಿದಿರ್ದಾರ್ದುಮೇಟಿಟಿಟ್ಗೆ ಸಮಂಜಸನಿಕ್ಕಿ ಮಿಕ್ಕನರಿವಾಹಿನಿಯಂ॥

ಇದು ವೀರಯೋಧನ ವೀರಪ್ರಸಂಗ.[೧೦೬] ಸಿದ್ಧವಾದ ಆನೆಯನ್ನು ಅರಸನೇ ಏರುವನೆಂದು ಆನೆಯವರು ಡಂಗುರ ಸಾರಿರಿ;[೧೦೭] ನಮ್ಮ ಸೈನ್ಯಸಮೂಹ ಒಡೆಯದಂತೆ ಸುಭದ್ರವಾಗಿ ನಿಲ್ಲಲು ಹೇಳಿರಿ[೧೦೮] ಎಂಬಿವು ಸಮರಸಂದರ್ಭದ ಆದೇಶಗಳು. ವೈರಿಗೆ ಸುರಾಂಗನಾಸುರತಸುಖವನ್ನು ಕೊಟ್ಟನು;[೧೦೯] ವೈರಿಸಮೂಹವನ್ನು ಕೊಂದು ಅವರಿಗೆ ಸುರಸುಂದರಿಯ ಸಂಗವನ್ನು ನೆರವೇರಿಸಿದನು[೧೧೦] ಎಂಬ ಮಾತುಗಳು ಆ ಕಾಲದಲ್ಲಿ ಬಿರುಗಾಳಿಯಾಗಿ ಬೀಸುತ್ತಿದ್ದ 'ಜಿತೇನ ಲಭ್ಯತೇ ಲಕ್ಷ್ಮೀ ಹತೇನಾಪಿ ಸುರಾಂಗನಾ' ಎಂಬ ಧ್ಯೇಯಕ್ಕೆ ಸಾಕ್ಷಿಗಳು. "ಆಯುಧಯುಕ್ತನಂ..... ಮೆಚ್ಚದರಾರ್"[೧೧೧] ಎಂಬ ಮಾತು ಆ ಕಾಲದಲ್ಲಿ ಆಯುಧವನ್ನಾಶ್ರಯಿಸಿದವನನ್ನು ಜನತೆ ಗೌರವದಿಂದ ಕಾಣುತ್ತಿದ್ದುದರ ಗುರುತು. ಬಿಸುಡಾಯುಧಮಂ, ಪುಲ್ಲಂ ಕರ್ಚು, ಏರು ಪುತ್ತಮಂ, ಅಡಿಗೆಱಗು, ನಿಲ್ಲದೆ ತೊಲಗು-ಎಂಬಿವು ಜೀವಗಳ್ಳ ಪರಾಜಿತನು ಅನುಸರಿಸುವ ವಿಧಾನಗಳು.[೧೧೨]

೯೭. ಕ.ಮಾ. ೧-೧೨೧
೯೮. ಕ.ಮಾ. ೨-೩೩
೯೯. ಕ.ಮಾ. ೧-೧೧೫, ೧೧೮.
೧೦೦. ಕ.ಮಾ. ೧-೧೧೫
೧೦೧. ಕ.ಮಾ. ೨-೧೦೨
೧೦೨. ಕ.ಮಾ. ೧-೨೪
೧೦೩. ಕ.ಮಾ. ೧-೮೨
೧೦೪. ಕ.ಮಾ. ೧-೧೪೪
೧೦೫. ಕ.ಮಾ. ೧-೧೨೦
೧೦೬. ಕ.ಮಾ. ೧-೬೬
೧೦೭. ಕ.ಮಾ. ೧-೧೩೪
೧೦೮. ಕ.ಮಾ. ೧-೧೩೦
೧೦೯. ಕ.ಮಾ. ೧-೧೫೯
೧೧೦. ಕ.ಮಾ. ೨-೮೦
೧೧೧. ಕ.ಮಾ. ೧-೧೨೩
೧೧೨. ಕ.ಮಾ. ೩-೧೯೯

ಕಪಿಲ(ಸಾಂಖ್ಯದರ್ಶನ), ಬುದ್ಧ (ಬೌದ್ಧದರ್ಶನ), ಕಣಚರ (ವೈಶೇಷಿಕ ದರ್ಶನ) ಮತ್ತು ಚಾರ್ವಾಕ (ಲೋಕಾಯುತ ದರ್ಶನ)ರ ಮತಗಳು ಆ ಕಾಲದ ಸುಪ್ರಸಿದ್ಧ ಸಮಯಪ್ರಭೇದಗಳು.[೧೧೩] ಜಿನಾಧಿಪಾ ನಿನ್ನ ಧ್ಯಾನದಿಂದ ಪಾಪ ಪರಿಹಾರವಾಗುವುದು.[೧೧೪] ಜಿನನ ಚರಣನಖದರ್ಪಣವು ಮನದಲ್ಲಿ ಸ್ಥಿರ ನಿಲ್ಲಲಿ[೧೧೫] ಎಂಬಿವು ಜನತೆಯ ಮೇಲಾದ ಜೈನಪ್ರಭಾವಕ್ಕೆ;ಅರಸರಿಗೆ ಗೊರವರು ಕೃಪೆನೀಡಲಿ[೧೧೬] ಎಂಬುದು ಲಕುಲೀಶ-ಪಾಶುಪತರ ರಾಜಗುರುತ್ವಕ್ಕೆ ಸೂಚನೆಗಳು. ರಾಮಾಯಣ[೧೧೭]-ಮಹಾಭಾರತ (?)[೧೧೮] ಸಂದರ್ಭಗಳು, ವಿಷ್ಣುಲಕ್ಷ್ಮಿಯರ ಪ್ರಸಂಗಗಳು,[೧೧೯] ಇಂದ್ರ ಅಗ್ನಿ ಯಮ ನೈಋತ್ಯ ವರುಣ ವಾಯು ಯಕ್ಷ ಈಶಾನರೆಂಬ ಅಷ್ಟದಿಕ್ಪಾಲಕರ ಉಲ್ಲೇಖಗಳು[೧೨೦] ವೈದಿಕದ ಕುರುಹುಗಳು.

ಬ್ರಾಹ್ಮಣರಿಗೆ ಅಧ್ಯಯನ, ಅರಸರಿಗೆ ಭೂರಕ್ಷಣೆ, ವ್ಯಾಪಾರಿಗಳಿಗೆ ಪಶುಪಾಲನೆ, ಕುಡಿಯರಿಗೆ ನೆಲ ಉಳುವುದು ಬರೆದುಕೊಟ್ಟ ಕರ್ತವ್ಯಗಳು.[೧೨೧] ಕ್ಷೌರ ಮಾಡಿಸಿಕೊಂಡು ಮುಹೂರ್ತ ಕೇಳುವವನು ಮೂರ್ಖನೇ ಸರಿ.[೧೨೨] ರೋಗವರಿಯದೆ ಔಷಧ ಕೊಡುವ ವೈದ್ಯನು ಮಂದಮತಿಯೇ ಸರಿ.[೧೨೩] ದನಗಾಹಿ, ಜೂಜುಗಾರ, ಬಾಹ್ಲೀಕರ ಮಾತು ಗ್ರಾಮ್ಯ.[೧೨೪] ಕುಂಬಾರರ ಮನೆಯಲ್ಲಿ ತಿಗರಿ ಧ್ವನಿಗುಡುತ್ತಿತ್ತು.[೧೨೫] ನೆಲ್ಲನ್ನು ಹುರಿದು ಮಾರದೆ ಕಾಣದಂತೆ ಅಂಗಡಿಯಲ್ಲಿರಿಸು[೧೨೬]- ಇವು ಜನತೆಯ ವಿವಿಧ ಉದ್ಯೋಗಗಳು.

ಗಂಡನೊಂದಿಗೆ ಸುರತಸುಖದಲ್ಲಿದ್ದ ಸ್ತ್ರೀ, ಈ ಹಿಂದೆ ಪರಪುರುಷರೊಂದಿಗಿನ ತನ್ನ ಕಾಮಕೂಟವನ್ನು ಮರೆಯಲು ಪ್ರಯತ್ನಿಸಿದಳು;[೧೨೭] 'ಮುನಿವರನೊಳ್ ಪರಮಭಗಸಹಿತೆ' ಮುದದಿಂದ ಇದ್ದಳು;[೧೨೮] 'ಜರದ್ವಧೂವಿಷಯಸುರತ' ಅಸುಖವಾದುದು;[೧೨೯] 'ದುರ್ಜನದೊಳಾದಾ ಪರಿಚಯಂ' ಕುಲವಧುವನ್ನು ಅಗೌರವಗೊಳಿಸುತ್ತದೆ[೧೩೦] ಎಂಬಿವು ಸಮಾಜದ ಲೈಂಗಿಕ ವಾಮಾಚಾರಕ್ಕೆ ನಿದರ್ಶನ. 'ಪ್ರೌಢೆಯಾದ ವೇಶ್ಯೆಯನ್ನು ಸಂಭೋಗಿಸಿ ಕೃತಾರ್ಥನಾದೆ',[೧೩೧]'ವರವಾರನಾರಿಯೊಳ್ ನೆರೆದೆ'[೧೩೨] ಎಂಬಿವು ಸಾಮಾನ್ಯ ವೇಶ್ಯಾಪದ್ಧತಿಯನ್ನು; 'ಪರವಾರನಾರಿಯೊಳ್ ನೆರೆದೆ'[೧೩೩] ಎಂಬುದು ವೈಯಕ್ತಿಕ ಸೂಳೆಪದ್ಧತಿಯನ್ನು ಹೇಳುತ್ತದೆ. ದೋಷವನ್ನು ಮದಿರಾಪರವಶನು ಹೇಳುತ್ತಾನೆ,[೧೩೪] 'ಮದಿರಾಮದವಾಗಿಸೆ ತೆಗಟ್ಟಿನಾಕೆಯ ನುಡಿಯೊಳ್, ಕೆಳದೀ ನಿನ್ನ...... ಮದಿರಾರುಣೇಕ್ಷಣಂ...... ತಳಮಳಗೊಳಿಸುಗುಂ,[೧೩೫] ಎಂಬ ಮಾತುಗಳಿಂದ ಸ್ತ್ರೀ-ಪುರುಷರಿಬ್ಬರೂ ಮದಿರೆಯನ್ನು ಸೇವಿಸುತ್ತಿದ್ದರೆಂದು ತಿಳಿದುಬರುತ್ತದೆ.

---

೧೧೩. ಕ.ಮಾ. ೧-೧೦೫
೧೧೪. ಕ.ಮಾ. ೧-೯೧
೧೧೫. ಕ.ಮಾ. ೩-೧೮
೧೧೬. ಕ.ಮಾ. ೧-೧೩೨, ೧೩೩
೧೧೭. ಕ.ಮಾ. ೨-೩೮, ೨-೪೦, ೨-೪೨, ೨-೮೯, ೨-೯೧, ೨-೯೩, ೨-೯೬, ೨-೧೩೦, ೩-೧೮೯, ೩-೧೯೦, ೩-೧೯೪
೧೧೮. ಕ.ಮಾ. ೨-೧೪
೧೧೯. ಕ.ಮಾ. ೧-೧
೧೨೦. ಕ.ಮಾ. ೩-೯೬
೧೨೧. ಕ.ಮಾ. ೧-೬೫
೧೨೨. ಕ.ಮಾ. ೩-೧೪೪
೧೨೩. ಕ.ಮಾ. ೩-೧೫೧
೧೨೪. ಕ.ಮಾ. ೨-೮೨
೧೨೫. ಕ.ಮಾ. ೩-೧೧೧
೧೨೬. ಕ.ಮಾ. ೨-೧೩೭
೧೨೭. ಕ.ಮಾ. ೩-೧೯೬
೧೨೮. ಕ.ಮಾ. ೧-೬೪
೧೨೯. ಕ.ಮಾ. ೧-೫೦
೧೩೦. ಕ.ಮಾ. ೧-೧೧೨
೧೩೧. ಕ.ಮಾ. ೩-೧೨೮
೧೩೨. ಕ.ಮಾ. ೨-೧೩೭
೧೩೩. ಕ.ಮಾ. ೨-೧೩೭
೧೩೪. ಕ.ಮಾ. ೧-೮೦
೧೩೫. ಕ.ಮಾ. ೩-೯, ೧೯೨

ಸೊಗಯಿಸುವ ವಚನರಚನೆ 'ಹೃದಯದೊಳೆ ತಾಳ್ದ' ಮಣಿಹಾರ;[೧೩೬] ಕಣ್ಣುಗಳು ತಮ್ಮ ಕಾಡಿಗೆಯನ್ನು ಕಾಣದಂತೆ ವ್ಯಕ್ತಿಗೆ ತನ್ನ ದೋಷ ತನಗೆ ಕಾಣಿಸದು;[೧೩೭] ಅನುಗುಣವಿಲ್ಲದ ಪದ ಜೋಡಣೆ ಮುತ್ತು ಮೆಣಸು ಪವಣಿಸಿದಂತೆ;[೧೩೮] ಸಂಸ್ಕೃತ ಸಮಾಸಪದ ಮತ್ತು ಕನ್ನಡಪದಗಳ ಜೋಡಣೆ 'ಕನಕರಚನೆಯೊಳ್ ಮಣಿನಿಕರಂ' ಹೊಂದಿದ ಹಾಗೆ;[೧೩೯] ಶ್ರೀಗಂಧವನ್ನು ಲೇಪಿಸಿಕೊಂಡ, ಧವಳಾಭರಣಗಳನ್ನು ಧರಿಸಿದ, ದುಕೂಲವಸ್ತ್ರವನ್ನುಟ್ಟ ಸ್ತ್ರೀಯನ್ನು ನೋಡಿದೆನು;[೧೪೦] ನೂಪುರಸಮ ಸ್ವರ ಕೇಳಿಬರುವುದರಿಂದ ಅವು ಬಿಳಿಮೋಡಗಳಲ್ಲ, ಹಂಸಗಳು;[೧೪೧] ದೃಷ್ಟಾಂತವು 'ಕನ್ನಡಿ ಕಮನೀಯಾಕಾರಬಿಂಬಮಂ' ತಾಳುವಂತೆ ಸೊಗಯಿಸುತ್ತದೆ[೧೪೨]- ಎಂಬ ಮಾತುಗಳಲ್ಲಿ ಆ ಕಾಲದ ವೇಷಭೂಷಣಗಳ ಕೆಲಮಟ್ಟಿನ ವಿವರಣೆಯಿದೆ.

ಅರಿಸಮಾಸವು ಸುಡುವ ಹಾಲಿಗೆ ಮಜ್ಜಿಗೆ ಬೆರಸಿದಂತೆ;[೧೪೩] ಅನುಗುಣವಿಲ್ಲದ ಪದಸಂಯೋಜನೆ ನೆಲ್ಲುಮೊಸರು ಕುಡಿದಂತೆ;[೧೪೪] ತಂದ ಕೂಳನ್ನು ಊ ಸಂಗಮದಲ್ಲಿ ಊಟ ಮಾಡಿರಿ;[೧೪೫] ಪಶುವಿಗೆ ತೃಣ ಸಸಿಗಳು ಒಂದೇ;[೧೪೬] ಸಮಾಸದ ಮುಂದೆ ಬಂದ ಅಸಮಾಸ ಕಬ್ಬಿನ ತುದಿಯಂತೆ ರಸಹೀನ;[೧೪೭] ತಾಳವೃಕ್ಷಗಳಲ್ಲಿ ಬೇತಾಳಗಳು ಕೂಗುತ್ತಿದ್ದವು;[೧೪೮] ನೆಲ್ಲು ಇಟ್ಟುಕೊಂಡು ಪೊಳ್ಳ (ಹೊಳ್ಳ)ನ್ನು ಕಳೆಯುವಂತೆ ಗುಣವನ್ನು ಇಟ್ಟುಕೊಂಡು ದೋಷವನ್ನು ದೂರಗೊಳಿಸಬೇಕು;[೧೪೯] ಬೆಳೆದ ಕಳಮೆಗಳು ವಿಲಾಸವತಿಯರಿಗೆ ಒಸಗೆ ನೀಡುತ್ತವೆ;[೧೫೦] ದಾಂಗುಡಿವಿಡುವಂತೆ ಮಾತು ಸುಂದರವಾಗಿ ಮುಂದುವರಿಯಬೇಕು;[೧೫೧] ಎರಡು ಕ್ರಿಯಾವಿಶೇಷಣಗಳ ಜೊತೆಯ ಒಂದು ಕ್ರಿಯಾಪದ ಎರಡು ಕವಿಲೆಗಳ ಮಧ್ಯದ ಒಂದು ಕರುವಿನಂತೆ;[೧೫೨] ಸಂಸ್ಕೃತಾವ್ಯಯ ಮತ್ತು ಕನ್ನಡಪದಗಳ ಬೆರಕೆ ಕರಡೆಯ ಮದ್ದಳೆಯ ಧ್ವನಿಯಂತೆ ಕರ್ಕಶ;[೧೫೩] ಸಮಾಸವಾಗಿ ಬಂದ ಸಂಸ್ಕೃತಾವ್ಯಯ ಮತ್ತು ಕನ್ನಡಪದಗಳ ಬೆರಕೆ ಮೃದಂಗಸಂಗೀತದ ಧ್ವನಿಯಂತೆ ಮಧುರ[೧೫೪] ಎಂಬ ಹೇಳಿಕೆಗಳು ಆ ಕಾಲದ ಊಟ, ಬೆಳೆ, ವಾದ್ಯಗಳನ್ನು ನೆನಪಿಗೆ ತರುತ್ತವೆ.

ಹೀಗೆ ಕವಿರಾಜಮಾರ್ಗ, ಶಾಸನಗಳನ್ನು ಬಿಟ್ಟರೆ ಪಂಪಪೂರ್ವಯುಗದ ಕನ್ನಡಿಗರ ಬದುಕನ್ನು ಬಿಂಬಿಸುವ ಏಕೈಕ ಕೈಗನ್ನಡಿಯಾಗಿದೆ;ಪ್ರಾಚೀನ ಕರ್ನಾಟಕ ಸಂಸ್ಕೃತಿಯ ಸಂಕ್ಷಿಪ್ತ ಕೈಪಿಡಿಯಾಗಿದೆ. ಈ ಕೈಪಿಡಿಯ ಪುಟಪುಟದಲ್ಲಿ ಪ್ರವಹಿಸುವ ಹಲವು ಮಹತ್ವದ ಅಂಶಗಳನ್ನು ಅರಿಯುವ ಮೊದಲು ಅದರ ಕರ್ತೃವಿಚಾರವನ್ನು ಒರೆಹಚ್ಚಿ ನೋಡುವುದೂ ಅಷ್ಟೇ ಮಹತ್ವದ ಅಂಶವಾಗಿದೆ.

❖❖

---

೧೩೬. ಕ.ಮಾ. ೧-೧೩
೧೩೭. ಕ.ಮಾ. ೧-೪೫
೧೩೮. ಕ.ಮಾ. ೨-೫
೧೩೯. ಕ.ಮಾ. ೧-೬೧
೧೪೦. ಕ.ಮಾ. ೩-೯೩
೧೪೧. ಕ.ಮಾ. ೩-೧೦೩
೧೪೨. ಕ.ಮಾ. ೩-೧೪೨
೧೪೩. ಕ.ಮಾ. ೧-೫೮
೧೪೪. ಕ.ಮಾ. ೨-೪
೧೪೫. ಕ.ಮಾ. ೧-೬೩
೧೪೬. ಕ.ಮಾ. ೧-೮
೧೪೭. ಕ.ಮಾ. ೨-೮೮
೧೪೮. ಕ.ಮಾ. ೩-೧೯೩
೧೪೯. ಕ.ಮಾ. ೧-೧೩೧
೧೫೦. ಕ.ಮಾ. ೩-೧೬೬
೧೫೧. ಕ.ಮಾ. ೧-೧೪೯
೧೫೨. ಕ.ಮಾ. ೨-೯
೧೫೩. ಕ.ಮಾ. ೧-೫೩
೧೫೪. ಕ.ಮಾ. ೧-೫೫

ಕವಿರಾಜಮಾರ್ಗದ ಕರ್ತೃ

ಕವಿರಾಜಮಾರ್ಗದ ಕರ್ತೃವಿಚಾರ ಕನ್ನಡ ಸಂಶೋಧನೆಯ ಇತಿಹಾಸದಲ್ಲಿ ಒಂದು ಜ್ವಲಂತ ಪ್ರಶ್ನೆಯಾಗಿ ನಡೆದುಬಂದಿದೆ. ಕಳೆದ ನೂರೈವತ್ತು ವರ್ಷಗಳ ಈ ಆಹ್ವಾನವನ್ನು ಬಿಡಿಸುವಲ್ಲಿ ಪಂಡಿತರು ಮಾಡಿದ ತರ್ಕ, ಹೂಡಿದ ಆಧಾರ, ನೀಡಿದ ನಿರ್ಣಯಗಳ ಮೂಲಕ ಪರಿಹಾರವಾಗಬೇಕಿದ್ದ ಪ್ರಶ್ನೆ ಇನ್ನೂ ಜಟಿಲಗೊಂಡಿದೆ. ಇದರ ಸ್ಥೂಲ ಇತಿಹಾಸ ಹೀಗಿದೆ:

ಎಚ್.ಎಚ್. ವಿಲ್ಸನ್ ಅವರು ಕ್ರಿ.ಶ. ೧೮೨೮ರಲ್ಲಿ ಸಿದ್ಧಪಡಿಸಿದ 'ಕರ್ನಲ್ ಮೆಕಂಝಿ ಸಂಗ್ರಹಿತ ಹಸ್ತಪ್ರತಿಗಳ ಸೂಚಿ'ಯಲ್ಲಿ ತುಂಗದೇವಕೃತ 'ಕವಿರಾಜಮಾರ್ಗ' ಎಂಬ ಉಲ್ಲೇಖ ಬರುತ್ತದೆ.[೧] ಹೀಗೆ ಕವಿರಾಜಮಾರ್ಗದ ಹಸ್ತಪ್ರತಿ ಕ್ರಿ.ಶ. ೧೮೨೮ರ ಸುಮಾರಿಗೆ ಮೊಟ್ಟಮೊದಲು ವಿದ್ವಾಂಸರ ಗಮನಕ್ಕೆ ಬಂದಿದ್ದರೂ ಅದು ಎಲ್ಲರ ಗಮನ ಸೆಳೆದು ಚರ್ಚೆಯ ವಿಷಯವಾದುದು, ಶ್ರೀ ಬಿ.ಎಲ್. ರೈಸ್ ಅವರ 'Early History of Kannada Literature' (೧೮೯೦)[೨] ಎಂಬ ಲೇಖನದ ಮೂಲಕ. ೧೪ ಪುಟಗಳ ಈ ಲೇಖನದಲ್ಲಿ ಕವಿರಾಜಮಾರ್ಗ ವಿವೇಚನೆಗೆ ನಾಲ್ಕು ಪುಟಗಳು ಮೀಸಲಾಗಿದ್ದು, ಅಲ್ಲಿ ಇದರ ಕರ್ತೃ ನೃಪತುಂಗನೆಂದು ಹೇಳಲಾಗಿದೆ. ಈ ಲೇಖನ ಅದೇ ವರುಷ ಪ್ರಕಟವಾದ 'ಕರ್ಣಾಟಕ ಶಬ್ದಾನುಶಾಸನ'ದ ಮುನ್ನುಡಿಯಾಗಿ ಬಳಸಲ್ಪಟ್ಟು, ಕವಿರಾಜಮಾರ್ಗದ ಹೆಸರು ಹೆಚ್ಚು ಪ್ರಚಾರಕ್ಕೆ ಬಂದಿತು.

ಎಂಟು ವರುಷಗಳ ತರುವಾಯ ಶ್ರೀ ಕೆ.ಬಿ. ಪಾಠಕ ಅವರು 'Nriapatunga's Kavirajamarg' ಎಂಬ ಸುದೀರ್ಘ ಲೇಖನ (೧೮೯೮)[೩] ಬರೆದು, ನೃಪತುಂಗನ ಕರ್ತೃತ್ವವನ್ನು-ಶ್ರೀವಿಜಯವೆಂಬುದು ಈತನ ಬಿರುದಾಗಿರಬಹುದೆಂದು ಅಡಿಯಲ್ಲಿ ಊಹಿಸಿ-ಹಲವು ದೃಷ್ಟಿಗಳಿಂದ ಪೋಷಿಸಿದರು. ಈ ಲೇಖನ ಅದೇ ವರುಷ ಪ್ರಕಟವಾದ ಕವಿರಾಜಮಾರ್ಗದ ಮುನ್ನುಡಿಯಾಗಿ ಬಳಸಲ್ಪಟ್ಟಿತು. ಹೀಗೆ ಈ ಉಭಯ ವಿದ್ವಾಂಸರ ಮೂಲಕ ಕವಿರಾಜಮಾರ್ಗದ ಕರ್ತೃ ನೃಪತುಂಗನೆಂಬ ಅಭಿಪ್ರಾಯ ಅಧಿಷ್ಠಾನಗೊಂಡಿತು.

---

೧. "Kasiraja Nighantu and Kavirajamarga (Palm leaves)- A vocabulary of the Karnataka Language by Kasiraja and treastise on Grammar and Prosody by Tungadeva"- Mackenze collection, A Descriptive catalogue of the oriental manuscripts, By H.H. Wilson Vol II, Page 62, (1828)

೨. JRAS. xxii. p 245

೩. JBBRAS. xx

ಆರು ವರುಷಗಳು ಮುಗಿಯುವಲ್ಲಿ, ಡಾ. ಫ್ಲೀಟ್ ಅವರು "Notes on Indian History and Geography" ಎಂಬ ಶೀರ್ಷಿಕೆಯಲ್ಲಿ '"Kavisvara's Kavirajamarga" ಎಂಬ ಲೇಖನ (೧೯೦೪)[೪] ಬರೆದು, ಶ್ರೀವಿಜಯನ 'ಕವಿಮಾರ್ಗ'ವೆಂಬ ಪ್ರಾಚೀನಗ್ರಂಥವೊಂದು, ಕವೀಶ್ವರನೆಂಬವನಿಂದ ವಿಸ್ತಾರಗೊಂಡು ಕವಿರಾಜಮಾರ್ಗವಾಯಿತು ಎಂಬ ಹೊಸ ಅಭಿಪ್ರಾಯವನ್ನು ಮಂಡಿಸಿದರು. ಈವರೆಗೆ ನಿರಾತಂಕವಾಗಿದ್ದ ಕರ್ತೃವಿಚಾರ ಈಗ ಸಮಸ್ಯೆಯ ಸ್ವರೂಪ ತಾಳಿತು. ಪ್ರಶ್ನೆಗೆ ಉತ್ತರ, ಉತ್ತರಕ್ಕೆ ಮಾರುತ್ತರ, ಮಾರುತ್ತರಕ್ಕೆ ಪ್ರತ್ಯುತ್ತರಗಳು ಬೆಳೆಯಲು ದಾರಿಮಾಡಿಕೊಟ್ಟಿತು, ಈ ಲೇಖನ. ಅದಕ್ಕಾಗಿ ಫ್ಲೀಟರ ಈ ಲೇಖನವನ್ನು ಕವಿರಾಜಮಾರ್ಗ ಕರ್ತೃಸಮಸ್ಯೆಯ ಮೂಲಬೀಜವೆನ್ನಬಹುದು. ಅಂತೂ ೧೯೦೪ರಲ್ಲಿ ಕವಿರಾಜಮಾರ್ಗದ ಕರ್ತೃ ನೃಪತುಂಗನೆಂಬ ಹಳೆಯ ಹೇಳಿಕೆಯೊಂದಿಗೆ ಕವಿಮಾರ್ಗದ ಕರ್ತೃ ಶ್ರೀವಿಜಯ, ಅದರ ವಿಸ್ತೃತರೂಪವಾದ ಕವಿರಾಜಮಾರ್ಗದ ಕರ್ತೃ ಕವೀಶ್ವರನೆಂಬ ಹೊಸ ಅಭಿಪ್ರಾಯ ತಲೆಯೆತ್ತಿತು. ಈ ವರೆಗೆ ಏಕಮುಖವಾಗಿದ್ದ ಕರ್ತೃವಿಷಯ ಕವಲೊಡೆಯಲು ಪ್ರಾರಂಭಿಸಿತು.

ನಾಲ್ಕು ವರುಷಗಳ ತರುವಾಯ ಫ್ಲೀಟರ ಈ ವಾದವನ್ನು ಶ್ರೀ ಪಾಠಕರು 'Nripatunga and the authorship of the Kavirajamarga (A reply to Dr. Fleet)' ಎಂಬ ಲೇಖನದ (೧೯೦೮)[೫] ಮೂಲಕ ಖಂಡಿಸಿ, ತಮ್ಮ ನೃಪತುಂಗ ಕರ್ತೃತ್ವ ವಾದವನ್ನು ಪುನರುಚ್ಚರಿಸಿದರು.

ಇದೇ ಸುಮಾರಿಗೆ ೧೯೦೭ರಲ್ಲಿ ಕರ್ಣಾಟಕ ಕವಿಚರಿತೆ ಹೊರಬಂದಿತು. ಅಲ್ಲಿ ಆರ್. ನರಸಿಂಹಾಚಾರ್ ಅವರು "ಯದ್ಯಪಿ ಈ ಗ್ರಂಥವು ನೃಪತುಂಗಕೃತವೆಂದು ಪ್ರತೀತಿಯಿದ್ದರೂ ಶ್ರೀವಿಜಯಕೃತವೋ ಎಂದು ಸಂದೇಹಪಡುವುದಕ್ಕೆ ಅವಕಾಶವಿದೆ......."[೬] ಎಂಬ ಅಭಿಪ್ರಾಯವನ್ನು ಮಂಡಿಸಿದರು. ಇದರಿಂದ ಕರ್ತೃವಿಷಯವಾಗಿ ಮೂರನೆಯದಾದ ಶ್ರೀವಿಜಯನ ಹೆಸರೊಂದು ಕೇಳಿಬಂದಿತು. ಮುಂದೆ ಬಂದ ಒಂದೊಂದು ವಾದಗಳು ಈ ನೃಪತುಂಗ, ಕವೀಶ್ವರ, ಶ್ರೀವಿಜಯರ ಪಕ್ಷವಹಿಸುವುದರಿಂದ ಇಲ್ಲಿಗೆ ಒಂದು ಘಟ್ಟವನ್ನು ಭಾವಿಸಬಹುದಾಗಿದೆ.

ತರುವಾಯ ಕೆಲವರು ನೃಪತುಂಗನ ಕವಿರಾಜಮಾರ್ಗ ಎಂದು ಕರೆದು ಅನಾಸಕ್ತಿಯಿಂದ ಸಾಗಿದರು. ಇನ್ನು ಕೆಲವರು 'ಬಹುದು' ಎಂದು ಸಂದೇಹದ ಹೆಜ್ಜೆಯಿಟ್ಟು ದಾಟಿದರು. ಆದರೆ ಕೆಲವರು ಮಾತ್ರ ಮೇಲಣ ಮೂರು ವಾದಗಳಲ್ಲಿ ಒಂದೊಂದು ಪಕ್ಷವಹಿಸಿ ಕತ್ತಿವರಸೆ ಹೂಡಿದರು. ಅವರಲ್ಲಿ ನಾ. ಶ್ರೀ. ರಾಜಪುರೋಹಿತ, ಎ.ಆರ್. ಕೃಷ್ಣಶಾಸ್ತ್ರಿ ಮತ್ತು ಟಿ.ಎಸ್. ವೆಂಕಣ್ಣಯ್ಯನವರ ಕೆಳಗಣ ವಾದ ಇತಿಹಾಸ ಘಟನೆಯೆನಿಸಿದೆ.

೧. ಕವಿರಾಜಮಾರ್ಗ ಗ್ರಂಥದ ಕರ್ತೃವು ಯಾರು?-ನಾ. ಶ್ರೀ. ರಾಜಪುರೋಹಿತ [೭]

೨. ಕವಿರಾಜಮಾರ್ಗದ ಕರ್ತೃ ಯಾರು?- ಎ.ಆರ್. ಕೃಷ್ಣಶಾಸ್ತ್ರಿ. [೮]

೩. ಕವಿರಾಜಮಾರ್ಗದ ಕರ್ತೃ-ನಾ. ಶ್ರೀ. ರಾಜಪುರೋಹಿತ.[೯]

೪. ಕವಿರಾಜಮಾರ್ಗದ ಕರ್ತೃ ಯಾರು?- ಎ.ಆರ್. ಕೃಷ್ಣಶಾಸ್ತ್ರಿ [೧೦]

---

೪. Ind. Ant. xxxiii. 258

೫. JBBRAS xxii-ii. p. 81

೬. ಕ.ಕ.ಚ. ಪು. ೧೯ (೧೯೬೧)

೭. ಸಾ.ಪ. ೬-೨ (೧೯೨೧) ಮತ್ತು ವಾಗ್ಭೂಷಣ ೨೭-೮೨

೮. ಪ್ರ.ಕ. ೩-೩ ಮತ್ತು ವಸ್ತುಕೋಶ (೧೯೨೧)

೯. ಸಾ.ಪ. ೭-೧ ಪು. ೬೩. (ಪತ್ರವ್ಯವಹಾರ)

೧೦. ಪ್ರ.ಕ. ೪-೧ (೧೯೨೨)

೫. ಕವಿರಾಜಮಾರ್ಗ ಗ್ರಂಥದ ಕರ್ತೃವು ಯಾರು?- ಟಿ.ಎಸ್. ವೆಂಕಣ್ಣಯ್ಯ [೧೧]

೬. ನೃಪತುಂಗನೇ ಕವಿರಾಜಮಾರ್ಗ ಗ್ರಂಥದ ಕರ್ತೃವು -ನಾ. ಶ್ರೀ. ರಾಜಪುರೋಹಿತ. [೧೨]

ಹೀಗೆ ಟಿ.ಎಸ್. ವೆಂಕಣ್ಣಯ್ಯ ಒಂದು, ಎ.ಆರ್. ಕೃಷ್ಣಶಾಸ್ತ್ರಿ ಎರಡು, ನಾ. ಶ್ರೀ. ರಾಜಪುರೋಹಿತ ಮೂರು ಲೇಖನಗಳನ್ನು ಬರೆದು ವಿದ್ವತ್‌ಪ್ರಪಂಚವನ್ನೇ ಬಿಸಿಗೊಳಿಸಿದರು. ಟಿ.ಎಸ್. ವೆಂಕಣ್ಣಯ್ಯ ಮತ್ತು ಎ.ಆರ್. ಕೃಷ್ಣಶಾಸ್ತ್ರಿಗಳು ಶ್ರೀವಿಜಯ ಪಕ್ಷ, ನಾ. ಶ್ರೀ. ರಾಜಪುರೋಹಿತರು ನೃಪತುಂಗನ ಪಕ್ಷವಹಿಸಿದರು. ಈ ಅರ್ಭಟೆಯ ಮಧ್ಯ ಕವೀಶ್ವರ ಪಕ್ಷ ತಾನಾಗಿಯೆ ಹಿಂದೆ ಬಿದ್ದಿತು.

ಹಿಂದೆ ಬಿದ್ದ ಕವೀಶ್ವರ ವಾದವನ್ನು ಪುರಸ್ಕರಿಸುತ್ತ, ೧೯೩೦ರಲ್ಲಿ ಮದ್ರಾಸ ವಿಶ್ವವಿದ್ಯಾಲಯದಿಂದ ಕವಿರಾಜಮಾರ್ಗ ಪ್ರಕಟವಾಯಿತು. ೧೯೩೨ರಲ್ಲಿ ಎಂ.ವಿ. ಸೀತಾರಾಮಯ್ಯ,[೧೩] ೧೯೩೩ರಲ್ಲಿ ಬಿ.ಎಂ. ಶ್ರೀ[೧೪] ಯವರು ಈ ವಾದವನ್ನು ಖಂಡಿಸಿ ಶ್ರೀವಿಜಯನ ಪಕ್ಷವನ್ನು ರಕ್ಷಿಸಿದರು.

೧೯೩೭ರಲ್ಲಿ ಶ್ರೀ ಬೇಂದ್ರೆಯವರು ಸಮಂತಭದ್ರನೇ ಶ್ರೀವಿಜಯನಿರಬಹುದೆ?[೧೫] ಎಂದು ಊಹಿಸಿದರು. ಈತನೇ 'ಪರಮ ಶ್ರೀವಿಜಯ ಕವೀಶ್ವರ....' ಪದ್ಯದಲ್ಲಿಯ ಶ್ರೀವಿಜಯನೆಂದೂ, ಕವಿರಾಜಮಾರ್ಗಕ್ಕೆ ಮಾತೃಕೆಯಾದ ಕವಿಮಾರ್ಗದ ಕರ್ತೃವೆಂದೂ ಹೇಳಿದರು.

೧೯೪೮ರಲ್ಲಿ ಶ್ರೀಮುಳಿಯ ಅವರು 'ಕವಿರಾಜಮಾರ್ಗವಿವೇಕ'ವನ್ನು ಬರೆದು, ಚಕ್ರಬಂಧದ ಆಧಾರದಿಂದ ಜಯ, ಜಯ್ಯಾಳ್ವ, ಸಾಮಪಜಯ್ಯಾಳ್ವ, ಶ್ರೀವಿಜಯ ಎಂಬಿವು ಒಂದೇ ಹೆಸರಿನ ವಿವಿಧ ರೂಪಗಳು ಎಂದು ಸಾಧಿಸುತ್ತ, ಶ್ರೀವಿಜಯನ ಪಕ್ಷವನ್ನು ಹೊಸ ರೀತಿಯಿಂದ ಬೆಂಬಲಿಸಿದರು.[೧೬]

೧೯೫೧ರಲ್ಲಿ ಶ್ರೀಡಿ.ಕೆ. ಭೀಮಸೇನರಾಯರು ತಮಗೆ ಲಭಿಸಿದ ಶಬ್ದಮಣಿದರ್ಪಣದ ಹೊಸ ಪ್ರತಿಯನ್ನಾಧರಿಸಿ, ಶ್ರೀವಿಜಯನೆಂಬುದು ನೃಪತುಂಗನ ಇನ್ನೊಂದು ಹೆಸರು ಎನ್ನುತ್ತ ನೃಪತುಂಗನ ಪಕ್ಷ ಮತ್ತು ಶ್ರೀವಿಜಯನ ಪಕ್ಷಗಳು ಒಂದುಗೂಡುವ ಅಭಿಪ್ರಾಯವನ್ನು ನೀಡಿದರು.[೧೭]

೧೯೫೫ರಲ್ಲಿ ವೆಂಕಟರಾಯಾಚಾರ್ ಸುರತ್ಕಲ್ ಅವರು ಶ್ರೀ ಮತ್ತು ವಿಜಯ ಎಂಬ ಹೆಸರಿನ ದಂಪತಿಗಳು ಕವಿರಾಜಮಾರ್ಗದ ಕರ್ತೃಗಳೆಂದು ಊಹಿಸಿದರು.[೧೮]

ಈ ಎಲ್ಲ ಅಭಿಪ್ರಾಯಗಳನ್ನು ಸಮೀಕ್ಷಿಸಿ ಡಾ. ಮುಗಳಿಯವರು ೧೯೬೦ರಲ್ಲಿ "ಇದು ನೃಪತುಂಗ ವಿರಚಿತವಾದ ಗ್ರಂಥವಲ್ಲವೆಂಬುದು... ಗಟ್ಟಿಮಾತು.... ಶ್ರೀವಿಜಯನು ಕವಿರಾಜಮಾರ್ಗಕಾರನಾಗಿರ ಬಹುದೆಂದು ನಮ್ಮ ತೋರಿಕೆ"[೧೯] ಎಂದು ಹೇಳಿದರು.

---

೧೧. ಸಾ.ಪ. ೭-೪

೧೨. ಸಾ.ಪ. ೮-೨

೧೩. ಪ್ರಜಾಮತ ೧೯೩೨.

೧೪. Karnataka Kavirajamargam-QJMS xxiii-iii p. 436

೧೫. ಸಮಂತಭದ್ರನೇ ಶ್ರೀವಿಜಯನಿರಬಹುದೆ?-ಪ್ರ.ಕ. ೧೯-೧

೧೬. ಕವಿರಾಜಮಾರ್ಗವಿವೇಕ ಪು. ೭೬

೧೭. ಶ.ಮ.ದ. ಪಾಠಾಂತರಗಳು ಪು. ೩೭ ಮತ್ತು ೪೩

೧೮. ಕವಿರಾಜಮಾರ್ಗದ ಕವಿಯಾರು?-ಜೀವನ ೧೫-೯.

೧೯. ಕ.ಸಾ.ಚ. ಪು. ೫೨ ಮತ್ತು ೫೬

೧೯೬೮ರಲ್ಲಿ ಕವಿರಾಜಮಾರ್ಗವನ್ನು ಪ್ರಕಟಿಸಿದ ಎಂ.ವಿ. ಸೀತಾರಾಮಯ್ಯನವರು ಈವರೆಗಣ ಅಭಿಪ್ರಾಯಗಳನ್ನು ಸಿಂಹಾವಲೋಕನಗೆಯ್ದು, ತಮ್ಮ ಪರಿಷ್ಕರಣಕ್ಕೆ "ಶ್ರೀವಿಜಯಕೃತ ಕವಿರಾಜಮಾರ್ಗಂ" ಎಂದು ನಾಮಕರಣ ಮಾಡಿದರು.

ಇದು ಕವಿರಾಜಮಾರ್ಗದ ಕರ್ತೃವಿಚಾರ ನಡೆದುಬಂದ ಇತಿಹಾಸ. ಇಷ್ಟು ಹಿನ್ನೆಲೆಯಲ್ಲಿ (೧) ಕವಿಮಾರ್ಗ-ಕವಿರಾಜಮಾರ್ಗ-ನೃಪತುಂಗಾಭ್ಯುದಯ (೨) ಶ್ರೀವಿಜಯ-ನೃಪತುಂಗ-ಸಮಂತಭದ್ರ-ಜಯಾಳ್ವ-ಶ್ರೀ+ವಿಜಯ ಎಂಬ ತೊಡಕುಗಳನ್ನು ಮೊದಲು ಬಿಡಿಸಿಕೊಂಡು, ಕವಿರಾಜಮಾರ್ಗದ ಕರ್ತೃವಿಚಾರಕ್ಕೆ ಕೈಹಾಕಬಹುದು.

ಕವಿಮಾರ್ಗ - ಕವಿರಾಜಮಾರ್ಗ - ನೃಪತುಂಗಾಭ್ಯುದಯ :

ಶ್ರೀವಿಜಯರ ಕವಿಮಾರ್ಗಂ। ಭಾವಿಪ ಕವಿಜನದ ಮನಕೆ ಕನ್ನಡಿಯುಂ ಕೈ।
ದೀವಿಗೆಯುಮಾದುವದಱಿಂ। ಶ್ರೀವಿಜಯರ್ ದೇವರವರನೇವಣ್ಣಿಪುದೋ।[೨೦]

ದುರ್ಗಸಿಂಹನ ಪಂಚತಂತ್ರದ ಈ ಪದ್ಯಕ್ಕೆ, ಬಿ.ಎಂ. ಶ್ರೀ ಅವರು "Durgasimha's phrase 'ಶ್ರೀವಿಜಯರ ಕವಿಮಾರ್ಗಂ' may refer to his poetic manner and style not to any work on ಮಾರ್ಗ"[೨೧] ಎಂದು ಅರ್ಥ ಹೇಳುವರು. ಆದರೆ ಕವಿಗಳನ್ನು ಅವರ ಕೃತಿಗಳೊಂದಿಗೆ ಸ್ತುತಿಸಿರುವುದಕ್ಕೆ ಕನ್ನಡದಲ್ಲಿ ಹೇರಳ ಉದಾಹರಣೆಗಳಿವೆ. ಇದಕ್ಕೆ ದುರ್ಗಸಿಂಹನೇ ಸ್ಮರಿಸುವ "ಪರಮಕವೀಶ್ವರ ಚೇತೋಹರಮೆಂಬಿನಮೆಸೆವ ಮಾಳವೀಮಾಧವಮಂ ವಿರಚಿಸಿದ ಕನ್ನಮಯ್ಯಂ" ಎಂಬ ವಾಕ್ಯ ಸಾಕ್ಷಿ. ಇದೇ ಪ್ರಕಾರ ಇಲ್ಲಿ ಶ್ರೀ ವಿಜಯನ 'ಕವಿಮಾರ್ಗ' ಹೆಸರಿನ ಕೃತಿಯು ಸೂಚಿತವಾಗಿರಬಹುದು ಎನಿಸುತ್ತದೆ.

ಶ್ರುತಕೀರ್ತಿದೇವನತ್ಯೂ।ರ್ಜಿತ ಕೀರ್ತಿತನಾತ್ಮ ಶಿಷ್ಯನಿಂದಗ್ಗಳನಿಂ।
ದತಿಶಯಿತ ಕಾವ್ಯಮಾರ್ಗದೆ।ನುತಚಂದ್ರಪ್ರಭಪುರಾಣಮಂ ಪೇಟಿಸಿದಂ ॥[೨೨]

ಎಂಬ ಪದ್ಯದ ಬೆಳಕಿನಲ್ಲಿ ದುರ್ಗಸಿಂಹನ ಹೇಳಿಕೆಯನ್ನು ನೋಡಿದರೆ 'ಶ್ರೀವಿಜಯರ ಕವಿಮಾರ್ಗಂ' ಎಂಬುದಕ್ಕೆ ಬದಲು 'ಶ್ರೀವಿಜಯರ ಕಾವ್ಯಮಾರ್ಗಂ' ಎಂದಿದ್ದರೆ ಮಾತ್ರ ಶ್ರೀಯವರ ಮಾತು ಸತ್ಯವಾಗಬಹುದಿತ್ತು.

ದುರ್ಗಸಿಂಹನು 'ಕನ್ನಡಿಯುಂ' 'ಕೈದೀವಿಗೆಯುಂ' ಎಂಬ ವಿಶೇಷಣಗಳನ್ನು ಈ 'ಕವಿಮಾರ್ಗ'ಕ್ಕೆ ಬಳಸಿರುವನು. ಈ ವಿಶೇಷಣಗಳು ಅಮೂರ್ತಸ್ವರೂಪದ ಕಾವ್ಯಮಾರ್ಗಕ್ಕಿಂತ ಮೂರ್ತಸ್ವರೂಪದ ಗ್ರಂಥಕ್ಕೆ ಹೆಚ್ಚು ಒಪ್ಪುತ್ತವೆ. ನಾಗವರ್ಮನು ಕಾವ್ಯಾವಲೋಕನವನ್ನು 'ಕವಿಗಳ್ಗಿದು ಕೆಯ್ಗನ್ನಡಿ' ಎಂದು, ಮಲ್ಲಿಕಾರ್ಜುನನು ಸೂಕ್ತಿಸುಧಾರ್ಣವವನ್ನು 'ಭಾವುಕರ ಕೈಪಿಡಿ' ಎಂದು ಕರೆದುದನ್ನು ಇಲ್ಲಿ ಸ್ಮರಿಸಬಹುದು. ಹೀಗಾಗಿ ಇಲ್ಲಿಯ 'ಕವಿಮಾರ್ಗ'ಕ್ಕೆ ಕಾವ್ಯಮಾರ್ಗವೆಂದು ಅರ್ಥವಲ್ಲ, ಒಂದು ಕೃತಿನಾಮವೆಂದೇ ಅರ್ಥ.

---

೨೦. ಪಂಚತಂತ್ರಂ ೧-೨೧

೨೧. Karnataka Kavirajamargam-QJMS xxiii-iii P. 436

೨೨. ಕ.ಕ.ಚ. ಪು. ೩೨೫

ಕೆಲವರು ಕೃತಿನಾಮವೆಂದು ಒಪ್ಪುವರಾದರೂ ಅಜಿತತೀರ್ಥಂಕರಪುರಾಣವನ್ನು ಅಜಿತಪುರಾಣವೆಂದು, ಮೋಹನಾನುಭವಮುಕುರವನ್ನು ಅನುಭವಮುಕುರವೆಂದು ಸಂಕ್ಷೇಪಿಸಿ ಕರೆವಂತೆ ಇಲ್ಲಿ ದುರ್ಗಸಿಂಹನು ಕವಿರಾಜಮಾರ್ಗವನ್ನೇ ಕವಿಮಾರ್ಗವೆಂದು ಕರೆದಿರುವನೆಂದು ಊಹಿಸುವರು. ಆದರೆ ಅಜಿತತೀರ್ಥಂಕರಪುರಾಣ, ಮೋಹನಾನುಭವಮುಕುರಗಳಂತೆ ಕವಿರಾಜಮಾರ್ಗದ ಉಚ್ಚಾರಣೆ ಕ್ಲಿಷ್ಟವಲ್ಲ. ಮೇಲಾಗಿ ದುರ್ಗಸಿಂಹನು 'ರಾಜ'ಪದವನ್ನು ಬಿಟ್ಟು ಶೀರ್ಷಿಕೆಯ ಸೊಗಸು ಕೆಡಿಸುವಂತಹ ಅರಸಿಕನೂ ಅಲ್ಲ, ಛಂದಸ್ಸಿನ ಕಟ್ಟಿಗೆ ಒಳಗಾಗಿ ಕೃತಿನಾಮವನ್ನು ಮೊಟಕುಗೊಳಿಸುವಂತಹ ಛಂದೋದರಿದ್ರನೂ ಅಲ್ಲ. ಅದಕ್ಕಾಗಿ ಕವಿಮಾರ್ಗವೇ ಬೇರೆ, ಕವಿರಾಜಮಾರ್ಗವೇ ಬೇರೆ ಎನಿಸುತ್ತದೆ.

ಈ ಸಂದರ್ಭದಲ್ಲಿ ಹೇಳಬೇಕಾದ ಇನ್ನೊಂದು ಮಾತು: "ನೃಪತುಂಗಾಭ್ಯುದಯ" ಹೆಸರಿನಿಂದ ಕರೆಯಲ್ಪಟ್ಟ ಕವಿರಾಜಮಾರ್ಗದ ಕಾಗದ ಹಸ್ತಪ್ರತಿಯೊಂದು ನನಗೆ ಇತ್ತೀಚೆ ಲಭ್ಯವಾಗಿದ್ದು, ಈಗ ಅದು ಕರ್ನಾಟಕ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನಪೀಠದ ಹಸ್ತಪ್ರತಿ ಭಾಂಡಾರದಲ್ಲಿದೆ. (ನೋಡಿ: ಮಾರ್ಗ ೧ ನೃಪತುಂಗಾಭ್ಯುದಯ ಪು. ೧೨. ಪೊನ್ನನ ಭುವನೈಕ ರಾಮಾಭ್ಯುದಯ: ಅಲಂಕಾರ ಶಾಸ್ತ್ರ ಪು.೨೧) ಶೀರ್ಷಿಕೆಯ ವ್ಯತ್ಯಾಸ, ಆರಂಭದ ವಿಷ್ಣುಸ್ತುತಿಗೆ ಬದಲು ಶಿವಸ್ತುತಿ ಪದ್ಯ ಬಿಟ್ಟರೆ, ಮಿಕ್ಕಂತೆ ಅಂಥ ವ್ಯತ್ಯಾಸವೇನೂ ಇಲ್ಲ.

ಶ್ರೀವಿಜಯ - ನೃಪತುಂಗ - ಸಮಂತಭದ್ರ - ಜಯಾಳ್ವ - ಶ್ರೀ + ವಿಜಯ:

ಕವಿಮಾರ್ಗ ಮತ್ತು ಕವಿರಾಜಮಾರ್ಗಗಳು ಭಿನ್ನಕೃತಿಗಳು ಎಂದು ಖಚಿತಮಾಡಿಕೊಂಡ ನಾವು ಶ್ರೀವಿಜಯ ಮತ್ತು ನೃಪತುಂಗ ಒಬ್ಬನೇ ಎಂಬ ಶ್ರೀ ಪಾಠಕ, ಶ್ರೀ ರಾಜಪುರೋಹಿತ ಮತ್ತು ಶ್ರೀ ಡಿ.ಕೆ. ಭೀಮಸೇನರಾಯರ ಅಭಿಪ್ರಾಯಗಳನ್ನು ಇಲ್ಲಿ ವಿವೇಚಿಸಲಾಗಿದೆ.

ಶ್ರೀ ಪಾಠಕ ಅವರು "ಪರಮ ಶ್ರೀವಿಜಯ ಕವೀಶ್ವರ......" ಎಂಬ ಪದ್ಯದಲ್ಲಿ ಕಂಡುಬರುವ ಶ್ರೀವಿಜಯನನ್ನು ಕುರಿತು "But ಶ್ರೀವಿಜಯ (೧-೪೯, ೨-೧೫೩, ೩-೨೩೬) may also be a title of Nripatunga. This view is correct of Durgasimha means the Kavirajamarga when he speaks of ಶ್ರೀ ವಿಜಯರ ಕವಿಮಾರ್ಗಂ"[೨೩] ಎಂದು ಹೇಳುತ್ತಾರೆ. ಆದರೆ ದುರ್ಗಸಿಂಹನು ಹೇಳುವ ಕವಿಮಾರ್ಗವು ಕವಿರಾಜಮಾರ್ಗವಲ್ಲವೆಂದು ನಾವು ಖಚಿತ ಮಾಡಿಕೊಂಡಿರುವುದರಿಂದ, ಶ್ರೀವಿಜಯನೆಂಬುದು ನೃಪತುಂಗನ ಬಿರುದು ಎನ್ನಲಿಕ್ಕೆ ಎಳ್ಳಷ್ಟೂ ಆಧಾರವಿಲ್ಲದುದರಿಂದ ಇವರ ಊಹೆ ಗಟ್ಟಿಯಾಗಿ ನಿಲ್ಲದು.

ಶ್ರೀವಿಜಯ ಮತ್ತು ನೃಪತುಂಗರಲ್ಲಿ ಅಭೇದ ಕಲ್ಪಿಸುವುದಕ್ಕೆ ವಿಶೇಷ ಪ್ರಯತ್ನಗೆಯ್ದವರು ನಾ. ಶ್ರೀ ರಾಜಪುರೋಹಿತ.

> ಯತ್ರ ಯೋಗೇಶ್ವರಃ ಕೃಷ್ಣೋ ಯತ್ರ ಪಾರ್ಥೋ ಧನುರ್ಧರಃ
> ತತ್ರ ಶ್ರೀವಿಜಯೋ ಭೂತಿರ್ಧ್ರುವಾ ನೀತಿರ್ಮತಿರ್ಮಮ॥

ಎಂಬ ಭಗವದ್ಗೀತೆಯ ಶ್ಲೋಕದಲ್ಲಿಯ 'ಶ್ರೀವಿಜಯೋಭೂತಿ' ಎಂಬುದು ರಾಜಸೂಚಿ ಎಂದು ಹೇಳಿ; ಇದನ್ನು ಕವಿರಾಜಮಾರ್ಗದ ಪರಿಚ್ಛೇದಗಳ ಕೊನೆಯ 'ಶ್ರೀವಿಜಯಪ್ರಭೂತ' 'ಶ್ರೀವಿಜಯ ಪ್ರಭೂತಿಜ'ಗಳೊಂದಿಗೆ ಸಂಬಂಧ ಕಲ್ಪಿಸಿ, ಈ 'ಶ್ರೀವಿಜಯಪ್ರಭೂತ'ನೆಂದರೆ ನೃಪತುಂಗನೆಂದು ನಂಬಿಸುತ್ತಾರೆ. ಆಪದ್ಬಂಧುವಾಗಿ

---

೨೩. ಕ.ಮಾ. (ಪಾಠಕ ಆವೃತ್ತಿ), ಪುಟ. ೧೧, ಅ.ಟಿ.

'ಪ್ರಭೂತವರ್ಷ' ಎಂಬ ನೃಪತುಂಗನ ತಂದೆಯ ಬಿರುದನ್ನೂ ಆಶ್ರಯಿಸಿದ್ದಾರೆ. ಇತಿಹಾಸ ಮತ್ತು ಪುರಾಣಗಳಿಗೆ ಗಂಟುಹಾಕುವ ಈ ಬಾದರಾಯಣ ನಂಟು, ಒಂದು ಚತುರ ಊಹೆಯೆನಿಸುವುದೇ ಹೊರತು ಇತಿಹಾಸವೆನಿಸುವುದಿಲ್ಲ.

ಕವಿರಾಜಮಾರ್ಗದ ಕೆಲವು ಪದ್ಯಗಳನ್ನೊಳಗೊಂಡ ಹೈದರಾಬಾದ ಶಬ್ದಮಣಿದರ್ಪಣದ ಹಸ್ತಪ್ರತಿಯಲ್ಲಿ ಎರಡು ಸಂದರ್ಭಗಳು ಹೀಗಿವೆ:

೧. "ನುತಶಬ್ದಾಳಂಕಾರದೊ।ಳತಿಶಯಮೀ ಕನ್ನಡಕ್ಕೆ ಸತತಂ ಪ್ರಾಸಂ।
ಕೃತಕೃತ್ಯಮಲ್ಲವಲ್ಲಭ । ಮತದಿಂದದಱ ಪ್ರಪಂಚಮೀ ತೆಱನಕ್ಕುಂ॥[೨೪]

ವೃತ್ತಿ॥ ಕನ್ನಡ ಕವಿತೆಯೆಂಬ ಪೆಣ್ಗೆ ಪ್ರಾಸಮೆ ಪ್ರಾಣಮಾ ಪ್ರಾಸಂ ಶಬ್ದಾಳಂಕಾರದೊಳತಿಶಯಮವ(ದ)ಱ ಪ್ರಪಂಚಮಂ ನೃಪತುಂಗದೇವನ ಮತದಿಂ ಪೇೞ್ವೆಂ"

೨. "ಗೞಿಯಿಸಿದರ್ಥಂ ಸಲೆ ಪಾಂ।ಗೞಿಯದೆಯುಂ ಶಬ್ದಮೊಂದದಿರ್ದೊಡೆ ಮುತ್ತುಂ।
ಮೆೞಸುಂ ಕೋದಂತಿರೆ ಪೇ।ೞ್ವೞಿಗವಿಗಳ ಕವಿತೆ ಬುಧರನೆರ್ದೆಗೊಳಿಸುಗುಮೇ॥[೨೫]
(ಶ್ರೀವಿಜಯನ ಪ್ರಯೋಗಂ)"

ಈ ಎರಡು ಸಂದರ್ಭಗಳನ್ನು ಅನುಲಕ್ಷಿಸಿ "ಮೇಲೆ 'ನುತಶಬ್ದಾಳಂಕಾರ....' ಎಂದು ಆರಂಭವಾಗುವ..... ಪದ್ಯವನ್ನು ಉದಾಹರಿಸಿದೆಯಷ್ಟೇ. ಅಲ್ಲಿ ಕೃತಕೃತ್ಯಮಲ್ಲವಲ್ಲಭ ಎಂಬುದಕ್ಕೆ ವ್ಯಾಖ್ಯಾನಕಾರನು ನೃಪತುಂಗದೇವನೆಂದು ವ್ಯಾಖ್ಯಾನಾವರಸದಲ್ಲಿ ಬರೆದಿದ್ದಾನೆ. ಇಲ್ಲಿ ಶ್ರೀವಿಜಯನೆಂದು ಹೇಳಿದ್ದಾನೆ..... ಶ್ರೀವಿಜಯನೇ ನೃಪತುಂಗನೆಂಬುದು ಈ ವ್ಯಾಖ್ಯಾನಕಾರನ ಬರವಣಿಗೆಯಿಂದ ಸ್ಪಷ್ಟವಾಗಿದೆ"[೨೬] ಎಂದು ಡಿ.ಕೆ. ಭೀಮಸೇನರಾಯರು ಹೇಳುತ್ತಾರೆ. ಆದರೆ ಮೇಲಣ ಉದ್ಧರಣೆಗಳಿಂದ ಕೃತಕೃತ್ಯಮಲ್ಲವಲ್ಲಭನೆಂದರೆ ನೃಪತುಂಗನೆಂದು, "ಗೞಿಯಿಸಿದರ್ಥಂ....." ಎಂಬ ಪದ್ಯವು ಶ್ರೀ ವಿಜಯನದೆಂದು ಮಾತ್ರ ಅರ್ಥವಾಗುವುದೇ ಹೊರತು 'ಶ್ರೀ ವಿಜಯ ಮತ್ತು ನೃಪತುಂಗ ಅಭಿನ್ನರೆಂದು ಸಿದ್ಧವಾಗುವುದಿಲ್ಲ. "[೨೭] ಅದಕ್ಕಾಗಿ ಶ್ರೀಯುತರ ಅಭಿಪ್ರಾಯ ಒಪ್ಪಲು ಬರುವಂತಿಲ್ಲ.

ಈವರೆಗಣ ವಿವೇಚನೆಯಿಂದ ನೃಪತುಂಗ ಮತ್ತು ಶ್ರೀವಿಜಯರು ಅಭಿನ್ನರೆನ್ನುವ ಪಾಠಕ, ರಾಜಪುರೋಹಿತ, ಭೀಮಸೇನರಾಯರ ಹೇಳಿಕೆಗಳು ನಿರಾಧಾರವೆಂದು ಸ್ಪಷ್ಟವಾಗುತ್ತದೆ. "ಒಂದು ವೇಳೆ ನೃಪತುಂಗನಿಗೆ ಶ್ರೀವಿಜಯ ಎಂಬ ಬಿರುದೂ ಇದ್ದಿರಬಹುದು ಎಂದರೆ ಅದಕ್ಕೆ ಶಾಸನಗಳಲ್ಲಿಯಾಗಲಿ ಈ ಗ್ರಂಥದಲ್ಲಿಯಾಗಲಿ ಆವ ಆಧಾರವೂ ಸಿಕ್ಕುವುದಿಲ್ಲ"[೨೮] ಎಂದು ಆರ್. ನರಸಿಂಹಾಚಾರ್ಯರು ೧೯೦೭ರಲ್ಲಿ ಹೇಳಿದುದನ್ನು ಇಲ್ಲಿ ನೆನೆಯಬಹುದು. ಈ ತರುವಾಯ, ಶಾಸನ ಪ್ರಪಂಚದಲ್ಲಿ ಹೊಸಹೊಸ ಸಂಶೋಧನೆಗಳು ಬೆಳಕಿಗೆ ಬಂದಿದ್ದರೂ ಶ್ರೀವಿಜಯ ಮತ್ತು ನೃಪತುಂಗ ಎಂಬಿವು ಒಬ್ಬನ ಹೆಸರೆಂದು ತಿಳಿದುಬಂದಿಲ್ಲ. ಎರಡನೆಯದಾಗಿ ಮಧುರನ ಧರ್ಮನಾಥಪುರಾಣದಲ್ಲಿ,

---

೨೪. ಶ.ಮ.ದ. ಪಾಠಾಂತರಗಳು ಪು. ೩೭

೨೫. ಶ.ಮ.ದ. ಪಾಠಾಂತರಗಳು, ಪು. ೪೩

೨೬. ಶ.ಮ.ದ. ಪಾಠಾಂತರಗಳು, ಪು. ೪೩

೨೭. ಪ್ರೊ. ಭೀಮಸೇನರಾಯರ ಅಭಿಪ್ರಾಯವನ್ನು ಪ್ರೊ. ಎಂ. ವಿ. ಸೀತಾರಾಮಯ್ಯನವರು ಬಲವಾಗಿ ಅಲ್ಲಗಳೆದಿರುವರು. (ಕ.ಮಾ. ಅವತರಣಿಕೆ xxxiii ಮತ್ತು Lxxxvii)

೨೮. ಕ.ಕ.ಚ. ಪು. ೨೦(೧೯೬೧)

ಕವಿತಾಶ್ರೀಗೆ ಜನಾರ್ದನಂ ಪುರುಷರತ್ನಂ ಪುಷ್ಪದಂತಂ ರಿಪು-
ಪ್ರವರೋತ್ತುಂಗ ಗಜಾಂಕುಶಂ ಮನಸಿಜಾಕಾರಂ ಸಭಾಮಧ್ಯಲ-।
ಬ್ಧವರಂ ಶ್ರೀವಿಜಯಂ ಸಮಸ್ತಸುಜನೋತ್ತಂಸಂ ಯಶಶ್ಚಂದ್ರನು-
ತ್ಸವಲೀಲಾರಥನೇಮಿಯೆಂದು ಮಧುರಂ ಪೆತ್ತಂ ಮಹಾಖ್ಯಾತಿಯಂ॥[೨೯]

ಎಂಬ ಪದ್ಯವೊಂದು ಕಂಡುಬರುತ್ತದೆ. ಇಲ್ಲಿ ಪ್ರಾಚೀನಕವಿಗಳ ಹೆಸರುಗಳನ್ನು ಶ್ಲೇಷರೂಪದಲ್ಲಿ ತನಗೆ ಅನ್ವಯಿಸಿಕೊಳ್ಳುತ್ತ 'ಸಭಾಮಧ್ಯಲಬ್ಧವರಂ ಶ್ರೀವಿಜಯಂ' ಎಂದು ಮಧುರನು ಕರೆದುಕೊಂಡುದು ಬಹುಮುಖ್ಯವಾಗಿದೆ. ಶ್ರೀವಿಜಯನು ಸಭಾಮಧ್ಯದಲ್ಲಿ (ಅರಸನಿಂದ) ವರವನ್ನು ಪಡೆದನೆಂದು ಇದರ ಅರ್ಥ. ಆದುದರಿಂದ ಸಭಾಪತಿಯಾದ ನೃಪತುಂಗನೇ ಬೇರೆ, ಸಭಾಸದನಾದ ಶ್ರೀವಿಜಯನೇ ಬೇರೆಯೆಂದು ಅತ್ಯಂತಿಕವಾಗಿ ಹೇಳಬಹುದು.

ಶ್ರೀವಿಜಯನೆಂದರೆ ಸಮಂತಭದ್ರನೆಂದು ಡಾ. ದ.ರಾ. ಬೇಂದ್ರೆಯವರು ಒಂದು ಕುತೂಹಲಪೂರ್ಣ ಅಭಿಪ್ರಾಯವನ್ನು ಮಂಡಿಸಿದ್ದಾರೆ. ವಸ್ತುಸತ್ಯ ಊಹೆಯಾಗಿ, ಊಹೆ ಕಲ್ಪನೆಯಾಗಿ ನಿಂತ ಸಂಶೋಧನೆಯಿದು. ಇಲ್ಲಿಯ ಮನೋಹರವಾದ ಊಹೆಗೆ ನಾವು ತಲೆದೂಗಬಹುದೇ ಹೊರತು, ಶ್ರೀವಿಜಯನೇ ಸಮಂತಭದ್ರನೆಂದು ಒಪ್ಪುವ ಹಾಗಿಲ್ಲ.

ಕವಿರಾಜಮಾರ್ಗದಲ್ಲಿಯ ಚಕ್ರಬಂಧಪದ್ಯವನ್ನು ಬಿಡಿಸಿ ಕೂಡಿಸಿ, ಅದರ ಒಡಲಿನಿಂದ 'ಸಾಮಪಜಯಾಳ್ವ' ಎಂಬ ಹೆಸರನ್ನು ಹೊರಹಿರಿದು, ಈತನೇ ಶ್ರೀವಿಜಯನೆಂದು ಶ್ರೀ ಮುಳಿಯ ಅವರು ಹೇಳುತ್ತಾರೆ. ಆದರೆ ನಷ್ಟ ಅಕ್ಷರಗಳನ್ನು ಊಹೆಯಿಂದ ತುಂಬಿ, ಅಡ್ಡಿಯಾಗುವ ಅಕ್ಷರಗಳನ್ನು ಅನುಗೊಳಿಸಿ, ಸಿದ್ಧಮಾಡಿದ ಈ ಪದ್ಯದ ಪಾಠ ಅಪ್ರಾಮಾಣಿಕವೆನಿಸುವುದರಿಂದ 'ಸಾಮಪಜಯಾಳ್ವ' ಮತ್ತು 'ಶ್ರೀವಿಜಯ' ಒಬ್ಬನೇ ಎನ್ನುವುದು ದೂರದ ಸಂಬಂಧವಾಗಿದೆ.

ಈ ದಿಶೆಯಲ್ಲಿ ಶ್ರೀ ವೆಂಕಟರಾಯಾಚಾರ್ಯ, ಸುರತ್ಕಲ್ ಅವರು ಇನ್ನೊಂದು ಊಹೆಯನ್ನು ಒಡ್ಡಿದ್ದಾರೆ. 'ಶ್ರೀವಿಜಯರ ಕವಿಮಾರ್ಗಂ......' (ದುರ್ಗಸಿಂಹ), 'ಶ್ರೀವಿಜಯರ ಹೊನ್ನನ....' (ಕೇಶಿರಾಜ),'ಶ್ರೀವಿಜಯರ ಬಲಗೊಂಬೆ.....' (ಮಂಗರಸ) ಎಂಬ ಉದ್ಧರಣೆಗಳಲ್ಲಿ ಬಹುವಚನ ಪ್ರತ್ಯಯವಿರುವುದರಿಂದ 'ಶ್ರೀವಿಜಯರ್' ಎಂಬ ಪದದಲ್ಲಿ 'ಶ್ರೀ' ಎಂಬ ಸತಿ, 'ವಿಜಯ' ಎಂಬ ಪತಿ ಹೀಗೆ ಎರಡು ಹೆಸರುಗಳಿರಬಹುದು. ಏಕವ್ಯತಿರೇಕಾಲಂಕಾರಕ್ಕೆ ಕವಿರಾಜಮಾರ್ಗದಲ್ಲಿ,

ಶ್ರೀವನಿತಾಪ್ರಸವದಿನಾ। ಲಾವಣ್ಯದಿನತಿಗಭೀರಭಾವದೆ ನೀನಿಂ।
ತಾ ವಾರಿಧಿಯಂ ಪೋಲ್ವೈ। ಕೇವಲಭೇದಂ ದ್ವಿತೀಯ ಲಲಿತಾಕಾರಂ।

ಎಂಬ ಲಕ್ಷ್ಯಪದ್ಯವಿದೆ. ಇದರಲ್ಲಿ ವಾರಿಧಿ ಮತ್ತು ಅರಸುಗಳಿಗೆ ಶ್ಲೇಷವಿದ್ದು, ಇಲ್ಲಿಯ ಅರಸು ನೃಪತುಂಗನೆಂದು ಭಾವಿಸಿದಾಗ ಆತನು 'ಶ್ರೀವನಿತಾಪ್ರಸವಿತೃ' ಎನಿಸುತ್ತಾನೆ. ಅದಕ್ಕಾಗಿ ನೃಪತುಂಗನಿಗೆ ಇರಬಹುದಾದ 'ಶ್ರೀ' ಎಂಬ ಹೆಸರಿನ ಮಗಳು 'ವಿಜಯ' ನೆಂಬವನ ಸತಿಯಾಗಿರಬೇಕು; ಇಬ್ಬರೂ ಕೂಡಿ 'ಶ್ರೀವಿಜಯರ್' ಎಂಬ ಬಹುವಚನನಾಮದಿಂದ ಈ ಕವಿರಾಜಮಾರ್ಗವನ್ನು ಬರೆದಿರಬಹುದು ಎಂದು ಅವರ ಅಭಿಪ್ರಾಯ. ಆದರೆ

---

೨೯. ಕ.ಕ.ಚ. ಪು. ೪೮೬(೧೯೬೧)

ಕೆಲವುಸಲ 'ಶ್ರೀವಿಜಯರ್' ಎಂಬ ಬಹುವಚನ ಪದಕ್ಕೆ ಬದಲು ಏಕವಚನವೂ ಬಳಕೆಯಾಗಿದೆ.[೩೦] ನೃಪತುಂಗನಿಗೆ ಶ್ರೀಯೆಂಬ ಮಗಳು ವಿಜಯನೆಂಬ ಅಳಿಯನಿದ್ದುದಕ್ಕೆ ಎಳ್ಳಷ್ಟು ಆಧಾರವಿಲ್ಲ. 'ಶ್ರೀವನಿತಾಪ್ರಸವದಿಂ.....' ಎಂಬ ಪದ್ಯವನ್ನು ನೃಪತುಂಗನಿಗೆ ಅನ್ವಯಿಸಲು ಅವಕಾಶವಿಲ್ಲ. ಒಟ್ಟಿನಲ್ಲಿ ಶ್ರೀವಿಜಯನೊಂದಿಗೆ ನೃಪತುಂಗ, ಸಮಂತಭದ್ರ, ಸಾಮಪಜಯಾಳ್ವ, ಶ್ರೀ+ವಿಜಯ ಇವರ ಸಂಬಂಧವನ್ನು ಭಾವಿಸುವುದು ತೀರ ಕಾಲ್ಪನಿಕ. ಹಾಗಾದರೆ ಶ್ರೀವಿಜಯನಾರು?

ಶ್ರೀವಿಜಯನೆಂಬ ಹೆಸರನ್ನೊಳಗೊಂಡ ಪ್ರಾಚೀನ ಶಾಸನಗಳ ಪರಿಶೋಧನೆಯಲ್ಲಿ ಈ ಪ್ರಶ್ನೆಗೆ ಉತ್ತರ ಹುಡುಕಬೇಕು. ಈ ದೃಷ್ಟಿಯಿಂದ ಪಂಪಪೂರ್ವಯುಗದ ಕೆಳಗಣ ಶಾಸನಗಳನ್ನು ಅವಲೋಕಿಸಬಹುದಾಗಿದೆ.

೧) ಲಕ್ಷ್ಮೇಶ್ವರ ಶಾಸನ (ಕ್ರಿ.ಶ. ೭೩೫): "......ಮೂಲಸಂಘಾನ್ವಯ ದೇವಗಣೋದಿತಃ ಪರಮತಪಶತ್ರುತಮೂರ್ತ್ತಿವಿವೇಕರಾಮ ದೇವಾಚಾರ್ಯಶಿಷ್ಯೋವಿಜಿತವಿಪಕ್ಷವಾದಿ ಜಯದೇವಪಂಡಿತಾನ್ತೇವಾಸಿ ಸಮುಪಗತಕವಿವಾದಿತ್ವಾದಿ ಶ್ರೀವಿಜಯದೇವಪಂಡಿತಾಚಾರ್ಯಾಯ ಜಿನಪೂಜಾಭಿವೃದ್ಧ್ಯರ್ಥಂ ಬಾಹುಬಲಿಶ್ರೇಷ್ಠಿ ವಿಜ್ಞಾಪನೇನ ಪುಲಿಕರನಗರ್ಯಾಂ ಶಂಖತೀರ್ತ್ಥವಸತೇ ಮಣ್ಣನಮಣ್ಣಿತಃ......"[೩೧]

ಬಾದಾಮಿ ಚಾಲುಕ್ಯವಿಕ್ರಮಾದಿತ್ಯನ ಕಾಲದ ಈ ಶಾಸನದಲ್ಲಿ, ಒಬ್ಬ ಶ್ರೀವಿಜಯದೇವ ಪಂಡಿತಾಚಾರ್ಯ ಕಂಡುಬರುತ್ತಾನೆ. ಇಲ್ಲಿಯ ಶ್ರೀಕಾರವನ್ನು ಗೌರವಸೂಚಿಯೆಂದು ಭಾವಿಸಿರುವ S.I.I. XXದ ಸಂಪಾದಕರ ಪ್ರಕಾರ ಈ ಹೆಸರು 'ವಿಜಯದೇವಪಂಡಿತಾಚಾರ್ಯ' ಜೈನಶಿಲಾ ಲೇಖ ಸಂಗ್ರಹ (ದ್ವಿ.ಭಾ. ೧೦೪) ದ ಸಂಪಾದಕರ ಪ್ರಕಾರ 'ಶ್ರೀವಿಜಯದೇವಪಂಡಿತಾಚಾರ್ಯ'. ಇದೇ ಶಾಸನದ ರಾಮದೇವ ಜಯದೇವ ಹೆಸರುಗಳ ಹಿಂದೆ ಶ್ರೀಕಾರವಿಲ್ಲದುದರಿಂದ ಶ್ರೀವಿಜಯ ದೇವಪಂಡಿತಾಚಾರ್ಯ ಎಂಬುದೇ ಇಡಿ ಹೆಸರಾಗಿರುವ ಸಂಭವವಿದೆ. 'ಕವಿವಾದಿತ್ವಾದಿ'ಯಾಗಿರುವ ಈ 'ಶ್ರೀವಿಜಯದೇವ' ಮತ್ತು ದುರ್ಗಸಿಂಹ ಹೇಳುವ 'ಶ್ರೀವಿಜಯರ್ ದೇವರ್'ಗಳಲ್ಲಿರುವ ನಾಮಸಾಮ್ಯ ಮತ್ತು ಕವಿತ್ವಗಳನ್ನು ನೆನೆದರೆ ಇಬ್ಬರೂ ಒಬ್ಬನೇ ಎಂಬ ಅನುಮಾನ ಹುಟ್ಟುತ್ತದೆ.[೩೨] ಇದಕ್ಕೆ ಇನ್ನೂ ಬಲವಾದ ಬೇರೆ ಆಧಾರಗಳು ಬೇಕು.

೨) ಅ. ಮಣ್ಣೆ ತಾಮ್ರಶಾಸನ (ಕ್ರಿ.ಶ. ೭೯೩): [ಗಂಗರ ಸುದೀರ್ಘ ವಂಶಾವಳಿಯನ್ನು ಶಿವಮಾರನ ಮಗ ಮಾರಸಿಂಹನ ವರೆಗೆ ಹೇಳಿ] ಗಂಗಮಣ್ಡಲಮನುಶಾಸತಿ ಶ್ರೀಮಾರಸಿಂಹಾಭಿಧಾನೇ ಅಸೀತ್ಸಮಸ್ತಸಾಮನ್ತಸೇನಾಧಿಪತಿಃ ಪರಮಾರ್ಹತಃ ಪರಮಧಾರ್ಮ್ಮಿಕಃ ಮನ್ತ್ರಪ್ರಭೂತ್ಸಾಹಶಕ್ತಿಸಮ್ಪನ್ನಃ ಶ್ರೀವಿಜಯೋನಾಮ [ಧೇ]ಯಶ್ಚ ಸಹಸ್ರದೀಧಿತಿರಿವ ತಿರೋಹಿತಾಖಿಳಪರತೇಜಃ ಪರತೇಜಃಪ್ರಸರೋಪಿ ಅಸಂತಾಪಿತ ಭೂತಲಃ ಸುನಾಸೀರಿವಾಖಣ್ಡಿತ ಸಕಳನಾಜ್ಞೋಪಿ ಅಗೋತ್ರಭೇದನಕರಃ ಗುಹ ಇವ ಶಕ್ತಿಸಮುತ್ಸಾರಿತಾರಾತಿವರ್ಗ್ಗೋಽಪಿ ಅಕೃತ ಬಾಳಭಾವಃ ಶಿಶಿರಗಭಸ್ತಿರಿವ ಪ್ರಹ್ಲಾದನೋದ್ಯೋತನ ಸಮರ್ತ್ಥೋಪಿ ಅದೋಷಾಶ್ರಿತವಿಗ್ರಹಃ ವಾರಿರಾಶಿರಿವ ಅಪರಿಮಿತ ಸತ್ವಸಮಾಶ್ರಯೋಪಿ ಅಪಂಕಮಲಗ್ರಿಹೀತಃ ವಿನತಾನ್ದ ಇವ ಅತಿದೂರದ [ರ್ಶ] ನೋಪಿ ಅಪಿಶಿತಾಶನಃ ಶತಕ್ರತುರಿವ ಬುಧುಗುರುಮಿತ್ರ ಪರಿವೃತೋಽಪಿನ [ಪ]ರದಾರರತಿಶಪ್ತಃ ಝುಷಕೇತನ ಇವ ಸ್ವವಶೀಕೃತ ಸಕಲ ಜನೋಽಪಿ ಅಪ್ರಹೃತ ಬಾಳಾಬಳಾತಪ...... ಯಶ್ಚ ಅಮೃತಮಯೋ ಭೃತ್ಯಾನಾಂ ಸುಖಮಯೋ ಮಿತ್ರಾಣಾಂ ಸುಧಾಮಯೋ ರಾಮಾಣಾಮುತ್ಸಾವಮಯಃ ಪ್ರಜಾಣಾಂ ವಿನಯಮಯೋ ಗುರೂಣಾಂ ನಯಸ್ಸಳದ್ವೃತ್ತೀನಾಂ ಅಗ್ರಣೀ ರಸಿಕಾನಾಂ ಸ್ರಷ್ಟಾ ಕಾವ್ಯರಚನಾನಾಂ ಉಪದೇಷ್ಟಾ ನಯಾನಾಂ ದ್ರಷ್ಟಾ ಸ್ವಾಮಿಕಾರ್ಯಾಣಾಂ ವಿದ್ವೇಷ್ಟಾ ಕೃತದೋಷಾಣಾಂ ಯಷ್ಟಾ ಮಹಾಮಹಾನಾಂ ಪರಿಮಾರ್ಷ್ಟಾ ಪಾಪಾನಾಂ ಪ್ರಷ್ಟಾ ನಿರ್ಮ್ಮಾಣ ಹೇತೂನಾಂ ಪರಿಕ್ರಷ್ಟಾಶ್ರಿತಾಗಸಾಂ। ಅಪಿಚ

---

೩೦. ಶ್ರೀವಿಜಯಂ (ಆಚಣ್ಣನ ವರ್ಧಮಾನಪುರಾಣ ಮತ್ತು ಮಧುರನ ಧರ್ಮನಾಥಪುರಾಣ)

೩೧. S.I.I. xx. No. 7

ಉದನ್ವಾನಿವ ಗಾಂಭೀರ್ಯ್ಯೇ ವಿವಸ್ವಾನಿವ ತೇಜಸಿ ।
ಶಶಲಕ್ಷ್ಮೀವ ಲಾವಣ್ಯೇ ನಭಸ್ವಾನಿವ ಯೋ ಬಳೇ ॥

ಮನೋಭೂರಿವ ಸೌರೂಪ್ಯೇ ಮಘಾನಿವ ಸಂಪದಿ।
ಸುರಮಂತ್ರೀವ ಶಾಸ್ತ್ರಾರ್ತ್ಥೇ ಉಶನೇವ ಚಯೋ ನಯೇ ॥

ಗ್ರಾಮೇಪುರೇ ನದೀತೀರೇ ಗಿರೌದ್ವೀಪೇ ಸರೋಂಽತಿಕೇ।
ಪ್ರಾವರ್ತ್ತಯತ್ಸ್ವ ಕೀರ್ತಾಭ್ಯಾಂ ಯೋನೇಕಾಂ ವಸತಿಂ ಪ್ರಭುಃ ॥

ಸಮಾನ್ಯನಗರೇ ಶ್ರೀಮಾ[ನ್] ಶ್ರೀವಿಜಯೋಽಕಾರ[ಯ]ಚ್ಛುಭಂ ।
ಜಿನೇಂದ್ರಭವನಂ ತುಂಗಂ ನಿರ್ಮ್ಮಳಂ ಸ್ವಮಹಸ್ಸಮಂ ॥

ತಸ್ಯ ಚ ಪ್ರಸಾಧಿತಾಶೇಷ ಸಾಮನ್ತಚಕ್ರಸ್ಯ ಶ್ರೀಮಾರಸಿಂಹಸ್ಯಾನುಜ್ಞಯಾ ಶ್ರೀವಿಜಯೋ ಮಹಾನುಭಾವಃ ಕಿಱುವೆಕ್ಕೂರ ಗ್ರಾಮಮಾದಾಯ ಮಾನ್ಯಪುರವಿನಿರ್ಮ್ಮಿತಾಯ ಭಗವದರ್ಹದಾಯತನಾಯ ಅದಾದಿತಿ ತಸ್ಯಚ ಗ್ರಾಮಸ್ಯ (ಸೀಮೆಯ ವಿಷಯ ಹೇಳಲಾಗಿದೆ) ಅಪಿಚ,

ಆಸೀದ(ತ್) ತೋರಣಾಚಾರ್ಯ್ಯಃ ಕೊಣ್ಡಕೊನ್ದಾನ್ವಯೋದ್ಭವಃ ।
ಸತ್ಯೆದದ್ವಿಷಯೇ ಧೀಮಾನ್ ಶಾಲ್ಮಲೀಗ್ರಾಮಮಾಶ್ರಿತಃ ॥

ನಿರಾಕೃತಾ ತಮೋಽರಾತಿ ಸ್ಥಾಪಯನ್ಸತ್ಪಥೇ ಜನಾಂ।
ಸ್ವತೇಜೋದ್ಯೋತಿತಕ್ಷೋಣಿಃ ಚಂಡಾರ್ಚಿರಿವ ಯೋ ಬಭೌ ॥

ತಸ್ಯಾಭೂತ್ ಪುಷ್ಪನನ್ದೀತಿ ಶಿಷ್ಯೋ ವಿದ್ವಾನ್ ಗಣಾಗ್ರಣಿಃ ।
ತಚ್ಛಿಷ್ಯಸ್ಯ ಪ್ರಭಾಚಂದ್ರಃ ತಸ್ಯೇಯಂ ವಸತಿಕೃತಾ ॥

(ಮೂರು ಚರಣಗಳಲ್ಲಿ ದಾನದ ವಿವರ ಹೇಳಲಾಗಿದೆ)[೩೩]

ಬ. **ಮಣ್ಣೆ ತಾಮ್ರಶಾಸನ (ಕ್ರಿ.ಶ. ೮೦೨):** [ರಾಷ್ಟ್ರಕೂಟರ ಸುದೀರ್ಘ ವಂಶಾವಳಿಯನ್ನು ಮೂರನೆಯ ಗೋವಿಂದ, ಕಂಭ ಇವರ ವರೆಗೆ ಹೇಳಿದ ತರುವಾಯ ತೋರಣಾಚಾರ್ಯ ಪುಷ್ಪನಂದಿ ಪ್ರಭಾಚಂದ್ರರನ್ನು ಉಲ್ಲೇಖಿಸಿ]..... ರಾಜಾಧಿರಾಜ ಪರಮೇಶ್ವರ ಶ್ರೀನಿರುಪಮದೇವ ಪ್ರಭೂತವರ್ಷ ಪ್ರಸಾದೋಪಲಬ್ಧ ಮಹಾಸಾಮಂತಾಧಿಪತ್ಯಾಲಂಕೃತ ಮಹಾನುಭಾವೇನ ಭಗವದರ್ಹಭಟಾರಕ ಚರಣ ಪರಿಚರಣ ಪ್ರಣತ ಪವಿತ್ರಿತೋತ್ತಮಾಂಗೇನ ಮಹಾವಿಜಯ ವಿಕ್ಷೇಪಾಧಿಪತಿ ಶ್ರೀ ಶ್ರೀ ವಿಜಯರಾಜೇನ ನಿರ್ಮಾಪಿತಾಯ ಜಿನಭವನಾಯ ಮಾನ್ಯಪುರೀ ಪಶ್ಚಿಮದಿಗಂಗನಾಲಲಾಮ ಭೂತಾಯ......"[೩೪]

ಇವುಗಳಲ್ಲಿ 'ಬ' ಶಾಸನದ "ಶ್ರೀನಿರಪಮದೇವ ಪ್ರಭೂತವರ್ಷ ಪ್ರಸಾದೋಪಲಬ್ಧಮಹಾಸಾಮನ್ತಾಧಿಪತ್ಯಾಲಂಕೃತೇನ..... ಶ್ರೀವಿಜಯರಾಜೇನ" ಎಂಬ ಮಾತಿನಂತೆ ಶ್ರೀವಿಜಯನು ನಿರುಪಮದೇವನ (ಮಗನಾದ) ಪ್ರಭೂತವರ್ಷ ಅಂದರೆ ರಾಷ್ಟ್ರಕೂಟ ಮೂರನೆಯ ಗೋವಿಂದನ ಸಾಮಂತ. ಈತನು ರಾಷ್ಟ್ರಕೂಟ ಮನೆತನದೊಂದಿಗೆ ಇಟ್ಟುಕೊಂಡ ನೇರ ಸಂಪರ್ಕ ಮತ್ತು ಮೂರನೆಯ ಗೋವಿಂದನ (ಬಹುಶಃ ನೃಪತುಂಗನ) ಸಮಕಾಲೀನತೆಗಳು ಇಲ್ಲಿ ಸಂಶೋಧಕರ ಗಮನಸೆಳೆವ ಸಂಗತಿಗಳಾಗಿವೆ. "ಅಗ್ರಣೀ ರಸಿಕಾನಾಂ ಸೃಷ್ಟಾ ಕಾವ್ಯರಚನಾನಾಂ", "ಸುರಮಂತ್ರೀವ ಶಾಸ್ತ್ರಾರ್ಥೇ" ಎಂಬ ವರ್ಣನೆಗಳಲ್ಲಿ ಶ್ರೀವಿಜಯನ ಕಾವ್ಯಮತಿ, ಶಾಸ್ತ್ರಗತಿ

---

೩೨. 'ಶ್ರೀವಿಜಯದೇವ' ಎಂಬ ಹೆಸರು ಇಡಿಯಾಗಿ ಬಳಕೆಯಾದುದನ್ನು ೧೧ನೆಯ ಶತಮಾನದ ಹುಮ್ಮಚದ ಹಲವು ಶಾಸನಗಳಲ್ಲಿಯೂ ಕಾಣಬಹುದು. (E.C. VIII.ನಗರ ೩೫, ೩೬, ೪೦).

೩೩. E.C. IX, ನೆಲಮಂಗಲ ೬೦. ಮಣ್ಣೆಗ್ರಾಮ.

೩೪. E.C. IX. ನೆಲಮಂಗಲ ೬೧. ಮಣ್ಣೆಗ್ರಾಮ.

ಎದ್ದು ಕಾಣುತ್ತಿವೆ. ಮೇಲಾಗಿ ದುರ್ಗಸಿಂಹನು ತೋರುವ 'ಶ್ರೀವಿಜಯರ್ ದೇವರ್' ಎಂಬ ಗೌರವ ಈತನಿಗೆ ಸಂಪೂರ್ಣ ಒಪ್ಪುತ್ತದೆ. ಅದಕ್ಕಾಗಿ ಈತನೇ ಕವಿಮಾರ್ಗದ ಶ್ರೀವಿಜಯನಾಗಿರಬಹುದೆಂದು ನಮ್ಮ ಎಣಿಕೆ.

ಕವಿಮಾರ್ಗದ ಹಾಗೆ ಕವಿರಾಜಮಾರ್ಗದೊಂದಿಗೂ ಶ್ರೀವಿಜಯನೆಂಬ ಹೆಸರು ಹೆಣೆದು ನಿಂತಿದೆ. ಅದರ ಕೊನೆಯಲ್ಲಿ ಕರ್ತೃವನ್ನು ಕುರಿತು ಬರುವ ಪಾರ್ಥಿವ (=ಕ್ಷತ್ರಿಯ) ಲೋಕಂ,[೩೫] ಅಸಹಾಯ ಸಾಹಸವಿನೋದಂ,[೩೬] ಜಯಾವತಾರಂ,[೩೭] ಪುರುಷವ್ರತನ್[೩೮] ಎಂಬ ಹೊಗಳಿಕೆಗಳು ಈ ಶಾಸನೋಕ್ತ ಶ್ರೀವಿಜಯನನ್ನು ನೆನಪಿಗೆ ತರುತ್ತವೆ. ಅದಕ್ಕಾಗಿ ಇವನು ಕವಿಮಾರ್ಗದ ಶ್ರೀವಿಜಯನೂ ಹೌದು, ಕವಿರಾಜಮಾರ್ಗದ ಶ್ರೀವಿಜಯನೂ ಹೌದು ಎನಿಸುತ್ತದೆ. ಒಂದು ಸಮಯದಲ್ಲಿ ಸೃಷ್ಟಿಯಾದ ಇವನ ಕವಿಮಾರ್ಗವು ಇನ್ನೊಂದು ಸಮಯದಲ್ಲಿ ಇವನೂ ಒಳಗೊಂಡ ನೃಪತುಂಗದೇವನ ನೇತೃತ್ವದ ವಿದ್ವತ್ ಸಮುದಾಯದಲ್ಲಿ ಪರಿಷ್ಕಾರಗೊಂಡು, ಕವಿರಾಜಮಾರ್ಗವಾಗಿರಬಹುದು. ಈ ಪರಿಷ್ಕಾರ ಸಂದರ್ಭದಲ್ಲಿ ಸೇರಿಕೊಂಡ ಹೊಸವಿಚಾರಗಳಿಂದಾಗಿ ಮೂಲಕೃತಿ ಒಂದಿಷ್ಟು ಅಸ್ತವ್ಯಸ್ತಗೊಂಡಂತಿದೆ. ಪ್ರಕರಣವಿಭಜನೆಯ ದೃಷ್ಟಿಯಿಂದ ಕಾವ್ಯಾದರ್ಶಕ್ಕಿಂತ ಹೆಚ್ಚು ಶಿಸ್ತುಗೊಂಡಿದ್ದರೂ ಕವಿರಾಜಮಾರ್ಗದಲ್ಲಿ ಕಂಡುಬರುವ ಮತದ್ವಯದ ಮಿಶ್ರಣ, ಪಾಠವ್ಯತ್ಯಾಸ, ನಿರೂಪಣೆಯ ಅವ್ಯವಸ್ಥೆಗಳು-ಈ ವಿಚಾರವನ್ನು ಪೋಷಿಸುತ್ತವೆ. ಬಾಹ್ಯ ಆಧಾರಗಳೂ ಈ ಭಾವನೆಯನ್ನು ಬಲಗೊಳಿಸುತ್ತವೆ. ಕವಿರಾಜಮಾರ್ಗದ ವಿವರ ಅಭ್ಯಾಸದಿಂದ ಈ ಮಾತನ್ನು ಖಚಿತಪಡಿಸಿಕೊಳ್ಳಬಹುದು.

ಮತದ್ವಯದ ಮಿಶ್ರಣ :

ಕವಿರಾಜಮಾರ್ಗ ಜೈನವ್ಯಕ್ತಿಯ ಕೃತಿಯೆಂದು ಸಾಮಾನ್ಯ ನಂಬುಗೆಯಿದ್ದರೂ ಅದರ ಒಡಲಲ್ಲಿ ನೆಲೆನಿಂತ ವೈದಿಕ ಅಂಶಗಳನ್ನು ಅಲಕ್ಷಿಸುವಂತಿಲ್ಲ. ಕಾವ್ಯಾದರ್ಶದೊಂದಿಗೆ ತುಲನಿಸುತ್ತ ಇಲ್ಲಿಯ ವೈದಿಕ ಉಪೇಕ್ಷೆಯನ್ನು ಮೊದಲು ಸ್ಪಷ್ಟಪಡಿಸಿಕೊಳ್ಳಬಹುದು.

ಸರಸ್ವತಿ ಪ್ರಾರ್ಥನೆ:

ಚತುರ್ಮುಖಮುಖಾಂಭೋಜವನಹಂಸವಧೂರ್ಮಮ ।
ಮಾನಸೇ ರಮತಾಂ ನಿತ್ಯಂ ಸರ್ವಶುಕ್ಲಾ ಸರಸ್ವತೀ ॥[೩೯]

ಶ್ರೀವಿಶದವರ್ಣೆ ಮಧುರಾ। ರಾವೋಚಿತೆ ಚತುರರುಚಿರಪದರಚನೆ ಚಿರಂ ।
ದೇವಿ ಸರಸ್ವತಿ ಹಂಸೀ । ಭಾವದೆ ನೆಲೆಗೊಳ್ಗೆ ಕೂರ್ತು ಮನ್ಮಾನಸದೊಳ್ ॥[೪೦]

---

೩೫. ಕ.ಮಾ. ೩-೨೨೫

೩೬. ಕ.ಮಾ. ೩-೨೨೯

೩೭. ಕ.ಮಾ. ೩-೨೨೭

೩೮. ಪುರುಷವ್ರತ ಮತ್ತು ಕವಿರಾಜಮಾರ್ಗ-ಎಂ.ವಿ. ಸೀತಾರಾಮಯ್ಯ (ಸಾ.ಪ. ೫೪-೨) ನೋಡಿರಿ.

೩೯. ಕಾ.ದ. ೧-೧

೪೦. ಕ.ಮಾ. ೧-೩

ಚ್ಯುತಯಾಥಾಸಂಖ್ಯಾ (ಅಪಕ್ರಮ):

ಸ್ಥಿತಿನಿರ್ಮಾಣಸಂಹಾರಹೇತವೋ ಜಗತಾಮಮೀ ।
ಶಂಭುನಾರಾಯಣಾಂಭೋಜಯೋ ನಮಃ ಪಾಲಯಂತು ವಃ ॥[೪೧]

ಅಳಿನಳಿನೋತ್ಪಳರುಚಿಗಳ । ನಳಕಾನನನಯನಯುಗಳದಿಂ ಗೆಲ್ದಿರ್ದಂ ।
ಕೊಳದೊಳಗೇನಂ ನೋಟ್ಪಿಗ । ವಿಳಾಸಿನೀ ನಿನ್ನವೋಲದೇನತಿಶಯಮೋ ॥[೪೨]

ದೀಪಕ:

ವಿಷ್ಣುನಾ ವಿಕ್ರಮಸ್ತೇನ ದಾನವಾನಾಂ ವಿಭೂತಯಃ ।
ಕ್ವಾಪಿ ಸೀತಾಃ ಕುತೋಽಪ್ಯಾಸನ್ನಾನೀತಾ ದೈವತರ್ದ್ಧಯಃ ॥[೪೩]

ದಿವಸಕರನುದಯ ಗಿರಿಶಿಖ।ರವಿಶೇಷ ವಿಭೂಷಣಂ ತಮೋರಿಪುಬಳಮಂ ।
ಪ್ರವಿಲೀನಂ ಮಾಡಿದನವ।ಯವದೊಳ್ ತಾರಾವಿತಾನ ತೇಜಮನಟೆದಂ ॥[೪೪]

ದ್ರವ್ಯಸ್ವಭಾವಾಖ್ಯಾನ:

ಕಂಠೇ ಕಾಲಃ ಕರಸ್ಥೇನ ಕಪಾಲೇನೇಂದುಶೇಖರಃ ।
ಜಟಾಭಿಃ ಸ್ನಿಗ್ಧತಾಮ್ರಾಭಿರಾವಿರಾಸೀತ್ ವೃಷಧ್ವಜಃ ॥[೪೫]

ತಳಮಿತಮಧ್ಯೆಯನಾಯತ।ವಿಳೋಳಲೋಚನೆಯನುನ್ನತಸ್ತನಯುಗೆಯಂ ।
ಲಳಿತವಿಳಾಸಿನಿಯಂ ಕೋ।ಮಳಾಂಗಿಯಂ ಪೃಥುನಿತಂಬಬಿಂಬೆಯನುಟೆದಂ ॥[೪೬]

ಪ್ರಶಂಸೋಪಮೆ:

ಬ್ರಹ್ಮಣೋಽಪ್ಯುದ್ಭವಃ ಪದ್ಮಶ್ಚಂದ್ರಃ ಶಂಭುಶಿರೋಧೃತಃ ।
ತೌತುತ್ಯಾ ತ್ವನ್ಮುಖೇನೇತಿ ಸಾ ಪ್ರಶಂಸೋಪಮೋಚ್ಯತೇ ॥[೪೭]

ಅಮೃತಭವಂ ಶಿಶಿರಕರಂ । ಕಮಳಂ ಜಗದೇಕಪಾವನೀಯಶ್ರೀಕಂ ।
ಸಮನವಱೊಳ್ ನಿನ್ನ ಮೊಗಂ । ಕ್ರಮಮೆಂಬುದನಱೆವುದಾ ಪ್ರಶಂಸೋಪಮೆಯಂ ॥[೪೮]

ಪ್ರಿಯತರಾಲಂಕಾರ:

ಅದ್ಯಯಾ ಮಮ ಗೋವಿಂದ ಜಾತಾತ್ವಯಿ ಗೃಹಾಗತೇ ।
ಕಾಲೇನೈಷಾ ಭವೇತ್ ಪ್ರೀತಿಸ್ತವೈವಾಗಮನಾತ್ ಪುನಃ ॥[೪೯]

ಗುರುಜನದ ಪರಕೆಯುಂ ಬಂ।ಧುರ ಪುಣ್ಯಫಳಾನುಬಂಧಮುಂ ನೆರೆದನ್ನೊಳ್ ।
ಪರಮಾನುಭಾವಭರಮಂ। ದೊರೆಕೊಂಡುವವಿಂದು ಬರವಿನೊಳ್ ನಿಮ್ಮಡಿಯಾ ॥[೫೦]

---

೪೧. ಕಾ.ದ. ೩-೧೪೫
೪೨. ಕ.ಮಾ. ೧-೪೯(ಇಲ್ಲಿ ಯಥಾಸಂಖ್ಯೆ ಚ್ಯುತವಾದಂತಿಲ್ಲ)
೪೩. ಕಾ.ದ. ೨-೧೦೧
೪೪. ಕ.ಮಾ. ೩-೫೭
೪೫. ಕಾ.ದ. ೨-೧೨
೪೬. ಕ.ಮಾ. ೩-೧೦
೪೭. ಕಾ.ದ. ೨-೩೧
೪೮. ಕ.ಮಾ. ೩-೭೪
೪೯. ಕಾ.ದ. ೨-೨೭೬.
೫೦. ಕ.ಮಾ. ೩-೨೦೪

ಕಾವ್ಯಾದರ್ಶ ಕವಿರಾಜಮಾರ್ಗಗಳ ಈ ಜೊತೆಪದ್ಯಗಳನ್ನು ಗಮನಿಸಿದರೆ, ಇಲ್ಲಿ ಕಾವ್ಯಾದರ್ಶದ ವೈದಿಕ ಸಂಗತಿಗಳಿಗೆ ಬೇರೆ ರೂಪಕೊಡುವ ಉದ್ದೇಶಪೂರ್ವಕ ಪ್ರಯತ್ನ ಶ್ರೀವಿಜಯನಿಂದ ನಡೆದಿರಬಹುದೆನಿಸುತ್ತದೆ. ಇನ್ನು ಜೈನ ಒಲವುಗಳಿಗಾಗಿ ಕೆಲವು ಉದಾಹರಣೆಗಳನ್ನು ನೋಡಬಹುದು:

ವ್ಯವಹಿತದೋಷ:

> ಅವತೇ ಭವತೇ ಬಾಹುರ್ಮಹೀಮರ್ಣವಶಕ್ವರೀಂ ।
> ಮಹಾರಾಜನ್ನ ಜಿಜ್ಞಾಸಾ ನಾಸ್ತೀತ್ಯಾಸಾಂ ಗಿರಾಂ ರಸಃ ॥[೫೧]
>
> ಮನದೆ ನೆನೆವವರ ಕಿಡುಗುಂ । ಜಿನಾಧಿಪಾ ನಿನ್ನ ಪಾಪನಿಚಯಂ ಗುಣಮಂ ।
> ಮುನಿಗಳುಮದಜೆಂ ತತ್ಸೇ। ವನೆಯಿಂ ಕಿಡಿಪಲ್ಕೆ ಪತ್ತಿದರ್ ಸಂಸೃತಿಯಂ ॥[೫೨]

ವಿಶೇಷಣ ರೂಪಕ:

> ಹರಿಪಾದಶ್ಶಿರೋಲಗ್ನ ಜಹ್ನುಕನ್ಯಾಜಲಾಂಶುಕಃ ।
> ಜಯತ್ಯಸುರ ನಿಶ್ಯಂಕಸುರಾನಂದೋತ್ಸವಧ್ವಜಃ ॥[೫೩]
>
> ಜಿನಚರಣನಖಾದರ್ಶಂ । ವಿನತಾಮರರಾಜರಾಜವದನಪ್ರತಿಮಂ ।
> ಮನದೊಳ್ ಸಲೆ ನಿಲ್ಕೆಂಬುದು । ವಿನಿಶ್ಚಿತ ವಿಶೇಷಣೋರುರೂಪಕಮಕ್ಕುಂ ॥[೫೪]

ಕಾವ್ಯಾದರ್ಶ, ಕವಿರಾಜಮಾರ್ಗದ ಈ ಜೊತೆಪದ್ಯಗಳಲ್ಲಿ, ಒಂದರ ವೈದಿಕ ವಾತಾವರಣವನ್ನು ಇನ್ನೊಂದರಲ್ಲಿ ಪ್ರಯತ್ನಪೂರ್ವಕವಾಗಿ ಜೈನರೂಪಕ್ಕೆ ತಿರುಗಿಸಲಾಗಿದೆ. ಮೂರನೆಯದಾಗಿ ಬೇರೆ ಕೆಲವು ಜೈನವಿಚಾರಗಳು ಅಲ್ಲಲ್ಲಿ ಕಂಡುಬರುತ್ತವೆ. ಅವು:

೧) "ಮುನಿವೀತರಾಗನೆಂದುಂ ಬನಮಂ ಸಾರ್ತರ್ಕ್ಕುಂ...."[೫೫] ಇಲ್ಲಿ ಉದ್ದೇಶಪೂರ್ವಕ ವೀತರಾಗ ಪದವನ್ನು ಬಳಸಲಾಗಿದೆ. ಇದಕ್ಕೆ ದಂಡಿ ಕೊಟ್ಟ ಉದಾಹರಣೆ ಬೇರೆ.

೨) "ರಾಗಾದಿದೋಷವಿರಹಿತಂ....."[೫೬] ಎಂದು ಮುಂತಾಗಿ ಹೇಳಿದ ಇಲ್ಲಿಯ ಆಗಮವಿರುದ್ಧ ಲಕ್ಷಣವು ದಂಡಿ ಭಾಮಹರಿಗಿಂತ ಭಿನ್ನವಾಗಿದ್ದು, ಮಾರ್ಗಕಾರನ ದೃಷ್ಟಿಯಲ್ಲಿ ಜೈನಾಗಮವಿದ್ದಂತೆ ಸಂದೇಹ ಮೂಡುತ್ತದೆ.

೩) "ಲೋಕಮದೂರ್ಧ್ವಾದೋಮಧ್ಯಾ....."[೫೭] ಎಂದುದು ವೈದಿಕಪರವಾಗಿದ್ದರೂ ದಂಡಿ ಭಾಮಹರ ಲಕ್ಷ್ಯಗಳನ್ನು ಗಮನಿಸಿದಾಗ ಇಲ್ಲಿಯೂ ಜೈನದೃಷ್ಟಿ ಇರಬಹುದೇ ಎನಿಸುತ್ತದೆ.

೪) ದಂಡಿಯ "ಭುವನತ್ರಿತಯೋದರಂ"[೫೮] ಎಂಬುದನ್ನು "ಆಶಾವಳಯಿತ ಲೋಕಾಕಾಶಂ"[೫೯] ಎಂದು ಮಾರ್ಪಡಿಸಿಕೊಂಡಿದ್ದಾನೆ. ಇಲ್ಲಿಯ "ಲೋಕಾಕಾಶಂ" ಜೈನ ಪರಿಭಾಷೆ.

---

೫೧. ಕಾ.ದ. ೩-೧೪೯
೫೨. ಕ.ಮಾ. ೧-೯೧
೫೩. ಕಾ.ದ. ೨-೮೧
೫೪. ಕ.ಮಾ. ೩-೧೮
೫೫. ಕ.ಮಾ. ೧-೭೯
೫೬. ಕ.ಮಾ. ೧-೧೦೪
೫೭. ಕ.ಮಾ. ೧-೧೦೯
೫೮. ಕಾ.ದ. ೨-೧೧೯
೫೯. ಕ.ಮಾ. ೩-೯೪

೫) ಅರಿಷಡ್ವರ್ಗಗಳಿಗೆ ಬದಲು ಮದ, ಮಾನ, ಮಾಯ, ಭಯ, ಲೋಭ, ವಿಷಾದ, ಹರ್ಷ ಎಂಬ ಸಪ್ತರಿಪುವರ್ಗವನ್ನು[೬೦] ಹೇಳಿದುದು ಜೈನದ್ಯೋತಕವೆಂದು ವಿದ್ವಾಂಸರ ಅಭಿಪ್ರಾಯ.

೬) ಎರಡನೆಯ ಪರಿಚ್ಛೇದದ ೩೮, ೪೦, ೮೯, ೯೧, ೯೩ನೆಯ ಪದ್ಯಗಳಲ್ಲಿಯ 'ಅಣುವ' ಪದ, ಜೈನ ರಾಮಾಯಣ ಸೂಚಿ ಎಂದು ಕೆಲವರ ಹೇಳಿಕೆ.

ಇವು ಕವಿರಾಜಮಾರ್ಗದ ಒಡಲಲ್ಲಿ ಕಂಡುಬರುವ ಜೈನ ಅಂಶಗಳು. ಇದೇ ರೀತಿಯಲ್ಲಿ ವೈದಿಕ ಅಂಶಗಳೂ ಆಗಾಗ ಕಂಡುಬಂದು ಕವಿರಾಜಮಾರ್ಗಕಾರನ ಮತ ವಿಷಯವಾಗಿ ದ್ವಂದ್ವಭಾವ ಹುಟ್ಟುತ್ತದೆ.

೧) ಶ್ರೀ ತಳ್ತುರದೊಳ್ ಕೌಸ್ತುಭ।ಜಾತದ್ಯುತಿ ಬಳಸಿ ಕಾಂಡಪಟದಂತಿರೆ ಸಂ ।
ಪ್ರೀತಿಯಿನಾವನನಗಲಳ್ । ನೀತಿನಿರಂತರನುದಾರನಾ ನೃಪತುಂಗಂ ॥[೬೧]

೨) ಕೃತಕೃತ್ಯಮಲ್ಲನಪ್ರತಿ। ಹತವಿಕ್ರಮನೊಸೆದು ವೀರನಾರಾಯಣನ ।
ಪ್ರತಿಶಯಧವಳಂ ನಮಗೀ। ಗತರ್ಕಿತೋಪಸ್ಥಿತ ಪ್ರತಾಪೋದಯಮಂ ॥[೬೨]

೩) 'ಅಧಿಕೃತಸತ್ಪುರುಷಾರ್ಥ। ಪ್ರಧಾನಧರ್ಮಾರ್ಥಕಾಮಮೋಕ್ಷಂಗಳ್'[೬೩]

೪) ಪರದರ್ಗಾ ಪಾರ್ವರ್ಗಾ। ಯ್ತರಸರ್ಗಾ ಕುಡಿಯರಪ್ಪ ನಾಲ್ವರ್ಗಗಳ್ ।
ಸ್ಥಿರಗೋಪಾಧ್ಯಾಯಕ್ಷ್ಮಾ। ಪರಿಪಾಲ್ಯಕ್ಷೇತ್ರಕರ್ಷಣಂಗಳ್ ಕ್ರಿಯೆಗಳ್ ॥[೬೪]

೫) ನೆರೆದೂರ್ಧ್ವರೇತನೊಳ್ ಪುರು। ಹಿರಣ್ಯರೇತೋತಿ ತೀವ್ರನೊಳ್ ॥[೬೫]

೬) "ತ್ರಿದಶಸುರಲೋಕವಾಸಾಸ್ಪದಮಂ"[೬೬]

೭) ನಿರುಪಮಗಂಧರ್ವಗತಿ। ಸ್ವರಾದಿಕ ಕಳಾಗುಣಂ ಚತುಃಷಷ್ಟಿವಿಧಂ ॥[೬೭]

೮) ಆ ಕಪಿಲ ಸುಗತ ಕಣಚರ। ಲೋಕಾಯತಿಕಾದಿಮಾರ್ಗಭೇದಂ ಸಮಯಂ ॥[೬೮]

೯) ದೇವರುಂ ಗೊರವರುಂ ಗುಣವೃದ್ಧರನಾರತಂ ।
ಕಾವರಕ್ಕರಸನಂ ಪ್ರಜೆಯಂ ಪರಿವಾರಮಂ ।[೬೯]

೧೦) ನೃಪನುಮಂ ಪ್ರಜೆಯುಮಂ ಪರಿವಾರಮುಮಂ ಮಹಾ ।
ಕೃಪೆಯಿನಾ ಗೊರವರುಂ ಸುರರುಂ ಗುಣವೃದ್ಧರುಂ ।
ವಿಪುಳರಾಗಪರರಾಗಿಸುಗೆ......................... ।[೭೦]

೧೧) ಶ್ರೀವನಿತಾಪ್ರಸವದಿನಾ। ಲಾವಣ್ಯದಿನತಿಗಭೀರ ಭಾವದೆ ನೀನಿಂ ।
ತಾ ವಾರಿಧಿಯಂ ಪೋಲ್ತಯ್। ಕೇವಲಭೇದಂ ದ್ವಿತೀಯ ಲಲಿತಾಕಾರಂ ॥[೭೧]

೧೨) ಜನಿತಪ್ರಗಲ್ಭದೊಳ್। [ಮಾ।ನ]ದೊಳ್ ಮಹಾತ್ಮ್ಯದೊಳ್ ನಿಜೋದಾರತೆಯೊಳ್ ।
ಅನುಪಮಗುಣದೊಳ್ ಶ್ರೀಶಂ। ಘನಮೆನೆ ಮಾಲೋಪಮಾನಭೇದಮಿದಕ್ಕುಂ ॥[೭೨]

---

೬೦. ಕ.ಮಾ. ೩-೨೨೭
೬೧. ಕ.ಮಾ. ೧-೧
೬೨. ಕ.ಮಾ. ೧-೨
೬೩. ಕ.ಮಾ. ೧-೨೦
೬೪. ಕ.ಮಾ. ೧-೬೫
೬೫. ಕ.ಮಾ. ೧-೬೪
೬೬. ಕ.ಮಾ. ೧-೮೫
೬೭. ಕ.ಮಾ. ೧-೧೦೭
೬೮. ಕ.ಮಾ. ೧-೧೦೫
೬೯. ಕ.ಮಾ. ೧-೧೩೨
೭೦. ಕ.ಮಾ. ೧-೧೩೩
೭೧. ಕ.ಮಾ. ೩-೪೦
೭೨. ಕ.ಮಾ. ೩-೮೧

೧೩)	ಜಲರಾಶಿಪ್ರಭವೆಯನವಿ। ಕಲಕೃಷ್ಣಗುಣಾನುರಕ್ತೆಯಂ ಮಿಗೆ ಲಕ್ಷ್ಮೀ ।
ಲಲನೆಯನಾಂತುಂ ವೃಕ್ಷ। ಸ್ಥಲದೊಳ್ ಪೇೞಿಂತುದಾರಚರಿತನೆಯಪ್ಪೈ ॥[೨೩]

ಈ ಪದ್ಯಗಳಲ್ಲಿಯ ವಿಷ್ಣು-ಲಕ್ಷ್ಮಿಯರ ವರ್ಣನೆ; ಚತುರ್ವಿಧಪುರುಷಾರ್ಥ, ಚತುರ್ವಿಧವರ್ಣ, ಅರುವತ್ತುನಾಲ್ಕು ಕಲೆಗಳ ಪ್ರಸ್ತಾಪ; ಊರ್ಧ್ವರೇತ-ಹಿರಣ್ಯರೇತ; ತ್ರಿದಶಸುರಲೋಕಗಳ ಕಲ್ಪನೆ; ಜೈನವನ್ನು ಹೊರತುಪಡಿಸಿದ ಕಪಿಲ-ಸುಗತ-ಕಣಚರ-ಲೋಕಾಯತ ಎಂಬ ಸಮಯಗಳ ನಿರ್ದೇಶನ; ಶೈವ ಗೊರವರು ಅರಸನನ್ನು ಕಾಪಾಡಲಿ ಎಂಬ ಹಾರೈಕೆ-ಇವು ವೈದಿಕವನ್ನು ಬಲವಾಗಿ ಪುರಸ್ಕರಿಸುತ್ತವೆ. ಹೀಗೆ ಕವಿರಾಜಮಾರ್ಗದಲ್ಲಿ ಜೈನ ಮತ್ತು ವೈದಿಕ ಪಾಲು ಕಂಡು ಬಂದು, ಅದು ಉಭಯ ಮತೀಯರ ವಿಚಾರಗಳ ಮಿಶ್ರಣ ಗ್ರಂಥವೆಂಬ ಭಾವನೆ ಬಲಿಯುತ್ತದೆ.

ಪಾಠವ್ಯತ್ಯಾಸ

ಒಂದು ಕೃತಿಯ ಅನುದ್ದೇಶಿತ ಪಾಠವ್ಯತ್ಯಾಸಕ್ಕೆ ಲಿಪಿಗಾರ, ಉದ್ದೇಶಿತ ಪಾಠವ್ಯತ್ಯಾಸಕ್ಕೆ ಅಭ್ಯಾಸಿ ಮತ್ತು ಅದರ ಕರ್ತೃ ಕಾರಣರಾಗುತ್ತಾರೆ. ಕವಿರಾಜಮಾರ್ಗದ ಹಸ್ತಪ್ರತಿಗಳ ವಿವರ ಅಭ್ಯಾಸದಿಂದ ಅಲ್ಲಿ ಸಾಲುಗಟ್ಟಿ ನಿಂತಿರುವ ಪಾಠಭೇದಗಳಿಗೆ, ಅನುದ್ದೇಶಕ್ಕಿಂತ ಉದ್ದೇಶಪೂರ್ಣ ಪಾಠವ್ಯತ್ಯಾಸವೇ ಕಾರಣವೆಂಬ ಭಾವನೆ ಮೂಡುತ್ತದೆ. ಈವರೆಗೆ ಲಭಿಸಿದ ನಾಲ್ಕು ಹಸ್ತಪ್ರತಿ[೨೪] ಗಳ ಪಾಠಪೀಳಿಗೆಯನ್ನು ಅಭ್ಯಸಿಸಿ ಈ ಅಂಶವನ್ನು ಖಚಿತಪಡಿಸಿಕೊಳ್ಳಬಹುದು.

ಮೂಲಪ್ರತಿ

ತಾಳೆ ಪ್ರತಿ ನಂ. ೧೧೦(ಅ)	ತಾಳೆ ಪ್ರತಿ. ನಂ. ೧೨೫ (ಬ)

ಕಾಗದ ಪ್ರತಿ ನಂ. ೧೭೫ (ಕ)	ಕಾಗದ ಪ್ರತಿ ನಂ. ೨೮೮(ಡ)

ಈ ವಂಶವೃಕ್ಷವನ್ನು ಗಮನಿಸಿದರೆ ಮೂಲಪ್ರತಿಯಿಂದ ಎರಡು ಪೀಳಿಗೆಗಳು ಕವಲೊಡೆದು, ಇವುಗಳಿಂದ ಮತ್ತೆ ಒಂದೊಂದು ನಕಲು ಪ್ರತಿಗಳು ಹುಟ್ಟಿವೆಯೆಂದು ಸ್ಪಷ್ಟವಾಗುತ್ತದೆ. ಅದಕ್ಕಾಗಿ ಹಸ್ತಪ್ರತಿಗಳು ಸಂಖ್ಯಾದೃಷ್ಟಿಯಿಂದ ನಾಲ್ಕು ಇದ್ದರೂ ಪಾಠದೃಷ್ಟಿಯಿಂದ ಅವು ಎರಡೇ. ವಸ್ತುಸ್ಥಿತಿ ಹೀಗಿದ್ದರೂ ನಮ್ಮ ಸೂಕ್ಷ್ಮ ಅವಲೋಕನೆಗಾಗಿ ನಾಲ್ಕನ್ನೂ ಇಟ್ಟುಕೊಂಡು, ಮುಖ್ಯ ಪಾಠಭೇದಗಳನ್ನು ಕೆಳಗಿನಂತೆ ವಿವರಿಸಬಹುದು.

"ನುಡಿಗೆಲ್ಲಂ ಸಲ್ಲದ ಕನ್ನಡದೊಳ್......"[೨೫]	'ಬ' ಪ್ರತಿಯಲ್ಲಿ ಈ ಪದ್ಯವಿಲ್ಲ.
"ಅಹರಹರುಚ್ಚೈ........."[೨೬]	'ಡ' ಪ್ರತಿಯಲ್ಲಿ ಮಾತ್ರವಿದೆ.

---

೨೩. ಕ.ಮಾ. ೩-೧೬೧
೨೪. ಇನ್ನೂ ಮೂರುಹಸ್ತಪ್ರತಿಗಳಿವೆ. ನೋಡಿ: ನೃಪತುಂಗಾಭ್ಯುದಯ- ಮಾರ್ಗ ೧. ಪುಟ ೧೨ ಮತ್ತು ೧೩ರ ಅ.ಟಿ.
೨೫. ಕ.ಮಾ. ೧-೩೩. ಮೊದಲಿನ ಎರಡು ಪರಿಷ್ಕರಣಗಳಲ್ಲಿಯ 'ನುಡಿಗೆಲ್ಲಂ ಸಲ್ಲದ....' ಮತ್ತು 'ಪರಮಶ್ರೀ' ಎಂಬ ಕ್ರಮ ಎಂ.ವಿ. ಸೀತಾರಾಮಯ್ಯನವರ ಪರಿಷ್ಕರಣದಲ್ಲಿ ಹಿಂದು-ಮುಂದಾಗಿದೆ.
೨೬. ಕ.ಮಾ. ೧-೫೨

"ವನರುಹದಳನಯನೆ........."[೭೭]
"ಮೊದಲಪದನ್ಯೂನಾಕ್ಷರ........."[೭೮]
— 'ಅ' 'ಬ' 'ಕ' ಪ್ರತಿಗಳಲ್ಲಿ ಈ ಪದ್ಯಗಳು ಹಿಂದುಮುಂದಾಗಿವೆ.

"ವಿಪುಳವೃತ್ತಿಯೊಳೊಂದಾಗಿರೆ ಪೇಟ್ಟಿನ
ಭ್ಯುಪಗಮೋಕ್ತಿ ಗುಣಾಗುಣಂಗಳಂ"[೭೯]
— ಈ ಭಾಗ 'ಅ' 'ಬ' 'ಕ'ಗಳಲ್ಲಿ ಇಲ್ಲ.

"ಪೊಳೆವ ಮಿಂಚುಗಳಂತಿರೆ ಕೇತುಗಳ್"[೮೦]
— ಎಂಬ ಭಾಗ 'ಡ'ದಲ್ಲಿ ಮಾತ್ರ ಇದೆ.

"ನಿಯಮಿತಾಕ್ಷರ......"[೮೧] "ಉಪಮಿತಾಕ್ಷರ......"[೮೨] ಎಂದು ಪ್ರಾರಂಭವಾಗುವ ಈ ಎರಡು ಪದ್ಯಗಳ ಮಧ್ಯ "ಜಳದ ಸಂಹಿತೆಯಂತಿರೆ ಹಸ್ತಿಗಳ್। ಗಳಿತಧಾರೆಗಳಂತಿರೆ ಪತ್ತಿಗಳ್। ಬಳಸಿ ಕಾರ್ಗಣೆಯಾಯ್ತು ಮಹಾಹವಂ" ಎಂಬ (ತಿದ್ದಿದ) ಮೂರು ಚರಣಗಳು ಮತ್ತೆ ಅ, ಬ, ಕ ಗಳಲ್ಲಿ ಮಾತ್ರ ಕಂಡುಬರುತ್ತವೆ.

"ಪರಿವಾರವಾರವನಿತಾ......."[೮೩]
"ಪದನಱಿದೊಂದಂ........."[೮೪]
— ಇವುಗಳಲ್ಲಿ ಎರಡನೆಯ ಪದ್ಯದ ತರುವಾಯ ಮೊದಲನೆಯ ಪದ್ಯ ಅಲ್ಪವ್ಯತ್ಯಾಸದಿಂದ 'ಡ'ಪ್ರತಿಯಲ್ಲಿ ಮತ್ತೆ ಕಾಣುತ್ತದೆ.

"ನೃಪನನಭಿಮಾನಧನನ......"[೮೫] ಎಂಬ ಪದ್ಯದ ತರುವಾಯ "ನೃಪನಾನಭಿನುತ ಮನನಾ"[೮೬] ಎಂಬ ಪದ್ಯ 'ಡ' ಪ್ರತಿಯಲ್ಲಿ ಮಾತ್ರ ಗೋಚರಿಸುತ್ತದೆ.

"ಅಱಿದು ಪೀನಂ ಮಾರ್ಗಗತಿಯಂ ತಱಿಸಲ"[೮೭] ಮತ್ತು "ದೊಡೆಲ್ಲ ನೆಲಕೆಲ್ಲಂ ಪಾವನೀಯ ಚರಿತನೆಯಾದೆಂ"[೮೮] ಎಂಬಿವೆರೆಡೂ ಕೂಡಿ 'ಬ' ಪ್ರತಿಯಲ್ಲಿ ಒಂದು ಪದ್ಯವಾಗಿದೆ. ಮಧ್ಯದ ೨೨ ಪದ್ಯಗಳು ಇಲ್ಲ.

"ವರವಾರನಾರಿಯೊಳ್......."[೮೯] ಎಂಬ ಪದ್ಯದ ನಾಲ್ಕು ಚರಣಗಳು ಪೂರ್ತಿಯಾಗುವಲ್ಲಿ ಪದ್ಯಸಂಖ್ಯೆ ಹಾಕಲಾಗಿದೆ-'ಬ', 'ಡ' ಪ್ರತಿಗಳಲ್ಲಿ. ಎರಡೆರಡು ಚರಣ ಮುಗಿಯುವಲ್ಲಿ ಪದ್ಯಸಂಖ್ಯೆ ಹಾಕಲಾಗಿದೆ- 'ಅ', 'ಕ' ಪ್ರತಿಗಳಲ್ಲಿ. ಹೀಗಾಗಿ ಇಲ್ಲಿ ಇರಬೇಕಾದ ಪದ್ಯ ಒಂದೋ? ಎರಡೋ? ಎಂಬ ಸಂದೇಹ ಹುಟ್ಟುತ್ತದೆ.

"ಅತಿಶಯಧವಳೋರ್ವಿಪೋದಿತ......."[೯೦]
"ಬುಧಗುಣಗಣನಾತೀತಾಂತರಮಂ......."[೯೧]
— ಈ ಪದ್ಯಗಳು 'ಡ' ಪ್ರತಿಯಲ್ಲಿ ಹಿಂದು-ಮುಂದಾಗಿವೆ.

"ಅತಿಶಯಧವಳೋರ್ವಿಪೋದಿತ......"[೯೨]
— ಈ ಪದ್ಯ 'ಅ' ಮತ್ತು 'ಕ' ಪ್ರತಿಗಳಲ್ಲಿ ಇಲ್ಲ.

---

೭೭. ಕ.ಮಾ. ೧-೯೩
೭೮. ಕ.ಮಾ. ೧-೯೪
೭೯. ಕ.ಮಾ. ೧-೧೪೩
೮೦. ಕ.ಮಾ. ೧-೧೪೫
೮೧. ಕ.ಮಾ. ೧-೧೪೫
೮೨. ಕ.ಮಾ. ೧-೧೪೬
೮೩. ಕ.ಮಾ. ೨-೧೦
೮೪. ಕ.ಮಾ. ೨-೧೧
೮೫. ಕ.ಮಾ. ೨-೧೭
೮೬. ಕ.ಮಾ. ೨-೧೮
೮೭. ಕ.ಮಾ. ೨-೪೬
೮೮. ಕ.ಮಾ. ೨-೬೯
೮೯. ಕ.ಮಾ. ೨-೧೩೭
೯೦. ಕ.ಮಾ. ೨-೧೫೩
೯೧. ಕ.ಮಾ. ೨-೧೫೪
೯೨. ಕ.ಮಾ. ೨-೧೫೩

ಒಂದು ಮತ್ತು ಎರಡನೆಯ ಪರಿಚ್ಛೇದಗಳಲ್ಲಿ ಕಂಡುಬರುವ ಮೇಲಿನಂತಹ (ಇಡಿ ಪದ್ಯಕ್ಕೆ ಅನ್ವಯಿಸುವ) ಪಾಠವ್ಯತ್ಯಾಸಗಳು ಮೂರನೆಯ ಪರಿಚ್ಛೇದದಲ್ಲಿ ಕಂಡುಬರುವುದಿಲ್ಲ.

ಇದು ಕವಿರಾಜಮಾರ್ಗದ ಗಮನಾರ್ಹವಾದ ಪಾಠಗಳ ಪರಿಶೀಲನೆ. ಇದಲ್ಲದೆ, ಕೆಲವು ಪದ್ಯಗಳಿಗೆ ಎದ್ದುಕಾಣುವ ಪಾಠಭೇದಗಳು ಕನ್ನಡದ ಬೇರೆ ಗ್ರಂಥಗಳಲ್ಲಿ ಹೀಗೆ ಕಂಡುಬರುತ್ತವೆ.

೧) ನುತಶಬ್ದಾಳಂಕಾರದೊ । ಳತಿಶಯಮೀ ಕನ್ನಡಕ್ಕೆ ಸತತಂ ಪ್ರಾಸಂ ।
ಕೃತಕೃತ್ಯಮಲ್ಲವಲ್ಲಭ । ಮತದಿಂದದಱೌ ಪ್ರಪಂಚಮೀತೆಱನಕ್ಕುಂ ॥[೯೩]
("ಕೃತಕೃತ್ಯಮಪ್ಪುದೆಲ್ಲರ । ಮತದಿಂದದು ತಪ್ಪೆ ಕಾವ್ಯಮೇಂ ಶೋಭಿಪುದೇ"-(ಛಂದೋಂಬುಧಿ)

೨) ಅತಿವಿಶದಯಶೋವೃತ್ತಂ । ನತಸಕಳಾರಾತಿಜನವಿತಾನಂ ಮತ್ತಂ ।
ವಿತತಶ್ರೀಸಂಪತ್ತಂ । **ಶತಮುಖಸದೃಶಾನುಭಾವಪದಮಂ ಪೆತ್ತಂ ॥**[೯೪]
("ಸತತಂ ನೃಪತುಂಗದೇವನೊಲವಂ ಪೆತ್ತಂ"- (ಕವಿಜಿಹ್ವಾ ಬಂಧನ ೩-೩೧).

ಮೊದಲನೆಯ ಪದ್ಯದಲ್ಲಿ ಅಡ್ಡಬರುವ ನೃಪತುಂಗಸೂಚಿ 'ಕೃತಕೃತ್ಯಮಲ್ಲ' ಎಂಬುದನ್ನು ನಾಗವರ್ಮನೋ ಛಂದೋಂಬುಧಿಯ ಅಭ್ಯಾಸಿಯೋ ವ್ಯತ್ಯಾಸಗೊಳಿಸಿರಬೇಕು. ಆದರೆ ಎರಡನೆಯ ಪದ್ಯದಲ್ಲಿ ಇಲ್ಲದ 'ನೃಪತುಂಗದೇವ' ಪದ ಯಾರಿಂದ ಸೇರಿತೆಂಬ ಪ್ರಶ್ನೆ ಈ ಕೃತಿಯು ಪುನಾರಚನೆಯಾಗಿರುವುದನ್ನು ಸ್ಪಷ್ಟಗೊಳಿಸುತ್ತದೆ. ಈ ವಿವಿಧ ಸ್ವರೂಪದ ಪಾಠಭೇದಗಳ ಜೊತೆಗೆ ಪ್ರತಿಯಿಂದ ಪ್ರತಿಗೆ ಪದ್ಯ ಸಂಖ್ಯೆಯಲ್ಲಿ ವ್ಯತ್ಯಾಸ, ಪದ್ಯಕ್ರಮದಲ್ಲಿ ಸ್ಥಾನಪಲ್ಲಟ ಇವು ಸಾಮಾನ್ಯವಾಗಿವೆ. ಕೆಲವು ಲಕ್ಷಣಗಳಿಗೆ ಲಕ್ಷ್ಯಗಳು, ಲಕ್ಷ್ಯಗಳಿಗೆ ಲಕ್ಷಣಗಳು ಇಲ್ಲ. ಕವಿಮಾರ್ಗವನ್ನು ಮುರಿದು ಕವಿರಾಜಮಾರ್ಗಗೊಳಿಸಿದುದು ಈ ಅವ್ಯವಸ್ಥೆಗೆ ಕಾರಣವಾಗಿ, ಮುಂದೆ ಲಿಪಿಕಾರರ ಕೈಯಲ್ಲಿ ಅದು ಇನ್ನೂ ವರ್ಧಿಸಿರಬೇಕು.

ವಿಷಯ ನಿರೂಪಣೆಯ ಅವ್ಯವಸ್ಥೆ :

ಕವಿರಾಜಮಾರ್ಗದ ಪರಿಚ್ಛೇದಗಳಲ್ಲಿಯ ವಿಷಯನಿರೂಪಣೆಯಲ್ಲಿ ಕೆಲವು ಸಲ ಒಂದು ಕ್ರಮ, ಒಂದು ವ್ಯವಸ್ಥೆ ಕಂಡುಬರುವುದಿಲ್ಲ.

೧) "ಕಾರಕದೋಷಮುಂ......"[೯೫] ಎಂಬ ಪದ್ಯದಲ್ಲಿ ೮ ದೋಷಗಳ ಪಟ್ಟಿಮಾಡಿ, ಅವುಗಳನ್ನು ವಿವರಿಸುವಲ್ಲಿ ೯ನೆಯದಾದ "ಅಭ್ಯುಪಗಮೋಕ್ತಿ"ಯ[೯೬] ವಿವೇಚನೆ ಬಂದುದು ಅಧಿಕ.

೨) ಶಬ್ದಾಲಂಕಾರ ಪರಿಚ್ಛೇದದಲ್ಲಿ ಆದಿಪ್ರಾಸದ ಆರು ಶಬ್ದಾಲಂಕಾರಗಳನ್ನು ಹೇಳಿ, ಆಮೇಲೆ ೬೫ ಪದ್ಯಗಳಲ್ಲಿ ಮಾರ್ಗ-ರಸ ವಿವೇಚನೆಗೆಯ್ದು, ಮತ್ತೆ ದುಷ್ಕರ ಶಬ್ದಾಲಂಕಾರಗಳನ್ನು ವಿವೇಚಿಸಲಾಗಿದೆ. ಇಲ್ಲಿ ಮಧ್ಯಸೇರಿದ ಮಾರ್ಗ-ರಸ ವಿವೇಚನೆಯು ಪ್ರಾಸಪ್ರಪಂಚದ ಏಕಗತಿಯನ್ನು ತುಂಡುಗೊಳಿಸಿದೆ.

೩) [ಗೋಮೂತ್ರಿಕಂ] ಸಯಮಕಂ ಪ್ರೇಮದಿಂ ಗೋಪಿತಕ್ರಿಯಂ ।
ಶ್ರೀಮದರ್ಧಭ್ರಮಂ ಚಕ್ರನಾಮಂ ಮುರಜಬಂಧಕಂ ॥[೯೭]

---

೯೩. ಕ.ಮಾ.೨-೩೦
೯೪. ಕ.ಮಾ. ೨-೪೪
೯೫. ಕ.ಮಾ. ೧-೧೧೩
೯೬. ಕ.ಮಾ. ೧-೧೪೩ ರಿಂದ ೧೪೬
೯೭. ಕ.ಮಾ. ೨-೧೧೨

ಎಂದು ಚಿತ್ರಬಂಧಗಳ ಪಟ್ಟಿಮಾಡಿ, ಇವುಗಳನ್ನು ವಿವರಿಸುವ ಪೂರ್ವದಲ್ಲಿ ಹೆಚ್ಚಿನವಾಗಿ ಗತಪ್ರತ್ಯಾಗತ, ಗೂಢಚತುರ್ಥ, ಏಕದ್ವ್ಯಕ್ಷರ, ಅತಾಲವ್ಯ, ನಿರೋಷ್ಠ್ಯ, ಸರ್ವತೋಭದ್ರ, ನಿರುತ್ತರಗಳ ವಿವರಣೆ ಬಂದಿದೆ. ಇವು ಕವಿಮಾರ್ಗವು ಕವಿರಾಜಮಾರ್ಗವಾಗಿ ಪರಿಷ್ಕಾರಗೊಂಡ ಸಮಯದಲ್ಲಿ ಸೇರಿದ ವಿಷಯಗಳಾಗಿರಬಹುದು.

ಳ) ಅರ್ಥಾಲಂಕಾರ ಪ್ರಕರಣದ ಕೊನೆಕೊನೆಗೆ ಕಂಡುಬರುವ ದ್ವಿಪ್ರಾಸ, ದ್ವಂದ್ವಪ್ರಾಸಗಳು ಪ್ರಸಂಗೋಚಿತವಾಗಿಲ್ಲ. ಇವು ಶಬ್ದಾಲಂಕಾರ ಪರಿಚ್ಛೇದಕ್ಕೆ ಸಂಬಂಧಪಟ್ಟುವು.

೫) ಅರ್ಥಾಲಂಕಾರ ಪ್ರಕರಣದ ಆರಂಭದ ಯಾದಿಯಲ್ಲಿ[೯೮] ಕಂಡುಬಾರದ ಭಾವಿಕ, ಧ್ವನಿ ಅಲಂಕಾರಗಳು ಈ ಪ್ರಕರಣದ ಕೊನೆಯಲ್ಲಿ ಎಡೆ ಪಡೆದಿವೆ. ಇವು ಕವಿರಾಜಮಾರ್ಗ ರೂಪಗೊಂಡ ಸಂದರ್ಭದಲ್ಲಿ ಸೇರಿಕೊಂಡಿರಬಹುದು.

ಹೀಗೆ ಕವಿರಾಜಮಾರ್ಗದ ವಿಷಯ ನಿರೂಪಣಕ್ರಮದಲ್ಲಿ ಅವ್ಯವಸ್ಥೆ, ವಿರೋಧಗಳು ಕಂಡುಬಂದು, ಇದು ಮಿಶ್ರವಿಚಾರಗಳ ಕೃತಿ ಎಂಬ ಭಾವನೆಯನ್ನು ಗಟ್ಟಿಗೊಳಿಸುತ್ತವೆ.

ಇತರ ಆಧಾರಗಳು :

ಕವಿರಾಜಮಾರ್ಗದ "ನುಡಿಗೆಲ್ಲಂ ಸಲ್ಲದ......." "ಅರಸುಕುಮಾರನನಾಯತ......." "ಬರಿಸಿಪ್ರಧಾನರಂ......." "ಕಿಱಿದರೊಳೆ ಪಿರಿದುಮರ್ಥ........." ಎಂಬ ನಾಲ್ಕು ಪದ್ಯಗಳು ದರ್ಪಣದಲ್ಲಿ[೯೯] ಉದಾಹರಿಸಲ್ಪಟ್ಟಿವೆ. ಕೇಶಿರಾಜನಾದರೋ ತನಗೆ ಲಕ್ಷ್ಯರಾದ ಕವಿಗಳಲ್ಲಿ 'ಶ್ರೀವಿಜಯ'ನ ಹೆಸರನ್ನು ಕೊಡುವುದರಿಂದ,[೧೦೦] ಇವು ಮೂಲದಲ್ಲಿ ಕವಿಮಾರ್ಗಕ್ಕೆ ಸಂಬಂಧಿಸಿದುವೆನಿಸುತ್ತದೆ.

ಹೈದರಾಬಾದ ದರ್ಪಣದಲ್ಲಿ 'ಶ್ರೀವಿಜಯನ ಪ್ರಯೋಗಂ' ಎಂಬ ಸೂಚನೆಯೊಂದಿಗೆ ಕಂಡುಬರುವ,

> ಗಟಿಯಿಸಿದರ್ಥಂ ಸಲೆಪಾಂ। ಗಟಿಯದೆಯುಂ ಶಬ್ದಮೊಂದದಿರ್ದೊಡೆ ಮುತ್ತುಂ ।
> ಮೆಟಿಸುಂ ಕೋದಂತಿರೆ ಪೇ। ಳ್ವಿಟಿಗವಿಗಳ ಕವಿತೆ ಬುಧರನೆರ್ದೆಗೊಳಿಸುಗುಮೇ ॥[೧೦೧]

ಎಂಬ ಪದ್ಯ ಕವಿರಾಜಮಾರ್ಗದಲ್ಲಿ

> ಗಟಿಯಿಸಿದರ್ಥಂ ಸಲೆಪಾಂ। ಗಟಿಯದೆಯುಂ ಶಬ್ದಮೊಂದದಿರ್ದೊಡೆ ಮುತ್ತುಂ।
> ಮೆಟಿಸುಂ ಕೋದಂತಿರ್ಕುಂ। ಕಟಿಲ್ಚಿ ಕಳೆಗೊಂದಿ ಮುಂದೆಬಾರದ ಪದಮಂ ॥[೧೦೨]

ಎಂದು ವ್ಯತ್ಯಸ್ತ ರೂಪದಲ್ಲಿ ಕಂಡುಬರುತ್ತದೆ. ಮೂಲ ಕವಿಮಾರ್ಗಕ್ಕೆ ಕವಿರಾಜಮಾರ್ಗದ ರೂಪಕೊಡುವಾಗ ಈ ಪಾಠವ್ಯತ್ಯಾಸ ಕ್ರಿಯೆ ನಡೆದಿರಬಹುದು.[೧೦೩]

---

೯೮. ಕ.ಮಾ. ೨-೨, ೩,೪

೯೯. ಶ.ಮ.ದ. ಸೂ. ೧೦೮, ೯೦, ೬೯, ೧೨೧.

೧೦೦. ಶ.ಮ.ದ. ಸೂ. ೫

೧೦೧. ಶ.ಮ.ದ. ಪಾಠಾಂತರಗಳು ಪು. ೪೩

೧೦೨. ಕ.ಮಾ. ೨-೫

೧೦೩. ಹೋಲಿಸಿ: ಪಟಿಗನ್ನಡಂ ಪುದುಂಗೊಳೆ।ಕೊಟೆಸಕ್ಕದಮಂ ತಗುಳ್ಚಿ ಜಾಣ್ಕಿಡೆ ಮುತ್ತುಂ।
ಮೆಟಿಸಂ ಕೋದಂತಿರೆ ಪೇ।ಳ್ವಿಟಿಗವಿಗಳ ಕವಿತೆ ಬುಧರನೆರ್ದೆಗೊಳಿಸುಗುಮೇ॥
(ಕಾ.ಲೋ. ಪದ್ಯ ೫೫)

ಈ ಸುದೀರ್ಘ ವಿವೇಚನೆಯಿಂದ ಕವಿಮಾರ್ಗ ಬೇರೆ, ಕವಿರಾಜಮಾರ್ಗ ಬೇರೆ; ಬಹುಶಃ ಒಂದು ಬೆಳೆದು ಇನ್ನೊಂದು ರೂಪಗೊಂಡಿರಬಹುದೆಂಬ ಭಾವನೆ ಬಲಗೊಳ್ಳುತ್ತದೆ. ಹಾಗಾದರೆ ಈ ಬೆಳವಣಿಗೆಗೆ ಯಾರು ಹೊಣೆ? ಎಂಬುದು ಈಗ ಬಿಡಿಸಬೇಕಾದ ಪ್ರಶ್ನೆ. ಈ ಪ್ರಸಂಗದಲ್ಲಿ ಡಾ. ಫ್ಲೀಟ್ ಅವರು ಒಂದು ನವೀನ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ.[೧೦೪] ಶ್ರೀವಿಜಯನು ಕವಿಮಾರ್ಗದ ಕರ್ತೃವೆಂದು ಒಂದು ಕಡೆಯಿಂದ, ಕವಿರಾಜಮಾರ್ಗದ ಕರ್ತೃ ನೃಪತುಂಗನಲ್ಲವೆಂದು ಇನ್ನೊಂದು ಕಡೆಯಿಂದ ಖಚಿತಮಾಡಿಕೊಂಡ ಇವರಿಗೆ, ಈ ಪರಿಷ್ಕರ್ತನಾರೆಂದು ಹುಡುಕುವುದು ಅನಿವಾರ್ಯವಾಯಿತು. ಆಗ,

ಭಾವಿಸಿ ಶಬ್ದತತ್ವಸಮಯಸ್ಥಿತಿಯಂ ಕುಱಿತೊಂದಶೇಷ ಭಾ-।
ಷಾವಿಷಯೋಕ್ತಿಯಂ ಬಗೆದು ನೋಡಿ ಪುರಾಣಕವಿಪ್ರಭುಪ್ರಯೋ-।
ಗಾವಿಳ ಸದ್ಗುಣೋದಯಮನಾಯ್ದುವಜಿಂ ಸಮೆದೊಂದು ಕಾವ್ಯದಿಂ।
ಶ್ರೀವಿಜಯಪ್ರಭೂತಮುದಮಂ ತನಗಾಗಿಸಿದೊಂ ಕವೀಶ್ವರಂ॥[೧೦೫]

ಎಂಬ ಪದ್ಯವೊಂದು ಅವರ ಗಮನವನ್ನು ಸೆಳೆಯಿತು. ಆಗ ತಟ್ಟನೆ "ಶ್ರೀವಿಜಯನಿಂದ ಉದ್ಭವಿಸಿದ ಮುದವನ್ನು ಕವೀಶ್ವರನೆಂಬವನು ತನ್ನದಾಗಿ ಮಾಡಿಕೊಂಡನು" ಎಂದು ಇದಕ್ಕೆ ಅರ್ಥ ಕಲ್ಪಿಸಿ, ಶ್ರೀವಿಜಯನ 'ಕವಿಮಾರ್ಗ' ಕವೀಶ್ವರನೆಂಬವನಿಂದ 'ಕವಿರಾಜಮಾರ್ಗ'ವಾಯಿತೆಂದು ನಿರ್ಣಯ ನೀಡಿದರು. ಅನಿವಾರ್ಯ ಪ್ರಸಂಗದಲ್ಲಿ ಅವರಿಗೆ ಅನುಕೂಲ ದಾರಿ ದೊರೆತಂತಾಯಿತು. ಕವಿರಾಜಮಾರ್ಗ ಎಂಬ ಪದದ ಕವಿರಾಜ ಎಂಬುದು ಈ ಕವೀಶ್ವರ ಸೂಚಿಯೇ ಆಗಿದೆ ಎಂಬಿವೇ ಮೊದಲಾದ ನಾಲ್ಕಾರು ಊಹೆಗಳ ತಳಗಟ್ಟಿನ ಮೇಲೆ ಈ ವಾದವನ್ನು ಎತ್ತಿ ನಿಲ್ಲಿಸಿದರು. ಆದರೆ ಇಲ್ಲಿ 'ತನಗಾಗಿಸಿದೊಂ' ಎಂಬುದು ಕ್ರಿಯಾಪದವಲ್ಲ, ಕೃಲ್ಲಿಂಗವೆಂದು ನೆನೆದರೆ "ಶ್ರೀವಿಜಯ ಪ್ರಭೂತಮುದವನ್ನು ತನಗಾಗಿಸಿದವನು(ನೇ) ಶ್ರೇಷ್ಠಕವಿ" ಎಂಬ ಇನ್ನೂ ಒಳ್ಳೆಯ ಅರ್ಥ ಹೊರಡುತ್ತದೆ. ಅದಕ್ಕಾಗಿ ಫ್ಲೀಟರ ಈ ಅಭಿಪ್ರಾಯ ನಿರಾಧಾರವಾದುದು.

ಮದ್ರಾಸ 'ಕವಿರಾಜಮಾರ್ಗ' ಸಂಪಾದಕರು ಇನ್ನೂ ಒಂದು ಹೆಜ್ಜೆ ಮುಂದು ಹೋಗಿ ಈ ಕವೀಶ್ವರನು ಶ್ರೀವಿಜಯನ ಶಿಷ್ಯ. ಗುರು ಶ್ರೀವಿಜಯನ ಕವಿಮಾರ್ಗವನ್ನು ಶಿಷ್ಯ ಕವೀಶ್ವರ ಪರಿಷ್ಕಾರಗೊಳಿಸಿ ಕವಿರಾಜಮಾರ್ಗವನ್ನಾಗಿಸಿದನೆಂದೂ ಪೊನ್ನನ,

ಎಸೆಯದೆ ಪೂಟ್ಬು ಕೆಟ್ಟ ಪಟಗಬ್ಬಮನಾವಗಮೆಮ್ಮವೆಂದು ಬಾ-।
ಚಿಸಿ ಪೆಱರ್ಗಿತ್ತುದಲ್ಲದೆ ಬಹುಶ್ರುತಮೆಂಬಿನಮೆಕ್ಕಲಾವಣಂ।
ಪೊಸಯಿಪ ಕಮ್ಮಯಿಪ್ಪ ಸಮಕಟ್ಟುವ ಬಿನ್ನಣಮಿಲ್ಲದಿರ್ಕೆ ರಂ-।
ಜಿಸವೆರ್ದೆಗೊಳ್ಳವೀಗಡಿನ ಕಬ್ಬಿಗವಂದಿಗಳೊಂದವಿಂದಿಗಳ್॥


ಈ ಪದ್ಯ ಕವಿಮಾರ್ಗವನ್ನು ಕವಿರಾಜಮಾರ್ಗವನ್ನಾಗಿಸಿದ ವ್ಯಕ್ತಿಗೆ ಅನ್ವಯಿಸುವುದೆಂದು ಹೇಳಿದುವು[೧೦೬] ಚರ್ಚಿಸಲಿಕ್ಕೂ ಅರ್ಹವಲ್ಲದ ಊಹೆಗಳು. ಆದುದರಿಂದ ಇವೆಲ್ಲವನ್ನು ಕೈಬಿಟ್ಟು ಬೇರೆ ರೀತಿ ವಿಚಾರಿಸುವುದು ಸೂಕ್ತವೆನಿಸುತ್ತದೆ. ಮೂಲತಃ ಜೈನನಿಷ್ಠವಾಗಿದ್ದ ಕವಿಮಾರ್ಗವನ್ನು ಕವಿರಾಜಮಾರ್ಗವನ್ನಾಗಿ ಪರಿಷ್ಕರಿಸುವ ಸಂದರ್ಭದಲ್ಲಿ ಆಸ್ಥಾನದ ಸಾಹಿತ್ಯಿಕ ಸದಸ್ಯರೂ, ನೃಪತುಂಗನೂ ಕಾರಣವಾಗಿ ವೈದಿಕ ಅಂಶಗಳು ಸೇರಿಕೊಂಡಿರಬೇಕು. ಈ ಪ್ರಸಂಗದಲ್ಲಿ ನೃಪತುಂಗನ ಧಾರ್ಮಿಕ ಒಲವು ಯಾವುದೆಂಬುದು ಮುಖ್ಯವೆನಿಸುತ್ತದೆ.

---


೧೦೪. Ind. Ant. xxxiii. 258 ೧೦೫. ಕ.ಮಾ. ೨-೧೫೫

೧೦೬. ಕ.ಮಾ. ಅವತರಣಿಕೆ (ಮದ್ರಾಸ ಯುನಿವ್ಹರ್ಸಿಟಿ ಪರಿಷ್ಕರಣ)

ಕವಿರಾಜಮಾರ್ಗ ತಾಳೆಗರಿಗಳ ಮಾದರಿ



ತಾಳೆಗ್ರಂಥ ನಂ. ೧೨೫ರ ಮೊದಲ ಪುಟ



ತಾಳೆಗ್ರಂಥ ನಂ. ೧೧೦ರ ಕೊನೆಯ ಪುಟ

ಕೃಪೆ : ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು

ರಾಷ್ಟ್ರಕೂಟ ಮನೆತನದ ಕೊನೆಯ ಅರಸರು ಜೈನಮತನಿಷ್ಠರಾಗಿದ್ದರೂ ಮೊದಲಿನ ಅರಸರು ಹರಿ-ಹರರಲ್ಲಿ ನಿಷ್ಠೆಯಿಟ್ಟ ವೈದಿಕರು. ನೃಪತುಂಗನ ಶಾಸನಗಳಲ್ಲಿಯ "ಶ್ರೀನೃಪತುಂಗ ನಾಮಾಂಕಿತ ಲಕ್ಷ್ಮೀವಲ್ಲಭೇಂದ್ರನಾಚಂದ್ರಾದಿತ್ಯರ ಕಾಲಂ ವರೆಗಂ ಮಹಾವಿಷ್ಣುವ ರಾಜ್ಯಂಬೋಲ್..... ರಾಜ್ಯಾಭಿವೃದ್ಧಿ ಸಲುತ್ತಿರೆ"[೧೦೭] ಎಂಬ ವಾಕ್ಯಗಳು, ಕೀರ್ತಿನಾರಾಯಣ ಮತ್ತು ವೀರನಾರಾಯಣ ಎಂಬ ಬಿರುದುಗಳು ಈತನು ಜೈನನಲ್ಲವೆಂದು ಹೇಳುತ್ತವೆ.

ಜಿನಸೇನಾಚಾರ್ಯಕೃತ ಜಯಧವಲದ "ಅಮೋಘವರ್ಷರಾಜೇಂದ್ರ ಪ್ರಾಜ್ಯರಾಜ್ಯ ಗುಣೋದಯಾ...... ಜಯಧವಲಾ ಪ್ರಾಭೃತವ್ಯಾಖ್ಯಾ" ಎಂಬ ವಾಕ್ಯದಿಂದ, ಪಾರ್ಶ್ವಾಭ್ಯುದಯದ "ಭುವನಮವತು ದೇವಸ್ಸರ್ವದಾಽಮೋಘವರ್ಷಃ"[೧೦೮] ಎಂಬ ವಾಕ್ಯದಿಂದ ಈ ಕೃತಿಗಳ ನಿರ್ಮಾಣಕಾಲದಲ್ಲಿ ಅರಸುಗೆಯ್ಯುತ್ತಿದ್ದವನು ನೃಪತುಂಗನೆಂದು ತಿಳಿದುಬರುವುದೇ ಹೊರತು ಈತನು ಜೈನನೆಂದು ಸಿದ್ಧವಾಗುವುದಿಲ್ಲ. ಆದರೆ ಗುಣಭದ್ರಾಚಾರ್ಯರ ಉತ್ತರಪುರಾಣದ ಕೊನೆಯ

ಯಸ್ಯ ಪ್ರಾಂಶು ನಖಾಂಶು ಜಾಲವಿಸರದ್ಧಾರಾಂತರಾವಿರ್ಭವ
ತ್ಪಾದಾಂಭೋಜರಜಃ ಪಿಶಂಗಮಕುಟಪ್ರತ್ಯಗ್ರರತ್ನದ್ಯುತಿಃ
ಸಂಸ್ಮರ್ತಾ ಸ್ವಮಮೋಘವರ್ಷನೃಪತಿಃ ಪೂತೋಽಹಮದ್ಯೇತ್ಯಲಂ
ಸಶ್ರೀಮಾನ್ ಜಿನಸೇನ ಪೂಜ್ಯ ಭಗವತ್ಪಾದೋ ಜಗನ್ಮಂಗಲಮ್॥[೧೦೯]

ಎಂಬ ಪದ್ಯವನ್ನು ಅವಲಂಬಿಸಿ ನೃಪತುಂಗನು ಜಿನಸೇನಾಚಾರ್ಯರ ಶಿಷ್ಯನೆಂದು ಕೆಲವರು ಹೇಳುವರು. ಆದರೆ "ಇದರಿಂದ (ಈ ಪದ್ಯದಿಂದ) ಅಮೋಘವರ್ಷನು ಜಿನಸೇನನ್ನು ವಂದಿಸಿ ತಾನು ಇಂದು (=ಅದ್ಯ) ಧನ್ಯನಾದೆನೆಂದು ಭಾವಿಸಿಕೊಂಡನೆಂದಷ್ಟೇ ತಿಳಿಯುತ್ತದಲ್ಲದೆ ಜಿನಸೇನನಿಂದ ಆತನು ಜೈನಧರ್ಮವನ್ನು ಅವಲಂಬಿಸಿದೆನೆಂದಾಗಲಿ, ಸ್ವಧರ್ಮವನ್ನು ತ್ಯಜಿಸಿ ಜಿನಸೇನನ ಶಿಷ್ಯತ್ವವನ್ನು ವಹಿಸಿಕೊಂಡನೆಂದಾಗಲಿ ಅರ್ಥವಾಗುವುದು ಹೇಗೋ ನಾನರಿಯೆನು"[೧೧೦] ಎಂಬ ಶ್ರೀ ಗೋವಿಂದ ಪೈಗಳ ಹೇಳಿಕೆ ನೃಪತುಂಗನು ಜೈನನೆಂದು ಹೇಳುವವರು ತಳ್ಳಿಹಾಕಲು ಬಾರದ ಮಾತಾಗಿ ನಿಂತಿದೆ. ಆದುದರಿಂದ ಈ ಪದ್ಯಕ್ಕೆ ಎಳೆದು ಅರ್ಥಹಚ್ಚಿ ನೃಪತುಂಗನು ಜೈನನೆಂದು ಸಾಧಿಸುವುದು ಅಸಾಧುವೆನಿಸುತ್ತದೆ.

ನೃಪತುಂಗನು ಜೈನನೆಂದು ವಾದಿಸುವವರಿಗೆ ಇನ್ನೊಂದು ಆಧಾರ, ಪ್ರಶ್ನೋತ್ತರ ರತ್ನಮಾಲೆಯೆಂಬ ನೀತಿಪರಗ್ರಂಥ. ಇದರ ಪರಿಷ್ಕರಣಕ್ಕೆ[೧೧೧] ಬಳಸಲಾದ ಎರಡು ಹಸ್ತಪ್ರತಿಗಳಲ್ಲಿ ಒಂದಾದ 'ಖ' ಪ್ರತಿಯ ಕೊನೆಗೆ ಬರುವ,

ವಿವೇಕಾತ್ಯಕ್ತರಾಜ್ಯೇನ ರಾಜ್ಞೇಯಂ ರತ್ನಮಾಲಿಕಾ।
ರಚಿತಾಮೋಘವರ್ಷೇಣ ಸುಧಿಯಾ ಸದಲಂಕೃತಿಃ॥

---

೧೦೭. Ind. Ant. xii, p. 218-19.
೧೦೮. ಪಾರ್ಶ್ವಾಭ್ಯುದಯ iv-೭೦
೧೦೯. ಉತ್ತರಪುರಾಣದ ಪ್ರಶಸ್ತಿ.
೧೧೦. ಸಾ.ಪ. ೧೨-೪, ಪು. ೨೪೩
೧೧೧. ನಿರ್ಣಯಸಾಗರ ಪ್ರತಿ. (ಕವಿರಾಜಮಾರ್ಗಂ. ಪೀಠಿಕೆ Lxxxiii-Lxxxiv)

ಎಂಬ ಪದ್ಯವನ್ನವಲಂಬಿಸಿ, ಇದರ ಕರ್ತೃ ಅಮೋಘವರ್ಷ I ಎಂದರೆ ನೃಪತುಂಗನೆಂದು ಅವರು ಹೇಳುತ್ತಾರೆ. ಆದರೆ 'ಕ' ಪ್ರತಿಯ ಪ್ರಕಾರ ಇದರ ಕರ್ತೃ ಶ್ವೇತಾಂಬರ ಜೈನನಾದ ವಿಮಲ. ಸಾಲದುದಕ್ಕೆ ವೈದಿಕ ಶಂಕರಾಚಾರ್ಯ ಮತ್ತು ಶಂಕರಾನಂದ ಎಂಬ ಹೆಸರುಗಳೂ ಕೆಲವು ಪ್ರತಿಗಳಲ್ಲಿ ಕಂಡುಬರುತ್ತವೆ. ಹೀಗಾಗಿ ನೃಪತುಂಗನ ಮತನಿರ್ಣಯಕ್ಕೆ ಈ ಕೃತಿಯನ್ನು ಆಧಾರವಾಗಿಟ್ಟುಕೊಳ್ಳಲು ಧೈರ್ಯಸಾಲದು. ಒಂದುವೇಳೆ ಇಟ್ಟುಕೊಂಡರೂ ನೃಪತುಂಗನು ರಾಜ್ಯತ್ಯಾಗ ಮಾಡಿದನೆನ್ನಲು, ಇಲ್ಲಿಯ ಅಮೋಘವರ್ಷನೆಂದರೆ ನೃಪತುಂಗನೆನ್ನಲು ಗಟ್ಟಿ ಆಧಾರಗಳಿಲ್ಲ. ರಾಷ್ಟ್ರಕೂಟರಲ್ಲಿ ಈ ಹೆಸರಿನ ಇನ್ನೂ ಮೂರು ಜನ (ಅಮೋಘವರ್ಷII, ಅಮೋಘವರ್ಷ ಬದ್ದೆಗ, ಅಮೋಘವರ್ಷ ಕರ್ಕ) ಅರಸರಿದ್ದಾರೆ. ಅಮೋಘವರ್ಷ ಬದ್ದೆಗನ ಮಗನಾದ ಕೃಷ್ಣ IIIನು ಬರೆಯಿಸಿದ ಕೊಲ್ಲಾಪುರ ತಾಮ್ರಶಾಸನದಲ್ಲಿ ಕಂಡುಬರುವ,

ಸ್ನಿಗ್ಧಶ್ಯಾಮರುಚಾ ಪ್ರಲಂಬಭುಜಯಾ ಪೀನಾಯತೋರಸ್ಕಯಾ
ಮೂರ್ತ್ಯಾ ಕೀರ್ತಿಲತಾ ಹಿತಾಮೃತಜಲೈರ್ವೃತ್ತೈಶ್ಚ ಸತ್ಪೋತ್ಕಟೈಃ ।
ಜ್ಞಾತ್ವಾಯಂ ಪುರುಷೋತ್ತಮಂಭರಸಮಂ ವಿಶ್ವಂಭರಾಭ್ಯುದ್ಧೃತೌ ।
ಶಾಂತೇ ಧಾಮ್ನಿ ಲಯಂ ಗತಃ ಪ್ರಶಮಿನಾಮಾದ್ಯಃ ಕೃತಾರ್ಥಃ ಪಿತಾ ॥

ಎಂಬ ಪದ್ಯಕ್ಕೆ ಪ್ರೊ. ಕೆ.ಜಿ.ಕುಂದಣಗಾರರು "By his body which had dark glossy colour, long arms, and a broad and massive chest, and by his virtuous deeds which were the nector water that fed the creeper in the shape of his fame, knowing him to be an excellent man, and knowing him to be able to sustain the heavy responsibility of supporting the earth, his father, the best of sages, who had attained the object of life, vanished into the tranquil light"[೧೧೨] ಎಂದು ಅರ್ಥ ಮಾಡಿದ್ದಾರೆ. ಇದರಿಂದ ಮಗ ಕೃಷ್ಣIIIನ ಸಾಮರ್ಥ್ಯವನ್ನು ಮನಗಂಡು ತಂದೆ ಅಮೋಘವರ್ಷ(ಬದ್ದೆಗ)ನು ಸಾಮ್ರಾಜ್ಯವನ್ನು ಒಪ್ಪಿಸಿ ಬ್ರಹ್ಮಸುಖವನ್ನು ಪಡೆದನೆಂದು ತಿಳಿದುಬರುವ ಕಾರಣ, 'ವಿವೇಕಾತ್ಯಕ್ತರಾಜ್ಯ'ನಾದ ಪ್ರಶ್ನೋತ್ತರ ರತ್ನಮಾಲೆಯ ಕರ್ತೃ ಈ ಬದ್ದೆಗ ಅಮೋಘವರ್ಷನಾಗಿರುವ ಸಾಧ್ಯತೆಯಿದೆ.[೧೧೩]

ಇಷ್ಟು ವಿವೇಚನೆಯಿಂದ ನೃಪತುಂಗನು ಜೈನನಲ್ಲ, ವೈದಿಕನೆಂದು ಸ್ಪಷ್ಟವಾಗುತ್ತದೆ. ಕವಿರಾಜಮಾರ್ಗದಲ್ಲಿ ವೈದಿಕ ಅಂಶಗಳು ಎಡೆಪಡೆಯಲು ಈತನೇ ಪ್ರತ್ಯಕ್ಷ ಇಲ್ಲವೆ ಅಪ್ರತ್ಯಕ್ಷ ಹೊಣೆಗಾರನಾಗಿರಬಹುದು. ಕವಿರಾಜಮಾರ್ಗದ ಪದ್ಯಗಳನ್ನುದ್ಧರಿಸಿಕೊಳ್ಳುತ್ತ ಹೈದರಾಬಾದ ದರ್ಪಣಕಾರನು ಒಮ್ಮೆ "ಗಟಿಯಿಸಿದರ್ಥಂ..." ಎಂಬ ಪದ್ಯಕ್ಕೆ 'ಶ್ರೀ ವಿಜಯನ ಪ್ರಯೋಗಂ' ಎಂದು, ಇನ್ನೊಮ್ಮೆ "ನೋಡುವೆನಾಂ ಮಹೀಪತಿಯಂ....." ಎಂಬ ಪದ್ಯಕ್ಕೆ 'ನೃಪತುಂಗನ ಪ್ರಯೋಗಂ'[೧೧೪] ಎಂದು ಹೇಳಿದುದನ್ನು ಗಮನಿಸಿದರೆ ಕವಿರಾಜಮಾರ್ಗದ ವಿಚಾರಗಳ ಒಡಲಲ್ಲಿ ಶ್ರೀ ವಿಜಯನೊಂದಿಗೆ ನೃಪತುಂಗನೂ ಇದ್ದುದು ಇನ್ನೂ ಸ್ಪಷ್ಟವಾಗುತ್ತದೆ. ಈ ಸಂದರ್ಭದಲ್ಲಿ "ಶ್ರೀ ವಿಜಯನು 'ಕವಿಮಾರ್ಗ' ಎಂಬ ಲಕ್ಷಣಗ್ರಂಥವನ್ನು

---

೧೧೨. Kolhapur copper plate grant of Akalavarshadeva-JBBRAS (New) X.

೧೧೩. ಅಮೋಘವರ್ಷನನ್ನು ಕುರಿತು ಹೇಳಿದ "The sanjan record affords conclusive evidence that Amonghavarsha had abdicated. V. 47 informs us that he had given up the kingdom more than once" ಎಂಬ ಡಾ. ಅಳ್ತೇಕರರ ಮಾತು (R.T.P. 89) ರಾಜ್ಯ ಸನ್ಯಾಸವನ್ನು ಸೂಚಿಸದೆ ರಾಜಕಾರ್ಯದ ಶ್ರಮನಿವಾರಣೆಯನ್ನು ಸೂಚಿಸುತ್ತದೆ.

೧೧೪. ಕ.ಮಾ. ಪೀಠಿಕೆ, XLIX, ಅ.ಟಿ. (ಎಂ.ವಿ.ಸೀ.)

ಬರೆದಿದ್ದು, 'ವಿವೇಕ ಬೃಹಸ್ಪತಿ'ಯ ನಗರವನ್ನು ಹೊಕ್ಕು, 'ಆಶ್ರಿತ ಮಹಾನೃಪತುಂಗ ಸಭಾಸದ' ನೆನಿಸಿದ ಮೇಲೆ ಅದನ್ನು ನೃಪತುಂಗನ ಸಭೆಯಲ್ಲಿ ನಿವೇದಿಸಿ ಸ್ವತಃ ವಿದ್ವಾಂಸನಾಗಿರಬಹುದಾಗಿದ್ದ 'ನೃಪತುಂಗನ ಮತ'ವನ್ನು ಅಳವಡಿಸಿ, ಅನೇಕ ಮಾರ್ಪಾಟುಗಳೊಡನೆ ವಿಸ್ತಾರಗೊಂಡ ತನ್ನ ಗ್ರಂಥವನ್ನು, ಅರ್ಥಗರ್ಭಿತವಾದ 'ಕವಿರಾಜಮಾರ್ಗ'ವೆಂದು ಕರೆದು 'ನೃಪತುಂಗದೇವಾನುಮತಮಪ್ಪ' ಆ ಗ್ರಂಥ'ವನ್ನು ಪ್ರಸಿದ್ಧಗೊಳಿಸಿರಬಹುದು"[೧೧೪] ಎಂಬ ಎಂ.ವಿ. ಸೀತಾರಾಮಯ್ಯನವರ ಊಹೆ ನಮ್ಮ ವಿವೇಚನೆಗೆ ಸರಿಯಾಗಿ ಒಪ್ಪುತ್ತದೆ.

ಈ "ಶ್ರೀವಿಜಯನು ಮಾನ್ಯಖೇಟಕ್ಕೆ ಹೊರಗಿನಿಂದ ಬಂದವನು ಎಂಬುದು ನಿಶ್ಚಿತ"[೧೧೫] ಎಂದು ಎಂ.ವಿ. ಸೀತಾರಾಮಯ್ಯನವರ ಅಭಿಪ್ರಾಯ. ಮೇಲೆ ಹೇಳಿದ ಕ್ರಿ.ಶ. ೭೯೭ರ 'ಅ' ಶಾಸನದಲ್ಲಿ[೧೧೬] ಶ್ರೀವಿಜಯನನ್ನು ಮಾರಸಿಂಹನ ಸಾಮಂತನೆಂದು, ಕ್ರಿ.ಶ. ೮೦೨ರ 'ಬ'ಶಾಸನದಲ್ಲಿ[೧೧೭] ಗೋವಿಂದನ ಸಾಮಂತನೆಂದು ಹೇಳಿರುವುದರಿಂದ ಈತನು ಹೊರಗಿನಿಂದ ಅಂದರೆ ಗಂಗಮಂಡಲದಿಂದ ರಾಷ್ಟ್ರಕೂಟರ ರಾಜ್ಯಕ್ಕೆ ಬಂದಿರಬಹುದು. ಗಂಗಮಂಡಲದಲ್ಲಿರುವಾಗ ಕವಿಮಾರ್ಗವನ್ನು ಬರೆದಿರಬಹುದಾದ ಈತನು ರಾಷ್ಟ್ರಕೂಟರ ರಾಜಧಾನಿಗೆ ಬಂದ ಹೊಸದರಲ್ಲಿ ಗೋವಿಂದIII ನಿಂದಲೋ, ಕವಿಮಾರ್ಗವನ್ನು ಪರಿಷ್ಕರಿಸಿದ ಸಮಯದಲ್ಲಿ ನೃಪತುಂಗನಿಂದಲೋ 'ಸಭಾಮಧ್ಯಲಬ್ಧವರಂ' ಆಗಿರಬೇಕು. ಇದೆಲ್ಲವನ್ನು ಗಮನಿಸಿದರೆ ಶ್ರೀವಿಜಯನು ಒಂದು ಕಾಲದಲ್ಲಿ ಬರೆದ ತನ್ನ ಕವಿಮಾರ್ಗಕ್ಕೆ ನೃಪತುಂಗನ ಸಲಹೆಯನ್ನು, ಅದರೊಂದಿಗೆ ಹತ್ತಿಕೊಂಡ ಬಂದ ವೈದಿಕ ಅಂಶಗಳನ್ನು ಒಂದುಗೂಡಿಸಿ ಅದನ್ನು ಕವಿರಾಜಮಾರ್ಗವನ್ನಾಗಿಸಿದನೆಂಬ ಭಾವನೆ ದೃಢಗೊಳ್ಳುತ್ತದೆ. ಹೀಗೆ ಎರಡು ಘಟ್ಟಗಳಲ್ಲಿ ರೂಪಧಾರಣಮಾಡಿಕೊಂಡ ಕಾರಣ ಕವಿರಾಜಮಾರ್ಗ ಮಿಶ್ರವಿಚಾರಗಳ ಕೃತಿಯಾಗಿ ಪರಿಣಮಿಸಿರಬೇಕು.

ಕವಿರಾಜಮಾರ್ಗದ ಒಡಲಲ್ಲಿ ನೃಪತುಂಗನ ಹೆಸರು ಮತ್ತು ಬಿರುದುಗಳನ್ನು ಹಲವು ಸಲ ಬಳಸಲಾಗಿದ್ದು, ಅಲ್ಲಿಯ ಉತ್ತಮ-ಪ್ರಥಮಪುರುಷ ಪ್ರಯೋಗಗಳ ಆಧಾರದಿಂದ ವಿದ್ವಾಂಸರು ಪರವಾಗಿಯೂ ವಿರೋಧವಾಗಿಯೂ ವಾದಿಸುತ್ತಾರೆ. ಇಂಥ ಮಾತುಗಳು ಶ್ರೀವಿಜಯಕೃತ ಕವಿಮಾರ್ಗವು ನೃಪತುಂಗ-ಶ್ರೀವಿಜಯರ ವಿಚಾರಮಥನದಲ್ಲಿ ಕವಿರಾಜಮಾರ್ಗವಾಯಿತು ಎಂಬ ನಮ್ಮ ಅಭಿಪ್ರಾಯದೆದುರು ಮೌನಗೊಳ್ಳುತ್ತವೆ. ಹೀಗಾಗಿ "ಶ್ರೀವಿಜಯರ ಕವಿಮಾರ್ಗಂ ಭಾವಿಪ ಕವಿಜನದ ಮನಕೆ ಕನ್ನಡಿಯುಂ ಕೈಯ್ದೀವಿಗೆಯುಂ" ಎಂಬ ದುರ್ಗಸಿಂಹನ ಅಭಿಪ್ರಾಯವೂ ಸತ್ಯ; 'ಶ್ರೀವಿಜಯಪ್ರಭೂತ'ವಾದ ಕವಿರಾಜಮಾರ್ಗವು 'ನೃಪತುಂಗದೇವಾನುಮತ'ವೂ ಸತ್ಯ; ಹೈದರಾಬಾದ ದರ್ಪಣಕಾರನು 'ಶ್ರೀವಿಜಯನ ಪ್ರಯೋಗಂ', 'ನೃಪತುಂಗನ ಪ್ರಯೋಗಂ'[೧೧೮] ಎಂದು ಬಿಡಿಸಿ ಹೇಳಿದುದೂ ಸತ್ಯ. ಒಟ್ಟಿನಲ್ಲಿ ಕವಿಮಾರ್ಗದ ರಚನೆ ಮತ್ತು ಅದರ ಪರಿಷ್ಕರಣ-ಈ ಎರಡೂ ಹಂತಗಳಲ್ಲಿ ಶ್ರೀವಿಜಯ ತೊಡಗಿಕೊಂಡಿರುವನೆಂದು ನಮ್ಮ ಅಭಿಪ್ರಾಯ.

---

೧೧೫. ಕ.ಮಾ. ಪೀಠಿಕೆ LIV, (ಎಂ.ವಿ.ಸೀ.)

೧೧೬. E.C. ix, ನೆಲಮಂಗಲ ೬೦. ಮಣ್ಣೆಗ್ರಾಮ

೧೧೭. E.C. ix, ನೆಲಮಂಗಲ ೬೧. ಮಣ್ಣೆಗ್ರಾಮ

೧೧೮. "ದಕ್ಷಿಣೋತ್ತರ ಮಾರ್ಗ್ಗಂಗಳೆಂತೆಂದೊಡೆ, ನೃಪತುಂಗನ ಪ್ರಯೋಗಂ" ಎಂದು ಹೈದರಾಬಾದ ದರ್ಪಣ (ಪು. ೫೧) "ದಕ್ಷಿಣೋತ್ತರ ಮಾರ್ಗಭೇದ ಭಿನ್ನಪ್ರಯೋಗ ಚಾತುರೀ ಪ್ರಪಂಚೋ ನೃಪತುಂಗಗ್ರಂಥೇ ದೃಷ್ಟವ್ಯ" ಎಂದು ಶಬ್ದಾನುಶಾಸನ (ಸೂ. ೨೮೮ ಆರ್. ನರಸಿಂಹಾಚಾರ್ ೧೯೨೩) ಒಂದೇ ಬಗೆಯ ಅಭಿಪ್ರಾಯವನ್ನು ವ್ಯಕ್ತಗೊಳಿಸುತ್ತವೆ.

ಕವಿಮಾರ್ಗ ಪರಿಷ್ಕರಣದ ಅಗತ್ಯ:

ಬದುಕನ್ನು ವಿಕಾರಗೊಳಿಸುವ ಮಾಧ್ಯಮಗಳು ಅನೇಕ. ಹೀಗಿರುವಾಗ ಹೆಚ್ಚಿನದಾಗಿ ಕಲೆಯ ಹೆಸರಿನಲ್ಲಿ ಸಾಹಿತ್ಯವೂ ಬದುಕನ್ನು ವಿಕಾರಗೊಳಿಸಬಾರದು. ಅಂದರೆ ಭಾಷಾಮಾಧ್ಯಮದ ಸುಂದರ ಅಭಿವ್ಯಕ್ತಿಯಾಗಿರುವ ಅದು ಬದುಕನ್ನೂ ಸುಂದರಗೊಳಿಸುವ ಮಾಧ್ಯಮವಾಗಬೇಕು. ಭಾರತೀಯ ಕಾವ್ಯಮೀಮಾಂಸಕರು ಸಾಹಿತ್ಯದ ಪರಮಪ್ರಯೋಜನಗಳಲ್ಲಿ "ಶಿವೇತರ ಕ್ಷತಯೇ" (ಅಶುಭಗಳನ್ನು ನಿವಾರಣೆ ಮಾಡುವುದು) ಎಂದು ಹೇಳಿದುದು, ಈ ಅರ್ಥದಲ್ಲಿ.

ಸಾಹಿತ್ಯದ ಪ್ರಕಾರಗಳಲ್ಲೊಂದಾದ ಜನಪದಸಾಹಿತ್ಯವನ್ನು ಸಮೂಹದ ರಚನೆಯೆಂಬಂತೆ ಅಜ್ಞಾತರು ಸೃಷ್ಟಿಸುತ್ತಾರೆ. ಮುಂದಿನ ದಿನಗಳಲ್ಲಿ ಕಾಲ-ದೇಶಗಳಿಗೆ ಯೋಗ್ಯವಾಗುವಂತೆ ಅದನ್ನು ಮೌಖಿಕ ಪರಂಪರೆಯಲ್ಲಿ ಸಾಮೂಹಿಕವಾಗಿ ಪರಿಷ್ಕರಿಸುತ್ತ ಬರುತ್ತಾರೆ. (ಉದಾ: ಅತ್ತಿಯ ಮನೆಯಾಗ ಮುತ್ತಾಗಿ ಇರಬೇಕು. ಅತ್ತಿಯ ಮನಿಯಾಗ ತೊತ್ತಾಗಿ ಇರಬೇಕು, ಇತ್ಯಾದಿ). ಶಿಷ್ಟಸಾಹಿತ್ಯದ ವಿಷಯ ಹೀಗಲ್ಲ. ಅದು ಒಬ್ಬ ಕವಿಯ ಸೃಷ್ಟಿಯಾಗಿ ಹುಟ್ಟಿ, ಬದಲಾವಣೆ ಹೊಂದದೆ ಕೆಲವರ ಮಧ್ಯೆ ಬದುಕುತ್ತ ಬರುತ್ತದೆ. ಬದಲಾವಣೆಯಾಗದ ಇಂಥ ಸಾಹಿತ್ಯಕ್ಕೆ ಹುಟ್ಟುವಾಗಲೇ ಕೆಲವು ಮಾರ್ಗದರ್ಶಿ ನಿಯಮಗಳು ಅವಶ್ಯವೆನಿಸುತ್ತವೆ. ಈ ಮಾರ್ಗದರ್ಶಿ ನಿಯಮಗಳನ್ನು ರೂಪಿಸುವುದು ಹೇಗೆ? ರೂಪಿಸುವವರು ಯಾರು? ಬಹುಶಃ ಪ್ರಾಚೀನಕಾಲದಲ್ಲಿ ಇಂಥ ಹೊಣೆ ರಾಜ್ಯದ ರಕ್ಷಕನಾದ ರಾಜನದೇ ಆಗಿರುತ್ತಿತ್ತು. ಈ ಕಾರಣಕ್ಕಾಗಿಯೇ "ರಾಜಾಸ್ಥಾನವು ಕವಿ-ವಿದ್ವಾಂಸರ ನೆಲೆಯಾಗಿರಬೇಕು" ಎಂಬ ಪರಿಕಲ್ಪನೆ ಅಂಕುರಿಸಿರಬೇಕು. ಮುಂದೆ ಇದು ಕವಿಗಳ ಸ್ಪರ್ಧೆ, ಚಕ್ರವರ್ತಿಗಳ ಸಂಕೀರ್ತನೆ, ಮನರಂಜನೆಯ ದಾರಿ ಹಿಡಿದರೂ ಮೂಲ ಉದ್ದೇಶ ಮಾತ್ರ, ಕಲೆಗಳನ್ನು ಅಭಿವೃದ್ಧಿಗೊಳಿಸುವುದು, ಅವುಗಳಿಗೆ ಚರ್ಚೆಯ ಮೂಲಕ ಸರಿಯಾದ ಮಾರ್ಗ ತೋರುವುದೂ ಆಗಿರಬೇಕು. ಹೀಗೆ ವಿಷಯವೊಂದರ ಸುತ್ತ ಚರ್ಚೆ ನಡೆಸಿ, ಒಂದು ನಿರ್ಣಯಕ್ಕೆ ಬಂದ ಬಳಿಕ, ರಾಜನ "ಸಮ್ಮತಿ"ಯ ಮುದ್ರೆ ಬಿದ್ದು, ಅದು ಚಲಾವಣೆಗೊಳ್ಳುತ್ತಿರಬಹುದು. ಹೀಗೆ "ಸಮ್ಮತಿ" ಮುದ್ರೆ ಬಿದ್ದ ಅಧಿಕೃತ ಕೃತಿಯೇ ಆ ರಾಜ್ಯದ ರಾಜನ "ಮತ"ವೆಂಬ ಹೆಸರಿನಲ್ಲಿ ಪ್ರಚಾರಗೊಳ್ಳುತ್ತಿದ್ದು, "ನೃಪತುಂಗಾನುಮತಮಪ್ಪ ಕವಿರಾಜಮಾರ್ಗ"ವು ಈ ವರ್ಗಕ್ಕೆ ಸೇರುವ ಕೃತಿಯಾಗಿರಬಹುದೆನಿಸುತ್ತದೆ.

ಸಾಹಿತ್ಯ ಮೊದಲಾದ ಕಲೆಗಳನ್ನು ನಿರ್ದಿಷ್ಟ ದಾರಿಯಲ್ಲಿ ಮುನ್ನಡೆಸುವವು ಶಾಸ್ತ್ರಗಳು. ಆದುದರಿಂದ ರಾಜನ "ಸಮ್ಮತಿ" ಎನ್ನುವುದು ಬಹುಶಃ ಶಾಸ್ತ್ರಗಳಿಗೇ ಮುಖ್ಯವಾಗಿ ಅನ್ವಯಿಸುತ್ತಿರಬಹುದು. ಇವು ಪ್ರಾಯೋಜಕಶಾಸ್ತ್ರ ಇಲ್ಲವೆ ಲಲಿತಕಲಾಶಾಸ್ತ್ರಗಳಾಗಿರಬಹುದು. ಮಳೆ ಮೊದಲಾದ ಋತುಮಾನ ಶಾಸ್ತ್ರವಾಗಿರುವ 'ರಟ್ಟಮತ', ಗಜಶಾಸ್ತ್ರವಾಗಿರುವ "ಶಿವಮಾರಮತ", ಜ್ಯೋತಿಷ್ಯಶಾಸ್ತ್ರವಾಗಿರುವ "ವೀರಾವಳಿ ಮತ" ಹೆಸರಿನ ಕನ್ನಡ ಕೃತಿನಾಮಗಳು "ಮತ" ಶಬ್ದದಿಂದ ಕೊನೆಗೊಳ್ಳುವುದು ಗಮನಸೆಳೆಯುವ ಅಂಶವಾಗಿದೆ. ರಟ್ಟ, ಶಿವಮಾರ ಇವು ರಾಜರ ಹೆಸರುಗಳೇ ಆಗಿದ್ದು, ಇವರ ಸಮ್ಮತಿ ಪಡೆದು ಚಲಾವಣೆಗೆ ಬಂದುವೆಂಬ ಅಭಿಪ್ರಾಯ ಇಲ್ಲಿರುವಂತಿದೆ. ವಜ್ರಭಟ್ಟನ ಕೃತಿ 'ವೀರಾವಳಿ ಮತ'. ಇತ್ತೀಚೆ ಲಭ್ಯವಾದ ಈ ಕೃತಿ ಹುಟ್ಟಿದುದೂ ಕಲ್ಯಾಣಚಾಲುಕ್ಯ ಜಯಸಿಂಹನ ಆಸ್ಥಾನದಲ್ಲೆಂಬುದನ್ನು ಇಲ್ಲಿ ಸ್ಮರಿಸಬಹುದು. ಈ ರೀತಿ ಹೊರಳು ದಾರಿಯಲ್ಲಿದ್ದ ಕನ್ನಡ ಸಾಹಿತ್ಯಕ್ಕೆ ಹೊಸಮಾರ್ಗ ತೋರಿಸುವ ಉದ್ದೇಶದಿಂದ ನೃಪತುಂಗನು ತನ್ನ ಆಸ್ಥಾನದ ಕವಿಗಳ, ಕಾವ್ಯಮೀಮಾಂಸಕರ ಚರ್ಚೆಯಲ್ಲಿ "ಕವಿರಾಜಮಾರ್ಗ" ಕೃತಿ ರೂಪುಗೊಳ್ಳುವಂತೆ ವ್ಯವಸ್ಥೆ ಮಾಡಿರಬೇಕು.

ಅಂತಿಮದಲ್ಲಿ ತನ್ನ 'ಸಮ್ಮತಿ' ಮುದ್ರೆ ಒತ್ತಿರಬೇಕು. ಬಹುಶಃ ಈ ಕಾರಣಕ್ಕಾಗಿಯೇ ಇದನ್ನು ಉದ್ದಕ್ಕೂ "ನೃಪತುಂಗಾನುಮತಮಪ್ಪ ಕವಿರಾಜಮಾರ್ಗ"ವೆಂದು ಕರೆದಂತಿದೆ. ಅಂದರೆ ಹಿಂದೆ ಹೇಳಿದಂತೆ ಮೂಲತಃ ಶ್ರೀವಿಜಯನೆಂಬ ಆಲಂಕಾರಿಕನು ರಚಿಸಿದ 'ಕವಿಮಾರ್ಗ' ಹೆಸರಿನ ಕೃತಿಯನ್ನು ಆ ಆಲಂಕಾರಿಕನ ಸಮ್ಮುಖದಲ್ಲಿಯೇ, ಆಸ್ಥಾನದಲ್ಲಿ ಸಾಮೂಹಿಕ ಚರ್ಚೆಗೆ ಒಳಪಡಿಸಿ, ಅಲ್ಲಲ್ಲಿ ಪರಿಷ್ಕರಿಸಿ, ಎಲ್ಲ ವಿದ್ವಾಂಸರಿಗೆ ಸರಿ ಎನಿಸಿದ ಬಳಿಕ, ಅದಕ್ಕೆ ತನ್ನ 'ಅನುಮತಿ' ನೀಡಿ ಚಲಾವಣೆಗೆ ಅವಕಾಶ ಕೊಟ್ಟಂತಿದೆ. ಹೀಗಾಗಿ ಇದು ಆ ಕಡೆ "ಶ್ರೀವಿಜಯ ಕೃತ"ವೂ ಈ ಕಡೆ "ನೃಪತುಂಗಾನುಮತ"ವೂ ಎಂಬಂತೆ ಆಕಾರ ಪಡೆದು, ಕನ್ನಡಕ್ಕೆ ಒಂದು ಅಪೂರ್ವ ಕಾಣಿಕೆಯಾಗಿ ಸಂದಿತು. ಕವಿಗಳೂ ರಾಜನೂ ಸೇರಿ ರೂಪಿಸಿದ ಕಾರಣ "ಕವಿರಾಜಮಾರ್ಗ" ಎಂದು ಹೆಸರಾಯಿತು.

ಇನ್ನು ಕವಿರಾಜಮಾರ್ಗದಲ್ಲಿ ನೆಲೆನಿಂತ ವಿಷಯಗಳನ್ನು ೧. ನಾಡು-ನಾಡವರು ೨. ಕಾವ್ಯ ಪ್ರಕಾರಗಳು ೩. ಕವಿಗಳು ೪.ಶಾಸ್ತ್ರವಿಚಾರ ಎಂದು ಅಭ್ಯಸಿಸಬಹುದಾಗಿದೆ.

❖❖

ನಾಡು - ನಾಡವರು

ಕಾವೇರಿಯಿಂದಮಾ ಗೋ।ದಾವರಿವರಮಿರ್ದ ನಾಡದಾ ಕನ್ನಡದೊಳ್।
ಭಾವಿಸಿದ ಜನಪದಂ ವಸು।ಧಾವಲಯವಿಲೀನವಿಶದವಿಷಯವಿಶೇಷಂ ॥[೧]

ಅದರೊಳಗಂ ಕಿಸುವೊಬಲಾ । ವಿದಿತ ಮಹಾಕೊಪಣನಗರದಾ ಪುಲಿಗೆಱೆಯಾ।
ಸದಭಿಸ್ತುತಮಪ್ಪೊಂಕುಂ।ದದ ನಡುವಣ ನಾಡೆ ನಾಡೆ ಕನ್ನಡದ ತಿರುಳ್ ॥[೨]

ಕನ್ನಡನಾಡಿನ ಭೌಗೋಲಿಕ ಹಿನ್ನೆಲೆಯಲ್ಲಿ ತಿರುಳ್ಗನ್ನಡನಾಡನ್ನು ಗುರುತಿಸಿ ಕೊಡುವ ಈ ಪದ್ಯಗಳು, ಮೇಲುನೋಟಕ್ಕೆ ಎರಡಾಗಿದ್ದರೂ ಅರ್ಥದೃಷ್ಟಿಯಿಂದ ಒಂದು. ಕಾವೇರಿಯಿಂದ ಗೋದಾವರಿಯ ವರೆಗೆ ವ್ಯಾಪಿಸಿರುವ 'ನಾಡು'[೩] ಅದು. ಆ ಕನ್ನಡನಾಡಿನೊಳಗಿರುವ (ಒಂದು)'ಜನಪದ'ವು[೪] ಜಗತ್ತಿನ ಸುಪ್ರಸಿದ್ಧ 'ವಿಷಯ'ಗಳಿಗೆ ಮಿಗಿಲು. ಆ ಜನಪದದೊಳಗೆ ಕಿಸುವೊಳಲು ಕೊಪಣನಗರ ಪುಲಿಗೆರೆ ಮತ್ತು ಒಕ್ಕುಂದಗಳಿಂದ ಸೀಮಿತವಾದ 'ನಡುವಣನಾಡು' ಕನ್ನಡದ ತಿರುಳಿನಂತೆ ಇನ್ನೂ ಮಿಗಿಲು- ಎಂದು ಈ ಪದ್ಯಗಳ ಅರ್ಥ. ಇಲ್ಲಿ ಒಂದರೊಳಗೊಂದು ಅಂತರ್ಗತವಾಗುವ ಮೂರು ಭೂವಲಯ (ನಾಡು, ಜನಪದ, ನಡುವಣನಾಡು)ಗಳನ್ನು ಹೇಳಲಾಗಿದೆ. ಈ ಮೂರನ್ನೂ ಒಂಬತ್ತನೆಯ ಶತಮಾನದ ಭೂನಕ್ಷೆಯ ಮೇಲೆ ಇತಿಹಾಸ ಸಮ್ಮತವಾಗಿ ಹೀಗೆ ಗುರುತಿಸಬಹುದಾಗಿದೆ.

ನಾಡು (ಕನ್ನಡ) :

'ಕಾವೇರಿಯಿಂದಮಾ ಗೋದಾವರಿವರಮಿರ್ದ ನಾಡು' ಎಂಬಲ್ಲಿ ಗೋದಾವರಿಯನ್ನು ಕನ್ನಡದ ಉತ್ತರ ಮೇರೆಯೆಂದು ಒಪ್ಪಬಹುದು. ಆದರೆ ಆ ಕಾಲದಲ್ಲಿ ರಾಷ್ಟ್ರಕೂಟರಿಗೆ ಸಮಬಲವಾಗಿ ಮೈಸೂರಿನ ಎಡಬಲದ ವಿಶಾಲಪ್ರದೇಶ(ಗಂಗವಾಡಿ ೯೬೦೦೦)ವನ್ನಾಳುತ್ತಿದ್ದ ಗಂಗರೂ ಕನ್ನಡಿಗರಾದುದರಿಂದ, ಕರ್ನಾಟಕದ

---

೧. ಕ.ಮಾ. ೧-೩೬

೨. ಕ.ಮಾ. ೧-೩೭

೩-೪. ಈ ಪಾರಿಭಾಷಿಕ ಪದಗಳ ಅರ್ಥ ಕೆಲವೆಡೆ ಕಟ್ಟುನಿಟ್ಟಾಗಿ ಬಳಕೆಯಾಗಿಲ್ಲ. ನೋಡಿ-"ಜನಪದಂ ದೇಶಮೆನೆ ನಾಡ ಪೆಸರಕ್ಕು..... ವಿಷಯಮೆನೆ ಪಯ್ಕಮೆನೆ ಕೊಟ್ಟಮೆನೆ ಕಂಪಣಕೆ ಪೆಸರೆನಿಕ್ಕುಂ"- ಅಭಿನವಾಭಿಧಾನಂ ಪು. ೫೬

ದಕ್ಷಿಣಮೇರೆ ಕಾವೇರಿಯನ್ನು ದಾಟಿರಬೇಕೆನಿಸುತ್ತದೆ. "ಕಾವೇರಿಯ ನೀರ್ವೊಲಿತ್ತ ಬರೆ ನಿಮ್ಮ ಬಲಂ ಶತಖಂಡಮಾಗದೆ?"[೫] ಎಂಬ ಗಂಗರ ಆಸ್ಥಾನಕವಿ ಗುಣವರ್ಮನ ಶೂದ್ರಕದ ಮಾತಿನಿಂದ ಗಂಗರ ಉತ್ತರಮೇರೆ ಕಾವೇರಿ ಎನಿಸುತ್ತದೆ. ನೃಪತುಂಗನ ವೀರಮಾಂಡಲಿಕ ಬಂಕೇಯನು "ಕಾವೇರಿಂ ಗುರುಪೂರದುರ್ಗಮತಮಾಮುಲ್ಲಂಘ್ಯ ಸಿಂಹ[ಕ್ರ]ಮಾತ್"[೬] ಅಂದರೆ ಸಿಂಹಪರಾಕ್ರಮದಿಂದ ಶತ್ರುರಾಜರನ್ನು (ಗಂಗರನ್ನು?) ಕಾವೇರಿನದಿಯನ್ನು ದಾಟಿ ಓಡಿಸಿದನೆನ್ನುವ ಈ ಕೊಣ್ಣೂರ ಶಾಸನದ ಪ್ರಕಾರ, ಕಾವೇರಿ ರಾಷ್ಟ್ರಕೂಟರ ದಕ್ಷಿಣಮೇರೆ ಎನಿಸುತ್ತದೆ. ಆದುದರಿಂದ ಕವಿರಾಜಮಾರ್ಗದಲ್ಲಿ ಹೇಳಲಾದ ಈ ಪ್ರದೇಶ ಅಖಂಡಕರ್ನಾಟಕವಲ್ಲ, ಪ್ರಸಂಗಾನುಸಾರ ಹೆಚ್ಚು ಕಡಿಮೆಯಾಗುತ್ತಿದ್ದರೂ, ಉತ್ತರದಲ್ಲಿ ಗೋದಾವರಿ, ದಕ್ಷಿಣದಲ್ಲಿ ಕಾವೇರಿಗಳು ಸ್ಥಿರ ಮೇರೆಯಾಗಿರುವ ರಾಷ್ಟ್ರಕೂಟ ಸಾಮ್ರಾಜ್ಯದ ಪ್ರದೇಶವೆನ್ನಬಹುದು.[೭]

"ಕುನ್ತಳ ವಿಷಯಕ್ಕಧಿಪತಿ ಕುನ್ತಳಚಕ್ರೇಶಂ"[೮] ಎಂದು ಮುಂತಾಗಿ ಉತ್ತರದ ಚಾಳುಕ್ಯರು ಹೇಳಿಕೊಳ್ಳುವಂತೆ ದಕ್ಷಿಣದ ಗಂಗರು ಹೇಳಿಕೊಳ್ಳುವುದಿಲ್ಲ. ಉತ್ತರದ ಚಾಳುಕ್ಯ ರಾಷ್ಟ್ರಕೂಟರ ಶಾಸನಗಳು ತಾವು ನಿಂತ ನೆಲ 'ಕುಂತಳ' ಎಂದು ಹೆಮ್ಮೆಪಡುವಂತೆ ದಕ್ಷಿಣದ ಗಂಗರ ಶಾಸನಗಳು ಹೆಮ್ಮೆಪಡುವುದಿಲ್ಲ. ತುಂಗಭದ್ರೆಯನ್ನು ದಾಟಿ ಬನವಾಸಿ ೧೨೦೦ರಿಂದ ಕೆಳತುದಿಯನ್ನು ಮುಟ್ಟುವ ಈ ಕುಂತಳದ ದಕ್ಷಿಣಮೇರೆ, ಇನ್ನೂ ಮುಂದುವರಿದು ಕಾವೇರಿಯನ್ನು ತಲುಪುತ್ತಿರಬಹುದು. ಅದಕ್ಕಾಗಿ ಕವಿರಾಜಮಾರ್ಗಕಾರನು ಹೇಳಿದ "ಕಾವೇರಿಯಿಂದಮಾ ಗೋದಾವರಿವರಮಿರ್ದನಾಡು" ಎಂಬ ಮಾತು 'ಕುಂತಳ'ಕ್ಕೆ ಅನ್ವಯಿಸುವಂತಿದೆ. [೮A] "ಶ್ರೀಮಚ್ಚಾಳುಕ್ಯ ಚಕ್ರವರ್ತ್ತಿ ಜಗದೇಕಮಲ್ಲಂ ಕುನ್ತಳಸಪ್ತಾರ್ದ್ಧ ಲಕ್ಷಮಂ...... ಪಾಳಿಸುತ್ತಂ"[೯] ಎಂಬಂತಹ ಮಾತುಗಳಲ್ಲಿ ಈ ಕುಂತಳದೇಶದ ಹಳ್ಳಿಗಳ ಸಂಖ್ಯೆ ಏಳುವರೆ ಲಕ್ಷ ಎಂಬ ಅರ್ಥವಿರಬಹುದು. [೯A] ವಾಯುಪುರಾಣದಲ್ಲಿ,

> ಗೋದಾವರಿ ಭೀಮರಥೀ ಕೃಷ್ಣಾ ವೈಣ್ಯಥ ಮಂಜುಲಾ ।
> ತುಂಗಭದ್ರಾ ಸುಪ್ರಯೋಗಾ ಕಾವೇರೀಚ ತಥಾಪಗಾ ।
> ದಕ್ಷಿಣಾಪಥನದ್ಯಸ್ತು ಸಹ್ಯಪಾದಾದ್ವಿನಿಸ್ಸೃತಾ ||[೧೦]

---

೫. ಕಾ.ಸಾ. ಪು. ೯೦ ಪ. ೪೩೫

೬. E.I. vi. P. 31

೭. "ವಡವೇಂಗಡಂ ತೆಂಗುಮರಿಯಾಯಿಡ್ತೈತ್ತಮೀಟ್" (ಬಡಗು ವೆಂಕಟಗಿರಿ, ತೆಂಕು ಕನ್ಯಾಕುಮಾರಿ ಈ ಮಧ್ಯದಲ್ಲಿ ತಮಿಟಿವು) ಎಂದು ತೊಳ್ಕಾಪ್ಪಿಯಂದಲ್ಲಿ ಹೇಳಲಾಗಿದೆಯೆಂದು ಸಾ.ಪ. ೧೨-೩ ಪು. ೧೯೨ ರಿಂದ ತಿಳಿದುಬರುತ್ತದೆ. "According to tradition, the chola country comprised the land between two streams having the same name, vellaru" ಎಂದು ಶ್ರೀ ನೀಲಕಂಠಶಾಸ್ತ್ರ (The cholas. P. 22) ಹೇಳುವರು. ಹೀಗೆ ಬೆಟ್ಟ ಹೊಳೆಗಳನ್ನಾಧರಿಸಿ ಹೇಳಲಾದ ದೇಶದ ಮೇರೆಗಳನ್ನು ಇಲ್ಲಿ ಗಮನಿಸಬಹುದು.

೮. E.c. viii. ಸೊರಬ ೨೨೩, ಉದ್ರಿಗ್ರಾಮ.

೮A. "ಕುಂತಲೇಷು ತಟೇ ಗೋದಾವರೀತಿ ಮಹಾಸರಿತಃ ಪ್ರತಿಷ್ಠಾನಂ ನಾಮನಗರಃ" ಎಂದು ಉದಯಸುಂದರೀ ಕಥಾ (G.O.S.)ದಲ್ಲಿ (P. 21)ಹೇಳಲಾಗಿದೆ. EI. XXXII. P. 14 ಅ.ಟಿ.

೯. S.I.I. ix-i೨೮೯ (ಕೋಳೂರ ಶಾಸನ).

೯A. ಚಾಲುಕ್ಯರು ಆಳುವಾಗ 'ಕುಂತಳ ಸಪ್ತಾರ್ಧಲಕ್ಷ' ಎಂದು ಕರೆಸಿಕೊಳ್ಳುತ್ತಿರುವ ಈ ಪ್ರದೇಶ. ರಾಷ್ಟ್ರಕೂಟರು ಆಳುವಾಗ 'ರಟ್ಟಪಾಡಿ ಸಪ್ತಾರ್ಧಲಕ್ಷ' ಎಂದು ಹೆಸರು ಬದಲಿಸಿಕೊಂಡಿತು.

೧೦. ವಾಯು ಪು. ೫೪-೧೦೪.

ಎಂದು ದಕ್ಷಿಣಾಪಥದ ಮುಖ್ಯನದಿಗಳನ್ನು ಎಣಿಸ ಹೇಳಹೊರಟು, ಗೋದಾವರಿ ಮೊದಲುಮಾಡಿ ಕಾವೇರಿಯನ್ನು ಹೇಳಿಬಿಡಲಾಗಿದೆ. ಇದರಿಂದ ದಕ್ಷಿಣಭಾರತದ ಪ್ರಮುಖ ನದಿಗಳೆಂದರೆ ಈ ಕುಂತಳನಾಡಿನ ನದಿಗಳೆನಿಸುತ್ತವೆ. ಕಾಲಕ್ರಮದಲ್ಲಿ ಈ ನಾಡು ಗೋದಾವರಿ ಮೇರೆಯನ್ನೇಕೆ ಭೀಮೆಯ ಮೇರೆಯನ್ನು ಕಳೆದುಕೊಂಡರೂ

"ಕರ್ಣಾಟ। ಸುವಿಶಾಲದೇಶಮಾ ಗೋದಾವರಿ ತೀರದಿಂದೆ ಕಾವೇರಿ ವರೆಗಂ"[೧೧]

ಕಾವೇರಿಯಿಂದಮಾ ಗೋದಾವರಿ ವರೆಗಮಿ।
ರ್ದಾ ವಸುಧಾತಳವಳಯ ।

ಭಾವಿಸೆ ಕರ್ಣಾಟಕ ಜನಪದವದ।
ನಾವನೊಲಿದು ಬಣ್ಣಿಸುವನು॥[೧೨]

ಎಂದು ನಮ್ಮ ಪ್ರಾಚೀನಕವಿಗಳು ಹಾಡುವಲ್ಲಿ, ಕವಿರಾಜಮಾರ್ಗಕಾರನ ಈ ಹೇಳಿಕೆ ಕವಿಸಮಯವಾಗಿ ಪರಿಣಮಿಸಿದೆ.

ಏಳೂವರೆ ಲಕ್ಷ ಹಳ್ಳಿ, ಸುಪ್ರಸಿದ್ಧ ನದಿ ಇವುಗಳಿಂದ ಕಣ್ಣುಕುಕ್ಕಿಸುತ್ತ ಕಾವೇರಿಯಿಂದ ಗೋದಾವರಿಯ ವರೆಗೆ ಮೈಚಾಚಿದ ಈ ನಾಡಿನ ಪ್ರಜೆಗಳು ಕವಿರಾಜಮಾರ್ಗಕಾರನ ದೃಷ್ಟಿಯಲ್ಲಿ,

ಸುಭಟರ್ಕಳ್ ಕವಿಗಳ್ ಸು।ಪ್ರಭುಗಳ್ ಚೆಲ್ವರ್ಕಳಭಿಜನರ್ಕಳ್ ಗುಣಿಗಳ್ ।
ಅಭಿಮಾನಿಗಳತ್ಯುಗ್ರರ್ । ಗಭೀರಚಿತ್ತರ್ ವಿವೇಕಿಗಳ್ ನಾಡವರ್ಗಳ್ ॥[೧೩]

ಜನಪದ (=ವಿಷಯ):

ಈ ವರೆಗೆ ವಿವೇಚಿಸಿದ ಕನ್ನಡನಾಡಿನೊಳಗಿನ ಒಂದು "ಜನಪದಂ ವಸುಧಾವಳಯವಿಲೀನ ಕಿಸುವೊಲಲು ವಿಶದವಿಷಯವಿಶೇಷಂ" ಎಂದು ಹೆಸರಾಗಿದೆ. ಅದರಲ್ಲಿ ಕಿಸುವೊಳಲ, ಕೊಪಣನಗರ, ಪುಲಿಗೆರೆ, ಒಕ್ಕುಂದ ಈ ನಾಲ್ಕು ಗ್ರಾಮಗಳನ್ನು ಸೀಮೆಮಾಡಿಕೊಂಡು ತಿರುಳ್ಗನ್ನಡ ಪ್ರದೇಶ ಶೋಭಿಸುತ್ತಿದೆ. ಈ ಗ್ರಾಮಗಳು ಪ್ರಾಚೀನಕಾಲದಲ್ಲಿ ಯಾವ ಆಡಳಿತ ವಿಭಾಗಗಳಿಗೆ ಸಂಬಂಧಿಸಿದ್ದುವೆಂದು ಪರೀಕ್ಷಿಸುವುದರ ಮೂಲಕ, ಮಾರ್ಗಕಾರನು ಹೇಳುವ ಈ ಜನಪದವನ್ನು ಗುರುತಿಸಬಹುದು.

೧. **ಪುಲಿಗೆಱೆ (ಗದಗ ಜಿಲ್ಲೆಯ ಲಕ್ಷ್ಮೇಶ್ವರ):** "ಆ ಪುಲಿಗೆಱೆ ನಾಡೊಳಗೆ.... ಮಹಾಪಟ್ಟಣಂ...... ಪುಲಿಗೆಱೆಯೆಸೆಗುಂ"[೧೪] -ಇಂಥ ಹೇಳಿಕೆಗಳ ಪ್ರಕಾರ ಪುಲಿಗೆಱೆಯು ಪುಲಿಗೆಱೆ ಪ್ರಾಂತದೊಳಗಣ ಒಂದು ಪಟ್ಟಣವೆಂಬುದು ಸುವ್ಯಕ್ತ. ಈ ಪ್ರಾಂತಕ್ಕೆ 'ಪುಲಿಗೆಱೆ೩೦೦' ಎಂದು ಹೆಸರು.

---

೧೧. ಕೊ.ಬ. ಚಾರಿತ್ರ ೨-೯

೧೨. ರಾ. ಚರಿತೆ (ನಂಜುಂಡ)೨-೧೧. ಪಂಡಿತ ಜೆ. ರಘುಪತ್ಯಾಚಾರ್ಯವಿರಚಿತ ಶ್ರೀ ನರಸಿಂಹರಾಜ ಕರ್ಣಾಟಕ ಛಂದೋರಾಜಂ
ಎಂಬ ಗ್ರಂಥ (ಪು. ೧೪೬)ರಲ್ಲಿ ಈ ಸಾಂಗತ್ಯಪದ್ಯವನ್ನು ಹೊನ್ನಮ್ಮನದೆಂದು ಸೂಚಿಸಲಾಗಿದೆ.

೧೩. ಕ.ಮಾ. ೨-೨೮ ೧೪. EI. xiii. P. 331 (ಕಳಸದ ಶಾಸನ)

೨. **ಕಿಸುವೊಲಿಲ್(ಬಾಗಲಕೋಟೆ ಜಿಲ್ಲೆಯ ಪಟ್ಟದಕಲ್ಲು):** ಕಿಸುವೊಲಿಲು ಕಿಸುಕಾಡು ಪ್ರಾಂತಕ್ಕೆ ಸಂಬಂಧಿಸಿದುದೆಂದು ಕೆಲವರ ಮತ.[೧೫] ಆದರೆ "ಶ್ರೀ ಮದ್ಭುವನೈಕಮಲ್ಲ ನೊಳಂಬ ಪಲ್ಲವ ಪೆರ್ಮಾನಡಿ ಸಿಂಗಣದೇವರ್ಕಿಸುಕಾಡೆರ್ಪ್ಪತ್ತುಮಂ ಕಿಸುವೊಳಲಾಱುಂ ಬಾಡಮುಮಂ"[೧೬] ಆಳುತ್ತಿದ್ದನೆಂದು ಹೇಳುವ ಪಟ್ಟದಕಲ್ಲು ಶಾಸನ, ೭೦ ಗ್ರಾಮಗಳ ವಿಭಾಗವಾದ ಕಿಸುಕಾಡು ಮತ್ತು ೬ ಗ್ರಾಮಗಳ ವಿಭಾಗವಾದ ಕಿಸುವೊಲಿಲುಗಳು ಬೇರೆಬೇರೆ ಎಂದು ಸ್ಪಷ್ಟಪಡಿಸುತ್ತದೆ.

ಹುನಗುಂದದ "ಲಕ್ಷ್ಮರಸರ್ಬೆಳ್ವಲ ಮೂನೂಱುಮಂ ಪುಲಿಗೆಱೆ ಮೂನೂಱುಮಂ..... ರಾಜ್ಯಂಗೆಯುತ್ತುಮಿರೆ... ಶ್ರೀಕರಣದ ದೇವಣಯ್ಯನಾಯಕನುಂ...... ಪೆರ್ಗಡೆ ರೇವಣಯ್ಯನುಂ...... ಮೂವತ್ತರ ಮೊದಲ ಬಾಡಂ ರಾಜಧಾನಿ ಪೊನ್ನುಗುಂದದ ಪೂರನಡುವಣ [ಅ]ರಸರ ಬಸದಿಗೆ.... ಕೆಯುಮಂ....... ಕೊಟ್ಟರು"[೧೭]

ಎಂಬ ಶಾಸನ ವಾಕ್ಯವನ್ನು ಗಮನಿಸಿದರೆ, ಹುನಗುಂದವು ಬೆಳ್ವೊಲ ೩೦೦ಕ್ಕೆ ಸಂಬಂಧಿಸಿದೆಯೆಂದು ತಿಳಿದುಬರುತ್ತದೆ. ಅದಕ್ಕಾಗಿ ನಾವು ಮೇಲೆ ಊಹಿಸಿರುವಂತೆ ಹುನಗುಂದದಿಂದ ೧೦ ಮೈಲು ಕೆಳಗಿರುವ ಪಟ್ಟದಕಲ್ಲು ಸಹ ಬೆಳ್ವೊಲ೩೦೦ಕ್ಕೆ ಸಂಬಂಧಿಸಿರಬಹುದು. ಬಾದಾಮಿಯೂ ಬೆಳ್ವೊಲಕ್ಕೆ ಸಂಬಂಧಪಟ್ಟುದೆಂದು "ಬೆಳ್ವಲದ ಬಾದಾವಿಯ ಹುವಿಯರ ನಾರಸಿಂಹದೇವ ಮಾಡಿದ ಧರ್ಮ"[೧೮] ಎಂಬ ಮಾತಿನಿಂದ ವೇದ್ಯವಾಗುವುದರಿಂದ, ಹತ್ತಿರದಲ್ಲಿಯ ಪಟ್ಟದಕಲ್ಲು ಸಹ ಬೆಳ್ವೊಲನಾಡಿನ ಗ್ರಾಮವಾಗಿರಬೇಕೆಂದು ಇನ್ನೂ ಸ್ಪಷ್ಟವಾಗುತ್ತದೆ.

ಇದಲ್ಲದೆ ಗಂಗವಾಡಿ ೯೬೦೦೦, ಪುಲಿಗೆಱೆ೩೦೦, ಬೆಳ್ವೊಲ ೩೦೦ಗಳನ್ನಾಳುತ್ತಿದ್ದ ಗಂಗ ಬೂತಗನನ್ನು ಕುರಿತು "ಬೂತಯ್ಯ ಪೆರ್ಮ್ಮಾಡಿ ಪೆಱ್ದೊಱೆ ಮರ್ಯ್ಯಾದೆ ಗಂಗವಾಡಿ ತೊಂಬತ್ತಱುಸಾಸಿರಮುಮಂ ಪ್ರತಿಪಾಳಿಸೆ"[೧೯] ಎಂದು ನರೇಗಲ್ಲ ಶಾಸನ ಹೇಳಿರುವುದರಿಂದ, ಬೆಳ್ವೊಲ ೩೦೦ರ ಒಂದು ಮೂಲೆ, ಕೃಷ್ಣಾನದಿ (ಪೆಱ್ದೊಱೆ)ಯನ್ನು ಮುಟ್ಟಿರಲು ಸಾಧ್ಯ. ಈ ವಿವರಣೆಗಳಿಂದ ಕಿಸುವೊಲಿಲು, ಬೆಳ್ವೊಲ ೩೦೦ಕ್ಕೆ ಸಂಬಂಧಿಸಿದ ಗ್ರಾಮವೆಂದು ಸ್ಪಷ್ಟವಾಗುತ್ತದೆ.

೩. **ಕೊಪಣನಗರ (ಕೊಪ್ಪಳ ಜಿಲ್ಲಾ ಕೇಂದ್ರ):** ಕುಪಣ, ಕೊಪಣ; ಕುಪಿಣತೀರ್ಥ, ಮಹಾತೀರ್ಥ, ಆದಿತೀರ್ಥ ಎಂದು ಪ್ರಸಿದ್ಧವಾದ ಕೊಪ್ಪಳವನ್ನು ಕವಿರಾಜಮಾರ್ಗಕಾರ 'ವಿದಿತ ಮಹಾಕೊಪಣನಗರ' ಎಂದು ಕೀರ್ತಿಸಿರುವನು.

"ಚತುರಾಸ್ಯಕೋಟಿಕೂಟದೊಳತಿಶಯಮೆನಿಸಿರ್ದ್ದ ಕೋಪಣತೀರ್ಥ"[೨೦]
"ನೆಗಲ್ದ ಕೊಪಣಾಚಳದಂತೆ ಪವಿತ್ರಮತ್ತಿಮಬ್ಬೆಯ ಚರಿತಂ"[೨೧]
"ಊರೂರ್ತಪ್ಪದೆ ಬಸದಿಯ।ನೋರಂತಿರೆ ಮಾಡಿ ಬೆಳಗವತ್ತಿಯ ನಾಡಂ।
ಧಾರಿಣಿಗೆನೆಗಲ್ದ ಕೊಪಣ । ಕ್ಕೋರಗೆ ಮಾಡಿದನುದಾರನಿಧಿಯೇಚರಸಂ"॥[೨೨]
"ಗಂಗವಾಡಿ ತೊಂಬತ್ತಱುಸಾಸಿರಂ ಕೊಪಣಮಾದುದು ಗಂಗಣದಂಡನಾಥನಿಂ"॥[೨೩]

---

೧೫. "ಕಿಸುಕಾಡನಾಡ ಮುಖ್ಯ ಪಟ್ಟಣವು ಕಿಸುವೊಲಿಲು"-ನಾ.ಭ. ಶಾಸ್ತ್ರಿ (ಸಾ.ಪ. ೨೨-೩ ಪು. ೧೪೦)
೧೬. BKI. I-i No. 110 (೧೦೭೦)
೧೭. BKI.I-i.No. 113 (೧೦೭೪)
೧೮. E.C. iii.ತಿರುಮಕೂಡ್ಲ ನರಸೀಪುರ ೧೨೯. ಬನ್ನೂರ
೧೯. BKI I-i. No. 38ನರೇಗಲ್ಲ (950A.D.)
೨೦. E.C. vii.ಶಿವಮೊಗ್ಗ ೬೪; ಪುರಲೆಗ್ರಾಮ.
೨೧. ಅ.ಪುರಾಣ ೧೨-೬
೨೨. E.C. vii.ಶಿಕಾರಿಪುರ ೩೧೭
೨೩. E.C. ii.ಶ್ರವಣಬೆಳ್ಗೊಳ ೧೨೭.

ಈ ಮಾತುಗಳು ಕವಿರಾಜಮಾರ್ಗಕಾರನ ಹೊಗಳಿಕೆಯನ್ನು ಸಮರ್ಥಿಸುತ್ತವೆ. ಆದರೆ ಈ ಕೊಪ್ಪಳ ಪ್ರಾಚೀನಕಾಲದಲ್ಲಿ ಯಾವ ಪ್ರಾಂತಕ್ಕೆ ಸಂಬಂಧಿಸಿದ ಗ್ರಾಮವೆಂಬುದು ಇನ್ನೂ ನಿರ್ಣಯವಾಗಿಲ್ಲ. ಡಾ. ದೇಸಾಯಿ ಅವರು ಮಾತ್ರ ಎಡತೊಱೆ ೨೦೦೦ ನಾಡನ್ನು ಕುರಿತು ಬರೆಯುತ್ತ "Modern Kopal was probably included in this tract"[೨೪] ಎಂದು ಊಹಿಸಿರುವರು. ಆದರೆ ಮಾಂಡಲಿಕ ಶಂಕರಗಂಡನು ಕೊಪ್ಪಳದಲ್ಲಿ ತಾನು ಕಟ್ಟಿಸಿದ ಜಯಧೀರ ಜಿನಾಲಯಕ್ಕೆ ಕುಕ್ಕುನೂರು ೩೦ರೊಳಗಣ ಭೂಮಿಯನ್ನು ನೀಡಿದನೆಂದು ಉಪ್ಪಿನ ಬೆಟಗೇರಿ ಶಾಸನದಲ್ಲಿ ಹೇಳಲಾಗಿದೆ.[೨೫] ಶಂಕರಗಂಡನಾಳುತ್ತಿದ್ದುದು ದೂರದ ಬನವಾಸಿಯಲ್ಲಿ ದೇವಭೋಗದ ಅನುಕೂಲತೆಗಾಗಿ ಕೊಪ್ಪಳದ ಎಡಬಲದ ಭೂಮಿ ಅವಶ್ಯ. ಅದಕ್ಕಾಗಿ ಕುಕ್ಕನೂರ೩೦ರೊಳಗಣ ಭೂಮಿಯನ್ನು ನೀಡಿದುದರಿಂದ ಕೊಪ್ಪಳವೂ ಕುಕ್ಕನೂರ ೩೦ರಲ್ಲಿರಬಹುದೆನಿಸುತ್ತದೆ. ಈ ಕುಕ್ಕನೂರು೩೦, ಬೆಳ್ವೊಲ೩೦೦ರ ಒಂದು ಭಾಗವಾದುದರಿಂದ ಕೊಪ್ಪಳವೂ ಬೆಳ್ವೊಲನಾಡಿಗೆ ಸಂಬಂಧಿಸಿರಬಹುದು.

೪. **ಒಂಕುಂದ (ಬೆಳಗಾಂವಿ ಜಿಲ್ಲೆಯ ಒಕ್ಕುಂದ):** "ಸದಭಿಸ್ತುತಮಪ್ಪೊಂಕುಂದ" ಎಂದು ಕವಿರಾಜಮಾರ್ಗಕಾರನ ಹೊಗಳಿಕೆಗೆ ಪಾತ್ರವಾದ ಈ ಗ್ರಾಮದ ಐತಿಹಾಸಿಕ ಪ್ರಸಿದ್ಧಿ ಏನೂ ತಿಳಿದು ಬಂದಿಲ್ಲ ಒಕ್ಕುಂದದಲ್ಲಿರುವ ಒಂದು ಶಾಸನದಲ್ಲಿಯೂ[೨೬] ಮಹತ್ವದ ವಿಷಯವಿಲ್ಲ. ಬಹುಶಃ ಇದು ಹಲಸಿಗೆ ೧೨೦೦೦, ಕೂಂಡಿ ೩೦೦೦, ಪುಲಿಗೆಱೆ೩೦೦, ಬೆಳ್ವೊಲ ೩೦೦ ಪ್ರದೇಶಗಳು ಸಂಧಿಸುವ ಮೂಲೆಯಲ್ಲಿದೆ. ಕವಿರಾಜಮಾರ್ಗಕಾರನು ಹೇಳುವ ನಾಲ್ಕು ಗ್ರಾಮಗಳಲ್ಲಿ ಮೂರು ಬೆಳ್ವೊಲ ೩೦೦, ಪುಲಿಗೆಱೆ ೩೦೦ರಲ್ಲಿರುವುದರಿಂದ ಒಕ್ಕುಂದವೂ ಈ ಎರಡರಲ್ಲಿ ಒಂದು ಪ್ರಾಂತಕ್ಕೆ ಸಂಬಂಧಿಸಿರಬಹುದು.

ಹೀಗೆ ತಿರುಳ್ಗನ್ನಡನಾಡಿನ ಸೀಮೆಯ ತುದಿಯಲ್ಲಿರುವ ಪುಲಿಗೆಱೆ, ಕೊಪಣನಗರ, ಕಿಸುವೊಳಲು, ಒಕ್ಕುಂದಗಳು ಬೆಳ್ವೊಲ ೩೦೦, ಪುಲಿಗೆಱೆ ೩೦೦ರಲ್ಲಿರುವುದರಿಂದ ಕವಿರಾಜಮಾರ್ಗಕಾರನು ಹೇಳುವ ತಿರುಳ್ಗನ್ನಡವನ್ನೊಳಗೊಂಡ 'ಜನಪದ'ವೆಂದರೆ 'ಬೆಳ್ವೊಲ೩೦೦- ಪುಲಿಗೆಱೆ ೩೦೦' ಎಂದು ಖಚಿತವಾಗುತ್ತದೆ.[೨೭] ಇವುಗಳ ರಾಜಧಾನಿ ಕ್ರಮವಾಗಿ ಅಣ್ಣಿಗೆಱೆ ಮತ್ತು ಪುಲಿಗೆಱೆ.

---

೨೪. J.S.I. P-337

೨೫. ಶಾ. ಪರಿಚಯ ಪು. ೫

೨೬. ARSIE. 1945-46. p. 40

೨೭. ಅ. ತಿರುಳ್ಗನ್ನಡ ನಾಡಾವುದು?-ಸಾ.ಪ. ೧೪-೨. ಪು. ೧೨೯ (ನಾ. ಶ್ರೀ. ರಾಜಪುರೋಹಿತ). ಈ ಲೇಖನದಲ್ಲಿ ಕಾವೇರಿಯಿಂದ ಗೋದಾವರಿ ವರೆಗಣ ಪ್ರದೇಶವಲ್ಲ ತಿರುಳ್ಗನ್ನಡನಾಡು ಎಂದು ಸಾಧಿಸಿರುವರು.

ಬ. ಎರಡಱುನೂಱಱ ನಾಡಾವುದು?-ಸಾ.ಪ. ೧೫-೪ (ನಾ. ಶ್ರೀ. ರಾಜಪುರೋಹಿತ) ಈ ಲೇಖನದಲ್ಲಿ ಪುಲಿಗೆಱೆನಾಡು ಬೇರೆ, ಬೆಳ್ವೊಲನಾಡು ಬೇರೆ, ಎರಡಱುನೂಱಱ ನಾಡೆಂದರೆ 'ಕೊಪಣನಗರದ ನಾಡು' ಎಂದು ಹೇಳಿರುವರು.

ಕ. ತಿರುಳ್ಗನ್ನಡ ಹಾಗೂ ಎರಡಱುನೂಱಱ ನಾಡುಗಳು ಯಾವುವು?-ಸಾ.ಪ. ೧೭-೨(ನಾ.ಭಾ.)

ಡ. The core of Karnataka-IA.LII. P.17(ಎಚ್. ನಾರಾಯಣರಾವ್). ಈ ಲೇಖನದಲ್ಲಿ ಬೆಳ್ವಲ ೩೦೦, ಬೆಳಗಲಿ೩೦೦, ಪುಲಿಗೆಱೆ೩೦೦, ಹಗರಟಿಗೆ ೩೦೦ ಕೂಡಿದುದು ಎರಡಱುನೂಱಱ (೧೨೦೦)ನಾಡು ಎಂದು ಸಾಧಿಸಿರುವರು.

ಪ್ರಾಚೀನ ಕರ್ನಾಟಕದ ಕೆಲವು ಮುಖ್ಯಪಟ್ಟಣಗಳ ಮುಂದೆ ಹೇಳಲಾದ ಸಂಖ್ಯೆಗಳು ಆ ಆ ಪ್ರಾಂತದ ಒಟ್ಟು ಊರುಗಳನ್ನು ಸೂಚಿಸುತ್ತಿವೆಯೆಂದು ಇತ್ತೀಚೆಗೆ ಖಚಿತವಾಗಹತ್ತಿರುವುದರಿಂದ ಬೆಳ್ವೊಲ ಪ್ರಾಂತದಲ್ಲಿ ೩೦೦, ಪುಲಿಗೆಜೆ ಪ್ರಾಂತದಲ್ಲಿ ೩೦೦ ಹಳ್ಳಿಗಳಿದ್ದಿರಬಹುದು.

ಬೆಳ್ವೊಲ ೩೦೦ರ ಉಪವಿಭಾಗಗಳನ್ನು ಬೆನ್ನರಡಿ ೭೦, ಚಿಂಚಲಿ ೫೦, ನವಲಗುಂದ ೪೦, ಕೊಳನೂರು ೩೦,ಕುಕನೂರ ೩೦, ನರೆಯಂಗಲ್ ೧೨, ಬೆಳ್ವಣಿಕೆ೧೨ ಎಂದು ಹುಡುಕಿ, ತರುವಾಯ ಮುಳಗುಂದ೧೨ನ್ನು ಸೇರಿಸಿ ಒಟ್ಟು ೨೫೬ ಗ್ರಾಮಗಳನ್ನು ಡಾ. ರಿತ್ತಿ ಲೆಕ್ಕಮಾಡಿರುವರು.[೨೮] ಈ ಹಿಂದೆ ನಾವು ಗುರುತಿಸಿದ ಹುನಗುಂದ ೩೦, ಕಿಸುವೊಳಲು ೬ ಗಳನ್ನು ಕೂಡಿಸಿ ಈ ಸಂಖ್ಯೆಯನ್ನು ೨೯೨ಕ್ಕೆ ಮುಟ್ಟಿಸಬಹುದು. ಆದರೆ ೩೦೦ರನ್ನು ಪೂರ್ಣಗೊಳಿಸಲು ಬೇಕಾಗುವ ೮ ಗ್ರಾಮಗಳ ಇನ್ನೊಂದು ವಿಭಾಗವನ್ನು ಶೋಧಿಸಬೇಕಾಗಿದೆ. ಈ ವಿವರಣೆಯಿಂದ ಬೆಳ್ವೊಲ೩೦೦ ರಲ್ಲಿ ಧಾರವಾಡ ಜಿಲ್ಲೆಯ ಗದಗ ತಾಲೂಕು, ನವಿಲಗುಂದ ತಾಲೂಕು, ನರಗುಂದ ತಾಲೂಕು, ರೋಣ-ಹುಬ್ಬಳ್ಳಿ-ಕುಂದಗೋಳ ತಾಲೂಕುಗಳ ಕೆಲಭಾಗ; ಬೆಳಗಾವ ಜಿಲ್ಲೆಯ ಸವದತ್ತಿ-ರಾಮದುರ್ಗ ತಾಲೂಕುಗಳ ಕೆಲಭಾಗ; ಬಾಗಲಕೋಟ ಜಿಲ್ಲೆಯ ಬಾದಾಮಿ-ಬಾಗಲಕೋಟೆ-ಹುನಗುಂದ ತಾಲೂಕುಗಳ ಕೆಲಭಾಗ; ರಾಯಚೂರು ಜಿಲ್ಲೆಯ ಯಲಬುರ್ಗಿ ತಾಲೂಕಿನ ಕೆಲಭಾಗಗಳು ಸಮಾವೇಶಗೊಳ್ಳುವುದಾಗಿ ತಿಳಿದುಬರುತ್ತದೆ.

ಬೆಳ್ವೊಲ೩೦೦ ರ ಉಪವಿಭಾಗ ಮತ್ತು ಮೇರೆಗಳನ್ನು ತಕ್ಕಮಟ್ಟಿಗೆ ಗುರುತಿಸಿದ ನಾವು ಪುಲಿಗೆಱೆ ೩೦೦ ರ ವಿಷಯವಾಗಿ ಮೌನತಾಳಬೇಕಾಗುತ್ತದೆ. ಪ್ರಕಟವಾದ ಶಾಸನಗಳಲ್ಲಿ ಈ ಪ್ರಾಂತದ ಉಪವಿಭಾಗಗಳು ನನ್ನ ಗಮನಕ್ಕೆ ಬರಲಿಲ್ಲ. ಆದರೂ ಪುಲಿಗೆಱೆ೩೦೦ ಪ್ರಾಂತವು ಬೆಳಗಾಂವಿ ಜಿಲ್ಲೆಯ ಸವದತ್ತಿ ಬೈಲಹೊಂಗಲ ತಾಲೂಕುಗಳ ಕೆಲಭಾಗ;ಧಾರವಾಡ ಜಿಲ್ಲೆಯ ಧಾರವಾಡ, ಮುಂಡರಗಿ ತಾಲೂಕುಗಳು; ಹುಬ್ಬಳ್ಳಿ-ಕುಂದಗೋಳ-ಶಿರಹಟ್ಟಿ-ಶಿಗ್ಗಾವಿ-ಬಂಕಾಪುರ-ಹಾವೇರಿ ತಾಲೂಕುಗಳ ಕೆಲಭಾಗ;ರಾಯಚೂರು ಜಿಲ್ಲೆಯ ಕೊಪ್ಪಳ ತಾಲೂಕಿನ ಕೆಲಭಾಗಗಳನ್ನೊಳಗೊಂಡು ಮೇಲಣ ಬೆಳ್ವೊಲ ೩೦೦ರ ಕೆಳಗೆ ಜೇನುಗೂಡಿನಂತೆ ಅಪ್ಪಿಕೊಂಡಿದೆಯೆನ್ನಬಹುದು.

ಕ್ರಿ.ಶ. ೬೮೩ರ ಶಾಸನದಲ್ಲಿ 'ಬೆಳುವಲ ಶತತ್ರಯ'[೨೯] ಎಂಬ, ಕ್ರಿ.ಶ. ೮೬೬ರ ಶಾಸನದಲ್ಲಿ 'ಪುರಿಗೆಜೆ೩೦೦'[೩೦] ಎಂಬ ಉಲ್ಲೇಖಗಳು ಸಿಗುವುದರಿಂದ ನೃಪತುಂಗನ ಕಾಲಕ್ಕೆ ಇವು ಅಸ್ತಿತ್ವದಲ್ಲಿದ್ದುದು ಸ್ಪಷ್ಟ. ಕವಿರಾಜಮಾರ್ಗಕಾರನ ಪ್ರೀತಿ, ಅಭಿಮಾನಗಳಿಗೆ ಪಾತ್ರವಾದ ಈ ಪ್ರಾಂತಗಳು ನೋಡಲಿಕ್ಕೆ ಎರಡಾಗಿ ಕಂಡರೂ ಗಂಡಭೇರುಂಡದಂತೆ ಅವುಗಳ ಅಂತರಂಗ ಅಖಂಡವಾಗಿದೆ. "ಪುಲಿಗೆಱೆ ಮೂನೂಱುಂ ಬೆಳ್ವೊಲ ಮೂನೂಱುಮನ್ನೆರಡಱುನೂಱುಮಂ"[೩೧] ಎಂದು ಹೇಳುವಲ್ಲಿ ಇನ್ನೂ ಉಳಿದು ಕಾಣುವ ಇವುಗಳ ದ್ವೈತಭಾವ 'ಎರಡಱುನೂಱಱ ಸುಂಕವೆಗ್ಗಡೆ'[೩೨] ಎನ್ನುವಲ್ಲಿ ಅದ್ವೈತಗೊಂಡಿದೆ. ಇಷ್ಟೇ ಏಕೆ, ಡಾ. ಬಾರ್ನೆಟ್ ಅವರು "ಬೆಳ್ವಲವೆರಡಱುನೂಱುವಂ.... ಆಳುತ್ತಮಿರೆ"[೩೩] ಎಂಬ ವಾಕ್ಯಕ್ಕೆ ಎರಡು ಬೆಳ್ವೊಲಗಳು

೨೮. 'ಬೆಳ್ವೊಲಮೂನೂಱು'-ಕ.ಭಾ. ೧-೧.

೨೯. S.S.I. xx. No. 4

೩೦. K.I. Vol.I. No. 14 ಶಿಗ್ಗಾವಿ ಶಾಸನ.

೩೧. ಸಾ.ಪ. ೧೫-೪ ಪು. ೨೮೨ (ಲಕ್ಷ್ಮೇಶ್ವರ ಶಾಸನ)

೩೨. ಸಾ.ಪ. ೧೫-೪ ಪು. ೨೮೨ (ಕಲ್ಲೂರ ಶಾಸನ)

೩೩. E.I. xix. P. 191-192. (ದೇವಗೇರಿ ಶಾಸನ)

(ಬೆಳ್ವೊಲ೩೦೦+ಬೆಳ್ವೊಲ ೩೦೦) ಕೂಡಿ ಆದ ಆರುನೂರು ಎಂದು ಅರ್ಥಮಾಡುವುದರಿಂದ ಮೊದಮೊದಲು ಪುಲಿಗೆಱೆ೩೦೦ಕ್ಕೂ ಬೆಳ್ವಲ ೩೦೦ ಎಂದೇ ಹೆಸರಿರಬೇಕೆನಿಸುತ್ತದೆ. "ಭೋಗಿಜನರಮ್ಯಂ ಬೆಳ್ವೊಲಂ ತನ್ಮುಖಸ್ಥಾನ.... ಪುರಿಕರ ಶ್ರೀರಾಜಧಾನ್ಯಾಹ್ವಯಂ"[೩೪] ಎಂಬ ಮಾತೂ ಇದನ್ನು ಸಮರ್ಥಿಸುತ್ತದೆ. ಅದಕ್ಕಾಗಿ 'ಮೂಲ ಬೆಳ್ವೊಲ' ೬೦೦ ಗ್ರಾಮಗಳಿಂದ ಅಖಂಡವಾಗಿದ್ದು,[೩೫] ಯಾವುದೋ ಒಂದು ಕಾಲದಲ್ಲಿ (ದಕ್ಷಿಣ) ಬೆಳ್ವೊಲ ೩೦೦ಕ್ಕೆ ಪುಲಿಗೆಱೆ ೩೦೦ ಎಂಬ ಹೆಸರು ಪ್ರಾಪ್ತವಾಗಿರಬೇಕು. ಹೀಗೆ ಬೆಳ್ವೊಲ೩೦೦, ಪುಲಿಗೆಱೆ ೩೦೦ ಎರಡಾಗಿ ಕಂಡರೂ ಅವುಗಳ ಹೊಕ್ಕಳ ಹುರಿ ಒಂದೇ. ಅದು ಬೆಳ್ವೊಲ. ಈ ಎರಡು ಬೆಳ್ವೊಲಗಳ 'ಜನಪದ'ವು ಸತ್ವಪೂರ್ಣಭೂಮಿ, ಸುಸಂಸ್ಕೃತಪ್ರಜೆ, ಸಾರವತ್ತಾದ ಭಾಷೆಗಳಿಂದ ಶ್ರೀಮಂತವಾಗಿತ್ತು. ಕಾವೇರಿಯಿಂದ ಗೋದಾವರಿ ವರೆಗಣ ಕನ್ನಡನಾಡಿಗೆ ಹೃದಯಸ್ಥಾನವೆನಿಸಿತ್ತು. ಹೀಗಾಗಿ ಕವಿರಾಜಮಾರ್ಗಕಾರನು 'ಕನ್ನಡದೊಳ್ ಭಾವಿಸಿದ ಜನಪದಂ ವಸುಧಾ ವಲಯವಿಲೀನವಿಶದವಿಷಯವಿಶೇಷಂ' ಎಂದು ಬೆಳ್ವೊಲ ೬೦೦ನ್ನು ಬಾಯ್ತುಂಬ ಬಣ್ಣಿಸಿರುವನು. ಪರ್ಯಟನ ಪ್ರಸಂಗದಲ್ಲಿ ನೂರಾರು ಪ್ರಾಂತಗಳನ್ನು ಅರ್ಥಮಾಡಿಕೊಂಡ ಸರ್ವಜ್ಞನ,

> ಜೋಳದ ಬೋನಕ್ಕೆ। ಬೇಳೆಯಾ ತೊಗೆಯಾಗಿ।
> ಕಾಳೆಮ್ಮೆ ಕರೆದ ಹಯನಾಗೆ । ಬೆಳವಲದ
> ಮೇಳ ನೋಡೆಂದ ಸರ್ವಜ್ಞ॥

ಎಂಬ ಮಾತು ಬೆಳ್ವೊಲದ ಬಂಗಾರಭೂಮಿಗೆ ಒರೆಗಲ್ಲಾಗಿ ನಿಂತಿದೆ.

ನಡುವಣ ನಾಡು (=ತಿರುಳ್ಗನ್ನಡ):

ಪುಲಿಗೆಱೆ೩೦೦, ಬೆಳ್ವೊಲ೩೦೦ರ 'ಅಖಂಡ ಜನಪದ'ವನ್ನು ಮೆಚ್ಚಿದ ಕವಿರಾಜಮಾರ್ಗಕಾರನು 'ಅದಱೊಳಗಂ' ಇರುವ ಕಿಸುವೊಳಲು, ಕೊಪಣನಗರ, ಪುಲಿಗೆರೆ, ಒಕ್ಕುಂದಗಳ ಮಧ್ಯಭೂಮಿಯನ್ನು 'ನಡುವಣನಾಡು' ಎಂದು ಕರೆದು, "ನಡುವಣ ನಾಡೆ ನಾಡೆ ಕನ್ನಡದ ತಿರುಳ್" ಎಂದು ಅದರ ಹಿರಿಮೆಯನ್ನು ಕೈಯೆತ್ತಿ ಹೇಳಿರುವನು. ಇದನ್ನೇ ಪಂಪನು 'ರಾಜದ್ರಾಜಕಮೆನಿಸಿದ ಸಾಜದ ಪುಲಿಗೆಱೆಯ ತಿರುಳ್ಗನ್ನಡ'[೩೬] ಎಂದು, ರನ್ನನು "ಕನ್ನಡಂ ಎರಡಱುನೂಱಱ ಕನ್ನಡಮಾ ತಿರುಳ್ಗನ್ನಡಂ"[೩೭] ಎಂದು ಮೆಚ್ಚಿನುಡಿದಿರುವರು. ಇಲ್ಲಿ ಕವಿರಾಜಮಾರ್ಗಕಾರನು ಎರಡಱುನೂಱಱ ಸರ್ವತೋಮುಖ ಶ್ರೀಮಂತಿಕೆಯನ್ನು ಹೇಳಿದ್ದರೆ, ಪಂಪರನ್ನರು ಹೇಳಿದುದು ಈ ನಾಡಿನ ಭಾಷಾಶ್ರೀಮಂತಿಕೆಯನ್ನು. ಇದಕ್ಕೆ ವಿವರಣೆಯೆನ್ನುವಂತೆ ಕವಿರಾಜಮಾರ್ಗಕಾರನು,

> ಪದನಱಿದು ನುಡಿಯಲಂ ನುಡಿ।ದುದನಱಿದಾರಯಲುಮಾರ್ಪರಾ ನಾಡವರ್ಗಳ್ ।
> ಚದುರರ್ ನಿಜದಿಂ ಕುಱಿತೋ ।ದದಯುಂ ಕಾವ್ಯಪ್ರಯೋಗಪರಿಣತಮತಿಗಳ್ ॥[೩೮]

---

೩೪. ಸಾ.ಪ. ೧೪-೪ ಪು. ೨೮೩ (ಲಕ್ಷ್ಮೇಶ್ವರ ಶಾಸನ) ಇಲ್ಲಿ "ಬೆಳುವಲಮಪ್ಪ ಹುಲಿಗೆಱೆ" (E.C. xv P. 40) ಎಂಬ ಇನ್ನೊಂದು ವಾಕ್ಯವನ್ನೂ ಗಮನಿಸಬಹುದು.

೩೫. "ಧರೆಯೊಳಗೆ ನೆಗಟ್ದ ಬೆಳವಲಯೆರಡಱುನೂಱಱೊಳೆ" (S.I.I. xv. P. 70) ಎಂಬ ವಾಕ್ಯ ಈ ಪ್ರಾಂತಗಳ ಅಖಂಡತೆಯನ್ನು ವ್ಯಕ್ತಗೊಳಿಸುತ್ತದೆ.

೩೬. ಪಂ. ಭಾ.

೩೭. ಗ. ಯು. ೧-೪೨

೩೮. ಕ.ಮಾ. ೧-೩೮

ಕುಱಿತವರಲ್ಲದೆ ಮತ್ತಂ । ಪೆಱರುಂ ತಂತಮ್ಮ ನುಡಿಯೊಳೆಲ್ಲರ್ ಜಾಣರ್ ।
ಕಿಱುವಕ್ಕಳು ಮಾಮೂಗರು। ಮಱಿಪಲ್ಕಱಿವರ್ ವಿವೇಕಮಂ ಮಾತುಗಳಂ ॥[೩೯]

ಜಾಣರ್ಕಳಲ್ಲದವರುಂ । ಪೂಣೆಗರಱಿಯದೆಯುಮಱೆವವೋಲವಗುಣದಾ ।
ತಾಣಮನಿನಿಸೆಡೆವೆತ್ತೊಡೆ । ಮಾಣದೆ ಪಿಡಿದದನೆ ಕೃತಿಗಳಂ ಕೆಡೆನುಡಿವರ್ ॥[೪೦]

ಎಂದು ಬೆಳ್ವೊಲನಾಡಿನ ಪ್ರಜಾಸ್ತೋಮದ ನಿಶಿತಬುದ್ಧಿ, ಕಾವ್ಯಸಿದ್ಧಿಗಳನ್ನು ಕೀರ್ತಿಸಿರುವನು.

❖❖

೩೯. ಕ.ಮಾ. ೧-೩೯
೪೦. ಕ. ಮಾ. ೧-೪೦

ಕಾವ್ಯ ಪ್ರಕಾರಗಳು

"ವಸ್ತುಕವಿಃ ಕಥಾಕವಿಃ, ವರ್ಣಕವಿಃ ವರ್ಣನಾಕವಿಃ"[೧]- ಇದು ಸಂಗೀತರತ್ನಾಕರಕ್ಕೆ ಟೀಕೆ ಬರೆಯುತ್ತ ಕಲ್ಲಿನಾಥನು ಹೇಳಿದ ಮಾತು. ಇಲ್ಲಿ ವಸ್ತುಕವಿಯೆಂದರೆ ವಸ್ತು+ಕ ಕವಿ, ವರ್ಣಕವಿಯೆಂದರೆ ವರ್ಣ+ಕ ಕವಿ. ಇವರಲ್ಲಿ ವಸ್ತುಕಕವಿಯು "ಕಥೆ"ಯೊಂದಿಗೆ ವ್ಯವಹರಿಸುವವನು, ವರ್ಣಕಕವಿಯು "ವರ್ಣನೆ"ಯೊಂದಿಗೆ ವ್ಯವಹರಿಸುವವನೆಂದು ಕಲ್ಲಿನಾಥನ ಅಭಿಪ್ರಾಯ. ಇವುಗಳಲ್ಲಿ "ಕಥೆ"[೨] ಎಂಬುದಕ್ಕೆ ವಿವರಣೆ ನೀಡುತ್ತ ಮಾನಸೋಲ್ಲಾಸವು "ಕಥಾಪುರಾಣಸಂಬದ್ಧಾ"[೩] ಅಂದರೆ ಕಥೆಯೆಂಬುದು ಪುರಾಣಸಂಬಂಧಿ ಸಂಗತಿಯೆಂದು ಹೇಳುತ್ತದೆ. ಒಟ್ಟಾರೆ ವಸ್ತುಕ=ಕಥೆ=ಪೌರಾಣಿಕ ಘಟನೆಯೆಂದು ಈವರೆಗಿನ ಚರ್ಚೆ ಸ್ಪಷ್ಟಪಡಿಸುತ್ತದೆ.

"ವರ್ಣಕಂ ಕತೆಯೊಳೊಡಂಬಡಂ ಪಡೆಯೆ"[೪] ವಿಕ್ರಮಾರ್ಜುನವಿಜಯವನ್ನು ಹೇಳಹೊರಟ ಪಂಪನು, ಲೋಕವ್ಯಕ್ತಿ ಅರಿಕೇಸರಿಯ ಘಟನೆಗಳನ್ನು ಪುರಾಣವ್ಯಕ್ತಿ ಅರ್ಜುನನ ಘಟನೆಗಳಲ್ಲಿ ಒಡಂಬಡಿಸಿರುವ ಕಾರಣ, 'ವರ್ಣಕ'=ಲೌಕಿಕ ಘಟನೆಯೆನಿಸುತ್ತದೆ.

ಪುರಾಣವ್ಯಕ್ತಿಯ ಚರಿತ್ರೆ, ಪೌರಾಣಿಕ ಘಟನೆಗಳು ಅಸಾಮಾನ್ಯವಾಗಿರುವುದರಿಂದ ಅಲ್ಲಿ ಅತಿಶಯೋಕ್ತಿಯೂ 'ವಾಸ್ತವ'ವೆನಿಸುತ್ತದೆ. ಲೋಕವ್ಯಕ್ತಿಯ ಚರಿತ್ರೆ, ಲೌಕಿಕ ಘಟನೆಗಳು ಸಾಮಾನ್ಯವಾಗಿರುವುದರಿಂದ ಅಲ್ಲಿ ಸ್ವಭಾವೋಕ್ತಿಯೂ 'ವರ್ಣನೆ' ಎನಿಸುತ್ತದೆ. ಆ 'ವಾಸ್ತವ'ವನ್ನು ಕುರಿತುದೇ 'ವಸ್ತುಕ', ಈ 'ವರ್ಣನೆ'ಯನ್ನು ಕುರಿತುದೇ 'ವರ್ಣಕ' ಎಂಬ ದರ್ಶನದಲ್ಲಿ ವಸ್ತುಕ-ವರ್ಣಕಗಳ ಕಲ್ಪನೆ ಕಣ್ಣುತೆರೆದಿರಬೇಕು. ಒಟ್ಟಿನಲ್ಲಿ ವಸ್ತುಕದ ವಿಷಯ ಪುರಾಣಸಂಬಂಧಿ, ಅಸಾಮಾನ್ಯ; ವರ್ಣಕದ ವಿಷಯ ಲೋಕಸಂಬಂಧಿ, ಸಾಮಾನ್ಯ.

---

೧. ಸಂಗೀತರತ್ನಾಕರ ಭಾಗ ೨. ಪು. ೧೫೧ (ಅದ್ಯಾರ್ ಲೈಬ್ರರಿ ಆವೃತ್ತಿ)

೨. ಮಾನಸೋಲ್ಲಾಸ, III-೧೬೪

೩. "Katha is the adventures of men of former times" ಎಂಬ ತ್ರಿಷಷ್ಟಿಶಲಾಕಾ ಪುರುಷ ಚರಿತದ ಹೇಮಚಂದ್ರನ ಹೇಳಿಕೆಗೆ Ind, Ant. Vol. 56, p. 17 ದಲ್ಲಿರುವ Katha and vrttaka ಎಂಬ ಲೇಖನ ನೋಡಿರಿ.

೪. ಪಂ. ಭಾ. ೧-೧೧.

ಕವಿರಾಜಮಾರ್ಗಕಾರನು ಗದ್ಯಕಥೆಯನ್ನು "ಪ್ರಕಟತರವಸ್ತುವಿಸ್ತರ" ಅಂದರೆ ಅಸಾಮಾನ್ಯ ವಸ್ತುವನ್ನುಳ್ಳದ್ದು ಎಂದು, ಚತ್ತಾಣ-ಬೆದಂಡೆಗಬ್ಬಗಳನ್ನು "ನಿರತಿಶಯವಸ್ತುವಿಸ್ತರ" ಅಂದರೆ ಸಾಮಾನ್ಯ ವಸ್ತುವನ್ನುಳ್ಳದು ಎಂದು 'ವಸ್ತು'ವಿನ ಒರೆಗಲ್ಲಿಗೆ ಹಚ್ಚಿ ಅವುಗಳ ಭೇದವನ್ನು ಬಿಡಿಸಿ ಹೇಳುವುದರಿಂದ ಗದ್ಯಕಥೆ 'ವಸ್ತುಕ'; ಚತ್ತಾಣ-ಬೆದಂಡೆಗಬ್ಬಗಳು 'ವರ್ಣಕ' ಎಂಬ ಅಭಿಪ್ರಾಯ ಹುಟ್ಟುತ್ತದೆ.

ಸಂಸ್ಕೃತದಲ್ಲಿ ಬಹಳದಿನಗಳ ಹಿಂದೆಯೇ ನಾಟಕವು ದೃಶ್ಯಪಾತಳಿಯಿಂದ ವಾಚನಪಾತಳಿಗೆ ಬಂದಿದ್ದ ಕಾರಣ, ದಂಡಿಯು ಸಂಸ್ಕೃತಸಾಹಿತ್ಯವನ್ನು ಗದ್ಯ, ಪದ್ಯ, ಮಿಶ್ರ (ನಾಟಕ)ವೆಂದು ೩ ಪ್ರಕಾರಗಳಾಗಿ ವಿಭಜಿಸಿದ್ದಾನೆ. ಆದರೆ ಕನ್ನಡದಲ್ಲಿ ೯ನೆಯ ಶತಮಾನದ ಹೊತ್ತಿಗೆ ನಾಟಕ(ಆಟ)ವು ಇನ್ನೂ ದೃಶ್ಯಪಾತಳಿಯಲ್ಲಿಯೇ ವ್ಯವಹರಿಸುತ್ತಿರುವದರಿಂದ ಅದನ್ನು ಕೈಬಿಟ್ಟು, ಕವಿರಾಜಮಾರ್ಗಕಾರರು ಕನ್ನಡಸಾಹಿತ್ಯವನ್ನು ಗದ್ಯ, ಪದ್ಯವೆಂದು ೨ ಪ್ರಕಾರಗಳಾಗಿ ವಿಭಜಿಸಿದ್ದಾನೆ. ಮತ್ತು ಗದ್ಯದಲ್ಲಿ ಗದ್ಯಕಥಾ ಪ್ರಕಾರವನ್ನೂ, ಪದ್ಯದಲ್ಲಿ ಚತ್ತಾಣ, ಬೆದಂಡೆ ಪ್ರಕಾರಗಳನ್ನೂ ಗುರುತಿಸಿದ್ದಾನೆ.

ಗದ್ಯಕಥೆ :

ಮಿಗೆ ಕನ್ನಡಗಬ್ಬಂಗಳೊ। ಳಗಣಿತ ಗುಣ ಗದ್ಯಪದ್ಯ ಸಮ್ಮಿಶ್ರಿತಮಂ।
ನಿಗದಿಸುವರ್ ಗದ್ಯಕಥಾ । ಪ್ರಗೀತಿಯಿಂ ತಚ್ಚಿರಂತನಾಚಾರ್ಯರ್ಕಳ್ ॥[೫]

ಕನ್ನಡಕಾವ್ಯಗಳಲ್ಲಿ ಅಗಣಿತಗುಣವುಳ್ಳ ಗದ್ಯ ಮತ್ತು ಪದ್ಯಗಳ ಮಿಶ್ರಣರೂಪದ 'ಗದ್ಯಕಥಾ' ಎಂಬ ಹೆಸರಿನ ಸಾಹಿತ್ಯಪ್ರಕಾರವನ್ನು ಚಿರಂತನಾಚಾರ್ಯರು ರಚಿಸುವರು ಎಂದು ಈ ಪದ್ಯದ ಒಟ್ಟು ಅರ್ಥ. ಇಲ್ಲಿ ಗದ್ಯಪದ್ಯಗಳ ಪ್ರಮಾಣದ ಸ್ಪಷ್ಟ ಉಲ್ಲೇಖವಿಲ್ಲದ ಕಾರಣ ಇದರ ಸ್ವರೂಪದ ಬಗೆಗೆ ಸಂದೇಹ ಉಳಿಯುತ್ತದೆ.

ಕವಿರಾಜಮಾರ್ಗವನ್ನು ಬಿಟ್ಟರೆ 'ಗದ್ಯಕಥಾ' ಉಲ್ಲೇಖಗೊಂಡುದು ಜಿನಸೇನ-ಗುಣಭದ್ರರ ಮಹಾಪುರಾಣದಲ್ಲಿ. ಅದರ ಕೊನೆಯ 'ಕವಿಪರಮೇಶ್ವರ ನಿಗದಿತ ಗದ್ಯಕಥಾ ಮಾತ್ರಕಂ ಪುರೋಶ್ಚರಿತಂ"[೬] (ಕವಿಪರಮೇಶ್ವರ -ಕವಿಪರಮೇಷ್ಠಿ-ನ ಗದ್ಯಕಥೆಯನ್ನು ಮಾತೃಕೆಯಾಗಿಟ್ಟುಕೊಂಡ ಪುರುಪರಮೇಶ್ವರನ ಚರಿತೆ ಎಂಬ ಮಾತಿನಂತೆ ಈ ಮಹಾಪುರಾಣಕ್ಕೆ ಮಾತೃಕೆಯಾದುದು ಕವಿಪರಮೇಶ್ವರನ 'ಗದ್ಯಕಥಾ' ಸ್ವರೂಪದ ಕೃತಿ. ಈ ಕೃತಿ ಈ ವರೆಗೆ ಲಭಿಸದ ಕಾರಣ 'ಗದ್ಯಕಥಾ' ಸ್ವರೂಪ ಗೌಪ್ಯವಾಗಿ ಉಳಿದುಕೊಂಡಿದೆ. ಈ ಪ್ರಸಂಗದಲ್ಲಿ ಡಾ. ಎ.ಎನ್. ಉಪಾಧ್ಯೆ ಅವರು ಚಾವುಂಡರಾಯ ಪುರಾಣದ ಶಾಂತಿಪುರಾಣಭಾಗದಲ್ಲಿ ಬರುವ 'ಕವಿಪರಮೇಶ್ವರವೃತ್ತ', 'ಕವಿಪರಮೇಶ್ವರಶ್ಲೋಕ' ಎಂಬ ಸೂಚನೆಯುಳ್ಳ ಒಟ್ಟು ೧೪ ಪದ್ಯಗಳನ್ನು ಗಮನಿಸಿ "ಗುಣಭದ್ರನು ಅವನ (ಕವಿಪರಮೇಷ್ಠಿಯ) ಕೃತಿಯನ್ನು ಗದ್ಯಕಥಾ ಎಂದು ಹೇಳಿರುವುದರಿಂದ ಅದು ಪದ್ಯರೂಪವಾಗಿದ್ದಿತೆಂದು ಸ್ವೀಕರಿಸಲು ಆತಂಕವುಂಟಾಗುತ್ತದೆ. ಬಹುಶಃ ಅದು ಅಲ್ಲಲ್ಲಿ ಪದ್ಯಗಳನ್ನೊಳಗೊಂಡ ಚಂಪೂಕಾವ್ಯವಾಗಿರಬಹುದು"[೭] ಎಂದು ಊಹಿಸಿರುವರು. ಆದರೆ ಅಲ್ಲಲ್ಲಿ ಪದ್ಯಗಳಿದ್ದ ಮಾತ್ರಕ್ಕೆ ಅದು ಚಂಪೂ ಎನಿಸದು. ಮೇಲಾಗಿ ಸಂಸ್ಕೃತದ ಚಂಪುವಿನ ಮೂಲ ಕವಿಪರಮೇಶ್ವರನಷ್ಟು ಪ್ರಾಚೀನವಲ್ಲ. ಆದುದರಿಂದ ಶ್ರೀಯುತರ ಅಭಿಪ್ರಾಯದ ಬಗೆಗೆ ಸಂದೇಹ ಉಳಿದುಕೊಳ್ಳುತ್ತದೆ.

೫. ಕ.ಮಾ. ೧-೨೭

೬. ಮ.ಪು. ಪು. ೮೭೬

೭. ಕವಿಪರಮೇಷ್ಠಿ-ಡಾ. ಎ.ಎನ್. ಉಪಾಧ್ಯೆ (ಪ್ರ.ಕ. ೨೮-೨)

ಶ್ರೀ ಡಿ.ಎಲ್. ಎನ್. ಅವರು ವಡ್ಡಾರಾಧನೆಯನ್ನು ಕುರಿತು "ಇದನ್ನು ಗದ್ಯಕಥೆಯೆಂದು ಕರೆಯಬಹುದು.... ಇದರಲ್ಲಿ ಅಗಣಿತಗುಣವುಳ್ಳ ಗದ್ಯದ ನಡುನಡುವೆ ಪದ್ಯಗಳೂ ಹಲವುಬಾರಿ ಬಂದಿವೆ.... ಚಾವುಂಡರಾಯ ಪುರಾಣದಲ್ಲಿಯೂ ಈ ಲಕ್ಷಣಗಳು ಕಂಡುಬರುತ್ತವೆ. ಇವೆರಡೂ ಗದ್ಯಕಥೆಯ ಜಾತಿಗೆ ಸೇರಿವೆ"[೮] ಎನ್ನುತ್ತಾರೆ. ಚಾವುಂಡರಾಯನಿಗೆ ಪ್ರಾಚೀನರಾಗಿ ಈ ಶಲಾಕಾಪುರುಷಪುರಾಣವನ್ನು ಬರೆದವರು ಕೂಚಿಭಟ್ಟಾರಕ, ಶ್ರೀನಂದಿಮುನೀಶ್ವರ, ಕವಿಪರಮೇಷ್ಠಿ ಮತ್ತು ಜಿನಸೇನ-ಗುಣಭದ್ರರು.[೯] ಇವುಗಳಲ್ಲಿ ಚಾವುಂಡರಾಯನು ಮೊದಲಿನ ಇಬ್ಬರ ಕೃತಿಗಳನ್ನು ನೋಡಿರಲಿ ಬಿಡಲಿ, ಕವಿಪರಮೇಷ್ಠಿಯ ವಾಗರ್ಥಸಂಗ್ರಹ (?)[೧೦] ಮತ್ತು ಜಿನಸೇನ-ಗುಣಭದ್ರರ ಮಹಾಪುರಾಣಗಳನ್ನು ನೋಡಿರುವುದಕ್ಕೆ ಆಧಾರಗಳಿವೆ. ಈ ಎರಡರಲ್ಲಿ (ವಾಗರ್ಥಸಂಗ್ರಹ, ಮಹಾಪುರಾಣ) ಸ್ವರೂಪದೃಷ್ಟಿಯಿಂದ ಒಂದು 'ಗದ್ಯಕಥೆ', ಇನ್ನೊಂದು ಪದ್ಯ (ಶ್ಲೋಕ)ಕೃತಿ. ಹೀಗಾಗಿ ಗದ್ಯಪದ್ಯ ಮಿಶ್ರಣದ ಮಟ್ಟಿಗೆ ಅನುಪಲಬ್ಧ ವಾಗರ್ಥಸಂಗ್ರಹವನ್ನು ಆದರ್ಶವಾಗಿಟ್ಟುಕೊಂಡಿರಬಹುದಾದ ಚಾವುಂಡರಾಯ ಪುರಾಣವೇ ಈಗ 'ಗದ್ಯಕಥೆ'ಯ ಸ್ವರೂಪವನ್ನು ತಿಳಿಸುವ ಅಳಿದುಳಿದ ಉದಾಹರಣೆ ಎನ್ನಬೇಕಾಗುತ್ತದೆ. ಇದಲ್ಲದೆ,

> ಸಕಳಕಳಾ ಭಾಷಾ ಲೌ । ಕಿಕಸಾಮಯಿಕಾದಿ ವರ್ಣನಾ ನಿರ್ಣಿಕ್ತ ।
> ಪ್ರಕಟತರವಸ್ತುವಿಸ್ತರ । ವಿಕಲ್ಪವಿದನಲ್ಲದಾಗದಾಗದು ಪೇಟಿಲ್॥[೧೧]

ಎಂಬ ಪದ್ಯದಲ್ಲಿ ಹೇಳಿರುವಂತೆ ಗದ್ಯಕಥೆಯು, ಸಕಲ ಕಲಾಭೂಯಿಷ್ಠವಾಗಿರಬೇಕು, ಉತ್ಕೃಷ್ಟಭಾಷೆಯಲ್ಲಿ ಎರಕಗೊಂಡಿರಬೇಕು, ಲೌಕಿಕ ಪಾರಮಾರ್ಥ ವರ್ಣನಾ ನಿರ್ಣಿಕ್ತವಾಗಿರಬೇಕು- ಎಂಬ ಲಕ್ಷಣಗಳನ್ನು ಚಾವುಂಡರಾಯಪುರಾಣ ಮತ್ತು ವಡ್ಡಾರಾಧನೆಗಳಂಥ ಕಥಾಕೋಶಗಳಿಗೇ ಅನ್ವಯಿಸಲು ಬರುವುದರಿಂದ, ಶ್ರೀ ಡಿ.ಎಲ್.ಎನ್. ಅಭಿಪ್ರಾಯ ಗ್ರಾಹ್ಯವೆನಿಸುತ್ತದೆ.

ಸಂಸ್ಕೃತದ ಪ್ರಮುಖ ಗದ್ಯಪ್ರಕಾರಗಳು ಎರಡು : ಆಖ್ಯಾಯಿಕಾ, ಕಥಾ. ಇವುಗಳಲ್ಲಿ ಆಖ್ಯಾಯಿಕಾ ಸಂಸ್ಕೃತದಲ್ಲಿ, ಕಥಾ ಎಲ್ಲ ಭಾಷೆಗಳಲ್ಲಿ ಇರುವುದೆಂದು ಭಾಮಹನೂ, ಕಥೆಯಲ್ಲಿ "ಆರ್ಯಾದಿವತ್ ಪ್ರವೇಶಃ"[೧೨] ಅಂದರೆ ಆರ್ಯಾ ಮುಂತಾದ ವೃತ್ತಗಳು ಪ್ರವೇಶಪಡೆದಿರುತ್ತವೆಯೆಂದು ದಂಡಿಯೂ ಲಕ್ಷಣಗಳನ್ನು ಹೇಳಿರುವರು. ಹೀಗಾಗಿ ಇವರು ಹೇಳುವ ಕನ್ನಡ ಸಹಿತ ಎಲ್ಲ ಭಾಷೆಗಳಲ್ಲಿರುವ 'ಗದ್ಯ' ರೂಪದ (ಆರ್ಯಾದಿಗಳನ್ನೊಳಗೊಂಡ) ಈ ಕಥಾಪ್ರಕಾರವನ್ನೇ ಕವಿರಾಜಮಾರ್ಗಕಾರನು 'ಗದ್ಯಕಥಾ' ಎಂದು ಕರೆದಿರಬೇಕು. ಈ ಕಥಾಪ್ರಕಾರದ ಉತ್ಕೃಷ್ಟಮಾದರಿ ಬಾಣಕಾದಂಬರಿ ಎಂದು ಸಂಸ್ಕೃತ ಅಲಂಕಾರಿಕರು, ಪೈಶಾಚಿಭಾಷೆಯ ಬೃಹತ್ಕಥೆ ಎಂದು ದಂಡಿ ಹೇಳುತ್ತಾರೆ. ಅದಕ್ಕಾಗಿ 'ಗದ್ಯಕಥೆ'ಗೆ ಕಾದಂಬರಿಯಂತಹ ಅಖಂಡ ಕಥೆಯೂ, ಬೃಹತ್ಕಥೆಯಂತಹ ಬಿಡಿ ಕಥಾಕೋಶ (ಒಂದರ್ಥದಲ್ಲಿ ಇದು ಅಖಂಡ ಕಥೆಯೇ)ವೂ ಉದಾಹರಣೆ ಎನ್ನಬೇಕಾಗುತ್ತದೆ. ಇದೇ ರೀತಿ, ವಡ್ಡಾರಾಧನೆ ಚಾವುಂಡರಾಯಪುರಾಣಗಳಂತಹ ಬಿಡಿ ಕಥಾಕೋಶ (ಒಂದರ್ಥದಲ್ಲಿ ಇವೂ ಅಖಂಡಕಥೆಗಳೇ)ಗಳೂ 'ಗದ್ಯಕಥೆ' ಎಂದು ಸ್ಪಷ್ಟವಾಗುವುದರಿಂದ ಶ್ರೀ ಡಿ.ಎಲ್. ಎನ್. ಅಭಿಪ್ರಾಯ ನಿಜವೆನಿಸುತ್ತದೆ. ಕನ್ನಡದಲ್ಲಿ

---

೮. ರೇವಕೋಟ್ಯಾಚಾರ್ಯ-ಡಿ.ಎಲ್. ನರಸಿಂಹಾಚಾರ್ (ಸಾ.ಪ. ೧೬-೩)

೯. ಚಾ.ಪು. ೧-೨೪, ೨೫.

೧೦. ಜಿನಸೇನಾಚಾರ್ಯರ ಪೂರ್ವಪುರಾಣದಲ್ಲಿ (೧-೬೦) 'ವಾಗರ್ಥಸಂಗ್ರಹ' ಹೆಸರನ್ನು ಹೇಳಲಾಗಿದೆ. ಇದಕ್ಕೆ 'ಶಬ್ದಾರ್ಥ ಸಂಗ್ರಹಂ' ಎಂಬ ಪಾಠಾಂತರವೂ ಇದೆ. ಕವಿಪರಮೇಷ್ಠಿಯ ಕೃತಿಯ ಭಾಷೆ ಸಂಸ್ಕೃತವೆಂದು ಡಾ. ಎ.ಎನ್. ಉಪಾಧ್ಯೆ (ಪ್ರ.ಕ. ೨೮-೨), ಕನ್ನಡವೆಂದು ಶ್ರೀ ಚಿಟಗುಪ್ಪಿ (ಸಾ.ಪ. ೫೪-೨) ಊಹಿಸಿರುವರು.

೧೧. ಕ.ಮಾ. ೧-೨೮   ೧೨. ಕಾ.ದ. ೧-೨೭

ಮಾರ್ಗಕಾರನಿಗೆ ಪ್ರಾಚೀನವಾಗಿ ಬೃಹತ್ಕಥೆ, ಕಾದಂಬರಿಗಳನ್ನು ಹೋಲುವ ಎರಡೂ ಬಗೆಯ 'ಗದ್ಯಕಥೆ'ಗಳು ಬೆಳೆದು ಬಂದಿರಬೇಕು. ಆದರೆ ಸಂಸ್ಕೃತದವರು ಈ 'ಗದ್ಯಕಥೆ'ರಚನೆಯಲ್ಲಿಯೇ ನಿರತರಾದರೆ, ಕನ್ನಡಿಗರು ಮಾತ್ರ ಸಂಸ್ಕೃತದವರಿಗಿಂತ ಒಂದು ಹೆಜ್ಜೆ ಮುಂದುಹೋಗಿ ಅಂದರೆ ಪದ್ಯಗಳನ್ನು ಹೆಚ್ಚು ಸೇರಿಸಿ ಅದರಿಂದ ಚಂಪುವನ್ನು ರೂಪಿಸಿಕೊಂಡಂತಿದೆ. ಅದಕ್ಕಾಗಿಯೇ ಚಂಪುವಿನ ಪ್ರಾಚೀನತೆ, ವೈಭವಗಳು ಕನ್ನಡದ ಹೆಸರು ಹೇಳಿ ಬದುಕುವಂತಾಯಿತು.

ಪುರಾಣಪ್ರಸಿದ್ಧ 'ವಸ್ತು'ವನ್ನಾಧರಿಸಿದ ವಸ್ತುಕವು ಈ ಗದ್ಯಕಥೆಯಲ್ಲಿ ಸಸ್ಯಶ್ಯಾಮಲೆಯಾಗಿ ಕಂಗೊಳಿಸಿ, ಮುಂದೆ ಚಂಪುವಿಗೆ ತಿರುಗಿದಾಗ ಹಚ್ಚಹಸಿರಾಗಿ ನಿಂತಿತು. ಹೀಗೆ ನಮ್ಮ ವಸ್ತುಕ ಮೊದಲಿನಿಂದಲೂ ಗದ್ಯಕಥಾ, ಚಂಪೂಗಳನ್ನು ಹೊಂದಿಕೊಂಡು ಬಂದುದರಿಂದ ವಸ್ತುಕ, ಓದುಗಬ್ಬ (ವಚನಕಾವ್ಯ), ಚಂಪೂ ಪರ್ಯಾಯನಾಮಗಳೆನಿಸಿದುವು.

ಒಟ್ಟಿನಲ್ಲಿ ಗದ್ಯಪ್ರಮಾಣ ಹೆಚ್ಚು ಪದ್ಯಪ್ರಮಾಣ ಕಡಿಮೆ ಇರುವ, ಪುರಾಣವಸ್ತುವನ್ನಾಶ್ರಯಿಸಿದ ವಿಸ್ತಾರವಾದ ರಚನೆಯೇ ಗದ್ಯಕಥೆ. ಈ ಕ್ಷೇತ್ರದಲ್ಲಿ ಕೃಷಿಗೆಯ್ದವರು ವಿಮಲೋದಯ ನಾಗಾರ್ಜುನರು.

ಚತ್ತಾಣಂ-ಬೆದಂಡೆಗಬ್ಬಂ :

ಚತ್ತಾಣಂ, ಬೆದಂಡೆಗಬ್ಬಂ-ಇವು ಪ್ರಾಚೀನ ಪದ್ಯಕಾವ್ಯಪ್ರಭೇದದ ಎರಡು ಹೆಸರು. ಇಂಥ ಒಂದೂ ಕೃತಿ ಈ ವರೆಗೆ ಲಭಿಸಿಲ್ಲ. ಕವಿರಾಜಮಾರ್ಗಕಾರ ಮಾತ್ರ ಮೊಟ್ಟಮೊದಲಿಗನಾಗಿ ನಾಲ್ಕು ಪದ್ಯಗಳಲ್ಲಿ ಈ ಪ್ರಕಾರಗಳನ್ನು ವಿವೇಚಿಸಿದ್ದು, ಎರಡನ್ನು ಇಲ್ಲಿ ಎತ್ತಿಕೊಳ್ಳಬಹುದು.

ನುಡಿಗೆಲ್ಲಂ ಸಲ್ಲದ ಕ। ನ್ನಡದೊಳ್ ಚತ್ತಾಣಮುಂ ಬೆದಂಡೆಯುಮೆಂದೀ ।
ಗಡಿನ ನೆಗಟ್ತೆಯ ಕಬ್ಬದೊ । ಳೊಡಂಬಡಂ ಮಾಡಿದರ್ ಪುರಾತನಕವಿಗಳ್ ॥[೧೩]

ಪರಮ ಶ್ರೀವಿಜಯ ಕವೀ ।ಶ್ವರ ಪಂಡಿತ ಚಂದ್ರ ಲೋಕಪಾಲಾದಿಗಳಾ ।
ನಿರತಿಶಯವಸ್ತುವಿಸ್ತರ । ವಿರಚನೆ ಲಕ್ಷ್ಯಂ ತದಾದ್ಯ ಕಾವ್ಯಕ್ಕೆಂದುಂ ॥[೧೪]

ಇಲ್ಲಿ 'ನುಡಿಗೆಲ್ಲಂ ಸಲ್ಲದ ಕನ್ನಡ' ಎಂಬುದರ ಅರ್ಥ, 'ಈಗಡಿನ' ಮತ್ತು 'ಪುರಾತನ'ಗಳಲ್ಲಿಯ ವಿರೋಧಾಭಾಸ, ಒಟ್ಟು ಪದ್ಯದ ಅನ್ವಯವಿಫಲತೆ ಇವುಗಳಿಂದಾಗಿ ಮೊದಲಿನ ಪದ್ಯದ ಆಶಯ ಸಮಸ್ಯೆಯಾಗಿ ನಿಂತಿದೆ. ತೀ.ನಂ. ಶ್ರೀ ಅವರು "ನುಡಿಗೆಲ್ಲಂ ಸಲ್ಲದ ಎಂಬ ಉಕ್ತಿಯನ್ನು ನೋಡಿದರೆ ಈ ಚತ್ತಾಣ-ಬೆದಂಡೆಗಬ್ಬಗಳು ಬೇರೆ ಭಾಷೆಯಲ್ಲಿ ಇಲ್ಲ, ಕನ್ನಡದಲ್ಲಿ ಮಾತ್ರ ಪ್ರಚುರವಾಗಿವೆ ಎಂದು ಕವಿರಾಜಮಾರ್ಗಕಾರನು ತಿಳಿಸುವಂತೆ ತೋರುತ್ತದೆ"[೧೫] ಎಂದು ಹೇಳುತ್ತಾರೆ. ಈ ಕಾವ್ಯಜಾತಿ ಬೇರೆ ಭಾಷೆಯಲ್ಲಿ ಇಲ್ಲವೇನೋ ನಿಜ. ಹಾಗೆ ಅರ್ಥವಾಗಬೇಕಾದರೆ 'ನುಡಿಗೆಲ್ಲಂ ಸಲ್ಲದೆ, ಕನ್ನಡದೊಳ್....' ಎಂದು ಮುಂತಾಗಿ ಪಾಠ ತಿದ್ದಬೇಕು; ಇಲ್ಲವೆ 'ಕನ್ನಡದೊಳ್, ನುಡಿಗೆಲ್ಲಂ ಸಲ್ಲದ ಚತ್ತಾಣಮುಂ....' ಎಂದು ಮುಂತಾಗಿ ಅನ್ವಯ ಹೊಂದಿಸಿಕೊಳ್ಳಬೇಕು. ಆದರೆ ಪಾಠತಿದ್ದಲು ಆಧಾರವಿಲ್ಲ. ಅನ್ವಯ ಹೊಂದಿಸಲು ಹೋಗಿ 'ನುಡಿಗೆಲ್ಲಂ ಸಲ್ಲದ' ಮತ್ತು 'ಕನ್ನಡ' ಇವುಗಳ ವಿಶೇಷಣ -ವಿಶೇಷ್ಯ ಸಂಬಂಧವನ್ನು ತಪ್ಪಿಸುವುದು ಉಚಿತವಲ್ಲ; ಹಾಗೆ ಮಾಡಿದರೂ ಈ ಪದ್ಯದಿಂದ ನೇರ ಅರ್ಥವನ್ನು ಹೊರತೆಗೆಯುವುದು ಕಠಿಣ.

---

೧೩. ೧-೩೩ ೧೪. ೧-೩೨

೧೫. 'ಚತ್ತಾಣ' ಮತ್ತು 'ಬೆದಂಡೆ'- ತೀ.ನಂ. ಶ್ರೀ. ಪ್ರ.ಕ. ೪೪-೪, ಪು. ೮೩.

ಶ್ರೀ ಮುಳಿಯ ಅವರು "ನೃಪತುಂಗನ ಕಾಲದಲ್ಲಿ ಆ ಹಳೆಯ ನುಡಿಯ ಪ್ರಸಾರವು ಕಡಿಮೆಯಾಗಿದ್ದಿರಬೇಕು. ಅಥವಾ ನುಡಿಗೆ ಎಲ್ಲಂ ಸಲ್ಲದೆ ಕೆಲಮಟ್ಟಿಗೆ ಮಾತ್ರ ಸಲ್ಲುತ್ತಿದ್ದಿರಬೇಕು"[೧೬] ಎಂದು 'ನುಡಿಗೆಲ್ಲಂ ಸಲ್ಲದ ಕನ್ನಡ' ಎಂಬುದಕ್ಕೆ ಅರ್ಥಹೇಳಿರುವರು. ಇಲ್ಲಿ 'ನುಡಿಗೆಲ್ಲಂ ಸಲ್ಲದ ಕನ್ನಡದೊಳ್' ಎಂದರೆ ಯುಗಧರ್ಮಕ್ಕೆ ಸಲ್ಲದ ಪ್ರಾಚೀನಭಾಷೆಯೊಳ್ ಎಂದು ಒಪ್ಪಬಹುದಾದರೂ ಈ ಪದ್ಯದ ಒಟ್ಟು ಅನ್ವಯದಲ್ಲಿ ಇದೂ ಹೊಂದಿಕೊಳ್ಳುವುದಿಲ್ಲ.

ಈ ಉಭಯ ಅಭಿಪ್ರಾಯಗಳನ್ನು ಬಿಟ್ಟು ಇದರ ಒಟ್ಟು ಆಶಯವನ್ನು ಮಾತ್ರ ಹೀಗೆ ಸಂಗ್ರಹಿಸಬಹುದು.

ಈ ಎರಡು ಪದ್ಯಗಳು ಎಂ.ವಿ. ಸೀತಾರಾಮಯ್ಯನವರ ಆವೃತ್ತಿಯಲ್ಲಿ ಹಿಂದುಮುಂದಾಗಿವೆ. ನಮಗೆ ಮಾತ್ರ ಈ ಪೂರ್ವದ ಎರಡು ಪರಿಷ್ಕರಣಗಳಲ್ಲಿಯ ಕ್ರಮವೇ ಸರಿಯೆಂದು ತೋರುತ್ತದೆ.

ಎಲ್ಲ ಕಾಲದಲ್ಲಿಯೂ ಸಮಸ್ತಪ್ರಜೆಗಳಿಗೆ ಗ್ರಾಹ್ಯವಾಗುವ ಗ್ರಂಥಸ್ಥಭಾಷೆಯೊಂದಿರುತ್ತದೆ. ಇದು ನುಡಿಗೆಲ್ಲಂ ಸಲ್ಲುವ ಭಾಷೆ. ಜೊತೆಗೆ ಸಾಮಾನ್ಯರ ಮಟ್ಟದಲ್ಲಿ ತಂತಮ್ಮ ಪ್ರಾಂತಗಳಿಗೆ ವಿಶಿಷ್ಟವಾದ ಆಡುಭಾಷೆಯೊಂದು ಇರುತ್ತದೆ, ಇದು ನುಡಿಗೆಲ್ಲಂ ಸಲ್ಲದಭಾಷೆ. ಕವಿರಾಜಮಾರ್ಗಕಾರನಿಗೆ ಹಿಂದೆ, ಈ ಆಡುಮಾತಿನಲ್ಲಿ 'ಬೀದಿವಱಿಯ ಬೀರನಕಥೆ'ಯಂತಹ ಜಾನಪದ ಕೃತಿಗಳು ರಚನೆಗೊಳ್ಳುತ್ತಿರಬೇಕು. ಮೊದಮೊದಲು ಚತ್ತಾಣ-ಬೆದಂಡೆಗಬ್ಬಗಳು ಈ ಪಂಗಡಕ್ಕೆ ಸಂಬಂಧಪಟ್ಟ ಜಾತಿಗಳು. ಸೂಕ್ತಿಸುಧಾರ್ಣವದ,

> ಕಱು ತಡೆದತ್ತು ಕಂಚನುಣಲೂಮನೆಯೂಕೆಗಳುಯ್ದುರಕ್ಕ ಮಿಂ।
> ದೆಱೆಯಪನಾಱೆದಪ್ಪನಸಗಂ ಮಡಿದಾರನೆ ಕೂಸನೇತಕೆಂ ।
> ದಱಿಯೆನದೊಂದು ಸೋಂಕಿದುದು ಪಾಡುವರಲ್ಲಿ ಬೆದಂಡೆ ತೊತ್ತನೆ-।
> ತ್ತಱಿಸುವೆನೆಂದು ಪೋಪ ನೆವಮಂ ಸಮಕಟ್ಟುವರಲ್ಲಿ ಪಾಣ್ಬೆಯರ್ ॥[೧೭]

ಎಂಬ ಪದ್ಯದಲ್ಲಿ ಕರು ಹುಡುಕಿಕೊಂಡು ಬರುವ, ಅಗಸನ ಮನೆಯಿಂದ ಮಡಿ ತರುವ ಸಾಮಾನ್ಯ ಮಟ್ಟದ ಸ್ತ್ರೀಯೊಬ್ಬಳು, ಪಾಡುವರಲ್ಲಿ ಬೆದಂಡೆ ಎಂದು ಕೇಳಲಿಚ್ಛಿಸುವುದರಿಂದ, ಇದು ಮೂಲದಲ್ಲಿ ಸಾಮಾನ್ಯರಿಗೆ ಗ್ರಾಹ್ಯವಾಗುವ ಜಾನಪದ ಕಾವ್ಯಪ್ರಭೇದವೆಂದು ಇನ್ನೂ ಸ್ಪಷ್ಟವಾಗುತ್ತವೆ. 'ಸೂಳೆವಾಡು'[೧೮] ಎಂದು ತಿರಸ್ಕೃತವಾದ ಸಾಂಗತ್ಯವನ್ನು, "ಡೊಂಬಿಯ ತಂಬಟೆಗರ್ ಪಾಡುವ ತಿವಿದಿ"[೧೯] ಎಂದು ತಿರಸ್ಕೃತವಾದ ತ್ರಿಪದಿಯನ್ನು ರತ್ನಾಕರ ಸರ್ವಜ್ಞ ಮೊದಲಾದವರು ಜನಸಾಮಾನ್ಯರ ಮಟ್ಟದಿಂದ ಕಾವ್ಯಮಟ್ಟಕ್ಕೆ ಎತ್ತಿದ ರೀತಿಯಲ್ಲಿ, ಒಂದು ಕಾಲಕ್ಕೆ ಸಾಮಾನ್ಯರ ಸಾಹಿತ್ಯಪ್ರಕಾರಗಳಾಗಿದ್ದ ಈ ಚತ್ತಾಣ-ಬೆದಂಡೆಗಬ್ಬಗಳನ್ನು ಉಚಿತವಾಗಿ ಹಿಗ್ಗಿಸಿ, ಉನ್ಮೀಲನಗೊಳಿಸಿ, ರುಚಿಸ್ಪರ್ಶಕೊಟ್ಟು ಕಾವ್ಯಮಟ್ಟಕ್ಕೆ ತರುವ ಒಂದು ಸಾಹಿತ್ಯಿಕಸಾಹಸ, ದೇಶಿಬಂಧಗಳನ್ನು ಭವ್ಯಗೊಳಿಸುವ ಒಂದು ಪರಿಷ್ಕಾರಪ್ರಯತ್ನ ನಡೆದಿರಲು ಸಾಧ್ಯ.

---

೧೬. ಜಯ. ಕ. ೪-೮ ಪು. ೪೮೮
೧೭. ಸೂಕ್ತಿ. ೮-೧೩೪
೧೮. ಚಿ. ವಿಜಯ ಪು. ೧೭೨
೧೯. ಚಿ. ವಿಜಯ ಪು. ೧೭೦

ಛಂದಮಿದಾವುದೆಂದೊಡಿಜೆವರ್, ಪದಬಂಧದೊಳೀ ಪ್ರಯೋಗಮೆಂ-
ತೆಂದೊಡೆ ಬಯ್ಸುರ್+ಆವ ಕವಿಮಾರ್ಗಮಿದೊಂದೆಡೆ ಪೊಯ್ಸುರ್+ಅರ್ಥಮೇ-।
ನೆಂದೊಡೆ ತೊಂಡುಛಂಡಗೆಡೆದುಟ್ಟುದನಿಕ್ಕುವರ್+ಆವ ನೀತಿ ಪೇ-
ಟೆಂದೊಡೆ ಕೊಲ್ವರ್ +ಈಗಳಿನ ದೇಸಿಗೆ ಬಿಟ್ಟ ಮಹಾಕವೀಶ್ವರರ್॥[೨೦]

ಎಂಬ ವ್ಯಂಗ್ಯ ಇಂಥ ಸಾಹಸವನ್ನೇ ಕುರಿತುದಾಗಿರಬೇಕು. ಕವಿರಾಜಮಾರ್ಗಕಾರನು ಮಾತ್ರ ಈ ರೀತಿಯ ನಿಂದೆಗೆ ನಿಲ್ಲದೆ 'ನುಡಿಗೆಲ್ಲಂ ಸಲ್ಲದ ಕನ್ನಡ'ದೊಳಗಣ ಚತ್ತಾಣ-ಬೆದಂಡೆಗಳನ್ನು 'ಕಬ್ಬದೊಳೊಡಂಬಡಂ ಮಾಡಿದರ್' ಅಂದರೆ ಜನಸಾಮಾನ್ಯರ ಕನ್ನಡದೊಳಗಿನ ಚತ್ತಾಣ-ಬೆದಂಡೆಗಬ್ಬಗಳನ್ನು ಕಾವ್ಯದ ಅಂತಸ್ತಿಗೆ ತಂದರು ಎಂದು ಹೇಳಿದಂತಿದೆ. ಇಲ್ಲಿ 'ಈಗಡಿನ ನೆಗಟ್ತೆಯ ಕಬ್ಬದೊಳ್ ಒಡಂಬಡಂ ಮಾಡಿದರ್ ಪುರಾತನ ಕವಿಗಳ್' ಎಂಬ ವಾಕ್ಯದ 'ಈಗಡಿನ' ಮತ್ತು 'ಪುರಾತನ' ಎಂಬ ಪದಗಳು ವಿರೋಧಾಭಾಸದಿಂದ ಕೂಡಿವೆ. ಈ ಸೀಮೆಯ (=ಗಡಿನ) ಎಂದು ಅರ್ಥ ಮಾಡಿದರೆ, ಇಲ್ಲವೆ ಎರಡನೆಯ ಪಾದದ ಕೊನೆಗೆ '[ದಾ]' ಎಂದು ಹೊಸಪಾಠ ಸೃಷ್ಟಿಸಿಕೊಂಡರೆ ಈ ವಿರೋಧಾಭಾಸ ತಪ್ಪುವುದಾದರೂ ಹಾಗೆ ಮಾಡಲು ಆಧಾರಗಳಿಲ್ಲ. ಅದಕ್ಕಾಗಿ 'ಈಗಡಿನ' ಎಂಬುದಕ್ಕೆ 'ಇತ್ತೀಚಿನ' ಎಂದು ಅರ್ಥಮಾಡದೆ 'ಈ ಕಾಲದ' ಎಂದು ಅರ್ಥಮಾಡಬೇಕು. ಆಗ, ಈ ಕಾಲದ ಸುಪ್ರಸಿದ್ಧ ಕಾವ್ಯಗಳನ್ನು, ಜನಪದಭಾಷೆಯ ಚತ್ತಾಣ-ಬೆದಂಡೆಗಬ್ಬಗಳ ಮೂಲಕ ರೂಪಿಸಿಕೊಂಡವರು ಪುರಾತನ ಕವಿಗಳು,[೨೧] ಎಂಬ ಸುರಕ್ಷಿತ ಅರ್ಥ ಪ್ರಕಟಗೊಳ್ಳುತ್ತದೆ. ಇದು ಕವಿರಾಜಮಾರ್ಗಕಾರನ ಮನಸ್ಸಿನಲ್ಲಿಯ ಅರ್ಥವೆಂದು ನಮ್ಮ ಅಭಿಪ್ರಾಯ. ಈ ಪರಿಷ್ಕಾರ ಆಂದೋಲನೆಯಲ್ಲಿ 'ಪಗರಣ' ಹೊರಗೆ ಉಳಿಯಿತೆಂದು ತೋರುತ್ತದೆ. ಅದಕ್ಕಾಗಿ ಚತ್ತಾಣ ಬೆದಂಡೆಗಳನ್ನು ಮಾತ್ರ ಸಾಹಿತ್ಯವಿಭಾಗದಲ್ಲಿ ಎತ್ತಿ ಹೆಸರಿಸಿದ ಮಾರ್ಗಕಾರ, ಪಗರಣವನ್ನು ಶ್ರುತಿದುಷ್ಟ ಶ್ರುತಿಕಷ್ಟ ಸಂದರ್ಭದಲ್ಲಿ ಪ್ರಾಸಂಗಿಕವಾಗಿ ಹೆಸರಿಸಿ ಸಾಗಿದನು.[೨೨]

ಇನ್ನು 'ಒಡಂಬಡಂ ಮಾಡಿದರ್ ಪುರಾತನ ಕವಿಗಳ್' ಎಂಬುದಕ್ಕೆ ಪುರಾತನಕವಿಗಳು ಒಡಂಬಡುವಂತೆ ಮಾಡಿದರು ಎಂದು ಸಾಮಾನ್ಯ ಅರ್ಥ. ಆದರೆ ಶಬ್ದಮಣಿದರ್ಪಣದಲ್ಲಿ, ಒಡಂಬಡುವಂತೆ ಮಾಡಿದವರು ಪುರಾತನಕವಿಗಳು ಎಂದು ಕೃಲ್ಲಿಂಗದ ಅರ್ಥವನ್ನು ಆರೋಪಿಸಿರುವುದರಿಂದ[೨೩] ಈ ಪದ್ಯದ ಭಾವ ಮುಂದಿನ ಪದ್ಯಕ್ಕೆ ಇಳಿದುಬಂದು ಪೂರ್ಣಗೊಳ್ಳುವಂತೆ ತೋರುತ್ತದೆ. ಅದಕ್ಕಾಗಿ 'ಒಡಂಬಡಂ ಮಾಡಿದರ್ ಪುರಾತನ ಕವಿಗಳ್' + 'ಪರಮ್ ಶ್ರೀವಿಜಯನ ಕವೀಶ್ವರ......' ಎಂದು ಈ ಎರಡು ಪದ್ಯಗಳನ್ನು ಒಂದಾಗಿ ಓದಬೇಕು. ಆಗ ಈ ಪರಿಷ್ಕಾರಗೆಯ್ದವರು ಪುರಾತನಕವಿಗಳಾದ ಶ್ರೀವಿಜಯಾದಿಗಳೆಂದು ಸ್ಪಷ್ಟವಾಗುತ್ತದೆ.

ಸಂಸ್ಕೃತದ ಮುಕ್ತಕ, ಸಂದಾನಿತಕ, ವಿಶೇಷಕ, ಕಲಾಪಕಗಳು ಕ್ರಮವಾಗಿ ೧,೨,೩,೪ ಪದ್ಯಗಳಿಗೆ ಭಾವಪೂರ್ತಿಗೊಳಿಸಿಕೊಳ್ಳುವ ಒಂದೊಂದು ಪುಂಜಗಳು. ಕುಲಕ ೫ ರಿಂದ ೧೪ ಪದ್ಯಗಳ ಸಮುದಾಯ. ಇವೇ ಒಂದೊಂದು ರೀತಿಯಲ್ಲಿ ಬೆಳೆದು ಚರ್ಯಾ, ಕೋಶ, ಸಂಘಾತಗಳೆಂಬ ಸಾಹಿತ್ಯಪ್ರಕಾರಗಳಾಗುತ್ತವೆ.[೨೪] ದಂಡಿಯ

---

೨೦. ಸೂಕ್ತಿ. ೧-೩೫

೨೧. ಶ್ರೀ. ಮುಳಿಯ ಅವರ ಅರ್ಥವನ್ನಿಟ್ಟುಕೊಂಡು "ಈ ಕಾಲದ ಸುಪ್ರಸಿದ್ಧ ಸಾಹಿತ್ಯವಾದ ಚತ್ತಾಣ-ಬೆದಂಡೆಗಬ್ಬಗಳನ್ನು ಪುರಾತನ ಕವಿಗಳು (ಅಂದು) ಹಳಗನ್ನಡದಲ್ಲಿಯೆ ಒಡಂಬಡಿಸಿದರು" ಎಂದು ಹೇಳಬಹುದು. ಇವು ದೇಸಿಬಂಧಗಳಾದುದರಿಂದ ಹಳಗನ್ನಡ ಕಾಲದಲ್ಲಾದರೂ ಜನಪದದಿಂದಲೇ ಎತ್ತಿಕೊಂಡಿರುವುದು ಸಾಧ್ಯ.

೨೨. ಕ.ಮ. ೧-೬೪

೨೩. ಶ.ಮ.ದ. ಸೂ. ೧೦೪

೨೪. ಕಾವ್ಯಾನುಶಾಸನ (ಹೇಮಚಂದ್ರ), ಪು. ೪೬೬

ಪ್ರಕಾರ "ಮುಕ್ತಕಂ ಕುಲಕಂ ಕೋಶಃ ಸಂಘಾತ ಇತಿ ತಾದೃಶಃ । ಸರ್ಗಬಂಧಾಂಶರೂಪತ್ವಾತ್"[೨೫] ಅಂದರೆ ಮುಕ್ತಕ ಕುಲಕಾದಿಗಳು ಸರ್ಗಬಂಧದ (ಮಹಾಕಾವ್ಯದ) ಅಂಶರೂಪಗಳು. ಆದುದರಿಂದ ಇವುಗಳ ಸೃಜನಶೀಲ ಸಮುದಾಯ ಸರ್ಗಬಂಧ (ಮಹಾಕಾವ್ಯ) ವೆನ್ನಬಹುದು. ಕನ್ನಡಕ್ಕೆ ಬಂದರೆ, ನಾಗವರ್ಮನು ೨ ಪದ್ಯಗಳ ಒಂದು ಜೊತೆ ಪದ, ೧೨ ಪದಗಳ ಪುಂಜ ಮೇಲ್ವಾಡು, ೧೫ ರಿಂದ ೨೫ ಪದಗಳ ಸಮೂಹ ಪಾಡು, ಪಾಡುಗಳಿಂದ ರಚನೆಗೊಂಡುದು ಪಾಡುಗಬ್ಬ, ಇದರಿಂದ ಸಿದ್ಧವಾದುವು ಮೇಲ್ವಾಡು, ಬೆದಂಡೆಗಬ್ಬಗಳು ಎಂದು ಹೇಳುತ್ತಾನೆ.[೨೬] ಇದು ಸಂಸ್ಕೃತದ ಮುಕ್ತಕ ಕುಲಕಾದಿಗಳ ಅನುಕರಣೆಯಾಗಿರುವುದು ಹೆಚ್ಚು ಸ್ವಾಭಾವಿಕ. ಜನ್ನ "ಮುಕ್ತಕಂ ಕುಲಕಂ ಕೋಶಂ ಸಂಘಾತಂ ಎಂಬ ರಚನಾವೈಚಿತ್ರ್ಯ ಚಿತ್ರಾಯತನ (=ಚತ್ತಣ) ವೈದಂಡಿಕ (ಬೆದಂಡೆ) ಪ್ರಬಂಧ ಬಂಧುರ ಪದ್ಯಬಂಧದೊಳಂ...."[೨೭] ಎನ್ನುತ್ತ ಚತ್ತಾಣ-ಬೆದಂಡೆಗಬ್ಬಗಳ ಅಂಶರೂಪಗಳಾದ ಪದ, ಪಾಡು, ಮೆಲ್ವಾಡುಗಳಿಗೆ ಬದಲು ಸರ್ಗಬಂಧದ ಅಂಶರೂಪಗಳಾದ ಮುಕ್ತಕ, ಕುಲಕ ಇತ್ಯಾದಿ ಪರಿಭಾಷೆಗಳನ್ನು ಬಳಸಿರುವುದೂ ಈ ಮಾತಿಗೆ ಪೋಷಣೆನೀಡುತ್ತದೆ. ಮೇಲೆ ಹೇಳಿದಂತೆ ಈ ಮುಕ್ತಕಾದಿಗಳು ಸರ್ಗಬಂಧ ಕಾವ್ಯವನ್ನು ರೂಪಿಸಿದರೆ, ಕನ್ನಡದ ಪದ, ಪಾಡುಗಳು ಬೆದಂಡೆ ಮೊದಲಾದುವನ್ನು ರೂಪಿಸುತ್ತವೆ. ಅದಕ್ಕಾಗಿ ಬೆದಂಡೆ ಮೊದಲಾದುವು ಕನ್ನಡದ ಸರ್ಗಬಂಧಕಾವ್ಯ (ಮಹಾಕಾವ್ಯ)ಗಳು. "ಕನ್ನಡದೊಳ್... ಚತ್ತಾಣಂ..... ವೈದಂಡಿಕಮೆನೆ ಸನ್ನುತಿಯಂ ಸರ್ಗಬಂಧಕೃತಿ ತಳೆದಿರ್ಕುಂ"[೨೮] ಎಂಬ ಉದಯಾದಿತ್ಯನ ಮಾತು ಇದಕ್ಕೆ ಸಮರ್ಥನೆ ನೀಡುತ್ತದೆ. ಇದರಿಂದ ಚಿತ್ರಾಯತನ (ಚತ್ತಾಣ) ಮತ್ತು ವೈದಂಡಿಕ (ಬೆದಂಡಗಬ್ಬ)ಗಳು ಸರ್ಗಬಂಧ (ಮಹಾಕಾವ್ಯ) ಪ್ರಕಾರಗಳೆಂದು, ಪದ ಮತ್ತು ಪಾಡುಗಳು ಮುಕ್ತಕ ಮತ್ತು ಕುಲಕಾದಿಗಳ ಅನುಕರಣೆಗಳೆಂದು ಇನ್ನೂ ಸ್ಪಷ್ಟವಾಗುತ್ತದೆ.

ಚತ್ತಾಣ-ಬೆದಂಡೆಗಬ್ಬಗಳು ಪದ್ಯಬಂಧಗಳೆಂದು ಕವಿರಾಜಮಾರ್ಗಕಾರನ ಸ್ಪಷ್ಟ ಅಭಿಪ್ರಾಯ. ಈ ಹಿಂದೆ ಹೇಳಿದಂತೆ ಇವು 'ನಿರತಿಶಯವಸ್ತುವಿಸ್ತರ'ದ ವರ್ಣಕಗಳು. ಗೇಯಗುಣ 'ವರ್ಣಕ'ದ ಜೀವಗುಣವೆಂದು,

"ಯಥಾವದ್ವಸ್ತು ಕಥನಂ ವಸ್ತುಕಂ
ಉಪಮೋತ್ಪ್ರೇಕ್ಷಾದಿ ವರ್ಣನಾಂಕಿತಾ ಕವಿತಾ ಕವಿತ್ವಂ ವರ್ಣಕಂ"[೨೯]

"ವಸ್ತುಕ ಕವಿಗಳ ಕಾವ್ಯಗೋಷ್ಠಿಯುಂ
ವರ್ಣಕ ಕವಿಗಳ ಗೀತಗೋಷ್ಠಿಯುಂ ಮನಂಗೊಳಿಸೆ"[೩೦]

ಎಂಬ ಮಾತುಗಳು ಬಲವಾಗಿ ಸಮರ್ಥಿಸುತ್ತವೆ. ಈ ವರ್ಣಕವು ಕನ್ನಡದಲ್ಲಿ ಚತ್ತಾಣ-ಬೆದಂಡೆಗಬ್ಬ ಎಂಬ ಎರಡು ಕವಲುಗಳಲ್ಲಿ ಪ್ರವಹಿಸಿದೆ. ಕನ್ನಡದ ಸಾಹಿತ್ಯವಿಭಜನೆ ರೂಪನಿಷ್ಠವಾಗಿರದೆ ವಸ್ತುನಿಷ್ಠವಾಗಿರುವುದರಿಂದ ಇವುಗಳಲ್ಲಿ ಚತ್ತಾಣವು ಚಾರಿತ್ರಿಕವಸ್ತುವನ್ನು, ಬೆದಂಡೆಗಬ್ಬಂ ಕಾಲ್ಪನಿಕ ವಸ್ತುವನ್ನು ಆಶ್ರಯಿಸಿರಬಹುದೇ ಎನಿಸುತ್ತದೆ.[೩೧]

---

೨೫. ಕಾ.ದ. ೧-೧೩

೨೬. ಕಾ.ಲೋ. ಸೂ. ೨೪೧, ೨೪೨, ೨೪೩

೨೭. ಅನಂತನಾಥಪುರಾಣ, ೧೦-೨೮ ವಚನ.

೨೮. ಉದಯಾದಿತ್ಯಾಲಂಕಾರ ಪದ್ಯ ೬.

೨೯. ಯಶೋಧರಚರಿತೆ (ವಾದಿರಾಜ)ಯ ವ್ಯಾಖ್ಯಾನ, (ವ್ಯಾಖ್ಯಾತೃ ಚಿಕ್ಕಣಾತ್ಮಜ ಲಕ್ಷಣ) ಕ.ಕಾ. ತತ್ತ್ವ ೭೯.

೩೦. ಪುಷ್ಪದಂತಪುರಾಣಂ (೧೯೩೫) ಪು. ೧೨೫

೩೧. "Akhyana seems to be epic in theme Akhyayika romantic." (S.P.V. Raghavan P. 614) ಇಂಥ ಒಲವು ತೋರಿಬರುತ್ತದೆ-ಈ ವಾಕ್ಯದಲ್ಲಿ.

ಚತ್ತಾಣಂ: ಚತ್ತಾಣ,[೩೨] ಚತ್ತಾಣ(ಳ)[೩೩] ಜತ್ತಾಣ[೩೪] ಎಂಬ ಭಿನ್ನಪಾಠಗಳಿಂದ ಕಂಡುಬರುವ ಈ ಕಾವ್ಯಜಾತಿಯ ವ್ಯುತ್ಪತ್ತಿಯನ್ನು ಶ್ರೀ ಮುಳಿಯ ಅವರು,

ಜಕ್ಕ(=ಯಕ್ಷ)+ತಾಣಂ=ಜತ್ತಾಣಂ>ಚತ್ತಾಣಂ(=ಯಕ್ಷಗಾನ)[೩೫]
ಚತ್ತ(=ಚರಕ)+ಆಣಂ=ಚತ್ತಾಣಂ(=ಚರಕದ ಹಾಡು)[೩೬]

ಎಂದು ಎರಡು ವಿಧದಲ್ಲಿ ಹೇಳಿದ್ದಾರೆ. ಜನ್ನನ ಅನಂತನಾಥಪುರಾಣದ "ಮುಕ್ತಕಂ, ಕುಲಕಂ, ಕೋಶಂ, ಸಂಘಾತಂ ಎಂಬ ರಚನಾವೈಚಿತ್ರ್ಯ ಚಿತ್ರಾಯತನ ವೈದಂಡಿಕ ಪ್ರಬಂಧಬಂಧುರ ಪದ್ಯಬಂಧದೊಳಂ"[೩೬] ಎಂಬ ವಾಕ್ಯದ 'ಚಿತ್ರಾಯತನ'ವೆಂದರೆ ಚಿತ್ತಾಣವೆಂದು ಶ್ರೀ ತೀ.ನಂ. ಶ್ರೀ ಅಭಿಪ್ರಾಯ[೩೭]. ಆದರೆ ಚತ್ತಾಣ>ಚಿತ್ರಾಯತನ ಮತ್ತು ಚಿತ್ರಾಯತನ>ಚತ್ತಾಣ ಈ ರೂಪ ವ್ಯತ್ಯಾಸಗಳಲ್ಲಿ ಯಾವುದು ಮೂಲ ಎಂಬುದನ್ನು ಅವರು ಹೇಳಿಲ್ಲ. ಹೇಳುವುದು ಸಾಧ್ಯವೂ ಇಲ್ಲ. ಇದು ಈವರೆಗೆ ಚತ್ತಾಣದ ನಿಷ್ಪತ್ತಿಯನ್ನು ಕುರಿತು ನಡೆದ ಚರ್ಚೆ.

ಕನ್ನಡ ಸಾಹಿತ್ಯದಲ್ಲಿ ಚತ್ತಾಣದ ಉಲ್ಲೇಖ ಹೀಗೆ ಕಂಡುಬರುತ್ತದೆ.

೧. ನುಡಿಗೆಲ್ಲಂ ಸಲ್ಲದ ಕನ್ನಡದೊಳ್ ಚತ್ತಾಣಮುಂ ಬೆದಂಡೆಯುಮೆಂದೀ ।
ಗಡಿನ ನೆಗಟ್ತೆಯ ಕಬ್ಬದೊ! ಳೊಡಂಬಡಂ ಮಾಡಿದರ್ ಪುರಾತನಕವಿಗಳ್ ॥[೩೮]

ಕಂದಂಗಳ್ ಪಲವಾಗಿರೆ । ಸುಂದರವೃತ್ತಂಗಳಕ್ಕರಂ ಚೌಪದಿ ಮ ।
ತ್ತಂದಲ್ ಗೀತಿಕೆ ತಿವಿದಿಗ । ಳಂದಂಬೆತ್ತೆಸೆಯೆ ಪೇೞ್ದೊಡದು ಚತ್ತಾಣಂ ॥[೩೯]

೨. ಕನ್ನಡದೊಳ್ ಚಂಪೂಕೃತಿ! ಸನ್ನುತತರ ವಚನಕಾವ್ಯಮೆನಿಕುಂ ಚತ್ತಾ ।
ಣಂ ನೆಱೆ ವೈದಂಡಕಮೆನೆ । ಸನ್ನುತಿಯಂ ಸರ್ಗಬಂಧಕೃತಿ ತಳೆದಿರ್ಕುಂ॥[೪೦]

೩. 'ಮುಕ್ತಕಂ, ಕುಲಕಂ, ಕೋಶಂ, ಸಂಘಾತಂ ಎಂಬ ರಚನಾವೈಚಿತ್ರ್ಯ ಚಿತ್ರಾಯತನ
ವೈದಂಡಿಕ ಪ್ರಬಂಧ ಬಂಧುರ ಪದ್ಯಬಂಧದೊಳಂ'[೪೧]

೪. 'ಚತ್ತಾಣಮೆಂದೊಂದು ಕಾವ್ಯಂ'[೪೨]
'ಚತ್ತಾಣಮೆಂದು ಕಾವ್ಯಂ'[೪೩]
'ಚತ್ತಾಣಂ=ಒಂದು ಕಾವ್ಯಂ'[೪೪]

೫. 'ಚತ್ತಾಣಂ ಕೃತಿಭೇದಂ'[೪೫]

೬. 'ಕಬ್ಬವೆಸರ್ಚತ್ತಾಣಮೆನಿಪ್ಪುದು'[೪೬]

---

೩೨. ಕ.ಮಾ. ೧-೩೩, ೩೫
೩೩. ಕರ್ನಾಟಕಶಬ್ದಕಲ್ಪದ್ರುಮ ಪು. ೧೪೨
೩೪. ಶ.ಮ.ದ. (ಕಿಟೆಲ್ ೧೮೭೨) ಸೂ. ೯೮ರ ಪ್ರಯೋಗ ಮತ್ತು ಕಿಟೆಲ್ ನಿಘಂಟು ಪು. ೬೩೪
೩೫. ಕನ್ನಡ ನಾಡೂ ದೇಸೀ ಸಾಹಿತ್ಯವೂ, ಪು. ೪೭
೩೬. ಕನ್ನಡನಾಡೂ ದೇಸೀ ಸಾಹಿತ್ಯವೂ, ಪು. ೪೮
೩೭. ಚತ್ತಾಣ ಮತ್ತು ಬೆದಂಡೆ (ಪ್ರ.ಕ. ೪೪-೪ ಪು. ೯೨)
೩೮. ಕ.ಮಾ. ೧-೩೩
೩೯. ಕ.ಮಾ. ೧-೩೫
೪೦. ಉದಯಾದಿತ್ಯಾಲಂಕಾರ ಪದ್ಯ ೬
೪೧. ಅನಂತನಾಥಪುರಾಣಂ, ೧೦-೨೮ ವಚನ
೪೨. ಶ.ಮ.ದ. (ಡಿ.ಎಲ್.ಎನ್. ೧೯೬೮) ಪು. ೩೬೩
೪೩. ಶ.ಮ.ದ. (ಮದ್ರಾಸ ಆವೃತ್ತಿ) ಪು. ೩೧೧
೪೪. ಶ.ಮ.ದ. (ಕ.ಸಾ.ಪ. ಆವೃತ್ತಿ) ಪು. ೩೦೨
೪೫. ಕರ್ನಾಟಕ ನಿಘಂಟು ಪದ್ಯ ೬೫
೪೬. ಚತುರಾಸ್ಯ ನಿಘಂಟು, ಪದ್ಯ ೧೦೧

ಇಲ್ಲಿ ದರ್ಪಣ ಮತ್ತು ನಿಘಂಟುಗಳು ಚತ್ತಾಣವು ಒಂದು ಕಾವ್ಯಪ್ರಭೇದ ಎಂದು ಮಾತ್ರ ಹೇಳುತ್ತವೆ. ಜನ್ನನು ಒಂದು ಹೆಜ್ಜೆ ಮುಂದುಹೋಗಿ ಚಿತ್ರಾಯತನ (=ಚತ್ತಾಣ)ವು ಮುಕ್ತಕ, ಕುಲಕ, ಕೋಶ, ಸಂಘಾತ ಎಂಬ ರಚನಾವೈಚಿತ್ರ್ಯದಿಂದ ಕೂಡಿದ 'ಪದ್ಯಬಂಧ' ಎಂದು ನುಡಿದು, ಇದು ಪದ್ಯಕಾವ್ಯವೆನ್ನುತ್ತಾನೆ. ಈ ವಿಷಯವಾಗಿ ಇನ್ನೂ ಒಂದು ಹೆಜ್ಜೆ ಮುಂದುಹೋದ ಉದಯಾದಿತ್ಯನ ಪ್ರಕಾರ ಚತ್ತಾಣ ಸರ್ಗಬಂಧಕೃತಿ. 'ಸರ್ಗಬಂಧೋ ಮಹಾಕಾವ್ಯಮುಚ್ಯತೇ' ಎಂಬ ದಂಡಿಯ ಹೇಳಿಕೆಯಂತೆ 'ಸರ್ಗಬಂಧ' ಎಂಬುದು ಮಹಾಕಾವ್ಯಕ್ಕೆ ಇನ್ನೊಂದು ಹೆಸರು. ಅದಕ್ಕಾಗಿ ಚತ್ತಾಣವು ಕನ್ನಡದ ಮಹಾಕಾವ್ಯಜಾತಿ ಎನಿಸುತ್ತದೆ.

ಕವಿರಾಜಮಾರ್ಗಕಾರನು 'ಹಲವು ಕಂದಗಳ ಜೊತೆಗೆ ಸುಂದರ [ಸಂಸ್ಕೃತ] ವೃತ್ತಗಳು ಮಾತ್ರವಲ್ಲದೆ [ದೇಸಿ ಛಂದಸ್ಸಿನ] ಅಕ್ಕರ ಚೌಪದಿ ಗೀತಿಕೆ ತ್ರಿಪದಿ ಮೊದಲಾದುವು ಇಲ್ಲಿ ನಿಂದು ಸೊಗಸು ಕೊಡುತ್ತವೆ' ಎಂದು ಚತ್ತಾಣದ ಲಕ್ಷಣವನ್ನು ಹೇಳುತ್ತಾನೆ. ಮುಂದೆ ವಿವರಿಸುವ ಬೆದಂಡೆಗಬ್ಬದಲ್ಲಿ ಒಂದು ಕಂದ ಒಂದು ವೃತ್ತಗಳ ಜೊತೆ'ಪುನರಾವೃತ್ತಿಗೊಳ್ಳುತ್ತಿದ್ದರೆ, ಈ ಚತ್ತಾಣದಲ್ಲಿ ಅಕ್ಕರ ಚೌಪದಿ ಗೀತಿಕೆ ತ್ರಿಪದಿಗಳು ಹೆಚ್ಚಿನವಾಗಿ ಸೇರುವುದರಿಂದ, ಇದು ಹೆಚ್ಚು ಛಂದೋವೈವಿಧ್ಯದಿಂದ ಕೂಡಿದ ಕಾವ್ಯಪ್ರಭೇದವಾಗಿದೆ.

ಇನ್ನು ಬೆದಂಡೆಗಬ್ಬವನ್ನು ಕುರಿತು ಹೇಳುವ ನಾಗವರ್ಮನು ಚತ್ತಾಣಕ್ಕೆ ಬದಲು ಪ್ರಸ್ತಾಪಿಸುವ 'ಬಾಜನೆಗಬ್ಬ' ಎಂಬ ಕಾವ್ಯಜಾತಿಯ ಲಕ್ಷಣ ಹೀಗಿದೆ:

> ಪಲತೆಱದ ಪದ್ಯದಿಂದಂ। ಲಲಿತವಚೋರಚನ ನಿಚಯ ಪದ್ಧತಿಕೆಗಳಿಂ।
> ಸಲೆ ನಿಲೆ ಸಮೆದುದು ಸರಸಾ । ಖಿಲ ವರ್ಣನಮಾದೊಡದುವೆ ಬಾಜನೆಗಬ್ಬಂ॥[೪೭]

ಈ ಪದ್ಯವನ್ನು ಕುರಿತು ಆರ್. ನರಸಿಂಹಾಚಾರ್, ತೀ.ನಂ.ಶ್ರೀ, ಮುಳಿಯ ಅವರು ನೀಡುವ ವಿವರಣೆ ಕೆಳಗಿನಂತಿದೆ:

I. ಶ್ರೀ ಆರ್. ನರಸಿಂಹಾಚಾರ್ ಅವರ "Melvadu bedandegabbam and bajanegabba, which are peculiar to Kannada, appear to have been sung with or without the accompaniment of a musical instrument, as is evident from the words padu (song) and bajane (playing upon a musical instrument)"[೪೮] ಎಂಬ ಹೇಳಿಕೆಯ ಪ್ರಕಾರ ವಾದನದಿಂದ ಬಾಜನೆ ನಿಷ್ಪನ್ನವಾಗಿದೆಯೆಂದೂ ಬಾಜನೆಗಬ್ಬವು ಹಾಡಿನ ಒಂದು ಜಾತಿಯೆಂದೂ ತಿಳಿದುಬರುತ್ತದೆ. ಅವರದೇ ಆದ "As Nagavarma's definition of Bajanegabbam nearly agrees with that of chattana given in the Kavirajamarga it may be concluded that they are identical"[೪೯] ಎಂಬ ಹೇಳಿಕೆಯಿಂದ ಚತ್ತಾಣ ಮತ್ತು ಬಾಜನೆಗಬ್ಬಗಳು ಒಂದೇ ಕಾವ್ಯಜಾತಿಯ ಎರಡು ಹೆಸರುಗಳೆಂದು ವ್ಯಕ್ತವಾಗುತ್ತದೆ. ಒಟ್ಟಿನಲ್ಲಿ,

---

೪೭. ಕಾ.ಲೋ. ಪ. ೯೫೫

೪೮. ಕಾ.ಲೋ. Intr. lv.

೪೯. ಕಾ.ಲೋ. Intr. lv.

೧. ಬಾಜನೆಗಬ್ಬ ಎಂಬುದು ವಾದ್ಯವನ್ನವಲಂಬಿಸಿ ಹುಟ್ಟಿದ ಕಾವ್ಯಜಾತಿ.

೨. ಇದು ಹಾಡುಗಬ್ಬದ ಒಂದು ಪ್ರಭೇದ.

೩. ಕವಿರಾಜಮಾರ್ಗಕಾರನ ಚತ್ತಾಣ ಮತ್ತು ನಾಗವರ್ಮನ ಬಾಜನೆಗಬ್ಬ ಎರಡೂ ಒಂದೇ ಎಂದು ಇವರ ಅಭಿಪ್ರಾಯ.

II. ತೀ.ನಂ. ಶ್ರೀ ಅವರು "ಚತ್ತಾಣವನ್ನು ಹಾಡುತ್ತಿದ್ದರೆಂಬುದಕ್ಕೆ ಎಲ್ಲಿಯೂ ಸೂಚನೆಯಿಲ್ಲ. ಇಲ್ಲಿಯ 'ಬಾಜನೆ'ಯ ಮೂಲ ಸಂಸ್ಕೃತದ 'ವಾದನ'ವಲ್ಲ. ಅದು ನಿಜವಾಗಿ ವಾಚನ (ವಾಚನಾ) ಆಗಿರಬೇಕೆಂದು ತೋರುತ್ತದೆ. ಕೇಶಿರಾಜನು 'ಶಬ್ದಮಣಿದರ್ಪಣ'ದ ಅಪಭ್ರಂಶ ಪ್ರಕರಣದಲ್ಲಿ ಚ ಕಾರಕ್ಕೆ ಜಕಾರಂ -ವಾಚನಾ, ಬಾಜನೆ ಎಂದು ಹೇಳಿರುವುದನ್ನೂ ವಡ್ಡಾರಾಧನೆಯ ಸುಕುಮಾರಸ್ವಾಮಿಯ ಕಥೆಯಲ್ಲಿ 'ಓಲೆಯಂ ಬಾಜಿಸಿ.... ಇಂತಿವೆಲ್ಲಮಂ ಬಾಜಿಸಿ ನೋಡಿ' ಎಂಬಲ್ಲಿ ಎರಡು ಕಡೆಯೂ, ರನ್ನನ ಅಜಿತಪುರಾಣದಲ್ಲಿ 'ದಿಗ್ವಿಜಯ ಕೀರ್ತಿಗಳಂ ಬಾಜಿಸೆ ಕೇಳ್ದು' ಎಂಬಲ್ಲಿಯೂ 'ಬಾಜಿಸು' ಎಂಬುದಕ್ಕೆ ವಾಚಿಸು(=ಓದು) ಎಂದೇ ಅರ್ಥವಿರುವುದನ್ನು ಗಮನಿಸಿದರೆ, ಮೇಲಿನ ನಮ್ಮ ಊಹೆ ನಿರಾಧಾರವಲ್ಲವೆಂದು ಸ್ಪಷ್ಟವಾಗಬಹುದು. ಇದನ್ನು ಒಪ್ಪಿಕೊಂಡರೆ ಬಾಜನೆಗಬ್ಬ 'ವಾಚನಕಾವ್ಯ'ವಾಗುತ್ತದೆ; ಎಂದರೆ ಓದುಗಬ್ಬವಾಗುತ್ತದೆ"[೫೦] ಎಂದು ಹೇಳುತ್ತಾರೆ. ಇಲ್ಲಿ ವಾಚನ (ವಾಚನಾ)> ಬಾಜನೆ ಎಂಬ ನಿಷ್ಪತ್ತಿಯನ್ನು ಸಾಧಿಸಲಾಗಿದೆ.

"ಪದ್ಧತಿಕೆ, ವರ್ಣನೆಗಳು ಇವುಗಳ ವಿಷಯ ಕವಿರಾಜಮಾರ್ಗದ ಚತ್ತಾಣದಲ್ಲಿ ಉಕ್ತವಾಗಿಲ್ಲದಿದ್ದರೂ ಎರಡರಲ್ಲೂ ವೃತ್ತಗಳ ವೈವಿಧ್ಯವು ಮುಖ್ಯವಾದ ಸಮಾನಾಂಶವೆಂಬುದನ್ನು ನೆನೆದರೆ, ಚತ್ತಾಣವೇ ಕಾಲಾಂತರದಲ್ಲಿ ಬಾಜನೆಗಬ್ಬವೆನಿಸಿಕೊಂಡಿತೆಂದು ನಂಬಬಹುದು"[೫೧] ಎನ್ನುವ ತೀ.ನಂ. ಶ್ರೀ ಅವರ ಈ ಅಭಿಪ್ರಾಯದಲ್ಲಿ ಕವಿರಾಜಮಾರ್ಗದ ಚತ್ತಾಣ, ಕಾವ್ಯಾವಲೋಕನದ ಬಾಜನೆಗಬ್ಬಗಳು ಒಂದೇ.

"ಚತ್ತಾಣದಲ್ಲಿ ನಡುನಡುವೆ ಗದ್ಯಖಂಡಗಳು ಸೇರಿಬಂದರೆ, ಅದಕ್ಕೂ ಚಂಪೂ ಕಾವ್ಯಕ್ಕೂ ವಸ್ತುತಃ ಯಾವ ಭೇದವೂ ಉಳಿಯುವುದಿಲ್ಲವೆನಿಸುತ್ತದೆ.... ಹಿಂದಿನಿಂದ ಪ್ರಚುರವಾಗಿದ್ದ ಚತ್ತಾಣದಲ್ಲಿ ಗದ್ಯಖಂಡಗಳು (ವಚನಗಳು) ನಡುನಡುವೆ ಸೇರಿ ಚಂಪೂ ತಲೆಯೆತ್ತಿರಬಹುದು. ಚಂಪೂ ಜನಪ್ರಿಯವಾಗಿ ಬೆಳೆದಂತೆಲ್ಲ ಚತ್ತಾಣ ಮೂಲೆಗೆ ಬಿದ್ದಿರಬಹುದು "[೫೨] ಎಂಬ ಅವರ ಹೇಳಿಕೆಯಿಂದ ಚತ್ತಾಣವು ಚಂಪುವಿಗೆ ಮೂಲ, ಒಂದರ್ಥದಲ್ಲಿ ಪ್ರಾರಂಭದ ಚಂಪೂ ಎನಿಸುತ್ತದೆ. ಒಟ್ಟಿನಲ್ಲಿ,

೧. ವಾಚನಾ > ಬಾಜನೆ ಎಂಬ ನಿಷ್ಪತ್ತಿಯಿಂದ ಇದು ವಾಚನಾರ್ಹವಾದ ಕಾವ್ಯಜಾತಿ.

೨. ಇದು ಓದುಗಬ್ಬ, ವಾಚನಕಾವ್ಯ.

೩. ಕವಿರಾಜಮಾರ್ಗದ 'ಚತ್ತಾಣ' ಮತ್ತು ಕಾವ್ಯಾವಲೋಕನದ 'ಬಾಜನೆಗಬ್ಬ' ಒಂದೇ, ಇದೇ ಪರಿಷ್ಕಾರಗೊಂಡು ಚಂಪೂ ಆಗಿರಬಹುದು ಎಂಬ ಹೇಳಿಕೆಗಳನ್ನು ತೀ.ನಂ. ಶ್ರೀ ಮಂಡಿಸಿದ್ದಾರೆ.

---

೫೦. ಚತ್ತಾಣ ಮತ್ತು ಬೆದಂಡೆ (ಪ್ರ.ಕ. ೪೪-೪ ಪು. ೯೧)
೫೧. ಚತ್ತಾಣ ಮತ್ತು ಬೆದಂಡೆ (ಪ್ರ.ಕ. ೪೪-೪ ಪು. ೯೦)
೫೨. ಚತ್ತಾಣ ಮತ್ತು ಬೆದಂಡೆ (ಪ್ರ.ಕ. ೪೪-೪ ಪು. ೯೩)

III. ಶ್ರೀ ಮುಳಿಯ ಅವರು "ಬಾಜನೆಗಬ್ಬ (ವಾದನಕಾವ್ಯ) ಎಂದರೆ ಹಿಮ್ಮೇಳದೊಡನೆ ಹಾಡುವ ಕಾವ್ಯ...... ಬಾಜನಗಬ್ಬ ಎಂಬುದಕ್ಕೆ ಆಗಿನ ಕಾಲದಲ್ಲಿ ಚತ್ತಾಣವೆಂಬ ಹೆಸರೂ ಇದ್ದುದೆಂದು ಸಂದೇಹಪಟ್ಟರೂ ತಪ್ಪಲ್ಲವಾಗಿ ಭಾವಿಸಬಹುದು...... ಆ ಬಾಜನೆಗಬ್ಬವೇ ಮೊದಲಾದ ಪುರಾತನ ದೇಸಿ ಕಾವ್ಯವರ್ಗದ ಸಂತತಿಯಲ್ಲಿಯೆ ಇಂದಿನ ಯಕ್ಷಗಾನಪ್ರಬಂಧ ಅಲ್ಲವೆ ಬಯಲಾಟ ಪ್ರಬಂಧವು ತಲೆದೋರುವುದಾಗಿ ನಮ್ಮ ನಂಬುಗೆ.... ಆದರಿಂದಲೇ ನಾಗವರ್ಮನು....... ತನ್ನ ಗ್ರಂಥಾಂತ್ಯದ ೨೪೬-೨೪೭ನೆಯ ಎರಡು ಸೂತ್ರಗಳಲ್ಲಿ ನಾಟಕರಚನೆಗೆ ಜೀವಾಳವಾದ 'ಮುಖ-ಪ್ರತಿಮುಖ-ಅವಮರ್ಶ-ಗರ್ಭ-ನಿರ್ವಹಣ' ಎಂಬ ೫ ಸಂಧಿಗಳನ್ನು 'ಬೀಜ-ಬಿಂದು-ಪತಾಕೆ-ಪ್ರಕರಿ-ಕಾರ್ಯ' ಎಂಬ ಐದು ಸಂಧ್ಯಂಗಗಳನ್ನೂ ಕಡೆಗೆ ನಿರೂಪಿಸಿದ್ದಾನೆ"[೫೩] ಎಂದು ಹೇಳುತ್ತಾರೆ. ಇದರಿಂದ

೧. ವಾದನ>ಬಾಜನೆ ಎಂಬುದು ಉಚಿತನಿಷ್ಪತ್ತಿ

೨. ಇದು ಹಿಮ್ಮೇಳದೊಡನೆ ಹಾಡುವ ಯಕ್ಷಗಾನ ಜಾತಿ

೩. ಕವಿರಾಜಮಾರ್ಗದ ಚತ್ತಾಣ ಮತ್ತು ಕಾವ್ಯಾವಲೋಕನದ ಬಾಜನೆಗಬ್ಬ ಒಂದೇ ಇರಬಹುದು ಎಂಬ ಅಭಿಪ್ರಾಯಗಳು ಹೊರಡುತ್ತವೆ.

ಒಟ್ಟಿನಲ್ಲಿ ಚತ್ತಾಣ-ಬಾಜನೆಗಬ್ಬಗಳು ಒಂದೇ ಎಂದು ಮೂವರು ಒಪ್ಪಿಕೊಂಡರೂ ವಾದನ>ಬಾಜನೆ ಎಂದು ಆರ್.ನರಸಿಂಹಾಚಾರ್ ಮತ್ತು ಮುಳಿಯ, ವಾಚನ>ಬಾಜನೆ ಎಂದು ತೀ.ನಂ.ಶ್ರೀ ನಿಷ್ಪತ್ತಿ ಹೇಳುತ್ತಾರೆ. ಇದು 'ಹಾಡುಗಬ್ಬ' ಎಂದು ಆರ್. ನರಸಿಂಹಾಚಾರ್, 'ಯಕ್ಷಗಾನ' ಎಂದು ಮುಳಿಯ, 'ಚಂಪು' ಎಂದು ತೀ.ನಂ.ಶ್ರೀ ಅವರ ಅಭಿಪ್ರಾಯ. ಈ ಹೇಳಿಕೆಗಳನ್ನು ಹೀಗೆ ಚಿತ್ರಿಸಬಹುದು.

ಚತ್ತಾಣ = ಬಾಜನೆಗಬ್ಬ
- ವಾದನ
  - ಹಾಡುಗಬ್ಬ (ಆರ್. ನರಸಿಂಹಾಚಾರ್)
  - ಯಕ್ಷಗಾನ (ಮುಳಿಯ ತಿಮ್ಮಪ್ಪಯ್ಯ)
- ವಾಚನ – ಮೂಲಚಂಪೂ (ತೀ.ನಂ.ಶ್ರೀ)

ಈ ಅಭಿಪ್ರಾಯಗಳಲ್ಲಿ ತೀ.ನಂ. ಶ್ರೀ ಅವರು ನಿಷ್ಪತ್ತಿಯಿಂದಲೇ ಪ್ರತ್ಯೇಕಗೊಳ್ಳುವುದರಿಂದ ಮೊದಲು ಅವರ ಮಾತುಗಳನ್ನು ಪರೀಕ್ಷಿಸಬಹುದು.

"ದಕಾರಕ್ಕೆ ಜತ್ವಂ: ಗದೆ-ಗಜ, ದಂತಂ-ಜಂತಂ."[೫೪]
"ಬಾಜಸೆ ಡಕ್ಕೆಯಂ ಪ್ರಿಯರ ಮೆಲ್ಲೆರ್ದೆ......"[೫೫]

ಎಂಬ ಶಬ್ದಮಣಿದರ್ಪಣ[೫೪] ಮತ್ತು ಶಾಸನ[೫೫] ವಾಕ್ಯಗಳನ್ನು ಗಮನಿಸಿದರೆ ತೀ.ನಂ. ಶ್ರೀ ಅವರ ವಾಚನಾ>ಬಾಜನೆಯಷ್ಟೇ ವಾದನಾ>ಬಾಜನೆ ಎಂಬುದಕ್ಕೆ ವ್ಯಾಕರಣಮನ್ನಣೆ ಮತ್ತು ಕವಿಪ್ರಯೋಗ ಪ್ರಮಾಣವಿದ್ದುದು ವೇದ್ಯವಾಗುತ್ತದೆ. ಅವರೇ ಹೇಳುವ ಅನಂತನಾಥಪುರಾಣದಲ್ಲಿ ಚತ್ತಾಣವನ್ನು

---

೫೩. ಕ.ಮಾ. ವಿವೇಕ, ಪು. ೧೨೨-೧೨೩.
೫೪. ಶ.ಮ.ದ. ಸೂ. ೨೮೧ರ ಪ್ರಯೋಗ
೫೫. ಶಾಸನ ಪದ್ಯಮಂಜರಿ ಪು. ೧೪೯

'ಪದ್ಯಬಂಧ'ವೆಂದೂ ಚಂಪುವನ್ನು ಮಿಶ್ರವೆಂದೂ, ಉದಯಾದಿತ್ಯಾಲಂಕಾರದಲ್ಲಿ ಚತ್ತಾಣ-ಬೆದಂಡೆಗಬ್ಬಗಳನ್ನು 'ಸರ್ಗಬಂಧ' ಕೃತಿಗಳೆಂದೂ ಚಂಪುವನ್ನು ವಚನಕಾವ್ಯವೆಂದೂ ಪ್ರತ್ಯೇಕಿಸಿ ಹೇಳಿರುವುದು ಶ್ರೀಯುತರ 'ಚಂಪೂ-ಚತ್ತಾಣ ಸಮನ್ವಯವಾದ'ವನ್ನು ನಿರಾಕರಿಸುತ್ತದೆ.

ಯಕ್ಷಗಾನಕ್ಕೆ ಪ್ರಾಚೀನತೆಯನ್ನು ಹುಡುಕಲು ಹೋದ ಶ್ರೀ ಮುಳಿಯ ಅವರು ನಿರಾಶೆಯಿಂದ ಹಿಂದಿರುಗಬಾರದೆಂದು ಬಾಜನೆಗಬ್ಬವನ್ನು ಗಂಟುಹಾಕಿಕೊಂಡಂತಿದೆ. ಚತ್ತಾಣವು 'ಚರಕದ ಹಾಡು' ಎಂದು ಹೇಳಿ, [೫೫A] ಅದಕ್ಕೆ ಸಮಾನವೆಂದು ತಾವೇ ಹೇಳುವ 'ಬಾಜನೆಗಬ್ಬ'ವು ಯಕ್ಷಗಾನವೆನ್ನುವುದು ನಿರಾಧಾರದ ನಿರ್ಣಯವಾಗಿದೆ. ಇದನ್ನು ಕುರಿತು "ಈ ಊಹೆಗೆ ಯಾವ ಆಧಾರವೂ ಇರುವಂತೆ ನಮಗೆ ತೋರುವುದಿಲ್ಲ"[೫೬] ಎನ್ನುವ ತೀ.ನಂ. ಶ್ರೀ ಅವರ ಹೇಳಿಕೆ ಯೋಗ್ಯವಾಗಿದೆ.

ಹೀಗೆ ಈ ಉಭಯ ವಿದ್ವಾಂಸರ ಅಭಿಪ್ರಾಯಗಳಿಗೆ ಸಂಬಂಧಿಸಿದ ಕೆಲವು ಅಂಶಗಳನ್ನು ತಳ್ಳಿಹಾಕುವುದರ ಮೂಲಕ, ವಾದನಾ >ಬಾಜನೆ ಎಂಬ, ಬಾಜನೆಗಬ್ಬದ ಇನ್ನೊಂದು ಹೆಸರು ಚತ್ತಾಣವೆಂಬ 'ಹಾಡುಗಬ್ಬ'ವೆಂಬ ಆರ್. ನರಸಿಂಹಾಚಾರ್ ಅವರ ಅಭಿಪ್ರಾಯವನ್ನು ನಾವು ಒಪ್ಪಿಕೊಂಡಂತಾಗಿದೆ. ಈ ಅಂಶವನ್ನು ಕವಿರಾಜಮಾರ್ಗ, ಕಾವ್ಯಾವಲೋಕನ, ಉದಯಾದಿತ್ಯಾಲಂಕಾರ, ಅನಂತನಾಥಪುರಾಣಗಳು ಸಮರ್ಥವಾಗಿ ಬೆಂಬಲಿಸುತ್ತವೆ.

ಒಟ್ಟಿನಲ್ಲಿ ಕವಿರಾಜಮಾರ್ಗಕಾರನ ಪ್ರಕಾರ, ಈ ಹಾಡುಗಬ್ಬದಲ್ಲಿ ಹಲವು ಕಂದಗಳ ಮಧ್ಯ ಸುಂದರವಾದ ವೃತ್ತಗಳು, ಅಕ್ಕರ, ಚೌಪದಿ, ಗೀತಿಕೆ, ತ್ರಿಪದಿಗಳು ಅಂದಂಬೆತ್ತೆಸೆಯಬೇಕು; ಅಂದರೆ ಕಂದಪ್ರಮಾಣ ತುಂಬ ಇದ್ದು ಮಧ್ಯಮಧ್ಯ ಮಿಕ್ಕುವು ಮಿಂಚಬೇಕು. ನಾಗವರ್ಮನ ಹೇಳಿಕೆಯಂತೆ 'ಲಲಿತವಚೋರಚನನಿಚಯಪದ್ಧತಿಕೆ (ರಗಳೆ)'ಗಳೂ ಇದ್ದ ಈ ಪ್ರಕಾರ 'ಸರಸಾಖಿಲ ವರ್ಣನ' ಅಂದರೆ ಬಹುಶಃ ೧೮ ವರ್ಣನೆಗಳ ಆಗರ. 'ನಿರತಿಶಯವಸ್ತುವಿಸ್ತರ'ವಾಗಿರುವ ಇದು 'ವರ್ಣಕ' ಪ್ರಭೇದ. ಇಷ್ಟು ವಿಷಯಗಳು ಚತ್ತಾಣದ ಬಗೆಗೆ ತಿಳಿದುಬರುತ್ತದೆ.

ಬೆದಂಡೆಗಬ್ಬಂ: ಬೆದಂಡೆ[೫೭], ಬೆದರಂಡೆ[೫೮], ಬೆದಂಡೆಗಬ್ಬ[೫೯]- ಬೆದಂಡಗಬ್ಬ[೬೦] ಎಂಬ ಭಿನ್ನಪಾಠಗಳ; ವೈದಂಡಕ[೬೧] ವೈದಂಡಿಕ[೬೨] ಎಂಬ ಇನ್ನೊಂದು ಹೆಸರಿನ ಈ ಕಾವ್ಯಜಾತಿ ಬೆದಂಡೆ, ಬೆದಂಡೆಗಬ್ಬ ಎಂದು ಸುಪ್ರಸಿದ್ಧವಾಗಿದೆ. "ಬೀಣೆಯ ಕೊಟಿಲ ಬೆದಂಡೆಯ ಗಾಣದ ಬಟಿವಿಡಿದು........"[೬೩] ಎಂಬ ಪದ್ಯದ ಪ್ರಕಾರ ಬೆದಂಡೆ ಎಂಬುದು ಮೂಲತಃ ಒಂದು ವಾದ್ಯವಿಶೇಷ, ಇದರ ಜೊತೆ ಹಾಡುವ ಹಾಡು ಎಂದು ಬೆದಂಡೆಗಬ್ಬದ ಉಗಮವನ್ನು ಊಹಿಸಬಹುದು. ಆದರೆ ಕವಿರಾಜಮಾರ್ಗದಲ್ಲಿ "ನುಡಿಗೆಲ್ಲಂ ಸಲ್ಲದ ಕನ್ನಡದೊಳ್ ಚತ್ತಾಣಮುಂ ಬೆದಂಡೆಯುಂ......." ಎಂದು ವಾದ್ಯನಾಮವನ್ನೇ ಕಾವ್ಯನಾಮವನ್ನಾಗಿ

೫೫A ಕನ್ನಡನಾಡೂ ದೇಸಿ ಸಾಹಿತ್ಯವೂ, ೪೮.

೫೬. ಚತ್ತಾಣ ಮತ್ತು ಬೆದಂಡೆ (ಪ್ರ. ಕ. ೪೪-೪, ಪು. ೯೧, ಅ. ಟಿ.)

೫೭. ಕ.ಮಾ. ೧-೩೩

೫೮. ಶ.ಮ.ದ. ಪು. ೪೨, ಆ.ಟಿ.

೫೯. ಕ.ಮಾ. ೧-೩೪

೬೦. ಕ.ಮಾ. ಹಸ್ತಪ್ರತಿ ನಂ. ೧೧೦, ೧೨೫, ೧೭೫

೬೧. ಉದಯಾದಿತ್ಯಾಲಂಕಾರ ಪದ್ಯ ೬

೬೨. ಅನಂತನಾಥಪುರಾಣ, ೧೦-೨೮ ವಚನ.

೬೩. ಸು.ಚರಿತೆ, ೨-೨೪

ಬಳಸಲಾಗಿದೆ. ಇಷ್ಟು ಅನ್ಯೋನ್ಯವಾಗಿರುವ ಬೆದಂಡೆವಾದ್ಯ-ಬೆದಂಡೆಗಬ್ಬಗಳ ಸಂಬಂಧ ಇಂಗ್ಲೀಷಿನ Lyre-Lyricಗಳ ಸಂಬಂಧವನ್ನು ನೆನಪಿಗೆ ತರುತ್ತದೆ.

ಬೆದಂಡೆ ಎಂಬ ಪದಕ್ಕೆ ತರ್ಕಶುದ್ಧವಾದ ನಿಷ್ಪತ್ತಿಯನ್ನು ಕಂಡುಹಿಡಿಯುವುದು ಇನ್ನೂ ಸಾಧ್ಯವಾಗಿಲ್ಲ. ವಿದ್ವಾಂಸರು ಮಾತ್ರ ಭಿನ್ನದಾರಿಗಳಲ್ಲಿ ನಡೆದು ಇದರ ಮೂಲವನ್ನು ಸಂಸ್ಕೃತಕ್ಕೆ ಸಂಬಂಧಿಸಿ ಹೀಗೆ ಹೇಳುತ್ತಾರೆ;

೧. ವಿದಂಡ >ವೈತಂಡಕ (A disputatious or captious young man, ವಿತಂಡಾವಾದ ಮಾಡತಕ್ಕವನು)> ಬೆದಂಡೆ (Criticism, critical skill, exactness) >ಬೆದಂಡೆಗಬ್ಬ (Skilful song-poetry)-ಕಿಟೆಲ್.[೬೪]

೨. ವಾದ್ಯವಿಶೇಷವಾಗಿರುವ 'ವಿದಂಡಿಕಾ'ದೊಂದಿಗೆ ಹಾಡುವ ಕಾವ್ಯಜಾತಿ ವೈದಂಡಿಕ. ಇದರ ತದ್ಭವ ಬೆದಂಡೆಯೆಂದು ತೀ.ನಂ. ಶ್ರೀ. ಅಭಿಪ್ರಾಯ.[೬೫] ಈ ಸಂದರ್ಭದಲ್ಲಿ 'ಎನ್ನಕಾಯವ ದಂಡಿಗೆಯ ಮಾಡಯ್ಯಾ' ಎಂಬ ವಚನವನ್ನು ಉದಾಹರಿಸಿರುವುದರಿಂದ ಇವರ ದೃಷ್ಟಿಯಲ್ಲಿ ವಿದಂಡಿಕಾ ಎಂಬುದು ತಂತುವಾದ್ಯ.

ಈ ಉಭಯ ಅಭಿಪ್ರಾಯಗಳಲ್ಲಿ ತೀ.ನಂ.ಶ್ರೀ. ಅವರ ವಾದ್ಯನಿಷ್ಪತ್ತಿ ಬಹುಜನಮಾನ್ಯವಾಗಿವೆ. ಕನ್ನಡದಲ್ಲಿ ಈ ಬಗೆಯ ಒಂದೂ ಕೃತಿ ನಮಗೆ ದೊರೆಯದಿದ್ದರೂ ವಾದ್ಯಜಾತಿ, ಕಾವ್ಯಜಾತಿ ಎಂಬ ಉಭಯ ಅರ್ಥದಲ್ಲಿ ಈ ಪದ ಕೆಳಗಿನಂತೆ ಬಳಕೆಗೊಂಡಿದೆ.

೧. ಬೆದಂಡೆ, ಬೆದಂಡೆಗಬ್ಬ	-	ಕ.ಮಾ. ೧-೩೨ ಮತ್ತು ೩೪
೨. ಬೆಡಂಬೆ (ಬೆದಂಡೆ)	-	ಮದನತಿಲಕಂ, ೮-೨೯
೩. ಬೆದಂಡೆ	-	ಸುಕುಮಾರ ಚರಿತೆ, ೨-೨೪
೪. ಬೆದಂಡೆಗಬ್ಬಂ	-	ಕಾವ್ಯಾವಲೋಕನ, ಪ. ೯೫೪
೫. [ಡ]ಂಡೆಯವಂ ವೈತಂಡಿಕಂ	-	ಅಭಿಧಾನವಸ್ತುಕೋಶ ಪು. ೬೬
ಬೆದಂಡೆಯವಂ ವೈತಂಡಿಕಂ	-	ಅಭಿಧಾನವಸ್ತುಕೋಶ ಪು. ೨೫೦
೬. ವೈದಂಡಕ	-	ಉದಯಾದಿತ್ಯಾಲಂಕಾರ ಪ. ೬
೭. ವೈದಂಡಿಕ	-	ಅನಂತನಾಥಪುರಾಣ, ೧೦-೨೮ ವಚನ
೮. ಬೆದಂಡೆ	-	ಸೂಕ್ತಿಸುಧಾರ್ಣವ, ೮-೧೩೪
೯. ಬೆದಂಡೆ	-	ಕಬ್ಬಿಗರಕಾವ, ೧-೧೧೬ ವಚನ
೧೦. ಬೆದಂಡೆ	-	ಶ.ದ. ಪು. ೪೨ ಮತ್ತು ೩೬೫ ಮತ್ತು
ಬೆದಂಡೆಗಬ್ಬಂ	-	ಸೂತ್ರ ೧೦೮, ಪ್ರಯೋಗ ೮
೧೧. ಬೆದಂಡೆ ವೈದಂಡಿಕನಾಮಧೇಯದೊಳ್	-	ಕರ್ನಾಟಕ ನಿಘಂಟು ೩೪

'ಕಬ್ಬವೆಸರ್ಚತಾಣಮೆನಿಪ್ಪುದು"[೬೬] ಎಂದು ಬಾಯಿಬಿಟ್ಟು ಹೇಳುವ ಚತುರಾಸ್ಯನಿಘಂಟು ಬೆದಂಡೆಯ ಹೆಸರನ್ನೇ ಎತ್ತದಿರುವುದು ಆಶ್ಚರ್ಯ. ಶಬ್ದಮಣಿದರ್ಪಣ ಮತ್ತು ಕರ್ನಾಟಕ ನಿಘಂಟುಗಳು ಕ್ರಮವಾಗಿ 'ಚತ್ತಾಣಮೆಂದು

೬೪. ಕಿಟೆಲ್ ನಿಘಂಟು, ಪು. ೧೪೩೩. (ಪ್ರ.ಕ. ೪೪-೪ ಪು. ೮೯)

೬೫. ಚತ್ತಾಣ ಮತ್ತು ಬೆದಂಡೆ (ಪ್ರ.ಕ. ೪. ೪೪-೪ ಪು. ೮೯-೯೦)

೬೬. ಚತುರಾಸ್ಯನಿಘಂಟು ಪದ್ಯ ೧೦೧

ಕಾವ್ಯಂ', 'ಚತ್ತಾಣಂ ಕೃತಿಭೇದಂ' ಎನ್ನುತ್ತ 'ಬೆದಂಡೆಯೆಂದು ವೈದಂಡಿಕಂ', 'ಬೆದಂಡೆ ವೈದಂಡಿಕ ನಾಮಧೇಯದೊಳೆ' ಎಂದು ವಾದ್ಯಕ್ಕೂ ಅರ್ಥ ಬರುವಂತೆ ಹೇಳಿ ದಾಟಿವೆ. ಮಿಕ್ಕ ಕೃತಿಗಳಲ್ಲಿ ಕಾವ್ಯಜಾತಿ, ವಾದ್ಯವಿಶೇಷ ಎಂಬ ಅರ್ಥಗಳಲ್ಲಿ ಈ ಪದ ಬಳಕೆಯಾಗಿದೆ. ಈಗ ಬೆದಂಡೆಯ ಬಗೆಗೆ ವಿವರಗಳನ್ನು ಒದಗಿಸುವ ಕಾವ್ಯಾವಲೋಕನದ ಪದ್ಯಗಳನ್ನು ಮೊದಲು ಎತ್ತಿಕೊಳ್ಳಬಹುದು.

ಸಂದಿಸಿರೆ ಕಂದಮುಂ ಪೆಜಿ।ತೊಂದಜೆಕೆಯ ವೃತ್ತಜಾತಿಯುಂ ಪದಮವು ತ ।
ಳ್ತೊಂದಿರೆ ಪನ್ನೆರಡುವರಂ । ಸಂದುದು ಮೆಲ್ವಾಡೆನಿಕ್ಕುಮದು ಕನ್ನಡದೊಳ್ ॥[67]

ಪದಿನಯ್ದುಮಿರ್ಪತಯ್ದುಂ । ಪದಂ ಯಥಾಸಂಭವಂ ಪ್ರಬಂಧದ ಮೆಯ್ಯೊಳ್ ।
ಪುದಿದೊದವಿ ನೆಗಟ್ಪೊಡಂತದು । ಸದಲಂಕಾರಂ ರಸಾಸ್ಪದಂ ಪಾಡಕ್ಕುಂ ॥[68]

ಪಾಡುಗಳಿಂದಂ ತಜೆಸಲೆ । ಮಾಡಿದುದಂ ಪಾಡುಗಬ್ಬಮೆಂದು ಬುಧರ್ ಕೊಂ ।
ಡಾಡುವರದಜೆಂ ದಲ್ ಮೇ । ಲ್ವಾಡುಂ ರೂಢಿಯ ಬೆದಂಡೆಗಬ್ಬಮುಮಕ್ಕುಂ ॥[69]

ಇಲ್ಲಿ ಕೊನೆಯ ಪದ್ಯದ 'ಪಾಡುಗಬ್ಬ', 'ಮೇಲ್ವಾಡು', 'ಬೆದಂಡೆಗಬ್ಬ'ಗಳ ನಿರ್ದಿಷ್ಟ ಸ್ವರೂಪ, ಅವುಗಳ ಪರಸ್ಪರ ಸಂಬಂಧ ಸ್ಪಷ್ಟವಾಗುವುದಿಲ್ಲ. 'ಪಾಡುಗಬ್ಬದೊಳಗೆ ಮೇಲ್ವಾಡು ಬೆದಂಡೆಗಬ್ಬ ಎಂಬ ಭೇದಗಳಿದ್ದಂತೆ ತೋರುತ್ತಿದೆ,'[70] ಎಂದು ಶ್ರೀ ಮುಳಿಯ ಅವರ ಮತ. ತೀ.ನಂ.ಶ್ರೀ ಅಭಿಪ್ರಾಯವೂ ಇದೇ ರೀತಿಯಾಗಿದೆ.[71] ಆರ್. ನರಸಿಂಹಾಚಾರ್ ಅವರು ಮಾತ್ರ "Bedande (Sanskrit vaidandika) is only another name for melvadu"[72] ಎಂದು ಊಹಿಸುತ್ತಾರೆ. ಆದರೆ ಇಲ್ಲಿ ಉಭಯ ಸಮುಚ್ಚಯಗಳಿರುವುದರಿಂದ ಶ್ರೀ ಮುಳಿಯ, ತೀ.ನಂ. ಶ್ರೀ. ಅವರಂತೆ ಮೇಲ್ವಾಡು ಮತ್ತು ಬೆದಂಡೆಗಬ್ಬ ಭಿನ್ನಪ್ರಕಾರಗಳೆನ್ನಬಹುದು.

ಇಲ್ಲಿಯ "ಸಂದಿಸಿರೆ ಕಂದಮುಂ ಪೆಜಿತೊಂದಜೆಕೆಯ ವೃತ್ತಜಾತಿಯುಂ ಪದಂ"ಎಂಬ ವಾಕ್ಯಕ್ಕೆ "ಕಂದವೂ ಪ್ರಸಿದ್ಧವಾದ (ಅಜಿಕೆಯ) ಬೇರೊಂದು ವೃತ್ತಜಾತಿಯೂ ಜೊತೆಗೂಡಿ ಬಂದರೆ 'ಪದ'ವಾಗುತ್ತದೆ"[73] ಎಂದು ವಿವರಣೆ ನೀಡಿದ ತೀ.ನಂ. ಶ್ರೀ. ಅವರು, ಜೊತೆಗೂಡಬೇಕಾದುದು ಅಕ್ಷರವೃತ್ತವೋ ಅಂಶವೃತ್ತವೋ ಸ್ಪಷ್ಟಪಡಿಸಿಲ್ಲ. ಮುಳಿಯ ಅವರು ಮಾತ್ರ "ಇದು ದೇಸಿಯಾದುದರಿಂದ 'ವೃತ್ತಜಾತಿಯುಂ' ಎಂದರೆ ವೃತ್ತರೂಪದಲ್ಲಿ ಒಂದಿಷ್ಟು ದೀರ್ಘವಾದ ಅಕ್ಕರ ಪಿರಿಯಕ್ಕರವೇ ಮೊದಲಾಗಿ 'ಜಾತಿ'ಯಲ್ಲಿ ಸೇರಿದ ಛಂದೋಭೇದವೇ ಆಗಿರಬೇಕಲ್ಲದೆ ಸಂಸ್ಕೃತದ ಅಕ್ಷರಛಂದಸ್ಸಿನ ವೃತ್ತವಾಗಿರಲಾರದು"[74] ಎನ್ನುತ್ತಾರೆ. ಹೀಗೆ ಕಂದದ ಜೊತೆ ಯಾವ ವೃತ್ತವಿರಬೇಕೆಂಬುದು ಅನಿಶ್ಚಯವಾಗಿರುವಾಗ,

ಕಂದಮುಮಮಳಿನ ವೃತ್ತಮು। ಮೊಂದೊಂದೆಡೆಗೊಂಡು ಜಾತಿಜಾಣೆಸೆಯೆ ಬೆಡಂ।
ಗೊಂದಿವಜೊಳಮರೆ ಪೇಟಿಲ್ । ಸುಂದರ ರೂಪಿಂ ಬೆದಂಡೆಗಬ್ಬಮದಕ್ಕುಂ ॥[75]

---

೬೭. ಕಾ.ಲೋ. ಪ. ೯೫೨

೬೮. ಕಾ.ಲೋ. ಪ. ೯೫೩

೬೯. ಕಾ.ಲೋ. ಪ. ೯೫೪

೭೦. ಕ.ಮಾ. ವಿವೇಕ ಪು. ೧೨೧:ಪಾರ್ತಿಸುಬ್ಬ ಪು. ೩೭

೭೧. ಚತ್ತಾಣ ಮತ್ತು ಬೆದಂಡೆ (ಪ್ರ.ಕ. ೪೪-೪ ಪು. ೮೭)

೭೨. ಕಾ. ಲೋ. Intr. lv.

೭೩. ಚತ್ತಾಣ ಮತ್ತು ಬೆದಂಡೆ (ಪ್ರ.ಕ. ೪೪-೪. ಪು. ೮೬-೮೭)

೭೪. ಕನ್ನಡನಾಡೂ ದೇಸೀಸಾಹಿತ್ಯವೂ, ಪು. ೩೧

೭೫. ಕ.ಮಾ. ೧-೩೪

ಎಂಬ ಕವಿರಾಜಮಾರ್ಗದ ಪದ್ಯವನ್ನಾಧರಿಸಿ ಇದರಲ್ಲಿ ಕಂದ, ವೃತ್ತ ಮತ್ತು ಜಾತಿ ಎಂಬ ತ್ರಿವಿಧ ಮಟ್ಟುಗಳಿರಬೇಕೆಂದು ಡಾ. ಕೆ. ಕೃಷ್ಣಮೂರ್ತಿಗಳು,[೨೬] ಕಂದ ಮತ್ತು ಒಂದೇ ಜಾತಿಯ ವೃತ್ತ ಎಂಬ ದ್ವಿವಿಧ ಮಟ್ಟುಗಳಿರಬೇಕೆಂದು ಶ್ರೀ ಮುಳಿಯ[೨೭] ತೀ.ನಂ.ಶ್ರೀ[೨೮] ಹೇಳುತ್ತಾರೆ. ಉಭಯ ಪಕ್ಷಗಳಿಗೆ ತಂತಮ್ಮ ಆಧಾರಗಳಿರುವುದರಿಂದ ಕೊನೆಯ ವರೆಗೂ ಕಂದದ ಜೊತೆ ಒಂದೇ ವಿಧದ ವೃತ್ತವಿರಬೇಕೋ, ಒಂದೊಂದು ವಿಧದ ವೃತ್ತವಿರಬೇಕೋ? ಈ ವೃತ್ತವೆಂಬುದು ಜಾತಿಛಂದಸ್ಸಿನದೋ, ಅಕ್ಷರ ಛಂದಸ್ಸಿನದೋ, ಉಭಯವೋ? ಎಂಬ ನಿರ್ಣಯಕ್ಕೆ ಬರುವುದು ಈಗಿನ ಮಟ್ಟಿಗೆ ಸಾಧ್ಯವಿಲ್ಲ. ಇಷ್ಟು ಹಿನ್ನೆಲೆಯಲ್ಲಿ ಕೆಳಗಣ ಸಂಗತಿಗಳನ್ನು ಸಂಗ್ರಹಿಸಬಹುದು.

ಒಂದು ಕಂದ, ಒಂದು ವೃತ್ತ (ಅಕ್ಷರ?ಅಂಶ?)ಗಳ ಒಂದು ಜೊತೆ ಪದ; ಇದು ಮೂಲಘಟಕ. ಈ ಘಟಕದ ಸಂಖ್ಯಾಪ್ರಮಾಣವನ್ನನುಸರಿಸಿ ಮೆಲ್ವಾಡು ಪಾಡು ಪಾಡುಗಬ್ಬ ಮೇಲ್ವಾಡು ಬೆದಂಡೆಗಬ್ಬಗಳಾಗುತ್ತವೆ. ಇವುಗಳಲ್ಲಿ ಪದ ಎರಡು, ಮೆಲ್ವಾಡು ಇಪ್ಪತ್ನಾಲ್ಕು, ಪಾಡು ಮೂವತ್ತು ಇಲ್ಲವೆ ಐವತ್ತು ಪದ್ಯಗಳನ್ನೊಳಗೊಂಡಿರುತ್ತವೆ. ಈ ಪಾಡುಗಳಿಂದ ಪಾಡುಗಬ್ಬ, ಈ ಪಾಡುಗಬ್ಬದಿಂದ ಮೇಲ್ವಾಡು ಮತ್ತು ಬೆದಂಡೆಗಬ್ಬಗಳು ರೂಪತಾಳುತ್ತವೆ ಎಂದು ನಾಗವರ್ಮನ ಮತ. ಆದರೆ ಈ ಮೇಲ್ವಾಡು, ಬೆದಂಡೆಗಬ್ಬಗಳ ವ್ಯಾಪ್ತಿಯನ್ನು ಯಾರೂ ಹೇಳಿಲ್ಲ. ತೀ.ನಂ. ಶ್ರೀ ಮಾತ್ರ,

ಕಱು ತಡೆದತ್ತು ಕಂಚನುಣಲೂಮನೆಯೂಕೆಗಳುಯ್ದರಕ್ಕ ಮಿಂ
ದೆಱೆಯಪನಾಱೆದಪ್ಪನಸಗಂ ಮಡಿದಾರನೆ ಕೂಸನೇತಕೆಂ।
ದಱೆಯೆನದೊಂದು ಸೋಂಕಿದುದು ಪಾಡುವರಲ್ಲಿ ಬೆದಂಡೆ ತೊತ್ತನೆ
ತ್ತಱೆಸುವೆನೆಂದು ಪೋಪ ನೆವಮಂ ಸಮಕಟ್ಟುವರಲ್ಲಿ ಪಾಣ್ಬೆಯರ್ ॥[೨೯]

ಎಂಬ ಪದ್ಯವನ್ನವಲಂಬಿಸಿ "ಜಾರಸ್ತ್ರೀಯರು ಮನೆಯಿಂದ ಹೊರಬಿದ್ದ ಕೆಲಹೊತ್ತಿನಲ್ಲಿ-ಅತಿ ಶೀಘ್ರವಲ್ಲದ ಅತಿ ವಿಳಂಬವಲ್ಲದ ಕಾಲಾವಧಿಯಲ್ಲಿ- ಹಿಂದಿರುಗಬೇಕಾದ ಸಂದರ್ಭವಿದು. ಮೇಯಲು ಹೋಗಿ ಇನ್ನೂ ಹಿಂದಕ್ಕೆ ಬಾರದ ಕರುವನ್ನು ಹುಡುಕುವದು, ಅತಿ ಸಮೀಪವೂ ಅತಿದೂರವೂ ಅಲ್ಲದಿರುವ ಮನೆಯ ಹೆಂಗಸರು (ಊಮನೆಯ ಊಕೆಗಳ್) ತೆಗೆದುಕೊಂಡು ಹೋಗಿದ್ದ ತಳಿಗೆಯನ್ನು ಹಿಂದಕ್ಕೆ ಪಡೆದು ತರುವುದು, ತಡಮಾಡಿದ ಅಗಸನ ಮನೆಯಿಂದ ಮಡಿಬಟ್ಟೆಯನ್ನು ತರುವುದು-ಇಂಥ ಮಧ್ಯಪರಿಮಿತಿಯ ಕಾಲದ ಕಾರ್ಯಗಳ ಸಾಲಿಗೆ ಬೆದಂಡೆಯ ಹಾಡಿಕೆಯನ್ನು ಕೇಳಿಕೊಂಡು ಬರುವುದೂ ಸೇರುತ್ತದೆ. ಇದರಿಂದ ಒಂದು ಬೆದಂಡೆ ಸಾಮಾನ್ಯವಾಗಿ ಎಷ್ಟು ಉದ್ದವಾಗಿರಬಹುದು ಎಂಬುದನ್ನು ಅರಿಯಲು ಸೂಚನೆಯೂ ದೊರೆಯುತ್ತದೆಯಲ್ಲವೆ! ಅದು ಅತಿಹೃಸ್ವವೂ ಅತಿದೀರ್ಘವೂ ಅಲ್ಲದ ಕೃತಿಯಾಗಿದ್ದಿರಬೇಕು"[೩೦] ಎಂದು ಊಹಿಸುತ್ತಾರೆ. ಆದರೆ ಇಲ್ಲಿ ಕವಿಗೆ ಮುಖ್ಯವಾದುದು ಕಾಲಾವಧಿಯಲ್ಲ, ಹೊರಗೆ ಹೋಗುವ ಜಾರೆಯರು ಒಡ್ಡುವ ನೆವ. ಆದುದರಿಂದ ಇದು ಬೆದಂಡೆಯ ಗಾತ್ರದ ಸೂಚನೆಯೆನ್ನುವುದಕ್ಕಿಂತ, ಅದರ ಜನಪ್ರಿಯತೆಯ ದ್ಯೋತಕವೆಂದು ಭಾವಿಸುವುದು ಹೆಚ್ಚು ಸಾಧು.

---

೨೬. ಕ. ಕಾವ್ಯತತ್ತ್ವ ಪು. ೩೧

೨೭. ಕ.ಮಾ. ವಿವೇಕ, ಪು. ೧೨೦ ಕನ್ನಡನಾಡೂ ದೇಸಿ ಸಾಹಿತ್ಯವೂ ಪು. ೩೧ ಪಾರ್ತಿಸುಬ್ಬ ಪು. ೩೪.

೨೮. ಚತ್ತಾಣ ಮತ್ತು ಬೆದಂಡೆ (ಪ್ರ.ಕ. ೪೪-೪ ಪು. ೮೭-೮೮)

೨೯. ಸೂಕ್ತಿ, ೮-೧೩೪

೮೦. ಚತ್ತಾಣ ಮತ್ತು ಬೆದಂಡೆ (ಪ್ರ.ಕ. ೪೪-೪ ಪು. ೮೮)

ಕನ್ನಡದೊಳ್ ಚಂಪೂಕೃತಿ। ಸನ್ನುತತರ ವಚನಕಾವ್ಯಮೆನಿಕುಂ ಚತ್ತಾ।
ಣಂ ನೆಜಿ ವೈದಂಡಕಮೆನೆ। ಸನ್ನುತಿಯಂ ಸರ್ಗಬಂಧಕೃತಿ ತಳೆದಿರ್ಕುಂ॥[೮೧]

ಎಂಬ ಉದಯಾದಿತ್ಯನ ಹೇಳಿಕೆಯಂತೆ ವೈದಂಡಕ ಸರ್ಗಬಂಧಕೃತಿ, ಅಂದರೆ ಮಹಾಕಾವ್ಯ. ಜನ್ನನ "ಮುಕ್ತಕಂ, ಕುಲಕಂ, ಕೋಶಂ, ಸಂಘಾತಂ ಎಂಬ ರಚನಾವೈಚಿತ್ರ್ಯ ಚಿತ್ರಾಯತನ ವೈದಂಡಿಕ ಪ್ರಬಂಧ ಬಂಧುರಪದ್ಯಬಂಧ"[೮೨] ಎಂಬ ವಾಕ್ಯವೂ ಇದನ್ನು ಬೆಂಬಲಿಸುವುದರಿಂದ, ಈ ಕಾವ್ಯಜಾತಿ ತೀ.ನಂ. ಶ್ರೀ ಹೇಳುವಂತೆ ಹ್ರಸ್ವವಲ್ಲ, ದೀರ್ಘ.[೮೩]

ಎರಡು ವಿಧದ ಪದ್ಯಗಳ ಪುನರಾವೃತ್ತಿಯಲ್ಲಿ ಮುನ್ನಡೆವ ಬೆದಂಡೆ, ಹಾಡಲು ಯೋಗ್ಯವಾದ ಬಂಧ. ಅದರ ಮೂಲ ಮೆಟ್ಟಲುಗಳಾದ ಪದ, ಮೆಲ್ವಾಡು, ಪಾಡು, ಪಾಡುಗಬ್ಬ, ಮೇಲ್ವಾಡು ಎಂಬ ಹೆಸರುಗಳಲ್ಲಿ ಈ ಗೇಯಗುಣದ ಸೂಚನೆಯನ್ನು ಕಾಣಬಹುದು. ಕಬ್ಬಿಗರಕಾವದಲ್ಲಿ ಜೊನ್ನವಕ್ಕಿಯೊಂದು "ಆತಂ ಬೆದಂಡೆಯೊಳಾದೊಡಂ ಪಾಡೆಂಬುದಂ...... ಸೈರಿಸಂ"[೮೪] ಎಂದು ಶಿವನಿಗೆ ಅರಸಿಕತೆಯನ್ನು ಆರೋಪಿಸುವುದು, ಬೆದಂಡೆಯ ಗೀತಗುಣವನ್ನು ಎತ್ತಿ ಹೇಳುತ್ತದೆ. ಇದಕ್ಕೆ ಸೂಕ್ತಿಸುಧಾರ್ಣವದ 'ಬೆದಂಡೆಯಂ ಪಾಡುವರಲ್ಲಿ' ಎಂಬುದೂ ಪುಷ್ಟಿನೀಡುತ್ತದೆ. ಅರಮನೆಯ ಕಾವ್ಯಗೋಷ್ಠಿಯಿಂದ ವಂಚಿತರಾದ ಜನತೆಯನ್ನು ನಿತ್ಯತೃಪ್ತಿಗೊಳಿಸುವ ಬಂಧವಾಗಿರಬಹುದಾದ ಈ ಪ್ರಕಾರವನ್ನು ಶ್ರೀ ವಿಜಯಾದಿಗಳು ಸತ್ವತುಂಬಿ ಮಹಾಕಾವ್ಯದ ಸಾಲಿಗೆ ನಿಲ್ಲಿಸಿರಬೇಕು. 'ನಿರತಿಶಯ ವಸ್ತುವಿಸ್ತರವಿರಚನೆ' ಎನಿಸಿದ ಇದರ ವಸ್ತು ಸಣ್ಣದು, ಆದರೆ ವರ್ಣನೆಗಳಿಂದ ಮೈದುಂಬಿಕೊಂಡ ಈ ಕೃತಿ 'ನೆಗಟ್ತೆಯ ಕಬ್ಬಂ', 'ಸದಲಂಕಾರಂ ರಸಾಸ್ಪದಂ', 'ಬುಧರ್ ಕೊಂಡಾಡುವರ್' ಎಂಬ ಸಿದ್ಧಿ-ಪ್ರಸಿದ್ಧಿಗಳನ್ನು ಗಳಿಸಿರಬೇಕು.

ಬೆದಂಡೆಯನ್ನು ಕುರಿತು ಡಾ. ಚಿದಾನಂದಮೂರ್ತಿಯವರು ಎರಡು ಹೊಸ ಅಭಿಪ್ರಾಯಗಳನ್ನು ಮಂಡಿಸಿದ್ದಾರೆ.[೮೫]

೧. ಇದು ಚಂಚಲಸ್ವಭಾವದ ಅಥವಾ ಲಘುಸ್ವಭಾವದ ಜನರಿಗೆ ಪ್ರಿಯವಾಗಿದ್ದಿತು. (ಆ ಕಾಲದವರು ಬೆದಂಡೆಯನ್ನು 'ಅಶ್ಲೀಲಸಾಹಿತ್ಯ'ಕ್ಕೆ ಸೇರಿಸಿದ್ದರೆಂದು ಕಾಣುತ್ತದೆ.)

೨. ಬೆದಂಡೆಯನ್ನು ಹಾಡುವವರು ಗೌರವಸ್ಥ ಜನರಲ್ಲ. ಅದನ್ನು ಹಾಡುವುದು ಕೇಳುವುದು ಎರಡೂ ಮರ್ಯಾದೆ ತರತಕ್ಕುವಲ್ಲ.

ಬೆದಂಡೆಗಬ್ಬದ ವಸ್ತು ಅಶ್ಲೀಲ; ಹಾಡುವವರು (ಕರ್ತೃ?) ಕೇಳುವವರು ಕೀಳು ಮನೋಧರ್ಮದವರು ಎಂಬ ಅಭಿಪ್ರಾಯಕ್ಕೆ ಬರಲು ಅವರಿಗೆ ಕೆಳಗಣ ಪದ್ಯಗಳು ಪ್ರಚೋದನೆ ನೀಡಿವೆ;

---

೮೧. ಉದಯಾದಿತ್ಯಾಲಂಕಾರ, ಪದ್ಯ ೬.

೮೨. ಅನಂತನಾಥಪುರಾಣ. ೧೦-೨೮ ವಚನ.

೮೩. ಮೂಲದಲ್ಲಿ ಜನಸಾಮಾನ್ಯರ ಕೈಯಲ್ಲಿರುವಾಗ ಹ್ರಸ್ವವಿರಬಹುದು. ಆದರೆ ಕವಿಗಳ ಹಸ್ತವನ್ನು ಹಬ್ಬಿನಿಂತು, ಅದು ಪ್ರೌಢವಾಗಿರಬೇಕು; ದೀರ್ಘಗೊಂಡಿರಬೇಕು. ಅದರ ಗಾತ್ರದ ಬಗೆಗೆ ಮಾತನಾಡುವಾಗ ಈ ಅಂಶವನ್ನು ಮರೆಯಕೂಡದು.

೮೪. ಕ.ಕಾವ ೧೧೬ ವ.

೮೫. ಸಂ. ತರಂಗ, ಪು. ೨೪೩

ಬೀಣೆಯ ಕೊಟಲ ಬೆದಂಡೆಯ । ಗಾಣರ ಬಟೆವಿಡಿದು ಸುಟೆದು ಕುಂ[ದಿಂ]ಕಥಕ।
ಶ್ರೇಣಿಯೊಡನೆಳಸಿ ಬಳಸುವ । ನಾಣಿಲಿಗಳನೀ ಬುಧಾಳಿಯೊಳ್ ಪುಗಿಸುವುದೇ ॥[೮೬]

ಕನ್ನಡಸಾಹಿತ್ಯದಲ್ಲಿ ಮಾರ್ಗ-ದೇಸಿಗಳೆರಡನ್ನೂ ಮನ್ನಿಸಿದವರಿಗಿಂತ, ಮಾರ್ಗವನ್ನು ಮೆಚ್ಚಿ ದೇಸಿಯನ್ನು ದೂಷಿಸಿದವರು ಹೆಚ್ಚು. "ಪಂಡಿತರುಂ ವಿವಿಧಕಳಾಮಂಡಿತರುಂ......." ಎಂಬ ಮಧುರನ ನಿಂದೆ ಇದಕ್ಕೆ ನಿಚ್ಚಳ ನಿದರ್ಶನ. ಮೇಲಣ ಪದ್ಯದಲ್ಲಿ ಮಾರ್ಗಸಾಹಿತ್ಯದ ಪಕ್ಷಪಾತವಹಿಸಿ ಮಧುರನಂತೆ ದೇಸಿಯನ್ನು ನಿಂದಿಸಿದಂತಿದೆ. ಅದಕ್ಕಾಗಿ ದೇಸಿಸಾಹಿತ್ಯದ ಅಕಾರಣ ದೂಷಣೆಯಲ್ಲಿ ಅಂಕುರಿಸಿ, ಆತ್ಮಸ್ತುತಿ ಪರನಿಂದೆಗಳಲ್ಲಿ ಪಲ್ಲವಿಸಿದ ಈ ಪದ್ಯದ ಅಭಿಪ್ರಾಯವನ್ನು ಸಾರ್ವತ್ರಿಕವೆಂದು ಭಾವಿಸುವುದು ತಪ್ಪು. ಮೇಲಾಗಿ ಬೆದಂಡೆಗಬ್ಬವನ್ನು ಉದ್ದೇಶಿಸಿ ಹೇಳಿದುದೆಂಬ ಸ್ಪಷ್ಟ ಅರ್ಥವೂ ಇದರಿಂದ ಹೊರಡುವುದಿಲ್ಲ.

ಕೊಟಲ ಬೆಡಂಬೆ (ಬೆದಂಡೆ) ಯ ಪಗರಣ। ದಟೆಗಳ ಪರದ್ಯೆವ ಮಾಡುವವರ್ಗಳ ಮಾತಿಂ ।
ಗುಟೆಪರ ಜಾತೆಯವರ್ಗಳ । ತುಟೆಗಳ ದೆಸೆಬೋಗಲೀಯಲಾಗದು ವಧುವಂ ॥[೮೭]

ಈ ಪದ್ಯದಲ್ಲಿಯ ಪಾಠ ಬೆಡೆಂಬೆ; ಶ್ರೀಮೂರ್ತಿಯವರು ಊಹಿಸಿದ ಪಾಠ ಬೆದಂಡೆ. ಅದಕ್ಕಾಗಿ ಬೆದಂಡೆ ಎಂಬ ಪಾಠ ಸಿಗುವ ವರೆಗೆ ಈ ಪದ್ಯದಿಂದ ವ್ಯಕ್ತವಾಗುವ ಯಾವುದೇ ಅರ್ಥ ಸಂದೇಹದಲ್ಲಿ ನಿಲ್ಲುತ್ತದೆ. ಇನ್ನು ಇಲ್ಲಿ ಕೊಳಲು, ಬೆದಂಡೆ ಮೊದಲಾದ ವಾದ್ಯಗಳನ್ನು ನುಡಿಸುವ ವ್ಯಕ್ತಿಗಳ ನಿಂದೆಯಿದೆಯೇ ಹೊರತು, ಬೆದಂಡೆಗಬ್ಬದ ಕವಿ ಇಲ್ಲವೆ ವಸ್ತುಗಳು ಕೀಳು ಎಂಬ ನಿಂದೆಯಿಲ್ಲ. ಈ ಹೇಳಿಕೆಯನ್ನು ಬೆದಂಡವಾದಕನಿಗೆ ನಿಲ್ಲಿಸದೆ ಕವಿ ಕಾವ್ಯಗಳಿಗೆ ಎಳೆದು ತಂದುದು ಒಪ್ಪದ ಮಾತು. ಇದು Lyre ವಾದಕನ ಕೀಳ್ಮೆಯನ್ನು Lyricಗೂ ಅನ್ವಯಿಸಿದಂತಾಗಿದೆ.

ಶೌಂಡಿಕನೆನೆ ಕಳ್ಳ(ವಳಂ) । ಭಂಡ ನಗಾರಿ (ನಗ್ಗಾರಿ)ಯಂ ಬೆದಂಡೆಯವಂ ವೈ।
ತಂಡಿಕನಜೆ ಕುಹಕತೆಯಂ। ಕೊಂಡಾಡುವನಿಂದ್ರಜಾಲಿಕಂ ತಾನಕ್ಕುಂ ॥[೮೮]

ಶಬ್ದಾರ್ಥವನ್ನು ಹೇಳುವ ಅಭಿಧಾನ ವಸ್ತುಕೋಶದ ಈ ಪದ್ಯದಲ್ಲಿ ಅಪನಂಬಿಕೆಯವರ ಪಟ್ಟಿಯಿದೆ. "ಬೆದಂಡೆಯವಂ ವೈತಂಡಿಕಂ" ಎಂಬಲ್ಲಿ ಬೆದಂಡೆವಾದ್ಯವನ್ನು ನುಡಿಸುವವ, ಬೆದಂಡೆಗಬ್ಬವನ್ನು ಕಟ್ಟುವವ, ಬೆದಂಡೆಗಬ್ಬವನ್ನು ಹಾಡುವವ ಎಂಬ ಮೂರು ಅರ್ಥಗಳಿವೆ. ಇಲ್ಲಿ ಉದ್ದಿಷ್ಟವಾದ ಅರ್ಥ ಯಾವುದೆಂಬುದನ್ನು ಮೊದಲು ನಿರ್ಣಯಿಸಬೇಕು. ಇಲ್ಲದಿದ್ದರೆ ಪದಸಾಮ್ಯದಿಂದ ನೀಡಿದ ತಪ್ಪು ತೀರ್ಮಾನ ಘಟಿಸುತ್ತದೆ. ಗಾಯಕ ನಟ ವಾದಕ ಮೊದಲಾದವರನ್ನು ಕುರಿತು, ಕಲಾವಿದರು ಚರಿತ್ರಹೀನರು ಎನ್ನುವ ಹೊಣಗೇಡಿ ಅಭಿಪ್ರಾಯ[೮೯] ಈಗಿನಂತೆ ಆಗಲೂ ಇರಬಹುದು. ಇಂತಹ ಕಲುಷಿತ ಅಭಿಪ್ರಾಯವನ್ನು ಆಧರಿಸಿ ಬೆದಂಡೆಯ ವಾದಕರು, ಕವಿಗಳು, ಹಾಡುವವರು ಗೌರವಸ್ಥರಲ್ಲ ಎಂಬ ನಿರ್ಣಯಕ್ಕೆ ಬರುವುದು ಸರಿಯಲ್ಲವೆನಿಸುತ್ತದೆ.

---

೮೬. ಸು. ಚರಿತಂ. ೨-೨೪

೮೭. ಮ. ತಿಲಕ. ೮-೨೯

೮೮. ಅ. ವಸ್ತುಕೋಶ. ಪು. ೬೬ ಮತ್ತು ೨೬೬

೮೯. "ಗಂದಿಗಂ...... ಜೋಯಿಸಿಗಂ ಸಂದಟಿಕೆಯ ಕಬ್ಬಿಗಂ ಸಮಂಜಸನೊಳನೇ" (ಶ.ಮ.ದ. ೨೦೮) ಎಂಬಲ್ಲಿ ಕವಿಯ ಶುಚಿತ್ವವನ್ನೂ ಪ್ರಶ್ನಿಸಲಾಗಿದೆ.

ಸೂಕ್ತಿಸುಧಾರ್ಣವದಲ್ಲಿ ಜಾರಸ್ತ್ರೀ ತನ್ನ ವಿಟನ ಬಳಿಗೆ ಹೋಗಲು ಒಡ್ಡುವ ನೆವಗಳಲ್ಲಿ 'ಪಾಡುವರಲ್ಲಿ ಬೆದಂಡೆಯಂ' ಎಂಬುದೂ ಒಂದು. ಇದರಿಂದ ಬೆದಂಡೆಗಬ್ಬ ಅಶ್ಲೀಲಸಾಹಿತ್ಯವೆಂದು ಅರ್ಥವಲ್ಲ, ಪಂಡಿತರ ಕಾವ್ಯಗಳಿಂದ ವಂಚಿತರಾದ ಬಹುಸಂಖ್ಯ ಜನರಿಗೆ ಪ್ರಿಯವಾದ ಕಾವ್ಯವೆಂದು ಅರ್ಥ. ಇಲ್ಲದಿದ್ದರೆ ಇದೇ ರೀತಿ ಜನಪ್ರಿಯವಾದ ಪುರಾಣ ಪುಣ್ಯಕಥೆಗಳನ್ನೂ ಅಶ್ಲೀಲಸಾಹಿತ್ಯವೆನ್ನಬೇಕಾದೀತು. ಒಂದು ವೇಳೆ ಅಶ್ಲೀಲವಾಗಿದ್ದರೆ ಮಾರ್ಗಕಾರನು 'ನೆಗೞ್ತೆಯ ಕಬ್ಬ'ವೆಂದು, ನಾಗವರ್ಮನು 'ಬುಧರ್ ಕೊಂಡಾಡುವರ್' ಎಂದೂ ಹೇಳುತ್ತಿರಲಿಲ್ಲ.[೯೦] ಅಲ್ಲದೆ 'ಪರಮ' ಎಂಬ ಪ್ರಸಿದ್ಧಿಗೆ ಪಾತ್ರರಾದ ಶ್ರೀವಿಜಯಾದಿಗಳ ಈ ಸಾಹಿತ್ಯ ಅಶ್ಲೀಲವೆಂದು ನಂಬುವುದೇ ಸಾಧ್ಯವಿಲ್ಲ.[೯೧] ಅದಕ್ಕಾಗಿ ಶ್ರೀಯುತರ ಮಾತಿನ ರೀತಿಯಲ್ಲಿಯೇ ಬೆದಂಡೆಗಬ್ಬವನ್ನು ಕುರಿತು ಕೆಳಗಣ ಅಭಿಪ್ರಾಯಗಳನ್ನು ಸಂಗ್ರಹಿಸಬಹುದು.

೧. ಇದು ಪಂಡಿತರ ಕಾವ್ಯಗೋಷ್ಠಿಯಿಂದ ವಂಚಿತರಾದ ಜನಸಾಮಾನ್ಯರಿಗೆ ಪ್ರಿಯವಾಗಿದ್ದಿತು. (ಆ ಕಾಲದ ಜನರು ಬೆದಂಡೆಯನ್ನು 'ಜನಪ್ರಿಯ ಸಾಹಿತ್ಯ'ಕ್ಕೆ ಸೇರಿಸಿದ್ದರೆಂದು ಕಾಣುತ್ತದೆ)

೨. ಕಲಾವಿದರು ಗೌರವಸ್ಥರಲ್ಲ ಎಂಬ ಅರ್ಥರಹಿತ ಭಾವನೆಯನ್ನು ಎಲ್ಲ ವಾದಕರ ಕೂಡ ಬೆದಂಡೆವಾದಕರಿಗೂ ಅನ್ವಯಿಸಿ ಹೇಳಿದುದನ್ನು ಬೆದಂಡೆಗಬ್ಬದ ವಸ್ತು, ಕವಿ, ಸಹೃದಯರಿಗೆ ಆರೋಪಿಸುವುದು ತೀರ ಎಳೆದುತಂದ ಅಭಿಪ್ರಾಯ. ಅದಕ್ಕಾಗಿ ಬೆದಂಡೆಯ ವಿಷಯವಾಗಿ ಶ್ರೀಯುತರು ನೀಡಿದ ಅಭಿಪ್ರಾಯ ಗ್ರಾಹ್ಯವಾದುದಲ್ಲ.[೯೨]

ಒಟ್ಟಿನಲ್ಲಿ ಕವಿರಾಜಮಾರ್ಗಕಾರ ಹೇಳಿದ ಗದ್ಯಕಥಾ ಮತ್ತು ಚತ್ತಾಣ-ಬೆದಂಡೆಗಳ ಲಕ್ಷಣಗಳನ್ನು ಹೀಗೆ ಪಟ್ಟಿಮಾಡಬಹುದು:

	ಗದ್ಯಕಥಾ	**ಚತ್ತಾಣ-ಬೆದಂಡೆಗಬ್ಬ**
೧.	'ಪ್ರಕಟತರವಸ್ತುವಿಸ್ತರ'-ವಸ್ತುಕ	'ನಿರತಿಶಯವಸ್ತುವಿಸ್ತರ'-ವರ್ಣಕ
೨.	ಗದ್ಯಮಹಾಕಾವ್ಯ	ಪದ್ಯಮಹಾಕಾವ್ಯಗಳು
೩.	ಪಂಡಿತಪ್ರಿಯ	ಜನಪ್ರಿಯ, ಬೆದಂಡೆ ಇನ್ನೂ ಜನಪ್ರಿಯ
೪.	(ಹೆಚ್ಚು) ಗದ್ಯ-(ಕಡಿಮೆ)ಪದ್ಯಮಿಶ್ರಣ	ವಿವಿಧ ಪದ್ಯಮಿಶ್ರಣ
೫.	ಮಾರ್ಗಮಹಾಕಾವ್ಯ	ದೇಸಿಮಹಾಕಾವ್ಯಗಳು, ಚತ್ತಾಣಕ್ಕೆ ಹೆಚ್ಚು ಒಪ್ಪುತ್ತದೆ.

---

೯೦. ನಾಗವರ್ಮನ ಅಭಿಪ್ರಾಯದಲ್ಲಿ ಪದ-ಮೆಲ್ಪಾಡು-ಪಾಡು-ಪಾಡುಗಬ್ಬ-ಮೇಲ್ಪಾಡು-ಬೆದಂಡೆಗಳು ಪರಸ್ಪರ ಸಂಬಂಧವುಳ್ಳ ಪ್ರಕಾರಗಳು. ಸೂಕ್ತಿಸುಧಾರ್ಣವದ 'ಮೆಲ್ಪಾಡಿನೊಳ್ಪಂತೆ ಕೂಡಿದ ನಾನಾರಸ ಸಾರದಾನಂ' (ಪು. ೧೧೮) ಈ ಮಾತು ಮೆಲ್ಪಾಡಿನ ಸೊಬಗನ್ನು ಸೂಚಿಸುವಂತೆ ಕಾಣುತ್ತದೆ.

೯೧. 'ದಂಡಿ (ಬೆದಂಡೆ)ಯೆಂಬ ಶಬ್ದ ವೈದಂಡಿಕದಲ್ಲಿಯುಂ ಒಳ್ಳಿತ್ತಜಿಲ್ಲಿಯುಂ' (ಮದ್ರಾಸ ಆವೃತ್ತಿ ಪು. ೩೧೧) ಎಂಬ ಹೇಳಿಕೆ ಅದರ ಒಳ್ಗುಣವನ್ನು ಹೇಳುವಂತಿದೆ.

೯೨. ಶ್ರೀವಿಜಯಾದಿಗಳ ಕೈಯಲ್ಲಿ ಉದ್ದೀಪನಗೊಂಡರೂ ಈ ಜಾತಿ ಸಾಮಾನ್ಯರ ಮಧ್ಯದಲ್ಲಿ ಕೆಲಮಟ್ಟಿಗೆ ಇನ್ನೂ ಉಳಿದಿರಬೇಕು. ೧೧-೧೨ನೆಯ ಶತಮಾನದ (ಚಂದ್ರರಾಜ, ಶಾಂತಿನಾಥ, ನಾಗವರ್ಮ) ಈ ಪಂಡಿತ ಕವಿಗಳು ಅದನ್ನು ತಿರಸ್ಕಾರದಿಂದ ಟೀಕಿಸಿರಬಹುದು.

ಈ ಗದ್ಯಕಥಾ ಮತ್ತು ಚತ್ತಾಣ-ಬೆದಂಡೆಗಳು ಕನ್ನಡಿಗರ ಎರಡು ಕಾವ್ಯದೃಷ್ಟಿಗಳು. ಒಂದು 'ಕಥೆ' ಯನ್ನವಲಂಬಿಸಿ 'ವಸ್ತುಕ'ವೆನಿಸಿ, ಗದ್ಯದತ್ತ ಒಲಿದು, ಮಾರ್ಗಮುಖಿಯಾಗಿ ನಡೆದರೆ ; ಇನ್ನೊಂದು 'ವರ್ಣನೆ'ಯನ್ನವಲಂಬಿಸಿ 'ವರ್ಣಕ'ವೆನಿಸಿ, ಪದ್ಯದತ್ತ ಒಲಿದು, ದೇಸಿಮುಖಿಯಾಗಿ ನಡೆದು ಬಂದಿತು. ಇವುಗಳನ್ನು ಒಂದುಗೂಡಿಸುವ ಸಾಹಸ ಕವಿರಾಜಮಾರ್ಗದ ಎಡಬಲದಲ್ಲಿ ನಡೆದು, "ವರ್ಣಕಂ ಕಥೆಯೊಳೊಡಂಬಡಂ ಪಡೆಯೆ ಪೇೞ್ವೊಡೆ ಪಂಪನೆ ಪೇೞ್ಗುಂ"[೯೩] "ದೇಸಿಯೊಳ್ ಪುಗುವುದು ಪೊಕ್ಕ ಮಾರ್ಗದೊಳೆ ತಳ್ವುದು"[೯೪] ಎಂಬ ಧೋರಣೆಯ ಪಂಪನಲ್ಲಿ ಸಮನ್ವಯಸಿದ್ಧಿ ಸಾಧ್ಯವಾಯಿತು.

ಪಗರಣ :

ಸಮಸ್ತ ಕನ್ನಡಸಾಹಿತ್ಯದಲ್ಲಿ ನಾಟಕಸೃಷ್ಟಿಯೊಂದು ನಿಗೂಢಮೌನವಾಗಿರುವಾಗ, ಕವಿರಾಜಮಾರ್ಗ ಪರಿಸರದಲ್ಲಿ ಅದರ ಅಸ್ತಿತ್ವವನ್ನು ಹುಡುಕುವುದು ಸಂಶೋಧನೆಯ ಹುಚ್ಚುಹವ್ಯಾಸವೆನಿಸುತ್ತದೆ. 'ಕರ್ನಾಟಕ' ಪದದಲ್ಲಿ 'ನಟ' ಸೂಚನೆಯಿದೆಯೆಂಬುದು ತೀರ ಕಾಲ್ಪನಿಕ.[೯೫] ಸೆಂಗುಟ್ಟನ್ ಚಕ್ರವರ್ತಿಯ ಎದುರು ನೀಲಗಿರಿ ಕನ್ನಡತಿಯರು ಪ್ರದರ್ಶಿಸಿದುದು ನರ್ತನವೇ ಹೊರತು ನಾಟಕವಲ್ಲ. ಬಾದಾಮಿ ಶಾಸನದ ಅಚಲನ್ ನರ್ತನನಿಪುಣನೇ ಹೊರತು ನಾಟಕದ ನಟನಲ್ಲ.[೯೬] ಕಣ್ಣಮಯ್ಯನ ಮಾಳವೀಮಾಧವ ನಾಟಕವಾಗಿರಬೇಕೆಂಬುದು ಊಹೆಯ ಎಳೆಗೆ ಜೋತುಬಿದ್ದ ಅಭಿಪ್ರಾಯ.[೯೭] ಅದಕ್ಕಾಗಿ ಈ ಯುಗದ ಲಿಖಿತನಾಟಕ ಸಾಹಿತ್ಯದ ಬಗೆಗೆ ತೀರ ನಿರಾಶೆ ಮೂಡುತ್ತದೆ.

ಕನ್ನಡದಲ್ಲಿ ಲಿಖಿತಸಾಹಿತ್ಯ ತಲೆಯೆತ್ತಲು ಸಂಸ್ಕೃತ ಪ್ರೇರಣೆ ನೀಡಿದುದು ಸತ್ಯ. ಆದರೆ ಸಂಸ್ಕೃತದ ನಾಟಕಸಾಹಿತ್ಯ "ಕ್ರಿಸ್ತಶಕ ಒಂದನೆಯ ಶತಮಾನದ ಸುಮಾರಿನಲ್ಲಿ ಹುಟ್ಟಿ, ಐನೂರು ವರುಷ ಬೆಳೆದು ಪ್ರವರ್ಧಮಾನವಾಗಿ, ಆಮೇಲೆ ಇನ್ನು ಐನೂರು ವರುಷ ಇಳಿಮುಖವಾಗುತ್ತ ಬಂದಿತು"[೯೮] ಎಂಬ ಅಭಿಪ್ರಾಯವನ್ನು ನೆನೆದರೆ, ಸಂಸ್ಕೃತ ನಾಟಕಸಾಹಿತ್ಯದ ಕಾವು ಇಳಿಯುವುದಕ್ಕೂ ಕನ್ನಡಸಾಹಿತ್ಯ ಕಣ್ಣು ತೆರೆಯುವುದಕ್ಕೂ ಕೊಂಚ ಹೆಚ್ಚುಕಡಿಮೆ ಸರಿ ಹೋಯಿತೆಂದು ಕಾಣುತ್ತದೆ. ಆದುದರಿಂದ ಕನ್ನಡಿಗರು ಕಾಲ ಮುಗಿದುಹೋದ ನಾಟಕದ ಬಗೆಗೆ ಹೊರಳಿ ನೋಡದೆ, ಮೈಮುರಿದು ಮುನ್ನಡೆಯುತ್ತಿದ್ದ ಕಾವ್ಯಸೃಷ್ಟಿಯ ಕಡೆಗೆ ಗಮನ ಹರಿಬಿಟ್ಟಿರಬೇಕು. ಅಂದರೆ ನಾಟಕವನ್ನು ಉಪೇಕ್ಷಿಸಿ ಸಂಸ್ಕೃತದ ಗದ್ಯ(ಗದ್ಯಕಥಾ)ಸಾಹಿತ್ಯವನ್ನು ತಮ್ಮಲ್ಲಿ ರೂಢಿಸಿಕೊಂಡರು; ಕನ್ನಡದ ದೇಸಿಸಾಹಿತ್ಯದ ಪ್ರಕಾರಗಳಾದ ಚತ್ತಾಣ-ಬೆದಂಡೆಗಳನ್ನು ಕಾವ್ಯಮಟ್ಟಕ್ಕೆ ಎತ್ತಿಕಟ್ಟಿದರು. ಇನ್ನೂ ಒಂದು ವಿಚಾರ: ಈ ಹೊತ್ತಿಗೆ ಸಂಸ್ಕೃತದಲ್ಲಿ ನಾಟಕವು ದೃಶ್ಯಪಾತಳಿಯಿಂದ ವಾಚನಪಾತಳಿಗೆ ಬಂದಿದ್ದಿತು. ಕನ್ನಡದಲ್ಲಿ ಅದು ಜನಾಂಗದ ಮಧ್ಯ ದೃಶ್ಯಪಾತಳಿಯಲ್ಲಿಯೇ ಜೀವಿಸಿದ್ದಿತು. ಹೀಗಾಗಿ ಲಿಖಿತ ಸಾಹಿತ್ಯಸಾಲಿನಲ್ಲಿ ಬೆಳೆದು ಬಂದಿರದ ನಾಟಕವನ್ನು ಕವಿರಾಜಮಾರ್ಗ ಕೈಬಿಡಬೇಕಾಯಿತು. ಇಷ್ಟು ಹಿನ್ನೆಲೆಯಲ್ಲಿ ಕವಿರಾಜಮಾರ್ಗಕಾರನು ಬಳಸಿದ 'ಪಗರಣ'ವನ್ನು ವಿವೇಚಿಸಬಹುದು.

---

೯೩. ಪಂ. ಭಾ. ೧-೧೧

೯೪. ಪಂ. ಭಾ. ೧-೮

೯೫. ಕನ್ನಡದ ನೆಲೆ (ಶಂ.ಬಾ. ಜೋಶಿ)ಯಲ್ಲಿ ಇದರ ಚರ್ಚೆ ನೋಡಬಹುದು.

೯೬. ಪ್ರಾಚೀನ ಕರ್ನಾಟಕದ ಒಬ್ಬ ನಟಶ್ರೇಷ್ಠ ಹಾಗೂ ಒಬ್ಬ ಆದಿಕವಿ (ಜಯ ೯-೬) ಪು. ೪೩೧

೯೭. ಕನ್ನಡನಾಟಕದ ಹಳಮೆ-ಪೈ (ಸಾ.ಪ. ೩೧-೨)

೯೮. ಸಂಸ್ಕೃತ ನಾಟಕ (ಅರಿಕೆ xix)

ಶ್ರುತಿದುಷ್ಟಾರ್ಥದುಷ್ಟೇ ಚ । ಕಲ್ಪನಾದುಷ್ಟಮಿತ್ಯ ಪಿ ।
ಶ್ರುತಿಕಷ್ಟಂ ತಥೈವಾಹುರ್ವಾಚಾಂ ದೋಷಂ ಚತುರ್ವಿಧಂ ॥[೯೯]

ಶ್ರುತಿದುಷ್ಟಮರ್ಥದುಷ್ಟಂ । ಶ್ರುತಿಕಷ್ಟಂ ಕಲ್ಪನೋಕ್ತಿ ಕಷ್ಟಮುಮೆಂದೀ ।
ಕೃತಕೃತ್ಯಮಲ್ಲವಲ್ಲಭ । ಮತದಿಂ ನಾಲ್ಕುಕ್ಕುಮಿಲ್ಲಿ ಕೃತಿದೋಷಂಗಳ್ ॥[೧೦೦]

ಇಲ್ಲಿ ಕವಿರಾಜಮಾರ್ಗಕಾರನು ಭಾಮಹನ ಹೆಜ್ಜೆಯಲ್ಲಿ ಹೆಜ್ಜೆಯಿಟ್ಟುದು ಸುಸ್ಪಷ್ಟ. (ದಂಡಿ ಈ ದೋಷಗಳನ್ನು ಹೇಳಿಲ್ಲ). ಆದರೆ ಭಾಮಹನಂತೆ ಈ ನಾಲ್ಕು ದೋಷಗಳಿಗೆ ಉದಾಹರಣೆ ಕೊಟ್ಟು ನಿಲ್ಲದೆ ಈತನು,

ಮಿಗೆ ದುಷ್ಕರಕಾವ್ಯಂಗಳೊ।ಳಗರ್ಹಿತಪ್ರಾಯಮಕ್ಕುಮಾ ಶ್ರುತಿಕಷ್ಟಂ ।
ಪಗರಣದೊಳುಟಿದ ಮೂಱುಂ । ನಗಿಸುಗುಮಪ್ಪುದಱಿನಲ್ಲಿಗಂತವದೋಷಂ ॥[೧೦೧]

ಎಂಬ ಹೆಚ್ಚಿನ ಸಂಗತಿಯನ್ನು ಹೇಳಿದ್ದಾನೆ. ದಂಡಿ ಭಾಮಹರ ಜೊತೆಯಲ್ಲಿ ನಡೆದ ಕವಿರಾಜ ಮಾರ್ಗಕಾರನು, ಮಧ್ಯಮಧ್ಯ ಅವಶ್ಯವೆನಿಸಿದಲ್ಲಿ ಕನ್ನಡಪರ ವಿಚಾರಗಳನ್ನು ಚರ್ಚಿಸಿ, ಮತ್ತೆ ಅವರ ಜೊತೆ ಸಾಗುತ್ತಾನೆ. 'ಯತಿವಿಲಂಘನ' ಪ್ರಸ್ತಾಪ ಇದಕ್ಕೆ ನಿದರ್ಶನ. ಇದೇ ರೀತಿ ಭಾಮಹನು ಹೇಳದ 'ಪಗರಣ' ಕನ್ನಡಕ್ಕೆ ಸಂಬಂಧಪಟ್ಟ ವಿಶೇಷ ವಿಚಾರವಾಗಿರಬೇಕು.

ಸಂಸ್ಕೃತ ನಾಟಕದ ೧೦ ಪ್ರಭೇದಗಳಲ್ಲಿ 'ಪ್ರಕರಣ'ವು ಒಂದು. "ಇದರ ವಸ್ತು ಲೌಕಿಕ ಮತ್ತು ಕವಿಕಲ್ಪಿತ; ಪ್ರಧಾನರಸ ಶೃಂಗಾರ; ನಾಯಕನು ಬ್ರಾಹ್ಮಣ, ಮಂತ್ರಿ ಅಥವಾ ವರ್ತಕ; ಅವನು ಧೀರ ಪ್ರಶಾಂತ; ಧರ್ಮಕಾಮಾರ್ಥಪರ; ಅವನ ಆಸ್ತಿ ನಶಿಸಿಹೋಗುತ್ತದೆ; ನಾಯಿಕೆ ಸತ್ಕುಲ ಪ್ರಸೂತೆ ಅಥವಾ ವೇಶ್ಯೆ; ಕೆಲವು ವೇಳೆ ಇಬ್ಬರೂ ಇರುವುದುಂಟು; ಈ ಬಗೆಯದರಲ್ಲಿ ವಿಟ, ಚೇಟ, ಜೂಜುಗಾರ, ಮೋಸಗಾರ ಮುಂತಾದವರು ಬರುತ್ತಾರೆ. ಮಿಕ್ಕ ಅಂಶಗಳು ನಾಟಕದಲ್ಲಿರುವಂತೆಯೇ. ಉದಾ: ಮೃಚ್ಛಕಟಿಕ, ಮಾಲತೀಮಾಧವ, ಪುಷ್ಪಭೂಷಿತ"[೧೦೨]. ಕವಿರಾಜ ಮಾರ್ಗಕಾರನು ಹೇಳುವ ಹಾಸ್ಯಪ್ರಧಾನವಾಗಿರಬಹುದಾದ 'ಪಗರಣ' ಈ 'ಪ್ರಕರಣ'ದ ತದ್ಭವವೆಂದು ಸಾಮಾನ್ಯ ನಂಬುಗೆ. ಶಕಾರನ ಪಾತ್ರ ಹಾಸ್ಯದ ಹೊನಲನ್ನು ಹರಿಸುತ್ತಿದ್ದರೂ ಮೃಚ್ಛಕಟಿಕ ಹಾಸ್ಯಪ್ರಧಾನವಾದ ಕೃತಿಯಲ್ಲ. ಅದಕ್ಕಾಗಿ "ಸಂಸ್ಕೃತದ ಪ್ರಕರಣವು ಹಾಸ್ಯಪ್ರಧಾನವಾದ ಪಗರಣವಾಗಿ ಪರಿಣಮಿಸಿ ಕನ್ನಡನಾಡಿನಲ್ಲಿ ಬಳಕೆಗೆ ಬಂದಿದ್ದಿತೆ?"[೧೦೩] ಎಂಬುದು ಶ್ರೀ ಎಂ.ವಿ. ಸೀತಾರಾಮಯ್ಯನವರ ಅಭಿಪ್ರಾಯ. ಇನ್ನು,

ಕೊಟಿಲ ಬೆಡಂಬೆಯ ಪಗರಣ ।ದಟೆಗಳ ಪರದೈವ ಮಾಡುವವರ್ಗಳ ಮಾತಿಂ ।
ಗುಟೆಪರ ಜಾತಿಯವರ್ಗಳ । ತುಟೆಗಳ ದೆಸೆಬೋಗಲೀಯಲಾಗದು ವಧುವಂ ॥[೧೦೪]

---

೯೯. ಕಾವ್ಯಾಲಂಕಾರ ೧-೪೭

೧೦೦. ಕ.ಮಾ. ೧-೬೨

೧೦೧. ಕ.ಮಾ. ೧-೬೮

೧೦೨. ಸಂಸ್ಕೃತ ನಾಟಕ ಪು. ೩೦

೧೦೩. ಕ.ಮಾ. ಟಿಪ್ಪಣಿಗಳು ೧೪೮

೧೦೪. ಮ. ತಿಲಕ, ೮-೨೯

ಎಂಬ ಪದ್ಯ ಮತ್ತು ಶಬ್ದಮಣಿದರ್ಪಣದ 'ನಾಟ್ಪಿಗರಣ' (ಸೂ. ೭೬) ಎಂಬ ಉದಾಹರಣೆಗಳಿಂದ ಇದು ಪಾಮರಲೋಕದ ಒಂದು ಪ್ರಕಾರವೆಂಬ ಭಾವನೆ ಹುಟ್ಟುತ್ತದೆ.[೧೦೫] ಗದ್ಯಕಥೆ, ಚತ್ತಾಣ-ಬೆದಂಡೆ ಗಬ್ಬಗಳನ್ನು ಕಾವ್ಯಪ್ರಭೇದಗಳೆಂದು ಮನ್ನಿಸುವ ಕವಿರಾಜಮಾರ್ಗಕಾರನು ಆ ಸಂದರ್ಭದಲ್ಲಿ 'ಪಗರಣ'ವನ್ನು ಉಲ್ಲೇಖಿಸದಿರುವುದೂ ಈ ಭಾವನೆಯನ್ನು ಬೆಂಬಲಿಸುತ್ತಿದೆ. ಆದಕ್ಕಾಗಿ ಇದು ಕನ್ನಡಿಗರೇ ಮೊದಲಿನಿಂದಲೂ ರೂಪಿಸಿಕೊಂಡ ಸ್ವತಂತ್ರ ಪ್ರಕಾರವೋ, ಸಂಸ್ಕೃತದ ಪ್ರಕರಣವನ್ನೇ ಜನತೆ ಹಾಸ್ಯಪ್ರಧಾನವಾಗಿಸಿಕೊಂಡಿರೋ ಸ್ಪಷ್ಟವಾಗುವುದಿಲ್ಲ. ಬಹುಶಃ ಕನ್ನಡಿಗರೇ ರೂಪಿಸಿಕೊಂಡಿದ್ದ ಇದು ಪಂಡಿತರಿಂದ ಅಲಕ್ಷಿತವಾಗಿ, ಸಾಮಾನ್ಯರ ಮಧ್ಯದಲ್ಲಿ ಜೀವಹಿಡಿದುಕೊಂಡಿದ್ದ ಒಂದು ದೃಶ್ಯಪ್ರಭೇದವೆನ್ನಬಹುದು.

❖❖

೧೦೫. ಸಂಶೋಧನ ತರಂಗ (ಸಂಪುಟ ೨) ಪು. ೧೦೧.

ಕವಿಗಳು

ಸಾಹಿತ್ಯವನ್ನು ಗದ್ಯ, ಪದ್ಯ ಎಂದು ವಿಭಾಗಿಸುತ್ತ ಮಾರ್ಗಕಾರನು ಕನ್ನಡದ ಗದ್ಯಕಥಾ, ಚತ್ತಾಣ-ಬೆದಂಡೆಗಬ್ಬಗಳ ಕವಿಗಳನ್ನು,

ವಿಮಳೋದಯ ನಾಗಾರ್ಜುನ । ಸಮೇತ ಜಯಬಂಧು ದುರ್ವಿನೀತಾದಿಗಳೀ ।
ಕ್ರಮದೊಳ್ ನೆಗಟ್ಟೆ ಗದ್ಯಾ। ಶ್ರಮಗುರುತಾಪ್ರತೀತಿಯಂ ಕೆಯ್ಕೊಂಡರ್ ॥[೧]

ಪರಮ ಶ್ರೀವಿಜಯ ಕವೀ।ಶ್ವರ ಪಂಡಿತ ಚಂದ್ರ ಲೋಕಪಾಲಾದಿಗಳಾ ।
ನಿರತಿಶಯವಸ್ತುವಿಸ್ತರ । ವಿರಚನೆ ಲಕ್ಷ್ಯಂ ತದಾದ್ಯಕಾವ್ಯಕ್ಕೆಂದುಂ ॥[೨]

ಎಂದು ಹೇಳುವನು. ಈ ಪದ್ಯಗಳಲ್ಲಿಯ ಕವಿಗಳ ಸಂಖ್ಯೆ ತೀರ ಅಸ್ಪಷ್ಟ. ಈ ದಿಸೆಯಲ್ಲಿ ಪಂಡಿತರು ನೀಡಿದ ಅಭಿಪ್ರಾಯ ಹೀಗಿವೆ:

೧) ರೈಸ್. ಬಿ. ಎಲ್: "Vimala, Udaya, Nagarjuna together with Jaya bandhu, Durvinita and others"[೩] ಎಂದು ೫ ಜನ ಗದ್ಯಕವಿಗಳನ್ನು "The supreme Srivijaya, Kaviswara, Pandita, Chandra, Lokapala and others" ಎಂದು ೫ ಜನ ಪದ್ಯಕವಿಗಳನ್ನು ಬಿಡಿಸಿ ಹೇಳಿದ್ದಾರೆ.

೨) ಪಾಠಕ ಕೆ.ಬಿ. : It is hard to say whether in the verse refered above, Vimalodaya is an adjective qualifying Nagarjuna or a name. It may also be treated as a compound of two names, Vimala and Udaya, as suggested by Mr. Rice.... We are told in verse I - 33 that Srivijaya, Kaviswara, Panditachandra and Lokapala were some of the best Kannada poets"[೪] ಇಲ್ಲಿ ವಿಮಲೋದಯನಾಗಾರ್ಜುನ ಅಥವಾ ವಿಮಲೋದಯ, ನಾಗಾರ್ಜುನ ಅಥವಾ ವಿಮಲ, ಉದಯ, ನಾಗಾರ್ಜುನ, ಜಯಬಂಧು, ದುರ್ವಿನೀತ ಎಂದು ಊಹಿಸಿದ್ದಾರೆ. ತರುವಾಯ ಶ್ರೀವಿಜಯ, ಕವೀಶ್ವರ, ಪಂಡಿತಚಂದ್ರ, ಲೋಕಪಾಲ ಎಂದು ನಾಲ್ಕು ಜನರನ್ನು ಹೆಸರಿಸಿದ್ದಾರೆ.

---

೧. ಕ.ಮಾ. ೧-೨೯ ೨. ಕ.ಮಾ. ೧-೩೨

೩. Early History of Kannada Literature- B.L. Rice (JRAS xxii, 1990) P. 254

೪. Nripatunga's Kavirajamarga-K.B. Pathak (JBBRAS. xx, 1898)

೩) ಡಾ. ಫ್ಲೀಟ್: "In verse 29, he has mentioned Vimala, Udaya (or Possible, Vimalodaya), Nagarjuna, Jayabandhu, Durvinita and others" ಎಂದು "In verse 33.... he has refered to the ಆದ್ಯಕಾವ್ಯ or ealier poetry of 'the Supreme Srivijaya, Kaviswara or Srivijaya the Kaviswara or lord of poets- Panditachandra (ಅಡಿಟಿಪ್ಪಣಿಯಲ್ಲಿ 'But this may be yet another appellation of Srivijaya or it may qualify Lokapala ಎಂದು ಹೇಳಿದ್ದಾರೆ) Loka-Pala and others....."[೫] ಎಂದು ಹೇಳಿದ್ದಾರೆ. ಇಲ್ಲಿ ವಿಮಲ, ಉದಯ (ಅಥವಾ ವಿಮಲೋದಯ), ನಾಗಾರ್ಜುನ, ಜಯಬಂಧು, ದುರ್ವಿನೀತ ಎಂದು ಗದ್ಯಕವಿಗಳನ್ನು; ಶ್ರೀವಿಜಯ, ಕವೀಶ್ವರ ಅಥವಾ ಶ್ರೀವಿಜಯಕವೀಶ್ವರ, ಪಂಡಿತಚಂದ್ರ (ಅಡಿಟಿಪ್ಪಣಿಯಲ್ಲಿ ಶ್ರೀವಿಜಯಕವೀಶ್ವರ ಪಂಡಿತಚಂದ್ರ ಇಲ್ಲವೆ ಪಂಡಿತಚಂದ್ರಲೋಕಪಾಲ) ಲೋಕಪಾಲ ಎಂದು ಪದ್ಯಕವಿಗಳನ್ನು ಎಣಿಸಿ ತೋರಿಸಿರುವರು.

೪) ಆರ್. ನರಸಿಂಹಾಚಾರ್ : ವಿಮಲ, ಉದಯ, ನಾಗಾರ್ಜುನ, ಜಯಬಂಧು, ದುರ್ವಿನೀತ ಎಂದು ೫ ಜನ ಗದ್ಯಕವಿಗಳನ್ನು, ಶ್ರೀವಿಜಯ ಕವೀಶ್ವರ, ಪಂಡಿತ, ಚಂದ್ರ, ಲೋಕಪಾಲ ಎಂದು ೫ ಜನ ಪದ್ಯಕವಿಗಳನ್ನು ಉಲ್ಲೇಖಿಸಿದ್ದಾರೆ.[೬]

೫) ಗೋವಿಂದ ಪೈ: "ಕವಿರಾಜಮಾರ್ಗದಲ್ಲಿ ಹೇಳಿರುವ ವಿಮಳ (ವಿಮಳೋದಯ, ನಾಗಾರ್ಜುನ ......I-29) ನೆಂಬಾತನು......" ಎನ್ನುತ್ತ ಕಂಸಿನಲ್ಲಿ ವಿಮಳೋದಯ ಎಂಬ ಹೆಸರನ್ನು ಭಾವಿಸಿದ್ದಾರೆ.[೭]

೬) ರಂ. ಶ್ರೀ ಮುಗಳಿ: 'ವಿಮಲೋದಯ' 'ಶ್ರೀವಿಜಯಕವೀಶ್ವರ' ಎಂಬಿವು ಇಡಿ ಹೆಸರುಗಳು. 'ಪಂಡಿತ' ಎಂಬುದು ಬಿರುದೇ ಆಗಿರಬೇಕು. ಯಾರ ಬಿರುದು ಗೊತ್ತಿಲ್ಲ.[೮]

ವಿದ್ವಾಂಸರ ಈ ಊಹೆಗಳು ಇಲ್ಲಿಯ ಗದ್ಯಪದ್ಯಕವಿಗಳನ್ನು ಗುರುತಿಸಲು ಹೊರಟ ಸಂಶೋಧಕನಿಗೆ ದಿಕ್ಕುಗೆಡಿಸುತ್ತವೆ. ಒಂದುವೇಳೆ ಆ ಸಾಹಸಕ್ಕಿಳಿದರೆ ಕಾಲ್ಪನಿಕ ವ್ಯಕ್ತಿಗಳೂ ಸೃಷ್ಟಿಗೊಳ್ಳಬಹುದು; ಇಬ್ಬರು ವ್ಯಕ್ತಿಗಳನ್ನು ಒಂದುಗೂಡಿಸುವ, ಒಬ್ಬನನ್ನು ಇಬ್ಬರೆಂದು ಭಾವಿಸುವ ಪ್ರಮಾದವೂ ಜನಿಸಬಹುದು. ಅದಕ್ಕಾಗಿ 'ಈ ಪದ್ಯಗಳಲ್ಲಿ ಎಷ್ಟು ಹೆಸರಿರುವವೋ ಖಂಡಿತ ಹೇಳಲಾಗುವುದಿಲ್ಲ'[೯] ಎಂಬ ಕೈಪಿಡಿಕಾರರ ಅನುಮಾನ ಸತ್ಯವಾಗಿದೆ.

ಮತದೃಷ್ಟಿಯಿಂದ 'ಎಲ್ಲರೂ ಜೈನರೆಂದು ತೋರುತ್ತದೆ' ಎಂದು ಕೈಪಿಡಿಕಾರರು,[೧೦] ಚಂದ್ರನೊಬ್ಬ ಭಾಗವತ ಬ್ರಾಹ್ಮಣನಾಗಿರಬೇಕು ಎಂದು ಶ್ರೀ. ಬೇಂದ್ರೆಯವರು,[೧೧] ಪಂಡಿತನೊಬ್ಬ (ವೀರ)ಶೈವ ಪಂಡಿತಾರಾಧ್ಯನಾಗಿರಬೇಕೆಂದು ಶ್ರೀ ಜ.ಚ. ನಿ. ಅವರು[೧೨] ಹೇಳಿದರೆ, ಇವರಲ್ಲಿ ಹಲವರು ಬೌದ್ಧರಾಗಿರಬೇಕೆಂದು ಟಿ.ಎಸ್. ವೆಂಕಣ್ಣಯ್ಯ[೧೩] ಸೂಚಿಸುತ್ತಾರೆ.

---

೫. Ind. Ant. xxxii, 269

೬. ಕ.ಕ.ಚ.ಪು. ೧೦-೧೬

೭. ನೃಪತುಂಗನ ಮತುವಿಚಾರ-ಗೋವಿಂದ ಪೈ (ಸಾ.ಪ. ೧೨-೪)

೮. ಕ.ಸಾ. ಚ. ಪು. ೧೬, ೧೯

೯. ಕ.ಕ.ಚ.ಪು. ೧೦-೧೬

೧೦. ಕ.ಕೈ. ಸಂಪುಟ ೨, ಪು. ೪೭೯

೧೧. ಜ್ಞಾನೇಶ್ವರ ಪೂರ್ವಕಾಲೀನ ಕಾನಡೀ ವಾಙ್ಮಯ-ಬೇಂದ್ರೆ (ಮ.ಸಾ.ಪ.ಪ. ೭-೪)

೧೨. ಶ್ರೀಶೈಲಪೀಠದರ್ಶನ ಪು. ೯

೧೩. ಕನ್ನಡಸಾಹಿತ್ಯ ಚರಿತ್ರೆ ಮತ್ತು ಇತರ ಲೇಖನಗಳು ಪು. ೧೬.

'ಈ ಕವಿಗಳಲ್ಲಿ ಒಬ್ಬಿಬ್ಬರು ನೃಪತುಂಗನ ಸಮಕಾಲದವರಾಗಿದ್ದಿರಬಹುದೆಂದು ತೋರುತ್ತದೆ'[೧೪] ಎಂದು ಕವಿಚರಿತೆಕಾರರು; 'ಅವರು ಕವಿರಾಜಮಾರ್ಗದ ಕಾಲಕ್ಕೆ ಕನಿಷ್ಟಪಕ್ಷ ಒಂದೆರಡು ಶತಮಾನಗಳ ಹಿಂದಿನವರಾದರೂ ಆಗಿರಬೇಕು'[೧೫] ಎಂದು ಟಿ.ಎಸ್. ವೆಂಕಣ್ಣಯ್ಯನವರು ಹೇಳುತ್ತಾರೆ. ಹೀಗೆ ಹೆಸರು, ಮತ, ಕಾಲ ಇತ್ಯಾದಿ ಸಂಗತಿಗಳು ತೀರ ನಿಗೂಢವಾಗಿರುವ ಇವರ ಚರಿತ್ರೆಯನ್ನು ಪರಿಮಿತ ಸಂಶೋಧನೆಯ ಪ್ರಕೃತ ಪರಿಸ್ಥಿತಿಯಲ್ಲಿ ಬರೆಯದಿರುವುದೇ ಲೇಸೆನಿಸುತ್ತದೆ. ಆದರೂ ಅಲ್ಲಲ್ಲಿ ಬಿದ್ದ ಅಣುಗಳನ್ನು ಅರಸಿ ಹೋಗಿ, ಆರಿಸಿತಂದು ಕೆಳಗಿನಂತೆ ಚರಿತ್ರೆಯನ್ನು ರೂಪಿಸಬಹುದು.

ಗದ್ಯಕವಿಗಳು :

ಅಗಣಿತಗುಣ ಗದ್ಯಪದ್ಯಸಮ್ಮಿಶ್ರಣರೂಪದ ಗದ್ಯಕಥೆಗಳನ್ನು ಸೃಷ್ಟಿಸಿದ 'ಚಿರಂತನಾಚಾರ್ಯರು' ಇವರು. 'ಸಕಳಕಳಾಭಾಷಾಸಾಮಯಿಕಾದಿ ವರ್ಣನಾನಿರ್ಣಿಕ್ತಪ್ರಕಟತರಮಸ್ತು'ವನ್ನೊಳಗೊಂಡ ಇವರ ಕೃತಿಗಳು, ಬೇರೆಯವರ ಇಂಥ ಕೃತಿಗಳು ಉಪಲಬ್ಧವಾಗಿಲ್ಲ. ಈ ಕವಿಗಳ ಒಂದೆರಡು ಚಾರಿತ್ರಿಕ ಎಳೆಗಳೂ ಸಿಕ್ಕಿಲ್ಲ. ಹೀಗಾಗಿ ಶೂನ್ಯವಾತಾವರಣದಲ್ಲಿ ನಿಂತು ಇವರ ಚರಿತ್ರೆ ರಚಿಸಬೇಕಾಗಿದೆ.

ವಿಮಲ-ಉದಯ : ಆಧಾರಗಳೇ ಇಲ್ಲದ ಈ ಸಮಯದಲ್ಲಿ 'ವಿಮಲೋದಯ' ಎಂದು ಕೂಡಿಸಿ ಹೇಳುವುದು ಎಷ್ಟು ಸತ್ಯವೋ 'ವಿಮಲ' 'ಉದಯ' ಎಂದು ಬಿಡಿಸಿ ಹೇಳುವುದೂ ಅಷ್ಟೇ ಸತ್ಯ. ಕನ್ನಡದಲ್ಲಿ ಇವರ ಸ್ತುತಿಯಾಗಲಿ, ಕೃತಿನಿರ್ದೇಶನವಾಗಲಿ ಕಂಡುಬರುವುದಿಲ್ಲ. ಶ್ರವಣಬೆಳ್ಗೊಳದ ೬೭ನೆಯ ಶಾಸನೋಕ್ತ (ಕ್ರಿ.ಶ. ೧೧೨೯) ವಿಮಲಚಂದ್ರನು ನೃಪತುಂಗನಿಗೆ ಪ್ರಾಚೀನನಲ್ಲದ ಕಾರಣ, ನಾಗಮಂಗಲದ ೮೫ನೆಯ ಶಾಸನೋಕ್ತ (ಕ್ರಿ.ಶ. ೭೭೦) ವಿಮಲಚಂದ್ರನೇ ಇವನಾಗಿರಬಹುದೆಂದು ಕವಿಚರಿತೆಕಾರರ ಊಹೆ.[೧೬] ಈ ಬಗೆಯ ವಿಮಲಕೀರ್ತಿ, ವಿಮಲಸೇನ, ವಿಮಲಸೂರಿ ಎಂಬ ಜೈನ ಹೆಸರುಗಳು, ವಿಮಲಶಿವ ಮುಂತಾದ ಜೈನವಲ್ಲದ ಹೆಸರುಗಳು ಶಾಸನದಲ್ಲಿ ಇನ್ನೂ ದೊರೆಯುವ ಕಾರಣ ಫಲಕಾರಿಯಲ್ಲದ ಇಂಥ ಊಹೆಯನ್ನು ಕೈಬಿಡುವುದು ಒಳಿತು. ಈ ಪ್ರಸಂಗದಲ್ಲಿ ಕೆಲವಿದ್ವಾಂಸರು ಪ್ರಶ್ನೋತ್ತರ ರತ್ನಮಾಲೆ ಎಂಬ ಗ್ರಂಥವನ್ನು ಈ ಚರ್ಚೆಗೆ ಅಳವಡಿಸಿಕೊಳ್ಳುತ್ತಾರೆ.

ಪುಣ್ಯ-ಪಾಪ, ಧರ್ಮ-ಅಧರ್ಮಗಳೆಂಬ ಬದುಕಿನ ಮೂಲಭೂತ ಪ್ರಶ್ನೆಗಳಿಗೆ ಮಾರ್ಮಿಕ ಉತ್ತರಗಳನ್ನು ಕೊಡುತ್ತ ಪ್ರಶ್ನೋತ್ತರರೂಪದಲ್ಲಿ[೧೭] ಮುಂದುವರಿಯುವ ಈ ಪ್ರಶ್ನೋತ್ತರ ರತ್ನಮಾಲೆ, ೨೯(೩೦) ಪದ್ಯಗಳ[೧೮] ಒಂದು ಸಂಸ್ಕೃತ ಕೃತಿ. ಆದಿಯ ಸ್ತುತಿಪದ್ಯ ಮತ್ತು ಅಂತ್ಯದ ಕರ್ತೃನಿರ್ದೇಶನಪದ್ಯ, ಪ್ರತಿಯಿಂದ ಪ್ರತಿಗೆ ಭಿನ್ನವಾಗಿರುವುದರಿಂದ ಇದರ ಕರ್ತೃವಿಚಾರ ಸಂದೇಹ ಹುಟ್ಟಿಸಿದೆ.

---

೧೪. ಕ.ಕ.ಚ. ಪು. ೧೧

೧೫. ಕನ್ನಡಸಾಹಿತ್ಯ ಚರಿತ್ರೆ ಮತ್ತು ಇತರ ಲೇಖನಗಳು ಪು. ೭

೧೬. ಕ.ಕ. ಚ. ಪು. ೧೧

೧೭. "In 1337 A.D. Devendra and Manibhadra wrote a commentary on. 'Prasnottararatnamala' in which a story is told in connection with each question (H.I.L.-Winternitz II, P. 559 ಅ.ಟಿ.)

೧೮. ನಿರ್ಣಯಸಾಗರ ಆವೃತ್ತಿಯಲ್ಲಿ ೨೯ ಪದ್ಯಗಳಿವೆ. Ind. Ant. xii, P. 218ರಲ್ಲಿ ೩೦ ಪದ್ಯಗಳಿವೆ ಎಂದು ಹೇಳಲಾಗಿದೆ. (ಕ.ಮಾ. ಪೀಠಿಕೆ. xxii)

ಒಂದರಲ್ಲಿ ಆದಿಯ ಪದ್ಯ ಮಹಾವೀರ ಪರವಾಗಿದ್ದರೆ ಅಂತ್ಯಪದ್ಯ ಶ್ವೇತಾಂಬರ ವಿಮಲ ಇಲ್ಲವೆ ಅಮೋಘವರ್ಷ ಪರವಾಗಿದೆ.[೧೯] ಇನ್ನೊಂದರಲ್ಲಿ ಆದಿಯಲ್ಲಿ ಗಣೇಶಸ್ತುತಿಯಿದ್ದರೆ ಅಂತ್ಯದಲ್ಲಿ ಶಂಕರಾಚಾರ್ಯ (ಶಂಕರಾನಂದ) ಕರ್ತೃನಿರ್ದೇಶನವಿದೆ. ತಿಬೇಟದ ಒಂದು ಪಾಠಸಂಪ್ರದಾಯದಲ್ಲಿ ಆದಿಯ ಸ್ತುತಿಪದ್ಯ ಮಂಜುಶ್ರೀಪರವಾಗಿದ್ದು ಅಂತ್ಯದ ಕರ್ತೃಪದ್ಯ ಅಮೋಘೋದಯ ಪರವಾಗಿದೆ.[೨೦] ಹೀಗಾಗಿ ಜೈನರು, ವೈದಿಕರು, ಬೌದ್ಧರು ಈ ಕೃತಿ ತಮ್ಮದೆನ್ನುತ್ತಾರೆ.

ಡಾ. ಸಿಫ್ನರ್ (Schiefner) ತಮ್ಮ ಪರಿಷ್ಕರಣದ ಕೊನೆಯ ಪದ್ಯದ ಅರ್ಥ "This jewel wreath, made by Amoghodaya of the king abandoned his inly established sovereignties, is the best ornament of the wise" ಎಂದು ಹೇಳುತ್ತಾರೆ. ಕರ್ತೃನಾಮ ಟಿಬೇಟ ಭಾಷೆಯಲ್ಲಿ 'don-yod-hchar' ಎಂದಿದೆ. 'don-yod' ಅಂದರೆ ಅಮೋಘ, 'hchar' ಅಂದರೆ ಉದಯ. ಇವೆರಡೂ ಕೂಡಿ ಕರ್ತೃನಾಮ ಅಮೋಘೋದಯ ಎಂದು ಅವರ ಅಭಿಪ್ರಾಯ. F.W. Thomas ಅವರು ಈ ಸಮಸ್ತಪದದ ಉತ್ತರಾರ್ಧವಾಗಿರುವ 'hchar' ಎಂಬುದನ್ನು 'char' ಎಂದು ಓದಲು ಸಾಧ್ಯವಿದೆಯೆಂದೂ ಇದರ ಅರ್ಥ 'ವರ್ಷ' (ಮಳೆ)ವೆಂದೂ ಹೇಳಿ ಕರ್ತೃ ಅಮೋಘವರ್ಷನಾಗಿರಬಹುದೆನ್ನುತ್ತಾರೆ.[೨೧] ಸಂಸ್ಕೃತ ಅಂಕಿತನಾಮವನ್ನು ಈ ಮೊದಲು ತಿಬೇಟ ಭಾಷೆಗೆ ಅನುವಾದಿಸಿದುದೂ, ಅದನ್ನು ಮತ್ತೆ ಸಂಸ್ಕೃತಕ್ಕೆ ಅನುವಾದಿಸಿ, ಕವಿಯ ಹೆಸರು ಅಮೋಘೋದಯ ಅಥವಾ ಅಮೋಘವರ್ಷವೆನ್ನುವುದೂ ತೀರ ವಿಚಿತ್ರ. ಒಂದುವೇಳೆ ಅಮೋಘೋದಯನೆಂದರೆ ಅಮೋಘವರ್ಷನೆಂದಿಟ್ಟುಕೊಂಡರೆ, ತಿಬೇಟ ಭಾಷೆಯ ಕೃತಿ ಅಮೋಘವರ್ಷ ಎಂಬವನ ಹೆಸರಿನ ಒಂದು ಪಾಠಸಂಪ್ರದಾಯವೆನಿಸುವುದೇ ಹೊರತು ಒಂದನೆಯ ಅಮೋಘವರ್ಷನೇ ಇದರ ಕರ್ತೃವೆಂದು ಸಿದ್ಧವಾಗುವುದಿಲ್ಲ. ಎರಡನೆಯದಾಗಿ ರಾಷ್ಟ್ರಕೂಟ ಮನೆತನದಲ್ಲಿ ಅಮೋಘವರ್ಷ ಎಂಬ ಹೆಸರಿನ ನಾಲ್ವರು ಅರಸುಗಳಿದ್ದು, ಇದರ ಕರ್ತೃ ಬದ್ದೆಗ ಅಮೋಘವರ್ಷನೆನ್ನಲು ಅವಕಾಶವಿದೆಯೆಂದು ಹಿಂದೆ ನೋಡಿದ್ದೇವೆ.

---

೧೯. ಪ್ರಣಿಪತ್ಯ ವರ್ಧಮಾನಂ ಪ್ರಶ್ನೋತ್ತರರತ್ನಮಾಲಿಕಾಂ ವಕ್ಷ್ಯೇ ।
ನಾಗನರಾಮರವಂದ್ಯಂ ದೇವಂ ದೇವಾಧಿಪಂ ವೀರಂ ॥ -ಕ.ಖ. ಪ್ರತಿ.

X X X X

ರಚಿತಾ ಸಿತಪಟ ಗುರುಣಾ ವಿಮಲಾ ವಿಮಲೇನ ರತ್ನಮಾಲೇವ ।
ಪ್ರಶ್ನೋತ್ತರಮಾಲೆಯಂ ಕಂಠಗತಾ ಕಂ ನ ಭೂಷಯತಿ॥ -ಕ.ಪ್ರತಿ.

ವಿವೇಕಾತ್ಯಕ್ತ ರಾಜ್ಯೇನ ರಾಜ್ಞೇಯಂ ರತ್ನಮಾಲಿಕಾ ।
ರಚಿತಾಮೋಘವರ್ಷೇಣ ಸುಧಿಯಾ ಸದಲಂಕೃತಿಃ॥ -ಖ.ಪ್ರತಿ

(ಕ.ಮಾ. ಪೀಠಿಕೆ, Lxxxiv)

೨೦. It is significant that the text in the Tanjur begins with an invocation to Manjusri, a Bombay edition, in which Sankar is mentioned as the author, with an invocation to Ganesha and the Jainistic version with that to Mahavira (H.I.L- Winternitz II,ಪು. ೫೬೦ ಅ.ಟ) "It is Variously attributed to Sankaracharya, Sankarananda and a svetambar writer Vimala"

- ಕ. ಮಾರ್ಗ (ಪಾಠಕ), ಉಪೋದ್ಘಾತ ಪು. ೯

೨೧. Ind. Ant. xxxiii (1904) p. 198

ಪ್ರಶ್ನೋತ್ತರರತ್ನಮಾಲೆಯ ವಿಚಾರಧೋರಣೆಯಲ್ಲಿ ಎಲ್ಲಿಯೂ ಶಂಕರಾಚಾರ್ಯರ ಮನೋಧರ್ಮ ಕಂಡುಬಾರದ ಕಾರಣ, ಇದು ವಿಮಲನೆಂಬ ಶ್ವೇತಾಂಬರ ಜೈನನ ಕೃತಿಯೆಂದು ಶ್ರೀ ಗೋವಿಂದ ಪೈ ಊಹಿಸುತ್ತಾರೆ. ಈ ವಿಮಲನನ್ನು, ತಿಬೇಟಕೃತಿಯಲ್ಲಿ ಕಂಡುಬರುವ 'ಅಮೋಘೋದಯ'ನನ್ನು, ಕವಿರಾಜಮಾರ್ಗದ 'ವಿಮಲೋದಯ ನಾಗಾರ್ಜುನ....' ಎಂಬ ಪದ್ಯವನ್ನು ಸುತ್ತುಹಾಕಿಕೊಂಡು ಅವರು ಕವಿರಾಜಮಾರ್ಗೋಕ್ತ ವಿಮಲೋದಯನೇ ಇದರ ಕರ್ತೃ ಎಂದು ಹೇಳುವುದು[೨೨] ಗುಡ್ಡಸುತ್ತಿ ಮೈಲಾರಕ್ಕೆ ಬರುವ ಪರಿಶ್ರಮ. ಒಂದುವೇಳೆ ಪ್ರಶ್ನೋತ್ತರಮಾಲೆಯ ಕರ್ತೃ[೨೩] ವಿಮಲನಾಗಿದ್ದರೂ ಕವಿರಾಜಮಾರ್ಗೋಕ್ತ ವ್ಯಕ್ತಿ ಈತನೇ ಎನ್ನಲು ಎಳ್ಳಷ್ಟು ಆಧಾರವಿಲ್ಲ.

ಇನ್ನು ಬಿಡಿಸಿ ಓದಿದರೆ ಬೇರೆ ನಿಲ್ಲುವ 'ಉದಯ'ನ ಚರಿತ್ರೆ ಊಹೆಗೂ ನಿಲುಕಿಲ್ಲ. ಈತನು ಸಿರಿಭೂವಲಯದ ಕುಮುದೇಂದುವಿನ ತಂದೆಯೆಂದು ಅದರ ಸಂಪಾದಕರು ಹೇಳುತ್ತಿದ್ದರೂ ಸಿರಿಭೂವಲಯದ ಅಸ್ತಿತ್ವವೇ ಅಭದ್ರವಾಗಿರುವಾಗ ಈ ಊಹೆ ಬೆಲೆ ಪಡೆಯಲಾರದು. ಅದಕ್ಕಾಗಿ ವಿಮಲೋದಯ ಮತ್ತು ವಿಮಲ-ಉದಯಗಳಲ್ಲಿ ಯಾವುದು ಸರಿ ಎಂಬುದಕ್ಕೆ ಆಧಾರಗಳು ಬೇಕು; ಚರಿತ್ರೆ ಬರೆಯಲು ಉಪಯುಕ್ತ ಸಾಧನಗಳು ಬೇಕು.

ನಾಗಾರ್ಜುನ : ಚೀನ, ಭಾರತ, ತಿಬೇಟ ಹೀಗೆ ಬೃಹದ್ಭಾರತದ ಒಳಹೊರಗು ಕೇಳಿಬರುವ ಈ ಹೆಸರು ಸಂಶೋಧಕರಿಗೊಂದು ಒಗಟು. ಸುತ್ತಲೂ ಜನತೆ ಹೆಣೆದಿರುವ ಅದ್ಭುತಕಥೆ, ಗ್ರಂಥಗಳು ಹೇಳುವ ವಿಭಿನ್ನಸಂಗತಿ, ವಿದ್ವಾಂಸರು ಮಂಡಿಸಿದ ಊಹೆ-ಸಂಶೋಧನೆಗಳಿಂದಾಗಿ ಈ ಹೆಸರಿನ ಚರಿತ್ರೆ ತುಂಬ ತೊಡಕು-ತೊಡಕಾಗಿದೆ. ಮಹಾಯಾನಶಾಖೆಯ ಸಂಸ್ಥಾಪಕ, ಮಹಾಮಾಂತ್ರಿಕ, ರಸಸಿದ್ಧ, ವೈದ್ಯವಿದ್ವಾಂಸ ಹೆಸರಿನ ನಾಗಾರ್ಜುನರು ಬೇರೆ ಬೇರೆಯೋ ಒಬ್ಬನೋ ಎಂಬುದು ಚಿದಂಬರ ರಹಸ್ಯವೆನಿಸಿದೆ. ದಕ್ಷಿಣಭಾರತಕ್ಕೆ ಸಂಬಂಧಪಟ್ಟ ಆಂಧ್ರಪ್ರದೇಶದ ನಾಗಾರ್ಜುನಕೊಂಡದಲ್ಲಿ ಬೌದ್ಧಪರಿಸರವನ್ನು ಪ್ರತಿಷ್ಠಾಪಿಸಿದ, ತನ್ನ ಅರಸುಮಿತ್ರ ಶಾತವಾಹನನಿಗಾಗಿ 'ಸುಹೃತ್ ಲೇಖ' ಎಂಬ ಗ್ರಂಥವನ್ನು ರಚಿಸಿದ, ಶ್ರೀಗಿರಿಯ ಮೇಲೆ ಸುವರ್ಣಪ್ರಯೋಗ ನಡೆಸಿದ ನಾಗಾರ್ಜುನರು ಮತ್ತು ಕವಿರಾಜಮಾರ್ಗೋಕ್ತ ನಾಗಾರ್ಜುನ ಇವರಲ್ಲಿ ಸಂಬಂಧ ಕಲ್ಪಿಸುವುದು ಊಹೆಗೂ ಆಚೆ ಉಳಿದಿದೆ.

ಡಾ. ಎಚ್.ಡಿ. ವೇಲಂಕರ್ ಅವರ 'ಜಿನರತ್ನಕೋಶ'ದ ೬೮ನೆಯ ಪುಟದ ಮೇಲೆ, 'ಕರ್ಣಾಟಕ ಮಣಿದರ್ಪಣ' ಎಂಬ ಗ್ರಂಥವೊಂದು ನಾಗಾರ್ಜುನನ ಹೆಸರಿನಲ್ಲಿ ಉಲ್ಲಿಖಿತವಾಗಿದೆ. ಇವರಿಗೆ ಆಧಾರ ಕೊಲ್ಹಾಪುರದ ಲಕ್ಷ್ಮೀಸೇನಭಟ್ಟಾರಕ ಜೈನಬಸದಿಯ ಹಸ್ತಪ್ರತಿಗಳ ಸೂಚಿ. ಎರಡುಸಲ ಪ್ರಯತ್ನಪಟ್ಟು ಹುಡುಕಿದರೂ ಈ ಗ್ರಂಥಭಂಡಾರದಲ್ಲಿ ಮೇಲಣ ಕೃತಿ ದೊರೆಯಲಿಲ್ಲ. ಈ ಹೆಸರಿನಲ್ಲಿಯ

---

೨೨. ನೃಪತುಂಗನ ಮತವಿಚಾರ - ಗೋವಿಂದ ಪೈ (ಸಾ. ಪ. ೧೨-೪. ಪು. ೨೫೭)

೨೩. ಹೇಮಪ್ರಭ, ದೇವೇಂದ್ರ, ಮುನಿಭದ್ರ, ಶುಭವಿಜಯಗಣಿ ಮೊದಲಾದವರು ಈ ಗ್ರಂಥಕ್ಕೆ ಟೀಕೆ ಬರೆದಿರುವರು (ಜಿನರತ್ನಕೋಶ, ಪು. ೨೭೬). ನನಗೆ ನೋಡಲು ದೊರೆತ ಕನ್ನಡ ಟೀಕೆಯ ಒಂದು ಪ್ರತಿ (ಕೊಲ್ಹಾಪುರದ ಲಕ್ಷ್ಮೀಸೇನಭಟ್ಟಾರಕ ಬಸದಿಯ ಗ್ರಂಥಭಂಡಾರ)ಯ ಟೀಕೆಯಲ್ಲಿಯೂ ಕರ್ತೃವಿಚಾರವಾಗಿ ಹೆಚ್ಚಿನ ವಿಷಯ ಕಂಡುಬರಲಿಲ್ಲ.

'ಕರ್ಣಾಟಕ' ಎಂಬ ಪದ, ಇದು ಕನ್ನಡಕೃತಿಯೆಂಬ ಭಾವನೆಯನ್ನು ಹುಟ್ಟಿಸುತ್ತದೆ. ಆದರೆ ಸೂಚಿ ಸಿದ್ಧಪಡಿಸಿದವನು ಕರ್ಣಾಟ ಭಾಷಾಭೂಷಣ, ಶಬ್ದಮಣಿದರ್ಪಣ ಮತ್ತು ನಾಗವರ್ಮ ಈ ಹೆಸರುಗಳನ್ನು ಸುತ್ತುಹಾಕಿಕೊಂಡು ನಾಗಾರ್ಜನನ 'ಕರ್ಣಾಟಕಮಣಿದರ್ಪಣ' ಶೀರ್ಷಿಕೆಯನ್ನು ಸೃಷ್ಟಿಸಿಕೊಂಡಿರಬಹುದು ಎಂದು ಡಾ. ಎ.ಎನ್. ಉಪಾಧ್ಯೆ ಅವರು ನನಗೆ ಬರೆದ ಪತ್ರದಲ್ಲಿ ತಿಳಿಸಿರುವರು.[೨೪] ಎಚ್.ಡಿ. ವೇಲಂಕರ್ ಅವರು ಉಪಯೋಗಿಸಿದ ಈ ಕೊಲ್ಲಾಪುರ ಬಸದಿಯ ಮುದ್ರಿತ ಹಸ್ತಪ್ರತಿಸೂಚಿಯೂ ನನ್ನ ಪ್ರಯತ್ನಕ್ಕೆ ದೊರೆಯಲಿಲ್ಲ.[೨೫] ಆದರೂ ಈ ಗ್ರಂಥದ ಬಗೆಗೆ ಆಶಾದಾಯಕ ಕುತೂಹಲ ಮಾತ್ರ ಉಳಿದುಕೊಳ್ಳುತ್ತದೆ.

ಜಯಬಂಧು: ಲೋಕೋಪಕಾರದ ಕರ್ತೃ ಚಾವುಂಡರಾಯನ ಇನ್ನೊಂದು ಹೆಸರು ಜಯಬಂಧುನಂದನ. ಅದಕ್ಕಾಗಿ ಜಯಬಂಧುವೆಂದರೆ ಈ ಚಾವುಂಡರಾಯನ ತಂದೆ ಕವಿತಾವಿಲಾಸ (ಭಟ್ಟಪಾರ್ಯ)ನೆಂದು ತರ್ಕಿಸಬಹುದಾಗಿದೆ. ಚಾವುಂಡರಾಯನ ಕಾಲ ಕ್ರಿ.ಶ. ೧೦೨೫ ಇರುವುದರಿಂದ ತಂದೆ ಜಯಬಂಧು (ಭಟ್ಟಪಾರ್ಯ)ವಿನ ಕಾಲ ಕ್ರಿ.ಶ. ೧೦೦೦. ಕವಿರಾಜಮಾರ್ಗೋಕ್ತ ಜಯಬಂಧುವಾದರೋ ತೀರ ಪ್ರಾಚೀನ ವ್ಯಕ್ತಿ. ಇಬ್ಬರೂ ಒಂದೇ ಎನ್ನಬೇಕಾದರೆ ಕವಿರಾಜಮಾರ್ಗದ ಕಾಲ ಮುಂದೆ ಬರಬೇಕು, ಇಲ್ಲವೆ ಕವಿತಾವಿಲಾಸನ ಕಾಲ ಹಿಂದೆ ಹೋಗಬೇಕು. ಈ ವರೆಗಣ ಸಂಶೋಧನೆಯಿಂದ ಇದು ಅಸಾಧ್ಯ. ಆದುದರಿಂದ ಕವಿರಾಜಮಾರ್ಗೋಕ್ತ ಪ್ರಾಚೀನ ಜಯಬಂಧುವಿನ ವಿಷಯ ಇನ್ನೂ ತೆರೆಯಹಿಂದೆ ನಿಂತಿದೆ.

ದುರ್ವಿನೀತ: ಈತನು ಗಂಗವಂಶದ ಪ್ರಖ್ಯಾತ ದೊರೆ ದುರ್ವಿನೀತನೆಂದು ವಿದ್ವಾಂಸರ ಅಭಿಪ್ರಾಯ. ಸಧ್ಯದ ಮಟ್ಟಿಗೆ ಇದು ನಿಜವೆಂದು ನಂಬಿ, ಗಂಗಮನೆತನದ ಉಜ್ವಲಸಾಹಿತ್ಯ ಪರಂಪರೆಯ ಹಿನ್ನೆಲೆಯಲ್ಲಿ ಈತನ ಸಾಹಿತ್ಯಸೇವೆಯನ್ನು ವಿವೇಚಿಸಬಹುದು.

ದಕ್ಷಿಣಕರ್ನಾಟಕದಲ್ಲಿ ಸುಮಾರು ೧೦೦೦ ವರ್ಷ ಆಳಿದ ಈ ಮನೆತನದ ಅರಸರೆಲ್ಲ ಪರಮ ಜಿನೋಪಾಸಕರು, ನಿಷ್ಠೆಯ ಸಾಹಿತ್ಯೋಪಾಸಕರು. ಇವರ ಪಾಂಡಿತ್ಯ ಪ್ರತಿಭೆಗಳು ಶಾಸನಗಳಲ್ಲಿ ಆಗಾಗ ದಾಖಲಾಗುತ್ತ ಬಂದಿವೆ. 'ವಿದ್ವಜ್ಜನಪೂಜ್ಯಂ' ಎಂದು ಹೊಗಳಲ್ಪಟ್ಟವ, ಈ ವಂಶದ ಮೂಲಪುರುಷನಾದ ಕೊಂಗುಣಿವರ್ಮ. ಇವನ ಮಗ ಮೊದಲನೆಯ ಮಾಧವನನ್ನು ಗುಮ್ಮರೆಡ್ಡಿಪುರ ಶಾಸನದಲ್ಲಿ "ವಿದ್ಯಾವಿನಯವಿಹಿತವೃತ್ತಸ್ಯ...... ನಾನಾಶಾಸ್ತ್ರಾರ್ಥ ಸದ್ಭಾವಾಧಿಗಮ ಪ್ರಣೀತಮತಿ ವಿಶೇಷಸ್ಯ, ವಿದ್ವತ್ಕವಿಕಾಂಚನನಿಕಷೋಪಲಭೂತಸ್ಯ......ನೀತಿಶಾಸ್ತ್ರ ವಕ್ತೃಪ್ರಯೋಕ್ತೃಕುಶಲಸ್ಯ....... ದತ್ತಕಸೂತ್ರವೃತ್ತೇಃ ಪ್ರಣೇತ"[೨೬] ಎಂದು ಕರೆಯಲಾಗಿದೆ. ಇಲ್ಲಿಯ ಒಂದೊಂದು ಮಾತೂ ಮಾಧವನ ವಿದ್ಯಾಸಂಪತ್ತು, ಶಾಸ್ತ್ರಪಾಂಡಿತ್ಯ,

---

೨೪. ಕೊಲ್ಲಾಪುರಕ್ಕೆ 'ಕರ್ಣಾಟಕ ಮಣಿದರ್ಪಣ' ಪರಿಶೋಧನೆಗೆ ಹೋದ ನನಗೆ ವಿಶೇಷ ಮಾರ್ಗದರ್ಶನ ನೀಡಿದ, ಪರಿಶೀಲನೆಯಲ್ಲಿ ನೆರವಾದ ಡಾ.ಎ.ಎನ್. ಉಪಾಧ್ಯೆಯವರಿಗೆ ಕೃತಜ್ಞನಾಗಿದ್ದೇನೆ.

೨೫. ದೇವನಾಗರಿಯಲ್ಲಿ ಮುದ್ರಿಸಲ್ಪಟ್ಟ ೪೦ ಪುಟಗಳ ಈ ಸೂಚಿಯ ಒಂದೂ ಪ್ರತಿ ಕೊಲ್ಲಾಪುರದ ಶ್ರೀಮಠದಲ್ಲಿ, ಪ್ರತಿಷ್ಠಿತ ಜೈನನಾಗರಿಕರಲ್ಲಿ, ಸುಪ್ರಸಿದ್ಧ ವಿದ್ಯಾಸಂಸ್ಥೆಗಳಲ್ಲಿ ಲಭಿಸಲಿಲ್ಲ. ಡಾ. ಎ.ಎನ್. ಉಪಾಧ್ಯೆ ಅವರು ತಮ್ಮ ಹತ್ತಿರ ಇದ್ದ ಪ್ರತಿಯನ್ನು 'catalogus cataloguram' ಸಿದ್ಧಪಡಿಸುತ್ತಿರುವ ಡಾ. ವಿ. ರಾಘವನ್ ಅವರಿಗೆ ಕಳಿಸಿರುವರು.

೨೬. M.A. R. 1912, P. 31.

ವಿಮರ್ಶನಶಕ್ತಿ, ನೀತಿಶಾಸ್ತ್ರ ಪರಿಣತಿಗಳನ್ನು, ಜೊತೆಗೆ ಈತನ 'ದತ್ತಕಸೂತ್ರವೃತ್ತಿ' ಎಂಬ ಕೃತಿಯನ್ನು ಉಲ್ಲೇಖಿಸುತ್ತವೆ. ಬಿ.ಎಲ್.ರೈಸ್ ಅವರು ಈ ದತ್ತಕಸೂತ್ರವೃತ್ತಿಯನ್ನು ಕುರಿತು "..... a treatise on the Dattakasurtra or law of adoption. In what language it was composed does not appear, but probably in Kannada"[೨೭] ಎಂದು ಹೇಳುತ್ತಾರೆ. ಕನ್ನಡ ಸಾಹಿತ್ಯದ ಪ್ರಾಚೀನತೆಯನ್ನು ಮೂರನೆಯ ಶತಮಾನಕ್ಕೆ ಒಯ್ದು ನಿಲ್ಲಿಸುವ, ಮಕ್ಕಳನ್ನು ದತ್ತಕ ತೆಗೆದುಕೊಳ್ಳುವ ವಿಷಯವನ್ನೊಳಗೊಂಡುದೆಂಬ ಈ ಹೇಳಿಕೆಯ ಈ ಕೃತಿ ವಿವೇಚನೆ ಇಲ್ಲಿ ಅತ್ಯವಶ್ಯ.

ಸಂಸ್ಕೃತದಲ್ಲಿ ದತ್ತಕ ವಿಷಯವನ್ನು ಕುರಿತು ದತ್ತಕಚಂದ್ರಿಕಾ,- ದೀಧಿತಿ,- ಮೀಮಾಂಸೆ,- ಮಯೂಖ ಮತ್ತು ದತ್ತಕೌಮುದಿ,- ರತ್ನಾರ್ಪಣ,- ಸ್ಮೃತಿಸಾರ,- ಆದರ್ಶ,- ರತ್ನಾಕರ,- ಸಂಗ್ರಹ,- ಚಿಂತಾಮಣಿ, -ಕಲ್ಪಲತಾ, ಕೌಸ್ತುಭ,- ರತ್ನಪ್ರದೀಪಿಕಾ,- ಸಿದ್ಧಾಂತಮಂಜರಿ ಮೊದಲಾದ ಗ್ರಂಥಗಳಿವೆಯೇ ಹೊರತು ದತ್ತಕಸೂತ್ರ ಎಂಬ ಹೆಸರಿನ ಗ್ರಂಥ ಈವರೆಗೆ ಕಂಡುಬಂದಿಲ್ಲ. ಅದೇನೇ ಇರಲಿ, ನಿಜ ಸಂಗತಿ ಇಷ್ಟು: ಬಭ್ರುವಿನ ಮಗ ಪಾಂಚಾಳನು ಬರೆದ ಕಾಮಶಾಸ್ತ್ರದ ಏಳು ಅಧಿಕರಣಗಳಲ್ಲಿ ಒಂದರ ಹೆಸರು 'ವೈಶಿಕ'. ಈ ಅಧಿಕರಣವನ್ನವಲಂಬಿಸಿ ಪಾಟಲಿಪುತ್ರದ ಗಣಿಕೆಯರಿಗಾಗಿ ದತ್ತಕ ಎಂಬವನು ಒಂದು ಸ್ವತಂತ್ರ ಕಾಮಶಾಸ್ತ್ರ ರಚಿಸಿದನು.[೨೮] ಈ ಗ್ರಂಥಕ್ಕೆ 'ವೈಶಿಕಸೂತ್ರ'ವೆಂದು 'ದತ್ತಕಸೂತ್ರ'ವೆಂದು ಹೆಸರು. ಗಂಗರ ಮಾಧವನು ಇದಕ್ಕೆ ಮಾತ್ರ ವೃತ್ತಿ ಬರೆದಿರುವ ಸಂಭವವಿದೆಯೆಂದು ಆರ್. ನರಸಿಂಹಾಚಾರ್ ಅವರು ಕ್ರಿ.ಶ. ೧೯೧೧ರಲ್ಲಿ ಹೊಸ ಊಹೆಯನ್ನು ವಿದ್ವಾಂಸರ ಮುಂದಿಟ್ಟರು.[೨೯] ತರುವಾಯ "A triennial catalogue of Manuscript 1916-17 to 1918-19 Vol. IV Sanskrit 'A' P. 6 (Madras)"ದಲ್ಲಿ ಉಲ್ಲಿಖಿತವಾದ 'ದತ್ತಕಸೂತ್ರವೃತ್ತಿಃ'ಯನ್ನು ಗಮನಿಸಿ "Among the Gangas, Madhava-I is as a rule described in the Copper-grants.....as the author of a Commentary on Dattaka's aphorisms...... The report mentions (P.6) the discovery of a Vritti or Commentary on two padas of the Dattakasutras, which is really a very interesting piece of information" ಎಂದು ಹೇಳುತ್ತ, ಕ್ರಿ.ಶ. ೧೯೨೦ರಲ್ಲಿ ಆ ಕೃತಿಯನ್ನೇ ಗುರುತಿಸಿಕೊಟ್ಟರು.[೩೦] ಅದಕ್ಕಾಗಿ ಮಾಧವನ 'ದತ್ತಕಸೂತ್ರವೃತ್ತಿ'ಯು ರೈಸ್ ಹೇಳುವಂತೆ ಮಕ್ಕಳ ದತ್ತಕ ವಿಷಯವನ್ನು ಪ್ರತಿಪಾದಿಸುವ ಶಾಸ್ತ್ರಕ್ಕೆ ಬರೆದ ವೃತ್ತಿಯೂ ಅಲ್ಲ, ಕನ್ನಡ ಕೃತಿಯೂ ಅಲ್ಲ. ಆರ್. ನರಸಿಂಹಾಚಾರ್ ಹೇಳುವಂತೆ ದತ್ತಕನೆಂಬವನ 'ವೈಶಿಕಸೂತ್ರ'ಹೆಸರಿನ ಕಾಮಶಾಸ್ತ್ರಕ್ಕೆ ಸಂಸ್ಕೃತದಲ್ಲಿ ಬರೆದ ವೃತ್ತಿ ಎಂದು ಈಗ ಖಚಿತವಾಗಿದೆ.

ಈ ಮಾಧವನಮಗ ಹರಿವರ್ಮ (ಆರ್ಯವರ್ಮ, ಕೃಷ್ಣವರ್ಮ)ನು "ನಾನಾಶಾಸ್ತ್ರ ಇತಿಹಾಸ ಪುರಾಣಗಳಲ್ಲಿ ಬಹುನಿಷ್ಣಾತನೆಂದು ಪೆನುಗೊಂಡೆ ಶಾಸನದಲ್ಲಿ ಹೇಳಿದೆ. "[೩೧] ಈತನ ಮಗ ಎರಡನೆಯ

---

೨೭. M.C.I.P. 196.

೨೮. ಈ ದತ್ತಕನು ಮದನತಿಲಕದಲ್ಲಿ (೧-೫೨ ಮತ್ತು ೫೮ ಗದ್ಯ) ಜತ್ತಡಂ, ಜಿತ್ತಾಕಂ, ಜಿತ್ತಕಂ ಎಂಬ ಭಿನ್ನಪಾಠಗಳ ಹೆಸರಿನಿಂದ ಉಲ್ಲಿಖಿತನಾಗಿದ್ದಾನೆ.

೨೯. Dattakasutra- R. Narasimhachar (JRAS. Vol. 43, P. 183) 1911.

೩೦. M.A.R. 1920, P. 47.

೩೧. ಕ.ಅ.ಮ. ಪು. ೧೨೬

ಮಾಧವ. "ಧರ್ಮಶಾಸ್ತ್ರಾಭ್ಯಾಸದಿಂದ ಇವನ ಬುದ್ಧಿ ನಿಶ್ಚಲವಾಗಿತ್ತು."[೩೨] ಈ ವಂಶದ ಅವನೀತ "ವಿದ್ಯಾವಿನಯಾತಿಶಯ ಪರಿಪೂರಿತಾನ್ತರಾತ್ಮಾ...... ವಿದ್ವತ್ಸುಪ್ರಥಮಗಣ್ಯಃ"[೩೩] ಎಂಬ ಪ್ರಖ್ಯಾತಿಗೆ ಪಾತ್ರನಾದ ವ್ಯಕ್ತಿ. ಈ ಅವಿನೀತನ ಮಗ ದುರ್ವಿನೀತ.

ಡಾ. ಬಿ.ಎಲ್. ರೈಸ್ ಅವರು "Pujyapada was the preceptor of the Ganga King Durvinita..... For among the praises of this King the Hebbur plates have the following explicit announcement: Sabdavatarakara- Devabharati-nivaddha brihatpathah-'Restricting himself to the path of greatness through the instruction of the divine who was the author of Sabdavatara" ಎಂದು ಹೆಬ್ಬೂರ ಶಾಸನ[೩೪]ವನ್ನಾಧರಿಸಿ ಕ್ರಿ.ಶ. ೧೮೯೦ರಲ್ಲಿ ನುಡಿದರು.[೩೫] ಇದರಿಂದ ಪೂಜ್ಯಪಾದ-ದುರ್ವಿನೀತರ ಗುರುಶಿಷ್ಯತ್ವ ಅಧಿಷ್ಠಾನಗೊಂಡಿತು. ೨೨ ವರುಷಗಳ ತರುವಾಯ ಆರ್. ನರಸಿಂಹಾಚಾರ್ ಅವರು ತಾವು ಶೋಧಿಸಿದ (ಕ್ರಿ.ಶ. ೧೯೧೨) ಗುಮ್ಮರೆಡ್ಡಿಪುರ ಶಾಸನದ 'ಶಬ್ದಾವತಾರಕಾರೇಣ ದೇವಭಾರತಿನಿವದ್ಧ ವಡ್ಡಕಥೇನ' ಎಂಬ ವಾಕ್ಯದ ಆಧಾರದಿಂದ, ಮೇಲಣ ಹೆಬ್ಬೂರಶಾಸನದ 'ದೇವಭಾರತೀನಿವದ್ಧ ಬೃಹತ್ಪಥ' ಎಂಬುದನ್ನು 'ದೇವಭಾರತೀನಿವದ್ಧ ಬೃಹತ್ಕಥ' ಎಂದು ಸರಿಯಾಗಿ ಓದಿ, ದುರ್ವಿನೀತನು ಶಬ್ದಾವತಾರ ಮತ್ತು ಬೃಹತ್ಕಥೆಗಳ ಕರ್ತೃವೆಂದು ಸಾರಿದುದಲ್ಲದೆ "There is no ground at all for Connecting Pujyapada with Durvinita" ಎಂದು ಹೇಳಿದರು.[೩೬] ಇದರಿಂದ ಕ್ರಿ.ಶ. ೧೮೯೦ರಲ್ಲಿ ಸಾಧಿಸಲ್ಪಟ್ಟ ಪೂಜ್ಯಪಾದ-ದುರ್ವಿನೀತರ ಗುರುಶಿಷ್ಯಸಂಬಂಧ ಕ್ರಿ.ಶ. ೧೯೧೨ರಲ್ಲಿ ಸಡಿಲುಗೊಂಡಿತು. ಶ್ರೀ ಜ್ಯೋತಿಪ್ರಸಾದ ಜೈನ ಮೊದಲಾದ ಜೈನವಿದ್ವಾಂಸರು ಶ್ರೀ ನರಸಿಂಹಾಚಾರ್ ಅವರ ಅಭಿಪ್ರಾಯವನ್ನು ಪ್ರಬಲವಾಗಿ ವಿರೋಧಿಸಿ ಪೂಜ್ಯಪಾದನು ದುರ್ವಿನೀತನ ಗುರುವೆಂದು ಒತ್ತುಕೊಟ್ಟು ಹೇಳುವರಾದರೂ [೩೭] ಓದುಗರ ಮನಸ್ಸು ಅದನ್ನೊಪ್ಪುವುದಿಲ್ಲ.

ದಂಡಿಯ ಅವಂತಿಸುಂದರೀ ಕಥೆಯಲ್ಲಿ "ದಕ್ಷಿಣಾಪಥದಲ್ಲಿ ಪ್ರಸಿದ್ಧವಾದ ಪಟ್ಟಣ ಕಾಂಚಿ; ಅದನ್ನು ಸಿಂಹವಿಷ್ಣುವೆಂಬ ಪಲ್ಲವರಾಜನು ಆಳುತ್ತಿದ್ದನು. ಆತನಿಗೆ ಕವಿಗಳೆಂದರೆ ಪ್ರಾಣ. ಒಂದು ದಿನ ಅಪರಿಚಿತನೊಬ್ಬನು ಅವನ ಆಸ್ಥಾನಕ್ಕೆ ಬಂದು ವಿಷ್ಣುವಿನ ನರಸಿಂಹಾವತಾರವನ್ನು ಬಣ್ಣಿಸುವ ಶ್ಲೋಕವೊಂದನ್ನು ಹೇಳಿದನು. ಶ್ಲೋಕದ ಭಾವದಿಂದ ಪರವಶನಾದ ರಾಜನು ಅದನ್ನು ಬರೆದವನ ಬಗೆಗೆ ಆಸಕ್ತಿಯಿಂದ ವಿಚಾರಿಸಲು ಆ ಅಪರಿಚಿತನು-ವಸ್ತುತಃ ಅವನೊಬ್ಬ ಗಂಧರ್ವ ಹೀಗೆಂದನಂತೆ : 'ಭಾರತವರ್ಷದ ಪಶ್ಚಿಮೋತ್ತರ ದಿಗ್ಭಾಗದಲ್ಲಿ ಆನಂದಪುರವೆಂಬ ನಗರ ಆರ್ಯಾವರ್ತಕ್ಕೆ ಶಿರೋರತ್ನದಂತೆ ರಾಜಿಸುತ್ತಿದೆ. ಅಲ್ಲಿ ಅನೇಕ ಪ್ರಸಿದ್ಧರಾಜರು ಆಗಿಹೋದರು. ಅಲ್ಲಿಯ ನಿವಾಸಿಗಳಲ್ಲಿ ಕೌಶಿಕಗೋತ್ರದ ಬ್ರಾಹ್ಮಣ ವಂಶವೊಂದು ದಕ್ಷಿಣಾಪಥದ ಅಚಲಪುರಕ್ಕೆ ವಲಸೆ ಬಂದಿತು. ಈ ವಂಶಕ್ಕೆ ಸೇರಿದ ನಾರಾಯಣಸ್ವಾಮಿ ಎಂಬಾತನಿಗೆ ದಾಮೋದರನೆಂಬ ಮಗನಾದನು. ಈತನು ತನ್ನ ನಿರುಪಮಪ್ರತಿಭೆಯಿಂದ 'ಭಾರವಿ' ಅಥವಾ ಬೆಳಗುವ ಸೂರ್ಯನೆಂಬ ಪ್ರಖ್ಯಾತಿಯನ್ನು ಪಡೆದನು; ಚಾಲುಕ್ಯರಾಜನಾದ ವಿಷ್ಣುವರ್ಧನನ ಗೆಳೆಯನಾದನು. ಒಮ್ಮೆ ವಿಷ್ಣುವರ್ಧನನೊಡನೆ ಭಾರವಿ ಬೇಟೆಗೆ

---

೩೨. ಕ.ಅ. ಮ. ಪು. ೧೨೮

೩೩. E.C. ix, ನೆಲಮಂಗಲ ೬೦ ಮಣ್ಣೆಗ್ರಾಮ.

೩೪. E.C. xii, ತುಮಕೂರು ೨೩, ಹೆಬ್ಬೂರ ಶಾಸನ.

೩೫. Early history of Kannada Literature- B.L. Rice, (JRAS xxii 1890).

೩೬. M.A. R. 1912, P. 35

ಹೋಗಿರುವಾಗ ಅವನ ಒತ್ತಾಯದಿಂದ ಅನಿವಾರ್ಯವಾಗಿ ಮಾಂಸವನ್ನು ತಿನ್ನಬೇಕಾಗಿ ಬಂದಿತು. ಆ ದೋಷದ ಪ್ರಾಯಶ್ಚಿತ್ತಕ್ಕಾಗಿ ಆತನು ತೀರ್ಥಯಾತ್ರೆ ಕೈಕೊಂಡು ದೇಶಾಟನೆ ಮಾಡಿ ಕಡೆಗೆ ದುರ್ವಿನೀತನೆಂಬ ರಾಜನ ಆಸ್ಥಾನವನ್ನು ಸೇರಿದನು. ಆತನೇ, ಈಗ ನಾನು ಹೇಳಿದ ಶ್ಲೋಕವನ್ನು ರಚಿಸಿದ ಕವಿ." ಇದನ್ನು ಕೇಳಿದೊಡನೆಯೆ ಪಲ್ಲವರಾಜನ ಕುತೂಹಲ ನೂರ್ಮಡಿಯಾಗಿ ಕೆರಳಿತು. ಆತನು ಮೇಲಿಂದ ಮೇಲೆ ಭಾರವಿಗೆ ಆಮಂತ್ರಣಗಳನ್ನು ಕಳುಹಿಸಿ ಕಡೆಗೊಮ್ಮೆ ತನ್ನ ಆಸ್ಥಾನಕ್ಕೆ ಬರಮಾಡಿಕೊಂಡನು. ಅವನಿಗಾಗಿ ಮನೆಯನ್ನೂ ಕಟ್ಟಿಸಿಕೊಟ್ಟನು....."[೩೮] ಎಂಬ ಉಲ್ಲೇಖವಿದೆ. ಇಲ್ಲಿ ಭಾರವಿಗೆ ಕೆಲಕಾಲ ಆಶ್ರಯನೀಡಿದ ಚಾಲುಕ್ಯ ವಿಷ್ಣುವರ್ಧನ, ಪಲ್ಲವ ಸಿಂಹರಾಜನ ಸಮಕಾಲೀನನೆಂದು ತಿಳಿದುಬರುವ ಕಾರಣ ದುರ್ವಿನೀತ ಕಾಲ ಕ್ರಿ.ಶ. ೬೦೦ ಎಂದು ಆರ್. ನರಸಿಂಹಾಚಾರ್ಯರ ಅಭಿಮತ.[೩೯] ಆದರೆ ಒಂದು ಶತಮಾನ ಹಿಂದೆ ಹೇಳುವ ಬಿ.ಎಲ್. ರೈಸ್, ಬುಲ್ಹರ್ ಮೊದಲಾದವರ ಹಳೆಯವಾದವನ್ನು ಶ್ರೀ ಜ್ಯೋತಿಪ್ರಸಾದ ಜೈನ ಮೊದಲಾದವರು ಇನ್ನೂ ಜೀವಂತವಾಗಿಟ್ಟಿರುವರು. ಒಟ್ಟಿನಲ್ಲಿ ಈತನು ೫ ಇಲ್ಲವೆ ೬ನೆಯ ಶತಮಾನದವನಾಗಿರಬಹುದು. ಆದರೆ ಪೂಜ್ಯಪಾದನ ಶಿಷ್ಯನೆನ್ನಲು ಸುಪುಷ್ಟ ಆಧಾರಗಳಿಲ್ಲ.

ಬಿ.ಎಲ್. ರೈಸ್ ಅವರು ಹೆಬ್ಬೂರ ಶಾಸನವನ್ನು "ಶಬ್ದಾವತಾರಕಾರ ದೇವಭಾರತಿನಿವದ್ಧ ಬೃಹತ್ಪಥಃ ಕಿರಾತಾರ್ಜುನೀಯ ಪಞ್ಚದಶಸರ್ಗ ಟೀಕಾಕಾರ ದುರ್ವ್ವಿನೀತ ನಾಮಮಯಃ" ಎಂದು ತಪ್ಪಾಗಿ ಓದಿ ದುರ್ವಿನೀತನ ಶಬ್ದಾವತಾರ, ಬೃಹತ್ಕಥೆಗಳನ್ನು ಗುರುತಿಸದೆ ಹೋದರು. ಅದಕ್ಕಾಗಿ ಈತನ ಹೆಸರಿನಲ್ಲಿ ಮೊದಲು (ಕ್ರಿ.ಶ. ೧೮೯೦) ಗುರುತಿಸಲ್ಪಟ್ಟ ಕೃತಿ ಕಿರಾತಾರ್ಜುನೀಯ ಟೀಕೆಯೊಂದೇ. ಆರ್. ನರಸಿಂಹಾಚಾರ್ ಅವರು ತಾವು ಶೋಧಿಸಿದ ಗುಮ್ಮರೆಡ್ಡಿಪುರ ಶಾಸನದ "ಶಬ್ದಾವತಾರ ಕಾರೇಣ ದೇವಭಾರತಿನಿಬದ್ಧ ವಡ್ಡಕಥೇನ ಕಿರಾತಾರ್ಜುನೀಯೇ ಪಂಚದಶಸರ್ಗ ಟೀಕಾಕಾರೇಣ" ಎಂಬ ವಾಕ್ಯವನ್ನಾಧರಿಸಿ "Durvinita was the author of the thrid work had long been known, but his authorship of the other two works is learnt for the first time from this inscription" ಎಂದು ಬರೆಯುತ್ತ ಶಬ್ದಾವತಾರ ಮತ್ತು ಬೃಹತ್ಕಥೆಗಳೂ ದುರ್ವಿನೀತ ಕೃತಿಗಳೆಂದು ಕ್ರಿ.ಶ. ೧೯೧೨ರಲ್ಲಿ ತೋರಿಸಿಕೊಟ್ಟರು.[೪೦] ಹೀಗೆ ಕ್ರಿ.ಶ. ೧೮೯೦ರಲ್ಲಿ ಕಿರಾತಾರ್ಜುನೀಯ, ೧೯೧೨ರಲ್ಲಿ ಬೃಹತ್ಕಥೆ ಮತ್ತು ಶಬ್ದಾವತಾರಗಳು ಈತನ ಕೃತಿಗಳೆಂದು ತಿಳಿದುಬಂದಿತು.

ಈ ಕಾವ್ಯತ್ರಯ ನಿರ್ಮಾಣಕ್ಕೆ ಕಾರಣೀಭೂತವಾದ ಇವನ ಅಭ್ಯಾಸವೈವಿಧ್ಯವನ್ನು ನಲ್ಲಾಲತಾಮ್ರಪಟವು "ಅನೇಕ ಕಾವ್ಯಕಥಾನಾಟಕಪ್ರಣಯನಪ್ರರೂಢಪಾಟವೇನ, ನೀತಿಶಾಸ್ತ್ರ ಗ್ರಂಥಾರ್ಥ

---

೩೭. The Date of Durvinita Ganga the Royal Patron of Pujyapada. (J.A. xviii-ii)

೩೮. ಸಂಸ್ಕೃತಕಾವ್ಯ- (ಡಾ. ಕೆ. ಕೃಷ್ಣಮೂರ್ತಿ, ಮೈ.ವಿ.ವಿ. ಪ್ರಕಟನೆ) ಪು. ೨೭೧

೩೯. ಕ.ಕ.ಚ. ಪು. ೧೩

೪೦. ಬಿ.ಎಲ್. ರೈಸರು ಮಂಗಲ ತಾಮ್ರಶಾಸನವನ್ನು (Ind. Ant. II, P. 157. 1873) "ಕಿರಾತಾಂಜುನಿಯ ಪಂಚದಶಸ್ಸರ್ಗದಿಕೊಂಕಾರೊ ದುವ್ವಿನೀತ ನಾಮಧೇಯಃ" ಎಂದು ಓದಿ".... equal to Kiratarjuna, the mighty master of the fifteen creations and of the syllable om, was called Durvinita" ಎಂದು ಅನುವಾದಿಸಿದುದನ್ನು ನೋಡಿದರೆ ೧೮೭೩ರ ಸುಮಾರಿಗೆ ಕಿರಾತಾರ್ಜುನೀಯ ಟೀಕೆಯೂ ಗುರುತಿಸಲ್ಪಟ್ಟಿರಲಿಲ್ಲವೆಂದು ತಿಳಿದುಬರುತ್ತದೆ.

ಪ್ರಯೋಗಪ್ರತಿಪಾದನಂ ಪ್ರತಿಪಕ್ಷ ವಿಷ್ಣುಗುಪ್ತೇನ, ಗಾಂಧರ್ವನಾಟ್ಯಶಾಸ್ತ್ರವ್ಯಾಖ್ಯಾನವಿನಿಯೋಗಂ ಪ್ರತಿಸಮತಿಶಯಿತ ತುಂಬುರುನಾರದಭರತರೇವಕಂಬಳಾಚಾರ್ಯೇಣ, ಹಸ್ತಿಶಿಕ್ಷಾವಿಜ್ಞಾನ ವಿನಿಯೋಜನಂ, ಪ್ರತಿಸಮತುಲಿತ ರಾಜಪುತ್ರ ಶಾಲಿಹೋತ್ರೇಣ, ಅಸ್ತ್ರೋಪಾಸ್ತ್ರಾದಿಪ್ರಹರಣ ವಿದ್ಯಾಭಿಯೋಗಂ ಪ್ರತಿಸಮಕ್ಷೀಕೃತ ಪರಶುರಾಮೇಣ, ಪುರುಷಲಕ್ಷಣ ಶಾಸ್ತ್ರವಿಧೀನ್ ಪ್ರತಿಸಾಕ್ಷಾತ್ಸಮುದ್ರ ಸೂರಿಣಾ, ಆಯುರ್ವೇದ ವಿಜ್ಞಾನಂ ಪ್ರತಿಸದೃಶಾತ್ರೇಯ ಧನ್ವಂತರೀ ಚರಕೇನ.... ಅರಿನರಪತಿ ಶ್ರೀದುರ್ವಿನೀತನಾಮಧೇಯೇನ" ಎಂದು ದಳಬಿಡಿಸಿ ಹೇಳುತ್ತದೆ.[೪೧] ಇಂಥ ವೈವಿಧ್ಯಪೂರ್ಣ ಪಾಂಡಿತ್ಯವನ್ನು ಪ್ರತಿನಿಧಿಸುವ ಈತನ ಮೂರು ಗ್ರಂಥಗಳಲ್ಲಿ ಒಂದೂ ದೊರೆತಿಲ್ಲವಾದರೂ ಅವುಗಳ ಸ್ವರೂಪವನ್ನು ಹೀಗೆ ಊಹಿಸಬಹುದು.

ಅವಂತಿಸುಂದರಿಕಥೆ ಹೇಳುವಂತೆ, ದುರ್ವಿನೀತನ ಆಸ್ಥಾನಕವಿಯಾಗಿದ್ದ ಭಾರವಿಯ 'ಕಿರಾತಾರ್ಜುನೀಯ'ವು ಸಂಸ್ಕೃತಸಾಹಿತ್ಯದ ಒಂದು ಶ್ರೇಷ್ಠಕೃತಿ. ಇದಕ್ಕೆ ಬರೆಯಲಾದ ಮಲ್ಲಿನಾಥ, ವಿದ್ಯಾಮಾಧವ, ಮಂಗಲಕವಿ, ಕೃಷ್ಣಕವಿ ಮೊದಲಾದವರ ಟೀಕೆಗಳಿಗಿಂತ ದುರ್ವಿನೀತನ ಟೀಕೆ ಪ್ರಾಚೀನತಮವಾದುದು. ಈತನ ಮೂರು ಕೃತಿಗಳನ್ನು ಉಲ್ಲೇಖಿಸುವ ಗಂಗರ ಶಾಸನಗಳು ಕೆಲವು ಸಲ ಈ ಕಿರಾತಾರ್ಜುನೀಯ ಟೀಕೆಯೊಂದನ್ನು ಮಾತ್ರ ಉಲ್ಲೇಖಿಸುತ್ತಿರುವುದು ಇದರ ಪ್ರಸಿದ್ಧಿಯ ದ್ಯೋತಕವೆನಿಸುತ್ತದೆ. ಬಿ.ಎಲ್.ರೈಸ್ ಅವರು "Durvinita...... written a commentary on fifteen sargas of the Kiratarjuniya" ಎಂದು ಹೇಳುವರು.[೪೨] ಆದರೆ ಫ್ಲೀಟ್ ಅವರು "೧೫ ಸರ್ಗಗಳ ವರೆಗೆ ಟೀಕೆ ಬರೆದು ಮಿಕ್ಕ ಮೂರು ಸರ್ಗಗಳಿಗೆ ಬರೆಯದಿರುವುದು ಅಸಂಭವವೆನಿಸುವುದರಿಂದ, ಚಿತ್ರಬಂಧ ಚಮತ್ಕಾರಗಳಿಂದ ಕೂಡಿದ 'ಚಿತ್ರಯುದ್ಧವರ್ಣನಂ' ಎಂಬ ೧೫ನೆಯ ಸರ್ಗಕ್ಕೆ ಮಾತ್ರ ಟೀಕೆ ಬರೆದಿರಬೇಕು"[೪೩] ಎಂದು ಹೇಳಿದುದು ಸತ್ಯವೆನಿಸುತ್ತದೆ.

ಈ ಸರ್ಗದ ೪೫ನೆಯ ಪದ್ಯದಿಂದ ೩ ಅರ್ಥಗಳು ಹೊರಡುತ್ತವೆ. ಪದ್ಯ ೨೯ ನಿರೋಷ್ಠ್ಯ. ಪದ್ಯ ೫ರ ನಾಲ್ಕು ಪಾದಗಳನ್ನು ಕ್ರಮವಾಗಿ ಸ, ಯ, ಲ, ಶ ಅಕ್ಷರಗಳಲ್ಲಿ ಹೆಣೆಯಲಾಗಿದೆ. ೩೮ನೆಯದು ಚ ಮತ್ತು ರ ಬಳಸಲಾದ ದ್ವ್ಯಕ್ಷರ ಪದ್ಯ. ೧೪ನೆಯದು ಕೇವಲ ನಕಾರ ಬಳಸಲಾದ ಏಕಾಕ್ಷರೀ ಪದ್ಯ. ೧೬ನೆಯ ಪದ್ಯದ,

ಸ್ಯಂದನಾನೋ ಚತುರಗಾಃ ಸುರೇಭಾ ವಾವಿಪತ್ತಯಃ।
ಸ್ಯಂದನಾ ನೋ ಚ ತುರಗಾಃ ಸುರೇಭಾ ವಾ ವಿಪತ್ತಯಃ॥

ಈ ಎರಡೂ ಚರಣಗಳಲ್ಲಿ ಅಕ್ಷರಸಾದೃಶ್ಯದೊಂದಿಗೆ ಅರ್ಥವೈದೃಶ್ಯವನ್ನು ಸಾಧಿಸಲಾಗಿದೆ. ಪದ್ಯ ೫೦ ಇದೇ ರೀತಿಯಾಗಿದೆ. ೫೨ನೆಯ ಪದ್ಯದ "ವಿಕಾಶಮೀಯುರ್ಜಗತೀಶಮಾರ್ಗಣಾ" ಎಂಬ ಪ್ರಥಮ ಚರಣವೇ ಮಿಕ್ಕ ಮೂರು ಚರಣಗಳಲ್ಲಿ ಪುನರುಕ್ತವಾಗಿದೆ.

---

೪೧. M.A.R. 1924. No. 79

೪೨. Early History of Kannada Literature-B.L. Rice (JRAS. xxii, 1890)

೪೩. Remarks on Mr. Narasimhachar's Notes- J.F. Fleet (JRAS. Vol. 43 P. 187. 1911)

ವೇತ್ರಶಾಕಕುಜೇ ಶೈಲೇs
ಲೇಶೈಜೇsಕುಕಶಾತ್ರವೇ।
ಯಾತಕಿಂ ವಿದಿಶೋ ಜೇತುಂ
ತುಂಜೇಶೋ ದಿವಿ ಕಿಂ ತಯಾ॥

ಎಂಬ ೧೮ನೆಯ ಪದ್ಯದ ಮೊದಲನೆಯ ಪಾದ ವಿಲೋಮಗೊಂಡು ಎರಡನೆಯ ಪಾದ, ಮೂರನೆಯ ಪಾದ ವಿಲೋಮಗೊಂಡು ನಾಲ್ಕನೆಯ ಪಾದವಾಗಿದೆ. ಈ ಕ್ರಮ ಇನ್ನೂ ಮುಂದುವರಿದು ೨೨ನೆಯ ಪದ್ಯ ಪೂರ್ತಿ ವಿಲೋಮಗೊಂಡು ೨೩ನೆಯ ಪದ್ಯವಾಗಿದೆ. ಇದೇ ರೀತಿ ಮಿಕ್ಕ ಪದ್ಯಗಳು ಚಿತ್ರ ವಿಚಿತ್ರವಾಗಿ ಹೆಣೆಯಲ್ಪಟ್ಟು ಈ ಸರ್ಗದ ತುಂಬ ಶಬ್ದಸಾಹಸ ನೆಲೆನಿಂತಿದೆ. ಆದುದರಿಂದ ಡಾ. ಫ್ಲೀಟ್ ಹೇಳುವಂತೆ ದುರ್ವಿನೀತನು ಅರ್ಥಜಟಿಲತೆಯಿಂದ ಕೂಡಿದ ಕಿರಾತಾರ್ಜುನೀಯದ ೧೫ನೆಯ ಸರ್ಗಕ್ಕೆ ಮಾತ್ರ ಟೀಕೆ ಬರೆದಿರುವ ಸಂಭವ ಹೆಚ್ಚು. ಈ ಟೀಕೆಯ ಭಾಷೆಯನ್ನು ಕುರಿತು ರೈಸ್ ಅವರು ಹೇಳುವ "This Commentary was no doubt in Kannada"[೪೪] ಎಂಬ ಮಾತನ್ನು ಆಧಾರಗಳು ಸಿಗುವ ವರೆಗೆ ಸಂದೇಹವಾಗಿಟ್ಟುಕೊಳ್ಳುವುದು ಲೇಸು.

ದುರ್ವಿನೀತನ ಇನ್ನೊಂದು ಕೃತಿ 'ಶಬ್ದಾವತಾರ'[೪೫] ಈ ಹೆಸರು, ಇದರ ವಸ್ತುವು ಭಾಷಾವಿವೇಚನೆಯೆಂದು ಸ್ಪಷ್ಟಪಡಿಸುತ್ತದೆ. ವೃತ್ತವಿಲಾಸನ ಧರ್ಮಪರೀಕ್ಷೆಯ "ಪಾಣಿನೀಯಕ್ಕೆ ಟೀಕಂ ಬರೆದಂ"[೪೬] ಎಂಬ, ಹುಮ್ಮಚ ಶಾಸನದ "ಸಕಲಬುಧನುತಂ ಪಾಣಿನೀಯಸ್ಯ ಭುಯೋ ನ್ಯಾಸಂ ಶಬ್ದಾವತಾರಂ ಕೃತ್ವಾ"[೪೭] ಎಂಬ ಮಾತುಗಳಿಂದ ಪೂಜ್ಯಪಾದನು ಪಾಣಿನೀಯಕ್ಕೆ 'ಶಬ್ದಾವತಾರ' ಹೆಸರಿನ ಟೀಕೆ ಬರೆದನೆಂದು ತಿಳಿದುಬರುತ್ತದೆ. ಆದರೆ ಮೇಲೆ ಹೇಳಿದ ಗಂಗರ ಶಾಸನಗಳಲ್ಲಿ ದುರ್ವಿನೀತನನ್ನೂ 'ಶಬ್ದಾವತಾರಕಾರಃ' ಎಂದು ಕರೆಯಲಾಗಿದೆ. ಈ ಸಂದಿಗ್ಧ ಸಂದರ್ಭದಲ್ಲಿ ಡಾ. ಸಾಲೆತೊರೆಯವರು "It may not be too much suppose that he put into Kannada the Original Sabbdavatara of Pujayapad obviously as a mark of respect for his great Guru"[೪೮] ಎಂದು ಊಹಿಸಿದ್ದಾರೆ. ಆದರೆ ಪೂಜ್ಯಪಾದ ದುರ್ವಿನೀತರು ಗುರುಶಿಷ್ಯರೆಂಬುದೇ ಆಧಾರ ಅಲಗುತ್ತಿರುವಾಗ ಕೃತಿಗಳ ನಾಮಸಾಮ್ಯದ ಬಲದಿಂದ ಒಂದರ ಕನ್ನಡ ಅನುವಾದ ಇಲ್ಲವೆ ಪರಿಷ್ಕರಣ ಇನ್ನೊಂದು ಎಂದು ಹೇಳುವುದು ಇನ್ನೂ ನಿರಾಧಾರವೆನಿಸುತ್ತದೆ.

ಬೃಹತ್ಕಥೆ ದುರ್ವಿನೀತನ ಮತ್ತೊಂದು ಕೃತಿ. ಆರ್. ನರಸಿಂಹಾಚಾರ್ಯರು ಗುಮ್ಮರೆಡ್ಡಿಪುರ ಶಾಸನದ 'ದೇವಭಾರತೀನಿವದ್ಧ ವಡ್ಡಕಥೇನ' ಎಂಬ ಪಾಠದ ಸಹಾಯದಿಂದ, ಈ ಮೊದಲು ರೈಸ್ ಅವರು ತಪ್ಪಾಗಿ

---

೪೪. M.C.I. P. 196

೪೫. 'ರೂಪಾವತಾರ' ಎಂಬುದು ಒಂದು ಬೌದ್ಧವ್ಯಾಕರಣದ ಹೆಸರು. (A note on the Rupavatar JORM VIII-iii ನೋಡಿರಿ.) E.C. vii SK 185; ತಾಳಗುಂದ ಶಾಸನ. E.I. xxxvii. p. 190; ತಮಿಳು ಶಾಸನ. E.I. xxxvii-iv P. 189 ಕೊಂಡಗುಳಿ ಶಾಸನ. ಈ ಮೂರರಲ್ಲಿ 'ರೂಪಾವತಾರ' ವ್ಯಾಕರಣದ ಉಲ್ಲೇಖ ಬರುತ್ತದೆ.

೪೬. ಕ.ಕ.ಚ. ಪು. ೫

೪೭. ಕ.ಕ.ಚ. ಅನುಬಂಧ II.ಪು. ೨೮

೪೮. Mediaeval Jainism, P. 23

ಓದಿದ್ದ 'ದೇವಭಾರತೀ ನಿವದ್ಧ ಬೃಹತ್ಪಥಃ' ಎಂಬ ಪಾಠವನ್ನು 'ದೇವಭಾರತೀ ನಿವದ್ಧ ಬೃಹತ್ಕಥಃ' ಎಂದು ಸರಿಗೊಳಿಸುತ್ತ, ದುರ್ವಿನೀತನು ಬೃಹತ್ಕಥೆ(ವಡ್ಡಕಥೆ) ಬರೆದಿರುವನೆಂದೂ ಇದು ಗುಣಾಢ್ಯನ ಬೃಹತ್ಕಥೆಯ ಸಂಸ್ಕೃತ ಅನುವಾದವಾಗಿರಬಹುದೆಂದೂ ಹೇಳಿದರು.[೪೯] ಗುಣಾಢ್ಯನ ನಿಜಚರಿತ್ರೆ ದಂತಕಥೆಗಳನ್ನಾಶ್ರಯಿಸಿದೆ, ಅವನ ಬೃಹತ್ಕಥೆ ಕಾಲಗರ್ಭದಲ್ಲಿ ಕಾಣದಾಗಿದೆ.[೫೦] ಆದರೆ ಇದನ್ನವಲಂಬಿಸಿ ಹುಟ್ಟಿದ,

೧) ಕಥಾಸರಿತ್ಸಾಗರ-ಸೋಮದೇವ
೨) ಬೃಹತ್ಕಥಾಮಂಜರಿ -ಕ್ಷೇಮೇಂದ್ರ
೩) ಬೃಹತ್ಕಥಾಶ್ಲೋಕ ಸಂಗ್ರಹ-ಬುಧಸ್ವಾಮಿ

ಎಂಬ ಮೂರು ಸಂಸ್ಕೃತ ಕೃತಿಗಳು ಮಾತ್ರ ದೊರೆತಿವೆ. ಇವುಗಳಲ್ಲಿ -ಸಾಗರ, -ಮಂಜರಿಗಳು ಕಾಶ್ಮೀರ ಪಾಠಸಂಪ್ರದಾಯಕ್ಕೆ, -ಸಂಗ್ರಹ ನೇಪಾಳ ಪಾಠಸಂಪ್ರದಾಯಕ್ಕೆ ಸೇರಿವೆ. ದುರ್ವಿನೀತನ ವಡ್ಡಕಥೆ ಇವುಗಳಿಗೆ ಪ್ರಾಚೀನವಾದ ಒಂದು ದಾಕ್ಷಿಣಾತ್ಯಪಾಠವೆಂದು ಆರ್. ನರಸಿಂಹಾಚಾರ್ಯರ ಹೇಳಿಕೆ. ತಮಿಳಿನಲ್ಲಿ ಬೃಹತ್ಕಥೆ ಎಂಬ ಅರ್ಥದ 'ಪೆರುಂಗತೈ' ಎಂಬ ಕೃತಿಯಿದೆ. ಉಪಲಬ್ಧವಿರುವ ಕಾಶ್ಮೀರ ಮತ್ತು ನೇಪಾಳ ಪಾಠಗಳಿಗೆ ಭಿನ್ನವಾಗಿರುವ ಈ ಪೆರುಂಗತೈಗೆ ದುರ್ವಿನೀತನ ದಾಕ್ಷಿಣಾತ್ಯಪಾಠವೇ ಮಾತೃಕೆಯಾಗಿರಬೇಕೆಂದು ಸ್ವಾಮಿನಾಥ ಅಯ್ಯರ್ ಊಹಿಸಿರುವರು.[೫೧] ಈ ಎಲ್ಲ ಪಾಠಸಂಪ್ರದಾಯಗಳನ್ನು ಹೀಗೆ ರೇಖಿಸಬಹುದು.

ಗುಣಾಢ್ಯನ ಕೃತಿ —
- ಕಥಾಸರಿತ್ಸಾಗರ, ಬೃಹತ್ಕಥಾಮಂಜರಿ-ಕಾಶ್ಮೀರ ಪಾಠ
- ಬೃಹತ್ಕಥಾಶ್ಲೋಕಸಂಗ್ರಹ-ನೇಪಾಳ ಪಾಠ
- ವಡ್ಡಕಥಾ (ಕನ್ನಡ), ಪೆರುಂಗತೈ (ತಮಿಳ್)-ದಾಕ್ಷಿಣಾತ್ಯಪಾಠ

ಪೆರುಂಗತೈಯ ಸ್ವರೂಪವನ್ನು ಕುರಿತು "ಪೆರುಂಗತೈ ಬೃಹತ್ಕಥೆಯ ತಮಿಳರೂಪ, ಕಥಾಸರಿತ್ಸಾಗರ ಮೊದಲಾದ ಸಂಸ್ಕೃತ ಗ್ರಂಥಗಳಿಗೂ ಇದಕ್ಕೂ ಎಷ್ಟೋ ವ್ಯತ್ಯಾಸವಿದೆ. ಕೆಲವು ವಿವರಗಳಲ್ಲಿ ಬೃಹತ್ಕಥಾಶ್ಲೋಕಸಂಗ್ರಹಕ್ಕೂ ಇದಕ್ಕೂ ಸಾಮ್ಯವಿರುವಂತೆ ತೋರುತ್ತದೆ. ಸಂಸ್ಕೃತ ಗ್ರಂಥಗಳಲ್ಲಿ ವಿದ್ಯಾಧರಚಕ್ರವರ್ತಿಯಾದ ನರವಾಹನದತ್ತನ ಕಥೆಗೆ ಪ್ರಾಧಾನ್ಯ ಹೆಚ್ಚು. ಅವನ ತಂದೆಯಾದ್ದರಿಂದ ಉದಯನನ ಕಥೆ ಅಲ್ಲಲ್ಲಿ ಬರುತ್ತದೆ. ಪೆರುಂಗತೈಯಲ್ಲಿ ಉದಯನನ ಕಥೆಯೇ ಮುಖ್ಯ. ನರವಾಹನದತ್ತನ ಕಥೆ ಆರು ಕಾಂಡಗಳಲ್ಲಿ ಒಂದು ಕಾಂಡದಷ್ಟು ಮಾತ್ರ.

---

೪೯. M.A.R. 1912, P. 31, 35.

೫೦. G.A.G. (G.A. Grierson) ಅವರು ತಮ್ಮ "The Brihatkatha in Markandeya", ಎಂಬ ಲೇಖನದಲ್ಲಿ ಹೀಗೆ ಹೇಳುತ್ತಾರೆ: ಮಾರ್ಕಂಡೇಯನು ತನ್ನ ಪ್ರಾಕೃತ ವ್ಯಾಕರಣದಲ್ಲಿ ಕೇಕಯ ಪಿಶಾಚಕೀ ಎಂಬ ಭಾಷೆಯನ್ನುವಿವೇಚಿಸುತ್ತ ಅಲ್ಲಿ ಕ್ವಚಿತ್ತ>ಕುಪಚಿ (ಸೂ. ೯) ಎಂದಾಗುವುದು ಎನ್ನುವನು. ಇದಕ್ಕೆ 'ಬೃಹತ್ಕಥಾಯಾಂ-ಕುಪಚಿ ಪಿಕಾಲಮ್'ಎಂದು ಆಕರಸಹಿತ ಉದಾಹರಣೆಯನ್ನು ಕೊಡುವನು. ಇದರಿಂದ ಗುಣಾಢ್ಯನ ಬೃಹತ್ಕಥೆಯ ಭಾಷೆ ಭಾರತದ ವಾಯವ್ಯಪ್ರದೇಶದಲ್ಲಿ ಪ್ರಚಲಿತವಿದ್ದ 'ಕೇಕಯ ಪಿಶಾಚಕೀ' ಎಂದೂ, ಆ ಕೃತಿ ಮಾರ್ಕಂಡೇಯನ ಕಾಲಕ್ಕೆ ಅಂದರೆ ಇಂದಿಗೆ ೨೫೦ ವರುಷಗಳ ಹಿಂದೆ ಉಪಲಬ್ಧವಿದ್ದಿತೆಂದೂ ಭಾವಿಸುವರು. (JRAS New) Vol. 45, 1913.

೫೧. ಪೆರುಂಗತೈ ತಮಿಳು ಗ್ರಂಥದ ಮುನ್ನುಡಿ. (An old Sanskrit verson of the Brihatkatha R. Narasimhachar (JRAS (New) Vol. 45, 1913) ಈ ಲೇಖನವನ್ನೂ ನೋಡಬಹುದು.

ಮೇಲೆ ಹೇಳಿದ ಸಂಸ್ಕೃತ ಗ್ರಂಥಗಳಲ್ಲಿ ಮುಖ್ಯವಾಗಿ ಶೈವಮತಸಂಬಂಧವೂ ಪೆರುಂಗತ್ತೈಯಲ್ಲಿ ಜೈನಮತಸಂಬಂಧವೂ ಅಲ್ಲಲ್ಲಿ ತೋರಿಬರುತ್ತವೆ. ಪೆರುಂಗತ್ತೈ ಬೃಹತ್ಕಥೆಯ ಮೂರನೆಯ (ದಾಕ್ಷಿಣಾತ್ಯ) ಪಾಠವೆನ್ನಬಹುದು." ಎಂದು[೫೨] ಎಲ್. ಗುಂಡಪ್ಪನವರು ಹೇಳುತ್ತಾರೆ. ಪೆರುಂಗತ್ತೈಗೆ ಮೂಲಮಾತೃಕೆಯೆಂದು ಹೇಳಲಾಗುವ ದುರ್ವಿನೀತನ ವಡ್ಡಕಥೆಗೂ ಈ ಮಾತುಗಳು ಅನ್ವಯಿಸುತ್ತವೆ.

ಒಂದು ಕಡೆ ಬಹುಕಾಲದ ಹಿಂದೆಯೇ ಗುಣಾಢ್ಯನ ಕೃತಿ ಕಳೆದುಹೋಗಿ[೫೩] ಇನ್ನೊಂದು ಕಡೆ ಕ್ಷೇಮೇಂದ್ರ, ಸೋಮದೇವ, ಬುಧಸ್ವಾಮಿಗಳ ಕೃತಿ ಇನ್ನೂ ಹುಟ್ಟಿರದ ಸಂದರ್ಭದಲ್ಲಿ ಪ್ರಚಾರದಲ್ಲಿದ್ದ, ದುರ್ವಿನೀತನ 'ವಡ್ಡಕಥಾ' ಹೆಚ್ಚು ಜನಪ್ರಿಯವಾಗಿರಬೇಕು. ಭಾಸನ ಸ್ವಪ್ನವಾಸವದತ್ತ, ಪ್ರತಿಜ್ಞಾಯೌಗಂಧರಾಯಣಗಳ ವಸ್ತು ಪೆರುಂಗತ್ತೈಯಲ್ಲಿ ಮಾತ್ರ ಇರುವುದರಿಂದ, ಭಾಸನಿಗೆ ಪರಿಚಿತವಿದ್ದ ಬೃಹತ್ಕಥೆಯ ಪಾಠ ದುರ್ವಿನೀತನ 'ವಡ್ಡಕತೆ'ಯೇ ಆಗಿರಬೇಕೆಂದು ಪಂಡಿತರ ಮತ.[೫೪]

ಶಾಸನಗಳ ಪ್ರಕಾರ ಈ ಕೃತಿಯ ಭಾಷೆ 'ದೇವಭಾರತಿ' ಅಂದರೆ ಸಂಸ್ಕೃತವೆಂದು ಆರ್. ನರಸಿಂಹಾಚಾರ್ ಅವರ ಅಭಿಪ್ರಾಯ. ಆದರೆ ಆಲ್‌ಫ್ರೆಡ್ ಮಾಸ್ಟರ ಅವರು 'It is doubtful whether these words mean, as Narasimhachar suggests 'made a translation of the Brihatkatha in Sanskrit' ಎಂದು ಸಂದೇಹವೆತ್ತಿ 'There is no exact parallel to the use of Devabharati as meaning Sanskrit' ಎಂದು ಹೇಳುತ್ತ 'Namisadhu says however 'arisavayane siddham devanam addhamagadhavani (in the Arsha text it is established that Ardhamagadhi is the speech of Gods)' ಎಂದು ಹೇಳುತ್ತಾರೆ.[೫೫] ಆದುದರಿಂದ ದುರ್ವಿನೀತನ ಕೃತಿಯ ಭಾಷೆ ಅರ್ಧಮಾಗಧಿಯೇ? ಎಂಬ ಸಂದೇಹ ಹುಟ್ಟುತ್ತದೆ. ಶಾಸನಗಳಲ್ಲಿ ಈ ಹೆಸರು ವಡ್ಡಕಥಾ, ಬೃಹತ್ಕಥಾ ಎಂಬ ಎರಡೂ ರೂಪಗಳಲ್ಲಿ ಲಭಿಸುತ್ತದೆ. ಪುಲಿಗೆಱೆ ಎಂಬುದನ್ನು ವ್ಯಾಘ್ರಪುರ ಎನ್ನುವಂತೆ ಈ ಶಾಸನದಲ್ಲಿ ವಡ್ಡಕಥಾ ಎಂಬುದನ್ನು ಬೃಹತ್ಕಥಾ ಎಂದು ಸಂಸ್ಕೃತಗೊಳಿಸಿ ಬಳಸಿರುವ ಸಾಧ್ಯತೆಯಿದೆ. ಇದಕ್ಕೆ ವಿರುದ್ಧವೆಂಬಂತೆ ಬೃಹತ್ಕಥೆಯೆಂಬುದನ್ನು ವಡ್ಡಕಥೆ ಎಂದು ಪ್ರಾಕೃತಗೊಳಿಸುವ ಸಂಪ್ರದಾಯ ನಮ್ಮಲ್ಲಿಲ್ಲ. ಆದುದರಿಂದ ದುರ್ವಿನೀತನ ಕೃತಿಗೆ 'ವಡ್ಡಕಥಾ' ಎಂಬ ಸಂಸ್ಕೃತವಲ್ಲದ ಹೆಸರೇ ಇರಬೇಕು. ಕೃತಿಯ ಹೆಸರು

---

೫೨. ಉದಯನ ಚರಿತ್ರ ಸಂಗ್ರಹ (ಪ್ರ.ಕ. ೨೧-೩) ಇದರ ೧. ಉಂಜ್ಜೈಕ್ಕಾಂಡಂ (ಉಜ್ಜಯಿನಿಕಾಂಡ) ೨. ಇಲಾವಾಣಕಾಂಡಂ (ಲಾವಾಣಕಾಂಡ) ೩. ಮಗಧಕ್ಕಾಂಡಂ (ಮಗಧಕಾಂಡ), ೪. ವೃತ್ತವಕಾಂಡಂ (ವತ್ಸವಕಾಂಡ), ೫. ನರವಾಹಣಕಾಂಡಂ (ನರವಾಹನಕಾಂಡ) ೬. ತೊರವುಕಾಂಡಗಳಲ್ಲಿ ಕೊನೆಯ ಒಂದೂವರೆ ಕಾಂಡ ಸಿಕ್ಕಿಲ್ಲ. ಈ ತಮಿಳು ಗ್ರಂಥದ ಪರಿಚಯಕ್ಕೆ
   ಅ. ಭಾಸನು ಅರಿತಿದ್ದ ಬೃಹತ್ಕಥೆಯ ಪಾಠ (ಪ್ರ.ಕ. ೧೮-೪)
   ಆ. ಉದಯನ ಚರಿತ್ರ ಸಂಗ್ರಹ (ಪ್ರ.ಕ. ೨೧-೩ ಮತ್ತು ೪; ೨೨-೩ ಮತ್ತು ೪; ೨೩-೨ ಮತ್ತು ೪)
   ಇ. Brihatkatha- S. Krishnaswami Aiyangar. (JRAS (New) xxxviii) ಎಂಬ ಲೇಖನಗಳನ್ನು ನೋಡಬಹುದು.

೫೩. "ದಂಡಿಯು'ಕಥೆಯನ್ನು ಎಲ್ಲಾ ಭಾಷೆ (ಆಡುವ ಮಾತು?)ಗಳಲ್ಲಿಯೂ, ಸಂಸ್ಕೃತದಲ್ಲಿಯೂ ಕೂಡ ಬರೆಯಲಾಗುತ್ತದೆ. ಭೂತಭಾಷೆಯಲ್ಲಿ ಬೃಹತ್ಕಥೆ ಅದ್ಭುತ ವಿಷಯದ್ದೆಂದು ಹೇಳುತ್ತಾರೆ' ಎಂದಿದ್ದಾನೆ. ಇದರಿಂದ ಭೂತಭಾಷೆಯಲ್ಲಿ ಬರೆದಿದ್ದ ಬೃಹತ್ಕಥೆಯನ್ನು ಅವನು ನೋಡಿರಲಿಲ್ಲವೆಂಬುದು ಸ್ಪಷ್ಟವಾಗುತ್ತದೆ"- ಕಥಾಮೃತ (ಎ.ಆರ್. ಕೃಷ್ಣಶಾಸ್ತ್ರಿ-ಪೀಠಿಕೆ xxii)

೫೪. ಭಾಸನು ಅರಿತಿದ್ದ ಬೃಹತ್ಕಥೆಯ ಪಾಠ ಯಾವುದು? (ಪ್ರ.ಕ. ೧೮-೪)

೫೫. The mysterious Paisachi-Alfred Master (JRAS (New) 1943, p. 36)

ಸಾಮಾನ್ಯವಾಗಿ ಆದರ ಭಾಷೆಯನ್ನು ಸೂಚಿಸುವುದರಿಂದ ಈ ವಡ್ಡಕಥೆಯ ಭಾಷೆ ಸಂಸ್ಕೃತವಾಗಿರದೆ ಬಹುಶಃ ಆಲ್‌ಫ್ರೆಡ್ ಮಾಸ್ಟರ್ ಹೇಳುವಂತೆ ಅರ್ಧಮಾಗಧಿ ಇರಬಹುದು.

ಕವಿರಾಜಮಾರ್ಗದ ಕನ್ನಡ 'ಗದ್ಯಕಥಾ' ಕವಿಗಳ ಮಾಲಿಕೆಯಲ್ಲಿ ಕಾಣುವ ದುರ್ವಿನೀತನು ಈ ಗಂಗ ದೊರೆಯೆಂದು ವಿದ್ವಾಂಸರ ನಂಬುಗೆ. ಈತನ ಶಬ್ದಾವತಾರ ವ್ಯಾಕರಣ ಕೃತಿ; ಕಿರಾತಾರ್ಜುನೀಯಟೀಕೆ ಟೀಕಾಗ್ರಂಥ. ಆದುದರಿಂದ ಈ 'ವಡ್ಡಕಥೆ'ಯ ಸ್ವರೂಪ ಗದ್ಯಕಥೆ, ಭಾಷೆ ಕನ್ನಡವೆಂಬ ಸಂದೇಹ ಹುಟ್ಟುತ್ತದೆ. ಆದರೆ ಕನ್ನಡವನ್ನು 'ದೇವಭಾರತಿ' ಎಂದು ಕರೆಯುವ ಹಾಗಿಲ್ಲ. ಅದಕ್ಕಾಗಿ ಈತನ 'ಗದ್ಯಕಥಾ' ರೂಪದ ಕನ್ನಡಕೃತಿ ಬೇರೊಂದು ಇರಬಹುದೇ ಎನಿಸುತ್ತದೆ.

ಒಟ್ಟಿನಲ್ಲಿ ಬೃಹತ್ಕಥೆಯ ಪುತ್ರಿಕೆಯಾಗಿರಬಹುದಾದ ದುರ್ವಿನೀತನ ಕೃತಿಭಾಷೆ ಸಂಸ್ಕೃತವೇ ಇರಲಿ, ಪ್ರಾಕೃತ ಇಲ್ಲವೆ ಕನ್ನಡವಾಗಿರಲಿ ಇದೊಂದು ಭಾರತೀಯ ಕಥಾಪ್ರಪಂಚಕ್ಕೆ ಅಮೂಲ್ಯ ಕೊಡುಗೆಯೆಂಬುದನ್ನು ಮರೆಯುವಂತಿಲ್ಲ.

ಈ ಪ್ರಸಂಗದಲ್ಲಿ ವಿದ್ವಾನ್ ಕೆ. ವೆಂಕಟರಾಯಾಚಾರ್ ಅವರು ಈತನ ಕರ್ತೃತ್ವದ ಬಗ್ಗೆ ಹೀಗೆ ಸಂದೇಹ ವ್ಯಕ್ತಪಡಿಸಿರುವರು: ದುರ್ವಿನೀತನ ಆಳಿಕೆಯ ೪೦ನೆಯ ವರ್ಷದ ವಿಜಯ ಸಂವತ್ಸರದ ವೈಶಾಖಮಾಸದಲ್ಲಿ ಹುಟ್ಟಿದ, ಹಿಂದೆ ಹೇಳಲಾದ ನಲ್ಲಾಲ ತಾಮ್ರಪಟದಲ್ಲಿ ಈತನ ಪಾಂಡಿತ್ಯ, ಪ್ರತಿಭೆಗಳನ್ನು ಮಾತ್ರ ಹೇಳಿ, ಅದೇ ಸಂವತ್ಸರದ ಮಾಘಮಾಸದ ಗುಮ್ಮರೆಡ್ಡಿಪುರ ಶಾಸನದಲ್ಲಿ ವಡ್ಡಕಥೆ, ಕಿರಾತಾರ್ಜುನೀಯ ಟೀಕೆ, ಶಬ್ದಾವತಾರ ಎಂಬ ೩ ಗ್ರಂಥಗಳನ್ನು ಉಲ್ಲೇಖಿಸಿರುವುದನ್ನು ಕಾಣುತ್ತೇವೆ. ಅದಕ್ಕಾಗಿ ವೈಶಾಖದಿಂದ ಮಾಘದವರೆಗೆ ಅಂದರೆ ೯ ತಿಂಗಳ ಅವಧಿಯಲ್ಲಿ ಈ ಮೂರು ಗ್ರಂಥಗಳನ್ನು ಬರೆದನೆಂದು ನಂಬುವುದು ಅಸಾಧ್ಯ. ಎರಡನೆಯದಾಗಿ ಈತನ ಮೊಮ್ಮಗನ ಮಗ ಭೂವಿಕ್ರಮನ ಬೆದಿರೂರ ತಾಮ್ರಪಟದಲ್ಲಿ ದುರ್ವಿನೀತನನ್ನು 'ಕಾರಿತ ಕಿರಾತಾರ್ಜುನೀಯ ಟೀಕಾಕಾರೋ' ಎಂದು ಹೇಳಲಾಗಿದೆ. ಇಲ್ಲಿ 'ಕೃತ' ಎನ್ನದೆ 'ಕಾರಿತ' ಎಂದಿರುವುದರಿಂದ ಕಿರಾತಾರ್ಜುನೀಯ ಟೀಕೆಯನ್ನು ಅನ್ಯರಿಂದ ಬರೆಸಿರಬಹುದು. ಈ ಸಂದೇಹವನ್ನು ಮಿಕ್ಕ ಕೃತಿದ್ವಯಕ್ಕೂ ಅನ್ವಯಿಸಬಹುದು ಎಂದು ಅವರ ಮತ.[೫೬] "ಶ್ರೀಮದುಭಯ ಕವಿಚಕ್ರವರ್ತಿ ನಿರ್ವರ್ತಿತಮುಂ....... ಮಲ್ಲಪಾರ್ಯ-ಪುನ್ನಮಾರ್ಯ ಕಾರಿತಮುಮಪ್ಪ ಪುರಾಣಚೂಡಾಮಣಿ......."[೫೭] ಎಂಬಲ್ಲಿಯ 'ಕಾರಿತ'ಪದವನ್ನು ನೋಡಿದರೆ ಶ್ರೀಯುತರ ವಾದ ಸತ್ಯವೇನೋ ಎನಿಸುತ್ತದೆ. ಆದರೆ ಬೆದಿರೂರ ತಾಮ್ರಪಟದ ನೈಜತೆ-ಕೃತಕತೆಗಳ ಬಗೆಗೆ ಪಂಡಿತರಲ್ಲಿ ಭಿನ್ನಾಭಿಪ್ರಾಯಗಳಿವೆ. 'ಕಾರಿತ' ಎಂಬುದು ಬರೆಹ ದೋಷವಾಗಿರಲು, ನಲ್ಲಾಲ ತಾಮ್ರಪಟ ಭಾವಯಿತ್ರೀ ಪ್ರತಿಭೆಯನ್ನು ಮಾತ್ರ ಹೇಳಿರಲು ಸಾಧ್ಯವಿದೆ ಎಂದು ಪ್ರತಿವಾದಿಸಲು ಬರುತ್ತದೆ. ಆದರೂ ಗ್ರಂಥಗಳು ಲಭಿಸುವ ವರೆಗೆ ಗೆರೆ ಬರೆದು ಹೇಳುವುದು ಸಾಧ್ಯವಿಲ್ಲ.

---

೫೬. ದುರ್ವಿನೀತನ ಕಾವ್ಯಗಳು- ಎ. ವೆಂಕಟರಾಯಾಚಾರ್, ಸುರತ್ಕಲ್ (ಸುಬೋಧ ೩೦-೨)

೫೭. "ಕವಿರತ್ನ ನಿರ್ಮಿತ ಶ್ರೀದಾನಚಿಂತಾಮಣಿ ನಿರ್ಮಾಪಿತ ಶ್ರೀಮದಜಿತ ತೀರ್ಥಕರ ಪುರಾಣತಿಲಕದೊಳ್"
"ನೇಮಿಚಂದ್ರ ಕೃತಮುಂ...... ಸೆಜ್ಜೆವಳ್ಳ ಪದ್ಮನಾಭದೇವಕಾರಿತಮುಮಪ್ಪ ನೇಮಿನಾಥಪುರಾಣದೊಳ್"
"ಸಹಜಕವಿ ಮನೋಗೇಹ ಮಾಣಿಕ್ಯದೀಪ (=ಮಹಾಬಲ) ವಿರಚಿತಮುಂ....... ಕ್ಷೇಮಂಕರನಾಯಕಕಾರಿತಮುಮಪ್ಪ ಶ್ರೀಮನ್ನೇಮಿನಾಥ ಪುರಾಣದೊಳ್"- ಎಂಬ ಕಾವ್ಯಾಂತ್ಯ ಪ್ರಶಸ್ತಿಗಳನ್ನೂ ಗಮನಿಸಬಹುದು.

ಪದ್ಯಕವಿಗಳು :

"ಪದ್ಯಂ ಸಮಸ್ತಜನತಾಹೃದ್ಯಂ .... ವಿದ್ಯಾಪಾರಪರಾಯಣಮಾದ್ಯಂ" ಎಂಬುದು ಆ ಕಾಲದ ಜನತೆಗೆ ಪದ್ಯದ ಬಗೆಗೆ ಇದ್ದ ಒಂದು ಪ್ರಾತಿನಿಧಿಕ ಅಭಿಪ್ರಾಯವೆನಿಸಿದೆ. ಇದು 'ಸದ್ವೃತ್ತಿ ವೃತ್ತ ಜಾತ್ಯಾಯತ್ತಂ' ಅಂದರೆ ವೃತ್ತ ಮತ್ತು ಜಾತಿ ಎಂಬ ಎರಡು ಛಂದೋಭೇದವುಳ್ಳದ್ದು. ಚತ್ತಾಣ ಬೆದಂಡೆಗಬ್ಬಗಳು ಈ ವೃತ್ತ ಮತ್ತು ಜಾತಿ ಪದ್ಯಗಳನ್ನೊಳಗೊಂಡ ಕನ್ನಡದ ಎರಡು ಪದ್ಯಕಾವ್ಯಪ್ರಭೇದಗಳು. ಕವಿರಾಜಮಾರ್ಗದ,

ಪರಮ ಶ್ರೀವಿಜಯ ಕವೀ। ಶ್ವರ ಪಂಡಿತ ಚಂದ್ರ ಲೋಕಪಾಲಾದಿಗಳಾ।
ನಿರತಿಶಯಮಸ್ತುವಿಸ್ತರ। ವಿರಚನೆ ಲಕ್ಷ್ಯಂ ತದಾದ್ಯಕಾವ್ಯಕ್ಕೆಂದುಂ॥[೫೮]

ಎಂಬ ಪದ್ಯ, ಈ ಉಭಯಕಾವ್ಯಪ್ರಭೇದಗಳು ನಿರತಿಶಯವಸ್ತುವಿಸ್ತರವಿರಚನೆ (ಸಣ್ಣಗಾತ್ರದ ವಸ್ತು) ಗಳೆಂದೂ ಶ್ರೀವಿಜಯ ಕವೀಶ್ವರ ಪಂಡಿತ ಚಂದ್ರ ಲೋಕಪಾಲಾದಿಗಳು ಇಂಥ ಕೃತಿಗಳ ನಿರ್ಮಾತೃಗಳೆಂದೂ ತಿಳಿಸಿಕೊಡುತ್ತದೆ. ಗದ್ಯಕವಿಗಳ ಹಾಗೆ ಈ ಪದ್ಯ ಕವಿಗಳ ಚರಿತ್ರೆ ಮತ್ತು ಕೃತಿಗಳು ಇನ್ನೂ ಅಜ್ಞಾತವಾಸದಲ್ಲಿವೆ. ಉಪಲಬ್ಧ ಊಹೆ, ಆಧಾರಗಳನ್ನವಲಂಬಿಸಿ ಅವನ್ನು ಜ್ಞಾತಗೊಳಿಸುವ ಪ್ರಯತ್ನವನ್ನು ಕೆಳಗಿನಂತೆ ಮಾಡಬಹುದು.

ಶ್ರೀವಿಜಯ: ಡಾ. ಫ್ಲೀಟ್, ಡಾ. ಮುಗಳಿಯವರು 'ಶ್ರೀವಿಜಯಕವೀಶ್ವರ' ಎಂದೂ ಮಿಕ್ಕವರು 'ಶ್ರೀವಿಜಯ' 'ಕವೀಶ್ವರ' ಎಂದೂ ಈ ಹೆಸರನ್ನು ಭಾವಿಸುವರು. ಇಬ್ಬರಿಗೂ ಹೇಳಿಕೊಳ್ಳುವ ಆಧಾರಗಳಿಲ್ಲ. ಕನ್ನಡಸಾಹಿತ್ಯದಲ್ಲಿ ಕಂಡುಬರುವ ಶ್ರೀವಿಜಯ, ಶ್ರೀವಿಜಯರ್, ಶ್ರೀವಿಜಯದೇವರ್, ವಿಜಯಕವೀಂದ್ರ ಎಂಬ ಹೆಸರುಗಳೂ ಈ ಪ್ರಶ್ನೆ ಬಿಡಿಸಲು ನೆರವಾಗುವುದಿಲ್ಲ. ಪ್ರಯೋಜಕ ಆಧಾರಗಳು ಲಭಿಸುವ ವರೆಗೆ ಕವಿಚರಿತೆಕಾರರು ಹೇಳುವಂತೆ ಶ್ರೀವಿಜಯ ಬೇರೆ, ಕವೀಶ್ವರ ಬೇರೆ ಎಂದು ಇಟ್ಟುಕೊಳ್ಳಬಹುದು.

ಶ್ರೀ ವಿಜಯನು ಜೈನನೆಂಬುದು ಸತ್ಯ. ಆದರೆ ಕನ್ನಡಸಾಹಿತ್ಯದಲ್ಲಿ ಕಂಡುಬರುವ ಈ ಹೆಸರಿನ ಅನೇಕ ವ್ಯಕ್ತಿಗಳಲ್ಲಿ ಪ್ರಸ್ತುತ ವ್ಯಕ್ತಿಯನ್ನು ಗುರುತಿಸುವುದು ತೀರಕಷ್ಟ. ಈ ಪ್ರಸಂಗದಲ್ಲಿ,

೧. ಚತ್ತಾಣ-ಬೆದಂಡೆಗಬ್ಬಗಳ ಶ್ರೀವಿಜಯ
೨. ಕವಿಮಾರ್ಗ-ಕವಿರಾಜಮಾರ್ಗಗಳ ಶ್ರೀವಿಜಯ
೩. ಚಂದ್ರಪ್ರಭಚರಿತೆಯ ಶ್ರೀವಿಜಯ

ಎಂಬ ಮೂರು ಹೆಸರುಗಳು ಗಮನಾರ್ಹವೆನಿಸಿವೆ. ಕವಿಮಾರ್ಗ-ಕವಿರಾಜಮಾರ್ಗಗಳ ಶ್ರೀವಿಜಯನು ಚತ್ತಾಣ-ಬೆದಂಡೆಗಬ್ಬದ ಕವೀಶ್ವರ ಪಂಡಿತಚಂದ್ರ ಲೋಕಪಾಲರ ಮಾಲಿಕೆಯಲ್ಲಿ, ಅದೂ ಮೊಟ್ಟಮೊದಲು ತನ್ನ ಹೆಸರನ್ನು ಸೇರಿಸಲಾರ; ಅದು ಆತ್ಮಪ್ರತಿಷ್ಠೆ. ಮೇಲಾಗಿ ಶ್ರೀವಿಜಯಕವೀಶ್ವರಾದಿಗಳ ವಿರಚನೆ 'ಆದ್ಯಕಾವ್ಯ'ಕ್ಕೆ ಉದಾಹರಣೆಗಳೆಂದು ಹೇಳಿರುವ ಕಾರಣ ಅವರು ಕವಿರಾಜಮಾರ್ಗಕ್ಕೆ ಪ್ರಾಚೀನರು. ಆದುದರಿಂದ ಚತ್ತಾಣ-ಬೆದಂಡೆಗಬ್ಬಗಳ ಶ್ರೀವಿಜಯ ಬೇರೆ, ಕವಿಮಾರ್ಗ-ಕವಿರಾಜಮಾರ್ಗಗಳ ಶ್ರೀವಿಜಯ ಬೇರೆ ಎಂಬುದು ಗಟ್ಟಿಮಾತು.

---

೫೮. ಕ.ಮಾ. ೧-೩೨

ನೇಮಿಜಿನೇಶಸಂಗತಿಯಲ್ಲಿ "ಕನ್ನಡದೊಳು ಚಂಪೂಕಾವ್ಯವ ನೆಱೆಪೇಟ್ದ।ಸನ್ನುತ ಸತ್ಕವೀಶ್ವರ"[೫೯] ರನ್ನು ಉಲ್ಲೇಖಿಸುತ್ತ "ದೇವ ಚಂದ್ರಪ್ರಭರನು ಕೊಂಡಾಡಿದ ।ಶ್ರೀ ವಿಜಯರು......"[೬೦] ಎಂದು ಹೇಳಿದ್ದು, ಇದರಿಂದ ಶ್ರೀ ವಿಜಯನೆಂಬವನು "ಚಂದ್ರಪ್ರಭಚರಿತೆ" ಎಂಬ ಚಂಪೂಕೃತಿ ಬರೆದಿರುವನೆಂದು ಸ್ಪಷ್ಟವಾಗುತ್ತದೆ. ಚಂದ್ರಪ್ರಭಾಸಾಂಗತ್ಯವೆಂಬ ಇನ್ನೊಂದು ಕೃತಿಯಲ್ಲಿ ಬರುವ "ಚಂದ್ರಪ್ರಭಪುರಾಣವ ಪೇಟ್ದ ವಿಜಯಕವೀಂದ್ರ"[೬೧] ಎಂಬ ಮಾತು ಶ್ರೀವಿಜಯನ ಕೃತಿ ಚಂದ್ರಪ್ರಭಪುರಾಣವೆಂದು ಇನ್ನೂ ಸ್ಪಷ್ಟಗೊಳಿಸುತ್ತದೆ. ಕವಿರಾಜಮಾರ್ಗಕ್ಕೆ ಪ್ರಾಚೀನವಾಗಿರುವ ಚತ್ತಾಣ ಬೆದಂಡೆಗಬ್ಬಗಳ ಶ್ರೀವಿಜಯನ ಕಾಲಕ್ಕೆ ಕನ್ನಡ ಚಂಪೂ ರೂಪಗೊಂಡುದಕ್ಕೆ ಆಧಾರಗಳಿಲ್ಲ. ಹೀಗಾಗಿ ಚಂಪೂರೂಪದ ಚಂದ್ರಪ್ರಭ ಪುರಾಣದ ಕರ್ತೃ ಕವಿರಾಜಮಾರ್ಗದ ಶ್ರೀವಿಜಯನೋ, ತರುವಾಯದ ಯಾವನೋ ಒಬ್ಬ ಶ್ರೀವಿಜಯನೋ ಆಗಿರಬೇಕು. ಈ ಚಂದ್ರಪ್ರಭಪುರಾಣದ ಉಲ್ಲೇಖವು ಅಗ್ಗಳನ ಚಂದ್ರಪ್ರಭಪುರಾಣ (೧೧೮೯) ಮತ್ತು ಇತರ ಕನ್ನಡ ಕೃತಿಗಳಲ್ಲಿ ಬಾರದೆ, ಒಮ್ಮೆಲೆ ೧೬ನೆಯ ಶತಮಾನದ ನೇಮಿಜಿನೇಶ ಸಂಗತಿ (೧೫೦೮) ಮತ್ತು ಚಂದ್ರಪ್ರಭ ಸಾಂಗತ್ಯ (೧೫೫೦)ಗಳಲ್ಲಿ ಮಾತ್ರ ಬರುವುದರಿಂದ ಅದರ ಕರ್ತೃ ತೀರ ಅರ್ವಾಚೀನ ಎನಿಸುತ್ತದೆ. ನೇಮಿಜಿನೇಶ ಸಂಗತಿ (೧೫೦೮) ಮತ್ತು ಚಂದ್ರಪ್ರಭಸಾಂಗತ್ಯ (೧೫೫೦)ಗಳ ರಚನೆಯ ಕಾಲದಲ್ಲಿ ಲಭ್ಯವಿದ್ದಿರಬಹುದಾದ ಈ ಕೃತಿ ಪ್ರಯತ್ನಪಟ್ಟಲ್ಲಿ ಲಭಿಸುವ ಸಾಧ್ಯತೆಯಿದೆ.

ಶ್ರೀ ಬೇಂದ್ರೆಯವರು ಸಮಂತಭದ್ರನೆಂದರೆ ಈ ಚತ್ತಾಣ ಬೆದಂಡೆಗಬ್ಬಗಳ ಶ್ರೀವಿಜಯನೆಂದೂ ಚಂದ್ರಪ್ರಭಪುರಾಣ ಈತನ ಕೃತಿಯೆಂದೂ ಹೇಳುವುದು [೬೨] ಸಂಶೋಧನ ಕ್ಷೇತ್ರದಲ್ಲಿ ನಿಲ್ಲಲು ಸಾಮರ್ಥ್ಯವಿಲ್ಲದ ಉಕ್ತಿವೈಚಿತ್ರ್ಯವೆನಿಸಿದೆ. ಹೀಗಾಗಿ ಇವನ ಚರಿತ್ರನಿರೂಪಣೆಗೆ ಹೆಚ್ಚಿನ ಆಧಾರಗಳು ಬೇಕಾಗಿವೆ.

ಇತ್ತೀಚಿನ ಇನ್ನೊಂದು ಸಂಗತಿಯೆಂದರೆ, ೧೯೭೩ರಲ್ಲಿ ಲಭ್ಯವಾಗಿ ೧೯೭೪ರಲ್ಲಿ ಪ್ರಕಟವಾದ ಇಮ್ಮಡಿ ನಾಗವರ್ಮ (೧೦೪೨)ನ ವರ್ಧಮಾನ ಪುರಾಣದಲ್ಲಿ ಗುಣವರ್ಮನ ಹರಿವಂಶಕ್ಕಿಂತ ಮೊದಲು ಶ್ರೀ ವಿಜಯನ ರಘುವಂಶ ಮಹಾಪುರಾಣದ ಉಲ್ಲೇಖ ಬರುತ್ತದೆ. ಈತನು ಚತ್ತಾಣ-ಬೆದಂಡೆಗಬ್ಬಗಳ ಶ್ರೀವಿಜಯ ಇಲ್ಲವೆ ಕವಿಮಾರ್ಗ-ಕವಿರಾಜಮಾರ್ಗಗಳ ಶ್ರೀವಿಜಯರಲ್ಲಿ ಒಬ್ಬನಾಗಿರಬಹುದು.

ಕವೀಶ್ವರ: ಇದು ಶ್ರೀವಿಜಯನ ಬಿರುದೋ, ಒಬ್ಬನ ಹೆಸರೋ ಆಗಿರಬೇಕು. ಈತನು ಕವಿಪರಮೇಷ್ಠಿ ಎಂಬ ಬೇಂದ್ರೆಯವರ ಅಭಿಪ್ರಾಯ [೬೩] ಸರ್ವಸಾಮಾನ್ಯವಾಗಿಲ್ಲ.

ಪಂಡಿತ: ಇದು ಹೆಸರು ಇಲ್ಲವೆ ಬಿರುದು ಆಗಿರಬಹುದು. ಶಾಸನಗಳಲ್ಲಿ ಸಾಮಾನ್ಯವಾಗಿ ಜೈನ ಆಚಾರ್ಯರ, ಶೈವಗುರುಗಳ ಹೆಸರಿನೊಂದಿಗೆ ಪಂಡಿತ ಎಂಬ ಪದ ಸೇರಿಕೊಂಡು ಬರುತ್ತದೆ. ಜ.ಚ.ನಿ. ಅವರು ಹೇಳುವಂತೆ ಈತನು ಶೈವಪಂಡಿತಾರಾಧ್ಯ,[೬೪] ಬೇಂದ್ರೆಯವರು ಹೇಳುವಂತೆ ಜೈನ ಪೂಜ್ಯಪಾದ[೬೫] ಇಲ್ಲವೆ ಬೇರೊಬ್ಬ ವ್ಯಕ್ತಿ ಇರಬಹುದು.

೫೯-೬೦. ನೇ.ಜಿ. ಸಂಗತಿ ೧-೨೨ ಮತ್ತು ೧-೨೪ ೬೧.ಕ.ಕ.ಚ. ಪು. ೧೩

೬೨. ಸಮಂತಭದ್ರನೇ ಶ್ರೀವಿಜಯನಿರಬಹುದೇ? (ಸಾ. ಸಂ.ಪು. ೧೦೯)

೬೩. ಸಮಂತಭದ್ರನೇ ಶ್ರೀವಿಜಯನಿರಬಹುದೇ? (ಸಾ.ಸಂ.ಪು. ೧೦೯)

೬೪. ಶ್ರೀಶೈಲಪೀಠದರ್ಶನ-ಪು. ೯ ೬೫.ಸಮಂತಭದ್ರನೇ ಶ್ರೀವಿಜಯನಿರಬಹುದೇ? (ಸಾ. ಸಂ.ಪು. ೧೦೯)

ಚಂದ್ರ: ಕವಿರಾಜಮಾರ್ಗೋಕ್ತ 'ಚಂದ್ರ' ಸ್ವತಂತ್ರ ಹೆಸರೆಂದು ಸಾಮಾನ್ಯವಾಗಿ ಎಲ್ಲರೂ ಒಪ್ಪುತ್ತಾರೆ.

ಪೊಸತೆನಿಸಿ ದೇಸೆಯಿಂ ನವ। ರಸವೆಸೆಯಲ್ಕೊಳ್ಪುವೆತ್ತ ಮಾರ್ಗದಿನಿಳೆಗೇ।
ನೆಸೆದುವೊ ಸುಕವಿಗಳೆನೆ ನೆಗ।ಟ್ದಿಸಗನ ಮನಸಿಜನ ಚಂದ್ರ [ಭಟ್ಟನ ನುಡಿಗಳ್]॥[೬೬]

ಎಂಬ ಪದ್ಯದಲ್ಲಿ ದುರ್ಗಸಿಂಹ (೧೦೩೧)ನು ಒಬ್ಬ ಚಂದ್ರಭಟ್ಟನನ್ನು ಸ್ತುತಿಸಿದ್ದು, ಈತನು ಇದೇ ಕಾಲದ ಮದನತಿಲಕದ ಚಂದ್ರರಾಜ (ಕ್ರಿ.ಶ. ೧೦೨೫) ನಾಗಿರಲಿಕ್ಕಿಲ್ಲ. ಕನ್ನಡಸಾಹಿತ್ಯದಲ್ಲಿ ಚಂದ್ರಭಟ್ಟನೆಂಬವನನ್ನು ಕುರಿತು ಹೇಳಲಾದ

"....... ಚಂದ್ರಭಟ್ಟನ ಜತಿ......."- ರುದ್ರಭಟ್ಟ.[೬೭]
".........ಚಂದ್ರಭಟ್ಟ ಶ್ರೀ ವಿಜಯರ......."-ಕೇಶಿರಾಜ.[೬೮]
"........ಚಂದಿರಭಟ್ಟರ ದಯೆಯಿಂ........ಕಲ್ಬುದು ಮಱೆಯಂ"-ರಟ್ಟ[೬೯]

ಈ ಮಾತುಗಳಲ್ಲಿ ಕಾವ್ಯಪ್ರತಿಭೆ ಮತ್ತು ವೃಷ್ಟಿಶಾಸ್ತ್ರಪಾಂಡಿತ್ಯ ಎಂಬ ಎರಡು ಗುಣಗಳು ಒಡೆದುಕಾಣುತ್ತವೆ. ಇದಲ್ಲದೆ ೧೪ನೆಯ ಶತಮಾನದ ಅಶ್ವಶಾಸ್ತ್ರದ ಕರ್ತೃ ತನ್ನನ್ನು 'ಅಭಿನವಚಂದ್ರ' ಎಂದು ಕರೆದುಕೊಂಡಿರುವುದರಿಂದ ಈ ಕಾಲಕ್ಕೆ ಹಿಂದೆ ಅಶ್ವವಿದ್ಯಾಬಲ್ಲಿದನಾದ ಒಬ್ಬ ಚಂದ್ರನಿದ್ದಿರಬಹುದೆನಿಸುತ್ತದೆ. ಹೀಗೆ ಕನ್ನಡಸಾಹಿತ್ಯದಲ್ಲಿ ಕಾವ್ಯಪ್ರತಿಭೆಯ ಚಂದ್ರಭಟ್ಟ, ವೃಷ್ಟಿಶಾಸ್ತ್ರಬಲ್ಲಿದ ಚಂದ್ರಭಟ್ಟ, ಮತ್ತು ಅಶ್ವಶಾಸ್ತ್ರ ಬಲ್ಲಿದ ಚಂದ್ರ ಎಂಬ ಮೂವರು ವ್ಯಕ್ತಿಗಳು ಕಂಡುಬರುವರು. ಇಲ್ಲಿ ಅಭಿನವದಶಕುಮಾರ ಚರಿತೆಯ "ಸುಗಮಾರ್ಥಸ್ಫುಟಶಬ್ದಸುಂದರ ಕಿರದ್ವಾಕ್ಸಾಂದ್ರನಂ ಚಂದ್ರನಂ"[೭೦] ಎಂಬ ಚಂದ್ರನನ್ನು ಕಾವ್ಯಪ್ರತಿಭೆಯ ಚಂದ್ರಭಟ್ಟನೊಂದಿಗೆ ಸಮೀಕರಿಸಬಹುದಾಗಿದೆ. ಜೈನನಾದ ಶ್ರೀಧರಾಚಾರ್ಯನು "ಇಳಾದೇವಾನ್ವಯಾಬ್ಧ್ಯಂಬುಜಾರಿನಿಭಂ"[೭೧] ಎನ್ನುತ್ತ ಇಳಾದೇವಾನ್ವಯ ಅಂದರೆ ಬಹುಶಃ ಜೈನಬ್ರಾಹ್ಮಣನಾಗಿರುವ ಒಬ್ಬ ಚಂದ್ರ (ಅಂಬುಜಾರಿ)ನನ್ನು ಸೂಚಿಸುತ್ತಾನೆ. ಇವರಲ್ಲಿ ಕವಿರಾಜಮಾರ್ಗಕಾರ ಹೇಳುವ ಚಂದ್ರನು ಯಾರೆಂಬುದು ಸ್ಪಷ್ಟವಾಗುವುದಿಲ್ಲ. ಬೇಂದ್ರೆಯವರು ಮಾತ್ರ "ಈ ಚಂದ್ರಕವಿ ಭಾಗವತ ಧರ್ಮದ ಬ್ರಾಹ್ಮಣಕಾವ್ಯದ ಪ್ರಾರಂಭ ಮಾಡಿದವನು" ಎನ್ನುತ್ತಾರೆ.[೭೨] ಇದಕ್ಕೆ ಆಧಾರಗಳು ಅವಶ್ಯ.

ಲೋಕಪಾಲ: ಈತನು ನೃಪತುಂಗನ ಸಾಮಂತನಾದ ಬಂಕಾಪುರದ ಲೋಕಾದಿತ್ಯನೆಂದು ಡಾ. ರೈಸ್ ಅವರ ಮತ.[೭೩] ಇಲ್ಲಿಗೆ ನಿಂತುಬಿಟ್ಟಿತು ಲೋಕಪಾಲನ ಚರಿತ್ರೆ. ನಮಗೆ ಮಾತ್ರ ಇದು ರಾಜವ್ಯಕ್ತಿಯ ಹೆಸರೆಂಬ ಅನುಮಾನ ಹುಟ್ಟಿಸುತ್ತದೆ.[೭೪] ಮೈಸೂರು ಅರಸು ಮುಮ್ಮಡಿ ಕೃಷ್ಣರಾಜವೊಡೆಯರ ಆಶ್ರಯದಲ್ಲಿದ್ದ ಹಾಸನದ ರಾಮಕೃಷ್ಣಶಾಸ್ತ್ರಿ ಎಂಬವನು 'ಭುವನಪ್ರದೀಪಿಕಾ' ಎಂಬ ಸಂಸ್ಕೃತ ಗ್ರಂಥವನ್ನು

---

೬೬. ಪಂಚತಂತ್ರ ೧-೨೩
೬೭. ಜ. ವಿಜಯ ೧-೧೦
೬೮. ಶ. ದರ್ಪಣ, ಸೂ. ೫
೬೯. ರ. ಮತ, ೧-೩೩
೭೦. ಅ. ದಶ. ಚರಿತೆ, ೧-೧೨
೭೧. ಜಾ. ತಿಲಕ, ೧-೫
೭೨. ಜ್ಞಾನೇಶ್ವರ ಪೂರ್ವಕಾಲೀನ ಕಾನಡೀವಾಜ್ಮಯ (ಮ.ಸಾ.ಪ.ಪ. ೭-೪)
೭೩. ಶಬ್ದಾನುಶಾಸನ ಉಪೋದ್ಘಾತ, ಪು. ೨೨(ರೈಸ್ ಆವೃತ್ತಿ)
೭೪. ಕವಿಚರಿತೆಕಾರರೂ ಅನುಮಾನಪಟ್ಟಿದ್ದಾರೆ (ಕ.ಕ.ಚ. ೧೫)

ಬರೆದಿರುವನು (೧೮೦೮). ವಿಶ್ವಕೋಶವೆನ್ನಬಹುದಾದ ಈ ಕೃತಿಯಲ್ಲಿ ತುಂಡೀರ ದೇಶದ ಅರಸರ ವಂಶಾವಳಿಯನ್ನು ಸತ್ಯಂಧರ>ಜೀವಂಧರ>ಯಶೋಧರ>ಗುಣಪಾಲ>ಯಶಃಪಾಲ>ಪ್ರಜಾಪಾಲ> ಲೋಕಪಾಲ>ಹಿಮಶೀತಲ (ಈತನು ಕಲಿಯುಗ ೧೧೨೫ರಿಂದ ಆಳಲಾರಂಭಿಸಿದನು. ಇವನ ಕಾಲದಲ್ಲಿ ಅಕಲಂಕನು ಬೌದ್ಧರನ್ನು ಸೋಲಿಸಿದನು)>ಹರಿವಿಕ್ರಮ>ಸಿಂಹವಿಕ್ರಮ>ಶತರಥ>ನ್ಯಾಯರಥ>ಧರ್ಮರಥ> ಚಾವುಂಡರಾಯ (ಕಲಿಯುಗ ೬೦೦ ವಿಭವದಲ್ಲಿ ಗೊಮ್ಮಟಮೂರ್ತಿಯನ್ನು ಸ್ಥಾಪಿಸಿದನು) ಎಂದು ಹೇಳಲಾಗಿದೆ.[೨೫] ರಾಬರ್ಟ್ ಸಿವೆಲ್ ಅವರ 'A sketch of the Dynasties of Southern India (Madras 188) ' ಎಂಬ ಗ್ರಂಥದಿಂದ (ಪು. ೨೩) ಜೈನಧರ್ಮ ಸ್ವೀಕರಿಸಿದ ಹಿಮಶೀತಲನಿಂದಾಗಿ ಕ್ರಿ.ಶ. ೭೮೮ರಲ್ಲಿ ಬೌದ್ಧರು ಕಾಂಚೀ ಪ್ರದೇಶವನ್ನು ತೊರೆದು ಸಿಂಹಳದ್ವೀಪವನ್ನು ಸೇರಿದರೆಂದು ತಿಳಿದುಬರುತ್ತದೆ. ಅದಕ್ಕಾಗಿ ಈ ಹಿಮಶೀತಲನ ತಂದೆ (?) ಲೋಕಪಾಲನು ೮ನೆಯ ಶತಮಾನದ ಮಧ್ಯದವನಾಗಿರಬೇಕು. ಜಾನ್ ಮುರ್ಡೋಚ್ ಅವರ 'classified catalogue of Tamil Printed books etc' (Madras 1865) ಎಂಬ ಗ್ರಂಥದಲ್ಲಿ (ಪು. ೬೫-೬೬) ಈ ಜೈನ ಹಿಮಶೀತಲನು ಜನ್ಮತಃ ಬೌದ್ಧನೆಂದು ಹೇಳಿರುವುದರಿಂದ ತಂದೆ ಲೋಕಪಾಲನೂ ಬೌದ್ಧನಾಗಿರುವುದು ಸಹಜ. ಕವಿರಾಜಮಾರ್ಗೋಕ್ತ ಲೋಕಪಾಲನು ಇವನೇ ಆಗಿದ್ದ ಪಕ್ಷದಲ್ಲಿ ಈತನು ಮತದಿಂದ ಬೌದ್ಧ, ವೃತ್ತಿಯಿಂದ ಅರಸು, ದೇಶ ತುಂಡೀರಪ್ರಾಂತ, ಕಾಲ ೮ನೆಯ ಶತಮಾನದ ಮಧ್ಯವೆನ್ನಬೇಕಾಗುತ್ತದೆ.

ಈ ವರೆಗೆ ವಿವೇಚಿಸಲಾದ ಕವಿಗಳು ಕವಿರಾಜಮಾರ್ಗಕಾರನ ದೃಷ್ಟಿಯಲ್ಲಿ 'ಗದ್ಯಾಶ್ರಮಗುರು ತಾಪ್ರತೀತಿಯಂ' ಕೈಕೊಂಡ ಯುಗಪುರುಷರು, ದೇಶಿಕಾವ್ಯಪ್ರಕಾರಗಳನ್ನು 'ನೆಗಟ್ತೆಯ ಕಬ್ಬದೊಳ್' ಒಡಂಬಡಿಸಿದ 'ಆದ್ಯ' ಪರುಷಹಸ್ತರು. ಸಂಶೋಧನೆಯ ಪಾತಾಳಗರಡಿಗೆ ನಿಲುಕದೆ ನಿಂತ ಇವರಲ್ಲಿ ದುರ್ವಿನೀತನ ಕಾಲ ೫ ರಿಂದ ೭ನೆಯ ಶತಮಾನದ ಮಧ್ಯ, ಲೋಕಪಾಲನ ಕಾಲ ೮ನೆಯ ಶತಮಾನದ ಮಧ್ಯ ಇರಬಹುದು. "ಈ ಕವಿಗಳಲ್ಲಿ ಒಬ್ಬಿಬ್ಬರು ನೃಪತುಂಗನ ಸಮಕಾಲದವರಾಗಿದ್ದಿರಬಹುದು"[೨೬] ಎಂಬ ಕವಿಚರಿತೆಕಾರರ ಮಾತು ನಿಜವಿರಬಹುದಾದರೂ ಆಧಾರಗಳು ಬೇಕು.

ಈ ಅಗ್ರಮಾನ್ಯ ಕವಿಗಳ 'ನೆಗಟ್ತೆ'ಯ ಕಾವ್ಯಗಳಲ್ಲಿ ಒಂದೂ ನಮ್ಮ ಕೈಗೆ ಉಳಿದುಬಂದಿಲ್ಲ. ಶ್ರೀವಿಜಯನನ್ನು ಬಿಟ್ಟರೆ ಬೇರೊಬ್ಬನ ಸ್ಮರಣೆ ಈಚೆಯ ಕಾವ್ಯಗಳಲ್ಲಿ ಕಂಡುಬರುವುದಿಲ್ಲ. ಇದಕ್ಕೆ ಕಾರಣ ಇವರ ಬೌದ್ಧಮತವೆಂದು ವೆಂಕಣ್ಣಯ್ಯನವರು ಊಹಿಸಿರುವರು. ಸ್ತುತಿಸಬೇಕೆಂದರೆ ೧೦ನೆಯ ಶತಮಾನದ ಹೊತ್ತಿಗೆ ಕರ್ನಾಟಕದ ಬೌದ್ಧಮತ ಕೊನೆಯುಸಿರಿನ ಸ್ಥಿತಿಯಲ್ಲಿದ್ದು ಮುಂದೆ ಸಂತಾನಹೀನವಾಗಿದೆ; ಪುನರುತ್ಥಾನಗೊಂಡ ವೈದಿಕ, ಪ್ರಬಲಗೊಂಡ ಜೈನಗಳ ಮತ ಮತ್ಸರದಿಂದಾಗಿ ಅದರ ಸಾಹಿತ್ಯವೂ ಖಿಲವಾಗಿದೆ ಎಂಬ ಅವರ ಹೇಳಿಕೆ ಬಹುಮಟ್ಟಿಗೆ ಸತ್ಯವೆನಿಸಿದೆ. ಇಲ್ಲಿ ನಾಗಾರ್ಜುನ, ಲೋಕಪಾಲರ ಬೌದ್ಧತ್ವವನ್ನು ಸ್ಮರಿಸಬಹುದು.

---

೨೫. M.A.R. 1918, P. 68

೨೬. ಕ.ಕ.ಚ. ಪು. ೧೧

ವೈದಿಕ (ಬ್ರಾಹ್ಮಣ)ವು ಕನ್ನಡನಾಡಿನ ಒಂದು ಪ್ರಮುಖಧರ್ಮ. ಸಮಾಜದ ಮುಖ್ಯಘಟಕವಾಗಿದ್ದ ಈ ಮತೀಯರು ಸಾಹಿತ್ಯನಿರ್ಮಿತಿಯಿಂದ ನಿರ್ಲಿಪ್ತರಾಗಿರಲಾರರು. ಹೀಗಾಗಿ ಚಂದ್ರ ಮೊದಲಾದವರು ವೈದಿಕರಿದ್ದರೆ ಅಚ್ಚರಿಯೇನಲ್ಲ. ಒಂದು ವೇಳೆ ಕನ್ನಡದಲ್ಲಿ ಕೃಷಿಮಾಡಿದ್ದರೆ, ಸೃಜನಕ್ಕಿಂತ, ಶಾಸ್ತ್ರ ಬರೆವಣಿಗೆ ಮಾಡಿರಬಹುದಾಗಿದೆ. ಏಕೆಂದರೆ ಅವರ ಅಗ್ರಹಾರಗಳೆಂದರೆ ಸೃಜನದ ಹೊಲಗಳಲ್ಲ, ಪಾಂಡಿತ್ಯದ ಕಾರ್ಖಾನೆಗಳು (Factory).

ವೈದಿಕ (ಬ್ರಾಹ್ಮಣ)ದೊಂದಿಗೆ ಆಗಮಿಕ ನೆಲೆಯ ನಕುಲೀಶ, ಪಾಶುಪತ, ಕಾಪಾಲಿಕ, ಶ್ರೋತ್ರೀಯಗಳೆಂಬ ಶೈವಗಳು ಕರ್ನಾಟಕದ ಪ್ರಮುಖ ಮತಗಳಾಗಿ ಮೆರೆದವು. ಶಾಸನಗಳಲ್ಲಿ ಈ ಮತಾಚಾರ್ಯರ ಪಾಂಡಿತ್ಯ, ಪ್ರತಿಭೆ ಕಣ್ಣುಕುಕ್ಕುವಂತೆ ವರ್ಣಿತವಾಗಿವೆ. ಮೇಲಣ ಕವಿಗಳಲ್ಲಿ ಒಬ್ಬನಾದರೂ ಶೈವನಾಗಿರಬಹುದಾಗಿದೆ.

❖❖

ಶಾಸ್ತ್ರವಿಚಾರ

ಸಾಹಿತ್ಯದ ಅನ್ಯೋನ್ಯಶಾಸ್ತ್ರಗಳಾದ ವ್ಯಾಕರಣ, ಛಂದಸ್ಸು, ಅಲಂಕಾರಗಳನ್ನು ಒಂದರಿಂದ ಇನ್ನೊಂದನ್ನು ಬೇರ್ಪಡಿಸುವಲ್ಲಿ ಮೂರಕ್ಕೂ ಸಾಮಾನ್ಯವಾದ ಬಾಂಧವ್ಯಭೂಮಿಯೊಂದು ಮಧ್ಯ ಉಳಿದುಕೊಳ್ಳುತ್ತದೆ. ತಂತಮ್ಮ ಶಾಸ್ತ್ರಸೀಮೆಯ ಅರಿವಿಲ್ಲದೆ ಈ ಬಾಂಧವ್ಯಭೂಮಿಯನ್ನು ದಾಟಿ ವಿಹರಿಸಿದುದರ ಫಲವಾಗಿ ನಮ್ಮ ವ್ಯಾಕರಣಗ್ರಂಥಗಳಲ್ಲಿ ಅಲಂಕಾರ ಛಂದಸ್ಸು, ಛಂದೋಗ್ರಂಥಗಳಲ್ಲಿ ವ್ಯಾಕರಣ ಅಲಂಕಾರ, ಅಲಂಕಾರ ಗ್ರಂಥಗಳಲ್ಲಿ ಛಂದಸ್ಸು ವ್ಯಾಕರಣ ವಿಚಾರಗಳ ಮಿಶ್ರಣ ತಲೆದೋರಿದೆ. ಈ ಮಿಶ್ರಣ ಒಂದಿಷ್ಟು ಅಧಿಕವೆಂಬಂತೆ ವ್ಯಾಕರಣ ಛಂದಸ್ಸುಗಳ ವಿಚಾರಗಳನ್ನೊಳಗೊಂಡಿದೆ, ಅಲಂಕಾರ ಗ್ರಂಥವಾದ ಕವಿರಾಜಮಾರ್ಗ. ಈ ಅಧಿಕಮಿಶ್ರಣಕ್ಕೆ ಕಾರಣ ಆರ್ಯ "ಶಾಸ್ತ್ರಶಿಲ್ಪ" ಪದ್ಧತಿಗಿಂತ ದ್ರಾವಿಡ "ಶಾಸ್ತ್ರಶಿಲ್ಪ" ಪದ್ಧತಿ ಒಂದಿಷ್ಟು ಭಿನ್ನನಾಗಿದ್ದುದೇ ಕಾರಣವಾಗಿರಬಹುದು. ಇದು ಆರ್ಯ ಸಂಪ್ರದಾಯದ ದಂಡಿಯ ಕಾವ್ಯಾದರ್ಶನವನ್ನು (ದಂಡಿ ತಮಿಳುನಾಡಿನವನೆಂಬುದು ನೆನಪಿರಲಿ) ಆದರ್ಶವಾಗಿಟ್ಟುಕೊಂಡಿದ್ದರೂ, ಕವಿರಾಜಮಾರ್ಗವು ತಮಿಳು ಶಾಸ್ತ್ರಗ್ರಂಥವಾದ ತೊಳ್ಕಾಪ್ಪಿಯಂ ರೀತಿಯಲ್ಲಿ ಅನ್ಯಶಾಸ್ತ್ರಗಳ ಅಧಿಕ ಸಂಗತಿಗಳನ್ನೊಳಗೊಂಡಿದೆ. ಆದುದರಿಂದ ಇನ್ನು ಮೇಲೆ ಕವಿರಾಜಮಾರ್ಗಾಲಂಕಾರ ಮತ್ತು ತೊಳ್ಕಾಪ್ಪಿಯಂ ವ್ಯಾಕರಣಕೃತಿಗಳನ್ನು "ಶಿಲ್ಪ" ದೃಷ್ಟಿಯಿಂದ ಹೋಲಿಸಿ ನೋಡುವುದು ಅವಶ್ಯವಿದೆ. ಇಷ್ಟು ಹಿನ್ನೆಲೆಯಲ್ಲಿ ಕವಿರಾಜಮಾರ್ಗದಲ್ಲಿ ಕಂಡುಬರುವ ವ್ಯಾಕರಣ, ಛಂದಸ್ಸು, ಅಲಂಕಾರ ವಿಷಯಗಳನ್ನು ಕುರಿತು ಚರ್ಚಿಸಬಹುದು.

ವ್ಯಾಕರಣ :

ಕವಿರಾಜಮಾರ್ಗದಲ್ಲಿ ವ್ಯಾಪ್ತಿ ದೃಷ್ಟಿಯಿಂದ ಅಲಂಕಾರಕ್ಕೆ ದ್ವಿತೀಯಸ್ಥಾನ ಪಡೆದುದು ವ್ಯಾಕರಣ. ಹೀಗಾಗಿ ಕಾವ್ಯಮೀಮಾಂಸೆಯಾಗಿರುವ ಅದು, ಒಂದರ್ಥದಲ್ಲಿ ಕನ್ನಡದ ಆದಿವ್ಯಾಕರಣವೆನಿಸಿದೆ. ಅಲಂಕಾರವೆನ್ನುವುದು ಎಲ್ಲ ಭಾಷೆಗಳಿಗೂ ಒಂದಿಷ್ಟು ಸಾಮಾನ್ಯವಾದುದು. ಅದರಲ್ಲಿಯೂ ಕನ್ನಡದ ಶಬ್ದಾಲಂಕಾರ ಅರ್ಥಾಲಂಕಾರಗಳು ಸಂಸ್ಕೃತದ ಪಡಿಯಚ್ಚು. ಇವುಗಳ ವಿವೇಚನೆಗಾಗಿ ಸಂಸ್ಕೃತಕೃತಿಗಳ ನೆರವು ಅತ್ಯವಶ್ಯ. ಆದರೆ ಸಂಸ್ಕೃತದಿಂದ ಭಿನ್ನವಾದ ಕನ್ನಡ ಭಾಷೆಯ ಗುಣದೋಷ ವಿವೇಚನೆಯಲ್ಲಿ ಆ ಕೃತಿಗಳ ನೆರವು ಅನವಶ್ಯ. ಅದಕ್ಕಾಗಿ ವ್ಯಾಕರಣ ವಿವೇಚನೆಯ ಪ್ರಸಂಗದಲ್ಲಿ ಮಾರ್ಗಕಾರನು ಪರಿಭಾಷೆಯ ಮಟ್ಟಿಗೆ ಸಂಸ್ಕೃತವನ್ನಿಟ್ಟುಕೊಂಡು ವಿಷಯ ದೃಷ್ಟಿಯಿಂದ ಕನ್ನಡದ ಬೆನ್ನುಹಿಂದೆ ನಡೆಯಬೇಕಾಯಿತು. ಈ ಪಥಕ್ರಮಣದಲ್ಲಿ ಅವನು ಮಾಡಿದ ಪ್ರಯತ್ನವನ್ನು ಅಭ್ಯಾಸದ ಅನುಕೂಲಕ್ಕಾಗಿ ಕನ್ನಡ-ಪಟಿಗನ್ನಡ, ಕನ್ನಡ-ಸಮಸಂಸ್ಕೃತ, ಕನ್ನಡ-ಸಂಸ್ಕೃತ, ಕನ್ನಡಂಗಳ್-ತಿರುಳ್ಗನ್ನಡ, ದಕ್ಷಿಣೋತ್ತರಮಾರ್ಗ ಮತ್ತು ಇತರ ವಿಷಯಗಳು ಎಂಬ ಶೀರ್ಷಿಕೆಯಲ್ಲಿ ವಿವೇಚಿಸಬಹುದು.

ಕನ್ನಡ-ಪಟಿಗನ್ನಡ: ನಿತ್ಯಪರಿವರ್ತನೆ ಭಾಷೆಯ ಆರೋಗ್ಯಲಕ್ಷಣ. ಹಿಂದೆ ಹೋದ ಹಳೆಯ ರೂಪಗಳನ್ನು ಜೀರ್ಣಿಸಿಕೊಂಡು, ಮುಂದೆಬರುವ ಹೊಸರೂಪಗಳನ್ನು ದಕ್ಕಿಸಿಕೊಂಡು ಆರೋಗ್ಯಕರವಾಗಿ ಬೆಳೆಯುವಲ್ಲಿ ಅದು ಹಲವು ಅವಸ್ಥೆಗಳನ್ನು ಅನುಭವಿಸುತ್ತದೆ. ಈ ವಿಧಿಗೆ ಒಳಗಾಗಿ ಕನ್ನಡವು ಪೂರ್ವದ ಹಳಗನ್ನಡ, ಹಳಗನ್ನಡ, ನಡುಗನ್ನಡ, ಹೊಸಗನ್ನಡ ಎಂಬ ನಾಲ್ಕು ಅವಸ್ಥೆಗಳನ್ನು ಪಡೆದಿದೆ. ಕವಿರಾಜಮಾರ್ಗ ಹಳಗನ್ನಡ ಅವಸ್ಥೆಯ ಕೃತಿ. ಇಲ್ಲಿ 'ಕನ್ನಡ' 'ಪಟಿಗನ್ನಡ' ಎಂಬ ಎರಡು ಪದಗಳು ಬಳಕೆಗೊಂಡಿವೆ.

'ಕಾವೇರಿಯಿಂದಮಾ ಗೋದಾವರಿವರಮಿರ್ದ ನಾಡದಾ ಕನ್ನಡ'[೧] ಎಂಬಲ್ಲಿ ದೇಶವಾಚಕವಾಗಿ, 'ಮಿಗೆ ಕನ್ನಡಗಬ್ಬಂಗಳೊಳ್'[೨] ಎಂಬಲ್ಲಿ ಭಾಷಾವಾಚಕವಾಗಿ 'ಕನ್ನಡ' ಬಳಕೆಯಾಗಿದೆ. ಭಾಷಾವಾಚಿ ಅರ್ಥದ ಇನ್ನುಳಿದ 'ನುಡಿಗೆಲ್ಲಂ ಸಲ್ಲದ ಕನ್ನಡ'[೩] 'ಅರಿದಾದಂ ಕನ್ನಡ'[೪] 'ನೆಗೞ್ದಿರ್ದ ಕನ್ನಡಂಗಳ್'[೫] 'ಕನ್ನಡಂಗಳ್'[೬] 'ಕನ್ನಡದ ತಿರುಳ್'[೭]- ಇವುಗಳೊಂದಿಗೆ 'ಪಟಿಗನ್ನಡಂ'[೮] ಎಂಬುದೂ ಒಂದು. ಕವಿರಾಜಮಾರ್ಗದಲ್ಲಿ ಈ ಪಟಿಗನ್ನಡವನ್ನು ಕುರಿತ ಪದ್ಯಗಳು ಮೂರು:

> ನೆಲಸಿದ ಕಾವ್ಯಂ ಕಾವ್ಯ। ಕ್ಕೆ ಲಕ್ಷಣಂ ಸತತಮೆಂದೆ ಪಟಿಗನ್ನಡಮಂ।
> ಪೊಲಗೆಡಿಸಿ ನುಡಿವರಾಗಮ। ಬಲಹೀನರ್ ದೇಸಿಯಲ್ಲದೆಂದಱಿದಿರ್ದುಂ॥[೯]

ನೆಲೆಗೊಂಡ (ಪ್ರಾಚೀನ)ಕಾವ್ಯಗಳೇ ಮುಂದಣ ಕಾವ್ಯಗಳಿಗೆ ನಿರಂತರ ಪ್ರಮಾಣವೆಂದು ನಂಬಿದವರು, ತಮ್ಮ ಆಗಮ ಬಲಹೀನತೆಯ ಮೂಲಕ ಪಟಿಗನ್ನಡವನ್ನು ಪೊಲಗೆಡಿಸುವರು ಎಂದು ಈ ಪದ್ಯದ ಅರ್ಥ. ಇಲ್ಲಿಯ 'ಪಟಿಗನ್ನಡ'ವನ್ನು ಗಮನಿಸಿ, "ನೃಪತುಂಗನು ತನ್ನ ಕಾಲಕ್ಕೆ ಹಿಂದೆ ಹಳಗನ್ನಡವೆಂಬ ಭಾಷೆಯಿದ್ದಿತೆಂದು ಹೇಳಿದ್ದಾನೆ"[೧೦] ಎಂದು ಆರ್. ನರಸಿಂಹಾಚಾರ್, "ನೃಪತುಂಗನು ಹೇಳುವ ವಿಷಯವು ಕಾವ್ಯಾಲಂಕಾರ ಶಾಸ್ತ್ರಕ್ಕೆ ಸಂಬಂಧಪಟ್ಟುದು, ಅವನು ಶಬ್ದಮಣಿ ದರ್ಪಣಕಾರನಂತೆ ಶಬ್ದಶಾಸ್ತ್ರವನ್ನು ಹೇಳುವುದಿಲ್ಲ...... ಕನ್ನಡ ದೇಶಿಪದಗಳು ವಿಶಿಷ್ಟಮಾರ್ಗದಲ್ಲಿ ಉಪಯೋಗಿಸಲ್ಪಡುತ್ತ ಬಂದಿರುವುದರಿಂದ ಅವು ಕಾವ್ಯಕ್ಕೆ ಲಕ್ಷಣವಾದವು. ಈ ಪ್ರಾಚೀನ ಪದ್ಧತಿಯೇ ಪಟಿಗನ್ನಡ. ಬರಬರುತ್ತ ಅವು ಜನರಿಗೆ ತಿಳಿಯದಂತಾಗಿ ಅವುಗಳ ಬದಲು ಸಂಸ್ಕೃತ ಮಿಶ್ರಿತ ಪದಪದ್ಧತಿಯು ಬಳಕೆಯಲ್ಲಿ ಬಂದಿತು. ಅದುವೆ ಆ ಕಾಲದ ಹೊಸಗನ್ನಡ "[೧೧] ಎಂದು ಕಪಟರಾಳ ಕೃಷ್ಣರಾಯರು ಹೇಳುತ್ತಾರೆ.

ಕವಿರಾಜಮಾರ್ಗದ ಹಿಂದಣ ಶಾಸನಗಳನ್ನು ನೋಡಿದರೆ ಆರ್. ನರಸಿಂಹಾಚಾರ್ ಹೇಳುವಂತೆ ಕನ್ನಡಕ್ಕೆ ಪೂರ್ವದ ಹಳಗನ್ನಡವೆಂಬ ಅವಸ್ಥೆಯಿದ್ದುದು ಸ್ಪಷ್ಟ. ಆದರೆ ಕವಿರಾಜಮಾರ್ಗದಲ್ಲಿ ಉದಾಹರಣೆಯಾಗಿ ಕೊಟ್ಟ "ಪೊಡವಿಪತಿ ಗೊರವನೆನೆ......"[೧೨] ಎಂಬ ಪದ್ಯದಲ್ಲಿ ಆ ಅವಸ್ಥೆಗೆ ಸಂಬಂಧಪಟ್ಟ ಪದಪ್ರತ್ಯಯಗಳಿಲ್ಲ. ಇದಲ್ಲದೆ ಭಾಷೆಯಲ್ಲಿ ಅವಸ್ಥೆಯನ್ನು ಗುರುತಿಸುವ ದೃಷ್ಟಿ ನಮಗೆ ಬಂದುದು ತೀರ ಇತ್ತೀಚೆಗೆ. ಅದಕ್ಕಾಗಿ ಇಲ್ಲಿಯ 'ಪಟಿಗನ್ನಡ'ವು ಪೂರ್ವದ ಹಳಗನ್ನಡ ಅವಸ್ಥೆಯ ಸೂಚನೆಯಾಗಿರಲಾರದು.

---

೧. ಕ.ಮಾ. ೧-೩೬
೨. ಕ.ಮಾ. ೧-೨೭
೩. ಕ.ಮಾ. ೧-೩೩
೪. ಕ.ಮಾ. ೧-೪೪
೫. ಕ.ಮಾ. ೧-೫೭
೬. ಕ.ಮಾ. ೧-೪೬
೭. ಕ.ಮಾ. ೧-೩೭
೮. ಕ.ಮಾ. ೧-೪೮, ೪೯
೯. ಕ.ಮಾ. ೧-೪೮
೧೦. ಕ.ಕ.ಚ. ಅವತರಣಿಕೆ ಪು. ೧೦
೧೧. 'ಹಳಗನ್ನಡ ಹೊಸಗನ್ನಡ'ದ ಐತಿಹಾಸಿಕ ವಿವೇಚನೆ ಸಾ.ಪ. ೨೨-೩ (ಪು. ೧೩೨ ಮತ್ತು ೧೩೭)

ಕಪಟರಾಳರು ಹೇಳುವಂತೆ ಅಲಂಕಾರಿಕನಾದ ಮಾರ್ಗಕಾರನಿಗೆ ಭಾಷೆಯಲ್ಲಿ ತೋರಿದ ಅವಸ್ಥಾವ್ಯತ್ಯಾಸಕ್ಕಿಂತ ಕಾವ್ಯಭಾಷೆಯಲ್ಲಿ ತಲೆದೋರಿದ ಶೈಲಿವ್ಯತ್ಯಾಸವೇ ಕಣ್ಣಿಗೆ ಹೊಡೆದು ತೋರಿರಬೇಕು. ಹೊಸಶೈಲಿಗೆ ಬೆನ್ನುತೋರಿಸಿಹೋದ ಕನ್ನಡದ ಒಂದು ಹಳೆಯ ಶೈಲಿಯನ್ನೇ ಮಾರ್ಗಕಾರನು 'ಪಟಗನ್ನಡ' ಎಂದು ಕರೆದಿರಬೇಕು. ಹೊಸಹೊಸ ಶೈಲಿಯನ್ನು ಪ್ರಕಟಿಸಿದ ನಮ್ಮ ಪ್ರಾಚೀನಕವಿಗಳೆಲ್ಲ ಇಂಥ ಪದಗಳನ್ನೇ ಬಳಸಿದ್ದಾರೆ.

ವಸುಭಾಗಭಟ್ಟ ಕೃತಿಯಂ । ವಸುಧಾಧಿಪಹಿತಮನಖಿಲವಿಬುಧಸ್ತುತಮಂ।
ಪೊಸತಾಗಿರೆ ವಿರಚಿಸುವೆಂ। ವಸುಮತಿಯೊಳ್ ಪಂಚತಂತ್ರಮಂ ಕನ್ನಡದಿಂ ।।[೧೩]
ಎನೆ ನೆಗಟ್ದ ಚಂದ್ರನಬ್ಜಾ। ನನ ಚಂದ್ರಂ ಶ್ವೇತಕೇತುಜತ್ತಕವಾತ್ಸ್ಯಾ।
ಯನ ಪಾಂಚಾಳಾದಿ ಮಹಾ । ಮುನಿಮತಮನೆ ಪೇಟ್ದನೆಸೆಯೆ **ಪೊಸಗನ್ನಡದಿಂ।।**[೧೪]

ದುರ್ಗಸಿಂಹನ ಪಂಚತಂತ್ರ (೧೦೩೧), ಚಂದ್ರರಾಜನ ಮದನತಿಲಕ (೧೦೨೪)ಗಳ ಭಾಷೆ ಆ ಕಾಲದ ಹಳಗನ್ನಡ, ಶೈಲಿ ಮಾತ್ರ ಹೊಸಪದ್ಧತಿಯ ಗದ್ಯಬಂಧ ಮತ್ತು ಚಿತ್ರಬಂಧ. ಅದಕ್ಕಾಗಿ ಇಲ್ಲಿಯ 'ಪೊಸತಾಗಿರೆ' 'ಪೊಸಗನ್ನಡದಿಂ' ಎಂಬಿವು ಭಾಷೆಯ ಹೊಸ ಅವಸ್ಥೆಯ ಸೂಚನೆಯಾಗಿರದೆ ಹೊಸ ಬಗೆಯ ವಚೋವಿನ್ಯಾಸದ ಸೂಚನೆಯಾಗಿರುವಂತೆ, ಮಾರ್ಗಕಾರನ 'ಪಟಗನ್ನಡ'ವು ಭಾಷೆಯ ಹಳೆಯ ಅವಸ್ಥೆಯ ಸೂಚನೆಯಾಗಿರದೆ, ಕಾವ್ಯಭಾಷೆಯ ಹಳೆಯ ಪದ್ಧತಿಯ ಸೂಚನೆಯಾಗಿರಬೇಕು.[೧೫]

ಇದರಿಂದ ಕವಿರಾಜಮಾರ್ಗದ ಉಗಮಕಾಲಕ್ಕೆ, ಕನ್ನಡದಲ್ಲಿ ಕಾವ್ಯಶೈಲಿಯ ಒಂದು ಪ್ರಕಾರ ಮುಗಿದು ಇನ್ನೊಂದು ಪ್ರಕಾರ ಸಾಗಿಬಂದಿರಬೇಕೆನಿಸುತ್ತದೆ. ಇಂಥ ಸಮಯದಲ್ಲಿ ಪಟಗನ್ನಡ (ಶೈಲಿ) ವ್ಯಾಮೋಹ ಬಿಟ್ಟಿರದ, ಸಮರ್ಪಕವಾಗಿ ಬಳಸುವ ಸಾಮರ್ಥ್ಯವಿರದ ಸಂಪ್ರದಾಯಶರಣರಿಂದ ಹಳೆಯ ಶೈಲಿ ಹೊಲಗೆಡುವುದು ಸಹಜ. ಇದಕ್ಕೆ,

ಪೊಡವಿಪತಿ ಗೊರವನೆನೆ ಪೇ । ಟ್ಪಡೆಯದುವದೆಕರಿಸಿ ಕಬ್ಬಿಗದೂರ್ರನೆಯುಂ।
ಹಡುವಸುಮಱೆಸೆಟ್ಟಿಸುಗೆಂ। ಮುಡಿಯೊಳಮಾರ್ಗೆಂದು ನುಡಿವ ಪಟಗನ್ನಡಮಂ।।[೧೬]

---

೧೨. ಕ.ಮಾ. ೧-೪೯

೧೩. ಕ.ಕ.ಚ. ೮೦

೧೪. ಕ.ಕ.ಚ. ೮೫

೧೫. ಪಟಗನ್ನಡಂ ಪುದಂಗೊಳೆ। ಕೊಟಿಸಕ್ಕದಮಂ ತಗುಳ್ಚಿ ಜಾಣ್ಕೆಡೆ ಮುತ್ತುಂ।
ಮೆಟಿಸುಂ ಕೋದಂತಿರೆ ಪೇ ।ಟ್ವಿಟಿಗವಿಗಳ ಕವಿತೆ ಬುಧರನೆರ್ದೆಗೊಳಿಸುಗುಮೇ।।
-ಕಾ.ಲೋ. ಪದ್ಯ ೫೫

ಪೊಸಗನ್ನಡದಿಂ ವ್ಯಾವ ।ರ್ಣಿಸುವೆಂ ಸತ್ಕೃತಿಯನೆಂದು ಕನ್ನಡಮಂ ಚಿಂ।
ತಿಸಿ ಕೂಡಲಾಱದಕ್ಕಟ। ಮಿಸುಕದ ಸಕ್ಕದಮನಿಕ್ಕುವವನುಂ ಕವಿಯೇ ।।
-ಧರ್ಮಾಮೃತ ೧-೪೧

೧೬. ಕ.ಮಾ. ೧-೪೯ ಈ ಪದ್ಯಕ್ಕೆ ಮುಳಿಯ ಅವರು (ಜಯಕ. ೪-೮), ಕಪಟ್ರಾಳರು (ಸಾ.ಪ. ೨೨-೩ ಪುಟ ೧೧೩) ತಮತಮಗೆ ಸರಿಯೆನಿಸುವ ಅರ್ಥವನ್ನು ಹೇಳಿದ್ದರೂ ಸಂದೇಹ ಇನ್ನೂ ಉಳಿದುಕೊಂಡಿದೆ. ಇಲ್ಲಿಯ 'ಹಡುವ' ಪ>ಹ ವ್ಯತ್ಯಾಸವೋ ಲಿಪಿದೋಷವೋ ಸ್ಪಷ್ಟವಾಗುವುದಿಲ್ಲ.

ಎಂಬುದು ಮಾರ್ಗಕಾರ ಕೊಟ್ಟ ಉದಾಹರಣೆಯಾಗಿದೆ. ಈ 'ಪಟಗನ್ನಡ'ವನ್ನು ಕುರಿತ ತನ್ನ ಅಭಿಪ್ರಾಯವನ್ನು

ದೊರೆಕೊಂಡಿರೆ ಸೊಗಯಿಸುಗುಂ । ಪುರಾಣಕಾವ್ಯಪ್ರಯೋಗದೊಳ್ ತತ್ಕಾಲಂ।
ವಿರಸಂ ಕರಮವ್ರು ದೇಸಿಗೆ। ಜರದ್ವಧೂವಿಷಯಸುರತರಸರಸಿಕತೆವೋಲ್॥[೧೭]

ಎಂಬ ಪದ್ಯದ ಮೂಲಕ ಸೊಗಸಾಗಿ ವ್ಯಕ್ತಪಡಿಸುತ್ತ, ಹಳೆಯ ಶೈಲಿ ಆಗಿನ ಕಾಲಕ್ಕೆ ಸೊಗಸು, ಯೌವನಸಂಪತ್ತು ಸೂರೆಯಾಗಿದ್ದರೂ ಅದನ್ನು ಮತ್ತೆ ಈಗ ಬಳಸುವುದು ಅಪರವಯಸ್ಸಿನ ಸ್ತ್ರೀ-ಸಂಭೋಗದಂತೆ ವ್ಯರ್ಥ ಎನ್ನುತ್ತಾನೆ. ಅದಕ್ಕಾಗಿ ಈತನಿಗೆ 'ಪಟಗನ್ನಡ'ದ ಬಗೆಗೆ ಅನಾದರವಿಲ್ಲ, ಯುಗಧರ್ಮವನ್ನೇ ವಿರೋಧಿಸುವ ರೀತಿಯಲ್ಲಿ ಗತಾಯುವಾದ ಅದನ್ನು ಬಳಸುವವರ ಬಗೆಗೆ ಅನಾದರವಿದೆಯೆಂದು ಸ್ಪಷ್ಟವಾಗುತ್ತದೆ. ಇದು ಯುಗಧರ್ಮಕ್ಕೆ ಅನುಗುಣವಾದ ಈತನ ಪ್ರಗತಿಶೀಲ ಮನೋಧರ್ಮದ ದ್ಯೋತಕ.

ಕವಿರಾಜಮಾರ್ಗಕಾರನ ಕಾಲಕ್ಕೆ ಪೊಲಗೆಡುತ್ತಿದ್ದರೂ ಒಂದು ಕಾಲಕ್ಕೆ ಸುಂದರವೆನಿಸಿದ್ದ ಆ ಹಳೆಯ ಶೈಲಿ ಯಾವುದು? ಎಂಬ ಪ್ರಶ್ನೆಗೆ ಸಮರ್ಪಕ ಉತ್ತರ ಹೇಳುವಷ್ಟು ಆಧಾರ ಸಾಮಗ್ರಿಗಳಿಲ್ಲ. ಮೇಲಣ 'ಪೊಡವಿಪತಿ ಗೊರವನೆನೆ........' ಎಂಬ ಪದ್ಯದಲ್ಲಿ ಕನ್ನಡ ಅಧಿಕ, ಸಂಸ್ಕೃತ ಕಡಿಮೆ ಇರುವುದರಿಂದ ಅದು ಬಹುಶಃ ದೇಶಿಪ್ರಚುರವಾದ ರೀತಿಯಾಗಿರಬಹುದೆನಿಸುತ್ತದೆ.

ಹೀಗೆ ಮಾರ್ಗಕಾರನ ಕಾಲಕ್ಕೆ ಕನ್ನಡ ಕಾವ್ಯಭಾಷೆಯಲ್ಲಿ ಒಂದು ಕಡೆಯಿಂದ ಪೊಲಗೆಡಿಸಿ ನುಡಿವ ದೇಶಿಪದ್ಧತಿ ಇಳಿದು ಬರುತ್ತಿದ್ದರೆ, ಇನ್ನೊಂದು ಕಡೆಯಿಂದ ಸಂಸ್ಕೃತಭೂಯಿಷ್ಠ ಮಾರ್ಗಪದ್ಧತಿ ಸಾಗಿಬರುತ್ತಿರಬಹುದು. ಈ ದ್ವಂದ್ವದಲ್ಲಿ ನಿಂತು ತೀರ್ಪುಕೊಡಬೇಕಾದುದು ಮೀಮಾಂಸಕನ ಕರ್ತವ್ಯ. ಅದಕ್ಕಾಗಿ ಹೊಲಗೆಟ್ಟ 'ಪಟಗನ್ನಡ'ವನ್ನು ಬಳಸಬಾರದೆಂದು ಎಚ್ಚರಿಕೆ ನೀಡಿದ ಈತನು, ಸಂಸ್ಕೃತವನ್ನು ಹೇಗೆ ಬಳಸಬೇಕೆಂಬುದನ್ನು ಕೆಳಗಿನಂತೆ ನಿರ್ಣಯಿಸುತ್ತಾನೆ.

ಕನ್ನಡ-ಸಮಸಂಸ್ಕೃತ: ಜನವಾಣಿಯಾಗಿ ನಡೆದುಬಂದ ಪ್ರಾಕೃತ, ದೇವವಾಣಿಯಾಗಿ ಇಳಿದುಬಂದ ಸಂಸ್ಕೃತಗಳಿಂದಾಗಿ ಕನ್ನಡದ ಶಬ್ದಸಂಪತ್ತು ಸಂವರ್ಧಿಸಿದೆ. ಈ ಉಭಯ ಭಾಷೆಗಳು ಕನ್ನಡದಲ್ಲಿ ಯಾವ ಸ್ವರೂಪದಿಂದ ಸೇರಿಕೊಂಡಿವೆ, ಸೇರಿಕೊಳ್ಳಬೇಕು ಎಂಬುದರ ವಿವೇಚನೆ ವೈಯಾಕರಣಿಯ ಕರ್ತವ್ಯ. ಆದರೆ ನಮ್ಮ ಮಿಕ್ಕ ವೈಯಾಕರಣಿಗಳಂತೆ ಮಾರ್ಗಕಾರನೂ ಪ್ರಾಕೃತವನ್ನು ಕೈಬಿಟ್ಟು, ಸಂಸ್ಕೃತವನ್ನು ಮಾತ್ರ 'ಸಂಸ್ಕೃತ' 'ಸಮಸಂಸ್ಕೃತ' ಎಂಬ ಹೆಸರುಗಳಲ್ಲಿ ಚರ್ಚಿಸಿರುವನೇ ಹೊರತು ಇವುಗಳ ಲಕ್ಷಣವೇನು? ಇವು ಯಾವ ಅರ್ಥದಲ್ಲಿ ಪರಸ್ಪರ ಭಿನ್ನವಾಗಿವೆ? ಎಂಬುದನ್ನು ಸ್ಪಷ್ಟಪಡಿಸಿಲ್ಲ. ಕೇಶಿರಾಜನಾದರೋ "(ಸಂಸ್ಕೃತ) ನಿಘಂಟುವಿನ ಸುಲಲಿತಾಕ್ಷರಮಪ್ಪ ನಾಮಪದ ಪ್ರಕೃತಿಗಳಂ ಕನ್ನಡಕ್ಕೆ ಸರಿಮಾಡಿ ಸಮಸಂಸ್ಕೃತವೆಸರನಿಟ್ಟು ಶಬ್ದಜ್ಞರ್ ಲಿಂಗಂ ಮಾಳ್ಪರ್"[೧೮] ಎಂದು ಹೇಳಿದ್ದಾನೆ. ಆದರೆ ಉದಾಹರಣೆಯಾಗಿ ಕೊಟ್ಟ ಕರ್ತೃ, ದಂಷ್ಟ್ರಾ, ಪ್ರಾವೃಟ್‌ಗಳು ಸುಲಲಿತಾಕ್ಷರಮಪ್ಪ ಪ್ರಕೃತಿಗಳಲ್ಲ. ಎರಡನೆಯದಾಗಿ ಸುಲಲಿತ ಇರಲಿ, ಇರಲದಿರಲಿ ಯಾವುದೇ ಸಂಸ್ಕೃತ ಪ್ರಕೃತಿಯನ್ನು ಕನ್ನಡಕ್ಕೆ ಸರಿಮಾಡಲು ಬರುತ್ತದೆ. ಹೀಗಾಗಿ ಇದು ನಿಷ್ಪ್ರಯೋಜಕ ಹೇಳಿಕೆ.

ಭಾಷಾಭೂಷಣದ ೧೩೨ನೆಯ ಸೂತ್ರದ ವೃತ್ತಿಯ ಪ್ರಕಾರ[೧೯] "ಸಂಸ್ಕೃತಪದಸಮಂ ಯತ್ಪದಂ ತತ್ ಸಮಸಂಸ್ಕೃತಂ" ಅಂದರೆ ವ್ಯತ್ಯಾಸಗೊಳ್ಳದೆ ಕನ್ನಡಕ್ಕೆ ಬರುವ ಸಂಸ್ಕೃತ ನಾಮಪ್ರಕೃತಿ ಸಮಸಂಸ್ಕೃತ. ಅದಕ್ಕಾಗಿ ವ್ಯತ್ಯಾಸಗೊಂಡು ಕನ್ನಡದಲ್ಲಿ ಬಳಕೆಯಾಗುವ ಸಂಸ್ಕೃತ ಪ್ರಕೃತಿ 'ಸಂಸ್ಕೃತ' ವೆಂದು ಇಲ್ಲಿಯ ಅಪ್ರತ್ಯಕ್ಷ ಅರ್ಥ.

---

೧೭. ಕ.ಮಾ. ೧-೫೦ ೧೮. ಶ.ಮ.ದ. ೬೦ರ ವೃತ್ತಿ ೧೯. ಕ.ಭಾ.ಭೂ. (ನರಸಿಂಹಾಚಾರ್ ಆವೃತ್ತಿ)

ಈ ವ್ಯತ್ಯಾಸ ಮತ್ತು ಸ್ಥಿರತೆಗಳ ಅರಿತಕ್ಕೆ, ಸಂಸ್ಕೃತ ಪ್ರಕೃತಿಗಳಿಗೆ ಕನ್ನಡ ಪ್ರತ್ಯಯಗಳನ್ನು ಹಚ್ಚಿ ನೋಡುವುದೇ ಒರೆಗಲ್ಲು. ಕನ್ನಡ ಪ್ರತ್ಯಯ ಹಚ್ಚಿದಾಗ ಅಂತ್ಯದಲ್ಲಿ ವ್ಯತ್ಯಾಸಗೊಳ್ಳುವುವು 'ಸಂಸ್ಕೃತ', ವ್ಯತ್ಯಾಸಗೊಳ್ಳದೆ ಮೂಲರೂಪದಲ್ಲಿ ಉಳಿಯುವುವು 'ಸಮಸಂಸ್ಕೃತ'. ಎರಡೂ ಸಂಸ್ಕೃತಗಳೇ ಆಗಿದ್ದರೂ ಕನ್ನಡ ಪ್ರತ್ಯಯಗಳು ಅಂಟುವಲ್ಲಿ ತಾಳುವ ಸ್ವರೂಪವನ್ನವಲಂಬಿಸಿ ಅವುಗಳನ್ನು ಸಮಸಂಸ್ಕೃತ, ಸಂಸ್ಕೃತಗಳೆಂದು ಕರೆಯಬೇಕಾಗುತ್ತದೆ. ಈ ನಿಯಮ ಹಿಡಿದುಕೊಂಡು ಸಂಸ್ಕೃತ ಶಬ್ದಭಂಡಾರವನ್ನು ಪರೀಕ್ಷಿಸಿದರೆ ಕನ್ನಡಕ್ಕೆ ಬರುವಲ್ಲಿ ರೂಪವ್ಯತ್ಯಾಸಗೊಳ್ಳುವ ವ್ಯಂಜನಾಂತ, ಆ ಈ ಊ ೠ ಏ ಓ ಕಾರಾಂತ ಸಂಸ್ಕೃತ ನಾಮಪ್ರಕೃತಿಗಳು 'ಸಂಸ್ಕೃತ'; ಉಭಯ ಭಾಷೆಗಳಲ್ಲಿ ವ್ಯತ್ಯಾಸಗೊಳ್ಳದ "ಅತ್ವಾಂತಮುಮಿತ್ವಾಂತಮುಮುತ್ವಾಂತಮುಮಾ ಋತ್ವಾಂತಮುಂ"[೨೦] ಅಂದರೆ ಅ ಇ ಉ ಋ ಕಾರಾಂತ ಸಂಸ್ಕೃತ ನಾಮಪ್ರಕೃತಿಗಳು 'ಸಮಸಂಸ್ಕೃತ'ವೆಂದು ಸ್ಪಷ್ಟವಾಗುತ್ತದೆ. *ಈ ಸಮಸಂಸ್ಕೃತಶಬ್ದಗಳ ಬಳಕೆಯ ಬಗೆಗೆ ಮಾರ್ಗಕಾರನ ಅಭಿಪ್ರಾಯ ಹೀಗಿದೆ:

> ಸಮಸಂಸ್ಕೃತಂಗಳೊಳ್ ಸ। ಯ್ತಮರ್ದಿರೆ ಕನ್ನಡಮನಱಿದು ಪೇೞ್ಗೆಂಬುದಿದಾ।
> ಗಮಕೋವಿದ ನಿಗದಿತಮಾ। ರ್ಗಮಿದಂ ಬೆರಸಲ್ಕಮಾಗದೀ ಸಕ್ಕದದೊಳ್ ||[೨೧]

ಸಮಸಂಸ್ಕೃತ ಪದಗಳನ್ನು ಕನ್ನಡದ ಜೊತೆ ಬಳಸಬಹುದು (ಹೂಗಳಿಂದ ತುಂಬಿದ ವೃಕ್ಷ), ಆದರೆ ಕನ್ನಡ ಪ್ರಕೃತಿ ಮತ್ತು ಸಮಸಂಸ್ಕೃತ ಪ್ರಕೃತಿಗಳನ್ನು ಬೆರಸಿ ಸಮಸ್ತಪದ (ಹೂವಿನ+ವೃಕ್ಷ=ಹೂವೃಕ್ಷ) ವನ್ನು ಮಾಡಕೂಡದು. ಶಬ್ದಸ್ಮೃತಿಯ,

> ಬೆರಸಿ ಸಮಸಂಸ್ಕೃತಂಗಳ್। ಬರೆ ಕನ್ನಡದೊಳಗೆ ಸಮತೆಯಿಂದಂ ಸಲ್ಗುಂ।
> ನಿರವದ್ಯಮಾಗಿ ಪದವಿಧಿ। ವಿರುದ್ಧಮಕ್ಕುಂ ತದನ್ಯಥಾ ವೃತ್ತಿಗಳೊಳ್ ||[೨೨]

ಎಂಬ ಸೂತ್ರ ಮತ್ತು ಶಬ್ದಮಣಿದರ್ಪಣದ "ಆ ಸಮಸಂಸ್ಕೃತ ಪದಂಗಳನಚ್ಚಗನ್ನಡದೊಳ್ ಬೆರಸಿ ಸಮಾಸಂ ಮಾಡಲಾಗದು"[೨೩] ಎಂಬ ಹೇಳಿಕೆಗಳು ಈ ಮಾತಿಗೆ ಪೋಷಕವಾಗಿವೆ. ಸಮಸಂಸ್ಕೃತವೂ ಸಂಸ್ಕೃತವೇ ಆಗಿರುವುದರಿಂದ ಇದನ್ನು ಕನ್ನಡದೊಂದಿಗೆ ಸಮಾಸ ಮಾಡುವುದು ಯಾವ ಕಾಲಕ್ಕೂ ದೋಷ. ಆದುದರಿಂದ ಕವಿರಾಜಮಾರ್ಗಕಾರನು ಸಮಸಂಸ್ಕೃತ ಪ್ರಸಂಗದಲ್ಲಿ ಈ ದೋಷಕ್ಕೆ ಹೇಳಿದ "ಅರಸುಕುಮಾರನಂ......." ಎಂಬ ಉದಾಹರಣೆಯನ್ನು, ಕೇಶಿರಾಜನು ಅರಿಸಮಾಸಕ್ಕೂ ಕೊಟ್ಟುದನ್ನು ಲಕ್ಷ್ಯದಲ್ಲಿಡಬೇಕು. ಒಟ್ಟಿನಲ್ಲಿ ಕನ್ನಡದೊಂದಿಗೆ ಸಮಸಂಸ್ಕೃತವನ್ನು ಬಳಸಬಹುದೇ ಹೊರತು, ಸಮಾಸ ಮಾಡಕೂಡದು ಎಂದು ಕವಿರಾಜಮಾರ್ಗ, ಶಬ್ದಸ್ಮೃತಿ ಮತ್ತು ಶಬ್ದಮಣಿದರ್ಪಣಗಳ ಆಶಯ.[೨೪]

---

೨೦. ಶ.ಮ.ದ. ಸೂ. ೯೪

* ಇಲ್ಲಿ ದೀರ್ಘಾಂತ, ಹ್ರಸ್ವಾಂತವೆಂದು ಎರಡು ವರ್ಗಗಳಿರುವುದನ್ನು ಗಮನಿಸಬೇಕು.

೨೧. ಕ.ಮಾ. ೧-೫೧

೨೨. ಕಾ.ಲೋ. ಸೂ. ೬೩

೨೩. ಶ.ಮ.ದ. ಸೂ. ೯೦

೨೪. ಇದಕ್ಕೆ ವಿರುದ್ಧವೆನ್ನುವಂಮತೆ ಭಾಷಾಭೂಷಣ-೯೦೩(ಸೂ. ೧೩೨)ದಲ್ಲಿ "ಸಮಸಂಸ್ಕೃತಂ ದೇಶೀಯ ಪದೇನ ಸಮಂ ಸಮಸ್ಯತೇ" ಎಂದು ಹೇಳಿ ಮಂಗಳಾರತಿ, ಕಡುರಾಗಂ, ತುರಗದಟಿಂ, ಕೂರಸಿ ಇತ್ಯಾದಿ ಉದಾಹರಣೆಗಳಿಂದ ಸಮರ್ಥಿಸಲಾಗಿದೆ. ಕೇಶಿರಾಜನು ಇವೇ ಉದಾಹರಣೆಗಳನ್ನು ಶಿಷ್ಟಪ್ರಯೋಗದ ಅರಿಸಮಾಸಗಳೆಂದಿರುವುದರಿಂದ ನಾಗವರ್ಮನ ಈ ಹೇಳಿಕೆ ಬಿದ್ದು ಹೋಗುತ್ತದೆ. ಇನ್ನು "ಸಮಸಂಸ್ಕೃತ ಪದಂಗಳನಚ್ಚಗನ್ನಡದೊಳ್ಬೆರಸಿ ನಡಸುವುದು" ಎಂಬ ಹೈದರಾಬಾದ ದರ್ಪಣ (ಪು. ೭೦)ದ ವಾಕ್ಯ, ಅಚ್ಚಾದ ಶಬ್ದಮಣಿದರ್ಪಣಗಳಲ್ಲಿಯ ವಾಕ್ಯಕ್ಕೆ ವಿರುದ್ಧವಾಗಿದ್ದು, ಇಲ್ಲಿ ಕೇವಲ ಬೆರಸಿ ಎಂದೋ ಶಿಷ್ಟಪ್ರಯೋಗವೆಂದೋ ಅರ್ಥವಿರಬೇಕು.

ಕನ್ನಡ-ಸಂಸ್ಕೃತ: ಸಮಸಂಸ್ಕೃತ ಪದಗಳನ್ನು ಕನ್ನಡದಲ್ಲಿ ಬಳಸಲು ಅನುಮತಿ ನೀಡಿದ ಮಾರ್ಗಕಾರನು,

ನೆಗೞ್ದಿರ್ದ ಕನ್ನಡಂಗಳೊ । ಳಗಣಿತ ಗುಣವಿದಿತ ಸಂಸ್ಕೃತೋಕ್ತಕ್ರಮಮಂ।

ಬಗೆದೊಂದು ಮಾಡಿ ಪೇೞ್ವೊಡೆ। ಸೊಗಯಿಸುಗುಂ ಕಾವ್ಯಬಂಧಮೆಂದುಮನಿಂದ್ಯಂ॥[25]

ಎನ್ನುತ್ತ, ಸಂಸ್ಕೃತಪದಗಳನ್ನೂ ಕನ್ನಡದಲ್ಲಿ ಬಳಸಲು ಅನುಮತಿಯಿತ್ತಿರುವನು. ಆದರೆ ಸಮಸಂಸ್ಕೃತ-ಕನ್ನಡಗಳ ಸಮಾಸದಂತೆ ಸಂಸ್ಕೃತ-ಕನ್ನಡಗಳ ಸಮಾಸವೂ ತ್ಯಾಜ್ಯವೆನ್ನುತ್ತ,

ತೞಿಸಂದಾ ಸಕ್ಕದಮುಮ। ನೞೆಯದೆ ಕನ್ನಡಮುಮಂ **ಸಮಾಸೋಕ್ತಿಗಳೊಳ್**।

ಕುೞಿತು ಬೆರಸಿದಡೆ ವಿರಸಂ । ಮಱುಗುವ **ಪಾಲ್ಗಳೆಯ ಪನಿಗಳಂ ಬೆರಸಿದವೋಲ್**॥[26]

ಎಂದು ಎಚ್ಚರ ನೀಡಿರುವನು. ಇದಕ್ಕೆ ಉದಾಹರಣೆಯಾಗಿ,

ಅರಸುಕುಮಾರನನಾಯತ।ತರ ಕಡೆಗಣ್ಣಿಂದೆ ನೋಡಿ ಕೆಳದಿ ಸಮೇತಂ।

ಪರಿಗತನಗೆಯಿಂದಿರ್ದೆಂ । ಗುರು ನಾಣ್ಬರದಿಂದಮೆಱಗಿ ಮುಖತಾವರೆಯಂ॥[27]

ಎಂಬ ಪದ್ಯ ಕೊಡಲ್ಪಟ್ಟಿದೆ. ಇಲ್ಲಿಯ 'ಅರಸುಕುಮಾರ' ಮೊದಲಾದುವು ಸಂಸ್ಕೃತ-ಕನ್ನಡ ಬೆರಕೆಯ ಅರಿಸಮಾಸಗಳು. ಈ ದೋಷವನ್ನು ಸಂಸ್ಕೃತ ಸಂಸ್ಕೃತ ಬೆರಕೆಯ ಸಮಾಸದ ಮೂಲಕ ನಿವಾರಿಸಬೇಕೆನ್ನುತ್ತ,

ನರಪತಿತನಯನನಾಯತ। ತರಳಾಪಾಂಗದೊಳೆ ನೋಡಿ ಕೆಳದಿಯರೊಡನಾಂ।

ಪರಿಗತಹಾಸ್ಯದೊಳಿರ್ದೆಂ।ಗುರುಲಜ್ಜಾಭರದಿನೆಱಗಿ ಮುಖಸರಸಿಜಮಂ॥[28]

ಎಂಬ ತಿದ್ದುಪಡಿಯನ್ನು ಸೂಚಿಸಿದ್ದಾನೆ. ಹೀಗೆ ಉಭಯಪದ ಸಂಸ್ಕೃತವಾಗಿರುವ 'ನರಪತಿತನಯ' ಎಂಬಂತಹ ಸಮಾಸಪದಗಳ ಬಳಕೆಗೆ ಕನ್ನಡದಲ್ಲಿ ಮನ್ನಣೆಯಿದೆ. ಹೀಗಾಗಿ,

ಎಂದಿಂತು ಸಮಾಸೋಕ್ತಿಯೊ। ಳೊಂದಾಗಿರೆ ಸಕ್ಕದಂಗಳುಂ ಕನ್ನಡಮುಂ।

ಸುಂದರಮಕ್ಕುಂ ಕವಿಪದ। ಮೊಂದಿದವೋಲ್ **ಕನಕರಚನೆಯೊಳ್ ಮಣಿನಿಕರಂ** ॥[29]

ಎನ್ನುತ್ತ ಸಂಸ್ಕೃತ + ಸಂಸ್ಕೃತ ಸಮಾಸ ಮತ್ತು ಕನ್ನಡ ಪದಗಳನ್ನು ಬಳಸಬಹುದೆನ್ನುತ್ತಾನೆ (ಪುಷ್ಪವೃಕ್ಷ ಅಂದವಾಗಿದೆ). ಈ ವರೆಗಣ ವಿವರಗಳಿಂದ ಕನ್ನಡದ ಯಾವ ವೈಯಾಕರಣಿಗೂ ಇಲ್ಲದ ಸಂಸ್ಕೃತ, ಸಮಸಂಸ್ಕೃತಗಳ ಖಚಿತಜ್ಞಾನ ಮಾರ್ಗಕಾರನಿಗೆ ಇದೆಯೆಂದು ವ್ಯಕ್ತವಾಗುತ್ತದೆ. ಇಷ್ಟಕ್ಕೆ ನಿಲ್ಲದೆ ಮೇಲೆ ಹೇಳಿದ ಸಂಸ್ಕೃತಪದ ಸಮಸಂಸ್ಕೃತಪದಗಳೆಂಬ ಎರಡೂ ವರ್ಗಕ್ಕೆ ಸೇರದ ಸಂಸ್ಕೃತ ಅವ್ಯಯಗಳು ಕನ್ನಡಕ್ಕೆ ಸಲ್ಲುವ ರೀತಿಯನ್ನು ಕೆಳಗಿನಂತೆ ವಿವರಿಸುತ್ತಾನೆ:

ಅಹರಹರುಚ್ಚೈರ್ನೀಚ್ಚೈ । ರ್ಮುಹುರ್ಮುಹುರಿತಸ್ತತಃ ಪುನಃಪುನರಂತ।

ರ್ಬಹಿರಾದಿಹ ಪ್ರಾದುರಹೋ । ಸಹಸಾದಿಗಳವ್ಯಯಂಗಳಸಹಾಯಂಗಳ್॥[30]

---

೨೫. ಕ.ಮಾ. ೧-೫೭

೨೬. ಕ.ಮಾ. ೧-೫೮

೨೭. ಕ.ಮಾ. ೧-೫೯

೨೮. ಕ.ಮಾ. ೧-೬೦

೨೯. ಕ.ಮಾ. ೧-೬೧

೩೦. ಕ.ಮಾ. ೧-೫೨

ಅಹರಹಃ ಉಚ್ಚೈಃ ನೀಚೈಃ ಮುಹುರ್ಮುಹುಃ (ಮುಹುಃಮುಹುಃ) ಇತಃ ತತಃ ಪುನಃ ಪುನಃ ಅಂತಃ ಬಹಿಃ ಆದ್ ಇಹ ಪ್ರಾದುಃ ಅಹೋ ಸಹಸಾ ಎಂಬ ಸಂಸ್ಕೃತ ಅವ್ಯಯಗಳು ಕನ್ನಡದಲ್ಲಿ (ಸಮಸಂಸ್ಕೃತಗಳ ಹಾಗೆ ನೇರವಾಗಿಯಾಗಲಿ, ಸಂಸ್ಕೃತಗಳ ಹಾಗೆ ಅಂತ್ಯವ್ಯತ್ಯಾಸಗೊಂಡಾಗಲಿ) ಬಳಕೆಯಾಗುವುದಿಲ್ಲ; ಅಂದರೆ ಕನ್ನಡಪ್ರತ್ಯಯ ಹಚ್ಚಿಕೊಂಡು ಪದಗಳಾಗುವುದಿಲ್ಲ. ಹೀಗಾಗಿ ಇವು ಅಸಹಾಯಿಗಳು. ಒಂದು ವೇಳೆ ಬಳಸಿದರೆ ದೋಷವೆನಿಸುವುದರಿಂದ,

> ಬೆರಸಿರೆ ಕನ್ನಡದೊಳೆ ಬಂ। ಧುರಮಾಗದು ಕಾವ್ಯರಚನೆ ಪೇಟ್ವೊಡೆ ಪೀನಂ।
> ಪರುಷತರಮಕ್ಕುಮೊತ್ತುಂ।ಗರಡೆಯ ಮದ್ದಳೆಯ ಜರ್ಝರಧ್ವನಿಗಳವೋಲ್॥[೩೧]

ಎಂದು ತಿಳಿಸಿರುವನು. ಇದಕ್ಕೆ ಉದಾಹರಣೆ:

> ಬಹಿರಂತರುಪವನಂಗಳೊ।ಳಹರಹಮಾ ಪರಭೃತಂಗುಳುಲಿವ ರವಂಗಳ್।
> ಸಹಸಾ ತಳಮಳಗೊಳಿಸಿದ। ವಹೋ ಮನಂಗಳನಿತಸ್ತತಂ ವಿರಹಿಗಳಾ ॥[೩೨]

ಇಲ್ಲಿ ಅಹರಹಂ, ಇತಸ್ತತಂ ಎಂದು ಅವ್ಯಯಗಳು ಕನ್ನಡಪ್ರತ್ಯಯ ಹಚ್ಚಿಕೊಂಡು ಪದದ ಸೋಗು ಹಾಕಿವೆ. ಇದು ದೋಷ. ಈ ದೋಷ ಋಜುಗೊಳ್ಳಬೇಕಾದರೆ,

> ವಿದಿತ ಸಮಸಂಸ್ಕೃತೋದಿತ। ಪದಂಗಳೊಳ್ ಪುದಿದು ಬೆರಸಿ ಬರೆ ಕನ್ನಡದೊಳ್।
> ಮುದಮನವು ತರ್ಕುಮತಿಶಯ। ಮೃದಂಗಸಂಗೀತಕಾದಿ ಮಧುರರವಂಬೋಲ್॥[೩೩]

ಎಂದು ಹೇಳುವಲ್ಲಿ ಅವ್ಯಯಗಳು ಸಮಸಂಸ್ಕೃತದೊಂದಿಗೆ ಸಮಸ್ತಗೊಂಡರೆ[೩೪] ಮಾತ್ರ ಕನ್ನಡಕ್ಕೆ ಪ್ರವೇಶವಿದೆಯೆಂದು ತಿಳಿಸುತ್ತಾನೆ. ಇದಕ್ಕೆ,

> ಬಹಿರುದ್ಯಾನಾಂತರದೊಳ್। ಸಹಸೋದಿತ ಮತ್ತ ಕೋಕಿಲುಚ್ಚೈರ್ಧ್ವಾನಂ।
> ಮುಹುರಾಕರ್ಣಿಸೆ ಪಡೆದ।ತ್ತಹರ್ನಿಶಂ ಪೆರ್ಚನಂತರಂಗಕ್ಕೆನ್ನಾ॥[೩೫]

ಎಂಬುದು ಉದಾಹರಣೆ. ಇಲ್ಲಿ 'ಬಹಿರುದ್ಯಾನಂ' 'ಉಚ್ಚೈರ್ಧ್ವಾನಂ' ಎಂಬಿವು ಅವ್ಯಯ ಮತ್ತು ಸಮಸಂಸ್ಕೃತಗಳ ಸಮಾಸಪದಗಳಾಗಿರುವುದರಿಂದ ಕನ್ನಡದಲ್ಲಿ ಬಳಕೆಯಾಗುವ ಅರ್ಹತೆ ಪಡೆದಿವೆ. ಒಟ್ಟಿನಲ್ಲಿ,

೧) ಕನ್ನಡಪ್ರತ್ಯಯ ಹತ್ತುವಲ್ಲಿ ಅಂತ್ಯವ್ಯತ್ಯಾಸಗೊಳ್ಳುವ ಸಂಸ್ಕೃತ ನಾಮಪ್ರಕೃತಿಗಳು 'ಸಂಸ್ಕೃತ', ವ್ಯತ್ಯಾಸಗೊಳ್ಳದ ಸಂಸ್ಕೃತ ನಾಮಪ್ರಕೃತಿಗಳು 'ಸಮಸಂಸ್ಕೃತ'.

೨) ಸಂಸ್ಕೃತ ಸಮಸಂಸ್ಕೃತ ನಾಮಪ್ರಕೃತಿಗಳನ್ನು ಕನ್ನಡದೊಂದಿಗೆ ನೇರವಾಗಿ, ಇಲ್ಲವೆ ಸಂಸ್ಕೃತದೊಂದಿಗೆ ಸಮಾಸಮಾಡಿ ಬಳಸಬೇಕು.

೩) ಸಂಸ್ಕೃತ ಅವ್ಯಯಗಳನ್ನು ಕನ್ನಡದೊಂದಿಗೆ ನೇರವಾಗಿ ಇಲ್ಲವೆ ಸಮಾಸಮಾಡಿ ಬಳಸದೆ ಸಮಸಂಸ್ಕೃತದೊಂದಿಗೆ ಸಮಾಸಮಾಡಿ ಬಳಸಬೇಕು.

---

೩೧. ಕ.ಮಾ. ೧-೫೩

೩೨. ಕ.ಮಾ. ೧-೫೪

೩೩. ಕ.ಮಾ. ೧-೫೫

೩೪. ಅವ್ಯಯಗಳು ಸಮಸಂಸ್ಕೃತದೊಂದಿಗೆ ಸಮಾಸವಾಗಬೇಕೆಂಬುದರ ಔಚಿತ್ಯ ಅರ್ಥವಾಗುವುದಿಲ್ಲ. ಕೇಶಿರಾಜನಾದರೋ"....... ಅವ್ಯಯಮುಂ..... ಸಂಸ್ಕೃತದೊಳ್ ಪದವಿಧಿಯಂ ನೆಱೆ ತಳೆದಲ್ಲದೆ ಕನ್ನಡದಲ್ಲಿ ಲಿಂಗಮಾಗವು" (ಸೂ. ೯೧) ಎನ್ನುತ್ತಾನೆ.

೩೫. ಕ.ಮಾ. ೧-೫೬

ಎಂದು ಸ್ಫುಟವಾದ ಅಭಿಪ್ರಾಯವನ್ನು ನೀಡುತ್ತ, ಅತಿಥಿಯಾಗಿ ಬರುತ್ತಿದ್ದ ಸಂಸ್ಕೃತವನ್ನು ಉಚಿತ ರೀತಿಯಲ್ಲಿ ಮುಕ್ತಮನಸ್ಸಿನಿಂದ ಸ್ವಾಗತಿಸಿದ್ದಾನೆ. ಹೊಲಗೆಡಿಸಿ ನುಡಿದ 'ಪಟಿಗನ್ನಡ'ವನ್ನು, "ಪುರಾಣಮಿತ್ಯೇವ ನ ಸಾಧು ಸರ್ವಂ" ಎಂಬ ಪ್ರಜ್ಞೆಯಿಂದ ನಿಂದಿಸಿ, ಎದುರು ಬರುತ್ತಿದ್ದ ಸಂಸ್ಕೃತವನ್ನು "ನ ಚಾಪಿ ಕಾವ್ಯಂ ನವಮಿತ್ಯವದ್ಯಂ" ಎಂಬ ಪ್ರಜ್ಞೆಯಿಂದ ಯೋಗ್ಯರೀತಿಯಲ್ಲಿ ಬರಮಾಡಿಕೊಂಡಿದ್ದಾನೆ. ಇದು ಈತನ ಪ್ರಾಂಜಲಮನಸ್ಸಿನ ಪ್ರತೀಕ.

ಕನ್ನಡಂಗಳ್-ಕನ್ನಡದ ತಿರುಳ್-ದಕ್ಷಿಣೋತ್ತರಮಾರ್ಗ: ಭಾಷೆಯ ಒಂದು ಗುಣಧರ್ಮವಾದ 'ಅವಸ್ಥಾಭೇದ'ವು ಅದರ ವಯಸ್ಸಿನ ಘಟ್ಟಗಳನ್ನು ಎಣಿಸಿ ತೋರಿಸಿದರೆ, ಇನ್ನೊಂದು ಗುಣಧರ್ಮವಾದ 'ಪ್ರಾಂತಭೇದ'ವು ಅದರ ಬೇರೆ ಬೇರೆ ಪ್ರಾದೇಶಿಕ ವೈಶಿಷ್ಟ್ಯಗಳನ್ನು ಗೆರೆಕೊರೆದು ಹೇಳುತ್ತದೆ. ಕವಿರಾಜಮಾರ್ಗದಲ್ಲಿ ಕಂಡುಬರುವ 'ಕನ್ನಂಡಗಳ್' 'ಕನ್ನಡದ ತಿರುಳ್' 'ದೇಸಿ ಬೇಱಿವೇಱಪ್ಪುದಱಿಂ' 'ದಕ್ಷಿಣೋತ್ತರಮಾರ್ಗಂ' ಎಂಬಿವು ಪ್ರಾಂತಭೇದಸೂಚಕಗಳೆಂಬ ಅಭಿಪ್ರಾಯವಿದ್ದು, ಅದರ ವಿವೇಚನೆಯನ್ನು ಇನ್ನು ಮಾಡಬಹುದು.

"ಸಮಸಂಸ್ಕೃತಂಗಳೊಳ್ ತಾಳ್ತಮರ್ದಿರೆ ಕನ್ನಡಮನಱಿದು ಪೇೞ್ಗೆಂಬುದಿದಾ।
ಗಮಕೋವಿದ ನಿಗದಿತಮಾರ್ಗಂ.......................................॥[೩೬]

"ಎಂದಿಂತು ಸಮಾಸೋಕ್ತಿಯೊಳೊಂದಾಗಿರೆ ಸಕ್ಕದಂಗಳುಂ ಕನ್ನಡಮುಂ॥[೩೭]

ಇಲ್ಲಿಯ 'ಸಮಸಂಸ್ಕೃತಂಗಳ್', 'ಸಕ್ಕದಂಗಳ್' ಎಂಬಿವುಗಳಿಗೆ ಸಮಸಂಸ್ಕೃತ ಪದಗಳು, ಸಂಸ್ಕೃತಪದಗಳು ಎಂದು ಅರ್ಥ. ಇದೇ ರೀತಿ

ನೆಗೞ್ದಿರ್ದ ಕನ್ನಡಂಗಳೊಳಗಣಿತಗುಣ ವಿದಿತ ಸಂಸ್ಕೃತೋಕ್ತಕ್ರಮಮಂ।
ಬಗೆದೊಂದು ಮಾಡಿ ಪೇೞ್ದೊಡೆ । ಸೊಗಯಿಸುಗುಂ........॥[೩೮]

ಎಂಬಲ್ಲಿಯ 'ಕನ್ನಂಡಗಳ್' ಎಂಬುದಕ್ಕೆ 'ಕನ್ನಡ ಪದಗಳು' ಎಂದು ಅರ್ಥ ಹೇಳಬೇಕಲ್ಲದೆ, ಬಹುವಚನವನ್ನು ಗಮನಿಸಿ ಪ್ರಾಂತಭೇದಗಳು ಎಂದು ಅರ್ಥ ಮಾಡಬಾರದು. ಇನ್ನು,

ದೋಸಮಿನಿತೆಂದು ಬಗೆದು। ದ್ಭಾಸಿಸಿ ತಱಿಸಂದು ಕನ್ನಡಂಗಳೊಳೆಂದುಂ।
ವಾಸುಗಿಯುಮಱಿಯಲಾಱಿದೆ ಬೇಸಱುಗುಂ ದೇಸಿ ಬೇಱಿವೇಱಪ್ಪುದಱಿಂ॥[೩೯]

ಇಲ್ಲಿಯ 'ಕನ್ನಡಂಗಳೊಳ್......ದೇಸಿ ಬೇಱಿವೇಱಪ್ಪುದಱಿಂ' ಎಂಬುದಕ್ಕೆ ಕನ್ನಡಪದಗಳಲ್ಲಿ ದೇಸಿ ಬೇರೆಬೇರೆಯಾಗಿರುತ್ತದೆ (ಒಂದೇ ಪದವು ವಿಕಲ್ಪರೂಪಗಳಲ್ಲಿ ಬಳಕೆಯಾಗುತ್ತದೆ) ಎಂದು ಅರ್ಥ.

ಒಂದು ಪ್ರದೇಶದಲ್ಲಿಯೇ ಪದಗಳ ವಿವಿಧ ರೂಪಗಳನ್ನು ಬಳಸುತ್ತಿದ್ದರೆ ಅದು 'ಶಾಬ್ದಿಕ ವಿಕಲ್ಪ'. ಒಂದು ಪ್ರದೇಶದ ಜನರು ಒಂದು, ಇನ್ನೊಂದು ಪ್ರದೇಶದ ಜನರು ಇನ್ನೊಂದು ರೂಪವನ್ನು ನಿರ್ದಿಷ್ಟವಾಗಿ ಬಳಸುತ್ತಿದ್ದರೆ ಅದು 'ಪ್ರಾಂತಭೇದ'. ಭಾಷೆ ಗ್ರಂಥಸ್ಥವಾದಷ್ಟು ಅದರ ಪ್ರಕೃತಿ, ಪ್ರತ್ಯಯ, ಪದಗಳ ರೂಪವ್ಯತ್ಯಾಸ ಕಡಿಮೆಯಾಗುತ್ತದೆ; ಪಾಣಿನೀಯದಂತಹ ವ್ಯಾಕರಣ ಹುಟ್ಟಿದರೆ ಆ ರೂಪಗಳಿಗೆ ಇನ್ನೂ ಸ್ಥಿರತೆ ಬರುತ್ತದೆ. ಕವಿರಾಜಮಾರ್ಗಪೂರ್ವದಲ್ಲಿ ಕನ್ನಡ ಗ್ರಂಥಸ್ಥವಾಗಿತ್ತು. ಬಹುಶಃ ಅದಕ್ಕೆ ವ್ಯಾಕರಣ ಹುಟ್ಟಿರಲಿಲ್ಲ. ಮೇಲಾಗಿ ಸಾಹಿತ್ಯಪ್ರಸಾರ ಅಷ್ಟು ಪ್ರಗಾಢವಾಗಿರಲಿಲ್ಲ. ಆದುದರಿಂದ ಗ್ರಂಥಗಳಲ್ಲಿ ವಿಕಲ್ಪರೂಪಗಳನ್ನು ಕೈಗೆಬಂದಂತೆ

---

೩೬. ಕ.ಮಾ. ೧-೫೧
೩೭. ಕ.ಮಾ. ೧-೬೧
೩೮. ಕ.ಮಾ. ೧-೫೭
೩೯. ಕ.ಮಾ. ೧-೪೬

ಬಳಸುತ್ತಿರಬಹುದು. ಕವಿರಾಜಮಾರ್ಗದಲ್ಲಿಯ 'ನಮಗೆ' 'ಎಮಗೆ'[೪೦] ಎಂಬ ಭಿನ್ನರೂಪಗಳೇ ಇದಕ್ಕೆ ನಿದರ್ಶನ. ಇದನ್ನು ಮನದಂದರೆ ಮಾರ್ಗಕಾರನು ಪ್ರಾಂತಭೇದವನ್ನು ದೃಷ್ಟಿಯಲ್ಲಿಟ್ಟುಕೊಂಡು 'ದೇಸಿ ಬೇಱವೇಱ' ಎಂದಿರದೆ, ಗ್ರಂಥಗಳಲ್ಲಿ ಬಳಕೆಯಾಗುವ ಒಂದೇ ಪದದ ವಿಕಲ್ಪರೂಪಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ಹೇಳಿರಬೇಕೇನಿಸುತ್ತದೆ. ಹೀಗೆ ಶಾಬ್ದಿಕ ವಿಕಲ್ಪ ಕರ್ನಾಟಕವನ್ನೆಲ್ಲ ವ್ಯಾಪಿಸಿದ್ದರೂ 'ನಡುವಣ ನಾಡ' ಭಾಷೆಯನ್ನು ಗ್ರಂಥರಚನೆಗೆ ಪ್ರಮಾಣಾರ್ಹವೆಂದು ಆ ಕಾಲದಲ್ಲಿ ಗೌರವಿಸುತ್ತಿರಬಹುದು. ನಡುವಣ ನಾಡಿನ ಹೊರಗೆ ನಿಂತು ಕೃತಿರಚಿಸಿದ ಮಾರ್ಗಕಾರನು 'ಕನ್ನಡದ ತಿರುಳ್' ಎಂದೂ, ಪಂಪನು 'ರಾಜದ್ರಾಜಕಮೆನಿಸುವ ಸಾಜದ ಪುಲಿಗೆಱೆಯ ಕನ್ನಡ'[೪೧]ವೆಂದೂ, ರನ್ನನು 'ಕನ್ನಡಂ ಆ ಎರಡಱುನೂಱಿರ ಕನ್ನಡಂ'[೪೨] ಎಂದೂ ಮೆಚ್ಚಿ ನುಡಿದುದು ಈ ಅಭಿಪ್ರಾಯಕ್ಕೆ ಪೋಷಕವಾಗಿದೆ. ಅದಕ್ಕಾಗಿ ಮಾರ್ಗಕಾರನು ಈ ಒಂದು ಸಂದರ್ಭದಲ್ಲಿ ಮಾತ್ರ ಪ್ರಾಂತಭೇದದ ಅರ್ಥಬರುವಂತೆ 'ನಡುವಣ ನಾಡೆ ನಾಡೆ ಕನ್ನಡದ ತಿರುಳ್' ಎಂದು ಹೇಳಿದಂತಿದೆ. ಇಷ್ಟು ಹಿನ್ನೆಲೆಯಲ್ಲಿ ದಕ್ಷಿಣೋತ್ತರಮಾರ್ಗಗಳನ್ನು ವಿವೇಚಿಸಬಹುದು.

ಕವಿರಾಜಮಾರ್ಗಕಾರನ ಪ್ರಾಂತಭೇದಪ್ರಜ್ಞೆಯನ್ನು ಬೆಂಬಲಿಸುವವರು ಹಿಡಿಯುವ ಆಧಾರಗಳಲ್ಲಿ 'ದಕ್ಷಿಣೋತ್ತರಮಾರ್ಗ' ವಿಚಾರವೂ ಒಂದು. 'ಮಾರ್ಗ' ಎಂಬುದು ಸಕಲಶಾಸ್ತ್ರಗಳಲ್ಲಿ ಪಾರಿಭಾಷಿಕವಾಗುವ ಸಾಮರ್ಥ್ಯವುಳ್ಳ ಒಂದು ಅರ್ಥಪೂರ್ಣಪದ. ದಕ್ಷಿಣ-ಉತ್ತರ ಎಂಬಿವು ಆ ಆ ಮಾರ್ಗಗಳನ್ನು ಬೇರ್ಪಡಿಸಿ ಹೇಳುವಲ್ಲಿ ಅನುಕೂಲವಾಗುವ ಔಚಿತ್ಯಪೂರ್ಣ ಶಬ್ದಗಳು. ಸಂಗೀತ-ಶಿಲ್ಪ-ಕಾವ್ಯಶಾಸ್ತ್ರಗಳಲ್ಲಿ ಕಂಡುಬರುವ ಉತ್ತರಮಾರ್ಗ, ದಕ್ಷಿಣಮಾರ್ಗ ಎಂಬ ಪರಿಭಾಷೆಗಳೇ ಇದಕ್ಕೆ ಉದಾಹರಣೆ.

ಶ್ಲೇಷಪ್ರಸಾದಾದಿ ಗುಣಗಳನ್ನವಲಂಬಿಸಿದ ವಿಶಿಷ್ಟವಚನವಿನ್ಯಾಸಕ್ರಮ ಅಥವಾ ಪದಸಂಘಟನಾ ರೀತಿಯೇ ಮಾರ್ಗ. ಈ ಸಂಖ್ಯೆ ವೈದರ್ಭಿ, ಗೌಡಿ ಎಂದು ಎರಡರಿಂದ ಆರಂಭವಾಗಿ ಪಾಂಚಾಲಿ. ಲಾಟಿ, ಅವಂತಿ, ಮಾಗಧಿ ಎಂದು ಆರಕ್ಕೆ ಏರಿದೆ. ದಂಡಿ ಮಾತ್ರ ಒಡೆದು ಕಾಣುವ ವ್ಯತ್ಯಾಸವುಳ್ಳ (ಪರಸ್ಪರ ವಿರುದ್ಧವಾಗಿರುವ) ವೈದರ್ಭಿ, ಗೌಡಿಗಳನ್ನು ಒಪ್ಪುತ್ತಾನೆ.

> ಶ್ಲೇಷಃ ಪ್ರಸಾದಸ್ಸಮತಾ ಮಾಧುರ್ಯಂ ಸುಕುಮಾರತಾ।
> ಅರ್ಥವ್ಯಕ್ತಿರುದಾರತ್ತ್ವ ಮೋಜಃ ಕಾಂತಿ ಸಮಾಧಯಃ॥[೪೩]
> ಇತಿ ವೈದರ್ಭಮಾರ್ಗಸ್ಯ ಪ್ರಾಣಾ ದಶಗುಣಾಃ ಸ್ಮೃತಾಃ।
> ಏಷಾಂ ವಿಪರ್ಯಯಃ ಪ್ರಾಯೋ ದೃಶ್ಯತೇ ಗೌಡವರ್ತ್ಮನಿ॥[೪೪]

ಎಂದು ಅವುಗಳ ಲಕ್ಷಣ ಹೇಳಿದ್ದಾನೆ. ಈ ಶ್ಲೋಕಗಳನ್ನು ಅನುವಾದಿಸುತ್ತ ಕವಿರಾಜಮಾರ್ಗಕಾರನು,

> ಸಮ ಮಧುರ ನಿಬಿಡ ಕಾಂತ ಸು।ಕುಮಾರ ಸುಸಮಾಹಿತ ಪ್ರಸನ್ನೋದಾರ ।
> ಪ್ರಮಿತ ಗ್ರಾಮ್ಯೋಜಸ್ವಿ। ಕ್ರಮದಿಂ ದಶಭೇದಮಲ್ಲಿ ದಕ್ಷಿಣಮಾರ್ಗಂ॥[೪೫]
> ಅವಱ ವಿಪರ್ಯಯವೃತ್ತಿ । ಪ್ರವಿಭಕ್ತ ವಿಕಲ್ಪಮಕ್ಕುಮುತ್ತರಮಾರ್ಗಂ॥[೪೬]

---

೪೦. ಕ.ಮಾ. ೧-೨, ೪
೪೧. ಪಂ.ಭಾ. ೧೪-೫೮
೪೨. ಗ. ಯು. ೧-೪೨
೪೩. ಕಾ.ದ. ೧-೪೧
೪೪. ಕಾ.ದ. ೧-೪೨
೪೫. ಕ.ಮಾ. ೨-೫೪
೪೬. ಕ.ಮಾ. ೨-೫೫

ಎಂದು ಹೇಳಿರುವುದನ್ನು ನೋಡಿದರೆ ದಂಡಿಯ ವೈದರ್ಭಿ, ಗೌಡಿ ಮಾರ್ಗಗಳನ್ನೇ ಈತನು ದಕ್ಷಿಣಮಾರ್ಗ ಉತ್ತರಮಾರ್ಗವೆಂದು ಕರೆದಿರುವುದು ಸ್ಪಷ್ಟವಾಗುತ್ತದೆ. ಹೀಗಾಗಿ ಕವಿರಾಜಮಾರ್ಗದ ಮಾರ್ಗವಿಚಾರವು ಕಾವ್ಯಲಕ್ಷಣಕ್ಕೆ ಸಂಬಂಧಿಸಿದುದೆಂದು ಮೊದಲು ಒಪ್ಪಿಕೊಳ್ಳಬೇಕು. ಆದರೆ ದಂಡಿಯಂತೆ ಹತ್ತೂ ಗುಣಗಳಿಗೆ ಉದಾಹರಣೆ ಕೊಟ್ಟು ನಿಲ್ಲದೆ, ನೋಡುವೆನ್ ಬೇಡುವೆನ್ ಬರಿಸುವೆನ್ ಇರಿಸುವೆನ್ ತರಿಸುವೆನ್[೪೭] ಎಂಬ ಕ್ರಿಯಾಪದಗಳನ್ನೊಳಗೊಂಡ ರಚನೆ ಉತ್ತರಮಾರ್ಗ; ಈ ಕ್ರಿಯಾಪದಗಳ ಇನ್ನೊಂದು ರೂಪವಾದ ನೋಟ್ಪೆನ್ ಬೇಟ್ಪೆನ್ ಬರಿಪೆನ್ ಇರಿಪೆನ್ ತರಿಪೆನ್[೪೮] ಎಂಬವುಗಳನ್ನೊಳಗೊಂಡ ರಚನೆ ದಕ್ಷಿಣಮಾರ್ಗ ಎಂದು ಈತನು ಹೇಳುವನು. ಈ ಪದಗಳು ಕನ್ನಡದ ಪ್ರಾದೇಶಿಕ ವಿಭೇದಗಳ ಸೂಚನೆಯೆಂದು ಕೆಲವರ ಅಭಿಪ್ರಾಯ.[೪೯] ಅವರು ಕಿಸುವೊಳಲ್ ಕೊಪಣನಗರ ಪುಲಿಗೆಱೆ ಒಕ್ಕುಂದಗಳ ಮಧ್ಯದ ನಾಡು 'ತಿರುಳ್ಗನ್ನಡ'. ಇದರ ಉತ್ತರಭಾಗದಲ್ಲಿ ನೋಡುವೆನ್ ಇರಿಸುವೆನ್ ಇತ್ಯಾದಿ ಬಳಕೆಯುಳ್ಳುದು ಉತ್ತರಮಾರ್ಗ; ಇದರ ದಕ್ಷಿಣಭಾಗದಲ್ಲಿ ನೋಟ್ಪೆನ್ ಇರಿಪೆನ್ ಇತ್ಯಾದಿ ಬಳಕೆಯುಳ್ಳುದು ದಕ್ಷಿಣಮಾರ್ಗ ಎಂದು ಪ್ರಾದೇಶಿಕವಾಗಿ ಗೆರೆಕೊರೆದು ಹೇಳುವ ಸಾಹಸಮಾಡಿದ್ದಾರೆ. ಉತ್ತರ ದಕ್ಷಿಣ ಎಂಬ ಪದಗಳನ್ನು ದಿಗ್ವಾಚಿಗಳೆಂದು ಭಾವಿಸಿದುದೇ ಇಂಥ ಅಭಿಪ್ರಾಯಕ್ಕೆ ಬರಲು ಪ್ರಚೋದನೆ ನೀಡಿದೆ. ಆದರೆ ಇವು ದಂಡಿಯು ಗೌಡಿ ವೈದರ್ಭಿಗಳಿಗೆ ಪರ್ಯಾಯವಾಗಿ ಬಳಸಿದ ಪೌರಸ್ತ್ಯ ದಾಕ್ಷಿಣಾತ್ಯ ಎಂಬ ಪದಗಳ ಪ್ರತಿರೂಪಗಳು. ಅದಕ್ಕಾಗಿ ಪ್ರದೇಶವನ್ನು ಹಂಚಿ ಇವು ಪ್ರಾಂತಭೇದವನ್ನು ನಿರ್ದೇಶಿಸುತ್ತವೆ ಎನ್ನುವುದು ಅಸಮಂಜಸ. ದಕ್ಷಿಣ ಮತ್ತು ಉತ್ತರದ ಶಾಸನಗಳಲ್ಲಿ, ಪಂಪ ಮೊದಲಾದವರ ಕಾವ್ಯಗಳಲ್ಲಿ ಈ ಕ್ರಿಯಾರೂಪಗಳೆರಡೂ ಅನಿಯತವಾಗಿ ಕಂಡುಬರುತ್ತಿರುವುದು ಮೇಲಣ ಭ್ರಾಂತಿಯನ್ನು ಕಿತ್ತಿಬಿಸುಡುತ್ತದೆ.[೫೦] ಆದುದರಿಂದ ಇವು ಕ್ರಿಯಾಪದದಲ್ಲಿ ಕಂಡುಬಂದ, ಎರಡು ಶಾಬ್ದಿಕ ವಿಕಲ್ಪಗಳೇ ಹೊರತು ಪ್ರಾದೇಶಿಕ ಭಿನ್ನರೂಪಗಳಲ್ಲ.

ಇನ್ನು ಈ ಇಬ್ಬಗೆಯ ಸಾಹಿತ್ಯಶಿಲ್ಪಗಳಲ್ಲಿ, ಭವಿಷ್ಯತ್ಕಾಲ ಉತ್ತಮಪುರುಷ ಏಕವಚನದ ಒಂದು ಕ್ರಿಯಾರೂಪವನ್ನೊಳಗೊಂಡುದು (ನೋಡುವೆನ್) ಉತ್ತರಮಾರ್ಗ, ಇನ್ನೊಂದು ಕ್ರಿಯಾ ರೂಪವನ್ನೊಳಗೊಂಡುದು (ನೋಟ್ಪೆನ್)ದಕ್ಷಿಣಮಾರ್ಗ ಎಂದು ಹೇಳಿದುದು ತೀರ ಕೃತ್ರಿಮ. ಮಿಕ್ಕ ಭೂತ ವರ್ತಮಾನ ಕಾಲಗಳನ್ನು ಬಿಟ್ಟು ಕೇವಲ ಭವಿಷ್ಯತ್ಕಾಲಕ್ಕೆ ಸೀಮಿತಗೊಳಿಸಿದುದು ತೀರ ಪಾರ್ಶ್ವಿಕ. ಅದಕ್ಕಾಗಿ ಕೇವಲ ಕ್ರಿಯಾಭೇದವನ್ನವಲಂಬಿಸಿ ಕವಿರಾಜಮಾರ್ಗಕಾರನು ಮಾರ್ಗಭೇದ ನಿರ್ಣಯ ನೀಡಿದುದು ಅಸಮರ್ಪಕ. ಒಟ್ಟಾರೆ ದಕ್ಷಿಣೋತ್ತರ ಮಾರ್ಗಗಳಿಗೆ ಹೇಳಿದ ಈ ಉದಾಹರಣೆಗಳು, ಈ ಕಡೆ ಪ್ರಾಂತಭೇದ ಸೂಚಕಗಳೂ ಅಲ್ಲ, ಆ ಕಡೆ ವೈದರ್ಭಿ ಗೌಡಿಗಳಿಗೆ ಸಮರ್ಪಕ ಉದಾಹರಣೆಗಳೂ ಅಲ್ಲವೆನ್ನಬಹುದು. ಇದೇ ರೀತಿ 'ಬರಿಪ್ಪೆನ್ ಇರಿಪ್ಪೆನ್ ತರಿಪ್ಪೆನ್'[೫೧] ಎಂಬ ಉತ್ತರೋತ್ತರಮಾರ್ಗಸೂಚಿಗಳೂ ಭಾಷೆಯಲ್ಲಿ ತೋರಿಬಂದ ಇನ್ನೊಂದು ವಿಕಲ್ಪರೂಪವೆಂದು ಮತ್ತೆ ಹೇಳಬೇಕಿಲ್ಲ. ಒಟ್ಟಿನಲ್ಲಿ 'ಪಟಗನ್ನಡ' ಎಂಬುದು ಅವಸ್ಥಾಭೇದ ಸೂಚಿಯಲ್ಲ. 'ದಕ್ಷಿಣೋತ್ತರಮಾರ್ಗ' ಎಂಬುದು ಪ್ರಾಂತಭೇದ ಸೂಚಿಯಲ್ಲವೆನ್ನಬೇಕಾಗುತ್ತದೆ.

---

೪೭. ಕ.ಮಾ. ೨-೧೦೨ ಮತ್ತು ೧೦೪

೪೮. ಕ.ಮಾ. ೨-೧೦೨ ಮತ್ತು ೧೦೫

೪೯. ಕನ್ನಡನಾಡೂ ದೇಸಿಸಾಹಿತ್ಯವೂ ಪು. ೨೦

೫೦. ಕ.ಕೈ. ಪು. ೩೦೧(೯೫೫)

೫೧. ಕ.ಮಾ. ೨-೧೦೭

ಇತರ ವಿಷಯಗಳು: ಮೇಲೆ ವಿವೇಚಿಸಿದ ವಿಷಯಗಳನ್ನಲ್ಲದೆ ದಂಡಿ ಭಾಮಹರು ಸಂಸ್ಕೃತಕ್ಕೆ ಅನ್ವಯಿಸಿ ಹೇಳುವ ಕೆಲವು ಭಾಷಯಿಕ ವಿಚಾರಗಳನ್ನು, ಮಾರ್ಗಕಾರನು ಕನ್ನಡಕ್ಕೆ ಅನ್ವಯಿಸಿ ಹೇಳಿರುವನು. ಸಾಲದುದಕ್ಕೆ ಕನ್ನಡದ ಕೆಲವು ವಿಶೇಷಗುಣಗಳನ್ನು ಹೊಸದಾಗಿ ಸಂಗ್ರಹಿಸಿರುವನು. ಕನ್ನಡ ವ್ಯಾಕರಣಗಳ ನೆರವಿನಿಂದ ಅವುಗಳನ್ನು ಆಯ್ದುಕೊಂಡು ಒಂದೊಂದಾಗಿ ವಿವೇಚಿಸಬಹುದು.

ಭಾಮಹನ ಶ್ರುತಿದುಷ್ಟಸಂಧಿ, ಶ್ರುತಿಕಷ್ಟಸಂಧಿ, ದಂಡಿಭಾಮಹರ ವಿಸಂಧಿದೋಷ ವಿಚಾರಗಳು ಕವಿರಾಜಮಾರ್ಗ ಮತ್ತು ಶಬ್ದಮಣಿದರ್ಪಣಗಳಲ್ಲಿ ಸ್ಥಾನಪಡೆದಿವೆ. ಇವುಗಳಲ್ಲಿ ದರ್ಪಣಕಾರನು ಶ್ರುತಿದುಷ್ಟ ಶ್ರುತಿಕಷ್ಟಗಳಿಗೆ ಲಕ್ಷ್ಯ ಲಕ್ಷಣ ಹೇಳಿದರೆ[೫೨] ಮಾರ್ಗಕಾರನು,

> ನಿಲ್ತೋಳಂ ಬರ್ಪುದು ಸ। ಯ್ತುಲ್ತೂರುಂ[ದೂರಮೆನೆಡೆತುಡಗರ್ಪೂರಂ]।
> ಕಲ್ತುಲ್ಲಿಂದೋಡವಮೆಂ। ಬಲ್ತುಣ್ಣಿಂ ತಂದ ಕೂಟನೂ ಸಂಗಮದೊಳ್।[೫೩]
>
> ಪರದರ್ಗಾ ಪಾರ್ವರ್ಗಾ। ಯ್ತುರಸರ್ಗಾ ಕುಡಿಯರಪ್ಪ ನಾಲ್ವರ್ಗಾಗಳ್ ।
> ಸ್ಥಿರಗೋಪಾಧ್ಯಾಯಕ್ಷ್ಮಾ। ಪರಿಪಾಲ್ಯ ಕ್ಷೇತ್ರಕರ್ಷಣಂಗಳ್ ಕ್ರಿಯೆಗಳ್ ॥[೫೪]

ಎಂದು ಕೇವಲ ಲಕ್ಷ್ಯಗಳನ್ನು ಹೇಳಿ ಸಾಗಿದ್ದಾನೆ. ಕೇಶಿರಾಜನು ಎರಡು ರೇಫಗಳ ಸಂಧಿ (ಬಂದರ್+ರಾವುರ್=ಬಂದರ್ರಾವುರ್) ಮತ್ತು ಪರುಷವರ್ಣಗಳ ಸಂಧಿ (ವಿದ್ವಿಟ್+ಸ್ತ್ರೀಯರ್=ವಿದ್ವಿಟ್ಸ್ತ್ರೀಯರ್)ಗಳು ಶ್ರುತಿಕಷ್ಟವೆಂದರೆ,[೫೫] ಮಾರ್ಗಕಾರನು "ಪರದರ್ಗಾ ಪಾರ್ವರ್ಗಾ......." ಎಂಬಂತಹ ರೇಫ ಪುನರುಕ್ತಿ, "ಕ್ಷ್ಮಾಪರಿಪಾಲ್ಯ ಕ್ಷೇತ್ರಕರ್ಷಣಂಗಳ್" ಎಂಬಂತಹ ಪರುಷವರ್ಣಮಿಶ್ರಣಗಳು ಶ್ರುತಿಕಷ್ಟವೆನ್ನುತ್ತಾನೆ.

ವಿಸಂಧಿಯನ್ನು ಕುರಿತು ಶಬ್ದಮಣಿದರ್ಪಣಗಳಲ್ಲಿ "ಮಾರ್ಗದೊಳುಳ್ಳ ಸಂಧಿಯಂ ಕಿಡಿಪುದು ಮಾಗದು"[೫೫ಎ] ಎಂದು, ಕವಿರಾಜಮಾರ್ಗದಲ್ಲಿ,

> ಛಂದಕ್ಕೆ ಬಾರದೆಂದಱಿ ।ದೊಂದೊಂದಱೊಳೊಂದಿ ಬಂದು ನಿಂದಕ್ಕರಮಂ।
> ಸಂದಿಸದೆ ಪೇೞ್ದೊಡದು ಕೃತಿ। ನಿಂದಿತಮೆಂದುಂ ವಿಸಂಧಿಯೆಂಬುದು ದೋಷಂ ॥[೫೬]

ಎಂದು ಹೇಳಲಾಗಿದೆ. ಕೇಶಿರಾಜನ ಮಾತಿಗೆ ಬರೆದ ವಿವರಣೆಯೆನಿಸುವ ಈ ಲಕ್ಷಣವನ್ನು ಹೇಳಿ,

> ಜನಪತಿಗೆ ಒಸಗೆಯಂ ಪುರ । ಜನಮೆಲ್ಲಂ ಬೀಱುತಿರ್ಪರಾಗಳ್ ತಾಮುಂ।
> ಮನದುತ್ಸವದಿಂ ಕುಣಿವಂ। ತನಿಲಾಹತ ಕೇತನಾಳಿ ಸೊಗಯಿಸಿ ತೋರ್ಕುಂ॥[೫೭]

ಎಂಬ ಉದಾಹರಣೆಯನ್ನು ಕೊಟ್ಟು, ಛಂದಸ್ಸಿಗಾಗಿ ಸಂಧಿಯನ್ನು ವಿಸಂಧಿಗೊಳಿಸುವ (ಜನಪತಿಗೆ-ಒಸಗೆ) ಈ ರೀತಿಯನ್ನು 'ಭಿನ್ನಪ್ರಸ್ತಾರ ಭಿತ್ತಿದೋಷ'[೫೮] ಎಂದು ನಿಂದಿಸಿದ್ದಾನೆ. ಇವಲ್ಲದೆ,

---

೫೨. ಶ.ಮ.ದ. ೭೨, ೭೩.
೫೩. ಕ.ಮಾ. ೧-೬೩
೫೪. ಕ.ಮಾ. ೧-೬೫
೫೫. ಶ.ಮ.ದ. ಸೂ. ೭೩
೫೫ಎ. ಶ.ಮ.ದ. ಸೂ. ೭೨
೫೬. ಕ.ಮಾ. ೧-೯೫
೫೭. ಕ.ಮಾ. ೧-೯೬
೫೮. ಕ. ಮಾ. ೧-೯೭

ನಿಲಿಸಿ ಲಘುಪದಮನದನ । ಗ್ಗಲಿಸಿರೆ ಮತ್ತೊತ್ತಿ ಬರ್ಪ ಪದಮಂ ತುದಿಯೊಳ್।
ನಿಲೆ ಪೇಟ್ಬಾಗಳ್ ಕೂಸಿನ । ತಲೆಯೊಳ್ ಬಿಣ್ಪೊಱೆಯನಿಟ್ಟವೋಲಸುಖಕರಂ ॥[೫೯]

ಎಂಬ ಇನ್ನೊಂದು ಅತಿಮುಖ್ಯ ಸಂಧಿದೋಷವಿಚಾರ ಇಲ್ಲಿ ಎಡೆಪಡೆದಿದೆ. ಲಘುವಿನ ಮುಂದೆ ಒತ್ತಕ್ಷರವಿಟ್ಟು 'ಬರಿಸಿ +ಕ್ಷಿತೀಶನಂ' ಎಂದು ಹೇಳಿದರೆ ದೋಷ. ಇದನ್ನೇ 'ಕ್ಷಿತಿಪತಿಯಂ ಬರಿಸಿ' ಎಂದು ಹೇಳಿದರೆ ಗುಣ. ಕೇಶಿರಾಜನು "ಪರಪದಪೂರ್ವಂ ದ್ವಿತ್ವಾಕ್ಷರಮಾಗಿರೆ ಪೂರ್ವಪದದ ಚರಮಂ ಹ್ರಸ್ವಾಕ್ಷರಮಾಗೆ ಸಂಧಿದೋಷಂ" ಎಂದು ಇದೇ ಅಭಿಪ್ರಾಯವನ್ನು ನುಡಿದು "ಕೇಳ್ದು+ಸ್ಥಿರಮಿರ್ದು......."ಎಂದು ಮುಂತಾಗಿ ಉದಾಹರಣೆ ನೀಡಿದ್ದಾನೆ.[೬೦] ಇದು ಕವಿರಾಜಮಾರ್ಗದಲ್ಲಿಯ ಸಂಧಿವಿಚಾರ.

ಮುಂದಿನ ಕಾರಕ, ವಚನ, ಸಮುಚ್ಚಯ, ವಿಕಲ್ಪ, ಅವಧಾರಣ, ವಿಶಂಕೆ, ನೇಯಗಳ ಗುಣದೋಷ ವಿವೇಚನೆ ಕನ್ನಡದ ದೃಷ್ಟಿಯಿಂದ ತೀರ ಮೌಲಿಕ ಭಾಗವೆನಿಸಿದೆ. ಸಪ್ತವಿಭಕ್ತಿಗಳಲ್ಲಿ ಷಷ್ಠಿಗೆ ಕಾರಕವಿಲ್ಲವೆಂಬುದು ಸಾಮಾನ್ಯತತ್ವ. ಆದರೆ,

ಕಾರಕಮಾಱು ಕರ್ಮಕರಣಾದಿಕದಿಂ ಪ್ರಥಮಾದಿ ಭೇದ ನಿ।
ರ್ಧಾರಣದಿಂದದಂ ಪಿಡಿದು ನಿಲ್ವ ವಿಭಕ್ತಿಗಳೇೞು........॥[೬೧]

ಎಂದು ಹೇಳುತ್ತ ಮಾರ್ಗಕಾರನು ಪ್ರಥಮೆಯ 'ಕರ್ತೃ'ಕಾರಕವನ್ನು ಬಿಟ್ಟು, ಷಷ್ಠಿಯ 'ಸಂಬಂಧ'ಕಾರಕವನ್ನು ಒಪ್ಪಿಕೊಂಡಂತಾಗಿದೆ. ವ್ಯಾಕರಣ ಕ್ಷೇತ್ರದಲ್ಲಿ ಈ ಉಭಯ ಸಂಪ್ರದಾಯಗಳಿದ್ದು, ಇಲ್ಲಿ ಮಾರ್ಗಕಾರನು 'ಕರ್ತೃ'ವನ್ನು ತ್ಯಜಿಸಿ, 'ಸಂಬಂಧ'ವನ್ನು ಗ್ರಹಿಸಿರುವನೆಂದು ವಿದ್ವಾಂಸರು ಈ ಸಂದೇಹವನ್ನು ತಪ್ಪಿಸಿರುವರು.[೬೨]

ಕರ್ತೃಪದ ಮತ್ತು ಕ್ರಿಯಾಪದಗಳಲ್ಲಿ ಸಂಬಂಧವನ್ನು ಕಲ್ಪಿಸುವ ಕಾರಕವನ್ನು ತಪ್ಪಿ ಬಳಸಿದರೆ ಅದು 'ಕಾರಕದೋಷ'. 'ಬರಂ ಎಮಗೀಗೆ ದೇವತೆಗಳ್' ಈ ವಾಕ್ಯದಲ್ಲಿ 'ಬರಮಂ' ಎಂಬ ಕರ್ಮಕಾರಕಕ್ಕೆ ಬದಲು 'ಬರಂ' ಎಂಬ ಕರ್ತೃಕಾರಕವನ್ನು ಬಳಸಿದ ಕಾರಣ ಇದು ದೋಷ. 'ಬರಮಂ ಎಮಗೀಗೆ ದೇವತೆಗಳ್' ಎಂದೋ 'ಬರಂ' ಎಂಬುದರ ಮುಂದೆ 'ಈಗೆ' ಎಂಬ ಕ್ರಿಯೆಯನ್ನಿಟ್ಟು 'ಬರಮೀಗೆ' ಎಂದು ಕ್ರಿಯಾಸಮಾಸವನ್ನು ರೂಪಿಸಿಕೊಂಡೋ ಈ ದೋಷವನ್ನು ನಿವಾರಿಸಿಕೊಳ್ಳಬಹುದು. ಇಲ್ಲಿ 'ಬರಂ' ಎಂಬ ಸಂಸ್ಕೃತ, 'ಈಗೆ' ಎಂಬ ಕನ್ನಡಪದಗಳ ಬೆರಕೆಯ ಕ್ರಿಯಾಸಮಾಸವು ದೋಷವಲ್ಲ. ಕೇಶಿರಾಜನೂ 'ಇದಱೊಳರಿಪದಂ ನಿರ್ದೋಷಂ'[೬೩] ಎಂದು ಹೇಳಿದ್ದಾನೆ.

ಇಲ್ಲಿಯ ಇನ್ನೊಂದು ವಿಚಾರ ವಚನ. ಸಂಸ್ಕೃತದಲ್ಲಿ ಏಕ ದ್ವಿ ಬಹು ಎಂದು ವಚನಗಳು ಮೂರು. ಇದಕ್ಕೆ ಮಾರುಹೋಗದೆ ಮಾರ್ಗಕಾರನು "ವಚನಮೇಕಬಹುಕ್ರಮದಿಂದೆಱಟ್ತೆಱತ್ತು" ಎಂದು ಕನ್ನಡ ವಚನಸಂಖ್ಯೆಯನ್ನು ಸ್ಪಷ್ಟಪಡಿಸಿರುವನು. ಒಂದು ವಾಕ್ಯದ ಕರ್ತೃಪದ ಮತ್ತು ಕ್ರಿಯಾಪದಗಳಲ್ಲಿ ಒಂದೇ ಬಗೆಯ ವಚನವಿರಬೇಕು. ಇದು ಚ್ಯುತಗೊಂಡಲ್ಲಿ 'ವಚನದೋಷ' ಉದ್ಭವಿಸುತ್ತದೆ. 'ಬಂದುವು ಪಾವುಡಂ' 'ಆನೆಗಳೀ ಪ್ರದೇಶದೊಳ್ ನಿಂದುದು' ಎಂಬ ವಾಕ್ಯಗಳಲ್ಲಿ 'ಬಂದುವು' ಬಹುವಚನ, 'ಪಾವುಡಂ'ಏಕವಚನ. 'ಆನೆಗಳ್' ಬಹುವಚನ, 'ನಿಂದುದು' ಏಕವಚನ. ಇದು ದೋಷ. 'ಬಂದುದು ಪಾವುಡಂ' 'ಆನೆಗಳೀ ಪ್ರದೇಶದೊಳ್ ನಿಂದುವು' ಎಂದು ತಿದ್ದಿಕೊಂಡರೆ ಈ ವಚನದೋಷ ಮಾಯವಾಗುತ್ತದೆ.[೬೪]

---

೫೯. ಕ.ಮಾ. ೨-೬
೬೦. ಶ.ಮ.ದ. ಸೂ. ೬೯
೬೧. ಕ.ಮಾ. ೧-೧೧೪
೬೨. ಕ.ಮಾ. ಟಿಪ್ಪಣಿಗಳು ಪು. ೧೬೨-೧೭೨
೬೩. ಕ.ಮಾ. ೧-೧೧೬, ೧೧೭
೬೪. ಕ.ಮಾ. ೧-೧೧೮

ಕರ್ತೃ ಮತ್ತು ಕ್ರಿಯಾಪದಗಳಲ್ಲಿ ಒಂದೇ ಬಗೆಯ ವಚನವಿರಬೇಕೆಂಬ ಈ ಸಾಮಾನ್ಯ ನಿಯಮಕ್ಕೆ ಕೆಲವು ಸಲ ಭಂಗಬಂದರೂ ಜಾತಿ ಮೊದಲಾದುವುಗಳ ಸಂದರ್ಭದಲ್ಲಿ ಅದು 'ವಚನಪಲ್ಲಟ'ವೆಂಬ ಗುಣವಾಗಿ ಪರಿಣಮಿಸುವುದೆಂಬುದನ್ನು,

ಜಾತಿವಿಭಾಗಮಮಂ ಬಗೆದು ಪೇಟಿ ಬಹುತ್ವಂ+ಅನೇಕ ವಾಕ್ಯ ಸಂ।
ಜಾತಗುಣಂ ತದೇಕವಚನಂಗಳೊಳಂ ದೊರೆವೆತ್ತು ಕೂಡುಗುಂ॥[೬೫]

ಎಂಬ ಪದ್ಯದ ಮೂಲಕ ವ್ಯಕ್ತಗೊಳಿಸಿರುವನು. ಜಾತಿವಾಚಕಪದ ಮೇಲುನೋಟಕ್ಕೆ ಏಕವಚನವಾಗಿದ್ದರೂ ಸಾಮುದಾಯಿಕವಾಗಿರುವುದರಿಂದ ಅದಕ್ಕೆ ಬಹುವಚನ ಕ್ರಿಯಾಪದವನ್ನಿಟ್ಟುಕೊಳ್ಳಬಹುದು ಎಂದು ಈ ಪದ್ಯದ ಅಭಿಪ್ರಾಯ. 'ಕುದುರೆ ತಗುಳ್ದುವು' 'ಆನೆ ಮೆಟ್ಟಿದುವು' ಎಂಬಲ್ಲಿ ಏಕವಚನ ರೂಪದ ಕುದುರೆ, ಆನೆ ಎಂಬ ಕರ್ತೃಗಳಿಗೆ ಬಹುವಚನರೂಪದ ತಗುಳ್ದುವು, ಮೆಟ್ಟಿದುವು ಎಂಬ ಕ್ರಿಯಾಪದಗಳನ್ನಿಟ್ಟರೆ ದೋಷವಲ್ಲ. ಒಂದುವೇಳೆ ಬಹುತ್ವರೂಪದ ಸಂಖ್ಯೆಯು, ಒಂದು ಕಡೆ ಏಕವಚನರೂಪದ ಜಾತಿವಾಚಕದೊಂದಿಗೆ ಇನ್ನೊಂದು ಕಡೆ ಬಹುವಚನರೂಪದ ಕ್ರಿಯಾಪದದೊಂದಿಗೆ ಜೊತೆಯಾಗಿ ನಿಂತರೆ ಅದು ಕನ್ನಡದ ಒಳ್ಳುಣವನ್ನು ಹಾಳುಮಾಡುತ್ತದೆ. "ಬಲದಾನೆ ನೂರು ತಾಗಿದುವು" ಎಂಬಲ್ಲಿ ನೂರು ಎಂಬ ಬಹುತ್ವರೂಪದ ಸಂಖ್ಯೆಯು ಒಂದು ಕಡೆ ಏಕವಚನರೂಪದ 'ಆನೆ', ಇನ್ನೊಂದು ಕಡೆ ಬಹುವಚನರೂಪದ 'ತಾಗಿದುವು' ಎಂಬವುಗಳೊಂದಿಗೆ ಸಂಗತಿವಡೆದು ದೋಷಕ್ಕೆ ಗುರಿಯಾಗಿದೆ.[೬೬]

ಒಂದೇ ವಾಕ್ಯದಲ್ಲಿ ಒಳಗೊಂಡ ಸಮುಚ್ಚಯ ಪ್ರತ್ಯಯವುಳ್ಳ ಎರಡು ಪದಗಳಲ್ಲಿ, ಒಂದು ಏಕವಚನ, ಇನ್ನೊಂದು ಬಹುವಚನವಾಗಿದ್ದರೂ ಅವು ಕಾರಕದೃಷ್ಟಿಯಿಂದ ದೋಷವೆನಿಸುವುದಿಲ್ಲ. "ನರಪತಿಯುಂ ನೃಪಾಂಗನೆಯರುಂ ನೆರೆದಟ್ಟೆಯಿನಾಡಿ ಪೋದರ್" ಎಂಬಲ್ಲಿ 'ನರಪತಿಯುಂ' ಸಮುಚ್ಚಯ ಪ್ರತ್ಯಯವುಳ್ಳ ಏಕವಚನ, 'ನೃಪಾಂಗನೆಯರುಂ' ಸಮುಚ್ಚಯ ಪ್ರತ್ಯಯವುಳ್ಳ ಬಹುವಚನ. ಹೀಗೆ ವಚನ ವ್ಯತ್ಯಾಸವಾಗಿದ್ದರೂ 'ಆಡಿಪೋದರ್' ಎಂಬ ಬಹುವಚನ ಕ್ರಿಯಾಪದದೊಂದಿಗೆ ಬಳಕೆಗೊಂಡುದು ದೋಷವಲ್ಲ.[೬೭]

ಒಂದು ವಿಶೇಷಣ, ಅದರ ಮುಂದೆ ಒಂದು ಪದ - ಹೀಗೆ ಪುನರಾವೃತ್ತಿಯಾಗುತ್ತ ಬಂದು ವಿಶೇಷ್ಯವನ್ನು ದೂರಗೊಳಿಸಿದರೂ ಕಾರಕ ದೋಷವುಂಟಾಗದು.[೬೮] "ಗುಣಯುತನಪ್ಪನಂ ಸುಭಟನಪ್ಪನಂ...... ಮೆಚ್ಚದರಾರಭಿಮಾನಿಯಪ್ಪನಂ"[೬೯] ಎಂಬ ಉದಾಹರಣೆಯಲ್ಲಿ 'ಅಪ್ಪನಂ'ಪುನರಾವೃತ್ತಿಗೊಂಡು ವಿಶೇಷ್ಯ ಮರೆಯಾದುದು ಕಾರಕದೋಷವೆನಿಸದು. ಇನ್ನು ಪದಾಂತರೀಕರಣವಾದ ಆ ವಿಶೇಷ್ಯವು ಆ ಆ ಸ್ಥಾನಗಳಲ್ಲಿ ವ್ಯಕ್ತವಾದರೂ ಅದು ಗುಣವೆಂದೇ ಪರಿಗಣಿಸಬೇಕು. ಅಲ್ಲಿ ಏಕವಚನ ಬಹುವಚನಗಳ ವ್ಯತ್ಯಾಸ ಮುಖ್ಯವಲ್ಲ.[೭೦] ಉದಾ: "ನೆಗೆದ ಮುಗಿಲ್ಗಳುಂ........ ಪೊಳೆವ ಮಿಂಚುಗಳುಂ..... ಸುರಿವ ನಿರ್ಝರಮುಂ..... ತೋಱೆ ಸುತ್ತಲುಂ"[೭೧] ಎಂಬ ಉದಾಹರಣೆಗಳಲ್ಲಿ ಮುಗಿಲ್ಗಳುಂ, ಮಿಂಚುಗಳುಂ, ನಿರ್ಝರಮುಂ ಎಂಬ ವಿಶೇಷ್ಯಗಳು ವ್ಯಕ್ತವಾಗಿವೆಯಲ್ಲದೆ ಏಕವಚನ ಬಹುವಚನಗಳ ಮಿಶ್ರಣ ತಲೆದೋರಿದೆ. ಇದು ದೋಷವಲ್ಲ.

---

೬೫. ಕ.ಮಾ. ೧-೧೧೯

೬೬. ಕ.ಮಾ. ೧-೧೨೦

೬೭. ಕ.ಮಾ. ೧-೧೨೧

೬೮. ಕ.ಮಾ. ೧-೧೨೨

೬೯. ಕ.ಮಾ. ೧-೧೨೩

೭೦. ಕ.ಮಾ. ೧-೧೨೨

೭೧. ಕ.ಮಾ. ೧-೧೨೪

ಸಮುಚ್ಚಯ ವಿಕಲ್ಪ ಮತ್ತು ಸಮುಚ್ಚಯ ಕ್ರಮವಿಕಲ್ಪಗಳು ವಾಕ್ಯದಲ್ಲಿ ದೋಷವನ್ನುಂಟು ಮಾಡುತ್ತವೆ. "ದೇವರುಂ ಗೊರವರುಂ ಗುಣವೃದ್ಧರ್....... ಕಾವರಕ್ಕೆ ಅರಸನಂ ಪ್ರಜೆಯಂ ಪರಿವಾರಮಂ" ಎಂಬ ವಾಕ್ಯದ 'ಗುಣವೃದ್ಧರ್' ಎಂಬ ಪದದಲ್ಲಿ 'ಉಂ' ಲೋಪಗೊಂಡುದು ಸಮುಚ್ಚಯ ವಿಕಲ್ಪದೋಷ. ಮೇಲಣ ಹಂತದ ದೇವರುಂ ಗೊರವರುಂ ಎಂಬ ಪದಗಳಲ್ಲಿ ಸಮುಚ್ಚಯದ 'ಉಂ' ಹೇಳಿ, ಕೆಳಗಣ ಹಂತದ ಅರಸನಂ ಪ್ರಜೆಯಂ ಪರಿವಾರಮಂ ಎಂಬ ಪದಗಳಲ್ಲಿ ಸಮುಚ್ಚಯದ 'ಉಂ' ಹೇಳದಿರುವುದು ಸಮುಚ್ಚಯದ ಕ್ರಮವಿಕಲ್ಪದೋಷ. ಈ ಉಭಯದೋಷಗಳನ್ನು ಪದ್ಯ ೧೩೩ರಲ್ಲಿ ನೇರಗೊಳಿಸಲಾಗಿದೆ. [೨೨] ಇನ್ನು ಹಲವು ಕಾರಕಗಳಿಗೆ ಒಂದು ಕ್ರಿಯೆಯನ್ನು ಹೇಳುವಲ್ಲಿ ತಲೆದೋರುವ ಈ ಸಮುಚ್ಚಯದೋಷ, ಒಂದು ಕಾರಕದೊಂದಿಗೆ ಒಂದು ಕ್ರಿಯೆ ತಳ್ತು ನಿಲ್ಲುವಲ್ಲಿ ಗುಣವೆನಿಸುತ್ತದೆ. [೨೩] ಇದಕ್ಕೆ ಕೊಟ್ಟ "ಸಾಱುಗಾನೆಯವರೆಲ್ಲರುಮಂ ನೃಪ (ತಾ)ನೆ ಮತ್ತೇಱು(ವಂ) ಪಣಿದೊಡಾನೆಯನೆಂಬು(ದ)ದೂಷಿತಂ" ಎಂಬ ಉದಾಹರಣೆ ಪಾಠದೃಷ್ಟಿಯಿಂದ ಅಶುದ್ಧವಾಗಿದ್ದು, ಇಲ್ಲಿಯ ಅಭಿಪ್ರಾಯ ಸ್ಪಷ್ಟವಾಗದು.

"ಒಸಗೆ ಮೇಣ್ ಮುನಿಗೆ ಮೇಣ್ ಅವರೆಲ್ಲರುಮಂತೆ ಬಗ್ಗಿಸುಗೆ ಮತ್ತೆ ಉಳಿಯಲಾಗದು ನೆಟ್ಟನೆ ಮಾಣ್ದುದಂ" ಎಂಬ ವಾಕ್ಯದೊಳಗೆ ವಿಕಲ್ಪಾರ್ಥದ 'ಮೇಣ್' ಎಂಬುದಕ್ಕೆ ಬದಲು 'ಮತ್ತೆ' ನುಸುಳಿ ಬಂದುದು ವಿಕಲ್ಪದೋಷ. ಪದ್ಯ ೧೪೫ರಲ್ಲಿ ಈ ದೋಷ ಋಜುಗೊಂಡಿದೆ. [೨೪]

ಒಂದು ವಿಷಯವನ್ನು ಒತ್ತಿ ಹೇಳುವುದು ಅವಧಾರಣೆ. ಇದು ಅನ್ವಯ, ಜಾತಿ, ಗುಣ, ಕ್ರಿಯೆ ಎಂದು ನಾಲ್ಕು ಬಗೆ. ಎ, ಏ ಎಂಬ ಅವಧಾರಣ ಪ್ರತ್ಯಯಗಳನ್ನು ವಿಕಲ್ಪಗೊಳಿಸಿದರೆ ಈ ದೋಷ ತಲೆದೋರುತ್ತದೆ. "ಕುಲಜನೀತನೆ ಪಂಡಿತನೀತಂ, ಉಜ್ವಲ ಯಶೋಧಿಕನೀತನೇ......" ಎಂಬ ವಾಕ್ಯದ 'ಪಂಡಿತನೀತಂ' ಎಂಬಲ್ಲಿ ಅವಧಾರಣೆ ಲೋಪವಾದುದು ದೋಷ. "ಶೂರನೀತನೆ ಪಂಡಿತನೀತನೆ ಕ್ಷೀರಗೌರಯಶೋಧಿಕನೀತನೇ " ಇದು ಗುಣ.[೨೫]

ವಾಕ್ಯದಲ್ಲಿ ಒಂದು ವಸ್ತುವಿನ ಬಗೆಗೆ ಉಂಟಾದ ಸಂದೇಹವು ವಿಶಂಕೆಯೆನಿಸುತ್ತದೆ. "ದಿವಿಜನೋ ಫಣಿನಾಯಕನೋ ಮನೋಜಭವಂ ಇವಂ" ಎಂಬ ವಾಕ್ಯದ 'ಮನೋಜಭವಂ'ಪದದಲ್ಲಿ ಸಂದೇಹ ಲೋಪವಾಗಿರುವ ಕಾರಣ ಇದು ವಿಶಂಕಾದೋಷ. "ಸುರಗಣಾಧಿಪನೋ ಫಣಿನಾಥನೋ ನಿರುತಮಾಸ್ಮರನೋ" ಎಂದು ಹೇಳಿದರೆ ಗುಣ.[೨೬]

ಉಪಮೇಯ ಉಪಮಾನಗಳಲ್ಲಿ ಸಂಬಂಧವನ್ನು ಕಲ್ಪಿಸುವ ಅಂತೆ, ಅಂತಿರೆ, ವೋಲ್, ಅಂತೆವೋಲ್ ಎಂಬಿವು ನಿರ್ದಿಷ್ಟವಾಗಿ ಬರದಿದ್ದಲ್ಲಿ ದೋಷ ತಲೆದೋರುತ್ತದೆ. 'ಪೊಳೆವ ಮಿಂಚುಗಳಂತಿರೆ ಕೇತುಗಳ್, ಜಳದ ವೃಂದದವೋಲಿರೆ ಹಸ್ತಿಗಳ್, ಗಳಿತ ಧಾರೆಗಳಂತಿರೆ ಪತ್ತಿಗಳ್" ಎಂಬ ಉದಾಹರಣೆಯಲ್ಲಿ 'ಅಂತಿರೆ' ಬದಲು 'ವೋಲಿರೆ' ಸೇರಿಕೊಂಡ ಕಾರಣ ದೋಷ. ಛಂದಸ್ಸು ಕೆಡದಂತೆ (ನಿಯಮಿತಾಕ್ಷರದಿಂ) ತಿದ್ದಿಕೊಂಡು ಈ ದೋಷವನ್ನು ನೇರ್ಪುಗೊಳಿಸಬೇಕು."[೨೭] ಇದೆಲ್ಲ ಒಂದನೆಯ ಪರಿಚ್ಛೇದದಲ್ಲಿ ಚರ್ಚಿಸಿದ ವ್ಯಾಕರಣ ವಿಚಾರವಾಗಿದೆ.

---

೨೨. ಕ.ಮಾ. ೧-೧೩೧, ೧೩೨, ೧೩೩

೨೩. ಕ.ಮಾ. ೧-೧೩೪

೨೪. ಕ.ಮಾ. ೧-೧೪೫, ೧೩೬

೨೫. ಕ.ಮಾ. ೧-೧೩೮, ೧೩೯, ೧೪೦

೨೬. ಕ.ಮಾ. ೧-೧೪೧, ೧೪೨

೨೭. ಕ.ಮಾ. ೧-೧೪೩, ೧೪೬

ಅನುಗುಣವಲ್ಲದ ಶಬ್ದಯೋಜನೆ "ನೆಲ್ಲುಂ ಮೊಸರುಂಗುಡಿದಂತೆ,"[೭೮] ಅನುಗುಣವಲ್ಲದ ಅರ್ಥಯೋಜನೆ "ಮುತ್ತುಂ ಮೆಣಸುಂ ಕೋದಂತೆ"[೭೯] ಎಂದು ಹೇಳುತ್ತ ಮಾರ್ಗಕಾರನು ಎರಡನೆಯ ಪರಿಚ್ಛೇದದಲ್ಲಿ ಇನ್ನೂ ಕೆಲವು ವ್ಯಾಕರಣ ವಿಷಯಗಳನ್ನು ಹೀಗೆ ವಿವೇಚಿಸುವನು :

ಒಂದು ಕ್ರಿಯಾಪದಕ್ಕೆ ಎರಡು ಕ್ರಿಯಾವಿಶೇಷಣಗಳನ್ನು ಹೇಳಕೂಡದು. ಅದು "ಎರಡಕ್ಕೆ ಬಿಟ್ಟ ಕಱುವಂ ಪೋಲ್ಗುಂ"[೮೦] ಇದಕ್ಕೆ "ಅರಸಂ...... ಒಪ್ಪಿರೆ ವಿನೋದದಿಂದಮುರುಮುದದಿಂ" ಎಂಬುದು ಉದಾಹರಣೆ. ಇಲ್ಲಿ 'ಒಪ್ಪಿರೆ' ಎಂಬ ಒಂದು ಕ್ರಿಯಾಪದಕ್ಕೆ 'ವಿನೋದ', 'ಮುದ' ಎಂಬ ಎರಡು ಕ್ರಿಯಾವಿಶೇಷಣಗಳನ್ನು ಬಳಸಿದುದು ದೋಷ. ಇವುಗಳಲ್ಲಿ ಒಂದನ್ನು ಕ್ರಿಯಾಪದಕ್ಕೆ, ಇನ್ನೊಂದನ್ನು ವಿಶೇಷ್ಯಕ್ಕೆ ಹೊಂದಿಸಿ "ಅರಸಂ......ಒಪ್ಪಿರೆ ವಿನೋದದಿಂ ಜನಿತ ಮುದಂ" ಎಂದು ಹೇಳಿದರೆ ದೋಷ ಪರಿಹಾರವಾಗುತ್ತದೆ. [೮೧]

ಇನ್, ಅಂತೆ, ಮತ್ತೆ, ಬೞಿ, ಮಿಗೆ, ಮುಂ, ನಿಲೆ, ತಾಂ, ಮೇಣ್, ಪೆಱಂ, ಗಡಂ, ಗಳಂ, ಆದಂ, ಕೆನ್ನಂ, ನಿಲ್- ಈ ಅವ್ಯಯಗಳನ್ನು ಅನವಶ್ಯವಾಗಿ ಬಳಸಕೂಡದು. ಉದಾಹರಣೆಯಾಗಿ ಕೊಟ್ಟ "ನೃಪಕನ್ಯಕಾಸ್ವಯಂವರದೊಳ್.... " ಎಂಬ ಪದ್ಯ ಗುಣಯುಕ್ತವಾದುದರಿಂದ, ದೋಷಪೂರ್ಣ ಪದ್ಯ ಲಿಪಿಕಾರನ ಕೈತಪ್ಪಿ ಹೋಗಿರಬೇಕೆಂಬುದು ಮುಳಿಯ ಅವರ ಅಭಿಪ್ರಾಯ.[೮೨]

ದ್ವಿತೀಯಾ ಮತ್ತು ಷಷ್ಠೀ ವಿಭಕ್ತಿಪ್ರತ್ಯಯಗಳಲ್ಲಿ ಹ್ರಸ್ವ, ದೀರ್ಘ ವ್ಯತ್ಯಾಸಕ್ರಿಯೆ ಸರ್ವಸಾಮಾನ್ಯ.[೮೩] ಸ್ವರಾದಿಯಾದ ಉತ್ತರಪದವನ್ನು ಪಡೆದ, ಪೂರ್ವಪದದ ದ್ವಿತೀಯಾ ವಿಭಕ್ತಿಯು ದೀರ್ಘಗೊಳ್ಳುತ್ತದೆ. ಉದಾ:'ನೃಪನನ್+ಅಭಿನುತಮನನನ್+ಉಪಮೇತರನನ್+ಅಪಾರ ಕೀರ್ತಿಧ್ವಜನಂ = ನೃಪನಾನಭಿನುತಮನನಾನುಪಮೇತರನಾನಪಾರಕೀರ್ತಿಧ್ವಜನಂ'. ಕೆಲವು ಸಲ ಪಾದಾಂತ್ಯದ ದ್ವಿತೀಯಾ ವಿಭಕ್ತಿಯೂ ದೀರ್ಘವಾಗುತ್ತದೆ.[೮೪]

ನೃಪನನಭಿಮಾನಧನನನ। ನುಪಮನನತಿಶಯ ವಿಶಾಲಕೀರ್ತಿಧ್ವಜನಾ ।
ನುಪಚಿತಗುಣನಾನುಚಿತನ । ನಪೇತ ದೋಷನನುದಾರಚರಿತೋದಯನಂ ॥[೮೫]

ಇಲ್ಲಿ ಎರಡನೆಯ ಪಾದದ ಕೊನೆಯನ್ನು ಲಕ್ಷಿಸಬೇಕು. ಇನ್ನು ಒಟ್ಟುಗೂಡಿ ಇರುವ ಎಲ್ಲ ಷಷ್ಠ್ಯಂತ ಪದಗಳ ಕೊನೆ ಮತ್ತು ಷಷ್ಠ್ಯಂತ ಪಾದದ ಕೊನೆ ದೀರ್ಘಗೊಳ್ಳುತ್ತದೆ.[೮೬] ಉದಾ: ನೃಪನಾ ನೃಪನಂದನನಾ

---

೭೮. ಕ.ಮಾ. ೨-೪ ಪೊನ್ನನ ಶಾಂತಿಪುರಾಣ (೧೦-೧೮೧, ೧೮೨)ದಲ್ಲಿಯೂ ಈ ಉಪಮೆಗಳನ್ನೊಳಗೊಂಡ

೭೯. ಕ.ಮಾ. ೨-೫ ಎರಡು ಪದ್ಯಗಳು ಇಲ್ಲಿಯ ಹಾಗೆ ಒಂದರ ಬೆನ್ನು ಹಿಂದೆ ಒಂದು ಬಂದಿವೆ.

೮೦. "ಎರಡರ್ಕೆ ಬಿಟ್ಟು ಕಱುವೋಲೆಡೆಯಾಡಿದಳ್"- (ಲೀಲಾವತಿ೨-೧೨೩); "ಎರಡಕ್ಕೆ ಬಿಟ್ಟ ಕಱುವಿನಿಂದ"- (ನೇ. ಜಿ. ಸಂ. ೨೯-೧೮೪); "ಎರಡಕ್ಕೆ ಬಿಟ್ಟ ಕಱುವಾಗಿ ಕೆಲರ್ ಕೆಡುತಿರ್ಪರ್" (ಚಂದ್ರಕವಿಯ ಗುರುಮೂರ್ತಿ ಶಂಕರಶತಕ೬೬); "ಎರಡಕ್ಕೆ ಬಿಟ್ಟ ಕರುವಿನಂತೆ ಕಳವಳಿಸಬೇಡ" (ಚ.ಬ.ಪು. -೭೫೮)

೮೧. ಕ.ಮಾ. ೨-೯ ರಿಂದ ೧೨

೮೨. ಕ.ಮಾ. ೨-೧೩, ೧೪(ಮುಳಿಯ ಅವರ ಅಭಿಪ್ರಾಯಕ್ಕೆ, ಎಂ. ವಿ. ಸೀತಾರಾಮಯ್ಯನವರ ಆವೃತ್ತಿಯ ಟಿಪ್ಪಣಿಗಳು. ಪುಟ ೧೯೨ ನೋಡಿ)

೮೩. ಕ.ಮಾ. ೨-೧೫

೮೪. ಕ.ಮಾ. ೨-೧೬ರಿಂದ ೧೮

೮೫. ಕ.ಮಾ. ೨-೧೭

೮೬. ಕ.ಮಾ. ೨-೨೦

ನೃಪವಧುವರ್ ನೆರೆದು ಸುಖದೊಳಿರೆ....."[೮೭] "ಕೈಕೊಂಡತ್ತಪರಿಮಿತ ರಾಗಮೆರ್ದೆಯಂ....... ಬಂಧುಜನದಾ ಕೆಳೆಯಾ"[೮೮] ಸಂಬೋಧನೆಯಲ್ಲಿ ಸುಂದರವೆನಿಸುವ ದೀರ್ಘೀಕರಣವನ್ನು ಔಚಿತ್ಯಮೀರಿ ಪ್ರಯೋಗಿಸಿದರೆ "ಬಾಯುಟಿದೂಳ್ವವೊಲ್ ಕರಂ ವಿರಸತರಂ" ಉದಾ: ನೃಪತೀ ಪರೋಪಕಾರೀ ವಿಪುಳಗುಣೀ......ಗೆಲ್ವೆಯಾಗಾಹವದೊಳ್."[೮೯]

ಯಾಚಕರು, ಭೀತರು, ಅನಾಥರು 'ಬಾಯುಟಿದೂಳ್ವು' ಪದಗಳನ್ನು ಪುನರುಕ್ತಗೊಳಿಸಿದರೆ ಗುಣವೆನಿಸುತ್ತದೆ. [೯೦] ಉದಾ: ಪುಲಿಪುಲಿ ಪರಿಪರಿ ಪೋಪೋ।ಗೆಲೆಯೆಲೆ ಪೆಱಪಿಂಗು ಪಿಂಗು ನಿಲ್ ನಿಲ್ ಬಾ ಬಾ "[೯೧]. ರೂಪಕಾಲಂಕಾರ ಮತ್ತು ವಿಶಿಷ್ಟ ಉದ್ದೇಶದ ಹೇಳಿಕೆಗಳಲ್ಲಿ ಗುಣವೆನಿಸುವ ಬಹುವಿಶೇಷಣ ಪ್ರಯೋಗ ಮಿಕ್ಕೆಡೆಗಳಲ್ಲಿ ದೋಷವೆನಿಸುತ್ತದೆ. [೯೨]

ಸುಭಟರ್ಕಳ್ ಕವಿಗಳ್ ಸು। ಪ್ರಭುಗಳ್ ಚೆಲ್ವರ್ಕಳಭಿಜನರ್ಕಳ್ ಗುಣಿಗಳ್।
ಅಭಿಮಾನಿಗಳತ್ಯುಗ್ರರ್। ಗಭೀರಚಿತ್ತರ್ ವಿವೇಕಿಗಳ್ ನಾಡವರ್ಗಳ್ ॥[೯೩]

ವಿಶಿಷ್ಟ ಉದ್ದೇಶದ ಹೇಳಿಕೆಯಾದುದರಿಂದ ಇದು ಗುಣ. ಹೀಗೆ ಕೆಲವು ವಿಶೇಷಣಗಳನ್ನು ಅಂಕಚಾರಣೆ (ಬಿರುದಾವಳಿ)ಯಲ್ಲಿ ಬಳಸಬಹುದು. ಮಿಕ್ಕೆಡೆಯಲ್ಲಿ ಮಾತ್ರ ತ್ಯಾಜ್ಯ. [೯೪]

ಉದ್ದೇಶಿತ ಅರ್ಥವು ಸಂದರ್ಭಬಲದಿಂದ ಸಂಪೂರ್ಣವ್ಯಕ್ತವಾಗುವ ಪ್ರಸಂಗದಲ್ಲಿ ಆ ಅರ್ಥದ ಪದವನ್ನು ಪ್ರಯೋಗಿಸದಿದ್ದರೂ ನಡೆಯುತ್ತದೆ. ಹಾಗೆ ಮಾಡುವುದರಿಂದ ಉದ್ದೇಶಿತ ಅರ್ಥವ್ಯಕ್ತವಾಗದೆ ಹೋದರೆ ಅದು 'ನೇಯದ ದೋಷ'. ಕೆಂಬಣ್ಣದಿಂದ ವ್ಯಾಪಕವಾದ ಆಕಾಶವು ಪರಾಗಭರಿತ ಪಾರಿಜಾತ ಕುಸುಮದಂತೆ ಶೋಭಿಸಿತು- ಎಂದು ಹೇಳಿದರೆ ಆಕಾಶದ ಕೆಂಬಣ್ಣಕ್ಕೆ ಕಾರಣವೇನು? ಎಂಬ ಪ್ರಶ್ನೆ ಉದ್ಭವಿಸುತ್ತದೆ, ನೇಯದ ದೋಷಕ್ಕೆ ಎಡೆ ಸಿಗುತ್ತದೆ. ಅದನ್ನೇ "ಸಂಧ್ಯಾಸಮಯದ ಕೆಂಬಣ್ಣದಿಂದ......." ಎಂದು ಮುಂತಾಗಿ ಹೇಳಿದರೆ ಆ ದೋಷ ದೂರವಾಗುತ್ತದೆ.[೯೫]

ಹೀಗೆ ಭಾಷೆಗೆ ಸಂಬಂಧಪಟ್ಟ ಕೆಲವು ವೈಶಿಷ್ಟ್ಯಗಳನ್ನು ಎತ್ತಿ ಹೇಳಿದುದು ಮಾರ್ಗಕಾರನ ಕನ್ನಡದ ತಿಳುವಳಿಕೆಗೆ ಸಾಕ್ಷಿ. ಇಲ್ಲಿ ಹಿಡಿದಿಟ್ಟ ಈ ಭಾಷಯಿಕ ಬೀಜಗಳನ್ನು ಮುಂದಣ ನಾಗವರ್ಮ ಕೇಶಿರಾಜಾದಿಗಳು ಉತ್ತು ಬಿತ್ತಿರುವರು; ಬಿತ್ತಿ ಬೆಳೆದಿರುವರು.

ಛಂದಸ್ಸು :

"ನುಡಿಯಂ ಛಂದದೊಳೊಂದಿರೆ। ತೊಡರ್ಚಲಱಿವಾತನಾತನಿಂದಂ ಜಾಣಂ"[೯೬]

ಎಂದು ಛಂದೋಬದ್ಧವಾಗ್ವಿಲಾಸವನ್ನು ಮೆಚ್ಚಿನುಡಿದ ಕವಿರಾಜಮಾರ್ಗದಲ್ಲಿ, ದಂಡಿ ಹೇಳಿದ ಸಂಸ್ಕೃತದ ಕೆಲವು ಛಂದೋವಿಚಾರಗಳ ಜೊತೆಗೆ ಕನ್ನಡದ ಕೆಲವು ಹೊಸ ಛಂದೋವೈಶಿಷ್ಟ್ಯಗಳು ಸ್ಥಾನಪಡೆದಿವೆ. ಅವುಗಳನ್ನು ಛಂದೋದೋಷ, ಪ್ರಾಸ ಮತ್ತು ಯತಿ ಎಂದು ಹಂಚಿಕೊಂಡು ವಿವೇಚಿಸಬಹುದು.

---

೮೭. ಕ.ಮಾ. ೨-೨೧

೮೮. ಕ.ಮಾ. ೨-೨೨

೮೯. ಕ.ಮಾ. ೨-೨೩, ೨೪

೯೦. ಕ.ಮಾ. ೨-೨೫

೯೧. ಕ.ಮಾ. ೨-೨೬

೯೨. ಕ.ಮಾ. ೨-೨೭ (ರೂಪಕಕ್ಕೆ ಉದಾಹರಣೆ ಕೊಟ್ಟಿಲ್ಲ)

೯೩. ಕ.ಮಾ. ೨-೨೮

೯೪. ಕ.ಮಾ. ೨-೨೯

೯೫. ಕ.ಮಾ. ೧-೧೦೧ ರಿಂದ ೧೦೩.

೯೬. ಕ.ಮಾ. ೧-೧೬

ಛಂದೋದೋಷ: ಕವಿರಾಜಮಾರ್ಗಕಾರನು 'ದೋಷಾದೋಷವರ್ಣನನಿರ್ಣಯ' ಪ್ರಸಂಗದಲ್ಲಿ ಗುರುಲಘುದೋಷ ಮತ್ತು ಛಂದೋಭಂಗ (ಅಚ್ಛಂದ ಅಥವಾ ಭಿನ್ನವೃತ್ತ) ಎಂಬ ಎರಡು ಛಂದೋದೋಷಗಳನ್ನು ಹೇಳಿರುವನು.

ಗುರುವಿರಬೇಕಾದಲ್ಲಿ ಲಘುವಿಡುವುದು ಗೌರವದೋಷ.[೯೭] ಉದಾಹರಣೆಯಾಗಿ ಕೊಟ್ಟ ಮಣಿಭೂಷಣವೃತ್ತದ[೯೮] 'ಲಟ್ಟಿದೆ', 'ರದೆಪೋ', 'ಳೆತಡೆ', ಇವು ದೋಷಪೂರಿತ ಗಣಗಳು. ಇವುಗಳಿಗೆ ಪ್ರತಿಯಾಗಿ — U —   — U —   — U U ಗಣಗಳು ಬೇಕು. ಅಂದರೆ ದಪ್ಪಕ್ಷರಗಳಾದ 'ದೆ, ರ, ಳೆ'ಗಳು ನಿಜವಾಗಿ ಗುರುವಿರಬೇಕು. ಲಘುವಿರುವ ಕಾರಣ ಗೌರವದೋಷ ತಲೆದೋರಿದೆ.

ಲಘುವಿರಬೇಕಾದಲ್ಲಿ ಗುರುವಿಡುವುದು ಲಾಘವದೋಷ.[೯೯] ಉದಾಹರಣೆಯಾಗಿ ಕೊಟ್ಟ ಮಂಗಳವೃತ್ತದಲ್ಲಿ[೧೦೦] ಇರಬೇಕಾಗಿದ್ದ ದೋಷ ಲಿಪಿಕಾರನಿಂದ ಮಾಯವಾಗಿದೆ. ಬಹುಶಃ ಮೂಲದಲ್ಲಿ, 'ಸಯಲಾ' 'ತಿರುವೆಳೊ'ಗಳಿಗೆ ಬದಲು 'ಸಾಯಲಾ' 'ತಿರುವೇಳೊ' ಇದ್ದಿರಬಹುದೆಂದು ಎಂ.ವಿ. ಸೀತಾರಾಮಯ್ಯನವರ ಊಹೆ.

ಕವಿರಾಜಮಾರ್ಗದಲ್ಲಿ ವಿವೇಚಿಸಲಾದ ಇನ್ನೊಂದು ವಿಷಯ ಛಂದೋಭಂಗ ಅಥವಾ ಅಚ್ಛಂದ. ದಂಡಿ ಭಾಮಹರ ಪ್ರಕಾರ ಇದು 'ಭಿನ್ನವೃತ್ತ'. ಪ್ರತಿಯೊಂದು ಪಾದದಲ್ಲಿ ಇರಬೇಕಾದ ನಿರ್ದಿಷ್ಟ ಮಾತ್ರಾಸಂಖ್ಯೆ ಹೆಚ್ಚುಕಡಿಮೆಯಾದಲ್ಲಿ ಈ ದೋಷ ಉಂಟಾಗುತ್ತದೆ.

ವನರುಹದಳನಯನೆ ನಿ।
ನ್ನನೆ ನೆನೆನೆನೆದಿರುಳೊಳಗೊಱಗದಿರೆ ಕಡೆಗಣ್ಗಳ್॥[೧೦೧]

ಎಂಬ ಕಂದದ ಮೊದಲ ಪಾದದಲ್ಲಿ ೧ ಮಾತ್ರೆ ಕಡಿಮೆ, ಎರಡನೆಯ ಪಾದದಲ್ಲಿ ೧ ಮಾತ್ರೆ ಹೆಚ್ಚು ಇದೆ. ಈ ಛಂದೋಭಂಗ ಅಥವಾ ಅಚ್ಛಂದವನ್ನು

ವನರುಹದಳನಯನೇ ನಿ।
ನ್ನನೆ ನೆನೆನೆನೆದಿರುಳೊಳೊಱಗದಿರೆ ಕಡೆಗಣ್ಗಳ್ ॥

ಎಂದು ತಿದ್ದಿಕೊಂಡರೆ ದೋಷ ದೂರವಾಗುತ್ತದೆ. ಒಟ್ಟಿನಲ್ಲಿ ಕವಿರಾಜಮಾರ್ಗಕಾರನು ವರ್ಣವೃತ್ತದ ಗಣಗಳಲ್ಲಿ ನಿರ್ದಿಷ್ಟ ಗುರು ಲಘು ಯೋಜನೆ ಇರಬೇಕು; ಮಾತ್ರಾವೃತ್ತದ ಗಣಗಳಲ್ಲಿ ನಿರ್ದಿಷ್ಟ ಮಾತ್ರಾಸಂಖ್ಯೆ ಇರಬೇಕು- ಎಂಬ ಎರಡು ಅಂಶಗಳನ್ನು ಹೇಳಿರುವನು.

ಪ್ರಾಸ: ಅಲಂಕಾರವೆಂಬ ಪರಿಭಾಷೆಗೆ ಮೂಲದಲ್ಲಿ ಕಾವ್ಯಸೌಂದರ್ಯವೆಂದು ಅರ್ಥ. ಕಾವ್ಯದ ಅಂತರಂಗ ಬಹಿರಂಗಗಳಲ್ಲಿ ತುಂಬಿತುಳುಕುವ ಈ ಅಖಂಡ ಸೌಂದರ್ಯವನ್ನು ಅಲಂಕಾರಿಕರು ಶಬ್ದ ಮತ್ತು ಅರ್ಥಗಳಲ್ಲಿ ಬಿಡಿಸಿನೋಡಿ, ಒಂದನ್ನು ಶಬ್ದಾಲಂಕಾರವೆಂದು ಇನ್ನೊಂದನ್ನು ಅರ್ಥಾಲಂಕಾರವೆಂದು ಕರೆದರು. ಕಾವ್ಯಕ್ಕೆ 'ಅಂತರಂಗ ಬಹಿರಂಗ ಶುದ್ಧಿ'ಯನ್ನು ಸಾಧಿಸಿಕೊಡುವ ಈ ಉಭಯ ಅಲಂಕಾರಗಳಲ್ಲಿ ಒಂದಾದ ಶಬ್ದಾಲಂಕಾರವು, ವಿಶಿಷ್ಟಪದ ಸಂಘಟನೆಯ ಮೂಲಕ ಪದ್ಯಕ್ಕೆ ಧ್ವನಿರಮ್ಯತೆಯನ್ನು ಒದಗಿಸುತ್ತದೆ. ಈ

---

೯೭. ಕ.ಮಾ. ೧-೧೨೭
೯೮. ಕ.ಮಾ. ೧-೧೨೮
೯೯. ಕ.ಮಾ. ೧-೧೨೭
೧೦೦. ಕ.ಮಾ. ೧-೧೩೦
೧೦೧. ಕ.ಮಾ. ೧-೯೩

ಧ್ವನಿರಮ್ಯತೆಯನ್ನು ಒದಗಿಸಲು ರೂಪಗೊಂಡ ವಿವಿಧ ರೀತಿಯ ಪದಸಂಘಟನೆಗಳ ಅಭ್ಯಾಸವೇ ಶಬ್ದಾಲಂಕಾರ. ಇದನ್ನು ಪ್ರಾಸವೆಂದೂ ಕರೆಯುವುದು ರೂಢಿಯಲ್ಲಿದೆ. ಅನುಪ್ರಾಸದಲ್ಲಿ ಅರಳಿದ ಶಬ್ದಾಲಂಕಾರ ಕ್ರಮೇಣ ಪದಗತ ಪ್ರತ್ಯಾಗತ, ಪಾದಗತ ಪ್ರತ್ಯಾಗತ, ಸಮಸ್ತಗತ ಪ್ರತ್ಯಾಗತ, ಗೂಢಚತುರ್ಥ, ಏಕಾಕ್ಷರಿ, ದ್ವ್ಯಕ್ಷರಿ, ಅತಾಲವ್ಯ, ನಿರೋಷ್ಠ್ಯ, ಸರ್ವತೋಭದ್ರ, ನಿರುತ್ತರ, ಗೋಮೂತ್ರಿಕೆ, ಯಮಕ, ಅರ್ಧಭ್ರಮಣ, ಮುರುಜಬಂಧ, ಕ್ರಿಯಾಗೋಪಕ, ಚಕ್ರಬಂಧ-ಎಂಬ ನೂರಾರು ಕೃತಕ ಚಮತ್ಕಾರಬಂಧಗಳ ಶಾಖೋಪಶಾಖೆಗಳನ್ನು ಸೃಷ್ಟಿಸಿಕೊಂಡಿತು. ಸಂಸ್ಕೃತದ ಈ ಶಬ್ದಾಲಂಕಾರ (ಪ್ರಾಸ) ಗಳೊಂದಿಗೆ ಮಾತೃಭಾಷಾಪ್ರಜ್ಞೆಯ ಕವಿರಾಜಮಾರ್ಗಕಾರ ಪದ್ಯಕ್ಕೆ ನಾದಮಾಧುರ್ಯವನ್ನು ಒದಗಿಸುವ ಕನ್ನಡದ ಆದಿಪ್ರಾಸವನ್ನೂ ಇಲ್ಲಿ ವಿವೇಚಿಸಿರುವನು.

ಪದ್ಯದಲ್ಲಿ ಅಲಂಕಾರ ಐಚ್ಛಿಕ; ಛಂದಸ್ಸು ಆವಶ್ಯಕ. ಇಲ್ಲಿ ಐಚ್ಛಿಕವಾದ ಶಬ್ದಾಲಂಕಾರ ಪ್ರಾಸ 'ಅಲಂಕಾರ'ವೆನಿಸಿಕೊಂಡರೆ ಆವಶ್ಯಕವಾದ ಆದಿಪ್ರಾಸ 'ಛಂದಸ್ಸು' ಎನಿಸಿಕೊಳ್ಳುತ್ತದೆ. ಹೀಗಿದ್ದರೂ ಮಾರ್ಗಕಾರನು "ನುತ ಶಬ್ದಾಲಂಕಾರದೊ| ಳತಿಶಯಮೀ ಕನ್ನಡಕ್ಕೆ ಸತತಂ ಪ್ರಾಸಂ' ಎಂದು ಆದಿಪ್ರಾಸವನ್ನು ಶಬ್ದಾಲಂಕಾರವೆಂದು ಪರಿಭಾವಿಸಿದ್ದಾನೆ. ಶಬ್ದಾಲಂಕಾರದಂತೆ ಆದಿಪ್ರಾಸದ ಗುರಿಯೂ ನಾದಮಾಧುರ್ಯ, ಅದೂ ಕೃತಕ ಚಮತ್ಕಾರಕ್ಕಿಳಿದುದು ಈ ಪರಿಭಾವನೆಗೆ ಕಾರಣವಾಗಿರಬೇಕು.

ನುತ ಶಬ್ದಾಲಂಕಾರದೊ| ಳತಿಶಯಮೀ ಕನ್ನಡಕ್ಕೆ ಸತತಂ ಪ್ರಾಸಂ||
ಕೃತಕೃತ್ಯಮಲ್ಲವಲ್ಲಭ | ಮತದಿಂದದ [ಜೌ]ಪ್ರಪಂಚಮೀ ತೆಱನಕ್ಕುಂ ||[೧೦೨]

ಎಂದು ಹೇಳಿ, ಕೆಳಗೆ ಕೇವಲ ಪಾದದ ಎರಡನೆಯ ಅಕ್ಷರವನ್ನವಲಂಬಿಸಿದ ಪ್ರಾಸವಿಷಯವನ್ನು ವಿವೇಚಿಸಿದುದರಿಂದ ಈತನ ದೃಷ್ಟಿಯಲ್ಲಿ 'ಪ್ರಾಸಂ' ಎಂದರೆ ಆದಿಪ್ರಾಸವೆಂದು ಅರ್ಥ. ಪದ್ಯದ ಪ್ರತಿಯೊಂದು ಪಾದದ ಮೊದಲೆರಡು ಸ್ವರಗಳ ಮಧ್ಯದ ಒಂದೇ ಬಗೆಯ ವ್ಯಂಜನ ಆದಿಪ್ರಾಸವೆನಿಸಿಕೊಳ್ಳುತ್ತದೆ. ಮಾರ್ಗಕಾರನ ಕಾಲಕ್ಕೆ ಇದು ಹಲವು ತೆರನಾಗಿದ್ದಿತು. ಅವು:

೧) ವಿನುತಪ್ರಾಸಂ	=	ಮನೆಗಿಂದು..... ನನೇಶ...... ಬನೆ....... ಜಿನೇಶ........[೧೦೩]	
೨) ಶಾಂತಪ್ರಾಸಂ	=	ಪತ್ತಿ...... ನತ್ಯುಗ್ರ....., ಮತ್ತಿ....., ಪುತ್ರಿಕೈ....[೧೦೪]	
೩) ವರ್ಗಪ್ರಾಸಂ	=	ಸಕಲ..., ಮುಖ...., ಪ್ರಗತ...., ವಿಘಟನ.....[೧೦೫]	
೪) ಸಮೀಪಪ್ರಾಸಂ	=	ಶಶಿಧರ..., ಝಷಕೇತನ....., ಬಿಸ......, ದೊಸೆದ....[೧೦೬]	
೫) ಅನು(ಗತ)ಪ್ರಾಸಂ	=	"ಜನವಿನುತನನಘನನುಪಮ" (ಆದಿಪ್ರಾಸಾಕ್ಷರದ ಪುನರಾವೃತ್ತಿ)[೧೦೭]	
೬) ಅಂತಪ್ರಾಸಂ	=	ಅತಿ ವಿಶದ ಯಶೋವೃತ್ತಂ | ನತಸಕಳಾರಾತಿಜನವಿತಾನಂ ಮತ್ತಂ	ಆದಿಪ್ರಾಸಾಕ್ಷರವು ಅಂತ್ಯದಲ್ಲಿಯೂ ಬರಬೇಕು [೧೦೮]

---

೧೦೨. ಕ.ಮಾ. ೨-೩೦

೧೦೩. ಕ.ಮಾ. ೨-೩೩. ಇಲ್ಲಿ ನೆ.ನೇ. ನೆ.ನೇ ಎಂದು ಕೇವಲ 'ಎವರ್ಣ' ಪ್ರಾಸವಿದೆ. ಅದಕ್ಕಾಗಿ ಈ ಪ್ರಾಸದಲ್ಲಿ ಅವರ್ಣ, ಇವರ್ಣ, ಉವರ್ಣ, ಎವರ್ಣ, ಒವರ್ಣಗಳಲ್ಲಿ ಒಂದು ಬರಬೇಕೆ?

೧೦೪. ಕ.ಮಾ. ೨-೩೬

೧೦೫. ಕ.ಮಾ. ೨-೩೮

೧೦೬. ಕ.ಮಾ. ೨-೪೦

೧೦೭. ಕ.ಮಾ. ೨-೪೨

೧೦೮. ಕ.ಮಾ. ೨-೪೪

ಈ ಆರುಪ್ರಾಸಗಳನ್ನು ಪ್ರಾಸಾಕ್ಷರಸ್ಥಾನದೃಷ್ಟಿಯಿಂದ ಹೀಗೆ ವರ್ಗೀಕರಿಸಬಹುದು.

I. ಆದಿಪ್ರಾಸ-೧. ವಿನುತಪ್ರಾಸಂ, ೨. ಶಾಂತಪ್ರಾಸಂ, ೩. ವರ್ಗಪ್ರಾಸಂ. ೪. ಸಮೀಪಪ್ರಾಸಂ

II. ಅದ್ಯನುಪ್ರಾಸ-೫. ಅನು(ಗತ)ಪ್ರಾಸಂ.[೧೦೯]

III. ಆದ್ಯಂತಪ್ರಾಸ-೬. ಅಂತಪ್ರಾಸಂ.[೧೧೦]

ಈ ಮೂರರಲ್ಲಿ ಮೊದಲನೆಯದು ಕೇವಲ ಚರಣಗಳ ಆದಿಯಲ್ಲಿ, ಎರಡನೆಯದು ಆದಿ-ಮಧ್ಯಗಳಲ್ಲಿ, ಮೂರನೆಯದು ಆದಿ-ಅಂತ್ಯಗಳಲ್ಲಿ ಪ್ರಾಸವನ್ನು ಕಾಯ್ದುಕೊಳ್ಳುತ್ತದೆ.

ಕವಿರಾಜಮಾರ್ಗಕಾರನು ಹೀಗೆ ೬ ಬಗೆಯ ಆದಿಪ್ರಾಸಗಳನ್ನು[೧೧೧] ಹೇಳಿದ್ದರೂ ಅವುಗಳಲ್ಲಿ ಶಾಂತ, ವರ್ಗ, ಸಮೀಪ ಪ್ರಾಸಗಳನ್ನು "ಪ್ರಾಸಾಭಾಸಂಗಳ್" ಎಂದು ದೂಷಿಸಿ, ಆದಿಪ್ರಾಸ ಅನುಪ್ರಾಸ ಮತ್ತು ಅಂತಪ್ರಾಸಗಳನ್ನು "ಮೂಱುಮತಿಶಯಂಗಳ್" ಎಂದು ಒಪ್ಪಿದ್ದಾನೆ.[೧೧೨] ಇಲ್ಲಿ ಮೊದಲಿನ ಮೂರು, ತರುವಾಯದ ಮೂರು ಹೀಗೆ ಎರಡು ಖಂಡಗಳಿವೆ. 'ಆಭಾಸ ಪ್ರಾಸಂಗಳ' ಖಂಡವನ್ನುಳಿದು 'ಅತಿಶಯ ಪ್ರಾಸಂಗಳ' ಖಂಡವನ್ನೇ ಮಾರ್ಗಕಾರನು 'ಖಂಡಪ್ರಾಸ'ವೆಂದು ಕರೆದಿರಬಹುದು-ಎಂದು ಶ್ರೀ ಮುಳಿಯ ಅವರ ಅಭಿಪ್ರಾಯ.[೧೧೩] ಆದರೆ ಈ 'ಅತಿಶಯ ಪ್ರಾಸಗಳ ಖಂಡ'ಕ್ಕೆ ಸಂಬಂಧಿಸಿದ ಅನುಪ್ರಾಸ, ಅಂತ್ಯಪ್ರಾಸಗಳು ಕರ್ಣಾಟ ವಿಷಯಜಾತಿ ಬಂಧಗಳಲ್ಲಿ 'ಅತಿಶಯ'ವಲ್ಲ. ಆದುದರಿಂದ ಮುಳಿಯ ಅವರ ಅಭಿಪ್ರಾಯವನ್ನು ಕೇವಲ ಚಮತ್ಕಾರಯುತವೆಂದು ದೂರಸರಿಸಿ, ಖಂಡಪ್ರಾಸವೆಂದರೆ ಕನ್ನಡಕ್ಕೆ ಅತಿಶಯವೆನಿಸುವ ಆದಿಪ್ರಾಸವೆಂದೇ ಹೇಳಬಹುದು. ಆದರೆ ಖಂಡಪ್ರಾಸ ಶಬ್ದದ ನಿಜ ಅರ್ಥವೇನು ಎಂಬುದನ್ನು? ಶೋಧಿಸಬೇಕು.

ಮೊದಮೊದಲು ಧ್ವನಿಮಾಧುರ್ಯದ ಸೊಗಸನ್ನು ನೀಡಲು ಹುಟ್ಟಿದ ಈ ಆದಿಪ್ರಾಸ ಬರುಬರುತ್ತ ಶಬ್ದದರಿದ್ರರ ಮೂಲಕ ವರ್ಗ, ಶಾಂತ, ಸಮೀಪಪ್ರಾಸಗಳನ್ನೂ, ಶುಷ್ಕಪಂಡಿತರ ಮೂಲಕ ಅನುಗತ, ಅಂತ್ಯಗತ (ದ್ವಿ-, ದ್ವಂದ್ವ-, ತ್ರಿ-, ಅಂತ್ಯಾದಿ-) ಪ್ರಾಸಗಳನ್ನೂ ಪಡೆಯಿತು. ಇದನ್ನು ಗಮನಿಸಿದರೆ ಕನ್ನಡದ ಆದಿಪ್ರಾಸಪ್ರವಾಹ ಕವಿರಾಜಮಾರ್ಗದ ಹೊತ್ತಿಗೆ ಒಂದು ಸಿದ್ಧಿಯನ್ನು ಮುಟ್ಟಿ, ಮತ್ತೆ ಹಲವು ಕವಲುಗಳಲ್ಲಿ ಮುನ್ನಡೆದುದು ವ್ಯಕ್ತವಾಗುತ್ತದೆ.

"ಅತಿಶಯಮೀ ಕನ್ನಡಕ್ಕೆ ಸತತಂ ಪ್ರಾಸಂ"[೧೧೪]

"ಪ್ರಾಸಾನುಪ್ರಾಸಾಂತ ಪ್ರಾಸಂಗಳ್ ಮೂರುಮತಿಶಯಂಗಳ್"[೧೧೫]

ಎಂಬ ಮಾತುಗಳೂ ಆ ಸಮಯಕ್ಕೆ ಆದಿಪ್ರಾಸ ಗಳಿಸಿದ ಮನ್ನಣೆಯ ದ್ಯೋತಕವೆನಿಸಿವೆ.

೧೦೯-೧೧೦. ಅನುಗತಪ್ರಾಸ ಲಕ್ಷ್ಯದಲ್ಲಿ ಆದಿಪ್ರಾಸಾಕ್ಷರವೇ ಮಧ್ಯ ಮಧ್ಯ ಬಂದಿದೆ. ಅಂತಪ್ರಾಸ ಲಕ್ಷ್ಯದಲ್ಲಿ ಆದಿಪ್ರಾಸಾಕ್ಷರವೇ ಕೊನೆಗೆ ಬಂದಿದೆ. ಅದಕ್ಕಾಗಿ ಕನ್ನಡದ ಪ್ರಾಸಪ್ರಭೇದ ಎಷ್ಟೇ ಬೆಳೆದರೂ ತಂತಮ್ಮ ಸ್ಥಾನಗಳಲ್ಲಿಆದಿಪ್ರಾಸಾಕ್ಷರವನ್ನು ಉಳಿಸಿಕೊಳ್ಳಬೇಕೆಂದು ಕಾಣುತ್ತದೆ. ವಸ್ತುಸ್ಥಿತಿ ಹೀಗಿರುವಾಗ ಎಂ.ವಿ. ಸೀತಾರಾಮಯ್ಯನವರು ಆದಿ ಅಂತ್ಯದಲ್ಲಿ ತ ಕಾರ ಬಂದುದು 'ಕಾಕತಾಳೀಯ' ಎನ್ನುವುದು (ಕ.ಮಾ. ಟಿ.೧೯) ಸರಿಯಲ್ಲವೆನಿಸುತ್ತದೆ.

೧೧೧. ಈ ಆರರಲ್ಲಿ ಒಂದಾದ ವಿನುತ ಪ್ರಾಸದಲ್ಲಿಯೆ ಮತ್ತೆ ಕರಿ-ಹರಿ, ವೃಷಭ-ತುರಗ, ಶರಭ-ಅಜ ಎಂಬ ೬ ಪ್ರಭೇದಗಳು ನಾಗವರ್ಮಾದಿಗಳಲ್ಲಿ ಕಂಡುಬರುತ್ತವೆ.

೧೧೨. ಕ.ಮಾ. ೨-೪೫

೧೧೩. ಕ.ಮಾ. ಟಿಪ್ಪಣಿಗಳು ಪುಟ ೧೫೧ ಅ.ಟಿ. (ಎಂ.ವಿ. ಸೀತಾರಾಮಯ್ಯ)

೧೧೪. ಕ.ಮಾ. ೨-೩೦ ೧೧೫. ಕ.ಮಾ. ೨-೪೫

ಯತಿ: ಪದ್ಯ, ಹಾಡಲು ಹುಟ್ಟಿದ ಸಾಹಿತ್ಯಜಾತಿ. ಹೀಗಾಗಿ ಯಾವುದೇ ಭಾಷೆಯ ಪದ್ಯ ವಿಶಿಷ್ಟಲಯಕ್ಕೆ ಒಲಿದು, ತಾಳಗಳಿಗೆ ಮಣಿದು ಮುನ್ನಡೆಯಬೇಕಾಗುತ್ತದೆ. ಪ್ರಯಾಣಪ್ರಸಂಗದಲ್ಲಿ ಇಟ್ಟ ಹೆಜ್ಜೆಗಳೆಲ್ಲ ವಿಶ್ರಾಂತಿ ಎನಿಸದೆ ಹೆಜ್ಜೆಯೂರಿ ಕೆಲಸಮಯ ನಿಲ್ಲುವುದು ಮಾತ್ರ "ವಿಶ್ರಾಂತಿ" ಎನಿಸುವಂತೆ, ಚರಣದಲ್ಲಿಯ ಪ್ರತಿಯೊಂದು ತಾಳವೂ ಯತಿಯೆನಿಸದೆ ನಿರ್ದಿಷ್ಟ ತಾಳದಲ್ಲಿ ಕೆಲ ಸಮಯ ನಿಲ್ಲುವುದು ಮಾತ್ರ ಛಂದಃ ಪರಿಭಾಷೆಯಲ್ಲಿ 'ಯತಿ' ಎನಿಸಿಕೊಳ್ಳುತ್ತದೆ. ಈ ನಿಲ್ಲುವಿಕೆಯಿಂದ ಉಸಿರಿಗೆ ಒಂದು ವಿರಾಮ, ಲಯಕ್ಕೆ ಒಂದು ತಿರುವು, ಪದ್ಯಕ್ಕೆ ಒಂದು ಸೊಗಸು ಒದಗುತ್ತದೆ. "ಶ್ರವ್ಯೋ ವಿರಾಮೋ ಯತಿಃ"[೧೧೬] ಎಂಬುದೂ ಇದನ್ನೇ ಎತ್ತಿಹೇಳುತ್ತದೆ.

"ಯತಿಯೆಂಬುದುಸಿರ್ವ ತಾಣಂ ಕೃತಾಸ್ಪದಂ ವೃತ್ತಜಾತಿಪದಪದ್ಧತಿಯೊಳ್"[೧೧೭]

ಎಂಬ ಹೇಳಿಕೆಯಿಂದ ವೃತ್ತ ('ಸಂಸ್ಕೃತದ ವರ್ಣವೃತ್ತ'), ಜಾತಿ (ಸಂಸ್ಕೃತ ಪ್ರಾಕೃತ ಕನ್ನಡಗಳ ಮಾತ್ರಾವೃತ್ತ) ಛಂದಸ್ಸಿನ ಎಲ್ಲ ಬಂಧಗಳಿಗೆ ಈ ಯತಿಯು ಅವಶ್ಯವೆಂದು ತಿಳಿದುಬರುತ್ತದೆ. ಆದರೆ ಆ ಆ ವೃತ್ತಗಳ ವಿಶಿಷ್ಟಗುಣಧರ್ಮಕ್ಕನುಗುಣವಾಗಿ ಯತಿಸ್ಥಾನ ಬೇರೆ ಬೇರೆಯಾಗಿರುತ್ತದೆ.

ಸಂಸ್ಕೃತ ವರ್ಣವೃತ್ತಗಳಲ್ಲಿ ೩ ಅಕ್ಷರಗಳ ಕೃತಕ ಗಣವಿಭಜನೆಯ ಒಂದು ಅಳತೆಯಲ್ಲಿ ನಡೆದರೆ, ದ್ರಾವಿಡ ಮತ್ತು ಪ್ರಾಕೃತವೃತ್ತಗಳಲ್ಲಿ, ತಾಳ-ಲಯಗಳನ್ನು ಅನುಸರಿಸಿ ನಡೆವ ಸಹಜ ಗಣವಿಭಜನೆಯು ಇನ್ನೊಂದು ಅಳತೆಯಲ್ಲಿ ನಡೆಯುತ್ತದೆ. ಹೀಗಾಗಿ ಅಕ್ಷರವೃತ್ತಗಳಲ್ಲಿ ಗಣಸ್ಥಾನ, ಯತಿಸ್ಥಾನಗಳು ಒಂದೇ ಕಡೆಗೆ ಬರುವುದು ಕ್ವಚಿತ್. ಆದರೆ ಪ್ರಾಕೃತ ಮತ್ತು ದ್ರಾವಿಡಬಂಧಗಳಲ್ಲಿ ಗಣವಿಭಜನೆ ಮತ್ತು ತಾಳ-ಲಯಗಳು ಕೈ ಹಿಡಿದು ಜೊತೆಜೊತೆಯಾಗಿ ನಡೆಯುವ ಕಾರಣ, ಇಲ್ಲಿ ಗಣಸ್ಥಾನ ಮತ್ತು ಯತಿಸ್ಥಾನಗಳು ಒಂದೇ ಕಡೆಗೆ ಬರುವುದು ಸಹಜ. ಇದರಿಂದ ವರ್ಣವೃತ್ತಗಳಲ್ಲಿ ಕೆಲವು ಸಲ 'ಯತಿ'ಯು ಗಣಮಧ್ಯದಲ್ಲಿ ಬಂದರೆ ಮಾತ್ರಾವೃತ್ತಗಳಲ್ಲಿ ಯಾವಾಗಲೂ ಗಣದ ಕೊನೆಗೆ ಬರಬೇಕಾಯಿತು. ವರ್ಣವೃತ್ತದ ಒಂದು ಚರಣವನ್ನು ವರ್ಣಛಂದಸ್ಸು, ಮಾತ್ರಾಛಂದಸ್ಸು-ಎರಡೂ ರೀತಿಗಳಲ್ಲಿ ವಿಭಜಿಸಿ, ಈ ಅಂಶವನ್ನು ಹೀಗೆ ಸ್ಪಷ್ಟಪಡಿಸಿಕೊಳ್ಳಬಹುದು:

ಸ ಭ ರ ನ ಮ ಯ ಲಗ

ತಪಮಾ । ನ್ಸಾದಶ । ದಾವಿಧಾ । ನಮುಖ । ದಿನ್*ಕೆಯ್ದೊ । ನ್ದುತಾ ಧಾ । ತ್ರಿಮೇಲ್॥

೪ ೪ ೩ ೩ ೪ ೫ ೫

ತಪಮಾ । ನ್ಸಾದಶ । ದಾವಿ । ಧಾನ । ಮುಖದಿನ್ । *ಕೆಯ್ದೊನ್ದು । ತಾಧಾತ್ರಿ । ಮೇಲ್॥[೧೧೮]

ಈ ಇಬ್ಬಗೆಯ ಪ್ರಸ್ತಾರಗಳಲ್ಲಿ ಯತಿಯ ಸ್ಥಾನ (ನಕ್ಷತ್ರ ಚಿಹ್ನೆ) ಒಂದೇ ಆಗಿದ್ದರೂ, ಅದು, ೩ ಅಕ್ಷರಕ್ಕನುಗುಣವಾಗಿ ವಿಭಜಿಸಲು ಗಣಮಧ್ಯ ಬಂದರೆ, ತಾಳಕ್ಕನುಗುಣವಾಗಿ ವಿಭಜಿಸಲು ಗಣಾಂತ್ಯದಲ್ಲಿ ಬಂದಿತು. ಇದರಿಂದ ಗಣವಿಭಜನೆಯ ರೀತಿ ಯಾವುದೇ ಇದ್ದರೂ ಯತಿ ಮಾತ್ರ ಲಯವನ್ನವಲಂಬಿಸಿರುತ್ತದೆ ಎಂದು ಸ್ಪಷ್ಟವಾಗುತ್ತದೆ.

---

೧೧೬. ಛಂದೋನುಶಾಸನ ೧-೧೬(ಹೇಮಚಂದ್ರಸೂರಿ ೧೯೬೧)

೧೧೭. ಕ.ಮಾ. ೧-೭೧

೧೧೮. E.C.ii. No. 98

ಸಂಸ್ಕೃತದ ೧೩೪೨೧೭೭೨೬ ಸಮವೃತ್ತಗಳಲ್ಲಿ ಕೆಲವು ಮಾತ್ರ ಲಯಾನುವರ್ತಿ ಬಂಧಗಳು. ಮಿಕ್ಕುವು ಛಂದಸ್ಸಿನ ಶುಷ್ಕಶಾಸ್ತ್ರದಲ್ಲಿ ಸಿದ್ಧವಾದುವು. ಹೀಗಾಗಿ ವರ್ಣವೃತ್ತಗಳನ್ನು ಲಯಬದ್ಧ ವೃತ್ತಗಳು, ಕಿಂಚಿತ್ ಲಯಬದ್ಧ ವೃತ್ತಗಳೆಂದು ವರ್ಗೀಕರಿಸಬಹುದು. ಇಲ್ಲಿಯ ಒಂದು ವರ್ಗದ ವೃತ್ತಗಳಲ್ಲಿ ಎದ್ದುಕಾಣುವ ಯತಿ, ಇನ್ನೊಂದು ವರ್ಗದ ವೃತ್ತಗಳಲ್ಲಿ ಕಂಡೂ ಕಾಣುವುದಿಲ್ಲ. ಹೀಗಾಗಿ ಛಾಂದಸಿಗರು ಎಲ್ಲ ವೃತ್ತಗಳಿಗೂ ಯತಿಯನ್ನು ಹೇಳುವುದು ಅನಿವಾರ್ಯವಾಯಿತು. ಯತಿಯು ವರ್ಣವೃತ್ತದ ಯಾವ ಸ್ಥಾನದಲ್ಲಿ(ಗಳಲ್ಲಿ) ಬರಬೇಕು? ಹೇಗೆ ಬರಬೇಕು? ಎಂಬ ವಿಷಯವಾಗಿ ಸಂಸ್ಕೃತ ಛಾಂದಸಿಗರು ಹೇಳುವುದು ಹೀಗೆ:

೧) ಪಾದಾಂತೇ ಸೂಚಿತಸ್ಥಾನೇ ಯುಕ್ಪಾದಂತೇ ವಿಶೇಷತಃ॥[೧೧೯]

(ಪಾದದ ಕೊನೆ, ಪಾದದಲ್ಲಿಯ ಸೂಚಿತ ಸ್ಥಾನ(ಗಳು), ಎರಡು ಪಾದಗಳ ಕೊನೆ-ಇವು ಯತಿಸ್ಥಾನಗಳು).

೨) ಧಾತು ನಾಮ್ನಾಮ ಭೇದೇನ ವಿರಾಮೋ ವಿರತಿರ್ಯತಿಃ।
ಸ್ವರ ಸಂಧ್ಯಾಪ್ತ ಸೌಂದರ್ಯಾತ್ ತದ್ಭೇದೇsಪೀಷ್ಯತೇ ಕ್ವಚಿತ್॥[೧೨೦]

(ಶ್ರುತಿಸಹ್ಯವೆನಿಸುವಲ್ಲಿ ಮಾತ್ರ ಸಂಧಿ ಸಮಾಸಗಳನ್ನು ಒಡೆದು ಹೇಳಬಹುದಾದ ಯತಿಯನ್ನು, ಧಾತು ಪ್ರಾತಿಪದಿಕಗಳನ್ನು ಒಡೆದು ಹೇಳಬಾರದು.)

ಈ ಕ್ರಿಯೆಗಳ ಸ್ಪಷ್ಟತೆಗೆ ಒಂದು ಸಂಸ್ಕೃತ ವರ್ಣವೃತ್ತವನ್ನು ಇಲ್ಲಿ ಪರಿಶೀಲಿಸಬಹುದು:

ವರದಾ।ತುಙ್ಗ ತ।ರಙ್ಗ ರ।ಙ್ಗ ವಿಲ।ಸತ್*ಹಂಸಾ।ನದೀಮೇ।ಖಲಾಂ*
ವನವಾಸೀಮವ ಮೃದ್ನ ತಸ್ಸುರಪುರ*ಪ್ರಸ್ಪರ್ಧಿನೀಂ ಸಮ್ಪದಾ*।
ಮಹತಾಯಸ್ಯ ಬಲಾರ್ಣ್ಣವೇನ ಪರಿತಃ*ಸಂಛಾದಿತೋರ್ವ್ವೀತಲಂ*।
ಸ್ಥಲದುರ್ಗ್ಗಂ ಜಲದುರ್ಗ್ಗ ತಾಮಿವಗತಃ *ತತ್ತತ್‌ಕ್ಷಣೇ ಪಶ್ಯತಾಮ್*॥[೧೨೧]

ಇಮ್ಮಡಿ ಪುಲಿಕೇಶಿಯನ್ನು ಕುರಿತು ರವಿಕೀರ್ತಿ ಬರೆದ ೭ನೆಯ ಶತಮಾನದ ಐಹೊಳೆ ಶಾಸನದ ಈ ಸಂಸ್ಕೃತ ವರ್ಣವೃತ್ತದಲ್ಲಿ, ಮೇಲೆ ಹೇಳಿದ ಯತಿಯ ಎಲ್ಲ ನಿಯಮಗಳು ಪಾಲಿಸಲ್ಪಟ್ಟುದನ್ನು ನೋಡಬಹುದು.

ಸಂಸ್ಕೃತ ವರ್ಣವೃತ್ತಗಳು ಬಹುಕಾಲದ ಹಿಂದೆಯೇ ಕನ್ನಡಕ್ಕೆ ನಡೆದು ಬಂದವು. ಹೊರಗಿನಿಂದ ಬಂದ ಸಂಸ್ಕೃತಭಾಷೆಯನ್ನು ಕೆಲವು ವ್ಯತ್ಯಾಸಗಳ ಮೂಲಕ ಕನ್ನಡಕ್ಕೆ ಸರಿಮಾಡಿಕೊಂಡ ಕನ್ನಡಿಗರು, ಈ ಸಂಸ್ಕೃತ ವರ್ಣವೃತ್ತಗಳನ್ನು ಕೆಲವು ವ್ಯತ್ಯಾಸಗಳ ಮೂಲಕ ಕನ್ನಡಕ್ಕೆ ಸರಿಮಾಡಿಕೊಂಡರು. ಈ ಸಂದರ್ಭದಲ್ಲಿ ಅವರು ಅನುಸರಿಸಿದ ವಿಧಾನವನ್ನು ಮಾರ್ಗಕಾರನು :

ದೋಸಮನೆ ಗುಣದವೋಲು। ದ್ಭಾಸಿಸಿ ಕನ್ನಡದೊಳೊಲ್ದು ಪೂರ್ವಾಚಾರ್ಯರ್॥
ದೇಸಿಯೆನೆ ನಿಱಿಸಿ ಖಂಡ।ಪ್ರಾಸಮನತಿಶಯಮಿದೆಂದು ಯತಿಯಂ ಮಿಕ್ಕರ್ ॥[೧೨೨]

---

೧೧೯. ಛಂದೋನುಶಾಸನಂ (ಜಯಕೀರ್ತಿ) ೧-೧೦
೧೨೦. ಯತಿ (ಜಯ. ಕ. ೧೨-೮, ಪು. ೧೩)
೧೨೧. I.A. v. P. 70 ಐಹೊಳೆ ಶಾಸನ.
೧೨೨. ಕ.ಮಾ. ೧-೭೫

ಎಂದು ಹೇಳಿದ್ದಾನೆ. ಆದಿಪ್ರಾಸ ಕನ್ನಡದ ಪ್ರಾಣಪದಕ. ಹೀಗಾಗಿ ಆದಿಪ್ರಾಸರಹಿತ ಸಂಸ್ಕೃತ ವರ್ಣವೃತ್ತಗಳನ್ನು ಬರಮಾಡಿಕೊಳ್ಳುವಲ್ಲಿ ಕನ್ನಡಿಗರು ಅವುಗಳಿಗೆ ಆದಿಪ್ರಾಸದ ಮಾಂಗಲ್ಯವನ್ನು ಕಟ್ಟಿದರು. ಇದನ್ನೇ ಮಾರ್ಗಕಾರನು "ನಿಱಿಸಿ ಖಂಡಪ್ರಾಸಮಂ......" ಎಂದು ಹೇಳಿದ್ದಾನೆ. ಇನ್ನು ಯತಿಯು ಪ್ರಕೃತಿ ಮುಗಿಯುವಲ್ಲಿ ಬರಬೇಕೆಂದು ಸಂಸ್ಕೃತದವರು ಇಟ್ಟುಕೊಂಡ ನಿಯಮ. ಆದರೆ ಕನ್ನಡಿಗರು ಅವಶ್ಯವೆನಿಸಿದರೆ ಪ್ರಕೃತಿಯನ್ನು ತುಂಡುಗೊಳಿಸಿ ಯತಿಯಿಡುವ ಉಪಕ್ರಮವನ್ನು ಪ್ರಾರಂಭಿಸಿದರು. ಇದನ್ನೇ ಮಾರ್ಗಕಾರನು "ಅತಿಶಯಮಿದೆಂದು ಯತಿಯಂ ಮಿಕ್ಕರ್" ಎಂದು ಹೇಳಿದ್ದಾನೆ. ಈ ಯತಿಯನ್ನು ಯಾವ ಕಾರಣಕ್ಕಾಗಿ, ಯಾವ ಲಾಭಕ್ಕಾಗಿ ಮಿಕ್ಕಿದರು? ಎಂಬ ಪ್ರಶ್ನೆ ತಲೆದೋರುತ್ತದೆ. ಇದಕ್ಕೆ ಛಂದಸ್ಸಿನ ತಾಳ ಲಯವೇ ಕಾರಣವೆನ್ನಬೇಕೆಂದರೆ, ಪದ್ಯಗಳಾಗಿರುವ ಅಕ್ಷರವೃತ್ತಗಳೂ ತಾಳ ಲಯಕ್ಕೆ ಹೊರಗಾಗಿಲ್ಲ. ಅಕಾರಣವಾಗಿ ಯತಿಪಾಲನೆಯನ್ನು ಅಲಕ್ಷ್ಯ ಮಾಡಿದರು ಎಂದರೆ ಅದು ಜಾರಿಕೊಳ್ಳಲು ಹೇಳುವ ಮಾತಾಗುತ್ತದೆ. ಅದಕ್ಕಾಗಿ 'ಯತಿ ವಿಲಂಘನ'ಕ್ಕೆ ಯಾವುದೋ ಒಂದು, ಬಹುಶಃ ಸಂಸ್ಕೃತ ಅಕ್ಷರವೃತ್ತಕ್ಕೆ ಹೊಸದಾಗಿ ತೊಡಿಸಿದ್ದ ನಮ್ಮ ಆದಿಪ್ರಾಸವೇ ಮುಖ್ಯ ಕಾರಣವಾಗಿರಬೇಕು. ಆ ಕಡೆ ಚರಣದ ಕೊನೆಯಲ್ಲಿ ಪ್ರಕೃತಿ ಮುರಿಯದ ಯತಿಬೇಕು; ಈ ಕಡೆ ತಕ್ಷಣ ಮುಂದಿನ ಚರಣದ ಹೊಸ್ತಿಲಲ್ಲಿ ಆದಿಪ್ರಾಸ ಬೇಕು ಎಂದಾಗ ಪ್ರತಿಯೊಂದು ಚರಣ ಹೊಸ ಪ್ರಕೃತಿಯಿಂದಲೇ ಪ್ರಾರಂಭಗೊಳ್ಳಬೇಕು. ಅದೂ ಪ್ರಾಸಾಕ್ಷರಯುಕ್ತವಾಗಿರಬೇಕು ಎಂಬ ನಿರ್ಬಂಧ ಎದುರಾಯಿತು. ಇದು ಚರಣ ಚರಣಕ್ಕೂ ಮರುಕಳಿಸುವ ನೋವು. ಅದಕ್ಕಾಗಿ ಚರಣದ ಕೊನೆಯ ಪ್ರಕೃತಿ ಮುರಿಯದ ಯತಿ, ಚರಣದ ಮೊದಲಿನ ಆದಿಪ್ರಾಸ ಇವುಗಳಲ್ಲಿ ಒಂದನ್ನು ಕೈಬಿಡುವುದು ಲೇಸು ಎನಿಸಿತು. ಆಗ "ದೇಸಿಯೆನೆ ನಿಱಿಸಿ ಖಂಡಪ್ರಾಸಮಂ, ಅತಿಶಯಮಿದೆಂದು ಯತಿಯಂ ಮಿಕ್ಕರ್". ಅಂದರೆ ಕನ್ನಡದ ಪ್ರಾಣವಾಗಿರುವ ಆದಿಪ್ರಾಸವನ್ನೇ ಇಟ್ಟುಕೊಂಡು, ಪ್ರಕೃತಿ ಮುರಿಯದ ಯತಿಯನ್ನು ಬಿಟ್ಟುಕೊಟ್ಟರು. ಮೊದಮೊದಲು ಚರಣದ ಅಂತ್ಯದಲ್ಲಿ ಪ್ರಾರಂಭವಾಗಿರಬಹುದಾದ ಈ ಉಲ್ಲಂಘನೆ ಬರಬರುತ್ತ ಚರಣದ ಮಧ್ಯದಲ್ಲಿಯೂ ಪ್ರಾರಂಭವಾಗಿ ಮುಂದೆ ಅದು ಸಾರ್ವತ್ರಿಕವಾಯಿತು. ಉದಾಹರಣೆಗೆಂದು :

ಶ್ರೀವಾಣೀ ಗಿರಿಜಾಧಿಪರ್ ಗರುಡಹಂ *ಸೋಕ್ಷಾಸನರ್ ವಾರ್ಧಿರಾ*।
ಜೀವಾದ್ರೀಂದ್ರ ನಿವಾಸಿಗಳ್ ಮಧುಪರ*ಕ್ತಾಂಭೋರುಹೇಂದು ಪ್ರಭರ್।
ದೇವರ್ ಸತ್ವರಜಸ್ತಮೋಗುಣಯುತರ್ ದ್ವ್ಯಷ್ಟತ್ರಿನೇತ್ರೋತ್ಪಲರ್।
ಗೋವಿಂದಾಬ್ಜಜಶಂಕರ ತ್ರಿಪುರುಷರ್ ಪಾಲಿಕ್ಕೆ ನಿಮ್ಮಂ ಚಿರಂ ॥[೧೨೩]

ಈ ಪದ್ಯದಲ್ಲಿ, ಹಂಸ, ರಾಜೀವ, ರಕ್ತ, ಎಂಬ ಪ್ರಕೃತಿಗಳನ್ನು ಭಗ್ನಗೊಳಿಸಿ ಯತಿ ಕಾಲೂರಿ ನಿಂತುದನ್ನು ಗಮನಿಸಬೇಕು.

ಪ್ರಾಸವಿಡುವ, ಯತಿಬಿಡುವ ಈ ಉಭಯಕ್ರಿಯೆಗಳು ಕನ್ನಡದಲ್ಲಿ ಎಂದು?ಹೇಗೆ? ಆರಂಭಗೊಂಡವು ಎಂಬುದು ಜಟಿಲಪ್ರಶ್ನೆ. ಲಯಬದ್ಧ ಛಂದಸ್ಸನ್ನು ಬಾಳುತ್ತಿದ್ದ ಕನ್ನಡಿಗರು ಮೊದಮೊದಲು ಸಂಸ್ಕೃತದಿಂದ ಲಯಬದ್ಧ ವೃತ್ತಗಳನ್ನೇ ಆಯ್ದುಕೊಂಡಿರಬೇಕು. ಆಗ ಆದಿಪ್ರಾಸವನ್ನು ಇಟ್ಟರೂ ಯತಿಯನ್ನು ಕಾಪಾಡಲು ಪ್ರಯತ್ನಿಸಿರಬೇಕು.

---

೧೨೩. ಶಾಸನ ಪದ್ಯ ಮಂಜರಿ, ಪು. -೧೨

ಮಾಸೇನರ್ ಪರಮಪ್ರಭಾವ ರಿಷಿಯರ್+*ಕಟ್ವಿಪ್ಪಿನಾವೆಟ್ಟದುಳ್*

ಶ್ರೀಸಂಗಂಗಳ ಪೇಟ್ದಿ ಸಿದ್ಧಸಮಯಂ*+ತಪ್ಪಾದೆ ನೋನ್ತಿಮ್ಬಿನಿನ್*

ಪ್ರಾಸಾದಾನ್ತರಮಾನ್ವಿಚಿತ್ರಕನಕ*ಪ್ರಜ್ವಲ್ಯದಿನ್ಮಿಕ್ಕುದಾನ್*

ಸಾಸಿರ್ವ್ವರ್ವ್ವರ ಪೂಜೆದಂದುಯೆ ಅವರ್*+ಸ್ವರ್ಗಾಗ್ರಮಾನೇಜೆದಾರ್||[೧೨೪]

ನೆಱೆದಾದ ವ್ರತಶೀಲ ನೋನ್ಪಿಗುಣದಿಂ*ಸ್ವಾಧ್ಯಾಯ ಸಮ್ಪತ್ತಿನಿಮ್*

ಕಱೆಇಲ್ಲನಲ್ತಪ ಧರ್ಮ್ಮದಾ ಸಸಿಮತಿ* ಶ್ರೀಗನ್ತಿಯರ್ವ್ವನ್ದು ಮೇಲ್*|

ಅಱೆದಾಯುಷ್ಯಮೆನೆನ್ತು ನೋಡೆನಗೆ ತಾನ್*+ಇನ್ತೆನ್ದು ಕಟ್ವಿಪ್ಪಿನುಳ್*|

ತೊಱೆದಾರಾಧನೆ ನೋನ್ತು ತೀರ್ತ್ಥಗಿರಿ ಮೇಲ್*+ಸ್ವರ್ಗಾಲಯಕ್ಕೇಱೆದಾರ್*||[೧೨೫]

ಕರ್ನಾಟಕದ ಪ್ರಾಚೀನತಮ (೭ನೆಯ ಶತಮಾನ) ಶಾಸನಗಳಲ್ಲಿಯ ಈ ಶಾರ್ದೂಲ ಮತ್ತು ಮತ್ತೇಭವಿಕ್ರೀಡಿತಗಳಲ್ಲಿ ಆದಿಪ್ರಾಸದೊಂದಿಗೆ ಎಲ್ಲೆಡೆ ಯತಿಯೂ ಸುರಕ್ಷಿತವಾಗಿರುವುದನ್ನು ಲಕ್ಷಿಸಬೇಕು. ಹೀಗೆ ಯತಿಪರಿಪಾಲನೆ ಸಾಗಿಬರುತ್ತಿರುವಾಗಲೇ ಅದರ ಉಲ್ಲಂಘನೆಯೂ ತಲೆಹಾಕಿದಂತಿದೆ.

೧. ಪರಮಾರ್ತ್ಥಂ ಮೆಚ್ಚೆ ನಾನೀ ಧರಣಿಯುಳಿರವಾನೆನ್ದು ಸನ್ಯಾಸನಂಗೆ*|
ಯ್ದುರು ಸತ್ವನ್ನನ್ದಿಸೇನ ಪ್ರವರ ಮುನಿವರನ್ದೇವಲೋಕಕ್ಕೆ ಸನ್ದಾನ್||[೧೨೬]

೨. ಚಪಲಿಲ್ಲಾ ನವಿಲೂರ ಸಂಘದ ಮಹಾ* ನನ್ದಾಮತೀಗನ್ತಿಯಾರ್ ||[೧೨೭]

೩. ಅವರುಂ ಸಾಧಿಸಿ ಸ್ವರ್ಗಲೋಕ ಸುಖ ಚಿ*ತ್ತಂ xxx ಮಾಧಿಗಳ್ ||[೧೨೮]

ಕ್ರಿ.ಶ. ೭ನೆಯ ಶತಮಾನದ ಈ ಶ್ರವಣಬೆಳ್ಗೊಳದ ಶಾಸನಪದ್ಯಗಳಲ್ಲಿ ನಕ್ಷತ್ರ ಚಿಹ್ನವಿದ್ದೆಡೆ ಯತಿಭಂಗವಾದುದನ್ನು ಗಮನಿಸಬೇಕು. ಅದಕ್ಕಾಗಿ ಕನಿಷ್ಠಪಕ್ಷ ೭ನೆಯ ಶತಮಾನಕ್ಕೆ ಪೂರ್ವದಲ್ಲಿಯೇ ವರ್ಣವೃತ್ತಗಳಿಗೆ ಆದಿಪ್ರಾಸವಿಡುವ, ಯತಿಬಿಡುವ ವಿಧಾನ ಕನ್ನಡದಲ್ಲಿ ಒಂದು ಪದ್ಧತಿಯಾಗಿರಬಹುದು. ಇದು ದೋಷವೆನ್ನುವುದು ಮರೆಯುವಷ್ಟು ಗುಣಸ್ವರೂಪ ಪಡೆದಿರಬಹುದು. ಅದಕ್ಕಾಗಿಯೇ ಮಾರ್ಗಕಾರನು:

ನಿರತಿಶಯಮಕ್ಕುಮದು ಬಂ| ಧುರ ಕವಿಜನತಾ ಪ್ರಯೋಗ ಸಂಬಂಧನದಿಂ|
ಗುರುಜಘನಸ್ತನ ಭರಮಂ| ಥರಲೀಲಾಲಸ ವಿಳಾಸಿನೀ ಚಳಿತಂಬೋಲ್||[೧೨೯]

ಎಂದು ಆಲಂಕಾರಿಕವಾಗಿ ಮೆಚ್ಚಿ ನುಡಿದಿದ್ದಾನೆ. ಹೀಗೆ ಹೊರಗಿನಿಂದ ಬಂದ ಅಕ್ಷರವೃತ್ತಗಳಲ್ಲಿ ಯತಿ ಮೀರಲು ಅನುಮತಿ ನೀಡಿದ ಕವಿರಾಜಮಾರ್ಗಕಾರನು :

ಅಂತುಂ ಯತಿಯಂ ಪೇಟ್ಗಾ| ರ್ಪಂತಾದ್ಯದೊಳಲಸದಾರ್ಯೆಯೊಳ್ ಕಂದದೊಳಂ ||
ಸಂತಂ ದ್ವಿತೀಯ ಪಾದಗ|ತಾಂತದೊಳಕ್ಕದು ಚತುಷ್ಪದೀ ಪದವಿಗಳೊಳ್||[೧೩೦]

---

೧೨೪. E.C. ii No. 27

೧೨೫. E.C. ii No. 76

೧೨೬. E.C. ii No. 88

೧೨೭. E.C. ii No. 98

೧೨೮. E.C. ii No. 106

೧೨೯. ಕ.ಮಾ. ೧-೭೬

೧೩೦. ಕ.ಮಾ. ೧-೭೭

ಎಂಬ ಪದ್ಯದಲ್ಲಿ ಹೊರಗಿನಿಂದ ಬಂದಿದ್ದರೂ ಆರ್ಯೆ ಕಂದಗಳಲ್ಲಿ ಯತಿಯನ್ನು ಮೀರಬಾರದೆಂದು ಎಚ್ಚರ ನೀಡಿದ್ದಾನೆ. ಈ ಚತುಷ್ಪದಿಗಳ ಎರಡನೆಯ ಚರಣದಲ್ಲಿ ಯತಿಯನ್ನು ತಪ್ಪದೇ ಪಾಲಿಸಬೇಕೆಂದು ನಿಯಮ ವಿಧಿಸಿದ್ದಾನೆ. ಆರ್ಯೆ ನಮ್ಮಲ್ಲಿ ನಡೆದು ಬಂದಿತೋ ಇಲ್ಲವೋ, ಅದರಿಂದಲೇ ಹುಟ್ಟಿದ ಕಂದ ಮಾತ್ರ ಕವಿರಾಜಮಾರ್ಗಕಾರನ ಕಟ್ಟಪ್ಪಣೆಯನ್ನು ಹೊತ್ತುಕೊಂಡು ಬಹುಕಾಲ ನಡೆದು ಬಂದಿತು. ಒಟ್ಟಿನಲ್ಲಿ,

೧) ವೃತ್ತ ಮತ್ತು ಜಾತಿಬಂಧಗಳಲ್ಲಿ ಯತಿ ಸರ್ವಸಾಮಾನ್ಯ.

೨) ಹೊರಗಿನಿಂದ ಬಂದ ವರ್ಣವೃತ್ತಗಳಲ್ಲಿ ಯತಿ ಮೀರಬಹುದು.

೩) ಹೊರಗಿನಿಂದ ಬಂದ ಆರ್ಯೆ ಕಂದಗಳಲ್ಲಿ ಯತಿ ಪಾಲಿಸಬೇಕು.

ಎಂಬುದು ಈತನ ಅಭಿಪ್ರಾಯ. ಹೀಗೆ ಛಂದಸ್ಸಿನ ವಿಷಯವಾಗಿ ಕಟ್ಟುನಿಟ್ಟಾಗಿ ನಡೆದುಕೊಂಡ ಈ ಕವಿರಾಜಮಾರ್ಗದಲ್ಲಿ ಬಳಕೆಯಾದ ವೃತ್ತಗಳನ್ನು ಈಗ ಬಿಡಿಸಿ ನೋಡಬಹುದು.

ಛಂದೋವಿವರಣೆ: ಕವಿರಾಜಮಾರ್ಗದ ೩ ಪರಿಚ್ಛೇದಗಳಲ್ಲಿ ೧೫೦+೧೫೫+೨೩೭ ಹೀಗೆ ಒಟ್ಟು ೫೪೨ ವೃತ್ತಗಳು ಕಂಡುಬರುತ್ತಿದ್ದು ಅವುಗಳ ವಿವರ ಹೀಗಿವೆ. [೧೩೧]

ವೃತ್ತನಾಮ	ಪರಿಚ್ಛೇದ	ಪದ್ಯಗಳ ಅಂಕಿ	ಸಂಖ್ಯೆ	ಒಟ್ಟು ಸಂಖ್ಯೆ
ಕಂದ	I	೧-೪೪=೪೪ ೪೬-೧೧೧=೬೬	೧೦೦	೪೧೭
	II	೧-೪೫=೪೫ ೪೭-೯೭=೫೧	೯೬	
	III	೧-೧೦೭=೧೦೭ ೧೦೯-೨೦೭=೯೯ ೨೦೯=೧ ೨೩೨-೨೩೫=೪	೨೧೧	
ಚಂಪಕಮಾಲೆ	I	೧೧೫,೧೧೬,೧೨೦ -೧೨೪, ೧೪೯	೮	೧೪
	II	೧೦೪-೧೦೯	೬	
ಉತ್ಪಲಮಾಲೆ	I	೧೧೩, ೧೧೪, ೧೧೭-೧೧೯	೫	
	II	೯೯-೧೦೩, ೧೧೦, ೧೫೫	೭	೧೨
ದ್ರುತವಿಳಂಬಿತ	I	೧೩೮, ೧೩೯, ೧೪೧-೧೪೬	೮	೧೦
	III	೨೧೯, ೨೨೦	೨	

೧೩೧. ಇಲ್ಲಿಯ ಪದ್ಯ ಅಂಕಿಗಳಾಗಿ ಕವಿರಾಜಮಾರ್ಗದ ಮದ್ರಾಸ ಆವೃತ್ತಿಯನ್ನನುಸರಿಸಲಾಗಿದೆ.

ಮಣಿಭೂಷಣ	I	೧೨೬-೧೨೯, ೧೩೧, ೧೩೨, ೧೩೪	೭	೯
	II	೨೨೧, ೨೨೫	೨	
ಪುಷ್ಪಿತಾಗ್ರ	I	೧೪೭, ೧೪೮	೨	೪
(ಅರ್ಧಸಮವೃತ್ತ)	II	೧೫೩	೧	
	III	೨೩೧	೧	
ಮತ್ತೇಭವಿಕ್ರೀಡಿತ	I	೧೫೦	೧	೨
	III	೨೩೭	೧	
ಮಾಲಿನೀ	II	೧೫೪	೧	೯
	III	೨೧೦-೨೧೭	೮	
ಶಾರ್ದೂಲವಿಕ್ರೀಡಿತ	II	೧೪೨	೧	೧
ಮಂಗಳವೃತ್ತ	I	೧೩೦, ೧೩೩, ೧೩೫, ೧೩೬	೪	೬
	III	೨೨೨, ೨೨೩	೨	
ವೀರವೃತ್ತ	I	೧೪೦	೧	
	III	೨೨೭-೨೩೦	೪	೫
ಶ್ಲೋಕ	II	೧೧೨-೧೩೬, ೧೩೯-೧೪೧	೨೮	೨೮
ಗೀತಿಕೆ	I	೪೫, ೧೧೨, ೧೨೫, ೧೩೭	೪	
	II	೪೬,೯೮,೧೧೧,೧೩೭,೧೩೮ ೧೪೩-೧೫೨	೧೫	೨೫
	III	೧೦೮, ೨೦೮, ೨೧೮, ೨೨೪, ೨೨೬ ೨೩೬	೬	
		ಒಟ್ಟು ಪದ್ಯಗಳು	೫೪೨	೫೪೨

ಇವುಗಳನ್ನು ಸಂಸ್ಕೃತದ ವೈದಿಕಛಂದಸ್ಸಿನ ಶ್ಲೋಕ, ಲೌಕಿಕಛಂದಸ್ಸಿನ ಸಮ, ಅರ್ಧಸಮವೃತ್ತ, ಜಾತಿಛಂದಸ್ಸಿನ ಕಂದ ಮತ್ತು ಗೀತಿಕೆ (ದ್ರಾವಿಡ ಛಂದ) ಎಂದು ವರ್ಗೀಕರಿಸಬಹುದು. ಒಟ್ಟು ೫೪೨ ಪದ್ಯಗಳಲ್ಲಿ ಕಂದಗಳ ಸಂಖ್ಯೆ ೪೧೭ ಎಂಬುದನ್ನು ನೋಡಿದರೆ ಅವುಗಳ ಬಾಹುಳ್ಯ ವೇದ್ಯವಾಗದಿರದು. "ಅಲ್ಪಾಕ್ಷರಮಸಂದಿಗ್ಧಂ ಸಾರವತ್ ವಿಶ್ವತೋಮುಖಂ ಅಸ್ತೋಭಮನವದ್ಯಂ" ಎನಿಸಿದ ಸೂತ್ರ ಕಟ್ಟಲು, ಕಂದ ಅನುಕೂಲ ಬಂಧವೆಂಬುದನ್ನು ತರುವಾಯದ ಶಾಸ್ತ್ರಜ್ಞರಂತೆ ಕನ್ನಡಿಗರು ಆಗಲೇ ಗುರುತಿಸಿದ್ದರೆನ್ನಬಹುದು. ಕಂದದ ತರುವಾಯ ಕನ್ನಡಕ್ಕೆ ಹೆಚ್ಚು ಪ್ರಿಯವೆನಿಸಿದ 'ಖ್ಯಾತ ಕರ್ನಾಟಕಂ'ಗಳಲ್ಲಿ ಚಂಪಕ ೧೪, ಉತ್ಪಲ ೧೨, ಮತ್ತೇಭ ೨, ಶಾರ್ದೂಲ ೧ ಬಳಸಿದ್ದಾನೆ. ಮಿಕ್ಕ ದ್ರುತವಿಲಂಬಿತ. ಮಣಿಭೂಷಣ, ಮಾಲಿನಿ, ಮಂಗಳ, ವೀರವೃತ್ತಗಳು ಕನ್ನಡಕ್ಕೆ ಅಪರೂಪವಾದುವು.

ಇಲ್ಲಿ ಪುಷ್ಪಿತಾಗ್ರವೆಂಬ ಅರ್ಧಸಮವೃತ್ತ, ಆದಿಪ್ರಾಸ ಒಳಪ್ರಾಸಗಳನ್ನು ವಿಧಿಸಿ ಕನ್ನಡ ಜಾಯಮಾನಕ್ಕೆ ತಿರುಗಿಸಿಕೊಂಡ ಶ್ಲೋಕ, ಛಂದಸ್ಸಿನ ಹಿಡಿತಕ್ಕೆ ಇನ್ನೂ ಸಿಗದ ದ್ರಾವಿಡ ಬಂಧವಾದ ಗೀತಿಕೆಗಳು ಗಮನಿಸಬೇಕಾದ ವೃತ್ತಗಳು. ಚತ್ತಾಣ-ಬೆದಂಡೆಗಬ್ಬ ಪ್ರಸಂಗದಲ್ಲಿ ಮಿಕ್ಕ ದ್ರಾವಿಡಬಂಧಗಳಾದ ಅಕ್ಕರ, ಚೌಪದಿ, ತಿವದಿಗಳನ್ನು ಮಾರ್ಗಕಾರನು ಉಲ್ಲೇಖಿಸಿರುವನೇ ಹೊರತು ಈ ಕೃತಿಯಲ್ಲಿ ಬಳಸಿಲ್ಲ. ಹೀಗೆ ಕವಿರಾಜಮಾರ್ಗದ ಮೂಲಕ ಅದರ ಹಿಂದಣ ಸಾಹಿತ್ಯದಲ್ಲಿ ಬಳಕೆಯಾದ ವಿವಿಧ ವೃತ್ತಗಳ ಒಂದು ಸ್ಥೂಲ ಚಿತ್ರವನ್ನು ಅರಿಯಬಹುದಾಗಿದೆ.

ಅಲಂಕಾರ :

ವ್ಯಾಕರಣ ಛಂದಸ್ಸುಗಳು ಭಾಷೆಯಿಂದ ಭಾಷೆಗೆ ವಿಶಿಷ್ಟವಾಗಿದ್ದರೆ, ಅಲಂಕಾರ ಮಾತ್ರ ಸಕಲ ಭಾಷೆಗಳಿಗೂ ಸಾಮಾನ್ಯವಾಗಿರುತ್ತದೆ. ಈ ಸಾಮಾನ್ಯಸತ್ಯದ ಮೂಲಭೂತ ತತ್ವಗಳನ್ನು ಮೊದಲು ಎತ್ತಿ ಹೇಳಿದ ಸಂಸ್ಕೃತ ಅಲಂಕಾರ ಸಾಹಿತ್ಯದಿಂದಾಗಿ, ಭಾರತೀಯ ದೇಶಭಾಷೆಗಳಲ್ಲಿ ಅನುಕರಣ ಪ್ರವೃತ್ತಿ ಬೆಳೆದು ಸ್ವತಂತ್ರವಿಚಾರಧಾರೆ ಕುಂಠಿತವಾಯಿತು. ಹೀಗಾಗಿ ಎಲ್ಲ ಪ್ರಾಂತಗಳ ಭಾರತೀಯರು ತಮ್ಮ ಮಾತೃಭಾಷೆಗಳಲ್ಲಿ ಅನುಕರಣ ಇಲ್ಲವೆ ಅನುವಾದ ರೂಪದ ಕಾವ್ಯಶಾಸ್ತ್ರಗಳನ್ನು ಬರೆದರು. ಇಂತಹ ಪರಂಪರೆಯಲ್ಲಿ ಹುಟ್ಟಿದ ಕವಿರಾಜಮಾರ್ಗಕಾರ, ಪ್ರಾಚೀನ ದಂಡಿ ಭಾಮಹರೊಡನೆ ನಡೆದುಕೊಂಡ ರೀತಿಯನ್ನು ಇಲ್ಲಿ ನೋಡಬಹುದು.

ಕಾಶ್ಮೀರದ ಭಾಮಹನಿಗಿಂತ ದ್ರಾವಿಡದೇಶದ ದಂಡಿಯತ್ತ ಮಾರ್ಗಕಾರನ ಒಲವು ಹೆಚ್ಚು. ಕಾವ್ಯಾಲಂಕಾರದ ಅಧ್ಯಾಯ ೫, ಕಾವ್ಯಾದರ್ಶದ ಪರಿಚ್ಛೇದ ೩, ಕವಿರಾಜಮಾರ್ಗದ ಪರಿಚ್ಛೇದ ೩ ಎಂಬುದನ್ನು ನೆನೆದರೆ ಕವಿರಾಜಮಾರ್ಗದ ಚೌಕಟ್ಟು ಸ್ಥೂಲವಾಗಿ ದಂಡಿಯದೆಂದು ವೇದ್ಯವಾಗುತ್ತದೆ. ಈ ಅಧ್ಯಾಯಗಳಲ್ಲಿ ವಿವೇಚಿಸಿದ ಕಾವ್ಯಮೀಮಾಂಸೆಯ ಮುಖ್ಯ ಅಂಶಗಳು ಆರು. ಅವು: ಪೀಠಿಕೆ. ಕಾವ್ಯದೋಷ, ರೀತಿ, ಶಬ್ದಾಲಂಕಾರ, ಅರ್ಥಾಲಂಕಾರ, ಮಹಾಕಾವ್ಯಲಕ್ಷಣ. ಇವುಗಳನ್ನು ಕ್ರಮವಾಗಿ ಅವಲೋಕಿಸಬಹುದು.

ಪೀಠಿಕೆ: ಕಾವ್ಯಪರಿಕರ, ಕಾವ್ಯಲಕ್ಷಣ, ಕಾವ್ಯಪ್ರಶಂಸೆ-ಪ್ರಯೋಜನ, ಕಾವ್ಯಭೇದ-ಇವು ಅಲಂಕಾರ ಶಾಸ್ತ್ರದ ಪೀಠಿಕಾ ಪ್ರಪಂಚದ ವಿಷಯಗಳು. ಕವಿರಾಜಮಾರ್ಗದ ಪ್ರಾರಂಭದಲ್ಲಿ ಇವುಗಳ ವಿವೇಚನೆ ಹೀಗೆ ಬಂದಿದೆ:

ಪ್ರತಿಭಾವತ್ವಮುಮಕೃತಕ।
ಚತುರತೆಯುಂ ಪರಮ ಬುಧಜನೋಪಾಸನೆಯುಂ।
ಕೃತಿಪರಿಚಯಮುಂ.......[೧೩೨]

ಇವು ಕಾವ್ಯಪರಿಕರಗಳು.

ಕವಿಭಾವಕೃತಾನೇಕ।
ಪ್ರವಿಭಾಗ ವಿವಿಕ್ತಸೂಕ್ತಮಾರ್ಗಂ ಕಾವ್ಯಂ।
ಸವಿಶೇಷ ಶಬ್ದರಚನಂ।
ವಿವಿಧಾರ್ಥ ವ್ಯಕ್ತಿವರ್ತಿತಾಲಂಕಾರಂ ||[೧೩೩]

---

೧೩೨. ಕ.ಮಾ. ೧-೧೧

೧೩೩. ಕ.ಮಾ. ೧-೨೨

ಇದು ಕಾವ್ಯಲಕ್ಷಣ. ಪಾಪ-ಪುಣ್ಯ, ಹಿತ-ಅಹಿತ, ಸುಖ-ದುಃಖಗಳ ಮೂಲಭೂತ ಅರಿವು; ಲೌಕಿಕ ಪಾರಮಾರ್ಥಗಳ ಸ್ವರೂಪ; ಧರ್ಮ-ಅರ್ಥ-ಕಾಮ-ಮೋಕ್ಷಗಳ ಸಿದ್ಧಿ; ಇವುಗಳನ್ನು ಸಾಕ್ಷಾತ್ಕಾರಗೊಳಿಸಿಕೊಡುವ ಕಾವ್ಯರಚನೆಯಿಂದ ಕವಿಯು ಕಲ್ಪಕಲ್ಪಗಳಲ್ಲಿ ಕೀರ್ತಿಯೋಗ್ಯನಾಗುತ್ತಾನೆ. ಇದು ಕಾವ್ಯಪ್ರಶಂಸೆ ಮತ್ತು ಪ್ರಯೋಜನ. ಇವು ಹೆಚ್ಚು ಕಡಿಮೆ ದಂಡಿ ಭಾಮಹರ ಅಭಿಪ್ರಾಯಗಳೇ ಆಗಿವೆ.

ಕಾವ್ಯವನ್ನು 'ರೂಪನಿಷ್ಠ' ತತ್ವವನ್ನವಲಂಬಿಸಿ ದಂಡಿ'ಗದ್ಯಂ ಪದ್ಯಂ ಚ ಮಿಶ್ರಂ ಚ ತ್ರಿಧೈವ ವ್ಯವಸ್ಥಿತಂ'[೧೩೪] ಎಂದು ಮೂರು ವಿಧದಲ್ಲಿ, ಭಾಮಹನು 'ಗದ್ಯಂ ಪದ್ಯಂ ತದ್‌ದ್ವಿಧಾ'[೧೩೫] ಎಂದು ಎರಡು ವಿಧದಲ್ಲಿ ವಿಭಾಗಿಸಿದ್ದಾರೆ. ಮಾರ್ಗಕಾರನು "ದ್ವಿವಿಧಮೆನಿಕ್ಕುಂ....... ಗದ್ಯಪದ್ಯಾಖ್ಯಾತಂ" ಎಂದು ಭಾಮಹನಂತೆ ಎರಡು ವಿಧದಲ್ಲಿ ವಿಭಜಿಸಿರುವನಾದರೂ ; ಒಂದು: ಪ್ರಕಟತರ ವಸ್ತುವಿಸ್ತರ, ಇನ್ನೊಂದು: ನಿರತಿಶಯವಸ್ತುವಿಸ್ತರ ಎಂದು 'ವಸ್ತುನಿಷ್ಠ' ತತ್ತ್ವವನ್ನು ಅವಲಂಬಿಸಿದ್ದಾನೆ. ಕನ್ನಡದ ವಸ್ತುಕ ವರ್ಣಕಗಳಿಗೆ ಭೂಮಿಕೆಯೆನಿಸಿದ ಈ ವಿಭಜನೆ ಕವಿರಾಜಮಾರ್ಗಕಾರನು ಕಾವ್ಯಮೀಮಾಂಸೆಗೆ ಸಲ್ಲಿಸಿದ ನವೀನ ಕೊಡುಗೆಯಾಗಿದೆ.

ಕಾವ್ಯದೋಷ: ಅವಗುಣಮಿನಿತಾದೊಡಮಾ। ಕವಿತಾಬಂಧಮನಶೇಷಮಂ ದೂಷಿಸುಗುಂ।
ಸವಿಲಾಸ ಲೋಲಲೋಚನ । ವಿವರಮನೆಡೆವೆತ್ತ ಕಸದವೋಲನವರತಂ ॥[೧೩೬]

ಕಾವ್ಯದಲ್ಲಿಯ ದೋಷವೆನ್ನುವುದು, ಕಣ್ಣಿನಲ್ಲಿಯ ಕಸ- ಎಂದು ನಿಂದಿಸಿ ಕವಿರಾಜಮಾರ್ಗಕಾರ ಆ ದೋಷಗಳನ್ನು ದಂಡಿ ಭಾಮಹರ ಆದರ್ಶದಲ್ಲಿ ವಿವರಿಸಿದ್ದಾನೆ. ಭಾಮಹನು ೧ ಮತ್ತು ೪ನೆಯ ಅಧ್ಯಾಯಗಳಲ್ಲಿ, ದಂಡಿ ೩ನೆಯ ಪರಿಚ್ಛೇದದಲ್ಲಿ ಹೇಳಿದ ಎಲ್ಲ ದೋಷಗಳನ್ನೂ ಮಾರ್ಗಕಾರ ಮೊದಲನೆಯ ಪರಿಚ್ಛೇದಕ್ಕೆ ಎಳೆದುತಂದು, ತರುವಾಯ ಉಭಯ ಅಲಂಕಾರಗಳತ್ತ ನಡೆದುದರಿಂದ ಪ್ರಕರಣ ವಿಭಜನೆಗೆ ಒಂದು ಓರಣ ಒದಗಿದೆ.

ಭಾಮಹನು ಮೊದಲನೆಯ ಅಧ್ಯಾಯದಲ್ಲಿ (೧-೩೭) ಹೇಳಿದ ನೇಯಾರ್ಥ, ಕ್ಲಿಷ್ಟ, ಅನ್ಯಾರ್ಥ, ಅವಾಚಕ, ಆಯುಕ್ತಿ, ಗೂಢಶಬ್ದಾಭಿಧಾನಗಳನ್ನು ದಂಡಿ ಹೇಳಿಲ್ಲ, ಮಾರ್ಗಕಾರನು ನೇಯಾರ್ಥವೊಂದನ್ನು ಮಾತ್ರ ಹೇಳಿರುವನು. ಇನ್ನು ಭಾಮಹನು ನಾಲ್ಕನೆಯ ಅಧ್ಯಾಯದಲ್ಲಿ, ದಂಡಿ ಮೂರನೆಯ ಪರಿಚ್ಛೇದದಲ್ಲಿ ಹೇಳಿದ ಮಿಕ್ಕ ಕಾವ್ಯದೋಷಗಳನ್ನು ಕವಿರಾಜಮಾರ್ಗದೊಂದಿಗೆ ತುಲನಿಸಬಹುದು.

ಭಾಮಹ	**ದಂಡಿ**	**ಮಾರ್ಗಕಾರ**
ಅಪಾರ್ಥ೧	ಅಪಾರ್ಥ೧	ಅರ್ಥಶೂನ್ಯ೨
ವ್ಯರ್ಥ೨	ವ್ಯರ್ಥ೨	ವಿರುದ್ಧಾರ್ಥ೩
ಏಕಾರ್ಥ೩	ಏಕಾರ್ಥ೩	ಪುನರುಕ್ತಾರ್ಥ೪
ಸಸಂಶಯ೪	ಸಸಂಶಯ೪	—[೧೩೭]
ಅಪಕ್ರಮ೫	ಅಪಕ್ರಮ೫	ಚ್ಯುತಯಥಾಸಂಖ್ಯೆ೫

---

೧೩೪. ಕಾ.ದ. ೧-೧೧

೧೩೫. ಕಾವ್ಯಾಲಂಕಾರ (ಭಾಮಹ)೧-೧೬

೧೩೬. ಕ.ಮಾ. ೧-೪೩

೧೩೭. ಕಾರಕದೋಷಾದಿ ಪ್ರಸಂಗದಲ್ಲಿ ಮಾರ್ಗಕಾರನು 'ವಿಶಂಕಾದೋಷ' (I-೧೩೮-೧೪೨)ವನ್ನು ಹೇಳಿರುವನು.

—	—	ವ್ಯವಹಿತ೬
ಶಬ್ದಹೀನ೬	ಶಬ್ದಹೀನ೬	—
ಯತಿಭ್ರಷ್ಟ೭	ಯತಿಭ್ರಷ್ಟ೭	ಯತಿಭಂಗ೧
ಭಿನ್ನವೃತ್ತ೮	ಭಿನ್ನವೃತ್ತ೮	ಅಚ್ಛಂದ೭
ವಿಸಂಧಿ ೯	ವಿಸಂಧಿ೯	ವಿಸಂಧಿ೮
—[೧೩೮]	—[೧೩೯]	ನೇಯಾರ್ಥ ೯
ದೇಶವಿರುದ್ಧಂ ೧೦	ದೇಶವಿರುದ್ಧಂ೧೦	ದೇಶವಿರುದ್ಧ೧೬
ಕಾಲವಿರುದ್ಧಂ ೧೧	ಕಾಲವಿರುದ್ಧಂ ೧೧	ಕಾಲವಿರುದ್ಧ೧೪
ಕಲಾವಿರುದ್ಧ ೧೨	ಕಲಾವಿರುದ್ಧ೧೨	ಕಲಾವಿರುದ್ಧ೧೩
ಲೋಕವಿರುದ್ಧ ೧೩	ಲೋಕವಿರುದ್ಧ೧೩	ಲೋಕವಿರುದ್ಧ೧೫
ನ್ಯಾಯವಿರುದ್ಧ೧೪	ನ್ಯಾಯವಿರುದ್ಧ೧೪	ನ್ಯಾಯವಿರುದ್ಧ೧೨
ಆಗಮವಿರುದ್ಧ೧೫	ಆಗಮವಿರುದ್ಧ೧೫	ಆಗಮವಿರುದ್ಧ೧೦
—	—	ಸಮಯವಿರುದ್ಧ೧೧
ಪ್ರತಿಜ್ಞಾಹೀನ೧೬	—	—
ಹೇತುಹೀನ೧೭	—	—
ದೃಷ್ಟಾಂತಹೀನ೧೮	—	—

ಈ ಯಾದಿಯ[೧೪೦] ಅಭ್ಯಾಸದಿಂದ ಕೆಳಗಣ ವಿಶೇಷ ಸಂಗತಿಗಳು ವ್ಯಕ್ತವಾಗುತ್ತವೆ.

೧) ಮಾರ್ಗಕಾರನು ದಂಡಿ ಭಾಮಹರ ಶಬ್ದಹೀನ, ಭಾಮಹನ ಪ್ರತಿಜ್ಞಾಹೀನ, ಹೇತುಹೀನ, ದೃಷ್ಟಾಂತಹೀನಗಳನ್ನು ಬಿಟ್ಟುಕೊಟ್ಟು ಹೊಸದಾಗಿ ವ್ಯವಹಿತದೋಷ, ಸಮಯವಿರುದ್ಧಗಳನ್ನು ಹೇಳಿರುವನು.

೨) ದಂಡಿ ಭಾಮಹರ ಅಪಾರ್ಥ, ವ್ಯರ್ಥ, ಏಕಾರ್ಥ, ಅಪಕ್ರಮ, ಭಿನ್ನವೃತ್ತಗಳನ್ನು ಮಾರ್ಗಕಾರನು ಕ್ರಮವಾಗಿ ಅರ್ಥಶೂನ್ಯ, ವಿರುದ್ಧಾರ್ಥ, ಪುನರುಕ್ತಾರ್ಥ, ಚ್ಯುತಯಥಾಸಂಖ್ಯೆ, ಅಚ್ಛಂದ ಎಂದು ಬೇರೆ ಹೆಸರುಗಳಿಂದ ಕರೆದಿರುವನು.

೩) ದಂಡಿ ಭಾಮಹರು ಒಂದೇ ಕ್ರಮದಲ್ಲಿ ಹೇಳಿದ ದೋಷಗಳನ್ನು ಮಾರ್ಗಕಾರನು ಬೇರೊಂದು ಕ್ರಮದಲ್ಲಿ ಜೋಡಿಸಿರುವನು.

ಇದರಿಂದ ನಾಮನಿರ್ದೇಶನ, ನಿರೂಪಣಾ ಕ್ರಮಗಳಲ್ಲಿ ಒಬ್ಬರನ್ನೊಬ್ಬರು ಅನುಸರಿಸುತ್ತಿರುವ ದಂಡಿ ಭಾಮಹರಿಂದ ಈತನು ತೀರ ಭಿನ್ನವಾದ ರೀತಿಯಲ್ಲಿ ನಡೆದುದು ವ್ಯಕ್ತವಾಗುತ್ತದೆ. ಇನ್ನು ವಿಷಯದೃಷ್ಟಿಯಿಂದ ಕೆಳಗಣ ವೈಶಿಷ್ಟ್ಯಗಳನ್ನು ಗುರುತಿಸಬಹುದಾಗಿದೆ.

---

೧೩೮. ಭಾಮಹನು ಈ ಹಿಂದೆ (I-೩೮, ೩೯) ನೇಯಾರ್ಥವನ್ನು ಹೇಳಿರುವನು.

೧೩೯. ದಂಡಿಯು ನೇಯಾರ್ಥವನ್ನು ಸ್ಪಷ್ಟವಾಗಿ ಹೇಳದಿದ್ದರೂ (I-೭೩)ರಲ್ಲಿ ಅದರ ಸೂಚನೆಯಿದೆ.

೧೪೦. ಪ್ರತಿಯೊಂದರ ಮುಂದಣ ಅಂಕಿಗಳು ಆ ಆ ಕೃತಿಗಳಲ್ಲಿ ನಿರೂಪಿಸಿದ ದೋಷಗಳ ಅನುಕ್ರಮವನ್ನು ಸೂಚಿಸುತ್ತವೆ.

೧) ಉಚಿತ ಉದಾಹರಣೆಗಳು:- ಅಚ್ಛಂದಕ್ಕೆ ದಂಡಿ ಭಾಮಹರು ಉದಾಹರಣೆಯಾಗಿ ಶ್ಲೋಕ ಕೊಟ್ಟರೆ, ಮಾರ್ಗಕಾರನು ಕನ್ನಡಿಗರಿಗೆ ಹೆಚ್ಚು ಪರಿಚಿತವಾದ ಕಂದವನ್ನು ಕೊಟ್ಟು ಯತಿಭಂಗ ತಟ್ಟನೆ ಗಮನಕ್ಕೆ ಬರುವಂತೆ ಮಾಡಿದ್ದಾನೆ. ಶ್ರುತಿದುಷ್ಟ, ವಿರೂಪಸಂಧಿ, ನೇಯಾರ್ಥ ಮೊದಲಾದವುಗಳಿಗೆ ಉಚಿತ ಉದಾಹರಣೆಗಳನ್ನು ಕನ್ನಡದಲ್ಲಿ ಕಟ್ಟಿ ತೋರಿಸಿದ್ದಾನೆ.

೨) ನವೀನ ಲಕ್ಷಣಗಳು:- ಮಾರ್ಗಕಾರನು ಕೆಲವು ಸಲ ಲಕ್ಷಣಗಳನ್ನೂ ದಂಡಿ ಭಾಮಹರಿಗಿಂತ ಬೇರೆ ರೀತಿಯಲ್ಲಿ ಹೇಳಿದ್ದಾನೆ.

'ಶ್ರುತಿಸ್ಮೃತಿರಾಗಮಃ'[೧೪೧]

ಆಗಮೋಧರ್ಮ ಶಾಸ್ತ್ರಾಣಿ ಲೋಕಸೀಮಾ ಚ ತತ್ಕೃತಾ।
ತದ್ವಿರೋಧಿ ತದಾಚಾರ ವ್ಯತಿಕ್ರಮಣ ತೋಯಥಾ॥[೧೪೨]

ರಾಗಾದಿದೋಷ ವಿರಹಿತ। ವಾಗತಿಶಯವಖಿಳ ವಸ್ತುವಿಸ್ತರ ವಿಷಯಂ।
ಯೋಗಿ ಗುಣಾನುಗತಂ ಮ। ತ್ತಾಗಮ ವೇತದ್ವಿರುದ್ಧ ವಚನಂ ದೋಷಂ॥[೧೪೩]

ಇಲ್ಲಿ ಮಾರ್ಗಕಾರನು ಹೇಳಿದ 'ಆಗಮವಿರುದ್ಧ ದೋಷ' ಲಕ್ಷಣ ದಂಡಿ ಭಾಮಹರಿಗಿಂತ ತೀರ ಭಿನ್ನವಾಗಿದೆ.

೩) ಹೆಚ್ಚಿನ ವಿಷಯಗಳು:- ಮಾರ್ಗಕಾರನು ದಂಡಿ ಭಾಮಹರ ಕೈಹಿಡಿದು ನಡೆಯುತ್ತ ಹೋಗಿ, ಕೆಲವು ಸಲ ಒಂದೆರಡು ಹೆಜ್ಜೆ ದೂರ ಸರಿಯುತ್ತಾನೆ. ಶ್ರುತಿದುಷ್ಟ, ಶ್ರುತಿಕಷ್ಟಗಳನ್ನು ಹೇಳಿ ಭಾಮಹನೊಂದಿಗೆ ನಿಂತುಬಿಡದೆ-ಮಿಗೆ ದುಷ್ಕರ ಕಾವ್ಯಂಗಳೊ।ಳಗರ್ಹಿತಪ್ರಾಯಮಕ್ಕುಮಾ ಶ್ರುತಿಕಷ್ಟಂ। ಪಗರಣದೊಳುಟಿದ ಮೂಱುಂ । ನಗಿಸುಗುಮಪ್ಪುದಱಿನಲ್ಲಿಗಂತವದೋಷಂ ॥[೧೪೪] ಎಂದು ಹೇಳುತ್ತ ದುಷ್ಕರ ಕಾವ್ಯಗಳಲ್ಲಿ ಶ್ರುತಿಕಷ್ಟವನ್ನು, ಪಗರಣದಲ್ಲಿ ಶ್ರುತಿದುಷ್ಟ, ಅರ್ಥದುಷ್ಟ, ಕಲ್ಪನೋಕ್ತಿಕಷ್ಟಗಳನ್ನು ಮನ್ನಿಸಿದುದು ಈತನ ನವೀನ ಅಭಿಪ್ರಾಯ. ಯತಿಭಂಗ ಸಂದರ್ಭದಲ್ಲಿ ಲಕ್ಷ್ಯಲಕ್ಷಣ ಸಮನ್ವಯಕ್ಕೇ ನಿಲ್ಲದೆ, ಕನ್ನಡಿಗರು "ನಿಱಿಸಿ ಖಂಡಪ್ರಾಸಮನತಿಶಯಮಿದೆಂದು ಯತಿಯಂ ಮಿಕ್ಕರ್" ಎಂದು ನುಡಿದುದು ಹೊಸವಿಚಾರ. ಹೀಗೆ ಉಚಿತ ಉದಾಹರಣೆ, ನವೀನ ಲಕ್ಷಣ, ಹೆಚ್ಚಿನ ನಿರೂಪಣೆಗಳು ಕಂಡು ಬಂದು ಮಾರ್ಗಕಾರನ ಸ್ವತಂತ್ರಮತಿಗೆ ಸಾಕ್ಷಿನುಡಿಯುತ್ತವೆ.

ಮಾರ್ಗಕಾರನು ದಂಡಿ ಭಾಮಹರ ಸಮಾನ ವಿಚಾರದೊಂದಿಗೆ ಭಾಮಹನಿಂದ ಕೆಲವು ಹೆಚ್ಚಿನ ವಿಚಾರಗಳನ್ನು ಸ್ವೀಕರಿಸುವುದರಿಂದ, ದೋಷಪ್ರಕರಣದ ಮಟ್ಟಿಗೆ ಈತನು ಸಂಖ್ಯಾದೃಷ್ಟಿಯಿಂದ ಭಾಮಹನಿಗೆ ಹೆಚ್ಚು ಋಣಿಯೆನ್ನಬಹುದಾದರೂ ಲಕ್ಷಣದೃಷ್ಟಿಯಿಂದ ದಂಡಿಯೇ ಇವನಿಗೆ ಆದರ್ಶ.

೧) ದೇಶವಿರುದ್ಧ :

ಯಾದೇಶೀ ದ್ರವ್ಯ ಸಂಭೂತಿರಪಿ ವಾ ನೋಪ ವಿಶ್ಯತೇ।
ತತ್ತದ್ವಿರೋಧಿ ವಿಜ್ಞೇಯಂ ಸ್ವಭಾವಾತ್ ತದ್ಯಥೋಚ್ಯತೇ॥[೧೪೫]

---

೧೪೧. ಕಾ.ದ. ೩-೧೬೩

೧೪೨. ಕಾವ್ಯಾಲಂಕಾರ ೪-೪೭

೧೪೩. ಕ.ಮಾ. ೧-೧೦೪

೧೪೪. ಕ.ಮಾ. ೧-೬೮

೧೪೫. ಕಾವ್ಯಾಲಂಕಾರ ೪-೨೮

'ದೇಶೋಽದ್ರಿವನ ರಾಷ್ಟ್ರಾಧಿಃ'[೧೪೬]

'ದೇಶಂ [ವನ]ರಾಷ್ಟ್ರಾದ್ರಿ ನಿವೇಶಾಂತಂ'[೧೪೭]

೨) ಕಾಲವಿರುದ್ಧ :

'ಷಣ್ಣಾಂ ಋತೂನಾಂ ಭೇದೇನ ಕಾಲಃ ಶೋಢೇವಭಿದ್ಯತೇ'[೧೪೮]

'ಕಾಲೋ ರಾತ್ರಿಂದಿವರ್ತವಃ'[೧೪೯]

'ಕಾಲಮಹೋರಾತ್ರಾದಿಕಂ'[೧೫೦]

೩) ವ್ಯರ್ಥದೋಷ :

ಜಹಿ ಶತ್ರುಕುಲಂ ಕತ್ಸ್ನಂ ಜಯ ವಿಶ್ವಂಬರಾಮಿಮಾಂ।
ತವನೈಕೋಪಿ ವಿದ್ವೇಷ್ಟಾ ಸರ್ವಭೂತಾನುಕಂಪಿನಃ॥[೧೫೧]

ಅರಿನೃಪಬಲಮಂ ಗೆಲ್ದುರು। ಪರಾಕ್ರಮಕ್ರಮದೆ ಶೌರ್ಯಮಂ ಪ್ರಕಟಿಸು ನೀಂ।
ನರಮಹಿತಾ ನಿನಗೇನಹಿ। ತರುಮೊಳರೇ ಸತತ ಪರಹಿತಾಚಾರಪರಾ॥[೧೫೨]

ಮೇಲಣ ತುಲನೆಯಿಂದ ಮಾರ್ಗಕಾರನ ಒಲವು ಈ ದೋಷಪ್ರಕರಣದಲ್ಲಿಯೂ ಭಾಮಹನಿಗಿಂತ ದಂಡಿಯತ್ತ ಹೆಚ್ಚು ಎಂದು ತಿಳಿಯುತ್ತದೆ.

ಹೀಗೆ ಉಭಯ ಅಲಂಕಾರಿಕರಿಗೆ ಋಣಿಯಾಗುತ್ತ ನಡೆದರೂ ಇವರಿಂದ ದೂರಸರಿದು ವಿವೇಚಿಸಿದ ಕನ್ನಡಕ್ಕೆ ವಿಶಿಷ್ಟವಾದ 'ಕಾರಕಾದಿದೋಷ'ಗಳು ಈ ದೋಷಪ್ರಕರಣದ ದೊಡ್ಡ ಕೊಡುಗೆಯೆನಿಸಿವೆ. (ಇವುಗಳ ವಿವರಣೆ ವ್ಯಾಕರಣ ವಿಭಾಗದಲ್ಲಿ ಬಂದಿದೆ).

ರೀತಿ: ಕಾವ್ಯಮೀಮಾಂಸೆಯ ಇತಿಹಾಸದಲ್ಲಿ ರಸ, ಅಲಂಕಾರಗಳ ತರುವಾಯ ತಲೆದೋರಿದುದು ಮಾರ್ಗ ಇಲ್ಲವೆ ರೀತಿ ಪ್ರಸ್ಥಾನ. ಪದರಚನೆಯ ವಿಶಿಷ್ಟರೂಪವೇ ರೀತಿ ಇಲ್ಲವೆ ಮಾರ್ಗ. ಈ ರೀತಿಯ ಆತ್ಮವೆಂದರೆ ಗುಣ. ಕೌಟಿಲ್ಯನ ಅರ್ಥಶಾಸ್ತ್ರ, ರುದ್ರದಾಮನ ಶಿಲಾಲೇಖಗಳಲ್ಲಿ ಉಲ್ಲೇಖವಾದ ಕೆಲವೇ ಗುಣಗಳು ಭರತನಲ್ಲಿ,

ಶ್ಲೇಷಃ ಪ್ರಸಾದಃ ಸಮತಾಸಮಾಧಿ ಮಾಧುರ್ಯಮೋಜಃ ಪದಸೌಕುಮಾರ್ಯಮ್।
ಅರ್ಥಸ್ಯ ಚ ವ್ಯಕ್ತಿರುದಾರತಾ ಚ ಕಾಂತಿಶ್ಚ ಕಾವ್ಯಾರ್ಥ ಗುಣಾದಶೈತೇ॥[೧೫೩]

ಎಂದು ಹತ್ತಕ್ಕೇರಿವೆ. ಇವುಗಳಲ್ಲಿ ಮಾಧುರ್ಯ ಓಜಸ್ಸು ಪ್ರಸಾದಗಳನ್ನು ಅವಸರದಲ್ಲಿ ಹೇಳಿ ಸಾಗುವ ಭಾಮಹನನ್ನು ಬಿಟ್ಟರೆ, ಈ ಗುಣಗಳನ್ನವಲಂಬಿಸಿದ ರೀತಿ (ಮಾರ್ಗ) ವಿಚಾರವನ್ನು ಮೊದಲು ಮಂಡಿಸಿದವನು ದಂಡಿ. ಅದಕ್ಕಾಗಿ ರೀತಿಪ್ರಸ್ಥಾನ ಪ್ರವರ್ತಕನು ವಾಮನನಾಗಿದ್ದರೂ ಅಡಿಗಲ್ಲು ಹಾಕಿದ ಕೀರ್ತಿ ದಂಡಿಗೆ ಸಲ್ಲುತ್ತದೆ. ಈತನ ಕಾವ್ಯಾದರ್ಶವನ್ನವಲಂಬಿಸಿದ ಕವಿರಾಜಮಾರ್ಗದಲ್ಲಿ ಈ ವಿಷಯ ವಿವರವಾಗಿಯೇ ಬಂದಿದೆ.

---

೧೪೬. ಕಾ.ದ. ೩-೧೬೨

೧೪೭. ಕ.ಮಾ. ೧-೧೧೦

೧೪೮. ಕಾವ್ಯಾಲಂಕಾರ ೪-೩೦

೧೪೯. ಕಾ.ದ. ೩-೧೬೨

೧೫೦. ಕ.ಮಾ. ೧-೧೦೮

೧೫೧. ಕಾ.ದ. ೩-೧೩೨

೧೫೨. ಕ.ಮಾ. ೧-೮೨

೧೫೩. ನಾಟ್ಯಶಾಸ್ತ್ರ ೧೬-೯೨

"ಅಸ್ತ್ಯನೇಕೋ ಗಿರಾಂ ಮಾರ್ಗಃ ಸೂಕ್ಷ್ಮಭೇದಃ ಪರಸ್ಪರಂ"[೧೫೪] ಎಂಬ ಕಾವ್ಯಾದರ್ಶದ ಒಂದು ಮಾತಿಗೆ ಬದಲು, ಅದೇ ಕಣ್ಣು ಅದೇ ಕಾಲುಗಳಿದ್ದರೂ ವ್ಯಕ್ತಿಯಿಂದ ವ್ಯಕ್ತಿಗೆ ರೂಪಭಿನ್ನತೆಯಿರುವಂತೆ 'ವಚನವಿನ್ಯಾಸಕ್ರಮ'ವೂ ವ್ಯಕ್ತಿಯಿಂದ ವ್ಯಕ್ತಿಗೆ ಬೇರೆಬೇರೆಯಾಗಿರುವುದರಿಂದ, ಅವುಗಳ ಭೇದ-ಪ್ರಭೇದ-ಮರುಭೇದಗಳನ್ನೆಲ್ಲ ಎಣಿಸಿ ಹೇಳುವುದು ಅಸಾಧ್ಯವೆನ್ನುತ್ತ, ಮಾರ್ಗಕಾರನು ೫ ಪದ್ಯಗಳ ಹರವಾದ ಪ್ರಸ್ತಾವನೆಯನ್ನು ಹಾಕಿಕೊಂಡಿದ್ದಾನೆ. ಹೀಗೆ ವಚೋಮಾರ್ಗ ಅನಂತ ರೀತಿಯಾಗಿದ್ದರೂ ಒಡೆದು ಕಾಣುವಷ್ಟು ಭಿನ್ನವಾಗಿರುವ ಎರಡನ್ನು ಮಾತ್ರ ವೈದರ್ಭಿ ಮತ್ತು ಗೌಡಿ ಎಂದು ದಂಡಿ, ದಕ್ಷಿಣಮಾರ್ಗ ಮತ್ತು ಉತ್ತರಮಾರ್ಗ ಎಂದು ಮಾರ್ಗಕಾರ ಹೆಸರಿಟ್ಟು ವಿವೇಚಿಸಿರುವರು. ಆದರೆ,

ಸತತಂ ದಕ್ಷಿಣಮಾರ್ಗೋ। ದಿತೋಕ್ತಿ ಭೇದಕಗುಣಂ ಸ್ವಭಾವಾಖ್ಯಾನಂ।

ವಿತತೋತ್ತರ ಮಾರ್ಗಗತಂ। ಪ್ರತೀತ ವಕ್ರೋಕ್ತಿಕೃತಮನಲ್ಪವಿಕಲ್ಪಂ॥[೧೫೫]

ಎಂಬ ಪದ್ಯದಲ್ಲಿ ಸ್ವಭಾವೋಕ್ತಿಯು ದಕ್ಷಿಣಮಾರ್ಗದ ಲಕ್ಷಣ, ವಕ್ರೋಕ್ತಿಯು ಉತ್ತರಮಾರ್ಗದ ಲಕ್ಷಣ ಎಂದುದು ನವೀನವಿಚಾರ. ಮಾರ್ಗದ್ವಯವನ್ನು ನಿರಾಕರಿಸುವ ಭಾಮಹನಿಂದ ವಕ್ರೋಕ್ತಿ ಸ್ವಭಾವೋಕ್ತಿಗಳನ್ನು, ಮಾರ್ಗದ್ವಯವನ್ನು ಪುರಸ್ಕರಿಸುವ ದಂಡಿಯಿಂದ ದಕ್ಷಿಣಮಾರ್ಗ ಉತ್ತರಮಾರ್ಗಗಳನ್ನು ಸ್ವೀಕರಿಸಿ ಅವುಗಳಲ್ಲಿ ಸಂಬಂಧ ಕಲ್ಪಿಸಿದುದು ಮಾರ್ಗಕಾರನ ಸಮನ್ವಯದೃಷ್ಟಿಗೆ ದ್ಯೋತಕ.

ಇನ್ನು ದಂಡಿ ಮತ್ತು ಮಾರ್ಗಕಾರರು ಹೇಳುವ ಹತ್ತು ಗುಣಗಳ ಹೆಸರು ಮತ್ತು ಅನುಕ್ರಮ ಈ ರೀತಿಯಾಗಿದೆ: ಶ್ಲೇಷ (೧)=ನಿಬಿಡ(೩), ಪ್ರಸಾದ (೨)=ಪ್ರಸನ್ನ (೭), ಸಮತಾ (೩)=ಸಮ (೧), ಮಾಧುರ್ಯಂ(೪)=ಮಧುರ (೨), ಸುಕುಮಾರತಾ (೫)=ಸುಕುಮಾರ (೫), ಅರ್ಥವ್ಯಕ್ತಿ (೬) =?, ಉದಾರತ್ವ (೭)=ಉದಾರ (೮), ಓಜಃ(೮)=ಓಜಸ್ವಿ (೧೦), ಕಾಂತಿಃ(೯)=ಕಾಂತಿ(೪), ಸಮಾಧಿಃ= (೧೦) ಸಮಾಹಿತ (೬), ?=ಪ್ರಮಿತಗ್ರಾಮ್ಯ (೯)[೧೫೬] ಇಲ್ಲಿ ಶ್ಲೇಷ ಪ್ರಸಾದ ಸಮಾಧಿಗಳಿಗೆ ಕ್ರಮವಾಗಿ ನಿಬಿಡ, ಪ್ರಸನ್ನ, ಸಮಾಹಿತ ಎಂಬ ಹೆಸರುಗಳನ್ನು, ಅರ್ಥವ್ಯಕ್ತಿಯನ್ನು ಬಿಟ್ಟು ಪ್ರಮಿತಗ್ರಾಮ್ಯ ಎಂಬ ಹೊಸ ವಿಚಾರವನ್ನು ಹೇಳಲಾಗಿದೆ. ದಂಡಿಯ ಮಧುರಬಂಧದ ಒಂದು ಪ್ರಭೇದವಾದ ಗ್ರಾಮ್ಯವನ್ನೇ ಮಾರ್ಗಕಾರನು ಒಂದು ಸ್ವತಂತ್ರಗುಣವೆಂದು ಇಲ್ಲಿ ಭಾವಿಸಿರುವನು.

ಈ ಗುಣಗಳ ಲಕ್ಷ್ಯಲಕ್ಷಣಗಳ ಸಮನ್ವಯ ಪ್ರಸಂಗದಲ್ಲಿ, ದಂಡಿಯ ಸಮಬಂಧ ಪ್ರಭೇದಗಳಾದ ಮೃದು, ಸ್ಫುಟ, ಮಧ್ಯಮಗಳಲ್ಲಿ ಮಾರ್ಗಕಾರ "ವಿಭೇದಕ್ರಮಮೆರಡಕ್ಕುಂ ಮೃದು ಸ್ಫುಟೋಕ್ತಿಯಿಂ"[೧೫೭] ಎಂದು ಎರಡನ್ನೇ ಸ್ವೀಕರಿಸಿದ್ದಾನೆ. ೧೮ ಶ್ಲೋಕಗಳಲ್ಲಿ ವಿಸ್ತಾರಗೊಂಡ ದಂಡಿಯ ಮಧುರಬಂಧ ವಿವರಣೆ ಕವಿರಾಜಮಾರ್ಗದಲ್ಲಿ ೪ ಪದ್ಯಗಳಿಗೆ ಮುಗಿದುಹೋಗಿದೆ. ಸಮಾಸಶ್ರೇಣಿಯ ವಾಕ್ಯರಚನೆ ಸಂಸ್ಕೃತದಷ್ಟು ಕನ್ನಡಕ್ಕೆ ಒಗ್ಗಲಾರದು. ಅದಕ್ಕಾಗಿ ಸಮಾಸ ಭೂಯಿಷ್ಠವಾದ ಓಜೋಬಂಧವನ್ನು ವಿವೇಚಿಸುತ್ತ ಸಮಸ್ತಪದದ ಮುಂದೆ ಅಸಮಸ್ತಪದ ಬಂದರೆ "ಕರ್ವಿನ ತುದಿಯಂತಿರೆ ವಿರಸಮಕ್ಕುಂ"[೧೫೮] ಎಂದುದು ಹೊಸವಿಚಾರ.

---

೧೫೫. ಕ.ಮಾ. ೨-೫೩

೧೫೪. ಕಾ.ದ. ೧-೪೦

೧೫೬. ಕಂಸದಲ್ಲಿಯ ಅಂಕಿಗಳು ಆ ಆ ಕೃತಿಯಲ್ಲಿಯ ಅನುಕ್ರಮವನ್ನು ತೋರಿಸುತ್ತವೆ.

೧೫೭. ಕ.ಮಾ. ೨-೫೬

೧೫೮. ಕ.ಮಾ. ೨೮೮

ದಂಡಿಯಂತೆ ಇಷ್ಟಕ್ಕೇ ನಿಲ್ಲದೆ ಮಾರ್ಗಕಾರನು ಸ್ಫುಟ (ಸಮಗುಣದ ಪ್ರಭೇದ), ಮೃದು (ಸಮಗುಣದ ಇನ್ನೊಂದು ಪ್ರಭೇದ), ನಿಬಿಡ, ಸುಕುಮಾರ, ಪ್ರಸನ್ನ, ಮಧುರ, ಶಿಥಿಲ, ವಿಷಮ, ಊರ್ಜಿತ (ಓಜಃ?) ಗುಣಗಳಿಂದ ಕ್ರಮವಾಗಿ ವೀರ, ಕರುಣ, ಅದ್ಭುತ, ಶೃಂಗಾರ, ಪ್ರಶಾಂತ, ಹಾಸ್ಯ, ಭೀಭತ್ಸ, ಭಯಾನಕ, ರೌದ್ರ ರಸಗಳು ಜನಿಸುವವೆನ್ನುತ್ತ 'ಗುಣಗಳಿಗೆ ರಸಪರತ್ವ'ವನ್ನು ಆರೋಪಿಸಿದ್ದಾನೆ. "ಕವಿರಾಜಮಾರ್ಗಕಾರನಿಗೆ ಪೂರ್ವದ ದಂಡಿ ಭಾಮಹರ ವಿಧಿಗಳಲ್ಲಿ ಈ ಸ್ಪಷ್ಟಕಲ್ಪನೆ ಕಾಣುವುದಿಲ್ಲ"[೧೫೯] -ಎಂಬ ಡಾ. ಕೆ. ಕೃಷ್ಣಮೂರ್ತಿಯವರ ಮಾತು ಮಾರ್ಗಕಾರನ ಸ್ವತಂತ್ರಮತಿಗೆ ಸಾಕ್ಷಿನುಡಿದರೆ, "ಮಾರ್ಗಕಾರನ ಈ ಕಲ್ಪನೆ ಎಷ್ಟು ಪ್ರಭಾವಶಾಲಿಯಾಯಿತು ಎಂಬುದು ಪಂಪರನ್ನಾದಿಗಳ ಕಾವ್ಯಪ್ರಯೋಗಗಳಲ್ಲಿ ಸುವೇದ್ಯವಾಗಿದೆ"[೧೬೦] ಎಂಬ ಎಂ.ವಿ. ಸೀತಾರಾಮಯ್ಯನವರ ಮಾತು ಕನ್ನಡ ಸಾಹಿತ್ಯದ ಮೇಲೆ ಕವಿರಾಜಮಾರ್ಗಕಾರ ಬೀರಿದ ಪ್ರಭಾವವನ್ನು ಎತ್ತಿಹೇಳುತ್ತದೆ.

ಶಬ್ದಾಲಂಕಾರ: ಅಲಂಕಾರಕ್ಕೆ ಸಂಬಂಧಪಟ್ಟ ದ್ವಿತೀಯ ಪರಿಚ್ಛೇದದ ಹಲವು ವಿಷಯಗಳಲ್ಲಿ ಶಬ್ದಾಲಂಕಾರವೂ ಒಂದು. 'ಹುತ್ತದಲ್ಲಿ ಹುತ್ತ' ಎನ್ನುವಂತೆ ಇದು ಸಂಸ್ಕೃತದಲ್ಲಿ ಅನೇಕ ಭೇದ-ಪ್ರಭೇದಗಳಲ್ಲಿ ಬೆಳೆದು ನಿಂತಿದೆ. ಕಾವ್ಯಾದರ್ಶದಲ್ಲಿ ಬೇಸರು ತರುವಷ್ಟು ಸಂಖ್ಯೆಯಲ್ಲಿ ಕಂಡುಬರುವ ಇವುಗಳಿಂದ (೧) ಗತಪ್ರತ್ಯಾಗತ (ಪದಗತ, ಪಾದಗತ, ಸಮಸ್ತಗತ, ಅರ್ಧಗತ) (೨) ಗೂಢ ಚತುರ್ಥಿ, (೩) ಏಕಾಕ್ಷರಿ, (೪) ದ್ವ್ಯಕ್ಷರಿ, (೫) ಅತಾಲವ್ಯ, (೬) ನಿರೋಷ್ಠ್ಯ, (೭) ಸರ್ವತೋಭದ್ರ, (೮) ನಿರುತ್ತರ, (೯) ಗೋಮೂತ್ರಿಕೆ (೧೦) ಯಮಕ (-ಪ್ರಭೇದಗಳು) (೧೧) ಗೋಪಿತಕ್ರಿಯೆ, (೧೨)ಅರ್ಧಭ್ರಮಣ, (೧೩) ಮುರಜಬಂಧ, (೧೪) ಕ್ರಿಯಾಗೋಪಕ, (೧೫)ಚಕ್ರಬಂಧ, (೧೬) ಪ್ರಹೇಳಿಕೆ: ಭಾವೆ, ನುಸುಳು, ಅಸ್ಪಷ್ಟಾಕ್ಷರ, ವರ್ಣವ್ಯತ್ಯಯ, ಬಿಂದು ಚ್ಯುತಕ, ಒರ್ನುಡಿ, ವರ್ಣಚ್ಯುತಕ, ಸಮಂತಿ ಎಂಬ ಕೆಲವೇ ಪ್ರಕಾರಗಳನ್ನು ಎತ್ತಿಕೊಂಡು, ಮಾರ್ಗಕಾರ ತನ್ನ ಸಂಗ್ರಹಮತಿಯನ್ನು ಮೆರೆದಿದ್ದಾನೆ. ದಂಡಿ ಭಾಮಹರು ಈ ಬಂಧಗಳ ಲಕ್ಷಣ ಲಕ್ಷ್ಯಗಳನ್ನು ಹೇಳಿದರೆ ಮಾರ್ಗಕಾರ ಕೇವಲ ಲಕ್ಷ್ಯಗಳನ್ನು ಕೊಟ್ಟಿರುವನು. ನುಸುಳ್, ಒರ್ನುಡಿ ಕನ್ನಡ ಪದಗಳಾಗಿರುವುದರಿಂದ ಈ ಎರಡು, ಕನ್ನಡಿಗರು ರೂಪಿಸಿದ ಹೊಸ ಬಂಧಗಳಾಗಿರಬೇಕು. ಇಂಥ ಬಣ್ಣಬಣ್ಣದ ಬಂಧಗಳು ಈ ಮೊದಲು ಕನ್ನಡದಲ್ಲಿ ಬೆಳೆದು ಬಂದಿರಬಹುದು. ಇಂತಹ ಕಷ್ಟತರ ಕಸರತ್ತಿಗೆ ಯೋಗ್ಯವಾಗುವಷ್ಟು ಕನ್ನಡ ಹದಗೊಂಡಿರಬಹುದು.

ಅರ್ಥಾಲಂಕಾರ: ಕವಿರಾಜಮಾರ್ಗದ ಮೂರನೆಯ ಪರಿಚ್ಛೇದ ಅಲಂಕಾರಕ್ಕೆ ಮೀಸಲು. ಭಾಮಹನ ೩೨, ದಂಡಿಯ ೩೫, ಮಾರ್ಗಕಾರನ ೩೬ ಅಲಂಕಾರಗಳನ್ನು ಅಭ್ಯಸಿಸುವುದಕ್ಕೆ ಮೊದಲು ಅವುಗಳನ್ನು ಒಂದು ಕ್ರಮದಲ್ಲಿಟ್ಟು ನೋಡಬಹುದು.

ಭಾಮಹ	ದಂಡಿ	ಮಾರ್ಗಕಾರ
—	ಸ್ವಭಾವಾಖ್ಯಾನ ೧	ಜಾತಿ ೧
ರೂಪಕ ೧	ರೂಪಕ ೩	ರೂಪಕ ೬
ದೀಪಕ ೨	ದೀಪಕ ೪	ದೀಪಕ ೨
—	ಆವೃತ್ತಿ ೫	ವ್ಯಾವೃತ್ತಿ ೩೨

---

೧೫೯. ಕ.ಕಾ. ತತ್ವ ಪುಟ ೯

೧೬೦. ಕ.ಮಾ. ಪು. ೨೨೮ ಅ.ಟಿ.

ಉಪಮೆ ೩	ಉಪಮಾ ೨	ಉಪಮಾ ೭
ಆಕ್ಷೇಪ ೪	ಆಕ್ಷೇಪ ೬	ಆಕ್ಷೇಪ ೧೦
ಅರ್ಥಾಂತರನ್ಯಾಸ ೫	ಅರ್ಥಾಂತರನ್ಯಾಸ ೭	ಅರ್ಥಾಂತರನ್ಯಾಸ ೩
ವ್ಯತಿರೇಕ ೬	ವ್ಯತಿರೇಕ ೮	ಅತಿರೇಕ ೪
ವಿಭಾವನಾ ೭	ವಿಭಾವನಾ ೯	ವಿಭಾವನಾ ೨೬
ಸಮಾಸೋಕ್ತಿ ೮	ಸಮಾಸೋಕ್ತಿ ೧೦	ಸಮಾಸೋಕ್ತಿ ೧೬
ಅತಿಶಯೋಕ್ತಿ ೯	ಅತಿಶಯೋಕ್ತಿ ೧೧	ಅತಿಶಯ ೮
ಯಥಾಸಂಖ್ಯೆ ೧೦	ಕ್ರಮ ೧೬	ಯಥಾಸಂಖ್ಯೆ ೫
ಉತ್ಪ್ರೇಕ್ಷೆ ೧೧	ಉತ್ಪ್ರೇಕ್ಷೆ ೧೨	ಉತ್ಪ್ರೇಕ್ಷೆ ೧೨
—	ಹೇತುಃ ೧೩	ಹೇತು ೨೫
—	ಸೂಕ್ಷ್ಮ ೧೪	ಸೂಕ್ಷ್ಮ ೧೩
—	ಲೇಶಃ ೧೫	ಲವ(ಲೇಶ) ೨೭
ಪ್ರೇಯಃ ೧೨	ಪ್ರೇಯಃ ೧೭	ಪ್ರಿಯತರ ೩೩
ರಸವತ್ ೧೩	ರಸವತ್ ೧೮	ರಸವತ್೩೦
ಊರ್ಜಸ್ವಿತ್ ೧೪	ಊರ್ಜಸ್ವಿ ೧೯	ಊರ್ಜಿತ ೩೧
ಪರ್ಯಾಯೋಕ್ತಿಃ ೧೫	ಪರ್ಯಾಯೋಕ್ತಿ ೨೦	ಪರ್ಯಾಯೋಕ್ತಿ ೧೭
ಸಮಾಹಿತ ೧೬	ಸಮಾಹಿತ ೨೧	ಸಮಾಹಿತ ೧೫
ಉದಾತ್ತ ೧೭	ಉದಾತ್ತ ೨೨	ಉದಾತ್ತ ೨೮
ಶ್ಲಿಷ್ಟ ೧೮	ಶ್ಲೇಷಃ ೨೪	ಶ್ಲೇಷ ೧೧
ಅಪಹ್ನುತಿ ೧೯	ಅಪಹ್ನುತಿ ೨೩	ಅಪಹ್ನುತಿ ೨೯
ವಿಶೇಷೋಕ್ತಿ ೨೦	ವಿಶೇಷೋಕ್ತಿ ೨೫	ವಿಶೇಷ ೧೪
ವಿರೋಧಃ ೨೧	ವಿರೋಧ ೨೭	ವಿರೋಧ ೧೮
ತುಲ್ಯಯೋಗಿತ ೨೨	ತುಲ್ಯಯೋಗಿತ ೨೬	ಸದೃಶಯೋಗಿತ ೯
ಅಪ್ರಸ್ತುತಪ್ರಶಂಶೆ ೨೩	ಅಪ್ರಸ್ತುತಪ್ರಶಂಸೆ ೨೮	ಅಪ್ರಸ್ತುತ ೧೯
ವ್ಯಾಜಸ್ತುತಿ ೨೪	ವ್ಯಾಜಸ್ತುತಿ ೨೯	ವ್ಯಾಜಸ್ತುತಿ ೨೪
ನಿದರ್ಶನ ೨೫	ನಿದರ್ಶನ ೩೦	ನಿದರ್ಶನ ೨೦
ಉಪಮಾರೂಪಕ ೨೬	—	—

ಉಪಮೇಯಯೋಪಮೆ ೨೭	—	—
ಸಹೋಕ್ತಿ ೨೮	ಸಹೋಕ್ತಿ ೩೧	ಸಹೋಕ್ತಿ ೨೧
ಪರಿವೃತ್ತಿ ೨೯	ಪರಿವೃತ್ತಿ ೩೨	ಪರಿವೃತ್ತಿ ೨೩
ಸಸಂದೇಹ ೩೦	—	—
ಅನನ್ವಯ ೩೧	—	—
ಉತ್ಪ್ರೇಕ್ಷಾವಯವ ೩೨	—	—
—	ಆಶೀಃ ೩೩	ಆಶೀಃ ೩೪
—	ಸಂಕೀರ್ಣ ೩೪	ಸಂಕೀರ್ಣ ೨೨
—	ಭಾವಿಕಮ್ ೩೫	ಭಾವಿಕಂ ೩೫
—	—	ಧ್ವನಿ ೩೬

ಈ ತುಲನಾತ್ಮಕ ಪಟ್ಟಿಯಿಂದ[೧೬೧] ಕೆಳಗಣ ವಿಷಯಗಳು ನಮ್ಮ ಗಮನಕ್ಕೆ ಬರುತ್ತವೆ.

೧) ಮೂವರ ಅನುಕ್ರಮ ತಾತ್ವಿಕವಾಗಿಲ್ಲ.[೧೬೨]

೨) ಮೂವರ ಯಾದಿ ಒಂದೇ ಅನುಕ್ರಮದಲ್ಲಿಲ್ಲ. ಆದರೆ ಆಕ್ಷೇಪ, ಅರ್ಥಾಂತರನ್ಯಾಸ, ವ್ಯತಿರೇಕ, ವಿಭಾವನಾ, ಸಮಾಸೋಕ್ತಿ, ಅತಿಶಯೋಕ್ತಿ ಎಂಬ; ರಸವತ್, ಊರ್ಜಿತ, ಪರ್ಯಾಯೋಕ್ತಿ, ಸಮಾಹಿತ, ಉದಾತ್ತ ಎಂಬ;ಅಪ್ರಸ್ತುತ ಪ್ರಶಂಸೆ, ವ್ಯಾಜಸ್ತುತಿ, ನಿದರ್ಶನ ಎಂಬ ಮೂರು ಘಟಕಗಳಲ್ಲಿಯ ಅಲಂಕಾರಗಳ ಅನುಕ್ರಮ ಭಾಮಹ ದಂಡಿಗಳಲ್ಲಿ ಒಂದೇ ಬಗೆಯಾಗಿದೆ. ಹೀಗೆ ಕೆಲವು ಅಲಂಕಾರಗಳ ಮಟ್ಟಿಗಾದರೂ ದಂಡಿ ಭಾಮಹರು ಜೊತೆಯಾಗಿ ನಡೆಯುತ್ತಾರೆ. ಆದರೆ ಮಾರ್ಗಕಾರನು ಇವರೊಂದಿಗೆ ಎರಡು ಅಲಂಕಾರಗಳ ವರೆಗೆ ಮಾತ್ರ ಕ್ವಚಿತ್ ಜೊತೆಯಾಗಿ ಬಂದು, ೩ನೆಯ ಅಲಂಕಾರಕ್ಕೆ ದೂರ ಸರಿಯುತ್ತಾನೆ. ಹೀಗಾಗಿ ಅನುಕ್ರಮ ದೃಷ್ಟಿಯಿಂದ ದಂಡಿ-ಭಾಮಹರು ಹೊಂದಿಕೊಳ್ಳುವಷ್ಟು ಈ ಇಬ್ಬರೊಂದಿಗೆ ಮಾರ್ಗಕಾರ ಹೊಂದಿಕೊಳ್ಳುವುದಿಲ್ಲ ಎನಿಸುತ್ತದೆ.

೩) ಭಾಮಹನ ಉಪಮಾರೂಪಕ, ಉಪಮೇಯೋಪಮೆ, ಸಸಂದೇಹ, ಅನನ್ವಯ, ಉತ್ಪ್ರೇಕ್ಷಾವಯವಗಳೆಂಬ ೫ ಅಲಂಕಾರಗಳನ್ನು ಬಿಟ್ಟುಕೊಟ್ಟು ಜಾತಿ, ಆವೃತ್ತಿ, ಹೇತು, ಸೂಕ್ಷ್ಮ, ಲೇಶ, ಆಶೀಃ, ಸಂಕೀರ್ಣ, ಭಾವಿಕಗಳೆಂಬ ೮ ಹೊಸ ಅಲಂಕಾರಗಳನ್ನು ದಂಡಿ ಹೇಳಿದ್ದಾನೆ. ಇದರಿಂದ ಭಾಮಹನ ಅಲಂಕಾರ ಸಂಖ್ಯೆ ೩೨, ದಂಡಿಯಲ್ಲಿ ೩೫ಕ್ಕೇರಿದೆ. ಕಾವ್ಯಾದರ್ಶದ ಈ ಯಾದಿಗೆ ಧ್ವನ್ಯಲಂಕಾರವನ್ನೊಂದು ಹೆಚ್ಚಿಗೆ ಸೇರಿಸಿದ ಕವಿರಾಜಮಾರ್ಗದಲ್ಲಿ ಅಲಂಕಾರ ಸಂಖ್ಯೆ ೩೬ ಆಗಿದೆ.

೪) ಮೂವರಲ್ಲಿಯೂ ಕೆಲವು ಹೆಸರುಗಳು ಬೇರೆಬೇರೆಯಾಗಿವೆ. ಭಾಮಹನ ಯಥಾಸಂಖ್ಯೆ, ಕ್ಲಿಷ್ಟಗಳಿಗೆ

---

೧೬೧. ಈ ಪಟ್ಟಿಯ ಅಲಂಕಾರಗಳ ಮುಂದಣ ಅಂಕಿಗಳು ಆ ಆ ಕೃತಿಗಳಲ್ಲಿಯ ಅಲಂಕಾರಗಳ ಕ್ರಮಸಂಖ್ಯೆಯನ್ನು ಸೂಚಿಸುತ್ತವೆ.

೧೬೨. ಔಪಮ್ಯ ಮೂಲಕವಾದ ಅಲಂಕಾರಗಳು, ವಿರೋಧ ಮೂಲಕವಾದ ಅಲಂಕಾರಗಳು, ಶೃಂಖಲಾ ಮೂಲಕವಾದ ಅಲಂಕಾರಗಳು ಇತ್ಯಾದಿ ಎಂಬಂತೆ ತಾತ್ವಿಕ ವರ್ಗೀಕರಣ ಕಂಡುಬರುವುದಿಲ್ಲ.

ದಂಡಿಯಲ್ಲಿ ಕ್ರಮ, ಶ್ಲೇಷ ಎಂದು ಹೆಸರು. ದಂಡಿಯ ಆವೃತ್ತಿ, ವ್ಯತಿರೇಕ, ಕ್ರಮ, ಲೇಶ, ಪ್ರೇಯಃ, ತುಲ್ಯಯೋಗಿತ, ಅಪ್ರಸ್ತುತ ಪ್ರಶಂಸೆಗಳಿಗೆ ಕವಿರಾಜಮಾರ್ಗದಲ್ಲಿ ವ್ಯಾವೃತ್ತಿ. ಅತಿರೇಕ, ಯಥಾಸಂಖ್ಯೆ, ಲವ, ಪ್ರಿಯತರ, ಸದೃಶಯೋಗಿತ, ಅಪ್ರಸ್ತುತ ಎಂದು ಹೆಸರು. ಹೀಗೆ ಅಲಂಕಾರಗಳ ಹೆಸರಿನ ವಿಷಯದಲ್ಲಿ ದಂಡಿ ಭಾಮಹರು ಎಷ್ಟು ಭಿನ್ನರಾಗಿರುವರೋ ಅದಕ್ಕಿಂತ ಹೆಚ್ಚು ದಂಡಿಯಿಂದ ಮಾರ್ಗಕಾರ ಭಿನ್ನನಾಗಿದ್ದಾನೆ.

ಮೇಲಣ ಪಟ್ಟಿಯಿಂದ ತಿಳಿದುಬರುವ ಈ ಪ್ರಮುಖ ಅಂಶಗಳಲ್ಲದೆ ಪಠ್ಯವನ್ನು ಗಮನಿಸಿದಾಗ ಬೇರೆ ಕೆಲವು ವಿಶೇಷ ಸಂಗತಿಗಳು ಕಂಡುಬರುತ್ತವೆ. ಅವು:

ದಂಡಿಯು ಎಲ್ಲ ಪ್ರಮುಖ ಮತ್ತು ಪ್ರಭೇದ ಅಲಂಕಾರಗಳಿಗೆ ಲಕ್ಷಣ-ಲಕ್ಷ್ಯಗಳನ್ನು ಕೊಟ್ಟರೆ, ಮಾರ್ಗಕಾರನು ಪ್ರಮುಖ ಅಲಂಕಾರಗಳಿಗೆ ಲಕ್ಷ್ಯ-ಲಕ್ಷಣವನ್ನು, ಪ್ರಭೇದಗಳಿಗೆ ಕೇವಲ ಲಕ್ಷ್ಯವನ್ನು ಕೊಡುತ್ತಾನೆ. ಈ ಕೇವಲ ಲಕ್ಷ್ಯಪದ್ಯಗಳ ತುದಿಯಲ್ಲಿ ಇಲ್ಲವೆ ಹೊರಗೆ ಅಲಂಕಾರದ ನಾಮನಿರ್ದೇಶನ ಮಾಡುತ್ತಾನೆ. ಒಮ್ಮೆ ಲಕ್ಷಣ ಹೇಳಿ ಲಕ್ಷ್ಯಕೊಟ್ಟು ದಂಡಿ ಮತ್ತೆ ಲಕ್ಷ್ಯವನ್ನು ಲಕ್ಷಣದ ಒರೆಗಲ್ಲಿಗೆ ಹಚ್ಚಿ ವಿವರಿಸಿದರೆ, ಮಾರ್ಗಕಾರನು ಸಮಾಸೋಕ್ತಿ, ಪರ್ಯಾಯೋಕ್ತಿ, ಅಪ್ರಸ್ತುತಗಳ ವಿಷಯವಾಗಿ ಹೀಗೆ ನಡೆದುಕೊಂಡು ಮಿಕ್ಕವುಗಳ ಬಗೆಗೆ ಮೌನತಾಳುತ್ತಾನೆ. ಹೀಗಾಗಿ ಎಲ್ಲ ಪ್ರಭೇದಗಳಿಗೆ ಲಕ್ಷಣದ ಕೊರತೆ, ಬಹಳಷ್ಟು ಲಕ್ಷ್ಯಗಳಿಗೆ ವಿವರಣೆಯ ಕೊರತೆಗಳು ಕವಿರಾಜಮಾರ್ಗದಲ್ಲಿ ಎದ್ದು ಕಾಣುತ್ತವೆ. ಕಾವ್ಯಾದರ್ಶದ ೩೨ ಉಪಮಾ ಪ್ರಭೇದಗಳನ್ನು ೨೫ಕ್ಕೆ, ೨೬ ಆಕ್ಷೇಪ ಪ್ರಭೇದಗಳನ್ನು ೬ಕ್ಕೆ ಇಳಿಸಿದಂಥ ಸಂಕ್ಷೇಪೀಕರಣಕ್ರಿಯೆ ಮಿಕ್ಕ ಅಲಂಕಾರಗಳ ಪ್ರಸಂಗಗಳಲ್ಲಿಯೂ ಕಂಡುಬರುವುದರಿಂದ ಮೂಲದ ಅರ್ಥಾಲಂಕಾರ ಪರಿಚ್ಛೇದದ ೩೬೮ ಶ್ಲೋಕಗಳು ಇಲ್ಲಿ ೨೦೮ ಕಂದಗಳಿಗೆ ಇಳಿದಿವೆ. ಹೀಗಿದ್ದರೂ ನಿದರ್ಶನಾಲಂಕಾರಕ್ಕೆ ಹತ್ತು, ಉದಾತ್ತಕ್ಕೆ ಎಂಟು ಲಕ್ಷ್ಯಗಳನ್ನು ಕೊಟ್ಟು ವಿಸ್ತಾರಗೊಳಿಸಲಾಗಿದೆ.

ಕವಿರಾಜಮಾರ್ಗದ ಮಿಕ್ಕ ಪರಿಚ್ಛೇದಗಳಿಗಿಂತ ಈ ಪರಿಚ್ಛೇದದಲ್ಲಿ ಕಾವ್ಯಾದರ್ಶದ ಅನುವಾದ, ಅನುಕರಣೆ ಅಧಿಕವಾಗಿದ್ದರೂ ಅಲ್ಲಲ್ಲಿ ಸ್ವತಂತ್ರ ವಿಚಾರಗಳು ಮಿಂಚಿವೆ. ದಂಡಿಯ ರೀತಿಯಲ್ಲಿಯೇ ಆಕ್ಷೇಪಾಲಂಕಾರ ಪ್ರಪಂಚವನ್ನು ನಿರೂಪಿಸಿ, ಅದಕ್ಕೆ ಜೋಡಿಸಿದ 'ವ್ಯತಿರೇಕ ವಿಕಲ್ಪಮಿದು' ಎಂಬ ಮಾತು ಹೆಚ್ಚಿನದು. ವ್ಯತಿರೇಕ ಮತ್ತು ಆಕ್ಷೇಪಗಳ ಬಾಂಧವ್ಯವನ್ನು ಗುರುತಿಸಿ, ಮೂಲಕ್ಕಿಂತ ಒಂದು ಹೆಜ್ಜೆ ಮುಂದು ಹೋದುದಕ್ಕೆ ನಿದರ್ಶನವಿದು.

"ಎರಡು ಭಿನ್ನವಾಕ್ಯಗಳಲ್ಲಿ ಬಿಂಬ ಪ್ರತಿಬಿಂಬ ಭಾವ ಬಂದರೆ ದೃಷ್ಟಾಂತವೆಂದೂ, ಒಂದೇ ವಾಕ್ಯದಲ್ಲಿ ದೃಷ್ಟಾಂತವು ಮೊದಲು ಕಾಣುವಂತಿದ್ದರೆ ನಿದರ್ಶನವೆಂದೂ ನವೀನರು ಇವುಗಳ ವ್ಯತ್ಯಾಸ ಹೇಳುತ್ತಾರೆ."[೧೬೩] ನಿದರ್ಶನಾಲಂಕಾರವನ್ನು ವಿವೇಚಿಸುತ್ತ ಈ ವ್ಯತ್ಯಾಸವನ್ನು-

ಇಂತುದಿತ ಭೇದಮುಂ ದೃ। ಷ್ಟಾಂತಾಳಂಕಾರ ಮಾರ್ಗಮುಂ ಕನ್ನಡದೊಳ್।
ಸಂತತ ಗುಣಮಂ ಕೈಕೊ। ಳ್ವಂತಾಗಿರೆ ಬಗೆದು ಪೇಟ್ಗೆ ಪರಮಕವೀಶರ್॥[೧೬೪]

ಎಂಬ ಪದ್ಯದ ಮೂಲಕ ಮೊಟ್ಟಮೊದಲು ಸೂಚಿಸಿದವನು, ಮಾರ್ಗಕಾರ. ಮೇಲಾಗಿ "ದೃಷ್ಟಾಂತಾಳಂಕಾರಮಾರ್ಗಮಂ ಕನ್ನಡದೊಳ್ ಸಂತತ ಗುಣಮಂ ಕೈಕೊಳ್ವಂತಾಗಿರೆ ಬಗೆದು ಪೇಟ್ಗೆ'ಎಂಬಲ್ಲಿ

---

೧೬೩. ಕ.ಕಾವ್ಯಾಲಂಕಾರ. ಪುಟ ೬೪ ಅ. ಟಿ. (ಕೆ. ಕೃಷ್ಣಮೂರ್ತಿ)

೧೬೪. ಕ.ಮಾ. ೩-೧೫೩

ದೃಷ್ಟಾಂತವು ಕನ್ನಡದ ಜಾಯಮಾನಕ್ಕೆ ತುಂಬ ಒಪ್ಪುವ ಅಲಂಕಾರವೆಂದು ಈತನ ಮತ. ಇದಕ್ಕೆ ಪೋಷಕವೆನ್ನುವಂತೆ ಮೂಲದಲ್ಲಿ ಇಲ್ಲದ ೮-೧೦ ರಾಜನೀತಿ ಬೋಧಕ ಸುಂದರ ಲಕ್ಷ್ಯಪದ್ಯಗಳನ್ನು ಕೊಟ್ಟಿರುವನು. ಇದು ಕನ್ನಡದ ಪರವಾಗಿ ಆಲೋಚಿಸುವ ಈತನ ಮನಸ್ಸಿನ ಪ್ರತೀಕ.

ಭರತನನಾಟ್ಯಶಾಸ್ತ್ರ, ವಿಕ್ರಮೋರ್ವಶೀಯ, ಅಮರಕೋಶ, ಕಾವ್ಯಾದರ್ಶಗಳಲ್ಲಿ ಹೇಳಲಾದ ರಸಗಳು ಎಂಟು. ಒಂಬತ್ತನೆಯ ಶಾಂತರಸದ ಕಲ್ಪನೆ ಭಾರತೀಯರು ಅಧ್ಯಾತ್ಮಜ್ಞಾನವನ್ನು ಸಾಹಿತ್ಯದಲ್ಲಿ ಸಾಕ್ಷಾತ್ಕರಿಸಿಕೊಂಡುದರ ಫಲ. ಹೋರಾಟಮಯ ಮನಸ್ಸು ತುರೀಯ ಅವಸ್ಥೆಯಲ್ಲಿ ಸಾಧಿಸುವ ನಿರ್ವೇದ ಈ ರಸದ ಸ್ಥಾಯಿ. ಅಲಂಕಾರಗಳಿಗೆ ಈ ರಸದ ಕಲ್ಪನೆ ಮೂಡಲು, ನಿವೃತ್ತಿಮಾರ್ಗವನ್ನು ಪ್ರತಿಪಾದಿಸುವ ಬೌದ್ಧ,ಜೈನಮತಗಳೇ ಕಾರಣವೆಂದು ಪಂಡಿತರ ಅಭಿಪ್ರಾಯ. ಪ್ರಾಚೀನ ಕರ್ನಾಟಕ ಜೈನ,ಬೌದ್ಧರ ನೆಲೆವೀಡು. ಮೇಲಾಗಿ ಇಲ್ಲಿ ಲೌಕಿಕ ಆಗಮಿಕ ಕಾವ್ಯಗಳ ಕವಲು ಬಹುಕಾಲದಿಂದ ಬೆಳೆದು ಬಂದಿತು. ಈ ಆಗಮಿಕ ಕಾವ್ಯಗಳಲ್ಲಿ ಸುರಿವ ಶಾಂತರಸದ ಅಮೃತವರ್ಷ ಮಾರ್ಗಕಾರನ ಅನುಭವಕ್ಕೆ ಬಂದಿರಬೇಕು. ಆದುದರಿಂದ ದಂಡಿಯು ರಸವದಲಂಕಾರದ ಪ್ರಸಂಗದಲ್ಲಿ "ಇಹತ್ವಷ್ಟರಸಾಯತ್ತಾ ರಸವತ್ತಾ ಸ್ಮೃತಾಗಿರಾಮ್"[೧೬೫] ಎಂದು ಎಂಟು ರಸಗಳನ್ನು ಹೇಳಿದರೆ, ಮಾರ್ಗಕಾರ "ನವವಿಧ ರಸಂಗಳಂ ಮನ।ಕೆವರೆ ನಿರೂಪಿಸುವ ವಚನ ವಿರಚನೆ ರಸವತ್"[೧೬೬] ಎಂದು ರಸಸಂಖ್ಯೆಯನ್ನು ಒಂಬತ್ತಕ್ಕೆ ಮುಟ್ಟಿಸಿದ್ದಾನೆ.

ವೀರಾದ್ಭುತ ಕರುಣಾ ಶೃಂ।ಗಾರ ಭಯಾನಕ ಸರೌದ್ರ ಭೀಭತ್ಸಮಹಾ।
ಸಾರತರ ಹಾಸ್ಯ ಶಾಂತಾ।ಧಾರಂ ನವವಿಧ ವಿಕಲ್ಪಮಾ ರಸಮಾರ್ಗಂ।।[೧೬೭]

ಎಂಬಲ್ಲಿ ಶಾಂತರಸವನ್ನು ಉಲ್ಲೇಖಿಸಿ-

[ಮಿಗೆ ರ]ಣದೊಳ್ ಪರಿಚಿತ[ಮಾ।] ದ್ವಿಗುಣಮದೋರಂತೆ ಮಟ್ಟಮಿರ್ದುದು ಮತ್ತಂ।
ವಿಗತ ವಿಕಾರಾಕಾರಂ । ಸೊಗಯಿಸುಗುಂ ನಿನ್ನರೂಪ ಶಾಂತಾಧಾರಂ।।[೧೬೮]

ಎಂಬ ಉದಾಹರಣೆಯಿಂದ ಅದರ ಸ್ವರೂಪವನ್ನು ಕಣ್ಣಿಗೆ ಕಟ್ಟಿದ್ದಾನೆ. ಈ ರಸವನ್ನು ಮೊಟ್ಟಮೊದಲು ಉದ್ಘೋಷಿಸಿದವ ಕಾಶ್ಮೀರದ ಉದ್ಭಟ. ಈತನ ಸಮಕಾಲೀನನಾಗಿ ಬಾಳಿದ, ದೂರದ ಕರ್ನಾಟಕದ ಮಾರ್ಗಕಾರನ ಕಿವಿಗೆ ಅದು ಮುಟ್ಟಿರಲಿಕ್ಕಿಲ್ಲ. ಅದಕ್ಕಾಗಿ ಶಾಂತರಸದ ಮಟ್ಟಿಗೆ ಉತ್ತರ ಭಾರತದಲ್ಲಿ ಉದ್ಭಟನಿಗೆ ಸಲ್ಲುವ ಕೀರ್ತಿ, ದಕ್ಷಿಣ ಭಾರತದಲ್ಲಿ ಕವಿರಾಜಮಾರ್ಗಕಾರನಿಗೆ ಸಲ್ಲುತ್ತದೆ.

ಧ್ವನಿ, ಭಾರತೀಯ ಕಾವ್ಯಮೀಮಾಂಸೆಯ ಸಮುದ್ರಮಥನದಲ್ಲಿ ತೇಲಿಬಂದ ಒಂದು ಅಮೃತ ತತ್ತ್ವ. ಇದರ ಪ್ರತಿಷ್ಠಾಪನಾಚಾರ್ಯ ಕಾಶ್ಮೀರದ ಆನಂದವರ್ಧನ (ಕ್ರಿ.ಶ. ೮೫೦) . ಇದೇ ಕಾಲಕ್ಕೆ ಕಾಶ್ಮೀರದಿಂದ ಸಾವಿರಾರು ಮೈಲು ದೂರದಲ್ಲಿರುವ ಕರ್ನಾಟಕದಲ್ಲಿ ನಿಂತು, 'ಧ್ವನಿಯೆಂಬುದಲಂಕಾರಂ' ಎಂದು ಸಾರಿದುದು ಮಾರ್ಗಕಾರನ ಸ್ವತಂತ್ರ ಘೋಷಣೆಯಾಗಿರಬೇಕು. ಧ್ವನಿಗೆ ಆನಂದವರ್ಧನನಲ್ಲಿ ಕಾವ್ಯದ ರಹಸ್ಯವೆಂಬ ವ್ಯಾಪಕ ಅರ್ಥವಿದ್ದರೆ ಮಾರ್ಗಕಾರನಲ್ಲಿ 'ಅಲಂಕಾರ' ಎಂಬ ಸೀಮಿತ ಅರ್ಥವಿದೆ. ಅದೇನೇ ಇದ್ದರೂ ರಸವನ್ನು 'ರಸದಲಂಕಾರ'ವೆಂದು ದಂಡಿ ಭಾಮಹರು ಭಾವಿಸಿದ ರೀತಿಯಲ್ಲಿ, ಮಾರ್ಗಕಾರನು ಧ್ವನಿಯನ್ನು 'ಧ್ವನ್ಯಳಂಕಾರ' ಎಂದು ಭಾವಿಸಿದುದು ಧ್ವನಿಪ್ರಸ್ಥಾನದ ಕೆಳಗಣ ಮಜಲು ಎನಿಸಿದೆ. ಈ ಪ್ರಸಂಗದಲ್ಲಿ -

---

೧೬೫. ಕಾ.ದ. ೨-೨೯೨

೧೬೬. ಕ.ಮಾ. ೧-೧೮೮

೧೬೭. ಕ.ಮಾ. ೩-೧೮೬

೧೬೮. ಕ.ಮಾ. ೩-೧೯೬

ಧ್ವನಿಯೆಂಬುದಳಂಕಾರಂ । ಧ್ವನಿಯಿಸುಗುಂ ಶಬ್ದದಿಂದಮರ್ಥದೆ ದೂಷ್ಯಂ।
ನೆನೆವುದಿದನಿಂತು ಕಮಳದೊ। ಳನಿಮಿಷಯುಗಮೊಪ್ಪಿ ತೋರ್ಪುದಿಂತಿದು ಚೋದ್ಯಂ॥[೧೬೯]

ಎಂದು ಒಂದು ಪದ್ಯದಲ್ಲಿಯೆ ಧ್ವನ್ಯಳಂಕಾರದ ಲಕ್ಷ್ಯ-ಲಕ್ಷಣವನ್ನು ಗಾಢವಾಗಿ ತುಂಬಿದ್ದಾನೆ. ಈ ಪದ್ಯಕ್ಕೆ ಅರ್ಥಹಚ್ಚುವಲ್ಲಿ ತೀ.ನಂ. ಶ್ರೀ[೧೭೦] ಮತ್ತು ಕೆ. ಕೃಷ್ಣಮೂರ್ತಿ[೧೭೧]ಗಳು ತಂತಮ್ಮ ವಿದ್ವತ್‌ಪೂರ್ಣ ಭಿನ್ನಾಭಿಪ್ರಾಯಗಳನ್ನು ಮಂಡಿಸಿದ್ದಾರೆ. ಅದರ ಚರ್ಚೆ ನಮಗೆ ಅಪ್ರಸ್ತುತ. ಆದರೆ ಡಿ.ಎಲ್.ಎನ್. ಅವರು ಈ ಯಾವ ಗದ್ದಲಕ್ಕೂ ಇಳಿಯದೆ ಹೇಳಿದ "ಧ್ವನಿಯೆಂಬುದು ಒಂದು ಅಲಂಕಾರ; ಅದು ಕವಿಪ್ರಯುಕ್ತವಾದ ಶಬ್ದದಿಂದ ಹೊರಹೊಮ್ಮುತ್ತದೆ; ಆ ವಾಚ್ಯಾರ್ಥವನ್ನೇ ಹಿಡಿದುಕೊಂಡು ಹೋದರೆ ಅರ್ಥಹೀನವಾಗಿ ದೂಷ್ಯವಾಗುತ್ತದೆ. 'ಕಮಳದಲ್ಲಿ ಅನಿಮಿಷಯುಗ' ಎಂದರೆ ಕಮಲದಲ್ಲಿ ಎರಡು ಮೀನಗಳು ಎಂಬ ವಾಚ್ಯಾರ್ಥ ದೂಷ್ಯ. 'ಮುಖದಲ್ಲಿ ಎರಡು ಕಣ್ಣುಗಳು' ಎಂಬ ಧ್ವನಿತಾರ್ಥ ಸುಂದರ. ಇದು ಧ್ವನಿಯೆಂಬ ಅಲಂಕಾರ"[೧೭೨] ಎಂಬ ಅರ್ಥ ಸಮಂಜಸವೆನಿಸುತ್ತದೆ. ಒಟ್ಟಿನಲ್ಲಿ ಆನಂದವರ್ಧನನಲ್ಲಿ ಅರಳಿನಿಂತ ಧ್ವನಿತತ್ವದ ದಳ ಬಿಚ್ಚುವಿಕೆಯನ್ನು ಕವಿರಾಜಮಾರ್ಗದಲ್ಲಿ ನಿಸ್ಸಂದೇಹವಾಗಿ ಕಾಣಬಹುದಾಗಿದೆ. ಹೀಗಾಗಿ ಧ್ವನಿತತ್ವವನ್ನು ಆವಿಷ್ಕಾರಗೊಳಿಸಿದ ಕೀರ್ತಿಯ ಬಹುಪಾಲು ಉತ್ತರದ ಆನಂದವರ್ಧನನಿಗೆ ಸಲ್ಲುತ್ತಿದ್ದರೆ, ಭಾಗಶಃ ಪಾಲು ದಕ್ಷಿಣದ ಮಾರ್ಗಕಾರನಿಗೂ ಸಲ್ಲಬೇಕು. ಹೀಗೆ ಉತ್ತರದ ಕಾಶ್ಮೀರದಲ್ಲಿ ಉಗಮಗೊಂಡ ಶಾಂತರಸ ಮತ್ತು ಧ್ವನಿತತ್ವಗಳು ಅದೇ ಕಾಲಕ್ಕೆ ದಕ್ಷಿಣದ ಕರ್ನಾಟಕದಲ್ಲಿಯೂ ಕಂಡುಬರುವುದರಿಂದ, ಈ ಉಭಯ ತತ್ವಗಳ ಮಟ್ಟಿಗೆ ಆ ಕಾಲದ ಕರ್ನಾಟಕವನ್ನು ಕಾವ್ಯಮೀಮಾಂಸೆಯ ಕಾಶ್ಮೀರವೆನ್ನಬಹುದು.

ಮಹಾಕಾವ್ಯ ಲಕ್ಷಣ:ಮಹಾಕಾವ್ಯ, ಕವಿಯ ಮಹೋನ್ನತ ದರ್ಶನದಲ್ಲಿ ಉನ್ಮೀಲನಗೊಳ್ಳುವ ಪಾರಿಜಾತಪುಷ್ಪ. ಮಾನವಕೋಟಿಯ ಜೀವನ ಪ್ರತೀಕವೆನಿಸುವ ಅದು, ಕಲ್ಪಕಲ್ಪಗಳಲ್ಲಿ ಬದುಕುವ ಒಂದು ಜೀವಂತಶಕ್ತಿ. ವ್ಯಾಖ್ಯಾನಕ್ಕೆ ಒಳಗಾಗದ, ಸೂತ್ರಕ್ಕೆ ಸೆರೆಯಾಗದ ಅದನ್ನು ವ್ಯಾಖ್ಯಾನಿಸುವ ಪ್ರಯತ್ನ ದೇಶದೇಶಗಳಲ್ಲಿ ಕಾಲಕಾಲಕ್ಕೆ ನಡೆದಿದೆ; ನಡೆಯುತ್ತಿದೆ.

ಎಲ್ಲ ಆಲಂಕಾರಿಕರಂತೆ ಮಾರ್ಗಕಾರನೂ ಹೇಳುವ ಮಹಾಕಾವ್ಯ ಲಕ್ಷಣ ದಂಡಿಯ ಅನುಕರಣೆ. ಮಹಾಕಾವ್ಯಕ್ಕೆ ಇತಿಹಾಸ ಇಲ್ಲವೆ ಕಥೆ ವಸ್ತುವಾಗಿರಬೇಕು. ಪ್ರತಿಯೊಂದು ಅಧಿಕಾರ ಉದಾತ್ತವಾಗಿರಬೇಕು. ಧರ್ಮ, ಅರ್ಥ, ಕಾಮ, ಮೋಕ್ಷಸುಖ ಅದರ ಪ್ರಯೋಜನ. ಪುರ, ಜನಪದ, ಪರ್ವತ, ಸೂರ್ಯ-ಚಂದ್ರೋದಯ, ಉದ್ಯಾನಲೀಲೆ, ಜಲಕ್ರೀಡೆ, ಗೋಷ್ಠಿ, ವಿವಾಹ, ಕುಮಾರಸಂಭವ, ಯುದ್ಧ, ಮಂತ್ರಾಲೋಚನೆ, ದೂತಕಾರ್ಯ ಮೊದಲಾದುವು ಘಟನೆಗಳು, ವರ್ಣನೆಗಳು, ಕಥಾನಾಯಕನ ಅಭ್ಯುದಯವನ್ನು ಮುನ್ನಡೆಸಲು ಸೊಗಸಾದ ಶಬ್ದ, ಅರ್ಥ, ಭಾವ, ರಸಗಳು ಮೇಳವಿಸಿರಬೇಕು. ವಿವಿಧವೃತ್ತ, ಜಾತಿವೃತ್ತಗಳಲ್ಲಿ ಮುಂದುವರಿಯಬೇಕು ಎಂಬಿವೇ ಮೊದಲಾದ ಸರ್ವಸಾಮಾನ್ಯ ಲಕ್ಷಣಗಳನ್ನು ದಂಡಿಯಂತೆ ಪಟ್ಟಿಮಾಡಿ ಹೇಳಿರುವುದರಿಂದ, ಕವಿರಾಜಮಾರ್ಗದಲ್ಲಿ ಈ ಪ್ರಸಂಗದಲ್ಲಿ ಹೇಳಿಕೊಳ್ಳುವ ಹೊಸತನವಿಲ್ಲ.

---

೧೬೯. ಕ.ಮಾ. ೩-೨೦೮

೧೭೦. ಭಾ.ಕಾ.ಮೀ. ಪುಟ ೪೫೮-೬೦

೧೭೧. ಭಾ.ಕಾ. ಮೀ. ಪುಟ ೫೦-೫೨

೧೭೨. ಕ.ಮಾ. ಟಿಪ್ಪಣಿಗಳು, ಪುಟ, ೩೬೫, ಅ.ಟಿ. (ಎಂ.ವಿ.ಸೀ.)

ಒಟ್ಟಿನಲ್ಲಿ ಕೆಲವು ಮುಖ್ಯ ಕವಲುಗಳನ್ನು ಬಿಟ್ಟರೆ, ಅರ್ಥಾಲಂಕಾರಗಳ ಮಟ್ಟಿಗೆ ಅಧಿಕ ಪ್ರಮಾಣದ ಅದೆ ಅದೆತನ ತೋರಿಬರುತ್ತಿದ್ದು, ಧ್ವನಿ ಶಾಂತರಸಗಳ ವಿಷಯದಲ್ಲಿ ಸ್ವಂತಿಕೆ ಪ್ರಕಾಶಿಸುತ್ತದೆ. ಮಿಕ್ಕ ಕಾವ್ಯಪ್ರಭೇದ, ದೋಷ, ಗುಣ, ಮಾರ್ಗ, ಶಬ್ದಾಲಂಕಾರಗಳಲ್ಲಿ ಕೆಲವು ಹೊಸ ಅಂಶಗಳು ಆಗಾಗ ಮಿಂಚುತ್ತವೆ.

❖❖

೩

ಅ. ಶಾಸನ ಸಾಹಿತ್ಯ

ಆ. ಶಾಸನ ಕವಿಗಳು

ಶಾಸನಸಾಹಿತ್ಯ

ಶಾಸನಗಳು, ಪ್ರಾಚೀನ ಬದುಕಿನ ಸಮಸ್ತಸಂವೇದನೆಗಳ ಪ್ರಾಮಾಣಿಕ ಧ್ವನಿ. ಇವುಗಳ ಅಧ್ಯಯನ ಹಲವು ದೃಷ್ಟಿಗಳಿಂದ ಪ್ರಯೋಜಕವೆನಿಸಿದೆ. ಸಾಮಾನ್ಯರ ಸಹಜಭಾಷೆ, ಕವಿಗಳ ಕಾವ್ಯಭಾಷೆಯನ್ನು ಪ್ರತಿನಿಧಿಸುತ್ತ ಸಾಗಿಬಂದ ಇವನ್ನು ಹೊರತುಪಡಿಸಿ ಬರೆದ ಭಾಷಾಚರಿತ್ರೆ ಸಾಹಿತ್ಯಚರಿತ್ರೆಗಳು ಯಾವ ಕಾಲಕ್ಕೂ ಅಪೂರ್ಣ. ವಸ್ತುಸ್ಥಿತಿ ಹೀಗಿರುವಾಗ ಪಂಪಪೂರ್ವ, ಅದರಲ್ಲಿಯೂ ಕವಿರಾಜಮಾರ್ಗಪೂರ್ವಸಾಹಿತ್ಯದ ಅಳಿದುಳಿದ ಆಸ್ತಿಯಾಗಿರುವ ಶಾಸನಗಳನ್ನು ಉಪೇಕ್ಷಿಸುವಂತಿಲ್ಲ. ಇಷ್ಟೇ ಏಕೆ, ಒಂದರ್ಥದಲ್ಲಿ ಇವುಗಳ ಚರಿತ್ರೆಯೇ ಈ ಅಜ್ಞಾತಯುಗದ ಸಾಹಿತ್ಯಚರಿತ್ರೆಯಾಗಿದೆ.

ಸಾಹಿತ್ಯವೃಕ್ಷ ಭೂಮಿಯ ಆಳಕ್ಕೂ ಬೇರನ್ನು ಚಾಚಿ ಕಾವ್ಯಸತ್ವವನ್ನೆಳೆದುಕೊಳ್ಳುವುದರಿಂದ ಕವಿರಾಜಮಾರ್ಗ ಪರಿಸರದ ಶಾಸನಸಾಹಿತ್ಯವನ್ನು ಸಮೀಕ್ಷಿಸಬೇಕಾದ ನಾವು ದೂರದ ಅಶೋಕನ ಶಾಸನಗಳವರೆಗೂ ಕೈಚಾಚಬೇಕಾಗುತ್ತದೆ. ಪ್ರಾಕೃತ, ಸಂಸ್ಕೃತ ಮತ್ತು ಕನ್ನಡ[1] ಶಾಸನಗಳನ್ನೊಳಗೊಂಡ ಈ ದೀರ್ಘ ಅವಧಿಯನ್ನು,

೧. ಅಶೋಕನ ಶಾಸನ ಮತ್ತು ಹಲ್ಮಿಡಿ ಶಾಸನದ ಮಧ್ಯಕಾಲ.

೨. ಹಲ್ಮಿಡಿ ಶಾಸನ ಮತ್ತು ಕವಿರಾಜಮಾರ್ಗದ ಮಧ್ಯಕಾಲ.

೩. ಕವಿರಾಜಮಾರ್ಗ ಮತ್ತು ಪಂಪನ ಮಧ್ಯಕಾಲ.

ಎಂದು ವಿಭಾಗಿಸಿ ಆ ಆ ಕಾಲದ ಶಾಸನಸಾಹಿತ್ಯವನ್ನು ಕೆಳಗಿನಂತೆ ವಿವರಿಸಬಹುದು.

೧. ಅಶೋಕ ಶಾಸನ ಮತ್ತು ಹಲ್ಮಿಡಿಯ ಶಾಸನದ ಮಧ್ಯಕಾಲ :

ಕರ್ನಾಟಕದಲ್ಲಿ ಕಂಡುಬರುವ ಪ್ರಥಮ ಬರೆವಣಿಗೆ ಅಶೋಕನ ಶಾಸನ, ಪ್ರಥಮ ಕನ್ನಡ ಬರೆವಣಿಗೆ ಹಲ್ಮಿಡಿ ಶಾಸನ.[2] ಒಂದರ ಕಾಲ ಕ್ರಿ.ಶ. ಪೂರ್ವ ೩೦೦, ಇನ್ನೊಂದರ ಕಾಲ ಕ್ರಿ.ಶ. ೪೫೦.

---

೧. ಶಾಸನ ಸಂಪುಟ ಮತ್ತು ಪ್ರಮುಖ ಪತ್ರಿಕೆಗಳಲ್ಲಿ ಈವರೆಗೆ ಪ್ರಕಟವಾದ ಪಂಪಪೂರ್ವಯುಗದ ಕನ್ನಡ ಶಾಸನಗಳ ಸಂಖ್ಯೆ ಸುಮಾರು ಒಂದು ಸಾವಿರವೆಂದು ನನ್ನ ಎಣಿಕೆ.

೨. 'ಕನ್ನಡಸಾಹಿತ್ಯದ ಪ್ರಾಚೀನತೆ' (ಮೂರು ಉಪನ್ಯಾಸಗಳು, ಪುಟ ೧೦೧) 'ಕನ್ನಡಸಾಹಿತ್ಯದ ಹಾಗೂ ಭಾಷೆಯ ಹಳಮೆ' (ಉಪಾಯನ ೯೪) ಈ ಲೇಖನಗಳಲ್ಲಿ ಗೋವಿಂದ ಪೈಗಳು ಹಲ್ಮಿಡಿಯ ಹಿಂದಣ ಶಾಸನಗಳನ್ನು ಸೂಚಿಸಿರುವರು. ಈ ಸೂಚನೆ ವಿದ್ವಾಂಸರಿಂದ ಇನ್ನೂ ಮನ್ನಣೆ ಪಡೆಯಬೇಕಾಗಿದೆ. ಇದಲ್ಲದೆ ರೈಸ್ ಮುಂತಾದವರು ಸೂಚಿಸುವ ಹಲ್ಮಿಡಿ ಶಾಸನಕ್ಕೆ ಪ್ರಾಚೀನವಾದ ಶಾಸನಗಳನ್ನು ಕೆಲವರು ಕೃತಕವೆಂದು ಸಾಧಿಸಿರುವರು. (GOKI, Introduction xiv-xviನೋಡಿರಿ)

ಈ ಮಧ್ಯದ ೭೫೦ ವರ್ಷಗಳ ಅವಧಿಯಲ್ಲಿ ಕೆಲವು ಬ್ರಾಹ್ಮೀ ಲಿಪಿಯ ಪ್ರಾಕೃತ ಶಾಸನಗಳು ಮಾತ್ರ ಲಭಿಸುತ್ತಿದ್ದು ಇವುಗಳಲ್ಲಿ ಅಶೋಕನ ಶಾಸನಗಳು ಆರು; ಮಿಕ್ಕ ಶಾಸನಗಳು ಆರೇಳು. (ಈ ಗ್ರಂಥದ ಎರಡನೆಯ ಅವೃತ್ತಿ ಪ್ರಕಟವಾಗುವ ಹೊತ್ತಿಗೆ ಅಶೋಕನ ಪ್ರಾಕೃತ ಶಾಸನಗಳು ೧೪, ಮಿಕ್ಕ ಪ್ರಾಕೃತ ಶಾಸನಗಳು ಸುಮಾರು ೧೦೦ ಸಿಕ್ಕಿವೆ).

ಬೌದ್ಧಧರ್ಮದ ಬೆಳಕಿನಲ್ಲಿ ವಿಶ್ವಸಂದೇಶವನ್ನು ಬೋಧಿಸುವ ಅಶೋಕನ ಶಾಸನಗಳು, ಉತ್ತರದ ಅಫಘಾನಿಸ್ಥಾನದಿಂದ ದಕ್ಷಿಣ ಕರ್ನಾಟಕದ ವರೆಗೆ ವ್ಯಾಪಿಸಿನಿಂತಿವೆ. ಇವುಗಳಲ್ಲಿ ರಾಯಚೂರು ಜಿಲ್ಲೆಯ ಪಾಲ್ಕಿಗುಂಡ, ಗವಿಮಠ, ಮಸ್ಕಿ;ಚಿತ್ರದುರ್ಗ ಜಿಲ್ಲೆಯ ಜಟಿಂಗರಾಮೇಶ್ವರ, ಗಿರಿಸಿದ್ಧಾಪುರ, ಬ್ರಹ್ಮಗಿರಿಗಳಲ್ಲಿ ಲಭಿಸಿದ ೬ (ಇತ್ತೀಚೆ ೧೪) ಶಾಸನಗಳು ಕರ್ನಾಟಕಕ್ಕೆ ಸಂಬಂಧಿಸಿದುವು.[೩] ಬದುಕಿನ ಮೂಲಭೂತ ಮೌಲ್ಯಗಳನ್ನು ನಿರಾಡಂಬರಶೈಲಿಯಲ್ಲಿ ಸಾರುವ ಇವು ಪ್ರಾಚೀನ ಕರ್ನಾಟಕದ ಪ್ರಥಮ ನೀತಿಪಾಠಗಳು.

ಕನ್ನಡನಾಡಿನ ಪ್ರಥಮ ಬರೆವಣಿಗೆ ಅಶೋಕನ ಈ ಬ್ರಾಹ್ಮೀಶಾಸನಗಳು, ಕನ್ನಡಲಿಪಿಯ ಮಾತೃಮೂಲ ಬ್ರಾಹ್ಮೀಲಿಪಿ ಎಂಬಿವು ಇತಿಹಾಸ ಸಮ್ಮತವಾಗಿರುವುದರಿಂದ, ಆಡುಮಾತು ಲಿಪಿಗೊಳ್ಳುವ ರಹಸ್ಯವನ್ನು ಕನ್ನಡಿಗರ ಗಮನಕ್ಕೆ ತಂದ ಪ್ರಥಮಕೀರ್ತಿ ಇವುಗಳಿಗೆ ಸಲ್ಲುವಂತೆ ತೋರುತ್ತದೆ. ಇದು ನಿಜವಿದ್ದಲ್ಲಿ 'ಬರೆವಣಿಗೆಯ ಕನ್ನಡ'ದ ದೃಷ್ಟಿಯಿಂದ, ಅಶೋಕನ ಶಾಸನಗಳು ಮಾತೃಸ್ಥಾನದಲ್ಲಿ ನಿಲ್ಲುತ್ತವೆ. ಇವುಗಳ ತರುವಾಯ-

೧) ಮಳವಳ್ಳಿ-ಚುಟುವಂಶದ ಸಾತಕಣ್ಣಿ[೪]
೨) ಮಳವಳ್ಳಿ-ಕದಂಬವಂಶದ ಶಿವಸ್ಕಂದವರ್ಮ[೫]
೩) ಮ್ಯಾಕದೋನಿ-ಸಾತವಾಹನ ಸಿರಿಪುಳುಮಾಯಿ[೬]
೪) ಬನವಾಸಿ-ಸಾತಶಿವಖದನಾಗಸಿರಿ (ಚುಟು)[೭]
೫) ಚಂದ್ರವಳ್ಳಿ- ಕದಂಬ ಮಯೂರವರ್ಮ[೮]
೬) ಹಿರೇಹಡಗಲಿ-ಪಲ್ಲವ ಶಿವಸ್ಕಂದವರ್ಮ[೯]

ಈ ಆರು ಪ್ರಾಕೃತಶಾಸನಗಳು (ಇತ್ತೀಚೆ ಸುಮಾರು ೧೦೦) ಕರ್ನಾಟಕದಲ್ಲಿ ಲಭಿಸಿವೆ.[೧೦] ಅಶೋಕನ ಶಾಸನಗಳಲ್ಲಿ ಒಬ್ಬನೇ ವ್ಯಕ್ತಿ, ಒಂದೇ ಧರ್ಮ, ಒಂದೇ ಉದ್ದೇಶವಿದ್ದರೆ ಇಲ್ಲಿ ಹಲವು ವ್ಯಕ್ತಿ, ಹಲವು ಧರ್ಮ, ಹಲವು ಉದ್ದೇಶಗಳು ಕಂಡುಬರುವುದು ಕರ್ನಾಟಕದ ಶಾಸನವಾಹಿನಿ ಕವಲೊಡೆಯುತ್ತಿರುವುದರ ನಿದರ್ಶನ. ಹೀಗೆ ಕನ್ನಡ ನೆಲದಲ್ಲಿ ಪಸರಿಸುತ್ತ ಬಂದ ಪ್ರಾಕೃತಭಾಷೆ, 'ಮಱುಗುವ ಪಾಲ್ಗಳೆಯ ಪನಿಗಳಂ ಬೆರಸಿದವೋಲ್'[೧೧] ಕಾಡುತ್ತಿದ್ದ ಸಂಸ್ಕೃತದ ಕಾಠಿಣ್ಯವನ್ನು ಕನ್ನಡಕ್ಕೆ ಮೃದುಗೊಳಿಸಿಕೊಟ್ಟು 'ಅಚ್ಚಗನ್ನಡಂ ಬೇಟ್ಪರ ಕೈವೊಕ್ಕನಿಧಿ'[೧೨] ಎಂಬ ಕೀರ್ತಿಗಳಿಸಿತು. ಸಂಸ್ಕೃತವನ್ನು ಬಳಸುವ ಒಂದು ಅನುಕೂಲ ಮಾರ್ಗವನ್ನು ತೆರೆದುಕೊಟ್ಟು ಕನ್ನಡದ ಪದಸಂಪತ್ತಿಯನ್ನು ಹೆಚ್ಚಿಸಿತು.

---

೩. Corpus inscriptionum Indicarum Vol. I (Inscriptions of Ashoka) -E Hultzsch p. 174, 175, 178, 179.ಮತ್ತು HAS Volume x ನೋಡಿರಿ.

೪. E.C. vii-ಶಿಕಾರಿಪುರ 263 (A.D. 150);

೫. E.C. viiಶಿಕಾರಿಪುರ 264 (A.D. 250);

೬. E.I. xiv P. ೧೫೨

೭. S.I.I. xx No. 1

೮. M.A.R. 1929 P. 50

೯. E.I.I.P. 2

೧೦. ಇತ್ತೀಚೆಗೆ ಗುಲ್ಬರ್ಗಾ ಜಿಲ್ಲೆಯ ಸನ್ನತಿ ಗ್ರಾಮದಲ್ಲಿ ಪ್ರಾಕೃತ ಬರಹಗಳು ದೊರೆತಿವೆ.

೧೧. ಕ.ಮಾ. ೧-೫೮

೧೨. ಶ.ಮ.ದ. ಸೂ. ೩೧೪

ಒಟ್ಟಿನಲ್ಲಿ ಕನ್ನಡಕ್ಕೆ ಬರೆವಣಿಗೆಯ ದಾರಿ ತೋರಿಸಿದ, ಕನ್ನಡ ಶಬ್ದಭಾಂಡಾರ ವಿಸ್ತಾರಗೊಳ್ಳಲು ದಾರಿಮಾಡಿಕೊಟ್ಟ ಮೊದಲ ಉಪಕಾರ ಈ ಪ್ರಾಕೃತ ಬರೆವಣಿಗೆ ಮತ್ತು ಪ್ರಾಕೃತಭಾಷೆಗಳಿಗೆ ಸಲ್ಲುತ್ತದೆ. ಈ ಹನ್ನೆರಡು (ಇತ್ತೀಚೆ ೧೪+೧೦೦) ಶಾಸನಗಳು ಮುಗಿಯುವಲ್ಲಿ ಸಂಸ್ಕೃತ-ಕನ್ನಡವೆಂಬ ಇನ್ನೆರಡು ಭಾಷೆಯ ಶಾಸನಗಳು ಈ ನಾಡಿನಲ್ಲಿ ಕಾಣಿಸಿಕೊಳ್ಳಲಾರಂಭಿಸಿವೆ.

೨. ಹಲ್ಮಿಡಿಶಾಸನ ಮತ್ತು ಕವಿರಾಜಮಾರ್ಗದ ಮಧ್ಯಕಾಲ :

ಬ್ರಾಹ್ಮೀಲಿಪಿ ಕರ್ನಾಟಕದಲ್ಲಿ ವಿಕಾಸಗೊಳ್ಳುತ್ತ ಬಂದ ಇತಿಹಾಸ ಮತ್ತು ಪ್ರಾರಂಭದ ಕನ್ನಡ ಬರೆವಣಿಗೆಗಳು ಪರಸ್ಪರ ಸಂಧಿಸಿರುವ ಸಾಧ್ಯಾಸಾಧ್ಯತೆಯನ್ನು ಊಹಿಸಿದರೆ, ಸುಮಾರು ೨-೩ನೆಯ ಶತಮಾನದಲ್ಲಿ ಕನ್ನಡಭಾಷೆ ಲಿಪಿಗಿಳಿಯಲು ಮೊದಲು ಮಾಡಿದೆ ಎನಿಸುತ್ತದೆ.[೧೩] ಈ ವರೆಗೆ ಬಾಯಿಯಲ್ಲಿ ದುಡಿಯುತ್ತಿದ್ದ ಭಾಷೆ ಸಾಹಿತ್ಯಗಳಿಗೆ ಲಿಪಿ ಬಂದುದು, ಕನ್ನಡಕ್ಕೆ ಕಾಲು ಬಂದಂತಾಯಿತು. ಈ ಅನುಕೂಲದಿಂದಾಗಿ, ನಾಲಗೆಯಲ್ಲಿ ನೆಯ್ದು ನೆನಪಿನ ಪುಸ್ತಕದಲ್ಲಿ ಬಿಡಿ ಪದ್ಯಗಳನ್ನು ಹಿಡಿದಿಡುತ್ತಿದ್ದ ಕನ್ನಡಿಗರ ಸಾಹಿತ್ಯನಿರ್ಮಾಣ, ದೊಡ್ಡಕಾವ್ಯ ನಿರ್ಮಾಣದತ್ತ ಮುನ್ನಡೆಯಿತು. ಆದರೆ ಭಾಷೆಯನ್ನು ಬರೆಹದಲ್ಲಿ ಅಳವಡಿಸಲು, ಕೆಲವೊಂದು ಅವಧಿ ಅವಶ್ಯ. ಈ ಸಮಯದಲ್ಲಿ ಲಿಪಿ ಸಾಮರಸ್ಯಕ್ಕೆ ಹೆಣಗುತ್ತಿರುವ ಕನ್ನಡಭಾಷೆಗೆ, ಲಿಪಿಯೊಂದಿಗೆ ನುರಿತ ಸಂಸ್ಕೃತವನ್ನು ಸ್ವೀಕರಿಸುವುದು 'ನೀರಿಟಿಯದ ಗಂಟಲೊಳ್ ಕಡುಬಂ ತುಱುಕಿದಂತೆ' ಅನಿವಾರ್ಯವಾಯಿತು. ಇದರಿಂದ ಬರೆವಣಿಗೆಯಲ್ಲಿ ವಿಷಮಶೈಲಿ ತಲೆದೋರುವುದು ಸಹಜ. ಇದಕ್ಕೆ ಉತ್ತಮ ಉದಾಹರಣೆ ಹಲ್ಮಿಡಿ ಶಾಸನ.

೧. ಜಯತಿ ಶ್ರೀ ಪರಿಷ್ವಙ್ಗ ಶ್ಶಾರ್ಙ್ಗ[ಮ್ಯಾನತಿ]ರಚ್ಯುತಃ ದಾನವಾ
ಕ್ಷ್ಣೋೀರ್ಯುಗಾನ್ತಾಗ್ನಿಃ [ಶಿಷ್ಟಾನಾನ್ತು] ಸುದರ್ಶನಃ
೨. ನಮಃ ಶ್ರೀಮತ್ಕದಂಬಪನ್ತ್ಯಾಗಸಂಪನ್ನನ್ಕಲಭೋರ[ನಾ] ಅರಿ ಕ
೩. ಕುಸ್ಥ ಭಟ್ಟೋರನಾಳೆ ನರಿದಾವಿ[ಳೆ]ನಾಡುಳ್ ಮೃಗೇಶನಾ
೪. ಗೇನ್ದ್ರಾಭೀಳರ್ಭ್ಬಟಹರಪ್ಪೋರ್ ಶ್ರೀಮೃಗೇಶನಾಗಾಹ್ವಯ
೫. ರಿರ್ವ್ವರಾ ಬಟರಿಕುಲಾಮಲವ್ಯೋಮತಾರಾಧಿನಾಥನ್ನಳಪ
೬. ಗಣಪಶುಪತಿ ಮಾದಕ್ಷಿಣಾಪಥ ಬಹುಶತಹವನಾ
೭. ಹವದು[ಳ್] ಪಶುಪ್ರದಾನ ಶೌರ್ಯೋದ್ಯಮ ಭರಿತೋ[ನ್ದಾನ]ಪ
೮. ಶುಪತಿಯೆನ್ದು ಪೊಗೞೆಪ್ಪೊಟ್ಟಣ ಪಶುಪತಿ
೯. ನಾಮಧೇಯನಾ ಸರಕ್ಕೆಲ್ಲಭಟರಿಯಾ ಪ್ರೇಮಾಲಯ
೧೦. ಸುತನ್ಗೆ ಸೇನ್ದ್ರಕ ಬಣೋಭಯದೇಶದಾ ವಿರಾಪುರುಷ ಸಮಕ್ಷ
೧೧. ದೆ ಕೇಕಯ ಪಲ್ಲವರಂ ಕಾದೆಱಿದು ಪೆತ್ತಜಯನಾ ವಿಜ
೧೨. ಅರಸನ್ಗೆ ಬಾಳ್ಗೞ್ಚು ಪಲ್ಮಡಿಉಂ ಮೂೞಿವಳ್ಳಿಉಂ ಕೊ
೧೩. ಟ್ಟಾರ್ ಬಟಾರಿಕುಲದೊನಳುಕದಮ್ಬನ್ಕಳ್ದೊನ್ ಮಹಾಪಾತಕನ್

---

೧೩. ಕ.ಗ್ರ.ಸಂ. ಪುಟ ೩೨

೧೪.	ಇರ್ವ್ವರುಂ ಸಟ್ಬುಜ್ಜದರ್ ವಿಜಾರಸರುಂ ಪಲ್ಮಡಿಗೆ ಕುಱು
೧೫.	ಮ್ಬಿಡಿವಿಟ್ಟಾರ್ ಅದಾನಳಿವೊನ್ಗೆ ಮಹಾಪಾತಕಮ್ ಸ್ವಸ್ತಿ
೧೬.	ಭಟ್ಟರ್ಗ್ಗೀಗಟ್ಟಿಗೆ ಒಡ್ಡಲಿ ಆಪತ್ತೊನ್ದಿವಿಟ್ಟಾರಕರ[೧೪]

ಇಲ್ಲಿ 'ತ್ಯಾಗಸಂಪನ್ನಂ' 'ವ್ಯಗೇಶನಾಗೇನ್ದ್ರಾಭೀಳರ್' 'ವ್ಯಗೇಶನಾಗಾಹ್ವಯರ್' 'ಕುಲಾಮಲವ್ಯೋಮತಾರಾಧಿನಾಥನ್' 'ಪಶುಪ್ರದಾನಶೌರ್ಯೋದ್ಯಮಭರಿತೋನ್' ಎಂಬ ಬಂಧುರ ಸಂಸ್ಕೃತ ರೂಪಗಳ ಜೊತೆಗೆ 'ಪೊಗಟಿಪ್ಪೊಟ್ಟಣ' ಎಂಬ ಕ್ಲಿಷ್ಟಕರ್ಮಣಿ; 'ಪಲ್ಮಡಿಉಂ ಮೂಟಿವಳ್ಳಿಉಂ' ಎಂಬ ಶಿಥಿಲಸಂಧಿ, 'ಬಟಾರಿ ಕುಲದೋನಳುಕದಮ್ಬುನ್ಕಳ್ದೊನ್' ಎಂಬ ಸಂದಿಗ್ಧವಾಕ್ಯಗಳ ಕನ್ನಡವನ್ನು ನೋಡಬಹುದು.

ಇಲ್ಲಿಂದ ಒಂದು ಶತಮಾನದೊಳಗೆ ಹುಟ್ಟಿದ ಗಂಗರ ಒಂದು ಶಾಸನ (ಕ್ರಿ.ಶ. ೫೨೦-೫೫೦) ಹೀಗಿದೆ:

> ಸ್ವಸ್ತಿಶ್ರೀ ನಿವ್ವನೀತರಾ ಕಿಜಿಯಾ ಮಗನ್ದಿ
> ರ್ಕದುವಟ್ಟಿಯರಿನ್ದಮ್ ವಲ್ಲವರಸರಿನ್ದ
> ಜ್ಕೊಗೊಣ್ಡಪದ ಸೂಡಿದೊರಾ ಅನುಜೊ
> ಇನ್ದು ಕನಲ್ಲೊಳಿನನ್ದಿಯಾಲರಾ ವಿಟ್ಟುದು ಪಡೆ
> ವೈಲಾಮು ಅಮಸಪಾಲಮ್ ಇದಾನಟಿದೊ
> ನ್ನಾಳನ(ಟಿ)ಪುದೊ ಪಞ್ಚ ಮಾಪಾತಗಮಕ್ಕುಂ
> ಸ್ವಸ್ತಿಶ್ರೀ ಅವ್ವೋರಯ್ಪದಿವಕ್ಕ್ರ ಪದಿಕ್ಕಣ್ಡುಗ
> ನಲ್ವತ್ಥವಿ................ ದ ಮರಮಸುಕೆಯ
> ಇಉರಾ ಸುಕನ್ದೇವತು.[೧೫]

ನೂರಕ್ಕೆ ತೊಂಬತ್ತರಷ್ಟು ಕನ್ನಡ ಪದಗಳಿದ್ದರೂ ಇಲ್ಲಿ ಹ್ರಸ್ವ, ದೀರ್ಘ, ಒತ್ತು ಮತ್ತು ಸಂಧಿದೋಷಗಳು ತುಂಬಿನಿಂತಿವೆ. ಲಿಪಿಯೊಂದಿಗೆ ಭಾಷೆ ಹೊಂದಿಕೊಳ್ಳಲು ಹೆಣಗುತ್ತಿರುವುದರ ದ್ಯೋತಕವೆಂಬಂತೆ ಬರವಣಿಗೆಯ ತುಂಬೆಲ್ಲ ತೊಡಕು ತೊಡಕು. ಮಾತನಾಡಲು ಕಲಿತ ಮಗು ಅದನ್ನು ಹೊಸದಾಗಿ ಲಿಪಿಗಿಳಿಸುವಲ್ಲಿ ಎಡಹುತ್ತಿರುವ ರೀತಿಯಂತಿದೆ ಇದು.

ತರುವಾಯದ ೫೦ ವರ್ಷಗಳಲ್ಲಿ ಹುಟ್ಟಿದ ಚಾಳುಕ್ಯ ಮಂಗಳೀಶನ ಶಾಸನ (ಕ್ರಿ.ಶ. ೫೯೭-೬೦೯) ಹೀಗಿದೆ:

> ಸ್ವಸ್ತಿ ಶ್ರೀಮತ್ ಪ್ರಿಥಿವಿವಲ್ಲಭ ಮಂಗಲೀಸನಾ
> ಕಲ್ಮನೆಗೆ ಇತ್ತೊಂದು, ಲಂಜಿಗೇಸರಂ. ದೇವರ್ಕೆ ಪೂನಿಱುವ
> ಮಾಲಕಾರರ್ಗ್ಗೆ ಅರ್ದ್ಧವಿಸದಿ ಇತ್ತೊದಾನಟಿವೊನ್
> ಪಞ್ಚಮಹಾಪಾತಕನಕುಂ ಎಟನೆಯಾ ನರಕದಾ ಪುಟು ಅಕುಂ[೧೬]

---

೧೪. M.A.R. 1936 No. 16 ಕೊನೆಯ ಸಾಲು ಶಾಸನದ ಎಡಪಕ್ಕದಲ್ಲಿ ಬರೆಯಲ್ಪಟ್ಟಿದೆ.
೧೫. E.C. vi. ಚಿಕ್ಕಮಗಳೂರ ೫೦ ಸಿರಗುಂದ (ಕ್ರಿ.ಶ. ೪೫೦ ಎಂದೂ ಊಹಿಸಿರುವರು)
೧೬. Ind. Ant. x, p. 60೧೫.

ಬಾದಾಮಿ ಚಾಲುಕ್ಯರ ಈ ಪ್ರಾಚೀನತಮ ಶಾಸನದಲ್ಲಿ ಭಾಷೆ ತಕ್ಕಮಟ್ಟಿಗೆ ಲಿಪಿಯೊಂದಿಗೆ ಪಳಗಿದ ರೀತಿಯನ್ನು, ವಾಕ್ಯದ ತೊಡಕು ಬಿಡಿಸಿಕೊಂಡಿರುವ ಪ್ರಗತಿಯನ್ನು, ಸಂಸ್ಕೃತದೊಂದಿಗೆ ಸಾಧಿಸಿದ ಮೈತ್ರಿಯನ್ನು ಕಾಣಬಹುದು.

ಹೀಗೆ ಭಾಷೆ ಲಿಪಿಗಳ ಅನ್ಯೋನ್ಯಸಿದ್ಧಿ, ಸಂಸ್ಕೃತ-ಕನ್ನಡಗಳ ಮಧುರಮೈತ್ರಿಯಲ್ಲಿ ನುರಿತ ಕನ್ನಡಿಗರ ಬರೆವಣಿಗೆ, ಸಾಹಿತ್ಯಗುಣವನ್ನು ಸಂವರ್ಧಿಸಿಗೊಳ್ಳುತ್ತ ಮುಂದುವರಿದಿದೆ. ಈ ಪ್ರವೃತ್ತಿ ಕ್ರಿ.ಶ. ೮೦೦ರ ಒಂದು ಗದ್ಯಶಾಸನದಲ್ಲಿ ಹೀಗೆ ವ್ಯಕ್ತವಾಗಿದೆ:

"ಸ್ವಸ್ತಿ ಪ್ರಭೂತವರ್ಷ ಶ್ರೀ ಪೃಥಿವೀವಲ್ಲಭ ಮಹಾರಾಜಾಧಿರಾಜ ಪರಮೇಶ್ವರಾಭಟ್ಟಾರಾಕ ಶ್ರೀಗೋಇನ್ದರಸಚ್ಚತುಸ್ಸಮುದ್ರಾನ್ತ ವಸುಧೆಯಾ ಧವಳೈಕಛತ್ರಛಾಯೆಇನ್ನಾಳೆ। ಬನವಾಸಿ ಮಣ್ಣಲ ಮಾನಾ ಸಮುದ್ರಾನ್ತರಾಜಾದಿತ್ಯರಾಸರ್ ಆಳೆ। ಅಳುವಖೇಡಮಱುಸಾಸಿರನುಮಾನ್ ಚಿತ್ರವಾಹನನಾಳುತ್ತುಂ ಬಾಯ್ಕೇಳದಿರೆ ಮುನಿದು ಕೊಲ್ಲಿಪಲ್ಲವ ನೊಱಮ್ಬಂನ್ನೊಱಮ್ಬರಾದಿತ್ಯನನ್ವೆಸಸಲಾ ಕಾಕರಾಸರುಮೆಟ್ಟು ಪೆರ್ಗ್ಗಂಜಿಯ ಕೋಟೆಯಾನ್ ರೋಹಿಸಿ ಬಿಟ್ಟು ಎರಡುಮ್ಬಲದ ವೀರಭಟ್ಟರ್ಕಳೋಟ್ಟು ಪೊರಮಟ್ಟು ಬಿಲ್ವಲ್ಲಳ್ಕುದುರೆ ಕುದುರೆಯೊಳ್ಕಿಟ್ಟಿ ಅತಿ ತುಮುಲ ಕಾಳಗಪೆಟ್ಟು ಬಲದ ಕೆಯ್ಯಂ ಚಿತ್ರವಾಹನನೊತ್ತಿ ಪುಗುತ್ತನ್ನು ಕಾದಿಸೆ ಕಣ್ಣು ಕುಲಮುದ್ಧ ನೀನೀ ಕಯ್ಯಪೊಕ್ಕು ಕಾದೆನ್ನು ಬೆಸಸೆ ಪ್ರಸಾದಮೆನ್ನಯ್ದು ಕಿಟ್ಟಿಕಾದಿ ಮಱುವಕ್ಕದವರ ಮೆಯ್ಮೆಯ್ಯಮ್ಬಾಗೆ ಎಚ್ಚೋಡಿಸಿ ಆ ಕಯ್ಯಂ ಗೆಲ್ದು ತಾನುಂ ಪಲವುಂ ಎಸುವೆತ್ತುಂ ಎಯ್ವೊದೊದಪ್ಪಿದಪ್ಪೊಲ್ಕಣೆ ಪಂಜರದೊಳಗೆಱಗಿ ಭೀಷ್ಮನ್ಬಿಟ್ಟನ್ತೆ ನೆಲಮುಟ್ಟದೆ ಬಿಟ್ಟೊನಾನ್ದೇವಗಣಿಕ್ಕೆ ಯರಾರ್ಗ್ಗಂಮ್ಬಿಡಿದು ಬನ್ದಿದಿರ್ಗ್ಗೊಣ್ಣುಯ ವೀರಲೋಕಕ್ಕೆ ಸನ್ದೋನ್"[೧೭]

ಈ ಗದ್ಯದ ಸ್ಪಷ್ಟತೆ, ಸರಳತೆ ಮತ್ತು ನಾಟಕೀಯತೆಗಳು, ಕನ್ನಡಗದ್ಯ ನೃಪತುಂಗನ ಕಾಲಕ್ಕೆ ಯಾವ ಹದಕ್ಕಿಳಿದು ಬರುತ್ತಿದೆಯೆಂಬುದರ ನಿದರ್ಶನವೆನಿಸಿದೆ. 'ಬಾಯ್ಕೇಳದಿರೆ', 'ಬಿಲ್ವಿಲ್ಲೊಳ್ ಕುದುರೆ ಕುದುರೆಯೊಳ್ ಕಿಟ್ಟಿ ಅತಿ ತುಮುಲಕಾಳಗಂ ಪಟ್ಟೆ', 'ಮರುವಕ್ಕದವರ ಮೆಯ್ಯಂಬಾಗೆ ಎಚ್ಚೋಡಿಸಿ', 'ಎಯ್ವೊದೆದಪ್ಪಿದಪ್ಪೊಲ್ ಕಣೆಪಂಜರದೊಳೊಱಗಿ ಭೀಷ್ಮನ್ ಬಿಟ್ಟಂತೆ ನೆಲಮುಟ್ಟದೆ ಬಿಟ್ಟೊನ್' ಎಂಬ ಮಾತುಗಳಲ್ಲಿ ಉತ್ಕೃಷ್ಟ ಗದ್ಯಗುಣ ಎದ್ದುತೋರುತ್ತದೆ. ಶಾಸನಗಳ ಒಲವು ಸಾಹಿತ್ಯಗುಣಕ್ಕಿಂತ ವಿಷಯ ವಿವರಣೆಯ ಕಡೆಗೆ ಹೆಚ್ಚು ಇದ್ದ ಕಾಲದಲ್ಲಿ ಈ ಶಾಸನ ಹುಟ್ಟಿದೆಯೆಂಬುದನ್ನು ನೆನೆದರೆ ಇದರ ಸಾಹಿತ್ಯಿಕ ಬೆಲೆ ಮತ್ತೂ ಸ್ಪಷ್ಟವಾಗುತ್ತದೆ.

ಸಾಮಾನ್ಯವಾಗಿ ಬರಹದ ಭಾಷೆ ಸಮಕಾಲೀನದ್ದಾಗಿರದೆ ಕೆಲವು ವರ್ಷ ಹಿಂದಿನದೇ ಆಗಿರುತ್ತದೆ. ಹೀಗಾಗಿ ೭-೮ ನೆಯ ಶತಮಾನದ ಶಾಸನಗಳಲ್ಲಿಯ ಕಾವ್ಯಾತ್ಮಕ ಭಾಷೆ ಕೆಲವು ವರ್ಷ ಹಿಂದಿನದಾಗಿದೆಯೆಂದು ಹೇಳಬಹುದು. ಈ ದೃಷ್ಟಿಯಿಂದ ನೋಡಿದರೆ, ೨-೩ನೆಯ ಶತಮಾನದಲ್ಲಿ ಲಿಪಿಗಿಳಿಯಲಾರಂಭಿಸಿದ ಕನ್ನಡವು ೩-೪ನೆಯ ಶತಮಾನದಲ್ಲಿ ಶುದ್ಧ ಬರೆವಣಿಗೆಯನ್ನು ಸಾಧಿಸಿ ೪-೫ನೆಯ ಶತಮಾನದಲ್ಲಿ ಕಾವ್ಯಾತ್ಮಕವಾಗಿರಬೇಕೆನಿಸುತ್ತದೆ. ವಿಮಳೋದಯ ನಾಗಾರ್ಜುನಾದಿಗಳು ಗದ್ಯಕಾವ್ಯ ಕಟ್ಟಿದುದು ಕೊನೆಯ ಪಕ್ಷ ಇಂಥ ಗದ್ಯದಲ್ಲಿಯಾಗಿರಬೇಕು.

---

೧೭. E.C.viii, ಸೊರಬ ೧೦ ಮಾವಳಿ.

ಕನ್ನಡ ಗದ್ಯಸಾಹಿತ್ಯದಂತೆ ಪದ್ಯಸಾಹಿತ್ಯವೂ ಶತಮಾನದಿಂದ ಶತಮಾನಕ್ಕೆ ಪರಿಷ್ಕಾರಗೊಳ್ಳುತ್ತ ಬಂದಿದೆ. ಆದರೆ ಕವಿರಾಜಮಾರ್ಗಪೂರ್ವದ ಶಾಸನಗಳ ಒಲವು ವಿಷಯ ನಿರೂಪಣಾತ್ಮಕವಾದುದರಿಂದ ಅಲ್ಲಿ ಪದ್ಯ ಕಡಿಮೆ, ಗದ್ಯ ಹೆಚ್ಚು. ಆದುದರಿಂದ ಕವಿರಾಜಮಾರ್ಗಪೂರ್ವದ ಶಾಸನ ಪದ್ಯ ಸಂಖ್ಯೆ ೬೦ನ್ನೂ ಮಿಕ್ಕಲಾರದು. ಇವುಗಳಲ್ಲಿ ತ್ರಿಪದಿ, ಪಿರಿಯಕ್ಕರ (?), ದ್ವಿಪದಿ (?),ಕಂದ, ಅಕ್ಷರ ವೃತ್ತಗಳ ಹರವು ಕೆಳಗಿನಂತಿದೆ.

ತ್ರಿಪದಿ, ಪಿರಿಯಕ್ಕರ (?),ದ್ವಿಪದಿ: ಬ್ರಹ್ಮ, ವಿಷ್ಣು, ರುದ್ರಲಯಗಳ ವಿವಿಧವಿನ್ಯಾಸದ ಮೂಲಕ ಕನ್ನಡ, ತೆಲಗು, ತಮಿಳು ಮುಂತಾದ ದ್ರಾವಿಡಭಾಷೆಗಳಲ್ಲಿ ಹಲವು ಪ್ರಾದೇಶಿಕ ಬಂಧಗಳು ಬೆಳೆದುಬಂದಿವೆ. ಅನ್ಯಛಂದಸ್ಸಿನ ಪ್ರಭಾವಕ್ಕೆ ಪಕ್ಕಾಗುವ ಮೊದಲು ಈ ಭಾಷೆಗಳು ತಂತಮ್ಮ ಪ್ರಾದೇಶಿಕ ಬಂಧಗಳಲ್ಲಿ ಸಾಹಿತ್ಯನಿರ್ಮಿಸಿದುದು ಸ್ವಾಭಾವಿಕ. ಕವಿರಾಜಮಾರ್ಗಪೂರ್ವದ ತಮಿಳು ಸಾಹಿತ್ಯ ಆಶಿರಿಯಮ್, ವೆಣ್ಬಾ, ವಂಜಿ ಮತ್ತು ಕಲಿ ಎಂಬ ಪ್ರಮುಖ ದೇಶೀ ಛಂದಃಪ್ರಕಾರಗಳನ್ನು ಸಮೃದ್ಧವಾಗಿ ಬಳಸಿದೆ.[೧೮] ಈ ಸಮಯದ ತೆಲಗುಭಾಷೆಯ ಏಕೈಕ ಸಾಹಿತ್ಯವೆನಿಸುವ ಶಾಸನ ಪ್ರಪಂಚದಲ್ಲಿ,

೧.	ತರುವೋಜ	-	ಅದ್ದಂಕಿ ಶಾಸನ (೮೪೮)
೨.	ಸೀಸ	-	ಕಂದಕೂರು ಶಾಸನ (೮೫೦)
೩.	ಆಟವೆಲದಿ	-	ಧರ್ಮಾವರಂ ಶಾಸನ (೮೪೮)
೪.	ತೇಟಗೀತಿ	-	ಕಂದಕೂರು ಶಾಸನ (೮೪೮)

ಎಂಬ ದೇಶಿ ಬಂಧಗಳೇ ಕಂಡುಬರುತ್ತವೆ.[೧೯] ಆದರೆ ಕನ್ನಡ ಶಾಸನಗಳಲ್ಲಿ ಕಂದ ವೃತ್ತಗಳೊಂದಿಗೆ ನೆಲೆನಿಂತ ದೇಶಿಬಂಧ ತ್ರಿಪದಿಯೊಂದೇ. ಆದುದರಿಂದ ಕವಿರಾಜಮಾರ್ಗಪೂರ್ವದ ಶಾಸನಗಳಲ್ಲಿ ತೆಲುಗು ಬಳಸಿದಷ್ಟು ಜಾತಿಛಂದಸ್ಸನ್ನು ಕನ್ನಡ ಬಳಸಿಲ್ಲ; ಕನ್ನಡ ಬಳಸಿದಷ್ಟು ವೃತ್ತಕಂದಗಳನ್ನು ತೆಲುಗು ಬಳಸಿಲ್ಲವೆನಿಸುತ್ತದೆ.[೨೦] ತ್ರಿಪದಿ ಪ್ರಾಚೀನಕಾಲದಿಂದಲೂ ಕನ್ನಡ ಜನತೆಯೊಂದಿಗೆ ಬದುಕಿಬಂದ ಒಂದು ಪ್ರಾತಿನಿಧಿಕ ಬಂಧ. ಬರೆವಣಿಗೆಯ ರೂಪದಲ್ಲಿ ಇದು ಮೊಟ್ಟಮೊದಲು ಕಾಣಿಸಿಕೊಂಡುದು ಬಾದಾಮಿ ಶಾಸನದಲ್ಲಿ.

ಸಾಧುಗೆ ಸಾಧು ಮಾಧೂರ್‍ಯ್ಯನ್ಗೆ ಮಾಧೂರ್‍ಯ್ಯಂ ಬಾಧಿಪ್ಪ
ಕಲಿಗೆ ಕಲಿಯುಗ ವಿಪರೀತನ್ಮಾಧವನೀತನ್ಪೆಱನಲ್ಲ

ಒಳ್ಳಿತ್ತಕೆಯ್ವೊರಾರ್ಪ್ಪೊಲ್ಲದುಮದಱನ್ತೆ ಬಲ್ಲಿತ್ತು ಕಲಿಗೆ
ವಿಪರೀತಾಪುರಾಕೃತಮಿಲ್ಲಿ ಸನ್ದಿಕ್ಕುಮದು ಬನ್ದು

ಕಟ್ಟಿದ ಸಿಂಘಮನ್ಕೆಟ್ಟೊಡೇನೆಮಗೆನ್ದು ಬಿಟ್ಟವೊಲ್ ಕಲಿಗೆ ವಿ
[ಪ]ರೀತಂಗಹಿತರ್ಕ್ಕಳ್ಕೆಟ್ಟಮ್ಮೆಣ್ಸತ್ತರವಿಚಾರಂ[೨೧]

---

೧೮. Advanced Studies in Tamil Prosody (A. Chidambaranatha Chattiar)

೧೯. 'ಸಮಗ್ರ ಆಂಧ್ರಸಾಹಿತ್ಯಂ' ಸಂಪುಟ-೧, ಪು. ೯೨(ಕ್ರಿ.ಶ. ೮೫೫ರ ಬೆಜವಾಡ ಶಾಸನದಲ್ಲಿ ಮಧ್ಯಾಕ್ಕರವೊಂದು ಕಂಡುಬರುತ್ತದೆ)

೨೦. ಪಂಪನ ತಮ್ಮ ಜಿನವಲ್ಲಭನ ಗಂಗಾಧರಂ ಶಾಸನದ ಕಂದ, ಸಾಲತೂರು ಶಾಸನ (ಕ್ರಿ.ಶ.೮೪೮)ದ ಚಂಪಕ ಮಾಲೆ, ವಿರಿಯಾಲಿ ಕಾಮಸಾನಿ ಶಾಸನ (ಕ್ರಿ.ಶ. ೧೦೦೦) ದ ಉತ್ಪಲಮಾಲೆ, ಕೊರುವಿಲ್ಲಿ ಶಾಸನದ (ಕ್ರಿ.ಶ.೧೦೨೨) ರಗಡಗಳು ತೆಲುಗು ಶಾಸನಗಳಲ್ಲಿ ಕಂಡುಬರುವ ಪ್ರಥಮ ಅಕ್ಷರವೃತ್ತ ಮತ್ತು ಮಾತ್ರಾವೃತ್ತಗಳು.

೨೧. I.A.x. P. 61

ಕನ್ನಡಿಗರ ಬಾಯಿಯಲ್ಲಿ ಕಂಬಿಯಿಂದ ಚಿನ್ನದ ತಂತಿ ಎಳೆದಂತೆ ಸುಗಮವಾಗಿ ಬರಬೇಕಾಗಿದ್ದ ತ್ರಿಪದಿ ಇಲ್ಲಿ ಗಂಟುಗಂಟಾಗಿದೆ. ಜಯಕೀರ್ತಿ, ಶಾರ್ಙ್ಗದೇವ, ಸೋಮೇಶ್ವರ ಹೇಳುವಂತೆ ಇದರ ಚರಣಗಳು ನಾಲ್ಕು ಎಂದು ಭಾವಿಸಿ-

ಸಾಧುಗೆ ಸಾಧು
ಮಾಧೂರ್ಯರ್ಗಂಗೆ ಮಾಧೂರ್ಯಂ।
ಬಾಧಿಪ್ಪ ಕಲಿಗೆ ಕಲಿಯುಗ।ವಿಪರೀತ।
ನ್ಮಾಧವನೀತನ್ಪೆಱನಲ್ಲ॥

ಎಂದು ಆದಿಪ್ರಾಸವನ್ನನುಲಕ್ಷಿಸಿ ಬಿಡಿಸಿ ಇಟ್ಟರೆ ಒಂದು ಮತ್ತು ಎರಡನೆಯ ಚರಣಗಳಿಗೆ ಎರಡೆರಡರಂತೆ ವಿಷ್ಣುಗಣ ಹೊರಡುವುದಿಲ್ಲ. ಹೊರಡಿಸಲು ಪ್ರಯತ್ನಿಸಿದರೆ (ಸಾಧುಗೆ ಸಾಧುಮಾ। ಧೂರ್ಯ್ಯನ್ಗೆ ಮಾಧೂರ್ಯ್ಯಂ) ಆದಿಪ್ರಾಸ ಹೊಂದುವುದಿಲ್ಲ. ಇನ್ನು 'U—' ವಿನಿಂದ ಪ್ರಾರಂಭವಾಗುವ 'ಪುರಾಕೃತ'ದಲ್ಲಿ ಅಂಶಗಣದ ಮೂಲಭೂತತ್ವ ಮುರಿದುಬಿದ್ದಿದೆ. "ವಿಪರೀತಂಗಹಿತಕ್ಕೆರ್ಳ್ಕೆಟ್ಟವರ್ಮ್ಮಣ್ಣಸ್ತ್ರವಿಚಾರಂ" ಎಂಬ ವಾಕ್ಯಯೋಜನೆಯಲ್ಲಿ ಲಿಪಿಪ್ರಯೋಗದ ಹೊಸ ಅನುಭವ, ಸಂಸ್ಕೃತ-ಕನ್ನಡಗಳ ಗೊಂದಲ ಎದ್ದುಕಾಣುತ್ತದೆ. ಈ ಉಭಯ ಪರಿಶ್ರಮದ ಮೂಲಕ ಈ ತ್ರಿಪದಿಗಳ ಛಂದಸ್ಸಿಗೆ ಭಂಗಬಂದಿದೆ. ಕನ್ನಡಿಗರ ಉಸಿರಾದ ಈ ವೃತ್ತ ಕೆಲಮಟ್ಟಿಗೆ ತನ್ನ ಮುಗ್ಧತೆಯನ್ನು ಕಳೆದುಕೊಂಡಿದೆ.

ಈ ಶತಮಾನವನ್ನು ದಾಟಿ ಮುಂದೆ ಬಂದರೆ ಬಹುಮಟ್ಟಿಗೆ ತಿದ್ದಿತೀಡಿದ ತ್ರಿಪದಿಗಳನ್ನು ಕಾಣಬಹುದು. ಈಶ್ವರಭಕ್ತನಾದ ಜಕ್ಕನ ವರ್ಣನೆ ಹುಮ್ಮಚಶಾಸನ (ಕ್ರಿ.ಶ. ೮೦೦)ದಲ್ಲಿ ಹೀಗೆ ಬರುತ್ತದೆ :

x x ಮುಂ ಪಾಟುಯು।ಮನದ ನಿರ್ಮ್ಮಳಿxಯು।
ಮನಿತುಯೊಳ್ಗುಣಮುಮೞಿವು ಧರ್ಮ್ಮಮುಂ।ಜಕ್ಕ।
ನಿನಗಲ್ಲದಿಲ್ಲ ಭುವನದೊಳ್॥

ಬ್ರಹ್ಮನಿಂದಜೀವುಸು।ಸರ್ಮ್ಮನಾರ್ಪ್ಪಿನೊಳ್ಪೊರೆ।
ಧರ್ಮ್ಮದೊಳ್ಬಲಿಯ ಸಮನೆಂಬ ಜಕ್ಕಯ್ಯ
ನಿರ್ಮ್ಮಲ ಸುದ್ಧ ಭುವನದೊಳ್॥

ಮನ್ನೆಖೇಟದಿ ತೆಂಕ। ನಿನ್ನ ದೇಗುಲ ಚಲ್ವು।
x x x x x x x x ಲೆದಾರಿ ಜಕ್ಕಯ್ಯ।
ನನ್ನರಾಧರ್ಮ್ಮದಜೀವಿನೊಳ್॥

ಮಾಸರ ಜಕ್ಕಯ್ಯ । ಈಶ್ವರಗತಿಭಕ್ತ।
xxxನೊಳಗೆ ನೆಗಟ್ದ ದೇಗುಲಕನ
x x x x x x x x x x x x x x॥

ಬ್ರತಿಯನೂದುತ ಜಕ್ಕ x x x x x ।
x x x x x x x x x x x x x x
x x x x x x x x x x ||[೨೨]

ಈ ತ್ರಿಪದಿ (ಕ್ರಿ.ಶ. ೮೦೦) ಗಳು ಬಾದಾಮಿ ತ್ರಿಪದಿಗಳಿಗಿಂತ ಹೆಚ್ಚು ಹದಗೊಂಡಿವೆ. ಶಾಸನ ಬಹಳಷ್ಟು ಒಡೆದು ಹೋಗಿದ್ದರೂ ಅಲ್ಲಿಯ ಅರ್ಥಸಂದೇಹ ಇಲ್ಲಿ ತೋರುವುದಿಲ್ಲ. ಸಂಸ್ಕೃತವನ್ನು ಹದವರಿತು ಬಳಸಿದ ಈ ಬರವಣಿಗೆ ತೊಡಕು ತೊಡಕಾಗಿಲ್ಲ.

ಇದೇ ಸುಮಾರಿನ ಸೊರಬ ಶಾಸನ (ಕ್ರಿ.ಶ.೮೦೦) ದಲ್ಲಿ ಕೆಳಗಣ ೫ ತ್ರಿಪದಿಗಳಿವೆ.

ಅನ್ದು ಕೇಚರಂ ಸಾರ್ಚ್ಚೆ।ತನ್ದ ವಿಮನಮಂ।
ಇನ್ದ್ರನವೆಸಾದಿ ಸುರವದು ।ಅರ್ಕ್ಕಳು।
ವನ್ದರ ಅಙ್ಗ x x x x x x ||

xxನಯ ನೀನೇ ಭೂರ್ಮಗ್ಗ್ನಲದೊಳಾಗೆ ವಿ।
ಲ್ದಣ್ಡಮನಣಿಯ ತುರಗಮ ।ನಾಙ್ಗರ
ಭಣ್ಡಾಣಙ್ಗಣದೊಳಗಿತ್ತಿ x x x x x ||
x x x x x ವಳಸ ಏಟು।ಜಮ್ಬೂದ್ವೀಪ ಸೂರ್ಜ್ಯ।
ಬಿಮ್ಬು ಪನ್ನೆರಡಜೋಳಗೆಲ್ಲ ।ಮಾರ್ಗ್ಗರ
ನಾಙ್ಗಜ ಕೊಮರಙ್ಗೆ x x x x ||

x x x ತಿರತ।ನಞ್ಜನೆ ಸುತನನ್ನ।
ಅನ್ದು ಕೇಸಿನಿಯ ಎಟಿದಾತ । ನನ್ನನೆ
ಒನ್ದಂ ನುಮ್ಮೃಸಿಲ ವಿರಹಿ||

xxರಟುಗಿವೆಳಿಯಂಬ್ಬಿ। ನೆಜಿಗಿ ಕಟ್ಟಿದೆ ತಳ್ತು।
ಮಱುವಕ್ಕಮಾದ ನೃಪರ್ಕ್ಕಳಾ।ನಾಙ್ಗರ
ನೆಜೆವೆ ನಾರದ x x x x x x ||[೨೩]

ಅಲ್ಲಲ್ಲಿ ಪಾಠದೋಷಗಳಿದ್ದರೂ ಇದರ ಅರ್ಥ ಬಾದಾಮಿ ತ್ರಿಪದಿಯಷ್ಟು ಕ್ಲಿಷ್ಟವಾಗಿಲ್ಲ. ಅಂಗರ ಎಂಬ ವೀರನ ಸುರಲೋಕ ಯಾತ್ರೆಯನ್ನು ಬಣ್ಣಿಸುವ ಇದು ಹುಮ್ಮಚ ಶಾಸನದಂತೆ ದೇಶಿಯತ್ತ ವಾಲಿದೆ.

ಹೀಗೆ ಕವಿರಾಜಮಾರ್ಗಪೂರ್ವದಲ್ಲಿ ೧೩ ತ್ರಿಪದಿಗಳು ದೊರೆತಿದ್ದು ಅಂಶಗಣ ಸ್ಥಿತಿಸ್ಥಾಪಕತ್ವ ಗುಣವುಳ್ಳುದು ಎಂಬ ದೃಷ್ಟಿಯಿಂದ ಅವುಗಳಲ್ಲಿ ತೋರುವ ಗಣವ್ಯತ್ಯಾಸವನ್ನು ಮನ್ನಿಸಬಹುದು. ಆದರೆ

---

೨೨. E.C. viiiನಗರ ೬೨; ಹುಮ್ಮಚ.
೨೩. E.C.viii, ಸೊರಬ, ೨೨. ಸೊರಬ

'ಪುರಾಕೃತ' ಮೊದಲಾದುವು ಮೂಲಭೂತ ಛಂದೋದೋಷಗಳು. 'ಒಳ್ಳಿತ್ತು-ಬಲ್ಲಿತ್ತು' 'ಬ್ರಹ್ಮ-ಧರ್ಮ' ಎಂಬಿವು ಗಮನಿಸಬಹುದಾದ ಪ್ರಾಸದೋಷಗಳು. ಒಟ್ಟಿನಲ್ಲಿ ಬಾದಾಮಿ ತ್ರಿಪದಿಗಿಂತ ಸೊರಬ, ಸೊರಬ ತ್ರಿಪದಿಗಿಂತ ಹುಮ್ಮಚ ತ್ರಿಪದಿಗಳು ಹೆಚ್ಚು ಮಧುರವಾಗಿವೆ; ಹೆಚ್ಚು ಶುದ್ಧವಾಗಿವೆ.

ಪಿರಿಯಕ್ಕರ: ಕನ್ನಡ ಸಾಹಿತ್ಯದಲ್ಲಿ ತ್ರಿಪದಿಗೆ ಎರಡನೆಯ ಸ್ಥಾನಗಳಿಸಿದ ಒಂದು ಜಾತಿವೃತ್ತ. ಇಡಿ ಶಾಸನಪ್ರಪಂಚದಲ್ಲಿ ೨೦-೨೫ ಸಲ ಬಳಕೆಯಾಗಿರುವ ಇದು ಕವಿರಾಜಮಾರ್ಗದ ಹಿಂದೆ ಒಂದು ಸಲ ಮಾತ್ರ ಕಂಡುಬರುವಂತೆ ತೋರುತ್ತದೆ. ಕಪ್ಪೆ ಅರಭಟ್ಟನ ಶಾಸನದ ಸಮೀಪವಿರುವ ಇನ್ನೊಂದು ಕಲ್ಲಿನ ಮೇಲೆ,

ಪುಟ್ಟಿಮಣಿ ನಾಗಕಂ ಭಂಗ ಜಗತುಂಗ ನೆಲದನ್ದಿದನ್ತೆಯ್ದೆ ಆದ್ದೊ(ಳ್ದೊ?)ನತಂ।
ಗಿಪ್ಪನಾ ಸಾಹಯನೆಜೆವೆ ಮಹಾಸಾಮನ್ತನುತ್ತವಂಗಳ್ಳಗೊಪ್ಪೆ।
ಪುಟ್ಟಿದೊ ಬಿರಗ್ರಹಾಕಮ್(?)ತಲವಿಡಿದು ಕಳೆದೆ।
ಕಿ(ರಿ?)ಟ್ಟಿ ಸಾಸಿರದೊಬಯಿನೂಱ ಅ[ಱ]ವತಲಱುವರನಿಱುದೊಳ್ವಪ್ರಕಟಿಸಿದಾನ್॥[೨೪]

ಎಂಬ ಬರೆವಣಿಗೆಯಿದೆ. ಆದಿಪ್ರಾಸವನ್ನು ಗಮನಿಸಿ, ಇದು ಪದ್ಯವಾಗಿರಬಹುದೆಂದು ಶ್ರೀ ಪಂಚಮುಖಿ ಹೇಳುತ್ತಾರೆ. ಪ್ರಥಮಚರಣದ ಲಯವನ್ನು ಲಕ್ಷಿಸಿ (ಶುದ್ಧಪಾಠ ನಿರ್ಣಯವಾಗುವ ವರೆಗೆ) ಇದನ್ನು ಪಿರಿಯಕ್ಕರವೆಂದು ಭಾವಿಸಬಹುದು. ಮೇಲೆ ಉದಾಹರಿಸಿದ ಬಾದಾಮಿ ಶಾಸನದ ತಲೆಯ ಮೇಲಿನ,

ಕಪ್ಪೆ ಅರಭಟ್ಟನ್ ಶಿಷ್ಟಜನಪ್ರಿಯನ್
ಕಷ್ಟಜನವರ್ಜಿತನ್ ಕಲಿಯುಗವಿಪರೀತನ್

ಎಂಬ ಬರೆವಣಿಗೆಯನ್ನು ಎ.ಎನ್. ನರಸಿಂಹಯ್ಯನವರು ಪದ್ಯವೆಂದು[೨೫], ಪಂಚಮುಖಿಯವರು ದ್ವಿಪದಿಯೆಂದು[೨೬] ಹೇಳುತ್ತಾರೆ. ಹಾಗಿದ್ದರೆ ಇದು ಕನ್ನಡದ ಶಾಸನಪ್ರಪಂಚದಲ್ಲಿ ಬಳಕೆಯಾದ ಏಕೈಕ ದ್ವಿಪದಿ. ಆದರೆ ಆದಿಪ್ರಾಸರಹಿತ ಈ ಬರೆವಣಿಗೆಯನ್ನು ಹಾಗೆ ಕರೆಯಲು ಧೈರ್ಯ ಸಾಲದು. 'ಶ್ರೀ ಪಾಂಡ್ಯವಿಲ್ಲರಸರಾ ಮಗನ್ ದೇವು ಸಾಧುಪ್ರಿಯನ್, ಅಸಾಧುಜನವರ್ಜಿತನ್'[೨೭] 'ಪ್ರಿಯಚೆಲ್ವ ಚೆಲ್ವಸಂಪನ್ನ ಖಲಜನ ವರ್ಜಿತನ್'[೨೮] ಗಳಂತೆ ಕೇವಲ ವಿಶೇಷಣ ಮಾಲೆಯಾಗಿರಬಹುದು.

ಕವಿರಾಜಮಾರ್ಗದ ಚತ್ತಾಣಪ್ರಸಂಗದಲ್ಲಿ 'ಅಕ್ಕರಂ ಚೌಪದಿ ಮತ್ತಂ ದಲ್ ಗೀತಿಕೆ ತಿವದಿ'[೨೯] ಗಳ ಪ್ರಸ್ತಾಪ ಬರುತ್ತದೆ. ಮೇಲಣ ತ್ರಿಪದಿ ಇಲ್ಲಿಯ ತಿವದಿ, ಪಿರಿಯಕ್ಕರ ಇಲ್ಲಿಯ ಅಕ್ಕರದ ಒಂದು ಪ್ರಭೇದ. ಉಳಿದ ಚೌಪದಿ ಗೀತಿಕೆಗಳು ಶಾಸನಗಳಲ್ಲಿ ಕಂಡು ಬರದಿದ್ದರೂ ಕವಿರಾಜಮಾರ್ಗಕ್ಕೆ ಹಿಂದೆ ಅವುಗಳ ಬಳಕೆ ಇದ್ದುದು ಸತ್ಯ.

---

೨೪. ಕರ್ನಾಟಕದ ಇತಿಹಾಸ (ಪ್ರಥಮ ಸಂಪುಟ)- ಸಾಂಸ್ಕೃತಿಕ ಚರಿತ್ರೆ, ಪುಟ ೧೨೩

೨೫. In the Tattikoti inscription of about 700 A.D., the following Sanskrit Sloka appears after the first Kannada stanza" GOKI 363

೨೬. 'ದ್ವಿಪದೀ ತ್ರಿಪದೀ ಪದ್ಯಗಳಿವು'- (ಕರ್ನಾಟಕದ ಇತಿಹಾಸ-ಪ್ರಥಮ ಸಂಪುಟ-ಸಾಂಸ್ಕೃತಿಕ ಚರಿತ್ರೆ, ಪು. ೧೨೨)

೨೭. E.I.ix, 19. ಉದಯಾವರ ಶಾಸನ

೨೮. E.I. ix, 20. ಉದಯಾವರ ಶಾಸನ,

೨೯. ಕ.ಮಾ. ೧-೩೫

ಒಟ್ಟಿನಲ್ಲಿ ಪ್ರಾಚೀನ ಕರ್ನಾಟಕದ ಬದುಕಿನ ಮೌಲ್ಯಗಳು ಕಪ್ಪೆ ಅರಭಟ್ಟನ ಅಪ್ರತಿಹತ ಸ್ವಾಭಿಮಾನ, ಜಕ್ಕನ ಅಮೋಘ ದೈವಭಕ್ತಿ, ಅಂಗರನ ವೀರಮರಣಗಳ ಮೂಲಕ ಇಲ್ಲಿ ಅಭಿವ್ಯಕ್ತಗೊಂಡಿವೆ. ಶಾಸನ ಬರೆದ ಕವಿಯ ಪ್ರತಿಭೆ, ಬರೆಯಿಸಿದ ಜನತೆಯ ಗುಣಪಕ್ಷಪಾತಗಳು ಇಲ್ಲಿ ಪ್ರಕಟಗೊಂಡಿವೆ.

ಕಂದ, ಅಕ್ಷರವೃತ್ತ: ಪ್ರಾಕೃತ-ಸಂಸ್ಕೃತಗಳಿಗೆ ಸಂಬಂಧಿಸಿದ ಈ ಕಂದ ಮತ್ತು ವೃತ್ತಗಳು ದ್ರಾವಿಡ ಭಾಷೆಗಳನ್ನು, ಅದರಲ್ಲಿಯೂ ಕನ್ನಡಭಾಷೆಯನ್ನು ಯಾವ ಅವಧಿಯಲ್ಲಿ ಬಂದು ಸೇರಿದುವೆಂಬುದು ಇನ್ನೂ ಅನಿಶ್ಚಿತ. ಇವುಗಳಲ್ಲಿ ವರ್ಣವೃತ್ತಗಳಿಗಿಂತ, ಮಾತ್ರಾವೃತ್ತವಾದ ಕಂದ ಕನ್ನಡಕ್ಕೆ ಹೆಚ್ಚು ಅನುಕೂಲ ಬಂಧ. ಕವಿರಾಜಮಾರ್ಗಪೂರ್ವದ ಶಾಸನಗಳಲ್ಲಿ ಲಭಿಸುವ ಈ ಕಂದಗಳು ಮೂರು ಇಲ್ಲವೆ ನಾಲ್ಕು.

ನಿರ್ಮ್ಮಲ ಕೋಶಿಕ ವಂಶನ್। ಧರ್ಮಪರನ್ ಚಾರು ಮಣಲಿ ಮನೆ ಒಡೆಯಾನ್ ವಲಂ।
ತಮ್ಮಾ ಕ್ಷೇತ್ರೋಚಿತಮಾನ್। ಸಮ್ಯಗ್ದರ್ಶನ ವಿಶುದ್ಧನುಂವಟುಗಿತ್ತಾನ್॥

ಮುಖಿಮಾಗೆ ತೊಳ್ಳರೊಡೆಬ। ರ್ಸುಖಾಧ್ಯರೆಪ್ಪಿತ್ತಱು ಪ್ರಧಾನರುಮೊಡಾನೆ।
ನಿಖಿಳಸಾಕ್ಷಿಗಳವರೇ । ಸುಕರದೆ ನರಶಾಸನಂಗಳಾಯ್ದೋರೆನ್ದುಮ॥[೩೦]

ಗಂಗಚಕ್ರವರ್ತಿ ಶ್ರೀಪುರುಷನ (ಕ್ರಿ.ಶ. ೭೨೬-೭೮೮) ತಾಮ್ರಶಾಸನೋಕ್ತ ಈ ಪದ್ಯಗಳು ಈಗಿನ ಮಟ್ಟಿಗೆ ಕನ್ನಡದ ಪ್ರಥಮ ಕಂದಗಳೆನಿಸಿವೆ.

xxಅದು ಧರ್ಮ್ಮಸಾಗರಣೆ।ವದಿತರ್ಕನಾವೊಲೆ ಬೆಳಪುದಾಕೆಯ ಕೈಯ್ಯು।
ಳ್ಳಿದಜೊರ್ವ್ವಟ್ಟು ಗಮನೆಯ । ಬದೆಗಸ xxxxxxಣಪ್ಪೋರ್॥[೩೧]

ಹಿಂದೆ ತ್ರಿಪದಿಯಲ್ಲಿ ವರ್ಣಿತನಾದ ಅಂಗರವನ್ನು ಕುರಿತ ಕಂದಪದ್ಯವಿದು. ಪಾಠದೋಷದಿಂದಾಗಿ ಅರ್ಥ ಸ್ಪಷ್ಟವಾಗದು. ಇವು ಆಗಿನ ಕಾಲದ ಕಂದಪದ್ಯಗಳ ಮಾದರಿ.

ಕಂದಕ್ಕೆ ದ್ವಿತೀಯವಾಗಿ ಕನ್ನಡಿಗರ ಮನಸೆಳೆದ ಬಂಧ ಅಕ್ಷರವೃತ್ತಗಳು. ಆದರೆ ಭಿನ್ನಜಾಯಮಾನದ ಕನ್ನಡ ಶಬ್ದ ಮತ್ತು ಸಂಸ್ಕೃತ ಅಕ್ಷರವೃತ್ತಗಳ ಮೇಳ ಎಂದಿಗೂ ಪ್ರಯಾಸಕರ. ಸಂಸ್ಕೃತ ಪದಗಳನ್ನು ಹೆಚ್ಚು ಪ್ರಮಾಣದಲ್ಲಿ ಬಳಸಿದರೆ ಅದು 'ಅತಿಮಾರ್ಗದ ಆಭಾಸ'.ಕನ್ನಡ ಪದಗಳನ್ನು ಹೆಚ್ಚು ಪ್ರಮಾಣದಲ್ಲಿ ಬಳಸಿದರೆ ಅದು 'ಅತಿದೇಶಿ ಆಭಾಸ. ಇವುಗಳಲ್ಲಿ ಒಂದು ಕನ್ನಡಭಾಷೆಯ ದೃಷ್ಟಿಯಿಂದ ಅನುಚಿತ. ಇನ್ನೊಂದು ಸಂಸ್ಕೃತ ಛಂದಸ್ಸಿನ ದೃಷ್ಟಿಯಿಂದ ಅನುಚಿತ. ಇಂಥ ಪರಿಸ್ಥಿತಿಯ ಹೊಸದರಲ್ಲಿ ಈ ದೇಶಿ ಮಾರ್ಗಗಳ ವಿಪರ್ಯಸ್ತಮೇಳ ತಲೆದೋರುವುದು ಸ್ವಾಭಾವಿಕ. ಇದಕ್ಕೆ ಕೆಳಗಣ ವೃತ್ತವನ್ನು ನೋಡಬಹುದು.

ಬಿಣಮಣಿ ಅನ್ತುಭೋಗಿ ಬಿಳದುಳ್ಮಣಿ ವಿಲ್ಮನದೋನ್।
ರಣಮುಖಿದುಳ್ಳ ಕೋಲಂ ನೆರಿಯಕ್ಕುರ್ಮನಿನ್ದ್ಯಗುಣನ್।
ಪ್ರಣಯಿಜನಕ್ಕೆ ಕಾಮನಸಿತೋತ್ಪಲವರ್ಣ್ಣನವನ್।
ಗುಣಮಧುರಾಂಕ್ಕ ದಿವ್ಯಪುರಷನ್ಪುರುಷಪ್ರವರನ್॥[೩೨]

---

೩೦. M.A.R. 1920. P. 23
೩೧. E.C.viiiಸೊರಬ, ೧(ಕ್ರಿ.ಶ. ೭೯೭)
೩೨. E.C.xi cd. 43.ತಮಟಕಲ್ಲು

ಕಾಲ ಮಿತಿ ನಿರ್ದೇಶನವಿಲ್ಲದ ಈ ತುಮಟಕಲ್ಲ ಶಾಸನದ ಕಾಲ ಕ್ರಿ.ಶ. ೫೦೦ ಎಂದು ಲಿಪಿಶಾಸ್ತ್ರಜ್ಞರ ಊಹೆ. ಈ ಊಹೆ ನಿಜವಿದ್ದರೆ ಇದು ಬರೆವಣಿಗೆಯಲ್ಲಿ ಕಾಣುವ ಪ್ರಥಮ ಕನ್ನಡ (ವರ್ಣವೃತ್ತ)ವೆನಿಸುತ್ತದೆ. ಸಂಸ್ಕೃತದಲ್ಲಿಯೇ ಅಪರೂಪವಾದ ಈ ಕನಕಾಬ್ಜಿನೀ ವೃತ್ತದಲ್ಲಿ ಕೆಲವು ಪದಗಳನ್ನು ಬಿಟ್ಟರೆ ಮಿಕ್ಕುವೆಲ್ಲ ಸಂಸ್ಕೃತ. ಇದಕ್ಕೆ ಅತಿಮಾರ್ಗವ್ಯಾಮೋಹ ಇಲ್ಲವೆ ಕನಕಾಬ್ಜಿನಿಯ ಮೇಳವಿಪರ್ಯಾಸ ಕಾರಣವಾಗಿರಬೇಕು. ಇನ್ನು ೭-೮ನೆಯ ಶತಮಾನಕ್ಕೆ ಸಂಬಂಧಿಸಿದ ಕೆಲವು ಅಕ್ಷರವೃತ್ತಗಳು ಹೀಗಿವೆ:

ಮಱಿದುxxನ್ನು ವಿಕ್ರಮನಿಭ ಶ್ರೀಕಯ ವಂಶಾಧಿಪನ್।
ಎಱೆದ್ದಾನ ಪಾಮ್ಬಯನ ಸಮುಹ ಬಲಮಾ ನಿಶ್ಶೇಷಮಾ ಯುದ್ಧದೊಳ್।
ಉಱಿಕಾಲಚ್ಚಿದವಂಬವಾಟ್ಟಿಲಗೆಯುಳ್ ತಟ್ಟುಟ್ಟುವಲ್ಬಂದಿಪಿನ್।
ಮಱಿಮೋಗೀಶ್ವರನುಳ್ಳೆಕದಿ ತಣಿದ ನಾಗಮ್ಮನೀ ಶೂದ್ರಕನ್॥[೩೩]

ಪಡೆದೊಂ ಶ್ರೀಪುರುಷಯ್ಯಲಾಮ್ಮುಮೇದಲೊಳ್ ಕಲ್ನಾಡಂ ನನ್ದೊಂಬಟೆ।
ಕೆಡೆಯೋಳಕ್ಕದು ಭೂತಿಮೂತುಗನೋದೊತಧಾಣದೀಕ್ಷೆಸದೆ।
ಪಡೆದೆ xxಪಿತೃಕಳತ್ರ ಮಿತ್ರ ಜನಮಂ ಕಯ್ವಾನ್ಯ ತಾಟ್ಟಿಪ್ಪುಡಿ।
ನುಡಿಯಲ್ವೇಟ್ಟುಮೇ ಪೆಂಪನೊಪ್ಪಗುಣತೆ ತೊಳಮಿರೆಟ್ಟಿ ಗೋಪಯನ್ಯಂ॥[೩೪]

ಮಯ್ಗೇಶ್ವರನ ದುಷ್ಟನೀ ನಗರಮಾನ್ ಪೊಕ್ಕನ್ದು ಮಾಱಾನ್ತು xx।
ವ[ಯ್ಗೆ]ನ್ತೀ ಪಟು ಕಾನ್ತಿಮಾನ್ಪರಸಿದೊಕ್ಕೇಱೊಡಿ ನಿಸ್ತ್ರಿಂಶದಿನ್।
ಮ[ಯ್ಗೆ]ಲ್ತುನ್ಕೊಣ್ಡೆ ರಟ್ಟನಾಜಿಮುಖದೊಳ್ಕೊಣ್ಟಗ್ಗನಿಷ್ಟೇನ್ಕಳೋ।
ಕೈಕಾಲ್ಕ[ಣ್]ತಲೆ ಭುಜ್ಗಮಾಗೊನುಳಿದೊನಿನ್ದ್ರಾಲಯಕ್ಕೇಱಿದೋನ್॥[೩೫]

ನಿರವದ್ಯಸ್ಸುಷ್ಣನಾನಲ್ಸುತನುರು ರವಿಯಾ ಸೂನು ಕಾಮಾಲಯನ್ನಾ।
ಮರಪುತ್ರನ್ಪೇದವರ್ಮನ್ಗಮಲ ತನಯನ್ನಾರು ಕದಂಬರಾಜ್ಯ।
ಕ್ಕರುಹನ್ನ್ರೀಮಾಧವೇಂನ್ಪ್ರನ್ಗನಘ ತನಯನ್ವಿಷ್ಣುರಾಜನ್ಮಹೇಚ್ಛನ್।
ಸ್ಥಿರತೆೊಳ್ಪರ್ಚೇದಿಯಕ್ಕೆನ್ದುರುತರ ಕರಿಮಾನಾಖ್ಯಮಾನೋತು ಕೊಟ್ಟನ್॥[೩೬]

ಭಾವಸೌಂದರ್ಯವನ್ನು ಅಭಿವ್ಯಕ್ತಗೊಳಿಸಬೇಕೆನ್ನುವ ಈ ಪದ್ಯಗಳ ಉತ್ಕಟ ಇಚ್ಛೆಗೆ, ಸಂಧಿ-ಪ್ರಾಸ-ಛಂದೋದೋಷಗಳು ಅಡ್ಡಿ ಬರುವುದು, ಪ್ರಯತ್ನಪೂರ್ವಕವಾಗಿ ಹಾಡುವ ಮಗುವಿಗೆ ಅಡ್ಡಿ ಬರುವ ತೊದಲನ್ನು ನೆನಪಿಗೆ ತರುತ್ತದೆ. ಇವುಗಳ ಒಳಗೆ ದೇಶಿಮಾರ್ಗಗಳ ಹೊಂದಿಕೆಯ ಹೋರಾಟವಂತೂ ಸದಾ ಜಾಗೃತವಾಗಿದೆ.

ಈ ಕಾಲದ ಮಿಕ್ಕ ಪದ್ಯಸಾಹಿತ್ಯವೆಂದರೆ ಶ್ರವಣಬೆಳ್ಗೊಳ ಬೆಟ್ಟದ ಮೇಲೆ ಕೆತ್ತಲಾದ ಸುಮಾರು ೨೫-೩೦ ವೃತ್ತಗಳು. ಕವಿರಾಜಮಾರ್ಗಪೂರ್ವದ ಪದ್ಯಸಾಹಿತ್ಯದ ಅರ್ಧ ಪಾಲನ್ನೊಳಗೊಂಡ, ಅದೂ ಒಂದು ಸ್ಥಳಕ್ಕೆ ಸಂಬಂಧಿಸಿದ ಇವುಗಳ ಛಂದೋವೈವಿಧ್ಯ ಈ ಕೆಳಗಿನಂತಿದೆ.

---

೩೩. S.I.I. ix-i 403, No. 392 ಮಂಗಳೂರು.

೩೪. E.C. iii,ಮೈಸೂರು ೬ ಬೆಲವತ್ತೆ (ಕ್ರಿ.ಶ. ೭೫೦)

೩೫. ಕರ್ನಾಟಕ ಇತಿಹಾಸ -ಪ್ರಥಮ ಸಂಪುಟ-ಸಾಂಸ್ಕೃತಿಕ ಚರಿತ್ರೆ-ಪುಟ ೧೨೪

೩೬. ಕರ್ನಾಟಕ ಇತಿಹಾಸ-ಪ್ರಥಮ ಸಂಪುಟ-ಸಾಂಸ್ಕೃತಿಕ ಚರಿತ್ರೆ-ಪುಟ ೧೨೩

ಮಹಾಸ್ರಗ್ಧರೆ ೨(ನಂ. ೧೨,೧೮)
ಶಾರ್ದೂಲವಿಕ್ರೀಡಿತ ೪ (ನಂ. ೧೩,೨೨,೨೭,೧೧೬)
ಮತ್ತೇಭವಿಕ್ರೀಡಿತ ೫(ನಂ. ೭೬, ೭೭,೯೭,೯೮,೧೦೬)
ಉತ್ಪಲಮಾಲೆ ೨(ನಂ. ೨೧, ೭೯)
ಚಂಪಕಮಾಲೆ ೧(ನಂ. ೯೩)
ಮಲ್ಲಿಕಾಮಾಲೆ ೧(ನಂ. ೩೧)
ವಸಂತತಿಲಕ ೧(ನಂ. ೧೦೫)
ವಂಶಸ್ಥ ೧(ನಂ. ೧೧೪)
ಮಂಗಳ ೨(ನಂ. ೧೧೩, ೧೧೫)
ಮಹಾಸ್ರಗ್ಧರೆ (?)೨(ನಂ. ೮೪, ೧೧೧)
ಮಲ್ಲಿಕಾಮಾಲೆ (?)೧(ನಂ. ೯೫)
ಚಂಪಕಮಾಲೆ (?)೨ (ನಂ. ೨೬, ೧೦೮)
ಹೆಸರು ಗೊತ್ತಾಗದ ವೃತ್ತ ೭(ನಂ. ೨೯, ೩೪,೮೦,೯೯,೧೦೨,೧೦೭,೧೦೯)

ಇವುಗಳಲ್ಲಿ ಭಾವ-ಭಾಷೆ, ಭಾಷೆ-ಛಂದಸ್ಸುಗಳ ಅನ್ಯೋನ್ಯತೆಯನ್ನು ಸಾಧಿಸಿದ, ಸಾಹಿತ್ಯ ಸಿದ್ಧರಸದಲ್ಲಿ ಅದ್ದಿ ತೆಗೆದ ಕೆಲವು ವೃತ್ತಗಳಿವೆ.

ಬಾಳಾಮೇಲ್ ಶಿಖಿಮೇಲೆ ಸರ್ಪ್ಪದ ಮಹಾದನ್ತಾಗ್ರದುಳ್ ಸಲ್ವವೊಲ್।
ಸಾಲಾಮ್ಬಾಲ ತಪೋಗ್ರದಿನ್ತು ನಡೆದೊಂ ನೂಱೆಣ್ಬು ಸಂವತ್ಸರಂ।
ಕೇಳೊಯ್ವಿನ್ ಕಟವಪ್ರಶೈಲಮಡಱ್ದೇನಮ್ಮಾ ಕಳನ್ತೂರನಂ।
ಬಾಲೇ ಪೆರ್ಗ್ಗೊರ್ರವಂ ಸಮಾಧಿ ನೆಱೆದೊಸ್ ನೋನ್ತೆಯ್ದಿದೊರ್ಸಿದ್ಧಿಯಾನ್॥[೩೭]

ಮಾಸೇನರ್ ಪರಮ ಪ್ರಭಾವರಿಷಿಯರ್ಕ್ಕಟ್ವಿಪ್ಪಿನಾವೆಟ್ಟದುಳ್।
ಶ್ರೀಸಂಗಂಗಳ ಪೇಟ್ದಿ ಸಿದ್ಧಸಮಯನ್ತಪ್ಪಾದೆ ನೋನ್ತಿಮ್ಬಿನಿನ್।
ಪ್ರಾಸಾದಾನ್ತರಮಾನ್ವಿಚಿತ್ರ ಕನಕ ಪ್ರಜ್ವಲ್ಯದಿನ್ಮಿಕ್ಕುದಾನ್।
ಸಾಸಿರ್ವ್ವರ್ವ್ವರ ಪೂಜೆದನ್ದುಯೆ ಅವರ್ಸ್ವರ್ಗ್ಗಾಗ್ರಮಾನೇಱಿದಾರ್॥[೩೮]

ಸುರಚಾಪಂಬೋಲೆ ವಿದ್ಯುಲ್ಲತೆಗಳ ತೆಱವೋಲ್ಮಂಜುವೋಲ್ತೋಱಿಬೇಗಂ।
ಪಿರಿಗುಂ ಶ್ರೀರೂಪಲೀಲಾಧನ ವಿಭವ ಮಹಾರಾಶಿಗಳ್ ನಿಲ್ಲವಾರ್ಗ್ಗಂ।
ಪರಮಾರ್ತ್ಥಂ ಮೆಚ್ಚೆ ನಾನೀ ಧರಣಿಯುಳಿರವಾನೆನ್ದು ಸನ್ಯಾಸನಂ ಗೆ।
ಯ್ದುರು ಸತ್ವನ್ನನ್ದಿಸೇನ ಪ್ರವರ ಮುನಿವರನ್ದೇವಲೋಕಕ್ಕೆ ಸನ್ದಾನ್॥[೩೯]

ಈ ಪದ್ಯಗಳಲ್ಲಿ ಅತಿಮಾರ್ಗ-ಅತಿದೇಶಿಗಳ ವೈಪರೀತ್ಯ ಕಡಿಮೆಯಾಗಿ ದೇಸಿಮಾರ್ಗಗಳ ಸಮನ್ವಯ ಸಾಧ್ಯವಾಗಿದೆ. ಸಂಸ್ಕೃತ ವೃತ್ತಗಳನ್ನು ತನ್ನ ಜಾಯಮಾನಕ್ಕೆ ಅಳವಡಿಸಿಕೊಳ್ಳುವಲ್ಲಿ ಕನ್ನಡ ಬಹುಮಟ್ಟಿನ ಪ್ರಗತಿಯನ್ನು

---

೩೭. E.C. ii 22
೩೮. E.C. ii 27.
೩೯. E.C. ii 88.

ಸಾಧಿಸಿದೆ.[೪೦] ಶ್ರೀವಿಜಯ ಕವೀಶ್ವರ ಪಂಡಿತ ಚಂದ್ರ ಲೋಕಪಾಲರು ಕೊನೆಯಪಕ್ಷ ಇಂಥ ಅಂಶ, ಮಾತ್ರಾ, ಅಕ್ಷರಬಂಧಗಳಲ್ಲಿ ಪದ್ಯಸಾಹಿತ್ಯವನ್ನು ನಿರ್ಮಿಸಿರಬಹುದು.

ಹೀಗೆ ಭಾಷೆ ಬರೆವಣಿಗೆಯಲ್ಲಿ ನುರಿತು, ಬರೆವಣಿಗೆ ಗದ್ಯಪದ್ಯಗಳಲ್ಲಿ ಹದಗೊಂಡು, ಕನ್ನಡ ಸಾಹಿತ್ಯಕೃಷಿ ಉದಿತೋದಿತವಾಗಿ ಕವಿರಾಜಮಾರ್ಗದ ಹೊತ್ತಿಗೆ ಒಂದು ಅವಸ್ಥೆಯನ್ನು ಪೂರ್ಣಗೊಳಿಸಿಕೊಂಡಿದೆ. ಇಲ್ಲಿಂದ ಮುಂದೆ ಸಾಹಿತ್ಯದ ಮತ್ತೊಂದು ಅವಸ್ಥೆ ಪ್ರಾರಂಭವಾಗಿರುವುದು ಕವಿರಾಜಮಾರ್ಗ ತರುವಾಯದ ಶಾಸನಗಳ ಅಭ್ಯಾಸದಿಂದ ತಿಳಿದುಬರುತ್ತದೆ. ಲಕ್ಷಣಗ್ರಂಥವಾದ ಕವಿರಾಜಮಾರ್ಗ ಕಣ್ಣುತೆರೆದುದು ಈ ಎರಡು ಅವಸ್ಥೆಗಳ ಮಧ್ಯ.

೩. ಕವಿರಾಜಮಾರ್ಗ ಮತ್ತು ಪಂಪನ ಮಧ್ಯಕಾಲ :

ಸಮರಲೋಲ ಗೋವಿಂದನ ಬಳಿಕ ಸಂಸ್ಕೃತಿಶೀಲ ನೃಪತುಂಗನು ಪಟ್ಟವೇರಿದುದು ಈ ನಾಡ ಇತಿಹಾಸದಲ್ಲಿ ಸೂರ್ಯ-ಚಂದ್ರರ ಅಸ್ತೋದಯ ಘಟನೆ. ಸಾಹಿತ್ಯಕ್ಕೆ ಅನ್ವಯಿಸಿ ಈ ಪರಿವರ್ತನೆಯನ್ನು ಹೇಳಬೇಕೆಂದರೆ, ಹಿಂದು-ಮುಂದಣ ಸಾಹಿತ್ಯಸಮುದಾಯ ಉಪಲಬ್ಧವಿಲ್ಲ. ಸಾಹಿತ್ಯದ ಒಂದು ಅಂಗವೆನಿಸುವ ಶಾಸನಪ್ರಪಂಚವನ್ನು ನಿರೀಕ್ಷಿಸಿದರೆ ಮಾತ್ರ ಅಲ್ಲಿ ನೃಪತುಂಗನ ಪಟ್ಟಬಂಧದೊಂದಿಗೆ ಕೆಳಗಣ ವಿಶಿಷ್ಟ ಬದಲಾವಣೆಗಳು ಒಡೆದುಕಾಣುತ್ತವೆ.

೧. ಶಾಸನಸಂಖ್ಯೆಯಲ್ಲಿ ಕನ್ನಡ-ಸಂಸ್ಕೃತಗಳ ೧:೩ ಪ್ರಮಾಣ ನೀಗಿ ೨:೨ ಪ್ರಮಾಣ ಕಂಡುಬರಹತ್ತಿದೆ.

೨. ದಿಗ್ವಿಜಯ, ಮಹಾದಾನ, ರಾಜಪ್ರಶಸ್ತಿಗಳೆಂಬ ಮಹತ್ವಪೂರ್ಣ ವಿಷಯಗಳಿಗೆ ಸಂಸ್ಕೃತದಂತೆ ಕನ್ನಡವೂ ಬಳಕೆಗೊಳ್ಳಲಾರಂಭಿಸಿದೆ.

೩. ಶುಷ್ಕನಿರೂಪಣೆ ಕಡಿಮೆಯಾಗಿ ಸಾಹಿತ್ಯಗುಣ ಸಂವರ್ಧಿಸುತ್ತ ನಡೆದಿದೆ.

೪. ಗದ್ಯವನ್ನು ಹಿಂದು ಹಾಕಿ ಪದ್ಯ ಪ್ರಗತಿ ಹೊಂದುತ್ತಲಿದೆ.

೫. ಸಣ್ಣ ಆಕಾರಕ್ಕೆ ಬದಲು ದೊಡ್ಡ ಆಕಾರ, ಒರಟು ಬಂಡೆಗೆ ಬದಲು ನುಣುಪು ಫಲಕ, ಫಲಕದ ಮೇಲೆ ಶುದ್ಧಭಾಷೆ, ಸುಂದರಲಿಪಿಗಳು ಎದ್ದುಕಾಣುತ್ತವೆ.

ಇದರಿಂದ ನೃಪತುಂಗನ ಉದಯವೆಂದರೆ ಕನ್ನಡಸಾಹಿತ್ಯದ ನವೋದಯ ಎಂಬ ಭಾವನೆ ಹುಟ್ಟುತ್ತದೆ. ಈ ತೀವ್ರ ಬದಲಾವಣೆ ನೃಪತುಂಗನ ಸಮಯದಲ್ಲಿ ಒಮ್ಮೆಲೇ ಮಹಾಪೂರದಂತೆ ಏರಿ ಬಂದಿದೆ. ಇದಕ್ಕೆ ನಿದರ್ಶನವೆನ್ನುವಂತೆ ('ಶಾಸನ ಕವಿಗಳು' ಎಂಬ ಪ್ರಕರಣದಲ್ಲಿ ಕರ್ತೃನಿರ್ದೇಶಿತ ಶಾಸನಗಳನ್ನು ವಿವೇಚಿಸಿರುವುದರಿಂದ) ಇಲ್ಲಿ ಕರ್ತೃನಿರ್ದೇಶನವಿಲ್ಲದ ಕೆಲವು ಶಾಸನಗಳನ್ನು ನೋಡಬಹುದು.

---

೪೦. E.C. xvi ಪಾವುಗಡ ೧೨. ಗುಂಡ್ಲಹಳ್ಳಿ ಶಾಸನ (ಕ್ರಿ.ಶ. ೭೫೪) ದಲ್ಲಿ ಒಂದೆರಡು ಪದ್ಯಗಳಿವೆಯೆಂದು ತೋರುತ್ತದೆ.

ಶಿರೂರ ಶಾಸನ : (ಕ್ರಿ.ಶ. ೮೬೬)[೪೧] "ಸ್ವಸ್ತಿ ಸಮಧಿಗತ ಪಂಚಮಹಾಶಬ್ದ ಮಹಾರಾಜಾಧಿ ರಾಜ ಪರಮೇಶ್ವರ ಭಟ್ಟಾರಕ ಚತುರುದಧಿ ವಲಯವಲಯುತ ಸಕಲಧರಾತಳಪ್ರಾತಿರಾಜ್ಯಾನೇಕ ಮಂಡಳಿಕರ್ಕ್ಳಾ ಕಟಕ ಕಟಿಸೂತ್ರ ಕುಂಡಲ ಕೇಯೂರ ಹಾರಾಭರಣಾಳಂಕೃತ ಗಣಿಕಾ ಸಹಸ್ರ ಚಾಮರಾಂಧಕಾರ ವಾದಿಯ್ಯುವೀಯ್ಯಮಾನ ಶ್ವೇತಾತಪತ್ರತ್ರಯ ಕಳಹ ಶಂಖ ಪಾಳಿಧ್ವಜೋರು ಕೇತು ಪತಾಕಾಚ್ಛಾದಿತ ದಿಗಂತರೆಲ್ಲ ಸೃಷ್ಟಿಸೇನಾಪತಿ ಪುರವರ್ಗ್ಗ ತಳವರ್ಗ್ಗ ದಂಡನಾಯಕ ಸಾಮಂತಾದ್ಯನೇಕ ವಿಷಯ ವಿನಾವ್ರೋತ್ತುಂಗ ಕಿರೀಟ ಮಕುಟ ಘೃಷ್ಟ ಪಾದಾರವಿಂದಯುಗ್ಮ ನಿರ್ಜಿತ ವೈರಿರಿಪುನಿವಹಕಾಲದಂಡ ದುಷ್ಟಮದಭಂಜನನಮೋಘರಾಮಂ ಪರಚಕ್ರಪಂಚಾನನಂ ಸುರಾಸುರ ಮರ್ದನಂ ವೈರಿಭಯಂಕರಂ ಬದ್ದೆ ಮನೋಹರಂ ಅಭಿಮಾನಮಂದಿರಂ ರಟ್ಟವಂಶೋದ್ಭವಂ ಗರುಡ ಲಾಂಛನಂ ತಿವಳಿಪಜ್ಘೋಷಣಂ ಲತ್ತಲೂರಪುರಪರಮೇಶ್ವರಂ ಶ್ರೀನೃಪತುಂಗ ನಾಮಾಂಕಿತ ಲಕ್ಷ್ಮೀವಲ್ಲಭೇಂದ್ರಂಚಂದ್ರಾದಿತ್ಯರ ಕಾಲಂ ವರೆಗಂ ಮಹಾವಿಷ್ಣುರಾಜ್ಯಂಬೋಲ್ ಉತ್ತರೋತ್ತರಂ ರಾಜ್ಯಾಭಿವೃದ್ಧಿ ಸಲುತ್ತಿರೆ......"

ಇಲ್ಲಿ ಅರಸನ ಅದ್ರಿಸದೃಶ ವ್ಯಕ್ತಿತ್ವಕ್ಕೆ ತಕ್ಕ ಬಂಧುರಭಾಷೆ, ಸುಂದರವಿಶೇಷಣಗಳು ಬಳಸಲ್ಪಟ್ಟು ಕನ್ನಡ ಶಾಸನಕ್ಕೆ ಈ ಹಿಂದೆ ಇಲ್ಲದ ಒಂದು ರಾಜವೈಭವ ಸಂಪ್ರಾಪ್ತವಾಗಿದೆ. ಸಂಸ್ಕೃತಶಾಸನಗಳಲ್ಲಿ ಬರೆಯಲಾಗುತ್ತಿದ್ದ ಸುದೀರ್ಘ ಬಿರುದುಮಾಲೆ ಈಗ ಕನ್ನಡಶಾಸನದಲ್ಲಿ ಕಾಲೂರಿ ನಿಂತುದಕ್ಕೆ ಇದು ನಿದರ್ಶನ. ನಿರಾಡಂಬರಾಗಿ ಬರುತ್ತಿದ್ದ ಅರಸರ ಹೆಸರುಗಳ ಹಿಂದೆ, ಈಗ ಸಾಲಂಕೃತ ಪ್ರಶಸ್ತಿಗದ್ಯವನ್ನು ಜೋಡಿಸಿ, ಶಾಸನಕ್ಕೆ ಆಕರ್ಷಣೀಯ ಆರಂಭವನ್ನು ಒದಗಿಸಿದ ಪರಂಪರೆಯೊಂದು ಈ ಕಾಲದಲ್ಲಿ ಪ್ರಾರಂಭವಾಯಿತು. ಈ ಪ್ರಶಸ್ತಿಗದ್ಯ, ಚರಮಸಿದ್ಧಿ ಮುಟ್ಟಿದುದು ದ್ವಾರಸಮುದ್ರದ ಹೊಯ್ಸಳರಲ್ಲಿ ಮತ್ತು ಕಲ್ಯಾಣಚಾಲುಕ್ಯರಲ್ಲಿ.

ಶಿಶುವಿನಹಳ್ಳಿಶಾಸನ : (ಕ್ರಿ.ಶ. ೮೭೨)[೪೨] "ಸ್ವಸ್ತ್ಯಮೋಘವರ್ಷ ಶ್ರೀಪೃಥುವೀವಲ್ಲಭ ಮಹಾರಾಜಾಧಿರಾಜ ಪರಮೇಶ್ವರ ಪರಮಭಟರರಾರಾಜ್ಯಮುತ್ತರೋತ್ತರಮಭಿವೃದ್ಧಿಗೆ ಸಲುತ್ತಿರೆ ಶ್ರೀಮದಮೋಘವರ್ಷದೇವಪಾದಪಂಕಜಭ್ರಮರ[ವಿ]ಸಿಷ್ಟ ಜನಾಶ್ರಯಂ ಶ್ರೀ ಮದ್ದೇವಣಯ್ಯಂ ಬೆಳ್ವೊಲ ಮೂನೂಱುಮನಾಳುತ್ತಂ........ [ನೃ] ಪತು[ಙ್ಗ]ರಾಜಮನ್ದಿರಾಂಗಣದೊಳ್ದೇ ವಣಯ್ಯ [ಶರ್ವ್ವ] ತೀರ್ತ್ಥೋದಕ ಸ್ನಾನ ಪವಿತ್ರೀಕ್ರಿತಗಾತ್ರಂ ಸ್ವಕೀಯ ಕನ್ನೆರಾಶಿಯೊಳ್ಸೋಮಗ್ರಹಣದೊ[ಳ್ಸಿ] ಸುಳಹಾಟಿಯ್ಯದಿಂಬರು ಮಹಾಜನಮನವಧಾರಿಸಿ.......

ಶ್ರುತಿಯೊಳ್ವಿಶ್ರುತ ವಿಸ್ವ
ಸ್ಮೃತಿಯೊಳ್ವ್ಯಾ ಕರಣಕಾವ್ಯನಾಟಕ ತರ್ಕ।
ಸ್ಥಿತಿಯೊಳ್ಸರ್ವ್ವಾಗಮ ದೊ
ಳ್ಚತುರ್ಮುಖ ಪ್ರತಿಮರಯ್ವದಿಂಬರ್ವಿಪ್ರ[ರ್]॥

ಶ್ರೀ[ಸ]ಕುಲ ಮೇರುಗಿರಿ ವೋ
ಲಾ ಸಸಿ ರವಿ ಕಿರಣ ತತಿಗಳುಳ್ಳನ್ನೆಗಮೀ ।
ಶಾಸನದ ಶಿಲಾಸ್ತಂಭಂ
ಭಾಸುರತರಮಾಗಿ ನಿಲ್ಕೆ ವಸಧಾತಳದೊ[ಳ್]॥

ಹಿಂದಣ ಕನ್ನಡಶಾಸನಗಳಲ್ಲಿ ಕಂಡುಬರದ ಚಕ್ರವರ್ತಿ ಸಾಮಂತರ ವಿಸ್ತಾರ ಗುಣಕೀರ್ತನ, ಮಹಾಜನರ ವ್ಯಕ್ತಿತ್ವ, ಪಾಂಡಿತ್ಯಪ್ರತಿಭೆ ಮತ್ತು ಅಂತ್ಯ ಫಲಶ್ರುತಿಪದ್ಯ-ಇವುಗಳಿಂದಾಗಿ ಈ ಶಾಸನಕ್ಕೆ ಒಂದು ಕ್ರಮ ಒಂದು ಅಚ್ಚುಕಟ್ಟುತನ ಸಂದಿದೆ. ಈ ನಿರ್ದಿಷ್ಟ ಚೌಕಟ್ಟು ಮುಂದಣ ಶಾಸನಗಳಿಗೆ ಒಂದು ಮಾದರಿಯೆನಿಸಿ ನಿಂತಿದೆ.

---

೪೧. E.I. vii P. 205

೪೨. BKI. I-i No. 14

ಕೋಟೂರ ಶಾಸನ : (ಕ್ರಿ.ಶ. ೯೦೦)[೪೩] ಬೆಳಗಾವ ಜಿಲ್ಲೆಯ ಪರಸಗಡ ತಾಲೂಕಿನ ಈ ಕೋಟೂರ ಶಾಸನದ ಕಾಲ ಕ್ರಿ.ಶ. ೯ನೆಯ ಶತಮಾನವೆಂದು ಡಾ. ಫ್ಲೀಟರ ಮತ. ಚಾಳುಕ್ಯವಂಶದ ಪರಹಿತರಾಜನಿಗಾಗಿ ವೇಳೆವಡಿಚ ಶಂಭು ಅಗ್ನಿಪ್ರವೇಶಗೆಯ್ದ ರೋಮಾಂಚಕಾರಿ ಘಟನೆ ಇದರ ವಸ್ತು. ಶಂಭುವಿನ ಪರಮಾವಧಿ ರಾಜಭಕ್ತಿಯನ್ನು ಪ್ರಕಟಿಸುವ ಆ ಪೂರ್ಣಪಾಠ ಹೀಗಿದೆ:

ಶ್ರೀಜಯಯುತಂಗೆ ಪರಹಿತ
ರಾಜಂಗೆ ಚಾಳುಕ್ಯವಂಶದಾತಂಗೆ ಲಸ।
ದ್ರಾಜಿತಗುಣಂಗೆ ಸಂಬು ವಿ
ರಾಜಿತಮತಿ ವೇಳೆಗೊಂಡು ಭಯರಹಿತಮನಂ।

ಜಡಿರಜತೋದರದಳ್ಕದೆ
ತಡದಡಿಸದೆ ನಡದು ದಹನಮಂ ಪೊಲಗೊಂಡೋ।
ಗಡಿಸದೆ ಚಿಂತಿಸಿ ಮನದೊಳ್
ಮೃಡನ ನಗುಂವಾಗೆ ಪಾಯ್ದ ಸಂಬುವೆ ಬೀರಮ್॥

ಕಿಚ್ಚಿನೊಳಗಿಟ್ಟು ಸಂಬು ನಿ
ಜೇಚ್ಛೆಯಿನೊಲದಾರಿವಾರಿಮೆಂದನುನಯದಿಂ।
ಬಿಚ್ಚಳಿಕೆವೆರಸಿ ಮನದೊ
ಳ್ಮೆಚ್ಚಿ ಮಹೇಶ್ವರನನಲ್ಲಿ ಚಿಂತಿಸುತಿಟ್ಟಂ॥

ಪೊಗಟಲ್ಕಳುಂಬಮಪ್ಪೊ
ಳ್ಪುಗಳನೆ ತನಗವನೆ ಶಾಶ್ವತಂ ಮಾಡಿ ಧಗ।
ದ್ಧಗಿತಶಿಖಿ ಶೆಕೆಯ ಕೊಳೆ ನಗೆ
ಮೊಗದಿಂ [ಶಂ] [ಭು]ವನೆ ಸಂಬು ನೆನೆಯುತ್ತಿಟ್ಟಂ॥

ಸಂಬುಗಮಚಿಂತ್ಯಮಾಯ್ತು ಗು।
ಣಂ ಬಗೆಯಲ್ಕಳxxx ಬೀರಮನಿದನಾವೊಂ
ಮುಂ ಬಗೆದು ಪೊಗಟಲಱಿವೊಂ
ಸಂಬುವನಂಬುಧಿವಾರಿತ ಧರಣೀತಳದೊಳ್॥

ಮುನ್ನೆಗಟ್ಟ ವೇಳೆವಡಿಚರು
ಮಿನ್ನಪ್ಪೊರುಮೀಗಡುಳ್ಳೊರುಂ ಬಗೆವೊಡವರ್।
ನಿನ್ನನ್ನರೆ ನಿನ್ನನ್ನರೆ
ನಿನ್ನನ್ನರೆ ನಿನಗೆ ನೀನೆ ದೊರೆಯ್ಯೆ ಸಂಬೂ॥

ಚಚ್ಚಾರ್ದ್ಯಂ ಭವನಗುಣಂ
ಬೆಚ್ಚಿರೆ ತನ್ನೊಳ್ಸಮಂತು ಸಂಬು ನಿತಾಂತಂ।
ಕಿಚ್ಚಂ ಪೊಕ್ಕುದನೀ ಜಗ
ಮಚ್ಚರಿವಟ್ಟದನೆ ನುಡಿಯುತಿರ್ಪ್ಪುದು ನಿಚ್ಚಂ॥

---

೪೩. I. A. xx 69

ಉರಿಗೊಡ್ಡಿಮೆಯ್ಯನಳ್ಕದೆ
ಪರಮ ತಪೋಧನ ನಿವಿರ್ತ್ತಿಯಿಂದಟಿದು ಮಹೇ।
ಶ್ವರನನೆ ಚಿಂತಿಸಿ ದಿವ್ಯಾ
ಪ್ಸರೆಯರೊಡ ನೆರೆದು ಸಂಬು ಸಂತೋಷದಿಲ್ದನ್॥

ವೇಳೆವಡಿಚ ಶಂಭುವಿನ ರಾಜಭಕ್ತಿಯನ್ನು ವರ್ಣಿಸುವ ಈ ಎಂಟು ಪದ್ಯಗಳು, ಅನಾಮಧೇಯ ಕವಿಯೊಬ್ಬನ ಉತ್ಕಟಕಾವ್ಯಶಕ್ತಿಯನ್ನು ವ್ಯಕ್ತಗೊಳಿಸುತ್ತದೆ. 'ಕಿಚ್ಚಿನೊಳಗಿಲ್ದು, ಬಿಚ್ಚಳಿಕೆವೆರಸಿ, ಧಗದ್ಧಗಿತ ಶಿಖಿ, ಕಿಚ್ಚಂ ಪೊಕ್ಕಂ, ಉರಿಗೊಡ್ಡಿಮೆಯ್ಯಂ' ಎಂಬ ಮಾತುಗಳ ಮೂಲಕ ಈ ರೋಮಾಂಚಕ ಘಟನೆ ಇನ್ನಷ್ಟು ಪರಿಣಾಮಕಾರಿಯಾಗಿದೆ. ಲಂರಷ್ಟು ಬಳಸಲಾದ ದೇಶಿಯು ಭಾವಾಭಿವ್ಯಕ್ತಿಗೆ ತಕ್ಕ ವಾತಾವರಣವನ್ನು ಕಲ್ಪಿಸಿದೆ. "ನಿನ್ನನ್ನರೆ ನಿನ್ನನ್ನರೆ ನಿನ್ನನರೆ ನಿನಗೆ ನೀನೆ ದೊರೆಯ್ಯೆ" ಎಂಬಲ್ಲಿ ಮಾತು ಹಂತಕಟ್ಟಿ ಹಬ್ಬಿದೆ. ಆದುದರಿಂದ ಪಂಪಪೂರ್ವಯುಗದಲ್ಲಿ ಇದೊಂದು ಅನುಪಮ ಪದ್ಯಪುಂಜವೆನಿಸಿದೆ.

ಹೀಗೆ ನಿರೂಪಣಾತ್ಮಕ ಗದ್ಯ, ಬಿಡಿಪದ್ಯಗಳಿಂದ ಪ್ರಾರಂಭವಾಗಿ, ಕ್ರಮೇಣ ಕಾವ್ಯತೇಜವನ್ನು ತುಂಬಿಕೊಳ್ಳುತ್ತ ಮುನ್ನಡೆದ ಈ ಅವಧಿಯ (ಕ್ರಿ.ಶ. ೪೫೦-೯೪೧) ಕನ್ನಡಶಾಸನಗಳಿಗೆ ಸಾಹಿತ್ಯವನ್ನೊದಗಿಸಿದ ಕವಿಗಳ ಚರಿತ್ರೆ, ನಮ್ಮ ಕೈಗೆ ನಿಲುಕದೆ ನಿಂತಿದೆ. ಕೊನೆಯ ಪಕ್ಷ, ಕೆಲವು ಶಾಸನಗಳ ಮೂಲಕ ಅವರ ಕಾವ್ಯಸಿದ್ಧಿಯನ್ನಾದರೂ ಇಲ್ಲಿ ಅರಿಯಬಹುದಾಗಿದೆ.

❖❖

ಶಾಸನಕವಿಗಳು

ಸಮಸ್ತಭಾರತದ ಶಾಸನಪ್ರಪಂಚದಲ್ಲಿ ಕನ್ನಡವನ್ನು ಸಂಸ್ಕೃತದ ಮಗ್ಗುಲಿಗೆ ನಿಲ್ಲಿಸಿದರು, ಈ ನಾಡಿನ ಶಾಸನಕವಿಗಳು. ಇವರನ್ನು ಗುರುತಿಸಿ ಒಂದು ವ್ಯವಸ್ಥಿತ 'ಶಾಸನ ಕವಿಚರಿತೆ'ಯನ್ನು ಬರೆಯುವುದು ಇಂದಿಗೂ ಒಂದು ಕೊರತೆಯಾಗಿ ಉಳಿದಿದೆ. ಈ ಕೊರತೆಯನ್ನು ಕೆಲಮಟ್ಟಿಗೆ ತುಂಬಿಕೊಡುವ ರೀತಿಯಲ್ಲಿ ಕವಿರಾಜಮಾರ್ಗ ಪರಿಸರದ ಶಾಸನಕವಿಗಳ ವಿಷಯವನ್ನು ಇಲ್ಲಿ ಪರಿಶೀಲಿಸಬಹುದು.

'ಬರೆದಂ ಲೋಕಯ್ಯ'[೪೪] 'ಬೆಸಗೆಯ್ದೊಂ ಕೊಯತೂರ ವಿಕ್ರಮಾದಿತ್ಯನ್'[೪೫] , 'ಬರೆದೊಂ ಲೋಕಯ್ಯಂ ಬೆಸಗೆಯ್ದನಾxxxಸಿಂಗ'[೪೬], 'ಬರೆದೊನಿದಂ ಶ್ರೀವಿಜಾಯಂ..... ಈ ಕನ್ದಂಗಳನೊರೆದಂ ರವಿನಾಗಭಟ್ಟಂ'[೪೭], 'ದಿನಕರಯ್ಯ ಸೆಟ್ಟಿಯ ಲಿಕಿತಂ'[೪೮], 'ಬೂವಯ್ಯನಕ್ಕರಂ'[೪೯], 'ಆನನ್ದೂರ ಮೂದಚ್ಚಾರಿ ಮಾಡಿದನ್'[೫೦] ಎಂದು ಶಾಸನದ ಕೆಳತುದಿಯಲ್ಲಿ ಸೂಚಿತರಾದ ಕವಿ, ಲಿಪಿಕಾರ, ರೂವಾರಿಗಳಿಂದ ಶಾಸನಕವಿಯನ್ನು ಹುಡುಕುವುದು ದೊಡ್ಡ ತೊಡಕು. ಇದನ್ನು ಅರ್ಥಮಾಡಿಕೊಂಡು ಇಲ್ಲಿ ಕವಿಗಳನ್ನು, ತಪ್ಪಿದರೆ ಸಾಕ್ಷರಿಗಳನ್ನು ಹೆಸರಿಸುವ ಪ್ರಯತ್ನ ಮಾಡಲಾಗಿದೆ.

೧. ಅಚಲನ್ (೮ನೆಯ ಶತಮಾನ):[೫೧]

ಪಟ್ಟದಕಲ್ ವಿರೂಪಾಕ್ಷದೇವಾಲಯದ ಈಶಾನ್ಯಕಂಬದ ಮೇಲೆ ಸಂಸ್ಕೃತದಲ್ಲಿ, ದಕ್ಷಿಣದ ಒಳಮಗ್ಗಲು ಗೋಡೆಯ ಮೇಲೆ ಕನ್ನಡದಲ್ಲಿ 'ನಟಸೇವ್ಯನ್' ಎಂಬವನ ನರ್ತನಸಿದ್ಧಿಯನ್ನು 'ಅಚಲನ್' ಎಂಬ ಕವಿ ಬಾಯ್ತುಂಬ ಬಣ್ಣಿಸಿದ್ದಾನೆ. ಈ ಶಾಸನಗಳ ಕಾಲ ೮ನೆಯ ಶತಮಾನವೆಂದು ಮಧುರಚೆನ್ನರ ಊಹೆ.[೫೨]

---

೪೪. E.C.I. ಮಡಕೇರಿ ೨೮

೪೫. E.C. x ಮುಳಬಾಗಿಲ ೧೬೧

೪೬. BKI, I-i No. 34

೪೭. K.I. ii No. 4

೪೮. E.C. iv ಎಳಂದೂರ ೨೫

೪೯. E.C. i No. 3

೫೦. E.C. xಶಿಡ್ಲಘಟ್ಟ ೩೨

೫೧. ಜಯ. ೯-೬ ಪು. ೪೩೧

೫೨. ಜ.ಕ. ೯-೬ ಪು. ೪೩೧

ಈಶಾನ್ಯಕಂಬದ ಮೇಲೆ -

ಭರತನುತವಚನ ರಚನಾ
ವಿರಚಿತ ನಟಸೇವ್ಯಸಿಂಘನಾದೇನ
ಪರನಟ ಮದಾಂಧ ಹಸ್ತಿಃ
ಪರಿಹೀನ ಮದೋ ಭವತ್ಯೇವ||

ನಟಸೇವ್ಯ ಭರತಮತಯುತ
ಪಟುತರ ವಚನಾಶನಿ ಪ್ರಪಾತೇನ
ಕುಟಿಲೋನ್ನತ ನಟಶೈಲ
ಸ್ಫುಟಿತಾನತ ಮಸ್ತಕಃ ಪತತಿ||ಅಚಲನ್

ದಕ್ಷಿಣದ ಒಳಮಗ್ಗಲು ಗೋಡೆಯ ಮೇಲೆ,

ಖ್ಯಾತಮಹಾಪ್ರಭಾವ ಭರತಾಗಮಯುಕ್ತ ಬಹುಪ್ರಕಾರದಾ
ಮಾತಿನೊಳೆಲ್ಲಮೇನೊ ನಟಸೇವ್ಯನ ಮುನ್ತೆ ಯಥೋಕ್ತಮಾರ್ಗದಿ|
ನ್ನೀತೆಱದಿಳ್ಪುದಗ್ರತಲ ಸಞ್ಚರಮೆಮ್ಬುದಿದೆನ್ದು ಪೇೞ್ವೊಡಿ
ನ್ನಾತನೆ ನರ್ತ್ತಕಂ ನಟರೊಳಗ್ಗಳಮೀ ಭುವನಾನ್ತರಾಳದೊಳ್||

ದೇವಯ್ಯಗಳಾ ಮಗ ಅಚಲನ್.

ಈ ಶಾಸನಗಳು ದೇವಯ್ಯಗಳ ಮಗ ಅಚಲನ್‌ನ ಉಭಯಭಾಷಾ ಕವಿತ್ವಕ್ಕೆ ಕನ್ನಡಿಯೆನಿಸಿವೆ. ಸಂಸ್ಕೃತಪದ್ಯಗಳಲ್ಲಿಯ ಪ್ರಾಸಯೋಜನೆ ಈತನ ಕನ್ನಡತನದ ಕುರುಹು. ಭಾವದೀಪ್ತಿ ಭಾಷಾಶುದ್ಧಿಗಳಲ್ಲಿ ವಿಶೇಷ ಸಿದ್ಧಿಯನ್ನು ಸಾಧಿಸಿದ ಇದು, ಪಂಪಪೂರ್ವಯುಗದ ವಿಶಿಷ್ಟಶಾಸನ.

೨. ದಿವಾಕರ (೯ನೆಯ ಶತಮಾನ):[೫೩]

ಸೇಲಂ ಜಿಲ್ಲೆಯ ಧರ್ಮಪುರಿಯಲ್ಲಿ ದೊರೆತ ಈ ಕನ್ನಡಶಾಸನದ ಕೊನೆಗೆ ಬರುವ 'ಬರೆದೊಂ ದಿವಾಕರಂ' ಎಂಬ ಮಾತು ಕವಿಸೂಚನೆಯೆಂದು ಟಿ.ಟಿ. ಶರ್ಮಾ ಅವರ ಮತ. ಶೈವಮತೀಯನಾದ ಈತನು, ತನ್ನ ಗುರು ವಿದ್ಯಾರಾಶಿಯ ಮಹಿಮೆಯನ್ನು ಈ ಶಾಸನದಲ್ಲಿ ಹೀಗೆ ಕೀರ್ತಿಸಿರುವನು :

ಕಲಿಚೋರೇಶ್ವರ ಪಲ್ಲವೇಶ್ವರ ಮಹಾಭೋಗೇಶ್ವರೋತ್ತುಂಗ ನಿ
ರ್ಮಲ ನನ್ನೇಶ್ವರ ಕೀರ್ತಿಶಾಸನ ಲಸತ್ಕಾಞ್ಚೀ ಭುಜಂಗೇಶ್ವರಾ|
ವಲಿ ಕಣ್ಣೇರವ ಕೂಪ ನಂದನವನ ಪ್ರಾಕಾರ ಸಂಸ್ಥಾನದಿ
ನ್ನೆಲಕ್ಕೆಲ್ಲಂ ಗಡಿಚನ್ದಮಾಯ್ತು ತಗಡೂರೀ ವಿದ್ದೇರಾಶೀನ್ಪುರಿಂ||

ಅಕ್ಕರಿಗಂಗೆ ಬೇಡಿದ ನರಂಗೆ ತಪಸ್ವಿಗೆ ದೇಸಿಗಂಗೆ ಕ
ಟ್ಟೊಕ್ಕಲಿಗಂಗೆ ದೀನ ನಟ ಪಾಠಕ ವನ್ದಿಜನಕ್ಕೆ ರಾಗದಿ
ನ್ನಕ್ಕೊಡೆ ನಿನ್ದು ನೋಡಿದೊಡೆ ಮೆಚ್ಚಿದೊಡೋತೊಡೆ ಕೂರ್ತೊಡಿಗಳ್ಕ
ಮ್ಮಿಕ್ಕೆದನ್ಗೀವೆನೆಂಬುದಿದು xx ವಗುಣಂ ಸಲೆ ವಿದ್ದೆರಾಶಿಯ||

---

೫೩. Madras Epigraphical Collection for 1901, No. 309,ಮತ್ತು MASI. xiii, P. 1ನೋಡಿರಿ.

ಗುರುಗಳುದ್ರಬೋಜಂಗದ xxxಗೃಹನ್ನುಂಬೇಶ್ವರನ್ನದ್ಭುಜಂ
ಗರ ಶಿಷ್ಯರ್ವ್ವರ ಲಾಕುಳಾಗಮಿಕ ವಿದ್ಯಾರಾಸಿಗಳ್ಪಾಸನಂ
ಬರೆದೊಂ ಸನ್ನಿದಿವಾಕರನ್ನೆಗಬ್ಬುದೀ ಭೋಗೇಶ್ವರ ಸ್ಥಾನಮು
ರ್ವ್ವರೆಗಿನ್ನೊನ್ನಜೆನೊನ್ನಪೂಜxxವಿದನಿನ್ನೇ ವಣ್ಣಿಪೋಂ ಬಣ್ಣಿಪೋಂ॥

ಶ್ರೀ ಶಿವಪೂಜೆಯೊಳೊಂದು ಸ।
ದಾಶಿವಯೋಗದೊಳೊಂದು ರೂಪಮರೇ ವಾ।
ರಾಶಿವ್ಯೆತರನೆ xxವಿದ್ಯಾ।
ರಾಶಿ ಶಿವಜ್ಞಾನಕರ್ಮ ನಿಮ್ಮಿತರಾದರ್॥

ಲಾಕುಳಶೈವಕ್ಕೆ ಸಂಬಂಧಿಸಿದ "ಕಾಂಚೀ ಭುಜಂಗೇಶರಾವಲಿ" ಶಾಖೆಯ ರುದ್ರಭೋಜಂಗರ ಶಿಷ್ಯ ವಿದ್ಯೆರಾಶಿಯತಿಯ ವರ್ಣನೆ ಇಲ್ಲಿದೆ. ಈ ಶಾಸನದ ಕಾಲ ಕ್ರಿ.ಶ. ೭೩೪ ಎಂದು ಟಿ. ಟಿ. ಶರ್ಮಾ, ೯ನೆಯ ಶತಮಾನವೆಂದು ಎಚ್. ಕೃಷ್ಣಶಾಸ್ತ್ರಿಗಳು ಹೇಳುತ್ತಾರೆ. ಭಾಷೆ, ಬಂಧಗಳನ್ನು ಗಮನಿಸಿದರೆ ಕೃಷ್ಣಶಾಸ್ತ್ರಿಗಳ ಅಭಿಪ್ರಾಯ ನಿಜವೆಂದು ತೋರುತ್ತದೆ.

೩. ರೂವಯ್ಯ (ಕ್ರಿ.ಶ. ೮೬೫):[೫೪]

ಧಾರವಾಡ ಜಿಲ್ಲೆಯ ಸಿಗ್ಗಾವಿಗ್ರಾಮದ ಶಿಲಾಶಾಸನದ ಕೊನೆಯ 'ಶ್ರೀರೂವಯ್ಯನ ಲಿಖಿತಂ' ಎಂಬುದು ಕವಿಸೂಚನೆಯಾಗಿರಬಹುದು. ಇದು ರಾಷ್ಟ್ರಕೂಟ ನೃಪತುಂಗನ ಕಾಲದ ಒಂದು ಗದ್ಯ ಶಾಸನ.

ಸ್ವಸ್ತ್ಯಮೋಘವರ್ಷ ಶ್ರೀಪೃಥಿವೀವಲ್ಲಭ ಮಹಾರಾಜಾಧಿರಾಜ ರಾಜಪರಮೇಶ್ವರ ಭಟರರ ರಾಜ್ಯಾಭಿವೃದ್ಧಿಯೊಳ್ಶಕನೃಪಕಾಲಾತೀತ ಸಂವತ್ಸರ ಶತಂಗಳೆಟ್ಟೂಣ್ಭತ್ತೇೞನೆಯ ಪಾರ್ತ್ಥಿವ ಸಂವತ್ಸರಂ ಪ್ರವರ್ತ್ತಿಸೆ ಪುರಿಗೆಱೆನಾಡ ಕುಪ್ಪೆಯನಾಳೆ ವೈಶಾಖಮಾಸದ ಪೌರ್ಣ್ನಮಾಸೆಯನ್ದೆಟ್ಟುಣುಸೆಯ ನಾಲ್ವದಿಮ್ಬರ್ಮ್ಮಹಾಜನಮುಂ ಮೊನಿಗೊರವರುಂ ಮೂಲಸ್ಥಾನದ ಮಹಾದೇವರಾಳ್ವಿಲಂ ವಳ್ಳಿಯ ಶಾಸ[ನ]ಮುಮಾ ದೇವರ ಮೂಡದೆಸೆಯೊಳ್ಪೂಡ ವಡ್ಡವ[ನ]ಯ ಪೊಲಮೇರೆಯೇ ತೆಂಕದೇವಂಗೆಯ್ಯೆ ಮೇರೆಪಡುವ ನಿಱುಗಲ್ಮೇರೆ ಬಡಗ ಕಾಲ[ಡಿ]ಯ ಪೊಲಮೇರೆಯೆ ಮೇರೆಮಾಡಿ ಎಣ್ಬತ್ತಯ್ವತ್ತರ್ಕ್ಕೆಯ್ಯುಮಾಱುತೋಣ್ಟದ ನೆಲನುಮಾದಿತ್ಯಭಟರರ ಸ್ಥಾನವುವ ರಕ್ಷಿಸಲ್ವೇೞ್ಚಿಸಲಿವರೆ ಸಮರ್ತ್ಥರೆಂದು ಗೋಕರ್ಣ್ನಪಣ್ಡಿತಭಟರರ್ಗ್ಗೆ ಸರ್ವ್ವಬಾಧಾಪರಿಹಾರಂ ಕಾಲಂ ಕಚ್ಚಿ ಕೊಟ್ಟರೀ ಸ್ಥಾನಮನಾಳ್ವ ಗೊರವರಖಣ್ಡಿತ ಬ್ರಹ್ಮಚಾರಿಯಪುದು ಬ್ರಹ್ಮಚರ್ಯ್ಯ ಹೀನರನೀ ಸಮಯದ ಗೊರವರ್ಕ್ಕಳ್ಕಳೆವೋರೀ ಪದ್ಧತಿಯಂ ಶಿಲಾಲೇಖಮಾಡಿ ನಿಱಿಸಿದರ್ಪ್ಪಣ್ಡಿತಭಟಾರರೀ ಧರ್ಮ್ಮವಂ ಕಾದೊಂಗಶ್ವಮೇಧದ ಫಲಂ ಅೞಿಯಲ್ಬಗೆವೊಂಗೆ ಬ್ರಹ್ಮಾತಿಯ ಪಾಪಮಕ್ಕುಂ. ನಾಗದೇವನೀ ಧರ್ಮ್ಮದೊಳ್ಗೋಷ್ಠಿ ಅದೊಂ. ಶ್ರೀ[ರೂ]ವಯ್ಯನ ಲಿಖಿತಮ್॥

ಇಲ್ಲಿಯ "ಸ್ಥಾನಮನಾಳ್ವ ಗೊರವರಖಂಡಿತ ಬ್ರಹ್ಮಚಾರಿಯಪ್ಪುದು, ಬ್ರಹ್ಮಚರ್ಯ್ಯಹೀನರನೀ ಸಮಯದ ಗೊರವರ್ಕ್ಕಳ್ಕಳೆವೋರ್" ಎಂಬ ಮಾತು ಆ ಕಾಲದ ಧಾರ್ಮಿಕ ಕಟ್ಟಳೆಗೆ ನಿದರ್ಶನವೆನಿಸಿದೆ. ಸಾಹಿತ್ಯಗುಣವಿಲ್ಲದ ಈ ಶಾಸನ ಸಮಕಾಲೀನ ವ್ಯಾವಹಾರಿಕ ಗದ್ಯಕ್ಕೆ ಮಾದರಿಯೆನಿಸಿದೆ.

---

೫೪. K.I.-i No. 13.

೪. ನಾಮಯ್ಯ (ಕ್ರಿ.ಶ. ೮೯೦):[೫೫]

ಕೋಲಾರ ಜಿಲ್ಲೆಯ ಮುಳಬಾಗಿಲ ತಾಲೂಕಿನ ಅವನಿಗ್ರಾಮದ ಶಾಸನ, 'ಬರೆದನ್ನಾಮಯ್ಯಂ' ಎಂದು ಮುಕ್ತಾಯಗೊಳ್ಳುತ್ತದೆ. ಇದು ಕವಿಯ ಹೆಸರೆಂದು ಪಂಡಿತರ ಅಭಿಪ್ರಾಯ. ನೊಳಂಬ ಪೊಳಲ್ಚೋರನ ಪಟ್ಟಮಹಿಷಿ ದೀವಾಂಬಿಕೆಯ ಪುಣ್ಯಕಾರ್ಯಗಳನ್ನು ಉಲ್ಲೇಖಿಸುವ ಈ ಶಾಸನದ ಕಾಲ ಕ್ರಿ.ಶ. ಸು. ೮೯೦.

ಶ್ರೀವಧು ಧರೆ ಪೊಳಲ್ಚೋ
ರಾವನಿಪಂಗಗ್ರಮಹಿಷಿ ಭುವನಾಂಬಿಕೆ ವಾ।
ಗ್ದೇವಿಯರ ದೊರೆಯೆನಿಸಿದ
ದೀವಬ್ಬರಸಿಯರ ದೊರೆಗೆಟ್ಟಿರ್ ಪೆಱರೊಳರೇ॥
... ...

ವಿದಿತಂ ಲೋಕಕ್ಕೆ ಮುನ್ನಂ ರಘುಕುಳದಹನೋಗ್ರೇಷುವಿಂ ಕಾಯ್ದು ತಿಣ್ಣಂ
ಕುದಿಗೊಣ್ಡಿಟ್ಟುಕೃತ್ತಗಸ್ತ್ಯಂ ಕುಡಿಯುತುಗುಟ್ಟನಿಂ ಕಟ್ಟು ಪಟ್ಟಿಟ್ಟುದಿನ್ತ।
ಪ್ಪದು ಪೆಂಪನ್ತಾಳ್ದಿತೆನ್ದನ್ದಱಿಯರೆ ಲವಣಾಂಭೋಧಿಯಂ ಪೋಲಿಸಲ್ಕೇ
ಡಿದುವೆತ್ತಾನೆತ್ತಲೆಂಬನ್ತತಿ ಬಹುಳ ಜಳನ್ದೀವಳಬ್ಬಾ ಸಮುದ್ರಂ॥

ಪದೆದಾಯಾಸಕ್ಕೆ ಪಕ್ಕಾಗಿರೆ ಗಡ ಪಿರಿದು ಭ್ರಾಂತಿನಿಂ ಪೋ[ಂ]ದೊನ್ದ
ಬ್ದದೊಳಿನ್ತೆನ್ತಾನುಮೆಯ್ದುತ್ತಿರದಮರನದೀಕಾನ್ತೆಯಂ ಕಾಣ್ಬರೀ[...
....]ದೇಸರ್ಸ್ವಯ್ಯಿದೇಂ ಸಂಭವಿಸಿತೊ ನಮಗಪ್ಪಟ್ಕಱಿಂಗಂಗೆ ತೆಂಕ
ಣ್ಗಿದಿರಂ ಬನ್ದಿಟ್ಟುದೆಂಬನ್ತತಿ ಬಹಳ ಜಳನ್ದೀವಳಬ್ಬಾ ಸಮುದ್ರಂ॥

ಮನುಚರಿತಂಮ್ಮಹೇನ್ದ್ರನೃಪನಿದ್ದೆ ಪರೋಕ್ಷದೊಳಾ ಮಹಾತ್ಮನಾ
ಜನನಿ ಮಹೇನ್ದ್ರನಾಮದೆ ಕೊಳಂ ನಿಜನಾಮದೊಳಿನ್ತಟಾಕಮೀ ।
ಶನ ಭವನಮ್ಮುಕುಂದ ಭವನಂಗಳನಿಂಬಿನಿ ಮಾಡಿ ಧರ್ಮ್ಮವ
ರ್ದ್ಧನದೆ ಕನೀಯನನ್ದನನ ರಾಜ್ಯಮನೀಕ್ಷಿಸುಗಾವ ಕಾಲಮುಂ॥

ನೆಟ್ಟನೆ ಕದಂಬವಂಶಂ
ಪುಟ್ಟಿದ ಮನೆ ಪಲ್ಲವೇನ್ದ್ರನಿಜಿವನೊಳಂಬಂ।
ಪುಟ್ಟಿದ ಮಗನಿಗೆ ಮುಗಿಲಂ
ಮುಟ್ಟಿಪುದುಂ ಪೆಂಪು ದೀವಳಬ್ಬರಸಿಯರ॥
... ...

ದೀವಾಂಬಿಕೆಯ ಕೊಳ, ತಟಾಕ, ಶಿವದೇವಾಲಯ, ವಿಷ್ಣುಗೃಹನಿರ್ಮಾಣಕಾರ್ಯಗಳನ್ನು ವಿವರಿಸುವ ಈ ಶಾಸನ ಅತ್ತಿಮಬ್ಬೆಯ ಮಹಾಕಾರ್ಯಗಳನ್ನು ನೆನಪಿಗೆ ತರುತ್ತದೆ. ಇಲ್ಲಿಯ ತಟಾಕ ವರ್ಣನೆ ಮುಂದಣ ಕಾವ್ಯಗಳಲ್ಲಿಯ ತಟಾಕ ವರ್ಣನೆಗೆ ಮಾದರಿಯೆನಿಸಿದೆ.

---

೫೫. E.C. xಮುಳಬಾಗಿಲ ೩೮.

೫. ಬೆಳ್ದೇವ (ಕ್ರಿ.ಶ. ೯೧೦):[೫೬]

ಮೈಸೂರು ಜಿಲ್ಹೆಯ ಎಡೆತೊರೆ ತಾಲೂಕಿನ ಚಿಕ್ಕಹನಸೋಗೆ ಗ್ರಾಮದಲ್ಲಿ 'ಬೆಳ್ದೇವಂ ಬರೆದಂ' ಎಂದು ಕೊನೆಗೊಳ್ಳುವ ಶಾಸನವಿದೆ. ಏಳಾಚಾರ್ಯನೆಂಬವನ ಸಮಾಧಿಮರಣ ಇತ್ಯಾದಿ ವಿಷಯಗಳನ್ನು ಈ ಶಾಸನ ಸುಂದರವಾಗಿ ಕಥಿಸುತ್ತದೆ.

ಬಾಳೋ ಕಾಳುರಿ ಮೇಣ್ವೆಯುದ್ವಶಕರುಂ ಕನ್ದರ್ಪ್ಪರೂಪ ಪ್ರಭಾ
ಜಾಳಾಳಂಕೃತರಾಗೆಯುನ್ನತಿ ವಿದೂರಂ ಭೀಷ್ಮರುಂ ಸದ್ದಯಾ
ಭೂಳೋಕೋದರ ದಾನಿಯುದ್ಧತಧನುಂ ನೆಣ್ಣೇಕುಲಂ ನೆಟ್ಟನಿ
ನ್ತೇಳಾಚಾರ್ಯ್ಯಮುನೀನ್ದ್ರರಾದರದಱಿಂನ್ದಾಶ್ಚರ್ಯಮೇರುಂ ಜಗಂ॥

ಒಂದು ತಿಂಗಳ್ಸಾನಮಂ ಭಾವಿಸಿ ಸಮಾಧಿ ಮರಣದಿನ್ದಮಾಯ್ದುನೋನ್ತು ಸಗತಿಗೆ ಸನ್ದರ್. ಅಷ್ಪೋಪಾಸದೆ ಕಲ್ನೆಲೆಯ ದೇವರ್ ತಮ್ಮ ಗುರುಗಳೇಳಾಚಾರ್ಯ್ಯದೇವರ್ಗೆ ಪರೋಕ್ಷವಿನಯ ನಿಸಿಧಿಗೆಯಂ ನಿಱಿಸಿದರ್

ಎಱೆಯ ಸಮುದ್ರವೇಷ್ಟಿತ ಧರಾತಳಮಂ ಪ್ರತಿಪಾಳಿಸುತ್ತುಮಿ
ತ್ತೆರಗಮಹಾರಿ ಮಣ್ಡಳಿಕರಿಂ ಬೆಸಕೆಯ್ಯೆ ವಿಳಾಸಯೊಳ್ಗೆಯಿಂ।
ಮೆಱೆವ ಕರೋರನೆನ್ದೆನಿಸಲಾಳಿಪೊರೀಸ್ಸಿತ ಸನ್ಧ್ಯರಿನ್ದು ವ
ನ್ದೆರಗ ಸಮನ್ತು ಕಲ್ನೆಲೆಯ ದೇವರ ಪಾದಪಯೋರುಹಂಗಳೊಳ್॥

ಸ್ಥಾವರ ಜಙ್ಗಮ ತೀರ್ಥಂ
ಭಾವಿಸಿ ಪೇಟ್ದಾಗಳೊಂದೆ ಗೊಮ್ಮಟದೇವ ।
ಸ್ಥಾವರ ತೀರ್ಥಂ ಕಲ್ನೆಲೆ
ದೇವಬ್ಭೂವಳಯದೊಳಗೆ ಜಙ್ಗಮತೀರ್ತ್ಥಂ॥

ಒಂದು ತಿಂಗಳ ಉಪವಾಸದಿಂದ ಸಮಾಧಿಮರಣವನ್ನಪ್ಪಿದ ನೆಣ್ಣೆಕುಲ(?)ದ ಏಳಾಚಾರ್ಯ ಯತಿಗಳ ಹೆಸರಿನಲ್ಲಿ, ಅವರ ಶಿಷ್ಯ ಕಲ್ನೆಲೆಯದೇವರು ನಿಸದಿಗೆಯನ್ನು ಸಲ್ಲಿಸಿದುದು ಇದರ ವಸ್ತು. ಈ ಶಾಸನದ ಆದಿ ಪದ್ಯದಲ್ಲಿ ಗುರುವರ್ಣನೆ, ಕೊನೆಯ ಪದ್ಯದಲ್ಲಿ ಶಿಷ್ಯವರ್ಣನೆಗಳು ಮನಂಬುಗುವಂತೆ ಮೂಡಿನಿಂತಿವೆ. (ಶ್ರವಣಬೆಳಗೊಳದ) ಗೊಮ್ಮಟದೇವ ಸ್ಥಾವರತೀರ್ಥ, ಈ ಕಲ್ನೆಲೆದೇವ ಜಂಗಮತೀರ್ಥವೆಂಬ ಇಲ್ಲಿಯ ಹೇಳಿಕೆಯು ಈ ಶಾಸನದ ಕಾಲ ಮತ್ತು ಗೊಮ್ಮಟನ ಸ್ಥಾಪನಕಾಲಗಳಲ್ಲಿ ಹೊಂದಾಣಿಕೆಯನ್ನು ಬಯಸುತ್ತದೆ.

೬. ಗುಣವರ್ಮ(ಕ್ರಿ.ಶ. ೯೧೫):[೫೭]

ಕಡಪಾ ಜಿಲ್ಲೆಯ ದಾನವುಲಪಾಡ ಶಾಸನದ ಕೊನೆಗೆ "ಅನುಪಮಕವಿಯ ಸೇನಬೋವಂ ಗುಣವರ್ಮ್ಮಂ ಬರೆದಂ" ಎಂಬ ಮಾತು ಬರುತ್ತದೆ. ಹನ್ನೊಂದು (ಕನ್ನಡ ೮, ಸಂಸ್ಕೃತ ೩) ಕಂದಪದ್ಯಗಳಲ್ಲಿ 'ಅನುಪಮಕವಿ' ಎಂಬ ಬಿರುದಿನ ಶ್ರೀವಿಜಯದಂಡನಾಥನ ಬಹುಮುಖ ವ್ಯಕ್ತಿತ್ವವನ್ನು ವರ್ಣಿಸುವ ಈತನು ಶೂದ್ರಕದ ಕರ್ತೃ ಆದಿಗುಣವರ್ಮನಾಗಿರಬಹುದೆಂದು ಟಿ.ಟಿ. ಶರ್ಮರ ಮತ.[೫೭ಎ] 'ವಸುಧಾಂ ಇಂದ್ರಶಾಸನಾತ್ ಸಂರಕ್ಷನ್' ಎಂಬ ಮಾತನ್ನಾಧರಿಸಿ ಈ ಶಾಸನದ ಕಾಲ ರಾಷ್ಟ್ರಕೂಟ ಇಂದ್ರ III ನ ಕಾಲ ಅಂದರೆ ಕ್ರಿ.ಶ. ಸು. ೯೧೫ ಎಂದು ಮಿಕ್ಕ ಪಂಡಿತರ ಅಭಿಪ್ರಾಯ.

---

೫೬. E.C. xiv, ಎಡತೊರೆ ೮೫

೫೭. E.I. x. P. 150-152 ೫೭ಎ. MASI. No. xiii. P. 3

ಪತಿಯ ಬೆಸದಿಂದಮಹಿತರ
ನತಿಕೋಪದಿನಿಕ್ಕಿ ಗೆಲ್ದು ಪ್ರತಿಪಾಳಿಸಿದಂ।
ಚತುರುದಧಿ ವಳಯಮೆಲ್ಲಮ
ನತಿರಥನೀ ದಣ್ಣನಾಯಕಂ ಶ್ರೀವಿಜಯಂ॥

ತುರಗ ಘಟಂಗಳನೊಡ್ಡಿದ
ಕರಿಘಟೆಯಂ ಪಿರಿಯ ನೆರವಿಯಂ ಬಲ್ಲಣಿಯಂ।
ಧುರದೆಡೆಯೊಳಿಱಿದು ಗೆಲ್ದುಂ
ಕರದಸಿ ಕರಮುರಿದು ರಣದೊಳನುಪಮಕವಿಯ॥
... .
ವಸುಮತಿಯೊಳಗಿಟ್ಟಿಂಟುಂ
[ದೆ]ಸೆಗಳ ಕುಸುಕುರಮನೆಯ್ದಿ ಮಾಣದೆ ಮತ್ತಂ।
ಬಿಸರುಹ ಗರ್ಭಾಣ್ಡಕ್ಕಂ
ಪಸರಿಸಿದುದು ಕೀರ್ತಿ ನೆಟ್ಟನನುಪಮಕವಿಯ॥
... ...
ಅಟ್ಟವಿಧ ಕರ್ಮ್ಮಮೆಲ್ಲಮ
ನಟ್ಟುಂಬರಿಗೊಂಡು ಕೊಡಿಪೆನೆಂಬುದೆ ಬಗೆಯಿಂ।
ಪುಟ್ಟಿದನುದಾತ್ತ ಸತ್ವಂ
ನೆಟ್ಟನೆ ವಿಬುಧೇನ್ದ್ರವನ್ದ್ಯನಱಿವಿಂಗೋಜಂ॥

ತಾನಱಿದು ತೊ[ಱ]ದು ನೆಟ್ಟನೆ
ಮಾನಿಸವಾಟಾವುದೆಂದು ಸ[ಂ]ನ್ಯಾಸನದೊಳ್।
ಮಾನಸಿಕೆಗಿಡದೆ ಕೊಣ್ಡೊನ
ನೂನ ಸುಖಾಸ್ಪದಮನಟ್ಟಿಯೊಳ್ ಶ್ರೀವಿಜಯಂ॥

ನಿರ್ಗ್ಗತ ಭಯನೀ ನರಸಂ
ಸರ್ಗ್ಗಮನಾನೊಲ್ಲೆನೆಂದು ಪೇಸಿ ಬಿಸುರ್ವ್ವಂ॥
ಸ್ವರ್ಗದ ಭೋಗಮನುಂಡಪ
ವರ್ಗಕ್ಕಡಿಯಿಟ್ಟೊನಱಿದೊನನುಪಮಕವಿಯಂ॥

ದಣ್ಡಿನ ಸಾಮಗ್ರಿಗೆ ಪರ
ಮಣ್ಡಳಮಳ್ಕಾಡೆ [ಸ]ರ್ವ್ವ ವಿಕ್ರಮತುಂಗಂ।
ದಂಡಿನ ವೀರಶ್ರೀಗೊ
ಳ್ಗಣ್ಡಂ ಶ್ರೀ ದಣ್ಣನಾಯಕಂ ಶ್ರೀವಿಜಯಂ॥

ಚಣ್ಡಪರಾಕ್ರಮನುಱದರಿ
ಮಣ್ಡಲಿಕರನಟ್ಟಿ ಪಿಡಿದು ಪತಿಗೊಪ್ಪಿಸುವೊ।
ಳ್ಗಣ್ಡಂ ಪ್ರಚಣ್ಡನೀ ಭೂ
ಮಣ್ಡಲದೊಳ್ದಣ್ಣನಾಯಕಂ ಶ್ರೀವಿಜಯಂ॥

'ಅಱಿವಿಂಗೋಜ', 'ಅನುಪಮಕವಿ' ಎಂಬ ಬಿರುದುಗಳನ್ನು ಲಕ್ಷಿಸಿ ಈತನು ಕವಿರಾಜಮಾರ್ಗದ ಕರ್ತೃ ಶ್ರೀವಿಜಯನೆನ್ನಬೇಕೆಂದರೆ ಕ್ರಿ.ಶ. ೯೧೫ ಎಂಬ ಮಿತಿ ಅಡ್ಡಬರುತ್ತದೆ. ಅದೇನೇ ಇದ್ದರೂ ಈ ಶ್ರೀವಿಜಯನು ಚಾವುಂಡರಾಯನಂತೆ ಕವಿ, ಕಲಿ ಮತ್ತು ಪರಮಧಾರ್ಮಿಕ ಎಂಬುದು ಸುಳ್ಳಲ್ಲ. ಇಂಥ ಪರಿಪೂರ್ಣ ವ್ಯಕ್ತಿತ್ವವನ್ನು ಎಂಟು ಪದ್ಯಗಳಲ್ಲಿ ಹಿಡಿದಿಟ್ಟ ಗುಣವರ್ಮನ ಕಾವ್ಯಶಕ್ತಿ ಮೆಚ್ಚುವಂತಹದು. ಹಿತಮಿತ ಪದಪ್ರಯೋಗ,

ದೇಸಿಮಾರ್ಗಸಮನ್ವಯವನ್ನೊಳಗೊಂಡ ಈ ಪದ್ಯಗಳಿಗೆ ಕನ್ನಡದ ಕಂದಸಾಹಿತ್ಯದಲ್ಲಿ ಉನ್ನತಸ್ಥಾನವಿದೆ. ಒಂದೊಂದೂ ಅರಿಕೇಸರಿಯ ಪೂರ್ವಜರನ್ನು ಕುರಿತ ವಿಕ್ರಮಾರ್ಜುನವಿಜಯದ ಕಂದಪದ್ಯಗಳನ್ನು ನೆನಪಿಗೆ ತರುತ್ತವೆ.

೭. ರವಿನಾಗಭಟ್ಟ (ಕ್ರಿ.ಶ. ಸು. ೯೧೮)[೫೮]

ಧಾರವಾಡ ಜಿಲ್ಲೆಯ ನರಗುಂದದ ನೆರೆಯ ದಂಡಾಪುರಗ್ರಾಮದ ಶಾಸನದ ಕೊನೆಯ-

ಬರೆದೊನಿದಂ ಶ್ರೀವಿಜಾಯಂ
ನೆರೆದಿನ್ನೂಱಿರ್ಪ್ಪದಿಂಬರುಂ ಪೇೞೆನೆ ತಾಂ।
ಪರಿಣತನೀ ಕಂದಂಗಳ
ನೊರೆದಂ ರವಿನಾಗಭಟ್ಟನತ್ಯಾದರದಿಂ॥

ಎಂಬ ಪದ್ಯದಿಂದ ಈ ಶಾಸನಕ್ಕೆ ರವಿನಾಗಭಟ್ಟನು ಕಂದಪದ್ಯಗಳನ್ನು ರಚಿಸಿಕೊಟ್ಟನೆಂದು ತಿಳಿಯುತ್ತದೆ. ಶ್ರೀವಿಜಯನು ಬಹುಶಃ ಶಿಲಾಫಲಕದ ಮೇಲೆ ಅಕ್ಷರ ಬರೆದ ಲಿಪಿಕಾರನಾಗಿರಬೇಕು. ಕಂಠಮಗೆರೆಗೆ ಜನತೆ ಸಲ್ಲಿಸಬೇಕಾದ ತೆರಿಗೆಯನ್ನು ನಿರ್ಧರಿಸಿ ಹೇಳುವ ರಾಷ್ಟ್ರಕೂಟ ಗೋವಿಂದನ ಕಾಲದ ಈ ಶಾಸನದ ಪೂರ್ಣಪಾಠ ಹೀಗಿದೆ :

ಸ್ವಸ್ತಿಪ್ರಭೂತವರ್ಷಂ
ವಿಸ್ಕೃತ ಕುವಳಯಮನುತ್ತರೋತ್ತರ ವಿಭವ।
ಪ್ರಸ್ತುತ್ಯತೆಯಿಂ ರಕ್ಷಿಪ
ವಿಸ್ತರದಂದೆಂಟುನೂಱನಾಲ್ವತ್ತವು ತಾಂ॥

ಶಕ ಕಾಲಂಗಳ್ ವರ್ಷಂ
ಪ್ರಕಟಂ ಪೆಸರಿಂ ಪ್ರಮಾಥಿವರ್ತಿಸೆ ದಿನಪಂ
ಮಕರಕ್ಕೆವರ್ಪ ಸಂಕ್ರಮ
ಣಕಾಲದೊಳ್ ಕೂಡೆಬಂದ ಪೌಷದ ತಿಥಿಯೊಳ್॥

ಪನ್ನಿಮ್ಮರ್ಮ್ಮತ್ತರ್ ಕೆಯ್ಯಂ
ಮಾನ್ಯಂಗುಡುಗೆಂದು ಪೇೞೆ ಧೋರನ ಬೆಸದೊಳ್।
ನನ್ನಿವೆಡಂಗಂ ಲಿ(ಂಗಮ್?)
ತನ್ನೞ್ತಿಯ ಕೊಟ್ಟು ಕೆಱೆಗೆ ಯಶಮಂ ಪಡೆದಂ॥

ವಿಪ್ರರ ವಿವಾಹಮುಮಾ
ಗಪ್ಪನಿತಱೊಳೆಲ್ಲಮೊಸಗೆ ದ್ರಮ್ಮಂ ಮೂಱಂ।
ತಪ್ಪದೆ ಮಾಣಿಯೊಳೆರಡಂ
ಕೆಪ್ಪದರೀ ಶೂದ್ರಗಣದ ಮದುವೆಯೊಳೊನ್ದಂ॥

---

೫೮. I.A. xiii P. 223

ಪ್ರಾಯಶ್ಚಿತ್ತ ನಿಮಿತ್ತದೊ
ಳಾಯತ ಪಣಮೆನಿತನಿತ್ತುಮೂರೊಳ್ ಸಹಿರ।
ಣ್ಯಾಯದ ಪಣಮುಂ ಪೆರ್ಗ್ಗೆಱೆ
ಗಾಯಮಿದೆಂದೊಸೆದು ಕೊಟ್ಟರೀ ದ್ವಿಜಮುಖ್ಯರ್॥

ನೆಱೆಯೆ ಗುಣಾಢ್ಯರ್ ಕಂಠಮ
ಗೆಱೆಗಿನುತು ದ್ರವ್ಯದಾಯಮಂ ಕೊಟ್ಟವರ್ಗಳ್।
ತಱುಸಂದೀ ಶಾಸನಮಂ
ನಿರಿಸಿದರಾಚಂದ್ರತಾರಕಾಂತಂ ಬರೆಗಂ॥

ಮಾತಿನೊಳೇನೀ ಸ್ಥಿತಿಯಂ
ಘಾತಿಸಿ ಕಿಡಿಸಿದ ನರಂ ಚಿರಂ ಪಂಚಮಹಾ।
ಪಾತಕನ ಪೋದ ಲೋಕ
ಕ್ಕಾತಂ ತಾಂ ಪೋಕುಮೆಂದೊಡದುವೇಂ ಪಿರಿದೇ॥

ಮೊಱಡಿಯ ಮೊದಲೊಳ್ಕೊಟ್ಟೊ
ರ್ತ್ತೆಱೆವರಿಯರ ಮಾಟ್ಪುದೆಂದು ಕೇರಿ ಸಮಸ್ತಂ।
ಕೆಱೆಗೆ ಪದಿನೇೞು ಮತ್ತ
ರ್ತ್ತೆಱುವುದು ಕೇಸಬ್ಬೆಯಿತ್ತ ಕೆಯ್ಯಿರ್ಮ್ಮತ್ತರ್॥

ಬರೆದೊನಿದಂ ಶ್ರೀವಿಜಾಯಂ
ನೆಱೆದಿರ್ನ್ನೂಱಿರ್ಪ್ಪದಿಮ್ಬರುಂ ಪೇೞೆನೆ ತಾಂ ।
ಪರಿಣತನೀ ಕಂದಂಗಳ
ನೊರೆದಂ ರವಿನಾಗಭಟ್ಟನತ್ಯಾದರದಿ[ನ್]॥

ಈ ಶಾಸನದಲ್ಲಿ ಸಾಹಿತ್ಯಗುಣವಿಲ್ಲದಿದ್ದರೂ ಗದ್ಯದಲ್ಲಿ ಹೇಳಬಹುದಾದ ಶಕೆ, ಆಯಗಳನ್ನು ಪದ್ಯಗಳಲ್ಲಿ ಕವಿ ಲೀಲಾಜಾಲವಾಗಿ ಹೆಣೆದಿದ್ದಾನೆ. ಕಂದಗಳನ್ನು ಕಟ್ಟುವಲ್ಲಿ ಪರಿಣತಹಸ್ತವನ್ನು ಬಳಸಿದ್ದಾನೆ. 'ರವಿನಾಗಭಟ್ಟ' ಎಂಬ ಹೆಸರನ್ನು ಗಮನಿಸಿ "ಈತನೇ ನಮಗೆ ತಿಳಿದುಬಂದಿರುವ ಬ್ರಾಹ್ಮಣಕವಿಗಳಲ್ಲಿ ಆದಿಕವಿ" ಎಂದು ಕವಿಚರಿತ್ರೆಕಾರರು ಊಹಿಸಿದ್ದಾರೆ.

೮. ನಾಗವರ್ಮ(ಕ್ರಿ.ಶ. ೯೧೮)[೫೯]

ಶಿವಮೊಗ್ಗೆ ಜಿಲ್ಲೆಯ ಶಿಕಾರಿಪುರ ತಾಲೂಕಿನ ಬಂದಳಿಕೆ ಗ್ರಾಮದ ಶಿಲಾಶಾಸನದ ಕೊನೆಗೆ 'ಬರೆದೊಂ ನಾಗವರ್ಮ್ಮಂ' ಎಂದು ಕವಿಸೂಚನೆ ಕಂಡುಬರುತ್ತದೆ. ರಾಷ್ಟ್ರಕೂಟ ಅಕಾಲವರ್ಷ (ಕೃಷ್ಣII)ನ ಸಾಮಂತ ಕಲಿವಿಟ್ಟರಸ. ಈತನ ಕೈಕೆಳಗೆ ನಾಗರಖಂಡವನ್ನಾಳುವ ನಾಳ್ಗಾವುಂಡ ನಾಗಾರ್ಜುನನು ಯುದ್ಧದಲ್ಲಿ ಮಡಿಯಲು, ಆತನ ಸತಿ ಜಕ್ಕಿಯಬ್ಬೆ ನಾಳ್ಗಾವುಂಡಿಯಾಗಿ ಪ್ರಜಾಸ್ತೋಮವನ್ನು ಸಲುಹಿದಳು. ಈಕೆಯ ಜೀವನದ ಕೊನೆಯ ದಿನಗಳನ್ನು ವರ್ಣಿಸುವ ಕ್ರಿ.ಶ. ಸು. ೯೧೮ರ ಈ ಶಾಸನದ ಮುಖ್ಯಭಾಗ ಹೀಗಿದೆ.

---

೫೯. E.C. vii ಶಿಕಾರಿಪುರ ೨೧೯

ಉತ್ತಮ ಪ್ರಭುಶಕ್ತಿಯುಕ್ತೆ ಜಿನೇನ್ದ್ರಶಾಸನಭಕ್ತೆ ಕಾ
ನ್ತಾತ್ತ ವಿಭ್ರಮೆ ಜಕ್ಕಿಯಬ್ಬೆ ಸಮನ್ತು ನಾಗರಖಣ್ಡಮೆ
ಪ್ಪತ್ತುಮಂ ವಧುವಾಗಿಯುಂ ನಿಜ ವೀರವಿಕ್ರಮ ಗರ್ಬ್ಬದಿಂ
ಪೆತ್ತವಂ ಪ್ರತಿಪಾಲಿಸುತ್ತೊಸದಿಟ್ಟಳಿಟ್ಟವಸಾನದೊಳ್॥

ತನು ರುಜೆಯಂ ಪುದುಂಙ್ಗಳಿಸೆ ಸಂಸ್ಕೃತಿಭೋಗಮಸಾರಮೆನ್ದು ನಿ
ಚ್ಚನಿಸಿ ನಿಜಪ್ರಿಯಾತ್ಮಜೆಗೆ ಸನ್ತತಿಯಂ ಕರೆದಿತ್ತು ಮೋಹಬ
ನ್ಧನದ ತೊಡರ್ಪ್ಪಿನೊಳ್ತೊದಟ್ಟುಮೋಹಿಸಿ ನಿxx ಱಬಲ್ಲೆಬನ್ದು ಬ
ನ್ದನಿಕೆಯ ತೀರ್ಥದೊಳ್ತೊರದುವಚ್ಚರಿಯಂxxಜಕ್ಕಿಯಬ್ಬೆಯಾ ॥

ವಸುಜಲರಾಶಿ ವಾರಿದಪಥಂ ಶಕ ಭುxxತಾಬ್ದ ಸಂಕ್ಯೆ ವ
ರ್ತ್ತಿಸೆ ಬಹುಧಾನ್ಯಮೆಂಬ ವರಿಷಂ ತ್ರಿಕಮಾಸದ ಕಾಳಪಕ್ಷದೊಳ್।
ದಸಮಿಯೊಳಾರ್ಕ್ಯವಾರದುದಿತೋದಿತ ವೇಳೆಯೊಳಣ್ಮಿಭಕ್ತಿಯಿಂ
ಬಸದಿಗೆವನ್ದು ನೋನ್ತಳಮಪೂರ್ಬ್ಬ ತರಙ್ಗದ ಜಕ್ಕಿಯಬ್ಬೆಯಾ॥

ಈ ಮೂರು ಪದ್ಯಗಳು 'ವಧುವಾಗಿಯುಂ ನಿಜವೀರವಿಕ್ರಮಗರ್ಬ್ಬದಿಂ' ನಾಡನ್ನು ಪಾಲಿಸಿ. ಪ್ರಜೆಗಳನ್ನು ಪೋಷಿಸಿದ ನಾಳ್ಗಾವುಂಡಿ ಜಕ್ಕಿಯಬ್ಬೆಯ ದೈವಭಕ್ತಿಯನ್ನು ಬಣ್ಣಿಸುತ್ತವೆ. ಕರ್ನಾಟಕದ ಆದರ್ಶಮಹಿಳೆಯರ ಸಾಲಿನಲ್ಲಿ ನಿಲ್ಲುವ ಈಕೆಯ ವರ್ಣನೆ ಮನೋಹರವಾಗಿದೆ.[೬೦]

೯. ಕವಿರಾಜ ರಾಜ (ಕ್ರಿ.ಶ. ೯೩೦)[೬೧]

ಧಾರವಾಡ ಜಿಲ್ಲೆಯ ಸಿಗ್ಗಾವಿ ತಾಲೂಕಿನ ಕಳಸಗ್ರಾಮಕ್ಕೆ ಸಂಬಂಧಿಸಿದ ಒಂದು ಶಿಲಾ ಶಾಸನದ ಕೊನೆಗೆ,

ಕವಿರಾಜರಾಜ ವಿಬುಧ
ಪ್ರವರಂ ಶ್ರೀ ಕಾಡೂಯೂರನಲ್ಲಿಯೆ ಕಮಳೋ।
ದ್ಭವವಂಶಪ್ರೋತ್ತಮರಂ
ನವೀನ ವರ್ಣ್ಣನೆಯಿನೆಸೆಯಲಭಿವರ್ಣ್ಣಿಸಿದಂ॥

ಎಂಬ ಪದ್ಯವಿದ್ದು ಇದರಿಂದ ಶಾಸನಕ್ಕೆ ಸಾಹಿತ್ಯವನ್ನು ಪೂರೈಸಿದವನು ಕವಿರಾಜರಾಜನೆಂದು ತಿಳಿದು ಬರುತ್ತದೆ. ಈ ಕವಿರಾಜರಾಜನೆಂಬುದು ಬಿರುದಾಗಿದ್ದ ಪಕ್ಷದಲ್ಲಿ ಈತನಿಗೆ ಪ್ರಾಚೀನನಾಗಿ ಒಬ್ಬ 'ಕವಿರಾಜ'ನೆಂಬ ಕವಿ ಇದ್ದನೆಂದೂ ಆತನಿಗಿಂತ ತಾನು ಮೇಲು ಎಂದು ಈ ಶಾಸನಕವಿ ಹೇಳಿಕೊಂಡಿರುವನೆಂದೂ ಭಾವಿಸಬೇಕಾಗುತ್ತದೆ. ಶಾಸನದಲ್ಲಿ ಸ್ವವಿಷಯವನ್ನು ಹೇಳಿಕೊಂಡಿರದಿದ್ದರೂ ಬ್ರಾಹ್ಮಣರನ್ನು ಭಕ್ತಿಯಿಂದ ಬಣ್ಣಿಸಿರುವ ಈತ ಬ್ರಾಹ್ಮಣ ಕವಿಯಾಗಿರಬಹುದೆನಿಸುತ್ತದೆ.

ಭರತಖಂಡ, ಕುಂತಳದೇಶ, ಪುಲಿಗೆರೆಯ ಪಶ್ಚಿಮದಲ್ಲಿರುವ ಕಾಡಿಯೂರು(=ಕಳಸ), ಅಲ್ಲಿಯ ಪ್ರಜಾವರ್ಗ, ಕೊಂಡಲಿ ಎಂಬ ಹೆಸರಿನ ಕೆರೆ ಮತ್ತು ರಾಷ್ಟ್ರಕೂಟ ಗೋವಿಂದ IVರನ್ನು ೪೦ ಪದ್ಯ ಕೆಲವು ಗದ್ಯ

---

೬೦. E.C. xivಎಡತೊರೆ ೭೪ನೆಯ ಶಾಸನದಲ್ಲಿಯೂ ಈಕೆಯ ವರ್ಣನೆಯಿದ್ದಂತೆ ತೋರುತ್ತದೆ.
೬೧. E.I. xiii p. 329-333.

ತುಣುಕುಗಳಲ್ಲಿ ಬಣ್ಣಿಸುವ ಈ ಶಾಸನವೊಂದು ಪುಟ್ಟ ಚಂಪೂಕಾವ್ಯವೆನ್ನಬಹುದು. ಗೋವಿಂದ IVನು ರೇವದಾಸ ದೀಕ್ಷಿತ, ವೀಸೋತ್ತರ ದೀಕ್ಷಿತ ಎಂಬ ದಂಡನಾಯಕರಿಗೆ ಕಾಡಿಯೂರನ್ನು ದತ್ತಿಯಾಗಿ ನೀಡಿದುದು ಇದರ ವಸ್ತು. 'ವಿಬುಧಪ್ರವರಂ', 'ನವೀನ ವರ್ಣ್ನನೆಯಿನೆಸೆಯಲಭಿವರ್ಣ್ನಿಸಿದಂ', 'ಕವಿರಾಜರಾಜವಚಃ ಪ್ರಭಾವದನ್ತಳಂಕಾರಮುಮನೊಳಕೊಣ್ಡ ಜನಂಗಳಿಂ' ಎಂಬ ಮಾತುಗಳು ಈತನ ಪಾಂಡಿತ್ಯ ಪ್ರತಿಭೆಗಳನ್ನು ಸೂಚಿಸುತ್ತವೆ. ಇದಕ್ಕೆ ನಿದರ್ಶನವೆನಿಸುವ ಕೆಲಭಾಗಗಳು ಹೀಗಿವೆ:

ಗೊಜ್ಜಿಗದೇವ: ಪಗೆಗೊಣ್ಡಾಡುವ ಶತ್ರುಭೂಪತಿಗಳಂ ದೋರ್ಗ್ಗರ್ವ್ವದಿಂದೇೞೆದು
ಗ್ರಗಜೇಂದ್ರಂ ಬೆರೆಸೋವದನ್ತಕನ ಬಾಯೊಳ್ ತೂನ್ತಿ ಮತ್ತಂ ಶರ।
ಣ್ಬುಗಲೆಂದಿರ್ಪ್ಪವನೀಶ್ವರ ಪ್ರತತಿಯಂ ಕೈಕೊಣ್ಡು ಕಾದೆಯ್ದೆ ಗೊ
ಜ್ಜಿಗದೇವಂ ನೃಪತುಂಗನೆಂಬಳವನೊಲ್ದಂಗೀಕೃತಂ ಮಾಡಿದಂ॥

ಕಾಡಿಯೂರ: ತುಱುಗಿ ಕವಲ್ದು ಕತ್ತಲಿಪ ಚೂತಕುಜಂಗಳೊಳೊಂದಿ ಕಂಪಿನೊ
ಳ್ನೆಱೆದು ರಸಂಗಳಂ ತಳೆದ ಪಣ್ಗೊಲೆಯಂ ಗಿಳಿವಿಣ್ದು ಚುಂಚುವಿಂ।
ದಿಱೆದಡೆ ಸೋರೆ ಸೋನೆಯೊಳೆ ದಾಂಗುಡಿಮಿನ್ದೆಸೆದಿರ್ಪ್ಪವೊಳ್ಪಿನಿ
ನ್ದೆಱೆಯನ ಕಾಡಿಯೂರ ಲತೆವಳ್ಳಿಯುಮಲ್ಲಿಯ ನಾಗವಲ್ಲಿಯುಂ॥

ಕೊಣ್ಡಲಿಗೆಱೆ: ಕುಲಗಿರಿಬಿತ್ತಿ(ಭೀತಿ)ಯಿಂದೆ ಮಱೆವೊಕ್ಕಡೆ ಕೊಣ್ಡ ಸರೋರುಹಾಧರಂ
ನೆಲಸಿದನಬ್ಜವಾಹನನೆನಲ್ದಿನರಾಜನಿವಾಸಮಾದ ಭೂ।
ತಳಸತಿಗೊಳ್ಪನಾಳ್ದು ನವಮೇಖಳೆಯೆಂಬ ಸಮುದ್ರದನ್ತೆ ಕೊ
ಣ್ಡಲಿಗೆಱೆಯೊಪ್ಪಿ ತೋರ್ಪ್ಪುದೆನೆ ಬಿಣ್ಪಿನೊಳಾವರಿಸಿರ್ದ್ದ ಪೆಂಪಿನೊಳ್॥

ಕಾಡಿಯೂರ ಪ್ರಜೆಗಳು: ಮತ್ತಮಲ್ಲಿ ಬಡಿವುದುಂ ಬಿಡುವುದುಂ ಚಾಪವಿದ್ಯೆಯೊಳ್, ಕೃತ್ರಿಮುಮುಮ ನಿತ್ಯಮುಮಿನ್ದ್ರಜಾಲದೊಳ್..... ಸರಳತೆಯುಂ ಬಡತನಮುಮಬಳಾಮಧ್ಯದೊಳ್. ನಡುಕಮುಂಮಾಱಡಿಯುಂ ಚೂತಮಂಜರಿಯೊಳ್, ಕುಂದುಂ ಕಳಂಕಮುಂ ಹರಿಣಾಂಕನೊಳ್..... ಸೆರೆಯುಮೇಱುಂ ನೆತ್ತಮಾಡುವರೊಳ್....... ನಿರೋಧಮುಂ ನಿಷ್ಪರಿಗ್ರಹಮುಂ ತಪೋವೃತ್ತಿಯೊಳ್....... ಮಕರಕೇತದಂತೆ ಮರ್ಯಾದೆಯುಮಂ, ಪರ್ವತರಾಜನನ್ತೆ ಪ್ರತಿಪನ್ನತೆಯುಮನುರ್ವ್ವರೆಯನ್ತೆ ಕ್ಷಾನ್ತಿಯುಮಂ, ಕವಿರಾಜರಾಜವಚಃಪ್ರಭಾವದನ್ತಳಂಕಾರಮುಮನೊಳಕೊಣ್ಡ ಜನಂಗಳಿಂ ಮನಂಗೊಳಿಸುತ್ತಮಿರ್ದಪುದು.

ಕಾಡಿಯೂರ ಇನ್ನೂರ್ವರು: ನಿರವದ್ಯವೇದ ವಿದ್ಯಾ। ಪರಿಣತರತಿ ವಿಷಮಶಬ್ದ ವಿದ್ಯಾಗಮ ಸ।
ತ್ಪರಿಣತರೆನಿಸಿರ್ದ್ದಿಣ್ನೋ।ರ್ವ್ವರ ಚರಣ ವಿಪ್ರಕುಳಂ ವಿಚಿತ್ರಾಭರಣಂ॥

ವ್ಯಾಕರಣಮರ್ಥಶಾಸ್ತ್ರಾ।ನೀಕಂ ಸಾಹಿತ್ಯವಿದ್ಯೆ ಇತಿಹಾಸಂ ಮಿ।
ಕ್ಕೇಕಾಕ್ಷರಮಿನಿತರ್ಕ್ಕಂ ।ಟೀಕಂ ಬರೆಯಲ್ಪಮಗ್ರರಾಭ್ಯಾಸಿಸುವರ್॥

ಜಸಮಂ ತಾಳ್ದಿದಿಳಾಮರ ಪ್ರಚಯಮತ್ಯುತ್ಸಾಹದಿಂ ಗೆಯ್ದು ಬ
ಣ್ಣಿಸೆ ತಮ್ಮುನ್ನತಿ ತಮ್ಮ ಸತ್ಯದೆಸಕಂ ತಮ್ಮೋಜೆ ತಮ್ಮಾರ್ಪ್ಪು ತ
ಮ್ಮ ಸದಾಚಾರತೆ ತಮ್ಮ ನಿರ್ಮಳತೆ ತಮ್ಮೌಚಿತ್ಯ ಸಂಪತ್ತಿ ತ।
ಮ್ಮ ಸಮಗ್ರಾಸ್ಪದಮೊಪ್ಪೆ ವರ್ತಿಸುತಮಿರ್ದ್ದರ್ಣ್ನೇರ್ಪ್ಪೊಡಿಣ್ನೂರ್ವ್ವರುಂ॥

ವಿಷಯವಿನ್ಯಾಸದ ರೀತಿ, ವರ್ಣನೆಯ ವೈವಿಧ್ಯ ಇವುಗಳಿಂದ ಈ ಶಾಸನ ಚಂಪುವಿನ ಸಣ್ಣ ಮಾದರಿಯೆನಿಸಿದೆ. ಪಂಪನ ಕವಿತ್ವದೊಂದು ಮುಖವಾದ ಮಾರ್ಗಶೈಲಿಗೆ ಇಲ್ಲಿಯ ಗದ್ಯಪದ್ಯಗಳು ಯಾವ ವಿಧದಲ್ಲಿಯೂ

ಕಡಿಮೆಯಿಲ್ಲ. ಕನ್ನಡ ಕಾವ್ಯಗಳಲ್ಲಿ ಬಳಸಲಾದ ಪರಿಸಂಖ್ಯಾಲಂಕಾರಕ್ಕೆ ಈ ಗದ್ಯ ಮಾತೃಕೆಯೆನಿಸಿದೆ. ಪಂಪಪೂರ್ವದ ಕನ್ನಡಸಾಹಿತ್ಯ ಸ್ವರೂಪಕ್ಕೆ ಈ ಶಾಸನವೊಂದು ಉತ್ತಮ ಉದಾಹರಣೆಯಾಗಿದೆ.

೧೦. ಬೀರಯ್ಯ (ಕ್ರಿ.ಶ. ೯೩೦)[೬೨]

ಗಂಗ ಮನೆತನದ ಎರೆಯೆಪ್ಪನ ಮಕ್ಕಳಾದ ರಾಚಮಲ್ಲ ಮತ್ತು ಭುವನಾದಿತ್ಯ (ಬೂತುಗ)ರ ಯಾದವೀ ಕಲಹದಲ್ಲಿ ಮಡಿದ ವೀರರನ್ನು ಸ್ಮರಿಸುವ ಒಂದು ವೀರಗಲ್ಲು, 'ಬರೆದೊಂ ಬೀರಯ್ಯ' ಎಂಬ ವಾಕ್ಯವನ್ನೊಳಗೊಂಡಿದೆ. ಕ್ರಿ.ಶ. ೯೩೦ರ ಈ ಶಾಸನದ ಪೂರ್ಣಪಾಠ ಹೀಗಿದೆ :

"xxಸ್ವಸ್ತಿಶ್ರೀ ಎಱೆಯಪxxವೆಡಙ್ಗಂ ಸರ್ಗಮೇಱಿದೊಡೆxxx ಡೆಙ್ಗನ ಕಿಱಿಯ ರಾಚಮಲ್ಲಮನ್ನಿ ಬೇಡಿದೊಳರೆ ನೆಲನುಂ ಭಣ್ಡಾರವುಮಂ ಕೊಟ್ಟಾನೆನ್ದು ಬನ್ದು ಭುವನಾದಿತ್ಯಂ ಬರೆ ಅಯ್ಯಾಮನ್ತರುಂ ಪೆರ್ಗ್ಗಡೆ ಗಳುಂ ಬಯಲ್ನಾಡನು ರಾಚಮಲ್ಲಂಗಲ್ಲದೆ ರಾಜ್ಯಮಂ ಗೇಯಲಿಯಾ ಮೆನ್ದು ಭುವನಾಯ್ತನ ಮಾಗುಣ್ಡಿಯೊಳ್ಕಾದಿದನ್ದು ನಿನ್ನಿಯ ಕೊರ ನ್ತಿಯರಸರ ಮಕ್ಕಳ್ನಾಲ್ನಾಲ್ವರು ನೆಲದಟಿಬಿನೊಳ್ಕಾದಿ ಸxxಕಲಿಗೆಱ ಯ್ಯ ಈ ಕಲ್ಲಿಱಿಸಿದೊಂ ಪಿರಿಯ ಮಗಂxxಸೆರಾಮ ಈ ಕಲ್ನಾಡ ನಟಿದೊಂ ಕವಿಲೆಯುಂ ಬಾರಣಾಸಿಯುಮನಟಿದೊಂ ಬರೆದೊಂ ಬೀರಯ್ಯ

> ಪಱೆದವು ಬಱಿಮುಱಿದ xxನಿಟ್ಟೆ
> ಲ್ವೆರಡು ತೆಱಿದವುxxಮಾಗೆ ಸೂಸಿದವು|
> ಕರುಳ್ಗೊಳೆxಟಿದವುರದಿರಾ
> ಮಿಱಿದರಾxxxxxxxಱನಾಂ||

ಈ ಶಾಸನ ಅರಸುಮಕ್ಕಳ ಮುರಿದ ಮನಸ್ಸು, ಅದರಿಂದುದ್ಭವಿಸಿದ ಯುದ್ಧ ಪರಿಣಾಮಗಳನ್ನು ಹೇಳುತ್ತದೆ. ಕೊನೆಯ ತ್ರುಟಿತ ಪದ್ಯ ವೀರರಸಕ್ಕೆ ಉತ್ತಮ ಉದಾಹರಣೆಯಾಗಿದ್ದು, ಘೋರ ಯುದ್ಧದ ನೈಜಚಿತ್ರವನ್ನು ಕಣ್ಣಿಗೆ ಕಟ್ಟುತ್ತದೆ.

೧೧. ಕಬ್ಬದ ನಾಗಮಯ್ಯ (ಕ್ರಿ.ಶ. ೯೩೧)[೬೩]

ಕೋಲಾರ ಜಿಲ್ಲೆಯ ಚಿಂತಾಮಣಿ ತಾಲೂಕಿನ ಕುರಬೂರು ಗ್ರಾಮದ ಶಾಸನದ ಕೊನೆಗೆ 'ಬರೆದೊಂ ಕಬ್ಬದ ನಾಗಮಯ್ಯ' ಎಂಬ ವಾಕ್ಯವಿದೆ. ಇಲ್ಲಿಯ 'ಕಬ್ಬದ' ಎಂಬುದು ಈತನೊಬ್ಬ ಕವಿಯೆಂದು ಸೂಚಿಸುತ್ತದೆ. ಇದೇ ತಾಲೂಕಿನ ಳಳನೆಯ ಶಾಸನದ ಕೊನೆಯ 'ಬರೆದೊಂ ನಾಗಮಯ್ಯ' ಎಂಬವನೂ ಈತನೇ ಆಗಿರಬಹುದು. ನೊಳಂಬ ವಂಶದ ಬೀರನೊಳಂಬನ ಸಮಯದಲ್ಲಿ ಹುಟ್ಟಿದ ಈ ಎರಡೂ ಶಾಸನಗಳ ಕಾಲ ಕ್ರಿ.ಶ. ೯೩೧, ಪ್ರಸ್ತುತ ಶಾಸನ (ನಂ. ೪೩)ದ ಪೂರ್ಣಭಾಗ ಕೆಳಗಿನಂತಿದೆ :

ಸ್ವಸ್ತಿಶಕನೃಪಕಾಲಾತೀತ ಸಂಬತ್ಸರಂಗಳ್ ಎಂಟುನೂಱ ಐವತ್ತಮೂಱನೆಯ ರೌದ್ರಿಯೆಂಬ ಸಂವತ್ಸರಂ ಪ್ರವರ್ತ್ತಿಸುತ್ತಿರೆ ಸ್ವಸ್ತಿಸಮಧಿಗತ ಪಂಚ ಮಹಾಶಬ್ದ ಪಲ್ಲವಾನ್ವಯ ಶ್ರೀ ಪೃಥಿವೀ ವಲ್ಲಭ ಪಲ್ಲವಕುಲತಿಲಕ ಶ್ರೀಮತ್‌ಬೀರನೊಟಂಬಾಧಿರಾಜರ್ ಸುಖಾನುರಾಗದಿಂ ದುಷ್ಟನಿಗ್ರಹ ವಿಶಿಷ್ಟ ಪರಿಪಾಲನಂಗೆಯ್ದು ಪೃಥಿವೀ ರಾಜ್ಯಂಗೆಯ್ಯುತ್ತಿರೆ ಕಾಣ್ವಾಯಾನ ಗೋತ್ರಾ ಕೊಮಾರಮಂಗಳಮೊಡೆಯ ನಾಗಮಯ್ಯನ ಮಗಂ ಕಣ್ಣಯ್ಯನುಂ ಸಂಕರಯ್ಯನುಂ

---

೬೨. E.C. iv.ಹೆಗ್ಗಡದೇವನ ಕೋಟೆ ೧೧೬ ಹಿರನಂದಿಗ್ರಾಮ.
೬೩. E.C. x ಚಿಂತಾಮಣಿ ೪೩, ೪೪

ಕುಱುಂಬೂರ ಮಹಾಜನಂ ನೂಱೞ್ಬರ್ಗ್ಗೆ ಪದಿನೈದು ಗದ್ಯಾಣ ಪೊನ್ನ ಕೊಟ್ಟರ್ ನಿತ್ಯಸ್ಥಿತಿ ಒಂದು ಪರಿವಡಿ ಕುಱುಂಬೂರ ಗುಟ್ಟಿಯೊಳ್ ಆರ್ ಇೞ್ಕ್ಕೊಡಂ ಚನ್ದ್ರಾದಿತ್ಯರ್ಕ್ಕಳುಳ್ಳಿನಂ ಸಲ್ವುದಾರಿತ್ತೋರ ಇಳುವಿದಕ್ಕೆ ಸಾಕ್ಷಿ ನರಶಾಸನಂ ನೂಱೞ್ಬರೆ ಇವರ್ಗ್ಗಳ ಉಭಯ ಸಮ್ಮತದೆ ಬರೆದೊಂ ಕಬ್ಬದ ನಾಗಮಯ್ಯ ಈ ಧರ್ಮಮನ್ ಅೞಿದೊಂ ವಾರಣಾಸಿಯನೞಿದೊಂ"

ಇದು ಸಾಹಿತ್ತಿಕ ಅಂಶವಿರದ ಒಂದು ಸರಳಗದ್ಯ. ಹಿಂದೆ ಹೇಳಲಾದ ಸಿಗ್ಗಾವಿ ಶಾಸನದ ಗದ್ಯ ಇದಕ್ಕೆ ಸಮಾನವಾಗಿದ್ದು ಈ ಅವಧಿಯ ನಿತ್ಯೋಪಯೋಗಿ ಬರೆವಣಿಗೆಯ ಗದ್ಯಕ್ಕೆ ಇವು ನಿದರ್ಶನವೆನಿಸಿವೆ. 'ಕಬ್ಬದ ನಾಗಮಯ್ಯ' ಕವಿಯಾಗಿದ್ದರೂ ಶಾಸನದಲ್ಲಿ ಬರೆವಣಿಗೆ ಸಾಮಾನ್ಯವಾಗಿದೆ.

೧೨. ಕಾಚಯ್ಯ(ಕ್ರಿ.ಶ. ೯೩೭)[೬೪]

ಚಿತ್ರದುರ್ಗ ತಾಲೂಕಿನ ಇಸಾಮುದ್ರ ಗ್ರಾಮದ ಶಾಸನದ ತುದಿಯ 'ಕನ್ನರನಭಿಮತದೊಳೆ ಶಾಸನಮಂ ಬರೆದೊಂ ಸೇನಬೋವಂ ಕಾಚಯ್ಯಂ' ಎಂಬ ಮಾತು, ಕವಿಸೂಚನೆಯೆಂದು ಪಂಡಿತರ ಅಭಿಮತ. ಕ್ರಿ.ಶ. ೯೩೭ರಲ್ಲಿ ರಾಷ್ಟ್ರಕೂಟ ಅಮೋಘವರ್ಷIIನ ಸಾಮಂತ ಕನ್ನರಯ್ಯನು 'ಗೊಗ್ಗಿದೇಗುಲದ ಧರ್ಮರಾಶಿಭಟಾರರ ಕಾಲಂ ಕರ್ಚಿ' ದತ್ತಿ ಬಿಟ್ಟುದು ಇದರ ವಿಷಯ. ರಾಷ್ಟ್ರಕೂಟರ ವಂಶಚರಿತ್ರೆಯನ್ನು, ಕನ್ನರಯ್ಯನ ಕೀರ್ತಿಯನ್ನು ಕೊಂಡಾಡುವ ಈ ಶಾಸನದ ಕೆಲವು ಪದ್ಯಗಳು ಹೀಗಿವೆ:

ಅಜಸುತನತ್ರಿಯತ್ರಿಯ ಸುತಂ ಶಶಿ ಸೋಮಸುತಂ ಬುಧಂ ಬುಧಾ।
ನ್ನಜನಜಿತಂ ಪುರೂರವನುದಾರ ಪುರೂರವನನ್ದನಂ ಜಗ॥
ದ್ವಿಜಿತ ಮಹಾಬಳನ್ನಹುಷನಾ ನಹುಷಂಗೆ ಮಗಂ ಯಯಾತಿ ಭೂ।
ಭೂಜನಮಳಂ ಯಯಾತಿಗೆ ಮಗಂ ಯದುಯಾದವರಾತನನ್ವಜರ್॥

ಯಾದವ ಕುಲದೊಳ್ಪಲರುಂ
ಮೇದಿನಿಯಂ ಸುಖದಿನಾಳ್ದರವರಿಂ ಬೞಿಯಂ।
ಶ್ರೀದಯ್ತನ್ದನ್ತಿಗನುದಿ
ತೋದಿತಮಾತನಿನ್ದನಖಿಳ ರಾಜ್ಯಶ್ರೀಯೊಳ್॥

ದನ್ತಿಗನ ಪುತ್ರರಂ ರಾ
ಜ್ಯಾನ್ತರಮಾದನ್ದು ಕನ್ನರಂ ಕಿಱಿಯಮ್ಮಂ।
ಸನ್ತಾನದೊಳಿಟ್ಟ ಬೞಿ।
ಕನ್ತಾತನ ತನಯನೊಪ್ಪೆ ನಿರುಪಮದೇವಂ॥

ಆ ನಿರುಪಮಂಗೆ ಪುಟ್ಟಿದ
ನಾನತರಿಪು ನೃಪಕದಂಬಕಂ ಜಗತುಂಗಂ।
ತಾನಾ ಜಗತುಂಗನ ಮಗ
ನೀ ನೆಲದೊಳ್ನೆಗಟ್ದಮೋಘವರ್ಷಮಹೀಶಂ॥

---

೬೪. E.C. xiಚಿತ್ರದುರ್ಗ ೭೬ ಇಸಾಮುದ್ರ

ನೆಗಟ್ದೆಟ್ದಿಮೋಘವರ್ಷನ
ಮಗನೆನ್ತುಂ ದೇವನೆನಿಸಿದಾ ದೇವನ ಪೆ।
ರ್ಮಗನಿನ್ದರನಾತಂ ಕಲಿ
ಯುಗದೊಳ್ಕಲಿ ಚಾಗಿಯೆನಿಸಿದಂ ವಿಕ್ರಮದಿಂ॥

ಇನ್ದರನ ಮಗನ್ದೇವ
ನ್ತನ್ದೆಯವೋಲ್ನೆಗಟ್ದಿ ದೇವರಾಜಸುತಂಗ ।
ಭೀನ್ದರನಾತಂನ ಮಗನಭಿ
ವನ್ದಿತಪಾದನಿಜಿವ ಕನ್ನರಂ ಧರ್ಮಪರಂ॥

ಮನುಮಾರ್ಗಂ ಚರಿತಂ ದ್ವಿಷತ್ಕುಳಹರಂ ಶೌರ್ಯಂ ಜಗದ್ವ್ಯಾಪಿ ಶಾ
ಸನಬದ್ಧಂ ನುಡಿಕಲ್ಪವೃಕ್ಷಮೆನಿಕುಂ ಸನ್ಮಾನದಾನಂ ಶಶಾಂ।
ಕನಿಭಂ ಕೀರ್ತಿ ಸಮನ್ತನನ್ತ ಗುಣದಿನ್ದಿಂ ಕನ್ನರಂನ್ದರ್ಮನ
ನ್ದನನಿಂ ರಾಘವನಿನ್ದಿಳೀಪನೃಪನಿಮ್ಮಾಂಧಾತನಿನ್ದಗ್ಗಳಂ॥

ಸ್ವಸ್ತಿಸಮಧಿಗತ ಪಞ್ಚಮಹಾಶಬ್ದ ಮಹಾಸಾಮನ್ತಾಧಿಪತಿ ರಣರಂಗಭೂರಿಶ್ರವಂ ಕಾಯ್ವೊರ ಜವಂ ಪ್ರತಿಬಲದಗ್ಗಟಿ ರಿಪುಗೆ ನಿಪ್ಪಸರಂ ಕಲಿಯುಗರಾಮಂ ಜಯದುತ್ತರಂಗನತಿರಥಮಲ್ಲಂ ಪ್ರತಿಪಕ್ಷಸೂದ್ರಕಂ ಶ್ರೀಮತ್ಕನ್ನಯಂ ಕದಂಬಳಿಗೆ ಸಾಯಿರಮುಮಂ ನಿಧಿನಿಧಾನನಿಕ್ಷೇಪ ಸಹಸ್ರ ದಣ್ಡಂಮ್ಮೊದಲಾಗೆ ದುಷ್ಟನಿಗ್ರಹ ವಿಶಿಷ್ಟಪ್ರತಿಪಾಳಣಂಗೆಯ್ವಾಳುತ್ತಿರೆ...... (ಇಲ್ಲಿ ದತ್ತಿ ವಿಷಯ, ಫಲಶ್ರುತಿ ಇವೆ.)

ಕನ್ನರನಭಿಮಥದೊಳೆ ಶಾಸನಮಂ ಬರೆದೊಂ ಸೇನಬೋವಂ ಕಾಚಯ್ಯಂ ಈ ಶಾಸನಮಚಂನ್ದ್ರಾರ್ಕ್ಕ ತಾರಂಬರಂ ಸೆಲ್ಗೆ॥

ಪಳಯಾಜಿಳ್ದೇವನಾಟನ್ದಿಜಿದು ಮಡಿಪಿದೊಂ ಪಾಣ್ಡ್ಯನನ್ದೇವಪುತ್ರಂ
ಗಳಕೊನ್ದಂ ವೀರನಂ ಶ್ರೀಪುರದೊಳಿಜಿದೊನಿನ್ದ್ರಾತ್ಮಜಂ ಪಲ್ಲವೇಶ।
ರ್ಕ್ಕಳನಿನ್ದ್ರಂ ಗೆಲ್ದನೀ ಕನ್ನರನಧಿಕ ಬಳಂ ಗಂಗಪೆರ್ಮ್ಮಾಳಿಯಂ ಕೊ
ನ್ದೆಳೆಯಂ ಭೂವಲ್ಲಭಂಗಿತ್ತಿಜಿದು ನೆಗಟ್ದರೀ ರಾಷ್ಟ್ರಕೂಟಾನ್ವಯರ್ಕ್ಕಳ್॥

ಇಲ್ಲಿ ರಾಷ್ಟ್ರಕೂಟರ ಸುದೀರ್ಘವಂಶಾವಳಿಯನ್ನು ಕೆಲವೇ ಪದ್ಯಗಳಲ್ಲಿ ಹೊಂದಿಸಿದುದು ಕವಿಯ ಸಂಗ್ರಹಶಕ್ತಿಯ ದ್ಯೋತಕ. ಇದೇ ಚಿತ್ರದುರ್ಗ ತಾಲೂಕಿನ ಲಕ್ಷ್ಮೀಸಾಗರಗ್ರಾಮದ ಶಾಸನದಲ್ಲಿಯೂ ಈ ಪದ್ಯಗಳಿರುವುದರಿಂದ ಅದರ ಕರ್ತೃವೂ ಕಾಚಯ್ಯನೇ ಆಗಿರಬಹುದು.

ಈ ಹನ್ನೆರಡು ಜನ ಶಾಸನಕವಿಗಳು ಕತ್ತಲೆಯಿಂದ ತುಂಬಿದ ಹಳ್ಳಿಯೊಳಗೆ ಅಲ್ಲೊಂದು ಇಲ್ಲೊಂದು ಮಿನುಗುವ ದೀವಿಗೆಯಂತೆ, ಪಂಪಪೂರ್ವದ ಅಜ್ಞಾತಯುಗದಲ್ಲಿ ಚೆಲ್ಲುವರಿದಿರುವರು. ಇವರಲ್ಲಿ ಕವಿರಾಜರಾಜ, ನಾಗವರ್ಮ, ನಾಮಯ್ಯ ಮೊದಲಾದವರದು ಕಾವ್ಯವನ್ನು ಕಟ್ಟಬಲ್ಲ ಪ್ರತಿಭೆ. ಆದರೆ ಆ ಯುಗದ ಸಾಹಿತ್ಯಕೃಷಿಯಲ್ಲಿ ಪಾಲುಗಾರರೆಂದು ಪರಿಗಣಿತರಾಗಿರುವ ಇವರ ಕೃತಿರಚನೆಯ ಸಂಗತಿ ನಮ್ಮ ದೃಷ್ಟಿಗೆ ದೂರ ಉಳಿದಿದೆ.

ಈ ವರೆಗಣ ವಿವೇಚನೆಯಿಂದ ಪಂಪಪೂರ್ವಯುಗದ ಕನ್ನಡ ಶಾಸನಪ್ರಪಂಚದಲ್ಲಿ ಕವಿರಾಜಮಾರ್ಗ ಎರಡು ಘಟ್ಟಗಳ ಮಧ್ಯಶಿಖರವೆಂದು ತಿಳಿದುಬರುತ್ತದೆ. ಮೊದಲಿನ ಘಟ್ಟದಲ್ಲಿ ಸುಮಾರು ಒಟ್ಟು ೬೦ ಪದ್ಯಗಳಿದ್ದರೆ ಎರಡನೆಯ ಘಟ್ಟದಲ್ಲಿ ಒಂದೊಂದು ಶಾಸನ ೩೫ ಪದ್ಯಗಳಷ್ಟು ದೀರ್ಘವಾಗಿವೆ.

ಶಾಸನಸಂಖ್ಯಾಪ್ರಮಾಣವೂ ಮೊದಲಿನ ಎರಡರಷ್ಟಾಗಿ ಸಂಸ್ಕೃತದ ಸಮಪ್ರಮಾಣಕ್ಕೇರತೊಡಗಿದೆ. ಅನಿರ್ದಿಷ್ಟ ಸಣ್ಣ ಚೌಕಟ್ಟಿನ ಬದಲು ರಾಜಪ್ರಶಸ್ತಿ, ಸಾಮಂತಪ್ರಶಸ್ತಿ, ನಿರೂಪಣಾ ರಮ್ಯತೆ, ಫಲಶ್ರುತಿ ಘೋಷಣೆಗಳ ನಿರ್ದಿಷ್ಟ ದೊಡ್ಡ ಚೌಕಟ್ಟು ಸಿದ್ಧವಾಗಿ ಕನ್ನಡ ಶಾಸನಗಳಿಗೆ ಸಂಸ್ಕೃತ ಶಾಸನಗಳ ಭವ್ಯತೆ ಪ್ರಾಪ್ತವಾಗಿದೆ. ಶುಷ್ಕನಿರೂಪಣೆ, ಶಿಥಿಲ ಬರೆವಣಿಗೆ ನಿಂತು, ಭಾಷೆ ಸಾಹಿತ್ಯಗಳಲ್ಲಿ ಹೊಸಬಣ್ಣ ಪ್ರವೇಶಿಸಿದೆ. ದೇಸಿಗೆ ಕೋಟೂರು ಶಾಸನ, ಮಾರ್ಗಕ್ಕೆ ಕಳಸದ ಶಾಸನ, ಇವೆರಡರ ಸಮನ್ವಯಕ್ಕೆ ದಾನವುಲಪಾಡ ಶಾಸನಗಳು ಚಂಪುವಿನ ಚರಮಸಿದ್ಧಿಯತ್ತ ಕನ್ನಡ ಮುನ್ನಡೆಯುತ್ತಿರುವುದರ ಸೂಚನೆಯೆನಿಸಿವೆ. ಈ ಎಲ್ಲ ಲಕ್ಷಣಗಳು ನೃಪತುಂಗನ ಕಾಲದಲ್ಲಿಯೇ ಮೊಟ್ಟಮೊದಲು ಕಂಡುಬರುವುದರಿಂದ ಸಂಸ್ಕೃತ ಬರಲಿ, ಪ್ರಾಕೃತ ಬರಲಿ ಅದನ್ನೆಲ್ಲವನ್ನು ಜೀರ್ಣಿಸಿಕೊಂಡು ಕನ್ನಡವನ್ನು ಬಳಸುವ ಒಂದು ಕ್ರಾಂತಿಶೀಲಮನೋಧರ್ಮ ಈ ಅವಧಿಯಲ್ಲಿ ಜಾಗೃತಗೊಂಡಿರಬೇಕು. 'ಲಲಿತವಹ ಕನ್ನಡದ ನುಡಿಯಲಿ...... ತನ್ನ ಮೋಕ್ಷವ ಗಳಿಸಿಕೊಂಡರೆ ಸಾಲದೇ?' ಎಂಬ ಪುನರುಜ್ಜೀವನಪ್ರಜ್ಞೆ ಮೂಡಿನಿಂತಿರಬೇಕು. 'ರಾಜಾ ಕಾಲಸ್ಯ ಕಾರಣಂ' ಎಂಬ ಪ್ರಾಚೀನಕಾಲದ ಸಾಮಾಜಿಕಪ್ರವೃತ್ತಿಯಂತೆ ಈ ಪುನರುಜ್ಜೀವನ ಕಾರ್ಯಕ್ಕೆ ನೃಪತುಂಗನೇ ಪ್ರೇರಕಶಕ್ತಿಯಾಗಿ ನಿಂತು, ಪಂಡಿತಪರಿವಾರವನ್ನು ಕಾರ್ಯಪ್ರವೃತ್ತಗೊಳಿಸಿರಬೇಕು.

❖❖

೪

ಪ್ರಮುಖ ಕವಿಗಳು

ಪ್ರಮುಖ ಕವಿಗಳು

ಶ್ರೀವಿಜಯ, ಕವೀಶ್ವರ ಮತ್ತು ವಿಮಲೋದಯ, ನಾಗಾರ್ಜುನ ಮೊದಲಾದ ಕವಿಗಳಲ್ಲದೆ ಇನ್ನೂ ಹಲವು ಸುಪ್ರಸಿದ್ಧ ಕವಿಗಳು ಕವಿರಾಜಮಾರ್ಗದ ಎಡಬಲದಲ್ಲಿ ಕಂಡುಬರುತ್ತಾರೆ. ಕವಿಸಾಹಿತ್ಯ, ಶಾಸನಸಾಹಿತ್ಯಗಳಲ್ಲಿ ಸೂಚಿಸಲ್ಪಟ್ಟ ಇವರ ಚರಿತ್ರೆ ಮತ್ತು ಇವರ ಸಾಹಿತ್ಯಕೃತಿಗಳನ್ನು ಗುರುತಿಸುವುದಕ್ಕೆ ಮೊದಲು, ಈ ವರೆಗೆ ಕನ್ನಡಸಾಹಿತ್ಯ ವಿಕಾಸಗೊಂಡ ಹಂತ, ಪಡೆದ ತಿರುವುಗಳನ್ನು ಅಭ್ಯಸಿಸಬಹುದಾಗಿದೆ.

ಮೂಲದ್ರಾವಿಡದಿಂದ ಪ್ರತ್ಯೇಕಗೊಂಡ ಬಳಿಕ ಕನ್ನಡಸಾಹಿತ್ಯವು ಮೊದಲು ಧ್ವನಿಪಾತಳಿ, ಆಮೇಲೆ ಲಿಪಿಪಾತಳಿಗಳಲ್ಲಿ ಸಾಗಿಬಂದಿತು. ಈ ಸಾಹಿತ್ಯದ ಇನ್ನೊಂದು ವೈಶಿಷ್ಟ್ಯವೆಂದರೆ ಯಾವುದೋ ಕಾಲಘಟ್ಟದಲ್ಲಿ ಸಂಸ್ಕೃತ ಭಾಷೆ-ಸಾಹಿತ್ಯಗಳ ಸಂಪರ್ಕದೊಂದಿಗೆ ಬದಲಾಗುತ್ತ ಬಂದಿತು. ಈ ಎರಡು ಪ್ರಕ್ರಿಯೆಗಳು ಕಾರಣವಾಗಿ ಕನ್ನಡಸಾಹಿತ್ಯವು ಈ ಕೆಳಗಿನಂತೆ ವಿಕಾಸಗೊಂಡಿರಬಹುದೆನಿಸುತ್ತದೆ.

೧. ಧ್ವನಿಪಾತಳಿಯ ದೇಶೀಸಾಹಿತ್ಯಘಟ್ಟ - (ಜನಪದ ಮೌಖಿಕ ಸಾಹಿತ್ಯವಾಗಿರುವ ಇದರ ಬಹುಭಾಗ ಅಂದೇ ನಾಶವಾಗಿದೆ. ಒಂದಿಷ್ಟು. ರೂಪಾಂತರಗೊಳ್ಳುತ್ತ ಬಂದಿರಲೂಬಹುದು).

೨. ಲಿಪಿಪಾತಳಿಯ ದೇಶಿಸಾಹಿತ್ಯಘಟ್ಟ - (ಚತ್ತಾಣ, ಬೆದಂಡೆಗಬ್ಬ ಇತ್ಯಾದಿ. ಲಭ್ಯವಿಲ್ಲ).

೩. ಲಿಪಿಪಾತಳಿಯ ಮಾರ್ಗಸಾಹಿತ್ಯಘಟ್ಟ- (ಸಂಸ್ಕೃತ, ಪ್ರಾಕೃತ ಸಂಪರ್ಕದ ಸೃಷ್ಟಿ).

  ಅ. ಟೀಕೆ-ವ್ಯಾಖ್ಯಾನಸಾಹಿತ್ಯ- (ಅನ್ಯಸಾಹಿತ್ಯವು ಆರಂಭದಲ್ಲಿ ಟೀಕೆ, ವ್ಯಾಖ್ಯಾನರೂಪದಿಂದ ಪ್ರವೇಶಿಸುತ್ತದೆ. ಶ್ಯಾಮಕುಂದಾಚಾರ್ಯ, ತೆಂಬಳೂರಾಚಾರ್ಯ ಮೊದಲಾದವರ ಟೀಕೆಗಳು).

  ಆ. ಭಾಷಾಂತರ ಸಾಹಿತ್ಯ- (ಅನ್ಯಸಾಹಿತ್ಯವು ಆರಂಭದಲ್ಲಿ ಭಾಷಾಂತರ ರೂಪದಿಂದಲೂ ಪ್ರವೇಶಿಸುತ್ತದೆ. ಅಸಗನ ಕುಮಾರಸಂಭವ, ಕನ್ನಮಯ್ಯನ ಮಾಳವೀ ಮಾಧವ ಇತ್ಯಾದಿ)

  ಇ. ಸೃಜನಶೀಲ ಭಾಷಾಂತರ ಸಾಹಿತ್ಯ -(ಆದಿಗುಣವರ್ಮನ ಹರಿವಂಶ, ಪಂಪನ ಆದಿಪುರಾಣ ಇತ್ಯಾದಿ).

  ಈ. ಸೃಜನಶೀಲ ರೂಪಾಂತರ ಸಾಹಿತ್ಯ -(ಆದಿಗುಣವರ್ಮನ ಶೂದ್ರಕ, ಪಂಪನ ವಿಕ್ರಮಾರ್ಜುನ ವಿಜಯ ಇತ್ಯಾದಿ).

೪. ಸ್ವತಂತ್ರ ಸಾಹಿತ್ಯ ಘಟ್ಟ - (ವಚನ, ರಗಳೆ ಇತ್ಯಾದಿ).

ಈ ಪಟ್ಟಿಯನ್ನು ನೋಡಿದರೆ ಕವಿರಾಜಮಾರ್ಗ ಪರಿಸರದ ಅಂದರೆ ಪಂಪಪೂರ್ವದ ಕನ್ನಡ ಸಾಹಿತ್ಯವೆನ್ನುವುದು ಮೇಲೆ ಹೇಳಿದ ೧,೨,೩ನೆಯ ಹಂತಗಳ ಸಾಹಿತ್ಯವಾಗಿದ್ದು, ಇವುಗಳಲ್ಲಿ ಧ್ವನಿಪಾತಳಿಯ

೧ನೆಯ ಘಟ್ಟವನ್ನು ಬಿಟ್ಟರೂ, ೨ನೆಯ ಘಟ್ಟವಾದ ಲಿಪಿಪಾತಳಿಯ ದೇಶೀಸಾಹಿತ್ಯದ ಚತ್ತಾಣ, ಬೆದಂಡೆಗಬ್ಬ ಇತ್ಯಾದಿಗಳ ಬಗ್ಗೆ ಈಗಾಗಲೇ ಚರ್ಚಿಸಿದ್ದೇವೆ. ಈಗ ವಿವೇಚಿಸಲಿರುವ ೩ನೆಯ ಘಟ್ಟವಾದ ಲಿಪಿಪಾತಳಿಯ ಮಾರ್ಗಸಾಹಿತ್ಯದಲ್ಲಿ ಹುಟ್ಟಿದ ಟೀಕೆ-ವ್ಯಾಖ್ಯಾನ, ಭಾಷಾಂತರ, ಸೃಜನಶೀಲಭಾಷಾಂತರ, ಸೃಜನಶೀಲ ರೂಪಾಂತರ ಇತ್ಯಾದಿ, ಒಂದರ್ಥದಲ್ಲಿ ಎರವಲು ಸಾಹಿತ್ಯವಾಗಿದೆಯೆಂದೇ ಹೇಳಬೇಕು. ಈ ಮೂರನೆಯ ಘಟ್ಟದ ವಿವರ ಹೀಗಿದೆ:

ಶ್ಯಾಮಕುಂದ

ಪಂಪಪೂರ್ವಯುಗದ ಸುಪ್ರಸಿದ್ಧ ವ್ಯಾಖ್ಯಾನಕಾರರಲ್ಲಿ ಶ್ಯಾಮಕುಂದನದು ಬಲುದೊಡ್ಡ ಹೆಸರು. ಈತನ ಜೀವನಚರಿತ್ರೆ ಮತ್ತು ಸಾಹಿತ್ಯಕೃಷಿ ವಿಷಯವಾಗಿ ತಿಳಿದುಬಂದುದು ತೀರ ಅಲ್ಪ.

ಕರ್ಮಪ್ರಾಭೃತವೆಂದು ಪ್ರಸಿದ್ಧಿಪಡೆದ (ಪುಷ್ಪದಂತ+ಭೂತಬಲಿಕೃತ) 'ಷಟ್ಖಂಡಾಗಮ' ಮತ್ತು ಕಷಾಯಪ್ರಾಭೃತವೆಂದು ಪ್ರಸಿದ್ಧಿ ಪಡೆದ (ಗಣಧರಕೃತ) 'ಕಸಾಯಪಾಹುಡ'ಗಳು ಜೈನರಲ್ಲಿ 'ಉಭಯಸಿದ್ಧಾಂತ'ಗಳೆಂದು ನೆಗಳ್ತೆವೆತ್ತಿವೆ. ಮೂಲದಲ್ಲಿ ಮೌಖಿಕವಾಗಿದ್ದ ಈ ಶ್ರುತಸಾಹಿತ್ಯ, ಮೇಲಣ ಎರಡು ಗ್ರಂಥಗಳಾಗಿ ಲೇಖನಗೊಂಡ ಬಗೆ, ಕಾಲಕಾಲಕ್ಕೆ ಇವುಗಳಿಗೆ ಬರೆಯಲಾದ ಟೀಕೆಗಳನ್ನು ವಿವರಿಸುವ ಹಲವು ಕೃತಿಗಳು ಜೈನರಲ್ಲಿವೆ.[೧] ಇವುಗಳಲ್ಲಿ ಇಂದ್ರನಂದಿಯ 'ಶ್ರುತಾವತಾರ'ವೊಂದು ಪ್ರಮುಖ ಪ್ರಾಚೀನ ಗ್ರಂಥ. ಈ ಶ್ರುತಾವತಾರದ ಶ್ಲೋಕ ೧೪೮ರ ವರೆಗೆ ಜೈನ ಗುರುಪರಂಪರೆ ಮತ್ತು ಕರ್ಮಪ್ರಾಭೃತ ರಚನೆಗೊಂಡ ರೀತಿಗಳ ವಿವರಣೆ ಬರುತ್ತದೆ. ಮುಂದೆ ಶ್ಲೋಕ ೧೪೯ರಿಂದ ೧೫೯ರ ವರೆಗೆ ಕಷಾಯಪ್ರಾಭೃತ ರಚನೆಗೊಂಡ ರೀತಿಯನ್ನು, ಇದಕ್ಕೆ ಯತಿವೃಷಭ, ಉಚ್ಚಾರಣಾಚಾರ್ಯರು ಬರೆದ ಚೂರ್ಣಿಸೂತ್ರ, ಉಚ್ಚಾರಣಸೂತ್ರ ಎಂಬ ಹೆಸರಿನ ವ್ಯಾಖ್ಯಾನವನ್ನು ಹೇಳಲಾಗಿದೆ. ತರುವಾಯವೇ,

ಏವಂ ದ್ವಿವಿಧೋ ದ್ರವ್ಯಭಾವ ಪುಸ್ತಕಗತಃ ಸಮಾಗಚ್ಛನ್।
ಗುರೂ ಪರಿಪಾಟ್ಯಾಜ್ಞಾತಃ ಸಿದ್ಧಾಂತಃ ಕುಂದಕುಂದಪುರೇ ॥ ॥೧೬೦॥

ಶ್ರೀಪದ್ಮನಂದಿ ಮುನಿನಾಸೋಽಪಿ ದ್ವಾದಶಸಹಸ್ರಪರಿಮಾಣಃ।
ಗ್ರಂಥ ಪರಿಕರ್ಮಕರ್ತಾ ಷಟ್ಖಂಡಾದ್ಯ ತ್ರಿಖಂಡಸ್ಯ॥ ॥೧೬೧॥

ಕಾಲೇ ತತಃ ಕಿಯತ್ಯಪಿ ಗತೇ ಪುನಃ ಶಾಮಕುಂದ ಸಂಜ್ಞೇನ।
ಆಚಾರ್ಯೇಣ ಜ್ಞಾತ್ವಾ ದ್ವಿಭೇದಮಪ್ಯಾಗಮಃ ಕಾತ್ಸ್ನ್ಯಾತ್॥ ॥೧೬೨॥

ದ್ವಾದಶಗುಣಿತ ಸಹಸ್ರಗ್ರಂಥಂ ಸಿದ್ಧಾಂತಯೋರುಭಯೋಃ।
ಷಷ್ಠೇನ ವಿನಾಖಂಡೇನ ಪೃಥುಮಹಾಬಂಧ ಸಂಜ್ಞೇನ॥ ॥೧೬೩॥

ಪ್ರಾಕೃತ ಸಂಸ್ಕೃತ ಕರ್ಣಾಟ ಭಾಷಯಾ ಪದ್ಧತಿಃ ಪರಾರಚಿತಾ।
ತಸ್ಮಾದಾರಾತ್ಪುನರಪಿ ಕಾಲೇ ಗತವತಿ ಕಿಯತ್ಯಪಿ ಚ ॥ ॥೧೬೪॥

---

೧. ಚಾವುಂಡರಾಯನ ಚಾವುಂಡರಾಯಪುರಾಣ, ಪದ್ಮರಾಜನ ಪೂಜ್ಯಪಾದ ಚರಿತೆ ಮತ್ತು ದೇವಚಂದ್ರನ ರಾಜಾವಳೀ ಕಥೆ.

ಎಂಬ ಭಾಗ ಬರುತ್ತದೆ. ಈ ಭಾಗದಲ್ಲಿ ಅಡಕಗೊಂಡುದು ಕುಂದಕುಂದ ಮತ್ತು ಶ್ಯಾಮಕುಂದರು ಬರೆದ ವ್ಯಾಖ್ಯಾನಗಳ ವಿಷಯ. ಕುಂದಕುಂದನ 'ಪರಿಕರ್ಮ'ವು ಕರ್ಮಪ್ರಾಭೃತದ ಮೊದಲ ಮೂರು ಖಂಡಗಳಿಗೆ ಬರೆದ ಪ್ರಾಕೃತ ಟೀಕೆಯಾಗಿರಬಹುದು.[೨] ಆದರೆ ಶ್ಯಾಮಕುಂದನು ಬರೆದುದು, ಮಹಾಬಂಧ ಹೆಸರಿನ ೬ನೆಯ ಖಂಡವನ್ನು ಬಿಟ್ಟು ಕರ್ಮಪ್ರಾಭೃತ ಮತ್ತು ಕಷಾಯಪ್ರಾಭೃತಗಳಿಗೆ ೧೨೦೦೦ ಗ್ರಂಥಪ್ರಮಾಣದ ವ್ಯಾಖ್ಯಾನವನ್ನು[೩]. ಇದು ಸಂಸ್ಕೃತ ಪ್ರಾಕೃತ ಮತ್ತು ಕನ್ನಡಗಳ ಮಿಶ್ರಣ.

ಶ್ಯಾಮಕುಂದನ ಈ ಕೃತಿ ಲಭಿಸಿಲ್ಲವಾದರೂ ಇದರ ವ್ಯಾಖ್ಯಾನಸ್ವರೂಪ ಮಾತ್ರ 'ಪದ್ಧತಿ' ಎಂದು ತಿಳಿದುಬಂದಿದೆ. 'ಪದ್ಧತಿ'ಎಂಬುದು ಒಂದು ವ್ಯಾಖ್ಯಾನಪ್ರಭೇದ. ಜಿನಸೇನಾಚಾರ್ಯರ 'ಜಯಧವಲಾ' ಗ್ರಂಥದ ಪ್ರಕಾರ ಇದರ ಲಕ್ಷಣ 'ವಿತ್ತಿಸುತ್ತ ವಿಸಮ ಪಯಾಭಂಜಿ ಏ ವಿವರಣಾಏ ಪದ್ದಇವವ ಏಸಾದೋ'[೪]. ಅಂದರೆ 'ಪದ್ಧತಿ' ಎನ್ನುವುದು ವೃತ್ತಿಸೂತ್ರದ ಕ್ಲಿಷ್ಟ ಪದಗಳಿಗೆ ಬರೆದ ವಿವರಣೆ ರೂಪದ ವ್ಯಾಖ್ಯಾನ.

ಚಾವುಂಡರಾಯನು ತನ್ನ ತ್ರಿಷಷ್ಟಿಶಲಾಕಾಮಹಾಪುರುಷಪುರಾಣದ ಕೊನೆಯಲ್ಲಿ ಶ್ರುತಾವತಾರದ ಇತಿಹಾಸವನ್ನು ವಿವರಿಸುತ್ತ ಕುಂದಕುಂದನ ವರೆಗೆ ಬಂದು,

ಅಗಣಿತ ಜೈನಾಗಮ ಪಾ।
ರಗರಿಳೆಯೊಳು ಶ್ಯಾಮಕುಂದ ನಾಮಾಚಾರ್ಯರ್॥
ನೆಗಟ್ಟಿರವರಿಂದೆ ಬಳಿಯಂ।
ನೆಗಟ್ಟರ್ಧರೆ ಪೊಗಳೆ ತುಂಬಳೂರಾಚಾರ್ಯರ್॥[೫]

ಎಂದು ಹೇಳಿ ಆಮೇಲೆ ಸಮಂತಭದ್ರ, ಬಪ್ಪದೇವ, ವೀರಸೇನ ಮತ್ತು ಜಿನಸೇನರರನ್ನು ಹೆಸರಿಸಿರುವನು. ಇಂದ್ರನಂದಿಯಲ್ಲಿಯೂ ಇದೇ ಕ್ರಮವಿದೆ.[೬] ಆದುದರಿಂದ ಶ್ಯಾಮಕುಂದನು ತುಂಬಳೂರಾಚಾರ್ಯನಿಗೆ ಪ್ರಾಚೀನವೆಂಬುದು ಖಚಿತ. ಈ ಎಲ್ಲ ಅಂಶಗಳನ್ನು ಗಮನಿಸಿ ಹೀರಾಲಾಲ ಜೈನ ಅವರು ಕುಂದಕುಂದ

---

೨. ಷಟ್ಖಂಡಾಗಮಕೀ ಪ್ರಸ್ತಾವನಾ (Amraoti Edition)ಪುಟ ೪೭.

೩. ಷಟ್ಖಂಡಾಗಮಕೀ ಪ್ರಸ್ತಾವನಾ (Amraoti Edition) ಪು. ೪೮-೫೦;ಕಸಾಯಪಾಹುಡ ಸುತ್ತ ಪ್ರಸ್ತಾವನಾ ಪುಟ ೨೮. (ಹೀರಾಲಾಲ ಜೈನರು 'ಹಂ ಊಪರ ಕಹ ಹೀ ಆಯೇ ಹೈಂ ಕೀ ಕುಂದಕುಂದಕೃತ ಪರಿಕರ್ಮ ಸಂಭವತಃವೃತ್ತಿರೂಪ ಗ್ರಂಥಥಾ।ಅತಃ ಶಾಮಕುಂದನೇ ಉಸೀ ವೃತ್ತಿಪರ ಔರ ಉಧರ ಕಷಾಯ ಪ್ರಾಭೃತಕೀ ಯತಿವೃಷಭಾಚಾರ್ಯಕೃತ ವೃತ್ತಿಪರ ಅಪನೀ ಪದ್ಧತಿ ಲಿಖೀ।' ಎಂಬ ಇನ್ನೊಂದು ಅಭಿಪ್ರಾಯವನ್ನು ನೀಡಿರುವರು. (ಷಟ್ಖಂಡಾಗಮಕೀ ಪ್ರಸ್ತಾವನಾ ಪು. ೪೮) ಇದರಿಂದ ಶಾಮಕುಂದನ ವ್ಯಾಖ್ಯಾನವು ಕುಂದಕುಂದನ 'ಪರಿಕರ್ಮ' ಮತ್ತು ಯತಿವೃಷಭನ 'ಚೂರ್ಣಿವೃತ್ತಿ' ಎಂಬ ವೃತ್ತಿಗಳಿಗೆ ಬರೆದುದು ಎಂದು ತಿಳಿದುಬರುತ್ತದೆ. ಕೃತಿ ಲಭಿಸುವ ವರೆಗೆ ಇದೆಲ್ಲ ಊಹೆಯಾಗಿ ನಿಲ್ಲುತ್ತದೆ.

೪. ಷಟ್ಖಂಡಾಗಮಕೀ ಪ್ರಸ್ತಾವನಾ ಪು. ೪೮. ಜಯಧವಲದ ಈ ವಾಕ್ಯಕ್ಕೆ "ವೃತ್ತಿಸೂತ್ರಕೇ ವಿಷಮ ಪದೋಂಕಾಭಂಜನ ಅರ್ಥಾತ್ ವಿಶ್ಲೇಷಣಾತ್ಮಕ ವಿವರಣಕೋ ಪದ್ಧತಿ ಕಹತೇಹೈಂ" ಎಂದು ಹೀರಾಲಾಲ ಜೈನರು ವಿವರಣೆ ನೀಡಿರುವರು.

೫. ಚಾ. ಪು. (ಅಂತ್ಯಪ್ರಶಸ್ತಿ)

೬. "ತದನಂತರಂ ಶಾಮಕುಂದ ಯತಿಗಳು ಪ್ರಾಕೃತ ಸಂಸ್ಕೃತಿಕಾದ್ಯನೇಕ ಗ್ರಂಥಕರ್ತೃಗಳಾದರು. ಮತ್ತಂ ತುಂಬುಲೂರಲ್ಲಿ ಪುಟ್ಟಿದ ತುಂಬಲೂರುನಾಮಾಚಾರ್ಯರು......" (ರಾಜಾವಳೀ ಕಥೆ ಪು. ೧೭೯). " ಶಾಮಕುಂದಾಚಾರ್ಯರು ಮಹಾಬಂಧ ಪ್ರಾಕೃತ ಸಂಸ್ಕೃತ ಕರ್ಣಾಟಕ ಭಾಷೆಗಳಿಂ ಗ್ರಂಥರಚನಾಪ್ರವೀಣರಾದಿಂ ಬಳಿಯಂ, ತುಂಬುಲೂರು ನಾಮಾಚಾರ್ಯರ್......" (ರಾಜಾವಳೀ ಕಥೆ ಪು. ೧೫೩) ಈ ಎರಡು ಸಂದರ್ಭಗಳಲ್ಲಿಯೂ ದೇವಚಂದ್ರನು ಮೇಲೆ ಹೇಳಿದ ಇಂದ್ರನಂದಿ ಚಾವುಂಡರಾಯರ ಕ್ರಮವನ್ನೇ ಹೇಳಿರುವನು.

ಎರಡು, ಶ್ಯಾಮಕುಂದ ಮೂರು, ತುಂಬಳೂರಾಚಾರ್ಯ ನಾಲ್ಕು, ಸಮಂತ ಭದ್ರ ಐದು, ಬಪ್ಪದೇವ ಆರು ಇಲ್ಲವೆ ಎಂಟನೆಯ ಶತಮಾನದವರೆಂದು ಊಹಿಸುತ್ತ ಶ್ಯಾಮಕುಂದನನ್ನು ಮೂರನೆಯ ಶತಮಾನದಲ್ಲಿ ನಿಲ್ಲಿಸಿದರೆ, ಕವಿಚರಿತೆಕಾರರು ಕ್ರಿ.ಶ. ಸುಮಾರು ೬೫೦ಕ್ಕೆ ನಿಲ್ಲಿಸುವರು. ಹೆಚ್ಚಿನ ಆಧಾರಗಳು ಸಿಗುವವರೆಗೆ ಈ ಬಗೆಗೆ ತೀರ್ಮಾನಕೊಡುವುದು ಅಸಾಧ್ಯವಾಗಿದ್ದು, ಈತನು ಜಿನಸೇನ ವೀರಸೇನ ಬಪ್ಪದೇವ ಸಮಂತಭದ್ರ ತುಂಬಳೂರಾಚಾರ್ಯರಿಗೆ ಪ್ರಾಚೀನನಾದ ಒಬ್ಬ ಸುಪ್ರಸಿದ್ಧ ವ್ಯಾಖ್ಯಾನಕಾರನೆಂದು ಮಾತ್ರ ಹೇಳಬಹುದು.

ತೆಂಬಳೂರಾಚಾರ್ಯ

ತೆಂಬಳೂರಾಚಾರ್ಯ-ತುಂಬಳೂರಾಚಾರ್ಯ, ತೆಂಬಳೂರನಾಮಾಚಾರ್ಯ- ತುಂಬಳೂರ ನಾಮಾಚಾರ್ಯ ಎಂಬ ಹೆಸರುಗಳಿಂದ ಈತನ ಊರು ತೆಂಬಳೂರು ಇಲ್ಲವೆ ತುಂಬಳೂರೆಂದೂ, ಊರ ಹೆಸರಿನಿಂದ ಪ್ರಸಿದ್ಧನಾಗಿರುವ ಈತನ ಮೂಲ ಹೆಸರು ಬೇರೆ ಇರಬಹುದೆಂದೂ ಅನಿಸುತ್ತದೆ.[೭] ಈ ಗ್ರಾಮದ ವಿಷಯವಾಗಿ ಬಿ.ಎಲ್. ರೈಸ್ ಅವರು "Dommalur or Domlur, immediately to the east of Bangalore, or more likely the Tumbal of T.N. 106-9" ಎಂದು ಊಹಿಸಿದ್ದಾರೆ.[೮] ಇದಕ್ಕೆ ಆಧಾರ ಸಾಲದು. ಇಂದ್ರನಂದಿಯ ಶ್ರುತಾವತಾರ, ಚಾವುಂಡರಾಯ ಪುರಾಣ, ರಾಜಾವಳೀ ಕಥೆಗಳಿಂದ ಈತನ ಚರಿತ್ರೆಯನ್ನು ಹೀಗೆ ಸಂಗ್ರಹಿಸಬಹುದಾಗಿದೆ.

ಕರ್ಮಪ್ರಾಭೃತ ಮತ್ತು ಕಷಾಯಪ್ರಾಭೃತಗಳಿಗೆ ಹುಟ್ಟಿದ ವ್ಯಾಖ್ಯಾನಗಳನ್ನು ಹೇಳುತ್ತ ಇಂದ್ರನಂದಿಯು, ಕುಂದಕುಂದ ಶ್ಯಾಮಕುಂದರ ತರುವಾಯವೇ,

> ತಸ್ಮಾದಾರಾನ್ಪುನರಪಿ ಕಾಲೇ ಗತವತಿ ಕಿಯತ್ಯಪಿ ಚ ॥೧೬೪॥
>
> ಅಥ ತುಂಬಲೂರ ನಾಮಾಚಾರ್ಯೋಽಭೂತ್ತುಂಬಲೂರ ಸದ್ಗ್ರಾಮೇ
> ಷಷ್ಠೇನ ವಿನಾಖಂಡೇನ ಸೋಽಪಿ ಸಿದ್ಧಾಂತಯೋರುಭಯೋಃ ॥೧೬೫॥
>
> ಚತುರಧಿಕಾಶೀತಿ ಸಹಸ್ರಗ್ರಂಥರಚನಯಾ ಯುಕ್ತಾಮ್
> ಕರ್ಣಾಟಭಾಷಯಾ ಕೃತಾಮಹತೀಂ ಚುಡಾಮಣೀಂ ವ್ಯಾಖ್ಯಾಂ ॥೧೬೬॥
>
> ಸಪ್ತಸಹಸ್ರಗ್ರಂಥಾಂ ಷಷ್ಠ್ಯಸ್ಯ ಚ ಪಂಚಿಕಾಂ ಪುನರಕಾರ್ಷೀತ್।

ಎಂದು ಶ್ರುತಾವತಾರದಲ್ಲಿ ಹೇಳಿದ್ದಾನೆ. ತುಂಬಲೂರು ಗ್ರಾಮನಿವಾಸಿಯಾದ ತುಂಬಲೂರು ನಾಮಾಚಾರ್ಯನು ೬ನೆಯ ಖಂಡವನ್ನು ಹೊರತುಪಡಿಸಿ, ಉಭಯ ಸಿದ್ಧಾಂತಕ್ಕೆ (ಕರ್ಮಪ್ರಾಭೃತ, ಕಷಾಯ ಪ್ರಾಭೃತ) ೮೪ ಸಾವಿರ ಗ್ರಂಥಪ್ರಮಾಣದ 'ಚೂಡಾಮಣಿ' ಎಂಬ ಹೆಸರಿನ ವ್ಯಾಖ್ಯಾನವನ್ನು ಕನ್ನಡ ಬಾಷೆಯಲ್ಲಿ ಬರೆದನು; ತರುವಾಯ ಆ ೬ನೆಯ ಖಂಡಕ್ಕೆ ೭ ಸಾವಿರ ಗ್ರಂಥಪ್ರಮಾಣದ ಪಂಚಿಕೆಯನ್ನು ರಚಿಸಿದನು ಎಂದು ಇದರ

---

೭. ವಟ್ಟಕೇರಿ, ಕುಂದಕುಂದ ಮೊದಲಾದವರು ತಮ್ಮ ಗ್ರಾಮದ ಹೆಸರಿನಿಂದಲೇ ಪ್ರಸಿದ್ಧಿ ಪಡೆದಿರುವರು. ಬಳ್ಳಾರಿ ಜಿಲ್ಲೆಯಲ್ಲಿ ತುಂಬಳ (S.I.I. ix-i, 226,228,250,133,143,172,175,90,218,239,250,277,367,295) ಚಿನ್ನತುಂಬಳ ಎಂಬ ಹೆಸರಿನ ಗ್ರಾಮಗಳಿವೆ. ತುಂಬಳೂರಾಚಾರ್ಯನಿಗೂ ಇವುಗಳಿಗೂ ಸಂಬಂಧ ಇರಬಹುದು, ಇಲ್ಲದಿರಬಹುದು.

೮. M.C. I.P. 198

ಅಭಿಪ್ರಾಯ. ಶಾಮಕುಂದನಂತೆ 'ಮಹಾಬಂಧ'ಹೆಸರಿನ ೬ನೆಯ ಖಂಡವನ್ನು ಬಿಟ್ಟಿದ್ದ ಈತನು, ತರುವಾಯ ಅದಕ್ಕೂ ೭೦೦೦ ಗ್ರಂಥಪ್ರಮಾಣದ ವ್ಯಾಖ್ಯಾನವನ್ನು ಬರೆದನು. ಹೀಗಾಗಿ ಇದು ಕರ್ಮಪ್ರಾಭೃತ ಮತ್ತು ಕಷಾಯಪ್ರಾಭೃತಗಳಿಗೆ ಬರೆದ ಪರಿಪೂರ್ಣ ವ್ಯಾಖ್ಯಾನ. ಈ ವ್ಯಾಖ್ಯಾನದ ಗ್ರಂಥಪ್ರಮಾಣ ೮೪೦೦೦+೭೦೦೦=೯೧೦೦೦;ಭಾಷೆ ಕನ್ನಡ; ಹೆಸರು 'ಚೂಡಾಮಣಿ' ಈ ಸಂದರ್ಭದಲ್ಲಿ ದೇವಚಂದ್ರನು "ತುಂಬಲೂರಲ್ಲಿ ಪುಟ್ಟಿದ ತುಂಬಲೂರು ನಾಮಾಚಾರ್ಯರ್ ಪ್ರಾಕೃತ ಸಂಸ್ಕೃತ ಕರ್ಣಾಟಾದಿ ಭಾಷೆಗಳಿಂ ಸಿದ್ಧಾಂತ ಪ್ರಬಂಧ ಕರ್ತೃಗಳ್ ಚೂಡಾಮಣಿ ವ್ಯಾಖ್ಯಾನ ಚತುರಶೀತಿಸಹಸ್ರ ಗ್ರಂಥರಚನೆಯಂ ಮಾಡಿದರ್"[೯] ಎಂದು "ತುಂಬಲೂರು ನಾಮಾಚಾರ್ಯರ್ ಎಂಬತ್ತುನಾಲ್ಕು ಸಾಸಿರ ಗ್ರಂಥಕರ್ತೃಗಳಾಗಿ ಕರ್ನಾಟಕ ಭಾಷೆಯಿಂ ಚೂಡಾಮಣಿ ವ್ಯಾಖ್ಯಾನಮಂ ಮಾಡಿದರ್"[೧೦] ಎಂದು ಎರಡು ಸಲ ಹೇಳಿದರೂ ಇಂದ್ರನಂದಿಗಿಂತ ಹೆಚ್ಚಿನ ಸಂಗತಿಗಳನ್ನೇನೂ ಹೇಳಿದಂತಾಗಿಲ್ಲ.

ಕುಂದಕುಂದ-ಶಾಮಕುಂದ-ತೆಂಬಳೂರಾಚಾರ್ಯ-ಸಮಂತಭದ್ರ-ಬಪ್ಪದೇವ-ವೀರಸೇನ -ಜಿನಸೇನ ಎಂದು ಇಂದ್ರನಂದಿ, ಚಾವುಂಡರಾಯರು ಕಾಲಕ್ರಮವಾಗಿ ಇವರನ್ನು ಹೆಸರಿಸಿದ್ದಾರೆ. ಆರ್. ನರಸಿಂಹಾಚಾರ್ಯರು ಶ್ರೀವರ್ಧದೇವನೇ (ಈತನ ಬಗ್ಗೆ ಮುಂದೆ ಚರ್ಚಿಸಲಾಗಿದೆ) ಇವನೆಂದು ಭಾವಿಸುತ್ತ ಈತನ ಕಾಲ ಕ್ರಿ.ಶ. ೬೫೦ ಎಂದರೆ,[೧೧] ಹೀರಾಲಾಲ್ ಜೈನರು ೪ನೆಯ ಶತಮಾನವೆನ್ನುತ್ತಾರೆ.[೧೨] ಈ ಸಂದರ್ಭದಲ್ಲಿ ತೆಂಬಳೂರಾಚಾರ್ಯನು ಶ್ಯಾಮಕುಂದನಿಗೆ ತರುವಾಯದವ ಜಿನಸೇನ ವೀರಸೇನ ಬಪ್ಪದೇವ ಸಮಂತಭದ್ರರಿಗೆ ಪ್ರಾಚೀನ ಎಂದು ಮಾತ್ರ ಹೇಳಬಹುದು.

ತತ್ವಾರ್ಥಮಹಾಶಾಸ್ತ್ರ ವ್ಯಾಖ್ಯಾತೃ

ಭಟ್ಟಾಕಲಂಕನ ಶಬ್ದಾನುಶಾಸನದಲ್ಲಿ "(ಕನ್ನಡದೊಳಗೆ) ತತ್ವಾರ್ಥಮಹಾಶಾಸ್ತ್ರ ವ್ಯಾಖ್ಯಾನಸ್ಯ ಷಣ್ಣವತಿಸಹಸ್ರ ಪ್ರಮಿತಗ್ರಂಥ ಸಂದರ್ಭರೂಪಸ್ಯ ಚೂಡಾಮಣ್ಯಭಿಧಾನಸ್ಯ ಮಹಾಶಾಸ್ತ್ರಸ್ಯ...... ಉಪಲಭ್ಯಮಾನತ್ವಾತ್" ಎಂಬ ವಾಕ್ಯವೊಂದು ಬರುತ್ತದೆ.[೧೩] ಇಲ್ಲಿ "ತತ್ವಾರ್ಥಮಹಾಶಾಸ್ತ್ರ ವ್ಯಾಖ್ಯಾನಸ್ಯ" ಎಂದು ಸುಸ್ಪಷ್ಟವಾಗಿರುವುದರಿಂದ ಉಮಾಸ್ವಾತಿಯ 'ತತ್ವಾರ್ಥಸೂತ್ರ'ಕ್ಕೆ ಬರೆದ ೯೬೦೦೦ ಗ್ರಂಥಪ್ರಮಾಣದ ಟೀಕೆಯೊಂದು ಕನ್ನಡದಲ್ಲಿದ್ದಿತೆಂದು ಒಪ್ಪಿಕೊಳ್ಳಬೇಕಾಗುತ್ತದೆ.

ಜೈನಧರ್ಮಕ್ಕೆ ಸಂಬಂಧಪಟ್ಟ ಶಾಸ್ತ್ರಗ್ರಂಥಗಳಲ್ಲಿ ಉಮಾಸ್ವಾತಿಯ 'ತತ್ವಾರ್ಥಸೂತ್ರ'ವು "The Bible of the Jains" ಎಂಬ ಪ್ರಖ್ಯಾತಿಗಳಿಸಿದೆ. 'ದ್ರವ್ಯಾನುಯೋಗ'ದಲ್ಲಿ ಅಂತರ್ಗತವಾಗುವ ಈ ಗ್ರಂಥ ಜೀವ, ಅಜೀವ, ಆಸ್ರವ, ಬಂಧ, ಸಂವರ, ನಿರ್ಜರ, ಮೋಕ್ಷಗಳೆಂಬ ಸಪ್ತತತ್ವಗಳನ್ನು ವಿವರಿಸುತ್ತದೆ. ಇದನ್ನು ಕುರಿತ ಟೀಕೆ, ಭಾಷ್ಯ, ಟಿಪ್ಪಣಿ, ವ್ಯಾಖ್ಯಾನ, ವೃತ್ತಿಸಾಹಿತ್ಯ ವಿಫುಲವಾಗಿದೆ. "Perhaps no other Jain

---

೯-೧೦.ರಾಜಾವಳೀ ಕಥೆ (ಪು. ೧೨೯ ಮತ್ತು ೧೫೩) ಇಲ್ಲಿ ಮೊದಲು ಬರೆದ ೮೪ಸಾವಿರ ಗ್ರಂಥಪ್ರಮಾಣ ಮಾತ್ರ ಉಲ್ಲಿಖಿತವಾಗಿದೆ. ತರುವಾಯದ ೭ ಸಾವಿರ ಗ್ರಂಥಪ್ರಮಾಣ ಈತನ ಲಕ್ಷ್ಯಕ್ಕೆ ಬಂದಂತಿಲ್ಲ.

೧೧. ಕ.ಕ.ಚ.ಪು. ೮

೧೨. ಷಟ್ಖಂಡಾಗಮಕೀ ಪ್ರಸ್ತಾವನಾ ಪು. ೫೩

೧೩. ಶ.ಶಾಸನ (ಆರ್. ನರಸಿಂಹಾಚಾರ್-೧೯೨೩) ಪು. ೧೦

text has so many Commentaries written on it" ಎಂಬ ಜ್ಯೋತಿಪ್ರಸಾದ ಜೈನರ ಮಾತನ್ನು[೧೪] ಇಲ್ಲಿ ಸ್ಮರಿಸಬಹುದು. ಸ್ವತಃ ಉಮಾಸ್ವಾತಿಯ ತತ್ತ್ವಾರ್ಥಾಧಿಗಮಸೂತ್ರ (?), ಸಮಂತಭದ್ರನ ಗಂಧಹಸ್ತಿಮಹಾಭಾಷ್ಯ, ಸಿದ್ಧಸೇನನ ಬೃಹತ್ಕಾಯವೃತ್ತಿ, ಹರಿಭದ್ರನ ಲಘುಕಾಯವೃತ್ತಿ, ಪೂಜ್ಯಪಾದನ ಸರ್ವಾರ್ಥಸಿದ್ಧಿ, ಭಟ್ಟಾಕಲಂಕನ ತತ್ತ್ವಾರ್ಥರಾಜವಾರ್ತಿಕ, ವಿದ್ಯಾನಂದನ ತತ್ತ್ವಾರ್ಥಶ್ಲೋಕವಾರ್ತಿಕಗಳಲ್ಲದೆ; ದೇವಗುಪ್ತ, ಯಶೋಭದ್ರ, ಮಲಯಗಿರಿ, ಚಿರಂತನಮುನಿ, ಯಶೋವಿಜಯಗಣಿ, ಯಶೋವಿಜಯ, ಶ್ರುತಸಾಗರ, ವಿಬುಧಸೇನ, ಯೋಗೀಂದ್ರದೇವ, ಯೋಗದೇವ, ಲಕ್ಷ್ಮೀದೇವ, ಅಭಯನಂದಿ ಮೊದಲಾದವರ ಒಟ್ಟು ೩೦ ರಷ್ಟು ವೃತ್ತಿವ್ಯಾಖ್ಯಾನಗಳು ಲಭಿಸುತ್ತವೆ.[೧೫] ಹೀಗೆ ಪಂಡಿತರ ವಿದ್ವತ್ತಿಗೆ ವಸ್ತುವಾದ ಈ ಕೃತಿಗೆ ಕನ್ನಡಿಗರೂ ಆಕರ್ಷಿತರಾಗಿರುವುದು ಸಹಜ.

೧) ಶ್ರೀಮಾನುಮಾಸ್ವಾತಿರಯಂ ಯತೀಶಸ್ತತ್ತ್ವಾರ್ಥಸೂತ್ರಂ ಪ್ರಕಟೀ ಚ ಕಾರ ।
ಯನ್ಮುಕ್ತಿಮಾರ್ಗಾಚರಣೋದ್ಯತಾನಾಂ ಪಾಥೇಯಮರ್ಘ್ಯಂ ಭವತಿಪ್ರಜಾನಂ ||[೧೬]

೨) ತತ್ತ್ವಾರ್ತ್ಥಸೂತ್ರಕರ್ತ್ತಾರಮುಮಾಸ್ವಾತಿ ಮುನೀಶ್ವರಂ
ಶ್ರುತಕೇವಲಿದೇಶೀಯಂ ವಂದೇಹಂ ಗುಣಮಂದಿರಂ ||[೧೭]

ಎಂಬ ಶ್ರವಣಬೆಳ್ಗೊಳ ಮತ್ತು ಹುಮ್ಮಚ ಶಾಸನಗಳಲ್ಲಿ ಈ ಕೃತಿಯ ಹೆಸರು ಶಿಲಾಸ್ಥಾಯಿಯಾಗಿದೆ. ಇದಲ್ಲದೆ ಕನ್ನಡದಲ್ಲಿ ದಿವಾಕರಣಂದಿ (೧೦೬೨)ಯು ತತ್ತ್ವಾರ್ಥಸೂತ್ರಾನುಗತ ಕರ್ಣಾಟಕ ಲಘುವೃತ್ತಿ,[೧೮] ಬಾಲಚಂದ್ರ (೧೧೭೦)ನು ತತ್ತ್ವಾರ್ಥ ತಾತ್ಪರ್ಯವೃತ್ತಿ ಅಥವಾ ತತ್ವರತ್ನ ಪ್ರದೀಪಿಕೆ ಎಂಬ ಹೆಸರಿನ ವ್ಯಾಖ್ಯಾನಗ್ರಂಥಗಳನ್ನು ಬರೆದಿರುವರು. ಕನ್ನಡನಾಡಿನ ವಿದ್ವಾಂಸರ, ಪ್ರಜೆಗಳ ಗೌರವಕ್ಕೆ ಪಾತ್ರವಾದ ಈ ಗ್ರಂಥಕ್ಕೆ ಭಟ್ಟಾಕಳಂಕ ಹೇಳುವಂತೆ'ಚೂಡಾಮಣಿ' ಎಂಬ ಹೆಸರಿನ ೯೬೦೦೦ಗ್ರಂಥ ಪ್ರಮಾಣದ ವ್ಯಾಖ್ಯಾನವೊಂದು ಕನ್ನಡದಲ್ಲಿ ಹುಟ್ಟಿದ್ದರೆ ಆಶ್ಚರ್ಯವಲ್ಲ.

ಭಟ್ಟಾಕಳಂಕನು ಈ ವ್ಯಾಖ್ಯಾನದ ಹೆಸರು 'ಚೂಡಾಮಣಿ' ಎನ್ನುವನೇ ಹೊರತು ಕರ್ತೃನಾಮವನ್ನು ಹೇಳಿಲ್ಲ. ಶ್ರವಣಬೆಳ್ಗೊಳ ಶಾಸನದಲ್ಲಿ[೧೯] ಸಮಂತಭದ್ರರ ವಿಷಯ ಹೇಳಿದ ತರುವಾಯ,

---

೧೪. J.S.H.A.I.ಪು. ೧೩೫ ಟಿ.

೧೫. ಈ ವಿವರಣೆಗಾಗಿ ತತ್ತ್ವಾರ್ಥಸೂತ್ರ ೩೬(ಪಂ. ಸುಖಲಾಲಜಿ ಶಾಸ್ತ್ರಿ), ಜಿನರತ್ನಕೋಶ ೧೫೪(ಎಚ್.ಡಿ. ವೆಲಂಕರ), ಜೈನಧರ್ಮ ೧೮೮(ಮಿರ್ಜಿ ಅಣ್ಣಾರಾಯ) ಗ್ರಂಥಗಳನ್ನು ನೋಡಬಹುದು.

೧೬. E.C. ii.No. 254

೧೭. E.C. viii, ನಗರ ೪೬, ಹುಮ್ಮಚ ಶಾಸನ

೧೮. ಈ ವಿಷಯವನ್ನು ನಗರ ೫೬ನೆಯ ಶಾಸನ ಹೀಗೆ ಹೇಳುತ್ತದೆ.

ಜಡರುಂ ಬಾಳಕರುಂ ಬುಧಪ್ರಕರಮುಂ ತತ್ತ್ವಾರ್ತ್ಥಮಂ ಕಲ್ತಘಂ
ಕಿಡೆ ಸಮ್ಯಕ್ತ್ವಮನೆಯ್ದಿ ಸಪ್ತ ಪರಮಸ್ಥಾನಾಪ್ತಿಯಂ ನಿಶ್ಚಯಂ।
ಪಡೆಯಲ್ಮಾಡಿದರೊಪ್ಪೆ...... ರ್ತ್ತತ್ವಾರ್ತ್ಥ ಸೂತ್ರಕ್ಕೆ ಕ
ನ್ನಡದಿಂ ವೃತ್ತಿಯನೆಲ್ಲಿಗಂ ನೆಗಳ್ಚಿನಂ ಸಿದ್ಧಾನ್ತರತ್ನಾಕರರ್॥

E.C.viii,ನಗರ ೫೭ ಹುಮ್ಮಚ.

೧೯. E.C.ii. No. 254

> ತಸ್ಯೈವ ಶಿಷ್ಯಃ ಶಿವಕೋಟಿಸೂರಿಸ್ತಪೋಲತಾಲಂಬನ ದೇಹಯಷ್ಟಿಃ।
> ಸಂಸಾರ ವಾರಾಕರ ಪೋತಮೇತತ್ತತ್ತ್ವಾರ್ಥಸೂತ್ರಂ ತದಲಂ ಚ ಕಾರ॥

ಎಂದು ಉಲ್ಲೇಖಿಸಲಾಗಿದೆ. ಇಲ್ಲಿ ಹೇಳಲಾದ ಕೃತಿಯು ಉಮಾಸ್ವಾತಿಯ ತತ್ತ್ವಾರ್ಥಸೂತ್ರಕ್ಕೆ ಶಿವಕೋಟಿಯು ಬರೆದ ಟೀಕೆಯಾಗಿರಬಹುದೆಂದು ಪಂಡಿತರ ಅಭಿಪ್ರಾಯ.[೨೦] ಆದರೆ ಹುಮ್ಮಚ ಶಾಸನದ,

> ಸಮನ್ತಭದ್ರಸ್ವಾಮಿಗಳವರ ಶಿಷ್ಯಸನ್ತಾನಂ ಶಿವಕೋಟ್ಯಾಚಾರ್ಯ್ಯರವರಿಂ
> ವರದತ್ತಾಚಾರ್ಯ್ಯರವರಿಂ ತತ್ತ್ವಾರ್ತ್ಥಸೂತ್ರ ಕರ್ತ್ತೃಗಳೆನಿಸಿದಾರ್ಯ್ಯದೇವರವರಿಂ
> ಗಂಗರಾಜ್ಯಮಂ ಮಾಡಿದ ಸಿಂಹಣಂದ್ಯಾಚಾರ್ಯ್ಯರ್.......[೨೧]

ಎಂಬ ಮಾತಿನಿಂದ ತತ್ತ್ವಾರ್ಥಸೂತ್ರ (ಟೀಕೆ)ದ ಕರ್ತೃ ಶಿವಕೋಟಿಯಲ್ಲ; ಈತನ ಪ್ರಶಿಷ್ಯ ಆರ್ಯದೇವನೆಂದು ವೇದ್ಯವಾಗುತ್ತದೆ. ಒಟ್ಟಿನಲ್ಲಿ ಈ ಶಾಸನಗಳ ಪ್ರಕಾರ ಪಂಪಪೂರ್ವಯುಗದ ಸಮಂತಭದ್ರನ ಶಿಷ್ಯನಾದ ಶಿವಕೋಟಿ ಇಲ್ಲವೆ ಶಿವಕೋಟಿಯ ಪ್ರಶಿಷ್ಯನಾದ ಆರ್ಯದೇವನು ಉಮಾಸ್ವಾತಿಯ ತತ್ತ್ವಾರ್ಥಸೂತ್ರಕ್ಕೆ ಟೀಕೆ ಬರೆದಿದ್ದು, ಭಟ್ಟಾಕಳಂಕ ಹೇಳುವ 'ಚೂಡಾಮಣಿ' ಇದೇ ಆಗಿರಲು ಸಾಧ್ಯ.[೨೨] ಇದು ನಿಜವಿದ್ದ ಪಕ್ಷದಲ್ಲಿ ಕನ್ನಡ ಸಾಹಿತ್ಯದ ಪ್ರಾಚೀನತೆಯು ಗಂಗರಾಜ್ಯಸ್ಥಾಪನೆಗೆ ಕಾರಣನಾದ ಸಿಂಹಣಂದ್ಯಾಚಾರ್ಯನಿಗೆ ಹಿಂದೆ ಹೋಗುತ್ತದೆ. ಆದರೆ ಹೀಗೆ ಹೇಳುವುದಕ್ಕೆ ಧೈರ್ಯ ಸಾಲದು. ಭಟ್ಟಾಕಳಂಕನು 'ಉಪಲಭ್ಯಮಾನತ್ವಾತ್' ಎಂದು ಹೇಳಿರುವುದರಿಂದ ಆತನ ಕಾಲಕ್ಕೆ ಉಪಲಬ್ಧವಿದ್ದಿರಬಹುದಾದ ಈ ಕನ್ನಡ ಕೃತಿ ಈಗ ಕಣ್ಮರೆಯಾಗಿ ನಿಂತಿದೆ.

ಶ್ರೀವರ್ಧದೇವ

ಶ್ರವಣಬೆಳ್ಗೊಳ ಶಾಸನ (ಕ್ರಿ.ಶ.೧೧೨೮) ದಲ್ಲಿ ವರ್ಧಮಾನಜಿನ-ಗೌತಮಗಣಧರ-ಭದ್ರಬಾಹು-ಚಂದ್ರಗುಪ್ತ-ಕೊಂಡಕುಂದ-ಸಮಂತಭದ್ರ-ಸಿಂಹಣಂದಿ-ವಕ್ರಗ್ರೀವ-ವಜ್ರನಂದಿ-ಪತ್ರಕೇಸರಿ-ಸುಮತಿದೇವ-ಕುಮಾರಸೇನ-ಚಿಂತಾಮಣಿ-ಶ್ರೀವರ್ದ್ಧದೇವ(ಚೂಳಾಮಣಿ ಕರ್ತೃ)-ಮಹೇಶ್ವರ......" ಎಂದು ಮುಂತಾಗಿ ಸುಪ್ರಸಿದ್ಧ ಜೈನಗುರುಪರಂಪರೆಯನ್ನು ಉಲ್ಲೇಖಿಸಲಾಗಿದೆ. ಇಲ್ಲಿ ಶ್ರೀವರ್ಧದೇವನ ವರ್ಣನೆ ಹೀಗಿದೆ:

> ಚೂಳಾಮಣಿಃ ಕವೀನಾಂ ಚೂಳಾಮಣಿನಾಮ ಸೇವ್ಯಕಾವ್ಯ ಕವಿಃ।
> ಶ್ರೀವರ್ದ್ಧದೇವ ಏವ ಹಿ ಕೃತಪುಣ್ಯಃ ಕೀರ್ತ್ತಿಮಾಹರ್ತ್ತುಂ॥
> ಚೂರ್ಣ್ಣಿ॥ಯ ಏವಮುಪಶ್ಲೋಕಿತೋ ದಣ್ಡಿನಾ॥
> ಜಹ್ನೋಃ ಕನ್ಯಾಂ ಜಟಾಗ್ರೇಣ ಬಭಾರ ಪರಮೇಶ್ವರಃ।
> ಶ್ರೀ ವರ್ದ್ಧದೇವ ಸಂಧತ್ಸೇ ಜಿಹ್ವಾಗ್ರೇಣ ಸರಸ್ವತೀಂ॥[೨೩]

---

೨೦. ಜೈನಸಾಹಿತ್ಯ ಔರ ಇತಿಹಾಸ ಪು. ೭೭

೨೧. E.C. viii.ನಗರ ೩೫. ಹುಮ್ಮಚ

೨೨. ಮೇಲಣ ಶ್ರವಣಬೆಳ್ಗೊಳ ಶಾಸನೋಕ್ತ 'ತಸ್ಯೈವ ಶಿಷ್ಯಃ......' ಎಂಬ ಶ್ಲೋಕವು ಈ ತತ್ತ್ವಾರ್ಥಸೂತ್ರ ವ್ಯಾಖ್ಯಾನದಿಂದ ಎತ್ತಿಕೊಂಡುದಾಗಿರಬೇಕೆಂದು ಪಂಡಿತ ಜುಗುಲಕಿಶೋರ ಮುಕ್ತಾರರ ಅಭಿಮತ (ಜೈನ ಸಾಹಿತ್ಯ ಔರ ಇತಿಹಾಸ ಪು. ೭೮) ಇದು ನಿಜವಿದ್ದಲ್ಲಿ ಕನ್ನಡ ಚೂಡಾಮಣಿಯಿಂದ ಈಗ ಉಳಿದು ನಿಂತ ಒಂದು ಸಂಸ್ಕೃತ ಶ್ಲೋಕವಿದು ಎನ್ನಬೇಕಾಗುತ್ತದೆ.

೨೩. E.C. ii No. 67.ಶ್ರವಣಬೆಳ್ಗೊಳ

(ಕವಿಗಳಲ್ಲಿ ಚೂಡಾಮಣಿಯೂ 'ಚೂಡಾಮಣಿ' ಎಂಬ ಕಾವ್ಯಕರ್ತೃವೂ ಎನಿಸಿದ ಶ್ರೀವರ್ಧದೇವನೆಂಬ ಕವಿಯು ಕೀರ್ತಿಗೆ ಸರ್ವಯೋಗ್ಯನಾಗಿದ್ದಾನೆ. 'ಗಂಗೆಯನ್ನು ಶಿವನು ಜಟಾಗ್ರದಲ್ಲಿ ಧರಿಸಿದಂತೆ ಓ!ಶ್ರೀವರ್ಧದೇವಾ, ನೀನು ಸರಸ್ವತಿಯನ್ನು ಜಿಹ್ವಾಗ್ರದಲ್ಲಿ ಧರಿಸಿರುವೆ' ಎಂದು ಈತನು ದಂಡಿಯಿಂದ ಕೀರ್ತಿತನಾಗಿದ್ದಾನೆ.)

ಈ ಹೇಳಿಕೆಯ ಪ್ರಕಾರ ಶ್ರೀವರ್ಧದೇವನು ಉತ್ಕೃಷ್ಟ ಕವಿ. ಈತನ 'ಚೂಳಾಮಣಿ'ಯು ಉದಾತ್ತಕಾವ್ಯವೆಂಬುದು ನಿಸ್ಸಂದೇಹ.

ಬಸವನಪುರ ಶಾಸನದಲ್ಲಿ (ಕ್ರಿ.ಶ. ೧೧೮೩) ಸಮಂತಭದ್ರ-ಕುಮಾರಸೇನ-ಚಿಂತಾಮಣಿ-ಚೂಡಾಮಣಿ(ಚೂಡಾಮಣಿ ಕರ್ತೃ)-ಮಹೇಶ್ವರ........" ಎಂದು ಮುಂತಾಗಿ ಗುರುಪರಂಪರೆಯೊಂದು ಕಂಡುಬರುತ್ತದೆ. ಇಲ್ಲಿಯ,

> ವಿದ್ವಚ್ಚೂಡಾಮಣಿಶ್ಚೂಡಾಮಣಿ ಕಾವ್ಯಕೃತೇxxx ।
> ಚೂಡಾಮಣಿ ಸಮಾಖ್ಯೋಽಭೂಲ್ಲಕ್ಷ್ಯ ಲಕ್ಷxxxಲಕ್ಷಣಃ ॥[೨೪]

ಎಂಬ ಶ್ಲೋಕ ಅಲ್ಲಲ್ಲಿ ತ್ರುಟಿತವಾಗಿರುವ ಕಾರಣ ಅರ್ಥ ಸ್ಪಷ್ಟವಾಗುವುದಿಲ್ಲ. ಸಂಪಾದಕರು ಮಾತ್ರ "The head jewel (chudamani) of the wise author of the poem chudamani, he was called chudamani, the exhibitor of all the ornaments of (composition) translation" ಎಂದು ಅರ್ಥ ಮಾಡಿದ್ದಾರೆ. ಈ ಶಾಸನದಲ್ಲಿಯ ಗುರುಗಳ ಹೆಸರು, ಮತ್ತು ಅನುಕ್ರಮಗಳನ್ನು ನೋಡಿದರೆ ಮೇಲಣ ಶ್ರವಣಬೆಳ್ಗೊಳದ ಶಾಸನದ ಯತಿಗಳೇ ಇವರೆಂದು ಸ್ಪಷ್ಟವಾಗುತ್ತದೆ. ಆದರೆ ಅಲ್ಲಿ ಶ್ರೀವರ್ಧದೇವನ ಕೃತಿ 'ಚೂಳಾಮಣಿ' ಎಂದಿದ್ದರೆ ಇಲ್ಲಿ ಚೂಡಾಮಣಿ ಎಂಬುವನ ಕೃತಿ 'ಚೂಡಾಮಣಿ' ಎನ್ನಲಾಗಿದೆ. ಇದು ಕೃತಿನಾಮ ಕವಿನಾಮದಂತೆ ಸಾರ್ಥಪ್ರಯೋಗಗೊಂಡುದರ ನಿದರ್ಶನ. ಶ್ರವಣಬೆಳ್ಗೊಳ ಶಾಸನ 'ಚೂಡಾಮಣಿ ಸೇವ್ಯಕಾವ್ಯ' ಎಂದೂ ಬಸವನಪುರ ಶಾಸನ 'ಚೂಡಾಮಣಿ ಕಾವ್ಯ' ಎಂದೂ ಬಾಯಿಬಿಟ್ಟು ಹೇಳಿರುವುದರಿಂದ ಇದೊಂದು ಪ್ರತಿಭಾಸಂಪತ್ತಿಯ ಕಾವ್ಯ;ಹೆಸರಿಗೆ ತಕ್ಕಂತೆ ಕಾವ್ಯಚೂಡಾಮಣಿ ಎನ್ನಬಹುದು.

ಶ್ರೀವರ್ಧದೇವನ ವಿಷಯ ಮೊಟ್ಟಮೊದಲು ಶ್ರವಣಬೆಳ್ಗೊಳ ಶಾಸನದಲ್ಲಿ (೧೧೨೯) ಕಂಡುಬರುವುದರಿಂದ ಈತನ ಪರಮಾವಧಿ ಈಚೆಯ ಕಾಲ ಕ್ರಿ.ಶ. ೧೧೨೯. ಶ್ರೀವರ್ಧದೇವನು (ಕಾವ್ಯಾದರ್ಶದ) ದಂಡಿಯಿಂದ ಸ್ತುತಿಸಲ್ಪಟ್ಟನೆಂದು ಇಲ್ಲಿ ವ್ಯಕ್ತವಾಗಿಯೇ ಹೇಳಿರುವ ಕಾರಣ ಈತನು ದಂಡಿಗೆ ಪ್ರಾಚೀನ ಇಲ್ಲವೆ ಹಿರಿಯ ಸಮಕಾಲೀನ ವ್ಯಕ್ತಿ. ದಂಡಿಯ ಕಾಲ ೭ನೆಯ ಶತಮಾನದ ಅಂತ್ಯವೆಂದು ಬಗೆಯುತ್ತ ಆರ್. ನರಸಿಂಹಾಚಾರ್ ಅವರು "ದಂಡಿಯಿಂದ ಸ್ತುತನಾದ ಶ್ರೀವರ್ಧದೇವನು ಸುಮಾರು ೬೫೦ರಲ್ಲಿ ಇದ್ದಿರಬಹುದು" ಎಂದು ತೀರ್ಮಾನಿಸಿರುವರು.[೨೫]

ಈ ಹೇಳಿಕೆಯನ್ನು ವಿರೋಧಿಸುತ್ತ ಶ್ರೀ ಎ. ವೆಂಕಟಸುಬ್ಬಯ್ಯನವರು "ಮೇಲೆ ಹೇಳಿದ ಶ್ರವಣಬೆಳ್ಗೊಳದ ೬೭ನೆಯ ಶಾಸನದಲ್ಲಿ ಕೀರ್ತಿತನಾಗಿರುವ ಶ್ರೀವರ್ಧದೇವನ ಶಿಷ್ಯನಾದ ಮಹೇಶ್ವರ ಮುನಿಯ ಶಿಷ್ಯನಾದ ಅಕಲಂಕದೇವನು.....ಕ್ರಿ.ಶ. ೭೫೪ರಿಂದ ೭೮೨ರ ವರೆಗೆ ಆಳುತ್ತಿದ್ದ ರಾಷ್ಟ್ರಕೂಟ ಚಕ್ರವರ್ತಿಯಾದ

---

೨೪. E.C. iii. ತಿರುಮಕೂಡ್ಲು ನರಸಿಪುರ, ೧೦೫. ಬಸವನಪುರ

೨೫. ಕ.ಕ.ಚ.ಪು. ೧೦

೧ನೆಯ ಕೃಷ್ಣನ ಕಾಲದಲ್ಲಿ ಜೀವಿಸಿದ್ದನೆಂದು ಮ॥ಪಾಠಕರಿಂದ (ಬಾಂಬೆ ಬ್ರ್ಯಾಂಚ್ ರಾಯಲ್ ಏಷ್ಯಾಟಿಕ್ ಸೊಸೈಟಿ ಜನರಲ್ ಸಂಚಿಕೆ ೧೮ ಪು. ೨೧೯)ನಿಶ್ಚಯಿಸಲ್ಪಟ್ಟಿರುವುದು..... ಈ ಅಕಲಂಕದೇವನ ಗುರುವಾದ ಮಹೇಶ್ವರಮುನಿಗೆ ಶ್ರೀವರ್ಧದೇವನು ಗುರುವಾದುದರಿಂದ ಇವನು ಸುಮಾರು ಕ್ರಿ.ಶ. ೭೧೦ರಲ್ಲಿ ಇದ್ದನೆಂದು ನಾವು ಹೇಳಬಹುದು. ದಶಕುಮಾರಚರಿತದ ಕರ್ತೃವಾದ ದಂಡಿಯೂ ಸುಮಾರಾಗಿ ಇದೇ ಕಾಲದಲ್ಲಿ ಜೀವಿಸುತ್ತಿದ್ದುದರಿಂದ...... ಶ್ರೀ ವರ್ಧದೇವನನ್ನು ಸ್ತುತಿಸಿದ ದಂಡಿಯು ಇವನೇ ಆಗಿರಬಹುದು" ಎಂದು ವಿವರಣೆ ನೀಡಿ, ಶ್ರೀವರ್ಧದೇವನ ಕಾಲ ಕ್ರಿ.ಶ. ೭೧೦ ಎಂಬ ನೆಲೆಯನ್ನು ಮುಟ್ಟಿದ್ದಾರೆ.[೨೬]

ಗೋವಿಂದ ಪೈಗಳು "ಕ್ರಿ.ಶ. ೬ನೆಯ ಶತಮಾನದಲ್ಲಿದ್ದ ದಂಡಿಯಿಂದ ನುತಿಸಲ್ಪಟ್ಟ ಶ್ರೀವರ್ಧದೇವನು ಆ ಶತಕಕ್ಕಿಂತ ತಕ್ಕಷ್ಟು ಹಿಂದೆಯೇ ಆಗಿಹೋಗಿರಬೇಕು," ಎಂದೆನ್ನುತ್ತಾರೆ.[೨೭] ಈ ತ್ರಿವಿಧ ಹೇಳಿಕೆಗಳು ಯೋಗ್ಯ ಆಧಾರಗಳ ಕೊರತೆಯಿಂದ ಇನ್ನೂ ಸಂದೇಹದಲ್ಲಿ ನಿಂತಿವೆ. ಈ ಕಾವ್ಯದ ಭಾಷೆ ಇತ್ಯಾದಿಗಳನ್ನು ಕೆಳಗಣ 'ಚೂಡಾಮಣಿತ್ರಯ (ಒಂದು ತೊಡಕು)' ಎಂಬ ಶೀರ್ಷಿಕೆಯಲ್ಲಿ ವಿವೇಚಿಸಲಾಗುವುದು.

ಚೂಡಾಮಣಿತ್ರಯ (ಒಂದು ತೊಡಕು) :

ಕರ್ಮಪ್ರಾಭೃತ ಮತ್ತು ಕಷಾಯಪ್ರಾಭೃತಗಳಿಗೆ ತೆಂಬಳೂರಾಚಾರ್ಯನು ಬರೆದ 'ಚೂಡಾಮಣಿ ವ್ಯಾಖ್ಯಾನ', ತತ್ವಾರ್ಥಸೂತ್ರಕ್ಕೆ ಅನಾಮಧೇಯನು ಬರೆದ 'ಚೂಡಾಮಣಿ ವ್ಯಾಖ್ಯಾನ', ಶ್ರೀವರ್ಧದೇವನು ಬರೆದ 'ಚೂಡಾಮಣಿಕಾವ್ಯ'- ಈ ಮೂರೂ ಬೇರೆ ಬೇರೆ ಕೃತಿಗಳೆಂದು ಮೇಲಣ ವಿವೇಚನೆಯಿಂದ ಸುಸ್ಪಷ್ಟವಾಗುತ್ತದೆ. ಆದರೆ ಈ ಒಂದೇ ಬಗೆಯ ಹೆಸರುಗಳಿಗೆ ಮತ್ತು ಆ ಆ ಕೃತಿಗಳ ಗ್ರಂಥಪ್ರಮಾಣಗಳಾದ ೮೪೦೦೦+೭೦೦೦=೯೧೦೦೦ ಮತ್ತು ೯೬೦೦೦ಗಳಿಗೆ ಮೋಸಹೋಗಿ ಹಲವರು ಈ ಮೂರನ್ನೂ ತಳುಕುಗೊಳಿಸಿ ಇಲ್ಲದ ಸಂದೇಹಗಳನ್ನು ಸೃಷ್ಟಿಸಿದ್ದಾರೆ. ಇವುಗಳನ್ನು ೧. ಬಿ.ಎಲ್. ರೈಸ್ ಮತ, ೨. ಆರ್. ನರಸಿಂಹಾಚಾರ್ ಮತ, ೩. ಗೋವಿಂದ ಪೈ ಮತ, ೪. ಎ. ವೆಂಕಟಸುಬ್ಬಯ್ಯ ಮತ, ೫. ಆರ್. ನರಸಿಂಹಾಚಾರ್ ಮತ ಎಂದು ಹೆಸರಿಸಿ ವಿವೇಚಿಸಬಹುದು.

ಬಿ.ಎಲ್. ರೈಸ್ ಮತ: "Early history of Kannada Literature (1890, April)" ಎಂಬ ಲೇಖನದಲ್ಲಿ[೨೮] ಬಿ.ಎಲ್. ರೈಸ್ ಅವರು ರಾಜಾವಳೀ ಕಥೆಯಲ್ಲಿ ಬರುವ, ತುಂಬಲೂರಾಚಾರ್ಯನ 'ಚೂಡಾಮಣಿ',ಶಬ್ದಾನುಶಾಸನೋಕ್ತ 'ಚೂಡಾಮಣಿ' ಶ್ರವಣಬೆಳ್ಗೊಳ ಶಾಸನದ ಶ್ರೀವರ್ಧದೇವನ 'ಚೂಡಾಮಣಿ'ಗಳನ್ನು ಗಮನಿಸಿ "ಶ್ರೀವರ್ಧದೇವ also called Tembaluracharya-He was the author of the work called chudamani, which Bhattakalanka in his Shabdanusasan praises as if he considered it the greatest work in the kannada language" ಎಂದು ಹೇಳಿ ಈ ಮೂವರನ್ನು ಮೊಟ್ಟಮೊದಲು ತಳಕುಹಾಕಿ, ಎಲ್ಲ ಚೂಡಾಮಣಿಗಳನ್ನು ಒಂದೇ ಎಂದು ಭಾವಿಸಿ, ಅದು ಕನ್ನಡಕೃತಿಯೆಂದು ನುಡಿದು ಬಿಟ್ಟರು. ಇದು ನಾಮಸಾಮ್ಯದಿಂದ ಉದ್ಭವಿಸಿದ ತಪ್ಪು ಅಭಿಪ್ರಾಯ.

---

೨೬. ಕೆ.ಜೀ. ಕಾ. ೨೪೪

೨೭. ಮೂರು ಉಪನ್ಯಾಸಗಳು ಪು. ೧೨೧

೨೮. J.R.A.S. 1890

ಆರ್. ನರಸಿಂಹಾಚಾರ್ ಮತ: ಕರ್ನಾಟಕ ಕವಿಚರಿತೆಯ ಪ್ರಥಮ ಆವೃತ್ತಿ (೧೯೧೭) ಯಲ್ಲಿ "ಶಾಸನಶ್ಲೋಕದಲ್ಲಿ ಹೇಳಿರುವ ಚೂಡಾಮಣಿ ಗ್ರಂಥವೂ ಇಂದ್ರನಂದಿ, ದೇವಚಂದ್ರರೂ, ಭಟ್ಟಾಕಳಂಕನೂ ಹೇಳಿರುವ ಚೂಡಾಮಣಿಗ್ರಂಥವೂ ಒಂದೇ ಆಗಿರಬಹುದೋ ಇಲ್ಲವೋ ಎಂಬ ಸಂದೇಹವು ಹುಟ್ಟಬಹುದು"[೨೯] ಎಂದು ಅನುಮಾನಪಟ್ಟಿದ್ದರೂ, ಅವರ ಬರೆವಣಿಗೆಯ ಅಂತಿಮ ಅಭಿಪ್ರಾಯ ಎರಡೂ ಒಂದೇ ಎಂಬುದಾಗಿದೆ. ಅದಕ್ಕಾಗಿ 'ಶ್ರೀವರ್ಧದೇವ' ಎಂಬ ಶೀರ್ಷಿಕೆಯಲ್ಲಿ ತೆಂಬಳೂರಾಚಾರ್ಯನ ವಿಷಯವನ್ನು ತುಂಬಿಬಿಟ್ಟರು. ಇದೂ ನಾಮಸಾಮ್ಯದಿಂದ ಉಂಟಾದ ತಪ್ಪು ಹೇಳಿಕೆ.

ಗೋವಿಂದ ಪೈ ಮತ: 'ಮೂರು ಉಪನ್ಯಾಸಗಳು' ಪುಸ್ತಕದಲ್ಲಿ (೧೯೪೦) 'ಕನ್ನಡ ನುಡಿಯ ಪ್ರಾಚೀನತೆ' ಎಂಬ ಲೇಖನವನ್ನು ಬರೆಯುತ್ತ ಶ್ರೀಯುತರು 'ಚೂಡಾಮಣಿ'ಯ ಪ್ರಸ್ತಾಪವೆತ್ತಿದ್ದಾರೆ. ಇಂದ್ರನಂದಿಯ ಶ್ರುತಾವತಾರದಲ್ಲಿ "ಚೂಡಾಮಣಿಂ ವ್ಯಾಖ್ಯಾಂ" ಎಂಬ ಪಾಠವಿದೆ. ಯಾವುದೇ ಗ್ರಂಥಕ್ಕೆ ಬರೆದ 'ಚೂಡಾಮಣಿ ಹೆಸರಿನ ವ್ಯಾಖ್ಯೆ' ಎಂದು ಇದಕ್ಕೆ ಅರ್ಥ. ಆದರೆ ಪೈಗಳು ಈ ಪಾಠವನ್ನು 'ಚೂಡಾಮಣಿವ್ಯಾಖ್ಯಾಂ' ಎಂದು ತಿದ್ದಿಕೊಂಡು 'ಚೂಡಾಮಣಿ ಎಂಬ ಹೆಸರಿನ ಗ್ರಂಥಕ್ಕೆ ಬರೆದ ಯಾವುದೋ ವ್ಯಾಖ್ಯೆ' ಎಂದು ಇದಕ್ಕೆ ಅರ್ಥ ಮಾಡಿರುವರು. ಇವರ ಪ್ರಕಾರ ವ್ಯಾಖ್ಯೆ ಬರೆಯಲಾದ ಆ ಮೂಲಗ್ರಂಥ ಶ್ರೀವರ್ಧದೇವನ ಚೂಡಾಮಣಿ. ಇದಕ್ಕೆ ವಾಖ್ಯೆ ಬರೆದ ತೆಂಬಳೂರಾಚಾರ್ಯ. ಇದು ಪೈಗಳ ನಿರ್ಣಯ. ಇವರು ಇಲ್ಲಿಗೆ ನಿಲ್ಲದೆ ಭಟ್ಟಾಕಳಂಕನು ಹೇಳಿದ ೯೬೦೦೦ ಗ್ರಂಥಪ್ರಮಾಣದ ಕೃತಿ ಶ್ರೀವರ್ಧದೇವನದು. ದೇವಚಂದ್ರ, ಇಂದ್ರನಂದಿ ಹೇಳಿದ ಗ್ರಂಥ ತೆಂಬೂಳಾರಾಚಾರ್ಯನದು. ಇದಲ್ಲದೆ, ಗ್ರಂಥ ಎಂಬುದಕ್ಕೆ ೩೨ ವರ್ಣಗಳುಳ್ಳ ಶ್ಲೋಕವೆಂದು ಮೂಲಾರ್ಥವಾದರೂ ಕ್ರಮೇಣ ಇತರ ಜಾತಿಯ ಪದ್ಯಗಳನ್ನೂ ಸೂಚಿಸಲಿಕ್ಕೆ ಉಪಯೋಗಿಸಲ್ಪಟ್ಟಿರುವ ಈ ಶಬ್ದಕ್ಕೆ ವಾಡಿಕೆಯಾಗಿ ಪದ್ಯವೆಂದೇ ಅರ್ಥವಿರುವುದರಿಂದ ಇವೆರಡೂ (ಶ್ರೀವರ್ಧದೇವನ ಚೂಡಾಮಣಿ, ತೆಂಬಳೂರಾಚಾರ್ಯನ ವ್ಯಾಖ್ಯಾನ) ಬೃಹದ್ಗ್ರಂಥಗಳು ಕನ್ನಡದಲ್ಲಿ ಪದ್ಯಬದ್ಧವಾಗಿ ರಚಿಸಲ್ಪಟ್ಟಿರಬೇಕು" ಎಂದು ಹೇಳುತ್ತಾರೆ.[೩೦] ಇವು ಕೇವಲ ಊಹೆ.

ಕೆ. ವೆಂಕಟಸುಬ್ಬಯ್ಯ ಮತ: ಆರ್. ನರಸಿಂಹಾಚಾರ್ ಅವರು ಕವಿಚರಿತೆಯಲ್ಲಿ (೧೯೦೭) ಶ್ರೀವರ್ಧದೇವ, ತುಂಬಳೂರಾಚಾರ್ಯ ಇಬ್ಬರೂ ಒಬ್ಬನೇ ಎಂಬ ಅರ್ಥ ಬರುವ ಅಭಿಪ್ರಾಯವನ್ನು ವ್ಯಕ್ತಗೊಳಿಸಿದ್ದರು. ಇದನ್ನು ವಿರೋಧಿಸುತ್ತ ವೆಂಕಟಸುಬ್ಬಯ್ಯನವರು "ತುಂಬಲೂರಾಚಾರ್ಯನು..... ಬರೆದ ವ್ಯಾಖ್ಯಾನಕ್ಕೂ ಶ್ರೀವರ್ಧದೇವನೂ ಬರೆದ ಕಾವ್ಯಕ್ಕೂ ಚೂಡಾಮಣಿಯೆಂಬ ಒಂದೇ ಹೆಸರು ಇರುವುದರಿಂದ ಮಾತ್ರವೇ ಈ ಎರಡು ಗ್ರಂಥಗಳೂ ಅಭಿನ್ನವೆಂದೂ, ಆದ್ದರಿಂದ ಈ ಗ್ರಂಥಗಳ ಕರ್ತೃಗಳು ಅಭಿನ್ನರೆಂದೂ ನಿರ್ಧರಿಸುವುದು ನ್ಯಾಯವಾಗಿರುವಂತೆ ನಮಗೆ ಕಾಣುವುದಿಲ್ಲ" ಎಂದು ಹೇಳಿ[೩೧] ಇವರಿಬ್ಬರೂ ಭಿನ್ನ ವ್ಯಕ್ತಿಗಳು, ಎರಡೂ ಭಿನ್ನ ಕೃತಿಗಳು ಎಂದು ಅಭಿಪ್ರಾಯ ನೀಡಿದುದು ಸತ್ಯವಾಗಿದೆ. ಇದಲ್ಲದೆ ಮೇಲಣ ಶ್ರವಣಬೆಳ್ಗೊಳ ಶಾಸನದಲ್ಲಿ ಉಲ್ಲೇಖಿಸಲಾದ ವಜ್ರನಂದಿಯ ನವಸ್ತೋತ್ರ, ಸುಮತಿದೇವನ ಸುಮತಿಶತಕ, ಚಿಂತಾಮಣಿಯ

---

೨೯. ಕ.ಕ. ಚ. ೯

೩೦. ಮೂರು ಉಪನ್ಯಾಸಗಳು ಪು. ೧೨೧

೩೧. ಕೆ.ಜೀ. ಕಾ. ಪು. ೨೪೪

ಚಿಂತಾಮಣಿಗಳು ಸಂಸ್ಕೃತ ಗ್ರಂಥಗಳಾಗಿರುವುದರಿಂದ ಅಲ್ಲಿಯೇ ಹೇಳಲಾದ ಶ್ರೀವರ್ಧದೇವನ ಚೂಡಾಮಣಿಯೂ ಸಂಸ್ಕೃತ ಕೃತಿಯಾಗಿರಬೇಕೆಂದು ಇವರ ಅಭಿಮತ. [೩೧ಎ]

ಆರ್. ನರಸಿಂಹಾಚಾರ್ ಮತ: ಕವಿಚರಿತೆಯ ಪ್ರಥಮ ಸಂಪುಟ (೧೯೦೭)ದಲ್ಲಿ ಶ್ರೀವರ್ಧದೇವ ತೆಂಬಳೂರಾಚಾರ್ಯ ಒಬ್ಬನೆ, ಈತನ 'ಚೂಡಾಮಣಿ'ಯು ಕನ್ನಡ ಕೃತಿಯೆಂದು ಊಹಿಸಿದ ಆರ್. ನರಸಿಂಹಾಚಾರ್ಯರು ಕವಿಚರಿತೆಯ ತೃತೀಯ ಸಂಪುಟ (೧೯೨೯)ರಲ್ಲಿ "ಚೂಡಾಮಣಿ ವ್ಯಾಖ್ಯಾನವನ್ನು ಬರೆದ ತುಂಬಲೂರಾಚಾರ್ಯನಿಗೂ ಚೂಡಾಮಣಿ ಕಾವ್ಯವನ್ನು ಬರೆದ ಶ್ರೀವರ್ಧದೇವನಿಗೂ ಏನೂ ಸಂಬಂಧವಿಲ್ಲವೆಂದು ತೋರುತ್ತದೆ. ತಮಿಳಿನಲ್ಲಿ ಚೂಡಾಮಣಿ ಎಂಬ ಹಳೆಯ ಜೈನಕಾವ್ಯವಿದೆ. ಇದನ್ನು ಬರೆದವನು ಶ್ರೀವರ್ಧದೇವ ಎಂಬ ನಾಮಾಂತರವುಳ್ಳ ತೋಲಾಮೊಳಿದೇವ ಎಂಬವನು, ಇವನೇ ದಂಡಿಯಿಂದ ಸ್ತುತನಾದವನು ಎಂದು ತೋರುತ್ತದೆ" ಎಂದು ತಮ್ಮ ಅಭಿಪ್ರಾಯವನ್ನು ತಿದ್ದಿಕೊಂಡಿದ್ದಾರೆ.[೩೨] ಆದರೆ ತೊಲಾಮೊಳೈದೇವನ ಇನ್ನೊಂದು ಹೆಸರು ಶ್ರೀವರ್ಧದೇವನೆನ್ನಲು ಆಧಾರಗಳಿಲ್ಲವೆಂದು ತೋರುತ್ತದೆ.[೩೨ಎ] ಮೇಲಾಗಿ ಶ್ರೀವರ್ಧದೇವನ ಕಾಲ ೬-೭ನೇ ಶತಮಾನದ ದಂಡಿಗೆ ಪ್ರಾಚೀನವಾಗಿದ್ದರೆ, ೭-೧೦ನೆಯ ಶತಮಾನಗಳ ಮಧ್ಯಚೋಲಿ ಹೊಡೆಯುತ್ತಿರುವ ತಮಿಳು 'ಶೂಳಾಮಣಿ' (ಚೂಡಾಮಣಿ)ಯ ಕಾಲ ಇತ್ತೀಚಿನ ಸಂಶೋಧನೆಗಳಿಂದ ಮುಂದಕ್ಕೆ ಬರಹತ್ತಿದೆ.[೩೩] ಹೀಗಾಗಿ ಇವು ಒಂದೇ ಎನ್ನುವುದು ಸಂದೇಹದಲ್ಲಿ ನಿಲ್ಲುತ್ತದೆ.

ಬಸವನಪುರ ಶಾಸನದ 'ಚೂಡಾಮಣಿ' ಬಿಟ್ಟು, ಶ್ರವಣಬೆಳ್ಗೊಳ ಶಾಸನದ 'ಚೂಳಾಮಣಿ' ಎಂಬ ಪದವನ್ನು ಗಮನಿಸಿದರೆ ಶ್ರೀವರ್ಧದೇವನದು ಸಂಸ್ಕೃತಕೃತಿಯಾಗಿರದೆ[೩೩ಎ] ಪ್ರಾಕೃತ ಇಲ್ಲವೆ ಕನ್ನಡವಾಗಿರಬೇಕೆನಿಸುತ್ತದೆ. ಜಯಕೀರ್ತಿಯು 'ಕರ್ಣಾಟ ವಿಷಯಜಾತಿ' ಪ್ರಸಂಗದಲ್ಲಿ "ಚತುಷ್ಪದಿಕಾ ವಿದಿತಾಸೌ ಚೂಡಾಮಣೌ"[೩೪] ಅಂದರೆ ಚೂಡಾಮಣಿ ಗ್ರಂಥದಲ್ಲಿ ಕನ್ನಡ ಚೌಪದಿಯು ಬಳಕೆಯಾಗಿದೆ ಎನ್ನುತ್ತಾನೆ.

೩೧ಎ. ಕೆ.ಜೀ. ಕಾ.ಪು. ೨೪೪

೩೨. ಕ.ಕ.ಚ.ಪು. ೯. ಅ.ಟಿ.

೩೨ಎ. "ಚೂಡಾಮಣಿಯ ಕರ್ತೃವಿನ ಹೆಸರು 'ತೋಲಾಮೊಟಿ ತೇವಾರ್'......... ಶ್ರೀವರ್ಧದೇವ ಎಂಬ ಹೆಸರು ಆತನಿಗೆ ಇಲ್ಲವೆಂಬುದಾಗಿ ಇಲ್ಲಿನ ತಮಿಳು ಪ್ರಾಧ್ಯಾಪಕರು ಹೇಳುತ್ತಾರೆ"- ಪ್ರೊ. ಎಂ. ಮುರಿಯಪ್ಪಭಟ್ (ಪತ್ರ ೭-೩-೭೦)

೩೩. A History of Tamil Literature (T.P.M.) P. 90-91

೩೩ಎ. ಶ್ರೀವರ್ಧದೇವನ ಚೂಡಾಮಣಿಯ ಭಾಷೆ ಸಂಸ್ಕೃತವೆಂದು ಎ. ವೆಂಕಟಸುಬ್ಬಯ್ಯನವರ ಮತ. ಕೆ.ಜೀ. ಕಾ. ೨೪೪

೩೪. ಛಂ. ಶಾ. ೭-೧೫("ಡಿ.ಎಲ್. ನರಸಿಂಹಾಚಾರ್ಯರು.... ಸು. ಕ್ರಿ.ಶ. ೧೦೦೦ದಲ್ಲಿದ್ದ ಕಂದರ್ಪದೇವ ಎಂಬವನು 'ಚೂಡಾಮಣಿ' (೭-೧೫) ಎಂಬ ಕಾವ್ಯವನ್ನು ಬರೆದಿದ್ದಾನೆಂದು ಹೇಳುತ್ತಾರೆ. " ಎಂದು ಶ್ರೀ ವೇಲಂಕರ ಸೂಚಿಸಿರುವರು (ಸಾ.ಪ. ೪೦-೧+೨. ಪು. ೧೩ ಅ.ಟಿ.) "ಚೂಡಾಮಣಿ' ಸೂ. ೧೦ನೆಯ ಶ.ದ. ಕನ್ನಡ ಕವಿ ಕಂದರ್ಪನ ಗ್ರಂಥವಾಗಿರಬೇಕೆಂದು ಶ್ರೀ ಡಿ.ಎಲ್. ನರಸಿಂಹಾಚಾರ್ಯರು ಅಭಿಪ್ರಾಯಪಡುತ್ತಾರೆ"- ಎಂದು ಡಾ. ಮುಗಳಿ (ಕ.ಸಾ.ಚ.ಪು.೨೯)ಹೇಳುವರು. ಈ ಬಗ್ಗೆ ಡಿ.ಎಲ್.ಎನ್. ಅವರಿಗೆ ನಾನು ಬರೆದ ಪತ್ರಕ್ಕೆ ಹೀಗೆ ಉತ್ತರಿಸಿದರು:"ಛಂದೋನುಶಾಸನವನ್ನು ಪ್ರಕಟಿಸುವ ಮುನ್ನ ಅದರ ಸಂಪಾದಕರಾದ ಎಚ್.ಡಿ. ವೇಲಂಕರ ಅವರು ಆ ಗ್ರಂಥದ ೭ನೆಯ ಅಧಿಕಾರದ ಒಂದು ನಕಲನ್ನು ದೇವನಾಗರೀ ಅಕ್ಷರದಲ್ಲಿ ಮಾಡಿರುವದನ್ನು ನನಗೆ ಕಳಿಸಿಕೊಟ್ಟರು. ಅದರಲ್ಲಿ ಚತುಷ್ಪದಿಕೆಯ ಲಕ್ಷಣವನ್ನು ಹೇಳುವ ೧೫ನೆಯ ಪದ್ಯದ ಅನಂತರ ಅವರು (कंदर्प चू) ಎಂದು ಬರೆದಿದ್ದಾರೆ. ಇದು ಬಹುಶಃ ಅವರ ಮೂಲ ಪ್ರತಿಯಲ್ಲೇ ಇರಬಹುದೆಂದು ಭಾವಿಸಿ ನಾನು ಅದರ ಆಧಾರದ ಮೇಲೆ ಚೂಡಾಮಣಿ ಎಂಬ ಗ್ರಂಥ ಕಂದರ್ಪನದಿರಬಹುದೆಂದು ಅವರಿಗೆ ಪತ್ರಮುಖೇನ ತಿಳಿಸಿದೆ. ಇದನ್ನು ಅವರು ತಮ್ಮ ಲೇಖನದಲ್ಲಿ ಬರೆದರು. ಇದಾದ ಮೇಲೆ ಜಯಕೀರ್ತಿಯ ಗ್ರಂಥ ಸಂಪಾದಿತವಾಗಿ ಪ್ರಕಟವಾಯಿತು, ಎರಡುಸಲ. ಇಲ್ಲಿ 'ಕಂದರ್ಪ ಚೂ' ಎಂಬ ಮಾತುಗಳು ಕಾಣುವುದಿಲ್ಲ. ಆದ್ದರಿಂದ ನನ್ನ ಊಹೆಗೆ ಆಧಾರವಿಲ್ಲವಾಯಿತು..... ಬೇರೆ ಯಾವ ಯಾವ ಆಧಾರವೂ ದೊರೆತಿಲ್ಲ" (ಪತ್ರ ೨೫-೧೦-೬೮)

ಶ್ರೀವರ್ಧದೇವನದು ಕನ್ನಡಕೃತಿಯೆಂದು ನಿರ್ಣಯವಾಗುವವರೆಗೆ, ಈ ಚೌಪದಿ ತುಂಬಳೂರಾಚಾರ್ಯನ 'ಚೂಡಾಮಣಿ ವ್ಯಾಖ್ಯಾನ' ಇಲ್ಲವೆ ಅನಾಮಧೇಯನು ಬರೆದ ಚೂಡಾಮಣಿ ಹೆಸರಿನ ತತ್ವಾರ್ಥಸೂತ್ರವ್ಯಾಖ್ಯಾನಕ್ಕೆ ಸಂಬಂಧಪಟ್ಟುದೆಂದು ಭಾವಿಸುವುದು ಹೆಚ್ಚು ಸೂಕ್ತ. ಒಟ್ಟಿನಲ್ಲಿ,

೧) ತುಂಬಳೂರಾಚಾರ್ಯನ "ಚೂಡಾಮಣಿ"ಯು ಕರ್ಮಪ್ರಾಭೃತ ಮತ್ತು ಕಷಾಯಪ್ರಾಭೃತಗಳಿಗೆ ಬರೆದ ವ್ಯಾಖ್ಯಾನಕೃತಿ. ಭಟ್ಟಾಕಳಂಕ ಹೇಳುವ 'ಚೂಡಾಮಣಿ'ಯು ತತ್ವಾರ್ಥಸೂತ್ರಕ್ಕೆ ಬರೆದ ಬೇರೊಂದು ವ್ಯಾಖ್ಯಾನಕೃತಿ (ಕರ್ತೃ ಗೊತ್ತಿಲ್ಲ). ಶ್ರೀವರ್ಧದೇವನ ;ಚೂಡಾಮಣಿ' ವ್ಯಾಖ್ಯಾನವಲ್ಲ ಕಾವ್ಯ.

೨) ಕರ್ಮಪ್ರಾಭೃತ, ಕಷಾಯಪ್ರಾಭೃತಗಳಿಗೆ ಬರೆದ 'ಚೂಡಾಮಣಿ' ಹೆಸರಿನ ವ್ಯಾಖ್ಯಾನ ಮತ್ತು ತತ್ವಾರ್ಥಸೂತ್ರಕ್ಕೆ ಬರೆದ 'ಚೂಡಾಮಣಿ' ಹೆಸರಿನ ವ್ಯಾಖ್ಯಾನಗಳ ಭಾಷೆ ಕನ್ನಡವೆಂಬುದು ಖಚಿತ. ಆದರೆ ಶ್ರೀವರ್ಧದೇವಕೃತ 'ಚೂಡಾಮಣಿ' ಕಾವ್ಯದ ಭಾಷೆ ಸಂಸ್ಕೃತ ಇಲ್ಲವೆ ಪ್ರಾಕೃತ ಇಲ್ಲವೆ ಕನ್ನಡ ಎಂದು ಹೇಳಬಹುದು.

ಶಿವಮಾರ II

ದುರ್ವಿನೀತನ ತರುವಾಯ 'ಚತುರ್ದ್ದಶ ವಿದ್ಯಾಸ್ಥಾನಾಧಿಗತ ವಿಮಲಮತಿರ್ವ್ವಿಶೇಷತೋಽನವಶೇಷಸ್ಯ ನೀತಿಶಾಸ್ತ್ರಸ್ಯ ವಕ್ತೃಪ್ರಯೋಕ್ತೃ ಕುಶಲೋ......'[೩೫] ಎನಿಸಿದ ಶ್ರೀವಿಕ್ರಮ, 'ಸಮಧಿ ಗತ ಸಕಲಶಾಸ್ತ್ರಾರ್ತ್ಥ ತತ್ವಸ್ಸಮಾರಾಧಿಪ ತ್ರಿವರ್ಗ್ಗೋ ನಿರವದ್ಯಚರಿತ'[೩೬] ಎನಿಸಿದ ಭೂವಿಕ್ರಮರು ಗಂಗಪಟ್ಟವನ್ನೇರಿದರು. ಈ ಭೂವಿಕ್ರಮನ ತಮ್ಮ ಶಿವಮಾರ I. ಸಂಸ್ಕೃತ ಮೃಚ್ಛಕಟಿಕದ ಕರ್ತೃ ದಕ್ಷಿಣ ಭಾರತೀಯನೆಂಬುದು ಎಲ್ಲರೂ ಒಪ್ಪಿಕೊಂಡ ಮಾತಾಗಿದೆ. ಅದರ ಆರಂಭ ಶ್ಲೋಕಗಳಲ್ಲಿ ಕರ್ತೃ ಶೂದ್ರಕನನ್ನು ಕುರಿತ "ಆಯುಶ್ಯತಾಬ್ದಂ ದಶದಿನ ಸಹಿತಂ" "ಪರವಾರಣ ಬಾಹುಯುದ್ಧ ಲಬ್ಧಃ" ಇತ್ಯಾದಿ ವಿಶೇಷಣಗಳನ್ನು ಈ ಶಿವಮಾರInಲ್ಲಿ ಗುರುತಿಸುತ್ತ, ಡಾ. ಸಾಲೆತೊರೆಯವರು ಈತನು ಪೂರ್ವಾರ್ಧ ಮೃಚ್ಛಕಟಿಕದ ಕರ್ತೃವೆಂದು ಅಭಿಪ್ರಾಯಪಡುತ್ತಾರೆ.[೩೭] ಮದ್ರಾಸ ಸಂಸ್ಕೃತ ಹಸ್ತಪ್ರತಿಭಂಡಾರದಲ್ಲಿ ಶಿವಮಾರಭೂಪತಿಕೃತ 'ಕಲ್ಪನಾರತ್ನಮ್' ಹೆಸರಿನ ಗಜಶಾಸ್ತ್ರವಿದೆ.[೩೮] ಮೃಚ್ಛಕಟಿಕ ಆರಂಭದ ಪದ್ಯಗಳಲ್ಲಿ ಅದರ ಕರ್ತೃ 'ಹಸ್ತಿಶಿಕ್ಷಾಂ ಜ್ಞಾತ್ವಾ' ಎಂದು ಹೇಳಿರುವುದರಿಂದ ಈ ಕಲ್ಪನಾರತ್ನದ ಕರ್ತೃವೂ ಈ ಶಿವಮಾರIನೇ ಎಂದು ಶ್ರೀಯುತರ ಅಭಿಪ್ರಾಯ.[೩೯] (ಆದರೆ ಈತನನ್ನು ಯಾವ ಶಾಸನದಲ್ಲಿಯೂ ಗಜಶಾಸ್ತ್ರದ ಕರ್ತೃವೆಂದು ಹೇಳಿಲ್ಲವಾದುದರಿಂದ ಕಲ್ಪನಾರತ್ನದ ಕರ್ತೃ ಶಿವಮಾರ IIನಾಗಿರಬೇಕು. ಈ ವಿವೇಚನೆ ಮುಂದೆ ಬರುತ್ತದೆ.)

---

೩೫. E.C. ix ನೆಲಮಂಗಲ ೬೦, ಮಣ್ಣೆಶಾಸನ.
೩೬. E.C. ix ನೆಲಮಂಗಲ ೬೦. ಮಣ್ಣೆಶಾಸನ
೩೭. King Sudraka (JUB xvi. Part I and iv)
೩೮. A triennial catalogue of manuscripts (1919-20 to 1921-22) Vol. iv Part i. Sanskrit 'c' No. 3791.
೩೯. King Sudraka (JUB xvi Part I p. 7)

ಈ ಶಿವಮಾರIನ ಮೊಮ್ಮಗ ಶ್ರೀಪುರುಷ. "ಶ್ರೀಪುರುಷಂ ಶ್ರೀವಲ್ಲಭನೆನಿಪನ್ವರ್ತ್ಥ ನಾಮಮಂ ತಾಳ್ದಿ ಗಜಶಾಸ್ತ್ರ ಕರ್ತ್ತೃವೆನಿಸಿ" ಎಂದು ಹುಮ್ಮಚ[೪೦] ಶಾಸನದಲ್ಲಿ ಬರುತ್ತದೆ. ಅನುಪಲಬ್ಧವಾಗಿರುವ ಈ ಕೃತಿಯ ಭಾಷೆ, ಸ್ವರೂಪಗಳು ಇನ್ನೂ ರಹಸ್ಯವಾಗಿ ಉಳಿದಿವೆ.

ಈ ಶ್ರೀಪುರುಷನ ಮಗ ಪ್ರಸ್ತುತ ಶಿವಮಾರ II. ಗಂಗಚಕ್ರವರ್ತಿಗಳಲ್ಲಿ ದುರ್ವಿನೀತನಂತೆ ಈತನೂ ಒಬ್ಬ ಬಹುಶ್ರುತ ಪಂಡಿತ. ಮಣ್ಣೆಗ್ರಾಮದ ಶಾಸನವು[೪೧],

> ನೀತಿಪ್ರಯೋಗಾಪಹಸಿತ ಬೃಹಸ್ಪತಿಃ।
> ... ...
> ಜಟಾನಾಂ ಸಂಘಾತೈರಿಹ ಭುವಿಕೃತೋऽನೂನ ವಿಪದಾಂ।
> ಕಲಾನಾಮಾಧಾರೋ ಬುಧಜನಹಿತಃ ಪಾಳನಪರಃ।
> ಗುಣಾನಾಂ ಸುದ್ಧಾನಾಮಪಿ ನಿಯುತಮುತ್ಪತ್ತಿಭವನಂ।
> ನೃಪಾಣಾಂ ನೇ(ನೀ)ತಾಯಾಃ ಕವಿರಿತಿಮತಃ ಕಾವ್ಯಕುಶಲಃ॥

ದುರ್ವ್ವಗಾಹ ಫಣಿಸುತಮತ ಪಾರಾವಾರ ಪಾರದೃಶ್ವಾ ಪ್ರಮಾಣ ಶಾಸ್ತ್ರಶಾಣ ನಿಶಾತೀಕೃತ ಧೀರಧೀಷಣಃ ಸಾಮಜತಂತ್ರ ತತ್ವಾವಬೋಧವಿಮದೀಕೃತ ಬುಧೋ ಹಸ್ತಿನೀ (ವ)ವಕ್ತ್ರೋದ್ಭವಯತಿ ಪ್ರವರ ಮತಾವಬೋಧನ ಗಂಭೀರ ಮತಿರ್ವ್ವಿದ್ವನ್ಮತಿ ವಿತತಿ ವಿಕಲ್ಪನಯನಯಾನ ವಿಚಾರ ವಿಚ[ಕ್ಷ]ಣೋऽಙ್ಗೀಕೃ[ತ] ತುರಂಗವಾಗವು ಪ್ರಯೋಗ ಪರಿಣತೋ ಧನುರ್ವಿದ್ಯಾಂಭೋರುಹವನ ಗಹನವಿಕಾಸಿತ ವಿದಗ್ಧಮರೀಚಿಮಾಲೀ ನಿಜನಿರ್ಮಿತ **ಗಜಮತಕಲ್ಪನಾ**ನಲ್ಪಚೇತಾ ವಿರಾಜಿತ **ಸೇತುಬನ್ಧ**ನೋ ನನ್ದಿತ ವಿಪಶ್ಚಿನ್ಮಣ್ಡಲಸ್ಸಕಲ ನಾಟಕ ವಿಷಯ ಸನ್ಧಿಸಂಧ್ಯಂಗಾದಿ ಯೋಜನಾ ಚತುರೋ"

ಎಂದು ಶಿವಮಾರ IIನ ಪಾಂಡಿತ್ಯದ ಪದರುಗಳನ್ನು ಬಿಡಿಸಿಹೇಳುತ್ತದೆ. ಇಲ್ಲಿ ಸೂಚಿತವಾದ ನೀತಿಶಾಸ್ತ್ರ ನೈಪುಣ್ಯ, ಕಾವ್ಯಕೌಶಲ ಮತ್ತು ಫಣಿಸುತ (=ಪಾಣಿನಿ) ಮತ, ಸಾಮಜಮತ, ಹಸ್ತಿನೀವಕ್ತ್ರೋದ್ಭವಯತಿ (=ಪಾಲಕಾಪ್ಯ) ಮತ, ತುರಂಗಮಾಗಮ, ಧನುರ್ವಿದ್ಯೆಗಳ ಪಾಂಡಿತ್ಯ ಈತನ ಭಾವಯಿತ್ರೀಪ್ರತಿಭೆಗೆ, ಗಜಮತಕಲ್ಪನಾ, ಸೇತುಬಂಧಕೃತಿಗಳು ಕಾರಯಿತ್ರೀಪ್ರತಿಭೆಗೆ ನಿದರ್ಶನವೆನಿಸಿವೆ. ಇದಲ್ಲದೆ ಹುಮ್ಮಚಶಾಸನದಲ್ಲಿಯ,

"ಶಿವಮಾರದೇವಂ ಸೈಗೊಟ್ಟನೆಂಬೆರಡನೆಯ ಪೆಸರಂ ತಾಳ್ದಿ ಶಿವಮಾರಮತಮೆಂದು ಗಜಶಾಸ್ತ್ರಮಂ ಮಾಡಿ ಮತ್ತಂ

> ಕ॥ ಏವೇಳ್ವುದೊ ಶಿವಮಾರ ಮ
> ಹೀವಳಯಾಧಿಪನ ಸುಭಗ ಕವಿತಾಗುಣಮಂ।
> ಭೂವಳಯದೊಳ್ ಗಜಾಷ್ಟಕ
> ಮೋವನಿಗೆಯುಮೊನಕೆವಾಡುಮಾದುದೆ ಪೇಳ್ಗುಂ॥[೪೨]

---

೪೦. E.C. viii. ನಗರ ೩೫. ಹುಮ್ಮಚಶಾಸನ

೪೧. E.C. ix. ನೆಲಗಮಂಗಲ ೬೦. ಮಣ್ಣೆಶಾಸನ

೪೨. E.C. viii. ನಗರ ೩೫. ಹುಮ್ಮಚಶಾಸನ (ಕನ್ನಡ ಪಾಠ "ಮೋವನಿಗೆಯ್ದೆ ಮೋನಕೆವಾಡುಮಾದುದೆ ಪೇಳ್ಗು" ಎಂದಿದೆ).

ಎಂಬ ಉಲ್ಲೇಖದಿಂದ ಶಿವಮಾರನು 'ಸೈಗೊಟ್ಟ' ಎಂಬ ಪ್ರತಿನಾಮದಿಂದ 'ಶಿವಮಾರಮತ' ಎಂಬ ಗಜಶಾಸ್ತ್ರವನ್ನು ರಚಿಸಿದನೆಂದೂ ಇದು ೮ ಪದ್ಯಗಳ ಚಿಕ್ಕಕೃತಿಯೆಂದೂ ತಿಳಿದುಬರುತ್ತದೆ. ಇದಲ್ಲದೆ ಉತ್ತರಾರ್ಧ ಮೃಚ್ಛಕಟಿಕವನ್ನೂ ಈತನು ಬರೆದಿರುವನೆಂದು ಡಾ. ಸಾಲೆತೊರೆಯವರ ಮತ. ಈಗ ಇವನ ಕೃತಿಗಳನ್ನು (ಗಜಮತಕಲ್ಪನಾ, ಶಿವಮಾರಮತ (ಗಜಾಷ್ಟಕ), ಸೇತುಬಂಧ, ಉತ್ತರಾರ್ಧ ಮೃಚ್ಛಕಟಿಕ) ಒಂದೊಂದಾಗಿ ವಿವೇಚಿಸಬಹುದು.

ಗಜಮತಕಲ್ಪನಾ[೪೩]

ಶಿವಮಾರ IIನು 'ಗಜಮತಕಲ್ಪನಾ' ಹೆಸರಿನ ಗಜಶಾಸ್ತ್ರ ಬರೆದಿರುವನೆಂದು ಮಣ್ಣೆಶಾಸನದಲ್ಲಿ ಈ ಹಿಂದೆ ನಾವು ಗಮನಿಸಿದ್ದೇವೆ. ಮದ್ರಾಸದ ಸಂಸ್ಕೃತ ಹಸ್ತಪ್ರತಿಭಂಡಾರದಲ್ಲಿ 'ಕಲ್ಪನಾರತ್ನ' ಹೆಸರಿನ ಗಜಶಾಸ್ತ್ರವಿದೆ. ಇವೆರಡೂ (ಗಜಮತಕಲ್ಪನಾ, ಕಲ್ಪನಾರತ್ನ) ಒಂದೇ ಇರಬಹುದು. ಸಂಸ್ಕೃತಭಾಷೆಯ ಈ ಹಸ್ತಪ್ರತಿಯಲ್ಲಿ ೩ ಪರಿಚ್ಛೇದಗಳಿದ್ದು ಪ್ರಾರಂಭದ ಸೋಮ, ಗುಹ, ಶಕ್ರ, ಪಾವಕ, ವಿನಾಯಕ, ಪಾಲಕಾಪ್ಯ, ಗೌತಮರ ಸ್ತುತಿಯ ತರುವಾಯ,

ನವತ್ವಂ ನೈವದೋಷಾಯ ಪುರಾಣತ್ವಂ ಗುಣಾಯ ವಾ।
ಗುಣಾಗುಣಾನಿ ಸರ್ವತ್ರ ತಸ್ಮಾದ್ಸ್ಪೃಹ್ಯಾ ಗುಣಾಃ ಸತಾಮ್॥

x x x x x x x x x

ಪಾಲಕಾಪ್ಯ ಶಶಿಸೂನು ಗೌತಮ್ಯೈಃ ವ್ಯಾಹೃತಾಂ ಸಮವಲೋಕ್ಯ ಸಂಹಿತಾಂ।
ಕಲ್ಪನಾವಿಧಿಮಿಮಂ ಯಥಾವಿಧಿ ವ್ಯಾಜಹಾರ ಶಿವಮಾರಭೂಪತಿಃ॥

x x x x x x x x x

ಸ ಜಯತಿ ಶಿವಮಾರಃ ಕ್ಷ್ಮಾಭೃತಾಮೇನಕಾಥೋ
ನಿಯತ ವಿಹಿತ ರಕ್ಷಾನ್ಪೂತಾಶೇಷಲೋಕಃ॥

x x x x x x x x x

ಇತಿ ರಾಜ್ಞಾ ಶಿವಮಾರೇಣ ಕೃತಂ ಕಲ್ಪನಾರತ್ನಂ ನಾಮ ಪ್ರಕರಣಂ ಸಮಾಪ್ತಂ

ಈ ವಾಕ್ಯದೊಡನೆ ಕೃತಿ ಸಮಾಪ್ತಗೊಳ್ಳುತ್ತದೆ. ಇದೇ ಕಟ್ಟಿನಲ್ಲಿ ಈ ಕಲ್ಪನಾರತ್ನಕ್ಕೆ ಮಹಾನಾಗನೆಂಬವನು ಬರೆದ ಸಂಸ್ಕೃತಟೀಕೆಯೂ ಇದೆ.[೪೪]

ಶಿವಮಾರಮತ (=ಗಜಾಷ್ಟಕ)[೪೫]

ಶಿವಮಾರನು 'ಸೈಗೊಟ್ಟನ್' ಎಂಬ ಕಾವ್ಯನಾಮದಿಂದ ಗಜಶಾಸ್ತ್ರವೊಂದನ್ನು ಬರೆದನೆಂದೂ ಅದರ ಹೆಸರು 'ಶಿವಮಾರಮತ'[೪೬]ವೆಂದೂ ಹುಮ್ಮಚಶಾಸನದಲ್ಲಿ ಹೇಳಲಾಗಿದೆ. ಅಲ್ಲಿಯೆ ಇದನ್ನು 'ಗಜಾಷ್ಟಕಂ'

---

೪೩. ಮಣ್ಣೆಶಾಸನದಲ್ಲಿ 'ಗಜಮತಕಲ್ಪನಾ' ಆಲೂರ ಶಾಸನದಲ್ಲಿ 'ಗಜದಂತಕಲ್ಪನಾಗಮ' ಮದ್ರಾಸ ಹಸ್ತಪ್ರತಿಯ ಕೊನೆಯಲ್ಲಿ 'ಕಲ್ಪನಾರತ್ನಂ' ಎಂಬ ಹೆಸರುಗಳು ಕಂಡುಬರುತ್ತವೆ. 'ಕಲ್ಪನಾರತ್ನ' ಎಂಬುದು ೩ನೆಯ ಪರಿಚ್ಛೇದದ ಹೆಸರೆಂಬ ಅನುಮಾನ ಹುಟ್ಟುವುದರಿಂದ ಈ ಕೃತಿಯ ಹೆಸರು 'ಗಜಮತಕಲ್ಪನಾ' ಎಂದೋ 'ಗಜಮತಕಲ್ಪನಾರತ್ನ' ಎಂದೋ ಇರಬಹುದು.

೪೪. King Sudraka (JUB xvi Part i and iv) ಲೇಖನವನ್ನು ನೋಡಬಹುದು.

೪೫. 'ಅಷ್ಟಕಂ ಗಜಮಾಲಾಸ್ಯಾನ್ನವಕಂ ರತ್ನಮಾಲಿಕಾ' (ಅಮೃತಾನಂದಯೋಗಿಯ ಅಲಂಕಾರಸಂಗ್ರಹ xi-2) ಎಂಬ ಹೇಳಿಕೆಯಿಂದ 'ಅಷ್ಟಕ' ಪ್ರಕಾರವು ಅಷ್ಟದಿಗ್ಗಜಗಳ ಕಲ್ಪನೆಯಲ್ಲಿ ಹುಟ್ಟಿರಬೇಕೆನಿಸುತ್ತದೆ.

೪೬. 'ಜಟ್ಟಮತ' ಮೊದಲಾದವುಗಳಂತೆ ಇದರ ಹೆಸರು 'ಶಿವಮಾರಮತ' ಎಂದೇ ಇರಬಹುದು.

ಎಂದು ಕರೆದಿರುವುದರಿಂದ ೮ ಪದ್ಯಗಳ ಈ ಕೃತಿಗೆ 'ಗಜಾಷ್ಟಕ'ವೆಂಬುದು ಅನ್ವರ್ಥಕನಾಮವೆಂದು ವೇದ್ಯವಾಗುತ್ತದೆ. ಶಿವಮಾರನ 'ಸುಭಗಕವಿತಾಗುಣ'ದ ಮೂಲಕ ಇದು 'ಓವನಿಗೆ', 'ಒನಕೆವಾಡು' ಎಂಬ ಪ್ರಸಿದ್ಧಿಗೆ ಪಾತ್ರವಾದ ಕೃತಿ. ಈ 'ಓವನಿಗೆ', 'ಒನಕೆವಾಡು' ಎಂಬಿವು ವಿದ್ವತ್ಪ್ರಪಂಚದ ಗಮನಸೆಳೆದ ಅಪರೂಪ ಪದಗಳು.

ಮಾನಸೋಲ್ಲಾಸದಲ್ಲಿ "ತಥಾ ಮಹಾರಾಷ್ಟ್ರೇಷು ಯೋಷಿದ್ಭಿಃ ಓವೀ ಗೇಯಾತು ಕಂಡನೇ"[೪೭] ಅಂದರೆ ಮಹಾರಾಷ್ಟ್ರ (ಕರ್ನಾಟಕ?) ದ ಸ್ತ್ರೀಯರು ಕಂಡನ ಸಮಯದಲ್ಲಿ 'ಓವಿ'ಯನ್ನು ಹಾಡುತ್ತಾರೆ ಎಂದು ಹೇಳಲಾಗಿದೆ. ಕಂಡನವೆಂದರೆ ಕುಟ್ಟುವಿಕೆ. ಆದುದರಿಂದ 'ಓವಿ' 'ಓವನಿಗೆ' ಎಂದರೆ 'ಕುಟ್ಟುವ ಹಾಡು' ಎಂದು ಹೇಳಬೇಕಾಗುತ್ತದೆ.[೪೮] ಆದರೆ "ಬೀಸುವಾಗ 'ಓವಿ'ನೆನಪಾಗುತ್ತದೆ" ಎಂಬ ಮರಾಠಿ ಗಾದೆಯನ್ನವಲಂಬಿಸಿ ಡಾ. ಮುಗಳಿಯವರು ಓವಿ, ಓವನಿಗೆ ಎಂದರೆ 'ಬೀಸುವ ಹಾಡು' ಎಂದು ಊಹಿಸಿದ್ದಾರೆ.[೪೯]

ಪ್ರ.ಗೋ. ಕುಲಕರ್ಣಿಯವರು 'ಕಂಡನ' ಎಂಬ ಪದಕ್ಕೆ ಕುಟ್ಟು, ಮೊರದಿಂದ ಕೇರು ಎಂದು ಎರಡು ಅರ್ಥಗಳಿವೆ. ಅದಕ್ಕಾಗಿ ಓವಿಯನ್ನು ಕೇರುವಾಗಲೂ ಹಾಡಬಹುದೆನ್ನುತ್ತ ಓವನೆ>ಒನೆ ಎಂದಾಗುತ್ತದೆ. 'ಒನೆ ಶೂರ್ಪಕರಣೇ' ಎಂದು ಕೇಶಿರಾಜನ ಮತ, ಎಂಬ ಮಾತುಗಳನ್ನು ಆಧಾರವಾಗಿ ಹಿಡಿಯುತ್ತಾರೆ.[೫೦] ಒಟ್ಟಿನಲ್ಲಿ ಓವನಿಗೆ ಎಂದರೆ ಕುಟ್ಟುವ ಹಾಡು, ಬೀಸುವ ಹಾಡು, ಕೇರುವ ಹಾಡು ಎಂದು ಈ ವರೆಗೆ ಅರ್ಥಮಾಡಲಾಗಿದೆ.[೫೧]

ಓವನಿಗೆ ಎಂಬ ಪದ ಈ ಶಾಸನ ಬಿಟ್ಟರೆ ಯಾವ ಕನ್ನಡ ಕೃತಿಯಲ್ಲಿಯೂ ಕಂಡುಬರುವುದಿಲ್ಲ. 'ಒನಕೆವಾಡು' ಮಾತ್ರ ಪಂಚತಂತ್ರ[೫೨], ಲೀಲಾವತಿ[೫೩], ತ್ರಿಷಷ್ಟಿಪುರಾತನ ಚಾರಿತ್ರ[೫೪], ಉದ್ಭಟ ಕಾವ್ಯ[೫೫], ಬಸವಪುರಾಣ[೫೬], ಸಿಂಗಿರಾಜಪುರಾಣ[೫೭], ಗುರುರಾಜಚಾರಿತ್ರ,[೫೮] ವೃಷಭೇಂದ್ರ ವಿಜಯ[೫೯], ಕರ್ಣವೃತ್ತಾಂತಕಥೆ[೬೦], ಭೈರವೇಶ್ವರಕಾವ್ಯದ ಕಥಾಮಣಿ ಸೂತ್ರರತ್ನಾಕರ[೬೧]ಗಳಲ್ಲಿ ಕಂಡುಬರುವ ಪದ. ಇವುಗಳಲ್ಲಿ ಲೀಲಾವತಿ,

---

೪೭. 'ಮಾನಸೋಲ್ಲಾಸ'-೪-೧೬-೫೫೩.

೪೮. ಮಾನಸೋಲ್ಲಾಸದಲ್ಲಿ ಛಂದಸ್ಸು (D L N) : ಪ್ರ.ಕ. ೪೫-೨. ಪು. ೭೧

೪೯. ಕ.ಸಾ.ಚ.ವು. ೨೮.

೫೦. ಕನ್ನಡಭಾಷೆಯ ಚರಿತ್ರೆ ಪು. ೮೨-೮೩

೫೧. 'ಉವಿಗುಟ್ಟೆ(ಟ್ಟಿ)ಕೆಯ್ ಪುಗುಳನಾಂತುದು' (ಪಾರ್ಶ್ವಪುರಾಣ ೧೫-೧೮) ಗಮನಿಸಿರಿ. ಓವನಿಗೆಯ ಪ್ರಾಚೀನರೂಪ 'ಓವಣಿಗೆ' ಇರಬಹುದು. ಇದನ್ನು ಓ(=ಪ್ರೀತಿ)+ಅಣಿಗೆ, ಓವು(=ಪಾಲನೆ)+ಅಣಿಗೆ ಎಂದು ಬಿಡಿಸಲು ಬರುತ್ತದೆ. ಅಣಿಗೆ ಎಂಬುದನ್ನು ಡಿ.ಎಲ್.ಎನ್. ಅವರು ಸಂಸ್ಕೃತದ ಪಟಿಕಾ (=ಬಟ್ಟೆ)ದಿಂದ ಸಾಧಿಸಿದ್ದಾರೆ. ಅದಕ್ಕಾಗಿ ಓವಣಿಗೆ ಎಂದರೆ ಪಾಲನೆಯ ಬಟ್ಟೆ ಎಂದರೆ ಜೋಳಿಗೆ (ಜೋವಳಿಗೆ>ಓವಳಿಗೆ>ಓವನಿಗೆ) ತೊಟ್ಟಿಲು ಎಂದು ಹೇಳಬಹುದೇನೋ. ಈ ಪ್ರಸಂಗದ 'ಓವನಿಗೆ ಹಾಡು' ಮುಂದೆ 'ಓವನಿಗೆ' ಎಂದೇ ನಿಂತಿರಬಹುದು. ಹೀಗಾಗಿ ಓವನಿಗೆ ಎಂದರೆ ಜೋಗುಳ ಹಾಡು ಎಂದು ಹೇಳಬಹುದೇನೋ.

೫೨. ಪಂಚತಂತ್ರ-೧-೬೯;

೫೩. ಲೀಲಾವತಿ ೨-೪೧ಗ.

೫೪. ತ್ರಿಷಷ್ಟಿಪುರಾತನಚಾರಿತ್ರ ೨೪-೧೫೨ಗ.

೫೫. ಉದ್ಭಟಕಾವ್ಯ ೧೦-೮೭ ಗದ್ಯ.

೫೬. ಬಸವಪುರಾಣ ೨೪-೨೧;

೫೭. ಸಿಂಗಿರಾಜಪುರಾಣ ಪು. ೩೨೯;

೫೮. ಗುರುರಾಜ ಚಾರಿತ್ರ ೧೩-೧೦೦;

೫೯. ವೃಷಭೇಂದ್ರ ವಿಜಯ ೩೮-೫೧;

೬೦. ಕರ್ಣವೃತ್ತಾಂತ ಕಥೆ ೧೦-೨೩

೬೧. ಭೈ. ಕಾ. ರತ್ನಾಕರ ಪು. ೧೦(ಒನಕೆವಾಡಿನ ಬಗೆಗೆ 'ದೀವಿಗೆ'ಯಲ್ಲಿ (ಪೈ ಸ್ಮಾರಕಸಂಪುಟ ಪು. ೨೪೭) ಟಿ. ಕೇಶವಭಟ್ಟರ ಲೇಖನ; JKU xiದಲ್ಲಿ ಎಂ. ಚಿದಾನಂದಮೂರ್ತಿಗಳ ಲೇಖನ ನೋಡಬಹುದು)

ತ್ರಿಷಷ್ಟಿಪುರಾತನಚರಿತ್ರ, ಉದ್ಭಟಕಾವ್ಯ, ರಾಜಶೇಖರವಿಲಾಸಗಳ ಕುಟ್ಟುವ ಪ್ರಸಂಗದಲ್ಲಿ 'ಒನಕೆವಾಡು' ಎಂಬ ಶೀರ್ಷಿಕೆಯ ಕೆಳಗೆ ಕೆಲವು ತ್ರಿಪದಿಗಳು ಕಂಡುಬರುತ್ತವೆ. ಅದಕ್ಕಾಗಿ 'ಒನಕೆವಾಡು' ಎನಿಸಿಕೊಂಡ ಗಜಾಷ್ಟಕವು ಕುಟ್ಟುವಾಗ ಹಾಡಲು ಬಳಸುತ್ತಿದ್ದ ತ್ರಿಪದಿರೂಪದ ಕನ್ನಡ ಕೃತಿಯೆಂದು ಹೇಳಬೇಕಾಗುತ್ತದೆ. ಆದರೆ ದುರ್ಗಸಿಂಹನ ಪಂಚತಂತ್ರದಲ್ಲಿ,

> ಎನಿತೋದನೋದಿಯುಂ ಮನ। ದನಿತೆ ವಲಂ ಬುದ್ಧಿಯಕ್ಕುಮೆಂದು ಸಮಸ್ತಾ।
> ವನಿಯ ಜನಮೊನಕೆವಾಡ। ಪ್ಪಿನೆಗಂ ಸಲೆ ನುಡಿದ ನುಡಿ ಯಥಾರ್ಥಂ ನಿನ್ನೊಳ್॥

ಎಂಬ ಪದ್ಯವಿದ್ದು ಇಲ್ಲಿ ಒನಕೆವಾಡು ಎಂಬುದಕ್ಕೆ ಲೋಕೋಕ್ತಿ, ಗಾದೆಮಾತು, ಜನಜನಿತಮಾತು ಎಂಬ ಅರ್ಥವಿದೆ. ಇದನ್ನು ಇಟ್ಟುಕೊಂಡರೆ ಗಜಾಷ್ಟಕವು ಲೋಕಪ್ರಿಯವಾಯಿತೆಂದು ಮಾತ್ರ ಅರ್ಥ ಮಾಡಬೇಕಾಗುತ್ತದೆ. ಇದರಿಂದ ಶಿವಮಾರಮತವು ತ್ರಿಪದಿರೂಪದ ಕೃತಿಯೆಂಬುದೊತ್ತಟ್ಟಿಗಿರಲಿ, ಕನ್ನಡಕೃತಿಯೆಂದು ಹೇಳಲು ಸಹ ಧೈರ್ಯಸಾಲದು. ಆದರೆ ಶಿವಮಾರನನ್ನು ಕುರಿತು "ಸಾರಸ್ವತ ಜನಿತ ಭಾಷಾತ್ರಯ" ಬಲ್ಲಿದನೆಂದು ಕಲ್ಭಾವಿ ಶಾಸನ[೬೨] ಹೇಳುವುದರಿಂದ ಈತನು ಬಹುಶಃ ಸಂಸ್ಕೃತ, ಪ್ರಾಕೃತ ಮತ್ತು ಕನ್ನಡ ಕಾವ್ಯರಚನಾ ಚತುರನಾಗಿರಬಹುದು. ಹಿಂದೆ ಹೇಳಿರುವ 'ಗಜಮತ ಕಲ್ಪನಾ' ಸಂಸ್ಕೃತ, ಇನ್ನು ಮುಂದೆ ಹೇಳಲಿರುವ 'ಸೇತುಬಂಧ' ಪ್ರಾಕೃತ, ಆದುದರಿಂದ ಇನ್ನುಳಿದ ಈ ಶಿವಮಾರಮತವು ಕನ್ನಡವಾಗಿರಬಹುದೆನಿಸುತ್ತದೆ. ಮೇಲೆ ಊಹಿಸಿದಂತೆ 'ಶಿವಮಾರಮತ'ವು ತ್ರಿಪದಿ ರೂಪದಲ್ಲಿರಬಹುದೆಂದು ಇಟ್ಟುಕೊಂಡರೆ ಇದು ಈಗಿನವಮಟ್ಟಿಗೆ ಕನ್ನಡದ ಪ್ರಥಮ ತ್ರಿಪದಿಕೃತಿಯೆಂದೂ ಕನ್ನಡದ ಪ್ರಥಮ ಅಷ್ಟಕಕೃತಿಯೆಂದೂ ಹೇಳಬೇಕಾಗುತ್ತದೆ.

ಗಜಯುದ್ಧ, ಗಜವೇಂಟೆಗಳಲ್ಲಿ ಕನ್ನಡಿಗರಿಗೆ ಆಸಕ್ತಿ ಅಧಿಕ. ಈ ಒಲವು ಗಂಗರಲ್ಲಿ ಇನ್ನೂ ವಿಶೇಷ. ಆನೆಯನ್ನು ರಾಜಚಿಹ್ನವಾಗಿ ಬಳಸಿಕೊಂಡ ಈ ಅರಸರು ಗಜಯುದ್ಧ ಪರಿಣತರು, ಗಜಶಾಸ್ತ್ರಪಂಡಿತರು. "Ganga history is full references to the love of their monarchs for elephants" ಎಂಬ ಡಾ. ಸಿ. ಮೀನಾಕ್ಷಿಯವರ ಮಾತು ತುಂಬ ಸತ್ಯ.[೬೩] ಮೊದಲನೆಯ ಶಿವಮಾರ 'ಗಜದಾನಮನರ್ತ್ಥಿಗಿತ್ತು ಚಾಗಿ'[೬೪] ಎನಿಸಿದ ಮಹಾದಾನಿ. ಈತನ ಮೊಮ್ಮಗ ಶ್ರೀಪುರುಷ 'ಗಜಶಾಸ್ತ್ರಕರ್ತೃ'.[೬೫] ಈ ಶ್ರೀಪುರುಷನ ಮಗನಾದ ಪ್ರಸ್ತುತ ಶಿವಮಾರIIನಲ್ಲಿ ಈ ಅಭಿರುಚಿ ಇನ್ನೂ ಊರ್ಜಿತಗೊಂಡಿದೆ. ಈತನ ಉಪಲಬ್ಧ 'ಗಜಮತಕಲ್ಪನಾ' (ಸಂಸ್ಕೃತ) ಮತ್ತು ಅನುಪಲಬ್ಧ 'ಶಿವಮಾರಮತ' (ಕನ್ನಡ?)ಗಳೇ ಇದಕ್ಕೆ ಸಾಕ್ಷಿ.

ಸೇತುಬಂಧ

ಮಣ್ಣೆಶಾಸನದ 'ವಿರಾಜಿತ ಸೇತುಬಂಧನೋ'[೬೬] ಎಂಬ, ಆಲೂರ ಶಾಸನದ 'ವಿರಚಿತ ಸೇತುಬಂಧನಿಬಂಧನಾ'[೬೭] ಎಂಬ ಭಿನ್ನಪಾಠಗಳನ್ನು ಸಮೀಕರಿಸಿ ನೋಡಿದರೆ, ಈ ಶಿವಮಾರನು

---

೬೨. Ind. Ant. xviii P. 309

೬೩. Elephant love in Pyllava history (QJMS. xxviii-iv)

೬೪. E.C. viiiನಗರ ೩೫. ಹುಮ್ಮಚಶಾಸನ

೬೫. E.C. viii ನಗರ ೩೫, ಹುಮ್ಮಚಶಾಸನ

೬೬. E.C. ix ನೆಲಮಂಗಲ ೬೦, ಮಣ್ಣೆಶಾಸನ

೬೭. M.A.R. 1924, P. 73-74

ಸೇತುಬಂಧವೆಂಬ ಕೃತಿಯ ನಿರ್ಮಾತೃವೆನಿಸುತ್ತದೆ. ಸಂಸ್ಕೃತದಲ್ಲಿ ಈ ಹೆಸರಿನ ಹಲವು ಕೃತಿಗಳಿದ್ದು, ಅವುಗಳ ಕರ್ತೃ ಯಾರೆಂಬುದು ಸ್ಪಷ್ಟವಾಗಿಯೇ ಇದೆ. ಪ್ರಾಕೃತದಲ್ಲಿ ಪ್ರವರಸೇನಕೃತ ಅಥವಾ ಕಾಳಿದಾಸ ಕರ್ತೃವೆಂದು ಹೇಳಲಾಗುವ 'ಸೇತುಬಂಧ' ಹೆಸರಿನ ಕಾವ್ಯವೊಂದು ಉಪಲಬ್ಧವಿದೆ. ಅನಾಮಧೇಯ ಕೃತಿಗಳ ಕರ್ತೃತ್ವವನ್ನು ಮಹಾಕವಿಗಳ ತಲೆಗೆ ಕಟ್ಟುವುದು ಭಾರತದಲ್ಲಿ ನಡೆದುಬಂದ ಸಂಪ್ರದಾಯ. ಮೇಲಾಗಿ ಕಾಳಿದಾಸನ ಪ್ರಾಕೃತ ಕವಿತ್ವಕ್ಕೆ ಒಂದೂ ಆಧಾರವಿಲ್ಲ. ಆದುದರಿಂದ ಪ್ರಾಕೃತ ಸೇತುಬಂಧ ಮತ್ತು ಕಾಳಿದಾಸರ ಸಂಬಂಧ ನಂಬಿಕೆಗೆ ವಿದೂರವಾದುದು. ಇನ್ನು ಪ್ರವರಸೇನಕೃತವೆಂದು ಹೇಳಲೂ ಹಲವು ಸಂದೇಹಗಳಿವೆ. ಹೀಗಾಗಿ ಶಾಸನಗಳನ್ನವಲಂಬಿಸಿ ಡಾ. ಸಾಲೆತೊರೆ ಹೇಳುವಂತೆ ಇದರ ಕರ್ತೃ ಭಾಷಾತ್ರಯ ಬಲ್ಲಿದನಾದ ಈ ಶಿವಮಾರ II ನಾಗಿರುವ ಸಂಭವವಿದೆ.[೬೮]

ಮೃಚ್ಛಕಟಿಕ (ಉತ್ತರಾರ್ಧ)

ಮೃಚ್ಛಕಟಿಕದ ಪೂರ್ವಾರ್ಧವನ್ನು ಶಿವಮಾರIನು, ಉತ್ತರಾರ್ಧವನ್ನು ಆತನ ಮೊಮ್ಮಗನ ಮಗನಾದ ಪ್ರಸ್ತುತ ಶಿವಮಾರIIನು ಬರೆದನೆಂದು ಡಾ. ಸಾಲೆತೊರೆ ಅವರ ಸಿದ್ಧಾಂತ. ಮೃಚ್ಛಕಟಿಕದ ಪೂರ್ವಾರ್ಧ ಮತ್ತು ಉತ್ತರಾರ್ಧಗಳ ಶೈಲಿ ಒಡೆದು ಕಾಣುವಷ್ಟು ಭಿನ್ನವಾಗಿದ್ದು, ಇದು ಎರಡು ವ್ಯಕ್ತಿಗಳಿಂದ ಪೂರ್ಣಗೊಂಡ ಕೃತಿಯೆಂಬ ಸಂದೇಹ ಹುಟ್ಟಿಸುತ್ತದೆ. 'ಶಿವಮಾರI→ ? →ಶ್ರೀಪುರುಷ→ಶಿವಮಾರII' ಎಂಬ ಗಂಗವಂಶಾವಳಿಯಿಂದ,[೬೯] ಶಿವಮಾರIನ ತರುವಾಯ ರಾಜಕೀಯ ವಿಪ್ಲವದ ಮೂಲಕ ಆತನ ಮಗ (?) ಪಟ್ಟವೇರದೆ ಮೊಮ್ಮಗ ಶ್ರೀಪುರುಷ ಪಟ್ಟವೇರಿದನೆಂದು ತಿಳಿದುಬರುತ್ತದೆ. ಮೃಚ್ಛಕಟಿಕದ ಉತ್ತರಾರ್ಧ ರಾಜಕೀಯ ಗೊಂದಲಗಳಿಂದ ಕೂಡಿದ್ದು, ಇಲ್ಲಿ ಶಿವಮಾರ IIನು ಕಣ್ಣಾರೆ ಕಂಡಿರಬಹುದಾದ ಇಲ್ಲವೆ ಕಿವಿಯಾರೆ ಕೇಳಿರಬಹುದಾದ ತನ್ನ ವಂಶದ ಈ ರಾಜಕೀಯ ವಿಪ್ಲವನ್ನೇ ಹಿನ್ನೆಲೆಯಾಗಿಟ್ಟುಕೊಂಡಂತಿದೆ ಎಂಬಿವೆ ಮೊದಲಾದುವು ಸಾಲೆತೊರೆಯವರು ಮುಂದಿರಿಸಿದ ಆಧಾರಗಳಾಗಿವೆ. ನೆಲಮಂಗಲ ೬೦ನೆಯ ಶಾಸನವು "ನಾಟಕ ವಿಷಯ ಸನ್ಧಿಸಂಧ್ಯಂಗಾದಿಯೋಜನಾಚತುರೋ" ಎಂದು ಈ ಶಿವಮಾರ IIನನ್ನು ಕೀರ್ತಿಸುವ ಕಾರಣ, ಈತನು ಉತ್ತರಾರ್ಧ ಮೃಚ್ಛಕಟಿಕವನ್ನು ರಚಿಸಿರುವ ಸಾಧ್ಯತೆಯಿದೆ.

ಒಟ್ಟಿನಲ್ಲಿ "ಸಾರಸ್ವತಜನಿತ ಭಾಷಾತ್ರಯ ಕವಿತಾಲಲಿತ ವಾಗ್ಲಲನಾ ಲೀಲಾಲಲಾಮಂ"[೭೦] ಎಂಬ ಮಾತು ಶಿವಮಾರ IIನ ಸಾರಸ್ವತವ್ಯಕ್ತಿತ್ವಕ್ಕೆ ಬರೆದ ಸೂತ್ರವಾಗಿದೆ. ಭಾಷಾತ್ರಯದಲ್ಲಿ ಅಭಿವ್ಯಕ್ತಗೊಂಡ ಪ್ರತಿಭೆ, ಶಾಸ್ತ್ರದಲ್ಲಿ ಪಳಗಿದ ಪಾಂಡಿತ್ಯಗಳ ಮೂಲಕ ಕರ್ನಾಟಕದ ಅರಸರಲ್ಲಿ ಈತನೊಬ್ಬ ಅನುಪಮವ್ಯಕ್ತಿಯೆನಿಸಿದ್ದಾನೆ.[೭೧]

---

೬೮. King Sudraka (JUB, xvi Part I and iv) ನೋಡಿರಿ.

೬೯. ಕ.ಅ.ಮ. (ಗಂಗರವಂಶವೃಕ್ಷ)ಪು. ೧೧೮-೧೧೯

೭೦. Ind. Ant. vviii P. 309

೭೧. ಈ ತರುವಾಯದ ಗಂಗ ಅರಸರಲ್ಲಿ ಸುಪ್ರಸಿದ್ಧ ಸಾಹಿತಿಗಳು, ಪ್ರಕಾಂಡಪಂಡಿತರು ಆಗಿಹೋಗಿದ್ದಾರೆ.

i) ಶಿವಮಾರIIನ ಮಗ ಮಾರಸಿಂಹ-'ಸಮಸ್ತ ನೀತಿಶಾಸ್ತ್ರಪ್ರಯೋಗ ಪ್ರವೀಣಾಗ್ರಗಣ್ಯ' (E.C. ixನೆಲಮಂಗಲ ೬೧)

ii) ಬೂತುಗII (ನೃಪತುಂಗನ ಅಳಿಯ)-"ಸರ್ವಜ್ಞಸ್ಸಕಳಾಗಮೇ ಗಜಮಹಾಶಾಸ್ತ್ರೇ ಕರೇಣಾತ್ಮಜಃ। ಕೊಂಗಾನ್ವಾರಣ ಬಂಧವಾರಣ ಕರಾಂ ಛತ್ತಾರಣೇ ಪಂಚವಾ।ಯುರ್ಯುಕ್ತ ಪ್ರಾಕ್ತನಯೋಗತಾನ್ಕರಿ ಗಣಾxxxxx।xxxxxಗ್ರಹೀದ್ದುಗ್ರಹೇ॥

(E.C.xiiನಂಜನಗೂಡು Sup.೨೬೯)→

ಗುಣಗಾಂಕ

ಅಮೃತಸಾಗರ[72] ಕೃತ 'ಯಾಪ್ಪಾರುಂಕಲಕ್ಕಾರಿಕೈ' ಹನ್ನೊಂದನೆಯ ಶತಮಾನದ ಒಂದು ತಮಿಳು ಛಂದಃಕೃತಿ. ಇದಕ್ಕೆ ಗುಣಸಾಗರನೆಂಬ ಜೈನವ್ಯಕ್ತಿ ತಾನು ಬರೆದ ತಮಿಳು ವ್ಯಾಖ್ಯಾನದ ಪೀಠಿಕೆಯಲ್ಲಿ[73] ಕೆಲವು ಪ್ರಾಚೀನ ಛಾಂದಸಿಗರನ್ನು ಉಲ್ಲೇಖಿಸುತ್ತ "ಗುಣಗಾಂಕಿಯಮೆನ್ನುಂ ಕರುಣಾಟಕಚ್ಛಂದಕಮೇ ಪೋಲ ಮಕಡ ಉಮುನ್ನಿಲೈತ್ತಾಯ್ ಅವೈಯಡಕ್ಕಮುಡೈಯದಾಯ್", ಅಂದರೆ ಸ್ತ್ರೀ ಸಂಭೋದನೆ ತಂತ್ರವನ್ನುಳ್ಳುದೂ ಸಭಾವಿನಯಯುಕ್ತವೂ ಆದ ಕನ್ನಡಭಾಷೆಯ ಗುಣಗಾಂಕಿಯಂ ಎಂಬ ಕೃತಿಯ ಮಾದರಿಯಲ್ಲಿ ಬರೆದ ಕೃತಿ "ಯಾಪ್ಪಾರುಂಕಲಕ್ಕಾರಿಕೈ" ಎಂದು ಹೇಳುತ್ತಾನೆ. ಕೆಲವರ ಪ್ರಕಾರ ಇದರ ಹೆಸರು 'ಗುಣಗಾಂಕೀಯಂ', ಶ್ರೀ ಎಂ. ಮರಿಯಪ್ಪಭಟ್ಟರ ಪ್ರಕಾರ 'ಗುಣಗಾಂಕಿಯಂ' ಅಥವಾ 'ಗುಣಗಾಂಗೇಯಂ'[74] ಇವುಗಳಲ್ಲಿ 'ಗುಣಗಾಂಕೀಯಂ' ಇಲ್ಲವೆ 'ಗುಣಗಾಂಗೇಯಂ'[75] ಮೂಲ ಹೆಸರಾಗಿದ್ದರೆ, ಈ ಕನ್ನಡ ಛಂದೋಗ್ರಂಥದ ಭಾಷೆ ಸಂಸ್ಕೃತವಾಗಿರುವ ಸಂಭವವಿದೆ. ಆದರೆ ಇದು ಕನ್ನಡದಲ್ಲಿ ಬರೆದ ಗ್ರಂಥವೆಂದು ಎಲ್ಲ ವಿದ್ವಾಂಸರ ನಂಬುಗೆ. ಹೀಗಾಗಿ ಇದರ ಹೆಸರು ಮತ್ತು ಭಾಷೆಗಳ ಬಗೆಗೆ ಸಂದೇಹ ಹುಟ್ಟುತ್ತದೆ.

→ iii) ಬೂತಗನ ಮಗ, ನೃಪತುಂಗನ ಮೊಮ್ಮಗ, ಒಂದನೆಯ ಗುಣವರ್ಮನ ಆಶ್ರಯದಾತ ಎರೆಯಪ್ಪ - ".........ಗೇಯ ವಾದ್ಯ ನೃತ್ಯ ವಿದ್ಯೋಪವಿದ್ಯಾಭರತೇನ ಮಹಾವೈಯಾಕರಣ ಪ್ರಮಾಣಿಕೇನ" (MAR. 1921ಕೂಡಲೂರು ಪು. ೧೦) ಕ್ರಿ.ಶ. ೯೬೩

iv) ಎರೆಯಪ್ಪನ ಮಗ ನರಸಿಂಹ-"ನಾಟಕಂ ಶಬ್ದವಿದ್ಯಾಂ ವೈದ್ಯಂ ಕಾವ್ಯಂ ಪ್ರಮಾಣಂ ಸಗಣಿತ ಭರತಂ ಸೇತಿಹಾಸಂ ಪುರಾಣಂ ನೃತ್ಯಂ xxxದ್ಯಾಂ ಪ್ರಥಮ ವಯಸಿಯೋಽಭ್ಯಸ್ತವಾನ್ ಇದ್ಧ ಬುದ್ಧಿಃ" (MAR 1921 ಕೂಡಲೂರು ಪು. ೧೧)ಕ್ರಿ.ಶ. ೯೬೩

v) ಬೂತುಗ (ಕೃಷ್ಣ IIIನ ತಂಗಿಯ ಗಂಡ)- "ಸಕಳ ಶಾಸ್ತ್ರಜ್ಞ" (E.C. viiiನಗರ ೩೫)

vi) ಮರುಳ (ಕೃಷ್ಣIIIನ ಮಗಳ ಗಂಡ)-"ಕವಿವರ್ಯೈಃ ಕಾವ್ಯಂ" (MAR. 1921 ಕೂಡಲೂರು ಪು. ೧೨) ಕ್ರಿ.ಶ. ೯೬೩

vii) ಮರುಳನ ತಮ್ಮ ನೊಳಂಬಾಂತಕ ಮಾರಸಿಂಹ-"ಸಕಳಶಬ್ದಶಾಸ್ತ್ರವಿಚಾರವಿಶಾರದ ಸೂಕ್ಷ್ಮಧಿಷಣಾಧೃಷೇಣ ಸಮಸ್ತ ತರ್ಕ್ಕವಿತರ್ಕ್ಕಕರ್ಕ್ಕಶಮತಿ ನಿಪುಣ ಪ್ರಮಾಣ ನಯನಿಷ್ಣಾತ ವಚನ ರಚನಾ ಚತುರೇಣ ನಿಖಿಳಸಾಹಿತ್ಯವಿದ್ಯಾವಿದಗ್ಧಿಯಾ ಸಮಸ್ತಾಶ್ವಶಿಕ್ಷಾ ಸುಶಿಕ್ಷಿತ ಬುದ್ಧಿ ಪ್ರಬೋಧೇನ ಗಜಶಿಕ್ಷಾದಕ್ಷ ಪ್ರವುಢಾರೂಢ ಪ್ರಗಾಢಗೂಢ ಪ್ರಯೋಗ ಕುಶಳೇನ ಸಕಳೇತಿಹಾಸ ಪುರಾಣ ವಿಚಾರಣ ಪರಿಣತಶೇಮುಷಿವಿಶೇಷ ವ್ಯವಸ್ಥಾಪಿತ ಚತುರ್ವ್ವರ್ಣ್ಣಾಶ್ರಮ" (MAR 1921ಕೂಡಲೂರ. ಪು. ೧೪) ಕ್ರಿ.ಶ.೯೬೩

viii) ರಾಚಮಲ್ಲ- "ಶ್ರೀರಾಜಮಲ್ಲದೇವಂ।ಭಾರವಿ ಕೇಯೂರ ರಾಜಶೇಖರನಾತಂ॥
ಭಾರವಿಸಾಕ್ಷಾತ್ ಬಾಣ ಮ।ಯೂರಂ ವಾಲ್ಮೀಕಿ ಕಾಲಿದಾಸಂ ವ್ಯಾಸಂ॥"
(E.C. viiiನಗರ ೩೫ ಹುಮ್ಮಚಶಾಸನ)

ಹೀಗೆ ಮಾಧವನನ್ನು ಮೊದಲ್ಗೊಂಡು ನಿರಂತರ ಸಾಗಿಬಂದ ಗಂಗರ ಸಾಹಿತ್ಯಸಂಪತ್ತಿಯನ್ನು ಗಮನಿಸಿದರೆ ಕರ್ನಾಟಕದ ಅರಸುಮನೆತನಗಳಲ್ಲಿಯೇ ಈ ಮನೆತನದ ದೊರೆಗಳ ಸಾಹಿತ್ಯಸಿದ್ಧಿ ಅನುಪಮ ಎನ್ನಬೇಕಾಗುತ್ತದೆ.

೭೨. ಈತನ ಕಾಲ ಸಂ. ಕ.ಸಾ.ಚ. (ಪು. ೧೪೫) ಯಲ್ಲಿ ೧೦ನೆಯ ಶತಮಾನವೆಂದು, ಕ.ಕ. ಚರಿತೆಯಲ್ಲಿ (ಮುನ್ನುಡಿ ಪು. ೧೨) ೧೧ನೆಯ ಶತಮಾನವೆಂದು ಹೇಳಲಾಗಿದೆ.

೭೩. ಈ ಪೀಠಿಕೆಯಲ್ಲಿ ತೆಲುಗು ಛಾಂದಸಿಗ ವಾಂಭಯ್ಯನ ಹೆಸರೂ ಉಲ್ಲಿಖಿತವಾಗಿದೆಯೆಂದು ತಿಳಿದುಬರುತ್ತದೆ.(ಆಂಧ್ರ ವಾಙ್ಮಯ ಚರಿತ್ರೆ, ಪು. ೧೨)

೭೪. ಸಂ.ಕ.ಸಾ.ಚ. (ಎಂ. ಮರಿಯಪ್ಪಭಟ್ಟ) ಪು. ೧೪೫

೭೫. ನಾಚಿರಾಜನ 'ನಾಚಿರಾಜೀಯಂ' ಗ್ರಂಥದಂತೆ.

ನಾಗವರ್ಮನು ತನ್ನ ಹೆಂಡತಿಗೆ ಛಂದಸ್ಸನ್ನು ಬೋಧಿಸಿರುವುದರಿಂದ ಈ 'ಗುಣಗಾಂಕೀಯಂ' ಗ್ರಂಥಕ್ಕೆ ಆದರ್ಶವಾಗಿದ್ದುದು ಛಂದೋಂಬುಧಿಯೆ? ಎಂದೆನಿಸುತ್ತದೆ. ಆದರೆ ನಾಗವರ್ಮನು ರಗಳೆಯ ಲಕ್ಷಣವನ್ನು ಬರೆಯುತ್ತ

ಗಣನಿಯಮವಿಪರ್ಯಾಸದೊ
ಳೆಣೆವಡೆದೊಳ್ಪೆಸೆದು ಮಾತ್ರೆ ಸಮನಾಗೆ ಗುಣಾ।
ಗ್ರಣಿಯ ಮತದಿಂದೆ ತಾಳದ
ಗಣನೆಗೊಡಂಬಟ್ಟುದದುವೆ ರಘಟಾಬಂಧಂ॥[೭೬]

ಎಂದು ಉಲ್ಲೇಖಿಸಿದ 'ಗುಣಾಗ್ರಣಿ' ಎಂಬುದು ಅವನಿಗೆ ಪೂರ್ವದಲ್ಲಿದ್ದ 'ಗುಣಗಾಂಕ'ನೆಂಬವನನ್ನು ಸೂಚಿಸುತ್ತಿರಬಹುದು. ಆದುದರಿಂದ ಸ್ತ್ರೀಯನ್ನು ಸಂಬೋಧಿಸಿ ಛಂದಸ್ಸನ್ನು ಬರೆದವರಲ್ಲಿ ನಾಗವರ್ಮನಿಗೆ ಮೊದಲಿಗನಾಗಿರಬಹುದಾದ ಈತನನ್ನು ೧೦ನೆಯ ಶತಮಾನದ ಹಿಂದೆ ಹುಡುಕಬೇಕೆನಿಸುತ್ತದೆ. ಈ ವಿಷಯವಾಗಿ ಆರ್. ನರಸಿಂಹಾಚಾರ್ ಅವರು "Unfortunately, the name of the author is not given (by Amritasagar) nor has the work came down to us. It is very probable that this author dedicated his work to the Eastern Chalukya king Vijayaditya III (844-88), who had the distinctive epithets Gunaga, Gunakenalla. This would be the earliest work on prosody in Kannada" ಎಂದು ಊಹಿಸಿದ್ದಾರೆ.[೭೭]

ಮನುಜಪ್ರಾಕಾರ, ಗುಣಗ, ರಣರಂಗಶೂದ್ರಕ, ವಿಕ್ರಮಧವಳ, ಪರಚಕ್ರರಾಮ, ನೃಪತಿಮಾರ್ತಂಡ, ಬಿರುದಂಕ ಭೀಮ, ಅರಸಾಂಕ ಕೇಸರಿ, ವಲ್ಲಭ, ಗುಣಕ್ಕೆನಲ್ಲ-ಎಂಬ ಬಿರುದುಗಳಿಂದ ೪೪ ವರುಷಗಳ ವರೆಗೆ, ಈಗಿನ ತೆಲುಗು ನಾಡಿನಲ್ಲಿ ರಾಜವೈಭವ ನಡೆಸಿದ ಈತನು ವೆಂಗಿಚಾಲುಕ್ಯ ಅರಸು. ಅಮೋಘವರ್ಷI ನ ಕಕ್ಕನೂ ಗುಜರಾತ ರಾಷ್ಟ್ರಕೂಟ ಮನೆತನದ ಸಂಸ್ಥಾಪಕನೂ ಆದ ಇಂದ್ರನ ಮಗಳು ಶೀಲಮಹಾದೇವಿ ಇವನ ಪಟ್ಟಮಹಿಷಿ. ಸಿಸಿಲಿ ತಾಮ್ರಪಟವನ್ನಾಧರಿಸಿ "Nripatunga by worshipping his (Vijayaditya's) arm became lofty among his enemies (ripunripatunga)[೭೮] ಎಂದು ಹೇಳಿದ ಶ್ರೀ ವೆಂಕಟರಮಣಯ್ಯನವರ ಮಾತು ನೃಪತುಂಗನ ಸಮಕಾಲೀನನಾದ ಈತನ ಘನತೆಯನ್ನು ವ್ಯಕ್ತಪಡಿಸುತ್ತದೆ.

ಮನುಮಾರ್ಗ ಕವಿತಲೋಕಂ
ಬುನವೆಲಯಗ ದೇಶಿಕವಿತ ಪುಟ್ಟಂಚಿ ತೆನುಂ।
ಗುನು ನಿಲ್ಪಿರಂಧ್ರ ವಿಷಯಂ
ಬುನಜನ ಚಾಳುಕ್ಯರಾಜ ಮೊದಲಗು ಪಲುವುರ್॥[೭೯]

---

೭೬. ಛಂದೋಂಬುಧಿ (ಕಿಟೆಲ್)ಪು. ೭೬

೭೭. H.K.L. Page- 29- (ಈ 'ಗುಣಗಾಂಕ'ನೆಂದರೆ ವಿಜಯಾದಿತ್ಯIII ಎಂದು ಮೊದಲು ಹೇಳಿದವರು ಪ್ರೊ. ಶೇಷಗಿರಿಶಾಸ್ತ್ರಿಗಳು. ಆದರೆ ಗುಣಗಾಂಕ (ಗುಣಗಂಗ)ನೆಂದರೆ ರಕ್ಕಸಗಂಗನಿರಬಹುದು. ರಕ್ಕಸ ಗಂಗನ ಆಶ್ರಯದಲ್ಲಿದ್ದ ನಾಗವರ್ಮನ ಛಂದೋಂಬುಧಿಯೂ ಸ್ತ್ರೀಸಂಬೋಧನ ತಂತ್ರವನ್ನುಳ್ಳುದು. ಕಾರಣ 'ಗುಣಗಾಂಕೀಯ' ಎಂದರೆ ಛಂದೋಂಬುಧಿಯಾಗಿರಬಹುದೆಂದು ಆರ್. ನರಸಿಂಹಾಚಾರ್ ಹೇಳಿ, ಕೊನೆಗೆ ಶೇಷಗಿರಿಶಾಸ್ತ್ರಿಗಳ ಮತವನ್ನು ಒಪ್ಪಿದರು.)

೭೮. The Eastern Chalukyas of Vengi P. 22

೭೯. ಕುಮಾರಸಂಭವ-ನನ್ನೆಚೋಡ ೧-೨೩.

ಈ ಪದ್ಯಕ್ಕೆ "ಕನ್ನಡ ಮೊದಲಾದ ದೇಶಗಳಲ್ಲಿ ಮಾರ್ಗಕವಿತ್ವವು ರಚಿತವಾಗಿ ಪ್ರಚಾರವನ್ನು ಹೊಂದುತ್ತಿರುವಾಗ ಗುಣಗವಿಜಯಾದಿತ್ಯನೋ........... ಬೇರೆ ಯಾವ ಚಾಲುಕ್ಯರಾಜನೋ ತೆಲುಗುದೇಶದಲ್ಲಿ ದೇಶಿಕವಿತ್ವವನ್ನು ಸೃಷ್ಟಿಸಿ ತೆಲುಗನ್ನು ನಿಲ್ಲಿಸಿದರು"[೮೦] - ಎಂದು ಪಂಡಿತರು ಅರ್ಥಹಚ್ಚುವುದು ಈತನ ಹಿರಿಮೆಗೆ ಸಾಕ್ಷಿ. ಇದನ್ನು ಸಮರ್ಥಿಸುವಂತೆ ಸೀಸ, ಆಟವೆಲದಿ, ತೇಟಗೀತ, ತರುವೋಜ, ಚಂಪಕಮಾಲೆಗಳನ್ನೊಳಗೊಂಡ ತೆಲುಗುದೇಶದ ಪ್ರಥಮಶಾಸನಗಳು ಈತನ ಅಧಿಕಾರಾವಧಿಯಲ್ಲಿ ಹುಟ್ಟಿವೆ.[೮೧] ನೃಪತುಂಗನ ಸಮಯದಲ್ಲಿಯೂ ಇಂತಹ ಒಂದು ಕ್ರಾಂತಿ ಕಂಡುಬರುವುದರಿಂದ ಇವನನ್ನು 'ತೆಲುಗುಸಾಹಿತ್ಯದ ನೃಪತುಂಗ'ನೆನ್ನಬಹುದು. ಸಮಕಾಲೀನರಾದ ಇವರ ಆಳಿಕೆಯ ಅವಧಿಯಲ್ಲಿ ಒಂದುಕಡೆ 'ಕವಿರಾಜಮಾರ್ಗ'ವೆಂಬ ಅಲಂಕಾರಗ್ರಂಥ, ಇನ್ನೊಂದುಕಡೆ 'ಗುಣಗಾಂಕೀಯಂ' ಎಂಬ ಛಂದೋಗ್ರಂಥ ಸೃಷ್ಟಿಗೊಂಡಿರಬೇಕು. ಆದರೆ ಕವಿರಾಜಮಾರ್ಗ ಲಭಿಸಿದೆ, ಗುಣಗಾಂಕೀಯ ಲಭಿಸಿಲ್ಲ.

ಇದು ಕವಿಯೊಬ್ಬನಿಂದ ಬರೆಯಲ್ಪಟ್ಟು, ಈ ವಿಜಯಾದಿತ್ಯನ ಹೆಸರಿನಲ್ಲಿ ಪ್ರಸಾರವಾಗಿರಬಹುದು, ಎಂದು ಆರ್. ನರಸಿಂಹಾಚಾರ್ಯರ ಮತ. ಆದರೆ ನಾಚಿರಾಜನಿಗೆ ಸಂಬಂಧಿಸಿದುದು ನಾಚಿರಾಜೀಯಂ ಆಗಿರುವಂತೆ ಗುಣಗಾಂಕನಿಗೆ ಸಂಬಂಧಿಸಿದುದು ಗುಣಗಾಂಕೀಯಂ ಎಂದು ಹೇಳಿ ನಿಲ್ಲದೆ ಮೇಲಿನಂತೆ ಭಾವಿಸಿದುದು ಎಳ್ಳಷ್ಟೂ ಆಧಾರವಿಲ್ಲದ ಊಹೆ. ಆದುದರಿಂದ ಇದರ ಕರ್ತೃ ಗುಣಗಾಂಕನೆಂದು ಈಗಿನಮಟ್ಟಿಗೆ ಇಟ್ಟುಕೊಳ್ಳುವುದು ವಿಹಿತ.

ಈ ಛಂದೋಗ್ರಂಥದ ಸ್ವರೂಪ ತಿಳಿದುಬಂದುದು ಅತ್ಯಲ್ಪ. ಗುಣಸಾಗರನ ಪ್ರಕಾರ ಸಭಾವಿನಯದಿಂದ ತುಂಬಿದ, 'ಸ್ತ್ರೀಸಂಬೋಧನತಂತ್ರ'ವನ್ನುಳ್ಳ; ನಾಗವರ್ಮನ ಪ್ರಕಾರ ರಗಳೆಯ ಲಕ್ಷಣವನ್ನೊಳಗೊಂಡ ಒಂದು ಪ್ರಾಚೀನ ಕೃತಿಯಿದು.[೮೨]

ಆದಿಗುಣವರ್ಮ

ಅನುಗುಣವಾಗಿ ಕೂಡೆ ಗುಣವರ್ಮನ ಮೆಯ್ಸಿರಿ ಪಂಪನೋಜೆ ಪೊ
ನ್ನನ ಪೊಸದೇಸೆ ರನ್ನನ ಗುಣೋನ್ನತಿಯಗ್ಗಳನೊಳ್ಪು ನಾಗವ।
ರ್ಮನ ಬಹುರೀತಿ ನೇಮಿಯ ಚಮತ್ಕೃತಿ ಜನ್ನಿಗನಿಂಪು ನಾಗಚಂ
ದ್ರನ ರಸವೃತ್ತಿ ರಂಜಿಸುಗೆ ನಿರ್ಣಯಮೆನ್ನಯ ನವ್ಯಕಾವ್ಯದೊಳ್॥[೮೩]

ಈ ಪದ್ಯದಲ್ಲಿ ಪುಷ್ಪದಂತ ಪುರಾಣದ ಗುಣವರ್ಮನು (ಕ್ರಿ.ಶ. ೧೨೧೫), ತನಗೆ ಪ್ರಾಚೀನನಾದ ಇನ್ನೊಬ್ಬ ಗುಣವರ್ಮನನ್ನೂ, ಆತನ ಮೆಯ್ಸಿರಿಯನ್ನೂ ಮೆಚ್ಚಿ ನೆನೆದಿರುವನು. ಈ ಉಭಯರಲ್ಲಿ ಪ್ರಾಚೀನನನ್ನು ಗುಣವರ್ಮI, ಅರ್ವಾಚೀನನನ್ನು ಗುಣವರ್ಮII ಎಂದು ಕರೆಯುವುದು ರೂಢಿ.

---

೮೦. ಆಂಧ್ರವಾಙ್ಮಯ ಚರಿತ್ರೆ ಪು. ೧೧(ಎಫ್.ಜಿ. ಮಠದ ೧೯೬೫)

೮೧. ಶಾಸನಸಾಹಿತ್ಯ ಪ್ರಕರಣವನ್ನು ನೋಡಬಹುದು.

೮೨. "ಈ ಗ್ರಂಥವು ಗುಣಗಾಂಗೇಯನೆಂಬೊಬ್ಬ ಗಂಗರಾಜನ ಹೆಸರಿನಲ್ಲಿ ಬರೆಯಲ್ಪಟ್ಟಿರಬಹುದೆಂದೂ ಕೆಲವು ವಿಮರ್ಶಕರು ಅಭಿಪ್ರಾಯಪಡುತ್ತಾರೆ. ಹೀಗಿದ್ದರೆ ಗಂಗರಾಜರೆಲ್ಲರೂ ಜೈನಮತೀಯರಾಗಿರುವುದರಿಂದ ಈ ಗ್ರಂಥದಲ್ಲಿ (ಗುಣಗಾಂಕಿಯಲ್ಲಿ) ಜೈನಸಂಪ್ರದಾಯಗಳಿರಬೇಕಾದುದು ಸ್ವಾಭಾವಿಕವಷ್ಟೆ"- (ಕನ್ನಡ ಛಂದೋಗ್ರಂಥಗಳು-ಎಂ. ಮರಿಯಪ್ಪ ಭಟ್ಟ, -AROM VII-i) ಎಂಬ ಹೇಳಿಕೆಯೂ ಇದೆ.

೮೩. ಪು. ಪುರಾಣ ೧-೩೬

ಕಾವ್ಯಸಾರದಲ್ಲಿ ಗುಣವರ್ಮನ ಪದ್ಯಗಳನ್ನು ಸೂಚಿಸುವ ಸಂದರ್ಭಗಳಲ್ಲಿ ಕೇವಲ 'ಶೂದ್ರಕ' ಎಂದೂ, ಒಮ್ಮೆ ಮಾತ್ರ 'ಗುಣವರ್ಮನ ಶೂದ್ರಕಂ' ಎಂದೂ[೮೪] ಆಕರ ಹೇಳಲಾಗಿದೆ. ಒಂದು ಸಲ ಹೇಳಿದ ಈ ತೆಳ್ಳನೆಯ ಆಧಾರವನ್ನು ಬಿಟ್ಟರೆ ಶೂದ್ರಕದ ಕರ್ತೃ ಗುಣವರ್ಮನೆಂದು ನಂಬುವುದೇ ಕಷ್ಟ. ಕಾವ್ಯಾವಲೋಕನ, ಕರ್ಣಾಟಕ ಭಾಷಾಭೂಷಣ, ಶಬ್ದಮಣಿದರ್ಪಣ, ಸೂಕ್ತಿಸುಧಾರ್ಣವಗಳೆಲ್ಲ ಸೇರಿದರೂ ಕಾವ್ಯಸಾರದಲ್ಲಿಯ ಶೂದ್ರಕದ ಪದ್ಯಸಂಖ್ಯೆ ಹೆಚ್ಚಿಗಿವೆ. ಇದರಿಂದ ಅಭಿನವವಾದಿವಿದ್ಯಾನಂದನು ಮೇಲಣ ಶಾಸ್ತ್ರ ಹಾಗೂ ಸಂಕಲನಗ್ರಂಥಗಳಿಂದಲೇ ಶೂದ್ರಕದ ಪದ್ಯಗಳನ್ನು ಆಯ್ದುಕೊಂಡಿರದೆ, ಮೂಲಕೃತಿಯಿಂದಲೇ ಸ್ವೀಕರಿಸಿರುವನೆಂದು ವಿದಿತವಾಗುತ್ತದೆ. ಅದಕ್ಕಾಗಿ ಕಾಲದೃಷ್ಟಿಯಿಂದ (೧೫೩೩) ಅರ್ವಾಚೀನವಾಗಿದ್ದರೂ ಕಾವ್ಯಸಾರದ ಆ ಒಂದು ಸಲದ ಹೇಳಿಕೆ ಸತ್ಯವೆಂದು ನಂಬಿ, ಗುಣವರ್ಮನ ಕೃತಿ ಶೂದ್ರಕವೆಂದು ಒಪ್ಪಬೇಕಾಗಿದೆ.

ಕಾವ್ಯಸಾರದಲ್ಲಿ ಬಳಸಲಾದ ಈ ಶೂದ್ರಕದ ಹಲವು ಪದ್ಯಗಳಲ್ಲಿ ಆಗಾಗ ಶ್ರೀಗಂಗಚಕ್ರಾಯುಧಂ[೮೫], ಗಂಗಚಕ್ರಾಯುಧಾಂಕಂ[೮೬], ಕಾಮದಂ[೮೭], ಸಂ(=ಗಂ?)ಗರಾರ್ಜುನಂ[೮೮], ನೀತಿಮಾರ್ಗಂ[೮೯], ಶೂದ್ರಕಂ[೯೦], ಪ್ರತಿರೂಪಶೂದ್ರಕಂ[೯೧], ಉದಾರಮನ್ಮಥಂ[೯೨], ಮಹೇಂದ್ರಾಂತಕಂ[೯೩], ಶ್ರೀರೂಪಕಂದರ್ಪಂ[೯೪] ಎಂಬ ಬಿರುದುಗಳು ಗೋಚರಿಸುತ್ತವೆ. ಕಥಾನಾಯಕನನ್ನು ಗುರುತಿಸಲು ನೆರವಾಗುವ ಇವುಗಳನ್ನು ಅವಲಂಬಿಸಿ ಆರ್. ನರಸಿಂಹಾಚಾರ್ ಮೊದಲಾದವರು 'ಶೂದ್ರಕ'ದ ಕಥಾನಾಯಕ ಗಂಗವಂಶದ 'ಎರೆಯಪ್ಪ' (೮೮೭-೯೧೯) ನೆಂದರೆ[೯೫] ಎಸ್. ಶ್ರೀಕಂಠಶಾಸ್ತ್ರಿಗಳು ಈ ಎರೆಯಪ್ಪನ ಮೊಮ್ಮಗನಾದ 'ಮರುಳ' (ಪುಣಸೆಯ ಮರುಳ, ೯೬೧-೯೬೩) ನೆಂಬ ಅರ್ಥಬರುವ ಹೇಳಿಕೆಯನ್ನಿತ್ತಿರುವರು.[೯೬] ಭಾಷಾಭೂಷಣದ ಒಂದು ಪದ್ಯದಲ್ಲಿ ಕಾಣುವ 'ಗಂಗಚಕ್ರಾಯುಧಾಂಕಂ' ಎಂಬ ಬಿರುದು[೯೭] ಮರುಳನಿಗೆ ಕಂಡುಬರುವುದೇ ಶಾಸ್ತ್ರಿಗಳಿಗೆ ಆಧಾರ. ಇದು ಎರೆಯಪ್ಪ ಮೊದಲ್ಗೊಂಡು ಎಲ್ಲ ಗಂಗ ಅರಸರ ಸಾಮಾನ್ಯ ಬಿರುದಾಗಿರುವ ಕಾರಣ ಅವರ ಊಹೆ ಸಬಲವೆನಿಸುವುದಿಲ್ಲ. ಇನ್ನು ಶೂದ್ರಕ ಕಾವ್ಯಕ್ಕೆ ಸಂಬಂಧಪಟ್ಟ ಬಹಳಷ್ಟು ಪದ್ಯಗಳಲ್ಲಿ ಕಂಡುಬರುತ್ತಿರುವ 'ಮಹೇಂದ್ರಾಂತಕ' ಎಂಬುದು ಎರೆಯಪ್ಪನ ವ್ಯಕ್ತಿವಿಶಿಷ್ಟ ಬಿರುದು. ಅದಕ್ಕಾಗಿ ಆರ್. ನರಸಿಂಹಾಚಾರ್ ಹೇಳುವಂತೆ ಶೂದ್ರಕದ ಕಥಾನಾಯಕ ಎರೆಯಪ್ಪನೆಂಬುದು ಸತ್ಯವೆನಿಸುತ್ತದೆ.

ಗಂಗಚಕ್ರವರ್ತಿಯಾದ ಬೂತುಗ I ಮತ್ತು ರಾಷ್ಟ್ರಕೂಟ ನೃಪತುಂಗನ ಮಗಳು ಚಂದ್ರೊಬ್ಬಲಬ್ಬೆಯರ ಮಗನಾದ ಈತನು ಶಸ್ತ್ರಬಲ್ಲಿದ, ಶಾಸ್ತ್ರಬಲ್ಲಿದ. ಈ ವಿಷಯವನ್ನು,

> ಆಶೀರ್ವಾದ ಪರಂಪರಾ ಪರಿಣತೌ ಕಲ್ಯಾಣಕುಲ್ಯೋದಿತೌ
> ಶ್ರೀ ಹ್ರೀ ಕೀರ್ತ್ತಿ ವಿಶಿಷ್ಟಶೀಲಸಮಿತೌ ನೃತ್ಯಾದಿವಿದ್ಯಾತತೌ।
> ಶಿಕ್ಷಾಸಿಧ್ಯುದಯಾಚಲೋಜ್ವಲತತೌ ಚಂದ್ರಬ್ಬಲಬ್ಬಾ ಪೃಥುಃ
> ಶ್ರೀಮತ್ಯಾಂ ಎಚೆಗಂಗ ... ...
> ... ...

---

೮೪. ಕಾ.ಸಾ. ಪ. ೭೮
೮೫. ಕಾ.ಸಾ.ಪ. ೩೬೧
೮೬. ಕಾ.ಸಾ.ಪ. ೨೧೫
೮೭. ಕಾ.ಸಾ.ಪ. ೪೩೭
೮೮. ಕಾ.ಸಾ.ಪ. ೫೨೮ ಗ
೮೯. ಕಾ.ಸಾ.ಪ. ೪೬೩
೯೦. ಕಾ.ಸಾ.ಪ. ೧೧೧೪
೯೧. ಕಾ.ಸಾ.ಪ. ೫೩೪
೯೨. ಕಾ.ಸಾ.ಪ. ೫೩೫
೯೩. ಕಾ.ಸಾ.ಪ. ೫೫೧
೯೪. ಕಾ.ಸಾ.ಪ. ೬೫೫
೯೫. ಕ.ಕ.ಚ. ೨೫-೨೬
೯೬. S.K.H.P. 147(೧೯೪೦)
೯೭. ಕ.ಭಾ. ಭೂಷಣ ಸೂ. ೧೭೫(ನರಸಿಂಹಾಚಾರ್ ೧೯೦೩)

ತೇನ ಶರತ್ಸಮಯ ಸಮುದಿತ ವಿಶದತರಶಶಿಕಿರಣ ನಿಕರಾಯಮಾನ ಪಟುತರಯಶಃಪಯೋನಿಧಿ ಮಜ್ಜನೋನ್ಮಜ್ಜನೋನ್ಮೂಳೀಕೃತಕಳಿಮಳಿನ ಗೇಯವಾದ್ಯನೃತ್ಯವಿದ್ಯೋಪವಿದ್ಯಾ ಭರತೇನ ಮಹಾವೈಯಾಕರಣ ಪ್ರಮಾಣಿಕೇನ ಸಮಸ್ತಾಭಿರಾಮಿಕ ಗುಣಮಣಿಭ್ರಾಜಮಾನ ನೀತಿಮಾರ್ಗ್ಗಣ ಸಮಸ್ತಸಾಮಂತ ಲಲಾಟಘಟ್ಟಿತ ಪಾದಾರವಿಂದದ್ವಯೇನ......ಶ್ರೀಮದ್ ಎಱೆಗಂಗದೇವ ಪ್ರಥಮನಾಮಧೇಯಃ......" ಎಂದು ಕೂಡಲೂರ ತಾಮ್ರಪಟ ಸಾರಿ ಹೇಳುತ್ತದೆ.[೯೮] ಆದಿಗುಣವರ್ಮನಿದ್ದುದು ಇಂಥ ವೀರ-ವಿದ್ವತ್ತುಗಳಿಗೆ ನೆಲೆಯಾದ ಎರೆಯಪ್ಪನ ಉದಾರ ಆಶ್ರಯದಲ್ಲಿ.

ನಯಸೇನ್[೯೯], ಪಾರ್ಶ್ವಪಂಡಿತ[೧೦೦], ಗುಣವರ್ಮ II[೧೦೧], ಕೇಶಿರಾಜಾದಿ[೧೦೨] ಜೈನಕವಿಗಳು ಹೊಗಳುವುದರೊಂದಿಗೆ "ಗುಣವರ್ಮಂ ಮೆಱೆದಂ........ ಪೇೞ್ದ ನೇಮಿನಾಥಾನ್ವಯಮಂ" ಎಂದು ಪಾರ್ಶ್ವಪಂಡಿತ,[೧೦೩] "...... ಗುಣವರ್ಮನ ಹರಿವಂಶ ಪ್ರಯೋಗಂ" ಎಂದು ಕೇಶಿರಾಜನು[೧೦೪] ಹೇಳುವುದರಿಂದ ಈತನು ಮತದಿಂದ ಜೈನನೆಂಬುದು ಸ್ಪಷ್ಟ.

"ಶೂದ್ರಕದ ಒಂದು ಪದ್ಯದಲ್ಲಿ 'ಕಾವೇರಿಯ ನೀರ್ವೊಲಿತ್ತ ಬರೆ ನಿಮ್ಮ ಬಲಂ ಶತಖಂಡಮಾಗದೇ' ಎಂದು ವಾಚಿಸಿರುವುದರಿಂದ ಈ ಕವಿ ಕಾವೇರಿ ಪ್ರಾಂತ್ಯದವನೆಂದು ತೋರಬಹುದು"[೧೦೫] ಎಂದು ವಿದ್ವಾನ್ ವೆಂಕಟರಾಯಾಚಾರ್ಯರ ಅಭಿಪ್ರಾಯ. ಇದು ಒಂದು ಊಹೆ ಮಾತ್ರ. ಜಾತಕ ತಿಲಕದ,

> ಅನವದ್ಯಂ ಕವಿತಾಗುಣಾರ್ಣವನಿಳಾದೇವಾನ್ವಯಾಬ್ಧ್ಯಂಬುಜಾ
> ರಿನಿಭಂ ಪ್ರೌಢವಿಳಾಸಿನೀ ಮನಸಿಜಂ ಶ್ರೀಶೀಲಭದ್ರಂ ದ್ವಿಷ ।
> ಜ್ಜನ ದುರ್ವಾರ ಗಜಾಂಕುಶಂ ಸುಜನರತ್ನಂ ತಾನೆನಲ್ಕೇಂ ಕೃತಾ
> ರ್ಥನೊ ಕರ್ಣಾಟಕವೀಂದ್ರ ಸದ್ಗುಣ ? ಗುಣಾಸಂಜ್ಞಾಧರಂ ಶ್ರೀಧರಂ ॥

ಎಂಬ ಪದ್ಯದಲ್ಲಿ ಬರುವ ಶೀಲಭದ್ರನೆಂದರೆ ಗುಣವರ್ಮನೆಂದು ಕವಿಚರಿತೆಕಾರರ ಅಭಿಮತ.[೧೦೬] ಇದಕ್ಕೆ ಆಧಾರಬೇಕು.

"ಇವನಿಗೆ 'ಭುವನೈಕವೀರ' ಎಂಬ ಬಿರುದೂ ಇದ್ದಂತೆ ತಿಳಿಯುತ್ತದೆ"[೧೦೭] ಎಂದು ಆರ್. ನರಸಿಂಹಾಚಾರ್, "ಇದು ಗುಣವರ್ಮನ ಒಂದು ಕೃತಿಯ ಹೆಸರು"[೧೦೮] ಎಂದು ತ.ಸು. ಶಾಮರಾಯರು ಹೇಳುತ್ತಾರೆ. ಈ ತೊಡಕಿನ ಚರಿತ್ರೆ ಹೀಗಿದೆ:

---

೯೮. MAR. 1921 ಕೂಡಲೂರು ಪು. ೧೦

೯೯. ಧರ್ಮಾಮೃತ ೧-೩೯

೧೦೦. ಪಾ. ಪುರಾಣ ೧-೭೧

೧೦೧. ಪು. ಪುರಾಣ ೧-೩೬

೧೦೨. ಶ.ಮ. ದರ್ಪಣ ಸೂ. ೫

೧೦೩. ಪಾ. ಪುರಾಣ ೧-೫೭

೧೦೪. ಶ.ಮ. ದರ್ಪಣ ಸೂ. ೧೨೮

೧೦೫. ಒಂದನೆಯ ಗುಣವರ್ಮನ ಕೃತಿಗಳು-ಪ್ರ.ಕ. ೪೫-೩ ಪು. ೫೩

೧೦೬. ಕ.ಕ.ಚ. ೯೨

೧೦೭. ಕ.ಕ.ಚ.ಪು. ೨೫"Nagavarma style him Bhuvanaikavira-a name be fitting a warrior rather than a poet" ಎಂಬ ಬಿ.ಎಲ್. ರೈಸ್‌ರ ಹೇಳಿಕೆಯೇ (Early Kannada Authors JRAS 1883) ನರಸಿಂಹಾಚಾರ್ ಅವರಿಗೆ ಮೂಲವಾಗಿದೆ.

೧೦೮. "ಮೊದಲನೆಯ ಗುಣವರ್ಮನು ಹರಿವಂಶ, ಭುವನೈಕವೀರ, ಶೂದ್ರಕ ಎಂಬ ಮೂರು ಗ್ರಂಥಗಳನ್ನು ಬರೆದಿರುವಂತೆಯೂ......" (ಜನಪ್ರಿಯ ಕನ್ನಡ ಸಾಹಿತ್ಯಚರಿತ್ರೆ ಪು. ೧೨)

ಎನಿತ್ತೆನಿತ್ತಂಬುಜಪತ್ರನೇತ್ರೆಯಾ
ಘನಸ್ತನಂಗಳ್ ಬಳೆಗುಂ ಕಿರಾತೆಯಾ।
ಅನಿತ್ತನಿತ್ತಂ ವನದೊಳ್ ವನೇಚರಂ
ತನತ್ತು ಬಿಲ್ಲಾನದನಂತೆ ಕೀಸುಗುಂ॥[೧೦೯]

ಈ ಅಪರೂಪದ ಪದ್ಯ, ಕೆಳಗಣ ೬ ಕೃತಿಗಳಲ್ಲಿ (ಆರ್. ನರಸಿಂಹಾಚಾರ್ ಸಂಪಾದಿತ ಕ.ಭಾ. ಭೂಷಣದಲ್ಲಿ ಎರಡು ಸಲ ಬಳಕೆಯಾದುದನ್ನು ಗಮನಿಸಿದರೆ ೭ ಸಲ) ಕಂಡುಬರುತ್ತದೆ:

೧. ಕಾವ್ಯಾವಲೋಕನ -ಸೂ. ೭೯
೨. ಕ.ಭಾ. ಭೂಷಣ-ಸೂ. ೬೮(ಆರ್. ನರಸಿಂಹಾಚಾರ್ ಆವೃತ್ತಿ)[೧೧೦]
ಕ.ಭಾ. ಭೂಷಣ -ಸೂ. ೧೮೧ (ಆರ್. ನರಸಿಂಹಾಚಾರ್ ಆವೃತ್ತಿ)[೧೧೧]
೩. ಸೂಕ್ತಿಸುಧಾರ್ಣವ-೩-೨೦೩
೪. ಶ.ಮ.ದರ್ಪಣ -ಸೂ. ೧೨೮
೫. ಶಬ್ದಾನುಶಾಸನ -ಸೂ. ೨೫೬
೬. ಕಾವ್ಯಸಾರ-ಪು. ೨೨೪

ಹೀಗೆ ೬ ಇಲ್ಲವೆ ೭ ಸಲ ಕಂಡುಬರುವ ಈ ಪದ್ಯಕ್ಕೆ ಆರ್. ನರಸಿಂಹಾಚಾರ್ ಸಂಪಾದಿತ ಕ. ಭಾ. ಭೂಷಣ (ಸೂ. ೬೮)ದಲ್ಲಿ 'ತಥಾ ಗುಣವರ್ಮಕವಿಪ್ರಯೋಗಃ ' ಎಂದೂ ಟೀಕೆಯಲ್ಲಿ 'ಇದರ್ಕೆ ಗುಣವರ್ಮನ ಪ್ರಯೋಗಂ' ಎಂದೂ ಹೇಳಿರುವುದರಿಂದ ಈ ಪದ್ಯ ಗುಣವರ್ಮನೆಂಬುದು ನಿಜ. ಆದರೆ ಬಿ.ಎಲ್. ರೈಸ್ ಸಂಪಾದಿತ ಕ.ಭಾ. ಭೂಷಣದಲ್ಲಿ ಕಂಡುಬರುವ 'ತಥಾ ಗುಣವರ್ಮಕವೇರ್ಭುವನೈಕವೀರಸ್ಯ ಪ್ರಯೋಗಃ'[೧೧೨] ಎಂಬುದಕ್ಕೆ ಆರ್. ನರಸಿಂಹಾಚಾರ್ ಅವರು ಭುವನೈಕವೀರನೆಂಬ ಬಿರುದುಳ್ಳ ಗುಣವರ್ಮನ ಪ್ರಯೋಗ ಎಂದು, ತ.ಸು. ಶಾಮರಾಯರು ಗುಣವರ್ಮನ 'ಭುವನೈಕವೀರ' ಹೆಸರಿನ ಕಾವ್ಯಕ್ಕೆ ಸಂಬಂಧಿಸಿದ ಪ್ರಯೋಗ ಎಂದು ಅರ್ಥ ಹೇಳುತ್ತಾರೆ. ಶಾಸನಗಳಲ್ಲಿ ಈ ಬಿರುದು ಎರೆಯಪ್ಪನಿಗೆ ಕಂಡುಬರುವುದರಿಂದ[೧೧೩] ಶಾಮರಾಯರು ಹೇಳುವಂತೆ ಗುಣವರ್ಮ ತನ್ನ ಅರಸನನ್ನು ಕುರಿತು ಈ ಹೆಸರಿನ ಕಾವ್ಯ ಬರೆದಿರಲು ಸಾಧ್ಯ. ಆದರೆ ಈ ಭುವನೈಕವೀರ, ಶೂದ್ರಕಗಳು ಬೇರೆ ಬೇರೆ ಕೃತಿಗಳೋ ಒಂದೇ ಕೃತಿಯ ಎರಡು ಹೆಸರುಗಳೋ ಸ್ಪಷ್ಟವಾಗುವುದಿಲ್ಲ. ಹೀಗಾಗಿ 'ಎನಿತ್ತೆನಿತ್ತಂಬುಜಪತ್ರನೇತ್ರಯಾ' ಯಾವ ಕೃತಿಯ ಪದ್ಯವೆಂಬ ಸಂದೇಹ ಹುಟ್ಟುತ್ತದೆ. ಇಂಥ ಪರಿಸ್ಥಿತಿಯಲ್ಲಿಕಾವ್ಯಸಾರಕಾರನು ಇದಕ್ಕೆ ಹರಿವಂಶದ ಆಕರ ಹೇಳುತ್ತಿರುವುದು ಇನ್ನೂ

---

೧೦೯. 'ಎನಿತ್ತೆನಿತ್ತಂಬುಜಪತ್ರನೇತ್ರೆಯಾ, (ಸಮಾಲೋಕನ, ಪು. ೧೫೫ ತೀ.ನಂ.ಶ್ರೀ.)ನೋಡಿರಿ.

೧೧೦. ರೈಸ್ ಆವೃತ್ತಿಯಲ್ಲಿ ಈ ಸೂತ್ರ ೯೬ನೆಯದು.

೧೧೧. ರೈಸ್ ಪ್ರತಿಯಲ್ಲಿ ಈ ಸೂತ್ರ ೧೮೭ನೆಯದು. ಇದರ ಕೆಳಗೆ 'ಎನಿತ್ತೆನಿತ್ತಂಬುಜಪತ್ರ........' ಎಂಬ ಪದ್ಯವಿಲ್ಲ. ಆದರೆ ಪರಿಶಿಷ್ಟ, (P.8)ದಲ್ಲಿ !. and B add the quotation given under Sutra-69- ಎಂದಿರುವರು.

೧೧೨. ಕ.ಭಾ. ಭೂಷಣ ಸೂ. ೭೯. (ರೈಸ್ ಆವೃತ್ತಿ)

೧೧೩. E.C. viiiನಗರ ೩೫ ಹುಮ್ಮಚಶಾಸನ (ಭುವನೈಕವೀರ, ಮಹೇಂದ್ರಾಂತಕ ಎರಡೂ ಬಿರುದುಗಳು ಇಲ್ಲಿವೆ.)

ಗೊಂದಲವನ್ನುಂಟುಮಾಡಿದೆ.[೧೧೪] ಹೀಗೆ ಇದು ಯಾವ ಗ್ರಂಥದ ಪದ್ಯವೆಂಬುದು ಬಿಡಿಸದ ಪ್ರಶ್ನೆಯಾಗಿದ್ದರೂ ಇದರ ಕರ್ತೃ ಗುಣವರ್ಮನೆಂಬುದು ಸೂರ್ಯಪ್ರಕಾಶದಷ್ಟು ಸತ್ಯ. ಹೀಗಾಗಿ 'ಗುಣವರ್ಮ' ಎಂಬಲ್ಲಿಯ 'ವರ್ಮ' ಪದವು ಶೌರ್ಯಸೂಚಿಯಾಗಿದ್ದರೂ[೧೧೫] 'ಭುವನೈಕವೀರ'ವು ಕವಿ ಗುಣವರ್ಮನ ಬಿರುದು ಎಂಬ ಆರ್. ನರಸಿಂಹಾಚಾರ್ ಅವರ ಹೇಳಿಕೆಯನ್ನು ಆಧಾರದ ಕೊರತೆಯಿಂದಾಗಿ ಒಪ್ಪಲು ಅನುಮಾನವುಂಟಾಗುತ್ತದೆ. ಇನ್ನು,

ಗುಣವರ್ಮಂ ಸತ್ಕವಿತಾ
ಗುಣಮುಂ ಭವ್ಯತ್ವಗುಣಮುಮಾತ್ಮಯಶೋರ।
ಕ್ಷಣಮೆನೆ ಮೆಱೆದು ಪೆಸರಿಂ
ಪ್ರಣೂತಮೆನೆ ಪೇೞ್ದು ನೇಮಿನಾಥಾನ್ವಯಮಂ॥[೧೧೬]

ಎಂಬ ಪದ್ಯದಿಂದ ಗುಣವರ್ಮನು ಉದಾತ್ತಕವಿ, ಆದರ್ಶಭವ್ಯನೆಂದು ವೇದ್ಯವಾಗುತ್ತದೆ. ಇಲ್ಲಿಯ 'ಆತ್ಮಯಶೋರಕ್ಷಣಂ', ಆಚಣ್ಣ ಹೇಳುವ 'ಉದಾತ್ತಯಶಂ ಗುಣವರ್ಮಂ'[೧೧೭] ಎಂಬಿವು ಈತನ ಕೀರ್ತಿಯನ್ನು ಉಗ್ಗಡಿಸುತ್ತವೆ.[೧೧೮]

ಗುಣವರ್ಮನ ಕೃತಿಸಂಖ್ಯೆ ಇನ್ನೂ ನಿರ್ದಿಷ್ಟಗೊಂಡಿಲ್ಲ. ಕಡಪಾ ಜಿಲ್ಲೆಯ ದಾನವುಲಪಾಡು ಗ್ರಾಮದಲ್ಲಿ ಮಿತಿನಿರ್ದೇಶನವಿಲ್ಲದ ಒಂದು ಶಿಲಾಶಾಸನವಿದೆ. ಅದರ ವಸ್ತು ಶ್ರೀವಿಜಯ ದಂಡನಾಯಕನೆಂಬವನ ಗುಣಕೀರ್ತನೆ. ಅಲ್ಲಿ ಬರುವ 'ವಸುಧಾಂ ಇಂದ್ರಶಾಸನಾತ್ ಸಂರಕ್ಷನ್' ಎಂಬ ವಾಕ್ಯ, ಈ ಶಾಸನದ ಕಾಲ ರಾಷ್ಟ್ರಕೂಟ ಇಂದ್ರ IIIನ ಸಮಯ, ಎಂದರೆ ಕ್ರಿ.ಶ. ೯೧೫ ಎಂಬ ಅಭಿಪ್ರಾಯಕ್ಕೆ

---

೧೧೪. ಕಾ.ಸಾ.ಪು. ೨೨೪
ಶಬ್ದಮಣಿದರ್ಪಣದಲ್ಲಿ-

"ಎನಿತ್ತೆನಿತ್ತಂಬುಜಪತ್ರನೇತ್ರೆಯಾ
ಘನಸ್ತನಂಗಳ್ ಬಳೆಗುಂ ಕಿರಾತೆಯಾ।
ಅನಿತ್ತನಿತ್ತಂ ವನದೊಳ್ ವನೇಚರಂ
ತನತ್ತು ಬಿಲ್ಲಾನದನಂತೆ ಕೀಸುವಂ॥

ವೋಲ್ ಪರಮಾದಲ್ಲಿಯುಂ ವಿಕಲ್ಪದಿಂ ಹ್ರಸ್ವಕ್ಕೆ ದೀರ್ಘಮುಂಟು-
ಈಂದ ಪುಲಿಯಾವೊಲಿರ್ದಳೆಂದು ಗುಣವರ್ಮನ ಹರಿವಂಶ ಪ್ರಯೋಗಂ"

ಎಂಬ ಭಾಗವಿದ್ದು ಇಲ್ಲಿ ಎರಡನೆಯ ಪ್ರಯೋಗಕ್ಕೆ ಹೇಳಿದ 'ಹರಿವಂಶ' ಎಂಬ ಆಕರವನ್ನು ಅಭಿನವವಾದಿ ವಿದ್ಯಾನಂದನು ಮೊದಲನೆಯ ಪ್ರಯೋಗಕ್ಕೂ ಭ್ರಾಂತಿಸಿಕೊಂಡಿರಬಹುದು ಎನ್ನುತ್ತಾರೆ. ತೀ.ನಂ.ಶ್ರೀ. ಅವರು. (ಸಮಾಲೋಕನ ಪು. ೧೬೮)

೧೧೫. ಕದಂಬ ಮೂಲಪುರುಷನ ಮಯೂರಶರ್ಮ, ಮಯೂರವರ್ಮ ಎಂಬ ಹೆಸರುಗಳನ್ನೂ, ಛಂದೋಂಬುಧಿಯ ನಾಗವರ್ಮನು ತನ್ನನ್ನು 'ಕುಂತೀಪುತ್ರಂ ಪೊಣರ್ದರಣದೊಳ್' ಎಂದು ಹೇಳಿಕೊಂಡಿರುವುದನ್ನೂ ನೆನಪಿಸಿಕೊಳ್ಳಬಹುದು.

೧೧೬. ಪಾ. ಪುರಾಣ ೧-೫೭

೧೧೭. ಕ.ಕ.ಚ. ಪು. ೩೪೯

೧೧೮. ಗುಣವರ್ಮಾದಿ ಕರ್ಣಾಟ ಕವೀನಾಂ ಸೂಕ್ತಿಸಂಚಯಃ ।ವಾಣೀ ವಿಲಾಸಂ ಸಂದೇಯಾತ್ ರಸಿಕಾನಂದ ದಾಯಿನಂ॥ (ಶೃಂಗಾರಾರ್ಣವ ಚಂದ್ರಿಕಾ- ವಿಜಯವರ್ಣಿ ೧-೭ [ಪ್ರಶಸ್ತಿ ಸಂಗ್ರಹ ಪು. ೭೪]) ಈ ಗುಣವರ್ಮನು ಪ್ರಥಮನೋ ದ್ವಿತೀಯನೋ ಸ್ಪಷ್ಟವಾಗುವುದಿಲ್ಲ.

ಎಡೆ ನೀಡಿದೆ. ಇಲ್ಲಿ ಶ್ರೀವಿಜಯನನ್ನು ಅತಿರಥ, ಅನುಪಮಕವಿ, ಅಜಿವಿಂಗೋಜ ಎಂದು ಮುಂತಾಗಿ ೧೧ ಪದ್ಯಗಳಲ್ಲಿ (೮ ಕನ್ನಡ+೩ ಸಂಸ್ಕೃತ) ವರ್ಣಿಸಿ, 'ಅನುಪಮ ಕವಿಯ ಸೇನಭೋವಂ ಗುಣವರ್ಮಂ ಬರೆದೊಂ' ಎಂದು ಹೇಳಿ ಶಾಸನ ಕೊನೆಗೊಳ್ಳುತ್ತದೆ. ಈ ಗುಣವರ್ಮನು ಶೂದ್ರಕದ ಕರ್ತೃವೆಂದು ಟಿ.ಟಿ. ಶರ್ಮರ ಮತ.[೧೧೯] ಈ ಶಾಸನಪದ್ಯಗಳಲ್ಲಿ ಶೂದ್ರಕದ ಗುಣವರ್ಮನ ಮಟ್ಟದ ಪ್ರತಿಭೆ ಪ್ರಜ್ವಲಿಸುತ್ತಿದ್ದರೂ ಕೇವಲ ನಾಮಸಾಮ್ಯದ ಆಧಾರದಿಂದ ಇಬ್ಬರನ್ನೂ ತಳುಕು ಹಾಕುವುದು ಅವಸರದ ನಿರ್ಣಯವೆನಿಸುವ ಕಾರಣ, ಈ ಹಿಂದೆ 'ಭುವನೈಕವೀರ' ಬಿರುದನ್ನು ತಡೆ ಹಿಡಿಯದಂತೆ ಇಲ್ಲಿ ಸೇನಬೋವ ಗುಣವರ್ಮನನ್ನು ಈಗಿನ ಮಟ್ಟಿಗೆ ತಡೆಹಿಡಿಯುವುದು ಲೇಸು.

ನಾಗವರ್ಮನ ಕಾವ್ಯಾವಲೋಕನದ ಉದಾಹೃತ ಪದ್ಯಗಳಲ್ಲಿ,

ಪ್ರಣುತಗುಣರೆನಿಪ ವಿಬುಧಾ
ಗ್ರಣಿಗಳ್ ಕೆಯ್ಕೊಂಡು ಪೊಗಳೆ ಸಲೆ ನೆಗೞ್ದುವು ಧಾ।
ರಿಣಿಯೊಳಗೆ ನಾಗವರ್ಮನ
ಗುಣವರ್ಮನ ಶಂಖವರ್ಮನಧ್ವಾನಂಗಳ್॥[೧೨೦]

ಎಂಬುದೂ ಒಂದು. ಇದು ಯಾವುದೋ ಒಂದು ಪ್ರಾಚೀನ ಕಾವ್ಯದ ಪೀಠಿಕಾ ಪ್ರಕರಣಕ್ಕೆ ಸಂಬಂಧಪಟ್ಟ ಕವಿಸ್ತುತಿಪರ ಪದ್ಯವಾಗಿರಬಹುದು. ಇಲ್ಲಿಯ 'ಅಧ್ವಾನ' ಎಂಬ ಪದವನ್ನು ಗಮನಿಸಿ 'Nagavarma Gunavarma and Sankhavarma were the leaders of famous schools (of composition or grammar) in Kannada"[೧೨೧] ಎಂದು ನರಸಿಂಹಾಚಾರ್ ಅವರು ಅಭಿಪ್ರಾಯ ವ್ಯಕ್ತಪಡಿಸುತ್ತಾರೆ. ಸಂಸ್ಕೃತದ ಹಾಗೆ ಕನ್ನಡದಲ್ಲಿಯೂ ಇರಬಹುದಾದ ಅಲಂಕಾರಪ್ರಸ್ಥಾನ ಅಥವಾ ವ್ಯಾಕರಣಪಂಥಗಳ ಪ್ರವರ್ತಕರಾದ ಈ ಮೂವರಲ್ಲಿ ಪ್ರಸ್ತುತ ಗುಣವರ್ಮನೂ ಒಬ್ಬನೆಂದು ಇವರ ಮಾತಿನ ಒಳದನಿ. ಶಾಸ್ತ್ರಪ್ರಪಂಚವನ್ನು ಸುತ್ತಿಕೊಂಡಿರುವ 'ನಾಗವರ್ಮ' ಹೆಸರಿನೊಂದಿಗೆ ಹೇಳಲಾದ ಈ ಗುಣವರ್ಮ ಶಂಖವರ್ಮರು[೧೨೨] ಶಾಸ್ತ್ರಕ್ಷೇತ್ರದಲ್ಲಿ ಕೃಷಿಗೆಯ್ದಿರಬಹುದಾದರೂ ಇದಕ್ಕೆ ನಿಚ್ಚಳ ನಿದರ್ಶನಗಳು ಬೇಕು.

ಹಿಂದೆ ಹೇಳಿದ ಭುವನೈಕವೀರ ಮತ್ತು ಶೂದ್ರಕಗಳು ಬೇರೆ ಬೇರೆಯಾಗಿದ್ದ ಪಕ್ಷದಲ್ಲಿ, ಹರಿವಂಶದ ಆಕರವನ್ನು ಕಾವ್ಯಸಾರಕಾರನು ತಪ್ಪಿ ಹೇಳಿದ್ದ ಪಕ್ಷದಲ್ಲಿ 'ಎನಿತ್ತೆನಿತ್ತಂಬುಜಪತ್ರನೇತ್ರೆಯಾ' ಭುವನೈಕವೀರದ ಪದ್ಯವೆಂದಿಟ್ಟುಕೊಳ್ಳಬೇಕಾಗುತ್ತದೆ. ಇದು ಹೆಚ್ಚು ಜನಪ್ರಿಯವಾದ ಪದ್ಯ. ಇದರ ಅಪರೂಪ ಛಂದಸ್ಸು, ಬಿಲ್ಲಾನದಂ-ತನತ್ತು-ಕೀಸುಗುಂ ಎಂಬ ಅಪೂರ್ವಪ್ರಯೋಗಗಳು, ಎನಿತ್ತೆನಿತ್ತು-ಅನಿತ್ತನಿತ್ತು ಎಂಬ ಮನಸೆಳೆವ ಪ್ರಾಸ, ಇವುಗಳಿಗೆ ಮಿಗಿಲಾಗಿ ಕ್ರಮೇಣ ಹ್ರಾಸಗೊಳ್ಳುತ್ತಿರುವ ಶಬರನ ಶಕ್ತಿಯನ್ನು ಹೇಳುವ ಧ್ವನಿಪೂರ್ಣ ರೀತಿ-ಇವು ಗುಣವರ್ಮನ ಕಾವ್ಯಸಾಮರ್ಥ್ಯವನ್ನು ಪ್ರತಿನಿಧಿಸುತ್ತವೆ. ಒಂದು ಕಡೆ ಶಬರಿಯ ಸ್ತನಯುಗ್ಮ ಸ್ಥೂಲಗೊಳ್ಳುತ್ತಿರುವ, ಅದೇ ಕ್ರಮದಲ್ಲಿ ಇನ್ನೊಂದು ಕಡೆ ಶಬರನ ಚಾಪದಂಡ ಕೃಶಗೊಳ್ಳುತ್ತಿರುವ ಎರಡು

---

೧೧೯. MASI. No. 13 P. 3

೧೨೦. ಕಾ.ಲೋ. ೧೮೫

೧೨೧. ಕಾ.ಲೋ. ಮುನ್ನುಡಿ (೧೯೬೭)ಪು. ೬೮

೧೨೨. ಈತನು ಕಲಚೂರಿ ವಂಶದ ರಾಜಕುಮಾರ ಶಂಖವರ್ಮನಾಗಿರಬಹುದೆಂದು ಆರ್. ನರಸಿಂಹಾಚಾರ್ ಅವರ ಮತ. (ಕಾ.ಲೋ. ಮುನ್ನುಡಿ ಪು. ೬೯)

ಸುಂದರ ಚಿತ್ರಗಳು ಕಣ್ಣಿಗೆ ಕಟ್ಟುತ್ತವೆ. ಅಸಹಾಯಕ ಸ್ಥಿತಿಯಲ್ಲಿ ನಿಂತ ಕಿರಾತನು ಹಸ್ತಕೋದಂಡವನ್ನು ಕೆತ್ತುವ ಈ ದೃಶ್ಯ, ಹಸ್ತಿದಂತದಲ್ಲಿ ಬಿಡಿಸಿದ ಸುಂದರಪ್ರತಿಮೆಯಂತೆ ಶೋಭಿಸುತ್ತದೆ.[೧೨೩]

ಹೀಗೆ ದಾನವುಲಪಾಡು ಶಾಸನ, ಅಲಂಕಾರಪ್ರಸ್ಥಾನ ಇಲ್ಲವೆ ವ್ಯಾಕರಣಪಂಥ, ಭುವನೈಕವೀರಗಳ ಬಗೆಗೆ ಸಂದೇಹವಿಟ್ಟುಕೊಳ್ಳಬೇಕಾದ ನಾವು, ಹರಿವಂಶ ಮತ್ತು ಶೂದ್ರಕಗಳು ಗುಣವರ್ಮನ ಕೃತಿಗಳೆಂದು ನಿಸ್ಸಂದೇಹವಾಗಿ ಹೇಳಬಹುದು. ಇವುಗಳಲ್ಲಿ ಹರಿವಂಶದ ಬಗ್ಗೆ ಸಿಗುವ ಮಾಹಿತಿ ಇಷ್ಟು:

"ಎನಗನುಕೂಲಮಕ್ಕೆ ಗುಣವರ್ಮನ ಜಾಣ್ನುಡಿ ಪಂಪನಿಂಪು..... ಈ ಕವಿಗಳಲ್ತೆ ಜಿನೇಂದ್ರ ಪುರಾಣ ಕರ್ತೃಗಳ್"[೧೨೪] ಎಂಬ ಜನ್ನನ ಮಾತು ಜಿನೇಂದ್ರಪುರಾಣ ಕರ್ತೃಗಳಲ್ಲಿ ಈ ಗುಣವರ್ಮನೂ ಒಬ್ಬನೆಂದು ಬೆರಳುಮಾಡಿ ತೋರಿಸುತ್ತದೆ. ಈ ಪ್ರಸಂಗದಲ್ಲಿ "ಗುಣವರ್ಮಂ ಮೆಱೆದಂ ಪೇೞ್ದು ನೇಮಿನಾಥಾನ್ವಯಮಂ"[೧೨೫], "ಈಂದ ಪುಲಿಯಾವೊಲಿರ್ದಳೆಂದು ಗುಣವರ್ಮನ ಹರಿವಂಶ ಪ್ರಯೋಗಂ"[೧೨೬] ಎಂದು ಹೇಳುವ ಪಾರ್ಶ್ವಪಂಡಿತ ಮತ್ತು ಕೇಶಿರಾಜರು ಈತನ ಜಿನೇಂದ್ರಪುರಾಣವೆಂಬುದು "ಹರಿವಂಶ" ಕೃತಿಯೆಂದು ಖಚಿತಪಡಿಸುತ್ತಾರೆ.

ಹಿಂದುಗಳು ಕ್ಷತ್ರಿಯವರ್ಣದಲ್ಲಿ ಸೂರ್ಯ-ಚಂದ್ರ ಎಂಬ ಎರಡು ವಂಶಗಳನ್ನು ಕಲ್ಪಿಸಿದರೆ, ಜೈನರು ಪುರು, ನಾಥ, ಉಗ್ರ, ಹರಿ, ಕುರು ಎಂಬ ಐದು ವಂಶಗಳನ್ನು ಕಲ್ಪಿಸುವರು. ಕ್ಷತ್ರಿಯರಾದ ೨೪ ತೀರ್ಥಂಕರರು ಈ ಐದರಲ್ಲಿ ಒಂದು ವಂಶಕ್ಕೆ ಸಂಬಂಧಿಸಿರುವರು. ಇವರಲ್ಲಿ ೨೨ನೆಯ ನೇಮಿತೀರ್ಥಂಕರನು ಹರಿವಂಶದಲ್ಲಿ ಹುಟ್ಟಿದ ಕಾರಣ ಈತನನ್ನು ಕುರಿತ ಪುರಾಣಕ್ಕೆ 'ಹರಿವಂಶ ಪುರಾಣ'ವೆಂದು ಹೆಸರು. ಕನ್ನಡದಲ್ಲಿ ಈ ಆದಿಗುಣವರ್ಮನ ಹರಿವಂಶವಲ್ಲದೆ ಚಾವುಂಡರಾಯನ ತ್ರಿಷಷ್ಟಿಲಕ್ಷಣ ಮಹಾಪುರಾಣಾಂತರ್ಗತ ನೇಮಿನಾಥ ಪುರಾಣ, ಕರ್ಣಪಾರ್ಯ, ಮಹಾಬಲ, ನೇಮಿಚಂದ್ರರ ನೇಮಿನಾಥಪುರಾಣ, ಬಂಧುವರ್ಮನ ಹರಿವಂಶಾಭ್ಯುದಯ, ಮಂಗರಸನ ನೇಮಿಜಿನೇಶ ಸಂಗತಿಗಳು ಈ ಸಾಲಿನಲ್ಲಿ ನಿಲ್ಲುತ್ತವೆ. ಹರಿವಂಶ ಕುರುವಂಶಗಳನ್ನು ಮೇಳವಿಸಿಕೊಂಡು ನಿಂತ ಕಥೆಯನ್ನು ವಸ್ತುವನ್ನಾಗಿಟ್ಟುಕೊಂಡು, ಗುಣವರ್ಮನು ಪುರಾಣವನ್ನು ಬರೆದಿದ್ದು ಕೃತಿಯ ಹೆಸರು ಮಾತ್ರ ನೇಮಿನಾಥಪುರಾಣವಲ್ಲ, ಹರಿವಂಶ ಅಥವಾ ಹರಿವಂಶಪುರಾಣ. ಕೃತಿ ಉಪಲಬ್ಧವಿಲ್ಲದ ಮೂಲಕ ಈತನ ಕೈಯಲ್ಲಿ ಮೂಲಕಥೆ ಯಾವ ಸ್ವರೂಪ ಪಡೆಯಿತೆಂಬುದನ್ನು ಅರಿಯಲು, ಉಪಲಬ್ಧ ಬಿಡಿ ಉದಾಹರಣೆಗಳನ್ನು ಮಾತ್ರ ಅವಲಂಬಿಸಬೇಕಾಗುತ್ತದೆ.

'ಎನಿತ್ತೆನಿತ್ತಂಬುಜಪತ್ರನೇತ್ರಯಾ' ಎಂಬ ಚಿನ್ನದಂಥ ಪದ್ಯಕ್ಕೆ ಅಭಿನವವಾದಿವಿದ್ಯಾನಂದನು ಹೇಳುವ 'ಹರಿವಂಶ'ದ ಆಕರ ಮಿಕ್ಕ ಉಲ್ಲೇಖಗಳಿಂದ ಸಂದೇಹದ ಜೋಲಿ ಹೊಡೆಯುವುದನ್ನು ಹಿಂದೆ ನೋಡಿದ್ದೇವೆ. ಇದನ್ನು ಬಿಟ್ಟರೂ ಇಂತಹದೇ ಇನ್ನೊಂದು ಪದ್ಯ ಕ.ಭಾ. ಭೂಷಣ,[೧೨೭] ಶಬ್ದಮಣಿದರ್ಪಣ,[೧೨೮] ರಸರತ್ನಾಕರ[೧೨೯]ಗಳಲ್ಲಿ ಕಂಡುಬರುತ್ತದೆ:

---

೧೨೩. 'ಎನಿತ್ತೆನಿತ್ತಂಬುಜಪತ್ರನೇತ್ರಯಾ' (ಸಮಾಲೋಕನ-೧೪೯)-ತೀ.ನಂ.ಶ್ರೀ. ನೋಡಿರಿ. ಈ ಪದ್ಯಕ್ಕೆ ತೀ.ನಂ.ಶ್ರೀ. ಮಾಡಿದ ಅರ್ಥ ಅಸಮಂಜವೆನ್ನುತ್ತ ಎಚ್. ದೇವೀರಪ್ಪನವರು ಬೇರೆ ಅರ್ಥ ಹೇಳಿರುವರು (ಪ್ರ. ಕ. ೫೦-೪ ಪುಟ ೧೨೦) ಸಿ.ಪಿ.ಕೆ. ಅವರು ತೀ.ನಂ.ಶ್ರೀ ಹೇಳುವ ಅರ್ಥವನ್ನು ಒಪ್ಪುತ್ತಾರೆ (ಪ್ರ.ಕ. ೫೧-೨).

೧೨೪. ಅ.ನ.ಪುರಾಣ, (ಕ.ಕ.ಚ. ಪು. ೩೭೯)

೧೨೫. ಪಾ.ನಾ. ಪುರಾಣ. ೧-೫೭

೧೨೬. ಶ.ಮ. ದರ್ಪಣ ಸೂ. ೧೨೮

೧೨೭. ಕ.ಭಾ.ಭೂ. (ನರಸಿಂಹಾಚಾರ್ ೧೯೦೩ ಸೂ. ೧೮೭)

೧೨೮. ಶ.ಮ.ದರ್ಪಣ (ಸೂ. ೮೩)

೧೨೯. ರ. ರತ್ನಾಕರ ೨-೧೦೯

ಮದಗಜವೆರಡಱ ಬಾಲದ।
ಮೊದಲಂ ಪಿಡಿದೆತ್ತಿಯೊತ್ತಿ ನುರ್ಗುತ್ತಿರೆಯಾ।
ಸ್ಯದಿನುಗುವ ರಕ್ತಮುರಿಯೆನೆ।
ತಿದಿಯೊತ್ತುವ ಕಮ್ಮಱಂಬೊಲಿರ್ದಂ ಭೀಮಂ॥

ಕ.ಭಾ. ಭೂಷಣದಲ್ಲಿ ಇದಕ್ಕೆ 'ತಥಾ ಚ ಭಾರತೇ ಹಂಪಸ್ಯ ಪ್ರಯೋಗಃ'[೧೩೦] ಎಂದು ಆಕರ ಹೇಳಿರುವುದರಿಂದ ಇದು ಪಂಪಭಾರತದ ಪದ್ಯವೆನಿಸುತ್ತದೆ. ಆದರೆ ಈಗ ಲಭಿಸುವ ಪಂಪಭಾರತದ ಒಂದೂ ಹಸ್ತಪ್ರತಿಯಲ್ಲಿ ಇದು ಕಾಣದು. ಒಮ್ಮೆ ಓದಿದರೆ ಸಾಕು, ನಿರಂತರ ನೆನಪಿನಲ್ಲಿ ನಿಲ್ಲುವ ಈ ಪದ್ಯವನ್ನು ಲಿಪಿಕಾರ ಬಿಡಲಾರ. ಲಿಪಿಕಾರ ಬಿಟ್ಟರೂ ಸಹೃದಯರ ಸ್ಮರಣೆ ಬಿಡಲು ಶಕ್ಯವಿಲ್ಲ. ಆದುದರಿಂದ ಇದು ಪಂಪಭಾರತದ ಪದ್ಯವಲ್ಲವೆನಿಸುತ್ತದೆ. ಈ ಪದ್ಯದ ಅನುಕರಣೆಯೆನಿಸುವ ಎರಡು ಪದ್ಯಗಳು, ತರುವಾಯದ ಕರ್ಣಪಾರ್ಯ, ಮಂಗರಸರಲ್ಲಿ ಹೀಗೆ ಗೋಚರಿಸುತ್ತವೆ:

ಕರಿಯುಗದ ಪುಚ್ಛಯುಗಮಂ
ಕರಯುಗದಿಂದೊತ್ತಿ ಪಿಡಿಯೆ ತನ್ಮುಖಯುಗದಿಂ।
ದರುಣಜಲಮುಣ್ಮೆ ತಿದಿಗಳ
ನಿರದೊತ್ತುವ ಕಮ್ಮಱಂಬೊಲಿರ್ದಂ ಭೀಮಂ॥[೧೩೧]

ಮದಗಜ ಮಸ್ತಕವಡಿಯಾಗಲಾಮೇಗ।ಣಧಟರುಗಳ ಸದೆಬಡೆವ।
ಗದೆಯೆ ಕೊಡತಿಯಾಗಲು ಭೀಮಸೇನನೊ। ಪ್ಪಿದನಾ ಕಮ್ಮಾರನಂತೆ॥[೧೩೨]

ಈ ಪದ್ಯಗಳ ಭಾವಸಾಮ್ಯವನ್ನು ಗಮನಿಸಿದರೆ ಈ 'ಕಮ್ಮಾರನ ಕಲ್ಪನೆ' ಜೈನಭಾರತ, ಅದರಲ್ಲಿಯೂ ಹರಿವಂಶ ಕಾವ್ಯಪರಂಪರೆಗೆ ಸಂಬಂಧಿಸಿರಬೇಕೆನಿಸುತ್ತದೆ.[೧೩೩] ಅದಕ್ಕಾಗಿ 'ಮದಗಜವೆರಡರ......' ಪದ್ಯ ಗುಣವರ್ಮನ ಹರಿವಂಶಕ್ಕೆ ಸಂಬಂಧಿಸಿರುವ ಸಂಭವವಿದೆ.[೧೩೪] ಆದರೆ ಭೀಮನ ಭವ್ಯವರ್ಣನೆಯನ್ನು ಗಮನಿಸಿದ ಭಾಷಾಭೂಷಣದ ಲಿಪಿಕಾರನೊಬ್ಬನು ಇದನ್ನು ಭ್ರಾಂತಿಯಿಂದ 'ಭಾರತೇ ಹಂಪಸ್ಯ ಪ್ರಯೋಗಃ' ಎಂದು ಪಂಪನ ತಲೆಗೆ ಕಟ್ಟಿರಬಹುದು.[೧೩೫] ಹೀಗಾಗಿ ಇದು ಪಂಪನ ವಿಕ್ರಮಾರ್ಜುನ ವಿಜಯದ ಪದ್ಯವಾಗಿರದೆ,

---

೧೩೦. ಕ.ಭಾ.ಭೂ. (ನರಸಿಂಹಾಚಾರ್ ೧೯೦೩) ಸೂ. ೧೮೭

೧೩೧. ನೇ.ನಾ.ಪು. (ಕರ್ಣಪಾರ್ಯ) ೧೨-೧೫೮

ಭಾಷಾಭೂಷಣದ ಆರ್. ನರಸಿಂಹಾಚಾರ್ ಆವೃತ್ತಿಯಲ್ಲಿ (ಸೂ. ೧೮೭) 'ಇದರ್ಕೆ ಹಿರಿಯ ಹಂಪೆ ದೇವಂಗಳ ಪ್ರಯೋಗಂ' ಎಂದು ರೈಸ್ ಆವೃತ್ತಿಯಲ್ಲಿ (ಸೂ. ೧೯೨) 'ಆಸ್ಯ ಗುರು ಹಂಪದೇವೋಕ್ತ ಪ್ರಯೋಗಂ' ಎಂದು ಹೇಳಿ ಕೆಳಗೆ ಈ 'ಕರಿಯುಗದ ಪುಚ್ಛ......' ಎಂಬ ಕರ್ಣಪಾರ್ಯನ ಪದ್ಯ ಕೊಡಲಾಗಿದೆ. ಇಲ್ಲಿ ಹಿರಿಯ ಹಂಪೆದೇವ, ಗುರುಹಂಪೆದೇವ ಮತ್ತು ಕರ್ಣಪಾರ್ಯರ ಸಂಬಂಧ ಸ್ಪಷ್ಟವಾಗುವುದಿಲ್ಲ.

೧೩೨. ನೇ.ಜಿ.ಸಂ. ೩೦-೨೦ ಪು. ೩೪೭

೧೩೩. "ವ್ಯಾಸಭಾರತವನ್ನು ನೋಡಿ ಮಾಡಿದ ಭೀಮ ವರ್ಣನೆಯ 'ಮದಗಜವೆರಡರ......' ಎಂಬ ಪದ್ಯವು ......" ಎಂದು ಮುಂತಾಗಿ ಎಸ್. ತಿಮ್ಮಪ್ಪಶಾಸ್ತ್ರಿಗಳು (ಸಾ.ಪ. ೨-೨ ಪು. ೧೬೫) ಹೇಳುವರು. ಈ ಭಾವ ವ್ಯಾಸಭಾರತದ ಯಾವ ಮೂಲೆಯಲ್ಲಿದೆ ಹುಡುಕಬೇಕು.

೧೩೪. ನೇ.ನಾ.ಪು. (ಕರ್ಣಪಾರ್ಯ) ಮುನ್ನುಡಿ ಪು. vi ಅ.ಟಿ. ನೋಡಿರಿ.

೧೩೫. 'ತಥಾ ಚ ಭಾರತೇ ಹಂಪಸ್ಯ ಪ್ರಯೋಗಃ' ಎಂಬ ಶೀರ್ಷಿಕೆಯೂ 'ಮದಗಜವೆರಡರಬಾಲ' ಎಂಬ ಪದ್ಯವೂ ಒಂದು ಪ್ರತಿಯಲ್ಲಿಲ್ಲ ಎಂದು ಆರ್. ನರಸಿಂಹಾಚಾರ್ ಹೇಳಿದುದನ್ನು (ಕ.ಭಾ. ಭೂ.ಸೂ. ೧೮೭ ಅ.ಟಿ.) ಇಲ್ಲಿ ಸ್ಮರಿಸಬೇಕು.

ಆದಿಗುಣವರ್ಮನ ಹರಿವಂಶದ ಪದ್ಯವೆಂದು ಈಗಿನ ಮಟ್ಟಿಗೆ ಇಟ್ಟುಕೊಳ್ಳಬಹುದು. ಭೀಮಸೇನನ ಶಕ್ತಿಯ ಪರಮಾವಧಿ ನಿದರ್ಶನವೆನಿಸಿದ ಈ ಪದ್ಯ ಗುಣವರ್ಮನ ಪ್ರಾತಿಭಶಕ್ತಿಗೆ ನಿದರ್ಶನ. 'ತಿದಿಯೊತ್ತುವ ಕಮ್ಮಱ'ನ ಭವ್ಯಕಲ್ಪನೆಯಲ್ಲಿ ದೇಶಿ ಆವಿಷ್ಕಾರಗೊಂಡು ಭೂಮದೃಶ್ಯವೊಂದು ಕಣ್ಣೆದುರು ನಿಲ್ಲುತ್ತದೆ. ಕನ್ನಡದ ಶಾಸ್ತ್ರ ಮತ್ತು ಸಂಕಲನ ಗ್ರಂಥಗಳಲ್ಲಿ ಉದ್ಧೃತಗೊಳ್ಳುವುದಿರಲಿ, ಹರಿವಂಶ ಪರಂಪರೆಯಲ್ಲಿ ಹುಟ್ಟಿದ ಜೈನಪುರಾಣಗಳ ಮೇಲೆ (ನೇಮಿನಾಥಪುರಾಣ-ಕರ್ಣಪಾರ್ಯ, ನೇಮಿಜಿನೇಶಸಂಗತಿ-ಮಂಗರಸ) ಯಾವತ್ತೂ ಪ್ರಭಾವ ಬೀರುತ್ತ ಸಾಗಿಬಂದಿದೆ. ಭೀಮಶಕ್ತಿಯಿಂದ ಜರ್ಜರಿತನಾದ ದುಶ್ಶಾಸನನ ಸ್ಥಿತಿಯನ್ನು ವರ್ಣಿಸುತ್ತ "ಉಸಿರೊತ್ತಿಂ ತಿದಿಯಂತಿರೊತ್ತಿದ ಬಸಿಱ್"[೧೩೬] ಎಂದು ಹೇಳಿದ ಪಂಪನ ಮಾತಿನಲ್ಲಿಯೂ ಈ ಭಾವ ಪ್ರತಿಧ್ವನಿಸುತ್ತದೆ.

ಮೇಲೆ ಹೇಳಿದ 'ಎನಿತ್ತೆನಿತ್ತಂಬುಜಪತ್ರನೇತ್ರೆಯಾ'ಮತ್ತು 'ಮದಗಜವೆರಡರ ಬಾಲ' ಎಂಬ ಪದ್ಯಗಳ ಆಕರದ ಬಗೆಗೆ ಸ್ವಲ್ಪ ಸಂದೇಹ ಸುಳಿಯುತ್ತಿದ್ದರೂ 'ಗುಣವರ್ಮನ ಹರಿವಂಶದ ಪ್ರಯೋಗಂ ' ಎನ್ನುತ್ತ ಕೇಶಿರಾಜನು ಹೇಳುವ 'ಈಂದ ಪುಲಿಯಾವೊಲಿರ್ದಳ್'[೧೩೭] ಎಂಬ ಇನ್ನೊಂದು ತುಣುಕು ಮಾತ್ರ ಹರಿವಂಶದ ಉಜ್ವಲ ಅವಶೇಷವೆಂಬುದು ಸತ್ಯ. ಈ ಒಂದು ಸಣ್ಣ ಮಾತಿನ ಮೂಲಕ, ಹಸಿವು ಮತ್ತು ವತ್ಸರಕ್ಷಣೆಗಳ ಮಧ್ಯನಿಂತ ಹುಲಿಯ ಕ್ಷುಬ್ಧಮನಃಸ್ಥಿತಿಯನ್ನು ಕೆರಳಿದ ಸ್ತ್ರೀಯೊಬ್ಬಳಲ್ಲಿ ಕಲ್ಪಿಸಿದುದು ಅಭೂತಪೂರ್ವವಾಗಿದೆ. ಮುಂದಣ ಕಾವ್ಯಗಳಲ್ಲಿ ಬರುವ 'ಪೇಂಕುಳಿಗೊಂಡ ಸಿಂಹ'[೧೩೮], ಮಱಸೊಂದಿದ ಪುಲಿಯನಾಗಳಿನಿಸಂ ಪೋಲ್ತಂ'[೧೩೯] ಇತ್ಯಾದಿ ಹೇಳಿಕೆಗಳು ಇದೇ ಸಾಲಿನಲ್ಲಿ ನಿಲ್ಲುತ್ತವೆ.

ಇದೆಲ್ಲವನ್ನು ಗಮನಿಸಿದರೆ ಧಾರ್ಮಿಕ ಚರ್ಚೆಯಿಂದ ಶಾಸ್ತ್ರಕಾವ್ಯವೆನಿಸಬಹುದಿದ್ದ ಹರಿವಂಶ, ಗುಣವರ್ಮನ ಹದಗೊಂಡ ಹಸ್ತದಲ್ಲಿ ಉತ್ಕೃಷ್ಟ ಕಾವ್ಯಸಿದ್ಧಿಯನ್ನು ಪಡೆದಂತಿದೆ. ಅದಕ್ಕಾಗಿ "ನೆಗಱ್ದಾದಿಪುರಾಣದೊಳ್ ಅಱಿವುದು ಕಾವ್ಯಧರ್ಮಮಂ ಧರ್ಮಮುಮಂ"[೧೪೦] ಎಂಬ ಪಂಪನ ಆದರ್ಶಕ್ಕೆ ಈ ಕಾವ್ಯ ಪ್ರಾಚೀನಪ್ರಮಾಣವೆನಿಸಿದ್ದರೆ ಅಚ್ಚರಿಯೇನಲ್ಲ.

ಈ ಕೃತಿಯ ಸ್ವರೂಪವನ್ನು ಕುರಿತು "ಇದು ಪದ್ಯಕಾವ್ಯವೋ ಚಂಪೂಕಾವ್ಯವೋ(ಗದ್ಯಮಿಶ್ರಿತವೋ) ತಿಳಿದುಬರುವುದಿಲ್ಲ" ಎಂದು ವೆಂಕಟರಾಯಾಚಾರ್ ಹೇಳುವರು.[೧೪೧] 'ಮದಗಜವೆರಡರ......' ಮತ್ತು 'ಎನಿತ್ತೆನಿತ್ತಂಬುಜಪತ್ರ.......' ಎಂಬ ಪದ್ಯಗಳನ್ನೊಳಗೊಂಡಿರಬಹುದಾದ ಈ ಕೃತಿಯ 'ಈಂದ ಪುಲಿಯಾವೊಲಿರ್ದಳ್' ಎಂಬುದು ಗದ್ಯವಾಗಿದ್ದರೆ ಶೂದ್ರಕದಂತೆ ಹರಿವಂಶವೂ ಚಂಪೂ ಕೃತಿಯೆನಿಸುತ್ತದೆ.

ಗುಣವರ್ಮನ ಇನ್ನೊಂದು ಕಾವ್ಯ **ಶೂದ್ರಕ**. ಕಥಾನಾಯಾಕನದಾಗಿರುವ ಈ ಹೆಸರು ಒಡೆಯದ ಒಗಟು. ವಿಭಿನ್ನ ಹೇಳಿಕೆಗಳಿಂದಾಗಿ ಈತನು ಐತಿಹಾಸಿಕ, ಪೌರಾಣಿಕ, ಔತ್ತರೇಯ-ದಾಕ್ಷಿಣಾತ್ಯ, ರಾಜ-ಕವಿ-

---

೧೩೬. ಪಂ. ಭಾರತ ೧೨-೧೫೧

೧೩೭. ಶ.ಮ.ದ. ಸೂ. ೧೨೮(ಡಿ.ಎಲ್.ಎನ್. ಆವೃತ್ತಿಯಲ್ಲಿ 'ನೊಂದ', ಹೈದರಾಬಾದ ದರ್ಪಣದಲ್ಲ 'ಗೋರಿದ ಪುಲ್ಲೆವೋಲಿರ್ದ್ದಳೆಂದು....' (ಶ.ಮ. ದರ್ಪಣ ಪಾಠಾಂತರಗಳು, ೭೬) ಎಂಬ ಪಾಠಾಂತರಗಳಿವೆ. ನಾನು ಕಣ್ಮುಟ್ಟಿ ಪರೀಕ್ಷಿಸಿದ ಹೈದರಾಬಾದ ಹಸ್ತಪ್ರತಿಯಲ್ಲಿ 'ಗೊಲಿದ ಪುಲ್ಲೆವೊಲಿರ್ದಳೆಂದು' ಎಂಬ ಪಾಠ ಕಂಡುಬಂದಿತು.

೧೩೮. ಪಂ. ಭಾರತ, ೧೧-೪೧ ಗದ್ಯ.

೧೩೯. ಶ.ಮ.ದ. ಸೂ. ೨೫೨

೧೪೦. ಆ. ಪುರಾಣ. ೧-೩೮

೧೪೧. ಒಂದನೆಯ ಗುಣವರ್ಮನ ಕೃತಿಗಳು (ಪ್ರ.ಕ. ೪೫-೩ ಪು. ೪೮)

ರಾಜಕವಿ ಎಂಬ ಅನೇಕ ಸಮಸ್ಯೆಗಳು ಎದ್ದುನಿಂತಿವೆ. ಸಾಲದುದಕ್ಕೆ ಈ ಹೆಸರಿನ ಸುತ್ತ ಕೆಳಗಣ ಹಲವು ಕಥಾಪರಂಪರೆಗಳು ಬೆಳೆದುಬಂದಿವೆ.

೧. ಗುಣಾಢ್ಯನ ಬೃಹತ್ಕಥಾ: ಗುಣಾಢ್ಯನ ಪೈಶಾಚಿಭಾಷೆಯ ಬೃಹತ್ಕಥಾ ಈಗ ಉಪಲಬ್ಧವಿಲ್ಲ. ಇದರ ಪೀಳಿಗೆಯಾದ ಬೃಹತ್ಕಥಾಮಂಜರಿಯ ಶಶಾಂಕವತೀಲಂಬಕದ ಬೇತಾಳ ಪಂಚವಿಶಂತಿ ಭಾಗದಲ್ಲಿ ಶೂದ್ರಕನ ಕಥೆ ಹೀಗೆ ಬರುತ್ತದೆ: ವೀರವರನೆಂಬ ಬ್ರಾಹ್ಮಣನು ಹೆಂಡತಿ ಧರ್ಮವತಿ, ಮಗ ಸತ್ವವರ, ಮಗಳು ವೀರವತಿಯರೊಂದಿಗೆ ಶೋಭಾವತಿ ನಗರಕ್ಕೆ ಬಂದು ಶೂದ್ರಕರಾಜನಲ್ಲಿ ಸೇವೆಗೆ ನಿಂತನು. ಅರಮನೆಯ ಸಿಂಹದ್ವಾರದಲ್ಲಿ ಆಯುಧಪಾಣಿಯಾಗಿ ನಿಲ್ಲುವುದು ಆತನ ನಿತ್ಯ ಕೆಲಸ, ಮಳೆ ಸುರಿವ ಒಂದು ರಾತ್ರಿ ಅರಸನ ಆಜ್ಞೆಯಂತೆ ವೀರವರನು ದೂರದಲ್ಲಿ ಅಳುತ್ತಿದ್ದ ಸ್ತ್ರೀಯ ವಿಚಾರ ತಿಳಿದುಕೊಂಡುಬರಲು ಹೋದನು. ಇಂದಿನಿಂದ ಮೂರನೆಯ ದಿನದಂದು ಮೃತನಾಗುವ ಶೂದ್ರಕರಾಜನ ಅಗಲುವಿಕೆಗಾಗಿ ಭೂದೇವಿ ಅಳುತ್ತಿದ್ದಳು. ಅರಸನ ಪ್ರಾಣವುಳಿಯಬೇಕಾದರೆ ನರಬಲಿ ಅವಶ್ಯವೆಂದು ನುಡಿದ ಭೂದೇವಿಯ ಸೂಚನೆಯನ್ನು ಕೇಳಿ, ವೀರವರನು ತನ್ನ ಇದ್ದೊಬ್ಬ ಮಗನನ್ನು ಚಂಡಿಗೆ ಬಲಿಕೊಟ್ಟನು. ಇದರಿಂದ ಎದೆಯೊಡೆದ ಮಗಳು ಪ್ರಾಣತೆತ್ತಳು. ಹೆಂಡತಿಯೂ ಮರಣವನ್ನಪ್ಪಿದಳು. ಕೊನೆಗೆ ವೀರವರನೂ ತಲೆ ಕಡಿದುಕೊಂಡನು. ತನಗಾಗಿ ನಡೆದ ಈ ದುರಂತ ಘಟನೆಯನ್ನು ಮರೆಯಲ್ಲಿ ನಿಂತು ನೋಡುತ್ತಿದ್ದ ಶೂದ್ರಕನು ನೊಂದು, ಪ್ರಾಣತ್ಯಾಗಕ್ಕೆ ಸಿದ್ಧನಾಗುವನು. ಚಂಡಿ ಪ್ರತ್ಯಕ್ಷಳಾಗಿ, ವೀರವರನ ಕುಟುಂಬವೆಲ್ಲ ಮರುಜೀವ ಪಡೆಯಿತು. ವೀರವರನು ಹೆಂಡಿರು ಮಕ್ಕಳನ್ನು ಮನೆಗೆ ಬಿಟ್ಟು ಬಂದವನೇ ಮತ್ತೆ ಸಿಂಹದ್ವಾರದಲ್ಲಿ ಬಂದುನಿಂತನು. ಶೂದ್ರಕನು ವೀರವರನ ರಾಜನಿಷ್ಠೆ ಮತ್ತು ಕರ್ತವ್ಯಬುದ್ಧಿಗೆ ತಲೆದೂಗುವಷ್ಟರಲ್ಲಿ, ಕೆಲಸಮಯದ ಹಿಂದೆ ಆಳುತ್ತಿದ್ದವಳು ಯಾವುದೋ ಹೆಣ್ಣು ರಾಕ್ಷಸಿ, ಕಣ್ಣಿಗೆ ಬಿದ್ದು ಮಾಯವಾದಳು ಎಂದು ಅರಸನಿಗೆ ಹೇಳಿ ವೀರವರನು ತನ್ನ ಕುಟುಂಬದ ಆತ್ಮಾರ್ಪಣ ಘಟನೆಯನ್ನು ಮುಚ್ಚಿಬಿಟ್ಟನು. ಅರಸನು ವೀರವರನ ಔದಾರ್ಯಕ್ಕೆ ಮತ್ತೂ ತಲೆದೂಗಿ, ಉಚಿತ ಸನ್ಮಾನಮಾಡಿ '**ಕರ್ನಾಟಕದಿಂದ ಕೂಡಿದ ಲಾಟದೇಶದ**' ರಾಜ್ಯಾಧಿಕಾರವನ್ನು ಅವನಿಗೆ ದಯಪಾಲಿಸಿದನು.[೧೪೨]

೨. ದುರ್ವಿನೀತನ ವಡ್ಡಕಥೆ: ಭೋಜನ ಶೃಂಗಾರಪ್ರಕಾಶದಲ್ಲಿ 'ಬೃಹತ್ಕಥಾ' ಎಂಬ ಆಕರದೊಂದಿಗೆ ಉದ್ಧೃತವಾದ ಸಂಸ್ಕೃತ ಶ್ಲೋಕದಲ್ಲಿ ಗುಣಾಢ್ಯನ ಪರಂಪರೆಗೆ ಬೇರೆಯಾದ ಕಥಾವಸ್ತು ಕಂಡುಬರುತ್ತದೆ. ಅದು ಈಗ ಉಪಲಬ್ಧವಿರುವ ತಮಿಳು ಪೆರುಂಗತೈಗೆ ಮಾತೃಕೆಯಾಗಿರಬಹುದಾದ ದುರ್ವಿನೀತನ ವಡ್ಡಕಥೆಗೆ ಸಂಬಂಧಿಸಿರಬೇಕೆಂದು ವಿ. ರಾಘವನ್ ಅವರ ಅಭಿಪ್ರಾಯ.[೧೪೩] ಇದು ನಿಜವಿದ್ದರೆ ದುರ್ವಿನೀತನ ಕೃತಿಯಲ್ಲಿ ಬೇರೆ ಸ್ವರೂಪದ ಶೂದ್ರಕಕಥೆ ಇರುವ ಸಂಭವವಿದೆ.

---

೧೪೨. ಕಥಾಮೃತ-ಎ.ಆರ್.ಕೃ. ಪು. ೩೩೨(ಇದೇ ಗ್ರಂಥದ ಪು. ೧೯೭ರ ಮೇಲೆ ಈ ಕಥೆ ಮತ್ತೆ ಕಂಡುಬರುತ್ತದೆ.)

೧೪೩. ಶಾರಿಕಾ (ದೂತೀ) ಮೇಧಾವಿನೀ ಬೃಹತ್ಕಥಾಯಾಂ ನಂದಪ್ರಬೋಧನೇ-
ಕಿಂ ಕ್ರಂದಸೀ ನಿರಾಕ್ರಾಂತ ನಂದನೋ ರಾಜತಸ್ಕರಃ
ಅಮೃತೇ ವಿಷಮುತ್ಪನ್ನಂ ಯತೋ ರಾಜಾ ತತೋ ಭಯಂ
ಶೃಂಗಾರ ಪ್ರಕಾಶದಲ್ಲಿ ಉದ್ಧೃತವಾದ ಈ ಶ್ಲೋಕ ದುರ್ವಿನೀತನ ಬೃಹತ್ಕಥೆಗೆ ಸಂಬಂಧಿಸಿರಬಹುದೆನ್ನುತ್ತ, ಆ ಕೃತಿಯ ಇನ್ನೂ ಆರು ಅಂಶಗಳನ್ನು ಡಾ.ವಿ. ರಾಘವನ್ ವಿವೇಚಿಸಿರುವರು. (ಶೃಂಗಾರ ಪ್ರಕಾಶ, ಪು. ೮೩೯-೮೪೪).

೩. **ಅವಂತೀಸುಂದರೀ ಕಥಾಸಾರ:** ಅಶ್ಮಕ ದೇಶದ ಇಂದ್ರಾಣಿಗುಪ್ತನೆಂಬ ದ್ವಿಜೋತ್ತಮನ ಇನ್ನೊಂದು ಹೆಸರು ಶೂದ್ರಕ. ಪ್ರೀತಿಸಿ ಬಂದ ಬ್ರಹ್ಮಶ್ರೀಯನ್ನು ಅಲಕ್ಷಿಸಿದ ಈತನು, ಅವಳ ಶಾಪದ ಪ್ರಕಾರ ಅಪಾಯಗಳನ್ನೆದುರಿಸುತ್ತ ಬೆಳೆಯಬೇಕಾಯಿತು. ಬಾಲ್ಯದಲ್ಲಿ ರಾಜಪುತ್ರ ಸ್ವಾತಿಯ ಮೈತ್ರಿ, ವೈರವಾಗಿ ಪರಿಣಮಿಸಿತು. ಭಾರವಾದ ಬಂಡೆಗಲ್ಲನ್ನೆತ್ತಿದ ಶೂದ್ರಕನ ಶಕ್ತಿಗೆ ಅಸೂಯೆ ಪಟ್ಟು, ಕೊಲ್ಲಲು ಪ್ರಯತ್ನಿಸಿದ ಶಾಕ್ಯಸಂಘಿಲಕನನ್ನು ಸೀಳಿಹಾಕಿದನು. ಮುಂದೆ ಅಪಾಯಕೋಟಿಗಳನ್ನು ತುಳಿದು, ಅಡವಿಯಲ್ಲಿ ನಡೆದು, ವಿಂಧ್ಯಗಿರಿಯಲ್ಲಿ ಮಿತ್ರನಾಗಿ ಬಂದ ವಿಶ್ವಲಕನನ್ನು ತಿನ್ನಲುತೊಡಗಿದ್ದ ಹೆಂಗುಸನ್ನು ಹಿಡಿದು, ಶಾಪವಿಮೋಚನೆಗೊಳಿಸಿ ಅವಳನ್ನು ಸ್ವರ್ಗಕ್ಕೆ ಕಳಿಸಿದನು. ತರುವಾಯ ವಿಶ್ವಲಕನನ್ನು ಬಿಟ್ಟು ಒಬ್ಬನೇ ಪ್ರಯಾಣ ಬೆಳೆಸಿ, ಮೋಸದಿಂದ ಕೊಲ್ಲಲು ಯತ್ನಿಸಿದ ಶಾಕ್ಯ ಭಿಕ್ಷುಣಿಯಿಂದ ಪಾರಾಗಿ ವಿದಿಶಾಭಿಮುಖವಾಗಿ ನಡೆದನು. ಮುಂದೆ ಗೆಳೆಯ ಬಂಧುದತ್ತನನ್ನು ಸೆರೆಯಿಂದ ಬಿಡಿಸಿಕೊಂಡು ಅವನೊಂದಿಗೆ ಉಜ್ಜೈನಿಗೆ ಹೋದನು. ಬಂಧುದತ್ತನ ಮನೆಯ ಭರತಕನ್ಯೆ ರಂಗಪತಾಕೆಯಲ್ಲಿ ಅನುರಕ್ತನಾದನು. ವನದಲ್ಲಿ ವಿಹರಿಸುತ್ತಿದ್ದ ರಾಜಕುಮಾರಿ ವಿನಯವತಿಯನ್ನು ಮೋಹಿಸಿ, ರಾಜಬಂಧನಕ್ಕೆ ಒಳಗಾಗಿ, ಕೊನೆಗೆ ದಾಸಿಯ ನೆರವಿನಿಂದ ವಿನಯವತಿಯೊಂದಿಗೆ ಪಾರಾಗಿ ಹೋದನು. ದಾರಿಯಲ್ಲಿ ಮಾಳವದೇಶದ ರಾಜನಿಂದ ಅಪಹರಿಸಲ್ಪಟ್ಟ ವಿನಯವತಿಯನ್ನು ತಿರುಗಿಪಡೆದನು. ಅವಳ ಬಾಯಾರಿಕೆಯನ್ನು ನೀಗಿಸಲು ನೀರು ಹುಡುಕುತ್ತ ಒಬ್ಬನೇ ಹೊರಟು, ಚೋರರ ಸೆರೆಗೆ ಸಿಕ್ಕು, ಚೋರಕನ್ಯೆ ಆರ್ಯದಾಸಿಯ ಸಹಾಯದಿಂದೆ ಸೆರೆ ತಪ್ಪಿಸಿಕೊಂಡು, ವಿನಯವತಿಯನ್ನು ಹುಡುಕುತ್ತ ಮಥುರೆಗೆ ಹೋದನು. ಅಲ್ಲಿ ಸರೋವರಸ್ನಾನಮಾಡುತ್ತಿದ್ದ ಶೂದ್ರಕನನ್ನು ಕಳ್ಳನೆಂದು ಕಟ್ಟಿಹಾಕಿದರು. ಮಥುರೆಯ ಮಾಲವನೆಂಬ ಬ್ರಾಹ್ಮಣನ ಮನೆಯಲ್ಲಿದ್ದ ವಿನಯವತಿ, ಗಂಡನನ್ನು ಗುರುತಿಸಿ, ತನ್ನ ಗೆಳತಿಯ ನೆರವಿನಿಂದ ಬಿಡಿಸಿಕೊಂಡಳು. ಮುಂದೆ ಶೂದ್ರಕನು ಮಾಲವನ ಮಗಳು ಯಜ್ಞದೆ, ಮಥುರೇಂದ್ರನ ಮಗಳು ಶೂರಸೇನೆಯರನ್ನು ಮದುವೆಯಾದನು. ಹೀಗೆ ಸಾವಿರ ಸಂಕಟಗಳನ್ನೆದುರಿಸಿ, ಸ್ವಾತಿಯೊಡನೆ ಹೋರಾಡಿ ಗೆದ್ದು, ಬಾಲ್ಯಮಿತ್ರನಾದ ಅವನನ್ನು ಮನ್ನಿಸಿ, ನೂರುವರುಷ ರಾಜ್ಯವಾಳಿದನು.[೧೪೪] ('ದಶಕುಮಾರ ಚರಿತೆ'ಯಲ್ಲಿ ಸಂಗ್ರಹರೂಪವಾಗಿ, 'ಪದ್ಮಪ್ರಾಭೃತಕ' ಎಂಬ ನಾಟಕದಲ್ಲಿ ಭಾಗಶಃ ಈ ಕಥೆ ಕಂಡುಬರುತ್ತದೆ.)

೪. **ರಾಮಿಲ-ಸೋಮಿಲರ ಶೂದ್ರಕ ಕಥಾ:** ಜಲ್ಹಣ ಕವಿಯ ಸೂಕ್ತಿಮುಕ್ತಾವಲಿಯ

> ತೌ ಶೂದ್ರಕಕಥಾಕಾರೌ ವಂದ್ಯೌ ರಾಮಿಲ ಸೋಮಿಲೌ।
> ಯಯೋರ್ಧ್ವಯೋಃ ಕಾವ್ಯಮಾಸೀದರ್ಧನಾರೀಶ್ವರೋಪಮಂ॥

ಈ ಶ್ಲೋಕದ ಪ್ರಕಾರ, ರಾಮಿಲ ಸೋಮಿಲರು ಕೂಡಿ ರಚಿಸಿದ ಕೃತಿ 'ಶೂದ್ರಕಕಥಾ'. ಇದು ಈಗ ಉಪಲಬ್ಧವಿಲ್ಲ. ಭೋಜನ ಶೃಂಗಾರ ಪ್ರಕಾಶದಲ್ಲಿ 'ಶೂದ್ರಕಕಥಾ' ಎಂಬ ಆಕರದೊಂದಿಗೆ 'ಅದೃಷ್ಟವೈಕೃತೋ ಬಂಧುದತ್ತಃ ಶೂದ್ರಕಸ್ಯ ವಿಯವತ್ಯುಪಯಮನೇ' ಎಂಬ ಸಂಸ್ಕೃತವಾಕ್ಯ ಉದ್ಧೃತವಾಗಿದೆ. ಈ ವಾಕ್ಯವನ್ನು ಗಮನಿಸಿ- "The Avantisundari Kathasara describes the marriage of Sudraka with Vinayavati briefly in canto four, sls. 178, 184 and 185. There is no mention here of Bandhudatta aiding Sudraka's marriage with Vinayavati. Therefore Bhoja here refers to the story of Sudraka according to other versions known to him"[೧೪೫] ಎಂದು

---

೧೪೪. ಅವಂತಿಸುಂದರೀ ಕಥಾಸಾರ (ದಂಡಿ) ಆಶ್ವಾಸ ೪. ಶ್ಲೋಕ ೧೫೬-೨೩೦

೧೪೫. ಶಂಗಾರಪ್ರಕಾಶ. ಪು. ೮೨೧

ವಿ. ರಾಘವನ್ ಹೇಳುವುದರಿಂದ ಈ ಶೂದ್ರಕಕಥೆಯ ವಸ್ತು ದಂಡಿಯ ಅವಂತಿಸುಂದರೀ ಕಥೆಗಿಂತ ಬೇರೆಯಾಗಿರಬೇಕು. ಈಗ ತಿಳಿದಮಟ್ಟಿಗೆ ಈ ಹೆಸರಿನ ಸಂಸ್ಕೃತಕೃತಿ ರಾಮಿಲ-ಸೋಮಿಲರದು ಮಾತ್ರ. ಅದಕ್ಕಾಗಿ ಶೃಂಗಾರಪ್ರಕಾಶದಲ್ಲಿಯ ಈ ಉದ್ದರಣೆ ರಾಮಿಲ-ಸೋಮಿಲರ ಗ್ರಂಥದ ಅವಶೇಷವಾಗಿರಬಹುದು.

೫. ಪಂಚಶಿಖನ ಶೂದ್ರಕಕಥಾ(ಪ್ರಾಕೃತಕೃತಿ): ಶೃಂಗಾರಪ್ರಕಾಶದಲ್ಲಿ ಉದ್ಧೃತವಾದ ಈ ಕಥೆಯ ಸ್ವಲ್ಪಭಾಗವನ್ನು ಕುರಿತು ವಿ. ರಾಘವನ್ ಅವರು "There is an episode in which a heroine named Harimati figures and an old parrot goes as love messenger"[೧೪೬] ಎಂದು ಹೇಳಿ"In the story of Sudraka found in the Avanti-sundari Kathasara there is no Harimati or Jaratkira"[೧೪೭] ಎಂದು ನಿರ್ಣಯ ನೀಡುವುದರಿಂದ ಪಂಚಶಿಖನ ವಸ್ತು, ದಂಡಿಯಿಂದ ಭಿನ್ನವೆಂದು ಸ್ಪಷ್ಟವಾಗುತ್ತದೆ.[೧೪೮]

೬. ವಿಕ್ರಾಂತಶೂದ್ರಕ ನಾಟಕ (ಅಜ್ಞಾತಕವಿ ಕೃತಿ): ಶೃಂಗಾರಪ್ರಕಾಶದಲ್ಲಿ ಉದ್ಧರಿಸಲ್ಪಟ್ಟ ಈ ಕೃತಿಯ ಸ್ವಲ್ಪಭಾಗದಿಂದ "Sudraka had a servant Sivagana or Nicaksa, of unparalleled devotion to his lord. An occasion came for him to serve his Lord Sudraka by burning his own wife. The work for his master was done and then, he thought he might as well throw himself into fire and follow his dead wife. Sivagana enters the fire but Sudaraka had conjured up there a magic fire that does not burn him. Sivagana's wife had after all not been burnt, for that was also perhaps Sudaraka's magic. She sees with her own eyes the love of her Lord who is prepared to follow her through death and falls into the fire with him. But the magic fire does not burn them"[೧೪೯] ಎಂಬ ಶೂದ್ರಕನ ಕಥೆ ತಿಳಿದುಬರುತ್ತದೆ.

೭. ಬಾಣಕಾದಂಬರಿ: ಬಾಣಕಾದಂಬರಿಯಲ್ಲಿಯೂ ಶೂದ್ರಕನ ಉಪಕಥೆಯೊಂದು ಕಂಡುಬರುವುದು ಸರ್ವವಿದಿತ. ಕೇಶಿರಾಜನು ಒಂದು ಸೂತ್ರದ ಕೆಳಗೆ ಕೊಡಬೇಕಾದ ಉದಾಹರಣೆಗಳನ್ನು ಹುಡುಕಲು ಒಂದು ಓಲೆಯ ಕಟ್ಟನ್ನು ಬಿಚ್ಚಿದಾಗ ಶ್ರಮವುಳಿಸಿಕೊಳ್ಳುವ ಉದ್ದೇಶದಿಂದ ಅದರಿಂದಲೇ ಬೇರೆ ಬೇರೆ ೪-೬ ಉದಾಹರಣೆಗಳನ್ನು ಆಯ್ದುಕೊಂಡಿರುವ ಸಾಧ್ಯತೆಯಿದೆ. ಸೂ. ೨೨೮ರ ಕೆಳಗ ಕೊಟ್ಟ,

"ಬ(ಒ)ಗೆದಂ ಶ್ರೀಗಂಗ ಚಕ್ರಾಯುಧಂ"
"ಜನೋದಯಂಗಿದಂ ಪೇಟಿಲೊಡರ್ಚಿದೆಂ"
"ಬಣ್ಣಿಪೆನಾ ಜಯದಂಕಕಾರನಂ"

ಈ ಮೂರೂ ಉದಾಹರಣೆಗಳು 'ಶೂದ್ರಕ'ಕ್ಕೆ ಸಂಬಂಧಪಟ್ಟುದು ಇದಕ್ಕೆ ನಿದರ್ಶನ. ಇಲ್ಲಿಯೇ ಬರುವ "ವಿಹಂಗಮಿದೆಂದೇಕಬ್ಬೆ ನೀವೇಳಪಿರ್" ಎಂಬ ಇನ್ನೊಂದು ಉದಾಹರಣೆ ಬಾಣಕಾದಂಬರಿಯ

---

೧೪೬. ಶೃಂಗಾರಪ್ರಕಾಶ ಪು. ೮೨೦

೧೪೭. ಶೃಂಗಾರಪ್ರಕಾಶ. ಪು. ೮೨೦ ಅ.ಟಿ.

೧೪೮ "....... Avantaisundari Kathasara which is a close summary of Dandin's Prose Work is different from the Sudarakakatha of 'Panchasikha" (ಶೃಂಗಾರಪ್ರಕಾಶ. ಪು. ೮೨೦) ಎಂಬ ಮಾತನ್ನು ಗಮನಿಸಬಹುದು.

೧೪೯. ಶೃಂಗಾರಪ್ರಕಾಶ. ಪು. ೮೯೩

ಶುಕವೃತ್ತಾಂತವನ್ನು ನೆನಪಿಗೆ ತರುವುದರಿಂದ, ಗುಣವರ್ಮನಕೃತಿ ಅಲ್ಲಿ ಬರುವ ಶೂದ್ರಕಕಥೆಯನ್ನು ಮಾತೃಕೆಯಾಗಿಟ್ಟುಕೊಂಡಿರಬಹುದೆ? ಎನಿಸುತ್ತದೆ.

೮. ಬಸವಣ್ಣನವರ ವಚನೋಕ್ತ ಶೂದ್ರಕ: "ನೋಡಿರೆ... ಪೂರ್ವದತ್ತವ, ವರುಣ ಹೆಳವ, ರವಿ ಕುಷ್ಟ..... ಬಲ್ಲಿದನೆಂಬವನ ಕೆಡಿಸಿತ್ತು ವಿಧಿ...... ಶೂದ್ರಕನ ತಲೆಯ ಕಂಚಿಯಲ್ಲಿ ಕಟ್ಟಿತ್ತು......"[೧೫೦] ಎಂಬ ವಚನದಲ್ಲಿ ಒಬ್ಬ ಶೂದ್ರಕನ ಸೂಚನೆ ಬರುತ್ತದೆ. ಈತನು ಪೂರ್ಣಕುಂಭರಾಜನ ಮಗ. ಶಿಷ್ಯರನ್ನು ಬೋಧಿಸುತ್ತಿದ್ದ ಒಬ್ಬ ಆಚಾರ್ಯರಲ್ಲಿಗೆ ಹೋಗಿ ತನಗೂ ಬೋಧಿಸಬೇಕೆಂದು ಹಾಸ್ಯದಿಂದ ನುಡಿಯಲು, ಅವರು 'ಗಂಗೆಯಲ್ಲಿ ತೇಲಿಬರುವ ಒಂದು ಹೆಣ ನಿನಗೆ ಬೋಧಿಸುವುದು' ಎಂದು ಹೇಳಿದರು. ಗಂಗಾತೀರಕ್ಕೆ ಹೋಗಲು, ತೇಲಿಬಂದ ಹೆಣ'ನಿನ್ನ ತಲೆ ಕಂಚಿಮರದಲ್ಲಿ ಕಟ್ಟಲ್ಪಡುವುದು ' ಎಂದು ನುಡಿಯಿತು. ಅಂದೇ ಮೋಕ್ಷಪಡೆಯಲು ನಿರ್ಧರಿಸಿ, ಮೊಳಕಾಲ ಚಿಪ್ಪು ಕಳೆದುಕೊಂಡು ಹೆಳವನಾಗಿ ಕಾಶಿಯಲ್ಲಿ ನಿಂತನು. ಒಮ್ಮೆ ಇವನು ಹತ್ತಿದ ತುಂಟಕುದುರೆ ಇವನನ್ನು ಕಂಚಿಮರದ ಕೆಳಗೆ ಕೆಡವಿತು. ಇವನು ಅರಮನೆಗೆ ಕನ್ನವಿಕ್ಕಿದ ಕಳ್ಳನೆಂದು ಭಾವಿಸಿ ರಾಜಭಟರು ಸೆರೆಹಿಡಿದರು. ಅಲ್ಲಿಯೇ ಇವನ ರುಂಡಹಾರಿಸಲ್ಪಟ್ಟು ಭವಿಷ್ಯ ನಿಜವಾಯಿತು.[೧೫೧]

೯. ಮೃಚ್ಛಕಟಿಕ ನಾಟಕಕರ್ತೃ: ಈ ನಾಟಕದ ಆರಂಭಪದ್ಯಗಳಲ್ಲಿ, ಕರ್ತೃ ಶೂದ್ರಕನ ವಿಷಯ ಹೀಗೆ ಬರುತ್ತದೆ: 'ಅವನು ಗಜೇಂದ್ರಗತಿಯುಳ್ಳವನು, ಚಕೋರನೇತ್ರನು, ಪರಿಪೂರ್ಣಚಂದ್ರಮುಖನು, ಒಳ್ಳೆಯ ಶರೀರಯಷ್ಟಿಯುಳ್ಳವನು, ಅಗಾಧಸತ್ವನು ಆಗಿದ್ದು ದ್ವಿಜಮುಖ್ಯತಮ ಕವಿಯಾದ ಶೂದ್ರಕನೆಂದು ಹೆಸರಾಗಿ ಹೋದನು. ಋಗ್ವೇದ, ಸಾಮವೇದ, ಗಣಿತ, ನೃತ್ಯ ಗಾಯನಾದಿ ಕಲೆ, ಗಜಶಾಸ್ತ್ರ ಇವುಗಳನ್ನರಿತು, ಶಿವನ ಪ್ರಸಾದದಿಂದ ಕಳೆದುಹೋದ ಕಣ್ಣುಗಳನ್ನು ಪಡೆದು ಮಗನನ್ನು ರಾಜನನ್ನಾಗಿ ಮಾಡಿ ನೋಡಿ, ಪರಮವೈಭವದಿಂದ ಅಶ್ವಮೇಧಯಜ್ಞವನ್ನು ಮಾಡಿ, ಹತ್ತುದಿನ ಸಹಿತವಾದ ನೂರುವರ್ಷದ ಆಯುಷ್ಯವನ್ನು ಭೋಗಿಸಿ ಅವನು ಅಗ್ನಿಪ್ರವೇಶ ಮಾಡಿದನು. ಯುದ್ಧಪ್ರಿಯನೂ ಪ್ರಮಾದಶೂನ್ಯನೂ ವೇದವಿದರಲ್ಲಿ ಶ್ರೇಷ್ಠನೂ ತಪೋಧನನೂ ಆದ ಅವನು ಅಸ್ಯಗಜದೊಡನೆ ಬಾಹುಯುದ್ಧಮಾಡುವ ಆಶೆಯುಳ್ಳವನೂ ಆದ ಕ್ಷಿತಿಪಾಲನಾಗಿ ಹೋದನು.[೧೫೨]

೧೦. ಅನಂತಕವಿಯ ವೀರಚರಿತ: ಇದರಲ್ಲಿ ಶೂದ್ರಕನನ್ನು ಶಾಲಿವಾಹನ ಸಖನೆಂದು ಬಣ್ಣಿಸಲಾಗಿದೆ.

ಹೀಗೆ ಹತ್ತಾರು ರೂಪಗಳಲ್ಲಿ ಕಂಡುಬರುವ ಈ ಕಥೆಗಳಲ್ಲಿ ಗುಣವರ್ಮನು ಯಾವುದನ್ನು ಅನುಸರಿಸಿರುವನೆಂಬುದು ಇನ್ನೂ ನಿಗೂಢವಾಗಿ ಉಳಿದಿದೆ. ಕಾವ್ಯಾವಲೋಕನ, ಸೂಕ್ತಿಸುಧಾರ್ಣವ ಮತ್ತು ಕಾವ್ಯಸಾರಗಳಲ್ಲಿ ಕಂಡುಬರುವ,

ಸುಯ್ಯನಿಡುಪುಡುಗದಿರೆಯುಂ
ಮೆಯ್ಯರೆ ಮಟ್ಟಿದೆಯುಮಿಂತು ಸಂದಂದಿನಿಬರ್।
ಬಯ್ಯಲೆ ಪೊಯ್ಯಲೆ ಕುರುಳಂ
ಕೊಯ್ಯಲೆ ಪೊಯ್ತಿಂತು ವಿನಯವತಿಗಂ ಪತಿಗಂ॥

---

೧೫೦. ಬ.ವ. ೯೫. ಹೆಚ್ಚಿನ ವಚನ. (ಬಸವನಾಳ)

೧೫೧. ಸೋ. ಶತಕ (ಬಿ. ಶಿವಮೂರ್ತಿಶಾಸ್ತ್ರಿ ೧೯೬೧) ಪು. ೭೮-೭೯

೧೫೨. ೧ನೆಯ ಗುಣವರ್ಮನ ಶೂದ್ರಕ (ತವನಿಧಿ) ಮುಗಳಿ ರಂ. ಶ್ರೀ. ಪುಟ. ೪೮

ಎಂಬುದು ಕಾವ್ಯಸಾರದ ಪ್ರಕಾರ 'ಶೂದ್ರಕ'ದ ಪದ್ಯ. ಇಲ್ಲಿ ಬರುವ ವಿನಯವತಿ ಹೆಸರನ್ನು ಗಮನಿಸಿ "ಇದೊಂದು ಆಧಾರದಿಂದಲೇ 'ಆವಂತಿ ಸುಂದರೀ ಕಥಾಸಾರ'ದಲ್ಲಿ ಉಕ್ತವಾದ ಶೂದ್ರಕನ ಕಥೆಯನ್ನು ೧ನೆಯ ಗುಣವರ್ಮನು ತನ್ನ ಆಕರವನ್ನಾಗಿ ತೆಗೆದುಕೊಂಡಿರಬಹುದೆಂದು ಊಹಿಸಿದರೆ ತಪ್ಪಲ್ಲ"[೧೫೩] ಎಂದು ಡಾ. ಮುಗಳಿಯವರು ಹೇಳುತ್ತಾರೆ. ಆದರೆ ನಾವು ಊಹಿಸಿದಂತೆ ರಾಮಿಲ-ಸೋಮಿಲರ 'ಶೂದ್ರಕಕಥಾ' ಎಂಬ ಕೃತಿಯಲ್ಲಿಯೂ 'ವಿನಯವತಿ'ಯ ಹೆಸರಿದೆ. ಈ ಅವಂತಿಸುಂದರೀ ಕಥಾಸಾರ ಮತ್ತು ರಾಮಿಲ-ಸೋಮೀಲರ ಶೂದ್ರಕಗಳಲ್ಲಿ ವ್ಯತ್ಯಾಸವಿರಬಹು ದೆನಿಸುತ್ತದೆ.[೧೫೪] ಅದಕ್ಕಾಗಿ ಗುಣವರ್ಮ್ಮನ ಕಥಾವಸ್ತು ಈ ಎರಡರಲ್ಲಿ ಯಾವುದಕ್ಕೆ ಸಂಬಂಧಿಸಿದೆ ಎಂಬ ಹೊಸ ಸಂದೇಹ ಹುಟ್ಟುತ್ತದೆ. ವಸ್ತುಸ್ಥಿತಿ ಹೀಗಿದ್ದರೂ 'ಅವಂತಿಸುಂದರೀ ಕಥಾಸಾರ'ದ ಶೂದ್ರಕನು ಅಪಾಯಕೋಟಿಗೆ ತುತ್ತಾಗಿ ಅಡವಿ ಅಡವಿ ತಿರುಗುವುದು, ಕಳ್ಳನೆಂದು ಕಟ್ಟಿಸಿಕೊಳ್ಳುವುದು, ಪಶುವಿನಂತೆ ಬಡಿಸಿಕೊಳ್ಳುವುದು, ಸ್ತ್ರೀಯ ನೆರವು ಪಡೆದು ಸೆರೆಯಿಂದ ಪಾರಾಗುವುದು, ಪಟ್ಟದರಸಿ ವಿನಯವತಿಯನ್ನು ಮಾಳವದೇಶದ ಅರಸು ಅಪಹರಿಸುವುದು ಇವೇ ಮೊದಲಾದ ಘಟನೆಗಳಲ್ಲಿ ಎಷ್ಟೇ ಸಾಹಸ ತೋರಿಸಿದ್ದರೂ ಅವು ವ್ಯಕ್ತಿತ್ವಕ್ಕೆ ಶೋಭಿಸುವುದಿಲ್ಲ.ಆದುದರಿಂದ 'ಶೂದ್ರಕ ಕಥೆ' ಎಂದೇ ಹೆಸರಿರುವ ಕಥಾನಾಯಕ 'ಅವಂತಿಸುಂದರೀ ಕಥೆ'ಯಿಂದ ಭಿನ್ನವಾಗಿರುವ, ರಾಮಿಲ-ಸೋಮೀಲರ ಅನುಪಲಬ್ಧ ಕೃತಿಯು ಗುಣವರ್ಮನಿಗೆ ಮಾತೃಕೆಯಾಗಿರಲು ಸಾಧ್ಯವಿದೆ. ಅಥವಾ ಶೂದ್ರಕದ ರಣರಂಗ ವರ್ಣನೆಯ ವಾಕ್ಯದಲ್ಲಿ ಕಂಡುಬರುವ "ಬಲದೇವನಂತೆ ಪೆಣನಂ ಪೊತ್ತು ತೊಟಲ್ವ ಕ್ಷೇತ್ರಪಾಲರಿಂ"[೧೫೫] ಎಂಬ ಜೈನ ಅಂಶವು, ಈ ಕೃತಿಗೆ ಜೈನಪರಂಪರೆಯ ಯಾವುದೋ ಒಂದು ಶೂದ್ರಕಕಥೆ ಮೂಲವಾಗಿರಬಹುದೆಂಬ ಭಾವನೆಯನ್ನು ಹುಟ್ಟಿಸುತ್ತದೆ. ಅಲ್ಲಲ್ಲಿ ಜೈನವಾತಾವರಣವನ್ನು ಮೈಗೂಡಿಸಿಕೊಂಡಿರುವ, ತಮಿಳು ಪೆರುಂಗತೈಗೆ ಮೂಲವಾಗಿರುವ ದುರ್ವಿನೀತನ ವಡ್ಡಕಥೆಯೂ ಜೈನಪರವಾಗಿರಬಹುದು. ಅದಕ್ಕಾಗಿ ಗುಣವರ್ಮನಿಗೆ, ತನ್ನ ಕಥಾನಾಯಕ ಎರೆಯಪ್ಪನ ಪೂರ್ವಜ ದುರ್ವಿನೀತಕೃತ ವಡ್ಡಕಥೆಯಲ್ಲಿರಬಹುದಾದ ಶೂದ್ರಕ ವೃತ್ತಾಂತ ಮಾತೃಕೆಯಾಗಿರುವ ಸಂಭವ ಇನ್ನೂ ಹೆಚ್ಚು. ಒಟ್ಟಿನಲ್ಲಿ ಅವಂತಿಸುಂದರೀ ಕಥಾಸಾರ ಅಥವಾ ರಾಮಿಲ-ಸೋಮಿಲರ ಅನುಪಲಬ್ಧ ಶೂದ್ರಕಕಥಾ ಅಥವಾ ದುರ್ವಿನೀತನ ಅನುಪಲಬ್ಧ ವಡ್ಡಕಥೆ ಗುಣವರ್ಮನ ಶೂದ್ರಕಕ್ಕೆ ಮಾತೃಕೆಯಾಗಿರಬಹುದು. ನಮಗೆ ಮಾತ್ರ ಕೊನೆಯ ಎರಡರಲ್ಲಿ ಒಂದು, ಮಾತೃಕೆಯಾಗಿರುವ ಸಂಭವ ಹೆಚ್ಚು ಎನಿಸುತ್ತದೆ.

ಗುಣವರ್ಮನ ಶೂದ್ರಕ ಒಂದು ಚಂಪೂಕಾವ್ಯ. ಇದಕ್ಕೆ ನಿದರ್ಶನವೆಂಬಂತೆ ಕಾವ್ಯಾವಲೋಕನ, ಕರ್ಣಾಟ ಭಾಷಾಭೂಷಣ, ಶಬ್ದಮಣಿದರ್ಪಣ, ಸೂಕ್ತಿಸುಧಾರ್ಣವ, ಕಾವ್ಯಸಾರಗಳಲ್ಲಿ ಇದರ ಹಲವಾರು ಕಂದ, ವೃತ್ತಗಳು, ಕಾವ್ಯಸಾರದಲ್ಲಿ ಒಂದು ಗದ್ಯ ತುಣುಕು ಇವೆ. ಇವುಗಳಲ್ಲಿ ಕಥಾನಾಯಕಿ ವಿನಯವತಿಯ ಉಲ್ಲೇಖವೂ 'ಕಾವೇರಿಯ ನೀರ್ವೊಲಿತ್ತ ಬರೆ ನಿಮ್ಮ ಬಲಂ ಶತಖಂಡಮಾಗದೇ' ಎಂಬ ರಾಜಕೀಯ ಹೇಳಿಕೆಯೂ; ಶೂದ್ರಕ, ಪ್ರತಿರೂಪಶೂದ್ರಕ, ಸುಭಟಶೂದ್ರಕ ಎಂಬಿವುಗಳೊಂದಿಗೆ ಎರೆಯಪ್ಪನಿಗೆ ಸಂಬಂಧಿಸಿದ ಮಹೇಂದ್ರಾಂತಕ, ಕಾಮದ, ಜನೋದಯ ಎಂಬ ಬಿರುದುಗಳೂ ಒಂದಕ್ಕೊಂದು ಹೊಂದಿಕೊಂಡು ಬರುವ ಕಾರಣ, ಇದು ಕಥಾನಾಯಕ ಎರೆಯಪ್ಪನನ್ನು ಶೂದ್ರಕನೊಂದಿಗೆ 'ತಗಟ್ಚಿ ಪೇಟಿದ' ಕಾವ್ಯವಾಗಿರಬೇಕು.

---

೧೫೩. ೧ನೆಯ ಗುಣವರ್ಮನ ಶೂದ್ರಕ (ತವನಿಧಿ) ಮುಗಳಿ ರಂ. ಶ್ರೀ. ಪು. ೫೫

೧೫೪. ಅ.ಟಿ. ೧೪೫ ನೋಡಿರಿ.

೧೫೫. ಕಾ.ಸಾ. ಪು. ೧೦೯

ಉಪಲಬ್ಧ ಪದ್ಯಗಳಲ್ಲಿ ವರ್ಣನಾಂಶ ಹೆಚ್ಚು, ಕಥಾಂಶ ಇಲ್ಲವೆನ್ನುವಷ್ಟು ಕಡಿಮೆ ಇರುವುದರಿಂದ ನಾವು ಕಳೆದುಕೊಂಡಿರುವ ಶೂದ್ರಕಕಾವ್ಯದ ಕಥೆಯನ್ನು ಪುನಾರಚಿಸುವುದು ಅಸಾಧ್ಯವಾಗಿದೆ. ಪಂಪಭಾರತ ರನ್ನಗದಾಯುದ್ಧಗಳು ಅರಿಕೇಸರಿ, ಇರಿವಬೆಡಂಗರ ಸರ್ವತೋಮುಖವ್ಯಕ್ತಿತ್ವವನ್ನು ವರ್ಣಿಸುವಲ್ಲಿ ಅವರ ವೀರಗುಣವನ್ನೇ ಮೂಲವಾಗಿಟ್ಟುಕೊಂಡಂತೆ ಈ ಕಾವ್ಯವೂ ಎರೆಯಪ್ಪನ ವೀರಗುಣವನ್ನೇ ಗುರಿಯಿಟ್ಟು ನಡೆದಿರಬೇಕು. ಅರಿಕೇಸರಿಯು ರಾಷ್ಟ್ರಕೂಟ ಗೊಜ್ಜಿಗದೇವನನ್ನು, ಇರಿವಬೆಡಂಗನು ಶಿಲಾಹಾರ ಅಪರಾದಿತ್ಯನನ್ನು ಗೆದ್ದಪ್ರಸಂಗಗಳು ಪಂಪ ರನ್ನರಿಗೆ ವಸ್ತುವಾಗಿದ್ದರೆ, ಎರೆಯಪ್ಪನು ನೊಳಂಬ ಮಹೇಂದ್ರನನ್ನು (ಪೆಂಜೆರು ಕಾಳಗದಲ್ಲಿ?)[೧೫೬] ಕೊಂದ ಸಮರಸಂದರ್ಭವು ಇದರ ವಸ್ತುವಾಗಿರಬಹುದು. "ಕ್ರಿ.ಶ. ೮೯೫-೮೯೮ರ ಮಧ್ಯದಲ್ಲಿ ಎರೆಯಪ್ಪನು ಮಹೇಂದ್ರನನ್ನು ಕೊಂದನು"[೧೫೭] ಎಂದು ವಿದ್ವಾಂಸರು ಆಧಾರಯುಕ್ತವಾಗಿ ಹೇಳುವುದರಿಂದ ಶೂದ್ರಕವು ಇದೇ ಸುಮಾರಿಗೆ ಹುಟ್ಟಿರಲು ಸಾಧ್ಯ. ಹೀಗೆ ಎರೆಯಪ್ಪನ ವೀರಗುಣವನ್ನು ಕೇಂದ್ರವಾಗಿಟ್ಟು ಮಿಕ್ಕ ಸದ್ಗುಣಸಮುದಾಯವನ್ನು ಮೇಳವಿಸಿಕೊಂಡು ಹುಟ್ಟಿದ ಈ ಕಾವ್ಯದ ಪದ್ಯಗಳನ್ನು ಹೀಗೆ ಸಂಗ್ರಹಿಸಬಹುದು:

ಕ್ರಮಾಂಕ	ಪದ್ಯಾದಿ	ಕಾವ್ಯಸಾರ ಪದ್ಯ	ಸೂಕ್ತಿ ಸುಧಾರ್ಣವ ಪುಟ	ಕಾವ್ಯಾವಲೋಕನ ಪದ್ಯ	ಕ.ಭಾ.ಭೂ. ಸೂತ್ರ	ಶ.ಮ.ದ. ಸೂತ್ರ
೧	ಅತುಳೋತ್ತಾಲ	೭೫	೧೭			
೨	ಅದು ಮತ್ತೆಂತೆಂದೊಡೆ	೭೪	೧೭			
೩	ಅಮಿತಬಲದೆರಡು	೪೬೬				
೪	ಅಲರ್ಗಣ್ ಪೊಂಗಿದ[೧೫೮]	೧೦೮೭	೬೦	೨೦೬		೭೯
ಕ್ರಮಾಂಕ	ಪದ್ಯಾದಿ	ಕಾವ್ಯಸಾರ ಪದ್ಯ	ಸೂಕ್ತಿ ಸುಧಾರ್ಣವ ಪುಟ	ಕಾವ್ಯಾವಲೋಕನ ಪದ್ಯ	ಕ.ಭಾ.ಭೂ. ಸೂತ್ರ	ಶ.ಮ.ದ. ಸೂತ್ರ
೫	ಅಳಸದಿರಂಟ	೯೯೪				(ಹೋಲಿಕೆ)
೬	ಆರ ನೆಗೞ್ತೆಯುಂ	೪೩೫				
೭	ಆರ್ವ ಪಿಶಾಚಿಯರ್ಕಳ	೫೩೪				
೮	ಇಱಿಯದೆ ಕೆಮ್ಮನುಂತೆ	೪೧೧				
೯	ಎಡೆಯಱಿದು	೬೫೮				
೧೦	ಎರೆದರ್ ಸಂತುಷ್ಟ	೨೧೫				
೧೧	ಒಡನೆ ದರಿದ್ರರೆಲ್ಲ	೪೨೩				
೧೨	ಒಡನೆ ಸುರಾಸುರರ್	೯೩೮				

೧೫೬. "But being engaged in hastilities with Mahendra, whom he eventually slew in battle, perhaps, at Penjeru, be obtained the distinctive title Mahendrantaka"- M.C.I. P. 44

೧೫೭. ಕ.ಅ.ಮ. ಪು. ೧೮೩

೧೫೮. ಕಾವ್ಯಸಾರದಲ್ಲಿ '(ಕವಿಕುಂಜರ ಲೀಲಾವತಿ)?' ಎಂದು, ಕಾವ್ಯಾವಲೋಕನದ 'ಪದ್ಯಗಳ ವಿವರ' ಎಂಬ ಪರಿಶಿಷ್ಟದಲ್ಲಿ ಶ್ರೀ ಬಸವಲಿಂಗಯ್ಯನವರು 'ಶೂದ್ರಕ'ಎಂದು ಆಕರ ಹೇಳಿರುವರು.

೧೩	ಕಡೆದನ್ನವಪ್ಪ ಮೊಲೆಗಳ	೧೭೮				
೧೪	ಕದಪಿನ ಕಣ್ಣಸಾರ್ಕೆ	೬೬೬	೩೨೯			
೧೫	ಕರಿಮಕರಂಗಳ್	೭೮	೧೮	೮೮೫		
೧೬	ಕರಿಯವೊಲಪುದಾಳ್ದ	೪೨೨				
೧೭	ಕಾಮಕರಮಡಂಗಿ[೧೫೯]					೨೫೭
೧೮	ಕಾರಂಡಂ ಕೆಂಗಣ್ಣಂ	೧೦೪೩	೪೮			
೧೯	ಕಾಸೆಯನುಟ್ಟು ಜನ್ನವಿರ	೫೩೫				
೨೦	ಕಿರಣಂಗಳೆಕಾವುಗಳೆನೆ	೮೮೦				
೨೧	ಕೀಲಿಸೆ ಕಂಧರದೊಳ್	೧೧೧೩	೪೫			೭೯
೨೨	ಕೋಗಿಲೆ ಚಾದಗೆ	೧೦೪೪	೪೮			
೨೩	ಗತದೋಷಿಗೆಕೃತ	೪೨೧				
೨೪	ಗಂಭೀರಸ್ವಾರ[೧೬೦]	೭೩	೧೫			
೨೫	ಗಿರಿಯಿದು ಕರಿಯಿದು	೧೦೫೭	೧೪೮[೧೬೧] (ಹೋಲಿಕೆ)			
ಕ್ರಮಾಂಕ	ಪದ್ಯಾದಿ	ಕಾವ್ಯಸಾರ ಪದ್ಯ	ಸೂಕ್ತಿ ಸುಧಾರ್ಣವ ಪುಟ	ಕಾವ್ಯಾವಲೋಕನ ಪದ್ಯ	ಕ.ಭಾ.ಭೂ. ಸೂತ್ರ	ಶ.ಮ.ದ. ಸೂತ್ರ
೨೬	ಗೆಲವಂ ಕೊಡಂಭಿ		೨೬೧			೧೯೪,೧೯೮
೨೭	ಚರಣಾಲಕ್ತಕ ಲಾಂಛನಂ	೬೫೫				
೨೮	ಜಗದೀಶಂ ಲಯವಾರ್ಧಿ	೪೩೬				
೨೯	ಜನೋದಯಂಗಿದಂ				೨೨೮	
೩೦	ತನಗಿಂಬುಪ್ಪುದನಾಯ್ದು			೩೫೧		

---

೧೫೯. ಈ ಪದ್ಯದಲ್ಲಿ ಬಂದ 'ಕಾಮದ' ಎಂಬ ಬಿರುದು ಎರೆಯಪ್ಪನದೆಂದು ಭಾವಿಸಿ ಇಲ್ಲಿ ಸ್ವೀಕರಿಸಲಾಗಿದೆ.

೧೬೦. ಈ ಪದ್ಯ ಕೆಳಗಣ ಶಾಸನಗಳಲ್ಲಿ ಕಂಡುಬರುತ್ತದೆ.

ಅ. S.I.I. ix-i, No. 333 ಮಾಗಳಗ್ರಾಮ. A.D. 1214(ಬಳ್ಳಾರಿ ಜಿಲ್ಲೆ, ಹಡಗಲಿ ತಾಲೂಕು)

ಬ. S.I.I. ix-i, No. 343, ಬೆಣ್ಣೆಕಲ್ಲಗ್ರಾಮ. A.D. 1226 (ಬಳ್ಳಾರಿಜಿಲ್ಲೆ, ಕೂಡ್ಲಿಗಿ ತಾಲೂಕು)

ಕ. S.I.I. ix-i, No. 360, ಸೋಗಿ (ಬಳ್ಳಾರಿ ಜಿಲ್ಲೆ, ಹಡಗಲಿ ತಾಲೂಕು)

ಡ. E.C. v-iiಚನ್ನರಾಯಪಟ್ಟಣ ೧೯೭, ಶಿವರಗ್ರಾಮ (ಹಾಸನ ಜಿಲ್ಲೆ, ಚನ್ನರಾಯಪಟ್ಟಣ ತಾಲೂಕು) ಇವುಗಳಲ್ಲಿ ಶಿವರಗ್ರಾಮ ಶಾಸನದ ಪದ್ಯವನ್ನು ಮಾತ್ರ ಗುಣವರ್ಮನದೆಂದು ಆರ್. ನರಸಿಂಹಾಚಾರ್ ಕಾ.ಲೋ. (೧೯೬೭) ಮುನ್ನುಡಿ. ಪು. ೬೬ರಲ್ಲಿ ಹೇಳಿರುವರು.

೧೬೧. ಕರಿಯಿವು ಕರಿಯಲ್ಲಿವು ಗಿರಿ। ಗಿರಿಯಲ್ಲಿವು ಕರೀಂದ್ರಮಲ್ಲಿವು ಗಿರಿ ಪೋ।
ಕರಿಗಿರಿಯೆಂದಿನಿಸಪ್ಪೊಡ। ಮರಣ್ಯದೊಳಗಱಿಯಲಾಗ ಕರಿಯಂ ಗಿರಿಯಂ॥

(ಕಾ.ಲೋ. ೧೪೮ ಹೋಲಿಸಿರಿ.)

೩೧	ತಳತಳಿಸಿ ತೊಳಗಿ	೧೦೫೦		
೩೨	ತಾಗದೆ ಪಲ್ಗಳ ತುದಿ	೬೭೭	೩೨೯	
೩೩	ತುಂಗಗಿರಿ ಶಿಖರದಿಂದಂ	೧೧೧೪		
೩೪	ತೆತ್ತುತನಕ್ಕೆ ತೆತ್ತುತನ	೯೮೫		
೩೫	ತೊಡೆ ತೊಡೆಯೊಳ್	೬೫೭		
೩೬	ದಳ್ಳುರಿಯುಗ್ಗಡಂ	೫೩೧		
೩೭	ನಲ್ಲಂಬಿಂದಿಸೆ ಪುಷ್ಪಬಾಣ	೫೫೧		
೩೮	ನೆಲನನಿತುಂ ತೆರಳ್ದಡಿಸಿ	೪೬೩		
೩೯	ಪಚ್ಚು ಪರಿಕಲಿಸಿ	೯೬೬	೩೨೨	
೪೦	ಪಂದಲೆಯೋಳ್[೧೬೨]	೫೩೨		೫೬	೧೮೧
೪೧	ಪಟುಗಳ್ ಪೆರ್ಬಯಲ್	೪೬೫			
೪೨	ಪಟಿಯ ಧರಾತಳಂ	೪೩೭			
೪೩	ಪುದಿದು ಕವಿದಿಡಿದ	೮೭೦			
೪೪	ಪೆಱಗಸಿದಾಗಿ	೭೪೭			
೪೫	ಪೆರ್ಮರನನಡರ್ವ[೧೬೩]	೧೦೯೭		೨೧೭	೧೯೦ ಅ.ಟಿ.
೪೬	ಬಣ್ಣಿಪೆನಾಂ ಜಯದಂಕ[೧೬೪]				೨೨೮
೪೭	ಬಲರಿಪು ತನ್ನ	೪೬೪			
೪೮	ಬಳೆದ ತಮವೆಂಬ	೮೭೧			
೪೯	ಬೆಳಗಪ್ಪ ಜಾವ	೬೯೪	೨೨೫		
೫೦	ಬೆಳರೆ ಮುಖಾಬ್ಜ	೩೬೦	೧೨೭		
೫೧	ಭಾಸುರ ಕೇಸರ		೫೦		
೫೨	ಮದನಂ ಬೆಳ್ಮುಗುಳ್	೫೮೮			
೫೩	ಮಿಱುಗುವ ದಾಡೆ	೧೧೧೨	೨೯		

---

೧೬೨. ಕಾವ್ಯಸಾರದಲ್ಲಿ 'ಅರ್ಧನೇಮಿ' ಎಂದು, ಕಾವ್ಯಾವಲೋಕನ (ಬಸವಲಿಂಗಯ್ಯ)ದಲ್ಲಿ 'ಶೂದ್ರಕ' ಎಂದು ಆಕರ ಹೇಳಲಾಗಿದೆ.

೧೬೩. ಕಾವ್ಯಸಾರದಲ್ಲಿ ತ್ರುಟಿತವಾಗಿದೆ. ಕಾವ್ಯಾವಲೋಕನ (ಬಸವಲಿಂಗಯ್ಯ)ದಲ್ಲಿ ಶೂದ್ರಕ ಎಂದು ಹೇಳಲಾಗಿದೆ.

೧೬೪. ಜಯದಂಕಕಾಱ ಎಂಬುದು ಎರೆಯಪ್ಪನ ಬಿರುದುಗಳಲ್ಲಿ ಒಂದು, ಈ ಮತ್ತು "ಜನೋದಯಂಗಿದಂ" ಎಂಬ ಉದಾಹರಣೆಗಳು ದರ್ಪಣದಲ್ಲಿ ಜೊತೆಯಾಗಿ ಬಂದುದನ್ನು ಗಮನಿಸಬೇಕು.

ಕ್ರಮಾಂಕ	ಪದ್ಯಾದಿ	ಕಾವ್ಯಸಾರ ಪದ್ಯ	ಸೂಕ್ತಿ ಸುಧಾರ್ಣವ ಪುಟ	ಕಾವ್ಯಾವಲೋಕನ ಪದ್ಯ	ಕ.ಭಾ.ಭೂ. ಸೂತ್ರ	ಶ.ಮ.ದ. ಸೂತ್ರ
೫೪	ಮಿಳಿರ್ವರುಣಧ್ವಜ	೭೬	೧೮	೮೮೪		
೫೫	ಮೀಂಗಳಳತೆ	೭೭				
೫೬	ಮುಗಿಲೊಡೆಯೆ		೫೧			
೫೭	ಮುಂದಾಗಿ ದಿನಪ	೮೯				
೫೮	ಮುಳಿವಳಿಟಿಪ್ಪ	೯೯೩				
೫೯	ಮೇರು ಪೊಸಂತಿಲ್	೨೩೯				
೬೦	ಮೊಲೆ ಪೊಣರ್ವೆಟ್ಟು	೬೧೨				
೬೧	ಲಲನೆಯ ಕದಪು	೩೨೮				
೬೨	ವರುಣಂ ವಾರ್ಧಿ[೧೬೫]	೩೬೧				೨೨೮
೬೩	ಶ್ರೀರಾಜಾವರ್ತದಿಂ				೧೭೫	
೬೪	ಸಂಗರಾರ್ಜುನಂ	೫೨೯(ಗ)				
೬೫	ಸಣ್ಣಂ ನಡು ತಿಣ್ಣಂ	೨೮೧				
೬೬	ಸಮಪಾದಂ ಕಟಿ	೬೫೬				
೬೭	ಸಮರತ ಸೌಖ್ಯ	೬೬೫				
೬೮.	ಸತ್ತಿಗೆ ಗಗ್ಗರಂ	೫೩೩				
೬೯	ಸ್ತನಯುಗ್ಮಂ ತಲ್ಪ	೬೬೪				
೭೦	ಸಿರಿಸಂ ಸೀರೆ ಬೆಳ	೧೦೪೦				
೭೧	ಸೀಯೆ ತಲೆ ಬೇಯೆ	೫೩೬				
೭೨	ಸುಯ್ಯ ಮಿಡುಪು	೬೭೬	೩೩೩	೩೧೧		
೭೩	ಸುರಪತಿಯಂತೆ[೧೬೬]	೧೦೩೬	೪೭	೩೩೮		
೭೪	ಸುಲಿಪಲ್ ತಟ್ಟಿಲ	೫೨೫				

ಮೇಲಣ (೭೩ ಪದ್ಯ, ೧ ಗದ್ಯದ ತುಂಡು) ಒಟ್ಟು ೭೪ ಉದ್ಧರಣೆಗಳಲ್ಲಿ ಕಥನಾಂಶಕ್ಕಿಂತ ವರ್ಣನಾಂಶ ಹೆಚ್ಚು. ೪೫ ವಿವಿಧ ವರ್ಣನೆಗಳ ಕಾವ್ಯಸಾರದಲ್ಲಿ ಈ ಕೃತಿಗೆ ಸಂಬಂಧಿಸಿದುವು ೨೨ ವಿವಿಧ ವರ್ಣನೆಗಳು. ಹದಿನೆಂಟು ವರ್ಣನೆಗಳಲ್ಲಿ ಸುಮಾರು ಹದಿನಾರಕ್ಕೆ ಉದಾಹರಣೆಗಳು ಇಲ್ಲಿರುವ ಕಾರಣ, ಅಷ್ಟಾದಶವರ್ಣನೆಗಳ ಮಹಾಕಾವ್ಯವಾಗಿರಬಹುದಾದ ಶೂದ್ರಕದ ಈ ಪದ್ಯಗಳನ್ನು ಘಟ್ಟಘಟ್ಟಗಳಲ್ಲಿ ಇಟ್ಟು ನೋಡಬೇಕು.

---

೧೬೫. ಕಾವ್ಯಸಾರದಲ್ಲಿ ಆಕರ ತ್ರುಟಿತ. ಅಂಕಿತದಿಂದ 'ಶೂದ್ರಕ' ಎಂದು ಸ್ಪಷ್ಟವಾಗುತ್ತದೆ.

೧೬೬. ಕಾವ್ಯಸಾರದಲ್ಲಿ 'ಪುಷ್ಪದಂತ ಪುರಾಣ' ಎಂದು, ಕಾ. ಲೋಕನ (ಬಸವಲಿಂಗಯ್ಯ) ದಲ್ಲಿ 'ಶೂದ್ರಕ' ಎಂದು ಆಕರ ಹೇಳಲಾಗಿದೆ.

ಪೀಠಿಕೆ: ಭಾರತೀಯ ಸಂಪ್ರದಾಯದಂತೆ ಕಾವ್ಯ ಪ್ರಾರಂಭವಾಗುವುದು ಮಂಗಲಪದ್ಯದಿಂದ. 'ತಗುಳ್ಚಿ ಪೇಟುವ' ಮಹಾಕಾವ್ಯಗಳಲ್ಲಿ ಇದು ಆಶೀರ್ವಾದಪರವಾಗಿರುವುದರಿಂದ ಶೂದ್ರಕದ ಆದಿ ಪದ್ಯ ಕೆಳಗಿನದಾಗಿರಬಹುದು.

ಶ್ರೀ ರಾಜಾವರ್ತದಿಂ ಕಂಡರಿಸಿದ ಸತಿವೋಲ್, ಕೌಸ್ತುಭಂ ಮೇಘಮಾಲಾ-
ಕಾರಂಬೋಲ್, ಶಂಖಮಮ್ಮಂಗೊಡಲಿಯ ಮುಗುಳ್ವೋಲ್, ನಾಭಿಕೂಪೋಪಜಾತಂ।
ನೀರೇಜಂ ನೀಳ್ದ ಕನ್ನೆಯ್ದಿಲವೊಲಿರೆ ತನುಚ್ಛಾಯೆಯಿಂ ಮಿಕ್ಕಲೋಕಾ
ಕಾರಂ ರಕ್ಷಿಪ್ಪನಕ್ಕೀ ಭುವನ ಭುವನಮಂ ಗಾಂಗಚಕ್ರಾಯುಧಾಂಕಂ ॥[೧೬೭]

'ಮಹಾಬಲಿಕುಲ ವಿಧ್ವಂಸಕ' ಮಹೇಂದ್ರನನ್ನು ಭೀಕರವಾಗಿ ಕೊಂದ ಎರೆಯಪ್ಪನಿಗೆ ಇಲ್ಲಿ 'ಗಾಂಗ ಚಕ್ರಾಯುಧ' ಎಂಬುದು ತುಂಬ ಒಪ್ಪುವ ಹೆಸರು. ಸ್ತುತಿಪದ್ಯದಲ್ಲಿ ಪಂಪನ ಅರಿಕೇಸರಿ 'ಉದಾತ್ತ ನಾರಾಯಣ', ರನ್ನನ ಇರಿವಬೆಡಂಗ 'ಚಾಳುಕ್ಯನಾರಾಯಣ'ಗಿದ್ದರೆ, ಗುಣವರ್ಮನ ಎರೆಯಪ್ಪನು ಇಲ್ಲಿ 'ಗಾಂಗಚಕ್ರಾಯುಧ' ನಾಗಿರುವನು. ಪಂಪನು '...... ಪಂಡಿತರೆ ತಗುಳ್ದು ಬಿಚ್ಚಳಿಸೆ ಪೇಟಲೊಡರ್ಚಿದೆನೀ ಪ್ರಬಂಧಮಂ'[೧೬೮] ಎಂದಿದ್ದರೆ, ಗುಣವರ್ಮನು'......ಜನೋದಯಂಗಿದಂ ಪೇಟಲೊಡರ್ಚಿದೆಂ'[೧೬೯] ಎಂದು ಪೀಠಿಕೆ ಹಾಕಿದ್ದಾನೆ. ಈ 'ಜನೋದಯಂ' ಎರೆಯಪ್ಪನ ಒಂದು ಬಿರುದು.

ಗರ್ಭವರ್ಣನೆ: ಎರೆಯಪ್ಪನನ್ನು ಉದರ ತುಂಬಿಕೊಂಡ ರಾಜಮಾತೆಯ ಗರ್ಭವರ್ಣನೆಯ ಪದ್ಯವೊಂದು ಹೀಗಿದೆ:

ಬೆಳರೆ ಮುಖಾಬ್ಜಮಾಯ್ತಡಸಿದೊಳ್ಳೆಲೆಯಂತೆ, ಪಯೋಧರದ್ವಯಂ
ಗಳ ತುದಿ ತೋಱಿತಮಲೇಂದುವ ಲಾಂಛನದಂದದಂತೆ, ನೀ।
ರೊಳಗಣ ರೇಖೆಯಂತೆ ಕಿಡೆ ಚಾರುವಳಿತ್ರಯಮಾ. ಶಿರೀಷ ಕೋ
ಮಳೆ ನವಮೇಘದಂತೆ ಗುರುಗರ್ಭಭರಾನ್ವಿತೆಯಾದಮೊಪ್ಪಿದಳ್ ॥[೧೭೦]

ಈ ಪದ್ಯದಲ್ಲಿ ಗರ್ಭಿಣಿಯ ಬಿಳಿಮೊಗವನ್ನು ಅಡಸಿದೊಳ್ಳೆಲೆಗೆ, ಕಪ್ಪು ಚೂಚಕವನ್ನು ಚಂದ್ರನ ಕಲೆಗೆ ಹೋಲಿಸುತ್ತ ಕೊನೆಗೆ 'ನೀರೊಳಗಣ ರೇಖೆಯಂತೆ ಕಿಡೆ ಚಾರುವಳಿತ್ರಯಂ' ಎಂದು ಹೇಳಿದುದು ನಮ್ಮ ಸಾಹಿತ್ಯಕ್ಕೆ ಸಂದ ಉಜ್ವಲ ಉಪಮೆ, ನವೀನ ಕಲ್ಪನೆ. ನಾಗಚಂದ್ರನ 'ಲಲಾಟದೊಳ್ ವಿಧಿಯ ಬರೆದ ಲಿಪಿ ಜಲಲಿಪಿಯೇ?'[೧೭೧] ಎಂಬುದಕ್ಕೆ ಮಿಗಿಲಾದ ಮಾತು.

ಕುಮಾರೋದಯ ವರ್ಣನೆ: 'ನವಮೇಘದಂತೆ ಗುರುಗರ್ಭಾನ್ವಿತೆ'ಯಾದ ರಾಜಮಾತೆಯ ಉದರದಿಂದ ರಾಜಕುಮಾರ ಜನಿಸಿದ ರೀತಿಯಿದು:

ವರುಣಂ ವಾರ್ಧಿಯಿನಬ್ಜಜಂ ಕಮಲದಿಂ ದೈತ್ಯಾಲಯಸ್ತಂಭದಿಂ
ನರಸಿಂಹಂ ಘಟದಿಂ ಘಟಾತ್ಮಜನಿನಂ ಪೂರ್ವಾದ್ರಿಯಿಂ ತಿಂಗಳಿಂ

---

೧೬೭. ಕ.ಭಾ.ಭೂ.ಸೂ. ೧೭೫ದಲ್ಲಿ (ನರಸಿಂಹಾಚಾರ್ ಆವೃತ್ತಿ) ಈ ಪದ್ಯಕ್ಕೆ "ತಥಾ ಪ್ರಯೋಗೋ ಗುಣವರ್ಮಣಃ" ಎಂದು ಹೇಳಲಾಗಿದೆ.

೧೬೮. ಪಂ. ಭಾರತ ೧-೧೧

೧೬೯. ಶ.ಮ.ದ. ಸೂ. ೨೨೮

೧೭೦. ಕಾ.ಸಾ. ಪದ್ಯ ೩೬೦, ಸೂಕ್ತಿ. ಪುಟ ೧೨೭

೧೭೧. ಪಂ. ರಾಮಾಯಣ ೩-೩೧

ಕಿರಣಂ ಧಾರಿಣಿಯಿಂ ಫಣೀಂದ್ರನೊಗೆವಂತುತ್ಸಾಹದಿಂ ಲೋಕಮಂ
ಪೊರೆಯಲ್ಕೆಂದಸಹಾಯ ಶೌರ್ಯನೊಗೆದಂ ಶ್ರೀಗಂಗಚಕ್ರಾಯುಧಂ॥[೧೭೨]

ವಾರಿಧಿ, ಕಮಲ, ಸ್ತಂಭ, ಘಟ, ಪೂರ್ವಾದ್ರಿ, ತಿಂಗಳು, ಧರಣಿಗಳಿಂದ ಕ್ರಮವಾಗಿ ವರುಣ, ಬ್ರಹ್ಮ, ನರಸಿಂಹ, ಘಟಾತ್ಮಜ, ಸೂರ್ಯಕಿರಣ, ಫಣೀಂದ್ರರು ಪ್ರಕಟವಾಗುವಂತೆ ಲೋಕಕಲ್ಯಾಣಕ್ಕೋಸುಗ ಗಂಗಚಕ್ರಾಯುಧನು ಜನಿಸಿದನೆಂದುದು ಧ್ವನಿಪೂರ್ಣ ಹೇಳಿಕೆ.

ರಾಜವರ್ಣನೆ: ಶೈಶವ, ಬಾಲ್ಯಗಳು ಸರಿದು ಯೌವನ ಎಚ್ಚರಗೊಳ್ಳುವಲ್ಲಿ, ಎರೆಯಪ್ಪನು 'ಉದಾರ ಮನ್ಮಥ'ನಂತೆ, 'ಶ್ರೀರೂಪ ಕಂದರ್ಪ'ನಂತೆ ಶೋಭಿಸಿದನು. ಕೋಟಿಕೋಮಲೆಯರ ಕಣ್ಣನ್ನು ಹಿಡಿಯುವ ರೂಪಶ್ರೀ ಅವನದು.

ನಲ್ಲಂಬಿಂದಿಸೆ ಪುಷ್ಪಬಾಣನೆರ್ದೆಯಂ ಬೆಂಬಟ್ಟು ಬೆಳ್ಳಾಗಿ ತ
ಕ್ಕೆಲ್ಲಂ ಕೆಟ್ಟೆರ್ದೆಗೆಟ್ಟು, ಜಂಗಮಲತಾಸಲ್ಲೀಲೆಯರ್ ಬಾಲೆಯರ್
ಚೆಲ್ಲಂ ಬೇಂಟದ ತೋಟಿಯೊಳ್ ತೊಡರೆ ಕಂಡತ್ತಟ್ಟಜಿಯೊಳ್ ನೋಡೆ ಮೆ-
ಯ್ಯೆಲ್ಲಂ ದಿಟ್ಟಿಗಳಾದೊಡಿಂದ್ರನೆನಿಸಲ್ಕಾರ್ತಂ ಮಹೇಂದ್ರಾಂತಕಂ॥[೧೭೩]

ತನ್ನ ಚೆಲುವನ್ನು ಕಣ್ಣಲ್ಲಿ ತುಂಬಿಕೊಳ್ಳುವ ಲಲನೆಯರ ಲೌಲ್ಯದೃಷ್ಟಿಗಳನ್ನು ಮೈಯಲ್ಲಿ ಮೂಡಿಸಿಕೊಂಡಿರುವ ಎರೆಯಪ್ಪನು, ಸಹಸ್ರಾಕ್ಷನಾದ ಇಂದ್ರನಂತೆ ಶೋಭಿಸಿದನೆಂಬುದು ಉತ್ಕೃಷ್ಟಕಲ್ಪನೆ. ಮೈಯಾಗಸದ ತುಂಬ ಚೆಲುವೆಯರ ದೃಷ್ಟಿ ಚುಕ್ಕಿಗಳನ್ನು ಕೀಲಿಸಿಕೊಂಡ ಎರೆಯಪ್ಪನ ನವುರಾದ ಚಿತ್ರ ಇಲ್ಲಿ ಎದ್ದುಬರುತ್ತದೆ. ಅರಸನ ರೂಪಶ್ರೀ ಹೀಗಿದ್ದರೆ ವೀರಶ್ರೀ,

ಮೇರು ಪೊಸಂತಿಲ್ ಕುಡಿತೆಯ
ನೀರಂಬುಧಿ ಗಗನತಳಮೆ ಕೈ ದಿವಿಜಗಣಂ
ಕಾರೊಕ್ಕಲೆಂದೊಡುಟಿದವ
ರಾರಾತನ ಮಸಪ ಮಸಕದೆಸಕಮನಿಟಿಪರ್॥[೧೭೪]

ಎಂಬಂತಿದೆ. ಇಲ್ಲಿ ಎರೆಯಪ್ಪನ ನೀಳವಾದ ನಿಲುವು, ಭವ್ಯಚಿತ್ರದ ಮೂಲಕ ಬೆರಗುಗೊಳಿಸುತ್ತದೆ. ಇಂಥ ರೂಪಸಂಪತ್ತು, ಶೌರ್ಯಸಂಪತ್ತುಗಳಿಗೆ ಆಗರವಾದ ಈತನು,

ಗೆಲವಂಗೊಂಡಭಿಮಾನಿಯಾದನೊಳಕೊಂಡನ್ಯಾವನೀ ಕಾಂತೆಯಂ
ಸಲೆ ಶೌಚವ್ರತಿಯಾದನಿರ್ತೆಱದೆರಟ್ಟಾತಾಡಿ ಬಟ್ಟುಂ ಜಗ।
ದ್ವಲಯಕ್ಕೊರ್ನುಡಿಕಾರನಾದನನಯಕ್ಕುಳ್ಕಳ್ಕಿ ಸಂಗ್ರಾಮದೊಳ್
ಕಲಿಯಾದಂ ವಿಪರೀತಜಾತಚರಿತಂ ಭೂಪಾಲರೊಳ್ ಕಾಮದಂ॥[೧೭೫]

ವಿಷಮಕ್ರಿಯಾಲೋಲುಪನಂತೆ ತೋರಿದರೂ ನೀತಿಮಾರ್ಗನೆನಿಸಿಕೊಂಡ ಬಗೆಯನ್ನು ವರ್ಣಿಸುತ್ತ ಈ ಪದ್ಯ, ಆತನನ್ನು 'ವಿಪರೀತಜಾತಚರಿತ' ಎಂದು ಬಣ್ಣಿಸುತ್ತದೆ. ಸಂಸ್ಕೃತ ಸಾಹಿತ್ಯದಲ್ಲಿ ಶೂದ್ರಕನನ್ನು 'ವಿಷಮಶೀಲ'ನೆಂದು

---

೧೭೨. ಕಾ.ಸಾ.ಪ. ೩೬೧, ಶ.ಮ.ದ. ಸೂ. ೨೨೮

೧೭೩. ಕಾ.ಸಾ. ಪ. ೫೫೧

೧೭೪. ಕಾ.ಸಾ.ಪ. ೨೩೯

೧೭೫. ಕಾ.ಲೋಕನ ೨೬೧; ಶ.ಮ.ದ. ಸೂ. ೧೯೪, ೧೯೮

ಕರೆದುದನ್ನು ಇಲ್ಲಿ ಗಮನಿಸಬೇಕು. ಇಂತಹ ಅಪೂರ್ವ ವ್ಯಕ್ತಿಯಾದ ಈತನನ್ನು,

ಎರೆದರ್ ಸಂತುಷ್ಟರಾದರ್ ಕದನದೊಳಿದಿರಂ ಮೀಱಿಮಾಱಾಂತುನಿಂದಾಂ
ತರಿಭೂಪರ್ ಭಸ್ಮಮಾದರ್ ಭಯರಸವಶದಿಂ ಕಂಡಡಬ್ಬಾಸನಾಯು।
ರ್ಧರರಾದರ್ ಬಿರ್ದುಗೊಂಡಾಡುವ ಮದನ ಮದೋನ್ಮತ್ತೆಯರ್ ನಲ್ಲರಾದರ್
ನರರಾರ್ ನಿನ್ನನ್ನರೀ[ಭೂ]ಭುವನಭವನದೊಳ್ ಗಂಗಚಕ್ರಾಯುಧಾಂಕಾ॥[೧೭೬]

ಎನ್ನುವಲ್ಲಿ ಎರೆಯಪ್ಪನ ದಾನಗುಣ, ವೀರವೃತ್ತಿ, ಶೃಂಗಾರಭಾವಗಳನ್ನು ವ್ಯಕ್ತಗೊಳಿಸಲಾಗಿದೆ. ಈಗ ಅರಿಕೇಸರಿಯ ಸದ್ಗುಣಗಳಿಗೆ ಮಾರುವೋದ ಪಂಪನ ಮನಃಸ್ಥಿತಿಯನ್ನು ಗುಣವರ್ಣನಲ್ಲಿ ಕಾಣಬಹುದು.

ಸ್ತ್ರೀರೂಪ ವರ್ಣನೆ: ಶೂದ್ರಕಕ್ಕೆ ಸಂಬಂಧಿಸಿದ ಸ್ತ್ರೀರೂಪವರ್ಣನೆಯ ಎರಡು ಪದ್ಯಗಳು ಲಭಿಸುತ್ತಿದ್ದು, ಇವು ಬಹುಶಃ ಅರಸಿ ವಿನಯವತಿಯ ಲಾವಣ್ಯವನ್ನು ಕುರಿತುವು.

ಲಲನೆಯ ಕದಪುಗಳೊಳ್ ಮಾ
ರ್ಮಲೆದೊಡಜಂ ಪಿಂಗವೇಟ್ಟು ಮೂಗರಿದುದಜೆಂ।
ದೆಲೆಗಳ ಲೋಕದೊಳೆಲ್ಲಿಯು
ಮೆಲೆಗಳ ಮೂಗರಿವುದಾದುದಂದಿಂ ಬೞೆಯಿಂ॥[೧೭೭]

ಸಣ್ಣಂ ನಡು ತಿಣ್ಣಂ ಮೊಲೆ
ಬಣ್ಣಂ ಪಸುರ್ವೆಸರ ಬಣ್ಣವಧರಂ ಮಧುರಂ
ಕಣ್ಣಲರ್ಗಣ್ಣೆಮೆ ಮಂದಂ
ಬಣ್ಣಿಸಲರಿದಬ್ಜಜಂಗಮಾಕೆಯ ರೂಪಂ॥[೧೭೮]

ಈ ಎರಡು ಪದ್ಯಗಳಲ್ಲಿ ಒಂದೊಂದರ ಸೌಂದರ್ಯ ಒಂದೊಂದು ರೀತಿ. ಮೊದಲನೆಯ ಪದ್ಯದಲ್ಲಿ ಬ್ರಹ್ಮನು ರಾಣಿಯ ಕದಪಿನೊಂದಿಗೆ ಮತ್ಸರಿಸುವ ಚಿಗುರೆಲೆಗಳ ಗರ್ವದ ಮೂಗನ್ನು ಸೀಳಿದನೆಂದು ಮನೋಜ್ಞವಾಗಿ ಹೇಳಿದ್ದರೆ, ಎರಡನೆಯ ಪದ್ಯದ ಚಿಕ್ಕಚಿಕ್ಕ ವಾಕ್ಯಗಳಲ್ಲಿ ಅವಳ ಸರ್ವಾಂಗ ಸೌಂದರ್ಯವನ್ನು ಸೆರೆಹಿಡಿಯಲಾಗಿದೆ. 'ಬಣ್ಣಂ ಪಸುರ್ವೆಸರ ಬಣ್ಣಂ' ಎಂಬ ದೇಸಿ 'ಪೊಸವೆಸಱಗೆಯ ಬಣ್ಣದಂತೆ ಸೊಗಯಿಸುವ ಸಾಮಂತಚೂಡಾಮಣಿಯ ಮೆಯ್ಯ ಬಣ್ಣಂ'[೧೭೯] ಎಂದು ಪಂಪನಲ್ಲಿ ನುಸುಳಿ ನಿಂತಿದೆ.

ಸುರತ ವರ್ಣನೆ: ಚರಣಾಲಕ್ತಕ ಲಾಂಛನಂ ನಿಟಿಲದೊಳ್ ಕೇಯೂರ ಮುದ್ರಾಂಕಿತಂ
ಕೊರಲೊಳ್ ಕಜ್ಜಲರೇಖೆ ತನ್ನಧರದೊಳ್ ತಾಂಬೂಲರಾಗಂ ದೃಗಂ।
ತರದೊಳ್ ಪುಷ್ಪರಜಃ ಪ್ರಲೇಪಮುರದೊಳ್ ತಳ್ಪೊಯ್ಯೆ ನಿಚ್ಚಂ ವಿಚಿ
ತ್ರರತ ಪ್ರೌಢತೆ ಭಾವಗಮ್ಯಮೆನಿಕುಂ ಶ್ರೀರೂಪಕಂದರ್ಪನಾ॥[೧೮೦]

---

೧೭೬. ಕಾ.ಸಾ.ಪ. ೨೧೫
೧೭೭. ಕಾ.ಸಾ.ಪ. ೩೨೮
೧೭೮. ಕಾ.ಸಾ.ಪ. ೨೮೧
೧೭೯. ಪಂ. ಭಾ.ಪು. ೫೧
೧೮೦. ಕಾ.ಸಾ.ಪ. ೬೫೫

ಸುರತೋದ್ಯೋಗದಲ್ಲಿ ನಿರತನಾದ ಶೂದ್ರಕನ 'ವಿಚಿತ್ರರತ'ವನ್ನು ಈ ಪದ್ಯ ವರ್ಣಿಸುತ್ತದೆ. ಅರಸಿಯ ಪಾದದ ಅಲತಿಗೆ ಹಣೆಯಲ್ಲಿ, ಕೇಯೂರ ಮುದ್ರೆ ಕೊರಳಲ್ಲಿ, ಕಣ್ಣಿನ ಕಾಡಿಗೆ ತುಟಿಯಲ್ಲಿ, ಬಾಯಿಯ ತಾಂಬೂಲವರ್ಣ ಕಣ್ಣಲ್ಲಿ, ಮುಡಿಯ ಪುಷ್ಪರಜ ಎದೆಯಲ್ಲಿ ಮೂಡಿನಿಂತ ಶೂದ್ರಕನ ಚಿತ್ರ ವಿಚಿತ್ರಸುಂದರವಾಗಿದೆ, ಅರಸನ ಸುರತ ರುಚಿಗೆ ಸಾಕ್ಷಿಯೆನಿಸಿದೆ.

ಸುಯ್ಯ ನಿಡುಪುಡುಗದಿರೆಯುಂ
ಮೆಯ್ಯ ನಿಮಳ್ಗದೆಯುಮಂತೆ ಲುಂದದಿನಿರುಳೊಳ್।
ಬಯ್ಯಲೆ ಪೊಯ್ಯಲೆ ಕುರುಳಂ
ಕೊಯ್ಯಲೆ ಬೆಳಗಾಯ್ತು ವಿನಯವತಿಗಂ ಪತಿಗಂ ॥[೧೮೧]

ಸಂಭೋಗಶ್ರಮದಿಂದ ಹೊಮ್ಮಿದ ಬೆವರು ಆರುವಷ್ಟರಲ್ಲಿ, ನಿಟ್ಟುಸಿರು ನಿಲ್ಲುವಷ್ಟರಲ್ಲಿ, ಸೂರ್ಯೋದಯವಾಯಿತೆಂದು ಹೇಳುವ ಈ ಪದ್ಯ ಅರಸ-ಅರಸಿಯರ ಅನಂತಸುರತಸುಖದ ಅತೃಪ್ತಿಯನ್ನು ವ್ಯಕ್ತಗೊಳಿಸುತ್ತದೆ. ಇಲ್ಲಿಯ ವಿನಯವತಿ ಎಂಬ ಕಥಾನಾಯಕಿಯ ಹೆಸರು ಗುಣವರ್ಮನ ಶೂದ್ರಕದ ಮೂಲಮಾತೃಕೆಯನ್ನು ಸೂಚಿಸುವ ಏಕೈಕ ಅಂಶವಾಗಿದೆ.

ಬೇಟೆಯ ವರ್ಣನೆ: ಸೈನ್ಯಪಡೆ, ಬೇಡ ಪಡೆಗಳನ್ನು ಕಟ್ಟಿಕೊಂಡು ಕಾಳಗ ಮಾಡುವುದು, ಬೇಟೆಯಾಡುವುದು ಎಂದರೆ ಅರಸರಿಗೆ ಅಮಿತೋತ್ಸಾಹ. ಇಂಥ ಒಂದು ಪ್ರಸಂಗದಲ್ಲಿ ಎರೆಯಪ್ಪನು ಕಂಡ ಶಬರಿಯರ ಸೊಬಗು ಹೀಗಿದೆ:

ಅಲರ್ಗಣ್, ಪೊಂಗಿದ ಲೋಳೆವಾಯ್, ನಗೆಮೊಗಂ, ತೊಂಗಲ್ಗುರುಳ್, ಕೆಂದಳಂ।
ಸುಲಿವಲ್, ಸೋರ್ಮುಡಿ, ತೆಳ್ವಸಿಱ್, ಪೆಱನೊಸಲ್, ಪೊಂಬಾಳೆ, ಪಚ್ಚೋಲೆ, ನೇ।
ಜೆಲಪಣ್ಣಂ ತಿಳಿಯೆಣ್ಣೆಯೊಳ್ ಬಯಸಿ ತೊಯ್ದಂತಪ್ಪ ನುಣ್ಗರ್ಪು, ಪೆ
ರ್ಮೊಲೆ ಚೆಲ್ವಾಗಿರೆ ನಿಂದ ಬೇಡತಿಯರಂ ಕಂಡಂ ಮಹಿವಲ್ಲಭಂ॥[೧೮೨]

ಈ ಪದ್ಯದಲ್ಲಿ ಕಿರಾತಕನ್ಯೆಯರ ಅಂಗಾಂಗವನ್ನು ಬಣ್ಣಿಸುತ್ತ, ಅವರ ಕರಿಕಪ್ಪು ಬಣ್ಣವನ್ನು 'ನೇಜೆಲಪಣ್ಣಂ ತಿಳಿಯೆಣ್ಣೆಯೊಳ್ ಬಯಸಿ ತೊಯ್ದಂದಪ್ಪ ನುಣ್ಗರ್ಪು' ಎಂದು ಹೇಳಿದುದು, ಗುಣವರ್ಮನ ಮತ್ತೊಂದು ನವೀನಕಲ್ಪನೆ. ಈ ಕಲ್ಪನೆಯ ಕೂಸು "ಎಣ್ಣೆಯೊಳರನೇಱಲ ತನಿವಣ್ಣಂ ನುಣ್ಣಿಸಿದನಬ್ಜಭವನೆನಿಸುವ ಮೆಯ್ವಣ್ಣದ ಶಬರಿ'[೧೮೩] ಎಂದು ಹರಿಹರನಲ್ಲಿ (?) ಪ್ರಮದೆಯಾಗಿದೆ. ಇಂಥ ಕಿರಾತಕನ್ಯೆಯರ, ಕಿರಾತವೀರರ ಮಧ್ಯೆ ಕಾಡನ್ನೆಲ್ಲ ಸುತ್ತಿ ಅರಸನು ಬೇಟೆಯಾಡಿದ ಪ್ರಸಂಗಗಳು ಈ ರೀತಿಯಿವೆ:

ಕೀಲಿಸಿ ಕಂಧರದೊಳ್ ಭೂ
ಪಾಲಕನಿಡೆ ನೊಂದ ಪಂದಿ ತಿರುಗುವ ಪದದೊಳ್।
ಕೋಲಿಂದಾಡುವ ತಿಗುರಿಯ
ವೋಲಂತಿರೆ ತೋಱ ತಿಟ್ಟತನು ಕೆಡವಿನೆಗಂ॥[೧೮೪]

---

೧೮೧. ಕಾ.ಸಾ.ಪ. ೬೭೬;ಸೂಕ್ತಿ ಪು. ೩೩೩; ಕಾ.ಲೋ. ಪ. ೩೧೧

೧೮೨. ಕಾ.ಸಾ.ಪ. ೧೦೮೭; ಸೂಕ್ತಿ. ಪು. ೬೦; ಕಾ.ಲೋಕನ. ಪ. ೧೦೬; ಶ.ಮ.ದ. ಸೂ. ೭೯(ಹೋಲಿಕೆ)

೧೮೩. ಕವಿಚರಿತೆಕಾರರು ಇದು ಗಿರಿಜಾಕಲ್ಯಾಣದ ಪದ್ಯವೆನ್ನುವರು (ಕ.ಕ.ಚ. ೨೫೮). ಆದರೆ ಈಗ ಉಪಲಬ್ಧವಿದ್ದ ಯಾವ ಹಸ್ತಪ್ರತಿಯಲ್ಲಿಯೂ ಇದು ಕಂಡುಬರುವುದಿಲ್ಲ.

೧೮೪. ಕಾ.ಸಾ.ಪ. ೧೧೧೩;ಸೂಕ್ತಿ ಪು. ೪೫; ಶ.ಮ.ದ. ಸೂ. ೭೯

'ಕೈಪಱಿದ ಗಜೇಂದ್ರನಂತೆ' ಸಾಗಿ ಬಂದ ಹಂದಿ, ಅದರ ಕತ್ತಿನಲ್ಲಿ ಶೂದ್ರಕನು ಕೀಲಿಸಿದ ಕೋಲು, ಆ ಕೋಲು ಸಹಿತವಾಗಿ ಕೋಲಿಂದ ತಿರುಗುವ ತಿಗುರಿಯಂತೆ ಸುತ್ತುಹೊಡೆಯುವ ಹಂದಿಯ ದೇಹ-ಈ ಚಿತ್ರಗಳಲ್ಲಿ ಗುಣವರ್ಮನ ದೇಸಿ ದಿವ್ಯಗೊಂಡಿದೆ.

ತುಂಗಗಿರಿ ಶಿಖರದಿಂದಂ
ಲಂಗಿಸಿ ಶೂದ್ರಕನ ಪೊಳೆವ ಸುರುಗಿಯ ಮೊನೆಯೊಳ್।
ಪೊಂಗಿ ಸೊಡರ್ಗುಡಿಯ ಮೇಲೆ ಪ
ತಂಗಂ ಪಾಯ್ವಂತೆ ಪಾಯ್ದುಬಂದುದು ಸಿಂಗಂ॥[೧೮೫]

ಸೂಕರ ಬೇಟೆಯಲ್ಲಿ ಕಣೆ ಕೌಶಲ ತೋರಿದ ಶೂದ್ರಕನು, ಈಗ ಸಿಂಹಬೇಟೆಯಲ್ಲಿ ಖಡ್ಗ ಕೌಶಲ ತೋರಿಸಿರುವನು. ಶೂದ್ರಕನ ಒರೆ ಹಿರಿದ ಖಡ್ಗ ಪ್ರಜ್ವಲಿಸುವ ಸೊಡರು, ಗಿರಿಶಿಖರದಿಂದ ನೆಗೆದು ಬರುವ ಸಿಂಹ ಪತಂಗವೆಂಬ ಕಲ್ಪನೆ ರಮ್ಯವಾಗಿದೆ.

ಮುಗಿಲೊಡೆಯೆ ಗಜಱಿ ಗರ್ಜಿಸಿ
ಮೃಗಾರಿ ಮೇಲ್ವಾಯೆ ಕಟ್ಟಿದಲಗಂ ಕಿತ್ತಾ।
ಯುಗವಾಂಕೆಯಾಗೆ ನೆತ್ತ
ಭ್ರುಗಿಲೆಂದೊಡನೆಗೆಯೆ ಸುಭಟಶೂದ್ರಕನಿಱಿದಂ॥[೧೮೬]

ಹುಲಿಯೊಂದು ಮುಗಿಲೊಡೆಯುವಂತೆ ಗರ್ಜಿಸಿ ಮೇಲೆ ಬಿದ್ದರೆ, ನೆತ್ತರ್ ಭುಗಿಲೆಂದು ಚಿಮ್ಮುವಂತೆ ಅಲಗಿನಿಂದಿರಿದ ಶೂದ್ರಕನ ಸಾಹಸ ಇಲ್ಲಿ ಕಣ್ಣೆದುರು ಬರುತ್ತದೆ.

ಶೌರ್ಯ ಮತ್ತು ಯುದ್ಧ ವರ್ಣನೆ: ಗಂಗಸಾಮ್ರಾಜ್ಯಕ್ಕೆ ಸಾವು-ಬದುಕಿನ ಹಗೆಯಾಗಿ ನಿಂತ ಹಲವು ಅರಸರನ್ನು ಮುರಿದ ಎರೆಯಪ್ಪನ ಕ್ಷಾತ್ರದ ಬಗೆಗೆ ಕವಿಯ ಅಭಿಮಾನ ಅಧಿಕ.

ಆರ ನೆಗೞ್ತೆಯುಂ ಬಲಮುಮಾಯತಿಯುಂ ಚಲಮುಂ ಪ್ರಭುತ್ವಮುಂ
ದೂರದೊಳಿರ್ದು ನೋಡೆ ಸೊಗಯಿಪ್ಪುದು ಬೆಟ್ಟದ ನುಣ್ಪಿನಂತೆ ಪೊ।
ಕ್ಕಾರಯೆ ಕಾಣಲಾಗದೞಿನಲ್ಲಿರೆ ಬಲ್ಲಿದರಲ್ಲದಂತೆ ಕಾ
ವೇರಿಯ ನೀರ್ವೊಲಿತ್ತ ಬರೆ ನಿಮ್ಮ ಬಲಂ ಶತಖಂಡಮಾಗದೇ ॥[೧೮೭]

ಕಾವೇರಿ ತೀರದಲ್ಲಿ ನಿಂತ ಬಿಚ್ಚುಗತ್ತಿಯ ವೈರಿಕೋಟಿಗೆ ಕವಿಕೊಟ್ಟ ಈ ಎಚ್ಚರ ವಿರೋಚಿತವಾದುದು. ಎರೆಯಪ್ಪನೆಂಬ ಬೆಟ್ಟ ದೂರದಿಂದ ನೋಡಿದರೆ ಕಮನೀಯ, ಒಳಹೊಕ್ಕು ನಿಂದರೆ ಕರ್ಕಶ ಎಂಬ ಮಾತಿನಲ್ಲಿದ್ದುದು ಅರಸನ 'ವಜ್ರಾದಪಿ ಕಠೋರಾಣಿ ಮೃದೂನಿ ಕುಸುಮಾದಪಿ' ವ್ಯಕ್ತಿತ್ವದ ಚಿತ್ರ. ತನ್ನ ಶಕ್ತಿಸಾಹಸಗಳಿಂದ ಹೆಣಮಯವಾದ ರಣಭೂಮಿಯನ್ನು ಅರಸನು ನಿರೀಕ್ಷಿಸಿದ ಕೆಲವು ದೃಶ್ಯಗಳು ಹೀಗಿವೆ:

---

೧೮೫. ಕಾ.ಸಾ.ಪ. ೧೧೧೪
೧೮೬. ಸೂಕ್ತಿ ಸು. ಪು. ೫೧
೧೮೭. ಕಾ.ಸಾ.ಪ. ೪೩೫

ಆರ್ವ ಪಿಶಾಚಿಯರ್ಕಳನಸುಂಗೊಳೆ ಬೇವ ಪೆಣಕ್ಕೆ ಕೋಪದಿಂ
ಪೋರ್ವ ಮರುಳ್ಗಳಂ ಪಿಶಿತ ಭೋಜನದಲ್ಲಿಗೆ ನಿಲ್ಲದಿಕ್ಕೆಯುಂ।
ಸಾರ್ವ ನಿಶಾಚರೀ ಜನಮನಂತದನಿಕ್ಕುವುದಂ ನಿರಂತರಂ
ಪಾರ್ವ ಪುರಾಣ ರಾಕ್ಷಸರನೀಕ್ಷಿಸಿದಂ ಪ್ರತಿರೂಪ ಶೂದ್ರಕಂ॥[೧೮೮]

ಕಾಸೆಯನುಟ್ಟು ಜನ್ನವಿರಮಂ ಪೆಗಲೊಳ್ ತೆಗೆದಿಕ್ಕಿ ವೇದದ
ಭ್ಯಾಸಮನುಂಟು ಮಾಡಿ ಪೊಲಸಂ ಪಸುತಿರ್ಪ ನಿಶಾಚರರ್ಕಳಂ।
ಗ್ರಾಸಮನುಣ್ಬುದಂದೊಡಣಮೋಳಿಯ ರಕ್ಕಸ ಪಾರ್ವರಿರ್ದುದೊಂ
ದಾಸೆಗೆ ವಿಸ್ಮಯೋದಿತ ವಶೀಕೃತನಾದನುದಾರ ಮನ್ಮಥಂ॥[೧೮೯]

"ಸಂಗ(=ಗಂಗ?) ರಾರ್ಜುನಂ ಸಿದ್ಧನಂತಾ ಸಿದ್ಧಕ್ಷೇತ್ರಮಂ ಪುಗುತಂದನದೆಂತಪ್ಪುದೆಂದೊಡೆ- ಇಂದ್ರಜಾಲಿಗನಂತುರಿಯನುಗುಳ್ವ ಬಳ್ಳಿಗಳಿಂ, ವಾತಪೂರಣಂಗಳಿಂ ನೊಂದಂತೆ ದೆಸೆದೆಸೆಗೆ ಪೊಂಗುವ ಗೂಗೆಗಳಿಂ, ಬೆದೆಕಾಜಿರ್ದೆಯಂತೆ ಬೇಯುತಿರ್ದ ಪೆಣಂಗಳಿಂ, ಜಿಗುಳೆಯಂತೆ ನೆತ್ತರನೆ ಪೀರ್ವ ಡಾಕಿನಿಯರಿಂ, ಭೈರವನಂತೆ ಭಾಂಕಾರಂಗುಡುತಿರ್ಪ ಸಾಧಕರಿಂ, ಗೋದಾಮೆಯಂತೆ ಬಗೆದ ಬಣ್ಣಮಪ್ಪ ರಣಜಟ್ಟಿಗರಿಂ, ನಾರಾಯಣನಂತೆ ಬಲಿಯ ಬೇಡುವ ಬ್ರಹ್ಮರಾಕ್ಷಸರಿಂ, ಬಲದೇವನಂತೆ ಪೆಣನಂ ಪೊತ್ತು ತೊಟಿಲ್ವ ಕ್ಷೇತ್ರಪಾಲರಿಂ, ಈಶ್ವರನಂತೆ ತೊಟ್ಟಿರ್ದ ಬೇತಾಳರಿಂ, ಮೀನ್ಗಳಂತೆ ಗಾಳದೊಳ್ ತೊಡರ್ದಿರ್ದ ಪಾದರಿಗರಿಂ, ಮಹಿಷಾಸುರನಂತೆ ಸೂಲೊಳ್ ನೊಂದು ನರಳ್ವ ಕಳ್ಳರಿಂ, ಬೊಂತಿಯಂತೆ ದಕ್ಕಿನೊಳಿರ್ದ ಪಂದಲೆಗಳಿಂ, ಬಂದಿಕಾಜಿನಂತೆ ತೆಱುಪುವಾದು ಪಿಡಿವ ಶಾಕಿನಿಯರಿಂ, ಮೃಗಯಾಪತಿಯಂತೆ ಕೀಲಾಜಲದೊಳೋಲಾಡುವ ಲಲಾಮೆಯರಿಂ, ಸೋಂಬನಂ ಮೆಚ್ಚಿ ಬೇರೂರ್ಗೆ ಪೋದ ಸೂಳೆಯಂತುಯ್ಯಲಾಡುವ ರಣದೇವತೆಯರಿಂದತಿ ಭಯಂಕರಾಕಾರಮಪ್ಪುದದಜೊಳಗೆ....."[೧೯೦]

ಈ ಗದ್ಯ ಪದ್ಯಗಳಲ್ಲಿ ರಣರಂಗದ ರುದ್ರಭಯಂಕರ ದೃಶ್ಯ ವ್ಯಕ್ತವಾಗಿದೆ. ಪಿಶಾಚಿಗಳ ಆರ್ಭಟೆ, ಆತುರ, ನಟನೆಗಳ ಸುಂದರ ದೃಶ್ಯಗಳನ್ನು ಮೇಳವಿಸಿಕೊಂಡ ಹತ್ತಾರು ಗದ್ಯಚಿತ್ರಗಳು ಮನಮೋಹಕವೆನಿಸಿವೆ. ಸರಪಳಿಯಂತೆ ಸಾಗುವ ಇಲ್ಲಿಯ ಉಪಮೆಗಳು ನಯಸೇನನನ್ನು ನೆನಪಿಗೆ ತರುತ್ತವೆ. ಒಟ್ಟಿನಲ್ಲಿ ಈ ಭಾಗ ಗುಣವರ್ಮನ ಗದ್ಯಶೈಲಿಗೆ ಒಂದು ಉತ್ತಮ ಉದಾಹರಣೆ.

ಇವಲ್ಲದೆ ಇನ್ನೂ ಹಲವು ಪದ್ಯಗಳಲ್ಲಿ ಗುಣವರ್ಮನ ಕಾವ್ಯಶಕ್ತಿಯ ಬೇರೆ ಬೇರೆ ಮುಖಗಳು ಪ್ರತಿಬಿಂಬಗೊಂಡಿವೆ. ಅವು:

ಸೀಯೆ ತಲೆ ಬೇಯೆ ಮೆಯ್ ಮೇ।
ಲ್ವಾಯೆ ಕರಂ ಪಸಿದ ಪುಲ್ಮರುಳ್ ಪಿರಿತಿನಿಗಳ್।
ಬೇಯುತ್ತಮಿರ್ದ ಪೆಣನಂ
ನಾಯುಗಿವಂತುಗಿದು ತಿಂದವೋರೊಂದೆಡೆಯೊಳ್॥[೧೯೧]

ಗಿರಿಯಿದು ಕರಿಯಿದು ಕರಿಯಿದು
ಗಿರಿಯಿದು ಗಿರಿಯಲ್ತು ಕರಿಯಿದಲ್ತು ಕರೀಂದ್ರಂ।
ಗಿರಿವರಮಿದು ಕರಿವರಮಂ
ದರಿದಜಿಯಲ್ ಗಹನದೊಳಗೆ ಗಿರಿಯಂ ಕರಿಯಂ ॥[೧೯೧ಎ]

---

೧೮೮. ಕಾ.ಸಾ.ಪ. ೫೩೪

೧೮೯. ಕಾ.ಸಾ.ಪ. ೫೩೫

೧೯೦. ಕಾ.ಸಾ.ಪ. ೫೨೯ ಗದ್ಯ

೧೯೧. ಕಾ.ಸಾ.ಪ. ೫೩೬

೧೯೧ಎ. ಕಾ.ಸಾ.ಪ. ೧೦೫೭

ಇವಲ್ಲದೆ ಮೇಲೆ ಹೇಳಿದ 'ಸಣ್ಣಂ ನಡು ತಿಣ್ಣಂ ಮೊಲೆ' ಎಂಬ 'ಮೇರು ಪೊಸಂತಿಲ್' ಎಂಬ ಪದ್ಯಗಳು, ಚಿಕ್ಕವಾಕ್ಯ - ಚೊಕ್ಕಭಾಷೆಗಳಲ್ಲಿ ಅಭಿವ್ಯಕ್ತವಾಗುವ ಅಪರೂಪ ಉದಾಹರಣೆಗಳೆನಿಸಿವೆ.

ಸುಲಿಪಲ್ ತಪ್ಪಲ ತಾಲಕಾವಯವಮಂ ಪೀನಂ ಲಲಾಟಾಗ್ರದೊಳ್
ನೆಲೆಗೊಂಡೊಪ್ಪುವ ವೀರಪಟ್ಟಮುದಯಂಗೆಯ್ವಿಂದುವಂ ತೋರ್ಪ ತೊಂ
ಗಲೆ ಜಂಬೂವಿಟಪಪ್ರಾರರುಚಿಯಿಂ ವಕ್ತ್ರಾರುಣಂ ಸಂಜೆಯಂ
ಗೆಲೆ ಪೋಲ್ತತ್ತು ತಳಪ್ರಹಾರಿಯ ಶಿರಂ ಹೇಮಾದ್ರಿಯಾಕಾರಮಂ॥[೧೯೨]

ಒಡನೆ ಸುರಾಸುರರ್ ಕನಕಪರ್ವತಮಂ ಕಡೆಗೋಲಮಾಡಿ ಮೇಣ್
ಪೆಡೆ ಪಲವಪ್ಪ ವಾಸುಕಿ ಮಹೋರಗನಂ ಕಡೆಗಣ್ಣೆ ಮಾಡಿ ಪಾ।
ಲ್ಗಡಲನುಪಾಯದಿಂ ಕಡೆಯೆ ರಾಹುಗೆ ವಾಯುಪಥಾಗ್ರಮೆಂಬ ಪೆರ್
ಮಡಕೆಯೊಳಿಕ್ಕಿ ಕೊಟ್ಟ ಪೊಸ ಬೆಣ್ಣೆವೊಲಿರ್ದುದು ಚಂದ್ರಮಂಡಲಂ॥[೧೯೩]

ಈ ಎರಡು ಪದ್ಯಗಳಲ್ಲಿ ಗುಣವರ್ಮನ ಕಲ್ಪನಾಸಾಹಸವನ್ನು ನಿರೀಕ್ಷಿಸಬೇಕು. ತಳಪ್ರಹಾರಿಯ ಶಿರಂ 'ಹೇಮಾದ್ರಿ', ಚಂದ್ರಮಂಡಲಂ 'ರಾಹುಗೆ ವಾಯುಪಥಾಗ್ರಮೆಂಬ ಪೆರ್ಮಡಕೆಯೊಳಿಕ್ಕಿ ಕೊಟ್ಟ ಪೊಸಬೆಣ್ಣೆ' ಎಂಬಿವು ಭೂಮಕಲ್ಪನೆಗಳು.

ಪಚ್ಚೆ ಪರಿಕಲಿಸಿ ಬೆನ್ನಂ
ಮುಚ್ಚಿರೆ ಮುಡಿ ಕಳ್ಪವೆಳ್ಪವಟ್ಟಲ್ ಬಾಯೊಳ್।
ಬೆಚ್ಚಂತಿರೆ ಸತಿ ಶಶಿಯಂ
ಕಚ್ಚೆ ನೆಲಕ್ಕಿಟಿವ ರಾಹುವಂ ನೆಱೆ ಪೋಲ್ತಳ್॥[೧೯೪]

ಪುದಿದು ಕವಿದಿಡಿದ ತಮದೊ
ಡ್ಡಿರ್ದಿರ್ವಿನಮೊರ್ಮೊದಲೊಳೆರ್ದ ಕಟಿವೆಯ ಸಸಿವೊಲ್।
ಕದಿರ್ಗಳೊಳೆ ತುಱುಗಿ ಮೂಡಿದ
ನುದಯಾದ್ರಿಯೊಳರುಣ ತರುಣ ಕಿರಣ ಪ್ರಸವಂ॥[೧೯೫]

ಬಳೆದ ತಮವೆಂಬ ಕರಡಮ
ನಳವಲ್ಲದೆ ಸುಟ್ಟು ಕಿಡಿಸಲೆಂದಜನುದಯಾ।
ಚಳದೊಳ್ ತಗುಳ್ಚೆ ತಳ್ತೊಡ
ನಳುರ್ವ ದವಾಗ್ನಿಯವೊಲರ್ಕನುದಯಂಗೆಯ್ದಂ॥[೧೯೬]

ಕಿರಣಂಗಳೆ ಕಾವುಗಳೆನೆ
ಹರಿದಶ್ವಂಗಳೆ ಪಸುರ್ತ ಪಸುರೆಲೆಯೆನೆ ತೋ।
ರ್ಪರುಣ ದಿನಮಣಿ ಬಯಲ್ದಾ
ವರೆಯೆನೆ ಪೋಲ್ತಿರ್ದನಪರಗಿರಿವರ ಶಿರದೊಳ್॥[೧೯೭]

೧೯೨.ಕಾ.ಸಾ.ಪ. ೫೨೫

೧೯೩.ಕಾ.ಸಾ.ಪ. ೯೩೮

೧೯೪.ಕಾ.ಸಾ.ಪ. ೯೬೬;ಸೂಕ್ತಿ ಪು. ೩.೨೨(ಉದ್ಭಟಕಾವ್ಯ ೫-೮೨ ನೋಡಿರಿ).

೧೯೫.ಕಾ.ಸಾ.ಪ. ೮೭೦

೧೯೬.ಕಾ.ಸಾ. ಪ. ೮೭೧

೧೯೭. ಕಾ.ಸಾ.ಪ. ೮೮೦

ಈ ನಾಲ್ಕನ್ನಲ್ಲದೆ ಹಿಂದೆ ಹೇಳಿದ ಶೂದ್ರಕನ ಸುರಿಗೆಯನ್ನು ಸೊಡರನ್ನಾಗಿ, ತಿರುಗುವ ಹಂದಿಯನ್ನು ತಿಗುರಿಯನ್ನಾಗಿ ಕಲ್ಪಿಸಿದ ಪದ್ಯಗಳನ್ನೂ ಇಲ್ಲಿ ನೆನೆಯಬಹುದು. ಈ ಒಂದೊಂದು ಪದ್ಯ ಕವಿಯ ಲೋಕಾನುಭವದ ಪ್ರತೀಕ.

ಬೆಳಗಪ್ಪ ಜಾವದಯ್ಯಿಲ್
ಕೊಳೆ ಶೀತಕ್ಕಾಱದಕ್ಕಿ ತೊಟ್ಟಿರ್ದ ಧರಾ।
ತಳಮೆಂಬ ಪೆಣ್ಣ ಪೊಸಕಂ
ಚುಳಿಕೆಯ ಸೀರ್ಮುತ್ತಿನಂದಮಾದುವು ಪನಿಗಳ್॥[೧೯೮]

ತಳತಳಿಸಿ ತೊಳಗಿಬೆಳಗುವ
ಪಳಕಿನ ಸಱಿಯೊಂದು ಮಱಿಯೊಳಿರ್ದೆರಲೆ ಮಹೋ।
ಜ್ವಳ ತುಹಿನಕಿರಣಮಂಡಲ
ದೊಳಗಣ ಹರಿಣಂಬೊಲೊಪ್ಪಿ ತೋಱಿತ್ತಾಗಳ್॥[೧೯೮ಎ]

ಈ ಎರಡರಲ್ಲಿ ಕವಿಗೆಯ್ದ ಕುಸುರುಗೆಲಸ ಬಹುಸೂಕ್ಷ್ಮ. ಕಂದಗಳನ್ನು ಕಟ್ಟುವಲ್ಲಿ ಗುಣವರ್ಮನದು ನುರಿತ ಕೈ ಎಂಬುದಕ್ಕೆ ಸಾಕ್ಷಿ.

ಕೊನೆಯದಾಗಿ ಸ್ತ್ರೀಯ ಸಂಭೋಗತನ್ಮಯತೆಯಲ್ಲಿ ತಪಸ್ತನ್ಮಯತೆಯನ್ನು ಕಂಡ ಕವಿ,

ಸಮರತ ಸೌಖ್ಯದೊಳ್ ಸತಿ ದಿಗಂಬರವೇಷಮನಾಂತು ಮುಕ್ತಕೇ
ಶಮದೆಸೆಯಲ್ಕೆ ಕಣ್ ದರನಿಮೀಲಿತಮಾಗೆ ದಲಾಸನಕ್ರಮಂ।
ಸಮನಿಸೆ ಹೂಂಕೃತಪ್ರಣಮಮೊಪ್ಪೆ ಶರೀರಮನೊಕ್ಕು ತನ್ಮನೋ
ರಮಣನ ಹೃನ್ನಿಧಾನಮನುಪಾರ್ಜಿಪಯೋಗಿನಿಯಂತಿರೊಪ್ಪಿದಳ್॥[೧೯೯]

ಎಂದು ಹೇಳಿ, ಕೆಳಗಿನ ಪದ್ಯದಲ್ಲಿ ವಿರಹಿಣಿಯೊಬ್ಬಳಲ್ಲಿ ಕಾಮದ ಕಾನನವನ್ನು ಕಲ್ಪಿಸಿರುವನು :

ಮೊಲೆ ಪೊಣರ್ವೆಟ್ಟು ಕೋಮಲತೆ ಒಟ್ಟೆ ನಿತಂಬಮಿಱುಂಬು ನಾಭಿ ಕು
ತ್ತುರು ಗುಳಿ ಮಿಂಚುವೊಳ್ನುಡೆ ಮಡಂ ಸುರಿವಾ ಬೆಮರರ್ಬಿಯುರ್ಬಿಕೋ।
ಮಳತನು ಯಷ್ಟಿಕಲ್ಪಲತಿಕಾಂಕುರಮೊಳ್ಮುಡಿ ಸೋಗೆ ಮನ್ಮಥಾ
ನಳಶಿಖಿ ಬೇಗೆಯಾಗೆ ಮದನಾಟವಿಯಂತೆವೊಲೊಪ್ಪಿ ತೋಱಿದಳ್॥[೨೦೦]

ಹೀಗೆ ಉಜ್ವಲ ಭಾವ, ಉಚಿತ ಭಾಷೆ ಇವುಗಳನ್ನು ದಾಂಪತ್ಯಗೊಳಿಸುವ ಸುಂದರ ಶೈಲಿಯ ಪರಿಪಾಕ ಗುಣವರ್ಮನ ಗುಣವಿಶೇಷ. ಇದಕ್ಕೆ ಕಳಸವಿಡುವಂತೆ ಮಾತುಮಾತಿಗೂ ಪಂಪ, ರಾಘವಾಂಕ, ಕುಮಾರವ್ಯಾಸರಿಗೆ ಕಡಿಮೆಯಿಲ್ಲದ ದೇಸಿ ತೂರಿಬರುತ್ತದೆ.

೧. ನೇಜೆಲಪಣ್ಣಂ ತಿಳಿಯೆಣ್ಣೆಯೊಳ್ ಬಯಸಿ ತೊಯ್ದಂತಪ್ಪ ನುಣ್ಣುರ್ಪು.
೨. ಪಂದಿ........ ಕೋಲಿಂದಾಡುವ ತಿಗುರಿಯವೋಲಂತಿರೆ
೩. ಇದೆನ್ನ ಭುಜಾಸಿಗೆ ತೇದು ಪೂಸಲುಂ ನೆಱಿಯದು...... ಎಡಗೆಯ್ಯ ಕೆಯ್ಯುಗುರೆ ಸಾಲದೆ? ನಚ್ಚಿನ

---

೧೯೮. ಕಾ.ಸಾ.ಪ. ೬೯೪;ಸೂಕ್ತಿ ಪು. ೨೨೫
೧೯೮ಎ. ಕಾ.ಸಾ.ಪ. ೧೦೫೦
೧೯೯. ಕಾ.ಸಾ.ಪ. ೬೬೫;ಸೂಕ್ತಿ ಪು. ೩೩೯
೨೦೦. ಕಾ.ಸಾ.ಪ. ೬೧೨

ಕೈದುವೇಳ್ಪುದೇ?

೪. ಪನ್ನಗಂ ಪುಗೆ ಪುತ್ತಂ, ಪುಗಲೀಯೆವೆಂದೊರಲೆಗಳ್ ಕಾಯಲ್ ಸಮರ್ಥಂಗಳೆ?

೫. ಸೋಂಬನಂ ಮೆಚ್ಚಿ ಬೇಜಾರ್ಗೆ ಪೋದ ಸೂಳೆಯಂತೆ.

೬. ಬಣ್ಣಂ ಪಸುರ್ವೆಸರ ಬಣ್ಣಂ,

೭. ಕಡೆದನ್ನಮಪ್ಪ ಮೊಲೆಗಳ್

೮. ಕಳವೆಯ ಸಸಿವೊಲ್ ಕದಿರ್ಗಳೊಳೆ ತುಱುಗಿ ಮೂಡಿದನುದಯಾದ್ರಿಯೊಳರುಣಂ

೯. ತಮವೆಂಬ ಕರಡಮ...... ಸುಟ್ಟು ಕಿಡಿಸಲೆಂದಜನುದಯಾಚಲದೊಳ್ ತಗುಳ್ಚೆ ತಳ್ತೊಡನಳುರ್ವ ದವಾಗ್ನಿಯವೊಲರ್ಕನುದಯಂ ಗೆಯ್ದಂ.

೧೦. ನೀರೊಳಗಣ ರೇಖೆಯಂತೆ ಕಿಡೆ ಚಾರುವಳಿತ್ರಯಂ

೧೧. ರಾಹುಗೆ ವಾಯುಪಥಾಗ್ರಮೆಂಬ ಪೆರ್ಮಡಕೆಯೊಳಿಕ್ಕಿ ಕೊಟ್ಟ ಪೊಸಬೆಣ್ಣೆವೊಲಿರ್ದುದು ಚಂದ್ರಮಂಡಲಂ.

೧೨. ಕಾಯ್ದೋಡಿನ ಜೋಳದಂತೆ.

೧೩. ಕಣ್ಣನೀರಿಟೆದುವು ಬಾಳೆಮೀನ್ ಜಲಮನಟ್ಕೆಸಲಾರದೆ ಕಾರುವಂತೆವೋಲ್.

ಇಲ್ಲಿಯ ನೇರಿಲ, ಎಣ್ಣೆ, ತಿಗುರಿ, ಕೈಯುಗುರು, ಪುತ್ತು-ಒರಲೆ, ಸೋಂಬ-ಸೂಳೆ, ಹೆಸರು, ಕಳವೆಯ ಸಸಿ, ಕರಡ, ನೀರಮೇಲಣ ಗೆರೆ, ಮಡಕೆ-ಬೆಣ್ಣೆ, ಕಾಯ್ದ ಓಡು-ಜೋಳ ಇವೆಲ್ಲ ಜನ ಬಳಕೆಯ ಜೀವಂತ ನುಡಿಗಳು, ಜೀವಂತ ನುಡಿಗಟ್ಟುಗಳು. ಒಟ್ಟಿನಲ್ಲಿ ಒಮ್ಮೆ ಓದಿದರೆ ಸಾಕು, ಓದುಗನ ಮೇಲೆ ವರ್ಚಸ್ಸು ಬೀರುವ ಪ್ರಬಲ ಪ್ರಾತಿಭಶಕ್ತಿ ಗುಣವರ್ಮನದು. ಇದೆಲ್ಲವನ್ನು ಗಮನಿಸಿದರೆ ಲೌಕಿಕ-ಧಾರ್ಮಿಕ ಕಾವ್ಯಮಾರ್ಗದ ಸಂಸ್ಥಾಪನಾಚಾರ್ಯ, ದೇಸಿ-ಮಾರ್ಗಗಳ ಸಮನ್ವಯಸಿದ್ಧನೆನಿಸುವ ಗುಣವರ್ಮನು ಈ ಕತ್ತಲು ಯುಗದ ಒಂದು ವಜ್ರಹರಳು ಎಂಬ ಭಾವನೆ ಮೂಡುತ್ತದೆ.

ಅಸಗ

ಅಸಗ ಎಂಬುದು 'ಅಶೋಕ' ಎಂಬುದರ ತದ್ಭವ; ಇಲ್ಲವೆ'ಅಸಂಗ'[೨೦೧] ಎಂಬುದರ ಅಬಿಂದುಕ. ಶಾಸನಗಳಲ್ಲಿ ಅಸಗಮರಸ, ಅಸಗಬ್ಬೆ, ಅಸಗಣ್ಣ ಎಂಬಿವು ಗೋಚರಿಸುವುದರಿಂದ ಪ್ರಾಚೀನ ಕರ್ನಾಟಕದಲ್ಲಿ ಇದು ತಕ್ಕಮಟ್ಟಿಗೆ ಪ್ರಚುರವಾಗಿರುವ ಹೆಸರೆನಿಸುತ್ತದೆ.[೨೦೨] ಈ ಸಾಲಿನಲ್ಲಿ ಕವಿ ಅಸಗನ ಹೆಸರೂ ಒಂದು. ಕನ್ನಡದಂತೆ ಸಂಸ್ಕೃತದಲ್ಲಿಯೂ ಒಬ್ಬ ಅಸಗ ಕವಿಯು ಕಂಡು ಬರುತ್ತಾನೆ. ಈ ಉಭಯ ಸಾಹಿತ್ಯಗಳಿಂದ ಈ ಹೆಸರಿನ ವಿಷಯವಾಗಿ ತಿಳಿದುಬರುವ ಸಂಗತಿಗಳನ್ನು ಪ್ರತ್ಯೇಕವಾಗಿ ಹೀಗೆ ಸಂಗ್ರಹಿಸಬಹುದು.

"ಕನ್ನಡಗವಿತೆಯೊಳಸಗಂಗಂ ನೂರ್ಮಡಿ"[೨೦೩] ಎಂಬ ಪೊನ್ನನ ನೇರ ಹೇಳಿಕೆಯಿಂದ ಅಸಗನೊಬ್ಬ ಪೊನ್ನನಿಗೆ ಪ್ರಾಚೀನನಾದ ಕನ್ನಡಕವಿ. ಹೆಚ್ಚಾಗಿ ಜೈನಕವಿಗಳ ಸ್ತುತಿಗೆ ಪಾತ್ರನಾಗಿರುವ ಇವನ ಮತ, ಜೈನ.

---

೨೦೧. ಈ ಹೆಸರಿನ ಒಬ್ಬ ವ್ಯಕ್ತಿ ಬೌದ್ಧಸಾಹಿತ್ಯದಲ್ಲಿ ಪ್ರಸಿದ್ಧನಾಗಿರುವನು.

೨೦೨. '........ ಗೊಮ್ಮರಸನಾತನಮಗನಸಗಮರಸಂ.........' (ಶಾ. ಪರಿಚಯ, ನಂ. ೫; ಕ್ರಿ.ಶ. ೯೬೫) 'ಮಾರಮ್ಮನಬ್ಬೆ ಅಸಗಬ್ಬೆ ಈ ಕಲ್ಲಂ ನಿ [ಱೆ]ಸಿದಳ್......' (ಬ್ಯಾಡಗಿ ಶಾಸನ ಕ್ರಿ.ಶ. ೯೦೧- ಸಾ.ಪ. ೨೬-೨)

೨೦೩. ಶಾಂ. ಪುರಾಣ ೧-೧೧

ಜಯಕೀರ್ತಿಯ ಛಂದೋನುಶಾಸನದಲ್ಲಿ ಛಂದೋವತಂಸವು"ಸಂದೃಷ್ಟಾಸೌ ಕುಮಾರಸಂಭವಾದೌ"[೨೦೪] ಎಂದು, ಸಮಾನಾಕ್ಷರ(=ದೊರೆಯಕ್ಕರ)ವು "ಅಸಗಾಖ್ಯಕವಿನಾ ಪ್ರತಿಪಾದಿತಂ ನನು ಕರ್ಣಾಟಕುಮಾರಸಂಭವ ಕಾವ್ಯೇ"[೨೦೫] ಎಂದು ಹೇಳಿರುವ ಕಾರಣ, ಈತನ ಕನ್ನಡಕಾವ್ಯ 'ಕುಮಾರಸಂಭವಂ'. ಇದು ಕನ್ನಡ ಅಸಗನ ಬಗೆಗೆ ತಿಳಿದು ಬರುವ ವಿಷಯ.

ಸಂಸ್ಕೃತ ಅಸಗನ ಕೃತಿಗಳಲ್ಲಿ ಈಗ ದೊರೆತು ಅಚ್ಚಾದುವು 'ವರ್ಧಮಾನಪುರಾಣ' ಮತ್ತು 'ಶಾಂತಿಪುರಾಣ'. ಮಹತ್ವಪೂರ್ಣ ಚಾರಿತ್ರಿಕ ಅಂಶಗಳನ್ನೊಳಗೊಂಡ ವರ್ಧಮಾನಪುರಾಣದ ಅಂತ್ಯಪ್ರಶಸ್ತಿಯ,

ಸಂವತ್ಸರೇ ದಶನ1ವಾಧಿಕ1 ವರ್ಷಯುಕ್ತೇ
ಭಾವಾದಿ ಕೀರ್ತಿಮುನಿನಾಯಕ ಪಾದಮೂಲೇ।
ಮೌದ್ಗಲ್ಯ ಪರ್ವತನಿವಾಸ2ವನ2ಸ್ಥ ಸಂಪತ್
ಸಚ್ಛ್ರಾ3ವಿಕಾ3 ಪ್ರಜನಿತೇಸತಿ 4ವಾಮಮತ್ವೇ4॥

ವಿದ್ಯಾಮಯಾ ಪ್ರಪಠಿತೇತ್ಯಸಗಾಹ್ವ5ಯೇನ5
ಶ್ರೀನಾಥರಾಜ್ಯಮಖಿಲಂ ಜನತೋಪಕಾರೀ।
6ಪ್ರಾಪ್ಯೈವ6 7ಚೋಡ7ವಿಷಯೇ 8ವಿರಲಾ8 ನಗರ್ಯಾಂ
ಗ್ರಂಥಾಷ್ಟಕಂ ಚ ಸಮಕಾರಿ ಜಿನೋಪದಿಷ್ಟಂ॥[೨೦೬]

[ಪಾಠಾಂತರ ೨೦೬A:1-1ವೋತ್ತರ; 2-2ವ್ರನ್; 3-3ವಕಾ; 4-4ನಿರ್ಮಮತ್ವೇ; 5-5 ಕೇ (ಯೇ)ನ; 6-6 ಪ್ರಾಪ್ತೇಚ; 7-7 ಚೌಡ; 8-8 ಧರಲಾ]

ಎಂಬ ಎರಡು ಪದ್ಯಗಳ ಅರ್ಥ ಕ್ಲಿಷ್ಟವಾಗಿದ್ದು ಭಿನ್ನಪಾಠಗಳಿಂದಾಗಿ ಈ ಕ್ಲಿಷ್ಟತೆ ಇನ್ನೂ ಜಟಿಲಗೊಂಡಿದೆ.

ಇಲ್ಲಿ "ಸಂವತ್ಸರೇ ದಶನವಾಧಿಕ ವರ್ಷಯುಕ್ತೇ" ಎಂಬ ವಾಕ್ಯಕ್ಕೆ ಆರ್. ನರಸಿಂಹಾಚಾರ್,[೨೦೭] ಗೋವಿಂದ ಪೈ,[೨೦೮] ವೆಂ. ಭಿ. ಲೋಕಾಪುರ[೨೦೯] ಮತ್ತು ಕೆ. ಮಾಧವಶರ್ಮ[೨೧೦] ಮೊದಲಾದವರು "ವಿಕ್ರಮ ಶಕ ೯೧೦" (ಕ್ರಿ.ಶ. ೮೫೩)ಎಂದೂ ಹೀರಾಲಾಲ ಜೈನ್ ಅವರು[೨೧೧] "ಶಾಲಿವಾಹನ ಶಕ ೯೧೦" (ಕ್ರಿ.ಶ. ೯೮೮) ಎಂದೂ ಅರ್ಥ ಹೇಳುತ್ತಾರೆ. ಈ ಪದ್ಯಗಳ ಇನ್ನುಳಿದ ಭಾಗಕ್ಕೆ "ಭಾವಾದೀಕೀರ್ತಿ ಮುನಿಪುಂಗವನ

---

೨೦೪. ಛಂ. ಶಾಸನ. ૨-೧೬
೨೦೫. ಛಂ. ಶಾಸನ ૨-૨
೨೦೬. ಅಸಗ-ಪತ್ರವ್ಯವಹಾರ (ಸಾ.ಪ. ೧૨-೨) ಪು. ೧೫೨
೨೦೬ಎ. Date of Asaga's Vardhamana Charita (New Ind. Ant. iv p. 395) ಎಂಬ ಲೇಖನದಿಂದ ಈ ಪಾಠಾಂತರಗಳನ್ನು ಸ್ವೀಕರಿಸಿದೆ.
೨೦೭. ಕ.ಕ.ಚ. ಪು. ೨೨
೨೦೮. ಕನ್ನಡ ನಾಟಕದ ಹಳಮೆ (ಸಾ.ಪ. ೩೧-೨ ಪು. ೬೦)
೨೦೯. ಅಸಗ ಕವಿಯ ಪರಿಚಯ (ಜ.ಕ. ೨೫-೪ ಪು. ೧೮೩)
೨೧೦. Date of Asaga's Vardhamana Charita (New Ind. Ant. iv. P. 395)
೨೧೧. ಕ.ಕ.ಚ. ಪು. ೨೨

ಪಾದಸನ್ನಿಧಿಯಲ್ಲಿ ಮೌದ್ಗಲ್ಯ ಪರ್ವತದ[೨೧೨] ವನದೊಳಗೆ ವಾಸವಾಗಿದ್ದ ಸಂಪತ್ ಎಂಬ ಶ್ರಾವಿಕೆ (ವಕ?) ಯಿಂದ ವಿದ್ಯೆಕಲಿತ, ಜನತೋಪಕಾರಿಯಾದ ಶ್ರೀನಾಥನ ಅಖಿಲರಾಜ್ಯವನ್ನು ಪಡೆದ, ಅಸಗನೆಂಬ ನನ್ನಿಂದ ಚೋಡದೇಶದ ವಿರಲಾ ಎಂಬ ಪಟ್ಟಣದಲ್ಲಿ ಜಿನಧರ್ಮಪರವಾದ ೮ ಗ್ರಂಥಗಳು ರಚಿಸಲ್ಪಟ್ಟವು" ಎಂದು ಅರ್ಥಮಾಡಬಹುದು.

ಪೀಟರಸನ್ ರಿಪೋರ್ಟನಲ್ಲಿ (IV 163-164) ಉಲ್ಲಿಖಿತವಾದ ಇದೇ ವರ್ಧಮಾನಪುರಾಣದ ಒಂದು ಹಸ್ತಪ್ರತಿಯಿಂದ ಅಸಗನು ಪಟುಮತಿ ವೆರಿತ್ತಿಯರ ಮಗ, ನಾಗನಂದಿಯ ಶಿಷ್ಯ, ಆರ್ಯನಂದಿಯ ಪ್ರಾರ್ಥನೆಯ ಮೇರೆಗೆ ಈ ಪುರಾಣವನ್ನು ಬರೆದೆನೆಂಬ ಅಂಶಗಳು ತಿಳಿದುಬರುತ್ತವೆ.[೨೧೩] ಇಲ್ಲಿ ಭಾವಾದಿಕೀರ್ತಿ, ಸಂಪತ್‌ಶ್ರಾವಿಕೆ (ವಕ?), ಶ್ರೀನಾಥರಾಜ್ಯ, ವಿರಲಾಪಟ್ಟಣ ಇತ್ಯಾದಿ ವಿಷಯಗಳಿಲ್ಲ.

'ವರ್ಧಮಾನಪುರಾಣ'ದ ೫ನೆಯ ಆಶ್ವಾಸದ ಕೊನೆಯ "ಅಸಗಭೂಪಕೃತೇ ವರ್ಧಮಾನ ಚರಿತೇ"ಎಂಬ ಮಾತು ಈತನ ಅರಸುತನಕ್ಕೆ ಸಾಕ್ಷಿಯೆಂದು ಪಂಡಿತರ ಅಭಿಪ್ರಾಯ.[೨೧೪] ಆದರೆ ನಾನು ನೋಡಿದ ಟೀಕೆಯುಕ್ತ ವರ್ಧಮಾನಪುರಾಣದ ಹಸ್ತಪ್ರತಿಯಲ್ಲಿ ಈ ಮಾತಾಗಲಿ, ಮೇಲೆ ವಿವೇಚಿಸಿದ ಎರಡು ವಿಧದ ಪ್ರಶಸ್ತಿಪದ್ಯಗಳಾಗಲಿ ಇಲ್ಲ.[೨೧೫] ವರ್ಧಮಾನಪುರಾಣದ ಪ್ರಶಸ್ತಿ ಭಾಗ ಕೆಲಪ್ರತಿಗಳಲ್ಲಿ ಇಲ್ಲವೆಂದು, ಇದ್ದರೂ ಪ್ರತಿಯಿಂದ ಪ್ರತಿಗೆ ಭಿನ್ನವಾಗಿದೆಯೆಂದು ಇದರಿಂದ ವ್ಯಕ್ತವಾಗುತ್ತದೆ. ಅದೇನೇ ಇದ್ದರೂ ಅಸಗನ ಬಹುಮಟ್ಟಿನ ಚರಿತ್ರೆಯನ್ನೊಳಗೊಂಡ ಈ ಹೇಳಿಕೆಗಳನ್ನು ಇತಿಹಾಸದ ಒರೆಗಲ್ಲಿಗೆ ಹಚ್ಚುವ ಕಾರ್ಯ ಈ ವರೆಗೆ ನಡೆದಿಲ್ಲ. ಶ್ರೀ ಗೋವಿಂದ ಪೈಗಳು ಮಾತ್ರ ಈ "ಶ್ರೀನಾಥನೆಂಬ ಅರಸನೆಂದರೆ ಕ್ರಿ.ಶ. ಸು. ೮೪೯ರ ವರೆಗೆ ಆಳಿದ, ಶ್ರೀಪತಿ ಎಂದೂ ಹೆಸರಿದ್ದ ಕೋಕಿಳ್ಳಿ ಎಂಬ ಚೋಳರಾಜನು" ಎಂದು ಹೇಳುತ್ತಾರೆ.[೨೧೬] ಇದರ ಚರ್ಚೆಗೆ ಯಾರೂ ಕೈಹಾಕಿಲ್ಲ. ಕಲಚುರಿ[೨೧೭] ಮತ್ತು ಪಾಣ್ಬ[೨೧೮] ಅರಸು ಮನೆತನಗಳಲ್ಲಿ ಕಂಡುಬರುವ ಅಸಗಭೂಪತಿ, ಅಸಗಮರಸರಿಗೂ ಪ್ರಸ್ತುತ ಅಸಗನಿಗೂ ಏನೂ ಸಂಬಂಧವಿದ್ದಂತಿಲ್ಲ. ಅಸಗನ ವಿಷಯವನ್ನು ಹೇಳುವ ಆತನ ಶಾಂತಿಪುರಾಣದ ಭಾಗ ಹೀಗಿದೆ:

ಮುನಿಚರಣರಜೋಭಿಃ ಸರ್ವದಾ ಭೂತದಾತ್ರ್ಯಾ
ಪ್ರಣತಿ ಸಮಯಲಗ್ನೈಃ ಪಾವನೀಭೂತಮೂರ್ಧಾ।
ಉಪಶಮ ಇವ ಮೂರ್ತಃ ಶುದ್ಧ ಸಮ್ಯಕ್ತ್ವ ಯುಕ್ತಃ
ಪಟಮತಿರಿತಿ ನಾಮ್ನಾ ವಿಶ್ರುತಃ ಶ್ರಾವಕೋಽಭೂತ್ ॥೧॥

---

೨೧೨. ಪಲಾಖ ಶಾಸನ (ಹೈ. ಆ.ಸೀ. ivಪು. ೬-೭)ದಲ್ಲಿ 'ಮೌದ್ಗಲ್ಯ ತೀರ್ಥ', ಗಾರ್ಲಶಾಸನ (ಹೈ. ಆ. ಸೀ. xiiiಪು. ೬)ದಲ್ಲಿ 'ಮೌದ್ಗಲ್ಯ ತಟನೀ' ಇವುಗಳ ಉಲ್ಲೇಖವಿದೆ. ಮುದಗಲ್ ಎಂಬ ಹೆಸರಿನ ಗ್ರಾಮಗಳೂ ಇವೆ. ಇವುಗಳಿಗೂ ಪ್ರಸ್ತುತ ಮೌದ್ಗಲ್ಯ ಪರ್ವತಕ್ಕೂ ಇರಬಹುದಾದ ಸಂಬಂಧ ತಿಳಿದುಬಂದಿಲ್ಲ.

೨೧೩. ಕ.ಕ.ಚ. ಪು. ೨೨

೨೧೪. ಅಸಗ ಕವಿಯ ಪರಿಚಯ (ಜ.ಕ. ೨೪-೪; ಪು. ೧೮೩)

೨೧೫. ವರ್ಧಮಾನ ಪುರಾಣ (ಹುಮ್ಮಚ ಹಸ್ತಪ್ರತಿ, ನಂ. ೨೦೨)

೨೧೬. ಕನ್ನಡ ನಾಟಕದ ಹಳಮೆ (ಸಾ.ಪ. ೩೧-೨, ಪು. ೬೧)

೨೧೭. ಕರ್ನಾಟಕದ ಕಲಚುರಿಗಳು (ಸಾ.ಪ. ೩೬-೧ ಮತ್ತು ೨ ಪು. ೧೧೬, ೧೧೭)

೨೧೮. ಶಾ. ಪರಿಚಯ ಪು. ೫

ತನುಮತಿ ತನುತಾಂ ಯಃ ಸರ್ವಪರ್ವೋಪವಾಸ್ಯೆ
ಸ್ತನುಮನುಪಮದೀಃ ಸ್ಮಪ್ರಾಪಯನ್ಸಂಚಿನೋತಿ।
ಸತತಮಪಿ ವಿಭೂತಿಂ ಭೂಯಸೀಮನ್ನದಾನ
ಪ್ರಭೃತಿಭಿರುರುಪುಣ್ಯಂ ಕುಂದಶುಭ್ರಮಂಯಶಶ್ಚ ॥೨॥

ಭಕ್ತಿಂ ಪರಾಮ ವಿರತಂ ಸಮಪಕ್ಷಪಾತಾ
ಮಾತನ್ವತೀ ಮುನಿನಿಕಾಯ ಚತುಷ್ಟಯೇಽಪಿ।
ವೈರೇತಿರಿತ್ಯನುಪಮಾ ಭುವಿ ತಸ್ಯ ಭಾರ್ಯಾ
ಸಮ್ಯಕ್ತ್ವ ಶುದ್ಧಿರಿವ ಮೂರ್ತಿಮತೀ ಪರಾಭೂತ್ ॥೩॥

ಪುತ್ರಸ್ತಯೋರಸಗ ಇತ್ಯವದಾತ ಕೀರ್ತ್ಯೋ
ರಾಸೀನ್ಮನೀಷಿ ನಿವಹ ಪ್ರಮುಖಸ್ಯ ಶಿಷ್ಯಃ।
ಚಂದ್ರಾಂಶು ಶುಭ್ರಯಶಸೋ ಭುವಿ ನಾಗನಂದ್ಯಾ
ಚಾರ್ಯಸ್ಯ ಶಬ್ದಸಮಯಾರ್ಣವ ಪಾರಗಸ್ಯ ॥೪॥

ತಸ್ಯಾಭವದ್ಭವ್ಯ ಜನಸ್ಯ ಸೇವ್ಯಃ ಸಖಾ ಜಿನಾಪೋ ಜಿನಧರ್ಮಸಕ್ತಃ।
ಖ್ಯಾತೋಽಪಿ ಶೌರ್ಯಾತ್ಪರಲೋಕಭೀರುರ್ದ್ವಿಜಾಧಿನಾಥೋಽಪಿ ವಿಪಕ್ಷಪಾತಃ।
ವ್ಯಾಖ್ಯಾನಶೀಲತ್ವಮವೇಕ್ಷ್ಯ ತಸ್ಯಶ್ರದ್ಧಾಂ ಪುರಾಣೇಷು ಚ ಪುಣ್ಯಬುದ್ಧೇಃ।
ಕವಿತ್ವಹೀನೋಽಪಿ ಗುರೌನಿಬಂಧೇ ತಸ್ಮಿನ್ನಹಾಸೀದಸಗಃ ಪ್ರಬಂಧಂ ॥
ಚರಿತಂ ವಿರಚಯ್ಯ ಸನ್ಮತೀಯಂ ಸದಲಂಕಾರ ವಿಚಿತ್ರಚಿತ್ರಬಂಧಂ।
ಸ ಪುರಾಣಮಿದಂ ವ್ಯಧತ್ತ ಶಾಂತೇರಸಗಃ ಸಾಧುಜನಪ್ರಮೋಹಶಾಂತ್ಯೈ ॥[೨೧೯]

ಈ ಪದ್ಯಗಳಿಂದ "ಕವಿಯ ತಂದೆಯ ಹೆಸರು ಪಟುಮತಿ. ಆತನು ಶಾಂತವೃತ್ತಿಯವನೂ ಧಾರ್ಮಿಕನೂ ಸಮ್ಯಕ್ತ್ವಯುಕ್ತನೂ ಆದ ಸುಪ್ರಸಿದ್ಧ ಶ್ರಾವಕನು. ಅನ್ನದಾನಾದಿ ಧಾರ್ಮಿಕ ಕೃತ್ಯಗಳಿಂದ ಪುಣ್ಯವನ್ನು ಯಶಸ್ಸನ್ನೂ ಪಡೆದಿದ್ದನು. ಪರ್ವತಿಥಿಗಳಲ್ಲಿ ಉಪವಾಸಮಾಡಿ ಶರೀರವು ಕೃಶವಾಗಿದ್ದಿತು. ಆತನ ಭಾರ್ಯೆ ವೈರೇತಿ ಎಂಬವಳು ಭಕ್ತಿಪರಾಯಣಳೂ ಧಾರ್ಮಿಕಳೂ ಆಗಿದ್ದಳು. ಅವರ ಪುತ್ರನಾದ ಅಸಗನು ಶಬ್ದಸಮಯಾರ್ಣವಪಾರಗರಾದ ನಾಗನಂದ್ಯಾಚಾರ್ಯರ ಶಿಷ್ಯನು. ಅಸಗನಿಗೆ ಜಿನಾಪನೆಂಬ ಶೂರನಾದ ಮಿತ್ರನಿದ್ದನು. ಆತನು ಬ್ರಾಹ್ಮಣನಾಗಿದ್ದರೂ ಜಿನಧರ್ಮಾಸಕ್ತನಾಗಿದ್ದನು. ಅವನ ಆಗ್ರಹದಿಂದಲೇ ಕವಿ ಶಾಂತಿಪುರಾಣವನ್ನು ಬರೆದನು"[೨೨೦] ಎಂದು ತಿಳಿಯುತ್ತದೆ.

ಈ ವರ್ಧಮಾನಪುರಾಣ ಮತ್ತು ಶಾಂತಿಪುರಾಣಗಳ ಪ್ರಶಸ್ತಿಗಳನ್ನು ಒಟ್ಟಾಗಿ ನೋಡಿದರೆ, ಸಂಸ್ಕೃತ ಅಸಗನ ತಂದೆ ಪಟುಮತಿ, ತಾಯಿ ವೈರೇತಿ (ವಿರಿತ್ತಿ), ಮತ ಜೈನ, ಗುರು ನಾಗನಂದಿ. ಈತನು ಭಾವಾದಿಕೀರ್ತಿ ಮುನಿಯ ಸನ್ನಿಧಿಯಲ್ಲಿ ಮೌದ್ಗಲ್ಯಪರ್ವತವನಸ್ಥ ಸಂಪತ್‌ಶ್ರಾವಿಕೆ(ಶ್ರಾವಕ?) ಯಿಂದ ವಿದ್ಯೆಕಲಿತು, ಶ್ರೀನಾಥನ ಸಾಮ್ರಾಜ್ಯವನ್ನು ವಹಿಸಿಕೊಂಡನು. ಚೋಡದೇಶದ ವಿರಲಾನಗರದಲ್ಲಿ ಜೈನಪರವಾದ ೮ ಗ್ರಂಥಗಳನ್ನು ಬರೆದು, ೯ನೆಯದಾದ ವರ್ಧಮಾನಪುರಾಣವನ್ನು ಆರ್ಯನಂದಿಯ ಪ್ರಾರ್ಥನೆಯಂತೆ, ಕೊನೆಯದಾದ ಶಾಂತಿಪುರಾಣವನ್ನು ಬ್ರಾಹ್ಮಣಮಿತ್ರನಾದ ಜಿನಾಪನ ಪ್ರಾರ್ಥನೆಯಂತೆ ರಚಿಸಿದನು ಎಂದು ತಿಳಿದುಬರುತ್ತದೆ.

---

೨೧೯. ಅಸಗ-ಪತ್ರವ್ಯವಹಾರ (ಸಾ.ಪ. ೧೭-೨)
೨೨೦. ಅಸಗ-ಪತ್ರವ್ಯವಹಾರ ಪು. ೧೫೨(ಸಾ.ಪ. ೧೭-೨)

ಈ ವರೆಗೆ ವಿವೇಚಿಸಲಾದ ಕನ್ನಡ ಅಸಗ ಮತ್ತು ಸಂಸ್ಕೃತ ಅಸಗ ಒಬ್ಬನೇ ಎಂದು ಸಕಲ ವಿದ್ವಾಂಸರ ಅಭಿಮತ. ಆದರೆ,

೧. ಅಸಗನು ವರ್ಧಮಾನ ಮತ್ತು ಶಾಂತಿಪುರಾಣಗಳಲ್ಲಿ ತನ್ನನ್ನು 'ಉಭಯಕವಿ' ಎಂದು ಕರೆದುಕೊಂಡಿಲ್ಲ. ಕನ್ನಡ ಕವಿಗಳಾಗಲಿ ಅಪಭ್ರಂಶಕವಿ ಧವಲನಾಗಲಿ[೨೨೧] ಈ ಮಾತನ್ನು ಹೇಳಿಲ್ಲ.

೨. ಅಸಗನು ಉಭಯಕವಿಯಾಗಿದ್ದರೆ 'ಉಭಯಕವಿ' ಪೊನ್ನನು ಕನ್ನಡ ಕವಿತೆಗೆ ಮಾತ್ರ ಅಸಗನಿಗೆ ನೂರ್ಮಡಿ ಎಂದು ಹೇಳಿ, ಸಂಸ್ಕೃತ ಕವಿತೆಯಲ್ಲಿ ಕಾಳಿದಾಸನಿಗೆ ನಾಲ್ಮಡಿ ಎಂದು ಹೇಳುವ ಪ್ರಮೇಯವಿರಲಿಲ್ಲ.

೩. ವರ್ಧಮಾನಪುರಾಣದ 'ಅಸಗಭೂಪಕೃತೇ ವರ್ಧಮಾನಚರಿತೇ', 'ಶ್ರೀನಾಥ ರಾಜ್ಯಮಖಿಲಂ....... ಪ್ರಾಪ್ಯೈವ' ಎಂಬ ಮಾತುಗಳಿಂದ ಸಂಸ್ಕೃತ ಅಸಗನು ಅರಸನೆಂದು ತಿಳಿದು ಬರುತ್ತದೆ. ಗಜಾಂಕುಶನನ್ನು 'ದಂಡನಾಯಕ ಗಜಾಂಕುಶ'[೨೨೧ಎ] ಎಂದು ಕರೆದಂತೆ ಒಬ್ಬ ಕನ್ನಡ ಕವಿಯೂ ಕನ್ನಡ ಅಸಗನನ್ನು ಅರಸನೆಂದು ಸೂಚಿಸಿಲ್ಲ.

೪. ಈತನು ಚೋಳದೇಶನಿವಾಸಿ ಎಂದು ವರ್ಧಮಾನಪುರಾಣ ಹೇಳುತ್ತದೆ. ಕರ್ನಾಟಕ ನಿವಾಸಿ ಎಂದು ಹೇಳಲು ಅಂಥ ಒಂದೂ ಆಧಾರವಿಲ್ಲ.

೫. ಪಟುಮತಿ, ವೆರಿತ್ತಿ ಎಂಬ ತಂದೆತಾಯಿಗಳ ಹೆಸರೂ ಕನ್ನಡದಂತೆ ತೋರವು.

ಹೀಗೆ ಯಾವ ದೃಷ್ಟಿಯಿಂದ ನೋಡಿದರೂ ಸಂಸ್ಕೃತ ಅಸಗ ಬೇರೆ ಕನ್ನಡ ಅಸಗ ಬೇರೆ ಎಂಬ ಭಾವನೆ ಬಲಗೊಳ್ಳುತ್ತದೆ. ಹೀಗಾಗಿ ನಾಮ, ಮತ, ಕಾಲ, ಸಾಮ್ಯಗಳನ್ನವಲಂಬಿಸಿ ಇಬ್ಬರನ್ನೂ ತಳಕುಹಾಕುವಲ್ಲಿ ಸಂದೇಹ ಕಾಡುತ್ತದೆ.

ಕನ್ನಡ ಅಸಗನ ಕಾಲ ಇನ್ನೂ ಊಹೆಯಲ್ಲಿ ನಿಂತಿದೆ. ಇವನನ್ನು ಉಲ್ಲೇಖಿಸುವ ಪೊನ್ನನ ಭುವನೈಕರಾಮಾಭ್ಯುದಯ ರಾಷ್ಟ್ರಕೂಟ ಚಕ್ರವರ್ತಿ ಕೃಷ್ಣ IIIನ ಆಶ್ರಯದಲ್ಲಿ, ಶಾಂತಿಪುರಾಣ ಕಲ್ಯಾಣಚಾಲುಕ್ಯ ಚಕ್ರವರ್ತಿ ತೈಲಪನ ಸಚಿವರಾದ ಮಲ್ಲಪಯ್ಯ- ಪುನ್ನಮಯ್ಯರ ಆಶ್ರಯದಲ್ಲಿ ರಚನೆಗೊಂಡವು. ಈ ಉಭಯ ಮನೆತನಗಳ ವೈರವು ಇತಿಹಾಸ ಪ್ರಸಿದ್ಧವಾದುದು.[೨೨೨] ಹೀಗಾಗಿ ಕೃಷ್ಣ IIIನ ಮರಣಕಾಲವಾದ ಕ್ರಿ.ಶ. ೯೬೭ ಇಲ್ಲವೆ ರಾಷ್ಟ್ರಕೂಟರ ಪತನಕಾಲವಾದ ೯೭೨ರ ತರುವಾಯ, ನಿರಾಶ್ರಿತನಾಗಿದ್ದ ಕವಿ ಪೊನ್ನನನ್ನು ಗುಣಪಕ್ಷಪಾತಿಗಳಾದ ಮಲ್ಲಪಯ್ಯ-ಪುನ್ನಮಯ್ಯರು ತಮ್ಮ ಕಲ್ಯಾಣ ಚಾಲುಕ್ಯರಾಜ್ಯಕ್ಕೆ, ರಾಜಧಾನಿಗೆ ಬರಮಾಡಿಕೊಂಡಿರಲು ಸಾಧ್ಯ. ಹಾಗಿದ್ದರೆ ಪೊನ್ನನ ಶಾಂತಿಪುರಾಣವು ಕ್ರಿ.ಶ. ೯೬೭ ಇಲ್ಲವೆ ೯೭೨ರ ಬಳಿಕ ಮತ್ತು ಇದರ ಪ್ರಥಮ ಉಲ್ಲೇಖವನ್ನೊಳಗೊಂಡ ಅಜಿತಪುರಾಣದ ಕಾಲಕ್ಕೆ ಅಂದರೆ ಕ್ರಿ.ಶ. ೯೯೩ಕ್ಕೆ ಮೊದಲು ಹುಟ್ಟಿರಬೇಕೆನಿಸುತ್ತದೆ.

ಇನ್ನು ಸಂಸ್ಕೃತ ಅಸಗನ ವರ್ಧಮಾನಪುರಾಣ ರಚನೆಗೊಂಡುದು 'ಸಂವತ್ಸರೇ ದಶನವಾಧಿಕವರ್ಷಯುಕ್ತೇ' ಅಂದರೆ ಶಕವರ್ಷ ೯೧೦ರಲ್ಲಿ. ಈ ಶಕೆ ಶಾಲಿವಾಹನವಾಗಿದ್ದರೆ ಕ್ರಿ.ಶ. ೯೮೮,

---

೨೨೧. ಹರಿವಂಶ (ಪೀಠಿಕಾ ಪ್ರಕರಣಂ-ಅಪ್ರಭಂಶ ಸಾಹಿತ್ಯ ೧೦೩)

೨೨೧ಎ. ಪಂಚತಂತ್ರ ೧-೨೬

೨೨೨. ದಲ್ಲಪ ಮತ್ತು ಗೋವಿಂದರ (ಪ್ರ. ಕ. ೪೧-೨) ಬಾ.ರಾ. ಗೋಪಾಲ.

ವಿಕ್ರಮವಾಗಿದ್ದರೆ ಕ್ರಿ.ಶ. ೮೫೩ ಆಗುತ್ತದೆ. ಪೊನ್ನನಕಾಲ ಕ್ರಿ.ಶ. ೯೫೦ ಎಂಬ, ಪೊನ್ನ ಹೇಳುವ ಕನ್ನಡ ಅಸಗ ಮತ್ತು ಈ ಸಂಸ್ಕೃತ ಅಸಗ ಒಬ್ಬನೇ ಎಂಬ ತಮ್ಮ ನಂಬಿಕೆ ಸುರಕ್ಷಿತ ಉಳಿಯಲೋಸುಗ ಈ ಎರಡು ಮಿತಿಗಳಲ್ಲಿ ಕ್ರಿ.ಶ. ೮೫೩ರನ್ನು ಪಂಡಿತರು ಪರಿಗಣಿಸುತ್ತಾರೆ. ಆದರೆ ಮೇಲೆ ನೋಡಿದ ಪ್ರಕಾರ ಪೊನ್ನನ ಶಾಂತಿಪುರಾಣದ ಕಾಲ ಕ್ರಿ.ಶ. ೯೬೭ ಮತ್ತು ೯೫೩ರ ಮಧ್ಯ ಎಲ್ಲಿಯಾದರೂ ನಿಲ್ಲಬಹುದು. ಎರಡನೆಯದಾಗಿ ಕನ್ನಡ ಅಸಗ, ಸಂಸ್ಕೃತ ಅಸಗ ಒಬ್ಬನೇ ಎನ್ನಲು ಹೇಳಿಕೊಳ್ಳುವ ಆಧಾರಗಳಿಲ್ಲ. ಆದುದರಿಂದ ಈಗಿನ ಮಟ್ಟಿಗೆ ಕನ್ನಡ ಅಸಗನ ಕಾಲ ಪೊನ್ನನಿಗೆ ಹಿಂದೆ ಎಂದು ಮಾತ್ರ ಹೇಳಬಹುದೇ ಹೊರತು, ಎಷ್ಟು ಹಿಂದೆ ಎಂದು ನಿರ್ಣಯ ನೀಡಲು ಸಾಧ್ಯವಿಲ್ಲ.

ಅಸಗನ ಕೃತಿಗಳ ಸಂಖ್ಯೆ ಇನ್ನೂ ಹಿಡಿತಕ್ಕೆ ಸಿಕ್ಕಿಲ್ಲ. ಸಂಸ್ಕೃತ ಅಸಗ, ಕನ್ನಡ ಅಸಗ ಒಬ್ಬನೇ ಆಗಿದ್ದರೆ ಜೈನಧರ್ಮಪರವಾದ ೮ ಕೃತಿಗಳನ್ನು ಬರೆದಿರುವನೆಂದು ವರ್ಧಮಾನಪುರಾಣದಲ್ಲಿ ಹೇಳಿ, ತರುವಾಯ ಶಾಂತಿಪುರಾಣವನ್ನು ಬರೆದುದರಿಂದ ಈತನ ಒಟ್ಟು ಕೃತಿಗಳು ೧೦ ಎನ್ನಬೇಕಾಗುತ್ತದೆ. ಈ ಹತ್ತು ಕೇವಲ ಸಂಸ್ಕೃತ ಕೃತಿಗಳೋ ಇವುಗಳಲ್ಲಿ ಕನ್ನಡ ಕೃತಿಗಳೂ ಸಮಾವೇಶವಾಗಿವೆಯೋ ಸ್ಪಷ್ಟವಾಗುವುದಿಲ್ಲ.

ಅಯ್ದು ಕಷಾಯೋದಕದೊಳ್
ತೊಯ್ದಸಗಂಬೋಲ್ ನೃಪೇಂದ್ರ ಸಭೆಯೆಂಬ ಕೊಳ ।
ಕ್ಕುಯ್ದ[ಲಸದಲೆದು ಸೆಲೆಯೊಳ್]
ಪೊಯ್ದಂ ಕವಿಚಕ್ರವರ್ತಿ ಕವಿಚೀವರಮಂ॥[೨೨೩]

ಈ ಪದ್ಯದಲ್ಲಿ ಅಸಗನನ್ನು ಅವಹೇಳನಗೊಳಿಸುತ್ತ ಪೊನ್ನನು ಆತನ ಐದು ಕನ್ನಡ ಕೃತಿಗಳನ್ನು ಸೂಚಿಸಿರುವನೆಂದು ವೆಂ. ಭೀ. ಲೋಕಾಪೂರ ಅವರ ಊಹೆ.[೨೨೪] ಮೇಲಣ ೧೦ರಲ್ಲಿ ಇವು ಸಮಾವೇಶಗೊಳ್ಳುತ್ತಿದ್ದರೆ ಈತನ ಕೃತಿಗಳು ಸಂಸ್ಕೃತ ಐದು, ಕನ್ನಡ ಐದು. ಸಮಾವೇಶಗೊಳ್ಳದಿದ್ದರೆ ಸಂಸ್ಕೃತ ೧೦ ಕನ್ನಡ ೫ ಎಂದು ಹೇಳಬೇಕಾಗುತ್ತದೆ. ಈಗ ಮಾತ್ರ ಅಸಗನ ಹೆಸರಿನಲ್ಲಿ ವರ್ಧಮಾನಪುರಾಣ ಶಾಂತಿಪುರಾಣಗಳೆಂಬ ಸಂಸ್ಕೃತ ಕೃತಿಗಳು ಲಭಿಸಿ ಅಚ್ಚುಗೊಂಡಿವೆ. ಈ ಶಾಂತಿಪುರಾಣದ ಸಂಗ್ರಹ ರೂಪವಾದ ಲಘುಶಾಂತಿಪುರಾಣ[೨೨೫] ಮತ್ತು ನಾನಾರ್ಥಕೋಶ ಎಂಬ ಹೆಸರಿನ ನಿಘಂಟುಗಳು[೨೨೬] ಇದ್ದ ಬಗ್ಗೆ ಸೂಚನೆ ಲಭಿಸುತ್ತದೆ. 'ಕುಮಾರಸಂಭವ'ವು ಅಸಗನ ಕನ್ನಡಕೃತಿಯೆಂದು ಜಯಕೀರ್ತಿ ಸೂಚಿಸುತ್ತಾನೆ.

ಮಹಾವಿರ ಚರಿತೆ, ಸನ್ಮತಿ ಚರಿತ್ರ[೨೨೭] ಎಂಬಿವು ವರ್ಧಮಾನ ಪುರಾಣದ ಇನ್ನೆರಡು ಹೆಸರುಗಳು. ೧೮ ಸಂಧಿಗಳ ಈ ಸಂಸ್ಕೃತ ಗ್ರಂಥದ ವಸ್ತುಪುರುಷ ಮಹಾವೀರ ವರ್ಧಮಾನ. ಅಪಭ್ರಂಶ ಕವಿ ಧವಲನು ತನ್ನ ಹರಿವಂಶ ಪುರಾಣದಲ್ಲಿ,

---

೨೨೩. ಶಾಂ. ಪುರಾಣ (ಪೊನ್ನ) ೧೨-೭೩.

೨೨೪. ಅಸಗ ಕವಿಯ ಖ್ಯಾತಿ (ಪ್ರ.ಕ. ೩೭-೧)

೨೨೫. ಜಿನರತ್ನಕೋಶ (ವೇಲಂಕರ್)ಪು. ೩೩೬.

೨೨೬. New Catalogues Catalogorum P. 349. (1949)

೨೨೭. ಜಿನರತ್ನಕೋಶ (ವೇಲಂಕರ್) ಪು. ೩೪೨

ಅಸುಗಮಹಾಕಇ ಜೇಂ ಸುಮಣೋಹರೂ
ವೀರಜಿಣೇಂದು ಚರಿಉ ಕಿಉ ಸುಂದರೂ।
ಕಿತ್ತಿಯಕಹಮಿ ಸುಕಇ ಗುಣ ಆಯರ
ಗೇಯಕವ್ವ ಜಹಿ ವಿರಇಯ ಸುಂದರ ॥[೨೨೮]

ಎಂದು ಈ ಕಾವ್ಯದ ಘನತೆಯನ್ನು ಬಾಯ್ತುಂಬ ಹೊಗಳಿರುವನು. ಇದು ಕನ್ನಡ ಕವಿ ನಾಗವರ್ಮ॥ನು ಬರೆದಿರಬಹುದಾದ ಅನುಪಲಬ್ಧ ವರ್ಧಮಾನ ಪುರಾಣ ಮತ್ತು (ಇದು ಇತ್ತೀಚೆ ಅಂದರೆ ೧೯೭೩ರಲ್ಲಿ ಲಭಿಸಿ ೧೯೭೪ರಲ್ಲಿ ಪ್ರಕಟವಾಗಿದೆ) ಮತ್ತು ಆಚಣ್ಣನ ಉಪಲಬ್ಧ ವರ್ಧಮಾನ ಪುರಾಣದ ಮೇಲೆ ತನ್ನ ಪ್ರಭಾವ ಬೀರಿರುವ ಸಂಭವವಿದೆ.[೨೨೯]

ಅಸಗನ ಕೃತಿಗಳಲ್ಲಿ ಕೊನೆಯದಾಗಿರಬಹುದಾದ ಸಂಸ್ಕೃತ ಶಾಂತಿಪುರಾಣದ ವಸ್ತು, ೧೬ನೆಯ ತೀರ್ಥಂಕರನೂ ೫ನೆಯ ಚಕ್ರವರ್ತಿಯೂ ಎನಿಸಿದ ಶಾಂತಿನಾಥನ ಪುಣ್ಯಚರಿತ್ರೆ. ೧೬ ಸಂಧಿಗಳ ಈ ಕೃತಿಯ ಪದ್ಯಸಂಖ್ಯೆ ಸುಮಾರು ೨೫೦೦. ಒಂದುಕಡೆ ಕಾಳಿದಾಸನನ್ನು ಏಳಿಸುತ್ತ ಆತನ ರಘುವಂಶದ ಪ್ರಭಾವಕ್ಕೆ ಒಳಗಾದ ಪೊನ್ನನ ಶಾಂತಿನಾಥಪುರಾಣವು, ಇನ್ನೊಂದು ಕಡೆ ಅಸಗನನ್ನು ಏಳಿಸುತ್ತ ಆತನ ಈ ಶಾಂತಿಪುರಾಣದ ಪ್ರಭಾವಕ್ಕೆ ಪಕ್ಕಾಗಿದ್ದರೆ ಆಶ್ಚರ್ಯಪಡಬೇಕಿಲ್ಲ.

ಈ ಪುರಾಣದ ಸಂಗ್ರಹರೂಪವಾದ 'ಲಘುಶಾಂತೀಶ್ವರ ಪುರಾಣ' ಎಂಬ ಬೇರೊಂದು ಕೃತಿ ಲಭಿಸುತ್ತದೆ. ಮೂಲದ ೧೬ ಸಂಧಿಗಳು ಇಲ್ಲಿ ೧೨ ಸಂಧಿಗಳಲ್ಲಿ ಸಂಕ್ಷೇಪಗೊಂಡಿವೆ.[೨೩೦] ಈ ಸಂಕ್ಷೇಪಕ್ಕೆ ಯಾರು ಹೊಣೆ ಗೊತ್ತಾಗದು.

New Catalogus Catalogorumದ ಪುಟ ೩೯೯ರಲ್ಲಿ 'ಅಸಗ-ನಾನಾರ್ಥಕೋಶ' ಎಂಬ ಉಲ್ಲೇಖವಿದ್ದು ಈ ಹಸ್ತಪ್ರತಿ ವರಾಂಗದಲ್ಲಿದೆಯೆಂದು ತಿಳಿದುಬಂದಿದೆ.[೨೩೦ಎ] ಇದು ಸಂಸ್ಕೃತ ನಿಘಂಟುವಿರಬಹುದು. ಈ ನಾಲ್ಕನ್ನು ಬಿಟ್ಟರೆ ಮಿಕ್ಕ ಸಂಸ್ಕೃತ ಕೃತಿಗಳ ಬಗೆಗೆ ಏನೂ ಗೊತ್ತಾಗಿಲ್ಲ.

---

೨೨೮. ಹರಿವಂಶ (ಪೀಠಿಕಾ ಪ್ರಕರಣ ಅಪಭ್ರಂಶಸಾಹಿತ್ಯ, ಪು. ೧೦೩)

೨೨೯. ಈ ಸಂಸ್ಕೃತ ವರ್ಧಮಾನಪುರಾಣಕ್ಕೆ ೧೫"x೪" ಆಕಾರದ ೨೫೬ ಗರಿಗಳುಳ್ಳ ಕನ್ನಡ ಟೀಕೆಯ ತಾಳೆಗ್ರಂಥವೊಂದು ಶ್ರವಣಬೆಳ್ಗೊಳ ಭಾಂಡಾರದಲ್ಲಿ ಲಭಿಸುತ್ತದೆ. ಇದರ ಆದಿಯಲ್ಲಿ "ವರ್ಧಮಾನ ಮಾನಮ್ಮ ಸರ್ವ ತತ್ವಾವ ಭೂಧನಂ। ಕರ್ಣಾಟ ಭಾಷೆಯಾ ತಛ್ರೀ ವ್ಯಾಖ್ಯಾನಂ ಲಖ್ಯತೇ ಮಯಾ।" ಎಂದೂ ಅಂತ್ಯದಲ್ಲಿ 'ಶ್ರೀಮದ್ಬೆಳುಗಳುವಾಸಿನಾ ವಶಿಷ್ಟಗೋತ್ರಜೇನ।ವಿಜೇರಾಜಾಹ್ವಯೇನ ಲಿಖಿತಮಿದಂ ವರ್ಧಮಾನಸ್ವಾಮಿ ಕಾವ್ಯವ್ಯಾಖ್ಯಾನಂ' 'ಶಾಲಿವಾಹನ ಶಕೆ ೧೪೦೨ ಈಶ್ವರನಾಮ ಸಂವತ್ಸರ ಭಾದ್ರಪದ ವದ್ಯ ಪಂಚಮಿ ಬುಧವಾರ ಮಂಗಳಂ' ಎಂದೂ ಹೇಳಲ್ಪಟ್ಟಿದೆ.
ಈ ಕೃತಿಯ ಪರಿಚಯ ಮಾಡಿಕೊಡುತ್ತ ಶ್ರೀ ವೆಂ.ಭೀ. ಲೋಕಾಪೂರ ಅವರು ಈ ಟೀಕೆಯ ಕರ್ತೃ ಶ್ರವಣಬೆಳ್ಗೊಳ ನಿವಾಸಿಯಾದ ವಶಿಷ್ಟಗೋತ್ರದ ವಿಜಯರಾಜ, ಈತನ ಕಾಲ ಕ್ರಿ.ಶ. ೧೪೮೦ ಎಂದು ಹೇಳುತ್ತಾರೆ. ಮೂಲಶ್ಲೋಕಗಳಿಗೆ ಅನ್ವಯ. ಅನ್ವಯಕ್ಕೆ ಟೀಕೆ ಎಂಬ ಕ್ರಮವನ್ನು ಇಲ್ಲಿ ಪಾಲಿಸಲಾಗಿದೆ-'ಅಸಗನ ವರ್ಧಮಾನಪುರಾಣದ ಕನ್ನಡ ವ್ಯಾಖ್ಯಾನ' (ವೆಂ. ಭೀ. ಲೋಕಾಪುರ. ಜಯಂತಿ ೧೮-೨) ನೋಡಿರಿ.

೨೩೦. ಜಿನರತ್ನಕೋಶ (ವೇಲಂಕರ್)ಪು. ೩೩೬

೨೩೦ಎ. ಜಿನರತ್ನಕೋಶ (ಪು. ೨೧೦)ದಲ್ಲಿಯೂ ಈ ಕೃತಿಯ ಉಲ್ಲೇಖವಿದೆ.

ಅಸಗನ ಕನ್ನಡ ಕೃತಿಗಳು ೫ ಇರಬಹುದೆಂದು ಲೋಕಾಪೂರ ಅವರ ಊಹೆ. ಜಯಕೀರ್ತಿ ಮಾತ್ರ ಕರ್ಣಾಟ ವಿಷಯಜಾತಿ ಛಂದೋವತಂಸದ ಲಕ್ಷಣ ಪ್ರಸಂಗದಲ್ಲಿ,

> ಛಂದೋಽವತಂಸನಾಮೇತಿ ಚತುಷ್ಪದಿಕಾ।
> ಸಂದೃಷ್ಟ್ವಾಸೌ ಕುಮಾರಸಂಭವಾದೌ॥[೨೩೧]

ಅಂದರೆ ನಾಲ್ಕು ಪಾದಗಳ ಛಂದೋವತಂಸವು ಕುಮಾರಸಂಭವ ಹೆಸರಿನ ಕಾವ್ಯದಲ್ಲಿ ಕಂಡುಬರುತ್ತದೆ ಎನ್ನುವನೇ ಹೊರತು, ಅದರ ಕರ್ತೃ ಯಾರೆಂದು ಹೇಳುವುದಿಲ್ಲ. ಮುಂದೆ ಸಮಾನಾಕ್ಷರದ ಲಕ್ಷಣ ಹೇಳುತ್ತ,

> ಶ್ರುತಿಕಾಂತಮಕ್ಷರದಕ್ಷೈರಾದೃತಮಸಗಾಖ್ಯ ಕವಿನಾ।
> ಪ್ರತಿಪಾದಿತಂ ನನು ಕರ್ಣಾಟ ಕುಮಾರಸಂಭವ ಕಾವ್ಯೇ॥[೨೩೨]

ಅಂದರೆ ಅಕ್ಷರದಕ್ಷರಿಂದ ಮಾನಿತವಾದ, ಶ್ರವಣಮನೋಹರವಾದ ಸಮಾನಾಕ್ಷರವು ಅಸಗಕವಿಯ ಕುಮಾರಸಂಭವಕಾವ್ಯದಲ್ಲಿ ಬಳಕೆಯಾಗಿದೆ ಎಂದು ನುಡಿದು, ಕುಮಾರಸಂಭವದ ಕರ್ತೃ ಅಸಗನೆಂದು ಸ್ಪಷ್ಟಪಡಿಸುವನು. ಹೀಗೆ ಜಯಕೀರ್ತಿಯ ಹೇಳಿಕೆಯಂತೆ ಅಲ್ಲಲ್ಲಿ ಛಂದೋವತಂಸ, ಸಮಾನಾಕ್ಷರಗಳೆಂಬ ಜಾತಿವೃತ್ತಗಳನ್ನೊಳಗೊಂಡ ಈ ಕನ್ನಡಕೃತಿ ಇನ್ನೂ ಲಭಿಸಿಲ್ಲ. ಕುಮಾರಸಂಭವ ಎಂದಾಕ್ಷಣ ಮಹಾಕವಿ ಕಾಳಿದಾಸನ ಕುಮಾರಸಂಭವ ಕಣ್ಣೆದುರು ನಿಲ್ಲುತ್ತದೆ. ಆದರೆ ಜೈನನಾದ ಅಸಗನ ಈ ಕೃತಿ, ಕಾಳಿದಾಸನ ಶೈವಕೃತಿಯ ಅನುಕರಣವೆನ್ನಲು ಧೈರ್ಯಸಾಲದು. ಅದಕ್ಕಾಗಿ ಇದರ ಸ್ವರೂಪದ ಸಾಧ್ಯಾಸಾಧ್ಯತೆಗಳನ್ನು ಕೆಳಗಿನಂತೆ ಊಹಿಸಬಹುದು.

೧.ತಾರಕನ ವಧೆಗಾಗಿ ಶಿವ-ಶಿವೆಯರ ಗರ್ಭದಿಂದ ಕುಮಾರ (=ಷಣ್ಮುಖ)ನು ಜನಿಸಿದನೆಂಬ ಗಿರಿಜಾಕಲ್ಯಾಣಲೀಲೆಯ ಕಥೆ, ಶಿವಭಕ್ತನಾದ ಕಾಳಿದಾಸನ ಕೈಯಲ್ಲಿ 'ಕುಮಾರಸಂಭವಂ' ಎಂಬ ಹೆಸರಿನಿಂದ ಕೃತಿಗಿಳಿದು ಲೋಕಪ್ರಖ್ಯಾತವಾಗಿದೆ. ಅಸಗನು ಈ ಕೃತಿಯನ್ನು ಕನ್ನಡಿಸಿರಬಹುದು ಇಲ್ಲವೆ ಈ ವಸ್ತುವನ್ನು ಸ್ವಪ್ರತಿಭೆಯಿಂದ ಸ್ವತಂತ್ರ ಕೃತಿಯನ್ನಾಗಿಸಿರಬಹುದು. ಆದರೆ ಅನ್ಯಮತೀಯ ಕಥೆಗಳನ್ನು ಮುಟ್ಟದ ಆ ಕಾಲದಲ್ಲಿ ಹೀಗಾಯಿತೆಂದು ನಂಬುವುದು ದುಸ್ತರ.

೨.ಹಿಂದುಗಳ ವೃಷಭವಾಹನ ಶಿವ, ಜೈನರ ವೃಷಭವಾಹನ ಆದಿಜಿನರ ಚರಿತ್ರೆಯಲ್ಲಿ ಸಾಮ್ಯ ಹೆಚ್ಚು. ಅದಕ್ಕಾಗಿ ರಾಮಾಯಣ ಭಾರತಗಳಿಗೆ ಜೈನಸ್ಪರ್ಶ ಕೊಟ್ಟ ಹಾಗೆ, ಆದಿತೀರ್ಥಂಕರನೆಂದರೆ ಶಿವ, ಯಶಸ್ವತೀದೇವಿಯೆಂದರೆ ಪಾರ್ವತಿ, ಅವರ ಹಿರಿಯ ಕುಮಾರ ಭರತನೆಂದರೆ ಷಣ್ಮುಖ ಎಂಬ ರೀತಿಯಲ್ಲಿ ಜೈನ ಕುಮಾರಸಂಭವವನ್ನು ಬರೆದಿರಬಹುದೇ ಎಂಬ ಅನುಮಾನ ಹುಟ್ಟುತ್ತದೆ. ಈ ವರೆಗೆ ಜೈನಸಾಹಿತ್ಯದಲ್ಲಿ ಇಂಥ ಕಥೆ ಕಂಡುಬಾರದ ಕಾರಣ ಇಲ್ಲಿಯೂ ಸಂದೇಹ ಉಳಿಯುತ್ತದೆ.

೩.ಮಕ್ಕಳ ಜನನವನ್ನು ಕಥಿಸುವ ಕೃತಿಗಳೆಲ್ಲ ಒಂದರ್ಥದಲ್ಲಿ ಕುಮಾರಸಂಭವಗಳೇ. ಗುಜರಾಥದ ಜಯಶೇಖರ ಸೂರಿಯು (೧೫ನೆಯ ಶತಮಾನ) ಆದಿನಾಥ ಯಶಸ್ವತಿದೇವಿಯರಿಗೆ ಭರತನು ಜನಿಸಿದ ಕಥೆಯನ್ನು ಸಂಸ್ಕೃತದಲ್ಲಿ ಕಾವ್ಯಗೊಳಿಸಿ, ಅದಕ್ಕೆ 'ಕುಮಾರಸಂಭವ' ಎಂದು ಹೆಸರಿಟ್ಟುದು ಈ ಮಾತಿಗೆ ನಿದರ್ಶನ.[೨೩೩]

---

೨೩೧. ಛಂ. ಶಾಸನ ೭-೧೬

೨೩೨. ಛಂ. ಶಾಸನ ೭-೭

೨೩೩. ಜೈನ ಕುಮಾರಸಂಭವ ಮಹಾಕಾವ್ಯಮ್-ಸಂ. ಶ್ರೀ. ಮದ್ವಿಜಯಕ್ಷಮಾಭದ್ರಸೂರಿ ಮತ್ತು ವಿಕ್ರಮ ವಿಜಯಮುನಿ.

ಇದಕ್ಕೂ ಕಾಳಿದಾಸನ ಕುಮಾರಸಂಭವಕ್ಕೂ ಯಾವ ಸಂಬಂಧವಿಲ್ಲ. ಅಸಗನು ಇಂಥ ಒಂದು ಕಾವ್ಯವನ್ನು ಬರೆದಿರುವ ಸಾಧ್ಯತೆಯಿದೆ.

೪.ಜೈನರಾದ ಪಂಪ ರನ್ನರು ವಿಕ್ರಮಾರ್ಜುನ, ಸಾಹಸಭೀಮ ಎಂದು ಹೆಸರಾದ ಅರಿಕೇಸರಿ ಮತ್ತು ಇರಿವಬೆಡಂಗರ ಯುದ್ಧಘಟನೆಗಳನ್ನು ಭಾರತ ಕಥೆಯೊಂದಿಗೆ ತಗುಳ್ಚಿ ಹೇಳಿರುವರು. ಈ ಸಂಪ್ರದಾಯ ಪರಿಸರದ ಅಸಗನು ಕುಮಾರ (ಷಣ್ಮುಖ) ನೆಂದು ಹೆಸರಾದ ತನ್ನ ಆಶ್ರಯದಾತ ರಾಜಕುಮಾರನ ಜನನ ಘಟನೆಯನ್ನು 'ಕುಮಾರಸಂಭವ' ಕಥೆಯೊಂದಿಗೆ ತಗುಳ್ಚಿ ಕೃತಿ ರಚಿಸಿರುವ ಸಂಭವವಿದೆ.

ಈ ನಾಲ್ಕರೊಳಗೆ, ಕೊನೆಯ ಎರಡರಲ್ಲಿ ಒಂದು ಮಾತ್ರ ಅಸಗನ ಕೃತಿಗೆ ವಸ್ತುವಾಗಿರಬಹುದು. ಇದಕ್ಕೆ ಇನ್ನೂ ಆಧಾರಗಳು ಬೇಕು.[೨೩೪]

ಇನ್ನು, ಕಾವ್ಯಾವಲೋಕನವು ತಾನು ಬಳಸಿದ ಪದ್ಯಗಳಿಗೆ ಆಕರ ಹೇಳುವುದಿಲ್ಲ. ಆಕರ ಹೇಳುವ ಕಾವ್ಯಸಾರ ಅಸಗನ ಪದ್ಯಗಳನ್ನು ಬಳಸಿದಂತಿಲ್ಲ. ಆಕರ ಹೇಳದಿದ್ದರೂ ಅಸಗನ 'ಸುಮಾರ್ಗ'ವನ್ನೊಪ್ಪಿಕೊಂಡ ಶ. ದರ್ಪಣದಲ್ಲಿ ಕುಮಾರಸಂಭವದ ಪದ್ಯಗಳಿರುವುದು ಸತ್ಯ. ಕುಮಾರಸಂಭವ ಕಥೆಯನ್ನು ಮನಸ್ಸಿನಲ್ಲಿಟ್ಟುಕೊಂಡು, ಅನುಮಾನ ಪ್ರಮಾಣವನ್ನವಲಂಬಿಸಿ ದರ್ಪಣದಿಂದ ಅಂಥ ಪದ್ಯಗಳನ್ನು ಆಯ್ದುಕೊಳ್ಳಬಹುದು. ಹೀಗೆ ಆಯ್ದುಕೊಂಡ ಪದ್ಯಗಳಲ್ಲಿ ಕೆಲವು ಕಾವ್ಯಾವಲೋಕನದಲ್ಲಿಯೂ ಕಂಡುಬರುವುದರಿಂದ ನಾಗವರ್ಮನೂ ಅಸಗನ ಕೃತಿಯನ್ನು ಬಳಸಿರಬಹುದೆನಿಸುತ್ತದೆ. ಆರ್. ನರಸಿಂಹಾಚಾರ್ ಅವರು ಕಾವ್ಯಾವಲೋಕನದ ಉದಾಹರಣೆಗಳನ್ನು ಕುರಿತು"......of the remaining quotations...... thirteen from some work on the marriage of Siva and Parvati" ಎಂದು ಹೇಳುತ್ತ ೧೯, ೫೭, ೧೩೭, ೨೯೫, ೩೮೭, ೪೫೮, ೫೪೫, ೫೫೩, ೬೧೦, ೬೫೯, ೭೨೪, ೮೦೪ ಮತ್ತು ೯೩೬ನೆಯ ಪದ್ಯಗಳನ್ನು ಹೆಸರಿಸಿರುವರು.[೨೩೫] " ಇವುಗಳಲ್ಲಿ ಕೆಲವು ಅಸಗಕೃತ ಕರ್ಣಾಟಕಕುಮಾರಸಂಭವಕ್ಕೆ ಸೇರಿದುವುವಾಗಿರಬಹುದು" ಎಂದು ಕವಿಚರಿತೆಗೆ ಅನುಬಂಧ ಸೇರಿಸಿದ ವಿದ್ವಾಂಸರು ಊಹಿಸಿರುವರು.[೨೩೬] ಶ.ಮ.ದ. ಸೂತ್ರ ೬೯, ೭೫, ೮೨, ೧೨೭, ೧೭೯, ೨೩೨, ೨೩೫, ೨೪೩ರ ಕೆಳಗೆ ಇರುವ ಶಿವಪರ ಲಕ್ಷ್ಯಪದ್ಯಗಳಲ್ಲಿ ಕೆಲವು ಈ ಕುಮಾರಸಂಭವಕ್ಕೆ ಸಂಬಂಧಿಸಿರಬಹುದು. ಈ ಉಭಯಕೃತಿಗಳ ಉದಾಹರಣೆಗಳನ್ನು ಸಮೀಕರಿಸಿದರೆ ಒಟ್ಟುಪದ್ಯ ಮತ್ತು ಪದ್ಯಭಾಗ ಕೂಡಿ ೧೬ ಕಂಡುಬರುತ್ತವೆ. ಕೆಲವನ್ನು ಇಲ್ಲಿ ನೋಡಬಹುದು.

ವಟು ಸಂಭಾಷಣೆ:

ಅಂತೆಂತೆನೆ ಪರಿಚಾರಕಿ
ಗಿಂತೆಂದಂ ಬ್ರಹ್ಮಚಾರಿ ಕಳೆಕಳೆ ಸಿತಗಂ
ಗಿಂತು ಕಿಡಿಸುವುದೆ ತಪಮನ
ದೆಂತುಂ ಗಿರಿಸುತೆಯ ಬಯಸಲಾತಂ ದೊರೆಯೇ॥[೨೩೭]

ಅಯ್ಯನೆನೆ ಬಳ್ಕಿ ತಾಮೆಂ
ದೊಯ್ಯನೆ ನುಡಿದೆಟ್ಟು ಗಿರಿಜೆ ಪೋಪುದು ಮಿತ್ತೇ

೨೩೪. ನನ್ನೆಚೋಡನ ತೆಲುಗು ಕುಮಾರಸಂಭವದ ಮೇಲೆ ಅಸಗನ ಪ್ರಭಾವವಾಗಿರಬೇಕೆಂದು ಪಂಡಿತರ ಊಹೆ. ಆದರೆ ಅಸಗನ ಕುಮಾರಸಂಭವದ ಕಥಾವಸ್ತು ಇನ್ನೂ ಸಂದೇಹದಲ್ಲಿದ್ದುದು ಗಮನಾರ್ಹ.

೨೩೫. ಕಾ.ಲೋ. ಮುನ್ನುಡಿ (೧೯೬೭) ಪು. ೬೬-೬೭ ಮತ್ತು ೬೭ ಅ.ಟಿ.

೨೩೬. ಕ.ಕ.ಚ. ಅನು ॥ಪು. ೩೦

೨೩೭. ಕಾ. ಲೋ. ೨೯೫

ನಯ್ಯ ನವಜಲದಕಂಠನ
ಜಯ್ಯಾತ್ಮಂ ನೆನೆದನಮಳ ಸುರಮುನಿವರರಂ॥[೨೩೮]

ವಿವಾಹವರ್ಣನೆ: ಆಡಿದನಿಂದ್ರನಿಂದ್ರಗಣಿಕಾಗಣಮಟ್ಕಿಱಿಯೊಳೊಲ್ದು ಮಂಗಳಂ
ಬಾಡಿದುದಬ್ಜಜಂ ಪರಸಿ ಸೇಸೆಯನಿಕ್ಕಿದನದ್ರಿ ತಾನೆ ಮುಂ।
ಡಾಡಿ ವಿಭೂತಿಯಿಂದೊಸಗೆ ಮಾಡಿದನಂಗಜನಂಗಲಕ್ಷ್ಮಿಯೊಳ್
ಕೂಡಿದನೆಂದೊಡೇ ವೊಗಳ್ವುದೋ ಭವಶೈಲಭವಾ ವಿವಾಹಮಂ॥[೨೩೯]

ಶಿವಪಾರ್ವತೀ ವರ್ಣನೆ: ಕಱೆ ಕೊರಲೊಳ್ ಕಣ್ ನೊಸಲೊಳ್
ಪೆಱೆ ಮುಕುಟದೊಳಹಿ [ವಿ]ಭೂಷಣಾವಳಿ ತೋಳೊಳ್।
ನೆಱೆದಿರೆ ಕರಮೆಸೆದಂ ಪಲ
ತೆಱದ ಮರುಳ್ವಡೆಯ ನಡುವುಮಾಪತಿರುದ್ರಂ ॥[೨೪೦]

ಇವಲ್ಲದೆ ಕೆಲವು ಸಲ ಕಾಳಿದಾಸನ ಕುಮಾರಸಂಭವದ ನೇರವಾದ ಅನುವಾದಿತ ಪದ್ಯಗಳೂ ಕಂಡುಬರುತ್ತವೆ.

೧. ಕಂಠಸ್ಯ ತಸ್ಯಾಃ ಸ್ತನಬಂಧುರಸ್ಯ।ಮುಕ್ತಾಕಲಾಪಸ್ಯ ಚ ನಿಸ್ತಲಸ್ಯ।
ಅನ್ಯೋನ್ಯಶೋಭಾ ಜನನಾತ್ ಬಭೂವ। ಸಾಧಾರಣೋ ಭೂಷಣಭೂಷ್ಯಭಾವಃ॥[೨೪೧]

ಸರಿಗೆಗೆ ಕೊಱಲ್ ಕೊಱಲ್ಗಂ
ಸರಿಗೆಯಲಂಕರಿಸೆ ಸರಿಗೆವಂದುದು ಮುಯ್ ಮು।
ಟ್ಟಿರಡರ ಬೆಡೆಂಗುಮೆಂಬಂ
ತಿರೆ ಕರಮೊಪ್ಪಿದುದು ಕೊರಲಗೇಂದ್ರಾತ್ಮಜೆಯಾ॥[೨೪೨]

೨. ಪುಷ್ಪಂ ಪ್ರವಾಲೋಪಹಿತಂ ಯದಿ ಸ್ಯಾ।ನ್ಮುಕ್ತಾಫಲಂ ವಾ ಸ್ಫುಟವಿದ್ರುಮಸ್ಥಂ।
ತತೋಽನು ಕುರ್ಯಾದ್ವಿಶದಸ್ಯ ತಸ್ಯಾ । ಸ್ತಾಮ್ರೌಷ್ಠಪರ್ಯಸ್ತರುಚೇಃ ಸ್ಮಿತಸ್ಯ॥[೨೪೩]

ತಳಿರ ಮೇಗಣಲರೋಳಿಗಳೋ ಪೊಸಮುತ್ತುಗಳ್।
ತೊಳಪುವೋ ಪವಳದಂಕುರದೊಳ್ ಪುದಿದಿಂತು ತ ।
ಮ್ಮೊಳೆ ವಿಚಾರಿಸಿ ಜನಂ ಕರಮೊಪ್ಪುವುದಾಯ್ತು ಪ।
ಲ್ಗಳ ಮುಗುಳ್ನಗೆಯ ಬಾಯಬೆಡಂಗು ಲತಾಂಗಿಯಾ॥[೨೪೪]

ಇವಲ್ಲದೆ 'ಅಂಜಿಸಿದಪಂ ಮೂಲೋಕಮಂ ತಾರಕಂ'[೨೪೫] 'ನೀಮಿರೆ ಮತ್ತವಾರಣಮುಮಂ ತಾರಕಚಕ್ರವರ್ತಿಗೆ'[೨೪೬] 'ಪ್ರಣಯದೆ ತ್ರಿಪಥಗೆ ನಡೆತರೆ ತ್ರಿಣೇತ್ರನೊಲವಿಂದೆ ತಾಳ್ದಿದಂ ಮಸ್ತಕದೊಳ್'[೨೪೭] 'ಲಲಾಟದೊಳ್ ಮಿಱುಪ ಕಣ್ಣುರಿಯಂತೆ'[೨೪೮] ಎಂಬ ಖಂಡವಾಕ್ಯಗಳೂ ಕಂಡುಬರುತ್ತವೆ. ಈ ಪದ್ಯ ಮತ್ತು ಪದ್ಯಭಾಗಗಳಲ್ಲಿ ಕೆಲವಾದರೂ ಅಸಗನ ಕುಮಾರಸಂಭವಕ್ಕೆ ಸಂಬಂಧಿಸಿರಬೇಕು.

---

೨೩೮. ಕಾ. ಲೋ. ೧೯
೨೩೯. ಕಾ. ಲೋ. ೩೮೭
೨೪೦. ಕಾ. ಲೋ. ೬೧೦
೨೪೧. ಕು. ಸಂಭವ, ೧-೪೩
೨೪೨. ಕಾ. ಲೋ. ೬೫೯
೨೪೩. ಕು. ಸಂಭವ, ೧-೪೪
೨೪೪. ಕಾ. ಲೋ. ೮೯೫
೨೪೫. ಶ.ಮ.ದ. ಸೂ. ೨೩೨
೨೪೬. ಶ.ಮ.ದ. ಸೂ. ೨೩೫
೨೪೭. ಶ.ಮ.ದ. ಸೂ. ೭೯
೨೪೮. ಶ.ಮ.ದ. ಸೂ. ೨೪೩

"ಕವಿಮಲ್ಲಕೃತ ಅಪ್ರಕಟಿತ*ಕಾವ್ಯಸಾರವನ್ನು ಕುರಿತು 'ಕುಮಾರಸಂಭವದ ಭಾಗವಿರಬಹುದಾದ ಗಿರಿರಾಜನ ಆಸ್ಥಾನ, ಪಾರ್ವತಿಯ ಬಾಲ್ಯ, ರತಿ-ಮನ್ಮಥರ ರೂಪಲಾವಣ್ಯ, ಗಿರಿಜಾಕಲ್ಯಾಣ ಮೊದಲಾದವುಗಳಿಗೆ ಸಂಬಂಧಪಟ್ಟ ಪದ್ಯಗಳು ಎಡೆ ಎಡೆಯಲ್ಲಿ ಗೋಚರವಾಗುವುವು. ಇವು ಹರಿಹರನ ಗಿರಿಜಾಕಲ್ಯಾಣದ ಭಾಗಗಳಲ್ಲ" ಎಂದೂ, ಮಲ್ಲಿಕಾರ್ಜುನನ ಸೂಕ್ತಿಸುಧಾರ್ಣವವನ್ನು ಕುರಿತು "ಹರಿಹರನ ಗಿರಿಜಾಕಲ್ಯಾಣಕ್ಕೆ ಸಂಬಂಧಪಡದ ಶಿವಪಾರ್ವತಿಯರ ವಿಷಯಕವಾದ ಕೆಲವು ಪದ್ಯಗಳೂ.... ದೊರಕುತ್ತವೆ"[೨೪೯] ಎಂದೂ ಎನ್. ಅನಂತರಂಗಾಚಾರ್ ಅವರು ಹೇಳುತ್ತಿದ್ದು ಇವುಗಳಲ್ಲಿ ಕೆಲವು ಅಸಗನ ಕುಮಾರಸಂಭವಕ್ಕೆ ಸಂಬಂಧಿಸಿರುವ ಸಾಧ್ಯತೆಯಿದೆ.

ಹೀಗೆ ಶಾಸ್ತ್ರ ಮತ್ತು ಸಂಕಲನಗ್ರಂಥಗಳಲ್ಲಿಯ ಉದ್ಧೃತಪದ್ಯಗಳಲ್ಲದೆ ಪೂರ್ವಕವಿಸ್ತುತಿ ಪದ್ಯಗಳೂ ಅಸಗನ ಕಾವ್ಯಸತ್ವವನ್ನು ಬಿತ್ತರಿಸುವುವು. ನಯಸೇನನು 'ಅಸಗನ ದೇಸಿ'ಯನ್ನು[೨೫೦], ಕೇಶಿರಾಜನು 'ಅಸಗನ..... ಸುಮಾರ್ಗ'[೨೫೧]ವನ್ನು ಎತ್ತಿ ನುಡಿದಿರುವರು. ದುರ್ಗಸಿಂಹನು,

> ಪೊಸತೆನಿಸಿ ದೇಸಿಯಂ ನವ
> ರಸಮೆಸೆಯಲ್ಕೊಳ್ಳುವೆತ್ತ ಮಾರ್ಗದಿನಿಗಳೆಗೇ।
> ನೆಸೆದುವೊ ಸುಕವಿಗಳೆನೆ ನೆಗ
> ಳ್ದಸಗನ ಮನಸಿಜನ ಚಂದ್ರ [ಭಟ್ಟನ ನುಡಿಗಳ್] ॥[೨೫೨]

ಎಂದು ಈತನ ದೇಸಿ-ಮಾರ್ಗಗಳ ಸಮರುಚಿಯನ್ನು ಸಾರುವನು. ಆದರೆ ಅಸಗನವಾಗಿರಬಹುದಾದ ಮೇಲಣ ಪದ್ಯಗಳಲ್ಲಿ ದೇಸಿಮಾರ್ಗಗಳ ಸಮನ್ವಯ ಇಲ್ಲವೆನ್ನುವಷ್ಟು ಕಡಿಮೆ. ಮೇಲಾಗಿ ನಯಸೇನ ದುರ್ಗಸಿಂಹರಂಥ ದೇಸಿ ಕವಿಗಳ ಮೆಚ್ಚುಗೆ, ಜಯಕೀರ್ತಿ ಮಾಡಿದ ಛಂದೋವತಂಸ, ದೊರೆಯಕ್ಕರಗಳ ಉಲ್ಲೇಖಗಳು ಈತನ ದೇಸಿ ಸಂಪತ್ತನ್ನು ಸೂಚಿಸುತ್ತಿದ್ದರೂ ಮೇಲಣ ಪದ್ಯಗಳಿಂದ ಸಮರ್ಥನೆ ದೊರೆಯುವುದಿಲ್ಲ. ಆದುದರಿಂದ ಅಸಗನೊಬ್ಬ ಮಧ್ಯಮ ಶೈಲಿಯ ಉಪಾಸಕನಾಗಿರಬೇಕು. ಸುಂದರ ಪದ್ಯಗಳನ್ನೇ ಆರಿಸಿಕೊಳ್ಳುವ ಕೇಶಿರಾಜನಲ್ಲಿ ಶಿವಪಾರ್ವತಿಯರನ್ನು ಕುರಿತ ಪದ್ಯಗಳ ಮಟ್ಟ ಒಂದಿಷ್ಟು ಸಾಮಾನ್ಯವೇ ಆಗಿರುವುದರಿಂದ, ಈತನ ವಿಷಯವಾಗಿ ನಾವು ನೀಡಿದ ನಿರ್ಣಯ ಬಹುಮಟ್ಟಿಗೆ ಸರಿಯೆನಿಸುತ್ತದೆ.

ಕನ್ನಮಯ್ಯ

> 'ಪರಮಕವೀಶ್ವರಚೇತೋ।
> ಹರಮೆಂಬಿನಮೆಸೆವ ಮಾಳವೀಮಾಧವಮಂ।
> ವಿರಚಿಸಿದ ಕನ್ನಮಯ್ಯಂ।
> ಬರಮಾಗಂ ಸುಕವಿ ಬಗೆವೊಡಿನ್ನುಂ ಮುನ್ನುಂ॥'[೨೫೩]
>
> (ದುರ್ಗಸಿಂಹ-೧೦೩೧)

---

* ಕವಿಮಲ್ಲನ ಕಾವ್ಯಸಾರವು ಈ ಪಿಎಚ್.ಡಿ. ಪ್ರಬಂಧ ಪ್ರಕಟವಾದ ಬಳಿಕ ಬೆಳಕು ಕಂಡಿದೆ.

೨೪೯. ಸೂಕ್ತಿಸುಧಾರ್ಣವ, ಮುನ್ನುಡಿ xxಲಿ. ಟಿ. ಮತ್ತು xxvi

೨೫೦. ಧರ್ಮಾಮೃತ ೧-೩೯

೨೫೧. ಶ.ಮ.ದ. ಸೂ. ೫

೨೫೨. ಪಂಚತಂತ್ರಂ, ೧-೨೩

೨೫೩. ಪಂಚತಂತ್ರ, ೧-೨೨

'ಇನಿತುಮವಿರ್ಕೆ ಮತ್ಕೃತಿಯೊಳೀಧರೆ ಬಣ್ಣಿಸೆ..... ಕಣ್ಣಮನ ಜಾಣ್ನುಡಿ'[೨೫೪]
(ರುದ್ರಭಟ್ಟ-೧೧೮೫)

'ಎನ್ನೀ ಕಬ್ಬದೊಳೆಂದುಂ ಸನ್ನಿದಮಾಗಿರ್ಕೆ ಕಣ್ಣಪ(ಮ)ಯ್ಯನ ಕಡುಜಾಣ್'[೨೫೫]
(ಆಂಡಯ್ಯ-೧೨೩೫)

'ಕಣ್ಣಮಯ್ಯನಿಂಪಂ ಪುದಿದಿರ್ಪ ಗೌರವಗುಣಂ..... ಈ ಕೃತಿಯೊಳುಂಟು'[೨೫೬]
(ಪಾರ್ಶ್ವಪಂಡಿತ-೧೨೦೫)

'ಅಂಗಜರಿಪು ನೇಮಿ ವೀರೇಶ ಚರಿತವ ಪೊಂಗಿ ಪೊಗಳ್ದ ಕಣ್ಣಪನ..... ನೆನೆವೆ'[೨೫೭]
(ಮಂಗರಸ-೧೫೦೮)

'ವರಶಾಂತಿನಾಥನ ಪೊಗಟೆದ ಹೊನ್ನ। ಸ್ಮರಹರ ನೇಮಿಚರಿತವ
ದುರಿತಾರಿ ವಿರೇಶನ ಚರಿತವ ಪೇಟ್ದಿ। ಗರುವ ಕಣ್ಣಪನ ನುತಿಪೆನು'[೨೫೮]
(ದೊಡ್ಡಯ್ಯ-೧೫೫೦)

ಇಲ್ಲಿಯ ಕನ್ನಮಯ್ಯ, ಕಣ್ಣಪಯ್ಯ, ಕಣ್ಣಪ ಎಂಬ ಪದಗಳು ಮೇಲುನೋಟಕ್ಕೆ ಒಂದು ಹೆಸರಿನ ವಿವಿಧರೂಪಗಳಂತೆ ತೋರುತ್ತವೆ. ಹೀಗಾಗಿ ಮಾಳವೀಮಾಧವದ ಕರ್ತೃ, ನೇಮಿನಾಥಪುರಾಣದ ಕರ್ತೃಗಳನ್ನು ಮೊದಲು ಒಬ್ಬನೇ ಎಂದು ಭಾವಿಸಿದ್ದ ಆರ್. ನರಸಿಂಹಾಚಾರ್ಯರು,[೨೫೯] ಡಾ. ವೆಂಕಟಸುಬ್ಬಯ್ಯನವರ ಲೇಖನ (ಕೆ. ಜೀ.ಕಾ.ಪು. ೭೧) ನೋಡಿ, ಇವರು ಭಿನ್ನವ್ಯಕ್ತಿಗಳೆಂದು ಒಪ್ಪಿಕೊಂಡರು.[೨೬೦] ಇದಕ್ಕೆ ಆಧಾರಗಳು ಇಂತಿವೆ:

೧. ದುರ್ಗಸಿಂಹನ ಪ್ರಕಾರ ಕನ್ನಮಯ್ಯನು ಮಾಳವೀಮಾಧವದ ಕರ್ತೃ, ಮಂಗರಸ ಮತ್ತು ದೊಡ್ಡಯ್ಯರ ಪ್ರಕಾರ ಕಣ್ಣಪನು ನೇಮಿನಾಥಚರಿತ ಮತ್ತು ವೀರೇಶ (ವೀರವರ್ಧಮಾನ) ಚರಿತಗಳ ಕರ್ತೃ.

೨. ಕ್ರಿ.ಶ. ೧೦೩೧ರ ದುರ್ಗಸಿಂಹನಿಂದ ಸ್ತುತಿಸಲ್ಪಟ್ಟ ಮಾಳವೀಮಾಧವದ ಕನ್ನಮಯ್ಯನು ೧೧ನೆಯ ಶತಮಾನಕ್ಕೆ ಪ್ರಾಚೀನ. ನೇಮಿನಾಥಚರಿತೆಯ ಕಣ್ಣಪನು ೧೨ನೆಯ ಶತಮಾನದಲ್ಲಿ ಬಾಳಿದವನು.

ಈ ಆಧಾರಗಳ ಬಲದಿಂದ ಇವರು ಬೇರೆಬೇರೆ ವ್ಯಕ್ತಿಗಳೆಂದು ಈಗ ಎಲ್ಲ ವಿದ್ವಾಂಸರು ಹೇಳುವರಾದರೂ ಹೆಸರುಮಾತ್ರ ಇಬ್ಬರಿಗೂ ಒಂದೇ, ಅದು ಕರ್ಣಪಾರ್ಯ ಎನ್ನುವರು. ಆದರೆ ನಮ್ಮ ಅಭಿಪ್ರಾಯದಂತೆ ಇಬ್ಬರೂ ಭಿನ್ನವ್ಯಕ್ತಿಗಳು, ಇಬ್ಬರಿಗೂ ಭಿನ್ನ ಹೆಸರುಗಳಿವೆ.

ದುರ್ಗಸಿಂಹನ ಪ್ರಕಾರ ಮಾಳವೀಮಾಧವದ ಕರ್ತೃವಿನ ಹೆಸರು ಕನ್ನಮಯ್ಯ. ನೇಮಿನಾಥ ಪುರಾಣದ ಕರ್ತೃವಿನ ಹೆಸರು ಅವನೇ ಹೇಳುವಂತೆ ಕರ್ಣಪಾರ್ಯನೆಂದದ್ದು ಇದರ ತದ್ಭವ ಕಣ್ಣಪಯ್ಯ. ಈ ಉಭಯ ಹೆಸರುಗಳನ್ನು ಕನ್ನ+ಅಮ+ಅಯ್ಯ ಮತ್ತು ಕಣ್ಣ+ಅಪ+ಅಯ್ಯ ಎಂದು ಬಿಡಿಸಿ ಪರೀಕ್ಷಿಸಿದರೆ ಕೃಷ್ಣ> (ದ್ಭ)ಕನ್ನ,

---

೨೫೪. ಜ. ವಿಜಯ, ೧-೧೦

೨೫೫. ಕ. ಕಾವ, ೧-೪

೨೫೬. ಪಾರ್ಶ್ವ ಪುರಾಣ. ೧-೭೧

೨೫೭. ನೇ ಸಂಗತಿ. ೧-೨೭

೨೫೮. ಚಂ. ಪ್ರ. ಚರಿತೆ - (ಕ.ಕ. ಚ. II-252)

೨೫೯. ಕ.ಕ.ಚ. I (೧೯೦೭)

೨೬೦. ಕ.ಕ.ಚ. I (೧೯೬೧)ಪು. ೧೪೯. ಅ.ಟಿ.

ಕರ್ಣ> (ದ್ಭ)ಕಣ್ಣ ಎಂಬ ಸುಳುಹು ಸಿಗುತ್ತದೆ. ಇವುಗಳಲ್ಲೊಂದು 'ಕೃಷ್ಣ'ವನ್ನಾಧರಿಸಿ ಇನ್ನೊಂದು 'ಕರ್ಣ'ವನ್ನಾಧರಿಸಿ ಹುಟ್ಟಿದ ರೂಪಗಳು. ಆದರೆ ಕಾಲಕ್ರಮದಲ್ಲಿ ಕನ್ನಮಯ್ಯ ಕಣ್ಣಪಯ್ಯಗಳ ಧ್ವನಿಸಾಮ್ಯತೆಯಿಂದಾಗಿ ಕಣ್ಣಮಯ್ಯ, ಕನ್ನಪಯ್ಯ, ಕಣ್ಣಮ, ಕನ್ನಪ ಎಂಬ ವ್ಯತ್ಯಸ್ತ ರೂಪಗಳು ತಲೆದೋರಿ, ಇಬ್ಬರ ಹೆಸರುಗಳಲ್ಲಿ ಗೊಂದಲ ಉದ್ಭವಿಸಿದಂತೆ ಕಾಣುತ್ತದೆ. ಅನುಕೂಲ ದೃಷ್ಟಿಯಿಂದ ಇನ್ನು ಮೇಲಾದರೂ ಒಬ್ಬನನ್ನು ಕನ್ನಮಯ್ಯ, ಇನ್ನೊಬ್ಬನನ್ನು ಕಣ್ಣಪಯ್ಯ ಎಂದು ಕಟ್ಟುನಿಟ್ಟಾಗಿ ಕರೆಯುವುದು ಲೇಸು.

ಇವರಲ್ಲಿ ನಮಗೆ ಪ್ರಸ್ತುತನಾದವನು ದುರ್ಗಸಿಂಹ(೧೦೩೧)ನಿಗೆ ಪ್ರಾಚೀನನಾದ ಕನ್ನಮಯ್ಯ. ಕವಿಚರಿತೆಕಾರರು ಕನ್ನಮಯ್ಯ ಮತ್ತು ಕಣ್ಣಪಯ್ಯ ಒಂದೇ ಎಂದು ಭಾವಿಸಿ ಈತನಕಾಲ ಕ್ರಿ.ಶ. ೧೧೪೦ ಎಂದು ಊಹಿಸಿದರು.[೨೬೧] ಎ. ವೆಂಕಟಸುಬ್ಬಯ್ಯನವರು ಮಾತ್ರ ಕಣ್ಣಪಯ್ಯನ ಕಾಲ ಕ್ರಿ.ಶ. ೧೧೭೩-೭೪ ಎಂದು ಹೇಳುತ್ತ "ಕ್ರಿ.ಶ. ೧೦೪೨ಕ್ಕಿಂತಲೂ ಹಿಂದೆ ಬರೆಯಲ್ಪಟ್ಟ ದುರ್ಗಸಿಂಹನ ಪಂಚತಂತ್ರದಲ್ಲಿ ಅವನು (ಕನ್ನಮಯ್ಯ) ಸ್ತುತನಾಗಿರುವುದರಿಂದ ಅವನು ಕ್ರಿ.ಶ. ೧೦೪೨ಕ್ಕಿಂತ ಹಿಂದೆ ಇದ್ದಿರಬೇಕು" ಎಂದು ಹೇಳಿದರು.[೨೬೨] ಹೀಗೆ ಹಿಂದೆ ಅನಿಶ್ಚಿತ ಅವಧಿಯಲ್ಲಿ ನಿಂತ ಈತನ ಕಾಲ ನಿರ್ಣಯಕ್ಕೆ ಹೊಸ ಆಧಾರ ನೀಡಿದುದು ೧೯೪೫ರಲ್ಲಿ ಬೆಳಕಿಗೆ ಬಂದ ಜಯಕೀರ್ತಿಯ ಛಂದೋನುಶಾಸನ. ಅಕ್ಕರ ಪ್ರಪಂಚಕ್ಕೆ ಸೇರಿದ ನಡುವಣಕ್ಕರದ ಲಕ್ಷಣವನ್ನು ವಿವರಿಸುತ್ತ ಅಲ್ಲಿ,

ಗ್ರಥಿತಂ ಲಕ್ಷಣಮಿತಿ ಯಸ್ಯ ತನ್ಮಧ್ಯಮಾಕ್ಷರಾಖ್ಯಂ।
ಪ್ರಥಿತಂ ಕರ್ಣಾಟ ಮಾಲತೀಮಾಧವ ಪ್ರಭೃತಿ ಕಾವ್ಯೇ॥[೨೬೩]

ಎಂದು ಹೇಳಲಾಗಿದೆ. ಇಲ್ಲಿ ಕೃತಿಯ ಹೆಸರು ಮಾಲತೀಮಾಧವ ಎನ್ನಲಾಗಿದೆಯೇ ಹೊರತು ಕರ್ತೃವಿನ ಹೆಸರು ಹೇಳಿಲ್ಲ. ಆದರೆ ದುರ್ಗಸಿಂಹನು,

ಪರಮಕವೀಶ್ವರಚೇತೋ
ಹರಮೆಂಬಿನಮೆಸೆವ ಮಾಳವೀಮಾಧವಮಂ।
ವಿರಚಿಸಿದ ಕನ್ನಮಯ್ಯಂ
ಬರಮಾಗಂ ಸುಕವಿ ಬಗೆವೊಡಿನ್ನುಂ ಮುನ್ನುಂ॥[೨೬೪]

ಎನ್ನುತ್ತ ಮಾಳವೀಮಾಧವದ ಕರ್ತೃ ಕನ್ನಮಯ್ಯನೆಂದು ಸೂಚಿಸುವನು. ಈ ಮಾಳವೀಮಾಧವವೆಂದರೆ ಜಯಕೀರ್ತಿ ಹೇಳುವ ಮಾಲತೀಮಾಧವವೆಂದೂ ಇದರ ಕರ್ತೃ ಕನ್ನಮಯ್ಯನೆಂದೂ ಇಟ್ಟುಕೊಳ್ಳುವುದರಲ್ಲಿ ಯಾವ ಅಭ್ಯಂತರವೂ ಇಲ್ಲ. ನಾವು ಬೇರೊಂದೆಡೆಗೆ ಊಹಿಸಿದಂತೆ ಅಸಗ (ಕ್ರಿ.ಶ. ೮೫೩?) ಮತ್ತು ಪಂಪ (೯೪೦) ರ ಮಧ್ಯದ ಜಯಕೀರ್ತಿಯಿಂದ ಉಲ್ಲೇಖಿತನಾದ ಈತನು ಪಂಪಪೂರ್ವದ ಕವಿಯಾಗಿರಬೇಕು. ಇವನ ಕಾಲ ಕ್ರಿ.ಶ. ೮೦೦-೮೨೫ ಇಲ್ಲವೆ ೯೦೦-೯೨೫ ಎಂದು ಪೈಯವರ ಅಭಿಪ್ರಾಯವಾಗಿದ್ದು,[೨೬೫] ಸಂಸ್ಕೃತ ಮಾಲತೀಮಾಧವವು ಇದಕ್ಕೆ ಆಕರವಾಗಿದ್ದ ಪಕ್ಷದಲ್ಲಿ ಕನ್ನಮಯ್ಯನು ಅದರ ಕರ್ತೃ ಭವಭೂತಿಗಿಂತ ಅಂದರೆ ಕ್ರಿ.ಶ. ೭೦೦ಕ್ಕಿಂತ ಹಿಂದೆ ಹೋಗಲಾರನೆಂದು ಮಾತ್ರ ಹೇಳಬಹುದು.

---

೨೬೧. ಕ.ಕ.ಚ. ಪು. ೧೫೦
೨೬೨. ಕೆ.ಜೀ.ಕಾ. ಪು. ೮೫-೮೬
೨೬೩. ಛಂ. ಶಾಸನ ೭-೬
೨೬೪. ಪಂಚತಂತ್ರ ೧-೨೨
೨೬೫. ಕನ್ನಡ ನಾಟಕದ ಹಳಮೆ (ಸಾ.ಪ. ೩೧-೨ ಪು. ೬೧)

ಕನ್ನಮಯ್ಯನ ಈ ಕೃತಿಯ ಸ್ವರೂಪದ ಬಗೆಗೆ ವಿದ್ವಾಂಸರಲ್ಲಿ ಏಕಮತವಿಲ್ಲ. ಇದು 'ಮಾಲತೀಮಾಧವ'ದ ಧೋರಣೆಯ ಇಲ್ಲವೆ 'ಮಾಲತೀಮಾಧವ'ದ ಅನುವಾದರೂಪದ ನಾಟಕವಿರಬಹುದೆಂದು ಗೋವಿಂದ ಪೈ,[೨೬೬] ಇದು 'ಮಾಲತೀಮಾಧವ'ದ ಅನುವಾದರೂಪ, ಆದರೆ ನಾಟಕವಲ್ಲ ಕಾವ್ಯವೆಂದು ಡಿ.ಎಲ್.ಎನ್[೨೬೭] ಹೇಳುವರು. ಪಂಪಪೂರ್ವಯುಗದಲ್ಲಿ ನಾಟಕ ಕೃಷಿಯನ್ನು ಊಹಿಸಲು ಧೈರ್ಯಬಾರದ ಕಾರಣ ಡಿ.ಎಲ್.ಎನ್. ಮತ ಹೆಚ್ಚು ಸಾಧುವೆನಿಸುತ್ತಿದ್ದರೂ ಪೈಗಳ ವಾದದಲ್ಲಿ ಹುರುಳಿಲ್ಲದಿಲ್ಲ. ಕಾವ್ಯಾವಲೋಕನದಲ್ಲಿ ಮಾಲತೀಮಾಧವದ ೫ನೆಯ ಅಂಕದ ಪದ್ಯದ[೨೬೮] ಅನುವಾದವೆನಿಸುವ,

ಸಂಸ್ಕಾರಕ್ಕೇಕಸಾರಂ ಬಿದಿಯ ಕುಲಧನಂ ಲೋಕದಾಲೋಕಮಾಧಾ
ರಂ ಸಯ್ಪಿಂಗಕ್ಷಿಗಳ್ಗುತ್ಸವಮೆರ್ದೆಗಮೃತಂ ಕಾಮಸಾಮ್ರಾಜ್ಯಸರ್ವ।
ಸ್ವಂ ಸೌಂದರ್ಯಕ್ಕೆ ಗೇಹಂ ಮಹಿತಳತಿಳಕಂ ಜಾಣಮೆಯ್ ನಾಣಜೀವಂ
ಮಾಂಸಾಶೀ ನಿರ್ನ್ನೆರಿಂತಪ್ಪೆಳೆಯಳನಿಜ಼ಯಲ್ಕೆಂತು ನೀನೆತ್ತಿಕೊಂಡಯ್॥[೨೬೯]

ಎಂಬ ಪದ್ಯವೊಂದಿದೆ. ಈ ಅನಾಮಧೇಯ ಪದ್ಯ ಕನ್ನಮಯ್ಯನದಾಗಿರಲು ಸಾಧ್ಯ. ಜಯಕೀರ್ತಿ ಹೇಳುವಂತೆ ಮಾಳವೀಮಾಧವದಲ್ಲಿ ನಡುವಣಕ್ಕರ ಬಳಕೆಯಾದುದು ಇದರ ದೇಶೀಯತೆಯ ಕುರುಹು. ಈ ಕೃತಿ 'ಪರಮಕವೀಶ್ವರಚೇತೋಹರಂ' ಇದರ ಕರ್ತೃ 'ಕನ್ನಮಯ್ಯಂಬರೆಗಮಾಗಂ ಸುಕವಿ ಬಗೆವೊಡಿನ್ನುಂ ಮುನ್ನುಂ' ಎಂಬ ದುರ್ಗಸಿಂಹನ ಉಕ್ತಿಗಳು ಉತ್ಪ್ರೇಕ್ಷೆಯಾಗಿರದ ಪಕ್ಷದಲ್ಲಿ ಕನ್ನಮಯ್ಯನೊಬ್ಬ ಕನ್ನಡದ ಹಿರಿಯಕವಿ, ಈತನ ಮಾಳವೀಮಾಧವವೊಂದು ಕನ್ನಡದ ಹಿರಿಯಕೃತಿ ಎನ್ನಬೇಕಾಗುತ್ತದೆ.

ಛಂದೋನುಶಾಸನೋಕ್ತ ಕವಿಗಳು ಮತ್ತು ಕೃತಿಗಳು

ಜಯಕೀರ್ತಿ ಸಾರಸ್ವತಲೋಕಕ್ಕೆ ಪ್ರಥಮಬಾರಿ ಪರಿಚಿತನಾದುದು ಡಾ. ಎಚ್.ಡಿ. ವೇಲಂಕರ್ ಅವರ 'Chandonusasana of Jayakirti and ancient Kannada metres' ಎಂಬ ಲೇಖನದ ಮೂಲಕ (೧೯೪೫).[೨೭೦] ಈತನ ಛಂದೋನುಶಾಸನದ ವಸ್ತು ಸಂಸ್ಕೃತಛಂದಸ್ಸು; ಅಲ್ಲಿ ಕನ್ನಡ ಛಂದೋವಿವೇಚನೆ ಅಪ್ರಸ್ತುತ. ಹೀಗಿದ್ದರೂ ಕನ್ನಡಛಂದಸ್ಸನ್ನು ಒಂದು ಅಧಿಕಾರದವರೆಗೆ ವಿವರಿಸಿದುದು ಈತನ ಮಾತೃಭಾಷಾ ವ್ಯಾಮೋಹದ ದ್ಯೋತಕ;[೨೭೦ಎ] ಕರ್ಣಾಟಕವಿಷಯ ಜಾತಿಛಂದಸ್ಸನ್ನು ನಾಗವರ್ಮನಿಗಿಂತ ಖಚಿತವಾಗಿ ವ್ಯಾಪಕವಾಗಿ ಹೇಳಿದುದು ಕನ್ನಡಛಂದಸ್ಸಿನ ಸೂಕ್ಷ್ಮಜ್ಞಾನಕ್ಕೆ ಸಾಕ್ಷಿ; ಮಧ್ಯಮಧ್ಯ ಬರುವ ಅಸಗನ ಕರ್ನಾಟ ಕುಮಾರಸಂಭವ, ಕರ್ಣಾಟ ಮಾಲತೀಮಾಧವ, ಕರ್ಣಾಟೇಶ್ವರ ಕಥಾ, ಕರ್ಣಾಟಛಂದಸ್ಸು,

---

೨೬೬. ಕನ್ನಡ ನಾಟಕದ ಹಳಮೆ (ಸಾ.ಪ. ೩೧-೨. ಪು. ೬೨)

೨೬೭. ಕನ್ನಡ ನಾಟಕದ ಹಳಮೆ (ಸಾ.ಪ. ೩೧-೨. ಪು. ೬೨-೬೩)

೨೬೮. ಅಸಾರಂ ಸಂಸಾರಂ ಪರಿಮುಷಿತ ರತ್ನಂ ತ್ರಿಭುವನಂ
ನಿರಾಲೋಕಂ ಲೋಕಂ ಮರಣ ಶರಣಂ ಬಾಂಧವ ಜನಂ।
ಅದರ್ಪಂ ಕಂದರ್ಪಂ ಜನನಯನ ನಿರ್ಮಾಣಮಫಲಂ
ಜಗಜ್ಜೀರ್ಣಾರಣ್ಯಂ ಕಥಮಸಿ ವಿಧಾತುಂ ವ್ಯವಸ್ಥಿತಃ॥

೨೬೯. ಕಾ. ಲೋ. ೬೯೫

೨೭೦. JBBRAS (New) xxi.

೨೭೦ಎ. ನಾಗವರ್ಮನ ಛಂದೋಂಬುಧಿಯ ಶಿಲ್ಪದ ಹಿನ್ನೆಲೆಯಲ್ಲಿ ನೋಡಿದಾಗ, ಜಯಕೀರ್ತಿಯ ಉದ್ದೇಶ ಕನ್ನಡಕ್ಕೆ ಬೇಕಾದ ಛಂದಸ್ಸಿನ ವಿವರಣೆ, ಭಾಷೆ ಮಾತ್ರ ಸಂಸ್ಕೃತವೆಂದು ಹೇಳಬೇಕಾಗುತ್ತದೆ-ಕರ್ಣಾಟಕ ಭಾಷಾಭೂಷಣದಂತೆ.

ಶೃಂಗಾರಪಿಂಡಕಾವ್ಯ, ಚೂಡಾಮಣಿ, ಪ್ರಭುಸೇನೀಯ ಎಂಬ ಕನ್ನಡಕೃತಿಗಳ ಉಲ್ಲೇಖ ಕನ್ನಡಸಾಹಿತ್ಯದ ನೇರ ಅಭ್ಯಾಸಕ್ಕೆ ಸೂಚನೆ; ಕೆಲವು ಸಂಸ್ಕೃತ ಲಕ್ಷಣಪದ್ಯಗಳಲ್ಲಿ ಆದಿಪ್ರಾಸ ನುಗ್ಗಿ ಬಂದುದು ಈತನು ಕನ್ನಡ ಪದ್ಯರಚನೆಯಲ್ಲಿ ಪಳಗಿದುದರ ಫಲ. ಹೀಗಾಗಿ ಡಾ. ವೇಲಂಕರ್ ಮೊದಲಾದ ವಿದ್ವಾಂಸರು ಜಯಕೀರ್ತಿಯು ಕನ್ನಡಿಗನೆಂದು ಹೇಳುವುದು ನ್ಯಾಯಸಮ್ಮತವಾಗಿದೆ.

ಜಯಕೀರ್ತಿಯ ಕಾಲ ಇನ್ನೂ ಅನಿಶ್ಚಿತದಲ್ಲಿ ತೂಗುತ್ತಿದೆ. ಛಂದೋನುಶಾಸನದ ಜಸ್ಮಲೀರ್ ಹಸ್ತಪ್ರತಿಯ ಲಿಪಿಗೈದ ಕಾಲ ಸಂವತ್ ೧೧೯೨, ಅಂದರೆ ಕ್ರಿ.ಶ. ೧೧೩೫ನ್ನು ಕೊನೆಯ ಗಡುವನ್ನಾಗಿಟ್ಟುಕೊಂಡು "Jayakirti lived about 1000 A.D. as is clear from his reference to Asaga who lived in the last half of the 10th century A.D." ಎಂದು ವೇಲಂಕರ್ ಹೇಳುತ್ತಾರೆ.[೨೭೧] ಡಿ.ಎಲ್.ಎನ್. ಅವರು 'ಜಯಕೀರ್ತಿ ಕ್ರಿ.ಶ. ೯೯೦ರಲ್ಲಿದ್ದ ನಾಗವರ್ಮನ ಛಂದೋಂಬುಧಿಯನ್ನು ನೋಡಿದ್ದನೆಂದೂ ಸಪ್ತಮಾಧಿಕಾರದ ಒಂಬತ್ತನೆಯ ಪದ್ಯದಲ್ಲಿರುವ 'ಕರ್ಣಾಟಛಂದೋಮತೇ' ಎಂಬ ಮಾತುಗಳು 'ಛಂದೋಂಬುಧಿಯನ್ನೇ ಕುರಿತು ಹೇಳಿದುವೆಂದೂ ಭಾವಿಸುತ್ತ,[೨೭೨] ಸರಿಸುಮಾರು ವೇಲಂಕರ್ ಹೇಳಿದ ಮಿತಿಯನ್ನೇ ಒಪ್ಪಿದ್ದಾರೆ.

ಈ ವಿಷಯವಾಗಿ ಬೇರೊಂದು ಅಭಿಪ್ರಾಯವನ್ನು ವ್ಯಕ್ತಪಡಿಸಿದವರು ಗೋವಿಂದ ಪೈ. ಕನ್ನಡ ವೃತ್ತಗಳಿಗೆ ಆಕರ ಸೂಚಿಸುವ ಈತನು ಪಿರಿಯಕ್ಕರಕ್ಕೆ ಆಕರ ಹೇಳಿಲ್ಲ. ಕೊನೆಯ ಪಕ್ಷ ಪಿರಿಯಕ್ಕರಗಳನ್ನೊಳಗೊಂಡ ಪಂಪಾದಿಗಳ ಕೃತಿಯನ್ನು ಸೂಚಿಸಿಲ್ಲವಾದುದರಿಂದ ಈತನು ಪಂಪನಿಗೆ (೯೪೧) ಮೊದಲು, ಅಸಗನಿಗೆ (೮೫೪) ತರುವಾಯ ಅಂದರೆ ಕ್ರಿ.ಶ. ೯೦೦ರಲ್ಲಿ ಬಾಳಿರಬಹುದೆಂದು ಅವರ ಅಭಿಮತ.[೨೭೩]

ಈ ದಿಸೆಯಲ್ಲಿ ಇನ್ನೊಂದು ಪ್ರಯತ್ನ ಮಾಡಿದವರು ಪಂ. ಜುಗಲ್‌ಕಿಶೋರ ಮುಕ್ತಾರ್ ಮತ್ತು ಶ್ರೀನಾಥೂರಾಮ ಪ್ರೇಮಿ. ಸಂವತ್ ೧೨೦೭, ಅಂದರೆ ಕ್ರಿ.ಶ. ೧೧೫೦ರ ಚಿತೋಡಗಡ ಶಾಸನದ,

> ಶ್ರೀಜಯಕೀರ್ತಿ ಶಿಷ್ಯೇಣ ದಿಗಂಬರ ಗಣೇಶಿನಾ।
> ಪ್ರಶಸ್ತಿರೀದೃಶೀ ಚಕ್ರೇ (ವಿದಾ?) ಶ್ರೀರಾಮಕೀರ್ತಿನಾ॥

ಎಂಬ ಶ್ಲೋಕದಲ್ಲಿಯ ಶ್ರೀರಾಮಕೀರ್ತಿಯ ಗುರು ಜಯಕೀರ್ತಿಯು ಛಂದೋನುಶಾಸನದ ಕರ್ತೃವೆಂದು ಊಹಿಸುತ್ತಾರೆ, ಜುಗಲ್‌ಕಿಶೋರ ಮುಕ್ತಾರ್.[೨೭೪]

ಸಂವತ್ ೧೧೯೨ ಅಂದರೆ ಕ್ರಿ.ಶ. ೧೧೩೪ರಲ್ಲಿ ಲಿಪಿಸಲ್ಪಟ್ಟ ರಾಮಕೀರ್ತಿಯ 'ಯೋಗಸಾರ'ದ ಕೊನೆಯ,

> ಜಯಕೀರ್ತಿಸೂರಿಣಾ(ಣಃ) ಶಿಷ್ಯೇನಾಮಲಕೀರ್ತಿನಾ।
> ಲೇಖಿತಂ ಯೋಗಸಾರಾಖ್ಯಂ ವಿದಾ ಶ್ರೀರಾಮಕೀರ್ತಿನಾ॥

---

೨೭೧. ಜಯದಾಮನ್. ಮುನ್ನುಡಿ, ಪು. ೩೭-೩೮.
೨೭೨. ಜಯಕೀರ್ತಿಯ ಛಂದೋನುಶಾಸನ (ಸಾ.ಪ. ೪೦-೧+೨ ಪು. ೧೩. ಅ.ಟಿ.)
೨೭೩. "   "ಶಾಸನದ ಕಾಲ (ಪ್ರ.ಕ. ೨೮-೩)
೨೭೪. ಜೈನಸಾಹಿತ್ಯ ಔರ ಇತಿಹಾಸ (ಪು. ೪೦೫, ಅ.ಟಿ.)

ಎಂಬ ಶ್ಲೋಕದಲ್ಲಿ ಹೇಳಲಾದ ಶ್ರೀರಾಮಕೀರ್ತಿಯ ಗುರು ಜಯಕೀರ್ತಿಯು ಛಂದೋನುಶಾಸನದ ಕರ್ತೃವೆಂದು ಹೇಳುತ್ತಾರೆ, ನಾಥೂರಾಮ ಪ್ರೇಮಿ.[೨೭೫] ಈ ಉಭಯ ಹೇಳಿಕೆಗಳಿಂದ ರಾಮಕೀರ್ತಿಯ ಕಾಲ ೧೧೫೦ ಇಲ್ಲವೆ ೧೧೩೩ಎಂದು ವ್ಯಕ್ತವಾಗುವುದರಿಂದ, ಗುರು ಜಯಕೀರ್ತಿಯ ಕಾಲ ೧೨ನೆಯ ಶತಮಾನದ ಮೊದಲಪಾದವೆಂದು ಈ ಉಭಯ ವಿದ್ವಾಂಸರ ಅಭಿಪ್ರಾಯ.

ಒಟ್ಟಿನಲ್ಲಿ ಜಯಕೀರ್ತಿಯ ಕಾಲ ಕ್ರಿ.ಶ. ೯೦೦ ಎಂದು ಪೈ, ಕ್ರಿ.ಶ. ೧೦೦೦ ಎಂದು ವೇಲಂಕರ್ ಮತ್ತು ಡಿ.ಎಲ್.ಎನ್. ೧೨ನೆಯ ಶತಮಾನದ ಮೊದಲ ಪಾದವೆಂದು ಜುಗಲ್‌ಕಿಶೋರ್ ಮುಕ್ತಾರ್ ಮತ್ತು ನಾಥೂರಾಮ ಪ್ರೇಮಿ ಇವರ ಅಭಿಮತ.

ಜೈನಮುನಿಗಳ ಪರ್ಯಟನ ಪ್ರವೃತ್ತಿಯು ೧೨ನೆಯ ಶತಮಾನದ ಹೊತ್ತಿಗೆ ಶಿಥಿಲಗೊಂಡು, ಅವರು ಒಂದೆಡೆ ನಿಲ್ಲಲು ಪ್ರಾರಂಭಿಸಿದ ಕಾರಣ ದೂರದ ಚಿತೋಡಗಡ ಶಾಸನೋಕ್ತ ರಾಮಕೀರ್ತಿಯ ಗುರು ಜಯಕೀರ್ತಿಗೂ ಕರ್ನಾಟಕದ ಜಯಕೀರ್ತಿಗೂ ಸಂಬಂಧ ಕಲ್ಪಿಸುವುದೆಂದರೆ ಕೇವಲ ನಾಮಸಾಮ್ಯದ ತಳುಕು. ಅದಕ್ಕಾಗಿ ಜುಗಲ್‌ಕಿಶೋರ ಮುಕ್ತಾರ್ ಮತ್ತು ನಾಥೂರಾಮ ಪ್ರೇಮಿಯವರ ಅಭಿಪ್ರಾಯ ಊಹೆಯೇ ಸರಿ.

ವೇಲಂಕರರು ಛಂದೋನುಶಾಸನದ ಜಸ್ಮಲೀರ ಹಸ್ತಪ್ರತಿಯ ಲೇಖನ ಮಿತಿಯಾದ ಕ್ರಿ.ಶ. ೧೧೩೩ರಿಂದ ಹಿಂದೆ ಹೊರಟು ಜಯಕೀರ್ತಿಯ ಕಾಲವನ್ನು ಕ್ರಿ.ಶ. ೧೦೦೦ಕ್ಕೆ ನಿಲ್ಲಿಸಿರುವರು. ಇದಕ್ಕೆ ಕಾರಣ, ಛಂದೋನುಶಾಸನದಲ್ಲಿ ಉಕ್ತನಾದ ಅಸಗನು ೧೦ನೆಯ ಶತಮಾನದ ಆದಿಭಾಗದವನೆಂಬ ಗ್ರಹಿಕೆ. ಆದರೆ ಅಸಗನ ಕಾಲ ಕ್ರಿ.ಶ. ೮೫೩ರಷ್ಟು ಹಿಂದೆ ಹೋಗುವ ಸಂಭವವಿರುವುದರಿಂದ ಈ ಹೇಳಿಕೆಯ ಬಗೆಗೂ ಅನುಮಾನ ಹುಟ್ಟುತ್ತದೆ.

ಛಂದೋಂಬುಧಿ ಮತ್ತು ಛಂದೋನುಶಾಸನಗಳಲ್ಲಿಯ ಕೆಲವು ಸಾಮ್ಯಗಳನ್ನು ಲಕ್ಷಿಸಿ ಡಿ.ಎಲ್. ಎನ್ ಅವರು ನಾಗವರ್ಮನಿಂದ ಜಯಕೀರ್ತಿಯು ಪ್ರಭಾವಿತನಾಗಿರಬಹುದೆನ್ನುವರು. ಆದರೆ ಕೆಲವು ವೃತ್ತಗಳಿಗೆ ಇಟ್ಟ ಹೆಸರು, ಹೇಳಿದ ಲಕ್ಷಣ ಮತ್ತು ಮಾಡಿಕೊಂಡ ಪ್ರಕರಣ ವಿಭಜನೆಗಳು ಇಬ್ಬರಲ್ಲಿಯೂ ವ್ಯತ್ಯಾಸವಾಗಿವೆ. ನಿತ್ಯಸತ್ಯವಾದ ಲಕ್ಷಣನಿರೂಪಣೆಯ ಪ್ರಸಂಗದಲ್ಲಿ ಕೆಲವು ಸಾಮ್ಯ ಕಂಡುಬಂದರೂ ಅವನ್ನು ಪ್ರಭಾವವೆಂದು ಪರಿಗಣಿಸಲಿಕ್ಕಾಗದು. ನಾಗವರ್ಮನ ಚಿತ್ರಲತೆಗೆ ಜಯಕೀರ್ತಿಯಲ್ಲಿ ವಿಚಿತ್ರಾ ಎಂಬ ಬೇರೊಂದು ಹೆಸರಿದೆ. ಮೇಲಾಗಿ ಇಬ್ಬರ ಲಕ್ಷಣಗಳೂ ಕೆಲಮಟ್ಟಿಗೆ ಭಿನ್ನವಾಗಿವೆ. ಅದಕ್ಕಾಗಿ ವಿಚಿತ್ರಾ ತ್ರಿಪದಿಯನ್ನು ವಿವರಿಸುತ್ತ "ಪೂರ್ವಂ ಕರ್ನಾಟಛಂದೋಮತೇ" ಎಂಬಲ್ಲಿ ಸೂಚಿತವಾದ ಗ್ರಂಥ ಡಿ.ಎಲ್. ಎನ್. ಹೇಳುವಂತೆ ಛಂದೋಂಬುಧಿಯಾಗಿರದೆ ಬೇರೊಂದು ಗ್ರಂಥವಾಗಿರಬೇಕು. ತನಗೆ ಪ್ರಾಚೀನರಾದ ಸುಮಾರು ೨೦ ಜನ ಛಾಂದಸಿಗರನ್ನು ಉಲ್ಲೇಖಿಸುವ ಜಯಕೀರ್ತಿ, ತನ್ನ ನಾಡಿನ ತನ್ನ ಧರ್ಮದ ನಾಗವರ್ಮನನ್ನು ಹೆಸರಿಸದಿರುವುದು ಅಸಂಭವ. ಹೀಗಾಗಿ ಈತನು ಛಂದೋಂಬುಧಿಯನ್ನು ಕಂಡಿರುವನೆಂಬುದು ಕೇವಲ ಊಹೆ ಎನಿಸುತ್ತದೆ.

ಛಂದೋನುಶಾಸನೋಕ್ತ ಕವಿಗಳಲ್ಲಿ ಜಯಕೀರ್ತಿಗೆ ಹಿಂದಣ ಗಡುವಾಗಿ ನಿಲ್ಲುವ ಸ್ವಯಂಭುವಿನ ಕಾಲ ಕ್ರಿ.ಶ. ೭೩೪-೮೪೦ರ ಮಧ್ಯ[೨೭೬]; ಅಸಗನ ಕಾಲ ಕ್ರಿ.ಶ. ೮೫೩ ಇರಬಹುದು. ಅದಕ್ಕಾಗಿ ಜಯಕೀರ್ತಿ ಈ ಮಿತಿಗೆ ತರುವಾಯದವನೆಂಬುದು ಸುನಿಶ್ಚಯ. ಶೃಂಗಾರ ಪಿಂಡ, ಕರ್ಣಾಟೇಶ್ವರ ಕಥಾ, ಪ್ರಭುಸೇನೀಯ,

---

೨೭೫. ಜೈನಸಾಹಿತ್ಯ ಔರ ಇತಿಹಾಸ (ಪು. ೪೦೫)

೨೭೬. ಜೈನಸಾಹಿತ್ಯ ಔರ ಇತಿಹಾಸ (ಪು. ೨೧೧)

ಕರ್ಣಾಟ ಛಂದಸ್ ಎಂಬ ಗ್ರಂಥಗಳ ಉಲ್ಲೇಖ ಪಂಪೋತ್ತರ ಕಾಲದ ಯಾವ ಕೃತಿಗಳಲ್ಲಿಯೂ ಕಂಡುಬರುವುದಿಲ್ಲ. ಬಹುಶಃ ಪ್ರಾಚೀನತೆ ಕಾರಣದಿಂದಾಗಿ ಜನತೆಯ ಸ್ಮೃತಿಯಿಂದ ಜಾರಿದ ಈ ಕೃತಿಗಳು ಛಂದೋನುಶಾಸನದಲ್ಲಿ ಉಕ್ತಗೊಂಡುದು ಜಯಕೀರ್ತಿಯ ಪ್ರಾಚೀನತೆಯ ಕುರುಹು. ಒಂದುವೇಳೆ ಈತನು ೧೦-೧೨ನೆಯ ಶತಮಾನದವನಾಗಿದ್ದರೆ ಮೇಲಣ ಕೃತಿಗಳನ್ನು ಹೆಸರಿಸದೆ ಅಥವಾ ಹೆಸರಿಸುವುದರೊಂದಿಗೆ ಪಿರಿಯಕ್ಕರ, ಗೀತಿಕೆ, ತ್ರಿಪದಿ, ಅಕ್ಕರ, ರಘಟಾಗಳಿಗಾದರೂ ತನ್ನ ಕಾಲದ ಕೃತಿಗಳನ್ನು ಹೆಸರಿಸುವ ಸುಲಭ ದಾರಿ ಹಿಡಿಯುತ್ತಿದ್ದನು.

ಕಿರಿಯಕ್ಕರ, ಎಡೆಯಕ್ಕರ, ನಡುವಣಕ್ಕರ, ದೊರೆಯಕ್ಕರಗಳ ಬಳಕೆ ಪಂಪನಿಂದೀಚೆಗೆ ಇಲ್ಲವೆನ್ನುವಷ್ಟು ಕಡಿಮೆ. ೫ನೆಯದಾದ ಪಿರಿಯಕ್ಕರವಾದರೋ ಪಂಪಾದಿಗಳಲ್ಲಿ ಆಗಾಗ ಗರಿ ಬಿಚ್ಚಿನಿಂತಿದೆ. ಜಯಕೀರ್ತಿ ಮಾತ್ರ ಮೊದಲ ನಾಲ್ಕು ಬಂಧಗಳಿಗೆ ಆಕರ ಹೇಳಿ ೫ನೆಯದಾದ ಪಿರಿಯಕ್ಕರಕ್ಕೆ ಮೌನ ತಳೆದಿರುವನು. ಪಂಪ ಪೊನ್ನ ರನ್ನರ ಕೃತಿಗಳಲ್ಲಿ ರಗಳೆ ಬಳಕೆಯಾಗಿದ್ದರೂ ಜಯಕೀರ್ತಿ ರಗಳೆಗೆ ಆಕರ ಸೂಚಿಸಿಲ್ಲ, 'ಶೃಂಗಾರಪಿಂಡಾದಿ ಕಾವ್ಯೇಷು', 'ವಿದಿತಮಾರ್ಹತೇ ಕರ್ಣಾಟೇಶ್ವರಕಥಾದೌ', 'ಪ್ರಥಿತಂ ಕರ್ಣಾಟ ಮಾಲತೀಮಾಧವ ಪ್ರಭೃತಿಕಾವ್ಯೇ'ಎಂಬಲ್ಲಿ ಇತ್ಯಾದಿ ಎಂಬ ಪದವನ್ನು ಬಳಸಿರುವುದರಿಂದ ಅಲ್ಪಾಕ್ಷರ, ಅಂತರಾಕ್ಷರ, ಮಧ್ಯಮಾಕ್ಷರಗಳನ್ನೊಳಗೊಂಡ ಕೃತಿಗಳು ರಚನೆಗೊಳ್ಳುತ್ತಿದ್ದ ಕಾಲದಲ್ಲಿ ಈತನು ಬದುಕಿರಬೇಕು. ಛಂದೋನುಶಾಸನ ಹೆಸರಿಸುವ ಬಂಧಗಳಲ್ಲಿ ಕೆಲವು ಪಂಪೋತ್ತರಯುಗದಲ್ಲಿ ಲಭಿಸುತ್ತಿದ್ದರೂ ಆಕರವಾಗಿ ಹೇಳಿದ ಕಾವ್ಯಗಳೆಲ್ಲ ಪಂಪಪೂರ್ವಯುಗಕ್ಕೆ ಸಂಬಂಧಿಸಿವೆ. ಈ ಎಲ್ಲ ಕಾರಣಗಳಿಂದಾಗಿ ಜಯಕೀರ್ತಿಯ ಕಾಲ ಪಂಪನಿಗೆ (ಕ್ರಿ.ಶ. ೯೪೧) ಮೊದಲು, ಅಂದರೆ ಪೈಗಳು ಹೇಳುವಂತೆ ಕನಿಷ್ಠಪಕ್ಷ ಕ್ರಿ.ಶ. ೯೦೦ ಆಗಿರಬಹುದು.[೨೭೬ಎ]

ಕನ್ನಡಛಂದಸ್ಸಿನ ಸೂಕ್ಷ್ಮ ಪರಿಶೀಲನೆ, ಪ್ರಾಚೀನ ಕನ್ನಡಕವಿ-ಕಾವ್ಯಗಳ ಉಲ್ಲೇಖಗಳನ್ನೊಳಗೊಂಡ ಛಂದೋನುಶಾಸನ ಒಂದು ವಿಶಿಷ್ಟ ಛಂದೋಗ್ರಂಥ. ಪ್ರಸ್ತಾರ, ಯತಿ, ವೃತ್ತ, ಜಾತಿ, ರಘಟಾ (ಅಧಿಕಾರ-೧); ಸಮವೃತ್ತಗಳು (ಅಧಿಕಾರ-೨); ಅರ್ಧಸಮವೃತ್ತಗಳು (ಅಧಿಕಾರ-೩); ಅನುಷ್ಟುಬ್ ಛಂದಸ್ಸಿನ ೧೫ ಪ್ರಭೇದ, (ಅಧಿಕಾರ-೪); ಗಾಥಾ ಮತ್ತು ಗಾಥಾಪ್ರಭೇದಗಳು (ಅಧಿಕಾರ-೫); ವೈತಾಲೀಯ ಮಿಶ್ರಮಾತ್ರಾವರ್ಣವೃತ್ತಗಳು (ಅಧಿಕಾರ-೬); ಕರ್ಣಾಟವಿಷಯ ಭಾಷಾಜಾತಿ (ಅಧಿಕಾರ-೭); ಪ್ರಸ್ತಾರಾದಿ ಪ್ರತ್ಯಯಾಧಿಕಾರ (ಅಧಿಕಾರ-೮) ಹೀಗೆ ಎಂಟು ಅಧಿಕಾರಗಳಲ್ಲಿ ವ್ಯಾಪಿಸಿ ನಿಂತಿದೆ, ಈ ಕೃತಿ. ಇವುಗಳಲ್ಲಿ ಕನ್ನಡದ ಮಟ್ಟಿಗೆ ತುಂಬ ಬೆಲೆಯುಳ್ಳುದು ೨೨ ಪದ್ಯಗಳ ೭ನೆಯ ಅಧಿಕಾರ. ಈ ಅಧಿಕಾರದಲ್ಲಿ ನೆಲೆನಿಂತ ವಿಷಯ ಹೀಗಿದೆ:

ಅಕ್ಷರ, ತ್ರಿಪದಿ, ಏಲಾ, ಅಕ್ಷರಿಕಾ, ಷಟ್ಪದಿ, ಚತುಷ್ಪದಿಕಾ, ಛಂದೋವತಂಸ, ಮದನವತಿ, ಗೀತಿಕಾ- ಇವು ಕರ್ಣಾಟವಿಷಯ ಭಾಷಾಜಾತಿಗಳು.[೨೭೭]

ಅಲ್ಪಾಕ್ಷರ: ಪ್ರತಿಪಾದದಲ್ಲಿ 'ವಿ.ವಿ.ರು.' ಒಟ್ಟು ನಾಲ್ಕು ಪಾದಗಳು. ಶೃಂಗಾರಪಿಂಡ ಮೊದಲಾದ ಕಾವ್ಯಗಳಲ್ಲಿ ಇದರ ಸಂಗೀತ ಸುಪ್ರಸಿದ್ಧ.[೨೭೮]

೨೭೬ಎ. ಪ್ರ. ಕ. ೨೮-೩

೨೭೭. ಛಂ. ಶಾ. ೭-೧(ನಾಗವರ್ಮನು ಹೇಳುವ ಉತ್ಸಾಹವನ್ನು ಇಲ್ಲಿ ಬಿಟ್ಟು ಮಿಶ್ರಾಧಿಕಾರದಲ್ಲಿ ಹೇಳಿರುವನು.)

೨೭೮. ಛಂ. ಶಾ. ೭-೪

ಅಂತರಾಕ್ಷರ: ಪ್ರತಿಯೊಂದು ಪಾದದಲ್ಲಿ 'ಬ್ರ.ವಿ.ವಿ.ರು.' ಹೀಗೆ ನಾಲ್ಕು ಪಾದಗಳು. ಕರ್ಣಾಟೇಶ್ವರ ಕಥಾ ಇತರ ಜೈನಕೃತಿ ಮೊದಲಾದವುಗಳಲ್ಲಿ ಕಂಡುಬರುತ್ತದೆ.[೨೭೯]

ಮಧ್ಯಮಾಕ್ಷರ: 'ಬ್ರ.ವಿ.ವಿ.ವಿ.ರು.' ಗುಣಗಳನ್ನೊಳಗೊಂಡ ನಾಲ್ಕು ಪಾದಗಳು. ಕರ್ಣಾಟ ಮಾಲತೀಮಾಧವ ಮೊದಲಾದ ಕಾವ್ಯಗಳಲ್ಲಿ ಗೋಚರಿಸುತ್ತದೆ.[೨೮೦]

ಸಮಾನಾಕ್ಷರ: 'ವಿ.ವಿ.ಬ್ರ.ವಿ.ವಿ.ಬ್ರ' ಹೀಗೆ ನಾಲ್ಕು ಚರಣಗಳು. ಅಸಗಕೃತ ಕರ್ಣಾಟ ಕುಮಾರಸಂಭವದಲ್ಲಿ ಬಳಕೆಯಾಗಿದೆ.[೨೮೧]

ಮಹಾಕ್ಷರ: 'ಬ್ರ.ವಿ.ವಿ.ವಿ.ವಿ.ವಿ.ರು.' ಅಥವಾ 'ಬ್ರ.ಬ್ರ.ವಿ.ಬ್ರ. ವಿ.ವಿ. ರು.' ಅಥವಾ 'ವಿ.ವಿ.ವಿ.ವಿ.ವಿ.ವಿ.ರು.' ಪ್ರತಿಯೊಂದು ಗಣದ ಅಂತ್ಯದಲ್ಲಿ ಯತಿಬೇಕು.[೨೮೨]

ಚಿತ್ರಾತ್ರಿಪದಿ	:	ವಿ.ವಿ. ವಿ.ವಿ. ವಿ.ಬ್ರ.ವಿ.ವಿ. ವಿ.ಬ್ರ.ವಿ.	೭ ಮತ್ತು ೧೦ನೆಯ ಗಣದ ಆದಿಯಲ್ಲಿ ಲಘುಬೇಕು. ಅತಿ ಹೆಚ್ಚು ೬೨ ಮಾತ್ರೆಗಳು[೨೮೩]
ವಿಚಿತ್ರಾತ್ರಿಪದಿ	:	ವಿ.ವಿ. ವಿ.ವಿ. ವಿ.ಬ್ರ.ವಿ.ವಿ. ವಿ.ಬ್ರ.ವಿ.	೧೧ನೆಯ ಗಣ ಆದಿಗುರುವುಳ್ಳ ರುದ್ರವಾಗಿರಬೇಕು.[೨೮೪]

ಏಲಾ: ತ್ರಿಪದಿಯ ಮೂರನೆಯ ಪಾದವನ್ನು ಬಿಟ್ಟರೆ ಏಲಾ ರೂಪಗೊಳ್ಳುತ್ತದೆ. 'ಸುಪರಿತಾ ಗೇಯವಿದಜನ್ಯೈಃ' ಎಂದು ಹೇಳಲಾಗಿದೆ.[೨೮೫]

ಚತುಷ್ಪದಿಕಾ: 'ವಿ.ರು.' ಹೀಗೆ ನಾಲ್ಕು ಪಾದಗಳು. ಚೂಡಾಮಣಿಗ್ರಂಥದಲ್ಲಿ ಗೋಚರಿಸುತ್ತದೆ.[೨೮೬]

ಛಂದೋವತಂಸ: 'ವಿ.ಬ್ರ.ಬ್ರ.ಬ್ರ.ಬ್ರ.'ಹೀಗೆ ನಾಲ್ಕು ಪಾದಗಳು. ಇದರ ಇನ್ನೊಂದು ಹೆಸರು ಆದಿವರಾಹ. ಕನ್ನಡ ಕುಮಾರಸಂಭವದಲ್ಲಿ ಬಳಕೆಯಾಗಿದೆ.[೨೮೭]

ಮದನವತಿ: ಪ್ರತಿಪಾದದ ಅಕ್ಷರ ಎಷ್ಟಾದರೂ ಇರಲಿ. ಒಟ್ಟು ಮಾತ್ರೆ ೨೨. ಮೊದಲ ಪಾದ: ೨೦ ಲಘು+೧ ಗುರು; ಉಳಿದ ಪಾದಗಳು: 'ವಿ.ವಿ. ವಿ.ವಿ. ಬ್ರ. '[೨೮೮]

---

೨೭೯. ಛಂ. ಶಾ. ೭-೫

೨೮೦. ಛಂ. ಶಾ. ೭-೬

೨೮೧. ಛಂ. ಶಾ. ೭-೭

೨೮೨. ಛಂ.ಶಾ. ೭-೮

೨೮೩. ಛಂ.ಶಾ.೭-೯

೨೮೪. ಛಂ.ಶಾ.೭-೧೦

೨೮೫. ಛಂ.ಶಾ.೭-೧೪

೨೮೬. ಛಂ.ಶಾ.೭-೧೫

೨೮೭. ಛಂ.ಶಾ.೭-೧೬

೨೮೮. ಛಂ.ಶಾ.೭-೧೯

ಅಕ್ಷರಿಕಾ: 'ವಿ.ಬ್ರ.ವಿ.ಬ್ರ.ವಿ.ವಿ. +ಗು' ಪ್ರತಿಪಾದದಲ್ಲಿ ೨೬ ಮಾತ್ರೆ, ನಾಲ್ಕೂಪಾದ ಸೇರಿ ೧೦೪ ಮಾತ್ರೆ; ಎಂಟು ಮಾತ್ರೆಗಳಿಗೊಮ್ಮೆ ಯತಿ. ಒಟ್ಟು ಎರಡು ಸಲ 'ಜ'ಗಣವಲ್ಲದ ೬ ಚತುರ್ಮಾತ್ರಾಗಣ +ಗುರು ಇರಬಹುದು.[೨೮೯]

ಗೀತಿಕಾ: ೩ ಗಣ
೪ ಗಣ
೩ ಗಣ
೪ ಗಣ
} ಪೂರ್ವಾರ್ಧ ಮತ್ತು ಉತ್ತರಾರ್ಧಗಳ ೨ ಮತ್ತು ೬ನೆಯ ಗಣ ಬ್ರಹ್ಮ: ಉಳಿದುವು ವಿಷ್ಣು ಇಲ್ಲವೆ ರುದ್ರ.[೨೯೦]

ಷಟ್ಪದಿ: ವಿ.ವಿ.
ವಿ.ವಿ.
ವಿ.ವಿ.ರು.
} ಇದು ಷಟ್ಪದಿಯ ಅರ್ಧ; ಹೀಗೆಯೇ ಇನ್ನೊಂದರ್ಧ.[೨೯೧]

ಜಾತಿವೃತ್ತಗಳ ಗಣಯೋಜನೆ, ಗಣವ್ಯತ್ಯಾಸ, ಯತಿ, ಮಾತ್ರಾಸಂಖ್ಯೆ, ಗೇಯಗುಣ ಮತ್ತು ವೈಶಿಷ್ಟ್ಯಗಳನ್ನು ಛಂದೋಂಬುಧಿಗಿಂತ ಹೆಚ್ಚು ವಿವರವಾಗಿ ಹೇಳುವ ಈ ಕೃತಿಗೆ ಕರ್ನಾಟಕ ಛಂದೋಗ್ರಂಥಗಳಲ್ಲಿ ಒಂದು ಉನ್ನತಸ್ಥಾನವಿದೆ. ಇದರ ಇನ್ನೊಂದು ವೈಶಿಷ್ಟ್ಯ ಪ್ರಾಚೀನಕವಿ, ಕೃತಿಗಳ ಉಲ್ಲೇಖ. ಅಶ್ವತರ, ಕಪಿಲ, ಕಂಬಲ, ಕೋಹಿಲ, ಕೌಂಡಿಣ್ಯ, ಮಾಂಡವ್ಯ, ವಶಿಷ್ಠ, ಸೈತವರೊಂದಿಗೆ ಪಿಂಗಳ, ಭರತ, ಜನಾಶ್ರಯ, ಜಯದೇವ, ಸ್ವಯಂಭೂ, ಚಾರುಕೀರ್ತಿ, ಮುನಿ ದಮಸಾಗರ, ಪಾಲ್ಯಕೀರ್ತಿ, ಪ್ರಜ್ಞಾಮಹೋದಯರು ಇಲ್ಲಿ ಹೇಳಲಾದ ಪ್ರಾಚೀನ ಛಾಂದಸಿಗರು. ಇವುಗಳಿಗೆ ಕಳಸವಿಟ್ಟಂತೆ ಆಗಾಗ ಸೂಚಿಸಲಾದ ಕನ್ನಡ ಕವಿ-ಕೃತಿಗಳ ಸಂಗತಿ ಕವಿರಾಜಮಾರ್ಗ ಪರಿಸರದ ಕನ್ನಡ ಸಾಹಿತ್ಯದ ಅರಿತಕ್ಕೆ ಅಪರೂಪವಾದ ಅಂಜನಬಿಂದುವಾಗಿ ಪರಿಣಮಿಸಿದೆ. ಆ ಕವಿ-ಕಾವ್ಯಗಳ ವಿಷಯ ಹೀಗಿದೆ:

೧. **ಚೂಡಾಮಣಿ**
೨. **ಕರ್ನಾಟ ಕುಮಾರಸಂಭವ ಕಾವ್ಯಂ**
೩. **ಕರ್ನಾಟ ಮಾಲತಿಮಾಧವಂ**
} ಈ ಕೃತಿಗಳ ವಿವೇಚನೆ ಹಿಂದೆ ಬಂದಿದೆ.[೨೯೨]

೪. **ಕರ್ನಾಟೇಶ್ವರ ಕಥಾ:** ಅಂತರಾಕ್ಷರವೃತ್ತದ ಆಕರವನ್ನು ಕುರಿತು "ವಿದಿತಮಾರ್ಹತೇ ಕರ್ಣಾಟೇಶ್ವರಕಥಾದೌ" ಎಂದು ಹೇಳಿದ ವಾಕ್ಯಕ್ಕೆ 'ಕರ್ಣಾಟೇಶ್ವರಕಥಾ' ಮತ್ತು ಇತರ ಜೈನಕೃತಿಗಳಲ್ಲಿ ಈ ವೃತ್ತ ಪ್ರಯೋಗವಾಗಿದೆ ಎಂದು ವೇಲಂಕರ್ ಅರ್ಥ ಹಚ್ಚುತ್ತಾರೆ.[೨೯೩] ಈ ಕರ್ಣಾಟೇಶ್ವರ ಯಾರು? ಈ ಕೃತಿಯ ಸ್ವರೂಪವೇನು ಎಂಬುದರ ವಿವೇಚನೆಗೆ ಯಾರೂ ಗಮನಹರಿಸಿರುವುದಿಲ್ಲ.

---

೨೮೯. ಛಂ.ಶಾ.೭-೧೮
೨೯೦. ಛಂ.ಶಾ.೭-೨೦ ೨೯೧. ಛಂ. ಶಾ. ೭-೧೭
೨೯೨. ಈ ಮೂರು ಕೃತಿಗಳಿಗೆ ಚೂಡಾಮಣಿತ್ರಯ, ಆಸಗ, ಕನ್ನಮಯ್ಯ ಎಂಬ ಶೀರ್ಷಿಕೆಗಳನ್ನು ನೋಡಬಹುದು.
೨೯೩. ಜಯಕೀರ್ತಿಯ ಛಂದೋನುಶಾಸನ (ಸಾ.ಪ. ೪೦-೧+೨. ಪು. ೯)

> ಯಶಃ ಪುಂಜೋ ಮುಂಜೋ ಗಜಪತಿರವಂತೀ ಕ್ಷಿತಿಪತಿಃ
> ಸರಸ್ವತ್ಯಾವಾಸಃ ಸಮಜನಿ ಪುರಾವಿಷ್ಕೃತ ಗತಿಃ
> ಸ ಕರ್ಣಾಟೇಶೇನ ಸ್ವಸಚಿವ ವಿಬುಧ್ಯೈವ ವಿಧೃತಃ ಕೃತಃ
> ಶೂಲಾ ಪ್ರೋತಸ್ತ್ವಹಹ ವಿಷಮಾಃ ಕರ್ಮ್ಮಗತಯಃ॥[೨೯೪]

'ಮುಂಜರಾಜ ಪ್ರಬಂಧ'ದ ಈ ಪದ್ಯದಲ್ಲಿ ಕಲ್ಯಾಣಿಚಾಲುಕ್ಯ ಒಂದನೆಯ ತೈಲಪನನ್ನು 'ಕರ್ಣಾಟೇಶ' ಎಂದು ಕರೆಯಲಾಗಿದೆ. ಜಯಕೀರ್ತಿಗೆ ಅರ್ವಾಚೀನನಾದ ಈ ತೈಲಪನಿಗೂ ಜಯಕೀರ್ತಿಗೆ ಪ್ರಾಚೀನವಾದ ಕರ್ಣಾಟೇಶ್ವರಕಥೆಗೂ ಯಾವುದೇ ಸಂಬಂಧವಿದ್ದಂತೆ ತೋರುವುದಿಲ್ಲ. ತೈಲಪನ ಹಿಂದಣ ರಾಷ್ಟ್ರಕೂಟರಿಗೆ 'ಕರ್ಣಾಟೇಶ್ವರ' ಎಂಬ ಅಭಿದಾನವಿದ್ದ ಬಗೆಗೆ ಆಧಾರಗಳಿಲ್ಲ. ಚಾಲುಕ್ಯರ ಸೈನ್ಯದ ಹೆಸರು 'ಕರ್ಣ್ಣಾಟಕಂ ಬಲಂ'[೨೯೫] ಎಂದು, ಇಮ್ಮಡಿ ಪುಲಿಕೇಶಿಯ ಸೊಸೆಯಾಗಿರಬಹುದಾದ ವಿಜಯಾಂಬಿಕೆಯ ನಚ್ಚಿನ ಹೆಸರು 'ಕರ್ಣಾಟರಾಜಪ್ರಿಯಾ'[೨೯೬] ಎಂದು ತಿಳಿದುಬರುವುದರಿಂದ ಈ ವಂಶದ ಅರಸುಗಳಿಗೆ 'ಕರ್ಣಾಟೇಶ್ವರ'ವು ಬಿರುದಾಗಿರುವ ಸಾಧ್ಯತೆಯಿದೆ. ಅದಕ್ಕಾಗಿ ಜಯಕೀರ್ತಿ ಹೇಳುವ 'ಕರ್ಣಾಟೇಶ್ವರಕಥೆ' ಚಾಳುಕ್ಯವಂಶದ ಒಬ್ಬ ಅರಸನನ್ನು ಕುರಿತ ಕೃತಿಯಾಗಿರಬಹುದು. ಹೆಚ್ಚಿನ ಆಧಾರಗಳು ಲಭಿಸುವವರೆಗೆ ಇದನ್ನು ಒಂದು ಊಹೆಯೆಂದು ಭಾವಿಸಬೇಕು.

೫. ಅರ್ಹತ್‌ಕಾವ್ಯ:

ಅಂತರಾಕ್ಷರ ವೃತ್ತವು 'ವಿದಿತಮಾರ್ಹತೇ.....' ಎಂದು ಹೇಳುತ್ತಾನೆ, ಜಯಕೀರ್ತಿ. ಇಲ್ಲಿಯ 'ಅರ್ಹತ್' ಎಂಬುದು ಜೈನಕೃತಿ ಸೂಚಿಯೆಂದು ವೇಲಂಕರರ ಅಭಿಪ್ರಾಯ[೨೯೭]. ಅಂತರಾಕ್ಷರವನ್ನೊಳಗೊಂಡ ಈ ಅಜ್ಞಾತಕೃತಿಯ ಬಗೆಗೆ ಬರೆಯುವುದು ಊಹೆಗೂ ನಿಲುಕದ ವಿಷಯ.

೬. ಶೃಂಗಾರಪಿಂಡಕಾವ್ಯ:

ಅಲ್ಪಾಕ್ಷರವು 'ಶೃಂಗಾರಪಿಂಡಾದಿಕಾವ್ಯೇಷು' ಪ್ರಯೋಗವಾಗಿದೆಯೆಂದೂ 'ತತ್ ಸಂಗೀತಂ ಕರ್ಣಾಟಕೇ ಪ್ರಸಿದ್ಧಂ' ಎಂದೂ ಛಂದೋನುಶಾಸನದಲ್ಲಿ ಹೇಳಲಾಗಿದೆ. ಗೇಯಗುಣಯುಕ್ತವಾದ ಈ ವೃತ್ತವನ್ನೊಳಗೊಂಡ 'ಶೃಂಗಾರಪಿಂಡಕಾವ್ಯ' ನಮ್ಮ ಕೈಗೆ ಉಳಿದು ಬರುವುದೊತ್ತಟ್ಟಿಗಿರಲಿ, ಅದರ ಸ್ವರೂಪವೂ ತಿಳಿದುಬಂದಿಲ್ಲ. ಮೇಲಾಗಿ ಈ ಹೆಸರೂ ಕನ್ನಡವನ್ನು ಕೇಳಿದ ಕಿವಿಗೆ ಅಪರಿಚಿತವೆನಿಸುತ್ತದೆ.

೭. ಯತಿಪತಿ: (ಪೂಜ್ಯಪಾದ? ಜಯಕೀರ್ತಿ?)

ಕರ್ಣಾಟವಿಷಯ ಭಾಷಾಜಾತ್ಯಧಿಕಾರದಲ್ಲಿ ಹೇಳಿದ ತ್ರಿಪದಿಗಳ ಲಕ್ಷಣ 'ಯತಿಪತಿಗದಿತಮತ' ಎಂದು ನುಡಿಯುತ್ತಾನೆ, ಜಯಕೀರ್ತಿ. ಈ ಯತಿಪತಿಯು ಪೂಜ್ಯಪಾದ ಇಲ್ಲವೆ ಜಯಕೀರ್ತಿಯಾಗಿರಬಹುದೆಂದು ವೇಲಣಕರ ಅವರ ತರ್ಕ.[೨೯೮] ಇದು ನಿಜವಿದ್ದಲ್ಲಿ ಕನ್ನಡ ಛಂದಸ್ಸಿನ ಲಿಖಿತ ಚರಿತ್ರೆ ಪೂಜ್ಯಪಾದನಷ್ಟು ದೂರಹೋಗುತ್ತದೆ.

---

೨೯೪. ಮುಂಜರಾಜ ಪ್ರಬಂಧ (ಪುರಾತನ ಪ್ರಬಂಧ ಸಂಗ್ರಹ ಪು. ೧೪)
೨೯೫. ಸಾಮನಗಡ ಶಾಸನ (ಕ್ರಿ.ಶ. ೭೫೫) Ind. Ant. xi P. 108
೨೯೬. ಭಾ. ಕಾ.ಮೀ. ಪು. ೨೭ ಅ.ಟಿ.
೨೯೭. ಜಯಕೀರ್ತಿಯ ಛಂದೋನುಶಾಸನ (ಸಾ.ಪ. ೪೦-೧+೨ ಪು. ೯)
೨೯೮. ಜಯಕೀರ್ತಿಯ ಛಂದೋನುಶಾಸನ (ಸಾ.ಪ. ೪೦-೧+೨ ಪು. ೮)

೮.   **ಕರ್ಣಾಟಛಂದಸ್:**

ಜಯಕೀರ್ತಿಯು ವಿಚಿತ್ರಾತ್ರಿಪದಿಯ ಲಕ್ಷಣ ಬರೆಯುತ್ತ "ವಿಚಿತ್ರಾಸ್ಯಾತ್ ಪೂರ್ವಂ ಕರ್ಣಾಟ ಛಂದೋಮತೇ" ಎನ್ನುತ್ತಾನೆ. "ಇದು ಆ ಹೆಸರಿನ ಒಂದು ಗ್ರಂಥವನ್ನು ಸೂಚಿಸುತ್ತದೋ ಸಾಮಾನ್ಯವಾಗಿ ಕನ್ನಡ ಛಂದಸ್ಸಿಗೆ ಅನ್ವಯಿಸುತ್ತದೋ ಖಚಿತವಾಗಿ ಹೇಳಲಾಗುವುದಿಲ್ಲ. ಇದು ಗ್ರಂಥದ ಹೆಸರೇ ಆಗಿದ್ದ ಪಕ್ಷದಲ್ಲಿ ನಾಗವರ್ಮನ ಛಂದೋಂಬುಧಿಗಿಂತ ಪ್ರಾಚೀನತರವಾದ ಕನ್ನಡ ಛಂದೋಗ್ರಂಥವೊಂದಿದ್ದಿತೆಂದು ಹೇಳಬಹುದು" ಎಂದು ಕವಿಚರಿತೆಯಲ್ಲಿ ಹೇಳಲಾಗಿದೆ.[೨೯೯] ಡಿ.ಎಲ್.ಎನ್. ಮಾತ್ರ 'ಇದು ಛಂದೋಂಬುಧಿಯನ್ನು ಸೂಚಿಸುವುದೆ'ನ್ನುತ್ತಾರೆ. ಇವರ ಅಭಿಪ್ರಾಯ ಸಮ್ಮತವಲ್ಲವೆಂದು ಈ ಹಿಂದೆ ಚರ್ಚಿಸಲಾಗಿದೆ.

೯.   **ಪ್ರಭುಸೇನೀಯ:**

ಜಾತಿಛಂದಸ್ಸಿನ ಗೀತಿಕೆಯ ಪ್ರಸಂಗದಲ್ಲಿ "ನಿಗದಿತಾ ಗೀತಿಕಾಲಂಕಾರೇ ಪ್ರಭುಸೇನೀಯೈಃ" ಎಂಬ ಮಾತು ಬರುತ್ತದೆ. "ಇಲ್ಲಿರುವ 'ಪ್ರಭುಸೇನೀಯೈಃ' ಎಂಬ ತೃತೀಯಾ ಬಹುವಚನವು ಗೌರವಾರ್ಥದಲ್ಲಿ ಬಂದಿರಬಹುದು. ಹೀಗಿದ್ದರೆ ಪ್ರಭುಸೇನನಿಂದ 'ಅಲಂಕಾರ'ದಲ್ಲಿ ಗೀತಿಕೆಯು ಹೇಳಲ್ಪಟ್ಟಿತು ಎಂದರ್ಥವಾಗುತ್ತದೆ. ಪ್ರಭುಸೇನೀಯೇ ಎಂಬ ಸಪ್ತಮಿ ಏಕವಚನಕ್ಕೆ ಪ್ರತಿಯಾಗಿ ಅಚ್ಚಿನ ತಪ್ಪಾಗಿ ತೃತೀಯಾ ಬಹುವಚನವು ಬಿದ್ದಿರಬಹುದು. ಹೀಗಾದರೆ 'ಪ್ರಭುಸೇನೀಯ' ಎಂದು ಗ್ರಂಥದ ಹೆಸರಾಗುತ್ತದೆ, ಪ್ರಭುಸೇನಕೃತ ಗ್ರಂಥವೆಂಬರ್ಥದಲ್ಲಿ. ಪ್ರಭುಸೇನೀಯವೆಂಬ ಅಲಂಕಾರದಲ್ಲೂ ಗೀತಿಕೆಯು ಹೇಳಲ್ಪಟ್ಟಿತು-ಎಂಬ ಅಭಿಪ್ರಾಯ ಉಂಟಾಗುತ್ತದೆ. ಹೇಗೆ ಆದರೂ ಪ್ರಭುಸೇನ ಎಂಬ ಕವಿ ಒಂದು ಅಲಂಕಾರಗ್ರಂಥವನ್ನು ಬರೆದಿದ್ದನೆಂಬ ಅಂಶ ತಿಳಿಯುತ್ತದೆ" ಎಂದು ಕವಿಚರಿತೆ ಹೇಳುತ್ತದೆ.[೩೦೦]

ಹೀಗೆ ಪಂಪಪೂರ್ವಯುಗದ ಕಾವ್ಯ, ಛಂದಸ್ಸು, ಅಲಂಕಾರ ಗ್ರಂಥಗಳನ್ನು ಜಯಕೀರ್ತಿ ಎತ್ತಿ ಹೇಳಿದುದು, ರಸಾತಳಕ್ಕಿಳಿದ ಸಾಹಿತ್ಯಲೋಕವನ್ನು ಎತ್ತಿತೋರಿಸಿದ ಒಂದು ಕೂರ್ಮಸಾಹಸವೆನಿಸಿದೆ. ಈ ಸೂಚನೆಗಳನ್ನು ಮುಂದುಮಾಡಿಕೊಂಡು ವಿಶೇಷ ಸಂಶೋಧನೆ ನಡೆಸಿದರೆ ಹೊಸಲೋಕ ಹೊರಬರುವ ಸಾಧ್ಯತೆಯಿದೆ.[೩೦೧]

---

೨೯೯. ಕ.ಕ.ಚ. ಅನು।। ಪು. ೩೧

೩೦೦. ಕ.ಕ.ಚ. ಅನು ।।. ಪು. ೩೧

೩೦೧. ಎಚ್.ಡಿ. ವೇಲಂಕರ್ ಮೊದಲಾದ ಪಂಡಿತರು ಈ ಗ್ರಂಥದಿಂದ ಇನ್ನೂ ಕೆಲವು ಕನ್ನಡ ಕೃತಿಗಳನ್ನು ವೃತ್ತಜಾತಿಗಳನ್ನು ಊಹಿಸುತ್ತಾರೆ.

i) ಚಾರುಕೀರ್ತಿ: ಅಧಿಕಾರ ೪ರಲ್ಲಿ ಕೀರ್ತಿ ಎಂಬ ವಿಷಮವೃತ್ತವು 'ಕವಿಚಾರುಕೀರ್ತಿಮುನಿನಾ ಪ್ರಕೀರ್ತಿತಾ' ಎಂದು ಹೇಳಲಾಗಿದೆ. ಇದನ್ನು ಕುರಿತು 'ಇದು ಕನ್ನಡ ಕವಿ ಚಾರುಕೀರ್ತಿಯಿಂದ ಮೊದಲಾಗಿದೆ ಎಂದು ತೋರುತ್ತದೆ' ಎಂದು ವೇಲಣಕರ ಹೇಳುತ್ತಾರೆ. (ಸಾ.ಪ. ೪೦-೧+೨, ಪು. ೪. ಅ.ಟಿ.),

ii) ಗುಣ (ಮಾತ್ರಾವೃತ್ತ): ಆರನೆಯ ಮಿಶ್ರಾಧಿಕಾರದಲ್ಲಿಯ 'ಗುಣ' ಎಂಬ ಹೆಸರಿನ ಮಾತ್ರಾವೃತ್ತವನ್ನು ಕುರಿತು "ಇದೊಂದು ವಿಲಕ್ಷಣ ವೃತ್ತ; ಇದರ ಲಕ್ಷಣ ಲಕ್ಷ್ಯಗಳನ್ನೊಳಗೊಂಡಿರುವ ೨೭ನೆಯ ಪದ್ಯ ಕನ್ನಡ ಪದ್ಯದಂತೆ ಆದಿಪ್ರಾಸವುಳ್ಳದ್ದಾಗಿರುವುದು. ಇದು ಪ್ರಾಯಃ ಕನ್ನಡದ್ದೇ ಆದ ಪ್ರಾಚೀನ ವೃತ್ತವಿದ್ದೀತು" ಎಂದು ವೇಲಣಕರರ ಅಭಿಪ್ರಾಯ. (ಸಾ.ಪ. ೪೦-೧+೨, ಪು. ೫ ಅ.ಟಿ.)

iii) ಗೋಗ್ರಹ: ೬ನೆಯ ಮಿಶ್ರಾಧಿಕಾರದಲ್ಲಿ ಉತ್ಸವ ಅಥವಾ ಉತ್ಸಾಹದ ಲಕ್ಷಣವನ್ನು ಹೇಳುತ್ತ 'ಉತ್ಸವಂ ಚ ಗೋಗ್ರಹಾಧಿಕೇ ಬುಧಾಃ' ಎನ್ನಲಾಗಿದೆ. ಈ ಗೋಗ್ರಹವು ಒಂದು ಕಾವ್ಯವೆಂದು ಪಂಡಿತರ ಊಹೆ. ಈ ವೃತ್ತದ ಲಕ್ಷಣ ಪದ್ಯ ಆದಿಪ್ರಾಸಯುಕ್ತವಾಗಿರುವುದರಿಂದ ಈ ಕೃತಿಯ ಕನ್ನಡತ್ವದ ಬಗೆಗೆ ಆಸೆ ಮೂಡುತ್ತದೆ.

ಗುಣನಂದಿ

ಪ್ರಾಚೀನಕರ್ನಾಟಕದ ಅಜ್ಞಾತ ಕವಿಗಳಲ್ಲಿ ಗುಣನಂದಿಯೂ ಒಬ್ಬ. ಆತನ ಉಲ್ಲೇಖ ಕನ್ನಡ ಕೃತಿಗಳಲ್ಲಿ ಹೀಗೆ ಬರುತ್ತದೆ.

೧. "ಗುಣನಂದಿಯ ತೊಂಡು...... ಸಮಾನುರಕ್ತಿಯಿಂ ನೆಲಸಿರ್ಪುವೀ ಸುಕವಿ ಮಲ್ಲನ ಕಾವ್ಯವಿಳಾಸ ಗೇಹದೊಳ್"[೩೦೨] -ಮಲ್ಲಿಕಾರ್ಜುನ

೨. "ಗಜಗನ ಗುಣನಂದಿಯ......... ಸುಮಾರ್ಗಮಿದರೊಳೆ ಲಕ್ಷ್ಯಂ"[೩೦೩]-ಕೇಶಿರಾಜ

೩. "ಇಂಪುವಡೆದ ಕವಿತಾರಸಲಹರಿಯ। ಸೊಂಪಿನಿಂ ವಾದಿಗಳೆರ್ದೆಗೆ।
ಕಂಪನವನು ಪುಟ್ಟಿಸುವ ಗುಣನಂದಿಯ ।ನಾಂ ಪೊಗಳುತ ಬಲಗೊಂಬೆ"॥[೩೦೪]-ನಂಜುಂಡ.

೪. "ಭಗವಾನ್ ಗುಣನಂದಿ"[೩೦೫]-ಭಟ್ಟಾಕಳಂಕ.

ಈ ನಾಲ್ಕು ಹೇಳಿಕೆಗಳಲ್ಲಿ ಸೂಕ್ತಿಸುಧಾರ್ಣವ ಮತ್ತು ದರ್ಪಣಗಳಿಂದ ಕವಿ, ಕುಮಾರರಾಮನ ಕಥೆಯಿಂದ ಕವಿ ಮತ್ತು ವಾದಿ, ಶಬ್ದಾನುಶಾಸನದಿಂದ ಯತಿ ಎಂದು ತಿಳಿದುಬರುವ ಗುಣನಂದಿ ಒಬ್ಬನೋ ಹಲವು ವ್ಯಕ್ತಿಗಳೋ ಸಂದೇಹ. ಒಬ್ಬನೇ ಎಂದು ಭಾವಿಸಿದ ಕವಿಚರಿತೆಕಾರರು ಸೂಕ್ತಿಸುಧಾರ್ಣವಕ್ಕೆ ಹಿಂದೆ ಈ ಹೆಸರನ್ನು ಹುಡುಕಲು ಹೊರಟು ಶ್ರವಣಬೆಳ್ಗೊಳದ ಶಾಸನ ೬೬,೧೧೭,೧೨೭(೧೪೦ನ್ನೂ ಸೇರಿಸಿಕೊಳ್ಳಬಹುದು)ಗಳನ್ನು ಈತನ ಚರಿತ್ರೆಗಾಗಿ ಬಳಸಿಕೊಂಡಿರುವರು. ಈ ಶಾಸನಗಳಲ್ಲಿ "....... ಉಮಾಸ್ವಾಮಿ>ಬಲಾಕಪಿಂಛ> (ಶಿಷ್ಯ) ಗುಣನಂದಿ(ಈತನಿಗೆ ೩೦೦ ಜನ ಶಿಷ್ಯರು. ಇವರಲ್ಲಿ ಪ್ರಮುಖರಾದ ೭೨ ಜನರಿಗೆ ಮುಖ್ಯ)> ದೇವೇಂದ್ರ ಸಿದ್ಧಾಂತಿ......" ಎಂಬ ವಂಶಕ್ರಮ ಕಂಡುಬರುತ್ತದೆ. ಅಲ್ಲಿ ಗುಣನಂದಿಯನ್ನು,

> ತಚ್ಛಿಷ್ಯೋ ಗುಣನಂದಿಪಂಡಿತ ಯತಿಶ್ಚಾರಿತ್ರಚಕ್ರೇಶ್ವರಃ
> ತರ್ಕವ್ಯಾಕರಣಾದಿ ಶಾಸ್ತ್ರನಿಪುಣಃ ಸಾಹಿತ್ಯ ವಿದ್ಯಾಪತಿಃ।
> ಮಿಥ್ಯಾವಾದಿ ಮದಾಂಧಸಿಂಧುರಘಟಾಸಂಘಟ್ಟಕಂಠೀರವೋ
> ಭವ್ಯಾಂಭೋಜದಿವಾಕರೋ ವಿಜಯತಾಂ ಕಂದರ್ಪದರ್ಪಾಪಹಃ॥

ಎಂದು ವರ್ಣಿಸಲಾಗಿದೆ. ೧೨೭ನೆಯ ಶಾಸನದ ಶಿಷ್ಯಪರಂಪರೆಯ ಕೊನೆಯಲ್ಲಿ ಬರುವ ಮೇಘಚಂದ್ರತ್ರೈವಿದ್ಯನು ಕ್ರಿ.ಶ. ೧೧೧೫ರಲ್ಲಿ ತೀರಿಕೊಂಡಿದ್ದು, ಈ ಹಿಂದಣ ೭ ತಲೆಮಾರುಗಳಾಚೆ ಇರುವ

iv) ಮಹಾರ್ಹದ್ ಆದಿದೇವತಾಸ್ತವ: ದಂಡಕದ ಪ್ರಭೇದವನ್ನು ವಿವರಿಸುತ್ತ 'ಉತ್ಸವಾಭಿಧಾನ ದಂಡಕೋ ಮಹಾರ್ಹದಾದಿ ದೇವತಾಸ್ತವೇ ಸ್ಮೃತಃ' ಎಂದು ಹೇಳಲಾಗಿದೆ. ವಿದ್ವಾಂಸರ ಅಭಿಪ್ರಾಯದಂತೆ 'ಮಹಾರ್ಹದಾದಿ ದೇವತಾಸ್ತವ'ವು ಒಂದು ಕೃತಿಯ ಹೆಸರು. ಆದಿಪ್ರಾಸಯುಕ್ತವಾಗಿರುವ ಈ ಬಂಧದ ಲಕ್ಷಣಪದ್ಯ ಈ ಕೃತಿಯ ಕನ್ನಡತ್ವದ ಕಡೆಗೆ ಕೈನೀಡುವಂತಿದೆ.

v) ಶ್ರೀಪುರಾಣಕವಿಪುಂಗವ: 'ತಲಿಕಾ' ಎಂಬ ವೃತ್ತವನ್ನು 'ಶ್ರೀಪುರಾಣಕವಿಪುಂಗವಗೀತಾ' ಎಂದು ಕರೆದಿದ್ದಾನೆ. ಜಯಕೀರ್ತಿ. ಇಲ್ಲಿ 'ಶ್ರೀಪುರಾಣ'ದ ಕರ್ತೃವೆಂದು ವಿಶಿಷ್ಟ ಅರ್ಥವೋ, ಪ್ರಾಚೀನಕವಿ ಎಂದು ಸಾಮಾನ್ಯ ಅರ್ಥವೋ ಸ್ಪಷ್ಟವಾಗುವುದಿಲ್ಲ. ಈ ವೃತ್ತದ ಲಕ್ಷಣಪದ್ಯ ಆದಿಪ್ರಾಸ ಯುಕ್ತವಾಗಿರುವುದು ಈ ಕೃತಿ ಅಥವಾ ಕವಿಯ ಕನ್ನಡತ್ವವನ್ನು ಬೆಂಬಲಿಸುತ್ತದೆ.

೩೦೨. ಸೂಕ್ತಿ. ೧-೨೬ ೩೦೩. ಶ.ಮ.ದ. ಸೂ. ೫
೩೦೪. ರಾಮನಾಥ ಚರಿತೆ, ೧-೩೩ ೩೦೫. ಸಾಹಿತ್ಯ ಸಂಶೋಧನೆ ಮತ್ತು ಸಮಾಲೋಚನೆ ಪು. ೧೬

ಗುಣನಂದಿಯ ಕಾಲ ಕ್ರಿ.ಶ. ೯೦೦ ಎನಿಸುತ್ತದೆ. ಇದಲ್ಲದೆ ಕ್ರಿ.ಶ. ೯೪೧ರಲ್ಲಿದ್ದ ಪಂಪನ ಗುರು ದೇವೇಂದ್ರಮುನಿಯು ಈ ಗುಣನಂದಿಯ ಶಿಷ್ಯನಾಗಿರುವುದರಿಂದ ಮೇಲಣ ಮಿತಿ ಇನ್ನೂ ಗಟ್ಟಿಗೊಳ್ಳುತ್ತದೆ ಎಂದು ಆರ್. ನರಸಿಂಹಾಚಾರ್ ಅವರ ಅಭಿಮತ.[೩೦೬] ಆದರೆ ಈ ಶಾಸನದ ಗುರುಶಿಷ್ಯ ಪರಂಪರೆ ಅವಿಚ್ಛಿನ್ನವೆನ್ನಲು ಬರುವಂತಿಲ್ಲ. ಮೇಲಾಗಿ ಇಲ್ಲಿಯ ದೇವೇಂದ್ರಸಿದ್ಧಾಂತಿಯು ಪಂಪನ ಗುರುವೆನ್ನುವುದು ಕೇವಲ ನಾಮಸಾಮ್ಯದ ಆಧಾರ. ಈ ಪ್ರಸಂಗದಲ್ಲಿ ಮೇಲಣ ಶಾಸನೋಕ್ತ ಗುಣನಂದಿಯ ಕಾಲ ಕ್ರಿ.ಶ. ೭೦೦ಕ್ಕೆ ಹಿಂದೆ ಎಂದೂ, ಮಲ್ಲಿಕಾರ್ಜುನಾದಿಗಳು ಹೊಗಳುವ ಗುಣನಂದಿ ಕ್ರಿ.ಶ. ೧೨೫೦ರಲ್ಲಿದ್ದಿರಬಹುದಾದ ಇನ್ನೊಬ್ಬ ಗುಣನಂದಿಯೆಂದೂ ಎ. ವೆಂಕಟಸುಬ್ಬಯ್ಯ ಹೇಳುತ್ತಾರೆ.[೩೦೭] ಈ ಉಭಯ ಊಹೆಗಳು ಆಧಾರಗಳನ್ನು ಬಯಸುತ್ತವೆ.

ಹೇಳಾಚಾರ್ಯಪ್ರಣೀತ ಜ್ವಾಲಾಮಾಲಿನೀತಂತ್ರವು ಕಾಲಕ್ರಮದಲ್ಲಿ ಗುರು ಕಂದರ್ಪನಿಂದ ಶಿಷ್ಯ ಗುಣನಂದಿಗೆ ಹೇಳಲ್ಪಟ್ಟಿತು. ಈ ಗುರುಶಿಷ್ಯರ ಸನ್ನಿಧಿಯಲ್ಲಿ ಅದನ್ನು ಕೇಳಿ 'ಜ್ವಾಲಾಮಾಲಿನೀಕಲ್ಪ' ಗ್ರಂಥವನ್ನು ರಚಿಸಿದವನು ವಾಸವಣಂದಿಯ ಶಿಷ್ಯನಾದ ಬಪ್ಪಣಂದಿಯ ಶಿಷ್ಯ ಇಂದ್ರಣಂದಿ. ಈ ಜ್ವಾಲಾಮಾಲಿನೀಕಲ್ಪದ ಕಾಲ ಕ್ರಿ.ಶ. ೯೩೯. ಇದರಿಂದ ೧೦ನೆಯ ಶತಮಾನದ ಆದಿಭಾಗದಲ್ಲಿ ಒಬ್ಬ ಗುಣನಂದಿಯಿದ್ದುದು ತಿಳಿದುಬರುತ್ತದೆ. ಆದರೆ ಈತನಿಗೂ ಪ್ರಸ್ತುತ ಗುಣನಂದಿಗೂ ಇರುವ ಸಂಬಂಧ ಗೊತ್ತಾಗದು.[೩೦೮]

ಮಡಿಕೇರಿಯ ಶಾಸನದಲ್ಲಿ[೩೦೯] ಹೇಳಲಾದ ಗುಣಚಂದ್ರ> ಅಭಯಣಂದಿ> ಶೀಳಭದ್ರಭಟಾರ> ಜಯಣಂದಿ> ಗುಣನಂದಿ> ಚಂದಣಂದಿ (ಕ್ರಿ.ಶ. ೪೬೬)ಎಂಬ ಗುರುಪರಂಪರೆಯಲ್ಲಿಯೂ ಇನ್ನೊಬ್ಬ 'ಗುಣನಂದಿ' ಕಂಡುಬರುತ್ತಾನೆ. ಕ್ರಿ.ಶ. ೪೫೦ರಲ್ಲಿರಬಹುದಾದ ಈತನಿಗೂ ಪ್ರಸ್ತುತ ಗುಣನಂದಿಗೂ ಸಂಬಂಧವಿರಲಿಕ್ಕಿಲ್ಲ.

ಕಲ್ಲೂರಗುಡ್ಡ ಶಾಸನದಲ್ಲಿ[೩೧೦] ಸಿಂಹಣಂದಿ>ಅರ್ಹದ್ಬಲಾಚಾರ್ಯ>ಬೆಟ್ಟದ ದಾಮಣಂದಿ> ಭಾಳಚಂದ್ರ>ಮೇಘಚಂದ್ರ>ಗುಣಚಂದ್ರ>ಗುಣನಂದಿ ಎಂಬ ಮತ್ತೊಂದು ಪರಂಪರೆ ಕಂಡುಬರುತ್ತದೆ. ಇಲ್ಲಿ ಗುಣನಂದಿಯನ್ನು,

ಎಳೆಗೆ ಗುಣರುಚಿಯಿನೊಳ್ಪ
ಗ್ಗಳಿಸಿರೆ ಗುಣರುಚಿವಿಕಾಶ ವಾಗ್ರಶ್ಮಿಯಿನು।
ಚ್ಚಳಿಸೆ ವದನೇಂದು ಪೆಂಪಂ
ತಳೆದಂ ಗುಣನನ್ದಿದೇವ ಶಬ್ದಬ್ರಹ್ಮಂ॥

ಎಂದು ಹೊಗಳಲಾಗಿದೆ. ಸುಮಾರಾಗಿ ಇದೇ ವಂಶಾವಳಿಯನ್ನು ಹೇಳುವ ಇನ್ನೆರಡು ಶಾಸನಗಳಲ್ಲಿ,[೩೧೧]

ಗುಣಿಯೆನೆ ಜಿನಮತರಕ್ಷಾ
ಮಣಿಯೆನೆ ಕವಿಗಮಕವಾದಿ ವಾಗ್ಮಿ ಪ್ರವರಾ।
ಗ್ರಣಿಯೆನೆ ಪಂಡಿತಚೂಡಾ
ಮಣಿಯೆನೆ ಗುಣನನ್ದಿದೇವರೆಸೆದರ್ದ್ಧರೆಯೊಳು॥

---

೩೦೬. ಕ.ಕ.ಚ. ೨೩

೩೦೭. ಕೆ.ಜೀ.ಕಾ.ಪು. ೨೪೭-೨೪೮

೩೦೮. ಜ್ವಾಲಾಮಾಲಿನೀಕಲ್ಪ (KRI.ತಾಡೋಲೆ ಪ್ರತಿ ನಂ. ೮೫೧)

೩೦೯. E.C.I. No. 1 ಮಡಕೇರಿ ಶಾಸನ.

೩೧೦. E.C. vii ಶಿವಮೊಗ್ಗ No. 4 ಕಲ್ಲೂರಗುಡ್ಡ

೩೧೧. E.C. viiಶಿವಮೊಗ್ಗ No. 57. ನಿಗದಿ ಮತ್ತು No. 64 ಪುರಲೆಗ್ರಾಮ

೩೧೨.ಶ.ಮ.ದ. ಸೂ. ೩೪

ಎಂಬ ಸ್ತುತಿ ಬರುತ್ತದೆ. ಈತನೇ ಪ್ರಸ್ತುತ ಗುಣನಂದಿ ಎನ್ನಬಹುದಾದರೂ ಇದಕ್ಕೆ ಇನ್ನೂ ಆಧಾರಬೇಕು. ಹೀಗಾಗಿ ಹೊಸ ಆಧಾರಗಳು ಲಭಿಸುವವರೆಗೆ ಈತನ ಚರಿತ್ರೆ ಒಂದು ಸಮಸ್ಯೆಯಾಗಿ ಉಳಿದುಕೊಳ್ಳುತ್ತದೆ.

ಕೇಶಿರಾಜನ ಶಬ್ದಮಣಿದರ್ಪಣದಲ್ಲಿ "ಚುರ್ಚಿದವೊಲ್ ಬಿಸಿಲಳುರೆ ಕಿಮುಟ್ಚಿದ ಲತೆಯಂತೆ ನೊಂದು ಗುಣನಂದಿ"[೩೧೨] ಎಂಬ ವಾಕ್ಯವಿದೆ. ಇದು ಗುಣನಂದಿಯ ವಾಕ್ಯವೋ ಗುಣನಂದಿಯನ್ನು ಕುರಿತು ಬರೆದಿರಬಹುದಾದ ಒಂದು ಕಾವ್ಯದ ವಾಕ್ಯವೋ ಸ್ಪಷ್ಟವಾಗುವುದಿಲ್ಲ. ಹೀಗಾಗಿ ಈತನು ಕನ್ನಡ ಕವಿಯೆಂಬುದು ಸ್ಪಷ್ಟವಾಗಿದ್ದರೂ ಆಧಾರಗಳು ಸಿಗುವ ವರೆಗೆ ಈತನ ವಿಷಯವನ್ನು ಸಾಹಿತ್ಯಚರಿತ್ರೆಯ ಅನಿಶ್ಚಿತಪುಟದಲ್ಲಿ ಇಡುವುದು ವಿಹಿತ.

ವಡ್ಡಾರಾಧನೆಯ ಕರ್ತೃ

ಕಥೆ-ಸಾಹಿತ್ಯಲೋಕದ ಬೆಳ್ಳಿಚಿಕ್ಕಿ, ಕುತೂಹಲ ಅದರ ಸಾರಸರ್ವಸ್ವ. ರಾಮಾಯಣ ಮಹಾಭಾರತಗಳು ಮಾಡಲಾಗದ ಪರಿಣಾಮವನ್ನು ಒಂದು ಕಥೆಮಾಡುತ್ತದೆ; ವೇದ ಉಪನಿಷತ್ತುಗಳು ತಿಳಿಸಲಸಾಧ್ಯವಾದ ತತ್ವವನ್ನು ಒಂದು ಕಥೆತಿಳಿಸುತ್ತದೆ-ಎನ್ನುವಷ್ಟರಮಟ್ಟಿಗೆ ಅದರ ಪರಿಣಾಮ ಪ್ರಗಾಢ. ಅದಕ್ಕಾಗಿ ಮತಪ್ರಚಾರಕರಿಗೆ, ನೀತಿಬೋಧಕರಿಗೆ ಅದು ಬೋಧನೆಯ ಸಾಧನವಾಗಿ ಪರಿಣಮಿಸಿತು.

ಗುಣಾಢ್ಯನ ಬೃಹತ್ಕಥೆ ಪ್ರಾಚೀನಭಾರತದ ಒಂದು ಉಜ್ವಲಕಥಾಕೋಶ. ರಾಮಾಯಣ ಮಹಾಭಾರತಗಳ ಸಾಲಿನಲ್ಲಿ ನಿಲ್ಲುವ ಈ ಕೃತಿ ಕಣ್ಮರೆಯಾಗಿದ್ದರೂ ಇದರ ಮಕ್ಕಳು, ಮರಿಗಳು ಹಲವಾರು ಭಾಷೆಗಳಲ್ಲಿ ಹರಡಿಕೊಂಡಿವೆ. ಇಂಥದೇ ಇನ್ನೊಂದು ಕಥಾಗಣಿ ಪಂಚತಂತ್ರ. ವಿಷ್ಣುಶರ್ಮ, ವಸುಭಾಗಭಟ್ಟರ ಇಬ್ಬಗೆಯ ಸಂಪ್ರದಾಯದಲ್ಲಿ ಸಾಗಿಬಂದ ಈ ಕಥಾಪ್ರವಾಹ ಪ್ರಪಂಚವನ್ನೇ ಪರ್ಯಟನಗೈದಿದೆ. ಇವಲ್ಲದೆ ಹಿತೋಪದೇಶ ಮೊದಲಾದ ಸಣ್ಣದೊಡ್ಡ ಹಿಂದೂಮತದ ಕಥಾಸಂಕಲನಗಳು ಭಾರತದ ತುಂಬ ಬಳ್ಳಿಯಂತೆ ಬಳಸಿನಿಂತಿವೆ.

ಬೌದ್ಧಮತ, ಕಥೆಗಳ ಮೂಲಕ ಕೃತಾರ್ಥವಾದ ಒಂದು ಪ್ರಾಚೀನಧರ್ಮ. ಬುದ್ಧ ಹೇಳಿದ ಒಂದೊಂದು ಕಥೆ ಒಂದೊಂದು ಬೆಲ್ಲದಚ್ಚು. ಸುತ್ತಪಿಟಕಕ್ಕೆ ಸಂಬಂಧಿಸಿದ ಖುದ್ದಕನಿಕಾಯ ಜಾಗತಿಕ ಕಥಾಸಾಹಿತ್ಯದಲ್ಲಿಯೇ ಒಂದು ಅನುಪಮ ಕಥಾಸಂಪುಟ.

ಜೈನಮತವನ್ನು ಬೋಧಿಸುವ ಗ್ರಂಥಸಮುದಾಯ ವೈಭವಪೂರ್ಣವಾಗಿದೆ, ವೈವಿಧ್ಯಮಯವಾಗಿದೆ. ಆ ವೈವಿಧ್ಯದಲ್ಲಿ ಪ್ರಜಾನುರಾಗವನ್ನು ಗಳಿಸುವ ಇಚ್ಛೆಯಿಂದ ರೂಪುಗೊಂಡ ಕಥಾಸಾಹಿತ್ಯಕ್ಕೆ ಸಿಂಹಪಾಲು ಸಲ್ಲುತ್ತದೆ. ಕಾಲಕಾಲಕ್ಕೆ ಹುಟ್ಟಿಬಂದ ಇಂಥ ಕಥಾಕೋಶಗಳಲ್ಲಿ 'ಆರಾಧನಾ' ಗ್ರಂಥಕ್ಕೆ ಬರೆದ ಕಥಾಕೋಶಗಳು ಬಹುಮುಖ್ಯವಾದುವು.

ಆರಾಧನಾ ಎಂಬ ಪದಕ್ಕೆ ಅರ್ಚನೆ, ಸೇವೆ ಎಂದು ನಿಘಂಟು ಅರ್ಥ ಹೇಳುತ್ತದೆ. ಆದರೆ ಜೈನ ಪರಿಭಾಷೆಯಲ್ಲಿ ಸಮ್ಯಕ್‌ಜ್ಞಾನ, ಸಮ್ಯಗ್ದರ್ಶನ, ಸಮ್ಯಕ್‌ಚಾರಿತ್ರ, ಸಮ್ಯಕ್‌ತಪೋನಿಷ್ಠವಾದ ಸಮಾಧಿಮರಣದ ಆಚರಣೆಗೆ 'ಆರಾಧನೆ' ಎಂದು ಹೆಸರು. ಈ ಮರಣ ೧೭ ಬಗೆಯಾಗಿದೆ.[೩೧೩] ಇವುಗಳ ಸ್ವರೂಪ, ಆಚರಣೆಯ

---

೩೧೩. ಈ ಮರಣ ಅನೇಕ ಬಗೆಯಾಗಿದ್ದು ಶಿವಜ್ಜನು ಮಾತ್ರ ೧೭ನ್ನು ಹೇಳುವನು.

ರೀತಿ ಇತ್ಯಾದಿಗಳ ನಿರೂಪಣೆ ಆರಾಧನಾಗ್ರಂಥಗಳ ವಸ್ತು. ಸಂಸ್ಕೃತ, ಪ್ರಾಕೃತ ಭಾಷೆಗಳಲ್ಲಿ ಬರೆಯಲಾದ ಇಂಥ ೨೬ ಗ್ರಂಥಗಳನ್ನು ಡಾ. ಎ.ಎನ್. ಉಪಾಧ್ಯೆ ಅವರು ಎಣಿಸಿ ಹೇಳಿದ್ದಾರೆ.[೩೧೪] ಇವುಗಳಲ್ಲಿ ಸಿವಜ್ಜ (ಶಿವಾರ್ಯ)ಕೃತ ಶೌರಸೇನಿಪ್ರಾಕೃತಭಾಷೆಯ 'ಆರಾಧನಾ' (=ಭಗವತೀ ಆರಾಧನಾ) ಸುಪ್ರಸಿದ್ಧವಾಗಿದೆ. ಇದು ಜೈನ ಸಮುದಾಯದ 'ಚರಣಾನುಯೋಗ' ವಿಭಾಗಕ್ಕೆ ಸಂಬಂಧಪಟ್ಟ ಕೃತಿ. ಈಗ ತಿಳಿದಮಟ್ಟಿಗೆ ಆರಾಧನಾ ವಿಷಯವನ್ನೊಳಗೊಂಡ ಪ್ರಥಮಕೃತಿಯಾದ ಈ ಭಗವತೀ ಆರಾಧನೆಯ ವಿಷಯ ವಿವರಣೆ ಹೀಗಿದೆ:

ಪೀಠಿಕೆ	೧-೨೪	ಶ್ಲೋಕಗಳು
ಮರಣ ಪ್ರಭೇದ ವಿವರಣೆ	೨೫-೩೦	"
ಬಾಲಮರಣ	೩೧-೫೩	"
ಬಾಲಬಾಲಮರಣ	೫೪-೬೩	"
ಪಂಡಿತಮರಣದ ಪೀಠಿಕೆ	೬೪-೭೦	"
ಸವಿಚಾರ ಭಕ್ತಪ್ರತ್ಯಾಖ್ಯಾನ ಮರಣ	೭೧-೨೦೧೦	"
ಅವಿಚಾರ ಭಕ್ತಪ್ರತ್ಯಾಖ್ಯಾನ ಮರಣ	೨೦೧೧-೨೦೨೯	"
ಇಂಗಿಣಿ ಮರಣ	೨೦೩೦-೨೦೬೧	"
ಪ್ರಾಯೋಪಗಮನ ಮರಣ	೨೦೬೨-೨೦೭೭	"
ಬಾಲಪಂಡಿತರ ಮರಣ	೨೦೭೮-೨೦೮೭	"
ಪಂಡಿತ ಪಂಡಿತ ಮರಣ	೨೦೮೮-೨೧೫೯	"

ಈ ವಿವರವನ್ನು[೩೧೫] ನೋಡಿದರೆ, ಇಲ್ಲಿ ಪಂಡಿತಮರಣಕ್ಕೆ ಸಂಬಂಧಿಸಿದ ಸವಿಚಾರ ಭಕ್ತಪ್ರತ್ಯಾಖ್ಯಾನ ಮರಣ ವಿಭಾಗಕ್ಕೆ ಹೆಚ್ಚು ಮಹತ್ವಕೊಟ್ಟುದು ವ್ಯಕ್ತವಾಗುತ್ತದೆ. ಈ ವಿಭಾಗದಲ್ಲಿ ೪೦ ಅಧಿಕಾರಿಗಳಿದ್ದು ೩೫ನೆಯ (ಗಾಹೆ ೧೫೦೯-೧೬೮೦) ದಕ್ಕೆ ಕವಚ ಎಂದು ಹೆಸರು. ಈ 'ಕವಚ' ಅಧಿಕಾರಕ್ಕೆ ಸಂಬಂಧಿಸಿದ ೧೯ ಗಾಹೆ (೧೫೩೯-೧೫೫೭) ಗಳನ್ನಾಧರಿಸಿ ರೂಹುಗೊಂಡ ೧೯ ಕಥೆಗಳನ್ನೊಳಗೊಂಡಿದೆ, ಕನ್ನಡ ವಡ್ಡಾರಾಧನೆ.

ವಡ್ಡಾರಾಧನೆ:

ಭಾಷೆಯ ಸ್ವರೂಪ, ಸಾಹಿತ್ಯದ ಸೊಗಸು, ಧಾರ್ಮಿಕ ವಿವರಣೆ, ಸಾಮಾಜಿಕ ವಾತಾವರಣ ಮತ್ತು ಸಮಸ್ಯೆಯ ಜಟಿಲತೆಗಳ ಮೂಲಕ ಭಾಷಾವಿಜ್ಞಾನಿ, ಸಹೃದಯ, ತತ್ವಜಿಜ್ಞಾಸು, ವಿಮರ್ಶಕ, ಸಂಶೋಧಕ ಮೊದಲಾದವರನ್ನು ತನ್ನತ್ತ ನಿರಂತರ ಸೆಳೆಯುವ ಈ ವಡ್ಡಾರಾಧನೆ ಕನ್ನಡದ ಒಂದು ಅಪರೂಪಕೃತಿ. ಕ್ರಿ.ಶ. ೧೮೮೩ರಲ್ಲಿ ಶ್ರೀ ಪಾಠಕ ಅವರ ಮೂಲಕ ಬೆಳಕಿಗೆ ಬಂದ ಇದರ ಅಧ್ಯಯನದ ಇತಿಹಾಸ ಹೀಗಿದೆ:

೧) ಕ್ರಿ.ಶ. ೧೮೮೩(I.A. xii P. 95) ರಲ್ಲಿ ಶ್ರೀಪಾಠಕ ಅವರು 'An old Canarese inscription at Torgal' ಎಂಬ ಲೇಖನ ಬರೆಯುತ್ತ, ಈ ಶಾಸನದಲ್ಲಿಯ 'ಪಂಚಮಹಾಶಬ್ದ' ಎಂಬ

---

೩೧೪. Br. K. (Introduction P. 48-49)

೩೧೫. ಈ ವಿವರಣೆಯನ್ನು ಡಾ. ಕಡಬಡಿಯವರ ಗ್ರಂಥದಿಂದ ಸ್ವೀಕರಿಸಲಾಗಿದೆ.

ಪದವನ್ನು ವಿವೇಚನೆಗೆ ಎತ್ತಿಕೊಂಡು "I will now quote a passage from a Jain author, who lived in times when the expression Panchamahasabda was still in use in a living language. Revakotyacharya thus describes a royal procession" ಎಂದು ಹೇಳಿ ಕೆಲವು ವಾಕ್ಯಗಳನ್ನು ಉದ್ಧರಿಸಿದರು. ಇಲ್ಲಿ ಗ್ರಂಥದ ಹೆಸರನ್ನು ಉಲ್ಲೇಖಿಸದೆ, ಕರ್ತೃ ಮಾತ್ರ ರೇವಾಕೋಟ್ಯಾಚಾರ್ಯ ಎಂದು ಹೇಳಿದರು.

೨) ಡಾ. ಫ್ಲೀಟ್ ಅವರು ಅದೇ I.A. xiiಪು. ೯೯ರಲ್ಲಿ 'Nisidhi and Gudd' ಎಂಬ ಲೇಖನವನ್ನು ಬರೆಯುತ್ತ 'Mr. K.B. Pathak..... has given me the following passage from the Upasargakevaligala Kathe in which it (ನಿಸಿಧಿ) occurs" ಎಂದು ಹೇಳುತ್ತ ಕೆಲವು ವಾಕ್ಯಗಳನ್ನು ಉದ್ಧರಿಸಿದರು. ಇಲ್ಲಿ ಕರ್ತೃವಿನ ಹೆಸರನ್ನೆತ್ತದೆಯೆ ಕೃತಿನಾಮ ಮಾತ್ರ 'ಉಪಸರ್ಗಕೇವಲಿಗಳ ಕಥೆ' ಎಂದು ಉಲ್ಲೇಖಿಸಿರುವರು.

ಪಾಠಕ ಮತ್ತು ಫ್ಲೀಟರ ಈ ಉದ್ಧರಣೆಗಳನ್ನು ಗಮನಿಸಿ, 'ಉಪಸರ್ಗಕೇವಲಿಗಳ ಕಥೆ' ಎಂಬುದು 'ವಡ್ಡಾರಾಧನೆ'ಯಾಗಿದೆಯೆಂದು ಮೊದಲು ಸೂಚಿಸಿದವರು ಡಿ. ಎಲ್. ಎನ್.[೩೧೬] ಆದರೆ ಇವರಿಗೆ ದೊರೆತ ಪ್ರತಿಯಲ್ಲಿ "xx ಟ್ಯಾಚಾರ್ಯ" ಎಂದಿಷ್ಟೇ ಇದ್ದುದರಿಂದ ಪಾಠಕರು ಹೇಳಿದ 'ರೇವಾಕೋಟಾಚಾರ್ಯ'ನೇ ಇದರ ಕರ್ತೃವೆಂದು ಅನಿವಾರ್ಯವಾಗಿ ಭಾವಿಸಿದರು.[೩೧೭] ಮೂಡಬಿದಿರೆಯ ಪ್ರತಿ ಲಭಿಸಿದ ಬಳಿಕ ಕರ್ತೃನಾಮವನ್ನು 'ಶಿವಕೋಟ್ಯಾಚಾರ್ಯ' ಎಂದು ತಿದ್ದಿಕೊಂಡರು.[೩೧೮] 'ಶಿ' ಮತ್ತು 'ರೆ' ಲಿಪಿಗಳ ರೂಪಸಾಮ್ಯವೇ ಈ ಪ್ರಮಾದಕ್ಕೆ ಕಾರಣವಾಗಿತ್ತು. ಈಗ ಮಾತ್ರ ರೇವಕೋಟ್ಯಾಚಾರ್ಯ ಮರೆಯಾಗಿ ಶಿವಕೋಟ್ಯಾಚಾರ್ಯ ಸ್ಥಿರವಾಗಿ ನಿಂತುಬಿಟ್ಟಿದೆ. ಈ ತರುವಾಯ ವಡ್ಡಾರಾಧನೆಯನ್ನು ಕುರಿತು ನಿಷ್ಠೆಯ ಅಭ್ಯಾಸ ನಡೆಸಿದವರು ಡಿ. ಎಲ್. ಎನ್. ಮತ್ತು ಎ. ಎನ್. ಉಪಾಧ್ಯೆ. ಇತ್ತೀಚೆಗೆ ಡಾ. ಕಡಬಡಿಯವರು 'ವಡ್ಡಾರಾಧನೆ' ಎಂಬ ಹೆಸರಿನ ಪಿಎಚ್.ಡಿ. ಪ್ರಬಂಧವನ್ನೇ ಬರೆದರು. ಕೆಲವರು ಆಗಾಗ ಲೇಖನಗಳನ್ನು ಪ್ರಕಟಿಸಿದರು.[೩೧೯] ಹೀಗೆ ಈ ಕೃತಿಯನ್ನು ಕುರಿತು ಲೇಖನ ಮತ್ತು ಗ್ರಂಥರೂಪದಲ್ಲಿ ವಿಶೇಷ ಅಭ್ಯಾಸ ನಡೆದಿದ್ದರೂ ಕರ್ತೃ, ಕಾಲ, ಕೃತಿನಾಮ ಇತ್ಯಾದಿ ವಿಷಯಗಳು ಇನ್ನೂ ಅನಿರ್ಣೀತ ಸ್ಥಿತಿಯಲ್ಲಿ ನಿಂತುಬಿಟ್ಟಿವೆ. ಇವುಗಳನ್ನು ಒಂದೊಂದಾಗಿ ವಿವೇಚಿಸಬಹುದು.

---

೩೧೬. ರೇವಾಕೋಟ್ಯಾಚಾರ್ಯ (ಸಾ.ಪ. ೧೬-೩). (ಕ್ರಿ.ಶ. ೧೯೧೯ರಷ್ಟು ಪೂರ್ವದಲ್ಲಿಯೇ ಸಾಹಿತ್ಯಪರಿಷತ್ತು 'ಒಡ್ಡಾರಾಧನ' ಕೃತಿಯನ್ನು ಅಚ್ಚಿಸಲು ಯೋಚಿಸಿದೆ-ಸಾ.ಪ. ೪-೨ ಮತ್ತು ೩ ಪು. ೧೦೮)

೩೧೭. ಡಾ. ಎ.ಎನ್. ಉಪಾಧ್ಯೆಯವರು ಶ್ರೀಪಾಠಕರು ನೋಡಿದ್ದ ಹಸ್ತಪ್ರತಿಯನ್ನು ಕೊಲ್ಲಾಪುರದ ಲಕ್ಷ್ಮೀಸೇನಭಟ್ಟಾರಕ ಬಸದಿಯ ಭಂಡಾರದಲ್ಲಿ ಗೊತ್ತುಹಚ್ಚಿ 'ಉಪಸರ್ಗಕೇವಲಿಗಳ ಕಥೆ' ಎಂಬುದು ಆ ಮಠದವರು ತಮಗೆ ತಿಳಿದಮಟ್ಟಿಗೆ ಹಸ್ತಪ್ರತಿಯ ರಕ್ಷಾಫಲಕದ ಮೇಲೆ ಬರೆದ ಹೆಸರು ಎಂದು ತಿಳಿಸಿದರು.

೩೧೮. ವಡ್ಡಾರಾಧನೆ: ಅರಿಕೆ: (ಸಾ. ಪ. ೨೪-೪)

೩೧೯. ವಡ್ಡಾರಾಧನೆಯನ್ನು ಕುರಿತ ಲೇಖನ, ಗ್ರಂಥ ಮತ್ತು ಆವೃತ್ತಿಗಳ ಆದ್ಯಂತ ಇತಿಹಾಸ ಹೀಗಿದೆ:

i) An old canarese inscription at Torgal- I.A. xii 1883. P. 95, ಕೆ.ಬಿ. ಪಾಠಕ

ii) Nisidhi and Gudda- I.A. xii, 1883. P. 99.ಡಾ. ಫ್ಲೀಟ್

iii) ರೇವಾಕೋಟ್ಯಾಚಾರ್ಯ-ಕರ್ನಾಟಕ ಕವಿಚರಿತೆ I (೧೯೦೭) ಇಲ್ಲಿ ಕಾಲ ೧೧೮೦ ಎಂದು ಹೇಳಿ ಅನು ೧ ಪು. ೭ರಲ್ಲಿ ೧೬ನೆಯ ಶತಮಾನ ಎಂದು ಹೇಳಿದ್ದಾರೆ. ಪರಿಶಿಷ್ಟ ೧. ಪು. ೩೭೧ →

ವಡ್ಡಾರಾಧನೆಯ ಮೂಲ ಮತ್ತು ಕರ್ತೃ: ಪ್ರಾಚೀನ ಕವಿ ಮತ್ತು ಕೃತಿಗಳನ್ನು ನೆನೆಯುವ ಕನ್ನಡ ಕಾವ್ಯಗಳು, ವಡ್ಡಾರಾಧನೆ ಮತ್ತು ಅದರ ಕರ್ತೃ ವಿಷಯವಾಗಿ ಮೌನತಾಳಿವೆ. ಹೀಗಾಗಿ ಈ ವರೆಗೆ ದೊರೆತ ಕೆಳಗಣ ಹಸ್ತಪ್ರತಿಗಳ ಅಂತ್ಯ ಪ್ರಶಸ್ತಿಯನ್ನು ಮೊರೆಹೋಗಬೇಕಾಗಿದೆ.

→ iv) ರೇವಾಕೋಟ್ಯಾಚಾರ್ಯ-ಸಾ.ಪ. ೧೬-೩ (೧೯೩೧) ಡಿ.ಎಲ್.ಎನ್.

v) ವೊಡ್ಡಾರಾಧನೆ:ಅರಿಕೆ-ಸಾ.ಪ. ೨೪-೪ (೧೯೩೯)"

vi) ವಡ್ಡಾರಾಧನೆ:ಅರಿಕೆ ೨-ಸಾ.ಪ. ೨೫-೨ (೧೯೪೦)"

vii) (೨ನೆಯ ಕಥೆ ಪ್ರಕಟನೆ)-ಸಾ. ಪ. ೨೫-೩
(೩,೪,೫ನೆಯ ಕಥೆಗಳು) -"೨೫-೪
(೬ನೆಯ ಕಥೆ)-"೨೬-೧
(೭,೮,೯,೧೦ನೆಯ ಕಥೆಗಳು)-"೨೬-೨
(೧೧,೧೨,೧೩,೧೪ನೆಯ ಕಥೆಯ ೧ ಪುಟ) - "೨೭-೧
(೧೪ನೆಯ ಕಥೆ)-"೨೭-೨
(೧೫ನೆಯ ಕಥೆ)- "೨೮-೧
(೧೬,೧೭,೧೮,೧೯ನೆಯ ಕಥೆಗಳು)-"೨೮-೨ ಮತ್ತು ೩
(೧ನೆಯ ಕಥೆಯ ಮರುಪರಿಷ್ಕರಣ)-"೩೨-೩ ಮತ್ತು ೪

viii) ಕನ್ನಡಸಾಹಿತ್ಯದ ಪ್ರಾಚೀನತೆ (ಮೂರು ಉಪನ್ಯಾಸಗಳು)-ಪೈ. ೧೯೪೦

ix) ವಡ್ಡಾರಾಧನೆಯೆಂಬ ಹಳಗನ್ನಡ ಗದ್ಯಗ್ರಂಥ (ಮೂಲ: ಎ.ಎನ್. ಉಪಾಧ್ಯೆ: ಅನು:ಡಿ. ಎಲ್.ಎನ್.)ಪ್ರ.ಕ. ೨೪-೨, ೧೯೪೨

x) The Vaddaradhana in old Kannada Prose (ಹರಿಷೇಣನ ಬೃಹತ್ಕಥಾ ಕೋಶದ ಮುನ್ನುಡಿ.)- A.N. Upadhye. 1943

xi) ಆರಾಧನಾ ಮತ್ತು ಅದರ ಟೀಕೆಗಳು-'ಪ್ರ.ಕ. ೩೯-೧(೧೯೫೭)ಮೂಲ:ನಾಥುರಾಮಪ್ರೇಮಿ.

xii) ವಡ್ಡಾರಾಧನೆಯ ದೇಶಿ (ಜ್ಞಾನೋಪಾಸಕ)-ಟಿ.ವ್ಹಿ. ವೆಂಕಟಾಚಲಶಾಸ್ತ್ರಿ. ೧೯೬೦

xiii) Pronous in Vaddaradhane- Indian Linguistics xvi (G.S. Gai)

xiv) Life as dipicted in Vaddaradhane- S.S. Malwad. All India Oriental Conference. Lucknow 1951 P. 188-189

xv) ವಡ್ಡಾರಾಧನೆಯ ವೈಶಿಷ್ಟ್ಯ-ಹಂಪ ನಾಗರಾಜಯ್ಯ (ಸನ್ಮತಿ, ೮-೧೧, ೧೨)

xvi) ವಡ್ಡಾರಾಧನೆಯ ವೈಶಿಷ್ಟ್ಯಗಳು-ಕೆ. ಕುಶಾಲಪ್ಪಗೌಡ ಪ್ರ.ಕ. ೪೮-೨

xvii) ವಡ್ಡಾರಾಧನೆಕಾರನ ಕಾಲ, ದೇಶ-(ಉಪಾಯನ) ಕೆ.ಜಿ. ಕುಂದಣಗಾರ.

xviii) ಕನ್ನಡಸಾಹಿತ್ಯ ಚರಿತ್ರೆ (ರಂ. ಶ್ರೀ ಮುಗಳಿ); ಸಂ. ಕನ್ನಡಸಾಹಿತ್ಯ ಚರಿತ್ರೆ (ಎಂ. ಮರಿಯಪ್ಪಭಟ್ಟ); ಜನಪ್ರಿಯ ಕನ್ನಡಸಾಹಿತ್ಯ ಚರಿತ್ರೆ(ತ.ಸು. ಶಾಮರಾಯ)

xix) ಜೈನರ ಕಥೆಗಳು-ಜಿ.ಪಿ. ರಾಜರತ್ನಂ (ಸುಧಾಪತ್ರಿಕೆ)

ಕೃತಿಗಳು:

1. ವಡ್ಡಾರಾಧನೆಯ ಕತೆಗಳು-ಬಿ. ಶಂಕರಭಟ್ಟ ಮತ್ತು ಬಿ. ಮಹಾಬಲೇಶ್ವರ ಶರ್ಮ (೧೪ ಕತೆಗಳು ಮಾತ್ರ)೧೯೪೩
2. ವಡ್ಡಾರಾಧನೆಯ ಕತೆಗಳು-ಬಿ. ಶಂಕರಭಟ್ಟ (೧೯ ಕತೆಗಳು)೧೯೫೮
3. ವಡ್ಡಾರಾಧನೆಯ ಕತೆಗಳು-ಕೆ. ನಾಗೇಂದ್ರಪ್ಪ (೧೯೬೩)
4. ವಡ್ಡಾರಾಧನೆ-ಹಂಪ ನಾಗರಾಜಯ್ಯ (೧೯೬೮)
5. ವಡ್ಡಾರಾಧನೆ(ಮಹಾಪ್ರಬಂಧ -ಡಾ. ಕಡಬಡಿ (೧೯೬೯) ಅಪ್ರಕಟಿತ)

೧. ಈ ಪೇೞ್ದ ಪತ್ತೊಂಭತ್ತು ಕಥೆಗೆ xxxಕೋಟ್ಯಾಚಾರ್ಯರ್ ಪೇೞ್ದಾರ್. ವೊಡ್ಡಾರಾಧಣಂ ಸಂಪೂರ್ಣ್ಣಂ-'ಕ' ಓಲೆಯ ಪ್ರತಿ (O.R.I. Mysore)

೨. ಈ ಪೇೞ್ದ ಪತ್ತೊಂಭತ್ತು ಕಥೆಗಳ್ ಶಿವಕೋಟಾಚಾರ್ಯರ್ ಪೇೞ್ದ ವೊಡ್ಡಾರಾಧನೆಯ ಕವಚವು ಮಂಗಳಂ ಮಹಾಶ್ರೀ- 'ಖ' ಓಲೆಯ ಪ್ರತಿ (ಮೂಡಬಿದರೆ)

೩. ಈ ಪೇೞ್ದ ಪತ್ತೊಂಭತ್ತು ಕಥೆಗಳು ಶಿವಕೋಟ್ಯಾಚಾರ್ಯರು ಪೇೞ್ದಾ ವೊಡ್ಡಾರಾದಣಂ ಸಂಪೂರ್ಣ್ಣಂ -'ಗ' ಕಾಗದ ಪ್ರತಿ (ಸರಾಫ ಪದ್ಮರಾಜಯ್ಯ, ಸಾಲಿಗ್ರಾಮ)

೪. ಈ ಪೇೞ್ದ ಪತ್ತೊಂಭತ್ತು ಕಥೆಯಂ ಶಿವಕೋಟ್ಯಾಚಾರ್ಯರ್ಪ್ಪೇಳ್ದ ವಡ್ಡಾರಾಧನೆಯ ಕವಚವೆಂಬಧಿಕಾರವು -'ಘ' ಓಲೆಯ ಪ್ರತಿ (ಸರಾಫ ಪದ್ಮರಾಜಯ್ಯ, ಸಾಲಿಗ್ರಾಮ)

೫. ಚ

೬. ಛ

ಈ ಎರಡೂ ಓಲೆಪ್ರತಿಗಳು ಅಪೂರ್ಣವಾಗಿದ್ದು ಅಂತ್ಯಪ್ರಶಸ್ತಿಯಿಲ್ಲ.

೭. ಯೀ ಪೇಳ್ದ ಪತ್ತೊಂಭತ್ತು ಕಥೆಯ ದೇವಾಕೋಟ್ಯಾಚಾರ್ಯರ್ಪೇಳ್ದ ವಡ್ಡಾರಾಧನೆಯ ಕವಚಮೆಂಬದಿಕಾರವು - 'ಜ' ಓಲೆಯ ಪ್ರತಿ (ಕೊಲ್ಲಾಪುರ)

ಇವುಗಳಲ್ಲಿ[೩೨೦] ೧,೩ ಒಂದು ಗುಂಪು; ೨,೪,೭ ಇನ್ನೊಂದು ಗುಂಪು. ಮೊದಲನೆಯ ಗುಂಪಿನ ಪ್ರತಿಗಳಿಂದ ಸಿದ್ಧವಾಗುವ "ಈ ಪೇೞ್ದ ಪತ್ತೊಂಬತ್ತು ಕಥೆಗಳು(೪ಂ) ಶಿವಕೋಟ್ಯಾಚಾರ್ಯರ್ ಪೇೞ್ದಾರ್, ವಡ್ಡಾರಾಧನಂ ಸಂಪೂರ್ಣಂ" ಎಂಬ ಪ್ರಶಸ್ತಿಯನ್ನಾಧರಿಸಿ ಕೃತಿನಾಮ ವಡ್ಡಾರಾಧನೆ. ಕರ್ತೃ ಶಿವಕೋಟ್ಯಾಚಾರ್ಯನೆಂದು ಡಿ.ಎಲ್.ಎನ್. ಹೇಳಿದುದು ಈಗ ಏನೋ ನೆಲೆಯೂರಿ ನಿಂತಿದೆ. ಆದರೆ ಈ ಶಿವಕೋಟಿಯು ತೀರ ಪ್ರಾಚೀನನಾದ ಸಮಂತಭದ್ರನ ಶಿಷ್ಯನಲ್ಲ. ಇನ್ನೊಬ್ಬ ಆರ್ವಾಚೀನ ವ್ಯಕ್ತಿಯಾಗಿರಬೇಕೆಂಬ ಅವರ ಅಭಿಪ್ರಾಯ ಇನ್ನೂ ಸ್ಥಿರಗೊಂಡಿಲ್ಲ.[೩೨೧]

ಎರಡನೆಯ ಗುಂಪಿನ ಪ್ರತಿಗಳಿಂದ "ಈ ಪೇೞ್ದ ಪತ್ತೊಂಬತ್ತು ಕತೆಗಳ್ ಶಿವಕೋಟ್ಯಾಚಾರ್ಯರ್ ಪೇೞ್ದ ವಡ್ಡಾರಾಧನೆಯ ಕವಚವೆಂಬಧಿಕಾರವು" ಎಂಬ ಪಾಠ ಸಿದ್ಧವಾಗುತ್ತದೆ. ಇದರಿಂದ 'ಈ ಹತ್ತೊಂಬತ್ತು ಕಥೆಗಳು, ಶಿವಕೋಟ್ಯಾಚಾರ್ಯರು ರಚಿಸಿದ ವಡ್ಡಾರಾಧನೆ ಗ್ರಂಥದ ಕವಚವೆಂಬ ಅಧಿಕಾರಕ್ಕೆ ಬರೆದುವು' ಎಂಬ ಅರ್ಥ ಹೊರಡಲು ಅವಕಾಶವಿದೆ. ಆದುದರಿಂದ ವಡ್ಡಾರಾಧನೆಯೆಂಬುದು ಕನ್ನಡಕೃತಿಯ ಹೆಸರಲ್ಲ, ಶಿವಕೋಟ್ಯಾಚಾರ್ಯನೆಂಬವನು ಇದರ ಕರ್ತೃವಲ್ಲವೆನ್ನುತ್ತ, ಇಲ್ಲಿ ಉಲ್ಲಿಖಿತವಾದ ವಡ್ಡಾರಾಧನೆಯೆಂದರೆ ಎಲ್ಲ ಆರಾಧನೆಗಳಿಗಿಂತ ದೊಡ್ಡದಾಗಿರುವ ಶೌರಸೇನೀಪ್ರಾಕೃತ ಭಾಷೆಯ ಭಗವತೀ ಆರಾಧನೆಯೆಂದೂ,

---

→ **ಪರಿಷ್ಕರಣಗಳು:**

1. ಸಾಹಿತ್ಯ ಪರಿಷತ್ಪತ್ರಿಕೆಗಳು-೧೯೩೧ ರಿಂದ ೧೯೪೩ ರವರೆಗೆ
2. ಸಾಹಿತ್ಯ ಪರಿಷತ್ತು ಪ್ರಕಟನೆ-೧೯೪೯
3. ಶಾರದಾ ಮಂದಿರ ಪ್ರಕಟನೆ-೧೯೫೫
4. ಶಾರದಾ ಮಂದಿರ ಪ್ರಕಟನೆ-೧೯೫೯?
5. ಶಾರದಾ ಮಂದಿರ ಪ್ರಕಟನೆ-೧೯೬೫
6. ಶಾರದಾ ಮಂದಿರ ಪ್ರಕಟನೆ-೧೯೭೦

೩೨೦. ಈ ಅಂತ್ಯಪ್ರಶಸ್ತಿಗಳಿಗಾಗಿ ಸಾ.ಪ. ೧೬-೩, ೨೪-೪, ಪ್ರ.ಕ. ೨೪-೨ ಮತ್ತು ಡಿ.ಎಲ್.ಎನ್. ಸಂಪಾದಿತವಡ್ಡಾರಾಧನೆಯ ಅಂತ್ಯಭಾಗಗಳನ್ನು ನೋಡಬೇಕು.

೩೨೧. ಕ.ಸಾ.ಚ. ಪುಟ. ೭೧

ಶಿವಕೋಟ್ಯಾಚಾರ್ಯನೆಂದರೆ ಅದರ ಕರ್ತೃ ಶಿವಾರ್ಯ (ಸಿವಜ್ಜ)ನೆಂದೂ, ಇವನ ೧೯ ಶ್ಲೋಕಗಳಿಗೆ ಯಾವನೋ ಒಬ್ಬ ಕನ್ನಡದಲ್ಲಿ ಕಥೆ ಬಿಡಿಸಿದ್ದಾನೆಂದೂ ಡಾ. ಎ.ಎನ್. ಉಪಾಧ್ಯೆ ಹೇಳುತ್ತಾರೆ.[೩೨೨]

ಈ ಉಭಯ ಅಭಿಪ್ರಾಯಗಳ ಸತ್ಯವನ್ನರಿಯುವುದಕ್ಕೆ ಪೂರ್ವಭಾವಿಯಾಗಿ ಶಿವಾರ್ಯ(ಸಿವಜ್ಜ) ಮತ್ತು ಶಿವಕೋಟ್ಯಾಚಾರ್ಯರ ಹೆಸರಿನಲ್ಲಿ ಕೇಳಿ ಬರುವ ಸಂಗತಿಗಳನ್ನು ಸಂಗ್ರಹಿಸುವುದು ಅತ್ಯವಶ್ಯ.

ಭಗವತೀ ಆರಾಧನೆಯ ಕರ್ತೃ ಶಿವಾರ್ಯ(ಸಿವಜ್ಜ) ತನ್ನ ವಿಷಯವಾಗಿ ಹೇಳಿಕೊಂಡಿರುವ ಸಂಗತಿಗಳು ತೀರ ಅಲ್ಪ. ಆ ಗ್ರಂಥದ ಕೊನೆಯ,

ಅಜ್ಜ ಜಿಣಣಂದಿಗಣಿ ಸವ್ವಗುತ್ತಗಣಿ ಅಜ್ಜ ಮಿತ್ತನಂದೀಣಂ।
ಅವಗಮಿಯ ಪಾದಮೂಲೇ ಸಮ್ಮಂ ಸುತ್ತಂ ಚ ಅತ್ಥಂ ಚ ॥೨೧೬೧॥

ಪುವ್ವಾಯರಿಯಣಿವದ್ಧಾ ಉಪಜೀವಿತ್ತಾ ಇಮಾಸ ಸತ್ತೀ ಏ।
ಆರಾಹಣಾ ಸಿವಜ್ಜೇಣ ಪಾಣಿದಲಭೋಇಣಾ ರಇಧಾ ॥೨೧೬೨॥

ಆರಾಹಣಾ ಬಗವದೀ ಏವಂ ಭಕ್ತೀ ಏ ವಣ್ಣಿದಾ ಸಂತೀ।
ಸಂಘುಸ್ಸ ಸಿವಜ್ಜಸ್ಸಯ ಸಮಾಧಿವರಮುತ್ತಮುಂ ದೇ ಉ ॥೨೧೬೪॥

ಎಂಬ ಗಾಹೆಗಳಿಂದ (ಆರ್ಯ)ಜಿನನಂದಿಗಣಿ, ಸರ್ವಗುಪ್ತಗಣಿ, (ಆರ್ಯ)ಮಿತ್ರನಂದಿಗಳ ಸನ್ನಿಧಿಯಲ್ಲಿ ಪಾಣಿತಲಭೋಜಿಯಾದ ಶಿವಾರ್ಯ(ಸಿವಜ್ಜ)ನು (ಭಗವತೀ) ಆರಾಧನೆಯನ್ನು ರಚಿಸಿದನೆಂದು ತಿಳಿದು ಬರುತ್ತದೆ.

ಇನ್ನು ಶಿವಕೋಟ್ಯಾಟಾರ್ಯನೆಂಬುವನು ಸಮಂತಭದ್ರನ ಶಿಷ್ಯ. ಭಸ್ಮಕವ್ಯಾಧಿಪೀಡಿತನಾದ ಸಮಂತಭದ್ರನು ಕಾಂಚಿಗೆ ಹೋಗಿ, ಅಲ್ಲಿ ಶಿವಕೋಟಿ ಮಹಾರಾಜನು ಭೀಮೇಶ್ವರಲಿಂಗಕ್ಕೆ ಪ್ರತಿನಿತ್ಯ ಅರ್ಪಿಸುತ್ತಿದ್ದ ೧೨ ಖಂಡುಗ ಅನ್ನವನ್ನುಂಡು, ತನ್ನ ಮಹಿಮೆಯಿಂದ ಆ ಶಿವಲಿಂಗವನ್ನು ಚಂದ್ರಪ್ರಭಜಿನನನ್ನಾಗಿಸಿದನು. ಇದಕ್ಕೆ ಬೆರಗಾಗಿ ಶಿವಕೋಟಿ ಮಹಾರಾಜನು, ತಮ್ಮನಾದ ಶಿವಾಯನನೊಂದಿಗೆ ಸಮಂತಭದ್ರನಿಂದ ಜಿನಧರ್ಮದೀಕ್ಷೆಯನ್ನು ಪಡೆದನು. ಈ ಕಥೆಯನ್ನು ದೇವಚಂದ್ರನ ರಾಜಾವಳೀ ಕಥೆ [೩೨೩] ಮತ್ತು ಶ್ರವಣಬೆಳ್ಗೊಳದ ೬೭ನೆಯ ಶಾಸನಗಳೂ,[೩೨೪] ಈ ಕಥೆಯಿಂದ ವ್ಯಕ್ತವಾಗುವ ಸಮಂತಭದ್ರ-ಶಿವಕೋಟ್ಯಾಚಾರ್ಯರ ಗುರುಶಿಷ್ಯ ಸಂಬಂಧವನ್ನು ಹಸ್ತಿಮಲ್ಲನ ವಿಕ್ರಾಂತಕೌರವ ನಾಟಕ,[೩೨೫] ಬ್ರಹ್ಮಸೂರಿಯ ಪ್ರತಿಷ್ಠಾತಿಲಕ,[೩೨೬] ಗುಣವರ್ಮನ ಪುಷ್ಪದಂತ ಪುರಾಣ[೩೨೭] ಮತ್ತು ಶ್ರವಣಬೆಳ್ಗೊಳದ

೩೨೨. ವಡ್ಡಾರಾಧನೆಯೆಂಬ ಹಳಗನ್ನಡ ಗದ್ಯಗ್ರಂಥ (ಪ್ರ.ಕ. ೨೪-೨)

೩೨೩. ಕ.ಕ.ಚ. ಪು. ೩

೩೨೪. E.C. II.ನಂ. ೬೭

೩೨೫. Br. K. (Introduction, P. 53, ಅ.ಟಿ.)

೩೨೬. ಪ್ರತಿಷ್ಠಾತಿಲಕ (ಪ್ರಶಸ್ತಿ ಸಂಗ್ರಹ-ಕೆ. ಭುಜಬಲಿಶಾಸ್ತ್ರಿ. ಪು. ೧೬೨)
"ಸ್ವಾಮೀ ಸಮಂತಭದ್ರೋऽಭೂದ್ದೇವಾಗಮನಿದೇಶಕಃ।
ಶಿಷ್ಯೌ ತದೀಯೌ ಶಿವಕೋಟಿನಾಮಾ ಶಿವಾಯನಃ......॥"

೩೨೭. ಬಿತ್ತರಮಾಗೆ ಸೂತ್ರಗತಿಯಿಂ ಮಿಗೆ ಪಣ್ಣಿದ ಗಂಧಹಸ್ತಿ ತೊಂ।
ಬತ್ತಱುಸಾಸಿರಕ್ಕೆ ಶಿವಕೋಟಿಯ ಕೋಟಿ ವಿಪಕ್ಷವಿದ್ವದು॥
ನೃತ್ತಗಜಂ ಮುದಂಬಱಿತು ಕೆಯ್ಯೆಡೆಗೊಟ್ಟುದೆನಲ್ಕೆ ಪೇೞ್ದುದೇಂ।
ಮತ್ತೆ ಸಮಂತಭದ್ರಮುನಿರಾಜನುದಾತ್ತ ಜಯಪ್ರಶಸ್ತಿಯಂ॥(ಕ.ಕ.ಚ. ೩೬೦ ಅ.ಟಿ.)

೧೦೫ನೆಯ ಶಾಸನ[೩೨೮] ಹುಮ್ಮಚಶಾಸನ[೩೨೯]ಗಳೂ ಹೇಳುತ್ತವೆ. ಈ ಶಿವಕೋಟಿಯ ಹೆಸರಿನಲ್ಲಿ ದೇವಚಂದ್ರನು 'ರತ್ನಮಾಲಾದ್ಯನೇಕಶಾಸ್ತ್ರ'ಗಳನ್ನು[೩೩೦] ಶ್ರವಣಬೆಳ್ಗೊಳದ ೧೦೫ನೆಯ ಶಾಸನವು 'ತತ್ವಾರ್ಥಸೂತ್ರ ಟೀಕೆ'ಯನ್ನು[೩೩೧] ಸೂಚಿಸಿದರೆ, ಪ್ರಭಾಚಂದ್ರನು ಮೇಲಣ ಕಥೆಯನ್ನು ವಿವರಿಸುತ್ತ ಶಿವಕೋಟ್ಯಾಚಾರ್ಯನು ಆರಾಧನೆಯನ್ನು ಬರೆದನೆಂದು ಹೇಳುತ್ತಾನೆ.[೩೩೨]

ಈ ವರೆಗೆ ವಿವೇಚಿಸಿದ ಉಭಯ ವ್ಯಕ್ತಿ (ಸಿವಜ್ಜ,ಶಿವಕೋಟ್ಯಾಚಾರ್ಯ)ಗಳಲ್ಲಿ ಒಬ್ಬನು ಜಿನನಂದಿಗಣಿ, ಸರ್ವಗುಪ್ತಗಣಿ ಮತ್ತು ಮಿತ್ರನಂದಿಗಳ ಶಿಷ್ಯ; ಇನ್ನೊಬ್ಬನು ಸಮಂತಭದ್ರನ ಶಿಷ್ಯ. ಸಿವಜ್ಜನು ತನ್ನನ್ನು ಎಲ್ಲಿಯೂ ಶಿವಕೋಟ್ಯಾಚಾರ್ಯನೆಂದು ಹೇಳಿಕೊಂಡಿಲ್ಲ. ಸಮಂತಭದ್ರನ ಶಿಷ್ಯ ಶಿವಕೋಟ್ಯಾಚಾರ್ಯನನ್ನು ಯಾರೂ ಸಿವಜ್ಜನೆಂದು ಕರೆದಿಲ್ಲ. ಸಿವಜ್ಜನು ಕರ್ನಾಟಕಕ್ಕೆ ಸಂಬಂಧಿಸಿದವನೆನ್ನಲು ಆಧಾರಗಳಿಲ್ಲ.[೩೩೩] ಕನ್ನಡಿಗರಿಂದಲೇ ವಿಶೇಷ ಹೊಗಳಲ್ಪಟ್ಟ ಶಿವಕೋಟ್ಯಾಚಾರ್ಯನು ಮಾತ್ರ ಕರ್ನಾಟಕಕ್ಕೆ ಸಂಬಂಧಿಸಿರಬಹುದು. ಹೀಗಾಗಿ ಇಬ್ಬರೂ ಬೇರೆ ಬೇರೆ ಎಂಬುದು ಖಚಿತ.

ಡಾ. ಎ.ಎನ್. ಉಪಾಧ್ಯೆಯವರು ಇಬ್ಬರೂ ಬೇರೆ ಬೇರೆ ಎಂದು ಒಪ್ಪುವರಾದರೂ ಭಗವತೀ ಆರಾಧನೆಯ ಕೆಲವು ಟೀಕಾಕಾರರು ಸಿವಜ್ಜನ ಇನ್ನೊಂದು ಹೆಸರು ಶಿವಕೋಟ್ಯಾಚಾರ್ಯನೆಂದು ಹೇಳಿದುದನ್ನು ನಂಬಿ, ಪ್ರಭಾಚಂದ್ರನು ನಾಮಸಾಮ್ಯಕ್ಕೆ ಮೋಸಹೋಗಿ ಜಿನನಂದಿಗಣಿಯ ಶಿಷ್ಯ ಸಿವಜ್ಜನ ಆರಾಧನೆಯನ್ನು ಸಮಂತಭದ್ರನ ಶಿಷ್ಯ ಶಿವಕೋಟ್ಯಾಚಾರ್ಯನ ತಲೆಗೆ ಕಟ್ಟಿರುವನೆಂದು ಹೇಳುತ್ತಾರೆ. ಆದರೆ ಸಿವಜ್ಜನು ತನ್ನನ್ನು ಶಿವಕೋಟ್ಯಾಚಾರ್ಯನೆಂದು ಎಲ್ಲಿಯೂ ಕರೆದುಕೊಂಡಿಲ್ಲ.[೩೩೪] ಭಗವತೀ ಆರಾಧನೆಯ ಪ್ರಾಚೀನಟೀಕಾಕಾರರಾದ ಅಪರಾಜಿತಾದಿಗಳು ಸಿವಜ್ಜನನ್ನು ಶಿವಾಚಾರ್ಯನೆಂದು ಕರೆದಿದ್ದಾರೆ. ಇತ್ತೀಚಿನ ಟೀಕಾಕಾರರು ಮಾತ್ರ ಶಿವಕೋಟ್ಯಾಚಾರ್ಯನೆಂದು ಕರೆದಿರುವರು.[೩೩೫] ಹೀಗಾಗಿ ಇಲ್ಲಿ ನಾಮಸಾಮ್ಯಕ್ಕೆ ಮೋಸಹೋದವನು

---

೩೨೮. E.C. II. No. 254

೩೨೯. "ಸಮನ್ತಭದ್ರಸ್ವಾಮಿಗಳವರ ಶಿಷ್ಯಸನ್ತಾನಂ ಶಿವಕೋಟ್ಯಾಚಾರ್ಯರ್.......।"
E.C. viii.ನಗರ ೩೫ ಹುಮ್ಮಚ

೩೩೦. ಕ.ಕ.ಚ. ಪು. ೩(ಶಿವಕೋಟಿಯ ಹೆಸರಿನಲ್ಲಿ ರತ್ನಮಾಲೆ ಎಂಬ ಗ್ರಂಥ ಸಿಕ್ಕು ಅಚ್ಚಾಗಿದೆ.)

೩೩೧. ಸಮಂತಭದ್ರರ ವಿಷಯ ಹೇಳಿ 'ತಸ್ಯೈವ ಶಿಷ್ಯಃ ಶಿವಕೋಟಿ ಸೂರಿಸ್ತಪೋಲತಾಲಂಬನ ದೇಹಯಷ್ಟಿಃ।
ಸಂಸಾರವಾರಾಕರ ಪೋತಮೇತತ್ತತ್ವಾರ್ಥ ಸೂತ್ರಂ ತದಲಂಚಕಾರ॥
-E.C. II. No. 254 (ತತ್ವಾರ್ಥಮಹಾಶಾಸ್ತ್ರ ವ್ಯಾಖ್ಯಾತೃ ಶೀರ್ಷಿಕೆ ನೋಡಿರಿ)

೩೩೨. "ಏತನ್ಮಹಾಶ್ಚರ್ಯೇ ದೃಷ್ಟ್ವಾ ಶಿವಕೋಟಿ ಮಹಾರಾಜಸ್ಯ ಅನ್ಯೇಷಾಂ ಚ ತತ್ರತ್ಯ ಲೋಕಾನಾಂ ಜೈನ ದರ್ಶನೇ ಮಹತೀ ಶ್ರದ್ಧಾ! ಪರಮ ವಿವೇಕ ಸಂಪನ್ನಃ ಚರಿತ್ರಮೋಹಕ್ಷಯೋಪಶಮ ವಿಶೇಷ ವಶಾಚ್ಚ ಪರಮ ವೈರಾಗ್ಯಸಂಪತ್ತೌರಾಜ್ಯಂ ಪರಿತ್ಯಜ್ಯ ತಪೋಗೃಹಿತ್ವಾ ಸಕಲಶ್ರುತಮವಗಾಹ್ಯ ಲೋಹಾಚಾರ್ಯ ವಿರಚಿತಾಂ ಚತುರಶೀತಿ ಸಹಸ್ರಸಂಖ್ಯಾಮಾರಾಧನಾಂ ಮನ್ದಮತ್ಯಲ್ಪಾಯುಃ ಪ್ರಾಣ್ಯಾಶಯ ವಶಾತ್ ಗ್ರಂಥತಃ ಸಂಕ್ಷಿಪ್ಯ ಅರ್ಥ ತೋಽರ್ಹೇ ಲಿಂಗೇ ಇತ್ಯಾದಿ ಚತ್ವಾರಿಂಶತ್ ಸೂತ್ರೈಃ ಪರಿಪೂರ್ಣಾಮರ್ಧ ತೃತೀಯ ಸಹಸ್ರ ಸಂಖ್ಯಾಂ ಮೂಲಾರಾಧನಾಂ ಕೃತವಾನಿತಿ" (Br. K. Introduction P. 53 ಅ.ಟಿ.)

೩೩೩. "He seems to have belonged to the North, probably Mathura, and to have resided for some time in Western Sindh" (JSHAI. P. 130) ಎಂದು ಜ್ಯೋತಿಪ್ರಸಾದ ಜೈನ ಅವರ ಮತ.

೩೩೪. ಕರ್ತೃ ಹೆಸರನ್ನು ಹೇಳುವ (ಭಗವತಿ) ಆರಾಧನೆಯ ಶ್ಲೋಕ ೨೧೬೬ ಮತ್ತು ೨೧೬೮ರಲ್ಲಿ ಸಿವಜ್ಜನೆಂದೇ ಬಂದಿದೆ.

೩೩೫. "ಆರಾಧನಾ ಸಿವಜ್ಜೇಣ ಪಾಣಿದಲಭೋಇಣಾ ರಇದಾ" ಎಂಬ (ಭಗವತೀ) ಆರಾಧನೆಯ (೨೧೬೬) ವಾಕ್ಯದ 'ಸಿವಜ್ಜೇಣ' ಎಂಬುದಕ್ಕೆ ಪ್ರಾಚೀನನಾದ ಅಪರಾಜಿತನು 'ಶಿವಾಚಾರ್ಯೇಣ' ಎಂದು, ಅರ್ವಾಚೀನನಾದ ಆಶಾಧರನು 'ಶಿವಕೋಟ್ಯಾಚಾರ್ಯೇಣ' ಎಂದು ಟೀಕಿಸಿದುದನ್ನು ಗಮನಿಸಬೇಕು. ಶ್ಲೋಕ ೨೧೬೮ರಲ್ಲಿಯ 'ಸಿವಜ್ಜಸ್ಯ' ಎಂಬುದನ್ನು ಅಪರಾಜಿತನು 'ಶಿವಾಚಾರ್ಯಸ್ಯ' ಎಂದು ಟೀಕಿಸಿದುದನ್ನೂ ಲಕ್ಷಿಸಬೇಕು.

ಪ್ರಭಾಚಂದ್ರನಲ್ಲ, ಇತ್ತೀಚಿನ ಟೀಕಾಕಾರರೆಂದು ನಮ್ಮ ಮತ. ಅದಕ್ಕಾಗಿ ಪ್ರಭಾಚಂದ್ರ, ಶ್ರೀಚಂದ್ರ[೩೩೬] ಹೇಳುವ ಶಿವಕೋಟ್ಯಾಚಾರ್ಯಕೃತ ಮೂಲಾರಾಧನೆಯಿಂದ ಸಿವಜ್ಜಕೃತ ಭಗವತೀ ಆರಾಧನೆಯು ಬೇರೆಯೆಂದು ಹೇಳಲು ಬರುವಂತಿದ್ದು, ಅದನ್ನು ಕೆಳಗಣ ವಿವೇಚನೆಯಿಂದ ಖಚಿಪಡಿಸಿಕೊಳ್ಳಬಹುದು.

ಏಕಾಂಗಧರರಲ್ಲಿ ಕೊನೆಯವನಾದ ಲೋಹಾಚಾರ್ಯನ ೮೪೦೦೦ ಶ್ಲೋಕಗಳ ಆರಾಧನೆಯನ್ನು ಸಮಂತಭದ್ರರ ಶಿಷ್ಯ ಶಿವಕೋಟ್ಯಾಚಾರ್ಯನು ೨೫೦೦ ಶ್ಲೋಕಗಳಲ್ಲಿ ಸಂಗ್ರಹಿಸಿರುವನೆಂದು ಪ್ರಭಾಚಂದ್ರನ ಹೇಳಿಕೆ.[೩೩೭] ಆದರೆ ಸಿವಜ್ಜನ ಭಗವತೀಆರಾಧನೆಯಲ್ಲಿಯ ಗಾಹೆಗಳ ಸಂಖ್ಯೆ ೨೧೬೬(ಅಥವಾ ೨೧೭೦). ಶ್ರೀಚಂದ್ರನು ಶಿವಕೋಟಿಮುನಿಯ ಕೃತಿಯನ್ನು ಕಥಾಕೋಶವೆನ್ನುವನು[೩೩೮] ಭಗವತೀಆರಾಧನೆಯು ಕಥಾಕೋಶವಲ್ಲ. ಪ್ರಭಾಚಂದ್ರ, ಶ್ರೀಚಂದ್ರರು ಶಿವಕೋಟಿಯ ಕೃತಿಯನ್ನು 'ಮೂಲಾರಾಧನೆ' ಎಂದು ಹೆಸರಿಸಿರುವರು; ಸಿವಜ್ಜನು ತನ್ನ ಕೃತಿಯನ್ನು ಆರಾಧನಾ ಮತ್ತು ಭಗವತೀ ಆರಾಧನಾ ಎಂದು ಮಾತ್ರ ಕರೆದಿರುವನು. ಶಿವಕೋಟ್ಯಾಚಾರ್ಯನ ಕೃತಿಯಲ್ಲಿ ಅರ್ಹ, ಲಿಂಗ ಇತ್ಯಾದಿ ೪೦ ವಿಷಯ (Forty topics) ಗಳನ್ನು ಕಲ್ಪಿಸಲಾಗಿದೆಯೆಂದು ಪ್ರಭಾಚಂದ್ರನ ಹೇಳಿಕೆ, ಸಿವಜ್ಜನ ಗ್ರಂಥ ಹೀಗೆ ಅಧಿಕಾರಗಳಾಗಿ ವಿಭಾಗಿಸಲ್ಪಟ್ಟಿಲ್ಲ. ಹೀಗಾಗಿ ಸಿವಜ್ಜನ ಭಗವತೀ ಆರಾಧನೆಯೇ ಬೇರೆ, ಶಿವಕೋಟ್ಯಾಚಾರ್ಯನ ಮೂಲಾರಾಧನೆಯೇ[೩೩೯] ಬೇರೆ ಎಂದೂ, ಇತ್ತೀಚಿನ ಟೀಕಾಕಾರರು ಬಾಯಿತಪ್ಪಿ ಸಿವಜ್ಜನನ್ನು ಶಿವಕೋಟ್ಯಾಚಾರ್ಯನೆಂದು ಕರೆದುದನ್ನು ನಂಬಿ, ಡಾ. ಉಪಾಧ್ಯೆ ಅವರು ಶಿವಕೋಟ್ಯಾಚಾರ್ಯನ ಆರಾಧನೆಯ ವಿಷಯ ಬಂದಲ್ಲೆಲ್ಲ ಸಿವಜ್ಜನ ಆರಾಧನೆಯೆಂದು ಭಾವಿಸುತ್ತ ಹೋಗಿರುವರೆಂದೂ ಹೇಳಬಹುದು.

ಹೀಗೆ ಸಿವಜ್ಜನಿಂದ ಭಿನ್ನನಾದ ಶಿವಕೋಟ್ಯಾಚಾರ್ಯನೂ ಒಂದು ಆರಾಧನೆಯನ್ನು ಬರೆದಿರುವನೆಂದು ಖಚಿತವಾದ ಮೇಲೆ, ಕನ್ನಡಕೃತಿಯ ಕೊನೆಗೆ ಉಲ್ಲಿಖಿತನಾದವನು ಭಗವತೀ ಆರಾಧನೆಯ ಸಿವಜ್ಜನಲ್ಲ, ಮೂಲಾರಾಧನೆಯ ಶಿವಕೋಟ್ಯಾಚಾರ್ಯನೆಂದು ಸಹಜ ಒಪ್ಪಬೇಕಾಗುತ್ತದೆ. ಹಾಗಾದರೆ ಈತನ ಮೂಲಾರಾಧನೆಗೆ 'ವಡ್ಡಾರಾಧನೆ' ಎಂಬ ಹೆಸರಿದ್ದಿತೇ? ಎಂಬ ಪ್ರಶ್ನೆಯೊಂದು ಎದುರು ನಿಲ್ಲುತ್ತದೆ. ಎಲ್ಲ ಆರಾಧನಾ ಗ್ರಂಥಗಳಿಗಿಂತ ದೊಡ್ಡದು ಎಂಬ ಅರ್ಥದಲ್ಲಿ, ೨೧೭೦ ಗಾಹೆಗಳಿರುವ ಸಿವಜ್ಜಕೃತ ಭಗವತೀ ಆರಾಧನೆಯನ್ನು ಪ್ರಾಚೀನ ಜನತೆ 'ವಡ್ಡಾರಾಧನೆ' ಎಂದು ಕರೆಯುತ್ತಿರಬೇಕು ಎಂದು ಡಾ. ಉಪಾಧ್ಯೆ ಹೇಳುವರಷ್ಟೇ. ಆದರೆ

---

೩೩೬. Br. K. (Introduction P. 59)

೩೩೭. ಪಾಂಚಸಂಗ್ರಹದ ಪ್ರಾಕೃತ ಟೀಕೆಯಲ್ಲಿಯೂ ಈ ಲೋಹಾಚಾರ್ಯನ ಆರಾಧನೆಯ ಉಲ್ಲೇಖವಿದೆ.(Lohacvharya's Aradhana: A missing work- A.N. Upadhye. J.A. xxii-i). (ಈ ಲೋಹಾಚಾರ್ಯನು ಷಟ್ಖಂಡಾಗಮದ ಪುಷ್ಪದಂತ ಮತ್ತು ಭೂತಬಲಿ ಮತ್ತು ಕಷಾಯಪಾಹುಡದ ಗುಣಧರನಿಗಿಂತ ಪ್ರಾಚೀನನೆಂದು ತಿಳಿದುಬರುತ್ತದೆ- ಅಭಿವಂದನೆ ಪು. ೫೬೩)

೩೩೮. Br. K. (Introduction. P. 59)

೩೩೯. ಜಿನಸೇನಾಚಾರ್ಯ ಮಹಾಪುರಾಣದ-

ಶ್ರೀತೀಭೂತಂ ಜಗದ್ಯಸ್ಯ ವಾಚಾsರಾಧ್ಯ ಚತುಷ್ಟಯಂ।
ಮೋಕ್ಷಮಾರ್ಗಂ ಸ ಪಾಯಾನ್ನಃ ಶಿವಕೋಟಿರ್ಮುನೀಶ್ವರಃ॥ (೧-೪೯)

ಎಂಬ ಶ್ಲೋಕದಲ್ಲಿ ಬರುವ ಶಿವಕೋಟಿಮುನೀಶ್ವರನು, ಪಂಡಿತರು ಹೇಳುವಂತೆ ಭಗವತೀಆರಾಧನೆಯ ಸಿವಜ್ಜನಲ್ಲ; ಮೂಲಾರಾಧನೆಯ ಶಿವಕೋಟ್ಯಾಚಾರ್ಯನಾಗಿರಬೇಕು.

ಲೋಹಾಚಾರ್ಯನ ಆರಾಧನೆಯ ಸಂಗ್ರಹ ರೂಪ (೨೫೦೦ ಶ್ಲೋಕ)ವಾಗಿದ್ದರೂ ಆ ಕಾಲದ ಎಲ್ಲ ಆರಾಧನೆಗಳಿಗಿಂತ (೨೧೭೦ ಗಾಹೆಗಳನ್ನೊಳಗೊಂಡ ಭಗವತೀಆರಾಧನೆಗಿಂತ) ವಿಸ್ತಾರವಾಗಿದ್ದ ಕಾರಣ ಶಿವಕೋಟ್ಯಾಚಾರ್ಯನ ಅನುಪಲಬ್ಧ ಮೂಲಾರಾಧನೆಯನ್ನೇ ಆ ಕಾಲದ ಜನತೆ ವಡ್ಡಾರಾಧನೆಯೆಂದು ಕರೆಯುತ್ತಿರಬೇಕು. ಅದಕ್ಕಾಗಿ ಶಿವಕೋಟ್ಯಾಚಾರ್ಯನ ಮೂಲಾರಾಧನೆಯ ಇನ್ನೊಂದು ಹೆಸರು ವಡ್ಡಾರಾಧನೆ ಎನ್ನಬಹುದು. ಪ್ರಭಾಚಂದ್ರನು ಹೇಳುವಂತೆ ಒಂದೊಂದು ಅಧಿಕಾರಕ್ಕೆ ಅರ್ಹ, ಲಿಂಗ.... ಎನ್ನುತ್ತ, ಶಿವಕೋಟ್ಯಾಚಚಾರ್ಯನು ೩೫ನೆಯ ಅಧಿಕಾರಕ್ಕೆ 'ಕವಚಾಧಿಕಾರ' ಎಂಬ ಶೀರ್ಷಿಕೆಯನ್ನು ಕೊಟ್ಟಿರಬಹುದು. ಆದುದರಿಂದ ಕನ್ನಡ ವಡ್ಡಾರಾಧನೆಯ 'ಶಿವಕೋಟ್ಯಾಚಾರ್ಯರ್ ಪೇೞ್ದ ವಡ್ಡಾರಾಧನೆಯ ಕವಚವೆಂಬಧಿಕಾರವು' ಎಂಬ ಅಂತ್ಯಗದ್ಯವು ಅಧಿಕಾರಗಳಾಗಿ ವಿಭಜಿಸಿದ ಶಿವಕೋಟಾಚಾರ್ಯನ ಕೃತಿಯನ್ನು ಸೂಚಿಸುವುದೇ ಹೊರತು, ಅಧಿಕಾರಗಳಾಗಿ ವಿಭಜಿಸದ ಸಿವಜ್ಜನ ಕೃತಿಯನ್ನಲ್ಲವೆಂದು ನಮ್ಮ ಭಾವನೆ.

ಒಟ್ಟಿನಲ್ಲಿ ಡಾ. ಎ.ಎನ್. ಉಪಾಧ್ಯೆ ಹೇಳುವಂತೆ ವಡ್ಡಾರಾಧನೆಯು ಕನ್ನಡಕೃತಿಯ ಹೆಸರಲ್ಲ; ಶಿವಕೋಟ್ಯಾಚಾರ್ಯನೆಂಬವನು ಇದರ ಕರ್ತೃವಲ್ಲವೆಂಬುದು ನಿಜ. ಆದರೆ ಈ ಶಿವಕೋಟಿ-ವಡ್ಡಾರಾಧನೆಗಳು ಅವರು ಹೇಳುವಂತೆ ಸಿವಜ್ಜ-ಭಗವತೀ ಆರಾಧನೆಗಳ ಪರ್ಯಾಯನಾಮಗಳಲ್ಲ; ಸಮಂತಭದ್ರನ ಶಿಷ್ಯ ಶಿವಕೋಟಿ ಮತ್ತು ಆತನ ಅನುಪಲಬ್ಧ ಮೂಲಾರಾಧನೆಗಳ ಸೂಚನೆಯೆಂದು ಈ ವರೆಗಣ ವಿವೇಚನೆಯಿಂದ ಸ್ಪಷ್ಟವಾಗುತ್ತದೆ.

ಕನ್ನಡ ವಡ್ಡಾರಾಧನೆಗೆ ಮಾತೃಕೆಯಾಗಿರುವ ಈ ಶಿವಕೋಟ್ಯಾಚಾರ್ಯನ ಕೃತಿ ಈಗ ಉಪಲಬ್ಧವಿಲ್ಲ. ಅಲ್ಲಲ್ಲಿಯ ಹೇಳಿಕೆಗಳ ಆಧಾರದಿಂದ ಇದರ ಸ್ವರೂಪವನ್ನು ಹೀಗೆ ಊಹಿಸಬಹುದು. ಪ್ರಭಾಚಂದ್ರನ ಪ್ರಕಾರ ಇದಕ್ಕೆ ಮಾತೃಕೆ ಲೋಹಾಚಾರ್ಯನ ಆರಾಧನೆ. ಅದು ೨೫೦೦ ಶ್ಲೋಕಗಳ ಒಂದು ಪದ್ಯಕೃತಿ. ಅರ್ಹ, ಲಿಂಗ ಮುಂತಾಗಿ ಅದು ವಿಭಜಿಸಲ್ಪಟ್ಟಿದೆ. ಶ್ರೀಚಂದ್ರನ ಪ್ರಕಾರ ಇದೊಂದು ಕಥಾಕೋಶ. ಪ್ರಭಾಚಂದ್ರ, ಶ್ರೀಚಂದ್ರರ ಹೇಳಿಕೆಯಂತೆ ಇದರ ಹೆಸರು ಮೂಲಾರಾಧನೆ. ಕನ್ನಡಕೃತಿಯು ಹೇಳುವಂತೆ ಇದರ ಇನ್ನೊಂದು ಹೆಸರು ವಡ್ಡಾರಾಧನೆ.

ಶಿವಕೋಟ್ಯಾಚಾರ್ಯನಿಗಿದ್ದಂತೆ, 'ಪೂರ್ವಾಚಾರ್ಯ ನಿಬದ್ಧರಚನೆ'ಗಳ ಆಧಾರದಿಂದ ಭಗವತೀ ಆರಾಧನೆಯನ್ನು ಬರೆದೆನೆನ್ನುವ[೩೪೦] ಸಿವಜ್ಜನಿಗೂ ಲೋಹಾಚಾರ್ಯನೇ ಮೂಲ ಮಾತೃಕೆಯಾಗಿರಬೇಕು. ಈ ಮೂಲವನ್ನವಲಂಬಿಸಿ ಒಬ್ಬನು ರುಚಿಕಟ್ಟಾದ ಕಥಾಕೋಶವನ್ನು, ಇನ್ನೊಬ್ಬನು ಸಾರವತ್ತಾದ ಸಂಗ್ರಹಕೃತಿಯನ್ನು ರೂಪಿಸಲು ನಿರತರಾಗಿರಬೇಕು. ಒಂದು ಕಡೆ ಕಥಾಕೋಶವನ್ನು ಬರೆಯುವ ಯೋಜನೆಯನ್ನು ಹಮ್ಮಿಕೊಂಡ ಶಿವಕೋಟ್ಯಾಚಾರ್ಯನು, ಈ ಮೂಲದಿಂದ ಇದ್ದಕ್ಕಿದ್ದಂತೆ ಎಲ್ಲ ಕಥಾತ್ಮಕ ಗಾಹೆಗಳನ್ನೂ ಅಥವಾ ತನಗೆ ಇಷ್ಟವಾದ ಕೆಲವು ಕಥಾತ್ಮಕ ಗಾಹೆಗಳನ್ನೂ, ಆಗಾಗ ಕಥೆಗಳ ಗರ್ಭವನ್ನು ತುಂಬುವುದಕ್ಕಾಗಿ ಅಲ್ಲಿಯ ಬೇರೆ ಕೆಲವು ಗಾಹೆಗಳನ್ನೂ, ಸಾಲದುದಕ್ಕೆ ಕಥೆಗೆ ಕಳೆ ತುಂಬಲು ಅನ್ಯರ ಶ್ಲೋಕಗಳನ್ನೂ ಆಯ್ದುಕೊಂಡಿರಬಹುದು. ಇನ್ನೊಂದು ಕಡೆ ಈ ಮೂಲವನ್ನು ಸಾರವತ್ತಾಗಿ ಸಂಗ್ರಹಿಸುವ ಯೋಜನೆಯನ್ನು ಹಮ್ಮಿಕೊಂಡ ಸಿವಜ್ಜನು,

---

೩೪೦. ಪುವ್ವಾಯರಿಯಣಿಬದ್ಧಾ ಉಪಜೀವಿತ್ತಾ ಇಮಾ ಸ ಸತ್ತೀ ಏ।
ಆರಾಧಣಾ ಸಿವಜ್ಜೇಣ ಪಾಣಿದಲಭೋಇಣಾ ರಇದಾ॥
ಭಗವತೀಆರಾಧನಾ. ೨೧೬೬

ಅಲ್ಲಿಂದ ಕಥಾತ್ಮಕ ಗಾಹೆಗಳನ್ನು (ಕೊನೆಯಪಕ್ಷ ಬಹುಮುಖ್ಯವಾದ ಕವಚಪ್ರಕರಣದ ಗಾಹೆಗಳನ್ನು) ಇದ್ದಕ್ಕಿದ್ದಂತೆ ಸ್ವೀಕರಿಸಿ ಮಿಕ್ಕಭಾಗವನ್ನು ತಾನೇ ಕಟ್ಟಿದ ಗಾಹೆಗಳಿಂದ ತುಂಬಿರಬೇಕು. ಹೀಗಾಗಿ ಕನ್ನಡ ವಡ್ಡಾರಾಧನೆಯ ಕಥೆಗಳ ತಲೆಯ ಮೇಲಣ ಗಾಹೆಗಳು ಸಿವಜ್ಜನಲ್ಲಿರುವಂತೆ ಶಿವಕೋಟಿಯಲ್ಲಿಯೂ ಇರಬಹುದೆನಿಸುತ್ತದೆ.

ಆರಾಧನಾ ಕಥಾಕೋಶಗಳು ಬೆಳೆದುಬಂದ ಇತಿಹಾಸವನ್ನು ಹೇಳುತ್ತ 'ಜಿನೇಂದ್ರನಿಂದ ಗಣಧರನಿಗೆ, ಗಣಧರನಿಂದ ಶ್ರೇಣಿಕನಿಗೆ ಹೇಳಲ್ಪಟ್ಟ ಕಥಾಕೋಶವು ಪಂಚಮಕಾಲದಲ್ಲಿ ಶಿವಕೋಟಿಮುನೀಂದ್ರನಿಂದ ಕೃತಿರೂಪಕ್ಕಿಳಿಯಿತು ಎನ್ನುತ್ತಾನೆ, ಶ್ರೀಚಂದ್ರ.[೩೪೧] ಇಲ್ಲಿ ಪೌರಾಣಿಕ ವ್ಯಕ್ತಿ ಶ್ರೇಣಿಕನ ತರುವಾಯವೇ ಐತಿಹಾಸಿಕ ವ್ಯಕ್ತಿ ಶಿವಕೋಟಿಮುನೀಂದ್ರನನ್ನು ಹೆಸರಿಸಿರುವುದರಿಂದ (ಲೋಹಾಚಾರ್ಯನ) ಆರಾಧನಾಸೂತ್ರಗಳಿಗೆ ಕಥೆ ಬಿಡಿಸಿದ ಪ್ರಥಮ ವ್ಯಕ್ತಿ, ಮುಂದಣ ಆರಾಧನಾ ಕಥಾಕೋಶಗಳ ಗಂಗೋತ್ರಿ ಈತನೇ ಎನಿಸುತ್ತದೆ. ಅದಕ್ಕಾಗಿ ಶರಣರ ವಚನಗಳಿಗೆ ಶೂನ್ಯಸಂಪಾದನೆಯ ಹೊಳಹುಹಾಕಿ ಮುಂದಣ ಶೂನ್ಯಸಂಪಾದನೆಗಳಿಗೆ ಮಾತೃಶಕ್ತಿಯೆನಿಸಿದ ಪ್ರಸಾದಿಮಹಾದೇವಯ್ಯಗಳಂತೆ ಲೋಹಾಚಾರ್ಯನ ಆರಾಧನಾಸೂತ್ರಗಳಿಗೆ ಕಥೆಯ ಹೊಳಹುಹಾಕಿ ಮುಂದಣ ಆರಾಧನಾಕೋಶಗಳಿಗೆ ಮಾತೃಶಕ್ತಿಯಾಗಿದ್ದಾನೆ, ಈ ಶಿವಕೋಟ್ಯಾಚಾರ್ಯ. ಡಾ. ಎ.ಎನ್. ಉಪಾಧ್ಯೆ ಅವರು ಕನ್ನಡ ವಡ್ಡಾರಾಧನೆಯ ಮೂಲವನ್ನು ಕುರಿತು "ಈ ಮೂಲ ಬಹುಶಃ 'ಭಗವತೀಆರಾಧನಾ' ಎಂಬ ಗ್ರಂಥಕ್ಕೆ ಇದ್ದಿರಬಹುದಾದ ಪ್ರಾಕೃತ ಭಾಷಾನಿಬದ್ಧವಾದ ವ್ಯಾಖ್ಯಾನವಿರ ಬಹುದು" ಎಂದು ನಿರ್ಣಯ ನೀಡಿರುವರು.[೩೪೨] ಇವರು ಹೇಳುವಂತೆ ಕನ್ನಡಕೃತಿಗೆ ಒಂದು ಮೂಲವಿದ್ದುದೇನೋ ನಿಜ. ಆದರೆ ಅದು "ಭಗವತೀ ಆರಾಧನಾ ಗ್ರಂಥಕ್ಕೆ ಇದ್ದಿರಬಹುದಾದ ಪ್ರಾಕೃತ ಭಾಷಾನಿಬದ್ಧ ವ್ಯಾಖ್ಯಾನ"ವಲ್ಲ; ಲೋಹಾರ್ಯನ ಆರಾಧನಾಗ್ರಂಥಕ್ಕೆ ಬರೆದಿರಬಹುದಾದ ಪ್ರಾಕೃತಭಾಷಾನಿಬದ್ಧ ಈ ಕಥಾಕೋಶ. ಅಂದರೆ ಸಮಂತಭದ್ರನ ಶಿಷ್ಯನಾಗಿ ೩-ಆನೆಯ ಶತಮಾನದಲ್ಲಿದ್ದ ಶಿವಕೋಟ್ಯಾಚಾರ್ಯನ ವಡ್ಡಾರಾಧನೆ ಅಥವಾ ಮೂಲಾರಾಧನೆ.

ಸಮಂತಭದ್ರನು ಕರ್ನಾಟಕದವನೆಂಬ ಪ್ರತೀತಿಯೂ ಈತನ ಶಿಷ್ಯ ಶಿವಕೋಟಿಯನ್ನು ಕನ್ನಡಿಗರೇ ವಿಶೇಷ ಉಲ್ಲೇಖಿಸಿದುದೂ ಬೇರೆ ಪ್ರಾಂತದವರು ಇವನ ಕೃತಿಯನ್ನು ಮೂಲಾರಾಧಾನೆಯೆಂದು ಕರೆದರೂ ಕನ್ನಡಿಗರು ಮಾತ್ರ ದಟ್ಟಪರಿಚಯದ ಫಲವೆನ್ನುವಂತೆ 'ವಡ್ಡಾರಾಧನೆ' ಎಂದು ಕರೆದುದೂ ಈ ಶಿವಕೋಟಿಯ ಕರ್ನಾಟಕತ್ವವನ್ನು ದೃಢಪಡಿಸುತ್ತವೆ. ಅದಕ್ಕಾಗಿ ಕನ್ನಡ ವಡ್ಡಾರಾಧನೆ ಹುಟ್ಟುವುದಕ್ಕೆ ಪೂರ್ವಭಾವಿಯಾಗಿ, ಈ ನಾಡಿನೊಳಗೆ ಅಧ್ಯಯನ ಮತ್ತು ಕೃತಿರಚನೆಗಳ ಮೂಲಕ ಶಿವಕೋಟ್ಯಾಚಾರ್ಯ ಮೊದಲಾದವರಿಂದ, ಆರಾಧನಾ ಸಾಹಿತ್ಯದ ಅಡಿಪಾಯ ಸ್ಥಿರಗೊಂಡಿರಬೇಕೆನಿಸುತ್ತದೆ.

ಹಾಗಾದರೆ ಶಿವಕೋಟ್ಯಾಚಾರ್ಯನ ಅನುಪಲಬ್ಧ ಪ್ರಾಕೃತ ವಡ್ಡಾರಾಧನೆಯನ್ನು ಕನ್ನಡಗೊಳಿಸಿದವನು ಯಾರು? ಎಂಬುದು ಈಗ ಬಿಡಿಸಬೇಕಾದ ಪ್ರಶ್ನೆ. ರಾಮಚಂದ್ರಮುನಿ "ಭ್ರಾಜಿಷ್ಣೋರಾರಾಧನಾ ಕರ್ಣಾಟಟೀಕಾಕಥಿತಕ್ರಮೇಣೋಲ್ಲೇಖ ಮಾತ್ರಂ ಕಥಿತೇಯಂ ಕಥಾ ಇತಿ" ಎನ್ನುತ್ತ, ತನ್ನ ಪುಣ್ಯಾಸ್ರವಕಥಾಕೋಶದಲ್ಲಿ ಶ್ರೇಣಿಕನ ಕಥೆಯನ್ನು ಬರೆದಿರುವನು.[೩೪೩] ಇದರಿಂದ ಭ್ರಾಜಿಷ್ಣು ಎಂಬವನು

---

೩೪೧. Br. K. (Introduction P. 59)

೩೪೨. ವಡ್ಡಾರಾಧನೆಯೆಂಬ ಹಳಗನ್ನಡ ಗದ್ಯಗ್ರಂಥ (ಪ್ರ.ಕ. ೨೪-೨)

೩೪೩. ಪುಣ್ಯಾಸ್ರವ ಕಥಾಕೋಶ (ರಾಮಚಂದ್ರಮುನಿ)ಪು. ೬೧

ಶ್ರೇಣಿಕನ ಕಥೆಯನ್ನೊಳಗೊಂಡ 'ಆರಾಧನಾ ಕರ್ಣಾಟಟೀಕಾ' ಎಂಬ ಕನ್ನಡ ಗ್ರಂಥವನ್ನು ಬರೆದಿರುವನೆಂದು ತಿಳಿದುಬರುತ್ತದೆ. "टिकाओं में लिखित लघु लोककथाएँ विशेष महत्वपूर्ण है"[೩೪೪] ಮತ್ತು "टिका साहित्यतो कथा कहानियों का अक्षय भंडार है"[೩೪೫] ಎಂಬ ಮಾತುಗಳು ಟೀಕಾಗ್ರಂಥ ಕಥಾಯುಕ್ತವೂ ಆಗಿರುತ್ತದೆ ಎಂದು ಸಾರುತ್ತವೆ. ಹೀಗಾಗಿ 'ಆರಾಧನಾ ಕರ್ಣಾಟಟೀಕಾ' ಕೃತಿಯು ಕಥಾಯುಕ್ತವೂ ಆಗಿರಬೇಕು. ೧೯ ಕಥೆಗಳು, ಕಥೆಗಳ ಮೇಗಣ ಗಾಹೆಗಳಿಗೆ ಇರುವ ಕನ್ನಡಟೀಕೆ, ಕಥೆಗಳ ಒಡಲಲ್ಲಿ ಅನುವಾದಗೊಳ್ಳದೆ ಉಳಿದ ಪ್ರಾಕೃತಪದ, ವಾಕ್ಯಗಳ ವಿಪುಲ ಅವಶೇಷ-ಇವುಗಳನ್ನು ಗಮನಿಸಿದರೆ ಈಗ ಉಪಲಬ್ಧವಿರುವ ಕನ್ನಡ ವಡ್ಡಾರಾಧನೆಯು ಒಂದರ್ಥದಲ್ಲಿ ಟೀಕಾಕೃತಿಯೆಂದೂ, ರಾಮಚಂದ್ರಮುನಿ ಹೇಳುವ 'ಆರಾಧನಾ ಕರ್ಣಾಟಟೀಕೆ' ಇದೇ ಎಂದೂ ಎನಿಸುತ್ತದೆ. ಈ ಕಾಲಾವಧಿಯಲ್ಲಿ ವಡ್ಡಾರಾಧನೆಯನ್ನು ಬಿಟ್ಟರೆ ಕನ್ನಡದಲ್ಲಿ ಬೇರೆ ಆರಾಧನಾಗ್ರಂಥಗಳಿಲ್ಲದುದೂ[೩೪೬] ಈ ಅಭಿಪ್ರಾಯಕ್ಕೆ ಪುಷ್ಟಿನೀಡುತ್ತದೆ. ಹೀಗಾಗಿ ಈಗ ವಡ್ಡಾರಾಧನೆಯೆಂದು ಕರೆಯಿಸಿಕೊಳ್ಳುವ ಕೃತಿಯ ನಿಜವಾದ ಹೆಸರು 'ಆರಾಧನಾ ಕರ್ಣಾಟಟೀಕಾ' ಎಂದೂ, ಕರ್ತೃ ಭ್ರಾಜಿಷ್ಣು ಎಂದೂ ಹೇಳಬಹುದು. (ಈ ಮಹಾಪ್ರಬಂಧದ ಮೊದಲ ಆವೃತ್ತಿ ಪ್ರಕಟವಾದ ಬಳಿಕ ಒಂದು ಕಥೆಯ ತಲೆಯ ಮೇಲೆ "ಭ್ರಾಜಿಷ್ಣು" ಹೆಸರು ದೊರೆಯಿತು. ನನ್ನ ಊಹೆಗೆ ಒಂದಿಷ್ಟು ಬಲ ಬಂದಿತು. ನೋಡಿ:ವಡ್ಡಾರಾಧನೆ: ಸಮಗ್ರ ಅಧ್ಯಯನ -ಡಾ. ಹಂಪನಾ ಅನುಬಂಧ-3). ರಾಮಚಂದ್ರಮುನಿಯ ಪುಣ್ಯಾಸ್ರವಕಥಾ ಕೋಶದೊಳಗಣ ಶ್ರೇಣಿಕನ ಕಥೆ ಮತ್ತು ಭದ್ರಬಾಹುವಿನ ಕಥೆಗಳನ್ನು ಕುರಿತು "ಇವೆರಡು ಕಥೆಗಳಿಗೆ ಕನ್ನಡದ 'ವಡ್ಡಾರಾಧನೆ' ಆಕರವೆಂದು ತೋರುತ್ತದೆ" ಎನ್ನುತ್ತಾರೆ, ಡಿ.ಎಲ್.ಎನ್.[೩೪೭] ಇದರಿಂದ ರಾಮಚಂದ್ರಮುನಿ ಹೇಳಿದ 'ಆರಾಧನಾಕರ್ಣಾಟಟೀಕಾ' ಎಂದರೆ ಕನ್ನಡ ವಡ್ಡಾರಾಧನೆಯೆಂದು ಇನ್ನೂ ಖಚಿತವಾಗುತ್ತದೆ.

"ಭ್ರಾಜಿಷ್ಣುವಿನ 'ಆರಾಧನಾ ಕರ್ಣಾಟಟೀಕೆ'ಯಲ್ಲಿಯ ಶ್ರೇಣಿಕನ ಕಥೆಯನ್ನು ಉಲ್ಲೇಖ ಮಾತ್ರವಾಗಿ ಹೇಳುವೆನು" ಎನ್ನುತ್ತ, ರಾಮಚಂದ್ರಮುನಿ ೩೭ ಪುಟಗಳ ಕಥೆಯನ್ನು ಕೊಟ್ಟಿರುವನು. ಆದುದರಿಂದ ಆರಾಧನಾ ಕರ್ಣಾಟಟೀಕೆಯಲ್ಲಿ ಅದು ಇನ್ನೂ ವಿಸ್ತಾರವಾಗಿರಬೇಕು. ಆದರೆ ಈಗ ವಡ್ಡಾರಾಧನೆಯೆಂದು ಪ್ರಚುರವಾಗಿರುವ ಈ ಕನ್ನಡ ಕೃತಿಯಲ್ಲಿ ಶ್ರೇಣಿಕನ ಕಥೆ ಕಂಡುಬರುವುದಿಲ್ಲ. ಇದು, ಈ ವರೆಗೆ ನಾವು ಭಾವಿಸಿದ 'ವಡ್ಡಾರಾಧನೆ' ಮತ್ತು 'ಆರಾಧನಾ ಕರ್ಣಾಟಟೀಕೆ'ಗಳ ಸಂಬಂಧವನ್ನೇ ಕಡಿದುಹಾಕುತ್ತದೆ. ಇದಕ್ಕೆ ಹೀಗೆ ಸಮಾಧಾನ ಹೇಳಬಹುದು:"ಈ ಪೇೞ್ದ ಪತ್ತೊಂಬತ್ತು ಕಥೆಗಳ್ ಶಿವಕೋಟ್ಯಾಚಾರ್ಯರ್ ಪೇೞ್ದ ವಡ್ಡಾರಾಧನೆಯ

---

೩೪೪. ಪ್ರಾಕೃತಭಾಷಾ ಔರ ಸಾಹಿತ್ಯ ಆಲೋಚನಾತ್ಮಕ ಇತಿಹಾಸ (P. 202) ಡಾ. ನೇಮಿಚಂದ್ರಶಾಸ್ತ್ರಿ

೩೪೫. History of Prakrit literature (P. 359)ಡಾ. ಜಗದೀಶಚಂದ್ರ ಜೈನ.

೩೪೬. ದೇವಸೇನನ ಆರಾಧನಾಸಾರಕ್ಕೆ ಶಾಂತಿಕೀರ್ತಿ ಬರೆದ (೧೭೫೫) ಕನ್ನಡ ಟೀಕೆ (ಕ.ಕ. ಚ. IIIಪು. ೧೧೩) ಮುನಿ ರವಿಚಂದ್ರನ ಸಂಸ್ಕೃತ ಆರಾಧನಾ ಸಮುಚ್ಚಯ ಗ್ರಂಥಕ್ಕೆ ಬರೆದ ಕನ್ನಡ ಟೀಕೆ (ಕ.ತಾ.ಸೂ.ಪು. ೩೭ ನಂ. ೪೦) ದೇವಸೇನನ ಪ್ರಾಕೃತ ಆರಾಧನಾಸಾರಕ್ಕೆ ಕೇಶವರ್ಣಿ ಬರೆದ ಕನ್ನಡ ಟೀಕೆ (ಕ.ತಾ. ಸೂ.ಪು. ೨೦೭)ಇವು ಭ್ರಾಜಿಷ್ಣುವಿನ ಕೃತಿಯಿಂದ ಬೇರೆಯಾದುವು.

೩೪೭. ಸು. ಚರಿತೆ ಪು. 1xxx.

ಕವಚವೆಂಬಧಿಕಾರವು" ಎಂಬುದನ್ನು ಗಮನಿಸಿದರೆ, ಶಿವಕೋಟ್ಯಾಚಾರ್ಯನ ಸಂಪೂರ್ಣ ವಡ್ಡಾರಾಧನೆಗೆ ಬರೆದ ಟೀಕೆ(ಕಥೆ)ಯಲ್ಲಿ ಹಿಂದುಮುಂದಣ ಅಧಿಕಾರಗಳು ಅಳಿದು ಹೋಗಿ, ಈಗ ಉಳಿದು ನಿಂತುದು ಕವಚಾಧಿಕಾರ ಮಾತ್ರ ಎನಿಸುತ್ತದೆ. ಇದರ ಪ್ರಾರಂಭದ ಪೀಠಿಕೆ ಮತ್ತು ಕೊನೆಯ ಪ್ರಶಸ್ತಿ ಭಾಗಗಳು ಒಂದು ಸಂಪೂರ್ಣ ಕೃತಿಗೆ ಇರುವಷ್ಟು ವಿಸ್ತಾರವಾಗಿರದೆ ಒಂದು ಅಧಿಕಾರಕ್ಕೆ ಇರುವಷ್ಟು ಸಂಕ್ಷೇಪವಾಗಿರುವುದೂ ಈ ಅಭಿಪ್ರಾಯಕ್ಕೆ ಪೋಷಕವಾಗಿದೆ. ಅದಕ್ಕಾಗಿ ಈಗ ಉಪಲಬ್ಧವಿರುವ ಈ ಕನ್ನಡಕೃತಿ ಒಂದು ವಿಸ್ತೃತಗ್ರಂಥದ ಒಂದು ಅಧಿಕಾರ ಮಾತ್ರ. ರಾಮಚಂದ್ರಮುನಿ ಹೇಳುವ ಶ್ರೇಣಿಕನ ಕಥೆ, ಕಳೆದುಹೋದ ಅಧಿಕಾರಗಳಲ್ಲಿ ಇರಬಹುದು.

ಹಾಗಿದ್ದರೆ 'ಆರಾಧನಾ ಕರ್ಣಾಟಟೀಕೆ'ಯ ನಷ್ಟಭಾಗವನ್ನೆಲ್ಲ ಊಹಿಸಲು ಸಾಧ್ಯವೆ? ಎಂಬ ಪ್ರಶ್ನೆ ಎದುರಾಗುತ್ತದೆ. ಶ್ರೀಚಂದ್ರನ ಅಪಭ್ರಂಶ ಕಥಾಕೋಶ ಮತ್ತು ಉಪಲಬ್ಧ 'ವಡ್ಡಾರಾಧನೆ'ಯ ಪರಸ್ಪರ ಹೋಲಿಕೆಯಿಂದ ಈ ಪ್ರಶ್ನೆಯನ್ನು ತಕ್ಕಮಟ್ಟಿಗೆ ಬಿಡಿಸಬಹುದು.

೧.ವಡ್ಡಾರಾಧನೆಯ ಪ್ರತಿಯೊಂದು ಕಥೆಯ ತಲೆಯ ಮೇಲೆ ಗಾಹೆ ಇರುವಂತೆ ಶ್ರೀಚಂದ್ರನ ಕಥಾಕೋಶದ ಪ್ರತಿಯೊಂದು ಕಥೆಯ ತಲೆಯ ಮೇಲೆಯೂ (ಅವೇ)ಗಾಹೆಗಳಿವೆ.

೨.ಈ ಗಾಹೆಗಳಿಗೆ ವಡ್ಡಾರಾಧನೆಯಲ್ಲಿ ಕನ್ನಡ ಟೀಕೆ (ವಿವರಣೆ) ಇದ್ದರೆ, ಶ್ರೀಚಂದ್ರನಲ್ಲಿ ಸಂಸ್ಕೃತ ಟೀಕೆಯಿದೆ.

೩.ವಡ್ಡಾರಾಧನೆಯ ಕಥೆಗಳ ಒಡಲಲ್ಲಿ ಸಂಸ್ಕೃತ ಪ್ರಾಕೃತ ಕನ್ನಡ ಉದ್ಧರಣೆಗಳಿದ್ದರೆ ಕಥಾಕೋಶದ ಒಡಲಲ್ಲಿ ಸಂಸ್ಕೃತ ಪ್ರಾಕೃತ ಉದ್ಧರಣೆಗಳಿವೆ.

೪.ವಡ್ಡಾರಾಧನೆಯು 'ಕವಚವೆಂಬಧಿಕಾರ'ವು ಎಂದು ಹೇಳಿ ಅಧಿಕಾರ ಮುಗಿಸಿದ್ದರೆ, ಶ್ರೀಚಂದ್ರನೂ 'ಕವಚಾಹಿಯಾರೋಯಂ' ಎಂದು ಹೇಳಿ ಅಧಿಕಾರ ಮುಗಿಸುವನು.

೫.ಹರಿಷೇಣನಂತೆ ಭಗವತೀ ಆರಾಧನೆಯ ಕವಚಾಧಿಕಾರದ ೧೬೩೩, ೧೬೪೩, ೧೬೪೯, ೧೬೫೦ನೆಯ ಗಾಹೆಗಳಿಗೆ ಕ್ರಮವಾಗಿ ಶ್ರೀಪಾಲ, ನಾಮವಾದಿ, ಶಾಲಿಸಿಕ್ಥ, ಸುಭೂಮ ಚಕ್ರವರ್ತಿಗಳ ಕಥೆ ಬರೆಯದೆ, ೧೫೫೭ನೆಯ ಗಾಹೆಗೆ ವೃಷಭಸೇನನ ಕಥೆ ಬರೆದು, ಇಬ್ಬರೂ ತಟ್ಟನೆ ಕವಚಾಧಿಕಾರವನ್ನು ಮುಗಿಸುವರು.

ಈ ಎಲ್ಲ ಹೋಲಿಕೆಗಳಿಂದಾಗಿ, ಇವು ಒಂದು ಮೂಲದಿಂದ (ಶಿವಕೋಟ್ಯಾಚಾರ್ಯನ ಪ್ರಾಕೃತ ವಡ್ಡಾರಾಧನೆಯಿಂದ) ಎರಡು ಭಾಷೆಗಳಲ್ಲಿ ಮೈದೋರಿದ ಬಹುಮಟ್ಟಿಗೆ ಪರಸ್ಪರ ಹೋಲುವ ಕೃತಿಗಳೆನಿಸುತ್ತದೆ. ಶ್ರೀಚಂದ್ರನ ಕಥಾಕೋಶವು ಕನ್ನಡ ವಡ್ಡಾರಾಧನೆಯ (ಅಳಿದ ಭಾಗವನ್ನೊಳಗೊಂಡ) ಇಡೀ ಸ್ವರೂಪವನ್ನು ತಿಳಿಸಿಕೊಡುವ ಒಂದು ಸಾಧನವೆಂದಿಟ್ಟುಕೊಳ್ಳಬಹುದು.[೩೪೮] ಇದು ನಿಜವಿದ್ದ ಪಕ್ಷದಲ್ಲಿ ಕವಚ ಅಧಿಕಾರವೊಂದು ಉಳಿದು ನಿಂತ ಕನ್ನಡಕೃತಿಯು, ಮೂಲದಲ್ಲಿ ಶ್ರೀಚಂದ್ರನ ಕಥಾಕೋಶದಷ್ಟು ಪೂರ್ಣವಾಗಿರಬೇಕೆನಿಸುತ್ತದೆ. ಈ ದಿಶೆಯಲ್ಲಿ ಸಂಶೋಧನೆ ಇನ್ನೂ ನಡೆಯಬೇಕು. ಈ ವರೆಗಣ ವಿವೇಚನೆಯಿಂದ ಈ ಆರಾಧನಾಕೋಶಗಳ ಪೀಳಿಗೆಯನ್ನು ಹೀಗೆ ರೇಖಿಸಬಹುದು:

---

೩೪೮. ಕಥೆಗಳ ಅನುಪೂರ್ವಿ ದೃಷ್ಟಿಯಿಂದ ವಡ್ಡಾರಾಧನೆ ಮತ್ತು ಹರಿಷೇಣನ ಬೃಹತ್ಕಥಾ ಕೋಶಗಳಲ್ಲಿ ಹೋಲಿಕೆಯಿದೆ. ಅದಕ್ಕಾಗಿ ವಡ್ಡಾರಾಧನೆಯ ಲುಪ್ತಭಾಗವನ್ನು ನಿರ್ಣಯಿಸಲು ಬೃಹತ್ಕಥೆಯನ್ನೂ ಇಟ್ಟುಕೊಳ್ಳಬಹುದೇನೋ.

(ಮೂಲ) ಆರಾಧನಾ-೮೪೦೦೦ ಶ್ಲೋಕ
ಲೋಹಾಚಾರ್ಯಕೃತ

↓

(ಭಗವತೀ)ಆರಾಧನಾ-೨೧೭೦ ಗಾಹೆ
ಸಿವಜ್ಜಕೃತ (ಶೌರಸೇನಿ ಪ್ರಾಕೃತ)

ಮೂಲಾರಾಧನಾ (ವಡ್ಡಾರಾಧನಾ)೨೫೦೦ ಶ್ಲೋಕಗಳು
ಸಮಂತಭದ್ರನ ಶಿಷ್ಯ ಶಿವಕೋಟಿಕೃತ (ಪ್ರಾಕೃತ?)

↓

ಕಥಾಕೋಶ -೫೩ ಅಧಿಕಾರ, ೧೭೦ ಕಥೆ
ಶ್ರೀಚಂದ್ರಕೃತ (ಅಪಭ್ರಂಶ)

ಆರಾಧನಾಕರ್ಣಾಟಟೀಕಾ(=ವಡ್ಡಾರಾಧನೆ)
ಭ್ರಾಜಿಷ್ಣುಕೃತ(ಕನ್ನಡ)

ಈ ಎಲ್ಲ ವಿವೇಚನೆಯನ್ನು ಗಮನಿಸಿದರೆ ಇನ್ನುಮೇಲೆ ಕನ್ನಡಕೃತಿಯ ಹೆಸರು ವಡ್ಡಾರಾಧನೆಯಲ್ಲ 'ಆರಾಧನಾ ಕರ್ಣಾಟಟೀಕೆ' ಎಂದೂ, ಕರ್ತೃವಿನ ಹೆಸರು ಶಿವಕೋಟ್ಯಾಚಾರ್ಯನಲ್ಲ 'ಭ್ರಾಜಿಷ್ಣು' ಎಂದೂ ಕರೆಯಬೇಕೆನಿಸುತ್ತದೆ.

ವಡ್ಡಾರಾಧನೆ (=ಆರಾಧನಾ ಕರ್ಣಾಟಟೀಕಾ)ಯ ಕಾಲ-ದೇಶ: ಹಿಂದು-ಮುಂದಣ ಅಧಿಕಾರಗಳನ್ನು ಕಳೆದುಕೊಂಡು, ಕೇವಲ ಕವಚಾಧಿಕಾರವನ್ನು ಉಳಿಸಿಕೊಂಡುನಿಂತಿರುವ ಕನ್ನಡ ವಡ್ಡಾರಾಧನೆಯಿಂದ ಅದರ ಕಾಲದ ವಿಷಯವಾಗಿ ಏನನ್ನೂ ಅಪೇಕ್ಷಿಸುವಂತಿಲ್ಲ. ಕನ್ನಡ ಕವಿಗಳೂ ಈ ಬಗ್ಗೆ ಮೌನ ತಾಳಿರುವರು. ಅದಕ್ಕಾಗಿ ಪಠ್ಯದಲ್ಲಿ ನೆಲೆನಿಂತ ಭಾಷಾಸ್ವರೂಪ, ಸಾಮಾಜಿಕ ವಾತಾವರಣ ಮತ್ತು ಉದ್ಧೃತಪದ್ಯಗಳನ್ನವಲಂಬಿಸಿ ಈ ಪ್ರಶ್ನೆಯನ್ನು ಬಿಡಿಸಬಹುದಾಗಿದೆ.

ತೊರಗಲ್ಲ ಶಾಸನೋಕ್ತ 'ಪಂಚಮಹಾಶಬ್ದ' ಎಂಬ ಪದವನ್ನು ವಡ್ಡಾರಾಧನೆಯ ವಾಕ್ಯಗಳ ಬೆಳಕಿನಲ್ಲಿ ವಿವೇಚಿಸುತ್ತ, ಪಾಠಕ ಅವರು ಆ ತೊರಗಲ್ಲ ಶಾಸನದ ಮಿತಿಯಾದ ಕ್ರಿ.ಶ. ೧೧೮೮ ವಡ್ಡಾರಾಧನೆಯ ಕಾಲವೆಂದು ಭಾವಿಸಿದರು. ಕವಿಚರಿತೆಕಾರರು ಹೆಚ್ಚಿನ ಶ್ರಮವಹಿಸದೆ, ಪಾಠಕರನ್ನವಲಂಬಿಸಿ ಕೊಂಚ ಹೆಚ್ಚು ಕಡಿಮೆ ಕ್ರಿ.ಶ. ೧೧೮೦ ಎಂದು ಹೇಳಿಬಿಟ್ಟರು.[೩೪೯]

ಸಂಶೋಧನ ದೃಷ್ಟಿಯಿಂದ ಈ ಕೃತಿಯ ಕಾಲನಿರ್ಣಯಕ್ಕೆ ಮೊದಲು ತೊಡಗಿದವರು ಡಿ. ಎಲ್.ಎನ್. ವಡ್ಡಾರಾಧನೆಯಲ್ಲಿ ಬಳಸಲಾದ ಅಖ್ಯಾತಪ್ರತ್ಯಯ, ಇಟ್ಟೊದನ್, ಪೊಟ್ಟಿದೊನ್ ಎಂಬ ವಿಶಿಷ್ಟ ಪ್ರಯೋಗ, ಅಪ್ಪ ಅರ್ಥದ ಅಮ್ಮ ಪ್ರಯೋಗ, ಚಾವುಂಡರಾಯಪುರಾಣದ ಶೈಲಿ ಸಮಾನತೆ, ಹರಿಷೇಣನ ಬೃಹತ್ಕಥೆಯ ಹೋಲಿಕೆ-ಮೊದಲಾದುವುಗಳನ್ನು ಆಧಾರವಾಗಿಟ್ಟುಕೊಂಡು "ವಡ್ಡಾರಾಧಣವು ಚಾವುಂಡರಾಯ ಪುರಾಣದಷ್ಟೇ ಪ್ರಾಚೀನವಾಗಿರಬೇಕೆಂದು ತೋರುತ್ತದೆ. ಎರಡೂ ಸಮಕಾಲೀನ ಕೃತಿಗಳೆಂದು ಹೇಳುವುದಕ್ಕೆ ಪ್ರತಿಬಂಧಕವೇನೂ ತೋರುವುದಿಲ್ಲ. ಒಂದು ವೇಳೆ ವೊಡ್ಡಾರಾಧಣವು ಇನ್ನೂ ಸ್ವಲ್ಪ ಪ್ರಾಚೀನವಾಗಿರಬಹುದೆಂದು ತೋರುತ್ತದೆ. ಪೂರ್ವದ ಹಳಗನ್ನಡವು ಹಳಗನ್ನಡ ಸ್ವರೂಪವನ್ನು ಧರಿಸಿಕೊಳ್ಳುವುದಕ್ಕೆ ಮೊದಲು ಮಾಡಿದಾಗ ಈ ಗ್ರಂಥವು

---

೩೪೯. ಕ.ಕ. ಚ. ಪು. ೩೧೩

ಬರೆಯಲ್ಪಟ್ಟಿರಬಹುದು. ವೊಡ್ಡಾರಾಧಣವು ಹೆಚ್ಚು ಪ್ರಾಚೀನವಲ್ಲವೆಂದು ಹೇಳುವುದಾದರೆ ಅದು ಸುಮಾರು ೧೧ನೆಯ ಶತಮಾನದ ಆದಿಯಲ್ಲಿ ಹುಟ್ಟಿರಬೇಕೆಂದು ಹೇಳಬೇಕಾಗುತ್ತದೆ. ಆದುದರಿಂದ ಇದರ ಕಾಲವು ಸು. ೯೪೦ ಆಗಿರಬಹುದೆಂದು ಊಹಿಸಬಹುದಾಗಿದೆ"[೩೫೦] ಎಂದು ಹೇಳುವರು.

ಈ ದಿಸೆಯಲ್ಲಿ ಶ್ರೀ ಗೋವಿಂದ ಪೈ ಅವರು ಇನ್ನೊಂದು ಮಾರ್ಗ ತುಳಿದಿರುವರು. ಭದ್ರಬಾಹುಭಟಾರರ ಕಥೆ;ಕಳ್ಗದ, ಕಲ್ಪಿಪ್ಪುದು, ಬಡ್ಡಿಸಿ, ಬಟ್ಪಿದೆನ್, ಕೆಂದು, ಕೇಳ್ವಿ, ಲುಂದು, ಇಟ್, ಪೊಟ್ಪಿ, ಒಡೆಯ ಎಂಬ ವಿಶಿಷ್ಟ ರೂಪಗಳನ್ನು ಗಮನಿಸಿ, ಇವು ಪ್ರಾಚೀನ ಶಾಸನಸ್ಥ ರೂಪಗಳೆಂದು ಎತ್ತಿ ಹೇಳಿ, "ನನಗಾದರೋ ಕನ್ನಡ ವೊಡ್ಡಾರಾಧಣವು ಕ್ರಿ.ಶ. ೬ನೆಯ ಶತಮಾನಕ್ಕಿಂತ ಈಚೆಯದಲ್ಲವೆಂದು ತೋರುತ್ತದೆ"[೩೫೧] ಎಂದು ಅಭಿಪ್ರಾಯಪಟ್ಟಿದ್ದಾರೆ. ಆದರೆ ಈ ರೂಪಗಳು ೧೦ನೆಯ ಶತಮಾನದ ಕಾವ್ಯಶಾಸನಗಳಲ್ಲಿಯೂ ಲಭಿಸುವುದರಿಂದ ಕಾಲಮರ್ಯಾದೆಯನ್ನು ೬ನೆಯ ಶತಮಾನದಷ್ಟು ಹಿಂದೆ ಎಳೆದುದಕ್ಕೆ ಆಧಾರವಿಲ್ಲವೆಂದು ಬಹುಜನ ಪಂಡಿತರ ಮತ.

ಈ ವಿಷಯವಾಗಿ ಆ.ನೇ. ಉಪಾಧ್ಯೆ ಅವರು ನೀಡುವ ಹೇಳಿಕೆಗಳು ತೀರ ಗಮನಾರ್ಹವಾಗಿವೆ. ವಡ್ಡಾರಾಧನೆಯಲ್ಲಿ ಉದ್ಧೃತವಾದ ಸಂಸ್ಕೃತ ಪ್ರಾಕೃತ ಮತ್ತು ಕನ್ನಡ ಪದ್ಯಗಳಿಗೆ ಮೂಲವನ್ನು ಹುಡುಕುವುದು ಕಾಲನಿರ್ಣಯಕ್ಕೆ ದೊಡ್ಡ ನೆರವು. ಈ ದಿಸೆಯಲ್ಲಿ ಪ್ರಯತ್ನಗೆಯ್ದ ಉಪಾಧ್ಯೆಯವರು "ಆದೌ ಜನ್ಮ.......' ಎಂದು ಮೊದಲಿಡುವ ಪದ್ಯ ಮಹಾಪುರಾಣದಲ್ಲಿ ಗುಣಭದ್ರರು ವಿರಚಿಸಿದ ಭಾಗದಲ್ಲಿ ದೊರೆಯುತ್ತದೆ. (ಆದಿ ೪೬-೧೯೬,ಪು. ೩೧೨೧ ಕೊಲ್ಲಾಪುರ ಮುದ್ರಣ). ಗುಣಭದ್ರರು ಈ ಭಾಗವನ್ನು ಶಕ ೮೨೦(+೭೮=ಕ್ರಿ.ಶ. ೮೯೮)ಕ್ಕೆ ಎಂದರೆ ಲೋಕಸೇನನು ಆ ಗ್ರಂಥಕ್ಕೆ ಪ್ರತಿಷ್ಠೆಯನ್ನುಂಟುಮಾಡಿದ ಕಾಲಕ್ಕೆ ಕೊಂಚ ಹಿಂದೆಯೆ ಪೂರ್ಣಗೊಳಿಸಿದರು." ಅದಕ್ಕಾಗಿ "ಕನ್ನಡ ವಡ್ಡಾರಾಧನೆ ಶಕ ೮೨೦ ಅಥವಾ ಕ್ರಿ.ಶ. ೮೯೮ಕ್ಕೆ ಹಿಂದಿನದಲ್ಲವೆಂದು ಒಪ್ಪಿಕೊಳ್ಳಲೇಬೇಕಾಗುತ್ತದೆ" ಎಂದು ಕನಿಷ್ಠ ಕಾಲಾವಧಿಯನ್ನು ನಿರ್ಣಯಿಸುತ್ತಾರೆ.[೩೫೨] ಈಗ ಉಪಲಬ್ಧವಿರುವ ಹಸ್ತಪ್ರತಿಗಳಲ್ಲಿ ಕ್ರಿ.ಶ. ೧೪೦೩ರಲ್ಲಿ ಬರೆಯಲ್ಪಟ್ಟ ಮೂಡಬಿದರೆ ಪ್ರತಿಯೇ ಹೆಚ್ಚು ಪ್ರಾಚೀನತಮ. ಅದಕ್ಕಾಗಿ ವಡ್ಡಾರಾಧನೆಯ ಕಾಲ ಕ್ರಿ.ಶ. ೮೯೮ ಮತ್ತು ೧೪೦೩ರ ಮಧ್ಯ ಎನ್ನಬಹುದು ಎಂದು ಹೇಳಿ "ಈ ಗ್ರಂಥದ ಗದ್ಯಶೈಲಿ ಚಾವುಂಡರಾಯಪುರಾಣದ ಶೈಲಿಗಿಂತ ಈಚಿನದೆಂದೂ ನೋಂಪಿಕಥೆಗಳ ಗದ್ಯಶೈಲಿಗಿಂತ ಹಳೆಯದೆಂದೂ ನನಗೆ ತೋರುತ್ತದೆ..... ಆದ್ದರಿಂದ ಈ ಗ್ರಂಥದ ಕಾಲವನ್ನು ನಾನು ಚಾವುಂಡರಾಯಪುರಾಣದ ಕಾಲಕ್ಕಿಂತ (ಕ್ರಿ.ಶ. ೯೭೮) ಈಚೆಗೆ ಹಾಕುತ್ತೇನೆ" ಎಂದು ಅಭಿಪ್ರಾಯಪಟ್ಟಿರುವರು.[೩೫೩]

ಇಷ್ಟು ವ್ಯಾಪ್ತ ಅವಧಿಯನ್ನು ಸಂಕುಚಿತಗೊಳಿಸುತ್ತ ಡಿ.ಎಲ್.ಎನ್. ಅವರು ವಡ್ಡಾರಾಧನೆಯ ಪ್ರಭಾವ ಶಾಂತಿನಾಥನ (೧೦೬೦) ಸುಕುಮಾರ ಚರಿತ್ರೆಯ ಮೇಲಾಗಿದೆ ಎಂದು ೧೫ ಪುಟಗಳ ವಿವರಣೆಯನ್ನು ನೀಡಿ, ವಡ್ಡಾರಾಧನೆಯ ಕಾಲ ಕ್ರಿ.ಶ. ೮೯೮ ಮತ್ತು ೧೦೬೦ರ ಮಧ್ಯ ಎನ್ನುತ್ತಾರೆ.[೩೫೪] ಈ ೧೫೦ ವರುಷಗಳಷ್ಟು

೩೫೦. ರೇವಾಕೋಟ್ಯಾಚಾರ್ಯ (ಸಾ.ಪ. ೧೬-೩)
೩೫೧. ಮೂರು ಉಪನ್ಯಾಸಗಳು, (ಪು. ೧೧೮)
೩೫೨. ವಡ್ಡಾರಾಧನೆಯೆಂಬ ಹಳಗನ್ನಡ ಗದ್ಯಗ್ರಂಥ (ಪ್ರ.ಕ. ೨೪-೨ ಪು. ೧೦೬)
೩೫೩. ವಡ್ಡಾರಾಧನೆಯೆಂಬ ಹಳಗನ್ನಡ ಗದ್ಯಗ್ರಂಥ (ಪ್ರ.ಕ. ೨೪-೨ ಪು. ೧೦೭)
೩೫೪. ಸು. ಚರಿತ ಪು. xxxvii- 1ii.

ದೀರ್ಘವಾದ ಅವಧಿಯಲ್ಲಿ ವಡ್ಡಾರಾಧನೆಯ ಕಾಲ, ಡಿ.ಎಲ್.ಎನ್. ಅವರು ಹೇಳುವಂತೆ ಪಂಪನಿಗೆ ಮೊದಲು, ಉಪಾಧ್ಯೆ ಅವರು ಹೇಳುವಂತೆ ಚಾವುಂಡರಾಯನಿಗೆ ತರುವಾಯ ಜೋಲಿ ಹೊಡೆಯಹತ್ತಿದೆ.

ಆರಾಧನಾಕರ್ಣಾಟಟೀಕಾ ಅಥವಾ ವಡ್ಡಾರಾಧನೆಯನ್ನು ಉಲ್ಲೇಖಿಸುವ ರಾಮಚಂದ್ರಮುನಿಯ ಕಾಲವೂ ನಿರ್ದಿಷ್ಟವಾಗಿಲ್ಲ. ಈತನು ಮಹಾಪುರಾಣ ಇಲ್ಲವೆ ಹರಿಷೇಣನ ಬೃಹತ್ಕಥೆಯ ತರುವಾಯ, ನಾಗರಾಜನ ಪುಣ್ಯಾಸ್ರವಕ್ಕೆ ಮೊದಲು ಅಂದರೆ ಕ್ರಿ.ಶ. ೮೭೯ ಇಲ್ಲವೆ ೯೩೨ ಮತ್ತು ಕ್ರಿ.ಶ. ೧೩೩೧ ಮಧ್ಯದವನೆನ್ನುವರು, ಉಪಾಧ್ಯೆ ಮತ್ತು ಹಿರಾಲಾಲಜೈನ.[೩೫೫] ಇವನು ತನ್ನ ಸುಕುಮಾರನ ಕಥೆಗೆ ಮೂಲ 'ಅನಯೋಃ ಕಥೆ ಸುಕುಮಾರ ಚರಿತೆಯಾತ್ ಇತಿ ತತ್ ಕಥ್ಯತೇ' ಎನ್ನುವಲ್ಲಿ ಕನ್ನಡ ಸುಕುಮಾರಚರಿತೆಯೇ ಸೂಚಿತವಾಗಿರುವುದೆಂದೂ ಅದಕ್ಕಾಗಿ ಈತನು ಸುಕುಮಾರ ಚರಿತೆಯ ಶಾಂತಿನಾಥ ಮತ್ತು ಪುಣ್ಯಾಸ್ರವದ ನಾಗರಾಜನ ಮಧ್ಯ ಅಂದರೆ ಕ್ರಿ.ಶ. ೧೦೬೮ ಮತ್ತು ೧೩೩೧ ನಡುವೆ ಬಾಳಿದನೆನ್ನುವರು ಡಿ.ಎಲ್.ಎನ್.[೩೫೬] ಹೀಗಾಗಿ ರಾಮಚಂದ್ರಮುನಿಯ ಈ ಕಾಲನಿರ್ಣಯದಿಂದ ವಡ್ಡಾರಾಧನೆಯ ಕಾಲನಿರ್ಣಯಕ್ಕೆ ಪ್ರಯೋಜನವಾಗಲಾರದು. ಇಂಥ ಪರಿಸ್ಥಿತಿಯಲ್ಲಿ ವಡ್ಡಾರಾಧನೆಯು ೧೧ನೆಯ ಶತಮಾನದ ಆದಿಭಾಗದ ಕೃತಿಯೆಂಬ ಡಿ.ಎಲ್.ಎನ್. ಅಭಿಪ್ರಾಯ ನಮಗೆ ಹೆಚ್ಚು ಸಾಧುವಾಗಿ ಕಾಣುತ್ತದೆ.

ಕನ್ನಡ ವಡ್ಡಾರಾಧನೆಯ ಕರ್ತೃವಿನ ಸ್ಥಳವನ್ನು ಕುರಿತು ಶ್ರೀ ಕೆ.ಜಿ. ಕುಂದಣಗಾರರು "ಆ ಕಥೆಗಳ ಭಾಷಾಶೈಲಿ, ಅಲ್ಲಿಯ ಅಪೂರ್ವವಾದ ಶಬ್ದಗಳು, ಸಾಮಾಜಿಕ ಮತ್ತು ಔದ್ಯೋಗಿಕ ರೂಢಿಗಳನ್ನು ವಿವರಿಸುವ ಮಾತುಗಳು ಆ ಪ್ರಾಂತ್ಯವನ್ನು ಸೂಚಿಸುತ್ತವೆಂದು ಧೈರ್ಯವಾಗಿ ಹೇಳಬಹುದು" ಎಂದು ನುಡಿದು, ಕೆಳಗಣ ಅಭಿಪ್ರಾಯಗಳನ್ನು ವ್ಯಕ್ತಪಡಿಸಿರುವರು.[೩೫೭]

ಪಂಪಾದಿಗಳಲ್ಲಿ ಅಪರೂಪವಾಗಿರುವ 'ಒಡೆಯ' ಎಂಬ ಪದ, ಶೈಲಿಯ ವೈಶಿಷ್ಟ್ಯವೆಂಬಂತೆ ಪುಟಪುಟದಲ್ಲಿ ಮರುಕಳಿಸುತ್ತದೆ. ಈ ಪದವನ್ನು ಇಷ್ಟೇ ವೈಶಿಷ್ಟ್ಯಪೂರ್ಣವಾಗಿ ಬಳಸಿದ ನೀತಿವಾಕ್ಯಾಮೃತದ ವ್ಯಾಖ್ಯಾತೃ ನೇಮಿಚಂದ್ರ, ಶಾಸ್ತ್ರಸಾರಸಮುಚ್ಚಯದ ವ್ಯಾಖ್ಯಾತೃ ಮಾಘಣಂದ್ಯಾಚಾರ್ಯರು ದಕ್ಷಿಣ ಕನ್ನಡಜಿಲ್ಲೆಯವರಾದುದರಿಂದ ವಡ್ಡಾರಾಧನೆಯ ಕರ್ತೃ ಆ ಪ್ರದೇಶದವನಾಗಿರಬಹುದು. ವಡ್ಡಾರಾಧನೆಯ ಹಸ್ತಪ್ರತಿಗಳು ಸಾಮಾನ್ಯವಾಗಿ ಈ ಪ್ರದೇಶದ ಸುತ್ತಮುತ್ತ ಲಭಿಸಿದುದನ್ನೂ ಇಲ್ಲಿ ನೆನೆಯಬೇಕು.

ಈ ಗ್ರಂಥದಲ್ಲಿಯ ಉತ್ತವಳ, ಏರಣಿಗ, ತೆಗಲೆ, ಮಾಣಿ, ಕಟು, ಬಾಡು, ಸೋದಿಗೆ, ಪಸವ, ತುಂಗಭದ್ರ- ಇವು ತುಳುದೇಶದ ಪದಗಳಾಗಿದ್ದು, ನೀತಿವಾಕ್ಯಾಮೃತದ ಕನ್ನಡವ್ಯಾಖ್ಯಾನದಲ್ಲಿಯೂ ಕಂಡುಬರುತ್ತಿವೆ.

---

೩೫೫. ಪುಣ್ಯಾಸ್ರವ ಕಥಾಕೋಶಮ್-Introduction P. 32

೩೫೬. ಸು. ಚರಿತೆ ಪು. 1 xxx.

೩೫೭. ಉಪಾಯನ. ಪು. ೪೩(ವಡ್ಡಾರಾಧನೆಯಲ್ಲಿ ಬರುವ 'ಕೊಗಳಿ' ಎಂಬ ಪಟ್ಟಣವು ಬಳ್ಳಾರಿ ಜಿಲ್ಲೆಯ ಕೋಗಳಿ ಎಂದೂ ಅದು ವಡ್ಡಾರಾಧನೆಯ ಕರ್ತೃವಿನ ಗ್ರಾಮವೆಂದೂ ವಡ್ಡಾರಾಧನೆಯ ಕಥೆಗಳಿಗೆ ಸಂಬಂಧಿಸಿದ ಶಿಲಾಚಿತ್ರಗಳನ್ನು ಅಲ್ಲಿ ಬಿಡಿಸಲಾಗಿದೆಯೆಂದೂ ಡಾ. ಬೇಂದ್ರೆಯವರು ಹೇಳುತ್ತಾರೆ. ಆದರೆ ಆ ಸ್ಥಳವನ್ನು ಸಂದರ್ಶಿಸಿದಾಗ ನನಗೆ ಮೇಲಣ ಹೇಳಿಕೆಯ ಚಿತ್ರಗಳಾವುವೂ ಕಂಡುಬರಲಿಲ್ಲ. ಶಿವಕೋಟ್ಯಾಚಾರ್ಯನಿಗೂ ಈ ಗ್ರಾಮಕ್ಕೂ ಸಂಬಂಧವಿದೆಯೆಂದು ಮನವರಿಕೆಯಾಗಲಿಲ್ಲ.)

"ಹಳಮುಖನೆಂಬ ಪಾರ್ವಂ ತನ್ನ ಮೂಡಣ ಕೆಯ್ಯನುಟಲೆಂದು ಪೋಗಿ..... ಆತನ ಪಾರ್ವಂತಿಯುಂ ಪಗಲಪ್ಪಾಗಳ್ ಕೂಟಂ ಕೊಂಡುಬಂದು" ಎಂಬಂತಹ ಹೇಳಿಕೆಗಳಿವೆ ವಡ್ಡಾರಾಧನೆಯಲ್ಲಿ. ಉತ್ತರ ಮತ್ತು ದಕ್ಷಿಣ ಜಿಲ್ಲೆಗಳನ್ನುಳಿದು ಕರ್ನಾಟಕದ ಯಾವುದೇ ಭಾಗದ ಬ್ರಾಹ್ಮಣರು ಒಕ್ಕಲುತನ ಮಾಡುವುದಿಲ್ಲ. ಬ್ರಾಹ್ಮಣ ಸ್ತ್ರೀಯರಂತೂ ಆಕಡೆ ಹೊರಳಿ ನೋಡರು. ಅದಕ್ಕಾಗಿ ವಡ್ಡಾರಾಧನೆಯ ಕರ್ತೃ ಆ ಪ್ರದೇಶದವನಾಗಿರಬೇಕು.

ಪರ್ವತದ ಪಾರ್ಶ್ವಗಳನ್ನು ಸುಟ್ಟು, ಭೂಮಿಗೆ ಕಸುವು ತರಿಸಿ ಬಿತ್ತುವುದು ಮಲೆನಾಡಿನ ವ್ಯವಸಾಯಕ್ರಮ. ವಡ್ಡಾರಾಧನೆಯ 'ಕಮ್ಮರಿಯಂ ಸುಡಲೆಂದು' ಎಂಬಲ್ಲಿ ಅಂಥ ಕ್ರಮ ಕಂಡುಬರುತ್ತದೆ.

ಇಲ್ಲಿ ಬಳಸಲಾದ ಪೆಂಗರು, ಕಾರಂಡ, ಅಂದೆ, ಕುರ್ಕು, ಸೀರ್ನಾಯ್, ಒಟ್ಟೆ, ಓಂತಿ ಎಂಬಿವು ಉತ್ತರ ಮತ್ತು ದಕ್ಷಿಣ ಕನ್ನಡ ಜಿಲ್ಲೆಯ ಪಶುಪಕ್ಷಿನಾಮಗಳು. ಈ ಎಲ್ಲ ಕಾರಣಗಳಿಂದಾಗಿ ವಡ್ಡಾರಾಧನೆಯ ಕರ್ತೃ ತುಳುನಾಡಿಗನೆಂದು ಕುಂದಣಗಾರರ ಅಭಿಪ್ರಾಯ. ಭಾಷೆ, ಪ್ರದೇಶವನ್ನು ಪ್ರತಿನಿಧಿಸುವುದರಿಂದ ಈ ಅಭಿಪ್ರಾಯದಲ್ಲಿ ಕೆಲಮಟ್ಟಿಗಾದರೂ ಸತ್ಯವಿರಬಹುದೆನಿಸುತ್ತದೆ. ಈ ಬಗ್ಗೆ ಇನ್ನೂ ಸಂಶೋಧನೆ ನಡೆಯಬೇಕು. (ಈ ಪ್ರಬಂಧದ ಮೊದಲ ಆವೃತ್ತಿ ಪ್ರಕಟವಾದ ಬಳಿಕ ಈತ ಬಳ್ಳಾರಿ ಜಿಲ್ಲೆಯ ಕೊಗಳಿ ಪ್ರದೇಶವನೆಂದು ಡಿ.ಎಲ್.ಎನ್. ಮತ್ತು ಎಚ್. ದೇವಿರಪ್ಪ ಅವರೂ, ಮಳಖೇಡ ಸಮೀಪದ ಹಳ್ಳಿಖೇಡ ಹಂಪನಾ ಅವರೂ ಹೇಳಿದ್ದಾರೆ).

ಆರಾಧನಾಸಾಹಿತ್ಯ ಮತ್ತು ವಡ್ಡಾರಾಧನೆ: ಆರಾಧನಾಸಾಹಿತ್ಯ ಶ್ರುತಿರೂಪವನ್ನು ನೀಗಿ, ಕೃತಿರೂಪಕ್ಕಿಳಿದುದು ಲೋಹಾಚಾರ್ಯನ ಹಸ್ತದಲ್ಲಿ. ೮೪೦೦೦ ಶ್ಲೋಕ ಪ್ರಮಾಣದ ಈ ವಿಸ್ತಾರಕೃತಿಯನ್ನು ಅಭ್ಯಾಸಿಗಳ ಅನುಕೂಲದೃಷ್ಟಿಯಿಂದ ಸಿವಜ್ಜನು ೨೧೭೦ ಗಾಹೆಗಳಲ್ಲಿ ಸಾರಸಂಗ್ರಹಗೊಳಿಸಿದರೆ, ಅಭ್ಯಾಸಿಗಳ ಅಭಿರುಚಿ ದೃಷ್ಟಿಯಿಂದ ಶಿವಕೋಟ್ಯಾಚಾರ್ಯನು ೨೫೦೦ ಶ್ಲೋಕಗಳಲ್ಲಿ ಕಥಾರೂಪಗೊಳಿಸಿದನು. ಇದರಿಂದ ಲೋಹಾಚಾರ್ಯನ ಕೃತಿ ಎರಡು ಹೊಸ ಮುಖಗಳನ್ನು ನಿರ್ಮಿಸಿಕೊಂಡು ಮುಂದುವರಿಯಿತು. ಈ ಉಭಯ ಶಾಖೆಗಳಿಗೆ ಟೀಕೆ ಮತ್ತು ಕಥೆ ಎಂಬ ಎರಡು ಸಾಹಿತ್ಯ ಪರಂಪರೆಗಳು ಕೆಳಗಿನಂತೆ ಸೃಷ್ಟಿಯಾಗಿವೆ:

ಆರಾಧನಾ (ಲೋಹಾಚಾರ್ಯ)

↓

ಭಗವತೀ ಆರಾಧನಾ (ಸಿವಜ್ಜ)		ಮೂಲಾರಾಧನಾ(=ವಡ್ಡಾರಾಧನಾ) (ಶಿವಕೋಟ್ಯಾಚಾರ್ಯ)	
೧. ಶ್ರೀವಿಜಯೋದಯಾ	(ಅಪರಾಜಿತ)	೧. ಬೃಹತ್ಕಥಾಕೋಶ	(ಹರಿಷೇಣ)
೨. ಮೂಲಾರಾಧನ ದರ್ಪಣ	(ಆಶಾಧರ)	೨. ಕಥಾಕೋಶ	(ಶ್ರೀಚಂದ್ರ)
೩. ಆರಾಧನಾ ಪಂಜಿಕಾ	(?)	೩. ಕಥಾಕೋಶ	(ಪ್ರಭಾಚಂದ್ರ)
೪. ಭಾವಾರ್ಥ ದೀಪಿಕಾ	(?)	೪. ಕಥಾಕೋಶ	(ನೇಮಿದತ್ತ)
೫. ?	(ನಂದಿಗಣಿ)	೫. ಆರಾಧನಾ	(ನಯನಂದಿ)
		೬. ?	(ಸಿಂಹಣಂದಿ)

೭. ? (ಛತ್ರಸೇನ)

೮. ? (ಬ್ರಹ್ಮದೇವ)

೯. ? (ರತ್ನಕೀರ್ತಿ)

೧೦. ? (?)

೧೧. ಆ.ಕ.ಟೀಕಾ (ವಡ್ಡಾರಾಧನೆ)- (ಭ್ರಾಜಿಷ್ಣು)

ಈ ಯಾದಿಯನ್ನು ಗಮನಿಸಿದರೆ ಆರಾಧನಾತತ್ತ್ವವನ್ನು ಸುಲಭಗ್ರಾಹ್ಯಗೊಳಿಸುವಲ್ಲಿ ಟೀಕಾಸಾಹಿತ್ಯ, ಕಥಾಸಾಹಿತ್ಯಗಳ ಎರಡು ಶಾಖೆಗಳೇ ಬೆಳದಿವೆಯೆಂದೂ, ಇವುಗಳಲ್ಲಿ ಕನ್ನಡ ವಡ್ಡಾರಾಧನೆ 'ಆರಾಧನಾ ಕಥಾಸಾಹಿತ್ಯ' ಶಾಖೆಗೆ ಸೇರಿದ ಒಂದು ಕಥಾಕೋಶವೆಂದೂ ವೇದ್ಯವಾಗುತ್ತದೆ. ಮೇಲಣ ಟೀಕೆ, ಕಥಾಕೋಶಗಳೆಲ್ಲ ಇನ್ನೂ ಅಚ್ಚಾಗಿಲ್ಲ; ಕೆಲವುಗಳ ಅಭ್ಯಾಸವೂ ನಡೆದಿಲ್ಲ. ಅದಕ್ಕಾಗಿ ಇವುಗಳ ಸ್ವರೂಪ, ಪರಸ್ಪರ ಸಂಬಂಧಗಳನ್ನು ನಿರ್ಣಾಯಕವಾಗಿ ಹೇಳುವುದು ಕಷ್ಟವಾಗಿದೆ. ಉಪಾಧ್ಯೆ ಅವರ ಪ್ರಯತ್ನದ ಫಲವಾಗಿ ಹರಿಷೇಣನಲ್ಲಿ ೧೫೭ ಕಥೆ, ಶ್ರೀಚಂದ್ರನಲ್ಲಿ ೧೭೦ ಕಥೆ, ಪ್ರಭಾಚಂದ್ರನಲ್ಲಿ ೧೨೨ ಕಥೆ, ನೇಮಿದತ್ತನಲ್ಲಿ ೧೪೪ ಕಥೆಗಳಿವೆಯೆಂದು ತಿಳಿದುಬಂದಿದೆ. ಈಗ ಲಭಿಸಿದ ಕನ್ನಡ ವಡ್ಡಾರಾಧನೆಯಲ್ಲಿ ೧೯ ಕಥೆಗಳಿವೆಯೆಂಬುದು ಸರ್ವವಿದಿತ. ಈ ಕಥೆಗಳ ಮೇಲಣ ಗಾಹೆಗಳು ಭಗವತೀ ಆರಾಧನೆಯ 'ಕವಚ' ವಿಷಯ ಪ್ರಸಂಗದ ೧೫೩೯-೧೫೫೭ರ ವರೆಗಣ ೧೯ ಗಾಹೆಗಳೇ ಆಗಿವೆ. ನಾವು ಊಹಿಸಿದಂತೆ ಈ ಗಾಹೆಗಳನ್ನು ಮತ್ತು ಇವುಗಳಿಗೆ ಬರೆದ ಕಥೆಗಳನ್ನೊಳಗೊಂಡ ಶಿವಕೋಟ್ಯಾಚಾರ್ಯನ ಮೂಲಾರಾಧನೆಯೆಂಬ ಪ್ರಾಕೃತ ಕಥಾಕೋಶವೇ ಕನ್ನಡ ಕೃತಿಗೆ ಮಾತೃಕೆಯಾಗಿರಬೇಕು. ಸಿವಜ್ಜನ ಭಗವತೀ ಆರಾಧನಾ ಮತ್ತು ಶಿವಕೋಟ್ಯಾಚಾರ್ಯನ ಅನುಪಲಬ್ಧ ಪ್ರಾಕೃತ ಕಥಾಕೋಶದ ಪರಂಪರೆಯಲ್ಲಿ ಹುಟ್ಟಿದ ಕನ್ನಡ ವಡ್ಡಾರಾಧನೆ ಮೊದಲುಗೊಂಡು ಎಲ್ಲ ಆರಾಧನಾಕಥಾಕೋಶಗಳ ಪರಸ್ಪರ ಹೋಲಿಕೆ ಹೀಗಿದೆ.

ಭಗವತೀ ಆರಾಧನಾ ಗಾಥಾ ಕ್ರಮಸಂಖ್ಯೆ	ವಡ್ಡಾರಾಧನಾ ಕಥಾಕ್ರಮಸಂಖ್ಯೆ	ಹರಿಷೇಣನ ಕಥಾಕ್ರಮಸಂಖ್ಯೆ	ಒಟ್ಟು ಪದ್ಯ	ಶ್ರೀಚಂದ್ರನ ಕಥಾಕ್ರಮಸಂಖ್ಯೆ	ಪ್ರಭಾಚಂದ್ರನ ಕಥಾ ಕ್ರಮಸಂಖ್ಯೆ	ನೇಮಿದತ್ತನ ಕಥಾ ಕ್ರಮಸಂಖ್ಯೆ	ಒಟ್ಟು ಪದ್ಯ
೧೫೩೯	೧	೧೨೬	೨೬೦	೧೪೫	೬೩	೫೭	೧೪೩
೧೫೪೦	೨	೧೨೭	೨೮೪	೧೪೮	೬೪	೫೮	೪೪
೧೫೪೧	೩	೧೨೮	೧೯	೧೫೨	೬೫	೫೯	೨೮
೧೫೪೨	೪	೧೨೯	೫೮	೧೫೨	೩೬೬	೩	೬೬
೧೫೪೩	೫	೧೩೦	೯	೧೫೩	೬೭	೬೦	೧೬

೧೫೪೪	೬	೧೩೧	೮೧	೧೫೩	೬೮	೬೧	೨೭
೧೫೪೫	೭	೧೩೨	೮	೧೫೫	೬೯	೬೨	೧೩
೧೫೪೬	೮	೧೩೩	೧೭	೧೫೫	೭೦	೬೩	೧೩
೧೫೪೭	೯	೧೩೪	೫೪	೧೫೬	೭೧	೬೪	೧೬
೧೫೪೮	೧೦	೧೩೫	೫೮	೧೫೬	೭೨	೬೫	೨೮
೧೫೪೯	೧೧	೧೩೬	೨೮	೧೫೭	೭೩	೬೬	೩೫
೧೫೫೦	೧೨	೧೩೭	೧೨	೧೫೮	೭೪	೬೭	೧೯
೧೫೫೧	೧೩	೧೩೮	೭೩	೧೫೯	೭೫	೬೮	೪೬
೧೫೫೨	೧೪	೧೩೯	೧೭೨	೧೬೦	೭೬	೬೯	೩೫
೧೫೫೩	೧೫	೧೪೦	೩೬	೧೬೨	೭೭	೭೦	೪೧
೧೫೫೪	೧೬	೧೪೧	೫೧	೧೬೩	೭೮	೭೧	೨೧
೧೫೫೫	೧೭	೧೪೨	೮	೧೬೩	೭೯	೭೨	೧೨
೧೫೫೬	೧೮	೧೪೩	೮೫	೧೬೪	೮೦	೭೩	೪೩
೧೫೫೭	೧೯	೧೪೪	೧೧	೧೬೫	೮೧	೭೪	೧೪

ಈ ಐದರ ತುಲನೆಯಿಂದ[೩೫೮] ಈ ಕೋಶಕಾರರು ತಮತಮಗೆ ವಿಶಿಷ್ಟವಾದ ಅನುಕ್ರಮವನ್ನು ಅನುಸರಿಸಿದ್ದು, ಕನ್ನಡ ವಡ್ಡಾರಾಧನೆ ಮತ್ತು ಹರಿಷೇಣನ ಕಥಾಕೋಶಗಳು ಒಂದೇ ಕ್ರಮದಲ್ಲಿ ನಡೆದುದು ಎದ್ದು ಕಾಣುತ್ತದೆ. ಇವುಗಳ ಕಥಾಶರೀರದಲ್ಲಿಯೂ ಹೆಚ್ಚು ಸಾಮ್ಯವಿದೆ. ಆದಕ್ಕಾಗಿ ಶಿವಕೋಟ್ಯಾಚಾರ್ಯನ ಮೂಲಾರಾಧನೆಯನ್ನು ಅನುಸರಿಸುವಲ್ಲಿ ಈ ಇಬ್ಬರ ಕ್ರಮಗತಿ ಒಂದೇ ಎನಿಸುತ್ತದೆ. ಆದರೆ ತಲೆಯ ಮೇಲೆ ಗಾಹೆ, ಗಾಹೆಗೆ ಟೀಕೆ, ಅಧಿಕಾರ ವಿಭಜನೆ, ಕಥೆಯ ಒಡಲಲ್ಲಿ ಆಗಾಗ ಸಂಸ್ಕೃತ ಪ್ರಾಕೃತ ಶ್ಲೋಕ- ಇವುಗಳನ್ನು ನೋಡಿದರೆ ವಡ್ಡಾರಾಧನೆ ಮತ್ತು ಶ್ರೀಚಂದ್ರನ ಕಥಾಕೋಶಗಳಲ್ಲಿ ಹೆಚ್ಚು ಸಾಮ್ಯ ಕಂಡುಬರುತ್ತದೆ. ಮೇಲಣ ಎಲ್ಲ ಕಥಾಕೋಶಗಳ ತೌಲನಿಕ ಅಭ್ಯಾಸ ಹೆಚ್ಚು ಶಾಸ್ತ್ರೀಯವಾಗಿ, ಹೆಚ್ಚು ವಿವರವಾಗಿ ನಡೆದರೆ ಇವುಗಳ ಪರಸ್ಪರ ಸಂಬಂಧದ ಅರಿತಕ್ಕೂ ವಡ್ಡಾರಾಧನೆಯ ಶುದ್ಧಪಾಠ ನಿರ್ಣಯಕ್ಕೂ ದೊಡ್ಡ ನೆರವು ದೊರೆಯಬಹುದು.

ವಡ್ಡಾರಾಧನೆಯ ಒಡಲಲ್ಲಿ ಆಗಾಗ ಪ್ರಾಕೃತ, ಸಂಸ್ಕೃತ, ಕನ್ನಡ ಪದ್ಯಗಳನ್ನು ಬಳಸಲಾಗಿದ್ದು, ಇವುಗಳ ಆಕರ ಶೋಧನೆ ಇನ್ನೂ ಪೂರ್ಣಗೊಂಡಿಲ್ಲ. ಪಂಡಿತರ ಪ್ರಯತ್ನದ ಫಲವಾಗಿ (ಅಡಿ ಟಿಪ್ಪಣಿಯ ಪದ್ಯಗಳನ್ನೂ ಒಳಗೊಂಡ) ಎಲ್ಲ ಪದ್ಯಗಳಿಗೆ ಆಕರ ಹುಡುಕುವ ಕಾರ್ಯ ಕೆಳಗಿನಂತೆ ಕೈಗೂಡಿದೆ.[೩೫೯]

---

೩೫೮. ಈ ಕೋಷ್ಟಕ ಶ್ರೀ ಕಡಬಡಿಯವರ ವಡ್ಡಾರಾಧನೆಯಿಂದ ಸ್ವೀಕರಿಸಲ್ಪಟ್ಟಿದೆ.

೩೫೯. ಈ ಕೋಷ್ಟಕ ಶ್ರೀ ಕಡಬಡಿಯವರ ವಡ್ಡಾರಾಧನೆಯಿಂದ ಸ್ವೀಕರಿಸಲ್ಪಟ್ಟಿದೆ.

"ಪೂರ್ವಪುರಾಣದೊಳಗಿನ ಗುಣಭದ್ರಾಚಾರ್ಯರ ಪದ್ಯಗಳು ಇದರಲ್ಲಿ ಉದ್ಧೃತವಾಗಿರುವುದರಿಂದ ಅದು ಕ್ರಿ.ಶ. ೮೫೦ರ ಪೂರ್ವದ್ದಲ್ಲವೆಂದು ಪ್ರೊ. ಕೆ.ಜಿ. ಕುಂದಣಗಾರರು ಅಭಿಪ್ರಾಯಪಟ್ಟರು" (ಉಪಾಯನ೪೩)

"ಆ ಸಂಸ್ಕೃತ ಶ್ಲೋಕಗಳಲ್ಲಿ ಒಂದೆರಡು ಭರ್ತೃಹರಿಯ ನೀತಿಶತಕದಲ್ಲಿ ದೊರೆಯುತ್ತವೆ"-ಡಿ.ಎಲ್.ಎನ್. ಸಾ.ಪ.೧೬-೩ ಈ ಶ್ಲೋಕ ಸಂಸ್ಕೃತ ಸುಭಾಷಿತ ರತ್ನಭಾಂಡಾಗಾರದಲ್ಲಿದೆಯೆಂದು ಪೈಗಳು ೧೯೪೮ರಲ್ಲಿ ಹೇಳಿರುವರು. (ಮೂರು ಉಪನ್ಯಾಸಗಳು ಪು. ೧೧೨) →

ಅ.ನಂ.	ಪದ್ಯ	ಪುಟ	ಆಕರ	ಸಂಶೋಧಕರು
೧	ಅಚ್ಛೇಣಿ ಮೀಳಣ	೧೨೬	ತಿಲಯಸಾರ-೨೦೭	ಬಿ.ಕೆ. ಕಡಬಡಿ
೧ಅ	ಅಚ್ಛೇಣಿ ಮೀಳಣ	೧೭೦	ತಿಲಯಸಾರ-೨೦೭	ಬಿ.ಕೆ. ಕಡಬಡಿ
೨	ಅಚ್ಛೇದ್ಯೋऽನಂತ	೧೦೯	-	?
೨ಅ	ಅಚ್ಛೇದ್ಯೋऽನಂತ	೧೩೨	-	?
೩	ಅಜ್ಞಾನ ಭಾವಾತ್	೧೪೨	-	?
೪	ಅಟ್ಠಹಿ ಭಣ್ಣಂ	೧೩೨	ಮೂಲಾಚಾರ -೮೪೯	ಬಿ.ಕೆ. ಕಡಬಡಿ
೫	ಅನೃತವಚನೇ ೮೭	-	?	
೬	ಅನೇಕರಾಗ	೬೭	-	?
೭	ಅಪವಾದೋಭವೇದ್ಯೇನ	೧೦೩	-	?
೮	ಅರುಜಮ ಮರಣಂ	೧೫೬	-	?
೯	ಅರ್ಥಾಗೃಹೇಷು	೧೪೨	ಸೂಕ್ತಿರತ್ನಹಾರ: (ಸೂರ್ಯ)೨-೪೯	ಬಿ.ಕೆ. ಕಡಬಡಿ
೧೦	ಅರ್ಥೋಮೇ ಭಾರ್ಯಾ	೧೪೦	ಸುಭಾಷಿತರತ್ನಕೋಶ: (ವಿದ್ಯಾಕರ) ೧೬೨೩	ಬಿ.ಕೆ. ಕಡಬಡಿ
೧೧	ಅಹೋ ಧನುಷಿ	೫೭	ಅದೇ, ೩೩೦	ಬಿ.ಕೆ. ಕಡಬಡಿ
೧೨	ಆಕೃಷ್ಯಯೇವ ವಚಸಾ	೭	-	?
೧೩	ಆಜ್ಞಾಯಶೋ	೧೧	-	?
೧೪	ಆದೌಜನ್ಮ	೬೮	ಮಹಾಪುರಾಣಃ ಆದಿ ೪೬-೧೯೬	ಎ.ಎನ್. ಉಪಾಧ್ಯೆ?* ಕೆ.ಜಿ. ಕುಂದಣಗಾರ?*
೧೫	ಆನಾಳ್ದನಾಳ್ದಳಿವರೆನ	೧೩೩	-	?
೧೬	ಆರೊಳಮಿಲ್ಲಮೋಹ	೧೪೩	-	?
೧೭	ಆವಾವಜನ್ಮ (ಅ.ಟಿ.)	೧೯೪	-	?
೧೮	ಆಹಾರಣಿಮಿತ್ತಂ	೧೪೩	ಮೂಲಾಚಾರ-೮೨	ಬಿ.ಕೆ. ಕಡಬಡಿ
೧೯	ಇಱಿಕಿಱಿದನೊದಱಿ	೧೨೭	-	?
೨೦	ಇಹಜೀವಕೃತಂ	೧೪೨	-	?
೨೧	ಉಡ್ಡಮಹೇ	೧೪೨	ಮೂಲಾಚಾರ-೭೫	ಬಿ.ಕೆ. ಕಡಬಡಿ
೨೨	ಉಣ್ಡಂ ವಾದಂ	೧೧೦	ಭ.ಆ.-೧೫೪೮	-
೨೩	ಉದ್ದಂತ ಕುಬ್ಜ	೧೦	-	?

→ಈ ಶ್ಲೋಕ ಚಾವುಂಡರಾಯ ಪುರಾಣದ ಆದಿಪುರಾಣ (ಪು. ೩೬) ಭಾಗದಲ್ಲಿ ಕಂಡುಬರುತ್ತದೆ.
"ಯಾವತ್......." ಎಂಬ ಪದ್ಯವಾದರೂ ಭರ್ತೃಹರಿಯ ವೈರಾಗ್ಯಶತಕದಲ್ಲಿ (೭೫) ಇದೆ"-ಮೂರು ಉಪನ್ಯಾಸಗಳು ಪು. ೧೧೨
"ಆ ಸಂಸ್ಕೃತ ಶ್ಲೋಕಗಳಲ್ಲಿ ಒಂದೆರಡು ಭರ್ತೃಹರಿಯ ನೀತಿಶತಕದಲ್ಲಿ ದೊರೆಯುತ್ತವೆ"-ಡಿ.ಎಲ್.ಎನ್. ಸಾ.ಪ. ೧೬-೩.

* "ಪೂರ್ವಪುರಾಣದೊಳಗಿನ ಗುಣಭದ್ರಾಚಾರ್ಯರ ಪದ್ಯಗಳು ಇದರಲ್ಲಿ ಉದ್ಧೃತವಾಗಿರುವುದರಿಂದ ಅದು ಕ್ರಿ.ಶ. ೮೫೦ರ ಪೂರ್ವದ್ದಲ್ಲವೆಂದು ಪ್ರೊ. ಕೆ.ಜಿ. ಕುಂದಣಗಾರರು ಅಭಿಪ್ರಾಯಪಟ್ಟರು" (ಉಪಾಯನ೪೩)

ಅ.ನಂ.	ಪದ್ಯ	ಪುಟ	ಆಕರ	ಸಂಶೋಧಕರು
೨೪	ಉಪಾಧ್ಯಾಯಂ ಶಾಲಿಂ	೭೫	-	?
೨೫	ಎಕ್ಕಮ್ಹಿ ಭವಗ್ಗಹಣೇ	೧೪೪	-	?
೨೬	ಎಕ್ಕಂಪಂಡಿಯ ಮರಣಂ	೧೪೨	ಮೂಲಾಚಾರ-೭೭	ಬಿ.ಕೆ. ಕಡಬಡಿ
೨೭	ಏಗೋ ಯ ಮರದಿ	೧೪೧	ನಿಯಮಸಾರ-೧೦೧	ಬಿ.ಕೆ. ಕಡಬಡಿ
೨೮	ಏತತ್ ಕ್ಷೇತ್ರಂ ಮದೀಯಂ	೧೪೦	-	?
೨೯	ಏದಾರಿಸೇ ಸರೀರೇ	೧೩೨	ಮೂಲಾಚಾರ-೮೫೦	ಬಿ.ಕೆ. ಕಡಬಡಿ
೩೦	ಏದಂ ಸರೀರಮಸುಚಿಂ	೧೩೨	ಮೂಲಾಚಾರ-೮೪೪	ಬಿ.ಕೆ. ಕಡಬಡಿ
೩೧	ಏಸೋ ಪಂಚಣಮೋ	೧೪೪	ಮೂಲಾಚಾರ-೫೧೪	ಬಿ.ಕೆ. ಕಡಬಡಿ
೩೨	ಓಮೋದರಿ ಏ ಘೋರಾಏ	೭೩	ಭ.ಆ.-೧೫೪೪	-
೩೩	ಕಚ್ಛು ಜರಖಾಸ	೫೩	ಭ.ಆ.-೧೫೪೨	-
೩೪	ಕಡಿ ಕಟಿವಮನುಡಿ	೧೨೭	-	?
೩೫	ಕರಜ ನಿವೇಶಿತ	೧೨೬	-	?
೩೬	ಕಸ್ಯ ಮಾತಾ ಪಿತಾ	೧೪೨	ವರಾಂಗ ಚರಿತೆ-೧೫-೭೮	ಎ.ಎನ್. ಉಪಾಧ್ಯೆ
೩೭	ಕಾಕಂದಿ ಅಭಯಘೋಸೋ	೧೨೦	ಭ.ಆ.-೧೫೫೦	-
೩೮	ಕಾಲೇ ಸಂಪ್ರತಿ ವರ್ತತೇ	೮೭	ಸುಭಾಷಿತಾವಲಿ (ಸಕಲ-ಕೀರ್ತಿ)ಪು. ೫	ಎ.ಎನ್. ಉಪಾಧ್ಯೆ
೩೯	ಕಿಂಪುಣ ಅಣಗಾರ (ಅ.ಟಿ.)	೧೯೪	ಭ.ಆ.-೧೫೫೯	-
೪೦	ಕುಲಹೀನಂ ದೀನಮಾನಂ	೧೦	-	?
೪೧	ಕೋ ಧರ್ಮ ಪ್ರವರೋ	೧೦೨	-	?
೪೨	ಕೋಸಂಬೀ ಲಲಿತಘಟಾ	೯೫	ಭ.ಆ.-೧೫೪೫	-
೪೩	ಕ್ರಿಮಯಃ ಕಿಂ ನ ಜೀವಂತಿ	೧೦೩	-	?
೪೪	ಖಮ್ಮಾಮಿ ಸವ್ವ ಜೀವಾಣಂ	೪೮	ಮೂಲಾಚಾರ-೪೩	ಎ.ಎನ್.ಉಪಾಧ್ಯೆ
೪೪ಅ	ಖಮ್ಮಾಮಿ ಸವ್ವ ಜೀವಾಣಂ	೧೦೯	ಮೂಲಾಚಾರ-೪೩	"
೪೪ಬ	ಖಮ್ಮಾಮಿ ಸವ್ವ ಜೀವಾಣಂ	೧೩೩	ಮೂಲಾಚಾರ-೪೩	"
೪೪ಕ	ಖಮ್ಮಾಮಿ ಸವ್ವ ಜೀವಾಣಂ	೧೫೪	ಮೂಲಾಚಾರ-೪೩	"
೪೪ಡ	ಖಮ್ಮಾಮಿ ಸವ್ವ ಜೀವಾಣಂ	೧೯೨	ಮೂಲಾಚಾರ-೪೩	"
೪೫	ಗಾಢಪ್ಪಹಾರ	೧೬೨	ಭ.ಆ.-೧೫೫೩	-
೪೬	ಗುರುಮೂಲೇಯತಿ	೧೪೪	-	?
೪೭	ಗೊಟ್ಠೇ ಪಾಓ ವಗದೋ	೧೮೦	ಭ.ಆ.-೧೫೫೬	-
೪೮	ಚಂಪಾ ಏ ಮಾಸ ಖವಣಂ	೧೦೨	ಭ.ಆ.-೧೫೪೬	-
೪೯	ಛಾಯೇವ ಸಕದ ಕಮ್ಮಂ	೧೩೨	-	?
೫೦	ಛಿಜ್ಜಉ ಛಿಜ್ಜಉ	೪೮	ಪರಮಾತ್ಮಪ್ರಕಾಶಃ ೧-೭೨	ಎ.ಎನ್. ಉಪಾಧ್ಯೆ

೫೦ಅ	ಭಿಜ್ಜಉ ಭಿಜ್ಜಉ	೧೯೨	ಪರಮಾತ್ಮಪ್ರಕಾಶಃ ೧-೭೨	ಎ.ಎನ್. ಉಪಾಧ್ಯೆ
೫೧	ಜಇ ಉಪ್ಪಜ್ಜಇ	೧೪೨	ಮೂಲಾಚಾರ-೭೮	ಬಿ.ಕೆ. ಕಡಬಡಿ

ಅ.ನಂ.	ಪದ್ಯ	ಪುಟ	ಆಕರ	ಸಂಶೋಧಕರು
೫೨	ಜದಿತಾ ಏವಂ ಏದೇ	೧೯೪	ಭ.ಆ.-೧೫೫೮	-
೫೩	ಜಹ ಜಹ ಭುಂಜಇ	೧೪೩	ಭ.ಆ.-೧೨೬೨	-
೫೪	ಜಾತಿಕ್ಷ್ಮಾಜತತೇ	೧೩೨	-	?
೫೫	ಜಿಣವಯಣ ಮರುದ	೧೯೪	ಭ.ಆ.-೧೫೬೦	-
೫೬	ಜಿಣವಯಣ ಮರುದ	೧೯೪	ಭ.ಆ.-೧೫೬೦	-
೫೭	ಜೀವಿದ ಮರಣೇ	೧೫೪	ಮೂಲಾಚಾರ-೨೩	ಬಿ.ಕೆ. ಕಡಬಡಿ
೫೮	ಜಂ ಇಚ್ಛಸಿ ತಂ	೧೬೭	-	?
೫೯	ಡಿಂಡೀರ ಪಿಂಡ	೧೩೨	-	?
೬೦	ಣಗರೇ ಮಹೇಂದ್ರದತ್ತಾ	೧೭೫	ಭ.ಆ.-೧೫೫೫	-
೬೧	ಣಾವಾಎ ಣಿಬ್ಬುಡಾಏ	೭೧	ಭ.ಆ.-೧೫೪೩	-
೬೨	ಣಿಂದಂತಂ ಸಿಳಹಂತಂ	೭	-	?
೬೨ಅ	ಣಿಂದಂತಂ ಸಿಳಹಂತಂ	೧೫೩	-	?
೬೩	ತಣಕಟ್ಠೇಣ ವ	೧೪೩	ಮೂಲಾಚಾರ-೮೦	ಬಿ.ಕೆ. ಕಡಬಡಿ
೬೪	ತಿಣ್ಣೆವ ಚಿಣ್ಣೆವ	೧೫೩	-	?
೬೫	ತಿಳೋಯ ಸಬ್ಬ	೧	ಪಂಚಾಸ್ತಿಕಾಯ-೧	ಎ.ಎನ್. ಉಪಾಧ್ಯೆ
೬೬	ತೃಷ್ಣಾಂ ಛಿಂಧಿ	೧೪೪	ಭರ್ತೃಹರಿ, ನೀತಿ-೭೭	ಎ.ಎನ್. ಉಪಾಧ್ಯೆ?* ಡಿ.ಎಲ್.ಎನ್?*
೬೭	ದುಜ್ಜಣ ವಯಣ	೧೫೩	ಮೂಲಾಚಾರ-೮೬೭	ಬಿ.ಕೆ. ಕಡಬಡಿ
೬೮	ದುರ್ಗಂಧೇ ದುರ್ಧರೇ	೧೩೨	-	?
೬೯	ದಂಡೋ ಯಮುಣಾ	೧೬೯	ಭ.ಆ.-೧೫೫೪	-
೭೦	ದಂಸೇಹಿಯ ಮಸಕೇಹಿ	೧೨೨	ಭ.ಆ.-೧೫೫೧	-
೭೧	ಧರ್ಮಾರ್ಥಕಾಮ ಮೋಕ್ಷಾ	೧೧೩	ಶತಕತ್ರಯಾದಿ ಸುಭಾಷಿತ ಸಂಗ್ರಹ:೫೪೪	ಬಿ.ಕೆ. ಕಡಬಡಿ
೭೨	ನಮಃಶ್ರೀವರ್ಧಮಾನಾಯ	೧	ರತ್ನಕರಂಡಕ-ಮಂಗಲಪದ್ಯ ಗೋವಿಂದ ಪೈ.?	ಎ.ಎನ್. ಉಪಾಧ್ಯೆ
೭೩	ನಿರ್ವೀರ್ಯಾ ಪೃಥಿವೀ	೮೭-೮೮	ಸುಭಾಷಿತರತ್ನಾಕರ೩-೭೪	ಬಿ.ಕೆ.ಕಡಬಡಿ?**

*"ಆ ಸಂಸ್ಕೃತ ಶ್ಲೋಕಗಳಲ್ಲಿ ಒಂದೆರಡು ಭರ್ತೃಹರಿಯ ನೀತಿಶತಕದಲ್ಲಿ ದೊರೆಯುತ್ತವೆ"-ಡಿ.ಎಲ್.ಎನ್. ಸಾ.ಪ.೧೬-೩

**ಈ ಶ್ಲೋಕ ಸಂಸ್ಕೃತ ಸುಭಾಷಿತ ರತ್ನಭಾಂಡಾಗಾರದಲ್ಲಿದೆಯೆಂದು ಪೈಗಳು ೧೯೪೦ರಲ್ಲಿ ಹೇಳಿರುವರು. (ಮೂರು ಉಪನ್ಯಾಸಗಳು ಪು. ೧೧೨)

೭೪	ನಿಶ್ಚಯಮುದಿತಸ್ಯ	೧೪೧	-	?
೭೫	ನೀಲೋತ್ಪಲದಳಶ್ಯಾಮೇ	೧೮೧	-	?
*೭೬	ಪಡಿಗಹ ಮುಚ್ಚಂ	೭	-	?

ಅ.ನಂ.	ಪದ್ಯ	ಪುಟ	ಆಕರ	ಸಂಶೋಧಕರು
೭೭	ಪನಿಪುಲ್ಲ ಮುಗಿಲ	೧೧೩	-	?
೭೮	ಪಾಪಾತ್ಕಿಲ ಜಾಯಂತೇ	೧೦	-	?
೭೯	ಪಾವೇಣ ಣಿರಯತಿರಿಯಂ	೯೬	ಪರಮಾತ್ಮ ಪ್ರಕಾಶ ಟೀಕಾಃ ಬ್ರಹ್ಮದೇವ-೨-೬೩	ಬಿ.ಕೆ. ಕಡಬಡಿ
೮೦	ಪುಣ್ಯಾದುತ್ಪಾದ್ಯಂತೇ	೧೧	-	?
೮೧	ಪುವ್ವೇಣ ಅಂಗವಿಸಓ	೮೬	-	?
೮೨	[ಪು]ವ್ವೇ ಮರಣಂ	೧೪೨	-	?
೮೩	ಪುಷ್ಪಫಲಭಾರ	೧೪೧	-	?
೮೪	ಪೆಚ್ಛಹ ಪೆಚ್ಛಹ	೮೪	-	?
೮೫	ಬಡಿಕೋಲ್ ಕಟ್ಟಿಜಿ	೧೨೭	-	?
೮೬	ಭವಿತವ್ಯಂ ಭವತ್ಯೇವ	೫೮	ಸೂಕ್ತಿರತ್ನಹಾರ-೧೦-೪೯	ಬಿ.ಕೆ. ಕಡಬಡಿ
೮೭	ಭಾವಣಮೊಕ್ಕಾರಗದೋ	೧೪೪	-	?
೮೮	ಭಲ್ಲುಕ್ಕಿಯೇಣಣೆಚ್ಚಂ	೧	ಭ.ಆ.-೧೫೪೯	-
೮೯	ಭೂಮಿ ಏ ಸಮಂ	೫೦	ಭ.ಆ.-೧೫೪೧	-
೯೦	ಭೋಗಸ್ಪೃಷ್ಣಾಗ್ನಿ	೧೧೩	-	?
೯೧	ಮಜ್ಝು ಸಹಾವಂ	೪೮	ದವ್ವಸಹಾವಪಯಾಸಣಯ ಚಕ್ಕ-೪೦೬	ಬಿ.ಕೆ. ಕಡಬಡಿ
೯೨	ಮದ್ಯಾಂಗ ತೂರ್ಯಾಂಗ	೧೬೪	ವರಾಂಗ ಚರಿತ೭-೧೪	ಬಿ.ಕೆ. ಕಡಬಡಿ
೯೩	ಮರ್ದುಂ ಮಂತ್ರಮು	೧೪೩	-	?
೯೪	ಮೊಗ್ಗಳ ಗಿರಿಮ್ಮಿ	೩೨	ಭ.ಆ.-೧೫೪೦	-
೯೫	ಯತ್ನೇನ ಪಾಪಾನಿ	೧೪೧	-	?
೯೬	ಯತ್ರಯತ್ರೋಪಪದ್ಯಂತೇ	೧೩೯	-	?
೯೭	ಯದಿ ಜಾತಿ ಜರಾ ಮರಣಂ	೧೩೨	ಸುಭಾಷಿತಾವಲಿ(ವಲ್ಲಭ-ದೇವ)=೩೩೧೪	ಬಿ.ಕೆ. ಕಡಬಡಿ
೯೮	ಯದ್ಯಪಿ ನಿಷೇವ್ಯ ಮಾಣಾ	೧೧೩	ಪ್ರಶಮರತಿ ಪ್ರಕರಣ-೧೦೭	ಎ.ಎನ್. ಉಪಾಧ್ಯೆ
೯೮ಅ	ಯದ್ಯಪಿ ನಿಷೇವ್ಯ ಮಾಣಾ	೧೪೩	ಪ್ರಶಮರತಿ ಪ್ರಕರಣ	ಎ.ಎನ್. ಉಪಾಧ್ಯೆ

---

*ಈ ಶ್ಲೋಕ ಚಾವುಂಡರಾಯ ಪುರಾಣದ ಆದಿಪುರಾಣ (ಪು. ೩೬) ಭಾಗದಲ್ಲಿ ಕಂಡುಬರುತ್ತದೆ.

೯೯	ಯಾವತ್ ಸ್ವಸ್ಥಮಿದಂ	೧೩೩	ಭರ್ತೃಹರಿ. ವೈರಾಗ್ಯ-೮೮	ಎ.ಎನ್. ಉಪಾಧ್ಯೆ?* ಗೋವಿಂದ ಪೈ?*
೧೦೦	ಯಿಂದ ಸಯ ವಂದಿ	೧	ಪ್ರವಚನಸಾರ-೧	ಎ.ಎನ್. ಉಪಾಧ್ಯೆ?
೧೦೧	ಯೇನೇಯಂ ಕಂಪಿತಾ	೧೮೧	-	?
೧೦೨	ಯೇಷಾಂ ನ ವಿದ್ಯಾ	೧೦೩	ಭರ್ತೃಹರಿ. ನೀತಿ-೧೩	ಎ.ಎನ್. ಉಪಾಧ್ಯೆ ಡಿ.ಎಲ್.ಎನ್?**
ಅ.ನಂ.	ಪದ್ಯ	ಪುಟ	ಆಕರ	ಸಂಶೋಧಕರು
೧೦೩	ಯೇಸ ಸುರಾಸುರ	೧	-	?
೧೦೪	ರಸ ಮಜ್ಜ ಮಾಂಸ	೧೩೨	-	?
೧೦೫	ರಾಜ್ಞಿ ಧರ್ಮಿಣಿ	೧೧೮	ಸುಭಾಷಿತರತ್ನ ಭಾಂಡಾಗಾರಂ. ೧೧೯ ಪು. ೧೪೫	ಬಿ.ಕೆ. ಕಡಬಡಿ
೧೦೬	ರೂಪಂ ಯೌವನಮಾಯು	೬೮	-	?
೧೦೬ಅ	ರೂಪಂ ಯೌವನಮಾಯು	೧೩೨	-	?
೧೦೭	ರೋಹೇದಯಮ್ಮಿ ಸತ್ತೀಎ	೧೧೫	ಭ.ಆ.-೧೫೪೯	-
೧೦೮	ವರಯುವತಿ ಭವನ	೧೧	-	?
೧೦೯	ವಸಈ ಏ ಪಳಿದಾ ಏ	೧೯೩	ಭ.ಆ.-೧೫೫೭	-
೧೧೦	ವೈರೂಪ್ಯಂ ದುರ್ಭಗತ್ವಂ	೧೦	-	?
೧೧೧	ಶಕ್ಯಾಶಕ್ತಿ ಸಹಸ್ರೇಣ	೧೮೪	-	?
೧೧೨	ಶಕ್ಯಾಹೇಕ ಶರೀರೇಣ	೧೮೪	-	?
೧೧೩	ಶ್ರೀ ವೃಕ್ಷಶ್ಚಾರುರೂಪಂ	೧೧	-	?
೧೧೪	ಸ ಚಾಣಾಕ್ಯಶ್ಚತುರ್ದಂಷ್ಟ್ರೋ	೧೮೩	-	?
೧೧೪ಅ	ಸ ಚಾಣಾಕ್ಯಶ್ಚತುರ್ದಂಷ್ಟ್ರೋ	೧೮೪	-	?
೧೧೫	ಸಣ್ಣಂ ವಾ ಬದರಂ	೧೧೩	ಭ.ಆ.-೫೭೮	ಬಿ.ಕೆ. ಕಡಬಡಿ
೧೧೬	ಸತ್ತಕ್ಖರ ಸಜ್ಝಾಯಂ	೧೪೪	-	?
೧೧೭	ಸಮಾಗಮಾಃ ಸ್ವಾವಸಮಾಹಿ	೧೪೧	ಸೂಕ್ತಿರತ್ನಹಾರ(ಸೂರ್ಯ)- ೧೫ ಪು. ೨೬೩	ಬಿ.ಕೆ. ಕಡಬಡಿ
೧೧೮	ಸಮ್ಮದ್ದಸ್ಸಣ ಸುದ್ಧೋ	೩೨	-	?
೧೧೯	ಸಮ್ಯಕ್ತ್ವೋತ್ತಮ ಹಸ್ತಿ	೧೦೨	-	?
೧೨೦	ಸಲವಣ ರಸಮಂಭೋ	೧೪೩	-	?
೧೨೧	ಸ[ವ್ವೇ]ಹಿ ಭವಣವಾಸೀ	೧೫೫	-	?

*"ಯಾವತ್......" ಎಂಬ ಪದ್ಯವಾದರೊ ಭರ್ತೃಹರಿಯ ವೈರಾಗ್ಯಶತಕದಲ್ಲಿ (೭೫) ಇದೆ"-ಮೂರು ಉಪನ್ಯಾಸಗಳು ಪು. ೧೧೨

*"ಆ ಸಂಸ್ಕೃತ ಶ್ಲೋಕಗಳಲ್ಲಿ ಒಂದೆರಡು ಭರ್ತೃಹರಿಯ ನೀತಿಶತಕದಲ್ಲಿ ದೊರೆಯುತ್ತವೆ"-ಡಿ.ಎಲ್.ಎನ್. ಸಾ.ಪ. ೧೬-೩.

೧೨೨	ಸಾವನಿತೊಂದವಸ್ಥೆ ತನಗಾ	೧೪೩	-	?
೧೨೩	ಸೀದೇಣ ಪುವ್ವವೇರಿಯ	೧೦೬	ಭ.ಆ.-೧೫೪೭	-
೧೨೪	ಸುಖಸ್ಯಾನಂತರಂ ದುಃಖಂ	೯೭	ಸೂಕ್ತಿರತ್ನಹಾರ. ೮-೨೬೨	ಬಿ.ಕೆ. ಕಡಬಡಿ
೧೨೫	ಸೋ ಧಮ್ಮೋ ಜತ್ಥ	೧೧	ನಿಯಮಸಾರ ಟೀಕಾ	ಎ.ಎನ್. ಉಪಾಧ್ಯೆ
೧೨೫ಅ	ಸೋ ಧಮ್ಮೋ ಜತ್ಥ	೯೬	(ಪದ್ಮಪ್ರಭ)೧-೬	ಎ.ಎನ್. ಉಪಾಧ್ಯೆ
೧೨೫ಬ	ಸೋ ಧಮ್ಮೋ ಜತ್ಥ	೧೪೧		ಎ.ಎನ್. ಉಪಾಧ್ಯೆ
೧೨೬	ಸಂಗಂ ನೈವಹಿ	೧೮೫	ಮೃಚ್ಛಕಟಿಕಂ೧-೩೭	ಬಿ.ಕೆ. ಕಡಬಡಿ
೧೨೭	ಸಂನ್ಯಸನೇಸ್ತಿ	೧೪೨	-	?
೧೨೮	ಸಂಸಾರ ಚಕ್ಕವಾಳಮ್ಮಿ	೧೪೩	ಮೂಲಾಚಾರ-೭೯	ಬಿ.ಕೆ. ಕಡಬಡಿ
೧೨೯	ಸ್ಥಿತಸ್ಯವಾ	೧೦೧	-	?
೧೩೦	ಹತ್ಥಿಣಪುರಗುರುದತ್ತೋ	೧೩೬	ಭ.ಆ.-೧೫೫೨	-
೧೩೧	ಹಾ ದುಟ್ಠುಕಯಂ	೧೦೫	ಪ್ರತಿಕ್ರಮಣಸೂತ್ರ(ಭಾವ-ನಗರ ಆವೃತ್ತಿ)ಪು. ೧೦	ಎ.ಎನ್. ಉಪಾಧ್ಯೆ

ಮೇಲಣ ೧೩೧(ಪುನರುಕ್ತಗಳನ್ನೂ ಹಿಡಿದರೆ ೧೪೩) ಪದ್ಯಗಳಲ್ಲಿ ಪ್ರಾಕೃತ ೬೨, ಸಂಸ್ಕೃತ ೫೯, ಕನ್ನಡ ೧೦ ಇದ್ದು, ಇವು ಒಂದೊಂದು ಗ್ರಂಥದಿಂದ ಕೆಳಗಿನಂತೆ ಲಭಿಸಿವೆ.

ಅ.ಸಂ.	ಕೃತಿ	ಕರ್ತೃ	ಒಟ್ಟು ಪದ್ಯ	ಪದ್ಯಗಳ ಕ್ರಮಾಂಕ (ಮೇಲಣ ಯಾದಿಯನ್ನನುಸರಿಸಿ)
೧	ಭಗವತೀಆರಾಧನೆ	ಸಿವಜ್ಜ	೨೪	ಕಥೆಗಳ ತಲೆಯ ಮೇಲೆ ೧೯, 'ಫ' ಪ್ರತಿಯ ಕೊನೆಯಲ್ಲಿ ೩, ಕಥೆಗಳ ಒಡಲಿಲ್ಲಿ೨.
೨	ಮೂಲಾಚಾರ	ವಟ್ಟಕೇರಿ	೧೪	೪, ೧೮, ೨೧, ೨೬, ೨೯, ೩೦, ೩೧, ೪೪, ೪೪ಅ, ೪೪ಬ, ೪೪ಕ, ೪೪ಡ, ೫೧, ೫೫, ೫೭, ೬೩, ೬೭, ೧೨೮
೩	ನಿಯಮಸಾರ	ಕುಂದಕುಂದ	೧	೨೭
೪	ನಿಯಮಸಾರಟೀಕೆ	ಪದ್ಮಪ್ರಭ	೧	೧೨೫
೫	ಮೃಚ್ಛಕಟಿಕ	ಶೂದ್ರಕ	೧	೧೨೬
೬	ವರಾಂಗಚರಿತೆ	ಜಟಾಸಿಂಹ	೨	೩೬, ೯೨
೭	ಪರಮಾತ್ಮ ಪ್ರಕಾಶ	ಜೋಯಿಂದು	೧	೫೦, ೫೦ಅ
೮	ಪರಮಾತ್ಮ ಪ್ರಕಾಶಟೀಕೆ	ಬ್ರಹ್ಮದೇವ	೧	೭೯
೯	ಮಹಾಪುರಾಣ	(ಜಿನಸೇನ+)ಗುಣಭದ್ರ	೧	೧೪
೧೦	ಪಂಚಾಸ್ತಿಕಾಯ		೧	೬೫

೧೧	ರತ್ನಕರಂಡಕ		೧	೭೨
೧೨	ತಿಲೋಯಸಾರ	ನೇಮಿಚಂದ್ರಸಿದ್ಧಾಂತಿ	೧	೧,೧ಅ
೧೩	ದುವ್ವಸಹಾವಪಯಾಸಣಯ ಚಕ್ಕ	ಮಾಇಲ್ಲಧವಲ	೧	೯೧
೧೪	ಪ್ರಶಮರತಿ ಪ್ರಕರಣ		೧	೯೮,೯೮ಅ
೧೫	ಪ್ರವಚನಸಾರ		೧	೧೦೦
೧೬	ಪ್ರತಿಕ್ರಮಣಸೂತ್ರ		೧	೧೩೧
೧೭	ನೀತಿಶತಕ	ಭರ್ತೃಹರಿ	೨	೬೬, ೧೦೨
೧೮	ವೈರಾಗ್ಯಶತಕ	ಭರ್ತೃಹರಿ	೧	೯೯
೧೯	ಸೂಕ್ತಿರತ್ನಹಾರ	ಸೂರ್ಯ	೪	೯,೮೬,೧೧೪,೧೧೭
೨೦	ಸುಭಾಷಿತರತ್ನಕೋಶ	ವಿದ್ಯಾಕರ	೨	೧೦, ೧೧
೨೧	ಸುಭಾಷಿತಾವಲಿ	ಸಕಲಕೀರ್ತಿ	೧	೩೮
೨೨	ಸುಭಾಷಿತಾವಲಿ	ವಲ್ಲಭದೇವ	೧	೯೭
೨೩	ಶತಕತ್ರಯಾದಿ ಸುಭಾಷಿತ ಸಂಗ್ರಹ		೧	೭೧
೨೪	ಸುಭಾಷಿತ ರತ್ನಾಕರ		೧	೭೩
೨೫	ಸುಭಾಷಿತರತ್ನಭಾಂಡಾಗಾರ		೧	೧೦೫
			೬೭	

ಒಟ್ಟು ೨೫ ಮಾತೃಕೆಗಳಿಂದ ೬೭ ಪದ್ಯ, ಗಾಹೆ, ಶ್ಲೋಕಗಳಿಗೆ ಆಕರವನ್ನು ಹುಡುಕಲಾಗಿದೆ. ಮಿಕ್ಕ ೬೪ ಪದ್ಯ[೩೬೦] ಗಾಹೆ ಶ್ಲೋಕಗಳಿಗೆ ಆಕರ ಇನ್ನೂ ಲಭಿಸಿಲ್ಲ. ಈ ೨೫ ಕೃತಿಗಳಲ್ಲಿ ಕೆಲವು ವಡ್ಡಾರಾಧನೆಗೆ ಪ್ರಾಚೀನವಾದ ಮೂಲಗ್ರಂಥಗಳು ಮತ್ತು ಸಂಕಲನಗ್ರಂಥಗಳು, ಇನ್ನು ಕೆಲವು ವಡ್ಡಾರಾಧನೆಗೆ ತರುವಾಯದ ಸಂಕಲನಗ್ರಂಥಗಳು. ಸಂಕಲನಗ್ರಂಥಗಳಲ್ಲಿ ಕಾಲಕಾಲಕ್ಕೆ ಹೊಸ ಪದ್ಯಗಳು ಸೇರಿಕೊಳ್ಳುವುದರಿಂದ ಮೂಲಗ್ರಂಥಗಳನ್ನು ಮಾತ್ರ ವಡ್ಡಾರಾಧನೆಯ ಕಾಲನಿರ್ಣಯಕ್ಕೆ ಆಧಾರವಾಗಿಟ್ಟುಕೊಳ್ಳಬೇಕಾಗುತ್ತದೆ. ಮೇಲಣ ಇಂತಹ ಮೂಲಗ್ರಂಥಗಳಲ್ಲಿ ಗುಣಭದ್ರನ ಉತ್ತರಪುರಾಣವೇ ಈಗಿನ ಮಟ್ಟಿಗೆ ಇತ್ತೀಚಿನದು. ಅದಕ್ಕಾಗಿ ವಡ್ಡಾರಾಧನೆಯ ಕಾಲ ಉತ್ತರಪುರಾಣಕ್ಕೆ ತರುವಾಯವೆಂದು ಪಂಡಿತರ ಮತ. ಆಕರ ಸಿಗದ ೬೪ ಪದ್ಯಗಳಲ್ಲಿ ಕನ್ನಡ ಪದ್ಯಗಳು ಹತ್ತು. ವಡ್ಡಾರಾಧನೆಯ ಕರ್ತೃವೇ ಇವುಗಳನ್ನು ರಚಿಸಿದ್ದರೆ ಆಕರ ಹುಡುಕುವ ಅವಶ್ಯಕತೆಯಿಲ್ಲ.

ವಡ್ಡಾರಾಧನೆಯ ಸಾಹಿತ್ಯಮೌಲ್ಯ:ವಡ್ಡಾರಾಧನೆ ರುಚಿಕಟ್ಟಾದ ೧೯ ಕಥೆಗಳ ಒಂದು ಗುಚ್ಛ. ೩೦ ಪುಟಗಳ 'ಸುಕುಮಾರಸ್ವಾಮಿಯ ಕಥೆ'ಯಿಂದ ೧ ಪುಟದ 'ವೃಷಭಸೇನರೆಂಬ ರಿಸಿಯರ ಕಥೆ'ಯೂ ಇದರಲ್ಲಿವೆ. ಸಾಮಾನ್ಯವಾಗಿ ಈ ಕಥೆಗಳೆಲ್ಲ ಕಾಲ್ಪನಿಕವಾಗಿದ್ದರೂ 'ಭದ್ರಬಾಹುಭಟ್ಟಾರರ ಕಥೆ' ಮುಂತಾದವು ಮಾತ್ರ

---

೩೬೦. ಈ ೬೪ ಪದ್ಯಗಳು ಹೀಗಿವೆ:ಅ. ಸಂ. ೨, ೨ಅ, ೩, ೫, ೬, ೭, ೮, ೧೨, ೧೩, ೧೫, ೧೬, ೧೭, ೧೯, ೨೦, ೨೩, ೨೪, ೨೫, ೨೮, ೩೪, ೩೫, ೪೦, ೪೧, ೪೩, ೪೬, ೪೯, ೫೪, ೫೮, ೫೯, ೬೨, ೬೨ಅ, ೬೪, ೬೮, ೭೪, ೭೫, ೭೬, ೭೭, ೭೮, ೮೦, ೮೧, ೮೨, ೮೩, ೮೪, ೮೫, ೮೭, ೯೦, ೯೩, ೯೫, ೯೬, ೧೦೧, ೧೦೩, ೧೦೪, ೧೦೬, ೧೦೬ಅ, ೧೦೮, ೧೧೦, ೧೧೨, ೧೧೩, ೧೧೪, ೧೧೪ಅ, ೧೧೬, ೧೧೮, ೧೧೯, ೧೨೦, ೧೨೧, ೧೨೨, ೧೨೭, ೧೨೯.

ಐತಿಹಾಸಿಕವೆಂಬ ಭಾವನೆಯನ್ನು ಹುಟ್ಟಿಸುತ್ತವೆ. ಪ್ರತಿಯೊಂದು ಕಥೆಯ ಮುಡಿಯಲ್ಲಿ ಒಂದು ಗಾಹೆ. ಅದರಲ್ಲಿ ಒಂದೆರಡು ಕಥಾ ಎಳೆಗಳು. ಆ ಎರಡು ಎಳೆಗಳನ್ನೇ ಬೆಳೆಸಿಕೊಂಡುನಿಂತ ಒಂದು ಇಡಿ ಕಥೆ. ಸಾಲದುದಕ್ಕೆ ಒಮ್ಮೊಮ್ಮೆ ಆ ಒಂದು ಕಥೆಯಲ್ಲಿಯೇ ಉಪಕಥೆಗಳು. ಆಗಾಗ ಕಥೆಗಳ ಒಡಲಲ್ಲಿ ಕನ್ನಡ, ಸಂಸ್ಕೃತ, ಪ್ರಾಕೃತ ಪದ್ಯಗಳ ಮಿಂಚು. ಇವೆಲ್ಲ ಒಟ್ಟುಗೂಡಿ ಆ ಕಥೆಗಳಿಗೆ ಶೈಲಿವೈವಿಧ್ಯ, ಸಮಷ್ಟಿಸೌಂದರ್ಯ ಸಂಪ್ರಾಪ್ತವಾಗಿದೆ. ಇದು ಒಂದೊಂದು ಕಥೆಯ ಸ್ವರೂಪ.

ಹತ್ತೊಂಬತ್ತೂ ಕಥೆಗಳ ಉದ್ದೇಶ (ವಸ್ತು), ಶಿಲ್ಪ ಒಂದೇ ಆಗಿದ್ದರೂ ತಂತ್ರಜೋಡಣೆ, ಭಾಷಾಸಹಜತೆಗಳ ಮೂಲಕ ತಲೆದೋರಬಹುದಿದ್ದ ಪಡಿಯಚ್ಚು ಕ್ರಮ ಇಲ್ಲದಾಗಿದೆ; ಒಂದೊಂದು ಕಥೆಗೂ ಒಂದೊಂದು ರುಚಿ ಬಂದಿದೆ.

"ದೇವೋಪಸರ್ಗ ಮನುಷ್ಯೋಪಸರ್ಗ ತಿರಿಕೋಪಸರ್ಗಮಚೇತನೋಪಸರ್ಗಮೆಂದಿಂತು ಚತುರ್ವಿಧಮಪ್ಪುಪಸರ್ಗಮುಮಂ ಪಸಿವುಂ ನೀರಟ್ಕೆ ಮೊದಲಾಗೊಡೆಯ ಇಪ್ಪತ್ತೆರಡು ಪರೀಷಹಂಗಳುಮಂ ಸೈರಿಸಿ ಅಯ್ದುಮಿಂದ್ರಿಯಂಗಳಂ ಗೆಲ್ದು ಬಾಹ್ಯಾಭ್ಯಂತರ ಪರಿಗ್ರಹಂಗಳಂ ತೊಱೆದು ದ್ವಾದಶವಿಧಮಪ್ಪ ತಪದೊಳ್ ನೆಗಟ್ದು ಪ್ರಾಯೋಪಗಮನದಿಂ ಸನ್ಯಸನಂಗೆಯ್ದು ಕರ್ಮಕ್ಷಯಂ ಗೆಯ್ದು ಮೋಕ್ಷ"[೩೬೧] ಸಂಪಾದಿಸುವುದನ್ನು ನಿರೂಪಿಸುವುದೇ ಈ ಎಲ್ಲ ಕಥೆಗಳ ವಸ್ತು (ಉದ್ದೇಶ). ಈ ವಸ್ತುವರ್ತುಲದಿಂದ ಒಂದು ಕಥೆಯೂ ಹೊರಗಾಗಿಲ್ಲ; ಹೊರಗಾಗಬಾರದು. ಹೀಗಾಗಿ ಇವು ವಸ್ತುವೈವಿಧ್ಯವಿಲ್ಲದ ಕಥೆಗಳೆಂದು ಒಪ್ಪಿಕೊಳ್ಳಬೇಕಾಗುತ್ತದೆ.

ಇನ್ನು ವಸ್ತುನಿರೂಪಣೆಯ ಚೌಕಟ್ಟು ಅಥವಾ ಶಿಲ್ಪ ಹರಿಹರನ ರಗಳೆಗಳಂತೆ ಒಂದೇ ಬಗೆಯಾಗಿದೆ. 'ಈ ಜಂಬೂದ್ವೀಪದ ಭರತಕ್ಷೇತ್ರದೊಳ್.......' ಒಂದು ನಾಡು. ಅಲ್ಲಿ ಒಂದು ಪಟ್ಟಣ. ಅದನ್ನಾಳುವವ ಒಬ್ಬ ಅರಸ. "ಅತ್ಯಂತ ರೂಪ ಲಾವಣ್ಯ ಸೌಭಾಗ್ಯ ವಿಭ್ರಮ ಕಾಂತಿ ಹಾವ ಭಾವ ವಿಲಾಸ ವಿಭ್ರಮಂಗಳನೊಡೆಯಳ್" ಆತನ ಅರಸಿ (ಪು. ೨, ೧೬, ೧೭, ೨೫, ೩೩, ೫೧, ೬೩, ೧೩೦, ೧೬೩ ಇತ್ಯಾದಿ). ರಾಜದಂಪತಿಗಳು ಮಕ್ಕಳು ಮಂತ್ರಿಗಳೊಡನೆ 'ಸುಖ ಸಂಕಥಾ ವಿನೋದದಿಂ' ಕಾಲಕಳೆಯುವುದು (ಪು. ೪, ೪೩, ೪೫, ೬೧, ೧೮೫ ಇತ್ಯಾದಿ). ಮಂಗಲಕಾರ್ಯಗಳೆಲ್ಲ "ಪ್ರಶಸ್ತದಿನ ವಾರ ನಕ್ಷತ್ರ ಮುಹೂರ್ತಹೋರಾಲಗ್ನದೊಳ್" ಜರುಗುವುದು (ಪು. ೩೩,೬೨,೧೪೯ ಇತ್ಯಾದಿ). ದಂಪತಿಗಳು "ಸಪ್ತತಳ ಪ್ರಾಸಾದದ ಮೇಗಿರ್ಪರುಂ ದಿಶಾವಲೋಕನಂಗೆಯ್ಯು"ವುದು (ಪು. ೪೩, ೧೯೯ ಇತ್ಯಾದಿ). "ನಟ್ಟನಡುವಿರುಳೊಳ್ ಮಣಿಖೇಟಮಮುರದೊಳ್ ಸಾರ್ಚಿ ಕಿಟ್ಟಿಬಾಳವೆರಸು" ವಿಹರಿಸುವುದು (ಪು. ೧೫೮, ೧೮೧ ಇತ್ಯಾದಿ). ಅಲ್ಲಿ ಬಳಸುವವೆಲ್ಲ "ಪಟು ಪಟಹ ತುಣವ ಬಂಭಾಮರ್ದ್ದಳೆ ಝಲ್ಲರಿ ಮುಕುಂದ ತಾಳಕಹಳ ಶಂಖವಂಶವೀಣಾ"ವಾದ್ಯಗಳು (ಪು. ೮೩, ೧೪೬,೧೯೭ ಇತ್ಯಾದಿ). ಮುನಿಗಳೆಲ್ಲ "ಗ್ರಾಮ ನಗರ ಖೇಡ ಖರ್ವಡ ಮಡಂಬ ಪಟ್ಟಣ ದ್ರೋಣಾಮುಖಂಗಳಂ " ವಿಹಾರಗೈಯುವುದು (ಪು.೭,೨೭,೪೫,೭೨,೧೧೪, ೧೩೮, ೧೬೩,೧೯೧ ಇತ್ಯಾದಿ). ಅವರು "ಗ್ರಾಮೇ ಏಕರಾತ್ರಂ ನಗರೇ ಪಂಚರಾತ್ರಂ ಅಟವ್ಯಾಂ ದಶರಾತ್ರಮೆಂಬೀ ನ್ಯಾಯದಿಂ" ವಸತಿ ನಿಲ್ಲುವುದು(ಪು. ೭,೪೫ ಇತ್ಯಾದಿ). "ಕಿಱುಮನೆ ಪೆರ್ಮನೆಯೆನ್ನದುಣಲಿಕ್ಕುವ ಮನೆಗಳಂ

---

೩೬೧. ವಡ್ಡಾ. ಪು. ೧

ಚರಿಗೆ"ಗಾಗಿ ತಿರುಗುವುದು (ಪು. ೭,೪೯,೭೮ ಇತ್ಯಾದಿ). ಉಗ್ರತಪಸ್ಸಿನಿಂದ ಅವರ ಶರೀರವು "ಗಿಡಿಗಿಡಿಜಂತ್ರಂ, ಮಿಳಿಮಿಳಿನೇತ್ರಂ" ಆಗಿರುವುದು (ಪು. ೧೩೪, ೧೫೧). "ಪೆಜಿರುಂ...... ಚತುರ್ವಿಧಮಪ್ಪುಪಸರ್ಗಮಂ ಪಸವುಂ ನೀರಟ್ಕೆ ಮೊದಲಾಗೊಡೆಯ ಇರ್ಪ್ಪತ್ತೆರಡು ಪರೀಷಹಂಗಳಂ ವ್ಯಾಧಿಯೊಳಪ್ಪ ವೇದನೆಗಳುಮಂ ಸೈರಿಸಿ......ಶುಭಪರಿಣಾಮದಿಂ ಮಿಕ್ಕ ದರ್ಶನಜ್ಞಾನಚಾರಿತ್ರಂಗಳನಾರಾಧಿಸಿ ಸ್ವರ್ಗಾಪವರ್ಗ ಸುಖಂಗಳನೆಯ್ದುಗೆ" ಎಂದು ವಾಚಕರಿಗೆ ಬೋಧಿಸಿ ಕಥೆ ಮುಕ್ತಾಯಗೊಳ್ಳುವುದು- ಈ ಎಲ್ಲ ಮಾತುಗಳೂ ಘಟನೆಗಳೂ ಪುನಃ ಪುನಃ ಬಂದು, ಎಲ್ಲ ಕಥೆಗಳೂ ಒಂದು ದಿಕ್ಕಿನಿಂದ ಪ್ರಾರಂಭವಾಗಿ ಇನ್ನೊಂದು ದಿಕ್ಕಿನಲ್ಲಿ ಪರ್ಯವಸಾನಗೊಳ್ಳುವುದು, ಅವುಗಳ ಶಿಲ್ಪಕ್ಕೆ ಏಕಸ್ವರೂಪವನ್ನು ಒದಗಿಸಿದೆ. ಆದರೆ ಒಟ್ಟು ಕಥೆಯ ರಮ್ಯತೆಯಲ್ಲಿ, ದೋಷವೆನಿಸಬಹುದಾದ ಇದು ಮುಚ್ಚಿಹೋಗುತ್ತದೆ. ಹೀಗೆ ರಾಜಕೀಯ ನಿರೂಪಣೆಯಲ್ಲಿ ಉಗಮಗೊಂಡು, ಸಾಮಾಜಿಕ ಧಾರ್ಮಿಕ ವಿವರಣೆಯಲ್ಲಿ ವಿಕಾಸಗೊಂಡು, ಸಮಾಧಿಮರಣದಲ್ಲಿ ಪರ್ಯವಸಾನಗೊಳ್ಳುವ ಈ ಕಥೆಗಳಿಗೆ ಕೀರ್ತಿ ತಂದುವು ಘಟನೆ, ತಂತ್ರ ಮತ್ತು ಭಾಷೆ.

ವಡ್ಡಾರಾಧನೆಯ ಘಟನೆಗಳು ಅದ್ಭುತಮಯ ಮತ್ತು ಕುತೂಹಲಮಯ. ಇಲ್ಲಿ ದೇವ, ನಾರಕ, ತಿರ್ಯಕ್, ಮನುಷ್ಯಲೋಕದ ವಿವಿಧ ಬಗೆಯ ಘಟನೆಗಳು ಒಂದರ ಮೇಲೊಂದು ಬಂದು ಓದುಗನ ಆಸಕ್ತಿಯನ್ನು ಕೆರಳಿಸುತ್ತವೆ. ನೀರಿನಲ್ಲಿ ಬಿದ್ದ ಉಂಗುರ ಮರುದಿನ ತಲೆಯೆತ್ತಿದ ತಾವರೆ ದೇಟಿನ ಮೂಲಕ ಮೇಲೆ ಬರುವುದು, ಮೋದಾಳಿಯ ವಿಫಲ ಮದುವೆ, ಸುಕುಮಾರಸ್ವಾಮಿಯ ಸೌಕುಮಾರ್ಯ, ಗಂಭೀರೆಯ ಕಥೆ, ಕಾರ್ತಿಕೆಯನ್ನು ತಂದೆಯೇ ಮದುವೆಯಾಗುವುದು- ಇವು ಓದುಗನನ್ನು ವಿಸ್ಮಯಗೊಳಿಸುವ ಘಟನೆಗಳು.

ಬಿಡಿಬಿಡಿಯಾದ ಈ ಘಟನೆಗಳನ್ನು ಒಂದು ಕ್ರಮದಲ್ಲಿ ಮುನ್ನಡೆಸುವ ತಂತ್ರವೂ ಅಷ್ಟೇ ಫಲಕಾರಿಯಾಗಿದೆ. ಕಥೆಯಲ್ಲಿ ಕಥೆಯನ್ನು ಅಂತರ್ಗತಗೊಳಿಸಿದ್ದರೂ ಒಟ್ಟು ಚೌಕಟ್ಟಿಗೆ ಎಲ್ಲಿಯೂ ಭಂಗಬಂದಿಲ್ಲ. ಕಥೆಯ ಜೀವವಾಹಿನಿಯ ಏಕಸೂತ್ರತೆ ಕಡಿದುಹೋಗಿಲ್ಲ.

ವಡ್ಡಾರಾಧನೆಯ ಇನ್ನೊಂದು ಪ್ರಮುಖ ಅಂಶ ಆತ್ಮೀಯಭಾಷೆ, ಮನೋಹರಶೈಲಿ. "ಕೊಯ್‌ತಲೆಯಧಮಾ ನೀಚಾ ಸ್ವಾಮಿಯನಿಂತೆಂಬಾ"[೩೬೨] "ದುರಾತ್ಮಾ ಎನ್ನನೊದೆದ ನಿನ್ನ ಕಾಲ್ಗಳಂ..... ನಾಯುಂ ನರಿಯುಮಾಗಿ...... ಮಕ್ಕಳ್ವೆರಸಿ ತಿಂಬೆನಕ್ಕೆ"[೩೬೩], "ಇಂತೇಕೆ ಬಿನ್ನನಾಗಿ ಚಿಂತಿಸುತ್ತಿರ್ದೆಯಮ್ಮಾ"[೩೬೪], "ಮಗನೆ ಅರಸರ್‌ವಂದರ್ ಬಾ ಪೋಪಂ"[೩೬೫], "ನೀನೇಕೆ ನಕ್ಕಪ್ಪೆಯುಮ್ಮಾ"[೩೬೬], "ಭಟಾರಾ ಎಮಗಾಯುಷ್ಯಮೆನಿತುಂಟು"[೩೬೭], "ಭಟಾರಾ ಎನ್ನ ಪೊಟ್ಟಲೊಳಿರ್ಪ ಇಳಾಮಹಾದೇವಿಗೆ ಮಕ್ಕಳೇನಕ್ಕುಮೊ"[೩೬೮], "ಎಲೆ ಕೂಸೆ ನೀರಂ ಕುಡಿಯಲೆಱೆಯಾ"[೩೬೯], "ಮಗನೆ ನೀನಿನ್ನುಂ ಕೂಸನೈ"[೩೭೦], "ಅಬ್ಬಾ ನಿಮ್ಮ ತಂದೆಯಪ್ಪೆಮ್ಮಜ್ಜನೊಳನೊ ಇಲ್ಲೆಯೊ"[೩೭೧] ಇಂತಹ ವಾಕ್ಯಗಳಲ್ಲಿ ಶೈಲಿ ಆತ್ಮೀಯವಾತಾವರಣವನ್ನುಂಟು ಮಾಡಿ ಓದುಗರ ಎದೆಯನ್ನು ಆರ್ದ್ರಗೊಳಿಸುತ್ತದೆ.

---

೩೬೨. ವಡ್ಡಾ. ೭.
೩೬೩. ವಡ್ಡಾ. ೮
೩೬೪. ವಡ್ಡಾ. ೧೫
೩೬೫. ವಡ್ಡಾ ೨೬
೩೬೬. ವಡ್ಡಾ. ೧೦೦
೩೬೭. ವಡ್ಡಾ ೧೦೦
೩೬೮. ವಡ್ಡಾ ೧೦೮
೩೬೯. ವಡ್ಡಾ ೧೧೧
೩೭೦. ವಡ್ಡಾ ೧೧೩
೩೭೧. ವಡ್ಡಾ ೧೧೬

"ಪಾಪಂಗಳಂ ಗೆಯ್ವವರಾನೆಯುಂ ಸಿಂಹಮುಂ ಪುಲಿಯುಂ ಕರಡಿಯುಂ ಪುಲ್ಲೆಯುಂ ಮೊಲನುಂ ಪಂದಿಯುಂ ತೋಳನುಂ ಸೀನ್ನಾಯುಂ ಮತ್ತಮೆಟ್ಟುಕಟ್ಟಿಯುಂ ಪಶುವುಮೆರ್ಮೆಯುಂ ಕುದುರೆನಾಯೊಟ್ಟೆಯುಮುಡುವುಂ ಪಾವುಮಿಲಿಯುಂ ಬೆರ್ಕುಮೊಂತಿಯುಂ ಕಪ್ಪೆಯುಂ ಮುಂಗುರಿಯುಂ ಮೊದಲಾಗೊಡೆಯ ಸ್ಥಲಚರಂಗಳುಂ, ಮೀನುಂ ಮೊಸಳೆಯುಂ ನೆಗೞುಮಾಮೆಯುಂ ಮಕರಮುಂ ತಿಮಿತಿಮಿಂಗಿಳಂ ಮೊದಲಾಗೊಡೆಯ ಜಲಚರಂಗಳುಂ, ಕಾಗೆ ಗೂಗೆ ಪರ್ದು ಚಕೋರಂ ಹಂಸೆ ಕುರ್ಕು ಗಿಳಿ ಪುರುಳಿ ಪೆಂಗುರು ಕಾರಂಡಮಾಂದೆ ಮೊದಲಾಗೊಡೆಯ ಗಗನಚರ...."[೩೭೨] ಎಂದು ಹೇಳುವುದು ಬಾಲವಾಚಾಳಿತನದಂತೆ ಶೋಭಿಸಿದೆ.

"ಬೂತಿಂಗೆ ದ್ರಮ್ಮಮನಾನ್ತವನ ತಲೆಯಂ ಕಿರಿಸಿ, ಕರಿಯ ಕೋವಣವನುಡಿಸಿ, ಪಲ್ಗಳೊಳ್ ಕವಡಿಕೆಯಂ ಕಟ್ಟಿಸಿ ಕುಂಚಮಂ ಕೊಟ್ಟು......"[೩೭೩] "ಕರಿಯ ಕಚ್ಚುಟಮನುಟ್ಟು, ಮೈಯ್ಯೆಲ್ಲಂ ಮಸಿಯಂ ಪೂಸಿ ಬೋೞಿದಲೆವೆರಸು, ಬಾಯೊಳ್ ಕವಡಿಕೆಗಳಂ ಪಲ್ಗಳಂತೆ ಮಾಡಿ, ಕುಂಚಮುಂ ಗುಂಡಿಗೆಯುಮಂ ಪಿಡಿದು"[೩೭೪] ಎಂಬ ವೇಷಧಾರಣೆ ಚಿತ್ರವತ್ತಾಗಿದೆ.

"ಮನೋಹರಿಯೆಂಬೊಳ್ ಪೆಸರ್ಗೆ ತಕ್ಕಂತೆ ನೋಡಿದರೆಲ್ಲರ್ಗಳ ಕಣ್ಣಾಲಿಗೆ ಸೊಗಯಿಸುವಳ್"[೩೭೫], "ರಿಸಿಯರ್ ತಿಳಿಯೆ ಧರ್ಮಮಂ ಪೇೞ್ದೊಡೆರ್ದೆಯೊಳ್ ಮೆಲ್ಲಿದಳಾಗಿ"[೩೭೬], "ಸರ್ವಾಲಂಕಾರ ಭೂಷಿತೆಯಾಗಿಯಾದಮಾನುಂ ಕೈಗೆಯ್ದು ಚೆಲ್ವೆಯಾಗಿ"[೩೭೭], "ತನ್ನ ಪೆಂಡಿರೊಳ್ ಸಂತೋಸಂಬಡೆಯದೆ ಮೋದಾಳಿಯೊಳ್ ಮಱಿವಾೞುತ್ತಿರ್ಕುಂ"[೩೭೮], "ಸೋಮಶರ್ಮ ಭಟ್ಟಂ....... ಕೀಲಿಸಿದಂತಿರ್ದೊಂ"[೩೭೯], "ಇವರ ಕಾಲಡಿಗಳನೆಮ್ಮ ತಲೆಗಳೆಂಬ ತಾಮರೆಯ ಪೂಗಳಿಂದರ್ಚಿಸಿ",[೩೮೦] "ತಣ್ಣಿದುವುಂ ಸುಗಂಧಮುಮಪ್ಪ ನೀರ್ಗಳಂ ತಂದು",[೩೮೧] "ತಲೆನವಿರಂ ಪಿಡಿದು ದಱಿದಱಿನೆಳೆದುಕೊಂಡುಬಂದು",[೩೮೨] "ಚಿತ್ರಪಟಮಂ ಕೆದಱಿದಂತೆಯಾಕಾಶಮೆಲ್ಲಮಂ ವ್ಯಾಪಿಸಿ,"[೩೮೩]"ರಿಸಿಯರ ಮೆಯ್ಯ ತೊಗಲ್ ಪಾವಿನ [ಪೆ]ರೆ ಸುಲಿವಂತೆ ಸುಲಿದುಪೋಗಿ"[೩೮೪], "ಗಿಡಿಗಿಡಿಜಂತ್ರಂ ಮಿಳಮಿಳಿನೇತ್ರರಪ್ಪ ಮಾಸೋಪವಾಸಂಗೆಯ್ದ ರಿಸಿಯರ್",[೩೮೫] "ಖೇಚರ ಕನ್ನೆಯರ್ಕಳ ಕಣ್ಗಳೆಂಬ ಮೀಂಗಳ್ ಕುಮಾರನ ರೂಪೆಂಬ ಗಾಳದಿಂ ತೆಗೆಯೆಪೆಟ್ಟು"[೩೮೬], "ನೀನೆನ್ನಂ ಪಸವಿನಿಂದಂ ಸುಟ್ಟೆಯಂತೆಯಾನುಂ ನಿನ್ನಂ ಕಿಚ್ಚಿನಿಂದಂ ಸುಟ್ಟಪೆಂ"[೩೮೭], "ತಲೆಯಂ ಬಾಗಿ ಮಱುಮಾತುಗುಡದೆ ಕಣ್ಣನೀರಂ ತೀವಿ ನೆಲನಂ ಬರೆಯುತ್ತಿರೆ", [೩೮೮]"ಪೆಂಡತಿಯಂ ಸೊಪ್ಪು ನಾರಾಗಿ ಬಡಿಯೆ"[೩೮೯] ಎಂಬಲ್ಲಿ ಅಭಿವ್ಯಕ್ತಿಯ ರೀತಿ, ಸಾರ್ಥಕ ಪದಪ್ರಯೋಗಗಳು ಎದ್ದುಬರುತ್ತವೆ; ಓದುಗನ ಮನದಲ್ಲಿ ಸ್ಥಿರಹೆಜ್ಜೆ ಮೂಡಿಸುತ್ತವೆ.

---

೩೭೨. ವಡ್ಡಾ ೯೭

೩೭೩. ವಡ್ಡಾ ೧೭೭

೩೭೪. ವಡ್ಡಾ ೧೧೮

೩೭೫. ವಡ್ಡಾ ೨

೩೭೬. ವಡ್ಡಾ ೧೧

೩೭೭. ವಡ್ಡಾ ೧೫

೩೭೮. ವಡ್ಡಾ ೨೧

೩೭೯. ವಡ್ಡಾ ೨೨

೩೮೦. ವಡ್ಡಾ. ೯೯

೩೮೧. ವಡ್ಡಾ. ೧೦೩

೩೮೨. ವಡ್ಡಾ ೧೧೭

೩೮೩. ವಡ್ಡಾ ೧೭೩

೩೮೪. ವಡ್ಡಾ. ೧೭೨

೩೮೫. ವಡ್ಡಾ. ೪೬

೩೮೬. ವಡ್ಡಾ. ೫೭

೩೮೭. ವಡ್ಡಾ ೧೫೩

೩೮೮. ವಡ್ಡಾ ೨

೩೮೯. ವಡ್ಡಾ ೧೫೩

ಇದಲ್ಲದೆ "ಸುರಟಮೆಂಬುದು ನಾಡು+ಅಲ್ಲಿ ಗಿರಿನಗರಮೆಂಬುದು ಪೊಟಿಲ್+ಆದನಾಳ್ವೊಂ ನಿನ್ನಾಳ್ ಮಹಾಸಾಮಂತನತಿರಥನೆಂಬೊಂ+ಆತನರಸಿ ಗೌರಿಯೆಂಬೊಳ್......."[390] ಎಂಬಂತಹ ಕ್ರಿಯಾಪದಗಳನ್ನು ಕೃದಂತಕ್ಕೆ ತಿರುಗಿಸಿದ ಸುಂದರವಾಕ್ಯಗಳು ಕಥನಶೈಲಿಗೆ ಬಣ್ಣತುಂಬಿವೆ; ಗದ್ಯವನ್ನು ಹೃದ್ಯಗೊಳಿಸಿವೆ.

ಮರಲುಂದು, ತುಱುಪಟ್ಟಿ, ಮಱಿವಾಳ್, ಸೊಪ್ಪುನಾರಾಗಿ ಬಡಿ, ಒಲ್ಲಣಿಗೆ, ಬಿರ್ದಿ, ಸೋಂಕಿಲ, ನೀರಿಟಿ, ಕುರಿವಡ, ಉಳಿಸೆಂಡು, ಪುಡುಕುನೀರ್, ಸಂಜೆವಾರಿಸು, ಕಿರುಂಡೆಗ, ಬಾಲವದ್ದೆ, ಬೊದ್ದಣಬಾವಿ ಮೊದಲಾದ ಅಪೂರ್ವ ದೇಸಿಪದಗಳು ಮುತ್ತುಹವಳದಂತೆ ಬಿತ್ತರಗೊಂಡಿವೆ. ಹೀಗೆ ಘಟನೆ, ತಂತ್ರ, ಭಾಷೆ, ಕಥನಶೈಲಿ ಮೊದಲಾದ ಗುಣಗಳಿಂದಾಗಿ ಈ ಕೃತಿಗೆ ವಿಶಿಷ್ಟ ಸೊಗಸು ಪ್ರಾಪ್ತವಾಗಿದೆ.

ಕನ್ನಡ ಸಾಹಿತ್ಯದಲ್ಲಿ ವಡ್ಡಾರಾಧನೆಯಂತೆ ಪಂಚತಂತ್ರ, ಧರ್ಮಾಮೃತ, ಜೀವಸಂಬೋಧನೆ ಮುಂತಾದ ಕಥಾಸಂಪುಟಗಳಿವೆ; ಆದರೆ ವಡ್ಡಾರಾಧನೆಯ ರೀತಿಯೇ ಬೇರೆ, ರುಚಿಯೇ ಬೇರೆ. ಧರ್ಮಾಮೃತದ ವೈಶಿಷ್ಟ್ಯವಿದ್ದುದು ಉಪಮೆ, ಗಾದೆಗಳಲ್ಲಿ. ವಡ್ಡಾರಾಧನೆಯ ವೈಶಿಷ್ಟ್ಯವಿದ್ದುದು ಕಥನಗುಣ, ಆತ್ಮೀಯಭಾಷೆಗಳಲ್ಲಿ. ಹೀಗಾಗಿ ಇದು ಕನ್ನಡ ಕಥಾಸಾಹಿತ್ಯದ ಮುಡಿಯ ಮಾಣಿಕ್ಯವೆನಿಸಿದೆ. ಇದಲ್ಲದೆ ಪ್ರಾಚೀನ ಆರಾಧನಾಸಾಹಿತ್ಯ ರಚನೆಗೊಂಡುದು ಕೇವಲ ಸಂಸ್ಕೃತ ಮತ್ತು ಪ್ರಾಕೃತಭಾಷೆಗಳಲ್ಲಿ. ವಡ್ಡಾರಾಧನೆ ಮಾತ್ರ ಪ್ರಾಂತಭಾಷೆಯಲ್ಲಿ ಬರೆದ ಏಕೈಕ ಆರಾಧನಾಕೃತಿ. ಹೀಗಾಗಿ ಕನ್ನಡ ಕಥಾಸಾಹಿತ್ಯದ 'ಮುಡಿಯ ಮಾಣಿಕ್ಯ'ವಾದ ಈ ಕೃತಿಗೆ ಭಾರತೀಯ ಮಹತ್ವ ಸಲ್ಲುತ್ತದೆ.

ಗಜಾಂಕುಶ

ಗಜಾಂಕುಶ, ಗಜಗ ಎಂಬ ಕವಿಯ ಚರಿತ್ರೆ ಇನ್ನೂ ಸಂಶೋಧಕರ ಕೈಗೆ ನಿಲುಕದೆ ನಿಂತಿದೆ. ಈತನ ಕಾಲ ಕ್ರಿ.ಶ. ೧೦೦೦ ಎನ್ನುವ ಕವಿಚರಿತೆಕಾರರ,[391] ಕ್ರಿ.ಶ. ೯೪೦ ಎನ್ನುವ ಡಿ.ಎಲ್.ಎನ್. ಅವರ[392] ಅಭಿಪ್ರಾಯಗಳನ್ನು ಪರಿಶೀಲಿಸಿ ಸತ್ಯವನ್ನು ಅರಿಯುವಲ್ಲಿ ನಾವು ಅವಲಂಬಿಸಬೇಕಾದುದು ೧. ಶಾಸನಗಳು, ೨. ಕೊಲ್ಲಾಪುರ ಸಾಮಂತರಾಜರ ಚರಿತ್ರೆ, ೩. ಕಾವ್ಯಪ್ರಾರಂಭದ ಸ್ತುತಿಗಳೆಂಬ ಮೂರುತೆರನಾದ ಆಧಾರಗಳನ್ನು.

ಸಾಲೊಟಗಿ ಶಾಸನ:[393] ರಾಷ್ಟ್ರಕೂಟ ಕೃಷ್ಣIIIನ ಸಂಧಿವಿಗ್ರಹಿ ನಾರಾಯಣಗಜಾಂಕುಶನು ಸಾಲೊಟಗಿಯಲ್ಲಿ ವಿದ್ಯಾಲಯವನ್ನು ಕಟ್ಟಿಸಿದುದು ಇತಿಹಾಸಪ್ರಸಿದ್ಧ ಸಂಗತಿ. ಈ ಗ್ರಾಮದ ಒಂದು ಶಾಸನದಲ್ಲಿ ಈತನ ವಿಷಯ ಹೀಗೆ ಬರುತ್ತದೆ:

"ಇಹ ಕರ್ಣಪುರೀ ನಾಮ ವಿಷಯೇ ವಿಷಯೋತ್ತಮೇ।
ಪಾವಿಟ್ಟಗೇತಿ ಖ್ಯಾತನಾಮ ಗ್ರಾಮೇ ಮನೋರಮೇ॥
ಶ್ರೀಮತಿ ಮಾಹಿಷವಿಷಯೇ ಕಾಂಚನ ಮುದುವೊಟಲಿತಿ ಪ್ರಸಿದ್ಧೇಗ್ರಾಮೇ।
ವಾಸ್ತವ್ಯಃ ಕೌಂಡಿನ್ಯೋ ವಾಜಸನೇಯಸ್ತು ಕಾಣ್ವಶಾಖಾಧ್ಯಯನಃ॥

---

೩೯೦. ವಡ್ಡಾ. ೩೮ ೩೯೧. ಕ.ಕ.ಚ. ಪು. ೭೪

೩೯೨. ಗಜಾಂಕುಶ (ಪ್ರ.ಕ. ೧೪-೨) ೩೯೩. Salotgi Pillar inscriptions-Prof. Kielhorn & H. Krishnashastri. E.I. iv. P. 57

ದಾಮಪಾರ್ಯ ಸುತಃ ಶ್ರೀಮಾನ್ನದಾನ್ಯೋಯಃ ಪ್ರತಾಪವಾನ್।
ನಾರಾಯಣಾಭಿಧಾನೇನ ನಾರಾಯಣ ಇವಾ ಪರಃ॥
ವಿಖ್ಯಾತೋ ಭುವಿ ವಿದ್ಯಾವಾನ್ ಯೋ ಗಜಾಂಕುಶ ಸಂಜ್ಞಯಾ।
ಪ್ರಧಾನಃ ಕೃಷ್ಣರಾಜಸ್ಯ ಮಂತ್ರೀ ಸನ್ ಸಂಧಿವಿಗ್ರಹೀ॥
ತಸ್ಯ ಯಃ ಪ್ರತಿಹಸ್ತೋಽಭೂತ್ ಪ್ರಿಯೋ ದಕ್ಷಿಣಹಸ್ತವತ್।
ನಿಯುಕ್ತಸ್ತೇನ ತೇನ ತೇಜಸ್ವೀ ಸಂಧಿವಿಗ್ರಹ ಕರ್ಮ್ಮಣಿ।
ಪಾರಗೋ ರಾಜವಿದ್ಯಾನಾಂ ಕವಿಮುಖಿಃ ಪ್ರಿಯಂವದಃ॥
ಯಸ್ತು ಧರ್ಮರತೋ ಭಾತಿ ಧರ್ಮೋ ವಿಗ್ರಹವಾನಿವ।
ತೇನೇಯಂ ಕಾರಿತಾ ಶಾಲಾ ಶ್ರೀವಿಶಾಲಾ ಮನೋರಮಾ॥

ಮಾಹಿಷವಿಷಯದ ಕಾಂಚನ ಮುದುವೊಳಲುಗ್ರಾಮ ನಿವಾಸಿಯಾದ ದಾಮಪಾರ್ಯನ ಮಗ ನಾರಾಯಣ. ಕೌಂಡಿಣ್ಯಗೋತ್ರದ ವಾಜಸನೇಯ ಸೂತ್ರದ ಕಣ್ವಶಾಖೆಯ ಈತನ ಇನ್ನೊಂದು ಹೆಸರು ಗಜಾಂಕುಶ. ರಾಷ್ಟ್ರಕೂಟ ಕೃಷ್ಣ IIIನ ಸಂಧಿವಿಗ್ರಹಿ, ರಾಜವಿದ್ಯಾಪಾರಂಗತ, ಕವಿಮುಖಿ ಪ್ರಿಯಂವದ. ಧರ್ಮರತನಾದ ಇವನು (ಸಾಲೊಟಗಿಯಲ್ಲಿ)ಶಾಲೆಯನ್ನು ನಿರ್ಮಿಸಿದನೆಂದು ಈ ಪದ್ಯಗಳಿಂದ ತಿಳಿದುಬರುತ್ತದೆ.

ಮಡಕಶಿರಾ ಶಾಸನ:[೩೯೪] ರಾಷ್ಟ್ರಕೂಟ ಕೃಷ್ಣIIIನ ಆಳಿಕೆಗೆ ಸಂಬಂಧಿಸಿದ ಈ ವೀರಗಲ್ಲಿನ "ಕಿಱಿಯ ಪೊನ್ನಯ್ಯ ಬಲ್ಲಹನ ಬೆಸದಾಳು, ಗಜಾಂಕುಸಚೋೞನ ಮೇಗೆ ದಂಡುವೋಗಲು" ಎಂಬ ವಾಕ್ಯಕ್ಕೆ ಈ ಶಾಸನ ಸಂಪಾದಕರು "Kiriya Ponnayya the servant of Ballah is started to have led army against Gajankusa-Chola" ಎಂದು ಅರ್ಥಮಾಡಿದ್ದಾರೆ. ಆದರೆ ಈ ವಾಕ್ಯವನ್ನು "........ಕಿಱಿಯ ಪೊನ್ನಯ್ಯ, ಬಲ್ಲಹನ ಬೆಸದಾಳು ಗಜಾಂಕುಸ, ಚೋೞನ ಮೇಗೆ ದಂಡುವೋಗಲು" ಎಂದು ಅನ್ವಯಿಸಲು ಬರುವುದರಿಂದಲೂ E.C. xii ಶಿರಾ ೩೫ರಲ್ಲಿ ಈ ಶಾಸನಕ್ಕೆ 'ಗಜಾಂಕೂಸಂ ಚೋೞನ ಮೇಗೆ' ಎಂಬ ಪಾಠವಿರುವುದರಿಂದಲೂ ಕಿರಿಯ ಪೊನ್ನಯ್ಯ ಮತ್ತು ಬಲ್ಲಹನ ಬೆಸದಾಳು ಗಜಾಂಕುಶ ಇವರು ಚೋೞನ ಮೇಲೆ ಏರಿಹೋದರು ಎಂದು ಎಂ. ವೆಂಕಟರಾಮಯ್ಯನವರು ಹೊಸ ಅರ್ಥವನ್ನು ಕಲ್ಪಿಸಿರುವರು.[೩೯೫] ಇವರ ಅಭಿಪ್ರಾಯ ಸತ್ಯವೆನಿಸುವುದರಿಂದ ಚೋೞ ಬೇರೆ, ಬಲ್ಲಹನ ಅಂದರೆ ರಾಷ್ಟ್ರಕೂಟ ಕೃಷ್ಣIIIನ ಬೆಸದಾಳು ಗಜಾಂಕುಶ ಬೇರೆ. ಈ ಶಾಸನದ ಕಾಲ ಕ್ರಿ.ಶ. ೯೪೮, ಒಬ್ಬ ಅರಸನ ಕೈಕೆಳಗೆ ಒಂದೇ ಕಾಲದಲ್ಲಿ ಒಂದೇ ಹೆಸರಿನ ಇಬ್ಬರು ಅಧಿಕಾರಿಗಳು ಇರುವುದು ಅಷ್ಟು ಸಂಭವವಲ್ಲದ ಕಾರಣ ಈ ಉಭಯ (ಸಾಲೊಟಗಿ ಮತ್ತು ಮಡಕಶಿರಾ) ಶಾಸನೋಕ್ತ ಗಜಾಂಕುಶ ಒಬ್ಬನೇ ಎನ್ನುತ್ತಾರೆ ಎಂ. ವೆಂಕಟರಾಮಯ್ಯನವರು.

ಬಿಲ್ಸಾಗ್ರಾಮದ ಶಾಸನ:[೩೯೬] ಉತ್ತರ ಭಾರತದ ಬಿಲ್ಸಾಗ್ರಾಮದ ಶಾಸನದಲ್ಲಿ ರಾಷ್ಟ್ರಕೂಟ ಕೃಷ್ಣIIIನ ಮಂತ್ರಿ ವಾಚಸ್ಪತಿಯ ವಿಷಯ ಹೀಗೆ ಬರುತ್ತದೆ.:

x x x x x x x x ಶ್ರೀಯಮಯಂ ಅಪಿ ನನ್ವಾಶ್ರಿತಾಶ್ಯ
ಗೇಹಂ ಮೇ ವೇತ್ರ ವತ್ಯಾ ನಿಯಮಿತ ಜನತಾಕ್ಷೋಭಮಸ್ಯಾಮಜಸ್ರಂ

---

೩೯೪. S.I.I. ix-i, No. 25
೩೯೫. Vachaspati, General of Rastrakuta Krishna iii (JORM xxii)
೩೯೬. Vachaspati, General of Rastrakuta Krishna iii (JORM xxii)

ತೇಜೋಮಯ್ಯತ್ರ ಭೋಭೈರಿತ್ವತತಮಿತಿ ವಿದಿತ್ವಾರೇಣಾತ್ಮತುಲ್ಯಂ
ಭಾಲ್ಲಸ್ವಾಮಿನಾಮಾರವಿರವತು ಭುವಃ ಸ್ವಾಮಿನಂ ಕೃಷ್ಣರಾಜಃ॥
ಚೇದೀನಾಂ ಸಮರೇ ವಿಜಿತ್ಯ ಶಬರಂ ಸಂಹೃತ್ಯ ಸಿಂಹಾಹ್ವಯಂ।
ರಾಲಾಮಂಡಲರೋದ ಪಾದ್ಯವನಿಪೌ ಭೂಮ್ಯಾಂ ಪ್ರತಿಷ್ಠಾಪ್ಯ ಚ।
ದೇವಮ್ ದೃಷ್ಟುಮಿಹಾಗತೋ ರಚಿತವಾಂ ಸ್ತೋತ್ರಂ ಪವಿತ್ರಂ ಪರಂ।
ಶ್ರೀಮತ್ ಕೃಷ್ಣನೃಪೈಕ ಮಂತ್ರಿ ಪದಬಾಕ್ಕೌಣ್ಡಿಣ್ಯ ವಾಚಸ್ಪತಿಃ।
ಸುಚಿರಮಿಯಂ ಕೃತಿರಾಸ್ತಾಂ ರುಚಿರಾ ಶ್ರೀಮದ್ಗಜಾಂಕುಶೇಯಸ್ಯ ಕಾಕುಕೇನ ವಿಲಿಖಿತಾ ಕಾಯಸ್ಥಶೇx x x"

ಇಲ್ಲಿಯ 'ಕೌಂಡಿಣ್ಯ ವಾಚಸ್ಪತಿ' 'ಶ್ರೀಮದ್ಗಜಾಂಕುಶೇಯಸ್ಯ' ಎಂಬ ಮಾತುಗಳನ್ನು ಗಮನಿಸಿ ಈ ವಾಚಸ್ಪತಿ ಸಾಲೊಟಗಿ ಶಾಸನೋಕ್ತ ನಾರಾಯಣಗಜಾಂಕುಶನ ಮಗನೆಂದು ಎಂ. ವೆಂಕಟರಾಮಯ್ಯ ಹೇಳುತ್ತಾರೆ. ತಂದೆಯ ಹಾಗೆ ಈತನೂ 'ಕೃಷ್ಣನೃಪೈಕ ಮಂತ್ರಿ'ಯಾಗಿ ರಾಷ್ಟ್ರಕೂಟ ಸಾಮ್ರಾಜ್ಯಕ್ಕೆ ಸೇವೆಸಲ್ಲಿಸಿರಬೇಕು. ಈ ಶಾಸನದ ಪ್ರಕಾರ ಭಿಲ್ಸಾಗ್ರಾಮದ ಸೂರ್ಯದೇವನನ್ನು ಕುರಿತು ಈತನು ರಚಿಸಿದ ಸ್ತೋತ್ರವನ್ನು, ಶಿಲೆಯಲ್ಲಿ ಬರೆದವನು 'ಕಾಕುಕ'ನು. ಆದರೆ ಶಾಸನಶಿಲೆ ಒಡೆದು ಹೋದ ಕಾರಣ ಈ ಸ್ತೋತ್ರಪದ್ಯಗಳು ಹಾಳಾಗಿವೆ. ಒಟ್ಟಿನಲ್ಲಿ ತಂದೆ ನಾರಾಯಣ ಗಜಾಂಕುಶನಂತೆ ಮಗ ಗಜಾಂಕುಶೇಯ ವಾಚಸ್ಪತಿಯೂ ಕವಿ ಮತ್ತು ಕಲಿ.[೩೯೬ಎ]

ಅಕ್ಕಲಕೋಟ ಶಾಸನ:[೩೯೭] ಕಲ್ಯಾಣಿಯ ಚಾಲುಕ್ಯ ವಿಕ್ರಮಾದಿತ್ಯ VIನ ಕಾಲದ ಈ ಶಾಸನದಲ್ಲಿ ಗಜಾಂಕುಶಕುಳತಿಳಕನಾದ ಒಬ್ಬ ಪ್ರಭುಕೇಸರಿಯ ವಿಷಯ ಹೀಗೆ ಬರುತ್ತದೆ:

"ಶ್ರೀಮನ್ಮಹಾಮಂಡಳೇಶ್ವರಂ ಕುಮಾ[ರತೈ]ಲಪದೇವರ ದಾಯಿ ಮೇಲಾಳಿಕೆಯ ಭೋಗಿಯಬ್ಬರಸಿಯು ಶ್ರೀಮನ್ಮಹಾಪ್ರಚಂಡ ದಂಡನಾಯಕಂ ಗಜಾಂಕುಶಕುಳತಿಳಕಂ ಪ್ರಭುಕೇಸರಿ ನಾಯಕನುಂ ಮಗ ನಂಬರಸನುಂ........ ಕರಂಜಿಗೆಯ ಶ್ರೀಸಿದ್ಧಗಚ್ಚೇಶ್ವರ ದೇವರಂಗಭೋಗಕ್ಕಂ ನಿವೇದ್ಯಕ್ಕಂ......"

ಇಲ್ಲಿ ಪ್ರಭುಕೇಸರಿ ತನ್ನನ್ನು 'ಗಜಾಂಕುಶಕುಲತಿಲಕ', ಅಂದರೆ ಗಜಾಂಕುಶನ ಕುಲಪರಂಪರೆಗೆ ತಿಲಕಪ್ರಾಯನೆಂದು ಹೆಮ್ಮೆಯಿಂದ ಕರೆದುಕೊಂಡಿರುವನು. ಈತನ ಮೂಲಪುರುಷ ಗಜಾಂಕುಶನು ಸಾಲೊಟಗಿಯ ಶಾಸನೋಕ್ತ ವ್ಯಕ್ತಿಯೆಂದು ಎಂ. ವೆಂಕಟರಾಮಯ್ಯನವರ ಅಭಿಪ್ರಾಯ.[೩೯೮]

ಮೇಲಣ ನಾಲ್ಕು ಶಾಸನಗಳಿಂದ ಗಜಾಂಕುಶನ ಉಜ್ವಲಪರಂಪರೆಯನ್ನು ಹೀಗೆ ರೇಖಿಸಬಹುದು:

೩೯೬ಎ. A note on the Bhilsa inscription of Vachaspati (JASBN. xxxi & xxxii. ಎಂಬ ಲೇಖನದಲ್ಲಿ ಶ್ರೀ ಮಿರಾಸಿ ಅವರು ಎಂ. ವೆಂಕಟರಾಮಯ್ಯನವರ ಈ ಅಭಿಪ್ರಾಯವನ್ನು ಒಪ್ಪುವುದಿಲ್ಲ.

೩೯೭. K.I. Vol. II, No. 12; A.D. 1114.

೩೯೮. Vachaspati, General of Rastrakuta Krishna III (JORM. xxii)

ದಾಮಪಾರ್ಯ

↓

ನಾರಾಯಣಗಜಾಂಕುಶ

↓

ಗಜಾಂಕುಶೇಯ ವಾಚಸ್ಪತಿ

} ರಾಷ್ಟ್ರಕೂಟ ಕೃಷ್ಣIIIನ ದಂಡನಾಥರು

↓

(ಕೆಲವು ತಲೆಮಾರುಗಳು ಗೊತ್ತಿಲ್ಲ)

↓

ಗಜಾಂಕುಶಕುಳತಿಳಕ ಪ್ರಭುಕೇಸರಿ - ಕಲ್ಯಾಣ ಚಾಳುಕ್ಯ ವಿಕ್ರಮಾದಿತ್ಯನ VI ದಂಡನಾಥ

↓

ನಂಬರಸ

ಒಟ್ಟಿನಲ್ಲಿ ವೀರಮನೆತನವೊಂದರ ಮೂಲಪುರುಷನಾದ ನಾರಾಯಣಗಜಾಂಕುಶನು ರಾಷ್ಟ್ರಕೂಟ ಕೃಷ್ಣIIIನ ಮಂತ್ರಿ ಮತ್ತು ಕವಿ. ತ್ರಿಮೂರ್ತಿಸ್ಥಾಪನೆ, ಸೂರ್ಯಸ್ಥಾಪನೆ, ಶ್ರೀಸಿದ್ಧಗಜ್ಜೇಶ್ವರ ದತ್ತಿಗಳನ್ನು ಹೇಳುವ ಈ ಸಾಲೋಟಗಿ, ಭಿಲ್ಸಾ ಮತ್ತು ಅಕ್ಕಲಕೋಟ ಶಾಸನಗಳ ಪ್ರಕಾರ ಈ ಮನೆತನದವರು ಆರಂಭದಿಂದಲೂ ಬ್ರಾಹ್ಮಣರು. ಅವರ ಗೋತ್ರ ಕೌಂಡಿಣ್ಯ, ಸೂತ್ರ ವಾಜಸನೇಯ, ಶಾಖೆ ಕಣ್ವವೆಂದು ತಿಳಿದುಬರುತ್ತದೆ.

ಸಾಲೊಟಗಿ ಶಾಸನದಲ್ಲಿ ನಾರಾಯಣಗಜಾಂಕುಶನು 'ಮಾಹಿಷವಿಷಯದ ಕಾಂಚನಮುದುವೊಳಲು'ನಿವಾಸಿಯೆಂದು ಹೇಳಲಾಗಿದೆ. ಇದು ರನ್ನನ ಮುಧೋಳವಾಗಿರಬಹುದೆಂದು ಶ್ರೀ ಎಸ್.ಪಿ. ಪಂಡಿತರ ಅಭಿಪ್ರಾಯ.[೩೯೯] ರನ್ನನ ಪ್ರಕಾರ ಮುದುವೊಳಲು 'ಬೆಳುಗಲಿಯಯ್ನೂಱ'ರ ಪಟ್ಟಣವೇ ಹೊರತು 'ಮಾಹಿಷ ವಿಷಯ'ದ ಪಟ್ಟಣವಲ್ಲ. ಅದಕ್ಕಾಗಿ ಗಜಾಂಕುಶನ ಮುಧೋಳ ಬೇರೊಂದು ಇರಬಹುದು.[೪೦೦]

ಡಿ.ಎಲ್.ಎನ್. ಅವರು ಸಾಲೊಟಗಿ ಶಾಸನವನ್ನಾಧರಿಸಿ "ಮೇಲೆ ಹೇಳಿರುವ ಶಾಸನವು ಕ್ರಿ.ಶ. ೯೪೫ರಲ್ಲಿ ಬಂದ ಪ್ಲವಂಗಸವಂತ್ಸರದ ಭಾದ್ರಪದಮಾಸದ ಅಮವಾಸ್ಯೆ ಮಂಗಳವಾರದಂದು ಪ್ರಾಪ್ತವಾದ ಸೂರ್ಯಗ್ರಹಣದ ಪ್ರಯುಕ್ತ ಕರ್ಣಪುರೀ ವಿಷಯದ ಪಾವಿಟ್ಟಿಗೆ ಗ್ರಾಮದ ಪ್ರಭುವಾದ ಚಕ್ರಾಯುಧಬುಧನು,

---

೩೯೬. Vachaspati, General of Rastrakuta Krishna iii (JORM xxii)

೩೯೬ಎ. A note on the Bhilsa inscription of Vachaspati (JASBN. xxxi & xxxii. ಎಂಬ ಲೇಖನದಲ್ಲಿ ಶ್ರೀ ಮಿರಾಸಿ ಅವರು ಎಂ. ವೆಂಕಟರಾಮಯ್ಯನವರ ಈ ಅಭಿಪ್ರಾಯವನ್ನು ಒಪ್ಪುವುದಿಲ್ಲ.

೩೯೭. K.I. Vol. II, No. 12; A.D. 1114.

೩೯೮. Vachaspati, General of Rastrakuta Krishna III (JORM. xxii)

೩೯೯. I.A. Vol. I, P. 206

೪೦೦. ಕರ್ನಾಟಕದಲ್ಲಿ ಈ ಹೆಸರಿನ ಹಲವು ಗ್ರಾಮಗಳಿವೆ. ಗುಲ್ಬರ್ಗಾ ಜಿಲ್ಲೆಯ ಸೇಡಂ ಗ್ರಾಮಕ್ಕೆ ೮ ಮೈಲು ಅಂತರದಲ್ಲಿ 'ಕಂಸನಪಳ್ಳಿ ಮುಧೋಳ' ಹೆಸರಿನ ಒಂದು ಹಳ್ಳಿಯಿದೆ. ಇದು 'ಕಾಂಚನ ಮುದುವೊಳಲು' ಆಗಿರಬಹುದೆ?

ಮಂತ್ರಿಯೂ ಸಂಧಿವಿಗ್ರಹಿಯೂ ಆಗಿದ್ದ ನಾರಾಯಣನು ಕಟ್ಟಿಸಿದ್ದ ಒಂದು ಶಾಲೆಗೆ ದತ್ತಿಯನ್ನು ಬಿಟ್ಟನೆಂದು ಹೇಳುತ್ತದೆ. ಆದುದರಿಂದ ನಾರಾಯಣಗಜಾಂಕುಶನು ಕ್ರಿ.ಶ. ೯೪೫ಕ್ಕಿಂತ ಕೆಲವು ವರ್ಷಗಳ ಹಿಂದೆಯೇ ಶಾಲೆಯನ್ನು ಸ್ಥಾಪಿಸಿದ್ದನೆಂದು ವ್ಯಕ್ತವಾಗುತ್ತದೆ. ಹೀಗಾಗಿ ಗಜಾಂಕುಶನ ಕಾಲ ಕ್ರಿ.ಶ. ಸುಮಾರು ೯೪೦ ಆಗಿರಬಹುದು" ಎನ್ನುತ್ತಾರೆ.[೪೦೧]

ಕೊಲ್ಲಾಪುರದ ಸಾಮಂತರಾಜ ಚರಿತೆ:[೪೦೨] ೧೭ನೆಯ ಶತಮಾನದ ಪಾರ್ಶ್ವಕವಿ ಕೃತವಾದ ಈ ಕೃತಿಯ ವಸ್ತು "ಪಂಚಗುರುಚರಣಾಂಬುರುಹಚಂಚರೀಕ"ನಾದ ನಿಂಬಸಾಮಂತನ ಚರಿತ್ರೆ. ಕೊಲ್ಲಾಪುರ ರಾಜನಾದ ಗಂಡರಾದಿತ್ಯನ ಸಾಮಂತನಾಗಿದ್ದ ಈ ನಿಂಬರಸನು, ರಾಯ ಬಿಜ್ಜಣನೊಂದಿಗೆ ಕಾದಿ ಮಡಿದು ರಾಜಭಕ್ತಿಯನ್ನು ಪ್ರಕಟಿಸುತ್ತಾನೆ. ಈ ಸಂದರ್ಭದಲ್ಲಿ ಕವಿ ಪಾರ್ಶ್ವ, ಯುದ್ಧದಲ್ಲಿ ವೀರಸ್ವರ್ಗವೇರಿದ ಕೆಲವು ಪ್ರಾಚೀನ ದಂಡನಾಯಕರನ್ನು ಹೀಗೆ ಉಲ್ಲೇಖಿಸುವನು:

ಮುನ್ನ ಸದ್ಗತಿವಡೆದ ಬೊಪ್ಪಯ
ದಣ್ಣನಾಯಕನಿಂದ ರೇಚಿಮ
ದಣ್ಣನಾಯಕನಿಂದ ಗಂಗಪ ದಣ್ಣನಾಯಕನು।
ತನ್ನ ಭುಜ ಪ್ರತಾಪದೊಳು ನಿ
ರ್ಭಿನ್ನವಿಲ್ಲದೆ ಕಾದಿ ಸ್ವರ್ಗದೊ
ಳುನ್ನತ ಸುಭೋಗದೊಳು ಗಜಾಂಕುಶ ದಂಡನಾಯಕನು ॥

ಸೀರಿ ಮೊದಲಾಗಿರ್ದ ತೊಂಭ
ತ್ತಾಱು ಗಜ ಮಡಿದುದು ಸಮರದೊಳು
ಬೇಱೆ ಲೆಕ್ಕವದಿಲ್ಲ ನರತುರಗಾದಿ ಭಟರುಗಳ ॥
ಮೂಱು ಲೋಕವು ಹೊಗಳಿದಾ ರಣ
ಸೂಱೆಕಾರನು ಜಿನಸಮರದೊಳು
ನೀಱೆ ಸದ್ಗತಿವಡೆದ ಗಜಾಂಕುಶ ದಂಡನಾಯಕನು ॥

ಇಲ್ಲಿ ಎರಡು ಸಲ ಕಂಡುಬರುವ 'ಗಜಾಂಕುಶ' ಎಂಬ ಹೆಸರು ಒಬ್ಬನನ್ನು ಕುರಿತುದಾಗಿರಬಹುದು. ಕಥಾನಾಯಕ ನಿಂಬರಸನು ಜೈನ. ತೇರಿದಾಳ ಶಾಸನದಲ್ಲಿ ಬರುವ "ಶ್ರೀಮತು ಕೊಂಡಕುನ್ದಾಚಾರ್ಯ್ಯಾನ್ವಯದ ಶ್ರೀಮೂಲಸಂಗದ ದೇಸಿಯಗಣದ ಪೊಸ್ತಕಗಚ್ಛದ ಶ್ರೀ ಕೊಲ್ಲಾಪುರದ ನಿಂಬದೇವಸಾವನ್ತ ಮಾಡಿಸಿದ ಶ್ರೀರೂಪನಾರಾಯಣದೇವರ ಬಸದಿಯ...."[೪೦೩] ಎಂಬ ಮಾತೂ ಇದನ್ನು ಸಮರ್ಥಿಸುತ್ತದೆ. ಈ ಜೈನವ್ಯಕ್ತಿಯನ್ನು ಕುರಿತು ಜೈನಕವಿ ಪಾರ್ಶ್ವನು ಬರೆದ 'ಕೊಲ್ಲಾಪುರ ಸಾಮನ್ತರಾಜ ಚರಿತೆ'ಯಲ್ಲಿ ಬರುವ ಗಜಾಂಕುಶನೂ ಜೈನನಾಗಿರುವುದು ಸಹಜ. ಮೇಲಿನ ಪದ್ಯದ 'ಜಿನಸಮರ(ಸಮಯ?)ದೊಳು' ಎಂಬುದೂ ಇದಕ್ಕೆ ಪೋಷಕವಾಗಿದೆ. ಆದುದರಿಂದ ಸಾಲೊಟಗಿ ಶಾಸನದ ಗಜಾಂಕುಶ ಬ್ರಾಹ್ಮಣ, ಕೊಲ್ಲಾಪುರದ ಸಾಮಂತರಾಜರ ಚರಿತೆಯ ಗಜಾಂಕುಶ

---

೪೦೧. ಗಜಾಂಕುಶ (ಪ್ರ.ಕ. ೧೪-೨)
೪೦೨. ಮೈ. ಪ್ರಾ. ಸಂ. ಕ. ಹ. ವರ್ಣನಾತ್ಮಕಸೂಚೀ। ಪು. ೩೫೯
೪೦೩. K.I. Vol. V. No. 98 ತೇರದಾಳ ಶಾಸನ.

ಜೈನನೆಂದು ಒಪ್ಪಿಕೊಳ್ಳಬೇಕಾಗುತ್ತದೆ.[೪೦೩ಎ] ಈ ಇಬ್ಬರು ಗಜಾಂಕುಶರನ್ನು ಹಿನ್ನೆಲೆಯಾಗಿಟ್ಟುಕೊಂಡು ಕಾವ್ಯಾರಂಭದ ಕವಿಸ್ತುತಿಗಳನ್ನು ಪರೀಕ್ಷಿಸಬಹುದು.

ಕಾವ್ಯಪ್ರಾರಂಭದ ಸ್ತುತಿ: ಕನ್ನಡಕಾವ್ಯಗಳ ಪೀಠಿಕಾಪ್ರಕರಣವು ಪ್ರಾಚೀನಕವಿಗಳ ವಿಷಯವನ್ನೊದಗಿಸುವ ಒಂದು ದೊಡ್ಡ ಗಣಿ. ಇಲ್ಲಿ ಪ್ರಸ್ತುತ ಗಜಗ-ಗಜಾಂಕುಶನನ್ನು ಸ್ತುತಿಸಿದ ಬಗೆ ಹೀಗಿದೆ:

೧. ತ್ರಿಜಗನ್ನುತ ವಾಗ್ವಿಭವದಿ।ನಜಂಗೆ ನೂರ್ಮಡಿಯೆನಿಪ್ಪ ಪೆಂಪಂ ತಳೆದಂ।
ವಿಜಿತಾರಿ ದಂಡನಾಯಕ।ಗಜಾಂಕುಶಂ ಕುಶಲವಾಂಛಿತಪ್ರಿಯ ಶೌರ್ಯಂ॥[೪೦೪]-ದುರ್ಗಸಿಂಹ.

೨. "ದ್ವಿಷಜ್ಜನದುರ್ವಾರ ಗಜಾಂಕುಶಂ....."[೪೦೫]-ಶ್ರೀಧರಾಚಾರ್ಯ

೩. "ಗಜಾಂಕುಶನೊಳ್ಪುವೆತ್ತು ರಂಜಿಸುವ ಸದರ್ಥದೃಷ್ಟಿ....."[೪೦೬] -ನಯಸೇನ

೪. "...... ಇರ್ಕೆ ಮತ್ಪ್ರತಿಯೊಳೀಧರೆ ಬಣ್ಣಿಸೆ ಸಂದ..... ಗಜಾಂಕುಶನುಳ್ಳ ಬಿನ್ನಣಂ"[೪೦೭]-ರುದ್ರಭಟ್ಟ

೫. "..... ಗಜಾಂಕುಶಂ.....ಕವಿದರ್ಪಕರಿಂದೆಸೆದತ್ತು ಭೂತಳಂ"[೪೦೮] -ಆಚಣ್ಣ

೬. "ಎನ್ನೀ ಕಬ್ಬದೊಳೆಂದುಂ ಸನ್ನಿದಮಾಗಿರ್ಕೆ.....ಗಜಗನ ಬಿನ್ನಣಂ"[೪೦೯]-ಆಂಡಯ್ಯ

೭. "ಗಜಾಂಕುಶರಾಜನ ಚಿತ್ತವೃತ್ತಿ........"[೪೧೦] -ಮಲ್ಲಿಕಾರ್ಜುನ .

೮. "ಗಜಗನ ಸುಮಾರ್ಗಮಿದಱೊಳೆ ಲಕ್ಷ್ಯಂ"[೪೧೧]-ಕೇಶಿರಾಜ

೯. "ಗಜಗನ........ ಜಿನಗುಣಮಣಿಮಯ ಕಾವ್ಯಕಥಾವರ್ಣನ ಸೌವರ್ಣಪದಕಂ"[೪೧೨] -ಕುಮುದೇಂದು

೧೦. "ಗಜಾಂಕುಶನರ್ಥಗೌರವಂ......"[೪೧೩]-ನಾಗರಾಜ

೧೧. "......ರಿಪುಪ್ರವರೋತ್ತುಂಗ ಗಜಾಂಕುಂಶ"[೪೧೪]-ಮಧುರ

೧೨. "ಭಣಿತಾನೇಕನಯಂ ಗಜಾಂಕುಶಂ"[೪೧೫]-ಬಾಹುಬಲಿ ಪಂಡಿತ

೧೩. "ಸುಜನ ಮನೋಜನ ಗಜಗನ ಪ್ರಚುರ ಶ್ರೀವಿಜಯನ ನಾ ಪೊಗಳುವೆನು" [೪೧೬]
"ತುಂಗ ವಿಖ್ಯಾತ ಪ್ರಸಂಗ ಗಜಾಂಕುಶರಿಂಗೆ ನಾಂ ಕೈವಾರಿಸುವೆನು"-ಪಟ್ಟಾಭಿರಾಮ

ಇಲ್ಲಿ ಕೆಲವರು ಗಜಗನೆಂದು, ಇನ್ನು ಕೆಲವರು ಗಜಾಂಕುಶನೆಂದು ಕರೆದುದೂ, ಪಟ್ಟಾಭಿರಾಮನು ಗಜಗ ಮತ್ತು ಗಜಾಂಕುಶ ಬೇರೆಬೇರೆ ಎಂಬಂತೆ ಬಿಡಿಸಿ ಹೇಳಿದುದೂ ಇವರು ಭಿನ್ನಕವಿಗಳೆಂಬ ಸಂಶಯ ಹುಟ್ಟಿಸುತ್ತವೆ. ಆದರೆ ನಾಗವರ್ಮ-ನಾಕಿಗ, ಜನಾರ್ದನ-ಜನ್ನಿಗ ಎಂಬಂತೆ ಒಂದು ಹೆಸರಿನ ಎರಡು ರೂಪಗಳಾಗಿರಬಹುದಾದ ಗಜಾಂಕುಶ-ಗಜಗ ಇವುಗಳನ್ನು ತೀರ ಅರ್ವಾಚೀನನಾದ ಪಟ್ಟಾಭಿರಾಮನು ಬೇರೆ ಬೇರೆ ಎಂದು ಭಾವಿಸಿದುದು ಭ್ರಾಂತಿಮೂಲವೆಂದು ಪಂಡಿತರ ಮತ.[೪೧೭]

೪೦೩ಎ. ಕೊಲ್ಲಾಪುರ ಸಾಮಂತರಾಜ ಚರಿತೆಯಲ್ಲಿ "ಸೀರಿ ಮೊದಲಾಗಿರ್ದ ತೊಂಬತ್ತಾರು ಗಜ ಮಡಿದುದು ಸಮರದೊಳು" ಎಂಬಲ್ಲಿಯ 'ಸೀರಿ' ಎಂಬುದು (ಮಡಕ)ಶೀರಾ ಕಾಳಗವನ್ನು ಸೂಚಿಸುತ್ತಿದ್ದರೆ, ಪಾರ್ಶ್ವಕವಿ ಹೇಳುವ ಜೈನವ್ಯಕ್ತಿ ಮಡಕಶೀರಾ ಶಾಸನೋಕ್ತ'ಗಜಾಂಕುಶ'ನೆನ್ನಬೇಕಾಗುತ್ತದೆ. ಆಗ ಕೃಷ್ಣIIIನ ಕೈಕೆಳಗೆ ಗಜಾಂಕುಶ ಎಂಬ ಹೆಸರಿನ ಜೈನ, ನಾರಾಯಣ ಗಜಾಂಕುಶ ಎಂಬ ಹೆಸರಿನ ಬ್ರಾಹ್ಮಣ-ಹೀಗೆ ಇಬ್ಬರು ಅಧಿಕಾರಿಗಳಿರಬಹುದೆನಿಸುತ್ತದೆ. ಇದಕ್ಕೆ ಇನ್ನೂ ಆಧಾರಗಳು ಬೇಕು.

೪೦೪. ಪಂಚತಂತ್ರ ೧-೨೬

೪೦೫. ಜಾ. ತಿಲಕ ೧-೫

೪೦೬. ಧರ್ಮಾಮೃತ ೧-೩೯

೪೦೭. ಜ. ವಿಜಯ ೧-೧೦

೪೦೮. ವರ್ಧ ಪು. (ಕ.ಕ.ಚ. ೩೪೯)

೪೦೯. ಕ. ಕಾವ ೧-೪

೪೧೦. ಸೂಕ್ತಿ. ೧-೨೬

೪೧೧. ಶ.ಮ.ದ. ಸೂ. ೫

೪೧೨. ಕು. ರಾಮಾಯಣ (ಕ.ಕ.ಚ. ೪೪೪)

೪೧೩. ಪುಣ್ಯಾಸ್ರವ (ಕ.ಕ.ಚ. ೪೪೬)

೪೧೪. ಧರ್ಮ ಪು. (ಕ.ಕ.ಚ. ೪೮೬)

೪೧೫. ಧರ್ಮ ಪು. (ಕ.ಕ.ಚ. ಅನುii.೫೦)

೪೧೬. ರತ್ನಶೇಖರ ಚರಿತ (ಕ.ಕ.ಚ. Vol. iii.ಪು. ೨೬-೨೭)

೪೧೭. ಕ.ಕ.ಚ. ೭೪

ಮೇಲಣ ೧೩ ಹೇಳಿಕೆಗಳನ್ನು ಮತದೃಷ್ಟಿಯಿಂದ ಪರಿಶೀಲಿಸಿರೆ ಕನ್ನಡದ ಜೈನ ಮತ್ತು ಬ್ರಾಹ್ಮಣ ಕವಿಗಳು ಮಾತ್ರ ಈ ಹೆಸರನ್ನು ಸ್ಮರಿಸಿರುವುದರಿಂದ ಈ ಹೆಸರಿನ ಇಬ್ಬರು ಕವಿಗಳಿದ್ದು ಒಬ್ಬ ಸಾಲೊಟಗಿ ಶಾಸನೋಕ್ತ ಬ್ರಾಹ್ಮಣ ನಾರಾಯಣಗಜಾಂಕುಶ; ಇನ್ನೊಬ್ಬ ಪಾರ್ಶ್ವಕವಿ ಹೇಳುವ ಜೈನ ಗಜಾಂಕುಶ ದಂಡನಾಥರಾಗಿರಬಹುದೇ ಎಂಬ ಭಾವನೆ ಹುಟ್ಟುತ್ತದೆ. ಆದರೆ ಉದಾರಭಾವದ ದುರ್ಗಸಿಂಹ, ರುದ್ರಭಟ್ಟರನ್ನು ಬಿಟ್ಟರೆ ಇವನನ್ನು ಹೊಗಳಿದ ಕವಿಗಳೆಲ್ಲ ಶ್ರದ್ಧೆಯ ಜೈನರಾಗಿರುವುದರಿಂದ ಕಾವ್ಯ ಪ್ರಾರಂಭದ ಸ್ತುತಿಪ್ರಸಂಗದಲ್ಲಿ ಬರುವ ಗಜಗ, ಗಜಾಂಕುಶ ಎಂಬ ಹೆಸರಿನವನು ಜೈನನಾಗಿರುವ ಸಂಭವ ಹೆಚ್ಚು.[೪೧೮] ಕುಮುದೇಂದುವಿನ 'ಗಜಗನ....ಜಿನಗುಣ ಮಣಿಮಯ ಕಾವ್ಯಕಥಾವರ್ಣನ ಸೌವರ್ಣ ಪದಕವೆಮ್ಮಯ ಮತಿವನಿತೆಯ ಕಥಾಭರಣತೆಯಂ ತಳೆದಿರ್ಕೆ'ಎಂಬ ಮಾತೂ ಈತನ ಜೈನತ್ವವನ್ನು ದೃಢಪಡಿಸುತ್ತದೆ. ದುರ್ಗಸಿಂಹನ ಪ್ರಕಾರ ಇವನು ಲೋಕಹಿತ ಪರಾಕ್ರಮಿ, ಅಜೇಯ ದಂಡನಾಯಕ, ಅನುಪಮ ಸಾಹಿತಿ. 'ದ್ವಿಷಜ್ಜನದುರ್ವಾರ ಗಜಾಂಕುಶಂ', 'ಗಜಾಂಕುಶರಾಜನ ಚಿತ್ತವೃತ್ತಿ', 'ರಿಪು ಪ್ರವರೋತ್ತುಂಗ ಗಜಾಂಕುಶಂ' ಎಂಬಿವು ಅಲಂಕಾರಿಕ ಮಾತುಗಳಾಗಿರದೆ ಸಾರ್ಥಕ ಪ್ರಯೋಗಗಳಾಗಿದ್ದಲ್ಲಿ ದುರ್ಗಸಿಂಹನ ಹೇಳಿಕೆ ಇನ್ನೂ ಬಲಗೊಳ್ಳುತ್ತದೆ. ಒಟ್ಟಿನಲ್ಲಿ ಸ್ತುತಿಪ್ರಸಂಗದ ಗಜಗ ಇಲ್ಲವೆ ಗಜಾಂಕುಶನು ಮತದಿಂದ ಜೈನ, ವೃತ್ತಿಯಿಂದ ದಂಡನಾಯಕ, ಬಹುಶಃ ಕೊಲ್ಲಾಪುರ ಸಾಮಂತರಾಜ ಚರಿತೆಯಲ್ಲಿ ಉಕ್ತನಾದವನು ಈತನೇ ಎನ್ನಬಹುದು.

ಈ ವರೆಗಣ ವಿವೇಚನೆಯಿಂದ ಶಾಸನೋಕ್ತ ಗಜಾಂಕುಶನು ಬ್ರಾಹ್ಮಣ; ಕಾವ್ಯೋಕ್ತ ಗಜಾಂಕುಶನು ಜೈನ. ಒಬ್ಬನ ಕಾಲ ಕ್ರಿ.ಸ. ಸು. ೯೪೫, ಇನ್ನೊಬ್ಬನದು ದುರ್ಗಸಿಂಹನಿಗೆ (೧೧೩೧) ಪ್ರಾಚೀನ ಎಂದು ಹೇಳಬಹುದಾಗಿದೆ. ಒಂದುವೇಳೆ ಈ ಉಭಯ ಗಜಾಂಕುಶರು ಒಬ್ಬನೇ[೪೧೯] ಎಂದು ಇಲ್ಲವೆ ಒಂದೇ ಹೆಸರಿನ ಇಬ್ಬರು ಗಜಾಂಕುಶರು ಕೃಷ್ಣನ ಕೈಕೆಳಗಿದ್ದರೆಂದು ಸಿದ್ಧವಾದಲ್ಲಿ ಇವರ (ಇವನ) ಕಾಲ ಕ್ರಿ.ಶ. ೯೪೫ ಎನ್ನಬೇಕಾಗುತ್ತದೆ.

---

೪೧೮. ೧೦ನೆಯ ಶತಮಾನದ ಕನ್ನಡಸಾಹಿತ್ಯವನ್ನು ಕುರಿತು ಬರೆದ "To the close of the same century may be assigned Gajankusa, Manasija & Chandrabhatta. All the authors mentioned were Jains". (H.K.L.P. 19) ಎಂಬ ಆರ್. ನರಸಿಂಹಾಚಾರ್ಯರ ಮಾತನ್ನು ಗಮನಿಸಬೇಕು.

೪೧೯. ಕಾವ್ಯ ಮತ್ತು ಶಾಸನ (ಸಾಲೊಟಗಿ)ಗಳಲ್ಲಿ ಬರುವ ಗಜಾಂಕುಶ ಒಬ್ಬನೇ, ಈತನ ಮತ ಬ್ರಾಹ್ಮಣವೆಂದು ನಾ. ಶ್ರೀ. ರಾಜಪುರೋಹಿತ ಹೇಳುವರು (ಗಜಾಂಕುಶ, ದುರ್ಗಸಿಂಹ, ಬಸವೇಶ್ವರ, ಗದಾಯುದ್ಧದ ರನ್ನ, ರುದ್ರಭಟ್ಟ, ಪ್ರಭೃತಿ ಕನ್ನಡ ಕವಿಗಳು ಯಾವ ಶಾಖೆಯ ಬ್ರಾಹ್ಮಣರು? ಸಾ.ಪ. ೨೦-೩). ಕೊಲ್ಲಾಪುರ ಸಾಮಂತರಾಜರ ಚರಿತ್ರೆ, ಕಾವ್ಯ, ಶಾಸನ (ಸಾಲೊಟಗಿ)ಗಳಲ್ಲಿಯ ಗಜಾಂಕುಶನು ಒಬ್ಬನೇ ಎಂದು ಡಿ.ಎಲ್.ಎನ್. ಹೇಳಿರುವರು (ಗಜಾಂಕುಶ ಪ್ರ.ಕ. ೧೪-೨). ಆದರೆ ಈ ಬಗ್ಗೆ ಬರೆದ ಪತ್ರಕ್ಕೆ ಉತ್ತರಿಸುತ್ತ".......ಸಾಲೊಟಗಿ ಶಾಸನದ ಗಜಾಂಕುಶನೆಂಬ ಅಪರ ನಾಮಧೇಯವುಳ್ಳ.... ನಾರಾಯಣನೆಂಬವನೊಡನೆ ಕನ್ನಡ ಕವಿಯಾಗಿದ್ದ ದುರ್ಗಸಿಂಹ ಮುಂತಾದವರಿಂದ ಸ್ತುತನಾಗಿದ್ದ ಗಜಾಂಕುಶನನ್ನು ಸಮೀಕರಣ ಮಾಡುವುದು ಸರಿಯಲ್ಲವೆಂದು ಈಗ ಹೇಳಬಹುದು. ಸಾಲೊಟಗಿಯ ಗಜಾಂಕುಶ ಬ್ರಾಹ್ಮಣನೆಂದು ವ್ಯಕ್ತವಾಗಿದೆ. ಇವನೊಡನೆ ಜೈನನಾಗಿದ್ದ ಗಜಾಂಕುಶನನ್ನು ಸಮೀಕರಿಸುವುದು ತಪ್ಪೆಂದು ದಿ. ರಾ. ನರಸಿಂಹಾಚಾರ್ಯರು ಬಲುಹಿಂದೆಯೇ ಪತ್ರ ಬರೆದಿದ್ದರು. ಆದ್ದರಿಂದ ಈ ಸಮೀಕರಣ ಸಾಧುವಾಗಿಲ್ಲ..." ಎಂದು ಡಿ.ಎಲ್.ಎನ್. ತಿಳಿಸಿರುವರು.(ಪತ್ರ ೬-೯-೬೮)

ಈಗಿನ ಮಟ್ಟಿಗೆ 'ಕವಿಮುಖ ಪ್ರಿಯಂವದ' ಎನಿಸಿದ ಬ್ರಾಹ್ಮಣ ಗಜಾಂಕುಶನು ಪಂಪನ ಸಮಕಾಲೀನನಾಗಿ ಬಾಳಿದ್ದನೆಂಬುದು ಸತ್ಯ. ಆದರೆ ಇವನು ಕನ್ನಡ ಕವಿಯೇ ಎಂಬುದು ಅನುಮಾನ.

ಕೃತಿಗಳು: ಪ್ರಾಚೀನ ಕರ್ನಾಟಕದಲ್ಲಿ ಕವಿಯ ಮತ ಮತ್ತು ಆತನ ಕೃತಿಗಳು ಪರಸ್ಪರ ಪೂರಕವಾಗಿರುವುದರಿಂದ, ಗಜಾಂಕುಶನ ಕೃತಿ ಸ್ವರೂಪ ಆತನ ಮತವನ್ನವಲಂಬಿಸಿದೆ. ಬ್ರಾಹ್ಮಣ ಗಜಾಂಕುಶನ 'ಕವಿಮುಖ ಪ್ರಿಯಂವದ', ಜೈನ ಗಜಾಂಕುಶನ 'ಗಜಾಂಕುಶನರ್ಥಗೌರವಂ...." ಎಂಬ ಹೊಗಳಿಕೆಗಳಿಂದ ಇಬ್ಬರೂ ಕವಿಗಳೆಂಬುದು ನಿಜ. ಆದರೆ ಇವರ ಕೃತಿಗಳನ್ನು ಬೆರಳಿಟ್ಟು ಹೇಳುವುದು ಅಸಾಧ್ಯವಾಗಿರುವುದರಿಂದ ಈ ಹೆಸರಿನ ಕೆಳಗೆ ಕಂಡುಬರುವ ಸಾಹಿತ್ಯವನ್ನೆಲ್ಲ ಒಂದೆಡೆಯಲ್ಲಿ ಸಂಗ್ರಹಿಸಬಹುದಾಗಿದೆ.

> ಅನುನಯದಿಂ ಗುಣವರ್ಮನ ಜಯವ
> ರ್ಮನ ಗಜಗನ ಗುಣನಂದಿಯ ನಯವ
> ರ್ಮನ ಹೊನ್ನನ ಹಂಪನ ರನ್ನನ ಸುಮನೋಬಾಣನ ಜನ್ನಯನ।
> ಜಿನಗುಣಮಣಿಮಯ ಕಾವ್ಯಕಥಾವ
> ರ್ಣನ ಸೌವರ್ಣಪದಕವೆಮ್ಮಯ ಮತಿ
> ವನಿತೆಗೆ ಕಂಠಾಭರಣತೆಯಂ ತಳೆದಿರ್ಕೆ ಕವೀಂದ್ರ ಪರಂಪರೆಯಾ॥[೪೨೦]

ಈ ಪದ್ಯದಲ್ಲಿ ಗುಣವರ್ಮ, ಜಯವರ್ಮ, ಗಜಗ ಮೊದಲಾದವರ 'ಜಿನಗುಣಮಣಿಮಯ ಕಾವ್ಯ ಕಥಾವರ್ಣನ ಸೌವರ್ಣಪದಕ'ವು ತನ್ನ 'ಮತಿವನಿತೆಗೆ ಕಂಠಾಭರಣವಾಗಲಿ' ಎಂದು ಹಾರೈಸಿರುವನು, ರಾಮಾಯಣದ ಕುಮುದೇಂದು. ಇದರಿಂದ ಜಿನನನ್ನು ಇಲ್ಲವೆ ಜಿನಮತವನ್ನು ಕುರಿತು ಕಾವ್ಯ ಬರೆದವರಲ್ಲಿ ಗಜಗನೂ ಒಬ್ಬನೆಂದೂ ವ್ಯಕ್ತವಾಗುವುದು.

ಗಜಗನನ್ನು ಕುರಿತು ಆರ್. ನರಸಿಂಹಾಚಾರ್ಯರು "It is very likely that verses 577 and 758, two of Nagavarma's quotations refer to this poet"[೪೨೧] ಎಂದು ಹೇಳುತ್ತ,

> ಅಜಾತ ಶಂಖಂ ತಾನಾಪ್ತ। ನಜಂಗಮನಸೂಯನಂ।
> ಗಜಾಂಕುಶಂ ಗತಾಪ್ರಾಪ್ತ। ವಿಜಯಂ ಮಧುಸೂದನಂ ॥[೪೨೨]

> ಜೋಡೆ ಕರಮಡಿಯಳಾರೊಡ। ಗೂಡಿಯುಮ ವರ್ಣಲ್ಲಳೆನಿಪ ವಸುಧಾಂಗನೆಯಂ।
> ಕೋಡೊಳೆ ತಳೆದುಂ ಸೊಬಗಿನ। ಗಾಡಿಗೆ ಮುಯ್ಯಾಂತ ಸೊಬಗಿದಾವುದೊ ಗಜಗಾ॥[೪೨೩]

ಎಂಬ ಎರಡು ಪದ್ಯಗಳನ್ನು ಸೂಚಿಸುವರು. ಇವುಗಳಿಗೂ ಗಜಾಂಕುಶನಿಗೂ ಇರುವ ಸಂಬಂಧ ಯಾವ ರೀತಿಯದೆಂದು ಹೇಳುವುದು ತೀರ ಕಷ್ಟ.

---

೪೨೦. ಕ.ಕ.ಚ. ಪು. ೪೪೪

೪೨೧. ಕಾ. ಲೋಕನ (೧೯೬೭) ಮುನ್ನುಡಿ. Lxv.

೪೨೨. ಕಾ. ಲೋಕನ ಪ. ೫೭೭

೪೨೩. ಕಾ. ಲೋಕನ ಪು. ೭೫೮

ಕೇಶಿರಾಜನು ತನಗೆ ಪ್ರಮಾಣಭೂತರಾದ ಕವಿಗಳನ್ನು 'ಗಜಗನ ಗುಣನಂದಿಯ'[೪೨೪] ಎಂದು ಹೇಳುತ್ತ ಗಜಗನಿಗೆ ಪ್ರಥಮಸ್ಥಾನ ನೀಡಿರುವನು. ಸೂಕ್ತಿಸುಧಾರ್ಣವದಲ್ಲಿ ಮಲ್ಲಿಕಾರ್ಜುನನು "ಗಜಾಂಕುಶರಾಜನ ಚಿತ್ತವೃತ್ತಿ"[೪೨೫]ಯನ್ನು ಕೊಂಡಾಡಿರುವನು. ಅದಕ್ಕಾಗಿ ಈ ಉಭಯ ಕೃತಿಗಳಲ್ಲಿ ಗಜಾಂಕುಶನ ಪದ್ಯಗಳು ಅಧಿಕ ಸಂಖ್ಯೆಯಲ್ಲಿರಬೇಕು. ಆದರೆ ಅವುಗಳನ್ನು ಗುರುತಿಸುವುದು ಈಗ ಸಾಧ್ಯವಿಲ್ಲ.

ಕ್ರಿ.ಶ. ೧೪೦೦ರ ತೆಲಗುಕವಿ ಮಡಿಕಿಸಿಂಗನನು ತನ್ನ 'ಸಕಲನೀತಿ ಸಮ್ಮತಮು' ಎಂಬ ಸಂಕಲನಗ್ರಂಥದ ಪೀಠಿಕೆಯಲ್ಲಿ ".......ಯಂಧ್ರಭಾಷಾಕೋವಿದುಲಗು ಸುಕವೀಂದ್ರ ವಿರಚಿತಂಬೈನ ಮುದ್ರಾಮಾತ್ಯ, ಪಂಚತಂತ್ರಿ ಬದ್ದೆಭೂಪಾಲ ಚಾಣಕ್ಯ ಧೌಮ್ಯ ವಿದುರ ಧೃತರಾಷ್ಟ್ರ ಬಲಭದ್ರ ಕಾಮಂದಕ ಗಜಾಂಕುಶ ನೀತಿಸಾರ ನೀತಿವಿಭೂಷಣ ಕ್ಷೇಮೇಂದ್ರ ಭೋಜರಾಜವಿಭೂಷಣ ಪುರುಷಾರ್ಥಸಾರ ಭಾರತ ರಾಮಾಯಣಾದಿ ಮಹಾಕಾವ್ಯಂಬುಲು......" ಎಂದು ಮುಂತಾಗಿ ತನ್ನ ಕೃತಿಯ ಆಕರಗಳನ್ನು ಸೂಚಿಸಿರುವನು. ಶ್ರೀ ಎನ್. ವೆಂಕಟರಾವ್ ಅವರ ಅಭಿಪ್ರಾಯದಂತೆ ಇಲ್ಲಿಯ ಗಜಾಂಕುಶನು ಕನ್ನಡಕವಿ.[೪೨೬] ಇದು ನಿಜವಿದ್ದ ಪಕ್ಷದಲ್ಲಿ ಜೈನ ಗಜಾಂಕುಶನೋ ಬ್ರಾಹ್ಮಣ ಗಜಾಂಕುಶನೋ ಆಗಿರಬಹುದಾದ ಈತನು ತೆಲಗು ಮತ್ತು ಕನ್ನಡಗಳಲ್ಲಿ ಕಾವ್ಯಕಲಾಸಿದ್ಧಿಯನ್ನು ಪಡೆದವನೆನ್ನಬೇಕಾಗುತ್ತದೆ. ಆದರೆ ಈತನ ಉಭಯ ಭಾಷೆಯ ಒಂದೂ ಕೃತಿ ನಮಗೆ ಲಭಿಸಿಲ್ಲ.

❖❖

---

೪೨೪. ಶ.ಮ.ದ. ಸೂ. ೫: ("ಶಬ್ದಮಣಿದರ್ಪಣದಲ್ಲಿ ಉದಾಹೃತವಾದ ಕೆಲವು ಪದ್ಯಗಳಲ್ಲಿ ಒಂದೆರಡು ಕಡೆ ಗಜಗ ಎಂಬ ಹೆಸರು ದೊರೆಯುತ್ತದೆ. ಈ ಪದ್ಯಗಳು ಇವನ ಗ್ರಂಥದಿಂದಲೇ ಉದ್ಧೃತವಾದುವೋ ಏನೋ ತಿಳಿಯದು." ಕ.ಕ.ಚ. ೭೪)

೪೨೫. ಸೂಕ್ತಿ;೧-೨೬

೪೨೬. ತೆಲುಗು ಕವುಲ ಚರಿತ್ರ-ಗಜಾಂಕುಶುಂಡು (AORM, VIII, i and ii)ಪು. ೭೬

೫

ಇತರ ಸಾಹಿತ್ಯ

ಇತರ ಸಾಹಿತ್ಯ

ಕವಿರಾಜಮಾರ್ಗ ಪರಿಸರದ ಕತ್ತಲುಯುಗದಲ್ಲಿ, ಈ ವರೆಗೆ ವಿವೇಚಿಸಿದ ಸಾಹಿತ್ಯಿಕ ಸ್ಪಷ್ಟ ಕುರುಹುಗಳಲ್ಲದೆ ಕೆಲವು ಅಸ್ಪಷ್ಟ ಕುರುಹುಗಳು ಅಲ್ಲಲ್ಲಿ ಕಣ್ಣಿಗೆ ಬೀಳುತ್ತವೆ. ಈ ತುಣುಕುಗಳನ್ನು ಅಣು ಅಣುವಾಗಿ ಆಯ್ದುಕೊಂಡು, ಕೈವರ್ತಿಸಿದ ಕಣಜವನ್ನು ಕಣ್ಣಲ್ಲಿ ಕಣ್ಣಿಟ್ಟು ಪರೀಕ್ಷಿಸಿ-

೧. ಇತರ ಕಾವ್ಯಗಳು
೨. ಇತರ ಕವಿಗಳು
೩. ಇತರ ಸಾಹಿತ್ಯ ಪ್ರಕಾರಗಳು
   ಅ. ಕವಿಸಾಹಿತ್ಯ ಪ್ರಕಾರಗಳು
   ಆ. ಜಾನಪದಸಾಹಿತ್ಯ ಪ್ರಕಾರಗಳು
೪. ಇತರ ಲಕ್ಷಣ ಗ್ರಂಥಗಳು.

ಎಂದು ಅಭ್ಯಸಿಸುವುದು ಅತ್ಯವಶ್ಯವೆನಿಸಿದೆ. ಈ ಪ್ರಸಂಗದಲ್ಲಿ ಪಂಡಿತರನೇಕರು ಮಾಡಿದ ಊಹೆಗಳನ್ನು ಒರೆಗೆ ಹಚ್ಚುತ್ತ ಕೆಲವು ಹೊಸ ಸಂಗತಿಗಳನ್ನು ಅರಿಯಬಹುದಾಗಿದೆ.

ಇತರ ಕಾವ್ಯಗಳು

ರಾಮಾಯಣ-ಮಹಾಭಾರತಗಳು ಭಾರತೀಯ ಬದುಕಿನ ಸಾಹಿತ್ಯಿಕ ಅವತಾರಗಳು. ಈ ನೆಲದಲ್ಲಿ ಹುಟ್ಟಿದ ಹಿಂದುವಾಗಲಿ ಅಹಿಂದುವಾಗಲಿ ಇವುಗಳ ಪ್ರಭಾವದಿಂದ ಪಾರಾಗುವುದು ಅಸಾಧ್ಯ. ಹೀಗಾಗಿ ಹಿಂದೂ ಮತ್ತು ಜೈನ ಬೌದ್ಧಮತಗಳಲ್ಲಿ ಇವು ಆ ಆ ಧರ್ಮಗಳ ಹೊಸ ವೇಷ ಹೊತ್ತು ಒಂದು ಮೂರಾಗಿ, ಮೂರು ನೂರಾಗಿ ಬೆಳೆದುಬಂದುವು. ಈ ರಾಷ್ಟ್ರೀಯ ಕಾವ್ಯಗಳಿಗೂ ಕರ್ನಾಟಕಕ್ಕೂ ಇರುವ ಸಂಬಂಧ, ಇವುಗಳ ಘಟನೆ (?)ಯಷ್ಟೇ ಪ್ರಾಚೀನವಾದುದು. ಅಂದಿನಿಂದ ಈ ನಾಡವರ ನಾಲಗೆಯಲ್ಲಿ, ಶಿಲ್ಪಿಗಳ ಶಿಲ್ಪದಲ್ಲಿ ನೆಲೆಪಡೆದ ಇವು ಕವಿಸಾಹಿತ್ಯದಲ್ಲಿಯೂ ನಡೆದುಬಂದು ೧೦ನೆಯ ಶತಮಾನದಲ್ಲಿ ಒಂದು ಕಡೆಗೆ ವಿಕ್ರಮಾರ್ಜುನ ವಿಜಯ, ಇನ್ನೊಂದು ಕಡೆಗೆ ಭುವನೈಕರಾಮಾಭ್ಯುದಯದ ಮೂಲಕ ಪರಮಾವಧಿ ಸಿದ್ಧಿಯನ್ನು ಮುಟ್ಟಿನಿಂತವು. ಈ ಸಿದ್ಧಿಗೆ ಹಿನ್ನೆಲೆಯಾಗಿ ನಡೆದಿರಬಹುದಾದ ಇವುಗಳ ರಚನೆಯ ಕೃಷಿವಿವೇಚನೆ ಪ್ರಸ್ತುತ.

ರಾಮಾಯಣ :

'ತಿಣಕಿದನು ಫಣಿರಾಯ ರಾಮಾಯಣದ ಕವಿಗಳ ಭಾರದಲಿ'[೧] ಎಂದು ಕುಮಾರವ್ಯಾಸ ಹೇಳುವನಾದರೂ ಕನ್ನಡ ರಾಮಾಯಣಗಳ ಸಂಖ್ಯೆ ಒಂದು ಕೈಮೇಲೆ ಎಣಿಸುವಷ್ಟು. ಕರ್ನಾಟಕ ಮಟ್ಟಿಗೆ

೧. ಕು. ಭಾರತ ೧-೧೭

ಹೇಳುವುದಾದರೆ ವೈದಿಕ ರಾಮಾಯಣ, ಜೈನ ರಾಮಾಯಣ, ಸಮಸ್ತ ರಾಮಾಯಣ -ಹೀಗೆ ಮೂರು ಪ್ರಕಾರಗಳು ಕಂಡುಬರುತ್ತವೆ. ಇವುಗಳಲ್ಲಿ ಪ್ರಾಚೀನತಮವಾದ ಸಮಸ್ತರಾಮಾಯಣವಾಗಿರಬಹುದಾದ ಪೊನ್ನನ ಭುವನೈಕ ರಾಮಾಯಣ ಲಭ್ಯವಿಲ್ಲ. ಪಂಪ ಪೂರ್ವಯುಗದಲ್ಲಿ ಜೈನರಾಮಾಯಣ, ವೈದಿಕ ರಾಮಾಯಣಗಳ ಸೂಚನೆ ಹೀಗೆ ಸಿಗುತ್ತದೆ.

ಶ್ರೀವಿಜಯನ ರಘುವಂಶ ಮಹಾಪುರಾಣ: ಈ ಪಿಎಚ್.ಡಿ. ಪ್ರಬಂಧದ ಮೊದಲನೆಯ ಆವೃತ್ತಿ ಪ್ರಕಟವಾದ ಬಳಿಕ ಲಭ್ಯವಾದ ನಾಗವರ್ಮ II (೧೦೪೨) ನ ವರ್ಧಮಾನ ಪುರಾಣದ ಪೀಠಿಕಾ ಭಾಗದಲ್ಲಿ "ಅಘ ವಿಘಟನ ಕಾರಣಮಮ್ಮೃಘಟಿತ ಪದಬಂಧ ಬಂಧುರಾಳಂಕೃತಿಯುಂ। ಲಘುವಾಗೆ ಪೊಗೞ್ ಪೇೞ್ದಂ ರಘುವಂಶ ಮಹಾಪುರಾಣಮಂ ಶ್ರೀವಿಜಯಂ॥" ಎಂಬ ಪದ್ಯ ಕಂಡುಬರುತ್ತದೆ. ಈ ಕೃತಿಯ ಪದ್ಯಗಳು ಉತ್ತರಕಾಲೀನ ಲಕ್ಷಣಗ್ರಂಥ, ಸಂಕಲನ ಗ್ರಂಥಗಳಲ್ಲಿ ಉದ್ಧೃತವಾಗಿರಬಹುದಾದರೂ ಗುರುತಿಸಲು ಸಾಧ್ಯವಾಗಿಲ್ಲ. ಕನ್ನಡದ ಅನೇಕ ಕವಿಗಳು ಪೂಜ್ಯಭಾವನೆಯಿಂದ ಹೊಗಳುವುದರಿಂದ ಈತ ಘನತೆವೆತ್ತವನೇ ಆಗಿರಬೇಕು. ದುರ್ಗಸಿಂಹ ಹೇಳುವಂತೆ 'ಕವಿಮಾರ್ಗ' ಬರೆದವನೂ, ಕವಿರಾಜಮಾರ್ಗದ ಪದ್ಯಕವಿಗಳ ಸಾಲಿನಲ್ಲಿ ಕಾಣಿಸಿಕೊಂಡವನೋ ಸ್ಪಷ್ಟವಾಗುವುದಿಲ್ಲ. ಇಲ್ಲಿ ಇವನ ಕೃತಿಯನ್ನು ಮಹಾಪುರಾಣವೆಂದು ಕರೆದುದು ಗಮನಾರ್ಹವೆನಿಸಿದೆ. ಇದನ್ನು ಬಿಟ್ಟರೆ ರಾಮಾಯಣವನ್ನು ಸೂಚಿಸುವ ಪಂಪಭಾರತದೊಳಗಿನ ಆರು ಸಂದರ್ಭಗಳು[೨] ಪ್ರಸ್ತುತಕ್ಕೆ ಪ್ರಯೋಜಕವೆನಿಸದ ಕಾರಣ, ಕವಿರಾಜಮಾರ್ಗ, ಕಾವ್ಯಾವಲೋಕನ, ಶಬ್ದಮಣಿದರ್ಪಣಗಳಲ್ಲಿ ಮಿಂಚುವ ರಾಮಾಯಣ ಪ್ರಸಂಗಗಳನ್ನು ಇಲ್ಲಿ ವಿವೇಚಿಸಬಹುದು.

ಕವಿರಾಜಮಾರ್ಗೋಕ್ತ ಸೂಚನೆ: ಕವಿರಾಜಮಾರ್ಗೋಕ್ತ ಲಕ್ಷ್ಯಪದ್ಯಗಳನ್ನು ಕುರಿತು ಬರೆಯುತ್ತ "ಈ ಗ್ರಂಥದಲ್ಲಿ ಅನೇಕ ಪದ್ಯಗಳು ಉದಾಹೃತವಾಗಿವೆ. ಇವು ಪ್ರಾಯಶಃ ನೃಪತುಂಗನಿಗೆ ಹಿಂದೆ ಇದ್ದ ಕವಿಗಳ ಗ್ರಂಥಗಳಿಂದ ಉದ್ಧೃತವಾಗಿರಬಹುದು. ಈ ಪದ್ಯಗಳಲ್ಲಿ ರಾಮಾಯಣದ ಕಥೆಗೆ ಸಂಬಂಧಿಸಿದ ಕೆಲವಿವೆ. ಇದರಿಂದ ಈಗ ನಮಗೆ ದೊರೆತಿಲ್ಲದ ಆವುದೋ ಒಂದು ರಾಮಾಯಣವು ಆ ಕಾಲದಲ್ಲಿ ಇದ್ದಂತೆ ತೋರುತ್ತದೆ" ಎಂದು ಆರ್. ನರಸಿಂಹಾಚಾರ್ ಅವರು ಒಂದು ಪ್ರಾಚೀನ ರಾಮಾಯಣದತ್ತ ಮೊದಲು ಬೆರಳು ನೀಡಿದರು. ಆ ಹನ್ನೊಂದು ಪದ್ಯಗಳು ಹೀಗಿವೆ:

೧. ಸಕಲಜನ ವಿನುತನಂ ಶತ। ಮಖಸದೃಶ ವಿಶಾಲವಿವಿಧವಿಭವೋದಯನಂ।
ಪ್ರಗತಗುಣಬಲನನರಿಬಲ। ವಿಘಟನನಂ ಕಂಡನಣುವನಾ ರಾಘವನಂ॥[೪]

೨. ಶಶಧರಬಿಂಬಾನನೆಯಂ। ಝುಷಕೇತನಕೇತನಾಭತನು ತನುವ ತಾಂ।
ಬಿಸವಿಶದವರ್ಣೆಯಂ ಕಂ। ಡೊಸೆದಂ ಬನದೊಳಗೆ ಜನಕತನಯಳನಣುವಂ॥[೫]

೩. ಜನವಿನುತನನಘನನುಪಮ। ನನುನಯಪರನರಸನಿನಿಸು ನೆನೆನೆನೆದು ಮನೋ।
ಜನಿತ ಮುದನನಿಲತನಯನ। ನನನೃತ ವಚನ ಪ್ರಪಂಚನಿಂತಿರೆ ನುಡಿದಂ॥[೬]

---

೨. ಪಂ. ಭಾ. ೮-೩೫, ೮-೮೨, ೯-೪೯, ೯-೫೩, ೪-೧೮ ಗದ್ಯ, ೪-೧೯

೩. ಕ.ಕ.ಚ. ಪು. ೨೦

೪. ಕ.ಮಾ. ೨-೩೮

೫. ಕ.ಮಾ. ೨-೪೦

೬. ಕ.ಮಾ. ೨-೪೨

೪. ಪರಮಾನುಭಾವಭಾಸುರ। ಸುರರಾಜೋಪಮಿತ ವಿವಿಧವಿಭವೋದಯನಂ।
ನರಪತಿಯಂ ಕಪಿಪ್ರತನಾ। ಪರಿವೃತನಂ ಜಳಧಿತಟದೊಳಣುವಂ ಕಂಡಂ॥[೭]

೫. ನರಪತಿಯಂ ಕವಿಪ್ರತನಾ। ಪರಿವೃತನಂ ಜಳಧಿತಟದೊಳಣುವಂ ಕಂಡಂ।
ಪರಮಾನುಭಾವಭಾಸುರ । ಸುರರಾಜೋಪಮಿತ ವಿವಿಧವಿಭವೋನಯನಂ॥[೮]

೬. ಪರಿದೆಯ್ದಿ ತಾಗಿದಂ ಭಾ। ಸುರತರ ರಘುಕುಲಲಲಾಮ ಲಕ್ಷ್ಮೀಧರನೊಳ್।
ಪರಿಕೋಪ ವಿಧೃತ ವಿಸ್ಫುರ। ದ್ಧುರುರಕ್ತಕಠೋರ ನಯನಯುಗದಶವದನಂ॥[೯]

೭. ಪರಿದೆಯ್ದಿ ತಾಗಿದಂ ಭಾ। ಸುರತರರಘುಕುಲ ಲಲಾಮನೊಳ್ ಲಕ್ಷ್ಮಣನೊಳ್।
ಪರಿಕೋಪವಶಭ್ರಮಣೋ। ದ್ಧುರರಕ್ತ ಕಠೋರ ಲೋಚನಂ ದಶವದನಂ ॥[೧೦]

೮. ತಾರಾ ಜಾನಕಿಯಂ ಪೋಗಿ। ತಾರಾ ತರಳನೇತ್ರೆಯಂ।
ತಾರಾಧಿಪತಿ ತೇಜಸ್ವಿ। ತಾರಾದಿವಿಜಯೋದಯಾ॥[೧೧]

೯. ರಾವಣನಂ ಕೊಂದು ಜಯ। ಶ್ರೀವಧುವಂ ತಾಳ್ದಿ ಮುಯ್ಯಿನೊಳ್ ವರಸೀತಾ।
ದೇವತೆಯಂ ತರ್ಪನ್ನೆಗ। ಮೋವದೆ ಪುರುಷಬ್ರತೋಚಿತಂ ವೀರರಸಂ॥[೧೨]

೧೦. ಜಲನಿಧಿಯಂ ಪಾಯ್ದೊರ್ವನೆ। ನಿಲಿಕಿ ದಶಾನನನ ಪೊಟಲನಾ ಲಂಕೆಯನಾ।
ಕುಲಮಿಲ್ಲದಿಟಿದು ನಿಂದಂ। ಕಲಿಯಾ[ದಂ] ಬಗೆದುನೋೞ್ಪೊಡದ್ಭುತಮಾದಂ॥[೧೩]

೧೧. ಕೊಂದು ಜಟಾಯುವನಾತಂ। ಮುಂದಿಟ್ಟಾ ಜನಕಸುತೆಯನೊಯ್ದಂ ಮತ್ತಾ।
ಪಂದೆಯನಂತಕಮುಖದೊಳ್। ತಂದಿಟ್ಟಂದಲ್ಲದುಟೆಗುಮೇ ರೌದ್ರರಸಂ॥[೧೪]

ಇವುಗಳಲ್ಲಿ ಕೊನೆಯ ಮೂರು ಕವಿರಾಜಮಾರ್ಗಕಾರನು ಕಟ್ಟಿದ ಪದ್ಯಗಳು. ಇನ್ನು ಪದ್ಯ ೪ ರ ಮಾರ್ಪು ೫; ೬ರ ಮಾರ್ಪು ೭ ಆಗಿರುವುದರಿಂದ ಇವು ಸಹ ಅನುಕೂಲಕ್ಕಾಗಿ ಮಾರ್ಗಕಾರನೇ ಕಟ್ಟಿದ ಪದ್ಯಗಳೆಂಬುದು ಖಚಿತ. ಒಟ್ಟು ಹನ್ನೊಂದರಲ್ಲಿ ಈ ಏಳನ್ನು ಕಳೆದರೆ ಉಳಿಯುವ ಪದ್ಯಗಳು ನಾಲ್ಕು. ಅವು ನಂ. ೧, ೨, ೩ ಮತ್ತು ೮. ಇವು ಕ್ರಮವಾಗಿ ವರ್ಗಪ್ರಾಸ, ಸಮೀಪಪ್ರಾಸ, ಅನುಗತಪ್ರಾಸ ಮತ್ತು ಯಮಕಗಳಿಗೆ ಬರೆದ ಉದಾಹರಣೆಗಳು. ಈ ನಾಲ್ಕು ವಿಲಕ್ಷಣ ಪ್ರಾಸಗಳಿಗೆ ರಾಮಾಯಣದಿಂದಲೇ ಉದಾಹರಣೆಗಳನ್ನೆತ್ತಿಕೊಳ್ಳುವುದೂ, ಸೀತಾಪಹರಣ, ಶ್ರೀರಾಮ ಮತ್ತು ಮಾರುತಿ ಸಂದರ್ಶನ- ಇಷ್ಟು ಕಿರುವ್ಯಾಪ್ತ ಭಾಗದಲ್ಲಿ ಇಂಥ ನಾಲ್ಕು ಸಾಮಾನ್ಯ ಪದ್ಯಗಳಿರುವುದೂ ವಿಸಂಗತ. ಆದುದರಿಂದ ಈ ಪದ್ಯಗಳೂ ಯಾವುದೋ ರಾಮಾಯಣದಿಂದ ಎತ್ತಿಕೊಂಡವುಗಳಾಗಿರದೆ, ಕವಿರಾಜಮಾರ್ಗಕಾರನು ತನ್ನ ಅನುಕೂಲಕ್ಕಾಗಿ ಕಟ್ಟಿದುವೆನ್ನಬಹುದು.

---

೭. ಕ.ಮಾ. ೨-೮೯
೮. ಕ.ಮಾ. ೨-೯೧
೯. ಕ.ಮಾ. ೨-೯೩
೧೦. ಕ.ಮಾ. ೨-೯೬
೧೧. ಕ.ಮಾ. ೨-೧೩೦
೧೨. ಕ.ಮಾ. ೩-೧೮೮
೧೩. ಕ.ಮಾ. ೩-೧೮೦
೧೪. ಕ.ಮಾ. ೩-೧೮೯

ಈ ಸಂದರ್ಭದಲ್ಲಿ ಪ್ರೊ. ಕುಂದಣಗಾರರು "(ಈ) ಪದ್ಯಗಳು ನೃಪತುಂಗನಿಗಿಂತ ಪೂರ್ವದಲ್ಲಿದ್ದ ಯಾವುದೋ ಒಂದು ರಾಮಾಯಣದೊಳಗಿನವಾಗಿರಬೇಕು; ಮತ್ತು ಆ ಕಾವ್ಯ ಜೈನಪುರಾಣವಾಗಿರಬೇಕು. ಕಾರಣವೇನೆಂದರೆ ೧. ಜೈನರಿಗೆ ರಾಮಾಯಣವು ಪೂಜ್ಯವಾಗಿರುವಷ್ಟು ಭಾರತವು ಪೂಜ್ಯವಾಗಿಲ್ಲ. ೨. ಲಕ್ಷ್ಮಣನನ್ನು ಜೈನರು ಲಕ್ಷ್ಮೀಧರ, ಅಚ್ಯುತ ಎಂದು ಸಂಭೋಧಿಸುವ ರೂಢಿಯಿದ್ದಂತೆ ಹಿಂದೂ ರಾಮಾಯಣದಲ್ಲಿಲ್ಲ" ಎಂದು ಹೇಳುತ್ತಾರೆ.[೧೫] ಆದರೆ ಲಕ್ಷ್ಯಯೋಗ್ಯ ಪದ್ಯಗಳನ್ನು ಕಟ್ಟುವ ಕವಿರಾಜಮಾರ್ಗಕಾರನು ತನಗೆ ಇಷ್ಟವಾದ ಜೈನರೀತಿಯನ್ನು ಅನುಸರಿಸಿರುವನೆಂದು ಇದಕ್ಕೆ ಸಮಾಧಾನ ಹೇಳಬಹುದು.

ಕುಂದಣಗಾರರ ಅಭಿಪ್ರಾಯಕ್ಕೆ ಸಂದೇಹ ವ್ಯಕ್ತಪಡಿಸಿ"....... ಇಂದ್ರನಿಗೆ ಶತಮುಖ ಎಂಬುದು ವ್ಯುತ್ಪತ್ತಿಯಲ್ಲಿ ಜೈನರಾಮಾಯಣಕ್ಕೆ ಸರಿಹೋಗದು. ಇದರಿಂದ.....ವಾಲ್ಮೀಕಿರಾಮಾಯಣದ ಪ್ರಭಾವಕ್ಕೆ ಒಳಗಾದ ಕವಿ ಬರೆದ ಜೈನರಾಮಾಯಣವೊಂದು ಇದ್ದಿರಬಹುದೆಂದು ಭಾಸವಾಗುತ್ತದೆ."[೧೬] ಎಂಬ ಮುಗಳಿ ಅವರ ಊಹೆಯೂ ಆಭಾಸವೆನಿಸುತ್ತದೆ. ಅದಕ್ಕಾಗಿ ಕವಿರಾಜಮಾರ್ಗದಲ್ಲಿಯ, ರಾಮಾಯಣವನ್ನು ಸೂಚಿಸುವ ಪದ್ಯಗಳು ಯಾವುದೋ ಒಂದು ಪ್ರಾಚೀನ ರಾಮಾಯಣಕ್ಕೆ ಸಂಬಂಧಿಸಿದುವಲ್ಲವೆಂದು ಹೇಳಬಹುದು.[೧೭]

ಕಾವ್ಯಾವಲೋಕನ ಮತ್ತು ಶಬ್ದಮಣಿದರ್ಪಣೋಕ್ತಸೂಚನೆ: ಲಕ್ಷಣಗ್ರಂಥಗಳಾದ ಕಾವ್ಯಾವಲೋಕನ ಮತ್ತು ಶಬ್ದಮಣಿದರ್ಪಣಗಳಲ್ಲಿಯ ಲಕ್ಷ್ಯಪದ್ಯಗಳು, ಕಳೆದುಹೋದ ಕನ್ನಡ ಸಾಹಿತ್ಯಚರಿತ್ರೆಯ ಭಾಗವನ್ನು ಪುನಾರಚಿಸಲು ದೊಡ್ಡನೆರವನ್ನು ನೀಡುತ್ತವೆ. ಇವುಗಳಲ್ಲಿ ಅನುಪಲಬ್ಧ ರಾಮಾಯಣದ ಪದ್ಯಗಳು ದರ್ಪಣಕ್ಕಿಂತ ಕಾವ್ಯಾವಲೋಕನದಲ್ಲಿ ಹೆಚ್ಚು ಎಂಬುದು ಕೆಳಗಣ ಯಾದಿಯಿಂದ ಗೊತ್ತಾಗುತ್ತದೆ.

	ಪದ್ಯಗಳ ಆದಿ	ಕಾವ್ಯಾವಲೋಕನ	ಶಬ್ದಮಣಿದರ್ಪಣ
೧.	ಹರನಗಮಿಂತಿದು	೧೦೦	–
೨.	ಕೈಲಾಸಾದ್ರಿಯನೆತ್ತಿ	೧೬೮	–
೩	ಜ್ಯಾಯನರಣ್ಯದೊಳ್	೧೮೯	–
೪	ತಂದೆಯ ನನ್ನಿಗಿತ್ತ	೩೧೯	–
೫	ಗಗನಾಧ್ವರ ಶರಣಾಗಿ	೪೬೧	–
೬	ದಶರಥನಾಗಿಯುಂ	೭೩೦	–
೭	ಸಂದಿಸೆ ಗಱಿ	೭೪೨	–
೮	ಅಟಲನೆರ್ದೆಯೊಳ್	೮೧೫	–
೯	ತ್ರಿದಶೇಂದ್ರಾರ್ಜಿತ	೮೧೭	–
೧೦	ಸಂಗತ ನಿಜಹಸ್ತಕ	೯೪೬	–
೧೧	ಮನದಿಂ ಬೇಗಂ	೧೦೬	೧೧೬
೧೨	ಅದಱಿಂದಮೊಪ್ಪಿಸೊಪ್ಪಿಸು	೨೮೮	೨೦೬

೧೫. ಪಂಪನ ಹಿನ್ನೆಲೆ (ಕುಂದಣ ಪು. ೭೨)
೧೬. ಕ.ಸಾ.ಚ. ಪು. ೨೩
೧೭. ಕವಿರಾಜಮಾರ್ಗದಲ್ಲಿನ ರಾಮಾಯಣ ಪದ್ಯಗಳು (ಸಾ.ಪ. ೫೧-೨ ಮತ್ತು ೨) ಎಂಬ ಲೇಖನ ನೋಡಬೇಕು.

೧೩	ಪೇಱಿದಿರ್ದಿಪ್ಪತ್ತು ತೋಳುಂ	೩೦೧	೭೬, ೧೯೪
೧೪	ನಿನಗೆನಗೆ ತನಗೆ ತೀರ್ಗುಮೆ		೧೫೭
೧೫	ಒಂದರಟ್ಟೊೞಿನಾಲ್ಕೈದಾ		೧೯೪
೧೬	ಬಲನಾರಾಯಣರಿರ್ವರುಂ		೨೩೮
೧೭	ಬಾದುಂಟೆನೆ ಪತ್ತನೆಯ		೨೫೨

ಇವುಗಳಲ್ಲಿ ಕೆಲವು ಭುವನೈಕರಾಮಾಭ್ಯುದಯಕ್ಕೆ, ಇನ್ನು ಕೆಲವು ಆ ಪೂರ್ವದ ರಾಮಾಯಣಕ್ಕೆ (-ಗಳಿಗೆ) ಸಂಬಂಧಿಸಿರಬಹುದು. ಕಾವ್ಯಾಲೋಕನ ಪದ್ಯ ೮೧೭, ೯೪೭, ದರ್ಪಣ ಪದ್ಯ ೨೩೮ ಜೈನರಾಮಾಯಣಕ್ಕೆ ಸಂಬಂಧಿಸಿದುದು ಗಮನಾರ್ಹ. ಈ ಎಲ್ಲ ಪದ್ಯಗಳು ನಾಗವರ್ಮ, ಕೇಶಿರಾಜರಿಗೆ ಹಿಂದಣವೆಂಬುದು ಖಚಿತ; ಎಷ್ಟು ಹಿಂದೆ ಎಂಬುದು ಅನುಮಾನ.

ಮಹಾಭಾರತ :

ಕನ್ನಡನಾಡಿನಲ್ಲಿ ಕಣ್ಣು ತೆರೆದ ರಾಮಾಯಣಗಳಿಗಿಂತ ಭಾರತಗಳ ಸಂಖ್ಯೆ ಹೆಚ್ಚು ; ಸತ್ವ ಹಿರಿದು. ಪ್ರಾಚೀನ ಶಾಸನಗಳಲ್ಲಿಯೂ ರಾಮಾಯಣದ ಉಪಮೆಗಳು ಕ್ವಚಿತ್; ಮಹಾಭಾರತದ ಉಪಮೆಗಳು ಅಧಿಕ.

"ಕಣೆ ಪಂಜರದೊಳೊಱಗಿ ಭೀಷ್ಮನ್ನಿಟ್ಟನ್ತೆ ನೆಲಮುಟ್ಟದೆ ಬಿಟ್ಟೊನಾನ್" (ಕ್ರಿ.ಶ. ೮೦೦)[೧೮]

"ಮುನಿದಿದಿರಾಗೆ......ಫಲ್ಗುಣಂ"(ಕ್ರಿ.ಶ. ೯೦೦)[೧೯]

"ಮನಮನೊಲ್ದುದನೆರೆಯೆ.........ಕರ್ಣನ್" (ಕ್ರಿ.ಶ. ೯೩೦)[೨೦]

"ಸಾಹಸ ಭೀಮ" (ಕ್ರಿ.ಶ. ೯೫೬)[೨೧]

"ಸಂಗ್ರಾಮ ಕೌಂತೇಯನಂ" (ಕ್ರಿ.ಶ. ೯೬೯)[೨೨]

"ಸತ್ಯಕಾನೀನಂ" (ಕ್ರಿ.ಶ. ೯೯೪)[೨೩]

"ಕಲಿಕಾಲಧರ್ಮತನಯಂ" (ಕ್ರಿ.ಶ. ೯೯೪)[೨೪]

ಶಾಸನೋಕ್ತ ಈ ಮಾತುಗಳು ಕನ್ನಡಿಗರ ಭಾರತಕಥಾಪ್ರಿಯತೆಗೆ ಸಾಕ್ಷಿ. ಈ ಕಥೆಯನ್ನು ಪರಮಾವಧಿ ಸಿದ್ಧಿಗೆ ಮುಟ್ಟಿಸಿದ ಪಂಪನಿಗೆ ಹಿಂದಣ ಭಾರತಗಳು ಈ ವರೆಗೆ ನಮ್ಮ ಕಣ್ಣಿಗೆ ಬಿದ್ದಿಲ್ಲ. ಆದರೆ ಪಂಪಭಾರತ, ಕವಿರಾಜಮಾರ್ಗ, ಕಾವ್ಯಾವಲೋಕನ ಮತ್ತು ಶಬ್ದಮಣಿದರ್ಪಣಗಳಿಂದ ಸೂಚಿತವಾಗುವ ಮಹಾಭಾರತದ ಕಥೆ, ಘಟನೆಗಳನ್ನು ಒಂದು ಕ್ರಮದಲ್ಲಿ ಇಟ್ಟು ಅಭ್ಯಸಿಸಬಹುದಾಗಿದೆ.

ಕವಿರಾಜಮಾರ್ಗೋಕ್ತ ಸೂಚನೆ: ಕವಿರಾಜಮಾರ್ಗದಲ್ಲಿ ಭಾರತಕಥೆಯನ್ನು ಒಪ್ಪಿಕೊಳ್ಳುವ ವಿದ್ವಾಂಸರು ಕೆಳಗಣ ಪದ್ಯವನ್ನು ಆಧಾರವಾಗಿಟ್ಟುಕೊಂಡಿರುವರು.

---

೧೮. E.C. viii.ಸೊರಬ. ೧೦ ಮಾವಳಿ.

೧೯. E.I. xiii.ಕಳಸ

೨೦. E.I. xiii.ಕಳಸ.

೨೧. S.I.I. ix-i 66

೨೨. E.I. xiii. ಕಳಸ

೨೩ B.K.I. I-i. No. 47

೨೪. B.K.I.I-i, 47

ನೃಪಕನ್ಯಕಾ ಸ್ವಯಂವರ
ವಿಪುಳಮಹೋತ್ಸವ ವಿವಾಹದೊಳ್ ಬಂದಿರ್ ಮು।
ನ್ನಪವಾದವಾದುದೆನಗೇಂ
ಚಪಲಾಧ್ವಜನೋಕ್ತಿಯಿಂದಮಿಂ ಬಾರದಿರಿಂ॥[25]

'ಚಪಲಧ್ವಜ' ಎಂದರೆ ಅರ್ಜುನ ಎಂದಾದರೆ ಅದು ಹಿಂದೆ ಇದ್ದ ಕನ್ನಡ ಭಾರತವೊಂದರಿಂದ ತೆಗೆದುಕೊಂಡ ಪದ್ಯವಾಗಿರಬಹುದು' ಎಂದು ಮುಗಳಿಯವರ ಹೇಳಿಕೆ.[26] ಚಪಲ (=ಕಪಿ) ಧ್ವಜನೆಂದರೆ ಅರ್ಜುನನಾಗಬಹುದೇನೋ; ಆದರೆ ಇದು ಸ್ವಯಂವರದ ಯಾವ ಸನ್ನಿವೇಶಕ್ಕೂ ಹೊಂದಿಕೆಯಾಗದು. ಅದಕ್ಕಾಗಿ ಇದರ ಇನ್ನೊಂದು ಪಾಠವಾದ 'ಚಪಲಾಧ್ವಜನೋಕ್ತಿ' ಎಂಬುದನ್ನು 'ಚಪಲ+ಅಧ್ವ+ಜನೋಕ್ತಿ' ಎಂದು ಬಿಡಿಸಿ, 'ಚಪಲಮಾರ್ಗದ ಜನರ (ಚಂಚಲರ) ಮಾತು' ಎಂದು ಅರ್ಥ ಹೇಳಬಹುದು. ಇದರಿಂದ ನೃಪಕನ್ಯಕಾ ಸ್ವಯಂವರಕ್ಕೆ ಬಂದುದು ನನಗೆ ಅಪಮಾನವನ್ನುಂಟು ಮಾಡಿತು. ಇನ್ನು ಮೇಲೆ ಚಪಲರ ಮಾತು ಕೇಳಿ (ಯಾರೂ)ಬರಬೇಡಿರಿ ಎಂಬ ಅಭಿಪ್ರಾಯ ಹೊರಟು, ಪದ್ಯದ ಮೈಯೆಲ್ಲ ಅರ್ಥವಾಗುತ್ತದೆ. ಹೀಗಾಗಿ ಇದು ಭಾರತವಲ್ಲದ ಯಾವುದೋ ಕೃತಿಗೆ ಸಂಬಂಧಿಸಿರಬಹುದು ಇಲ್ಲವೆ ಕವಿರಾಜಮಾರ್ಗಕಾರನೇ ಕಟ್ಟಿರಬಹುದು.[27]

ಪಂಪಭಾರತೋಕ್ತ ಸೂಚನೆ: ಕತೆ ಪಿರಿದಾದೊಡಂ ಕತೆಯ ಮೆಯ್ಗಿಡಲೀಯದೆ ಮುಂ ಸಮಸ್ತ ಭಾ
ರತಮನಪೂರ್ವಮಾಗೆ ಸಲೆ ಪೇೞ್ದ ಕವೀಶ್ವರರಿಲ್ಲ ವರ್ಣಕಂ।
ಕತೆಯೊಳೊಡಂಬಡಂ ಪಡೆಯೆ ಪೇೞ್ವೊಡೆ ಪಂಪನೆ ಪೇೞ್ಗುಮೆಂದು ಪಂ
ಡಿತರೆ ತಗುಳ್ದು ಬಿಚ್ಚಟಿಸೆ ಪೇೞಲೊಡರ್ಚಿದೆನೀ ಪ್ರಬಂಧಮಂ॥[28]

ಎಂಬ ಪದ್ಯದಿಂದ ಪಂಪನಿಗೆ ಪ್ರಾಚೀನವಾಗಿ 'ಕಥೆಯ ಮೆಯ್ಗೆಡಿಸಿ' ಹೇಳಿದ ಕನ್ನಡ ಭಾರತ(ಗಳು) ಇದ್ದಿರಬೇಕೆನಿಸುತ್ತದೆ. ಲೌಕಿಕಪುರುಷ ಅರಿಕೇಸರಿಯನ್ನು ಪುರಾಣಪುರುಷ ಅರ್ಜುನನೊಂದಿಗೆ ಒಡಂಬಡಿಸುವ ತಂತ್ರದಲ್ಲಿ, ಪಂಪ ಬಹುಮಟ್ಟಿಗೆ ಕೃತಾರ್ಥನಾಗಿರುವನು. ಆದರೆ ಈತನಿಗೆ ಪ್ರಾಚೀನವಾದ ಮಹಾಭಾರತಗಳು ಈ ತಗಟ್ಟುವ ತಂತ್ರದಲ್ಲಿ ವಿಫಲಗೊಂಡು ಅವುಗಳ ಮೈಗೆಟ್ಟಿರಬೇಕು. ಪಂಪನು ಇವುಗಳನ್ನು ಗುರಿಯಿಟ್ಟು ಹೇಳಿದ ಪದ್ಯವಿದು ಎಂದು ಕೆಲವು ಪಂಡಿತರ ಮತ.

ಇನ್ನೊಂದು ವಿಷಯ: ಕವಿಚರಿತೆಕಾರರು "ಆದಿಪಂಪನು (೯೪೧) ತನ್ನ ಭಾರತದಲ್ಲಿ..... ಕವಿವ್ಯಾಸನೆನೆಂಬ ಗರ್ವಮೆನಗಿಲ್ಲ ಎಂಬುದರಿಂದ ಇವನಿಗೆ ಹಿಂದೆ ಆವನೋ ಒಬ್ಬ ಕವಿ, ಕನ್ನಡದಲ್ಲಿ ಒಂದು ಭಾರತವನ್ನು ಬರೆದು ಕವಿವ್ಯಾಸನೆಂಬ ಹೆಸರಿಟ್ಟುಕೊಂಡಿದ್ದಂತೆ ಊಹಿಸಬಹುದಾಗಿದೆ.....ಕವಿವ್ಯಾಸನ ಕಾಲವು ಸುಮಾರು ೯೦೦ ಆಗಿರಬಹುದು"[29]- ಎಂದು ಹೇಳುತ್ತಾರೆ. ಈ ಪ್ರಸಂಗದಲ್ಲಿ ಆದಿಪುರಾಣದ ಮಾತೃಕೆಯನ್ನು ಕುರಿತು ಹೇಳಹೊರಟ ಕೆ.ಜಿ. ಕುಂದಣಗಾರರು, ಎಸ್.ಜಿ. ನರಸಿಂಹಾಚಾರ್ಯರ ಅಭಿಪ್ರಾಯವನ್ನು ವಿಮರ್ಶಿಸುತ್ತ

---

೨೫. ಕ.ಮಾ. ೨-೧೪

೨೬. ಕ.ಸಾ.ಚ. ಪು. ೨೫

೨೭. ಕ.ಮಾ. ಟಿಪ್ಪಣಿ (ಎಂ.ವಿ. ಸೀತಾರಾಮಯ್ಯ) ಪು. ೧೯೨ ನೋಡಿರಿ.

೨೮. ಪಂ. ಭಾ. ೧-೧೧

೨೯. ಕ.ಕ.ಚ. ಪು. ೨೮

"ವಿಕ್ರಮಾರ್ಜುನ ವಿಜಯ"ದಲ್ಲಿ 'ಸತ್ಕವಿವ್ಯಾಸ ಸಮಾಗಮಾನ್ವಿತಮನಾದಿ ಪುರಾಣಮನೆಯ್ದೆ ಪೇೞ್ದು ವಾಕ್ಶ್ರೀಸುಭಗಂ ಪುರಾಣಕವಿ'[೬೦] ಎಂದು ಹೇಳಿಕೊಂಡಿರುವುದರಿಂದ ವ್ಯಾಸನೆಂಬ ಕವಿಯ ಗ್ರಂಥದ ಆಧಾರದ ಮೇಲೆ (ಆದಿಪುರಾಣ) ವಿರಚಿತವಾದಂತೆ ತೋರುತ್ತದೆ"- ಎಂದೂ (ಎಸ್.ಜಿ. ನರಸಿಂಹಾಚಾರ್) ಹೇಳಿದ್ದಾರೆ.... ಇಲ್ಲಿ ಸತ್ಕವಿವ್ಯಾಸ 'ಸಮಾಗಮಾನ್ವಿತ' ಪದದಿಂದ ಆ ಕವಿವ್ಯಾಸನು, ಪಂಪನ ಸಮಕಾಲೀನನೂ ಮಿತ್ರನೂ ಆಗಿದ್ದನೆಂದು ಸೂಚಿತವಾಗುತ್ತದೆ. ಆದಿಪುರಾಣವನ್ನು ಬರೆಯುವಲ್ಲಿ ಪಂಪನಿಗೆ ಆತನ ಸಹಾಯವಾಗಿರಬಹುದು" ಎಂದು ಹೇಳುತ್ತಾರೆ.[೬೧] ಆದರೆ ಈಗಿರುವ ಪಾಠದಿಂದ ಈ ಪದ್ಯದ ಅರ್ಥ ಸ್ಪಷ್ಟವಾಗದ ಕಾರಣ ಅದನ್ನು ಉಚಿತರೀತಿಯಲ್ಲಿ ಹೀಗೆ ಪರಿಷ್ಕರಿಸಬಹುದಾಗಿದೆ:

ವ್ಯಾಸಮುನಿಪ್ರಣೂತಕೃತಿಯಂ ಸಲೆ ಪೇೞ್ದು ಪೊದಟ್ದಿ ಸತ್ಕವಿ
ವ್ಯಾಸಸಮಾಗಮಾನ್ವಿತ[ನುಮಾ]ದಿ ಪುರಾಣಮನೆಯ್ದಿ ಪೇೞ್ದು ವಾ।
ಕ್ಶ್ರೀಸುಭಗಂ ಪುರಾಣಕವಿಯುಂ............[೬೨]

ಅಂದರೆ ವ್ಯಾಸರ ಸುಪ್ರಸಿದ್ಧಕೃತಿಯನ್ನು ಹೇಳಿ ಸತ್ಕವಿವ್ಯಾಸ ಸಮಾಗಮಾನ್ವಿತನೂ, ಆದಿಪುರಾಣವನ್ನು ಹೇಳಿ ವಾಕ್ಶ್ರೀಸುಭಗನಾದ ಪುರಾಣಕವಿಯೂ ತಾನಾಗಿರುವೆನೆಂದು ಪಂಪನ ಅಭಿಪ್ರಾಯ. ೧೪-೫೯, ೬೦, ೬೧ನೆಯ ಪದ್ಯಗಳಲ್ಲಿ ತನ್ನ ಉಭಯಕೃತಿಗಳ ಮೌಲ್ಯವನ್ನು ಹೇಳುತ್ತ ಬಂದು, ಈ ೬೨ನೆಯ ಪದ್ಯದಲ್ಲಿ ತನಗುಂಟಾದ ಉಭಯ ಅಗ್ಗಳಿಕೆಯನ್ನು ಹೇಳಿರುವನು. ಆದುದರಿಂದ ತಪ್ಪು ಪಾಠವನ್ನು ಅನುಸರಿಸಿ ಎಸ್.ಜಿ.ನರಸಿಂಹಾಚಾರ್ ಮಾಡಿದ ಅರ್ಥವನ್ನು ಟೀಕಿಸುತ್ತ, ಕುಂದಣಗಾರರು ತಾವೂ ತಪ್ಪು ನಿರ್ಣಯ ನೀಡಿದರು. ಈ ಪ್ರಸಂಗದಲ್ಲಿ ಆರ್. ನರಸಿಂಹಾಚಾರ್ ಅವರ ಅರ್ಥ ಸರಿಯೆನಿಸಬಹುದಾದರೂ "ವ್ಯಾಸಮುನೀಂದ್ರ ರುಂದ್ರವಚನಾಮೃತವಾರ್ಧಿಯನೀಸುವೆಂ ಕವಿವ್ಯಾಸನೆನೆಂಬ ಗರ್ವಮೆನಗಿಲ್ಲ"[೬೩] ಎಂಬಲ್ಲಿ ತಾನು ವ್ಯಾಸಮಹರ್ಷಿಗಳಿಗೆ ಸಮನೆಂಬ ಗರ್ವತನಗಿಲ್ಲವೆಂದು ವಿನಯವನ್ನು ವ್ಯಕ್ತಗೊಳಿಸಿರುವನೆಂದೂ, "ವ್ಯಾಸಮುನಿಪ್ರಣೂತ ಕೃತಿಯಂ ಸಲೆ ಪೇೞ್ದು ಪೊದಟ್ದು ಸತ್ಕವಿವ್ಯಾಸ ಸಮಾಗಮಾನ್ವಿತಂ" ಎಂಬಲ್ಲಿ ವ್ಯಾಸಮಹರ್ಷಿಗಳ ಮಾರ್ಗಾನುವರ್ತಿ ಎನ್ನುತ್ತ ಮತ್ತೂ ವಿನಯವನ್ನು ವ್ಯಕ್ತಪಡಿಸಿರುವನೆಂದೂ ಹೇಳುವುದು ಹೆಚ್ಚು ಯೋಗ್ಯ. ಅದಕ್ಕಾಗಿ ಪಂಪನಿಗೆ ಹಿಂದೆ ಕನ್ನಡದಲ್ಲಿ 'ಕವಿವ್ಯಾಸ'ನಿರಲಿಲ್ಲವೆನ್ನಬಹುದು. ಆದರೆ ಮೆಯ್ಗಿಡಿಸಿ ಪೇೞ್ದ ಭಾರತ(ಗಳು) ಇದ್ದಿರಬಹುದು.

ಕಾವ್ಯಾವಲೋಕನ ಮತ್ತು ಶಬ್ದಮಣಿದರ್ಪಣೋಕ್ತ ಸೂಚನೆ: ಭಾರತ ಕಥೆಗೆ ಸಂಬಂಧಪಟ್ಟ ಹಲವು ಅನಾಮಧೇಯ ಪದ್ಯಗಳು ಈ ಎರಡು ಗ್ರಂಥಗಳಲ್ಲಿ ಕಂಡುಬರುತ್ತವೆ. ಕೇಶಿರಾಜನು ಭಾರತಘಟನೆಗಳನ್ನೊಳಗೊಂಡ ತನ್ನ ಹಿಂದಣ ಚಾವುಂಡರಾಯಪುರಾಣ, ಜಗನ್ನಾಥವಿಜಯ, ಧರ್ಮಾಮೃತ, ಅರ್ಧನೇಮಿಪುರಾಣ, ಹರಿವಂಶಾಭ್ಯುದಯ (ಬಂಧುವರ್ಮ)ಗಳಿಂದ ಪ್ರಯೋಗಗಳನ್ನು ಸ್ವೀಕರಿಸಿದಂತಿಲ್ಲ.

---

೬೦. ಪಂ. ಭಾ. ೧೪-೬೨

೬೧. ಆದಿಪುರಾಣ, ಉಪೋದ್ಘಾತ-೧೩

೬೨. ಪಂ. ಭಾ. ೧೪-೬೨

೬೩, ಪಂ. ಭಾ. ೧-೧೩

ಪಂಪಭಾರತ ರನ್ನಗದಾಯುದ್ಧಗಳಿಂದ ಸ್ವೀಕರಿಸಿದ ಸುಮಾರು ೨೮ ಪದ್ಯಗಳನ್ನು[೩೪] ಬಿಟ್ಟರೂ, ದರ್ಪಣದಲ್ಲಿ ಭಾರತಕ್ಕೆ ಸಂಬಂಧಿಸಿದ ಸುಮಾರು ೬೨ ಅನಾಮಧೇಯ ಪದ್ಯಗಳು ಉಳಿಯುತ್ತವೆ. ಕಾವ್ಯಾವಲೋಕನವನ್ನೂ ಗ್ರಹಿಸಿದರೆ, ಈ ಸಂಖ್ಯೆ ೮೭ಕ್ಕೆ ಏರುತ್ತದೆ. ಈ ಉಭಯ ಕೃತಿಗಳಲ್ಲಿಯ ಅಂಥ ಭಾರತಪದ್ಯಗಳನ್ನು ಹೀಗೆ ಯಾದಿಗೊಳಿಸಬಹುದು.

೩೪.	ಪದ್ಯದ ಆದಿ	ಶ.ಮ.ದ.	ಪಂ. ಭಾರತ
೧	ಆಡು ಪಣ್ಣಿಡು ಪೋಗು	೨೪೩	೩-೧೨
೨	ಅಱಿಯಿರೆ ನೀವು	೧೩೬	೨-೪೮
೩	ಏನಾಗಿಯುಮೇನೋ	೧೨೨	೪-೨೯
೪	ಕಃ ಕೇನಾರ್ಥೀ	೭೧, ೨೪೯	೬-೪೦
೫	ಗಲಿಗಲಿನೆ ಕಣ್ಣನೀರ್	೨೦೪	೩-೨೫
೬	ಗುರುವಿಲ್ಲಾ ಕರ್ಣನಿಲ್ಲಾ	೫೬(ಸಾ.ಪ. ಆವೃತ್ತಿ)	೯-೫೫
೭	ತಱತಲಿನೆ ನೇಸರ್	೧೯೪, ೨೦೪	೩-೨೭
೮	ತಂತಮ್ಮ ರಾಜಚಿಹ್ನಂ	೧೮೮	೩-೪೩
೯	ತೆಂಕನಾಡ ಮಜೆಯಲ್ಕಿನ್ನೇಂ	೧೪೫	೪-೩೧
೧೦	ಧೃತರಾಷ್ಟ್ರಂ ನುಡಿದಾರ್ತನೆ	೧೫೬	೧೦-೧೦
೧೧	ಪಡಲಿಟ್ಟಂತಿರೆ ಮಾಟ್ಪೆಂ	೦೧೮, ೨೦೨	೧೦-೨೫
೧೨	ಪಾಡುವ ತುಂಬಿ ಕೊಡುವ	೧೭೯	೩-೩೭
೧೩	ಪೆಂಡತಿಯೆನಾದೆಂ	೨೩೦	೧-೭೬
೧೪	ಬಂದನೀತಂ ಪೆಱನಲ್ಲಂ	೮೩	೧೩-೭೭
೧೫	ಬಡವರ ಪಿತರರಂತೆ	೯೫	೭-೩೩ಗ
೧೬	ಬರವೇಳೆಂಬುದು	೨೫೭	೯-೩೧
೧೭	ರಂಗಂಬೊಕ್ಕಾಡುವಂತೆ	೧೭೮	೨-೮೦
೧೮	ಸಂಗತ ಸತ್ವರ್	೧೫೧	೩-೬೨
	ಪದ್ಯದ ಆದಿ	ಶ.ಮ.ದ.	ಗದಾಯುದ್ಧ
೧	ಆನಱಿವೆಂ ಪೃಥೆಯಱಿವಳ್	೨೩೫	೫-೧೮
೨	ಈಯಲಿಱಿಯಲ್	೭೯	೨-೧೬
೩	ಕಣ್ಣೆಂ ಕಾಣೆಂ	೧೧೪	೫-೩೬
೪	ಕುರುಪ್ರಭುಕಂಡಂ	೨೫೨	೪-೪೮
೫	ತಮ್ಮಿಂದಿರ್ವರುಂ	೧೦೮	೨-೧೧
೬	ದೊರೆಯೆನಿಸಿತ್ತು	೧೨೭	೧೦-೨
೭	ನರನುಂ ನರನಂದನನುಂ	೧೩೩	೩-೫೦
೮	ನೀನುಳ್ಳೊಡುಂಟು ರಾಜ್ಯಂ	೧೩೭	೫-೨೦
೯	ಭೀಮ ಭೀಮಗದೆಯಿಂ	೨೨೮	೫-೫
೧೦	ಮರಣಕ್ಕೆನ್ನಿಂದೆ ನೀಂ	೨೪೫	೫-೭

	ಪದ್ಯಗಳ ಆಕಾರಾದಿ	ಶಬ್ದಮಣಿದರ್ಪಣ	ಕಾವ್ಯಾವಲೋಕನ
೧	ಅತ್ತಣನಿತ್ತಣಂ	೧೨೬, ೧೬೨	–
೨	ಅಂಬಿಕೆ ಬೆರ್ಚಿ	೨೧	–
೩	ಅಮಳ್ಗಳ್ ವಿನಯ	೫೨	೫೩೪
೪	ಅಲ್ಲಿಯುಮಿಲ್ಲಿಯುಂ	೧೩೩	–
೫	ಅಗಳೆ ಗಂಡುಡಿಗೆ	೨೪೯	–
೬	ಆತಂ ದುರ್ಯೋಧನನಿಂ	೧೬೧	–
೭	ಆತನಯೆ ತೋರದೊಡೆ	೬೩, ೧೬೩	೪೩
೮	ಆ ನೃಪತಿ ನಾಡೆ	೨೩೨	–
೯	ಆಮುಂ ದ್ರೋಣ	೨೨೮	೩೮೫
೧೦	ಆವಂ ಮುರನಂ ಕೊಂದಂ	೧೬೨	–
೧೧	ಈವುದು ಕರ್ಣಂಗೆ ಸಹಜಂ	೨೩೬	–
೧೨	ಉಣ್ಬು ಮಾಡಿದಂ	೨೫೫	–
೧೩	ಉರಗರಗಿದರ್		೩೯೬
೧೪	ಎನಿತುಂ ಕಾಯ್ದುಂ	೧೯೩	೨೩೫
೧೫	ಎಲ್ಲರುಮಾ ಕರ್ಣನಂತಿರೇಂ	೧೬೨	–
೧೬	ಏಗೈಮಂ ಪೇಟಿಂ	೨೪೦	–
೧೭	ಒರ್ಕಯ್ಸಿ ಬಿಲ್ಲ	೭೬,೧೧೧	೫೮
೧೮	ಒರ್ವನೆ ಗೆಲ್ಗುಂ	೨೩೮	–
೧೯	.....ಒರ್ವನೆ ಗೆಲ್ದಂ	೨೩೨	–
೨೦	ಒರ್ಬಂ ಬಂದೊಂದೆ	೧೦೯	೨೮೦
೨೧	ಒರ್ವನೆ ಮತ್ಸ್ಯನಂ	೨೩೨	–
೨೨.	ಅಳ್ಳಾಡಿ ನರನ ಕೂರ್ಗಣೆ	೭೯, ೧೯೧	೨೨೪
೨೩	ಕಪಿಧ್ವಜಂ ನಿಳ್ಕಿ	೨೪೭	–
೨೪	ಕಟಿಲೆ ನುಡಿದಟಿಲೆ	೩೦	೨೬
೨೫	ಕಾದದಿರ್ದಂದು ಸೋಲ್ತಂ	೨೫೨	–
೨೬	ಕಾಟ್ಟುರು ಮಸಗಿದ	೭೬	–
೨೭	ಕುರುಕುಲಾಧಿಪಂ ನುಡಿಯಲೊಡಂ	೨೫೭	–
೨೮	ಕುರುಪತಿಯಂ ವಿಷ್ಣು	೭೪	–
೨೯	ಕೊಂದರ್ ಕೀಚಕರಂ	೧೦೮	–
೩೦	ತಕ್ಕಿಂದಿಱಿದೆವೆಯೊಳ್	೨೫೦	–
೩೧	ತಾವಾಸವ್ಯಸಾಚಿಯೊಳ್	೨೩೫	–
೩೨	ತಿರ್ದಿನರನುದ್ಧಮಿಸೆ	೨೪೭	–

೩೩	ತೆಂಕವಕ್ಕದೊಳ್	೧೭೪, ೧೪೫	೧೨೨
೩೪	ತೊಟ್ಟಂ ಸಮ್ಮೋಹನಮಂ	೨೪೯, ೨೫೨	೩೮೦
೩೫	ತೊಱೆಯಂ ಪಾಯ್ದೆತ್ತಿಬಂದಂ	೬೩	–
೩೬	ದ್ರೋಣಂಗಂ ನಿನಗಂ	೨೨೨	–
೩೭	ನಗೆಮೊಗೆದೊಳುಗಿದು	೨೫೧	–
೩೮	ನರನಾತೆಱದಿಂ	೨೪೦	–
೩೯	ನೀಲಗ್ರೀವನುಮಾರ್ತನಿಲ್ಲ	೨೫೬	–
೪೦	ನೆನೆಯದೆ ಕಜ್ಜದ ಬಿಣ್ಪಂ	೨೪೦	೪೦೪
೪೧	ನೆರೆದರಸುಗಳ	೧೦೯	–
೪೨	ನೇಸಱಿಂ ಪೆಱಗುಮಾಡಿ	೭೮	೨೭
೪೩	ನೋಟ್ಪಿ ಕೊಂಡಂತೆ	೨೪೮, ೨೫೨	೨೫೨
೪೪	ಪೆಡಮೆಟ್ಟಿಂ ಬರ್ಪ	೧೮೪	–
೪೫	ಪೇಟವೆ ಧರ್ಮನಂದನ	೧೦೮	–
೪೬	ಪೊಮ್ಮೆರೆವೋಲ್	೨೫೩	–
೪೭	ಪೋಲ್ತಂ ಕಿಸುಸಂಜೆ	೧೯೩	–
೪೮	ಬಯಲ್ಗೆವಂದಪರೊ	೧೨೪, ೨೫೬	–
೪೯	ಬಿಲ್ಲೆಱೆಯನೆಂದುದೆ	೨೪೫	–
೫೦	ಭುವನತ್ರಿಣೇತ್ರರುಚಿಯಂ	೨೫೨, ೨೫೬	–
೫೧	ಬೆಕ್ಕಸಂಬಟ್ಟು	೨೫೨	–
೫೨	ಬೇಡಿದನಿಷ್ಟಮಂ	೮೨	–
೫೩	ಬಂದಂ ನರಂ	೨೪೮	–
೫೪	ಬಂದಂ ಫಲ್ಗುಣಂ	೨೧, ೨೪೮	–
೫೫	ಮದಗಜವೆರಡಱ	೮೩	–
೫೬	ಮಲೆದು ನರರೊಳಾಂಪಂ	೨೪೩	–
೫೭	ಮಾದೇವನು ಮಾದೇವಿಗೆ	೧೮೬	೨೫೪
೫೮	ಮಾಱಾಂತೆಚ್ಚಂ	೨೫೦	–
೫೯	ಮೆಯ್ಗರೆಯಲ್	೭೧	–
೬೦	ವಾರಣೇಂದ್ರಮಣಿ	೧೩೪	೧೩೩
೬೧	ಸಾಯಲೆವೇಡಿ	೬೩	–
೬೨	ಹೋತ್ರವೆಯಾನ್	೬೫	೧೭೭
೬೩	ಅದಱಿನೀತನಾತನೆ	–	೯೪೮
೬೪	ಅಱಿದು ನರಂ	–	೩೨೯
೬೫	ಅಱಿವಳ್ ಪಾಂಡುತನೂಜರ	–	೩೯೩

೬೬	ಅಸುರ ಹರಂ	–	೩೮೨
೬೭	ಆನ್ನೋಡರ್ಜುನ	–	೧೭೮
೬೮	ಇಂತಿಂತೆ ಪಲಬರುಂ	–	೩೬೨
೬೯	ಎಂತಿಂತಾತನಂದಂದು	–	೩೮೪
೭೦	ಎಂತೆಡಱಿದ	–	೩೬೩
೭೧	ಎನ್ನಯ್ಯಂಗಕ್ಕುಮೆನ್ನ	–	೩೩
೭೨	ಎವೆಯಿಕ್ಕದೆ	–	೯೨೮
೭೩	ಕುವಳಯ ವನರುಚಿಯಿಂ	–	೮೪೯
೭೪	ಗ್ರೀವೆ ಮೊಗಮಂ	–	೧೬೯
೭೫	ತೊಟ್ಟಂ ತೀವಿ	–	೩೭೨
೭೬	ತೊಳಗೆ ಪೊನ್ನರಥಂ	–	೪೮೯
೭೭	ದಂಡಿತಾರಾಶಿ	–	೫೯೮
೭೮	ನಡೆಕೋಲ್ವರಂ	–	೩೦೮
೭೯	ನೃಪನ ದಯೆಯುಂ	–	೬೩೦
೮೦	ಮನಕಂ ಪಕ್ಕಲ್ಲದೆ	–	೭೧೫
೮೧	ಮೊರೆದೆಱಗುವ	–	೨೫
೮೨	ವಿನಯಮನಿತ್ತು	–	೬೨೮
೮೩	ವೀರಶ್ರೀ ವಿಜಯನ	–	೭೮
೮೪	ಶಯದಂಷ್ಟ್ರಾ	–	೩೪೯
೮೫	ಶ್ರೀಯ ಜವ್ವನದ	–	೩೪೧
೮೬	ಸಂದ ಸರ್ವಗತಂ	–	೫೪೦
೮೭	ಸಬಳಿಕೆಯಿಂ	–	೫೪೪

ಭಾರತದ ಅಂಶವನ್ನು ತುಂಬಿಕೊಂಡ ಈ ೮೭ ಪದ್ಯಗಳಲ್ಲಿ ದರ್ಪಣಕ್ಕೆ ಸಂಬಂಧಿಸಿದುವು ೬೨, ಕಾವ್ಯಾವಲೋಕನಕ್ಕೆ ಸಂಬಂಧಿಸಿದುವು ೨೫. ಇವುಗಳಲ್ಲಿ ಹರಿವಂಶಕ್ಕೆ ಸಂಬಂಧಿಸಿರಬಹುದಾದ ಮತ್ತು ನಮ್ಮ ತಪ್ಪು ಊಹೆಗೆ ಹತ್ತಿಕೊಂಡು ಬಂದಿರಬಹುದಾದ ಕೆಲವು ಪದ್ಯಗಳನ್ನು ತೆಗೆದು ಹಾಕಿದರೂ ಕೆಲವಾದರೂ ಪಂಪಪೂರ್ವದ ಭಾರತದ ಕಥೆಗೆ (ಗಳಿಗೆ) ಸಂಬಂಧಿಸಿರುವ ಶಕ್ಯತೆಯಿದೆ. ಇವುಗಳಲ್ಲಿ ಜೈನಭಾರತಕ್ಕೆ ಸೇರಿದವುಗಳೆಂದು ಬೆರಳಿಟ್ಟು ತೋರಿಸುವ ಒಂದೂ ಪದ್ಯವಿಲ್ಲದುದು ಗಮನಾರ್ಹ.

* * * *

ರಾಮಾಯಣ ಮಹಾಭಾರತಗಳಲ್ಲದೆ ರಾಜಕೀಯ ಮತ್ತು ರಾಜಕೀಯವಲ್ಲದ ಅಂಶಗಳನ್ನೊಳಗೊಂಡ ಕೆಲವು ಕೃತಿಗಳು ಈ ಯುಗದಲ್ಲಿ ಹುಟ್ಟಿರಬಹುದಾಗಿದೆ. ಕೆಲವು ಅನಾಮಧೇಯ ಪದ್ಯಗಳನ್ನು, ಅಲ್ಲಲ್ಲಿ ಎದ್ದುಕಾಣುವ ಸೂಚನೆಗಳನ್ನು ಆಧರಿಸಿ ಅವುಗಳ ಬಗೆಗೆ ಈಗ ವಿವೇಚಿಸಬಹುದು.

'ಕವಿಯಾಸ್ಥಾನಕೆ ಭೂಷಣಂ'[೩೫] ಎಂಬ ಆದರ್ಶದ ಫಲವಾಗಿ ಕನ್ನಡದ ಬಹುಪಾಲು ಸಾಹಿತ್ಯ ರಾಜಾಸ್ಥಾನದಲ್ಲಿ ಬೆಳೆಯಿತು. ಪಂಪನಿಗೆ ಪೂರ್ವದಲ್ಲಿ ಅಖಿಲಭಾರತ ಪ್ರಸಿದ್ಧಿಯಿಂದ ಬಾಳಿದ ಶಾತವಾಹನ, ಕದಂಬರನ್ನು ಬಿಟ್ಟರೂ ಚಾಲುಕ್ಯ, ಗಂಗ, ರಾಷ್ಟ್ರಕೂಟ ರಾಜಮನೆತನಗಳ ಕಾಲಕ್ಕೆ ಕನ್ನಡ ಕಳೆತುಂಬಿ ಬೆಳೆಯುತ್ತಿತ್ತು; ಬೆಳೆದಿದ್ದಿತು. ಈ ಮನೆತನಗಳಲ್ಲಿ ಸಮರ್ಥ ಕಲಿಗಳಾಗಿ ಬಾಳಿದ ಪುಲಿಕೇಶಿ, ವಿಕ್ರಮಾದಿತ್ಯ, ದುರ್ವಿನೀತ, ಶಿವಮಾರ, ದಂತಿದುರ್ಗ, ಗೋವಿಂದ ಮೊದಲಾದವರು ಕಾವ್ಯಕ್ಕೆ ವಿಷಯವಾಗಬಲ್ಲ ವಸ್ತು ಪುರುಷರು. ಇವರಲ್ಲಿ ಕೆಲವರನ್ನು ಕುರಿತು ಹುಟ್ಟಿರಬಹುದಾದ ಕೃತಿಗಳ ವಿಷಯವಾಗಿ ಪಂಡಿತರು ಕೆಳಗಣ ಊಹೆ ಮಾಡಿರುವರು.

ಪೊಲಕೇಸಿ ವಲ್ಲಭನನ್ನು ಕುರಿತ ಕೃತಿ :

ವಿಕ್ರಮವಹ್ನಿ ಮುನ್ನಳುರ್ದುಕೊಂಡುದು ತನ್ಮುನಿಯಂ ಗಡಶ್ವಮೇ
ಧಕ್ರತು ಧೂಮವಾದುದು ಗಡಂ ಬಟಿಯಂ ಶಿಖಿ ಧೂಮಯೋನಿಯೆಂ।
ಬೀಕ್ರಮಮೆಂತು ಪೇೞಿಮೆನೆ ವಿಕ್ರಮಯಜ್ಞ ವಿಧಾನಮಂ ಧರಾ
ಚಕ್ರಮೆ ಮೆಚ್ಚಿ ಬಣ್ಣಿಸೆ ಜಸಂಬಡೆದಂ ಪೊಲಕೇಸಿವಲ್ಲಭಂ॥[೩೬]

ಕಾವ್ಯಾವಲೋಕನದ ಈ ಪದ್ಯ ಕೆಲವು ವಿದ್ವಾಂಸರ ತೀವ್ರಗಮನವನ್ನು ಸೆಳೆದಿದೆ. "ಬಾದಾಮಿಯ ಚಾಲುಕ್ಯರನ್ನು ಉಲ್ಲೇಖಿಸುವ ಪಡುವಣಚಾಲುಕ್ಯರ ಶಾಸನಗಳಲ್ಲಿ ವಂಶನಿರೂಪಣವು ಕನ್ನಡದಲ್ಲಿಲ್ಲ, ಸಂಸ್ಕೃತದಲ್ಲಿದೆ. ಬಾದಾಮಿಯವರ ಶಾಸನಗಳು ಹೆಚ್ಚಾಗಿ ಸಂಸ್ಕೃತದಲ್ಲಿಯೇ ಇವೆ......" ಅದಕ್ಕಾಗಿ ಇದು ಶಾಸನಪದ್ಯವಲ್ಲವೆನ್ನುತ್ತ, ಗೋವಿಂದ ಪೈಗಳು,[೩೭] ಇನ್ನೂ ಮುಂದುವರಿದು ಇದು "ಚಾಲುಕ್ಯ ವಂಶವು ವಿಧ್ವಸ್ತವಾದ ಕ್ರಿ.ಶ. ೭೫೩ ರೊಳಗಾದರೂ ರಚಿತವಾದ ಯಾವೊಂದು ಕಾವ್ಯದಲ್ಲಿಯ ಪದ್ಯವಾಗಿರಬೇಕು" ಎನ್ನುತ್ತಾರೆ.[೩೮] ಆದರೆ ಭಾಷೆ ಕ್ರಿ.ಶ. ೭೫೩ಕ್ಕೆ ಪ್ರಾಚೀನವಲ್ಲವಾದುದರಿಂದ ಈ ಪದ್ಯ ಕಲ್ಯಾಣಚಾಲುಕ್ಯ ಚಕ್ರವರ್ತಿಯನ್ನು ಕುರಿತ ಒಂದು ಕಾವ್ಯ ಇಲ್ಲವೆ ಶಾಸನದ ರಾಜವಂಶಾವಳಿಗೆ ಸಂಬಂಧಿಸಿರಲೂ ಸಾಧ್ಯವಿದೆ. ಅದಕ್ಕಾಗಿ ಇದು ಬಾದಾಮಿಚಾಲುಕ್ಯರ ಶಾಸನ ಪದ್ಯವೂ ಅಲ್ಲ, ಆ ಕಾಲದ ಒಂದು ಕಾವ್ಯದ ಪದ್ಯವೂ ಅಲ್ಲ; ತರುವಾಯ ಯಾವುದೋ ಒಂದು ಶಾಸನ ಇಲ್ಲವೆ ಕಾವ್ಯದ ಪದ್ಯವಾಗಿರಬಹುದು.

ಚಾಲುಕ್ಯರಲ್ಲಿ ಪುಲಕೇಶಿ ಎಂಬ ಹೆಸರಿನವರು ಇಬ್ಬರು ಚಕ್ರವರ್ತಿಗಳಿರುವರು. ಮೊದಲನೆಯವನಿಗೆ ಪೊಲಕೇಶಿವಲ್ಲಭ ಪುಲಕೇಶಿದೇವ ಎಂದೂ, ಎರಡನೆಯವನಿಗೆ ಸತ್ಯಾಶ್ರಯ ಪೃಥ್ವೀವಲ್ಲಭ ಸತ್ಯಾಶ್ರಯದೇವನೆಂದೂ ಕರೆಯುವುದರಿಂದ ಈ ಪದ್ಯದಲ್ಲಿ ಉಕ್ತನಾದವನು ಮೊದಲನೆಯ ಪುಲಕೇಶಿ (ಕ್ರಿ.ಶ.ಸು. ೫೪೩)ಯೇ ಆಗಿರಬೇಕು. ಗದಾಯುದ್ಧದಲ್ಲಿ 'ಅಶ್ವಮೇಧ ದೀಕ್ಷಿತ'ನೆಂದು, ಮಹಾಕೂಟಸ್ತಂಭಲೇಖನದಲ್ಲಿ[೩೯] ಅಗ್ನಿಷ್ಟೋಮ ಅಗ್ನಿಚಯನ ವಾಜಪೇಯಿ ಬಹುಸುವರ್ಣ ಪೌಂಡರೀಕ ಮತ್ತು ಅಶ್ವಮೇಧಯಜ್ಞ ಮಾಡಿದವನೆಂದು ಈತನನ್ನು ಕುರಿತು ಹೇಳಿರುವುದೂ ಇದನ್ನು ಪೋಷಿಸುತ್ತದೆ. ವಸ್ತುಸ್ಥಿತಿ ಹೀಗಿರುವಾಗ ಇಮ್ಮಡಿ ಪುಲಕೇಶಿಯ ಆಸ್ಥಾನಕವಿ "ರವಿಕೀರ್ತಿಯೇ

---

೩೫ ಸೋ. ಶತಕ. ಪ. ೫
೩೬ ಕಾ. ಲೋಕನ ಪ. ೪೮೮
೩೭ ಕನ್ನಡ ಸಾಹಿತ್ಯದ ಪ್ರಾಚೀನತೆ (ಮೂರು ಉಪನ್ಯಾಸಗಳು ೧೦೪)
೩೮ ಕನ್ನಡ ಸಾಹಿತ್ಯದ ಪ್ರಾಚೀನತೆ (ಮೂರು ಉಪನ್ಯಾಸಗಳು ೧೦೫)
೩೯. I.A. xix, ಪು. ೭

ಕಾವ್ಯಾವಲೋಕನದ ಈ ಮೇಲಣ ಉತ್ಪಲಮಾಲೆಯುಳ್ಳ ಕಾವ್ಯದ ರಚಕನಾಗಿರಬಹುದೆ?"[೪೦] ಎಂದು ಪೈಗಳು ಊಹಿಸಿದುದು ತೀರ ನಿರಾಧಾರವೆನಿಸುತ್ತದೆ.

ನೃಪತುಂಗನನ್ನು ಕುರಿತ ಕೃತಿ :

ಕರಿವೋಲ್ ಗುಣಭದ್ರಂ ಕೇ
ಸರಿವೋಲ್ ನಿರ್ವ್ಯಾಜ ಶೌರ್ಯನಂಭೋನಿಧಿವೋಲ್।
ಶರಣಾಗತ ರಕ್ಷಣ ಪಟು
ಗಿರಿವೋಲ್ ನಿಷ್ಕಂಪನಾ ನೃಪತುಂಗಂ॥[೪೧]

ವೀರನುದಾರಂ ಶುಚಿಗಂ
ಭೀರಂ ನಯಶಾಲಿ ಕೈದವೋತ್ತರದೇವಂ।
ಗಾರೆಜಿಗರ್ ನೃಪತುಂಗಂಗೆ
.... ॥[೪೨]

ಇರ್ಮ್ಮಡಿ ಬಲಿಗೆ ದಧೀಚಿಗೆ
ಮೂರ್ಮ್ಮಡಿ ಜೀಮೂತವಾಹನಂಗಂ ಬಗೆಯಲ್।
ನೂರ್ಮ್ಮಡಿ ಶಿಬಿಗಂ ದಿಟ ಸಾ
ಸಿರ್ಮ್ಮಡಿ ಮಿಗಿಲಿಳೆಗೆ ಚಾಗದೊಳ್ ನೃಪತುಂಗಂ॥[೪೩]

'ನೃಪತುಂಗ' ಪದವನ್ನೊಳಗೊಂಡ ಈ ಪದ್ಯಗಳು ಕಾ.ಲೋಕನ, ದರ್ಪಣ, ಶಬ್ದಾನುಶಾಸನಗಳಲ್ಲಿ ಲಭಿಸುತ್ತವೆ. ಇವು ನೃಪತುಂಗನನ್ನು ಕುರಿತು ಯಾವನೋ ಒಬ್ಬನು, ಬಹುಶಃ ಶ್ರೀವಿಜಯನು ಬರೆದ ಕಾವ್ಯಕ್ಕೆ ಸಂಬಂಧಿಸಿರಬಹುದೆಂದು ಪಂಡಿತರ ಅಭಿಮತ. ಇಲ್ಲಿ ನೃಪತುಂಗನೆಂದರೆ ಅಮೋಘವರ್ಷ। ಎನ್ನುವುದೂ, ಈತನನ್ನು ಕುರಿತ ಒಂದು ಕಾವ್ಯವಿದ್ದಿತೆನ್ನುವುದೂ ಪ್ರಬಲ ಆಧಾರಗಳಿಂದ ಗಟ್ಟಿಗೊಳ್ಳಬೇಕಾಗಿದೆ.

ಹೀಗೆ, ಹಿಂದೆ ವಿವೇಚಿಸಿದ ಎರೆಯಪ್ಪ ಮತ್ತು ಇಲ್ಲಿ ವಿವೇಚಿಸುತ್ತಿರುವ ನೃಪತುಂಗ, ಪುಲಿಕೇಶಿಗಳನ್ನು ಬಿಟ್ಟರೂ ಕಾವ್ಯಾವಲೋಕನದಲ್ಲಿ ಚಾರಿತ್ರಿಕ ಅಂಶಗಳನ್ನೊಳಗೊಂಡ ಇನ್ನೂ ಕೆಲವು ಪದ್ಯಗಳು ಕಂಡುಬರುತ್ತವೆ.[೪೪] ಇವುಗಳಲ್ಲಿ ಒಂದಿಷ್ಟು ಪಂಪಪೂರ್ವದ ಕಾವ್ಯಗಳಿಗೆ ಸಂಬಂಧಿಸಿರಲು ಸಾಧ್ಯವಿದೆ.

ಈ ರಾಮಾಯಣ, ಮಹಾಭಾರತ ಮತ್ತು ರಾಜಕೀಯ ಕಾವ್ಯಗಳನ್ನಲ್ಲದೆ, ಇನ್ನೂ ಕೆಲವು ಕೆಳಗಣ ಕೃತಿಗಳನ್ನು ಈ ಯುಗದಲ್ಲಿ ವಿದ್ವಾಂಸರು ಊಹಿಸಿರುವರು.

---

೪೦. ಕನ್ನಡ ಸಾಹಿತ್ಯದ ಪ್ರಾಚೀನತೆ (ಮೂರು ಉಪನ್ಯಾಸಗಳು. ಪು. ೧೦೭)
೪೧. ಕಾ. ಲೋಕನ ಪು. ೩೩೯
೪೨. ಶ.ಮ.ದ. ಸೂ. ೧೫೧
೪೩. ಶ.ಶಾಸನ ಸೂ. ೩೫೨(ಆರ್. ನರಸಿಂಹಾಚಾರ್ ೧೯೨೩)
೪೪. S.K.H. Page 150 ನೋಡಿರಿ (೧೯೪೦)

ರತ್ನಾವಳಿ :

ಪತ್ತಿಪ್ರಮಾದ ಫಲಕಮ
ನತ್ಯುಗ್ರ ಗ್ರಾಹನಿವಹ ಸಂಕ್ಷೋಭಿತದೊಳ್।
ಮತ್ತೀ ರತ್ನಾಕರದೊಳ್
ಪುತ್ರಿಕೆಯೆನೆ ಬಟ್ಟಳಿಂತು ಬಾಟ್ಟುದೆ ಚೋದ್ಯಂ॥[೪೫]

ಕವಿರಾಜಮಾರ್ಗದ ಈ ಪದ್ಯದಲ್ಲಿ ಹರ್ಷನ ರತ್ನಾವಳಿಯ ಕಥಾಂಶ ಕಂಡುಬರುತ್ತದೆ. ಇದನ್ನು ಗಮನಿಸಿದ ಶ್ರೀಮುಳಿಯ ಅವರು "ಪದ್ಯವಿದರೊಳಗೆ, ತತ್ಪೂರ್ವದ ಹರ್ಷಚರಿತ 'ರತ್ನಾವಳೀ ನಾಟಿಕೆ'ಯ ಕಥಾಂಶವೇ ಹೊಳೆಯುತ್ತಿದೆ. ನಾಟಕವೇ ಆಗಿ ಇಲ್ಲವೆ ಶ್ರವ್ಯಕಾವ್ಯವೇ ಆಗಿ ಯಾವನೋ ಕನ್ನಡ ಕವಿಯಿಂದ ಭಾಷಾಂತರಿತವಾದ ಪ್ರಬಂಧವೇ ಈ ಪದ್ಯದ ಆಕರವೆಂಬಲ್ಲಿ ಸಂದೇಹವಿಲ್ಲ" ಎನ್ನುತ್ತಾರೆ.[೪೬] ಆದರೆ ಮುಗಳಿಯವರು "ರತ್ನಾವಳಿಯನ್ನೋದಿ ಬಲ್ಲ ಕವಿರಾಜಮಾರ್ಗಕಾರನೇ ಸ್ವತಂತ್ರವಾಗಿ ಅದನ್ನು ರಚಿಸಿರಬಹುದು" ಎಂದು ಹೇಳಿದುದು ಸೂಕ್ತವೆನಿಸುತ್ತದೆ.[೪೭]

ನಾಗವರ್ಮನ ವರ್ಧಮಾನಪುರಾಣ:

ಎನಗನುಕೂಲಮಕ್ಕೆ ಗುಣವರ್ಮನ ಜಾಣ್ನುಡಿ ಪಂಪನಿಂಪು ಪೊ
ನ್ನನ ಬಗೆ ನಾಗವರ್ಮನ ಬಹುಜ್ಞತೆ ರನ್ನನ ಕಾಂತಿ ನಾಗಚಂ।
ದ್ರನ ರಸಭಾವಮಗ್గಳನ ವಕ್ರತೆ ನೇಮಿಯ ದೇಸೆ ಪುಷ್ಪಬಾ
ಣನ ಮೃದುಬಂಧಮೀ ಕವಿಗಳಲ್ತೆ ಜಿನೇಂದ್ರ ಪುರಾಣಕರ್ತೃಗಳ್॥[೪೮]

ಜನ್ನನ ಅನಂತನಾಥಪುರಾಣದ ಈ ಪದ್ಯ 'ಜಿನೇಂದ್ರಪುರಾಣಕರ್ತೃ'ಗಳನ್ನು ಪ್ರಸ್ತಾಪಿಸುತ್ತದೆ. ಇವರಲ್ಲಿ ನಾಗವರ್ಮ, ಪುಷ್ಪಬಾಣ(=ಸುಮನೋಬಾಣ?)ರ ಕೃತಿಗಳು ಲಭಿಸಿಲ್ಲ. ಅವುಗಳ ಹೆಸರೂ ಗೊತ್ತಾಗಿಲ್ಲ. ಆರಾ ಹಸ್ತಪ್ರತಿಭಂಡಾರದ ಆಚಣ್ಣನ ವರ್ಧಮಾನಪುರಾಣದ ಓಲೆ ಪ್ರತಿವೊಂದರಲ್ಲಿ,

ಪದಿನಾಲ್ಕು ಸಾಗರೋಪಮ
ಮದು ಪರಮಾಯುಃ ಪ್ರಮಾಣಮನಿತೆ ಸಹಸ್ರಾ।
ಬ್ದದೊಳೊರ್ಮೆ ನೆನೆವನುಣಿಸಂ
ಮುದದೊದವಿರೆ ಸುಯ್ದನೇಟು ತಿಂಗಳ್ಗಮರಂ॥

ಎಂಬ ಪದ್ಯದ (೧೨-೭೬) ಕೆಳಗೆ "ನಾಗವರ್ಮಕೃತ ವರ್ಧ=೪" ಎಂದು ಬರೆದಿರುವುದರಿಂದ ಈ ಪದ್ಯ ನಾಗವರ್ಮನ ಕೃತ ವರ್ಧಮಾನಪುರಾಣದ್ದೆಂದೂ, ಆದಿಗುಣವರ್ಮನ ಸಮಕಾಲೀನನಾಗಿರಬಹುದಾದ ಈತನ ಕಾಲ ಕ್ರಿ.ಶ.

---

೪೫. ಕ.ಮಾ. ೨-೩೬
೪೬. ಕ.ಮಾ. ವಿವೇಕ II (ಕ.ಮಾ. (ಎಂ.ವಿ.ಸೀ.)ಟಿಪ್ಪಣಿಗಳು. ಪು. ೧೯೭ (ಅ.ಟಿ.)
೪೭. ಕ.ಸಾ.ಚ. ಪು. ೨೩
೪೮. ಅನಂತನಾಥಪುರಾಣ (ಕ.ಕ.ಚ. ಪು. ೩೭೯)

ಸು. ೯೦೦ ಇರಬಹುದೆಂದೂ, ಶ್ರೀ ಎಚ್. ಶೇಷಯ್ಯಂಗಾರ್ ಅವರ ಅಭಿಪ್ರಾಯ.[೪೯] ಆಚಣ್ಣನ ವರ್ಧಮಾನಪುರಾಣದ,

> ಶ್ರೀವಿಜಯಂ ಗಜಾಂಕುಶನುದಾತ್ತಯಶಂ ಗುಣವರ್ಮ[ನಾ] ಜಗ
> ತ್ಪಾವನ ನಾಗವರ್ಮನಸಗಂ ರಸಿಕಾಗ್ರಣಿ ಹಂಪದೇವನಾ।
> ಭಾವಕ ಚಕ್ರಿ ಹೊನ್ನಿಗನಿಳಾನುತ ರನ್ನಿಗನಗ್ಗದಗ್ಗಳಂ
> ಧೀವಿಭು ಬೊಪ್ಪನೆಂಬ ಕವಿದರ್ಪಕರಿಂದೆಸದತ್ತು ಭೂತಳಂ॥[೫೦]

ಎಂಬ ಪದ್ಯದಲ್ಲಿ ನಾಗವರ್ಮ, ಅಸಗನನ್ನು ವರ್ಧಮಾನಪುರಾಣದ ಕರ್ತೃಗಳೆಂಬ ಕಾರಣದಿಂದ ಒಟ್ಟಿಗೆ ಹೇಳಿರಬಹುದು. ಆದರೆ ನಮಗೆ ಮಾತ್ರ ವರ್ಧಮಾನಪುರಾಣದ ನಾಗವರ್ಮ ಕ್ರಿ.ಶ. ೯೦೦ವನಾಗಿರದೆ ಕಾವ್ಯಾವಲೋಕನದ ನಾಗವರ್ಮನಾಗಿರಬೇಕೆನಿಸುತ್ತದೆ, ಎನ್ನುತ್ತಾರೆ ಎಂ. ಮರಿಯಪ್ಪಭಟ್ಟರು. ಇದನ್ನು ಇನ್ನೂ ಸಬಲಗೊಳಿಸಿ ಹೇಳುವುದಾದರೆ ಲಾಕ್ಷಣಿಕನಾಗಿದ್ದರೂ ಕವಿಕರ್ಣಪೂರ, ಕವಿತಾಗುಣೋದಯ, ಕವಿಕಂಕಾಭರಣ ಎಂಬ ಬಿರುದುಗಳು ಕಾವ್ಯಾವಲೋಕನದ ನಾಗವರ್ಮ್ಮನ ಕವಿಮನವನ್ನು ಪ್ರತಿನಿಧಿಸುತ್ತವೆ. ಅಲ್ಲದೆ ಈತನಿಗೆ ವರ್ಧಮಾನನ ಮೇಲೆ ಭಕ್ತಿ ಅಧಿಕ. ಈತನ ಕಾವ್ಯಾವಲೋಕನ ವಸ್ತುಕೋಶ, ಹಲಾಯುಧಟೀಕೆಗಳ ಪ್ರಾರಂಭದಲ್ಲಿ ವರ್ಧಮಾನಸ್ತುತಿ ಬರುವುದು ಇದಕ್ಕೆ ನಿದರ್ಶನ. "ಹೀಗಾಗಿ ಎನಗನುಕೂಲ......' ಎಂಬ ಜನ್ನನ ಪದ್ಯದಲ್ಲಿ ಬರುವ ನಾಗವರ್ಮನ ಕೃತಿಯು ವರ್ಧಮಾನಪುರಾಣವೆಂದೂ, ಈತನು ನಾಗವರ್ಮIIನೆಂದೂ[೫೧] ಇಟ್ಟುಕೊಂಡು, ಎಚ್. ಶೇಷಯ್ಯೆಂಗಾರ್ ಸೃಷ್ಟಿಸಿದ ಕ್ರಿ.ಶ. ೯೦೦ರ ನಾಗವರ್ಮನು ತೀರ ಕಾಲ್ಪನಿಕ ಎನ್ನಬಹುದು.

ಇದಿಷ್ಟು ಈ ಪಿಎಚ್.ಡಿ. ಪ್ರಬಂಧದ ಮೊದಲ ಆವೃತ್ತಿಯಲ್ಲಿ ಬರೆದುದು. ಸುದೈವದ ಸಂಗತಿಯೆಂದರೆ ಈ ಪುರಾಣ ೧೯೭೩ರಲ್ಲಿ ಲಭ್ಯವಾಗಿ ೧೯೭೪ರಲ್ಲಿ ಪ್ರಕಟವಾಗಿದ್ದು, ಇದನ್ನು ಇನ್ನುಮೇಲೆ ಕವಿರಾಜಮಾರ್ಗ ಪರಿಸರದ ಸಾಹಿತ್ಯದಿಂದ ಈಚೆಗೆ ಪರಿಗಣಿಸಬೇಕಾಗುತ್ತದೆ.

ನಾಗವರ್ಮ್ಮನ ವರ್ಧಮಾನಪುರಾಣೋಕ್ತ ಇತರ ಕೃತಿಗಳು:

ಇತ್ತೀಚೆ ಲಭಿಸಿ ಪ್ರಕಟವಾದ (೧೯೭೩-೭೪) ಎರಡನೆಯ ನಾಗವರ್ಮ್ಮನ (೧೦೪೨) ವರ್ಧಮಾನಪುರಾಣದ ಪೀಠಿಕಾಭಾಗದಲ್ಲಿ ಶ್ರೀವಿಜಯನ ರಘುವಂಶಮಹಾಪುರಾಣ, ಗುಣವರ್ಮ್ಮನ ಹರಿವಂಶ, ನಾಗವರ್ಮ್ಮನ ವತ್ಸರಾಜಚರಿತ, ಪೊನ್ನನ ಶಾಂತಿಪುರಾಣ, ಪಂಪನ ಆದಿಪುರಾಣ...... ಹೀಗೆ ಕೃತಿಗಳ ಉಲ್ಲೇಖಬರುತ್ತದೆ. ಇದು ಬಹುಶಃ ಇತಿಹಾಸ ಕ್ರಮದಲ್ಲಿರುವದರಿಂದ ಇಲ್ಲಿ ಪೊನ್ನ-ಪಂಪರಿಗೆ ಶ್ರೀವಿಜಯ, ಗುಣವರ್ಮ್ಮ, ನಾಗವರ್ಮ್ಮರು ಪ್ರಾಚೀನರೆನಿಸಿದ್ದಾರೆ. ಈಗಾಗಲೇ ಶ್ರೀವಿಜಯನ ರಘುವಂಶಮಹಾಪುರಾಣ, ಗುಣವರ್ಮ್ಮನ ಹರಿವಂಶಗಳ ಬಗ್ಗೆ ಚರ್ಚಿಸಲಾಗಿದೆ. ಮಿಕ್ಕ ನಾಗವರ್ಮ್ಮನ ವತ್ಸರಾಜಚರಿತೆ ಇಲ್ಲಿ ವಿವೇಚಿಸಬಹುದು.

ಇಲ್ಲಿ ಪೊನ್ನನಿಗಿಂತ ಮೊದಲೇ ಉಲ್ಲಿಖಿತವಾಗಿರುವದರಿಂದ ಈ ನಾಗವರ್ಮ್ಮನು ಕಾದಂಬರಿ ಕರ್ತೃ ಮೊದಲನೆಯ ನಾಗವರ್ಮ್ಮನಾಗಿರದೆ, ಇವನಿಗಿಂತ ಹಿಂದಿನವನಾಗಿರಬಹುದು. ಮೇಲಾಗಿ ಮೊದಲನೆಯ ನಾಗವರ್ಮ್ಮ

---

೪೯. ನಾಗವರ್ಮ ಕವಿಗಳು ಎಷ್ಟು ಮಂದಿ? AORM. vii-i ೫೦. ವ. ಪುರಾಣ (ಕ.ಕ.ಚ. ಪು. ೩೪೯)
೫೧. ಜನ್ನನ ಗುರು ನಾಗವರ್ಮIIನೆಂಬ ಹಳೆಯ ವಾದವೂ ಇವರಿಗೆ ನೆರವಾಗಿರಬೇಕು.

ಬ್ರಾಹ್ಮಣನಾದರೆ ಈ ನಾಗವರ್ಮನು ಪಂಪಾದಿಗಳ ಸಾಲಿನಲ್ಲಿ ಬರುವ ಕಾರಣ ಜೈನನೇ ಆಗಿರುವಲ್ಲಿ ಸಂದೇಹವಿಲ್ಲ. ಈ ವತ್ಸರಾಜ ಚರಿತೆಯೂ ಜೈನಕಾವ್ಯ (ಚಂಪೂ)ವಾಗಿರಬಹುದು. ಲಭ್ಯವಾಗದ ಹೊರತು ಏನನ್ನೂ ಹೇಳುವಂತಿಲ್ಲ.

ಪಂಪನ ಹಿಂದಣ ಕೃತಿಗಳು:

> ಪುದಿದ ಜಸಂ ಪೊದಟ್ಟಿ ಚಳಮೊಂದಿದಳಂಕೃತಿ ಕೈತ ದೇಸಿಯೆಂ ।
> ಬುದನೆನೆ ವಸ್ತುವಿದ್ಯೆಯೆನೆ ಕಬ್ಬಮೆ ಮುನ್ನಮವಂತಿವಲ್ಲದ ।
> ಲ್ಲದೆ ಪೆಱವಿಲ್ಲ ಕಬ್ಬಮೆನೆ ಮುನ್ನಿನ ಕಬ್ಬಮನೆಲ್ಲಮಿಕ್ಕಿಮೆ ।
> ಟ್ಟಿದುವು ಸಮಸ್ತ ಭಾರತಮುಮಾದಿಪುರಾಣ ಮಹಾಪ್ರಬಂಧಮುಂ॥[೫೨]

ಎಂಬ ಪಂಪಭಾರತದ ಪದ್ಯವನ್ನಾಧರಿಸಿ ೧. ಜಸಗಬ್ಬ ೨. ಚಳಗಬ್ಬ ೩. ಅಳಂಕೃತಿಗಬ್ಬ ೪. ಕೈತಗಬ್ಬ ೫. ದೇಸಿಗಬ್ಬ ೬. ವಸ್ತುವಿದ್ಯೆಗಬ್ಬ ಎಂಬ ಪಟ್ಟಿಯೊಂದನ್ನು ಸಿದ್ಧಪಡಿಸಿ "ಮೇಲಿನ ಪಟ್ಟಿಯಲ್ಲಿ ತೋರುವಂತೆ, ಪಂಪನ ಹಿಂದಿನ ಕಾವ್ಯಸಂಖ್ಯೆ ಆರೇ ಆಗಿದ್ದುದೆಂದೂ, ಅಲ್ಲಿ ತೋರುವುದು ಆಯಾ ಕಾವ್ಯಗಳ ಹೆಸರುಗಳೆಂದೂ ನಮ್ಮ ಭಾವನೆಯಲ್ಲ. ಕಾವ್ಯಗಳು ಆರೋ ಮೂರೋ ಹದಿನೆಂಟೋ ಆಗಿರಬಹುದು. ಪಟ್ಟಿಯಲ್ಲಿ ತೋರುವ ವಿಷಯಗಳನ್ನೊಳಗೊಂಡ ಆಯಾ ಕಾವ್ಯಗಳು ರಚಿತಗಳಾಗಿದ್ದಿರಬೇಕೆಂದಿಷ್ಟೇ ನಮ್ಮ ಸೂಚನೆ" ಎಂದು ಶ್ರೀ ಮುಳಿಯ ಅವರು ಊಹಿಸಿದ್ದಾರೆ.[೫೩] ಇಂತಹದೇ ಇನ್ನೊಂದು ಊಹೆಯನ್ನು ಮಾಡಿದವರು ಶ್ರೀ ವೆಂಕಟರಾಯಾಚಾರ್ಯರು. ನಾಗವರ್ಮನ ಕಾವ್ಯಾವಲೋಕನದ,

> ವಿಧುವಿಲ್ಲದಿರುಳ್ ಕೆಲದೊಳ್
> ವಧುವಿಲ್ಲದ ಲೀಲೆ ಮಧುರ ಮಧುವಿಲ್ಲದ ಪೂ।
> ದಧಿಯಿಲ್ಲದುಣಿಸದೇವುದೊ
> ಬುಧರಿಲ್ಲದ ಸಭೆ ಸರಸ್ವತೀಮಣಿಹಾರಾ॥[೫೪]

ಎಂಬ ಪದ್ಯವನ್ನು ಗಮನಿಸಿ "ಪಂಪ ಮಹಾಕವಿಯ ಬಿರುದುಗಳಲ್ಲಿ 'ಸರಸ್ವತೀಮಣಿಹಾರ' ಎಂಬುದೂ ಒಂದು ಎಂದು ಆತನ ಗ್ರಂಥಗಳಿಂದ ತಿಳಿಯುವುದು. ಈ ಮೇಲಣ ಪದ್ಯವೂ ಆತನು ರಚಿಸಿದ ಆವೊಂದು ಗ್ರಂಥಸ್ಥವಾಗಿರಬೇಕೆಂದು ನಿಸ್ಸಂದೇಹವಾಗಿ ಹೇಳಬಹುದು" ಎಂದು ನಿರ್ಣಯಿಸಿರುವರು.[೫೫] ಆದರೆ 'ಸರಸ್ವತೀಮಣಿಹಾರ' ಎಂಬುದು ಇಲ್ಲಿ ಸುಭಾಷಿತ ಗ್ರಂಥವೊಂದರ ಮುದ್ರಿಕೆಯಂತೆ ತೋರುವುದರಿಂದ, ಇದು ಈ ಬಿರುದಿನ ಬೇರೊಬ್ಬನು ಬರೆದ ಸುಭಾಷಿತ ಗ್ರಂಥವೊಂದರ ಪದ್ಯವೆನಿಸುತ್ತದೆ. ಮೇಲಾಗಿ ಇದಕ್ಕಿರುವ 'ಸರಸ್ವತೀಮುಖತಿಲಕಾ' ಎಂಬ ಪಾಠಾಂತರವೂ ಈ ಪದ್ಯವನ್ನು ಪಂಪನಿಂದ ಬೇರ್ಪಡಿಸುತ್ತದೆ. ಹೀಗಾಗಿ ಉಭಯ ವಿದ್ವಾಂಸರ ಹೇಳಿಕೆಗಳು ಕೇವಲ ಊಹೆಗಳೆನ್ನಬಹುದು.

---

೫೨. ಪಂ. ಭಾ. ೧೪-೫೯

೫೩. ನಾ. ಪಂಪ. ಪು. ೧೫೧

೫೪. ಕಾ. ಲೋ. ಪ. ೪೧

ಇತರ ಕವಿಗಳು:

ಕವಿಚರಿತೆಕಾರರು ಮತ್ತು ಮಿಕ್ಕ ವಿದ್ವಾಂಸರು ಪಂಪಪೂರ್ವಯುಗದಲ್ಲಿ ಇನ್ನೂ ಕೆಲವು ಕವಿಗಳನ್ನು ಉಲ್ಲೇಖಿಸಿರುವರು. ಆಧಾರಗಳ ಕೊರತೆಯಿಂದಾಗಿ ಊಹೆಯ ಎಳೆಯ ಮೇಲೆ ನಿಂತ ಇವರ ವಿಷಯವನ್ನು ಇಲ್ಲಿ ಸಂಗ್ರಹಿಸಬಹುದು. ಇವರಲ್ಲಿ ಮೊದಲು ಗಮನ ಸೆಳೆಯುವವರು ಸಮಂತಭದ್ರ, ಕವಿಪರಮೇಷ್ಠಿ ಮತ್ತು ಪೂಜ್ಯಪಾದ.

ಶ್ರೀಮತ್ಸಮಂತಭದ್ರ
ಸ್ವಾಮಿಗಳ ಜಗತ್ಪ್ರಸಿದ್ಧ ಕವಿಪರಮೇಷ್ಠಿ।
ಸ್ವಾಮಿಗಳ ಪೂಜ್ಯಪಾದ
ಸ್ವಾಮಿಗಳ ಪದಂಗಳೀಗೆ ಶಾಶ್ವತಪದಮಂ॥[೫೬]

ಸಮನಿಕೆ ಮನ್ಮಾನಸದೊಳ್
ಸಮಂತಭದ್ರಾಂಘ್ರಿನಖರ ಕಾಂತಿ ಜಳಂ ಮ।
ತ್ತಮಳಿನ ಕವಿಪರಮೇಷ್ಠಿ
ಕ್ರಮಕಮಳಂ ಪೂಜ್ಯಪಾದ [ಪದ]ನಖಕುಮುದಂ॥[೫೭]

ಹೀಗೆ ಪಂಪ ಅಗ್ಗಳ ಮೊದಲಾದ ಕನ್ನಡ ಕವಿಗಳಿಂದ[೫೮] ನಿತ್ಯವಂದಿತರಾದ ಈ ಮೂವರನ್ನು ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಮೊಟ್ಟಮೊದಲು ದಾಖಲಿಸಿದವರು ಬಿ.ಎಲ್. ರೈಸ್.[೫೯] ಕನ್ನಡಕ್ಕೆ ಲಿಖಿತ ಸಾಹಿತ್ಯಚರಿತ್ರೆ ಇಲ್ಲದ ಸಮಯದಲ್ಲಿ, ಕಿಟೆಲ್ಲರಿಗೆ[೬೦] ಎರಡನೆಯವರಾಗಿ ನಿಂತು ಅಂಥ ಒಂದು ಹೊಸ ಪ್ರಯತ್ನಮಾಡುತ್ತ ಇವರು, ಈ ನಾಡಿನ ಕನ್ನಡ ಸಂಸ್ಕೃತ ಮತ್ತು ಪ್ರಾಕೃತ ಕವಿಗಳನ್ನೆಲ್ಲ ಸುತ್ತುಹಾಕಿಕೊಂಡರು. ಹೀಗಾಗಿ ಸಮಂತಭದ್ರ, ಕವಿಪರಮೇಷ್ಠಿ, ಪೂಜ್ಯಪಾದರು ಕನ್ನಡ ಕವಿಚರಿತೆಯಲ್ಲಿ ಇಳಿದುಬಂದು, ಮುಂದಿನ ಸಂಶೋಧಕರಿಗೆ ಒಂದು ಪ್ರಶ್ನೆಯಾಗಿ ನಿಂತಿರುವರು. ಭಾರತೀಯ ಜೈನಸಾಹಿತ್ಯದಲ್ಲಿ ಆಗಾಗ ಕಂಡುಬರುವ ಇವರ ವಿಷಯ, ಕನ್ನಡನಾಡಿನ ಕವಿಸಾಹಿತ್ಯ ಮತ್ತು ಶಾಸನಸಾಹಿತ್ಯಗಳಲ್ಲಿ ಈ ಕೆಳಗಿನಂತೆ ತುಂಬಿನಿಂತಿದೆ.

---

೫೫. ಪ್ರಾಚೀನ ಕವಿಗಳ ಅವ್ಯಕ್ತಗ್ರಂಥಗಳು. ವೀಣಾ ೧೯೫೩ ನವ್ಹಂಬರ. (ದೀಪಾವಳಿ ಸಂಚಿಕೆ)
೫೬. ಆ. ಪುರಾಣ. ೧-೧೧
೫೭. ಚಂ. ಪುರಾಣ. ೧-೨೦
೫೮. ಇವರಲ್ಲದೆ ಅಭಿನವ ಪಂಪ, ಜನ್ನ, ಕಮಲಭವ, ನಯಸೇನ, ಕರ್ಣಪಾರ್ಯ, ಆಚಣ್ಣ ಮೊದಲಾದ ಕನ್ನಡ ಕವಿಗಳೂ ಸ್ತುತಿಸಿರುವರು.
೫೯. Early Kannada authors, JRAS. xv. 1883 (P. 295)
೬೦. ಕನ್ನಡ ಕವಿಗಳ ವಿವರಗಳನ್ನೊಳಗೊಂಡ ಶ್ರೀ ಕಿಟೆಲ್ ಅವರ ಛಂದೋಂಬುಧಿಯ (೧೮೭೫) ಮುನ್ನುಡಿಯು ಕನ್ನಡದ ಪ್ರಥಮ ಕವಿಚರಿತೆಯೆಂದು ವಿದ್ವಾಂಸರ ಹೇಳಿಕೆ. ಆದರೆ Indian Evangelical Review. Vol. 1 P. 66-69ದಲ್ಲಿ (1873) ಅದೇ ಕಿಟೆಲ್ ಅವರು ಬರೆದ 'Old Kanarese literature" ಎಂಬುದು ಕನ್ನಡಸಾಹಿತ್ಯವನ್ನು ಕುರಿತ ಪ್ರಥಮ ಲೇಖನ. ಇದು ಮತ್ತೆ I.A. iv P. 15 (1875)ದಲ್ಲಿ ಪ್ರಕಟವಾಗಿದೆ.

ಸಮಂತಭದ್ರ:

ಈ ಹೆಸರಿನ ಆರು ಜನ ಯತಿಗಳು[೬೧] ಈವರೆಗೆ ಕಂಡುಬಂದಿರುವರು. ಇವರಲ್ಲಿ ಕನ್ನಡ ಕವಿಗಳಿಂದ ಸ್ಮರಿಸಲ್ಪಟ್ಟವನು ಪ್ರಥಮ ಸಮಂತ್ರಭದ್ರನಾಗಿರಬಹುದೆಂದು ಪಂಡಿತರ ತರ್ಕ. ಈ ಸಮಂತಭದ್ರನ ಚರಿತ್ರೆಯ ಸಾಧನಗಳೆಂದರೆ ಈತನ ಕೃತಿಗಳು, ಅನ್ಯರ ಕೃತಿಗಳು ಮತ್ತು ಶಾಸನಗಳು.

'ಸ್ವಾಮಿ ಸಮಂತಭದ್ರ'[೬೨] ಎಂಬುದು ಜೈನರು ಇವನಿಗೆ ಬಳಸಿರುವ ಗೌರವಪೂರ್ಣ ಹೆಸರು. ಈತನು 'ಶ್ರೀಮೂಲಸಂಘವ್ಯೋಮೇಂದು' ಎಂದು ಹಸ್ತಿಮಲ್ಲ ಮತ್ತು ಅಯ್ಯಪಾರ್ಯರ ಹೇಳಿಕೆ.[೬೩] ಸಮಂತಭದ್ರನ ಆಪ್ತಮೀಮಾಂಸಾ ಮತ್ತು ಇದಕ್ಕೆ ವಿದ್ಯಾನಂದನು ಬರೆದ ಅಷ್ಟಸಹಸ್ರೀ ಹೆಸರಿನ ಟೀಕಾಗ್ರಂಥಗಳ ಕೊನೆಯಲ್ಲಿಯ,

> "ಇತಿ ಫಣಿಮಂಡಲಾಲಂಕಾರಸ್ಯೋರಗಪುರಾಧಿಪಸೂನೋಃ ಶ್ರೀಸ್ವಾಮಿಸಮಂತಭದ್ರ ಮುನೇಃ ಕೃತೌ ಆಪ್ತಮೀಮಾಂಸಾಯಾಮ್"[೬೪]
>
> "ಇತಿ ಫಣಿಮಂಡಲಾಲಂಕಾರಸ್ಯೋರಗಪುರಾಧಿಪ ಸೂನುನಾ ಶಾಂತಿವರ್ಮನಾಮಾ ಶ್ರೀಸಮಂತಭದ್ರೇಣ"[೬೫]

ಎಂಬ ಮಾತುಗಳಿಂದ ಈತನ ಮೂಲ ಹೆಸರು ಶಾಂತಿವರ್ಮನೆಂದೂ ತಂದೆ ಫಣಿಮಂಡಲದ ಉರಗಪುರಕ್ಕೆ ಅಧಿಪತಿಯೆಂದೂ ತಿಳಿದುಬರುತ್ತದೆ. ಪಂಡಿತರು ಹೇಳುವಂತೆ ಈ ಉರಗಪುರವು ಈಗಿನ ತ್ರಿಚನಾಪಳ್ಳಿಯ ಸಮೀಪದ ಉರ್ಯೆಯೂರು.[೬೬] ಪ್ರಭಾಚಂದ್ರ (೧೧ನೆಯ ಶತಮಾನ) ಮತ್ತು ನೇಮಿದತ್ತರ ಕಥಾಕೋಶಗಳಲ್ಲಿಯ 'ಕಾಂಚ್ಯಾಂ ನಗ್ನಾಟಕೋಽಹಂ'[೬೭] ಎಂಬುದು ಈತನ ಕಾಂಚೀನಗರ ಸಂಬಂಧವನ್ನು ಸೂಚಿಸುತ್ತದೆ. ತನ್ನ ಭಸ್ಮಕವ್ಯಾಧಿಯನ್ನು ನಿವಾರಿಸಿಕೊಳ್ಳಲು ಕಾಂಚಿಗೆ ಹೋಗಿ ಅಲ್ಲಿಯ ಶಿವಕೋಟಿಮಹಾರಾಜನಿಗೆ ಜೈನದೀಕ್ಷೆ ನೀಡಿದನೆಂಬ ರಾಜಾವಳೀಕಥೆಯ ಹೇಳಿಕೆಯೂ ಇದನ್ನು ಸಮರ್ಥಿಸುತ್ತದೆ.[೬೮] ಆದರೆ ರಾಜಾವಳೀಕಥೆಯು "ಭೀಮರಥಿ ಕೃಷ್ಣವೇಣೀ ತೊರೆಗಳ ಮಧ್ಯವಿಷಯದಲ್ಲಿರುವ ಉತ್ಕಲಿಕಾಗ್ರಾಮದೊಳುದ್ಭವಿಸಿದ ಸಮಂತಭದ್ರಾಚಾರ್ಯರೆಂಬ ಯತಿಪತಿಗಳು"[೬೯] ಎಂದೂ ಹೇಳುತ್ತದೆ. ಸ್ವತಃ ಸಮಂತಭದ್ರನೇ ತನ್ನ ಗ್ರಾಮ ಉರಗಪುರವೆಂದು ಹೇಳುವುದರಿಂದ ದೇವಚಂದ್ರನ ಹೇಳಿಕೆ ಸಂದೇಹದಲ್ಲಿ ನಿಲ್ಲುತ್ತದೆ. ಬೇಕಿದ್ದರೆ ಈತನು ಕರ್ನಾಟಕದ ಸಂಪರ್ಕವಿಟ್ಟುಕೊಂಡಿದ್ದನೆಂಬ ಬೆಲೆಯನ್ನು ಮಾತ್ರ ಇದಕ್ಕೆ ಕೊಡಬಹುದು. ಅದಕ್ಕಾಗಿ ಉರಗಪುರದಲ್ಲಿ ಹುಟ್ಟಿದ ಈತನು ತಮಿಳುನಾಡಿನ ಕಾಂಚಿ, ಕರ್ನಾಟಕದ ಉತ್ಕಲಿಕಾ (ಉಕ್ಕಲಿ) ಗ್ರಾಮಗಳಲ್ಲಿ ಕೆಲವು ಕಾಲ ನೆಲೆನಿಂತಿರುವ ಸಂಭವವಿದೆ.

---

೬೧. ರತ್ನಕರಂಡಕ ಶ್ರಾವಕಾಚಾರ. ಪ್ರಸ್ತಾವನೆ xviii.
೬೨. JSHAI. (J.P. Jain) P. 144
೬೩. JSHAI. (J.P. Jain) 144 ಅ.ಟಿ.
೬೪. ಶ್ರವಣಬೆಳ್ಗೊಳದ ದೋರ್ಬಲಿ ಜಿನದಾಸಶಾಸ್ತ್ರಿಗಳ ಹತ್ತಿರವಿರುವ ಆಪ್ತಮೀಮಾಂಸೆಯ ಕೊನೆಯಲ್ಲಿ (JSHAI. 147 ಅ.ಟಿ.)
೬೫. JSHAI. (J.P. Jain) P. 147 ಅ.ಟಿ.
೬೬. ರ.ಕ. ಶ್ರಾ. (ಮಿರ್ಜಿ ಅಣ್ಣಾರಾಯ) ಪ್ರಸ್ತಾವನೆ viii.
೬೭. JSHAI (J.P. Jain) P. 145
೬೮. ರಾಜಾವಳೀಕಥೆ (ಕ.ಕ.ಚ. ಪುಟ ೨-೩)
೬೯. ರಾಜಾವಳೀಕಥೆ(ಕ.ಕ.ಚ. ಪುಟ ೨-೩)

ಭಾರತವನ್ನೇ ಪರ್ಯಟನಗೆಯ್ದು ಅನ್ಯವಾದಿಗಳನ್ನು ಸೋಲಿಸಿದ ಈ ದಿಗಂಬರ ಯತಿಯ ಕಾಲ ೨ ಮತ್ತು ೭ನೆಯ ಶತಮಾನಗಳ ಮಧ್ಯ ತೂಗುತ್ತದೆ.[೨೦] ಶ್ರುತಾವತಾರದ ಇತಿಹಾಸ ಕ್ರಮವನ್ನು ಹೇಳುವ ಇಂದ್ರನಂದಿ, ಚಾವುಂಡರಾಯ ಮತ್ತು ದೇವಚಂದ್ರರ ಪ್ರಕಾರ ಈ ಸಮಂತಭದ್ರನ ಕಾಲ ಶಾಮಕುಂದಾಚಾರ್ಯ ಮತ್ತು ತೆಂಬಳೂರಾಚಾರ್ಯರ ತರುವಾಯ.[೨೧] ಹೊಸ ಆಧಾರಗಳು ಲಭಿಸುವ ವರೆಗೆ ಕಾಲ ವಿಷಯವಾಗಿ ಸಂದೇಹವುಳಿದುಬಿಡುತ್ತದೆ.

ಸಮಂತಭದ್ರನ ಕೃತಿಸಂಖ್ಯೆ ಇನ್ನೂ ಹಿಡಿತಕ್ಕೆ ಸಿಕ್ಕಿಲ್ಲ. ಕೆಲವು ಗ್ರಂಥಗಳು ಇನ್ನೂ ಉಪಲಬ್ಧವಾಗಿಲ್ಲ. ಕೆಲವು ಮಾತ್ರ ಲಭಿಸಿವೆ.

ಅಭಿಮತಮಾಗಿರೆ ತತ್ವಾ
ರ್ಥಭಾಷ್ಯಮಂ ತರ್ಕಶಾಸ್ತ್ರಮಂ ಬರೆದು ವಚೋ।
ವಿಭವದಿನಿಳೆಗೆಸೆದ ಸಮಂ
ತಭದ್ರದೇವರ ಸಮಾನರೆಂಬರುಮೊಳರೇ ॥[೨೨]

ಬಿತ್ತರಮಾಗೆ ಸೂತ್ರಗತಿಯಿಂ ಮಿಗೆ ಪಣ್ಣಿದ ಗಂಧಹಸ್ತಿ ತೊಂ
ಬತ್ತಱುಸಾಸಿರಕ್ಕೆ ಶಿವಕೋಟಿಯ ಕೋಟಿ ವಿಪಕ್ಷ ವಿದ್ವದು।
ನ್ಮತ್ತಗಜಂ ಮದಂ ಬಱತು ಕೆಯ್ಯೆಡೆಗೊಟ್ಟುದೆನಲ್ಕೆ ಪೇಳ್ವುದೇಂ
ಮತ್ತೆ ಸಮಂತಭದ್ರಮುನಿರಾಜನುದಾತ್ತ ಜಯಪ್ರಶಸ್ತಿಯಂ॥[೨೩]

ಎಂಬ ಪದ್ಯಗಳು ಸಮಂತಭದ್ರನು (ಉಮಾಸ್ವಾತಿಯ ತತ್ವಾರ್ಥಸೂತ್ರಕ್ಕೆ) ಭಾಷ್ಯ ಬರೆದಿದ್ದು, ಅದರ ಹೆಸರು ಗಂಧಹಸ್ತಿಮಹಾಭಾಷ್ಯವೆಂದೂ (ಭಾಷೆ?) ಹೆಚ್ಚಿನದಾಗಿ ತರ್ಕಶಾಸ್ತ್ರವೊಂದನ್ನು ಬರೆದಿರುವನೆಂದೂ ಈ ಪದ್ಯಗಳು ತಿಳಿಸುತ್ತಿದ್ದರೂ ಈತನು ಕನ್ನಡ ಕವಿಯೆನ್ನಲು ಆಧಾರಗಳಿಲ್ಲ. ಸಮಂತಭದ್ರನೇ ಶ್ರೀವಿಜಯನೆಂದು ಬೇಂದ್ರೆಯವರು ಹೇಳುವರಾದರೂ ಅದು ಅಂತರದಲ್ಲಿ ನಿಂತಮಾತು. ಒಟ್ಟಿನಲ್ಲಿ ಇವನು ಕನ್ನಡ ನೆಲದಲ್ಲಿ ನೆಲೆನಿಂತವನಾಗಿರಬಹುದು. ಆದರೆ ಕನ್ನಡ ಭಾಷೆಯಲ್ಲಿ ಕೃತಿ ರಚಿಸಿದ ಬಗ್ಗೆ ಎಳ್ಳಷ್ಟೂ ಆಧಾರಗಳಿಲ್ಲ.

ಕವಿಪರಮೇಷ್ಠಿ :

ಕವಿಪರಮೇಷ್ಠಿಯ ಚರಿತ್ರೆ ಸಮಂತಭದ್ರ, ಪೂಜ್ಯಪಾದರಷ್ಟೂ ಲಭಿಸಿಲ್ಲ. ಒಂದೂ ಗ್ರಂಥ ದೊರೆತಿಲ್ಲ.

ಸ ಪೂಜ್ಯಃ ಕವಿಭಿರ್ಲೋಕೇ ಕವೀನಾಂ ಪರಮೇಶ್ವರಃ।
ವಾಗರ್ಥಸಂಗ್ರಹಂ ಕೃತ್ಸ್ನಂ ಪುರಾಣಂ ಯಃ ಸಮಗ್ರಹೀತ್॥[೨೪]

---

೨೦. JSHAI. (J.P. Jain) P. 144

೨೧. ಶ್ಯಾಮಕುಂದ, ತೆಂಬಳೂರಾಚಾರ್ಯ-ವಿವೇಚನೆಗಳನ್ನು (ಪು. ೧೫೭, ೧೫೯)ನೋಡಿರಿ.

೨೨. ಚಾ. ಪುರಾಣ. ೧-೫

೨೩. ಪುಷ್ಪ ಪು. ೧-೨೨

೨೪. ಮ.ಪು. (ಜಿನಸೇನ+ಗುಣಭದ್ರ) ೧-೬೦

ಚರಿತಪುರಾಣದೊಳೊಂದನೆ
ಬರೆದರ್ ಬರೆದಿಕ್ಕಿದರ್ ತ್ರಿಷಷ್ಟಿಶಲಾಕಾ।
ಪುರುಷರ ಪುರಾಣಮಂ ಕವಿ
ಪರಮೇಶ್ವರರಂತು ಜಸಕೆ ನೋಂತರುಮೊಳರೇ॥[೭೫]

ಜಿನರ ಪುರಾಣಂಗಳೊಳಂ
ದನೆ ಬರೆದೊಡೆ ಬರೆದೆವೆಂಬರೀ ಭುವನಂ ಜೀ।
ಯೆನೆ ಬರೆದಿರಿಸಿದರಿರ್ಪ
ತ್ತುನಾಲ್ಕುಮಂ ಪೊಗಟ ಸುಕವಿ ಪರಮೇಶ್ವರರಂ॥[೭೬]

ನಿಷ್ಠಾಪರತ್ವದಿಂ ಪರ
ಮೇಷ್ಠಿಸ್ತವನಮನನೂನಮಂ ಮಾಡಿ ಗುಣ।
ಜ್ಯೇಷ್ಠನೆನಿಸಿರ್ಪ ಕವಿ ಪರ
ಮೇಷ್ಠಿ ಗುಣಸ್ತವನಮೆಮಗೆ ದಲ್ ಕರಣೀಯಂ॥[೭೭]

ನಿರುಪಮ ಸರಸ್ವತೀ ಸುಂ
ದರ ಚತುರಾನನಶೇಷ ವಿಬುಧಸ್ತುತ್ಯಂ।
ಪರಬ್ರಹ್ಮನೆನಲ್ ಕವಿ
ಪರಮೇಷ್ಠಿ ಪುರಾಣಪುರುಷನೆಂಬುದು ಪುಸಿಯೇ॥[೭೮]

ಮೇಲಣ ಹೇಳಿಕೆಗಳ ಪ್ರಕಾರ ಈತನ ಕೃತಿನಾಮ ಚತುರ್ವಿಶಂತಿ ತೀರ್ಥಂಕರರ ಸಮಗ್ರಪುರಾಣವಾದ 'ವಾಗಾರ್ಥಸಂಗ್ರಹ'. ಜೈನಪುರಾಣಸಾಹಿತ್ಯಕ್ಕೆ ಮಾತೃಸ್ಥಾನದಲ್ಲಿರುವ ಈ ಕೃತಿ ಇನ್ನೂ ದೊರೆತಿಲ್ಲ. ಚಾವುಂಡರಾಯ ಪುರಾಣದಲ್ಲಿ ಇದರ ಕೆಲವು ಸಂಸ್ಕೃತ ಉದ್ಧರಣೆಗಳು ಇರುವುದರಿಂದ ಇದರ ಭಾಷೆ ಸಂಸ್ಕೃತವೆಂದೂ, ಗುಣಭದ್ರಾಚಾರ್ಯರು ಇದನ್ನು 'ಕವಿಪರಮೇಶ್ವರ ನಿಗದಿತ ಗದ್ಯಕಥಾ'ಎಂದಿರುವುದರಿಂದ ಇದರ ಸ್ವರೂಪ 'ಗದ್ಯಕಥೆ' ಎಂದೂ ಡಾ. ಉಪಾಧ್ಯೆಯವರ ಮತ[೭೯]. ಆದರೆ ಕವಿಪರಮೇಶ್ವರನನ್ನು ಹೆಚ್ಚಾಗಿ ಸ್ತುತಿಸಿದವರು ಕನ್ನಡ ಕವಿಗಳು. ಜಿನಸೇನಾಚಾರ್ಯರ ಹೇಳಿಕೆಯಂತೆ ಇದರ ಪ್ರಕಾರ 'ಗದ್ಯಕಥಾ'. ಈ ಪ್ರಕಾರದ ಲಕ್ಷಣವಿದ್ದುದು ಕೇವಲ ಕನ್ನಡ ಕವಿರಾಜಮಾರ್ಗದಲ್ಲಿ. ಹೀಗಾಗಿ ಕವಿಪರಮೇಷ್ಠಿಯ 'ವಾಗರ್ಥಸಂಗ್ರಹ'ವು ಕನ್ನಡ ಕೃತಿಯಾಗಿರಬೇಕು. ಕನ್ನಡದ ಸೀಮಿತ ಕ್ಷೇತ್ರ ಕಾರಣವಾಗಿ ಪ್ರಚಾರಗೊಳ್ಳದೆ, ಇದು ನಷ್ಟವಾಗಿ ಹೋಗಿರಬಹುದು ಎಂದು ಶ್ರೀ ಚಿಟಗುಪ್ಪಿಯವರು ಊಹಿಸುವರು.[೮೦] ಜಿನಸೇನ-ಗುಣಭದ್ರ, ಚಾವುಂಡರಾಯ ಪುರಾಣಗಳಿಗೆ

---

೭೫. ಚಾ. ಪುರಾಣ ೧-೮
೭೬. ನೇ. ಪುರಾಣ (ನೇಮಿಚಂದ್ರ) ೧-೧೫
೭೭. ಪಾರ್ಶ್ವಪುರಾಣ. ೧-೧೭
೭೮. ಪುಷ್ಪ ಪುರಾಣ ೧-೨೬
೭೯. ಕವಿಪರಮೇಶ್ವರ ಅಥವಾ ಕವಿಪರಮೇಷ್ಠಿ (ಪ್ರ.ಕ. ೨೮-೩)
೮೦. ಕವಿಪರಮೇಷ್ಠಿ ಕನ್ನಡದಲ್ಲಿ ಬರೆದಿದ್ದನೆ? (ಸಾ.ಪ. ೫೪-೨)

ಮೂಲಮಾತೃಕೆಯಾದ ಈ ಗ್ರಂಥ ದೊರೆಯದದು ಜೈನಸಾಹಿತ್ಯಕ್ಕೆ ಒಂದು ದೊಡ್ಡ ನಷ್ಟ.[೮೧] ಈತನ ಮಿಕ್ಕ ವಿಷಯಗಳು ತಿಳಿದುಬಂದಿಲ್ಲ. ಪ್ರಾಚೀನ ಕನ್ನಡಕವಿಗಳು ಗೆಯ್ದ ಸ್ತುತಿಯೊಂದನ್ನು ಬಿಟ್ಟರೆ ಈತನು ಕನ್ನಡ ಕವಿಯೆನ್ನಲು ಬೇರೆ ಆಧಾರವಿಲ್ಲ.

ಪೂಜ್ಯಪಾದ:

ಈ ಹೆಸರಿನ ೨೧ಜನ ಆಚಾರ್ಯರು ಕಂಡುಬರುತ್ತಿದ್ದು,[೮೨] ಇವರಲ್ಲಿ ಪೂಜ್ಯಪಾದ-ದೇವನಂದಿ ತೀರ ಪ್ರಾಚೀನ ಮತ್ತು ಸುಪ್ರಸಿದ್ಧ. ನಂದಿಗಣ (ದೇಸಿಯಗಣ) ಮೂಲಸಂಘದ ಕುಂದಕುಂದಾನ್ವಯದ ಈತನ ವ್ಯಕ್ತಿಸಂಗತಿ ಪೂಜ್ಯಪಾದಚರಿತೆ (ಕನ್ನಡ-ಪದ್ಮರಾಜ), ರಾಜಾವಳೀಕಥೆ(ಕನ್ನಡ-ದೇವಚಂದ್ರ), ಶಾಸನ ಮತ್ತು ಸ್ತುತಿಪದ್ಯಗಳಲ್ಲಿ ವ್ಯಾಪಿಸಿ ನಿಂತಿದೆ.

ಪೂಜ್ಯಪಾದನು ಕರ್ನಾಟಕದ ಕೊಳ್ಳೆಗಾಲಪುರದ ಮಾಧವಭಟ್ಟ-ಶ್ರೀದೇವಿಯರ ಮಗ. ಸೋದರಮಾವ ವೈಯಾಕರಣಿ ಪಾಣಿನಿ, ಸೋದರಳಿಯ ತಾಂತ್ರಿಕ ನಾಗಾರ್ಜುನ. ಅವಸಾನ ಕಾರಣವಾಗಿ ಅಪೂರ್ಣಗೊಂಡ ಪಾಣಿನಿಯ ವ್ಯಾಕರಣವನ್ನು ಪೂರ್ಣಗೊಳಿಸಿ, ಅದಕ್ಕೆ ಪಾಣಿನೀ ಸೂತ್ರ ವೃತ್ತಿಯನ್ನು ರಚಿಸಿ, ಜೈನೇಂದ್ರ ವ್ಯಾಕರಣವೆಂಬ ಇನ್ನೊಂದು ವ್ಯಾಕರಣವನ್ನು ರಚಿಸಿದನು. ಪೂರ್ವವಿದೇಹಕ್ಕೆ ಹೋಗಿ, ಸಮವಸರಣದಲ್ಲಿದ್ದ ತೀರ್ಥಂಕರರ ದರ್ಶನಪಡೆದು, ಬಂಕಾಪುರದ ಶಾಂತೀಶ್ವರನನ್ನು ವಂದಿಸಿ, 'ಶಾಂತ್ಯಷ್ಟಕ'ವನ್ನು ರಚಿಸಿ, ಕಳೆದು ಹೋದ ದೃಷ್ಟಿಯನ್ನು ಮರಳಿಪಡೆದನು. ಈ ವಿಷಯಗಳು ಸ್ವಲ್ಪ ಹೆಚ್ಚುಕಡಿಮೆ ಪೂಜ್ಯಪಾದಚರಿತೆ ಮತ್ತು ರಾಜಾವಳೀಕಥೆಗಳಲ್ಲಿ ಕಂಡುಬರುತ್ತವೆ.[೮೩] ಇವುಗಳಲ್ಲಿ ಪಾಣಿನೀಯ ಸಂಬಂಧ ಮೊದಲಾದುವು ಕೇವಲ ದಂತಕಥೆಗಳಾಗಿರಬಹುದು.

ಶ್ರವಣಬೆಳ್ಗೊಳದ ೬೪, ೨೫೪ ಮತ್ತು ೨೫೮ನೆಯ ಶಾಸನಗಳಿಂದ "ಈತನಿಗೆ ಮೊದಲು ದೇವನಂದಿ ಎಂಬ ಹೆಸರು ಇದ್ದಿತು. ತರುವಾಯ ಬುದ್ಧಿಮಹಾತ್ಮ್ಯದಿಂದ ಜಿನೇಂದ್ರಬುದ್ಧಿ ಎಂಬ ನಾಮಧೇಯ ವುಂಟಾಯಿತು. ಬಳಿಕ ವನದೇವತೆಗಳಿಂದ ಇವನ ಪಾದಗಳು ಪೂಜಿಸಲ್ಪಟ್ಟುದರಿಂದ ಪೂಜ್ಯಪಾದ ಎಂಬ ಹೆಸರು ಬಂದಿತು. ಈತನು ವೈದ್ಯಶಾಸ್ತ್ರದಲ್ಲಿ ನಿಪುಣನಾಗಿದ್ದನು. ಈತನ ಪಾದತೀರ್ಥ ಸ್ಪರ್ಶದಿಂದ ಕಬ್ಬಿಣವು ಚಿನ್ನವಾಯಿತು. ಈತನು ಪೂರ್ವವಿದೇಹಕ್ಕೆ ಹೋಗಿ ಜಿನದರ್ಶನ ಮಾಡಿದನು-[೮೪] ಎಂದು ತಿಳಿದುಬರುತ್ತದೆ.

ಸುಕವಿ ಪ್ರಣುತರ್ ವ್ಯಾಕರ
ಣಕರ್ತೃಗಳ್ ಗಗನಗಮನಸಾಮರ್ಥ್ಯರ್ ತಾ।
ರ್ಕಿಕತಿಳಕರೆಂದು ಪೊಗೞ್ದುದು
ಸಕಲಜನಂ ಪೂಜ್ಯಪಾದ ಭಟ್ಟಾರಕರಂ॥[೮೫]

---

೮೧. ಇದು 'ಸಪಾದ ಲಕ್ಷದಿ ಪೇಟೆದ'ಕೃತಿ; ಅಂದರೆ ೧೨೫೦೦೦ ಗ್ರಂಥ ಪ್ರಮಾಣದ ಕೃತಿಯೆಂದು ಪಿರಿಯಪಟ್ಟಣದ ದೊಡ್ಡಯ್ಯನ ಅಭಿಪ್ರಾಯ. ದೇವಚಂದ್ರನ ರಾಜಾವಳೀಕಥೆಯೂ ಇದನ್ನೇ ಹೇಳುತ್ತದೆ.

೮೨. 'Jain Gurus of the name of Pujyapada' (JA. XVI i-ii & XVIII-i)

೮೩. ಪೊನ್ನನ ಗುರು ಜಿನಚಂದ್ರಮುನಿಯು 'ಪೂಜ್ಯಪಾದ ಚರಿತ' ಎಂಬ ಕೃತಿಯನ್ನು ಬರೆದಿರುವುದಾಗಿ ಕವಿಚರಿತೆಕಾರರು ಹೇಳುವರು (ಕ.ಕ.ಚ. ೪೪ ಅ.ಟಿ.)

೮೪. ಕ.ಕ.ಚ. ೬

೮೫. ಚಾ. ಪು. ೧-೬

ಭರದಿಂ ಜೈನೇಂದ್ರಮಂ ಭಾಸುರಮೆನಲೊರೆದಂ ಪಾಣಿನೀಯಕ್ಕೆ ಟೀಕಂ।
ಬರೆದಂ ತತ್ವಾರ್ಥಮಂ ಟಿಪ್ಪಣದಿನಱಿಪಿದಂ ಯಂತ್ರಮಂತ್ರಾದಿ ಶಾಸ್ತ್ರೋ।
ತ್ಕರಮಂ ಭೂರಕ್ಷಣಾರ್ಥಂ ವಿರಚಿಸಿ ಜಸಮಂ ತಾಳ್ದಿದಂ ವಿಶ್ವವಿದ್ಯಾ।
ಭರಣಂ ದೇವಾಂಗನಾರಾಧಿತ ಪದಕಮಳಂ ಪೂಜ್ಯಪಾದವ್ರತೀಂದ್ರಂ॥[೮೬]

ಸಕಳೋರ್ವೀನುತ ಪೂಜ್ಯಪಾದ ಮುನಿಪಂ ತಾಂ ಪೇಟ್ದ ಕಲ್ಯಾಣಕಾ।
ರಕದಿಂ ದೇಹದ ದೋಷಮಂ ವಿತತವಾಚಾದೋಷಮಂ ಶಬ್ದಸಾ।
ಧಕ ಜೈನೇಂದ್ರದಿನೀ ಜಗಜ್ಜನದ ಮಿಥ್ಯಾದೋಷಮಂ ತತ್ತ್ವಬೋ।
ಧಕ ತತ್ತ್ವಾರ್ಥದ ವೃತ್ತಿಯಿಂದೆ ಕಳೆದಂ ಕಾರುಣ್ಯದುಗ್ಧಾರ್ಣವಂ॥[೮೭]

ನ್ಯಾಸಂ ಜೈನೇಂದ್ರಸಂಜ್ಞಂ ಸಕಲ ಬುಧನುತಂ ಪಾಣಿನೀಯಸ್ಯ ಭೂಯಾ।
ನ್ಯಾಸಂ ಶಬ್ದಾವತಾರಂ ಮನು[ಜ] ತತಿಹಿತಂ ವೈದ್ಯಶಾಸ್ತ್ರಂ ಚ ಕೃತ್ವಾ ॥[೮೮]

ಎಂಬ ಪದ್ಯಗಳು ಇವನ ಸಾಹಿತ್ಯಕೃಷಿಯನ್ನು ಉಲ್ಲೇಖಿಸುತ್ತವೆ. ಇಲ್ಲಿ 'ಪಾಣಿನೀಯಕ್ಕೆ ಟೀಕಂ ಬರೆದಂ' ಎಂಬ ವೃತ್ತವಿಲಾಸನ ಮಾತು, ಹುಮ್ಮಚಶಾಸನದಲ್ಲಿ 'ಪಾಣಿನೀಯಸ್ಯ ಭೂಯೋ ನ್ಯಾಸಂ ಶಬ್ದಾವತಾರಂ' ಎಂದು ಇನ್ನೊಂದು ರೀತಿಯಲ್ಲಿ ವಿವರಗೊಂಡಿದೆ. ಈ 'ಶಬ್ದಾವತಾರ' ಇನ್ನೂ ಲಭಿಸಿಲ್ಲ. ಗಂಗರ ಶಾಸನಗಳು ದುರ್ವಿನೀತನನ್ನು 'ಶಬ್ದಾವತಾರಕಾರಃ' ಎಂದು ಕರೆದಿವೆ. ಈ ಉಭಯ ಶಬ್ದಾವತಾರಗಳ ಸಂಬಂಧ ನಿಗೂಢವಾಗಿ ನಿಂತಿದೆ. ಮೇಲಾಗಿ ಪೂಜ್ಯಪಾದ-ದುರ್ವಿನೀತರ ಗುರುಶಿಷ್ಯ ಸಂಬಂಧವೂ ಹೊಸ ಸಂಶೋಧನೆಗಳಿಂದಾಗಿ ದಿನದಿಂದ ದಿನಕ್ಕೆ ಶಿಥಿಲಗೊಳ್ಳತೊಡಗಿದೆ. ದೇವಚಂದ್ರನು ಪೂಜ್ಯಪಾದನ ಕಾಲ ಶಕವರ್ಷ ೩೦೦ ಎನ್ನುತ್ತಿದ್ದರೂ ಅದು ಕ್ರಿ.ಶ. ೩ ರಿಂದ ೬ನೆಯ ಶತಮಾನಗಳ ಮಧ್ಯ ಸುಳಿದಾಡಹತ್ತಿದೆ. ಹೀಗಾಗಿ ಈತನ ಚರಿತ್ರೆ ಇನ್ನೂ ಅಸ್ಪಷ್ಟ ಸ್ಥಿತಿಯಲ್ಲಿ ನಿಂತುಕೊಂಡಿದೆ.

ಇವನು ಕನ್ನಡಿಗನೆನ್ನಬಹುದಾದರೂ ಕನ್ನಡಕವಿ ಎನ್ನಲು ಆಧಾರಗಳಿಲ್ಲ. ಕವಿರಾಜಮಾರ್ಗೋಕ್ತ ಪಂಡಿತನೆಂದರೆ ಪೂಜ್ಯಪಾದನೆನ್ನುವ ಬೇಂದ್ರೆಯವರ ಊಹೆಗೆ[೮೯] ಶಕ್ತಿಸಾಲದು.

ಗುಣಭದ್ರದೇವ :

ಕಾಣನೇಗೆಯ್ದುಂ ತನ್ನ ದೋಷಮಂ।
ಕಾಣದಂತೆಂದುಂ ಕಣ್ಗಳ್ ತಮ್ಮ ಕಾಡಿಗೆಯಂ।
ಪೂಣಿಗನಾದುದಱಿಂ ಪೆಱರಿಂ।
ಜಾಣರಿನೋದಿಸಿ ಪೇೞ್ವುದು ಕಬ್ಬಮಂ॥[೯೦]

---

೮೬. ಧ. ಪರೀಕ್ಷೆ. (ಕ.ಕ.ಚ. ಪು. ೫) ೮೭. ಪಾರ್ಶ್ವ. ಪು. (೧-೧೮)

೮೮. E.C. VIII. ನಗರ ೪೬. ಹುಮ್ಮಚ. (ಈ ಸಾಲುಗಳ ಮೊದಲು "ಶಾಕಟಾಯನಕೃತಸೂತ್ರನ್ಯಾಸಕರ್ತೃೇ ವ್ರತೀಂದ್ರವೇ" ಎಂಬ, ತರುವಾಯ "ಯಸ್ತತ್ವಾರ್ಥಸ್ಯಟೀಕಾಂ ವ್ಯರಚಯದಿಹತಾಂ ಭಾತ್ಯಸಾ ಪೂಜ್ಯಪಾದಸ್ವಾಮೀ ಭೂಪಾಲವನ್ದ್ಯಃ ......" ಎಂಬ ಮಾತುಗಳಿವೆ.)

೮೯. ಪ್ರ.ಕ. ೧೯-೧ ೯೦. ಕ.ಮಾ. ೧-೪೫

ಲೋಕವನ್ನೆಲ್ಲ ನೋಡುವ ಕಣ್ಣು ತನಗೆ ಅಂಟಿದ ಕಾಡಿಗೆಯನ್ನು ಕಾಣದ ರೀತಿಯಲ್ಲಿ, ಕವಿಗೆ ತನ್ನ ಕಾವ್ಯದೋಷ ವೇದ್ಯವಾಗದು. ಅದಕ್ಕಾಗಿ ತಾನು ಬರೆದ ಕೃತಿಯನ್ನು ಅನ್ಯರಿಂದ ಓದಿಸಿ ತಿದ್ದಬೇಕು, ಋಜುಗೊಳಿಸಬೇಕು ಎಂಬ ಎಚ್ಚರಿಕೆ ಈ ಪದ್ಯದಲ್ಲಿದೆ. ಇದಕ್ಕನುಗುಣವಾಗಿ ಕನ್ನಡದ ಕೆಲವು ಕಾವ್ಯಗಳು ಆತ್ಮೀಯ ವಿಮರ್ಶಕರಿಂದ ತಿದ್ದುಪಡಿಗೊಂಡುದು ತಿಳಿದುಬರುತ್ತದೆ.

೧. "ವನರುಹಭವನೆನಿಸಿದ ದಂ। ಡನಾಯಕಂ ಕೇಶಿ ತಿರ್ದೆ ಪೇೞ್ದಿಂ"॥[೯೧]

೨. ಕವಿ ಗಮಕಿವಾದಿ ವಾಗ್ಮಿ। ಪ್ರವರಂ ಶ್ರೀ[ವಾ]ದಿರಾಜ ಮುನಿಪುಂಗವರು।
ತ್ಸವದಿಂ ತಿರ್ದಿದರೆನೆ ಭೂ। ಭುವನದೊಳಿದನೆಯ್ದೆ ಕೊಂಡುಕೊನೆಯದರೊಳರೇ"॥[೯೨]

೩. "...... ಕವಿಪತಿ ಚಂದ್ರಂ, ತಿರ್ದಿ ಬರೆದವಂ ಬ್ರಹ್ಮಂ, ಸತ್ಕೃತಿ ಮದನತಿಲಕಂ"॥[೯೩]

೪. ಸುಮನೋಬಾಣ ಕವೀಂದ್ರ। ಪ್ರಮುಖಂ ಬೆರಸಭಯಚಂದ್ರ ಸಿದ್ಧಾಂತಿಗಳು।
ತ್ತಮಮಾಗೆ ತಿರ್ದಿದೀ ಕೃತಿ। ಗಮರ್ದುದು ಸೌಭಾಗ್ಯಮೊಂದಿದಾಯುಂ ಶ್ರೀಯುಂ"॥[೯೪]

೫. "ಶ್ರುತವಾರ್ಧಿಯಾರ್ಯಸೇನ। ಪ್ರತಿಪತಿ ಕೊಂಡಾಡಿ ತಿರ್ದಿ ಕನ್ನಡದೊಳ್ಪಂ।
ಪ್ರತಿಪಾದಿಸಿದನೆನಲ್ಕೀ। ಕೃತಿ ಪೆರ್ಮೆಯನಾಂತುದೆಂಬುದೇನಚ್ಚರಿಯೇ"॥[೯೫]

೬. "ವಿಸ್ತರಿಸಿ ತಿರ್ದಿದರ್ ವಾಕ್ಪತಿ ಚಂದ್ರಭಟ್ಟರುಂ ಗುರು ಬಳಭದ್ರದೇವರುಂ"॥[೯೬]

ಹೀಗೆ ಕಾವ್ಯ, ಶಾಸ್ತ್ರ ಮತ್ತು ಶಾಸನ ಪದ್ಯಗಳನ್ನು 'ಅಧಿಕ ಪ್ರಜ್ಞರ್' ತಿದ್ದಿದುದಕ್ಕೆ ಇವು ಉದಾಹರಣೆಗಳು. ಇದೇ ರೀತಿ ತಿದ್ದಲಾದ ಒಂದು ಅನುಪಲಬ್ಧ ಕನ್ನಡಕೃತಿಯ ಉಲ್ಲೇಖವನ್ನೊಳಗೊಂಡ ಪದ್ಯವೊಂದು ಡಿ.ಕೆ.ಭೀ ಅವರಿಗೆ ದೊರೆತ ಶಬ್ದಮಣಿದರ್ಪಣದಲ್ಲಿ ಹೀಗೆ ಬರುತ್ತದೆ:

ಬಟ್ಟುದು ಬಳ್ಳವಾಡಿ ನೆಱೆನಂಬಿರ್ದುದಾರ್ಹತಮಂ ಜಿನೇಂದ್ರನಂ
ತಿರ್ದ್ದ ಮಹಾಪುರಾಣ ಕವಿಗಳ್ ಗುರುಗಳ್ ಗುಣಭದ್ರದೇವರುಂ।
ತಿರ್ದ್ದಿದರೆನ್ನ ಪೇೞ್ದ ಕೃತಿಯಂ ಕೃತಿಬಂಧವನಾವ ದೋಷಮಂ
ಪೊರ್ದ್ದದು ಪೊರ್ದ್ದದಂತಣಮೆ ಪಾಪದ ಸಂತತಿ ವಾರಣಾಸಿಯಂ॥[೯೭]

ಇಲ್ಲಿ 'ಮಹಾಪುರಾಣಕವಿಗಳ್' ಅಂದರೆ ಜಿನಸೇನಾಚಾರ್ಯರ ಶಿಷ್ಯರಾದ ಗುಣಭದ್ರಾಚಾರ್ಯರು ತನ್ನ ಕೃತಿಯನ್ನು ತಿದ್ದಿರುವರೆಂದೂ, ಇದರಿಂದಾಗಿ ಅದು ದೋಷವಿದೂರವಾಗಿದೆಯೆಂದೂ ಒಬ್ಬ ಕವಿ ಹೇಳಿರುವನು.

ಕ್ರಿ.ಶ. ೮೯೮ರಲ್ಲಿ ಮಹಾಪುರಾಣವನ್ನು ಬರೆದು ಮುಗಿಸಿದ ಗುಣಭದ್ರಾಚಾರ್ಯರು, ಇದೇ ಸುಮಾರಿಗೆ ಮೇಲಣ ಕೃತಿಯನ್ನು ತಿದ್ದಿ ಒಪ್ಪುಗೊಳಿಸಿರಬೇಕು. ಇದನ್ನು ಗಮನಿಸಿದರೆ ಸಂಸ್ಕೃತ ಪ್ರಾಕೃತಗಳಲ್ಲಿ ಪ್ರಗಲ್ಭ

---

೯೧. ಗ. ಯು. ೧-೫೧
೯೨. ಪಂಚತಂತ್ರ. ೧-೨೮
೯೩. ಮ. ತಿಲಕ. ೧-೫೮
೯೪. ಕ. ಕಾರಕ (ಕ.ಕ.ಚ. ಪು. ೩೦೨)
೯೫. ನಾಗರಾಜ (ಕ.ಕ.ಚ. ಪು. ೪೬೩)
೯೬. E.I. XVI. 86
೯೭. ಶ.ಮ.ದ. ಪಾಠಾಂತರಗಳು ಪು. ೫೩

ಪಾಂಡಿತ್ಯ ಪ್ರತಿಭೆಗಳನ್ನು ಗಳಿಸಿದ ಗುಣಭದ್ರಾಚಾರ್ಯರಲ್ಲಿ, ಕನ್ನಡ ಕಾವ್ಯವನ್ನು ತಿದ್ದುವಷ್ಟರಮಟ್ಟಿಗೆ 'ಕನ್ನಡತ್ವ' ಮನೆಮಾಡಿದ್ದಿತೆನ್ನಬಹುದು. ಆದರೆ ಅವರು ಕನ್ನಡಕೃತಿಗಳನ್ನು ಬರೆದ ಬಗೆಗೆ ಒಂದೂ ಆಧಾರವಿಲ್ಲ.

ಗುಣಭದ್ರಾಚಾರ್ಯರು ತಿದ್ದಿದ ಆ ಕೃತಿಯಾಗಲಿ, ಅದರ ಹೆಸರಾಗಲಿ, ಕರ್ತೃವಾಗಲಿ ತಿಳಿದು ಬಂದಿಲ್ಲ. ಆದರಿಂದ ಈ ಒಂದು ಪದ್ಯ ಮಾತ್ರ ಉಳಿದು ನಿಂತಿದೆ. ಇದರ ಶೈಲಿಯ ಸೊಬಗು ಈ ಕವಿಯ ತೂಕವನ್ನು ಸೂಚಿಸಬಲ್ಲದು. ಈ ಪದ್ಯ ಉತ್ಪಲಮಾಲೆಯಾಗಿರುವುದರಿಂದ ಇದನ್ನೊಳಗೊಂಡ ಅನುಪಲಬ್ಧ ಕೃತಿ ಅಕ್ಷರ ವೃತ್ತಗಳನ್ನೊಳಗೊಂಡ ಚಂಪೂ ಆಗಿರಲು ಸಾಧ್ಯವಿದೆ. ಗುಣಭದ್ರಾಚಾರ್ಯರು ತಿದ್ದಿರುವ ಕಾರಣ ಇದು ಲೌಕಿಕ ಕೃತಿಯಾಗಿರದೆ ಧಾರ್ಮಿಕ ಕೃತಿಯಾಗಿರಬೇಕು. ಬಹುಶಃ ಜೈನಪುರಾಣವಾಗಿರಬೇಕು. "ಗುರುಗಳ್ ಗುಣಭದ್ರದೇವರ್" ಎಂದಿರುವ ಇದರ ಕರ್ತೃ, ಗುಣಭದ್ರಾಚಾರ್ಯರ ಶಿಷ್ಯನಾಗಿರಬೇಕು.[೯೮]

ಕುಮುದೇಂದು:

ಕುಮುದೇಂದು ಕೃತ ಸಿರಿಭೂವಲಯ ಸಾಹಿತ್ಯಲೋಕದ ಒಂದು ಪರಮ ಆಶ್ಚರ್ಯ. ಕೆಲವು ವರುಷಗಳ ಹಿಂದೆ ಕರ್ನಾಟಕದಲ್ಲಿ ಒಂದು ದೊಡ್ಡ ಸುದ್ದಿ ಎನಿಸಿದ್ದ ಈ ಕೃತಿಯನ್ನು ಬೆಳಕಿಗೆ ತಂದವರು, ಶ್ರೀ ಎಲ್ಲಪ್ಪ ಶಾಸ್ತ್ರಿಗಳು; ಸಂಪಾದಿಸಿದವರು ಶ್ರೀ ಕರ್ಲಮಂಗಲ ಶ್ರೀಕಂಠಯ್ಯನವರು. ಇದು ಅಕ್ಷರಗಳಿಗೆ ಬದಲು ಅಂಕಗಳನ್ನು ಬಳಸಿ ಬರೆಯಲಾದ ಗಣಿತಪದ್ಧತಿಯ ಸಾಹಿತ್ಯಕೃತಿ. ಈ ಅಂಕಗಳನ್ನು ಅಕ್ಷರರೂಪಕ್ಕಿಳಿಸಿ ಹಲವು ಭಾಷೆ ಹಲವು ಕಾವ್ಯಗಳನ್ನು ಹೊರತೆಗೆದು, ಅದರ ಸಾಹಿತ್ಯವನ್ನು ಸಾಕ್ಷಾತ್ಕಾರಗೊಳಿಸಿಕೊಡುವಲ್ಲಿ ಸಂಪಾದಕರು ವಹಿಸಿದ ಪರಿಶ್ರಮ ಬೆರಗುಗೊಳಿಸುತ್ತದೆ; ಅನುಸರಿಸಿದ ವಿಧಾನ ಕುತೂಹಲಹುಟ್ಟಿಸುತ್ತದೆ. ಈ ಹಸ್ತಪ್ರತಿಯ ಒಡೆತನದ ಬಗೆಗೆ ವಿಸ್ಮಯಕಾರಿ ಜಗಳವೆದ್ದು, ಈ ಗ್ರಂಥವಾಚನದಲ್ಲಿ ಪಳಗಿದ ಸಂಪಾದಕರು ಮರಣವನ್ನಪ್ಪಿ, ಇದರ ಸಂಪಾದನೆ ಮತ್ತು ಪ್ರಕಟನೆ ಅಪೂರ್ಣಸ್ಥಿತಿಯಲ್ಲಿ ನಿಂತುಬಿಟ್ಟಿದೆ. ಈಗ ಪ್ರಕಟವಾದ ಭಾಗ ೧(೧೯೫೩), ಭಾಗ ೨ (೧೯೫೫)ಗಳ ಅಭ್ಯಾಸಕ್ಕಾಗಲಿ, ಶೇಷಭಾಗದ ಪ್ರಕಟನೆಗಾಗಲಿ ಯಾರೂ ಅಷ್ಟಾಗಿ ಉತ್ಸಾಹ ತೋರುತ್ತಿಲ್ಲ. ಜಿನಸೇನಾಚಾರ್ಯನ 'ತನುವಿನ ಜನ್ಮದ ಘನಪುಣ್ಯವರ್ಧನ ವಸ್ತು' ಎಂದು ತನ್ನನ್ನು ಕರೆದುಕೊಂಡ ಈ ಕುಮುದೇಂದು ಜಿನಸೇನಾಚಾರ್ಯನ ಶಿಷ್ಯ. ಈತನದು ಸೇನಗಣ, ಸದ್ಧರ್ಮ ಗೋತ್ರ, ಶ್ರೀವೃಷಭಸೂತ್ರ, ದ್ರವ್ಯಾನುಗಮಶಾಖೆ, ಇಕ್ಷ್ವಾಕುವಂಶ. ಈತನ ಗ್ರಾಮ ನಂದಗಿರಿ, ಇಲ್ಲವೆ ಅದರ ಸಮೀಪದ ಎಲವ ಎಂದು ಸಿರಿಭೂವಲಯದಿಂದ ತಿಳಿದುಬರುತ್ತದೆ. ಪಿರಿರಾಜಪಟ್ಟಣದ ದೇವಪ್ಪಕೃತ ಕುಮುದೇಂದು ಶತಕವನ್ನಾಧರಿಸಿ, ವಾಸುಪೂಜ್ಯನ ಮಗ ಉದಯಚಂದ್ರನ ಮಗನಾದ ಕುಮುದಚಂದ್ರನೇ ಈ ಕುಮುದೇಂದುವೆಂದು ಸಂಪಾದಕರು ಊಹಿಸಿರುವರು. ಆದರೆ ಮಾಘಣಂದಿ[೯೯] ಹೇಳುವ ವಾಸುಪೂಜ್ಯ-ಉದಯಚಂದ್ರ-ಕುಮುದಚಂದ್ರ-ಮಾಘಣಂದಿ(೧೨೫೩) ಎಂಬ ಗುರುಪರಂಪರೆಯ ಪ್ರಕಾರ ಕುಮುದಚಂದ್ರನು ೧೨ನೆಯ ಶತಮಾನದ ಮೊದಲ

---

೯೮. ಕಿಡಿಗಳ್ಜಾತಿ ಜರಾದಿಗಳ್ಗೆ ದುರ(ದುರಿತ?) ವ್ರಾತಾಸಿಗಳ್ಗಕ್ಕದು
ಕ್ಕುಡಿಗಳ್ ಪುಣ್ಯದ ಬೀಡು ಬಿಟ್ಟ ಗುಡಿಗಳ್ ಧರ್ಮಾರ್ಥಿಗಳ್ಗಪ್ಪ ಕ।
ಯ್ಪಿಡಿಗಳ್ ಜೈನಗೃಹಕ್ಕೆ ನಿಲ್ತ ಪಡಿಗಳ್ ಸಂಸಾರವಾರಾಶಿಯಾ
ತಡಿಗಳ್ ಶ್ರೀ ಗುಣಭದ್ರದೇವರಡಿಗಳ್ ನಿಲ್ಕೆಮ್ಮ ಹೃತ್ಪದ್ಮದೊಳ್॥

ಹೈದರಾಬಾದ ದರ್ಪಣ (ಹಸ್ತಪ್ರತಿ ಓಲೆ ೮೨)ದಲ್ಲಿ ಕಂಡುಬರುವ ಈ ಸ್ತುತಿಪದ್ಯ ಮೇಲಣ ಅನುಪಲಬ್ಧ ಕೃತಿಗೆ ಸಂಬಂಧಿಸಿರಬಹುದೇನೋ.

೯೯. ಕ.ಕ.ಚ. ೪೩೩

ಪಾದದವನಾಗುವುದರಿಂದ ದೇವಪ್ಪ ಹೇಳುವ ಕುಮುದಚಂದ್ರನಿಗೂ ಸಿರಿಭೂವಲಯದ ಕರ್ತೃ ಕುಮುದೇಂದುವಿಗೂ ಸಂಬಂಧವಿಲ್ಲವೆನಿಸುತ್ತದೆ.

ಭಾರತದೇಶದಮೋಘವರ್ಷನ ರಾಜ್ಯ। ಸಾರಸ್ವತಮೆಂಬಂಗ।
ತಾನಲ್ಲಿ ಮಾನ್ಯಖೇಟದ ದೊರೆ ಜಿನಭಕ್ತ। ತಾನು ಅಮೋಘವರ್ಷಾಂಕ।
ಋಷಿಗಳೆಲ್ಲರು ಎರಗುವ ತೆರದಿಂದಲಿ। ಋಷಿರೂಪಧರ ಕುಮುದೇಂದು।
ಹಸನಾದ ಮನದಿಂದಮೋಘವರ್ಷಾಂಕಗೆ । ಹೆಸರಿಟ್ಟು ಪೇಳ್ದ ಶ್ರೀಗೀತೆ॥

ಎಂಬ ಪದ್ಯಗಳಿಂದ ಇದು ಮಾನ್ಯಖೇಟದ ದೊರೆ ಅಮೋಘವರ್ಷನಿಗಾಗಿ ಬರೆದ ಕಾವ್ಯವೆಂದು ತಿಳಿದುಬರುತ್ತದೆ. ಸಿರಿಭೂವಲಯದಲ್ಲಿ ಹೇಳಲಾದ ಧಾರ್ಮಿಕ ರಾಜಕೀಯ ವ್ಯಕ್ತಿಗಳನ್ನಾಧರಿಸಿ ಈ ಕೃತಿಯ ಕಾಲ ಕ್ರಿ.ಶ. ಸು. ೮೦೦ ಎಂದು ಸಂಪಾದಕರು ಭಾವಿಸುತ್ತಾರೆ. ಆದರೆ,

ಗಿಳಿಯ ಕೋಗಿಲ ದನಿಯಂಕ ಕಾವ್ಯ।ಎಳೆವೆಣ್ಣ ದನಿಯಂಕ ಕಾವ್ಯ।
ಇಳೆಗಾದಿಮನಸಿಜ ಕಾವ್ಯ। ಸುಲಿವಲ್ಲ ಸುಲಿಯದ ಕಾವ್ಯ।
ಓದಿಸಿದೆನು ಕರ್ಮಾಟದ ಜನರಿಗೆ। ಶ್ರೀ ದಿವ್ಯವಾಣಿಯ ಕ್ರಮದೆ।
ಶ್ರೀ ದಯಾಧರ್ಮಸಮನ್ವಯದ ಗಣಿತದ। ಮೋದದ ಕಥೆಯನಾಲಿಪುದು॥

ಎಂಬಲ್ಲಿಯ ಸಾಂಗತ್ಯಬಂಧದ ಅರ್ವಾಚೀನತೆ ಮತ್ತು ಭಾಷೆಯ ನವೀನತೆಗಳಿಂದಾಗಿ ಇದರ ಕಾಲವನ್ನು ಮುಂದೆ ಎಳೆಯಲು ಮನಸ್ಸಾಗುತ್ತದೆ. ಆದರೆ "ಕೇವಲ ಭಾಷಾದೃಷ್ಟಿಯಿಂದ ಈ ಗ್ರಂಥವು ಆಧುನಿಕವೆಂದು ತೀರ್ಮಾನಿಸಿದರೆ ಉದ್ಭವಿಸುವ ಅನೇಕ ಸಮಸ್ಯೆಗಳಿಗೆ ಸದುತ್ತರ ಕೊಡುವುದು ದುಸ್ತರ"[೧೦೦]ವಾಗುತ್ತದೆ, ಎಂದು ಶ್ರೀಕಂಠಶಾಸ್ತ್ರಿಗಳು ಎಚ್ಚರ ನೀಡಿ, ಅಮೋಘವರ್ಷನ ವಿಷಯವನ್ನು ಬದಿಗಿಟ್ಟರೂ ಇದರ ಕಾಲ ಕ್ರಿ.ಶ. ೯೩೦ರ ಇಂದ್ರನಂದಿ, ೧೧೨೦ರ ಹಸ್ತಪ್ರತಿಯ ಲೇಖನಮಿತಿಗಳ ಮಧ್ಯನಿಲ್ಲುವುದೆಂದು ಹೇಳುತ್ತಾರೆ.[೧೦೧] ಹೀಗಾಗಿ ಇದರ ಕಾಲ ಒಮ್ಮೆ ಪಂಪನಿಗೆ ಮೊದಲು. ಇನ್ನೊಮ್ಮೆ ತರುವಾಯ ಜೋಲಿ ಹೊಡೆಯುತ್ತಲಿದೆ.

ಈ ಕೃತಿಯ ಪ್ರಕಾರ, ಗಣಿತಪದ್ಧತಿಯ ಕಾವ್ಯಸಂಪ್ರದಾಯದ ಮೂಲಪ್ರವರ್ತಕ ಗೊಮ್ಮಟೇಶ. ತರುವಾಯದವರು ಗೌತಮ ಗಣಧರ, ಪ್ರಭಾವಸೇನ, ಭೂತಬಲಿ, ವಿಶ್ವಸೇನ ಮತ್ತು ವೀರಸೇನರು. ಇವರಲ್ಲಿ ಭೂತಬಲಿ ಮೊದಲಾದವರ ಗ್ರಂಥಗಳ ಭಾಷೆ, ಕನ್ನಡವೆಂದು ಕುಮುದೇಂದುವಿನ ಹೇಳಿಕೆ.

ಸಿರಿಭೂವಲಯದ ಕನ್ನಡ ಭಾಗದಲ್ಲಿ ಶಿವಕೋಟಿ, ಶಿವಾಚಾರ್ಯ, ಶಿವಾಯನ, ಸಮಂತಭದ್ರ, ಪೂಜ್ಯಪಾದರ; ಸಂಸ್ಕೃತ ಪ್ರಾಕೃತ ಭಾಗದಲ್ಲಿ ಇಂದ್ರಭೂತಿ, ನಾಗಹಸ್ತಿ, ಆರ್ಯಮಂಕ್ಷು, ಕುಂದಕುಂದಾದಿಗಳ ಸೂಚನೆಯಿದೆ. ಸಾಲದುದಕ್ಕೆ ಸಮಂತಭದ್ರನ ಬೃಹತ್ಸ್ವಯಂಭೂ ಸೂತ್ರ, ಪಾತ್ರಕೇಸರಿ ಸ್ತೋತ್ರ, ಗುಣಭದ್ರನ ಉತ್ತರಪುರಾಣ, ಉಗ್ರಾದಿತ್ಯನ ಕಲ್ಯಾಣಕಾರಕ, ಜಿನಸೇನನ ಜಯಧವಲಾ, ಆದಿಪುರಾಣ, ನೀತಿಸಾರಗಳಲ್ಲದೆ ತಿಲೋಯಪಣ್ಣತ್ತಿ, ಕವಿಜಿಹ್ವಾಬಂಧನ, ವಡ್ಡಾರಾಧನೆ(?)ಗಳ ಉಲ್ಲೇಖವಿದೆ. ಭಟ್ಟಾಕಳಂಕನ ಶಬ್ದಾನುಶಾಸನೋಕ್ತ 'ಗಂಭೀರಂ ಮಧುರಂ' ಎಂಬ ಶ್ಲೋಕ, ಗಂಗದೊರೆ ಸೈಗೊಟ್ಟ ಶಿವಮಾರ ಮತ್ತು ಆತನ

---

೧೦೦. ಅಭಿವಂದನೆ. ೫೬೨

೧೦೧. ಅಭಿವಂದನೆ ೫೪೯

ಪತ್ನಿಯರಾದ ಜಕ್ಕಿ-ಲಕ್ಕಿಯರ ಹೆಸರು ಕಂಡುಬರುತ್ತವೆ. ಈ ಎಲ್ಲ ವಿಷಯಗಳಿಂದಾಗಿ ಸಾಹಿತ್ಯ ಚರಿತ್ರೆಯ ಅಭ್ಯಾಸಿಯ ಕುತೂಹಲ ಕುಡಿಯೊಡೆಯುತ್ತದೆ.

ಕುಮುದೇಂದು ಹೇಳುವಂತೆ ಇದು ಸರ್ವಭಾಷಾಮಯೀ ಗ್ರಂಥ. ಅಂಕಗಳನ್ನು ಬಿಡಿಸಿ ಕೂಡಿಸಿ ಓದಿದರೆ ಜಗತ್ತಿನ ೭೧೮ ಭಾಷೆಗಳ ಸಾಹಿತ್ಯ ಇದರಿಂದ ಪ್ರಕಟಗೊಳ್ಳುವುದೆಂದು ಈತನ ಮತ. ಮೊದಲನೆಯ ಅಧ್ಯಾಯದ ಶ್ರೇಣಿಬಂಧದಲ್ಲಿರುವ ಕನ್ನಡ ಕಾವ್ಯದ ಮೊದಲ ಅಕ್ಷರಗಳನ್ನು ಮೇಲಿನಿಂದ ಕೆಳಗೆ ಓದಿದರೆ ಪ್ರಾಕೃತ ಕಾವ್ಯ, ೨೬ನೆಯ ಅಕ್ಷರಗಳನ್ನು ಮೇಲಿನಿಂದ ಕೆಳಗೆ ಓದಿದರೆ ಸಂಸ್ಕೃತ ಕಾವ್ಯ ಹೊರಬರುತ್ತದೆ. ಹೀಗೆ ಬೇರೆ ಬೇರೆ ತಂತ್ರಗಳನ್ನು ಅನುಸರಿಸಿದರೆ ಅನೇಕಭಾಷೆಯ, ಅನೇಕವಿಷಯದ, ಅನೇಕ ಕಾವ್ಯಗಳು ಅರಳಿನಿಲ್ಲಬಹುದು. ಆದರೆ ಅಂಕ ಜೋಡಣೆಯ ರಹಸ್ಯ ಈ ಕಾಲದ ಪಂಡಿತರಿಗೆ ನಿಲುಕದೆ ನಿಂತು, ಇದು ಬಿಡಿಸದ ಕಗ್ಗಂಟು ಎನಿಸಿದೆ. ಕೆಲವರಂತೂ ಇದರ ರಚನೆಯ ಪ್ರಾಮಾಣಿಕತೆಯನ್ನೇ ಪ್ರಶ್ನಿಸಿದ್ದಾರೆ. ಹೀಗಾಗಿ ಸಿರಿಭೂವಲಯದ ವಿಷಯವಾಗಿ ತೀರ ಸಂದೇಹ ತಲೆಯೆತ್ತಿದೆ.

ಇಂದ್ರನಂದಿ:

ಇಂದ್ರನಂದಿಯೆಂಬ ಹೆಸರಿನೊಂದಿಗೆ ಸಮಯಭೂಷಣ, ಶ್ರುತಾವತಾರ, ಜ್ವಾಲಾಮಾಲಿನೀ ಕಲ್ಪಗಳೆಂಬ ಸಂಸ್ಕೃತಕೃತಿಗಳು ಕೇಳಿಬರುತ್ತವೆ. ಧಾರವಾಡದ ಕನ್ನಡ ಸಂಶೋಧನ ಸಂಸ್ಥೆಯಲ್ಲಿಯ 'ಜ್ವಾಲಾಮಾಲಿನೀಕಲ್ಪ'ವನ್ನು ಕುರಿತು ಶ್ರೀ ಪಂಚಮುಖಿಯವರು "The work is a rare speciman of an early Sanskrit work Commented upon in Kannada. The name of the Commentator is not disclosed, but it is not impossible that Indranandi himself added a Kannada Commentary to his Sanskrit work.." ಎಂದು ಹೇಳುತ್ತಾರೆ.[೧೦೨] ಈ ಹಸ್ತಪ್ರತಿಯ ಅಂತ್ಯದ,

"ಅಷ್ಟಶತೈಕ ಷಷ್ಟಿಪ್ರಮಾಣ ಶಕವತ್ಸರೇಷ್ವತೀತೇಷು।
ಶ್ರೀಮಾನ್ಯಖೇಟ ಕಟಕೇ ಪರ್ವ್ವಣ್ಯಕ್ಷಯತೃತೀಯಾಯಾಂ॥

ಟೀ॥ ಅಷ್ಟಶತೈಕಷಷ್ಟಿ- ಯೆಂಟುನೂಱ ಅಱುವತ್ತೊಂದು ಪ್ರಮಾಣಿನ, ಶಕವತ್ಸರೇಷು-ಶಕವತ್ಸರಂಗಳು, ಅತೀತೇಷು-ಕಳಿದವಱೊಳು, ಶ್ರೀಮಾನ್ಯಖೇಟ ಕಟಕೇ-ಶ್ರೀಯಿಂದೊಪ್ಪುವ ಮಳನೆಯಖೇಟವೆಂಬ ಕಟಕದೊಳು, ಅಕ್ಷಯ ತೃತೀಯಾಯಾಂ-ಅಕ್ಷಯ ತದಿಗೆಯೊಳು......." ಎಂಬ ಉದ್ಧರಣೆಯ ಪ್ರಕಾರ ಈ ಕೃತಿಯ ಕಾಲ ಕ್ರಿ.ಶ. ೯೩೯. ಶ್ರೀಪಂಚಮುಖಿಯವರು ಹೇಳುವಂತೆ ಮೂಲಗ್ರಂಥಕಾರನೇ ಕನ್ನಡ ಟೀಕೆ ಬರೆದಿದ್ದರೆ ಇದು ಪಂಪಪೂರ್ವಯುಗದ ಒಂದು ಟೀಕಾಗ್ರಂಥ. ಆದರೆ ಈ ಟೀಕೆಯಲ್ಲಿಯ 'ಪ್ರಮಾಣಿನ, ವತ್ಸರಂಗಳು, ಕಟಕದೊಳು, ಅಕ್ಷಯ ತದಿಗೆಯೊಳು' ಎಂಬ ಪ್ರಯೋಗಗಳು ಹತ್ತನೆಯ ಶತಮಾನವನ್ನು ಪ್ರತಿನಿಧಿಸವು. ಅದಕ್ಕಾಗಿ ಮೂಲಕೃತಿ ಪಂಪನಿಗೆ ಪ್ರಾಚೀನವಾಗಿದ್ದು, ಟೀಕೆ ಮಾತ್ರ ಪಂಪೋತ್ತರ ಎನ್ನಬೇಕಾಗುತ್ತದೆ.

ಕ್ರಿ.ಶ. ೯೩೯ರ ಸುಮಾರಿಗೆ ಮಳಖೇಡವನ್ನಾಳುತ್ತಿದ್ದ ರಾಷ್ಟ್ರಕೂಟ ಕೃಷ್ಣIIIನ ಆಸ್ಥಾನಕವಿ, ಪೊನ್ನನ ಗುರು ಇಂದ್ರನಂದಿ ಈತನೇ ಆಗಿರುವ ಸಂಭವವಿದೆ.

---

೧೦೨. Progress of Kannada Research in Bombay Province from 1941-1946 P. 25.

ಮನಸಿಜ ಮತ್ತು ಚಂದ್ರಭಟ್ಟ:

ಕ್ರಿ.ಶ. ೧೦೩೧ರ ದುರ್ಗಸಿಂಹನು ಅನೇಕ ಪ್ರಾಚೀನ ಕವಿಗಳನ್ನು ಸ್ಮರಿಸುತ್ತ,

> ಪೊಸತೆನಿಸಿ ದೇಸಿಯಿಂ ನವ
> ರಸಮೆಸೆಯಲ್ಕೊಳ್ಪುವೆತ್ತ ಮಾರ್ಗದಿನಿಳೆಗೇ-।
> ನೆಸೆದುವೊ ಸುಕವಿಗಳೆನೆ ನೆಗ
> ಟ್ದಸಗನ ಮನಸಿಜನ ಚಂದ್ರ[ಭಟ್ಟನ ನುಡಿಗಳ್]॥[೧೦೩]

ಎಂದು ಅಸಗ ಮನಸಿಜ ಮತ್ತು ಚಂದ್ರಭಟ್ಟರ ದೇಸಿ-ಮಾರ್ಗ ಕವಿತ್ವವನ್ನು ಕೀರ್ತಿಸಿರುವನು. ಈ ಹಿಂದೆ ವಿವೇಚಿಸಿದಂತೆ ಅಸಗನು ಪಂಪಪೂರ್ವದ ಕವಿ. ಆಧಾರಗಳ ಕೊರತೆಯಿಂದಾಗಿ ಮಿಕ್ಕ ಇಬ್ಬರನ್ನು ಕವಿಚರಿತೆಕಾರರು ಕ್ರಿ.ಶ. ೧೦೦೦ದ ಹೊಸ್ತಿಲ ಮೇಲೆ ನಿಲ್ಲಿಸಿರುವರು.[೧೦೪] ದುರ್ಗಸಿಂಹ (೧೦೩೧) ಶ್ರೀಧರಾಚಾರ್ಯ(೧೦೪೯) ರುದ್ರಭಟ್ಟ(೧೧೮೫) ಕೇಶಿರಾಜ (೧೨೬೦) ಹೇಳುವ ಈ ಮನಸಿಜನನ್ನು ಕವಿಕಾಮನು "ಮನಸ್ಸಂಜಾತ"ನೆಂದು[೧೦೫], ಈಶ್ವರಕವಿ "ಚಿತ್ತಜ"[೧೦೬]ನೆಂದು ಪರ್ಯಾಯನಾಮದಿಂದ ಕರೆದಂತಿದೆ. ಇದೇ ಅರ್ಥದ "ಕಂದರ್ಪ" ಎಂಬ ಹೆಸರಿನ ಇನ್ನಿಬ್ಬರು ಕವಿಗಳು ದುರ್ಗಸಿಂಹನ ಹಿಂದೆ ಹೀಗೆ ಕಂಡುಬರುವರು.

೧. ಮಾನ್ಯಖೇಟ ನಿವಾಸಿಯಾದ ಇಂದ್ರನಂದಿಯು, ಗುರು ಕಂದರ್ಪನು ಶಿಷ್ಯ ಗುಣನಂದಿಗೆ ಬೋಧಿಸಿದ ಜ್ವಾಲಾಮಾಲಿನೀಕಲ್ಪವನ್ನು ಅವರ ಸನ್ನಿಧಿಯಲ್ಲಿ ಕೇಳಿ ಕೃತಿಗೆಯ್ದನೆಂದು ಹೇಳುವನು.[೧೦೭] ಈ ಸಂಸ್ಕೃತ ಕೃತಿಯ ಕಾಲ ಕ್ರಿ.ಶ. ೯೩೯ ಇರುವುದರಿಂದ ಇಲ್ಲಿಯ ಕಂದರ್ಪನು ೯ನೆಯ ಶತಮಾನದ ಉತ್ತರಾರ್ಧದಲ್ಲಿ ಬದುಕಿರುವುದು ಸಹಜ.

೨. ಧಾರವಾಡ ಜಿಲ್ಲೆಯ ಹಾವೇರಿ ತಾಲೂಕಿನ ಕಳ್ಳಿಹಾಳಗ್ರಾಮದ ದುರ್ಗಾಪರಮೇಶ್ವರಿ ದೇವಸ್ಥಾನದ ಬಳಿಯಲ್ಲಿ ಒಂದು ಕನ್ನಡ ಶಾಸನವಿದೆ.[೧೦೮] 'ಶ್ರೀ ಕಂದರ್ಪಕಾವ್ಯಂ' ಎಂದು ಕೊನೆಗೊಳ್ಳುವ ಈ ಶಾಸನದ ಕಾಲ ಕ್ರಿ.ಶ. ೧೦೧೯. ಇಲ್ಲಿಯ ಪದ್ಯಗಳು ಕಂದರ್ಪನ ಸತ್ವಪೂರ್ಣ ಕವಿತ್ವಕ್ಕೆ ಸಾಕ್ಷಿ ನುಡಿಯುತ್ತವೆ.

ದುರ್ಗಸಿಂಹ ಹೇಳುವ ಮನಸಿಜನು ಈ ಉಭಯ ಕಂದರ್ಪರಲ್ಲಿ ಒಬ್ಬನಾಗಿರುವ ಸಂಭವವಿದೆ. ಒಂದುವೇಳೆ ಜ್ವಾಲಾಮಾಲಿನೀಕಲ್ಪದ ವ್ಯಕ್ತಿಯಾಗಿದ್ದರೆ ಈತನ ಕಾಲ ೯ನೆಯ ಶತಮಾನದ ಉತ್ತರಾರ್ಧ; ಕಳ್ಳಿಹಾಳ ಶಾಸನದ ವ್ಯಕ್ತಿಯಾಗಿದ್ದರೆ ಕ್ರಿ.ಶ. ೧೦೧೯, ಭವಿಷ್ಯತ್ತಿನಲ್ಲಿ ದೊರೆಯಬಹುದಾದ ಒರೆಗಲ್ಲು ಈ ಒಗಟನ್ನು ಬಿಡಿಸಬಹುದಾಗಿದೆ.[೧೦೯]

ದುರ್ಗಸಿಂಹನು ಹೇಳುವ ಇನ್ನೊಬ್ಬ ಕವಿ ಚಂದ್ರಭಟ್ಟ. ಈತನ ವಿಷಯ ಹಿಂದೆಬಂದಿದೆ.[೧೧೦]

---

೧೦೩. ಪಂ. ತಂತ್ರ. ೧-೨೩

೧೦೪. ಕ.ಕ.ಚ. ೭೪-೭೫

೧೦೫. ಶೃಂ. ರತ್ನಾಕರ, ೧-೧೫. ಈತನು ಶೃಂಗಾರವನ್ನೂ ಕುರಿತು ಗ್ರಂಥ ಬರೆದಿರುವನಂತೆ.

೧೦೬. ಕ.ಜಿ. ಬಂಧನ. ಪು. ೨. ಅ.ಟಿ.

೧೦೭. ಪು. ೨೨೧ ನೋಡಿರಿ

೧೦೮. ಕ.ಕ.ಚ. ಅನು.ಪು. ೨

೧೦೯. "ಸ್ವಸ್ತಿ ವುಭಯಭಾಷಾಚಕ್ರವರ್ತಿ ಕಂದರ್ಪದೇವರ ಮದವಳಿಗೆ ಸೊಂನ್ನಾದೇವಿಯರ ಮಗ ಕಾಣೂರ್ಗ್ಗಣ ತಿಳಕನುಮಪ್ಪ ಬಾಳಚಂದ್ರದೇವರುಂ....." (MAR. 1947-56, P. 91) ಮಿತಿಯ ಉಲ್ಲೇಖವಿಲ್ಲದ ಈ ಶಾಸನದ ಕಾಲ ಕ್ರಿ.ಶ. ೧೨೦೪ ಎಂದು ಸಂಪಾದಕರು ಊಹಿಸಿರುವರು. ಇದು ನಿಜವಿದ್ದರೆ ಮನಸಿಜನಿಗೂ ಇಲ್ಲಿಯ ಕಂದರ್ಪನಿಗೂ ಸಂಬಂಧವಿಲ್ಲ.

೧೧೦. ಪು. ೮೫ ನೋಡಿರಿ.

ಇತರ ಕವಿಸಾಹಿತ್ಯ ಪ್ರಕಾರಗಳು

ಕವಿರಾಜಮಾರ್ಗ ಪರಿಸರದ ಗದ್ಯಕಥಾ, ಚತ್ತಾಣ-ಬೆದಂಡೆಗಬ್ಬ, ಪಗರಣ, ಅಷ್ಟಕ, ಟೀಕೆ-ವ್ಯಾಖ್ಯಾನಗಳೆಂಬ ಸಾಹಿತ್ಯ ಪ್ರಕಾರಗಳನ್ನು ಗಮನಿಸಿದ ನಾವು ಇಡುಕುಂಗಬ್ಬ ಮೊದಲಾದ ಸಾಹಿತ್ಯ ರೂಪಗಳನ್ನು ಇಲ್ಲಿ ಪರಿಶೀಲಿಸಬಹುದು.

ಇಡುಕುಂಗಬ್ಬಂ:

ಈ ಕಾವ್ಯಜಾತಿಯ ಹೆಸರು ಕಾವ್ಯಾವಲೋಕನದ 'ಕಾವ್ಯಪ್ರಕಾರ ನಿರೂಪಣೆ'ಯ ಪ್ರಸಂಗದಲ್ಲಿ ಮಾತ್ರ ಕಂಡುಬರುತ್ತದೆ. ವಾಮನ, ಉದ್ಭಟ ಮೊದಲಾದವರ ಪ್ರಭಾವಕ್ಕೆ ಒಳಗಾದ ನಾಗವರ್ಮನಿಗೆ ಈ ಪ್ರಸಂಗದಲ್ಲಿ ದಂಡಿಯೇ ಆದರ್ಶವೆಂದು ಕೆಳಗಣ ಹೋಲಿಕೆಯಿಂದ ಸ್ಪಷ್ಟವಾಗುತ್ತದೆ.

೧. ಗದ್ಯಂ ಪದ್ಯಂ ಚ ಮಿಶ್ರಂ ಚ ತತ್ ತ್ರಿಧೈವ ವ್ಯವಸ್ಥಿತಮ್[೧೧೧](ದಂಡಿ)

ಗದ್ಯಮಯಂ ಪದ್ಯಮಯಂ ತದ್ಯಮಳಮಿಶ್ರಮೆಂದು ಕೃತಿ ಮೂಱು ತೆರಂ[೧೧೨](ನಾಗವರ್ಮ)

೨. ಆಖ್ಯಾಯಿಕಾ ಕಥಾ ಇತಿ ತಸ್ಯ (=ಗದ್ಯಸ್ಯ) ಪ್ರಭೇದೌ ದ್ವೌ[೧೧೩] (ದಂಡಿ)

ಗದ್ಯದೊಳೆ ಸಮೆದುವಂತವು ಹೃದ್ಯವಚಃಪ್ರೌಢಿಗಳ್ ಕಥಾಖ್ಯಾಯಿಕೆಗಳ್[೧೧೪](ನಾಗವರ್ಮ)

೩. ಸರ್ಗಬಂಧೋ ಮಹಾಕಾವ್ಯಮುಚ್ಯತೇ[೧೧೫](ದಂಡಿ)

ದೊರೆವೆತ್ತ ಪದ್ಯದಿಂದಂ ವಿರಚಿಸಿದುದು ಸರ್ಗಬಂಧಮಕ್ಕುಂ ಕಾವ್ಯಂ[೧೧೬](ನಾಗವರ್ಮ)

೪. ಗದ್ಯ ಪದ್ಯಮಯೀ ಕಾಚಿಚ್ಚಂಪೂರಿತ್ಯಭಿಧೀಯತೇ[೧೧೭](ದಂಡಿ)

ಬೆರಸಿ ಬರೆ ಗದ್ಯ ಪದ್ಯಮವೆರಡುಂ ಕೃತಿ ಚಂಪುವೆಂಬ ಪೆಸರಂ ಪಡೆಗುಂ[೧೧೮](ನಾಗವರ್ಮ)

ಹೀಗೆ ನಾಗವರ್ಮನು ಅಕ್ಷರಶಃ ಅನುವಾದಿಸಿರುವನು. ಈ ಹಿನ್ನೆಲೆಯಲ್ಲಿ,

ಮುಕ್ತಕಂ ಕುಲಕಂ ಕೋಶಃ ಸಂಘಾತ ಇತಿ ತಾದೃಶಃ
ಸರ್ಗಬಂಧಾಂಶರೂಪತ್ವಾದನುಕ್ತಃ ಪದ್ಯವಿಸ್ತರಃ॥[೧೧೯]

ಇಡುಕುಂಗಬ್ಬಂ ಮುಕ್ತಕ
ಮೊಡಂಬಡಲ್ ನೆಗೞ್ದೆ ಕೆಲವು ಪಲವುಮೇಕಕ್ರಿಯೆಯೊಳ್॥
ಪಡೆಗುಂ ಕುಳಕಾಖ್ಯೆಯನೆಡೆ
ಮಡಗದನೇಕಾರ್ಥ ವಸ್ತುಕಥನಂ ಕೋಶಂ॥[೧೨೦]

---

೧೧೧. ಕಾ. ದ. ೧-೧೧
೧೧೨. ಕಾ.ಲೋ.ಪ. ೯೪೯
೧೧೩. ಕಾವ್ಯಾದರ್ಶ ೧-೧೪
೧೧೪. ಕಾ.ಲೋ.ಪ. ೯೪೯
೧೧೫. ಕಾವ್ಯಾದರ್ಶ ೧-೧೪
೧೧೬. ಕಾ.ಲೋ.ಪ. ೯೫೦
೧೧೭. ಕಾವ್ಯಾದರ್ಶ ೧-೩೧
೧೧೮. ಕಾ.ಲೋ.ಪ. ೯೫೦
೧೧೯. ಕಾವ್ಯಾದರ್ಶ ೧-೧೩
೧೨೦. ಕಾ.ಲೋ.ಪ. ೯೫೧

ಎಂಬ ಕಾವ್ಯಾದರ್ಶದ ಮೂಲ ಮತ್ತು ನಾಗವರ್ಮನ ಅನುವಾದಗಳನ್ನು ಸೂಕ್ಷ್ಮವಾಗಿ ನೋಡಬೇಕು. ಇಲ್ಲಿ ನಾಗವರ್ಮನು ಮೇಲಿನಂತೆ ಅಕ್ಷರಶಃ ಅನುವಾದಿಸಿರುವನೆಂದು ಭಾವಿಸಿದರೆ, ದಂಡಿಯ ಮುಕ್ತಕ, ಕುಲಕ, ಕೋಶ ಎಂಬ ಪಾರಿಭಾಷಿಕಗಳನ್ನು ಇದ್ದಂತೆಯೇ ಇಟ್ಟುಕೊಂಡು 'ಸಂಘಾತ'ಕ್ಕೆ ಬದಲು 'ಇಡುಕುಂಗಬ್ಬಂ' ಎಂಬ ಪದವನ್ನು ಬಳಸಿರುವನೆನ್ನಬೇಕಾಗುತ್ತದೆ. ಇದರಿಂದ 'ಸಂಘಾತ'ವೆಂದರೆ 'ಇಡುಕುಂಗಬ್ಬ'ವೆಂದು ಸ್ಪಷ್ಟವಾಗುತ್ತದೆ.

ಅನ್ವಯಕ್ಲಿಷ್ಟತೆ ಮತ್ತು ವಿಷಯ ಕೊರತೆಯಿಂದ ಕೂಡಿದ ನಾಗವರ್ಮನ ಹೇಳಿಕೆ ಇಡುಕುಂಗಬ್ಬದ ಸ್ವರೂಪವನ್ನು ಸ್ಪಷ್ಟಪಡಿಸುವುದಿಲ್ಲ. ಹೀಗಾಗಿ 'ಸಂಘಾತ'ವನ್ನು ಅರ್ಥಮಾಡಿಕೊಳ್ಳುವುದರ ಮೂಲಕ ಇಡುಕುಂಗಬ್ಬದ ಸ್ವರೂಪವನ್ನು ಅರಿತುಕೊಳ್ಳಬೇಕಾಗುತ್ತದೆ.

ಮುಕ್ತಕ, ಕುಲಕ, ಕೋಶ, ಸಂಘಾತ ಇವು ಮಹಾಕಾವ್ಯದ ಅಂಶರೂಪಗಳು ಎಂದು ಮಾತ್ರ ಹೇಳಿ ಸಾಗುವ ದಂಡಿಯ ಅಭಿಪ್ರಾಯ ಅಷ್ಟು ವಿವರವಾಗಿಲ್ಲ. ಕಾವ್ಯಾದರ್ಶಕ್ಕೆ ಬರೆದ ಹೃದಯಂಗಮಾ ಟೀಕೆ, ತರುಣ ವಾಚಸ್ಪತಿ, ರತ್ನಶ್ರೀಜ್ಞಾನ, ವಾದಿಜಂಘಾಲರ ಟೀಕೆಗಳು; ಭೋಜನ ಶೃಂಗಾರಪ್ರಕಾಶ, ಶಾರದಾತನಯನ ಭಾವಪ್ರಕಾಶನ, ಹೇಮಚಂದ್ರನ ಕಾವ್ಯಾನುಶಾಸನ, ದಿವಾಕರ ಕೃತ ಮೇಘದೂತದ ಟೀಕೆ ಮೊದಲಾದುವುಗಳಲ್ಲಿ ಬರುವ ಸಂಘಾತ ಲಕ್ಷಣಗಳೂ ಅಚ್ಚುಕಟ್ಟಾದ ಏಕಾಭಿಪ್ರಾಯ ನೀಡುವುದಿಲ್ಲ.[೧೨೧] ಆದರೂ ಕುಲಕ, ಕೋಶ, ಸಂಘಾತ ಎಂಬ ಪದಗಳಿಗೆ ಇರುವ ನಿಘಂಟುವಿನ ಅರ್ಥವನ್ನು ಗಮನಿಸಿ, ಬಹುಶಃ ಇವು ಕಥೆಯಿಲ್ಲದ ಲೋಕನೀತಿ, ವರ್ಣನೆ ಇತ್ಯಾದಿಗಳನ್ನು ಕುರಿತ 'ಪದ್ಯಗುಚ್ಛ' ಪ್ರಭೇದಗಳೆಂದು ಮಾತ್ರ ಹೇಳಬಹುದು. ಸಂಘಾತವೂ ಇಂತಹ ಒಂದು ಪದ್ಯ ಸಂಕಲನವಾಗಿರಬೇಕು.

---

೧೨೧. "ಏಕಸ್ಮಿನ್ನೇನ ಪ್ರಯೋಜನೇ ಪ್ರವೃತ್ತಾ ನಾನಾವಿಧಾಃ ಶ್ಲೋಕಾಭವೇಯುಶ್ಚೇತ್ ತಥಾ ವಿಧಾನಾಂ ಸಮೂಹಃ ಸಂಘಾತಃ"
- ಹೃದಯಂಗಮಾ ಟೀಕೆ.

"ಸಂಘಾತಃ ಏಕಾರ್ಥ ವಿಷಯಃ ಏಕಕೃತಕಃ ಪದ್ಯಸಂಘಾತಃ ಶರತ್ಸಂಘಾತ ದ್ರಮಿಡಸಂಘಾತಾದಿವತ್"-ತರುಣ ವಾಚಸ್ಪತಿ.

"ಏಕಾಂ ಭಿತ್ತಿಂ ಪಾವ್ರಡಾದಿಕಾಂ ವರ್ಣಯಿತುಂ ಸಮುದಾಯೇನ ಪ್ರವೃತ್ತಾಭಿನ್ನಕ್ರಿಯಾಃ ಶ್ಲೋಕಾಃ ಸಂಘಾತಃ"-ರತ್ನಶ್ರೀಜ್ಞಾನ,

"ಏಕ ಪ್ರಘಟ್ಟಕೇನ್ನೈವ ನಿಬದ್ಧೋ ವಾಕ್ಯ ವಿಸ್ತರಃ ಸ ಸಂಘಾತೋ ಭವೇತ್-ಭಾವಪ್ರಕಾಶನ,

"ಯತ್ರ ಶ್ಲೋಕ ಕೃತೋ ಯುಕ್ತಿ ಸಮುದಾಯೋ ರಸಾನ್ವಿತಃ।
ಏಕ ಪ್ರಘಟ್ಟಕೇ ಸೋಽಯಂ ಸಂಘಾತ ಇತಿ ಕಥ್ಯತೇ॥"-ಭಾವಪ್ರಕಾಶನ.

"(ಯತ್ರ) ಕವಿರೇಕಮರ್ಥಂ ಸರ್ಗೇಣ್ಯೈಕೇನ ವರ್ಣಯತಿ ಕಾವ್ಯಂ(ವ್ಯೇ)
ಸಂಘಾತಃ ಸ ನಿಗದ್ಯತೇ (ದಿತೋ) ವೃಂದಾವನ ಮೇಘದೂತಾದಿ"
-ದಿವಾಕರನು ಬರೆದ ಮೇಘದೂತ ಟೀಕೆ.

"ಏಕ ಪ್ರಘಟ್ಟಕೇ ಏಕಕವಿಕೃತಃ ಸೂಕ್ತಿ ಸಮುದಾಯೋ ವೃಂದಾವನ ಮೇಘದೂತಾದಿಃ ಸಂಘಾತಃ"
- ಹೇಮಚಂದ್ರನ ಕಾವ್ಯಾನುಶಾಸನ. ಪು. ೪೬೬

"ಏಕ ಪ್ರಘಟ್ಟಕೇ ಯಸ್ತ್ಶ್ಲೋಕ ಕೃತೋ ಭವತಿ ಸೂಕ್ತಿ ಸಮುದಾಯಃ ಸಂಘಾತಃ ಸ ನಿಗದಿತಃ ವೃಂದಾವನ ಮೇಘದೂತಾದಿ"।
-ಭೋಜನ ಶೃಂಗಾರ ಪ್ರಕಾಶ. ಪು. ೮೦೮

"ಯತ್ರ ಕವಿರೇಕಮರ್ಥಂ ವೃತ್ತೇನೈಕೇನ ವರ್ಣಯತಿ ಕಾವ್ಯೇ
ಸಂಘಾತಃ ನಿಗದಿತೋ ವೃಂದಾವನ ಮೇಘದೂತಾದಿಃ"॥-ಸಾಹಿತ್ಯದರ್ಪಣ.

ಕಾವ್ಯಾದರ್ಶದ ಪ್ರಾಚೀನ ತಮಿಳು ಅನುವಾದ 'ದಂಡ್ಯಳಂಕಾರ'ದಲ್ಲಿ ಸಂಘಾತಕ್ಕೆ ಬದಲು 'ತೊಕೈ' (ಸಂಕಲನ) ಎಂಬ ಪದವನ್ನು ಬಳಸಲಾಗಿದೆ. ಸಂಘಂ ಸಾಹಿತ್ಯಕ್ಕೆ ಸೇರಿದ 'ಎಟ್ಟುತ್ತೊಕೈ' (ಎಂಟು ಸಂಕಲನಗಳು)ಯನ್ನು 'ತೊಳ್ಕಾಪ್ಪಿಯಂ' ವಾಖ್ಯಾನಕಾರ ಪೇರಾಶೀರಿಯರ್ (೧೪ನೆಯ ಶತಮಾನ) ಕೇವಲ 'ತೊಕೈ' ಎಂದೇ ಕರೆದಿದ್ದಾನೆ. ಎರಡನೆಯದಾಗಿ 'ಸಂಘಾತಃ ಏಕಾರ್ಥ ವಿಷಯಃ ಏಕ ಕೃತಕಃ ಪದ್ಯಸಂಘಾತಃ ಶರತ್ಸಂಘಾತಃ ದ್ರಮಿಡಸಂಘಾತಾದಿವತ್'[೧೨೨] ಎಂಬ ಸಂಘಾತ ಲಕ್ಷಣವು ತಮಿಳು ಸಂಘಂ ಸಾಹಿತ್ಯಕೃತಿಗಳಿಗೆ ಸಂಪೂರ್ಣ ಅನ್ವಯಿಸುತ್ತದೆ. ಮೂರನೆಯದಾಗಿ ಇಲ್ಲಿಯ 'ದ್ರಮಿಡ ಸಂಘಾತ' ಎಂಬುದು ತಮಿಳ್ ಸಂಘಂ ಸಾಹಿತ್ಯವನ್ನೇ ಸೂಚಿಸುತ್ತದೆ- ಎಂಬ ಮೂರು ಅಂಶಗಳನ್ನಾಧರಿಸಿ ವ್ಹಿ. ನಾರಾಯಣ ಅಯ್ಯರ್ ಅವರು ದಂಡಿ ಹೇಳುವ ಸಂಘಾತವೆಂದರೆ ಸಂಘಂ ಸಾಹಿತ್ಯವೆಂದು ಅಭಿಪ್ರಾಯಪಟ್ಟಿದ್ದಾರೆ.[೧೨೩]

ದಂಡಿ ತಮಿಳುನಾಡಿನ ಕಾಂಜೀವರಂ (ಕಂಚಿ) ನಿವಾಸಿ. ಭಾರತೀಯ ಕಾವ್ಯಮೀಮಾಂಸೆಯಲ್ಲಿ ಸಂಘಾತದ ಉಲ್ಲೇಖ ಪ್ರಥಮ ಸಲ ಬಂದುದು ಈತನ ಕೃತಿಯಲ್ಲಿ. ತನ್ನ ನಾಡಿನ ಸಾಹಿತ್ಯವೆಂದೋ, ಇದೂ ಒಂದು ಗಮನಿಸಬೇಕಾದ ಸಾಹಿತ್ಯಪ್ರಕಾರವೆಂದೋ ಈತನು ಸಂಘಂ ಸಾಹಿತ್ಯಕ್ಕೆ 'ಸಂಘಾತ' ಎಂದು ಹೆಸರಿಟ್ಟು ಕಾವ್ಯಮೀಮಾಂಸೆಯಲ್ಲಿ ಹೊಸಗದ್ದುಗೆ ನೀಡಿರುವ ಸಾಧ್ಯತೆಯಿದೆ. ಈ ವರೆಗೆ ವಿವೇಚಿಸಿದ ಸಂಘಂ ಸಾಹಿತ್ಯ, ಸಂಘಾತ ಮತ್ತು ಇಡುಕುಂಗಬ್ಬಂ ಒಂದೇ ಎಂಬ ಅಭಿಪ್ರಾಯದ ಹಿನ್ನೆಲೆಯಲ್ಲಿ ಕನ್ನಡ ಇಡುಕುಂಗಬ್ಬವು ತಮಿಳಿನ ಸಂಘಂ ಸಾಹಿತ್ಯವನ್ನು ಹೋಲುವ ಸಾಹಿತ್ಯಜಾತಿ ಎಂದು ಹೇಳಬೇಕಾಗುತ್ತದೆ. ಸಂಘಂ ಸಾಹಿತ್ಯದ ಅವಧಿ ಕ್ರಿ.ಶ. ೧ ರಿಂದ ೫ನೆಯ ಶತಮಾನದ ಮಧ್ಯ ಜೋಲಿ ಹೊಡೆಯುತ್ತಿದೆ. ಇದರ ಜೊತೆಯಲ್ಲಿಯೆ ಹುಟ್ಟಿರಬಹುದಾದ ಇಡುಕುಂಗಬ್ಬದ ಕಾಲವೂ ಕ್ರಿ.ಶ. ೧ ರಿಂದ ೫ನೆಯ ಶತಮಾನವಾಗುತ್ತದೆ. ಸಂಘಂ ಸಾಹಿತ್ಯ ತನ್ನ ಬದುಕನ್ನು ಮುಗಿಸುವಲ್ಲಿ ಅದೇ ಮಾದರಿಯಲ್ಲಿ ರೂಹುದಳೆದಿದ್ದರೆ, ಈ ಇಡುಕುಂಗಬ್ಬದ ಕಾಲ ಕೊಂಚ ತರುವಾಯ ನಿಲ್ಲುತ್ತದೆ.

ಇನ್ನು 'ಕಾವ್ಯಪ್ರಕಾರ ನಿರೂಪಣೆ'ಯ ಸಂದರ್ಭದಲ್ಲಿ ನಾಗವರ್ಮನು ದಂಡಿಯನ್ನು ಅಕ್ಷರಶಃ ಅನುಸರಿಸುತ್ತಿದ್ದರೂ ಈ ಕಾವ್ಯಾವಲೋಕನ ಪದ್ಯದ ಮಟ್ಟಿಗೆ ಸ್ವಲ್ಪ ಭಿನ್ನನಾಗಿರುವೆನೆಂದು ಭಾವಿಸಿ, ಈಗ ಇನ್ನೊಂದು ದಿಕ್ಕಿನಲ್ಲಿ ವಿಚಾರಿಸಬಹುದು. ಅಂದರೆ ದಂಡಿಯ ಮುಕ್ತಕ, ಕುಲಕ, ಕೋಶ, ಸಂಘಾತ ಎಂಬ ನಾಲ್ಕು ಪ್ರಕಾರಗಳಿಗೆ ಬದಲು ಇಲ್ಲಿ ಮೂರು ಪ್ರಕಾರಗಳನ್ನು ಹೇಳಿರುವೆನೆಂದು ಭಾವಿಸಿದರೆ ಈ ಪದ್ಯದ ಅರ್ಥ ಹೀಗೆ ಹೊರಡಬಹುದಾಗಿದೆ.

೧. ಮುಕ್ತಕಂ ಒಡಂಬಡಲ್ ಇಡುಕುಂಗಬ್ಬಂ;

೨. ಪಲವುಂ[ಮುಕ್ತಕಂಗಳ್] ಏಕಕ್ರಿಯೆಯೊಳ್ ನೆಗಟೆ ಕುಳಕಾಖ್ಯೆಯಂ ಪಡೆಗುಂ;

೩. ಎಡೆಮಡಗದ ಅನೇಕಾರ್ಥ ವಸ್ತುಕಥನಂ ಕೋಶಂ

ಇಲ್ಲಿಯ ಮೊದಲನೆಯ ವಾಕ್ಯದಿಂದ (ಹಲವು)ಮುಕ್ತಕಗಳ ಸಮುದಾಯವೇ ಇಡುಕುಂಗಬ್ಬ ಎಂಬ ಅರ್ಥವನ್ನು ಎಳೆದುಕೊಂಡರೆ, ನಾಗವರ್ಮನು ದಂಡಿ ಹೇಳಿದ 'ಸಂಘಾತ'ವನ್ನು ಕೈಬಿಟ್ಟಿರುವನೆಂದೂ ಅದಕ್ಕಾಗಿ ಮೇಲೆ ಮಾಡಿದ ನಮ್ಮ ಊಹೆಯನ್ನು ಕೈಬಿಡಬೇಕೆಂದೂ ಹೇಳಬೇಕಾಗುತ್ತದೆ. ಆಗ ಇಡುಕಂಗಬ್ಬವೆಂದರೆ ಸಂಘಂ

---

೧೨೨. ಕಾವ್ಯಾದರ್ಶಕ್ಕೆ ಬರೆದ ತರುಣ ವಾಚಸ್ಪತಿಯ ಟೀಕೆ.

೧೨೩. Sangham Literature-JORM. II.

ಸಾಹಿತ್ಯಕ್ಕೆ ಸಮಾನವಾದ ಸಂಘಾತವೆಂಬುದು ಸುಳ್ಳಾಗಬಹುದು, ಆದರೆ ಹಲವು ಮುಕ್ತಕಗಳ ಸಮುದಾಯ ಎಂಬ ಮೇಲಣ ಅಭಿಪ್ರಾಯ ಉಳಿದು ನಿಲ್ಲುತ್ತದೆ.[೧೨೪]

ನಾಗವರ್ಮನೇ ಮೊಟ್ಟಮೊದಲು ಹೇಳುವ ಈ ಕಾವ್ಯಪ್ರಕಾರಕ್ಕೆ ಸಂಬಂಧಿಸಿದ ಒಂದು ಕೃತಿಯಾಗಲೀ, ಸೂಚನೆಯಾಗಲೀ ಅವನ ತರುವಾಯ ಕಂಡುಬರುವುದಿಲ್ಲ. ಬಹುಶಃ ಈ ಪ್ರಕಾರ ಅವನಿಗೆ ಹಿಂದೆ, ಪಂಪನಿಗೂ ಹಿಂದೆ ಬೆಳೆದು ಬಂದಿರುವ ಸಾಧ್ಯತೆಯಿದೆ. ಆದರೆ ಶ.ಮ.ದ. (ಡಿ.ಎಲ್.ಎನ್)ದ 'ಕ'ಪ್ರತಿಯ ಗರಿಯ ಅಂಚಿನಲ್ಲಿ "ಇಡುಕುಂಗಬ್ಬಂ ಎಂಬುದು ದೊಡ್ಡ ಕಾವ್ಯಂ" ಎಂದು ಬರೆದಿರುವುದು ಸಮಂಜಸವೆನಿಸದು.

ಒಟ್ಟಿನಲ್ಲಿ, ವಿದ್ವಾಂಸರು ಈ ಉಭಯ ಅಭಿಪ್ರಾಯಗಳಲ್ಲಿ ತಮಗೆ ಸರಿಕಂಡ ಒಂದನ್ನು ಸ್ವೀಕರಿಸಬಹುದು. ಆದರೆ 'ಇಡುಕುಂಗಬ್ಬಂ' ಎಂಬ ಈ ಸಾಹಿತ್ಯಜಾತಿ ಪಂಪಪೂರ್ವಯುಗದಲ್ಲಿಯೂ ಬೆಳೆದು ಬಂದಿರಬಹುದಾಗಿದೆ.

ವಚನ ಮತ್ತು ಕೀರ್ತನೆ :

ಶೈವಮತಕ್ಕೆ ವೀರಶೈವಮುದ್ರೆಯನ್ನು, ವೈಷ್ಣವಮತಕ್ಕೆ ದ್ವೈತಮುದ್ರೆಯನ್ನು ಮೂಡಿಸಿದ ಕೀರ್ತಿ ಕನ್ನಡನಾಡಿನ ಶರಣರಿಗೆ ಮತ್ತು ದಾಸರಿಗೆ ಸಲ್ಲುತ್ತದೆ. ಈ ನೆಲದ ಮೇಲೆ ಭಕ್ತಿಯನ್ನು ಉಕ್ಕಿಸಿದ ಶರಣರ ಪ್ರಮುಖ ಸಾಹಿತ್ಯ ಪ್ರಕಾರ ವಚನ, ದಾಸರ ಪ್ರಮುಖ ಸಾಹಿತ್ಯ ಪ್ರಕಾರ ಕೀರ್ತನೆ. ಒಂದರ ಸುಗ್ಗಿಯ ಸಮಯ ೧೨ನೆಯ ಶತಮಾನ, ಇನ್ನೊಂದರ ಸುಗ್ಗಿಯ ಸಮಯ ೧೫ನೆಯ ಶತಮಾನ. ಆದರೆ ಕೆಲವು ಪಂಡಿತರ ಊಹೆಗಳು ಈ ಉಭಯ ಪ್ರಕಾರಗಳ ಸೆಲೆಯನ್ನು ಪಂಪಪೂರ್ವಕ್ಕೆ ಒಯ್ದು ಮುಟ್ಟಿಸಿವೆ.

ವಚನಸಾಹಿತ್ಯದ ಹಲವಾರು ಸಮಸ್ಯೆಗಳಲ್ಲಿ ವಚನದ ರೂಪಮಾತೃಕೆ ಮತ್ತು ವಚನದ ಉಗಮಕಾಲಗಳು ಮೂಲಭೂತವಾದುವು. ವಿದ್ವಾಂಸರು ಊಹಿಸಿದಂತೆ ವಚನದ ರೂಪಮಾತೃಕೆ ತೇವಾರಂ, ವೃತ್ತಗಂಧಿ, ತ್ರಿಪದಿಗಳು[೧೨೫] ಆಗಿರಲಿ ಬಿಡಲಿ, ಪಂಪಪೂರ್ವಯುಗದ ಸಾಹಿತ್ಯವನ್ನವಲೋಕಿಸುವ ನಮಗೆ ಅದರ ಉಗಮಕಾಲ ಮುಖ್ಯವಿಷಯ.

"ಕ್ರಿ.ಶ. ಸು. ೯೮೦ರಲ್ಲಿ ಹುಟ್ಟಿ ಕ್ರಿ.ಶ. ಸು. ೧೦೪೦ರಲ್ಲಿ ಶಿವೈಕ್ಯನಾಗಿರಬಹುದು"[೧೨೬] ಎಂದು ಹೇಳಲ್ಪಡುವ ಜೇಡರದಾಸಿಮಯ್ಯನು ವಚನಕಾರನೆಂಬುದು ಸತ್ಯ.

ಕೀಳು ಡೋಹರಕಕ್ಕ ಕೀಳು ಮಾದರಚೆನ್ನ
ಕೀಳು ಓಹಿಲದೇವ ಕೀಳು ಉದ್ಭಟಯ್ಯ
ಕೀಳಿಂಗಲ್ಲದೆ ಹಯನು ಕರೆಯದು ಕಾಣಾ ರಾಮನಾಥಾ[೧೨೭]

ನಂಬಿದಾ ಚೆನ್ನನ ಅಂಬಲಿಯನುಂಡ
ಕೆಂಭಾವಿಯ ಭೋಗಯ್ಯನ ಹಿಂದಾಡಿ ಹೋದ

---

೧೨೪. (ಶ.ಮ.ದ. ಸೂ. ೧೮೧ ಅ.ಟಿ.)

೧೨೫. ಅ.ವ.ಚ. ಪು. ೧೨-೧೫ ಮತ್ತು ಸಂ. ತರಂಗ ಪು. ೧೬

೧೨೬. ಅ.ವ.ಚ. ಪು. ೧(ಪೀಠಿಕೆ)

೧೨೭. ದೇ. ದಾ. ಪ್ರಶಸ್ತಿ. ಪು. ೧೯೨

ಕುಂಭದ ಗತಿಗೆ ಕುಕಿಲಿಱಿದು ಕುಣಿದ
ನಂಬದೆ ಕರೆದವರ ಹಂಬಲನೊಲ್ಲ ನಮ್ಮ ರಾಮನಾಥ[೧೨೮]

ಎಂಬ ವಚನಗಳಲ್ಲಿ ದಾಸಿಮಯ್ಯನು ಹೆಸರಿಸಿದ ಶರಣರು ಆತನಿಗೆ ಪ್ರಾಚೀನರು. ಇವರಲ್ಲಿ ಕೆಲವರಾದರೂ ವಚನಕಾರರಾಗಿದ್ದಾರೆ. ಜೇಡರದಾಸಿಮಯ್ಯನ ಗುರು ಶಂಕರದಾಸಿಮಯ್ಯ. ಕವಿ ಹರಿಹರನಿಂದ 'ಸಾಹಿತ್ಯಭೂಷಣ' ಎಂದು ಗೌರವಿಸಲ್ಪಟ್ಟ "ಈತನೂ ಗದ್ಯ(=ವಚನ) ಪದ್ಯಗಳನ್ನು ರಚಿಸಿರಬೇಕು."[೧೨೯] "ಈ ಆದ್ಯರ ವಚನಸಾಹಿತ್ಯವು ಕ್ರಿ.ಶ. ೯-೧೦ ಶತಮಾನದಷ್ಟು ಹಿಂದಿನದು. ಈಗ ನಮಗೆ ಉಪಲಬ್ಧವಿರುವ ಎಷ್ಟೋ ವಚನಗಳು ಪಂಪನ ಸಾಹಿತ್ಯಕ್ಕಿಂತ ಪ್ರಾಚೀನವೆಂದಾಗ ಯಾರಾದರೂ ಹುಸಿನಗುವನ್ನು ನಕ್ಕರೆ ಅವರಿಗೆ ನವನವೋನ್ಮೇಷಿತ ಸತ್ಯ ವಿಚಾರಗಳನ್ನು ಸ್ವಾಗತಿಸುವ ಪ್ರಗತಿಪರ ದೃಷ್ಟಿಯಿಲ್ಲವೆನ್ನಬೇಕಾಗುವುದು"[೧೩೦]- ಎಂದು ಡಾ. ಎಲ್. ಬಸವರಾಜು ಹೇಳುತ್ತಾರೆ. ಸಾಮಾನ್ಯವಾಗಿ ನೆಲದಿಂದ ಮೇಲೆ ಕಾಣುವ ಮರದಷ್ಟೇ ಉದ್ದಳತೆಯ ಬೇರು, ನೆಲದಿಂದ ಕೆಳಗೆ ಇರುವುದರಿಂದ ವಚನ, ಸ್ವರವಚನಗಳೆಂಬ ಫಲಪುಷ್ಪಗಳನ್ನು ಹೊತ್ತ ಶರಣ ಸಾಹಿತ್ಯವೃಕ್ಷದ ಬೇರು, ಡಾ. ಬಸವರಾಜು ಊಹಿಸಿದಷ್ಟು ಹಿಂದೆ ಹೋಗಬಹುದು. ಆದರೆ ಇದಕ್ಕೆ ಊಹೆಯೊಂದನ್ನು ಬಿಟ್ಟರೆ ಬೇರೆ ಆಧಾರಗಳಿಲ್ಲ. ಹೀಗಿದ್ದೂ 'ವಚನಯುಗ' ಕ್ಕೆ ಮೊದಲು ದೇಶೀ ಹೆಸರಿನ "ಸೂಳ್ನುಡಿಯುಗ"ವೊಂದು ಇದ್ದಿರಬೇಕೆನಿಸುತ್ತದೆ.

ದಾಸಸಾಹಿತ್ಯದ ಮೂಲಪುರುಷ ೧೩-೧೪ನೆಯ ಶತಮಾನಗಳ ಮಧ್ಯದಲ್ಲಿ ಬಾಳಿದ ನರಹರಿತೀರ್ಥರೆಂಬುದು ವಿದ್ವಾಂಸರು ಒಪ್ಪಿಕೊಂಡ ವಿಷಯ. ಆದರೆ ಕೀರ್ತನೆ ಉಗಾಭೋಗಗಳನ್ನು ಬರೆದ ಕ್ರಿ.ಶ. ೯೭೯ರ ಅಚಲಾನಂದದಾಸರು 'ದಾಸಸಾಹಿತ್ಯ ರಚನೆಗೆ ಮೊದಲಿಗರು' ಎಂದು ಶ್ರೀ ಬೇಲೂರು ಕೇಶವದಾಸರ ಅಭಿಪ್ರಾಯ.[೧೩೧] ಅಚಲಾನಂದರಿಗೆ ವಿಠಲನು ಪ್ರತ್ಯಕ್ಷನಾದ ಕಾಲವನ್ನು ಸೂಚಿಸುವ ಒಂದು ಸಂಸ್ಕೃತ ಪದ್ಯ ಇವರಿಗೆ ಆಧಾರ. ಆದರೆ ಅಚಲಾನಂದರ ಒಂದು ಹಾಡಿನಲ್ಲಿಯ,

"ಕೇಳೋ ಜೀವವೇ ನೀ ಮಧ್ವಮತವನನುಸರಿಸಿ ಶ್ರೀ
ಲೋಲನಂಘ್ರಿಗಳ ನೆನೆದು ಸುಖಿಸೋ"

ಎಂಬ ಹೇಳಿಕೆಯೂ, ಇಲ್ಲಿ ಬಳಸಿದ ಭಾಷೆಯೂ ಅವರನ್ನು ಮಧ್ವಾಚಾರ್ಯರ ತರುವಾಯ ತರುತ್ತವೆ. ಅದಕ್ಕಾಗಿ ಪಂಡಿತರಿಂದ ಅಸ್ವೀಕೃತವಾದ ಶ್ರೀಕೇಶವದಾಸರ ಅಭಿಪ್ರಾಯವನ್ನು ಕೈಬಿಡುವುದು ಲೇಸು. ಒಟ್ಟಾರೆ, ಪಂಪಪೂರ್ವದಲ್ಲಿ ವಚನ ಸಾಹಿತ್ಯದ ಉಗಮವನ್ನು ನಂಬಬಹುದಾದರೂ ದಾಸಸಾಹಿತ್ಯದ ಉಗಮವನ್ನು ನಂಬಲಾಗದು.

ಜನಪದಸಾಹಿತ್ಯ ಪ್ರಕಾರಗಳು

ಜನಪದಸಾಹಿತ್ಯ ಜನಾಂಗದ ಆಶೋತ್ತರಗಳ ನೇರ ಅಭಿವ್ಯಕ್ತಿ. ಅಲ್ಲಿಯ ದರ್ಶನದಲ್ಲಾಗಲಿ ಪ್ರದರ್ಶನದಲ್ಲಾಗಲಿ ತುಂಬಿತುಳುಕುವ ಪ್ರಾಮಾಣಿಕತೆಯಿಂದಾಗಿ ಅದು ಜನಾಂಗದ ಆತ್ಮಧ್ವನಿಯೆನಿಸಿದೆ. ಈ

---

೧೨೮. ದೇ. ದಾ. ಪ್ರಶಸ್ತಿ, ಪು. ೧೯೨
೧೨೯. ಅ.ವ.ಚ. ಪೀಠಿಕೆ ೭
೧೩೦. ಅ.ವ.ಚ. ಪೀಠಿಕೆ ೧೧
೧೩೧. ೯ನೆಯ ಶತಮಾನದಲ್ಲಿದ್ದ ಅಚಲಾನಂದದಾಸರು-ಜಯ. ಕ. ೨-೧೧

ಸಾಹಿತ್ಯವು ಬದುಕಿನ ನಿಲುವು-ಭಾವನೆಗಳ ಒಲವುಗಳಿಗನುಸರಿಸಿ ಹಲವು ಪ್ರಕಾರಗಳಲ್ಲಿ ಬೆಳೆದುನಿಂತಿದೆ. ಪಂಪಪೂರ್ವಯುಗದಲ್ಲಿಯೂ ಇರಬಹುದಾದ ಹಲವು ಜಾನಪದ ಸಾಹಿತ್ಯಪ್ರಕಾರಗಳನ್ನು ಗುರುತಿಸಿ ಕವಿವಾಣಿಯೊಂದಿಗೆ ಈ ಜನವಾಣಿಯ ಪರಿಚಯ ಮಾಡಿಕೊಳ್ಳುವುದು ಮಹತ್ವಪೂರ್ಣವೆನಿಸಿದೆ. ಆದರೆ ಈ ಕಾಲದ ಲಿಖಿತ ಕವಿಸಾಹಿತ್ಯಪ್ರಕಾರಗಳನ್ನು ಗುರುತಿಸುವುದೇ ಅಸಾಧ್ಯವಾಗಿರುವಾಗ, ಅಲಿಖಿತ ಜನಪದಸಾಹಿತ್ಯ ಪ್ರಕಾರಗಳನ್ನು ಗುರುತಿಸುವುದು ಇನ್ನೂ ಜಟಿಲ. ಮಿತವಾದ ಆಧಾರ, ಹಿತವಾದ ಊಹೆಗಳ ಬಲದಿಂದ ಅಂಥ ಒಂದು ಪ್ರಯತ್ನವನ್ನು ಇಲ್ಲಿ ಮಾಡಬಹುದು.

ಧವಳ ಹಾಡು:

ಧವಳಗಜೇಂದ್ರಮುಂ ಧವಳಚಾಮರಮುಂ ಧವಳಾತಪತ್ರಮುಂ
ಧವಳವಿಲೋಚನೋತ್ಪಲವಧೂಜನಮಂ ಬೆರಸಷ್ಟದಿಕ್ತಟಂ।
ಧವಳಿಸೆ ಕೀರ್ತಿಯಿಂ ಧವಳಮಂಗಳಗೇಯದಿನೊಪ್ಪಿ ಬರ್ಪ ಕೌ
ರವಧವಳಂಗೆ ದೇಸಿಗನೆ ಬರ್ಪುವೊಲೊರ್ವನೆ ಬರ್ಪುದಾದುದೇ॥[೧೩೨]

ರನ್ನ ಗದಾಯುದ್ಧದ ಈ ಪದ್ಯದ 'ಧವಳ ಮಂಗಳಗೇಯ' ಎಂಬ ಮಾತನ್ನು ಗಮನಿಸಿ, ಡಿ.ಎಲ್.ಎನ್. ಹೇಳುವ "ಸಿದ್ಧರಾಮನು ಮಾಡಿಸಿದ ಸಾವಿರಾರು ಮಂಗಳ ವಿವಾಹಗಳ ಸಂದರ್ಭದಲ್ಲಿ ಅಂಗನೆಯರು 'ಆರತಿಗಳಂ ಬೆಳಗಿ' ಅಲ್ಲಲ್ಲಿ ಧವಳಗಳನ್ನು ಹಾಡುತ್ತಿದ್ದರಂತೆ.....ಈ ಜಾತಿಯ ಹಾಡು ಹತ್ತನೆಯ ಶತಮಾನದ ಕನ್ನಡ ಜನತೆಯಲ್ಲಿ ಪ್ರಚುರವಾಗಿದ್ದಿತೆಂಬುದಕ್ಕೆ ರನ್ನನು ಸಾಕ್ಷಿ"[೧೩೩] ಎಂಬುದು ವಿದ್ವಾಂಸರು ಒಪ್ಪಿಕೊಂಡ ಮಾತಾಗಿದೆ. "A discriptive catalogue of the Kannada manuscripts (Madras)"ಗ್ರಂಥದಲ್ಲಿ 'ಧವಳದ ಹಾಡು ಮುಂತಾದುವು'[೧೩೪] ಎಂಬ ಹೆಸರಿನ ತಾಳೆಗರಿ ಪ್ರತಿ ಉಲ್ಲೇಖಗೊಂಡಿದೆ. "ಇದರಲ್ಲಿ ಸೀಮಂತಧವಲ, ಜಾತಕರ್ಮಧವಲ, ಉಪನಯನಧವಲ, ಭರತೇಶ್ವರಧವಲ" ಇತ್ಯಾದಿ ಹಾಡುಗಳಿವೆ.

ಸೋಮೇಶ್ವರನ ಮಾನಸೋಲ್ಲಾಸ, ಹೇಮಚಂದ್ರನ ಛಂದೋನುಶಾಸನ, ಶಾರ್ಙ್ಗದೇವನ ಸಂಗೀತರತ್ನಾಕರಗಳಲ್ಲಿ ಇದರ ಲಕ್ಷಣ ಮತ್ತು ಪ್ರಭೇದಗಳನ್ನು ಹೇಳಲಾಗಿದೆ. "ಧವಲಾ ಎಂದು ಪ್ರಾರಂಭವಾಗುವ ಪದಗಳಿಂದ ಕೂಡಿ ಆಶೀರ್ವಾಯುಕ್ತಗಳಾದ ಪಾದಗಳನ್ನು ಹೊಂದಿದ್ದು ಯಾವ ಛಂದಸ್ಸಿನಲ್ಲಾದರೂ ಇರುವ ಗೀತಕ್ಕೆ ಧವಲಾ ಎಂಬ ಹೆಸರು" ಎಂದು ಮಾಸೋಲ್ಲಾಸದ ಮತ.[೧೩೫] ೮ ಪಾದಗಳ ಶ್ರೀಧವಲ, ಯಶೋಧವಲ;೬ ಪಾದಗಳ ಕೀರ್ತಿಧವಲ; ೪ ಪಾದಗಳ ಗುಣಧವಲ, ಭ್ರಮರಧವಲ, ಅಮರಧವಲ, ಮಂಗಲಧವಲಗಳ ವಿವರಣೆ ಹೇಮಚಂದ್ರನಲ್ಲಿದೆ.[೧೩೬] ಹೀಗೆ ಹಲವು ಹೆಸರುಗಳಲ್ಲಿ ಹರಡಿನಿಂತ, ಜನಪದದಲ್ಲಿ ಹಾಸುಹೊಕ್ಕಾಗಿ ಹಬ್ಬಿದ ಈ ಧವಲಸಾಹಿತ್ಯ ಪಂಪಪೂರ್ವದ ಪ್ರಭೇದವಾಗಿರುವ ಸಂಭವವಿದೆ. ಕರ್ನಾಟಕದ ಕೆಲವು ಭಾಗಗಳಲ್ಲಿ ಈ ಪ್ರಕಾರವು ಹೆಸರು ಕಳೆದುಕೊಂಡು ಈಗಲೂ ಪ್ರಚಾರದಲ್ಲಿರಬಹುದು. ಪ್ರಾಚೀನ ತೆಲುಗು ಕಾವ್ಯ ಮತ್ತು ಶಾಸ್ತ್ರಗಳಲ್ಲಿಯೂ ಇದು ಎಡೆಪಡೆದಿದೆ.

---

೧೩೨. ಗದಾಯುದ್ಧ. ೫-೪೧
೧೩೩. ಶ್ರೀ ಪಂಜೆಯವರ ನೆನಪಿಗಾಗಿ ಪು. ೧೯೦
೧೩೪. Vol. III, No. 364
೧೩೫. ಮಾನಸೋಲ್ಲಾಸದಲ್ಲಿ ಛಂದಸ್ಸು (ಪ್ರ.ಕ. ೪೫-೨ ಪು. ೬೯)
೧೩೬. ಮಾನಸೋಲ್ಲಾಸದಲ್ಲಿ ಛಂದಸ್ಸು (ಪ್ರ.ಕ. ೪೫-೨ ಪು. ೭೦)

ಅಂಟಸುಂಟಿ:

ದರವುರಮುಮಂಟಸುಂಟಿಯು
ಮರೆವೊರಕನುಮೆನಿಸಿ ತರತರಂ ನುಡಿದು ಸಭಾಂ।
ತರದೊಳ್ ರಂಜಿಪುದೆ ರಸಾಂ
ತರಂಗಳಂ ಮುಟ್ಟೆನುಡಿದು ರಂಜಿಸವೇಡಾ॥[೧೩೭]

ರನ್ನನು ಅಜಿತಪುರಾಣದ ಈ ಪದ್ಯದಲ್ಲಿ ಕುಕವಿಗಳ ಸಾಹಿತ್ಯವನ್ನು "ಅಂಟಸುಂಟಿ' ಎಂದು ನಿಂದಿಸಿರುವನು. ಬಹುಶಃ ಇದೊಂದು ಜಾನಪದ ಸಾಹಿತ್ಯಪ್ರಕಾರವಾಗಿರಬೇಕು. ಕರ್ನಾಟಕದ ಕೆಲವು ಭಾಗದಲ್ಲಿ ದೀಪಾವಳಿ ಹಬ್ಬದ ಅಂಗವಾಗಿ ಒಂದು ವಿಶೇಷ ಪದ್ಧತಿ ಆಚರಿಸಲ್ಪಡುತ್ತದೆ. ಹಳ್ಳದಲ್ಲಿ ಬೆಳೆಯುವ ಹುಲ್ಲನ್ನು ಸರ್ಪದ ೫ ಇಲ್ಲವೆ ೭ ಹೆಡೆಗಳಾಕಾರದಲ್ಲಿ ಹೆಣೆದು, ಅದರಲ್ಲಿ ದೀಪವಿಟ್ಟುಕೊಂಡು, ಬಾಲಕರು ರಾತ್ರಿ ಸಮಯದಲ್ಲಿ ಮನೆಮನೆಹೊಕ್ಕು ದನಗಳಿಗೆ ದೀಪ ಬೆಳಗುತ್ತಾರೆ. ಇದಕ್ಕೆ 'ಅಂಟಿಗೆ-ಸುಂಟಿಗೆ' ಎಂದು ಹೆಸರು. ಕೆಲವು ಕಡೆ ಇದನ್ನು 'ಅಂಟಿಗೆ-ಪಂಟಿಗೆ' ಎಂದೂ 'ಆಣಿ-ಪೀಣೀ' ಎಂದೂ ಕರೆಯುವರು.[೧೩೮] ಈ ದೀಪ ಬೆಳಗುವ ಸಮಯದಲ್ಲಿ ಬಾಲಕರು ಪದಗಳನ್ನು ಹಾಡುತ್ತಾರೆ. ಈ ಜಾನಪದ ಸಾಹಿತ್ಯಜಾತಿಯೇ ರನ್ನ ಹೇಳುವ 'ಅಂಟ-ಸುಂಟಿ' ಯಾಗಿರಬಹುದು. ಚಾವುಂಡರಾಯ ಪುರಾಣದಲ್ಲಿ,

ಮುಳಿದನಸಹಾಯ ವಿಕ್ರಮ
ನೊಳಕೊಳ್ವುದು ಕಾವುದೆಮ್ಮನೆಂದುದರಿಮಾಂ।
ಡಳಿಕರ್ ಭಯವಶದಿಂ ದೀ
ವಳಿಗೆಯ ಪಱಿಯಂತೆ ಪೊಕ್ಕಪರ್ ಮನೆಮನೆಯಂ॥[೧೩೯]

ಎಂಬ ಪದ್ಯದಲ್ಲಿಯೂ ಮನೆಮನೆ ಹೊಕ್ಕು 'ಅಂಟಿಗೆ-ಸುಂಟಿಗೆ' ಹಾಡುವ ಈ ಕ್ರಮವನ್ನೇ ಹೇಳಿದಂತಿದೆ. ಆದುದರಿಂದ ರನ್ನ ಚಾವುಂಡರಾಯರಿಗೆ ಪ್ರಾಚೀನವಾಗಿರುವ ಈ ಜಾನಪದ ಪರಂಪರೆಯನ್ನು ಪಂಪನಿಗೆ ಪೂರ್ವದಲ್ಲಿ ಇದ್ದಿರಬಹುದೆಂದು ಭಾವಿಸಬೇಕಾಗುತ್ತದೆ.

ಜೋಕುಮಾರನ ಹಾಡು:

ಜೋಕುಮಾರನ ಸಂಪ್ರದಾಯ ಈಗ ತಿಳಿದಮಟ್ಟಿಗೆ ಕನ್ನಡನಾಡಿನಲ್ಲಿ ಶ್ರೀಧರಾಚಾರ್ಯ (ಕ್ರಿ.ಶ. ೧೦೪೯)ನಷ್ಟು ಪ್ರಾಚೀನ.[೧೪೦] ಬಂಧುವರ್ಮನ ಜೀವಸಂಬೋಧನೆ[೧೪೧](೧೧೫೦), ನೇಮಿಚಂದ್ರನ ನೇಮಿನಾಥಪುರಾಣ[೧೪೨] (೧೧೭೦), ಬ್ರಹ್ಮಶಿವನ ಸಮಯ ಪರೀಕ್ಷೆ[೧೪೩] (೧೧೮೦); ಬಸವಣ್ಣನವರ ವಚನ[೧೪೪](೧೧೬೦), ಪಾರ್ಶ್ವನಾಥನ ಪಾರ್ಶ್ವನಾಥಪುರಾಣ[೧೪೫](೧೨೨೨), ವಿಜಯದಾಸರ ಸುಳಾದಿ[೧೪೬](೧೭೦೦),

---

೧೩೭. ಅಜಿ. ಪುರಾಣ. ೧-೮೮(ಮೂಲಪಾಠ 'ಮರೆವೊರಕಮುಮೆನಿಸಿ' ಎಂದು ಇರಬಹುದೇನೋ)
೧೩೮. ಕೆಲವು ಕಡೆ 'ಆಡೀ-ಪಿಡೀ' ಎಂದು ಕರೆಯುತ್ತಾರೆ.
೧೩೯. ಚಾ. ಪು. ೧-೨೩
೧೪೦. ಜಾತಕತಿಲಕ. ೬-೭
೧೪೧. ಜೀ. ಬೋಧೆ. ೧-೭
೧೪೨. ನೇ. ಪುರಾಣ, ೬-೧೯ ವಚನ
೧೪೩. ಸಮಯ ಪರೀಕ್ಷೆ ೯-೧೧೦
೧೪೪. ಬ.ಷ. ವಚನ (ಬಸವನಾಳ ಆವೃತ್ತಿ ೧೯೫೪) ಪು. ೧೪೩
೧೪೫. ಪಾರ್ಶ್ವ ಪುರಾಣ. ೩-೬೬
೧೪೬. ಶ್ರೀ ವಿ.ದಾ. ಸುಳಾದಿ, ಭಾಗ-೧(ಗೊರಬಾಳ) ಪು. ೧೧೭

ನಾರಸಿಂಹಕವಿಯ ಅನುಭವ ಶಿಖಾಮಣಿ[೧೪೭](೧೭೯೮) ಗಳಲ್ಲಿ ಜೋಕುಮಾರನ ಉಲ್ಲೇಖ ಬರುತ್ತದೆ. ಈ ಉಲ್ಲೇಖಗಳು ಆ ಆ ಕಾಲಗಳಲ್ಲಿ ಜೋಕುಮಾರನ ಸಂಪ್ರದಾಯ ಜೀವಂತವಿದ್ದುದಕ್ಕೆ ಸಾಕ್ಷಿ. ಕ್ರಿ.ಶ. ೧೦೪೯ರಲ್ಲಿದ್ದ ಈ ಸಂಪ್ರದಾಯವನ್ನು ಪಂಪಪೂರ್ವದಲ್ಲಿ ಇದ್ದಿತೆಂದು ಊಹಿಸಲು ಅವಕಾಶವಿದೆ. ಬಹುಶಃ ಈಗಿನಂತೆ ಆ ಕಾಲದಲ್ಲಿಯೂ ಜೋಕುಮಾರನ ಹಾಡುಗಳ ರಚನೆ ಮತ್ತು ಹಾಡುವಿಕೆಗಳು ಪ್ರಚಾರದಲ್ಲಿರಬಹುದು.

ತಾರೆಲೆ ಹಾಡು-ಬೀರನ ಕಥೆ:

ಗೌರೀವರ ಕರ್ಣಾಲಂ। ಕಾರ ರಸಪೂರಮತಿಗಭೀರಂ ಕಾವ್ಯಂ।
ನೀರಸರಜೀವಂತೇನಿದು। ತಾರೆಲೆಯೇ ಬೀದಿವಾಡೆ ನೆರವಿಯ ತುಮುಕೇ॥[೧೪೮]

-ಗಿರಿಜಾ ಕಲ್ಯಾಣ

ಪಂಡಿತರುಂ ವಿವಿಧಕಳಾ। ಮಂಡಿತರುಂ ಕೇಳತಕ್ಕ ಕೃತಿಯಂ ಕ್ಷಿತಿಯೊಳ್।
ಕಂಡರ್ ಕೇಳ್ವೊಡೆ ಗೊರವರ। ಡುಂಡುಚಿಯೇ ಬೀದಿವಜೆಯೆ ಬೀರನಕತೆಯೇ॥[೧೪೯]

-ಧರ್ಮನಾಥ ಪುರಾಣ

ಪಂಡಿತರುಂ ವಿವಿಧಕಲಾ। ಪಂಡಿತರುಂ ಪೇಳತಕ್ಕುವ ಕೃತಿಗಳನು।
ಕಂಡ ಕಂಡವರು ಪೇಳ್ವಡೆ। ಮಂಡಕಿಯೇ ಬೀದಿವರಿಯೆ ಬೀರನಕತೆಯೇ॥[೧೫೦]

-ಸದಾಶಿವ ನೀತಿ

ಒಂದರ ಪ್ರಭಾವದಿಂದ ಮತ್ತೊಂದರಂತೆ ಹುಟ್ಟಿದ ಈ ಮೂರು ಪದ್ಯಗಳಲ್ಲಿ ನಮಗೆ ಪ್ರಸ್ತುತವಾದುವು ಗಿರಿಜಾಕಲ್ಯಾಣ, ಧರ್ಮನಾಥಪುರಾಣದುವು. ಗಿರಿಜಾಕಲ್ಯಾಣದಲ್ಲಿ ಬರುವ "ತಾರೆಲೆ" ಎಂಬುದು ಒಂದು ಜಾನಪದ ಪದ್ಯಜಾತಿಯಾಗಿರಬಹುದು. ನೇಮಿಜಿನೇಶ ಸಂಗತಿಯಲ್ಲಿ ಬರುವ "ತಪ್ಪಳೆ ಗುಟ್ಟುತ ತಾರೆಲೆ ಮಾಡತ ಬಪ್ಪ ಗೋವಳರ ಮಧ್ಯದೊಳು, ಒಪ್ಪಿದರಾ ಬಲಕೇಶವರಿರ್ವರು ಬರ್ಪ ಪಟ್ಟಣದ ದಾರಿಯೊಳು" ಎಂಬ ಪದ್ಯ ಇದನ್ನು ಸಮರ್ಥಿಸುವುದಲ್ಲದೆ, ಇದನ್ನು ಚಪ್ಪಾಳೆ ತಟ್ಟುತ್ತ ಹಾಡುತ್ತಿದ್ದರೆಂದೂ ತಿಳಿಸುತ್ತದೆ.

ಈ ಪದ್ಯಗಳಲ್ಲಿಯ 'ಗೊರವರ ಡುಂಡುಚಿಯೇ ಬೀದಿವಜೆಯೆ ಬೀರನ ಕತೆಯೇ' ಎಂಬ ಭಾಗ ಓದುಗರಲ್ಲಿ ಕುತೂಹಲ ಹುಟ್ಟಿಸುತ್ತದೆ. ಪಂಡಿತರೂ ಕಲಾಭಿಜ್ಞರೂ ಕೇಳಲು ಮಾತ್ರ ಯೋಗ್ಯವಾದ ಈ ಕೃತಿಯನ್ನು ಯಾರು ಬೇಕಾದವರು ಕೇಳಲಿಕ್ಕೆ ಇದೇನು ಗೊರವರ ಡುಂಡುಚಿಯೆ? ಬೀದಿಯಲ್ಲಿ ಬಾರಿಸುವ ಹಲಗೆಯೆ? ಬೀರನ ಕತೆಯೆ? ಎಂದು ಇದಕ್ಕೆ ಅರ್ಥ ಹೇಳುವುದು ರೂಢಿಯಾಗಿದೆ. ಇಲ್ಲಿ 'ಬೀರನ ಕಥೆ'ಗೆ ಏನು ಅರ್ಥ? "ವೀಱನ ಸಾವು ಕತೆಯಾಗಿ ಪರೆದುದು ಮೂಱುವೀ ಲೋಕದೊಳಗೆಲ್ಲ" ಎಂಬ ಒಂದು ಶಾಸನದ[೧೫೧] ಹೇಳಿಕೆಯಂತೆ ವೀರಸ್ವರ್ಗವೇರಿದ ಯೋಧರನ್ನು ಕುರಿತು ಬರೆದ 'ವೀರಗೀತೆ'ಗಳನ್ನು ಜನತೆ ಬೇಕು ಬೇಕೆಂದಾಗ ಎದೆತುಂಬಿ ಹಾಡುತ್ತಿದ್ದರೆಂದೂ ಅಂತಹ ಕಥೆಗಳನ್ನೇ ಇಲ್ಲಿ ಅಪಹಾಸ್ಯ ಮಾಡಿರುವನೆಂದೂ ಹೇಳಿದರೆ, ಈ

---

೧೪೭. ಸಂಶೋಧನ ತರಂಗ-
೧೪೮. ಹರಿಹರನ ಗಿರಿಜಾಕಲ್ಯಾಣ, ೧-೩೦
೧೪೯. ಮಧುರನ ಧರ್ಮನಾಥಪುರಾಣ, ೧-೫೭
೧೫೦. ಸದಾಶಿವನೀತಿ. ಪದ್ಯ ೭೬
೧೫೧. S.I.I. Vol. IX, Part I, 31.

ಪದ್ಯದ ಮೂಲಕ ಜೀವನದ ಮೌಲ್ಯವಾದ, 'ಶೌರ್ಯ'ವನ್ನೇ ಮಧುರನು ಅಪಹಾಸ್ಯ ಮಾಡಿರುವನೆಂಬ ನಿಂದೆಗೆ ಗುರಿಯಾಗುತ್ತಾನೆ. ಆದುದರಿಂದ ರಣಭೂಮಿಯಲ್ಲಿ ಕಾದಿ ಮಡಿದ ವೀರವ್ಯಕ್ತಿಗಳನ್ನು ಕುರಿತು ಬರೆದ ಕಥೆಯೆಂದು ಇದರ ಅರ್ಥವಿರಲಿಕ್ಕಿಲ್ಲ.

'ಬೀರ' ಎಂಬುದು ಒಂದು ಕ್ಷುದ್ರದೇವತೆಯ ಹೆಸರು. ಬಸವಣ್ಣನವರು,

ಹಾಳು ಮೊರಡಿಗಳಲ್ಲಿ ಊರದಾರಿಗಳಲ್ಲಿ
ಕೆಱೆ ಬಾವಿ ಹೂಗಿಡ ಮರಂಗಳಲ್ಲಿ
ಗ್ರಾಮಮಧ್ಯಗಳಲ್ಲಿ ಚೌಪಥ ಪಟ್ಟಣ ಪ್ರದೇಶಗಳಲ್ಲಿ
ಹಿರಿಯಾಲದ ಮರದಲ್ಲಿ ಮನೆಯ ಮಾಡಿ,
ಕಱೆವೆಮ್ಮೆ, ಹಸುಗೂಸು, ಬಸುಱಿ, ಬಾಣತಿ,
ಕುಮಾರಿ, ಕೊಡಗೂಸೆಂಬವರ ಹಿಡಿದುಂಬ ತಿರಿದುಂಬ
ಮಾರಯ್ಯ ಬೀರಯ್ಯ ಕೇಚರಗಾವಿಲ ಅಂತರ ಬೆಂತಱ
... ... "[೧೫೨]

ಎಂದು ಈ ದೇವತೆಯನ್ನು ಕೀಳುದೃಷ್ಟಿಯಿಂದ ಕಂಡುದನ್ನು ಇಲ್ಲಿ ನೆನೆಯಬಹುದು. ಮಧುರನು ಇಂಥ ಕ್ಷುದ್ರದೇವತೆಯ ಕಥೆಯನ್ನೇ ಇಲ್ಲಿ ಅವಹೇಳನಗೈದಿರಬೇಕು. ಜೈನನಾದ ಈತನಿಗೆ ಡುಂಡುಚಿಯ ಮೇಲೆ, ಬೀದಿವಱಿಯ ಮೇಲೆ ದ್ವೇಷವಿಲ್ಲ. ದ್ವೇಷವಿರುವುದು ಗೊರವನ ಮೇಲೆ, ಬೀರನ ಮೇಲೆ. ಅದಕ್ಕಾಗಿ ಕೊಂಚ ಪಾಠವನ್ನು ತಿದ್ದುವುದರ ಮೂಲಕ ಬೀದಿವರೆಯನ್ನು ವಿಶೇಷಣ ಮಾಡಿಕೊಂಡು 'ಗೊರವರ ಡುಂಡುಚಿಯೇ? ಬೀದಿವಱಿಯ ಬೀರನ ಕತೆಯೇ?' ಎಂದು ಭಾವಿಸಿಕೊಳ್ಳುವುದು ಸೂಕ್ತವೆನಿಸುತ್ತದೆ.

"ಬೀದಿವಱಿಯ ಬೀರನಕತೆ" ಎಂಬ ತಿದ್ದಿದ ಪಾಠವನ್ನಿಟ್ಟುಕೊಂಡರೆ ಬೀದಿಯಲ್ಲಿ ಹಲಗೆಯನ್ನು ಬಾರಿಸುತ್ತ[೧೫೩]'ಬೀರನಕತೆ'ಯನ್ನು ಸಾರುತ್ತಿದ್ದರು, ಇಲ್ಲವೆ ಹಾಡುತ್ತಿದ್ದರು ಎಂಬ ಅರ್ಥ ಬರುತ್ತದೆ. ಬೀದಿಯ ಹಲಗೆಯನ್ನು ಅವಹೇಳನಗೈಯುವುದು ಮಧುರನಿಗೆ ಮುಖ್ಯವಲ್ಲವಾದುದರಿಂದ ಒಮ್ಮೆ ಅನ್ಯಮತೀಯ (ಗೊರವ)ರನ್ನು ಹೀಯಾಳಿಸಿದ ಅವನು, ಇನ್ನೊಮ್ಮೆ ಬೀರನನ್ನು ಹೀಯಾಳಿಸಿ ತನ್ನ ಮತೀಯ ಮನವನ್ನು ಸಂತೈಸಿಕೊಂಡಿರಬೇಕು. ಹೀಗೆ ಹಲಗೆ ಬಾರಿಸುತ್ತ ಓಣಿ ಓಣಿ ತಿರುಗುವ ಈ ಜಾನಪದ ಸಾಹಿತ್ಯಜಾತಿಯ ಉಲ್ಲೇಖ ಕ್ರಿ.ಶ. ಸು. ೧೩೮೫ರ ಮಧುರನ ಧರ್ಮನಾಥಪುರಾಣದಲ್ಲಿ ಕಂಡುಬರುತ್ತಿದ್ದರೂ, ಇದು ಜನಾಂಗದ ಬದುಕಿನಲ್ಲಿ ಬಹುದಿನಗಳಿಂದಲೂ ಬೆಳೆದು ಬಂದಿರಲು ಸಾಧ್ಯವಿದೆ. ಪಂಪನಿಗೆ ಪೂರ್ವದಲ್ಲಿ ಈ ಸಂಪ್ರದಾಯವಿರುವುದು ಆಶ್ಚರ್ಯವೇನಲ್ಲ.

ಜಾನಪದರ ಬಂಧಗಳನ್ನು ಚರ್ಚಿಸುವ ಈ ಸಂದರ್ಭದಲ್ಲಿ 'ಕುಱಿತೋದದೆಯುಂ ಕಾವ್ಯಪ್ರಯೋಗ ಪರಿಣತ ಮತಿಗಳ್" ಎಂಬ ಮಾತು ನಮ್ಮ ಗಮನ ಸೆಳೆಯುತ್ತದೆ. ಇಲ್ಲಿಯ "ಓದದೆಯುಂ" ಎಂಬುದು ನಿರಕ್ಷರಿಗಳಾದ ಜಾನಪದರನ್ನೇ ಸೂಚಿಸುತ್ತದೆ. ಓದದ ಕನ್ನಡಿಗ 'ಕಾವ್ಯಪ್ರಯೋಗ'ದಲ್ಲಿ ಪರಿಣತರೆಂದು ಇಲ್ಲಿ ಹೇಳಲಾಗಿದೆ. ಕಾವ್ಯಪ್ರಯೋಗವೆಂದರೆ ಶ್ರೋತೃಗಳ ಸಭೆಯಲ್ಲಿ ಕಾವ್ಯವನ್ನು ಅಭಿವ್ಯಕ್ತಗೊಳಿಸುವುದು, ಮತ್ತು

---

೧೫೨. ಭಕ್ತಿಭಂಡಾರಿ ಬಸವಣ್ಣನವರ ವಚನಗಳು, ಕಾಂಡ ೧. ವಚನ ೫೫೫

೧೫೩. "ಹಱಿಯ ಹೊಯಿಸಿ ಕುಱುಹ ಮೆಱಿಸುವರ ಮೆಚ್ಚ ಕೂಡಲಸಂಗಮದೇವ"-ಬ. ವಚನ. ೨೦೬

ವ್ಯಾಖ್ಯಾನಿಸುವುದು. ಈ ವಿವರಗಳಿಂದ ಜಾನಪದ ಗಾಯಕರ ಮತ್ತು ಅವರ ಪ್ರದರ್ಶನಗಳ ಒಂದು ಕಲ್ಪನೆ ಗಮನಕ್ಕೆ ಬರುತ್ತದೆ.

ಬೃಹದ್ದೇಶಿ ಮತ್ತು ಮಾನಸೋಲ್ಲಾಸೋಕ್ತ ಬಂಧಗಳು:

ಕನ್ನಡ ಛಂದೋಬಂಧಗಳನ್ನು, ಸಾಹಿತ್ಯಪ್ರಕಾರಗಳನ್ನು ಬಿಡಿಸಿ ಹೇಳುವ ಜಯಕೀರ್ತಿಯ ಛಂದೋನುಶಾಸನ, ಶಾರ್ಙ್ಗದೇವನ ಸಂಗೀತರತ್ನಾಕರಗಳಂತೆ ಮತಂಗನ ಬೃಹದ್ದೇಶಿ ಮತ್ತು ಸೋಮೇಶ್ವರನ ಮಾನಸೋಲ್ಲಾಸಗಳು ಮಹತ್ವಪೂರ್ಣ ಕೃತಿಗಳೆನಿಸಿವೆ.

ದೇಸಿಗೆ ಸಂಬಂಧಪಟ್ಟ ರಾಗ, ತಾಳ, ಪ್ರಬಂಧಗಳನ್ನು ಬೃಹತ್ಪ್ರಮಾಣದಲ್ಲಿ ಹೇಳಹೊರಟ ಬೃಹದ್ದೇಶಿಯಲ್ಲಿ ಕನ್ನಡದ ಕೆಲವು ಬಂಧಗಳ ವಿಷಯ ಹೀಗೆ ಬರುತ್ತದೆ:

> ತಾಲಶೂನ್ಯಾದಿ ತು ಯಃ ಪಾಟ್ಯೈರ್ವಿರೂತ್ಯೈಶ್ಚ ಸಮನ್ವಿತಃ।
> ಸ ಕನ್ದ ಇತಿ ಕರ್ಣಾಟಭಾಷಾದಿ ಪದಮಿಶ್ರಿತಃ॥[೧೫೪]
>
> ತಾಲೇನಾಪಿ ಚ ಯುಕ್ತಃ ಸ್ಯಾದ್ ವರ್ಣಃ ಕರ್ಣಾಟಕಭಾಷಯಾ।
> ಸ್ವರಾವಾಟ ಸಮಾಯುಕ್ತಾ ತಾಲೇನ ಚ ಸಮನ್ವಿತಾ ॥[೧೫೫]
>
> XXಕರ್ಣಾಟಭಾಷಾಯಾಮಥವಾ ಮಿಶ್ರಿತಾ ಯದಿ।
> ಸಂವಾದಕ ಪದೋ ಪೇತಃ ಸ ಭವೇಚ್ಛುಕಸಾರಿಕಃ ॥[೧೫೬]
>
> ಪ್ರಾಸ್ಯೈರ್ಮಾನೋಹರ್ಯೈರ್ದಿವ್ಯೈರಾದಿ ಮಧ್ಯಾಂತಗೋಚರೈಃ।
> ಏಲಾ ಕರ್ಣಾಟಕಾ ಪ್ರೋಕ್ತಾ ಲಲಿತಧ್ವನಿ ಸಂಯುತಾ॥[೧೫೭]

ಕರ್ಣಾಟಕಭಾಷಾ, ಕರ್ಣಾಟಭಾಷಯಾ, ಕರ್ಣಾಟಭಾಷಾಯಾಂ, ಕರ್ಣಾಟಕಾ ಶಬ್ದಗಳ ಮೂಲಕ ಕನ್ನಡದ ಕಂದ, ದಂಡಕ, ಶುಕಸಾರಿಕ, ಏಲಾ ಬಂಧಗಳ ಸ್ವರೂಪಲಕ್ಷಣ ಈ ಶ್ಲೋಕಗಳಲ್ಲಿ ಸೂಚಿತವಾಗಿದೆ. ಈ ಬೃಹದ್ದೇಶಿಯನ್ನು ಕುರಿತು "ಇದರ ಕರ್ತೃ ಮತಂಗ, ಸು. ಕ್ರಿ.ಶ. ೫ನೇ ಶತಮಾನದಲ್ಲಿದ್ದಿರಬೇಕೆಂಬುದು ಈಗ ಬಹುಮಟ್ಟಿಗೆ ಒಪ್ಪಿತವಾಗಿರುವ ಅಭಿಪ್ರಾಯ. ಈತನು ಕನ್ನಡನಾಡಿನವನು, ಮತ್ತು ಋಷ್ಯಮೂಕ ಪರ್ವತದ ಬಳಿಯಲ್ಲಿ ವಾಸಿಸುತ್ತಿದ್ದವನೆಂದು ತಿಳಿದುಬರುತ್ತದೆ" ಎಂದು ಡಾ. ತಿಪ್ಪೆರುದ್ರಸ್ವಾಮಿಗಳು[೧೫೮] ಹೇಳುತ್ತಾರೆ. ಆದರೆ "We know nothing of the date of its composition or the particulars of the life of the author Matanga" ಎಂದು ಸಂಪಾದಕರಾದ ಕೆ. ಸಾಂಬಶಿವ ಶಾಸ್ತ್ರಿಗಳು ಒಪ್ಪಿಕೊಂಡಿರುವಾಗ[೧೫೯] ಮತಂಗನು ಕನ್ನಡಿಗ, ಕಾಲ ೫ನೆಯ ಶತಮಾನ ಎನ್ನುವುದು ಆಧಾರಗಳನ್ನು ಬಯಸುತ್ತದೆ.

---

೧೫೪. ಬೃಹದ್ದೇಶೀ. ಪು. ೧೪೩
೧೫೫. ಬೃಹದ್ದೇಶೀ ಪು. ೧೪೪
೧೫೬. " ಪು. ೧೪೫
೧೫೭. "ಪು. ೧೫೨
೧೫೮. ಕರ್ನಾಟಕ ಸಂಸ್ಕೃತಿ ಸಮೀಕ್ಷೆ: ಪು. ೬೬೨
೧೫೯. ಬೃಹದ್ದೇಶಿ (Preface, P.1)

ಸರ್ವಜ್ಞ ಚಕ್ರವರ್ತಿ ಸೋಮೇಶ್ವರIIIನ (೧೧೨೯-೩೮) 'ಅಭಿಲಷಿತಾರ್ಥ ಚಿಂತಾಮಣಿ' ಅಥವಾ 'ಮಾನಸೋಲ್ಲಾಸ' ಸಾಂಪ್ರದಾಯಿಕ ಸಮಸ್ತ ಬದುಕನ್ನು ಪ್ರತಿಬಿಂಬಿಸುವ ಒಂದು ವಿಶ್ವಕೋಶ. ಇದರ 'ಗೀತ ವಿನೋದಃ' ವಿಭಾಗ ಕನ್ನಡ ಸಾಹಿತ್ಯಪ್ರಕಾರಗಳ ದೃಷ್ಟಿಯಿಂದ ಮಹತ್ವಪೂರ್ಣವಾಗಿದೆ. ಇಲ್ಲಿ ತ್ರಿಪದಿ, ಷಟ್ಪದಿಗಳ ಲಕ್ಷಣವನ್ನು ಲಕ್ಷ್ಯಸಹಿತ ಹೇಳಿ, ಯಾವ ಸಂದರ್ಭಗಳಲ್ಲಿ ಯಾವ ಸಾಹಿತ್ಯಪ್ರಕಾರಗಳನ್ನು ಹಾಡಬೇಕೆಂದೂ (೫೪೮-೫೫೫) ಸೂಚಿಸಲಾಗಿದ್ದು, ಅದನ್ನು ಡಿ.ಎಲ್.ಎನ್. ಮಾತುಗಳಲ್ಲಿ ಹೀಗೆ ಹೇಳಬಹುದು:[೧೯೦]

> "ತ್ರಿಪದಿಯನ್ನು, ಧಾನ್ಯವನ್ನು ಒರಳಿಗೆ ಹಾಕಿ ಕುಟ್ಟುವಾಗಲೂ (=ಕಂಡನ)
> ಶೃಂಗಾರ ವಿಪ್ರಲಂಬಗಳನ್ನು ವರ್ಣಿಸುವಾಗಲೂ ಹಾಡಬೇಕು."[೧೯೧]
> "ಕಥನಕಾವ್ಯದಲ್ಲಿ ಷಟ್ಪದಿಯನ್ನು ಬಳಸಬೇಕು"[೧೯೨]
> "ವಿವಾಹಕಾಲದಲ್ಲಿ ಧವಲವನ್ನು ಆಲಾಪಿಸಬೇಕು"
> "ಮಂಗಲಗೀತವನ್ನು ಉತ್ಸವಕಾಲದಲ್ಲಿ ಉಪಯೋಗಿಸಬೇಕು"
> "ಯೋಗಿಜನರು ಅಧ್ಯಾತ್ಮನಿರೂಪಣೆಯಲ್ಲಿ ಚರ್ಯಾ ಎಂಬ ಪ್ರಬಂಧವನ್ನು ರಚಿಸಿಕೊಳ್ಳಬೇಕು"
> "ಮಹಾರಾಷ್ಟ್ರದ ಸ್ತ್ರೀಯರು ಒನಕೆವಾಡಾಗಿ ಓವಿಯನ್ನು ಉಪಯೋಗಿಸುತ್ತಾರೆ"
> "ಚಚ್ಚರೀಪ್ರಬಂಧವನ್ನು ವಸಂತಕಾಲದ ಹೋಳೀಹಬ್ಬದಲ್ಲಿಯೂ (=ಹೋಲಿಕಾ), ವೀರ ವರ್ಣನೆಯಲ್ಲಿ ರಾಹುಡಿಯನ್ನೂ, ದಂತಿಯನ್ನು ಗೋಪಾಲಕರ ಸಂವಾದದಲ್ಲೂ ತಂತಮ್ಮ ಸಹಜ ಭಾಷೆಯಲ್ಲಿ ಹಾಡಬೇಕು."*

ಇನ್ನೊಂದೆಡೆ ಕನ್ನಡದ ಚೌಪದಿಯ ಲಕ್ಷ್ಯ-ಲಕ್ಷಣ ಕಂಡುಬರುತ್ತವೆ. ಸಾಮಾನ್ಯವಾಗಿ ಈ ಪ್ರಭೇದಗಳು ಜನಪದಕ್ಕೆ ಸಂಬಂಧಿಸಿದುವು. ಕ್ರಿ.ಶ. ೧೧೨೯ರ ಈ ಕೃತಿಯಲ್ಲಿ ಹೇಳಲಾದ ಕರ್ನಾಟಕ ವಿಷಯಜಾತಿಯ ತ್ರಿಪದಿ, ಚೌಪದಿ, ಷಟ್ಪದಿಗಳು ಮತ್ತು ಧವಲ, ಒನಕೆವಾಡುಗಳು ಪಂಪಪೂರ್ವಯುಗದ ಬಂಧಗಳೆಂಬುದು ಸುನಿಶ್ಚಿತ. ಇದರಂತೆ ಇಲ್ಲಿಯ ಮಿಕ್ಕ ಬಂಧಗಳೂ ಆ ಕಾಲದ ಜನತೆಯ ನಾಲಗೆಯ ಮೇಲೆ ನಲಿದಾಡುತ್ತಿರಬಹುದು.

ಇತರ ಲಕ್ಷಣಗ್ರಂಥಗಳು

ಹಿಂದೆ ವಿವೇಚಿಸಿದ ಉಪಲಬ್ಧ ಕವಿರಾಜಮಾರ್ಗ, ಅನುಪಲಬ್ಧ ಶಬ್ದಾವತಾರ, ಪ್ರಭುಸೇನೀಯ, ಕರ್ಣಾಟ ಛಂದಸ್ಸು, ಗುಣಗಾಂಕೀಯಗಳಲ್ಲದೆ ಇನ್ನೂ ಹಲವು ಲಕ್ಷಣಗ್ರಂಥಗಳ ಬಗೆಗೆ ಕೆಳಗಣ ಊಹೆಗಳನ್ನು ಮಂಡಿಸಬಹುದು.

---

೧೯೦. ಮಾನಸೋಲ್ಲಾಸದಲ್ಲಿ ಛಂದಸ್ಸು (ಪ್ರ.ಕ. ೪೫-೨)

೧೯೧. ಅಂಕದಲ್ಲಾಗಲಿ ಮಲ್ಲಯುದ್ಧದಲ್ಲಾಗಲಿ ಸೋತವನನ್ನು ರಾಗಯುಕ್ತವಾದ ಪರಿಹಾಸ ಗರ್ಭಿತವಾದ ಮತ್ತು ಮರ್ಮಭೇದಕವಾದ ನಿಂದೆಯನ್ನುಳ್ಳ ತ್ರಿಪದಿಗಳಿಂದ ಹಾಡಿಸಬೇಕು" (ಪ್ರ.ಕ. ೪೫-೨. ಪು. ೭೩) ಎಂಬ ಹೇಳಿಕೆಯನ್ನು ಜೋಡಿಸಿಕೊಳ್ಳಬೇಕು.

೧೯೨. "ಅದೇ ಗ್ರಂಥದ ಇನ್ನೊಂದೆಡೆಯಲ್ಲಿ (೪-೧೯-೧೪೨೫) ಚಿತ್ರಕಥನ ಲಕ್ಷಣವನ್ನು ಹೇಳುವಾಗ "ಕರ್ಣಾಟ ಭಾಷಯಾ ಯಸ್ತು ಷಟ್ಪದೀ ಪಠನೋದ್ಯತಃ" ಎಂದು ಹೇಳುವುದರಿಂದ ಚಿತ್ರಕಥಕನು ಷಟ್ಪದಿಯನ್ನು ಪಠಿಸುತ್ತಿದ್ದನು ಎಂದು ತಿಳಿದುಬರುತ್ತದೆ." (ಪ್ರ.ಕ. ೪೫-೨. ಪು. ೭೩) ಈ ಮಾತನ್ನೂ ನೆನೆಯಬೇಕು.

* ಮಾನಸೋಲ್ಲಾಸದಲ್ಲಿ ಕನ್ನಡ ಪದ್ಯಗಳು (ಮಾರ್ಗ-II ಪು. ೫೪೫)

ಕವಿರಾಜಮಾರ್ಗೋಕ್ತ ಸೂಚನೆಗಳು :

ಕವಿರಾಜಮಾರ್ಗದಲ್ಲಿ ಪ್ರಾಚೀನ ಶಾಸ್ತ್ರವಿಚಾರಗಳನ್ನು ಸೂಚಿಸುವ ಹಲವು ಪದ್ಯಗಳಿದ್ದು, ಅವುಗಳಲ್ಲಿ ಕೆಳಗಣ ಎರಡು ಪದ್ಯಗಳ ಕಡೆಗೆ ಶ್ರೀ ಮುಳಿಯ ಅವರು ಓದುಗರ ಗಮನ ಸೆಳೆದಿರುವರು.

ಸಕ್ಕದಮುಂ ಪಾಗದಮುಮ। ದಕ್ಕುಂ ಬಗೆದಂತೆ ಸಮಱಿ ಪೇೞಲ್ ಮುನ್ನಂ।
ನಿಕ್ಕುವಮೊಳವಪ್ಪುದಱಿಂ। ತಕ್ಕಂತವಱವಱ ಲಕ್ಷ್ಯಮುಂ ಲಕ್ಷಣಮುಂ ।।[೧೬೩]

ಅರಿದಾದಂ ಕನ್ನಡದೊಳ್। ತಿರಿಕೊೞಿಗೊಂಡಱಿಯೆ ಪೇೞ್ವೆನೆಂಬುದಿದಾರ್ಗಂ।
ಪರಮಾಚಾರ್ಯರವೋಲ್ ಸೈ। ತಿರಲಱಿಯರ್ ಕನ್ನಡಕ್ಕೆ ನಾಡವರೋಜರ್।।[೧೬೪]

ಸಾಹಿತ್ಯರಚನೆಗೆ ಸಂಸ್ಕೃತ, ಪ್ರಾಕೃತಗಳಲ್ಲಿ ಲಕ್ಷಣಗ್ರಂಥಗಳು ಖಚಿತ ಮಾರ್ಗದರ್ಶಕಗಳಾಗಿವೆ. ಆದರೆ ತಮತಮಗೆ ಸೂಕ್ತವೆನಿಸಿದ ರೀತಿಯಲ್ಲಿ ನಾಡವರಿಂದ ಬೆಳಸಲ್ಪಟ್ಟ ಕನ್ನಡ ಸಾಹಿತ್ಯಕ್ಕೆ, ನಾಡವರಾದ ಕನ್ನಡಿಗರೇ ಲಾಕ್ಷಣಿಕರು ಎಂದು ಈ ಪದ್ಯಕ್ಕೆ ಶ್ರೀ ಮುಳಿಯ ಅರ್ಥ ಹಚ್ಚುತ್ತಾರೆ.[೧೬೫] ಇದರಿಂದ ಕವಿರಾಜಮಾರ್ಗಕ್ಕೆ ಹಿಂದೆ ಕನ್ನಡದಲ್ಲಿ ಅಲಂಕಾರ ಛಂದಸ್ಸು ವ್ಯಾಕರಣ ಗ್ರಂಥಗಳಿರಲಿಲ್ಲವೆನ್ನಬೇಕಾಗುತ್ತದೆ. ಆದರೆ ಕವಿರಾಜಮಾರ್ಗದಲ್ಲಿ ಬಳಕೆಯಾದ "ಪೂರ್ವಾಚಾರ್ಯರ್, ಪೂರ್ವಶಾಸ್ತ್ರ ಪದವಿಧಿ, ಪ್ರಾಕ್ತನೋಕ್ತ ವರ್ಗಪ್ರಾಸಂ, ಪುರಾಣ ಶಾಸ್ತ್ರೋಕ್ತಂಗಳ್, ಆಗಮಕೋವಿದ ನಿಗದಿತಮಾರ್ಗಂ" ಎಂಬ ಪದಗಳಲ್ಲಿ ಕೆಲವು ಕೇವಲ ಸಂಸ್ಕೃತಕ್ಕೆ, ಕೆಲವು ಕೇವಲ ಕನ್ನಡಕ್ಕೆ, ಇನ್ನು ಕೆಲವು ಎರಡಕ್ಕೂ ಅನ್ವಯಿಸುತ್ತವೆ. ಶಬ್ದಾಲಂಕಾರ, ಅರ್ಥಾಲಂಕಾರ, ದಕ್ಷಿಣೋತ್ತರಮಾರ್ಗ ಮತ್ತು ಗುಣದೋಷಪ್ರಸಂಗದಲ್ಲಿ ಪೂರ್ವಶಾಸ್ತ್ರ ಇಲ್ಲವೆ ಪೂರ್ವಾಚಾರ್ಯರ ಪ್ರಸ್ತಾಪ ಬಂದಾಗ ಅವು ಸಂಸ್ಕೃತವನ್ನು ಕುರಿತುವೆಂದು ಭಾವಿಸಬಹುದು. ಆದರೆ ಸಮಸಂಸ್ಕೃತ ಮತ್ತು ಕನ್ನಡವನ್ನು ಬೆರಸುವಲ್ಲಿ 'ಅಱಿದು ಪೇೞ್ಗೆ' ಎಂಬ 'ಆಗಮಕೋವಿದ ನಿಗದಿತಮಾರ್ಗ', ಖಂಡಪ್ರಾಸವನ್ನು ಮನ್ನಿಸಿ ಯತಿಯನ್ನು ಮೀರಿದವರು "ಪೂರ್ವಾಚಾರ್ಯರ್", ವರ್ಗದ ನಾಲ್ಕು ಅಕ್ಷರಗಳನ್ನು ಪ್ರಾಸದಲ್ಲಿ ಮನ್ನಿಸಿದುದು "ಪ್ರಾಕ್ತನೋಕ್ತವರ್ಗಪ್ರಾಸ" ಎಂಬ ಕನ್ನಡಕ್ಕೆ ವಿಶಿಷ್ಟವಾದ ಈ ವಿಚಾರಗಳು, ಕವಿರಾಜಮಾರ್ಗಕ್ಕೆ ಹಿಂದೆ ಅರಿಸಮಾಸ, ಯತಿ, ಪ್ರಾಸ ಮುಂತಾದ ವಿಷಯಗಳನ್ನೊಳಗೊಂಡ ಲಕ್ಷಣಗ್ರಂಥಗಳಿದ್ದುದನ್ನು ಸೂಚಿಸುತ್ತವೆ. ಒಂದು ವೇಳೆ ಇರದೆ ಹೋದರೂ ಈ ವಿಷಯಗಳ ಬಗೆಗೆ ಖಚಿತವಾದ ಒಂದು ನಿಲುವು ಬೆಳೆದು ಬಂದಿತ್ತು ಎಂದು ಹೇಳಬಹುದು.

ನಾಗವರ್ಮ-ಗುಣವರ್ಮ-ಶಂಖವರ್ಮರ ಅಧ್ವಾನಂಗಳ್ :

ಪ್ರಣುತಗುಣರೆನಿಪ ವಿಬುಧಾ। ಗ್ರಣಿಗಳ್ ಕೆಯ್ಕೊಂಡು ಪೊಗೞೆ ಸಲೆ ನೆಗೞ್ದುವು ಧಾ।
ರಿಣಿಯೊಳಗೆ ನಾಗವರ್ಮನ। ಗುಣವರ್ಮನ ಶಂಖವರ್ಮನಧ್ವಾನಂಗಳ್ ।।[೧೬೬]

ಕಾವ್ಯಾವಲೋಕನಕಾರನು ಯಾವುದೋ ಒಂದು ಪ್ರಾಚೀನ ಕೃತಿಯ 'ಪೂರ್ವಕವಿಸ್ತುತಿಪ್ರಸಂಗ'ದಿಂದ ಎತ್ತಿಕೊಂಡ ಪದ್ಯವಿದು. ಇದನ್ನು ಕುರಿತು ಆರ್. ನರಸಿಂಹಾಚಾರ್ ಅವರು "Nagavarma Gunavarma and Sankhavarma were the leaders of three famous schools (of composition or

---

೧೬೩. ಕ.ಮಾ. ೧-೪೧
೧೬೪. ಕ.ಮಾ. ೧-೪೨
೧೬೫. ಕ.ಮಾ. ವಿವೇಕ, ೧೧೫
೧೬೬. ಕಾ.ಲೋ.ಪ. ೧೮೫

grammar) in Kannada" ಎಂದು ಹೇಳುತ್ತಾರೆ.[೧೬೭] ಆಧಾರಗಳ ಕೊರತೆಯಿಂದಾಗಿ ಈ ಅಭಿಪ್ರಾಯವನ್ನು ಸಂದೇಹದಲ್ಲಿಟ್ಟು ಈ ಮೂವರು ಬಾಳಿದ ಸಮಯವನ್ನು ಮಾತ್ರ ಇಲ್ಲಿ ವಿಚಾರಿಸಬಹುದಾಗಿದೆ.

ಈಗ ತಿಳಿದಮಟ್ಟಿಗೆ ನಾಗವರ್ಮII ನಿಗೆ ಪ್ರಾಚೀನನಾದ ಸುಪ್ರಸಿದ್ಧ ಗುಣವರ್ಮನೆಂದರೆ ಶೂದ್ರಕದ ಕರ್ತೃ. ಕವಿಚರಿತೆಕಾರರು ಹೇಳುವಂತೆ[೧೬೮] ಇಲ್ಲಿ ಹೇಳಲಾದ ಗುಣವರ್ಮನು ಈತನೇ ಎಂದೂ ಕಾಲ ಕ್ರಿ.ಶ. ೯೦೦ ಎಂದೂ ಇಟ್ಟುಕೊಳ್ಳಬಹುದು.

ಶಂಖವರ್ಮನು ನಾಗವರ್ಮII ನಿಗೆ ಹಿಂದೆ ಎಂಬುದು ಸತ್ಯ. "ಸಂದ ಶಂಖವರ್ಮನ ಬಗೆ"[೧೬೯] ಎನ್ನುವ ರುದ್ರಭಟ್ಟನ ಮಾತಿನಿಂದಲೂ ವಿಶೇಷ ತಿಳಿದುಬರುವುದಿಲ್ಲ. ಈತನು ಗುಣವರ್ಮI ನಿಗೆ ಸಮಕಾಲೀನನಾದ ಜೈನಕವಿ ಎನ್ನುವ ಎಚ್. ಶೇಷಯ್ಯಂಗಾರ್ ಅವರ,[೧೭೦] ಕಲಚೂರಿ ಮನೆತನದ ರಾಜಕುಮಾರ ಶಂಖವರ್ಮನು ಎನ್ನುವ ಆರ್. ನರಸಿಂಹಾಚಾರ್[೧೭೧] ಅವರ ಹೇಳಿಕೆಗಳು ಕಿಂಚಿತ್ ಆಧಾರವಿಲ್ಲದ ಊಹೆಗಳು. ಆದಕ್ಕಾಗಿ ಇವನು ಪಂಪನಿಗೆ ಪ್ರಾಚೀನನೋ ಅರ್ವಾಚೀನನೋ ಇನ್ನೂ ಸಂಶಯ.

ಈ ನಾಗವರ್ಮನನ್ನು ಕುರಿತು "Nagavarma must be the author of Chandombudhi and Kadambari" ಎಂದು ಆರ್. ನರಸಿಂಹಾಚಾರ್[೧೭೨] ಹೇಳುವಲ್ಲಿ ಈತನು ಪಂಪನಿಗೆ ಅರ್ವಾಚೀನನೆಂದು ಭಾವಿಸಿರುವರು. ಆದರೆ "ಗುಣವರ್ಮ, ಶಂಖವರ್ಮ ಇವರು ಜೈನಕವಿಗಳೂ (ಕ್ರಿ.ಶ. ೯೦೦) ಬಹು ಪ್ರಾಚೀನರೂ ಆಗಿರುವುದರಿಂದ ಅವರ ಜತೆಯಲ್ಲಿ ಒಬ್ಬನಾಗಿ ಸ್ತುತ್ಯನಾಗಿರುವ ಈ ನಾಗವರ್ಮನೂ ಒಬ್ಬ ಪ್ರಾಚೀನ ಜೈನಕವಿಯೇ ಆಗಿರಬೇಕು"- ಎಂದು ಎಚ್. ಶೇಷಯ್ಯಂಗಾರ್ ಅವರು ಊಹಿಸಿದ್ದಾರೆ.[೧೭೩] ಇದಲ್ಲದೆ ಜನ್ನನ "ಎನಗನಕೂಲಮಕ್ಕೆ......" ಎಂಬ ಪದ್ಯದಲ್ಲಿಯ 'ಜಿನೇಂದ್ರಪುರಾಣ ಕರ್ತೃ'ಗಳಲ್ಲಿ ಒಬ್ಬನಾದ ನಾಗವರ್ಮನು ಈತನೇ ಎಂದೂ, ಆರಾ ಹಸ್ತಪ್ರತಿಯೊಂದರ ಆಧಾರದಿಂದ ಈತನ ಕೃತಿ ವರ್ಧಮಾನಪುರಾಣವೆಂದೂ ಹೇಳುವರು. ಒಟ್ಟಿನಲ್ಲಿ 'ಪ್ರಣುತಗುಣರೆನಿಪ.......' ಎಂಬ ಪದ್ಯ'ಎನಗನುಕೂಲಮಕ್ಕೆ......' ಎಂಬ ಪದ್ಯಗಳಲ್ಲಿ ಬರುವ ನಾಗವರ್ಮ ಒಬ್ಬ, ಛಂದೋಂಬುಧಿ ಕಾದಂಬರಿಗಳ ನಾಗವರ್ಮ ಇನ್ನೊಬ್ಬ, ಕಾವ್ಯಾವಲೋಕನಾದಿಗಳ ನಾಗವರ್ಮ ಮತ್ತೊಬ್ಬ ಎಂದು ಇವರ ಅಭಿಪ್ರಾಯ. ಆದರೆ ಕಾದಂಬರಿಯು ಶೈವ ನಾಗವರ್ಮನ ಕೃತಿ, ಛಂದೋಂಬುಧಿ ಮಾತ್ರ ಶೈವ ನಾಗವರ್ಮ ಮತ್ತು ಜೈನ ನಾಗವರ್ಮರ ಎರಡು ಭಿನ್ನಕೃತಿಗಳ ಮಿಶ್ರಪ್ರತಿ[೧೭೪] ಎಂದು ನಮ್ಮ ಭಾವನೆ. ಹೀಗಾಗಿ ನಾವು ವಿವೇಚಿಸುತ್ತಿರುವ 'ಪ್ರಣುತಗುಣರೆನಿಪ.....' ಎಂಬ ಪದ್ಯದ ಜೈನನಾಗವರ್ಮನು ಕಾದಂಬರಿಯ ಕರ್ತೃವೂ, ಛಂದೋಂಬುಧಿಯಲ್ಲಿ ಸೇರಿಕೊಂಡವನೂ ಆದ ಶೈವ

---

೧೬೭. ಕಾ.ಲೋ. ಮುನ್ನುಡಿ. ಪು. ೬೮

೧೬೮. ಕ.ಕ.ಚ. ೨೫

೧೬೯. ಜ. ವಿಜಯ. (ಕ.ಕ.ಚ. ಪು. ೩೧೬)

೧೭೦. AORM. VII-i ನಾಗವರ್ಮ ಕವಿಗಳು ಎಷ್ಟು ಮಂದಿ?

೧೭೧. ಕಾ.ಲೋ. ಮುನ್ನುಡಿ Lxix.

೧೭೨. ಕಾ.ಲೋ. ಮುನ್ನುಡಿ Lxviii.

೧೭೩. ನಾಗವರ್ಮ ಕವಿಗಳು ಎಷ್ಟುಮಂದಿ? (AORM VII-i)

೧೭೪. ಪ್ರಾರಂಭದ ಹಿಂದೂ ದೇವತೆಗಳ ಸ್ತುತಿ, ತರುವಾಯದ ಅಜಿತಸೇನಾಚಾರ್ಯರ ಕೀರ್ತಿಘೋಷಣೆ. ಅಂತ್ಯದ ಶಿವ ಮತ್ತು ಜಿನರ ಪ್ರಶಸ್ತಿಗಳನ್ನು ಗಮನಿಸಬೇಕು.

ನಾಗವರ್ಮನಲ್ಲ. ಬಹುಶಃ 'ಅರಸಂ ರಕ್ಕಸಗಂಗಂ ಗುರುಗಳ್ ನೆಗಟ್ದಜಿತಸೇನ ಪಂಡಿತದೇವರ್ ಪೊರೆವ ನೃಪನಣ್ಣಂ' ಎಂಬ ಪರಿವಾರದಲ್ಲಿ ಬೆಳೆದ, ಛಂದೋಂಬುಧಿಯಲ್ಲಿ ಸೇರಿಕೊಂಡ ಇನ್ನೊಬ್ಬ ಜೈನ ನಾಗವರ್ಮನಾಗಿರಲು ಸಾಧ್ಯವಿದೆ. ಗುಣವರ್ಮ I ನೊಂದಿಗೆ ಹೇಳಿದ ಮಾತ್ರಕ್ಕೆ ಈ ನಾಗವರ್ಮನೂ ೯ನೆಯ ಶತಮಾನದವನೆಂದು ಶ್ರೀಯುತರು ಭಾವಿಸಿರುವರು. ಆದರೆ ಇಲ್ಲಿ ಕವಿಗೆ ಲಕ್ಷ್ಯವಿದ್ದುದು 'ವರ್ಮ' ಎಂಬ ಪದದೊಂದಿಗೆ ಕೊನೆಗೊಳ್ಳುವ ಹೆಸರುಗಳ ಕಡೆಗೆ. ಅದಕ್ಕಾಗಿ ಕಾವ್ಯಾವಲೋಕನದ 'ಪ್ರಣುತಗುಣರೆನಿಪ......' ಎಂಬ ಪದ್ಯದಲ್ಲಿ ಕಂಡುಬರುವ ನಾಗವರ್ಮನು ಛಂದೋಂಬುಧಿಯಲ್ಲಿ ಸೇರಿಕೊಂಡ ಅಜಿತಸೇನಾಚಾರ್ಯರ ಶಿಷ್ಯ ಜೈನ ನಾಗವರ್ಮನಾಗಿರಬಹುದು. ಇದು ನಿಜವಿದ್ದ ಪಕ್ಷದಲ್ಲಿ ಎಚ್. ಶೇಷಯ್ಯಂಗಾರ್ ಅವರು ಪಂಪಪೂರ್ವದಲ್ಲಿ ನಿಲ್ಲಿಸಿರುವ ಈತನನ್ನು ಅಜಿತಸೇನಾಚಾರ್ಯರ ತರುವಾಯ ತರಬೇಕಾಗುತ್ತದೆ. ಇತ್ತೀಚೆ ಲಭ್ಯವಾದ ಇಮ್ಮಡಿ ನಾಗವರ್ಮನ ವರ್ಧಮಾನಪುರಾಣದ ಪೀಠಿಕಾ ಭಾಗದಲ್ಲಿ ಪೊನ್ನನಿಗೆ ಪ್ರಾಚೀನವಾಗಿರಬಹುದಾದ ನಾಗವರ್ಮನನ್ನೂ ಅವನ ವತ್ಸರಾಜ ಚರಿತವನ್ನೂ ಸೂಚಿಸಲಾಗಿದೆ. ಬಹುಶಃ ಪಂಪಪೂರ್ವಯುಗದ ಇವನೇ 'ಅಧ್ವಾನ'ದ ಪ್ರವರ್ತಕನಾಗಿರುವ ಸಾಧ್ಯತೆಯಿದೆ.

ಒಟ್ಟಿನಲ್ಲಿ, ಗುಣವರ್ಮನು ಪಂಪನಿಗೆ ಪ್ರಾಚೀನನಾಗಿರಬಹುದು, ಶಂಖವರ್ಮನ ಬಗೆಗೆ ಸಂಶಯ, ನಾಗವರ್ಮನು ಪಂಪನಿಗೆ ಮೊದಲೋ ತರುವಾಯವೋ ಹೇಳುವುದು ಕಷ್ಟ. ಇದಲ್ಲದೆ 'ಅಧ್ವಾನ್' ಎಂಬ ಪದಕ್ಕೆ 'ಕಾವ್ಯಮಾರ್ಗ' ಎಂದು ಅರ್ಥವೋ ಅಲಂಕಾರ ಇಲ್ಲವೆ ವ್ಯಾಕರಣ ಪಂಥವೆಂದು ಅರ್ಥವೋ ಸ್ಪಷ್ಟವಾಗುವುದಿಲ್ಲ.

❖❖

೬

ಸಮೀಕ್ಷೆ

ಸಮೀಕ್ಷೆ

ಕವಿರಾಜಮಾರ್ಗ ಪರಿಸರದ ಕನ್ನಡಸಾಹಿತ್ಯವನ್ನು ಈ ಹಿಂದೆ ಬಿಡಿಯಾಗಿ ನೋಡಿದುದರ ಹಿನ್ನೆಲೆಯಲ್ಲಿ ಈಗ ಅದರ ಇಡಿಸ್ತರಗಳನ್ನು ತಕ್ಕಮಟ್ಟಿಗೆ ರೂಪಿಸಬಹುದಾಗಿದೆ. ತುಂಬ ಜಟಿಲವಾದ ಈ ಪುನರ್ವಿರಚನೆಯ ಕಾರ್ಯಕ್ಕೆ ಲಿಖಿತ ಪ್ರಮಾಣದೊಂದಿಗೆ ಊಹಿತ ಪ್ರಮಾಣಗಳನ್ನೂ ಆಶ್ರಯಿಸಬೇಕಾದುದು ಅನಿವಾರ್ಯ.[೧]

'ರಾಜಾ ಕಾಲಸ್ಯ ಕಾರಣಂ' ಎಂಬ ಮಾತು ಪ್ರಾಚೀನ ಭಾರತೀಯರ ಬದುಕಿಗೆ ಬರೆದ ಒಂದು ಅರ್ಥವತ್ತಾದ ಸೂತ್ರ. ಪ್ರಜಾಜೀವನದ ಪ್ರವಾಹವನ್ನೇ ಹೊಸದಿಕ್ಕಿಗೆ ತಿರುಗಿಸಬಲ್ಲ ಬುದ್ಧಿಶಾಲಿಗಳನ್ನು-ಯುದ್ಧವೀರರನ್ನು ಅಮಾತ್ಯ-ಸೇನಾಪತಿ ಎಂದು ಹೆಸರಿಟ್ಟು ತನ್ನ ವಶಪಡಿಸಿಕೊಳ್ಳುವುದರ ಮೂಲಕ ಸಮಾಜದ ಗಜದಂತವನ್ನು ಭದ್ರವಾಗಿ ಹಿಡಿವ ಅರಸ, ಅದರ ಹಣೆಯ ಬರಹವನ್ನು ಬರೆಯುವ ಒಂದು ಪ್ರಮುಖಶಕ್ತಿ ಎನಿಸಿದ್ದನು. ಇಂಥ ಅರಸ ಮತ್ತು ಅರಸುಮನೆತನಗಳ ಉನ್ನತಿ-ಅವನತಿಗಳು ಸಮಾಜದ ಮತ್ತು ಸಮಾಜಧ್ವನಿಯೆನಿಸುವ ಸಾಹಿತ್ಯದ ಉನ್ನತಿ-ಅವನತಿಗಳೆನಿಸಿದ್ದವು. 'ಗುಪ್ತರ ಕಾಲದ ಸಾಹಿತ್ಯ' 'ಪ್ರೌಢದೇವರಾಯನ ಕಾಲದ ಸಾಹಿತ್ಯ' ಎಂಬಿವು ಈ ಅರ್ಥದ ಶೀರ್ಷಿಕೆಗಳು.

ಪ್ರಾಚೀನ ಭಾರತೀಯರ ಬದುಕನ್ನು ರೂಪಿಸಿದ ಇನ್ನೊಂದು ಪ್ರಬಲಶಕ್ತಿ ಧರ್ಮ. ಕಾರಣಪುರುಷನೊಬ್ಬನು ತಾನು ಕಂಡ ವಿನೂತನ ಸತ್ಯವನ್ನು ವಿಶ್ವಕ್ಕೆ ಸಾರುವಲ್ಲಿ, ಅದನ್ನು ಒಪ್ಪಿಕೊಂಡ ಜನಾಂಗವೂ ಅದರ ಮಹತಿಯನ್ನು ಕಾಲಕಾಲಕ್ಕೆ ಕೀರ್ತಿಸುತ್ತದೆ. ಬುದ್ಧ-ಅಶ್ವಘೋಷ, ಬಸವ-ಚಾಮರಸರು ಇದಕ್ಕೆ ಉದಾಹರಣೆ. ಇಂಥ ಜನಾಂಗದ ಉತ್ಥಾನ-ಪತನಗಳ ಬೆಳಕು-ಕತ್ತಲೆ ಅವರವರ ಸಾಹಿತ್ಯಕ್ಕೂ ಬಡಿದುಕೊಳ್ಳುತ್ತದೆ. ಕನ್ನಡದ ಜೈನ, ವೀರಶೈವ ಮತ್ತು ಬ್ರಾಹ್ಮಣಯುಗ ಎಂಬ ಶೀರ್ಷಿಕೆಗಳು ಈ ಅರ್ಥವನ್ನೊಳಗೊಂಡಿವೆ.

ಒಟ್ಟಿನಲ್ಲಿ, ಪ್ರಾಚೀನಕಾಲದಲ್ಲಿ ಸಾಮ್ರಾಜ್ಯವನ್ನಾಧರಿಸಿ ಒಂದು ದೇಶದ ಸಾಹಿತ್ಯ, ಧರ್ಮವನ್ನವಲಂಬಿಸಿ ಒಂದು ಜನಾಂಗದ ಸಾಹಿತ್ಯ ಏರಿ-ಇಳಿದು ನಡೆದಿವೆ. ಶಾತವಾಹನ, ಕದಂಬ, ಗಂಗ, ಚಾಲುಕ್ಯ ಮತ್ತು ರಾಷ್ಟ್ರಕೂಟ ಇವು ಪಂಪಪೂರ್ವಯುಗದ ಪ್ರಮುಖ ಕನ್ನಡ ರಾಜಮನೆತನಗಳು. ಇವುಗಳಲ್ಲಿ ಕರ್ನಾಟಕದ ರಾಜಕೀಯ ಇತಿಹಾಸದಲ್ಲಿ ಮೊದಲಿಗರೆನಿಸಿದ ಶಾತವಾಹನರ ಶಾಸನಗಳ ಭಾಷೆ ಪ್ರಾಕೃತ. ಈ ಮನೆತನದ ಹಾಲಮಹಾರಾಜನು ತನ್ನ ಗಾಥಾಸಪ್ತಶತಿಯಲ್ಲಿ 'ಅಮಿಅಂ ಪಾಉಅ ಕವ್ವಂ'[೨](ಅಮೃತಂ ಪ್ರಾಕೃತ ಕಾವ್ಯಂ) ಎಂದು ಹೇಳಿದುದು, ಇವರ ಪ್ರಾಕೃತಪ್ರಿಯತೆಯ ದ್ಯೋತಕ.

---

೧. i. ಸಿಂಧೂ ಸಂಸ್ಕೃತಿ ಕನ್ನಡಿಗರದು. ii. ಗ್ರೀಕ ಪ್ರಹಸನದಲ್ಲಿ ಕನ್ನಡ ಮಾತುಗಳು iii. ಗಾಥಾ ಸಪ್ತಶತಿಯಲ್ಲಿ ಕನ್ನಡ ಪದಗಳು. iv. ಟಾಲೆಮಿ ಕಂಡ ಕರ್ನಾಟಕ.
ಈ ವಿಷಯಗಳು ಇನ್ನೂ ಅಡ್ಡಗೋಡೆಯ ಮೇಲೆ ನಿಂತಿವೆ. ಇವುಗಳ ಚರ್ಚೆಯಿಂದ ಬಹಳವೆಂದರೆ ಕನ್ನಡ ಜನಾಂಗವಿತ್ತು. ಕನ್ನಡಭಾಷೆಯಿತ್ತು ಎಂಬ ಫಲ ದೊರೆಯಬಹುದೇ ಹೊರತು ಸಾಹಿತ್ಯವಿದ್ದಿತೆಂದು ವ್ಯಕ್ತವಾಗದು.

೨. ಗಾಥಾಸಪ್ತಶತೀ. ಶ್ಲೋ. ೨. (ಜೋಗಳೆಕರ ೧೯೫೬)

"ಶ್ರೂಯತೇ ಚ ಕುಂತಲೇಷು ಸಾತವಾಹನೋ ನಾಮ ರಾಜಾ
ಯೇನ ಪ್ರಾಕೃತ ಭಾಷಾತ್ಮಕಮೇವ ಅಂತಃಪುರ ಇತಿ ಸಮಾನಂ ಪೂರ್ವೇಣ"[೩]

ಅಂದರೆ ತನ್ನ ಅರಮನೆಯಲ್ಲಿ ಪ್ರಾಕೃತವನ್ನು ಮಾತ್ರ ಬಳಸಲು ಸಾತವಾಹನನು ಅಪ್ಪಣೆ ನೀಡಿದ್ದನು -ಎಂಬ ರಾಜಶೇಖರನ ಹೇಳಿಕೆಯನ್ನು ನೆನೆದರೆ, ಈ ಅರಸುಮನೆತನದ ಅವಧಿಯಲ್ಲಿ ಪ್ರಾಕೃತವು ಆಡಳಿತ ಮತ್ತು ಆಸ್ಥಾನ ಪಂಡಿತರ ಭಾಷೆಯಾಗಿರಬಹುದೆನಿಸುತ್ತದೆ.

ಬೌದ್ಧರಾದ (?) ಶಾತವಾಹನರ ಆಳಿಕೆ ಮುಗಿದು ೪ನೆಯ ಶತಮಾನದ ಮಧ್ಯದಲ್ಲಿ ಕರ್ನಾಟಕದಲ್ಲಿ ವೈದಿಕರಾದ ಕದಂಬರು ತಲೆಯೆತ್ತಿದರು. ಈಗ ಕ್ರಮೇಣ ಪ್ರಾಕೃತ ಸರಿದು ಸಂಸ್ಕೃತವು ಪ್ರೌಢರೂಪದಲ್ಲಿ ಆಡಳಿತ ಮತ್ತು ಆಸ್ಥಾನಭಾಷೆಯಾಗುತ್ತಿದ್ದಂತೆಯೇ, ಲಿಪಿಗಿಳಿಯಲಾರಂಭಿಸಿದ್ದ ಕನ್ನಡವೂ ತಕ್ಕಮಟ್ಟಿನ ಶುದ್ಧ ಬರವಣಿಗೆಯನ್ನು ಈಗ ಸಾಧಿಸಿಕೊಂಡಂತಿದೆ. ಈ ಮನೆತನಕ್ಕೆ ಸಂಬಂಧಪಟ್ಟ, ಸಮಕಾಲೀನ ಸಂಸ್ಕೃತ ಭಾಷೆಯ ತಾಳಗುಂದ ಶಾಸನ, ಕನ್ನಡ ಭಾಷೆಯ ಹಲ್ಮಿಡಿ ಶಾಸನಗಳನ್ನು ನೋಡಿದರೆ ಒಂದರ ಸಿದ್ಧಿ ಇನ್ನೊಂದರ ಸಾಧನೆ ಗಮನಕ್ಕೆ ಬರುತ್ತದೆ. ತರುವಾಯದ ಗಂಗ, ಚಾಲುಕ್ಯ ಮನೆತನಗಳ ಕಾಲದಲ್ಲಿ ಕನ್ನಡ ತನ್ನ ಲಿಪಿಸಾಮರಸ್ಯದ ಹೋರಾಟದಲ್ಲಿ ಪ್ರಗತಿ ಸಾಧಿಸಿದಂತಿದೆ. ಮುಂದೆ ವಿಮಲೋದಯ ಮೊದಲಾದ ಗದ್ಯಕವಿಗಳ, ಶ್ರೀವಿಜಯ ಮೊದಲಾದ ಪದ್ಯಕವಿಗಳ ಕೈಯಲ್ಲಿ ಸಶಕ್ತವಾಗುತ್ತಿದ್ದಂತೆಯೇ ಈ ಕಡೆ ಗಂಗಮಂಡಲದ ಗಂಗಮನೆತನದಲ್ಲಿ ಶಿವಮಾರ, ವೆಂಗಿಮಂಡಲದ ಚಾಲುಕ್ಯಮನೆತನದಲ್ಲಿ ಗುಣಕವಿಜಯಾದಿತ್ಯ, ಮಧ್ಯದ ಕುಂತಳನಾಡಿನ ರಾಷ್ಟ್ರಕೂಟ ಮನೆತನದಲ್ಲಿ ನೃಪತುಂಗ-ಇವರಿಂದಾಗಿ ಹೊಸ ರೂಪ ಪಡೆದು ಮೈಮುರಿದು ಏಳಲು ಅನುಕೂಲ ಸನ್ನಿವೇಶ ಪ್ರಾಪ್ತವಾಗಿರಬಹುದೆಂದು ಸಾಹಿತ್ಯ, ಶಾಸನ, ಮತ್ತು ರಾಜಕೀಯ ಅಭ್ಯಾಸಗಳಿಂದ ತಿಳಿದುಬರುತ್ತದೆ. ತರುವಾಯ ಗಂಗರ ಎರೆಯಪ್ಪ, ಚಾಲುಕ್ಯ ಅರಿಕೇಸರಿII,ರಾಷ್ಟ್ರಕೂಟ ಕೃಷ್ಣ IIIರಲ್ಲಿ ಈ ಬೆಳೆ ಮುಗಿಲುದ್ದ ಬೆಳೆಯಿತು.

ಹೀಗೆ ರಾಜಾಶ್ರಯದಲ್ಲಿ ಸಾಗಿಬಂದ ನಮ್ಮ ಪ್ರಾಚೀನ ಸಾಹಿತ್ಯದ ಪರಮ ಗುರಿ ಧರ್ಮವಾದುದರಿಂದ, ಸಾಹಿತ್ಯಚರಿತ್ರೆಯಲ್ಲಿ ಧರ್ಮದ ಇತಿಹಾಸವೂ ಗಮನಿಸಬೇಕಾದ ಅಂಶವಾಗಿದೆ. ಕರ್ನಾಟಕದ ಮಟ್ಟಿಗೆ ಲಿಖಿತರೂಪದಲ್ಲಿ ಗೊತ್ತಾಗುವ ಪ್ರಥಮ ಭಾಷೆ ಪ್ರಾಕೃತ, ಪ್ರಥಮ ಧರ್ಮ ಬೌದ್ಧ. ಈ ಪ್ರಥಮಹಂತದಲ್ಲಿ ಇರಬಹುದಾದ ಶೈವ ವೈಷ್ಣವಗಳ ವಿಷಯ ಏನೂ ತಿಳಿದು ಬಂದಿಲ್ಲ. ಕ್ರಿ.ಶ.ಪೂ. ೩೦೦ರ ಅಶೋಕನ ಶಾಸನ ಮತ್ತು ಕ್ರಿ.ಶ. ೪ನೆಯ ಶತಮಾನದ ವರೆಗಣ ಶಾತವಾಹನರ ಶಾಸನಗಳು ಪ್ರಾಚೀನಕರ್ನಾಟಕದ ಬೌದ್ಧಧರ್ಮವನ್ನು ಸೂಚಿಸುತ್ತವೆ. ಈ ಅವಧಿಯಲ್ಲಿ ಕೇವಲ ಬಾಯಿ ಭಾಷೆಯಾಗಿರಬಹುದಾದ ಕನ್ನಡಕ್ಕೆ ಬೌದ್ಧರ ಸಾಹಿತ್ಯಿಕ ಕೊಡುಗೆಯನ್ನು ಅಪೇಕ್ಷಿಸುವಂತಿಲ್ಲ. ಇಲ್ಲಿಂದ ಮುಂದೆ ೧೩ನೆಯ ಶತಮಾನದ ಕೋಳಿವಾಡ ಶಾಸನದ ವರೆಗೆ ಆಗಾಗ ಬೌದ್ಧರ ಉಸಿರು ಕೇಳಿ ಬರುತ್ತಿದ್ದರೂ ಅಲ್ಲಲ್ಲಿ ಕುರುಹು ಕಂಡು ಬರುತ್ತಿದ್ದರೂ ಅವರ ಕನ್ನಡ ಕೃತಿರಚನೆಗೆ ಒಂದೂ ಗಟ್ಟಿ ಆಧಾರಗಳಿಲ್ಲ. ಕವಿರಾಜಮಾರ್ಗಕಾರನು ಹೇಳುವ ವಿಮಲೋದಯ ಮೊದಲಾದವರಲ್ಲಿ ಕೆಲವರು ಬೌದ್ಧರಾಗಿರಬಹುದೆಂಬ ವೆಂಕಣ್ಣಯ್ಯನವರ ಊಹೆ[೪] ಇನ್ನೂ ಊಹೆಯಾಗಿಯೇ ಉಳಿದಿದೆ. ಹೀಗಾಗಿ ಕನ್ನಡಕ್ಕೆ ಬೌದ್ಧರ ಕೊಡುಗೆ ಇನ್ನೂ ಒಂದು ನಿಗೂಢ ಸಮಸ್ಯೆಯಾಗಿ ನಿಂತಿದೆ.

---

೩. ಕಾವ್ಯಾನುಶಾಸನ (ಹೇಮಚಂದ್ರ)

೪. ಕನ್ನಡದಲ್ಲಿ ಬೌದ್ಧರೂ ಗ್ರಂಥಗಳನ್ನು ಬರೆದಿದ್ದಾರೆಯೇ? (ಪ್ರ.ಕ. ೨-೩)

ಬೌದ್ಧಮತದ ತರುವಾಯ ಕರ್ನಾಟಕದಲ್ಲಿ ತೋರುವುದು ಜೈನ. ಇದರ ಆಗಮನ ಅಶೋಕನ ಮೊಮ್ಮಗ ಸಂಪ್ರತಿ ಚಂದ್ರಗುಪ್ತನ ಸಮಯವೆಂದು ಪಂಡಿತರ ಮತ.[೫] ಈ ಸುಮಾರಿಗೆ ಇನ್ನೂ ಆಡುನುಡಿಯ ಅವಸ್ಥೆಯಲ್ಲಿರಬಹುದಾದ ಕನ್ನಡವನ್ನು ಬಿಟ್ಟು, ಮೊದಮೊದಲಿನ ಜೈನರು ಪ್ರಾಕೃತ ಇಲ್ಲವೆ ಸಂಸ್ಕೃತಗಳಲ್ಲಿ ಕೃತಿರಚನೆ ಗೆಯ್ದಿರಬೇಕು. ಆದರೆ ಕನ್ನಡಸಾಹಿತ್ಯವು, ಬರವಣಿಗೆಯನ್ನು ಪಡೆದ ಪ್ರಾರಂಭದಲ್ಲಿ ಒಂದು ಕಡೆ ಈ ನಾಡಿನ ಶೈವ ವೈಷ್ಣವರ ಸಂಸ್ಕೃತ ವ್ಯಾಮೋಹ, ಇನ್ನೊಂದು ಕಡೆ ಬೌದ್ಧಧರ್ಮದ ಶಕ್ತಿಪತನ-ಇವುಗಳಿಂದಾಗಿ ಕನ್ನಡವನ್ನು ಪೋಷಿಸುವ ಹೊಣೆ ಜೈನರ ಹೆಗಲೇರಿರಬೇಕು. ಈ ಪ್ರಯತ್ನವನ್ನು ಮುಂದುವರಿಸುತ್ತ ಇವರು ಲೌಕಿಕ-ಧಾರ್ಮಿಕವೆಂಬ ಎರಡು ಮಾರ್ಗಗಳನ್ನೇ ತೆರೆದು ಕೊಟ್ಟರು; ಕನ್ನಡ ಸಾಹಿತ್ಯಕ್ಕೆ ಭದ್ರಬುನಾದಿಯನ್ನೇ ಹಾಕಿದರು.

ಹೀಗೆ ಪ್ರಾರಂಭದಿಂದ ಸಾಮ್ರಾಜ್ಯ ಮತ್ತು ಧರ್ಮಗಳನ್ನಾಶ್ರಯಿಸಿ, ಪ್ರಜಾಸ್ತೋಮದ ಲೌಕಿಕ ಮತ್ತು ಧಾರ್ಮಿಕ ಬದುಕನ್ನು ಚಿತ್ರಿಸುತ್ತ ಈ ನಾಡಿನಲ್ಲಿ ಸಾಹಿತ್ಯ ಸಾಗಿಬಂದಿದೆ. ಆದರೆ ಸಂಸ್ಕೃತ-ಪ್ರಾಕೃತ ಸಾಹಿತ್ಯಗಳು ಪ್ರತಿಷ್ಠಿತರ ಸ್ತರದಲ್ಲಿ, ಕನ್ನಡಸಾಹಿತ್ಯ ಪ್ರಜಾವರ್ಗದ ಸ್ತರದಲ್ಲಿ ಬೆಳೆದು ಬರುವಲ್ಲಿ ಮೇಲಣ ಸ್ತರದ ಸಂಸ್ಕೃತ-ಪ್ರಾಕೃತಗಳ ಪ್ರಭಾವ ಕೆಳಗಣ ಸ್ತರದ ಕನ್ನಡದಲ್ಲಿ ಇಳಿದು ಬಂದಿತು. ಬಂಧದಲ್ಲಿ ಯತಿ, ಆದಿಪ್ರಾಸ, ಭಾಷೆಯಲ್ಲಿ ಸಂಸ್ಕೃತ-ಕನ್ನಡ ಎಂಬ ಘರ್ಷಣೆಗಳು ಮೊದಲಿನಿಂದಲೂ ನಡೆದು ಬಂದು ೪-೫ನೆಯ ಶತಮಾನದ ಹೊತ್ತಿಗೆ ಒಂದು ಒಡಂಬಡಿಕೆಯ ಮೈತ್ರಿ ಸಾಧ್ಯವಾಗಿದೆ. ಹೀಗಿದ್ದರೂ ಸಂಸ್ಕೃತದತ್ತ ಒಲವು ತೋರಿಸಿದ ಲಕ್ಷಣಪ್ರಧಾನವಾದ 'ಮಾರ್ಗ', ಕನ್ನಡದತ್ತ ಒಲವು ತೋರಿಸಿದ ಲಕ್ಷ್ಯಪ್ರಧಾನವಾದ 'ದೇಸಿ' ಎಂಬ ಎರಡು ಶಾಖೆಗಳು ಅಸ್ತಿತ್ವದಲ್ಲಿ ಬರುವುದು ತಪ್ಪಲಿಲ್ಲ. ಈ ಭೇದ ಕನ್ನಡದಲ್ಲಿ ಕೊನೆತನಕ ಉಳಿದುಬಂದಿತು.

ದೇಸಿಯೆನ್ನುವುದು, ಪ್ರಾದೇಶಿಕ ಸಾಹಿತ್ಯ. ಇದರ ರೂಪರೇಷೆಯ ವಿಧಾತೃಗಳು ಪ್ರಜಾವರ್ಗ. ಕವಿರಾಜಮಾರ್ಗಪೂರ್ವದ ದೇಸಿ ಸಾಹಿತ್ಯದಲ್ಲಿ ಅಂತರ್ಗತವಾದ ಚತ್ತಾಣ-ಬೆದಂಡೆಗಬ್ಬ, ಒನಕೆವಾಡು-ಓವನಿಗೆ, ಅಂಟಸುಂಟಿ, ಜೋಕುಮಾರನ ಹಾಡು, ಧವಳದ ಹಾಡು, ಬೀರನಕತೆ ಇತ್ಯಾದಿಗಳಲ್ಲಿ ಚತ್ತಾಣ-ಬೆದಂಡೆಗಬ್ಬಗಳು ಮಾತ್ರ ಶ್ರೀವಿಜಯ ಕವೀಶ್ವರ ಪಂಡಿತ ಚಂದ್ರ ಲೋಕಪಾಲಾದಿಗಳಿಂದ ಉನ್ನತಿಸಲ್ಪಟ್ಟು ಲಿಖಿತ ದೇಸಿ ಪ್ರಕಾರಗಳಾದುವು. ಮಿಕ್ಕುವು ಸಾಮಾನ್ಯರ ಮಧ್ಯ ಅಲಿಖಿತ ರೂಪದಲ್ಲಿ ಉಳಿದವು. ಮಾನಸೋಲ್ಲಾಸ ವಿವಿಧ ದೇಸಿಬಂಧಗಳನ್ನು ಹಾಡಬೇಕಾದ ಸಂದರ್ಭಗಳನ್ನು, ತ್ರಿಪದಿಯ ಹಾಡುವ ರೀತಿಯನ್ನು ಹೇಳುವುದು ಪಂಪಪೂರ್ವದ ದೇಸಿ ಪ್ರಾಚುರ್ಯವನ್ನು ಸೂಚಿಸುತ್ತದೆ. ಛಂದೋನುಶಾಸನದ ಪ್ರಕಾರ ಶೃಂಗಾರಪಿಂಡದಲ್ಲಿ ಅಲ್ಪಾಕ್ಷರ, ಕರ್ಣಾಟೇಶ್ವರ ಕಥೆಯಲ್ಲಿ ಅಂತರಾಕ್ಷರ, ಕರ್ಣಾಟ ಮಾಲತೀಮಾಧವದಲ್ಲಿ ಮಧ್ಯಮಾಕ್ಷರ, ಕುಮಾರಸಂಭವದಲ್ಲಿ ಸಮಾನಾಕ್ಷರ ಮತ್ತು ಛಂದೋವತಂಸ, ಚೂಡಾಮಣಿಯಲ್ಲಿ ಚತುಷ್ಪದಿಕಾ ಎಂಬ ದೇಸಿ ವೃತ್ತಗಳು ಎಡೆಪಡೆದುದು, ಇವುಗಳಿಗೆ ಸಿಕ್ಕ ಮನ್ನಣೆಯ ದ್ಯೋತಕವಾಗಿದೆ. ಪದ್ಯಸಾಹಿತ್ಯದ ಬೆಳವಣಿಗೆ ತ್ವರಿತ, ಗದ್ಯಸಾಹಿತ್ಯದ ಬೆಳವಣಿಗೆ ಮಂದ. ಹೀಗಾಗಿ ಈ ಆರಂಭಕಾಲದ ದೇಸಿಸಾಹಿತ್ಯದಲ್ಲಿ ಪದ್ಯಪ್ರಮಾಣ

---

೫. ಕರ್ಣಾಟಕಕ್ಕೆ ಜೈನಧರ್ಮದ ಆಗಮನ (ಸಾ.ಪ. ೨೬-೧, ೨) ಗೋವಿಂದ ಪೈ.

ವಿಶೇಷವಾಗಿರಬಹುದು. ಬದುಕಿನ ಸುಖದುಃಖಗಳನ್ನೋ ಕಣ್ಣೆದುರು ಜರುಗಿದ ಒಂದು ಘಟನೆಯನ್ನೋ ಗೀತಗೊಳಿಸಿ ಹೇಳುವ 'ನಿರತಿಶಯ ವಸ್ತು'ವುಳ್ಳ ಇವು ಶ್ರೀವಿಜಯಕವೀಶ್ವರಾದಿಗಳಿಂದ ಪೂರ್ಣತೆ ಪಡೆದು, ಕನ್ನಡದಲ್ಲಿ ವರ್ಣಕಸಾಹಿತ್ಯಕ್ಕೆ ದಾರಿಮಾಡಿಕೊಟ್ಟವು.

ಹೀಗೆ ದೇಸಿ ಸಾಹಿತ್ಯ ಬೆಳೆದು ಬರುತ್ತಿದ್ದಂತೆ ಜೊತೆಗೆ ಗದ್ಯಪದ್ಯ ಮಿಶ್ರಣವಾದ 'ಗದ್ಯಕಥಾ' ಹೆಸರಿನ ಮಾರ್ಗಸಾಹಿತ್ಯ ಪ್ರಕಾರವೂ ಹುಟ್ಟಿರಬೇಕು. ಇದರ ಚೌಕಟ್ಟು ಕನಿಷ್ಠಪಕ್ಷ ದುರ್ವಿನೀತನ ಕಾಲಕ್ಕೆ ಸಿದ್ಧವಾಗಿದ್ದಿತೆಂದು ಕವಿರಾಜಮಾರ್ಗದಿಂದ ತಿಳಿದುಬರುತ್ತದೆ.

ಮುನುಮಾರ್ಗ ಕವಿತಲೋಕಂ
ಬುನ ವೆಲಯಗ ದೇಶಿ ಕವಿತ ಪುಟ್ಟಂಚಿ ತೆನುಂ।
ಗುನು ನಿಲ್ಪಿರಂಧ್ರ ವಿಷಯಂ
ಬುನಜನ ಚಾಳುಕ್ಯರಾಜು ಮೊದಲಗು ಪಲುವುರ್॥

"ಮೊದಲು ಲೋಕದಲ್ಲಿ ಮಾರ್ಗಕವಿತ್ವವು ಪ್ರಸಿದ್ಧವಿದ್ದಾಗ ದೇಶಿಕವಿತ್ವವನ್ನು ಸೃಷ್ಟಿಸಿ ಚಾಳುಕ್ಯರಾಜ ಮೊದಲಾದ ಹಲವರು ಆಂಧ್ರಪ್ರದೇಶದಲ್ಲಿ ತೆಲುಗನ್ನು ನಿಲ್ಲಿಸಿದರು"[೬]- ಎಂದು ನನ್ನೆಚೋಡ ಹೇಳುತ್ತಾನೆ. ಇಲ್ಲಿ ಮಾರ್ಗಕವಿತ್ವವೆಂದರೆ ಕನ್ನಡ ಮಾರ್ಗಸಾಹಿತ್ಯ, ಚಾಳುಕ್ಯರಾಜನೆಂದರೆ ೯ನೆಯ ಶತಮಾನದ ಗುಣಕವಿಜಯಾದಿತ್ಯ ಎಂದು ತೆಲುಗು ಪಂಡಿತರ ಅಭಿಪ್ರಾಯ. ಹೀಗಾಗಿ ತೆಲುಗು ಸಾಹಿತ್ಯ ಅದೇ ಆಗ ಎಚ್ಚರಗೊಳ್ಳುವಲ್ಲಿ ಕನ್ನಡದ ಗದ್ಯಕಥೆ ಮೊದಲಾದ ಮಾರ್ಗಸಾಹಿತ್ಯವು ಕನ್ನಡಿಗರ ಆಳಿಕೆಗೆ ಒಳಪಟ್ಟಿದ್ದ ಆಂಧ್ರಪ್ರದೇಶವನ್ನೂ ವ್ಯಾಪಿಸಿರಬೇಕೆನಿಸುತ್ತದೆ. ಸಂಸ್ಕೃತದ ಭಾಷೆ ಬಂಧಗಳಿಂದ ಬಿಗಿವಡೆದ, ರೀತಿ ಅಲಂಕಾರಗಳಿಂದ ಅಂದವಡೆದ ಈ ಮಾರ್ಗಸಾಹಿತ್ಯ ಕನ್ನಡದಲ್ಲಿ ತುಂಬಿ ಬಂದ ಕಾರಣ, 'ಮಾರ್ಗ'ಕ್ಕೆ ಮಾನದಂಡವೆನಿಸಿದ ದಂಡಿಯ ಕಾವ್ಯಾದರ್ಶವನ್ನು ಕವಿರಾಜಮಾರ್ಗದ ಮೂಲಕ ಕನ್ನಡಕ್ಕೆ ತರುವ ಸಾಹಸ ನಡೆದಿರಬೇಕು. 'ಪ್ರಕಟತರವಸ್ತು'ವಿನಿಂದ ಈ ಮಾರ್ಗಸಾಹಿತ್ಯ ವಿಮಲೋದಯ ನಾಗಾರ್ಜುನಾದಿಗಳ ಕೈಯ್ಯಲ್ಲಿ ಪೂರ್ಣತೆಯನ್ನು ಪಡೆದು ಕನ್ನಡದಲ್ಲಿ ವಸ್ತುಕಸಾಹಿತ್ಯಕ್ಕೆ ದಾರಿಮಾಡಿಕೊಟ್ಟಿತು.

ಕವಿರಾಜಮಾರ್ಗದ ಕಾಲಕ್ಕೆ ಈ ದೇಶಿ-ಮಾರ್ಗಗಳ ಹಳೆಯ ಶೈಲಿ ನಿಂತು, ಹೊಸಶೈಲಿ ಬೆಳೆದು ಬರುತ್ತಿತ್ತು. ಹಳೆಯ ಘಟ್ಟ ಉರುಳಿ, ಹೊಸ ಘಟ್ಟ ಸುರುಳಿ ಬಿಚ್ಚಿತ್ತು. ಆದರೂ ಆ ಹಳೆಯ ಶೈಲಿಯ ವ್ಯಾಮೋಹಕ್ಕೆ ಕಟ್ಟುಬಿದ್ದ 'ಆಗಮ ಬಲಹೀನರು', ಅದನ್ನು ಬರವಣಿಗೆಗೆ ಇಳಿಸಿಕೊಳ್ಳುವಲ್ಲಿ 'ಪೊಲಗೆಡಿಸಿ' ಬಿಡುತ್ತಿದ್ದರೆಂದು ಮಾರ್ಗಕಾರನ ಅಭಿಪ್ರಾಯ. ಆದರೆ ಕವಿರಾಜಮಾರ್ಗದ ತರುವಾಯ ಈ ದೇಶಿಮಾರ್ಗಗಳ ಸಮನ್ವಯವು ಕುಮಾರಸಂಭವದ ಅಸಗ, ಹರಿವಂಶ ಶೂದ್ರಕಗಳ ಗುಣವರ್ಮರ ಕೈಯ್ಯಲ್ಲಿ ಪಳಗಿ, ಸಿದ್ಧಿಯನ್ನು ಸಾಧಿಸಿದುದು 'ದೇಸಿಯೊಳ್ ಪುಗುವುದು, ಪೊಕ್ಕ ಮಾರ್ಗದೊಳೆ ತಳ್ವುದು' ಎಂಬ ಕಾವ್ಯಪ್ರಜ್ಞೆಯ ಪಂಪನಲ್ಲಿ. ಹೀಗೆ ದೇಶಿಮಾರ್ಗಗಳು ಪೂರ್ಣದಿಂದ ಪೂರ್ಣಕ್ಕೇರುವಾಗ, ಒಂದು ವಿಶಿಷ್ಟ ಪದ್ಧತಿವಿಡಿದು ಸಂಗ್ರಹಿಸಿದ ಪದ್ಯಗಳನ್ನೊಳಗೊಂಡ 'ಇಡುಕುಂಗಬ್ಬ' ಎಂಬ ಪ್ರಕಾರವೂ ಈ ಯುಗದ ಒಂದು ರಚನಾವಿಶೇಷವಾಗಿ ಬೆಳೆದು ಬಂದಂತಿದೆ. ಇದಕ್ಕೆ ಉದಾಹರಣೆ ಇನ್ನೂ ಸಿಕ್ಕಿಲ್ಲ.

---

೬. ಆಂಧ್ರವಾಙ್ಮಯ ಚರಿತ್ರೆ. ಪು. ೧೧(ಎಫ್.ಜಿ. ಮಠದ ೧೯೬೫)

ಮಾರ್ಗಕಾರನು 'ವ್ಯಾಕರಣಕಾವ್ಯನಾಟಕಲೋಕಕಳಾಸಮಯ' ಎಂದು ಮುಂತಾಗಿ ಹೇಳಿದ್ದರೂ ಆ ಕಾಲದ ಕನ್ನಡ ನಾಟಕಸಾಹಿತ್ಯ ಮೌನ ಮುರಿಯದೆ ನಿಂತಿದೆ. ಪಗರಣವೊಂದು ದೇಸಿ ನಾಟಕಪ್ರಭೇದವಾಗಿ ಸಾಮಾನ್ಯರ ಮಧ್ಯ ಜೀವಿಸಿರಬೇಕು. ಕನ್ನಮಯ್ಯನ ಮಾಳವೀಮಾಧವ ಅನುವಾದಿತ ನಾಟಕವೋ ಕಾವ್ಯವೋ ಸಂದೇಹ.

ಈ ಅವಧಿಯ ಇನ್ನೊಂದು ಪ್ರಕಾರ ಟೀಕೆ-ವ್ಯಾಖ್ಯಾನ ಸಾಹಿತ್ಯ. ದುರ್ವಿನೀತನು ಕಿರಾತಾರ್ಜುನೀಯದ ೧೫ನೆಯ ಸರ್ಗಕ್ಕೆ ಬರೆದ ಟೀಕೆಯ ಭಾಷೆ ಗೊತ್ತಿಲ್ಲ.

ಶಾಮಕುಂದನು ಕರ್ಮಪ್ರಾಭೃತ (ಷಟ್ಖಂಡಾಗಮ) ಮತ್ತು ಕಷಾಯಪ್ರಾಭೃತಗಳಿಗೆ ಬರೆದ 'ಪದ್ಧತಿ ಟೀಕೆ' ಸಂಸ್ಕೃತ-ಪ್ರಾಕೃತ ಮತ್ತು ಕನ್ನಡಗಳ ಮಿಶ್ರಣವಾಗಿದೆ. ಈಗ ತಿಳಿದಮಟ್ಟಿಗೆ ಕನ್ನಡವನ್ನೂ ಟೀಕೆಗಾಗಿ ಬಳಸಿದ ಪ್ರಥಮ ಕೃತಿಯಿದು. ೧೨೦೦೦ ಗ್ರಂಥ ಪ್ರಮಾಣದ ಈ ಗ್ರಂಥ ಲಭಿಸಿಲ್ಲ.

ಮೇಲೆ ಹೇಳಿದ ಕರ್ಮಪ್ರಾಭೃತ ಮತ್ತು ಕಷಾಯಪ್ರಾಭೃತಗಳಿಗೆ 'ಚೂಡಾಮಣಿ' ಹೆಸರಿನ ಕನ್ನಡ ವ್ಯಾಖ್ಯಾನ ಬರೆದವನು, ತುಂಬಳೂರಾಚಾರ್ಯ. ಆದ್ಯಂತವಾಗಿ ಕನ್ನಡದಲ್ಲಿ ಬರೆದ ಈ ಟೀಕೆ ೮೪೦೦೦+೭೦೦೦=೯೧೦೦೦ ಗ್ರಂಥಪ್ರಮಾಣದ ಒಂದು ಬೃಹದ್ಗ್ರಂಥ. ಅದೇ ಕಷಾಯಪ್ರಾಭೃತ ಮತ್ತು ಕರ್ಮಪ್ರಾಭೃತಗಳಿಗೆ ಬರೆದ ಯತಿವೃಷಭನ ಚೂರ್ಣಿಸೂತ್ರ, ಉಚ್ಚಾರಣಾಚಾರ್ಯನ ಉಚ್ಚಾರಣಸೂತ್ರ, ಕುಂದಕುಂದನ ಪರಿಕರ್ಮ, ಶಾಮಕುಂದನ ಪದ್ಧತಿವ್ಯಾಖ್ಯಾನ, ವೀರಸೇನನ ಧವಲಾ, ವೀರಸೇನ ಮತ್ತು ಜಿನಸೇನರ ಜಯಧವಲಾದಿಗಳಿಗಿಂತ ಈ ತೆಂಬಳೂರಾಚಾರ್ಯನ ಟೀಕೆ ತುಂಬ ವಿಸ್ತಾರವಾದುದು.

ಇಲ್ಲಿ ಹೆಸರಿಸಬೇಕಾದ ಇನ್ನೊಂದು ಕೃತಿ, ಉಮಾಸ್ವಾತಿಯ ತತ್ವಾರ್ಥಮಹಾಶಾಸ್ತ್ರಕ್ಕೆ ಶಿವಕೋಟ್ಯಾಚಾರ್ಯ ಇಲ್ಲವೆ ಆರ್ಯದೇವರು ರಚಿಸಿರಬಹುದಾದ ೯೬ ಸಾವಿರ ಗ್ರಂಥಪ್ರಮಾಣದ ಕನ್ನಡ 'ತತ್ವಾರ್ಥಮಹಾಶಾಸ್ತ್ರ ವ್ಯಾಖ್ಯಾನ'. ಉಮಾಸ್ವಾತಿಯ ಇದೇ ಗ್ರಂಥಕ್ಕೆ ಬರೆದ ಸಮಂತಭದ್ರನ ೮೪ ಸಾವಿರ ಗ್ರಂಥಪ್ರಮಾಣದ[೭] ಗಂಧಹಸ್ತಿಮಹಾಭಾಷ್ಯ(ಕನ್ನಡ)ಕ್ಕಿಂತ ೧೨ ಸಾವಿರ ಗ್ರಂಥಪ್ರಮಾಣದಷ್ಟು ದೊಡ್ಡದೂ ಆದ ಇದು, ಜೈನಸಾಹಿತ್ಯದಲ್ಲಿಯೇ ಒಂದು ಬೃಹದ್ಗ್ರಂಥ. 'ಉಪಲಭ್ಯಮಾನತ್ವಾತ್' ಎಂದು ಹೇಳುವ ಭಟ್ಟಾಕಳಂಕನ ಕಾಲದಲ್ಲಿ ಉಪಲಬ್ಧವಿರಬಹುದಾದ ಇದು, ಇಂದು ನಮ್ಮ ಕೈಗೆ ಉಳಿದು ಬಂದಿಲ್ಲ. ಕರ್ತೃವಿನ ಹೆಸರೂ ಖಚಿತ ತಿಳಿದುಬಂದಿಲ್ಲ. ಒಟ್ಟಾರೆ, ಶಾಮಕುಂದ, ತೆಂಬಳೂರಾಚಾರ್ಯರ ಕೃತಿ ಮತ್ತು ೯೬ ಸಾವಿರ ಗ್ರಂಥಪ್ರಮಾಣದ ಈ ತತ್ವಾರ್ಥಮಹಾಶಾಸ್ತ್ರ ವಾಖ್ಯಾನಗಳು ಲಭಿಸದಿರುವುದು ಕನ್ನಡಕ್ಕೆ ಅಪಾರ ಹಾನಿ. ಸಮಂತಭದ್ರನ ಗಂಧಹಸ್ತಿಮಹಾಭಾಷ್ಯ ಒಂದುವೇಳೆ ಕನ್ನಡವಾಗಿದ್ದರೆ ಇನ್ನೂ ಹಾನಿ. ಜೈನ ಆಧಾರಗಳ ಪ್ರಕಾರ ಇವರಲ್ಲಿ ಶಾಮಕುಂದ ಮತ್ತು ತೆಂಬಳೂರಾಚಾರ್ಯರು ಸಮಂತಭದ್ರನಿಗೆ ಪ್ರಾಚೀನರು; ತತ್ವಾರ್ಥಮಹಾಶಾಸ್ತ್ರವ್ಯಾಖ್ಯಾತೃ(ಶಿವಕೋಟಿ? ಆರ್ಯದೇವ?) ಸಮಂತಭದ್ರನ ಶಿಷ್ಯ ಇಲ್ಲವೆ ಶಿಷ್ಯನ ಪ್ರಶಿಷ್ಯ.[೮]

---

೭. ಗಂಧಹಸ್ತಿಮಹಾಭಾಷ್ಯದ ಗ್ರಂಥಪ್ರಮಾಣ ೯೬೦೦೦ ಎಂಬ ಇನ್ನೊಂದು ಹೇಳಿಕೆಯೂ ಇದೆ. (ತತ್ವರತ್ನ ಪ್ರದೀಪಿಕೆ, -ಬಾಲಚಂದ್ರ ಮುನ್ನುಡಿ, xxxii)

೮. ಈ ಜೈನ ಸಂಗತಿಗಳನ್ನು ನಂಬಿದರೆ ಕನ್ನಡಸಾಹಿತ್ಯದ ಪ್ರಾಚೀನತೆ ಕ್ರಿ.ಶ.ದ. ಆರಂಭಕ್ಕೆ ಸರಿಯುತ್ತದೆ. ಹೆಚ್ಚಿನ ವಿಷಯಕ್ಕಾಗಿ ಶಾಮಕುಂದ, ತೆಂಬಳೂರಾಚಾರ್ಯ, ತತ್ವಾರ್ಥಮಹಾಶಾಸ್ತ್ರವ್ಯಾಖ್ಯಾತೃ ಪ್ರಕರಣಗಳನ್ನು ನೋಡಬಹುದು.

ಒಂದು ಸಾಹಿತ್ಯ ಇನ್ನೊಂದು ಸಾಹಿತ್ಯದಲ್ಲಿ ಪ್ರವೇಶ ಪಡೆಯುವಾಗ ಮೊದಲು ಹೀಗೆ ಟೀಕೆಯ ರೂಪದಲ್ಲಿ, ಆಮೇಲೆ ಕ್ರಮವಾಗಿ ಭಾಷಾಂತರ, ಸೃಜನಶೀಲ ಭಾಷಾಂತರ, ಸೃಜನಶೀಲ ರೂಪಾಂತರ, ಸ್ವತಂತ್ರ-ಹೀಗೆ ಬೆಳೆಯುತ್ತದೆ. ಮೇಲೆ ಹೇಳಿದ ಟೀಕೆಗಳನ್ನು ಬಿಟ್ಟರೆ ಮುಂದಿನ ಘಟ್ಟದಲ್ಲಿ ಹುಟ್ಟಿದ ಭಾಷಾಂತರ ಸಾಹಿತ್ಯದ ಬಗ್ಗೆ ಹೇಳುವುದಾದರೆ ಪಂಪ ಸೂಚಿಸುವ 'ಕತೆಯ ಮೆಯ್‌ಗೆಡಿಸಿ'ಕೊಂಡ ಭಾರತ, ಕಾವ್ಯಾವಲೋಕನ ಮತ್ತು ದರ್ಪಣಗಳಲ್ಲಿಯ ರಾಮಾಯಣ ಭಾರತ ಪದ್ಯಗಳನ್ನೊಳಗೊಂಡ ಕೃತಿಗಳು ಹುಟ್ಟಿರಬಹುದು. ಗುಣಾಢ್ಯನ ಬೃಹತ್ಕಥೆಯ ಭಾಷಾಂತರವಾಗಿರುವ ದುರ್ವಿನೀತನ ವಡ್ಡಕಥೆಯ ಭಾಷೆ ಸಂಸ್ಕೃತವೆಂದು ವಿದ್ವಾಂಸರು ಹೇಳುತ್ತಿದ್ದರೂ ಪ್ರಾಕೃತ ಇಲ್ಲವೆ ಕನ್ನಡವೆಂದು ಊಹಿಸಲು ಬರುವಂತಿದೆ. ಇಲ್ಲಿ ಗಮನಿಸಬೇಕಾದ ಇನ್ನೊಂದು ಗ್ರಂಥ ವಡ್ಡಾರಾಧನೆ. ಶಿವಕೋಟ್ಯಾಚಾರ್ಯಕೃತ ಮೂಲಾರಾಧನೆಯ ಟೀಕೆ ಇಲ್ಲವೆ ಭಾಷಾಂತರ ಗ್ರಂಥವಿದು. ಒಟ್ಟು ಗ್ರಂಥದಲ್ಲಿ ಈಗ ೧೯ ಕಥೆಗಳ ಕವಚ ಪ್ರಕರಣವೊಂದನ್ನು ಉಳಿಸಿಕೊಂಡಿರುವ ಇದು ಕನ್ನಡದ ಒಂದು ಅನುಪಮ ಕಥಾಕೋಶ. ಅಸಗನ ಕನ್ನಡ ಕುಮಾರಸಂಭವ ಕಾಳಿದಾಸನ ಕುಮಾರಸಂಭವವನ್ನು ನೆನಪಿಸುತ್ತದೆ. ಕನ್ನಮಯ್ಯನ ಮಾಳವೀಮಾಧವ ಮತ್ತು ಅನಾಮಧೇಯನ ರತ್ನಾವಳಿಗಳು ಮಾತ್ರ ಭಾಷಾಂತರ ಗ್ರಂಥಗಳಾಗಿರಬೇಕು. ಗುಣವರ್ಮನ ಹರಿವಂಶವು ಪಂಪನ ಆದಿಪುರಾಣದಂತೆ ಸೃಜನಶೀಲ ಭಾಷಾಂತರ, ಇವನದೇ ಆದ ಶೂದ್ರಕ ಪಂಪಭಾರತದಂತೆ ಸೃಜನಶೀಲ ರೂಪಾಂತರವಾಗಿರಬಹುದು.

ಜೈನಪುರಾಣಗಳಲ್ಲಿ ಜಯಕೀರ್ತಿ ಹೇಳುವ 'ಆರ್ಹತ್ ಕಾವ್ಯ' ಮತ್ತು 'ಗುಣಭದ್ರಾಚಾರ್ಯರು ತಿದ್ದಿದ ಕೃತಿ'ಗಳು ರಚನೆಗೊಂಡ ಬಗ್ಗೆ ಆಧಾರಗಳಿವೆ. ಇತ್ತೀಚೆ ತಿಳಿದು ಬಂದಿರುವ ಶ್ರೀವಿಜಯನ ಅನುಪಲಬ್ಧ ರಘುವಂಶ ಮಹಾಪುರಾಣ ಪಂಪಪೂರ್ವದ ಕೃತಿಯಾಗಿದೆ. ನೃಪತುಂಗ, ಪುಲಕೇಶಿಗಳನ್ನು ಕುರಿತ ಕಾವ್ಯಗಳನ್ನು ಅನುಮಾನದಲ್ಲಿಟ್ಟರೂ 'ಕರ್ಣಾಟೇಶ್ವರ ಕಥೆ'ಯೊಂದು ರಾಜಕೀಯ ಧ್ವನಿಯಿಂದ ಕೂಡಿದ ಕಾವ್ಯವಾಗಿರಬೇಕು. ಕುಮುದೇಂದುವಿನ 'ಸಿರಿಭೂವಲಯ' ಸಿಕ್ಕಿದ್ದರೂ ಅದರ ಪ್ರಾಮಾಣಿಕತೆಯ ಬಗೆಗೆ ಅನುಮಾನ. ಪೂಜ್ಯಪಾದ, ಸಮಂತಭದ್ರ ಮತ್ತು ಕವಿಪರಮೇಷ್ಠಿಗಳನ್ನು ನಮ್ಮ ಕವಿಗಳು ನಿರಂತರ ಹೊಗಳಿದ್ದರೂ ಅವರು ಕನ್ನಡ ಕವಿಗಳೆನ್ನಲು ಸಂದೇಹ. ಮನಸಿಜ, ಗುಣನಂದಿ, ಗಜಾಂಕುಶರು ಪಂಪಪೂರ್ವದ ಕನ್ನಡ ಕವಿಗಳಾಗಿರಬಹುದು; ಶ್ರೀವರ್ಧದೇವ, ಇಂದ್ರನಂದಿ ಕನ್ನಡ ಕವಿಗಳೆನ್ನಲು ಆಧಾರಬೇಕು.

ಶಾಸನಕವಿಗಳಲ್ಲಿ ಅಚಲನ್, ದಿವಾಕರ, ರೂವಯ್ಯ, ನಾಮಯ್ಯ, ಬೆಳ್ದೇವ, ಗುಣವರ್ಮ, ರವಿನಾಗಭಟ್ಟ; ನಾಗವರ್ಮ, ಕವಿರಾಜರಾಜ, ಬೀರಯ್ಯ, ಕಬ್ಬದ ನಾಗದೇವ, ಕಾಚಯ್ಯಗಳು ಕಂಡುಬರುತ್ತಿದ್ದರೂ ಇನ್ನೂ ಅನೇಕ ಸುಂದರ ಶಾಸನಗಳನ್ನು ಬರೆದ ಕವಿಗಳ ಬಗೆಗೆ ಏನೂ ತಿಳಿದು ಬಂದಿಲ್ಲ. ಇವರಲ್ಲಿ ಕೆಲವರಂತೂ ಕಾವ್ಯಕಟ್ಟಿದ ಕೈಯುಳ್ಳವರು.

ಹೀಗೆ ಹಲವು ಮುಖವಾಗಿ ಹರಿದುಬಂದಿರುವ ಸಾಹಿತ್ಯಕ್ಕೆ ವ್ಯಾಕರಣ, ಛಂದಸ್ಸು, ಅಲಂಕಾರಗಳೆಂಬ ಲಕ್ಷಣಗ್ರಂಥ ಹುಟ್ಟಿರಬಹುದೆ? ಎಂಬ ಕುತೂಹಲ ಕೆರಳುತ್ತದೆ. ಸಾಹಿತ್ಯರಚನೆಗೆ ಸಂಸ್ಕೃತ ಪ್ರಾಕೃತಗಳಲ್ಲಿ ಲಕ್ಷಣಗ್ರಂಥಗಳ ಖಚಿತ ಮಾರ್ಗದರ್ಶನವಿದೆ. ತಮತಮಗೆ ಸೂಕ್ತವೆನಿಸಿದ ರೀತಿಯಲ್ಲಿ ನಾಡವರಿಂದ ಬೆಳೆಸಲ್ಪಟ್ಟ ಕನ್ನಡಸಾಹಿತ್ಯಕ್ಕೆ ಮಾತ್ರ ಆ ನಾಡವರೇ ಲಾಕ್ಷಣಿಕರು ಎಂದು ಕವಿರಾಜಮಾರ್ಗದ ಒಂದೆರಡು ಪದ್ಯಗಳನ್ನಾಧರಿಸಿ ಶ್ರೀ ಮುಳಿಯ ಅವರು ಹೇಳುವರು. ಆದರೆ ಆದೇ ಕವಿರಾಜಮಾರ್ಗದಲ್ಲಿ ಬಳಸಿದ 'ಪೂರ್ವಾಚಾರ್ಯರ್, ಪೂರ್ವಶಾಸ್ತ್ರವಿಧಿ, ಪ್ರಾಕ್ತನೋಕ್ತ ವರ್ಗಪ್ರಾಸಂ, ಪುರಾಣಶಾಸ್ತ್ರೋಕ್ತಂಗಳ್, ಆಗಮಕೋವಿದ ನಿಗದಿತಮಾರ್ಗಂ' ಎಂಬ ಮಾತುಗಳಲ್ಲಿ ಕೆಲವು

ಕನ್ನಡಕ್ಕೇ ಅನ್ವಯಿಸುವಂತಿವೆ. ಹೀಗಾಗಿ ಶ್ರೀ ಮುಳಿಯ ಅವರ ಅಭಿಪ್ರಾಯದ ಬಗೆಗೆ ಸಂದೇಹ ಉಳಿದುಕೊಳ್ಳುತ್ತದೆ.

ಗಂಗರ ಹಲವು ಶಾಸನಗಳಲ್ಲಿ ದುರ್ವಿನೀತನನ್ನು ಶಬ್ದಾವತಾರಕಾರ ಎಂದು ಕರೆಯಲಾಗಿದೆ. ಇದು ಪೂಜ್ಯಪಾದನ ಅನುಪಲಬ್ಧ ವ್ಯಾಕರಣವಾಗಿರುವ ಶಬ್ದಾವತಾರದ ಕನ್ನಡ ಅನುವಾದವಾಗಿರಬಹುದೆಂದು ಶ್ರೀ ಸಾಲೆತೊರೆ ಮತ.[೯] ಈ ಮಾತಿಗೆ ಆಧಾರ ಸಾಲದು.

ಪ್ರಣುತಗುಣರೆನಿಪ ವಿಬುಧಾ
ಗ್ರಣಿಗಳ್ಕೆಯ್ಕೊಂಡು ಪೊಗಟೆ ಸಲೆ ನೆಗಟ್ದುವು ಧಾ।
ರಿಣಿಯೊಳಗೆ ಶಂಖವರ್ಮನ
ಗುಣವರ್ಮನ ನಾಗವರ್ಮನಧ್ವಾನಂಗಳ್॥[೧೦]

ಎಂಬಲ್ಲಿಯ 'ಅಧ್ವಾನ'ಕ್ಕೆ ಆರ್. ನರಸಿಂಹಾಚಾರ್ ಅವರು ವ್ಯಾಕರಣ ಪಂಥ ಇಲ್ಲವೆ ಅಲಂಕಾರ ಪ್ರಸ್ಥಾನ ಎಂದು ಅರ್ಥ ಹೇಳುವರು. ಇದು ನಿಜವಿದ್ದಲ್ಲಿ ಗುಣವರ್ಮನು ಪಂಪಪೂರ್ವದವ, ಈ ನಾಗವರ್ಮ ಪಂಪಪೂರ್ವದವನಾಗಿರಬಹುದು, ಶಂಖವರ್ಮನ ಕಾಲ ಗೊತ್ತಿಲ್ಲವೆಂದು ಹೇಳಬಹುದು.

ದೋಸಮನೆ ಗುಣದವೋಲು
ದ್ಭಾಸಿಸಿ ಕನ್ನಡದೊಳೊಲ್ದು ಪೂರ್ವಾಚಾರ್ಯರ್।
ದೇಸಿಯೆನೆ ನಿರಿಸಿ ಖಂಡ
ಪ್ರಾಸಮನತಿಶಯಮಿದೆಂದು ಯತಿಯಂ ಮಿಕ್ಕರ್॥[೧೧]

ಎಂಬ ಪದ್ಯದಲ್ಲಿ ಹೇಳಿದ ಪ್ರಕಾರ ಯತಿಯನ್ನು ಮೀರಿದ ಕನ್ನಡ ಪೂರ್ವಾಚಾರ್ಯರು ಕವಿಗಳಾಗಿರದೆ ಲಾಕ್ಷಣಿಕರಾಗಿದ್ದರೆ, ಈ ಹಿಂದೆ ಛಂದಶ್ಶಾಸ್ತ್ರವಿದ್ದಿರಬಹುದೆಂದು ಅಭಿಪ್ರಾಯ ಬಲಗೊಳ್ಳುತ್ತದೆ. ಜಯಕೀರ್ತಿ ಹೇಳುವ 'ಕರ್ಣಾಟ ಛಂದಸ್ಸು' ಗ್ರಂಥದ ಹೆಸರೇ ಆಗಿದ್ದ ಪಕ್ಷದಲ್ಲಿ ಇದು ಪಂಪಪೂರ್ವದ ಕೃತಿಯೆಂಬುದು ಗಟ್ಟಿಮಾತು. ಅಮೃತಸಾಗರ ಹೇಳುವ ಗುಣಗಾಂಕನ ಛಂದೋಗ್ರಂಥ ಕತ್ತಲೆಯಲ್ಲಿ ನಿಂತಿದೆ. ಜಯಕೀರ್ತಿಯ ಛಂದೋನುಶಾಸನ ಲಭಿಸಿ, ಕನ್ನಡವೃತ್ತಗಳ ವಿವರಪೂರ್ಣ ಲಕ್ಷಣ ಗೊತ್ತಾಗಿದೆ.

ನೃಪತುಂಗನಿಗೆ ಹಿರಿಯ ಸಮಕಾಲೀನನಾದ ಶಿವಮಾರನ 'ಗಜಾಷ್ಟಕ'ವೊಂದು ಕನ್ನಡ ಕೃತಿಯಾಗಿರಲು ಸಾಧ್ಯವಿದೆ. ಈಗ ತಿಳಿದಮಟ್ಟಿಗೆ ಕನ್ನಡದ ಅಷ್ಟಕ ಸಾಹಿತ್ಯಕ್ಕೆ ಮಾತೃಸ್ಥಾನದಲ್ಲಿರುವ ಇದೊಂದು ಗಜಶಾಸ್ತ್ರ. ಮಿಕ್ಕ ಶಾಸ್ತ್ರಗಳು ಈ ಕಾಲದಲ್ಲಿ ರಚನೆಗೊಂಡುದಕ್ಕೆ ಆಧಾರಗಳಿಲ್ಲ.

ಹೀಗೆ ದೇಸಿ-ಮಾರ್ಗ, ಲೌಕಿಕ-ಧಾರ್ಮಿಕ, ಗದ್ಯ-ಪದ್ಯ, ಚಂಪೂ-ಇಡುಕಂಗಬ್ಬ, ಟೀಕೆ-ಅನುವಾದ-ವ್ಯಾಖ್ಯಾನ, ವ್ಯಾಕರಣ-ಛಂದಸ್ಸು, ಅಲಂಕಾರ-ಗಜಶಾಸ್ತ್ರಗಳ ಮೂಲಕ ಮತ್ತು ಮಿಕ್ಕ ಹಲವಾರು ದೇಸಿ ಪ್ರಕಾರಗಳ ಮೂಲಕ ತನ್ನ ಸತ್ವವನ್ನು ಅಭಿವ್ಯಕ್ತಗೊಳಿಸುತ್ತ ಕವಿರಾಜಮಾರ್ಗದ ಎಡ ಬಲಗಳಲ್ಲಿ ಬೆಳೆದುಬಂದ, ಈ 'ಮುನ್ನಿನ ಕಬ್ಬಮನೆಲ್ಲಮನಿಕ್ಕಿ ಮೆಟ್ಟಿ'ದ ಆದಿಪುರಾಣ-ವಿಕ್ರಮಾರ್ಜುನವಿಜಯಗಳು ಹತ್ತನೆಯ ಶತಮಾನದ

---

೯. Mediaval Jainism. P. 23

೧೦. ಕಾ.ಲೋ. ಪದ್ಯ. ೧೮೫

೧೧. ಕ.ಮಾ. ೧-೭೫

ಕ್ಷಿತಿಜದಲ್ಲಿ ಚಂದ್ರ-ಸೂರ್ಯರಂತೆ ಮೂಡಿನಿಂತವು. ಕವಿರಾಜಮಾರ್ಗ ಪರಿಸರಕ್ಕೆ ಒಂದು ತೆರೆಯನ್ನೆಳೆಯುವ ರೀತಿಯಲ್ಲಿ ಸಹೃದಯರ ಮೇಲೆ ಸತ್ವಪೂರ್ಣ ಪ್ರಭಾವ ಬೀರಿದವು. ಪಂಪ ಮತ್ತು ತರುವಾಯದ ಕವಿಗಳ ಈ ಸತ್ವಪೂರ್ಣ ಪ್ರಭಾವಕ್ಕೆ ಮಾರುಹೋದ ಪ್ರಾಚೀನ ಜನತೆ, ಆ ತೆರೆಯ ಹಿಂದಣ ಸಾಹಿತ್ಯವನ್ನೇ ಮರೆತರೆಂದೇ ತೋರುತ್ತದೆ. ಆದರೆ ಪೂರ್ವ-ಪಶ್ಚಿಮ ಪಂಡಿತರು ಮೊದಲು ಮಾಡಿ, ಇಂದಿನ ವರೆಗೆ ಅನೇಕರು ಆ ನೆಲದ ಮರೆಯ ನಿಧಾನವನ್ನು ಅಗಿದು ತೋರಿಸಲು ಪ್ರಯತ್ನಗೈದಿರುವರು; ಗೈಯ್ಯುತ್ತಲಿರುವರು. ಇಷ್ಟೆಲ್ಲ ಸಾಹಸ ಮಾಡಿದರೂ ಕನ್ನಡಸಾಹಿತ್ಯವನ್ನು ಕುರಿತ "ನ ಚೈಷಾ ಭಾಷಾ ಶಾಸ್ತ್ರಾನುಪಯೋಗಿನೀ, ತತ್ವಾರ್ಥಮಹಾಶಾಸ್ತ್ರ ವ್ಯಾಖ್ಯಾನಸ್ಯ ಷಣ್ಣವತಿಸಹಸ್ರ ಪ್ರಮಿತಗ್ರಂಥ ಸಂದರ್ಭರೂಪಸ್ಯ ಚೂಡಾಮಣ್ಯಭಿಧಾನಸ್ಯ ಮಹಾಶಾಸ್ತ್ರಸ್ಯ ಅನ್ಯೇಷಾಂ ಚ ಶಬ್ದಾಗಮ ಯುಕ್ತ್ಯಾಗಮ ಪರಮಾಗಮ ವಿಷಯಾಣಾಂ ತಥಾ ಕಾವ್ಯನಾಟಕಾಲಂಕಾರ ಕಲಾಶಾಸ್ತ್ರ ವಿಷಯಾಣಾಂ ಚ ಬಹೂನಾಂ ಗ್ರಂಥಾನಾಮಪಿ ಭಾಷಾಕೃತಾನಾಮುಪಲಭ್ಯಮಾನತ್ವಾತ್"[೧೨] ಎಂಬ ಭಟ್ಟಾಕಳಂಕನ ಹೇಳಿಕೆಯ ಗುಪ್ತಭಂಡಾರ ಮೂಲೆ ಮುಕ್ಕಾಗದೆ ಉಳಿದಿದೆ. ಇದನ್ನು ಅಗಿದು ಭೂಗತ ಕನ್ನಡಸಾಹಿತ್ಯದ ವಿರಾಟ್‌ಸ್ವರೂಪವನ್ನು ಇನ್ನೂ ಎತ್ತಿ ತೋರಿಸುವ ಅನಂತಪ್ರಯತ್ನ ಭವಿಷ್ಯತ್ತಿನ ಹೆಗಲಮೇಲೆ ನಿಂತಿದೆ.

❖❖

೧೨. ಶಬ್ದಾನುಶಾಸನ. ಪು. ೧೨(ನರಸಿಂಹಾಚಾರ್ ಆವೃತ್ತಿ೧೯೨೩)

ಅನುಬಂಧ

* ಗ್ರಂಥಋಣ

* ಸಂಕ್ಷೇಪಗಳು

ಗ್ರಂಥಗಳು

ಪ್ರಾಚೀನ ಕನ್ನಡ ಕಾವ್ಯಗಳು

ಅಜಿತತೀರ್ಥಂಕರ ಪುರಾಣಂ(೧೯೫೯)
ಅನಂತನಾಥ ಪುರಾಣಂ
ಅಭಿನವ ದಶಕುಮಾರ ಚರಿತಂ
ಅರ್ಧನೇಮಿ ಪುರಾಣಂ
ಅಲ್ಲಮನ ವಚನಚಂದ್ರಿಕೆ
ಆದಿಪುರಾಣಂ
ಉದ್ಭಟಕಾವ್ಯಂ
ಕಬ್ಬಿಗರ ಕಾವಂ
ಕರ್ಣವೃತ್ತಾಂತಂ
ಕವಿರಾಜಮಾರ್ಗಂ(೧೯೬೮)
ಕಾವ್ಯಸಾರಂ
ಕುಮಾರವ್ಯಾಸ ಭಾರತಂ
ಕುಮುದೇಂದು ರಾಮಾಯಣಂ
ಕೊಟ್ಟೂರ ಬಸವೇಶ್ವರ ಚಾರಿತ್ರಂ
ಗಿರಿಜಾಕಲ್ಯಾಣಂ
ಗುರುರಾಜ ಚಾರಿತ್ರಂ
ಚಂದ್ರಪ್ರಭ ಪುರಾಣಂ
ಚಂದ್ರಪ್ರಭ ಚರಿತೆ
ಚಾವುಂಡರಾಯ ಪುರಾಣಂ (೧೯೧೮)
ಚಿಕದೇವರಾಜ ವಿಜಯಂ
ಚೆನ್ನಬಸವ ಪುರಾಣಂ
ಜಗನ್ನಾಥ ವಿಜಯಂ
ಜಾತಕ ತಿಲಕಂ
ತತ್ವರತ್ನ ಪ್ರದೀಪಿಕೆ (ವ್ಯಾಖ್ಯಾನ-೧೯೫೫)
ತ್ರಿಷಷ್ಟಿಪುರಾತನ ಚಾರಿತ್ರಂ

ಧರ್ಮನಾಥ ಪುರಾಣಂ
ಧರ್ಮಾಮೃತಂ
ನೇಮಿಜಿನೇಶ ಸಂಗತಿ
ನೇಮಿನಾಥ ಪುರಾಣಂ (ಕರ್ಣಪಾರ್ಯ-೧೯೪೦)
ನೇಮಿನಾಥ ಪುರಾಣಂ(೧೯೬೧)
ಪಂಚತಂತ್ರಂ (೧೮೯೮)
ಪಾರ್ಶ್ವನಾಥ ಪುರಾಣಂ
ಪುಣ್ಯಾಸ್ರವ ಕಥಾಕೋಶಂ
ಪುಷ್ಪದಂತ ಪುರಾಣಂ
ಬಸವ ಪುರಾಣಂ
ಬಸವಣ್ಣನವರ ವಚನಗಳು (೧೯೬೮)
ಮದನ ತಿಲಕಂ
ಐಟ್ಟಮತಂ
ರಾಜಾವಳೀಕಥೆ
ರಾಮನಾಥ ಚರಿತೆ
ರಾಮಚಂದ್ರ ಚರಿತ ಪುರಾಣಂ (೧೯೨೧)
ಲೀಲಾವತಿ (೧೯೬೬)
ವಡ್ಡಾರಾಧನೆ (೧೯೫೫)
ವರ್ಧಮಾನ ಪುರಾಣಂ
ವಿಕ್ರಮಾರ್ಜುನ ವಿಜಯಂ
ವೃಷಭೇಂದ್ರ ವಿಜಯಂ
ಶಾಂತಿನಾಥಪುರಾಣಂ (ಪೊನ್ನ)
ಶಾಂತಿನಾಥಪುರಾಣಂ (ಮಹಾಬಲ)
ಶಿವದಾಸ ಗೀತಾಂಜಲಿ
ಸಮಯ ಪರೀಕ್ಷೆ
ಸಾಹಸಭೀಮ ವಿಜಯಂ
ಸಿಂಗಿರಾಜಪುರಾಣಂ(೧೯೫೦)
ಸುಕುಮಾರ ಚರಿತೆ
ಸೂಕ್ತಿಸುಧಾರ್ಣವ
ಸೋಮೇಶ್ವರ ಶತಕಂ

ಕನ್ನಡ ನಿಘಂಟುಗಳು

ಅಭಿಧಾನ ವಸ್ತುಕೋಶ-ನಾಗವರ್ಮ (೧೯೩೩)
ಅಭಿನವ ನಿಘಂಟು
ಕರ್ಣಾಟಕ ನಿಘಂಟು
ಕರ್ಣಾಟಕ ಶಬ್ದಕಲ್ಪದ್ರುಮ
ಕರ್ಣಾಟಕ ಶಬ್ದಮಂಜರಿ

ಕಿಟೆಲ್ ನಿಘಂಟು (೧೮೯೪)

ಕನ್ನಡ ವ್ಯಾಕರಣಗ್ರಂಥಗಳು

ಕರ್ನಾಟ ಭಾಷಾಭೂಷಣಂ
ಕರ್ನಾಟ ಶಬ್ದಾನುಶಾಸನಂ(ನರಸಿಂಹಾಚಾರ್ ೧೯೨೩)
ಶಬ್ದಮಣಿದರ್ಪಣಂ (ಡಿ.ಎಲ್.ಎನ್. ೧೯೬೮)

ಕನ್ನಡ ಅಲಂಕಾರಗ್ರಂಥಗಳು

ಉದಯಾದಿತ್ಯಾಲಂಕಾರ
ಕವಿರಾಜಮಾರ್ಗಂ
ಕಾವ್ಯಾವಲೋಕನಂ(ವಿ.ವ.ಸಂಘ. ೧೯೩೯)
ಕಾವ್ಯಾವಲೋಕನಂ(ಮೈ.ವಿ.ವಿ. ೧೯೬೭)
ರಸರತ್ನಾಕರಂ
ಶೃಂಗಾರ ರತ್ನಾಕರಂ

ಕನ್ನಡ ಛಂದೋಗ್ರಂಥಗಳು

ಕವಿಜಿಹ್ವಾಬಂಧನಂ
ಛಂದೋಂಬುಧಿ
ನಂದಿಛಂದಸ್ಸು

ಕನ್ನಡ ಅರ್ಪಣಗ್ರಂಥಗಳು

ಅಭಿವಂದನೆ (ಎ.ಆರ್.ಕೃ.)೧೯೫೬
ಉಪಾಯನ (ಡಿ.ಎಲ್.ಎನ್.)
ಕುಂದಣ (ಕುಂದಣಗಾರ)
ಜ್ಞಾನೋಪಾಸಕ (ಡಿ.ಎಲ್.ಎನ್.)
ದೀವಿಗೆ (ಗೋವಿಂದ ಪೈ)
ಪಂಜೆಯವರ ನೆನಪಿಗಾಗಿ(ಪಂಜೆ)
ಬಾಗಿನ (ಎಸ್.ವಿ. ರಂಗಣ್ಣ)
ಶ್ರದ್ಧಾಂಜಲಿ (ಮುಳಿಯ)
ಸಂಭಾವನೆ(ಬಿ.ಎಂ. ಶ್ರೀ)
ಹೊಸಬೆಳಕು(ಡಿ.ಎಲ್.ಎನ್.)

ಕನ್ನಡ ಲೇಖನಸಂಗ್ರಹ ಗ್ರಂಥಗಳು

ಕನ್ನಡದಲ್ಲಿ ಕಾವ್ಯತತ್ತ್ವ-ಕೆ. ಕೃಷ್ಣಮೂರ್ತಿ
ಕನ್ನಡಿಗರಿಗೆ ಒಳ್ಳೆಯ ಸಾಹಿತ್ಯ-ಬಿ.ಎಂ. ಶ್ರೀ
ಮೂರು ಉಪನ್ಯಾಸಗಳು-ಗೋವಿಂದ ಪೈ (೧೯೪೦)
ಸಮಾಲೋಕನ-ತೀ.ನಂ. ಶ್ರೀ (೧೯೫೮)
ಸಂಶೋಧನ ತರಂಗ- ಚಿದಾನಂದ ಮೂರ್ತಿ
ಸಾಹಿತ್ಯ ಸಂಶೋಧನೆ-ದ.ರಾ. ಬೇಂದ್ರೆ (೧೯೪೦)
ಸಾಹಿತ್ಯದ ಹಿನ್ನೆಲೆ-ವೆಂಕಟರಾಯಾಚಾರ್

ಕನ್ನಡಸಾಹಿತ್ಯ ಚರಿತ್ರೆಗಳು

ಕರ್ಣಾಟಕ ಕವಿಚರಿತೆ ೧(೧೯೬೧)೨-೩(೧೯೨೯)
ಕನ್ನಡ ಸಾಹಿತ್ಯಚರಿತ್ರೆ-ರಂ.ಶ್ರೀ. ಮುಗಳಿ (೧೯೬೦)
ಕೆಲವು ಕನ್ನಡಕವಿಗಳ ಜೀವನಕಾಲ ವಿಚಾರ(೧೯೨೭)
ಜನಪ್ರಿಯ ಕನ್ನಡಸಾಹಿತ್ಯಚರಿತ್ರೆ-ತ.ಸು. ಶಾಮರಾಯ
ಸಂಕ್ಷಿಪ್ತ ಕನ್ನಡಸಾಹಿತ್ಯ ಚರಿತ್ರೆ-ಎಂ.ಎಂ. ಭಟ್ಟ
ಸಾಹಿತ್ಯ ಸಂಶೋಧನೆ ಮತ್ತು ಸಮಾಲೋಚನೆ-ಸದಾನಂದ ನಾಯಕ (೧೯೫೯)

ಕನ್ನಡ ಇತರ ಗ್ರಂಥಗಳು

ಆಂಧ್ರವಾಙ್ಮಯ ಚರಿತ್ರೆ-ಎಫ್.ಜಿ. ಮಠದ (೧೯೬೪)
ಕಥಾಮೃತ-ಎ.ಆರ್.ಕೃ.
ಕನ್ನಡ ಕೈಪಿಡಿ ೧(೧೯೫೫)
ಕನ್ನಡ ಗ್ರಂಥಸಂಪಾದನೆ-ಡಿ.ಎಲ್. ಎನ್.
ಕನ್ನಡ ಛಂದೋವಿಕಾಸ-ಡಿ.ಎಸ್.ಕರ್ಕಿ
ಕನ್ನಡದ ನೆಲೆ-ಶಂ.ಬಾ. ಜೋಶಿ
ಕನ್ನಡನಾಡೂ ದೇಸಿಸಾಹಿತ್ಯವೂ-ಮುಳಿಯ
ಕನ್ನಡಭಾಷೆಯ ಚರಿತ್ರೆ-ಪ್ರ.ಗೋ. ಕುಲಕರ್ಣಿ
ಕರ್ನಾಟಕದ ಅರಸು ಮನೆತನಗಳು-ನೆಲಮಂಗಲ ಮತ್ತು ಪಂಚಮುಖಿ
ಕರ್ನಾಟಕದ ಇತಿಹಾಸ-ಪಂಚಮುಖಿ
ಕರ್ನಾಟಕ ಸಂಸ್ಕೃತಿ-ಎಂ.ಎಂ. ಭಟ್ಟ
ಕರ್ಣಾಟಕ ಸಂಸ್ಕೃತಿ ಸಮೀಕ್ಷೆ-ತಿಪ್ಪೇರುದ್ರಸ್ವಾಮಿ
ಕವಿರಾಜಮಾರ್ಗ ವಿವೇಕ-ಮುಳಿಯ ತಿಮ್ಮಪ್ಪಯ್ಯ
ಜೈನಧರ್ಮ-ಮಿರ್ಜಿ ಅಣ್ಣಾರಾಯ (೧೯೫೨)
ದೇವರದಾಸಿಮಯ್ಯ ಪ್ರಶಸ್ತಿ-ಜ.ಚ.ನಿ.
ನಾಡೋಜಪಂಪ-ಮುಳಿಯ ತಿಮ್ಮಪ್ಪಯ್ಯ (೧೯೩೮)
ಪಾರ್ತಿಸುಬ್ಬ-ಮುಳಿಯ
ಭಾರತೀಯ ಕಾವ್ಯಮೀಮಾಂಸೆ-ತೀ.ನಂ.ಶ್ರೀ (೧೯೬೧)
ಶ್ರೀಶೈಲ ಪೀಠದರ್ಶನಂ-ಜ.ಚ.ನಿ.
ವಡ್ಡಾರಾಧನೆಯ ಕಥೆಗಳು-ಕೆ. ನಾಗೇಂದ್ರಪ್ಪ
ವಡ್ಡಾರಾಧನೆ-ಹಂಪನಾ
ಶಬ್ದಮಣಿದರ್ಪಣದ ಪಾಠಾಂತರಗಳು-ಡಿ.ಕೆ.ಭೀ(೧೯೫೧)
ಸಂಸ್ಕೃತಕಾವ್ಯ-ಕೆ. ಕೃಷ್ಣಮೂರ್ತಿ
ಸಂಸ್ಕೃತನಾಟಕ-ಎ.ಆರ್. ಕೃ.

ಸಂಸ್ಕೃತ ಗ್ರಂಥಗಳು

ಅಲಂಕಾರ ಸಂಗ್ರಹ-ಅಮೃತಾನಂದಯೋಗಿ(೧೯೪೯)
ಕಾವ್ಯಾದರ್ಶ-ದಂಡಿ
ಕಾವ್ಯಮೀಮಾಂಸೆ-ರಾಜಶೇಖರ

ಕಾವ್ಯಾನುಶಾಸನ-ಆಚಾರ್ಯ ಹೇಮಚಂದ್ರ Vol. I (೧೯೩೮)
ಕಾವ್ಯಾಲಂಕಾರ-ಭಾಮಹ
ಗಣಿತಸಾರಸಂಗ್ರಹ-ಮಹಾವೀರಾಚಾರ್ಯ
ಛಂದೋನುಶಾಸನ (ಜಯದಾಮನ್-ಜಯಕೀರ್ತಿ(೧೯೪೯)
ಛಂದೋನುಶಾಸನ-ಹೇಮಚಂದ್ರಸೂರಿ (೧೯೬೧)
ಜೈನಕುಮಾರಸಂಭವಂ-ಜಯಶೇಖರಸೂರಿ
ಜ್ವಾಲಾಮಾಲಿನೀಕಲ್ಪ-ಇಂದ್ರನಂದಿ
ಪಾರ್ಶ್ವಾಭ್ಯುದಯಮ್-ಜಿನಸೇನ (೧೯೬೫)
ಪುಣ್ಯಾಸ್ರವ ಕಥಾಕೋಶಂ-ರಾಮಚಂದ್ರಮುನಿ
ಪ್ರಶ್ನೋತ್ತರ ರತ್ನಮಾಲೆ-ವಿಮಲ?
ಬೃಹತ್ಕಥಾಕೋಶಂ-ಹರಿಷೇಣ
ಬೃಹದ್ದೇಶಿ-ಮತಂಗ (೧೯೨೮)
ಮಹಾಪುರಾಣಂ-ಜಿನಸೇನ, ಗುಣಭದ್ರ
ಮಾನಸೋಲ್ಲಾಸಂ-ಸೋಮೇಶ್ವರ
ರಾಜತರಂಗಿಣಿ-ಕಲ್ಹಣ
ವರ್ಧಮಾನಪುರಾಣ-ಅಸಗ
ಶಾಂತಿಪುರಾಣ-ಅಸಗ
ಶೃಂಗಾರಾರ್ಣವ ಚಂದ್ರಿಕಾ-ವಿಜಯವರ್ಣಿ
ಶ್ರುತಾವತಾರಂ-ಇಂದ್ರನಂದಿ
ಸಂಗೀತರತ್ನಾಕರ(೪-ಭಾಗಗಳು)-ಶಾರ್ಙ್ಗದೇವ

ಪ್ರಾಕೃತ ಗ್ರಂಥಗಳು

ಗಾಥಾಸಪ್ತಶತೀ-ಹಾಲ (ಜೊಗಳೇಕರ ೧೯೫೬)
ಮೂಲಾರಾಧನಾ-ಸಿವಜ್ಜ (ಸೊಲ್ಲಾಪುರ೧೯೩೫)
ಹರಿವಂಶ-ಧವಲಾ

ಹಿಂದಿ ಗ್ರಂಥಗಳು

ಅಪಭ್ರಂಶ ಸಾಹಿತ್ಯ-ಹರಿವಂಶ ಕೋಛಡ
ಕಸಾಯ ಪಾಹುಡಸುತ್ತ-ಶ್ರೀವೀರಶಾಸನ ಸಂಘ, ಕಲಕತ್ತಾ (೧೯೫೫)
ಜೈನಸಾಹಿತ್ಯ ಔರ ಇತಿಹಾಸ-ನಾಥೂರಾಮಪ್ರೇಮಿ
ತತ್ವಾರ್ಥಸೂತ್ರ-ಸುಖಲಾಲಜೀ ಶಾಸ್ತ್ರೀ
ಪುರಾತನ ಪ್ರಬಂಧ ಸಂಗ್ರಹ-ಜಿನವಿಜಯಮುನಿ
ಪ್ರಶಸ್ತಿ ಸಂಗ್ರಹ-ಭುಜಬಲಿಶಾಸ್ತ್ರಿ(೧೯೪೨)
ಪ್ರಾಕೃತ ಭಾಷಾ ಔರ ಸಾಹಿತ್ಯ ಕಾ ಆಲೋಚನಾತ್ಮಕ ಇತಿಹಾಸ-ಡಾ. ನೇಮಿಚಂದ್ರಶಾಸ್ತ್ರಿ(೧೯೬೬)
ಪ್ರಾಕೃತ ಸಾಹಿತ್ಯ ಕಾ ಇತಿಹಾಸ-ಜಗದೀಶಚಂದ್ರ ಜೈನ
ಭಟ್ಟಾರಕ ಸಂಪ್ರದಾಯ-ಜೋರಾಪುರಕರ
ಷಟ್ಖಂಡಾಗಮಕೀ ಪ್ರಸ್ತಾವನಾ-ಎಚ್.ಎಲ್. ಜೈನ
ಹರ್ಷಚರಿತ ಏಕ ಸಾಂಸ್ಕೃತಿಕ ಅಧ್ಯಯನ-ಡಾ.ವಿ.ಎಸ್.ಅಗರವಾಲಾ

ತೆಲುಗು ಗ್ರಂಥಗಳು

ಕವಿಜನಾಶ್ರಯಮು-ರೇಚನ
ತೆಲುಗು ಛಂದೋವಿಕಾಸಮು-ಸಂಪತ್ಕುಮಾರ
ಪ್ರಾಜ್ಞನ್ನಯ ಯುಗಮು-ವೆಂಕಟಾವಧಾನಿ
ಪ್ರಾಚೀನಾಂಧ್ರ ಚಾರಿತ್ರಿಕ ಭೂಗೋಲಮು-ಕೆ. ಈಶ್ವರದತ್ತು
ಸಕಲನೀತಿ ಸಮ್ಮತಮು-ಮಡಿಕಿಸಿಂಗನ
ಸಮಗ್ರ ಆಂಧ್ರಸಾಹಿತ್ಯಂ-ಆರುದ್ರ

ತಮಿಳು ಗ್ರಂಥಗಳು

ಪೆರುಂಗತ್ತೆ-ಸಂ:ಸ್ವಾಮಿನಾಥ ಅಯ್ಯರ್
ತೊಳ್ಕಾಪ್ಪಿಯಂ-ಸಂ: ಸುಬ್ರಹ್ಮಣ್ಯಶಾಸ್ತ್ರಿ

ಇಂಗ್ಲೀಷ ಗ್ರಂಥಗಳು

Advanced Studies in Tamil Prosody- A Chidambarantha Chattiyar
A History of South India- K.A. Neelakanta Shastri
A History of Tamil Literature - T.P.M.
Bihar through the ages- Ed. R.R. Divakar
Grammar of Old Kannada Inscription-A.N Narasimhaiah
History of Kannada Literature- R. Narasimcharya (1940)
History of Sanskrit Literature-Winternitz. M.
India as known to Panini- V.S. Agaraval
India in time of Patanjali- B.N. Puri
Jaina Bibliography- Chotelal Jain
Jainism in South India- P.B. Desai
Mediaeval Jainism- Saletore(1938)
Mysore and Coorg from the Inscriptions-B.L. Rice
Rashtrakutas and their times- Altekar (1934)
Sringar Praksha- V. Raghavan
Sources of Karnatak History- S. Srikanta Sastri (1940)
The Cholas- K.A. Nilakantha Shastri (1935)
The Eastern Chalukyas of Vengi- N. Venkataramanayya (1950)
The Jain Sources of the History of Ancient India- Jyotiprasad Jain

ಶಾಸನಗ್ರಂಥಗಳು

Volumes of Epigraphia Carnatica
Volumes of Epigraphia India
Volumes of South-Indian Inscriptions

Volumes of Karnatak Inscriptions
Volumes of Andhra Pradesh Govt. Archaeological Series.
Volumes of the Annual Report of the Mysore Archaeological Department
Historical Inscriptions of South-India
Inscriptions from Northern Karnataka and Kolhapur State
Annual Report of Indian Epigraphy.
Memoirs of the Archaeological Survey of India.
ಅಶೋಕನ ಶಾಸನಗಳು-ಶ್ರೀನಿವಾಸ ರಿತ್ತಿ
ಕನ್ನಡನಾಡಿನ ಕೆಲವು ಶಾಸನಕವಿಗಳು-ಮೇವುಂಡಿ
ಕನ್ನಡ ಲಿಪಿಯ ಉಗಮ ಮತ್ತು ವಿಕಾಸ-ಎ.ವಿ. ನರಸಿಂಹಮೂರ್ತಿ
ಕನ್ನಡನಾಡಿನ ಶಾಸನಗಳು-ಪಿ.ಬಿ. ದೇಸಾಯಿ
ಕರ್ನಾಟಕದ ಶಾಸನಗಳು-ಪಂಚಮುಖಿ ಆರ್.ಎಸ್.
ಕರ್ನಾಟಕ ಭಾಷಾಲಿಪಿ-ತೋಗರೆ ನಂಜುಂಡಶಾಸ್ತ್ರಿ
ಜೈನ ಶಿಲಾಲೇಖ ಸಂಗ್ರಹ-(೧,೨,೩) ಹೀರಾಲಾಲ ಜೈನ
ಬಸವಣ್ಣನವರನ್ನು ಕುರಿತು ಶಾಸನಗಳು-ಎಂ.ಎಂ. ಕಲಬುರ್ಗಿ
ಶಾಸನಪದ್ಯಮಂಜರಿ-ಆರ್. ನರಸಿಂಹಾಚಾರ್
ಶಾಸನಸಂಪದ-ಡಾ. ಆರ್.ಸಿ. ಹಿರೇಮಠ ಮತ್ತು ಎಂ.ಎಂ. ಕಲಬುರ್ಗಿ
ಶಾಸನಸಾಹಿತ್ಯ ಸಂಚಯ-ಅಣ್ಣಿಗೇರಿ ಮತ್ತು ಮೇವುಂಡಿ (೧೯೬೧)
ಕನ್ನಡಶಾಸನಗಳು ಸಾಂಸ್ಕೃತಿಕ ಅಧ್ಯಯನ-ಚಿದಾನಂದಮೂರ್ತಿ
ಶಾಸನ ಪರಿಚಯ-ಪಿ.ಬಿ. ದೇಸಾಯಿ

ಹಸ್ತಪ್ರತಿಗಳು

ಜ್ವಾಲಾಮಾಲಿನೀಕಲ್ಪ-ಇಂದ್ರನಂದಿ (ಕನ್ನಡ ಸಂಶೋಧನ ಸಂಸ್ಥೆ, ಧಾರವಾಡ)
ಕವಿರಾಜಮಾರ್ಗಂ-ನಾಲ್ಕುಪ್ರತಿಗಳು (ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು)
ವರ್ಧಮಾನಪುರಾಣಂ-ಅಸಗ (ಕನ್ನಡ ಅಧ್ಯಯನ ಪೀಠ, ಧಾರವಾಡ)
ಶಬ್ದಮಣಿದರ್ಪಣಂ- (ಹೈದರಾಬಾದ ವಿಶ್ವವಿದ್ಯಾಲಯ)
ಸದಾಶಿವ ನೀತಿ- (ಕನ್ನಡ ಸಂಶೋಧನ ಸಂಸ್ಥೆ, ಧಾರವಾಡ)
ರಾಜಾವಳೀಕಥೆ- (ಕನ್ನಡ ಸಂಶೋಧನ ಸಂಸ್ಥೆ, ಧಾರವಾಡ)

ಹಸ್ತಪ್ರತಿಗಳ ವರ್ಣನಾತ್ಮಕ ಸೂಚೀ ಗ್ರಂಥಗಳು

A descriptive catalogue of the Kannada manuscripts in the Osmania University Library(1966)
A descriptive catalogue of the Kannada manuscripts, library Madras (7 Volumes)
A catalogue of the Kannada, Badaga and Coorg books in the Library of British Museum (1910)
An alphabetical Index of Kanarese manuscripts in the Government Oriental manuscripts Library Madras, (1929)

Descriptive catalogue of Kannada manuscripts in the Kannada Research Institute Dharwar (5 Volumes)
New catalogus catalogarum-Dr. V. Raghavan (Madras) 1949.
A Trinnial catalogue of manuscripts (1919-1920 to 1920-22) Vol. IV; Part-i, Sanskrit 'c'
ಕನ್ನಡಹಸ್ತಪ್ರತಿಗಳ ವರ್ಣನಾತ್ಮಕ ಸೂಚೀ(ಪ್ರಾಚ್ಯ ಸಂಶೋಧನಾಲಯ, ಮೈಸೂರು(೪-ಭಾಗಗಳು ೧೯೬೨-೬೩)
ಕರ್ನಾಟಕ ಕವಿ ಚರಿತೆಯ ಅನುಕ್ತಕೃತಿಸೂಚೀ-ಎಸ್. ಶಿವಣ್ಣ(೧೯೬೭)
ಕನ್ನಡ ಪ್ರಾಂತೀಯ ತಾಡಪತ್ರೀಯ ಗ್ರಂಥಸೂಚೀ-ಕೆ. ಭುಜಬಲಿಶಾಸ್ತ್ರಿ(೧೯೪೮)
ಜಿನರತ್ನಕೋಶ-ಎಚ್.ಡಿ. ವೇಲಂಕರ್(೧೯೪೪)
ಲಕ್ಷ್ಮೀಸೇನ ಭಟ್ಟಾರಕ ಬಸದಿ. ಕೊಲ್ಹಾಪುರ; ಹಸ್ತಪ್ರತಿಸೂಚೀ (ಅಪ್ರಕಟಿತ)
ಹಸ್ತಪ್ರತಿ ಸೂಚೀ, ಹುಮ್ಮಚ (ಅಪ್ರಕಟಿತ)
ಹಸ್ತಪ್ರತಿ ಸೂಚೀ, ಆರಾ (ಬಿಹಾರ) (ಅಪ್ರಕಟಿತ)
ವಚನವಾಙ್ಮಯ ಶಾಖೆಯ ಹಸ್ತಪ್ರತಿ ಸೂಚೀ(ಕ.ವಿ.ವಿ.) (ಅಪ್ರಕಟಿತ)

ಪತ್ರಿಕೆಗಳು

ಸಾಹಿತ್ಯ ಪರಿಷತ್ ಪತ್ರಿಕೆ

ಅಸಗ-ಚಂದ್ರಕಾಂತ ಪಾಟೀಲ, ೧೭-೨(ಪತ್ರವ್ಯವಹಾರ)
ಆದಿಪಂಪ ಮಹಾಕವಿಯ ವಿಷಯವು-ಎಸ್. ತಿಮ್ಮಪ್ಪಯ ಶಾಸ್ತ್ರೀ, ೨-೨
ಎರಡಱುನೂಱಱ ನಾಡು ಯಾವುದು?-ನಾ. ಶ್ರೀ ರಾಜಪುರೋಹಿತ, ೧೫-೪
ಕನ್ನಡ ಛಂದಸ್ಸು-ಸೇಡಿಯಾಪು ಕೃಷ್ಣಭಟ್ಟ, ೧೮-೧, ೨
ಕನ್ನಡ ತತ್ಸಮ ತದ್ಭವಗಳು-ಕಡೆಂಗೊಡ್ಲು, ಶಂಕರಭಟ್ಟ ೪೪-೨
ಕನ್ನಡದ ದಕ್ಷಿಣೋತ್ತರ ಮಾರ್ಗಗಳ ವಿಚಾರ-ಆರ್. ರಘುನಾಥರಾಯ, ೧-೪
ಕನ್ನಡ ನಾಟಕದ ಹಳಮೆ ಗೋವಿಂದ ಪೈ, ೩೧-೨
ಕನ್ನಡ ಲಾಕ್ಷಣಿಕರು ಮತ್ತು ಪ್ರಾಕೃತ ಭಾಷೆಯು-ನಾ. ಶ್ರೀ. ರಾಜಪುರೋಹಿತ, ೧೧-೧
ಕನ್ನಡ ಸಾಹಿತ್ಯ ಚರಿತ್ರೆ: ಪ್ರಾಚೀನಕಾಲ-ಟಿ.ಎಸ್. ವೆಂಕಣ್ಣಯ್ಯ, ೬-೪
ಕರ್ನಾಟಕಕ್ಕೆ ಜೈನಧರ್ಮದ ಆಗಮನ-ಗೋವಿಂದ ಪೈ, ೨೬-೧, ೨
ಕರ್ಣಾಟಕ ಪದಗಳು ಮತ್ತು ದೇಶೀಯ ಪದಗಳು-ಹ. ನಾರಾಯಣರಾವ್, ೨-೨
ಕರ್ನಾಟಕ ವಿಷಯ ಜಾತಿ ಛಂದಸ್ಸು-ಅ. ವೆಂಕಟಸುಬ್ಬಯ್ಯ, ೨೦-೩
ಕರ್ನಾಟಕದ ಶಾಸನ ಸಂಪತ್ತು-ಪಿ.ಬಿ. ದೇಸಾಯಿ ೪೨-೧
ಕವಿಪರಮೇಷ್ಠಿ ಕನ್ನಡದಲ್ಲಿ ಬರೆದಿದ್ದನೆ?-ಭೀಮರಾವ ಚಿಟಗುಪ್ಪಿ, ೫೪-೨
ಕವಿರಾಜಮಾರ್ಗ(ಮದ್ರಾಸ ಆವೃತ್ತಿ)-ವಿಮರ್ಶೆ, ೧೭-೪
ಕವಿರಾಜಮಾರ್ಗದ ಕರ್ತೃ-ನಾ.ಶ್ರೀ. ರಾಜಪುರೋಹಿತ, ೭-೧(ಪತ್ರವ್ಯವಹಾರ)
ಕವಿರಾಜಮಾರ್ಗದ ಗ್ರಂಥದ ಕರ್ತೃ ಯಾರು?-ಟಿ.ಎಸ್. ವೆಂಕಣ್ಣಯ್ಯ, ೭-೪
ಕವಿರಾಜಮಾರ್ಗ ಗ್ರಂಥಕರ್ತೃವು ಯಾರು?-ನಾ. ಶ್ರೀ. ರಾಜಪುರೋಹಿತ, ೬-೪
ಕವಿರಾಜಮಾರ್ಗದಲ್ಲಿ ರಾಮಾಯಣ ಪದ್ಯಗಳು-ಎಂ.ವಿ. ಸೀತಾರಾಮಯ್ಯ, ೫೧-೧, ೨
ಕವಿರಾಜಮಾರ್ಗ ವಿವೇಕ-ಮುಳಿಯ ತಿಮ್ಮಪ್ಪಯ್ಯ, ೨೮-೧ (ವಸ್ತು ಸಂಗ್ರಹ)

ಪ್ರಬುದ್ಧ ಕರ್ಣಾಟಕ

ಪೊನ್ನನೂ ಕಾಳಿದಾಸನೂ-ಡಿ.ಎಲ್.ಎನ್., ೧೨-೨
ಬ್ರಹ್ಮಗಿರಿಯ ಭೂಶೋಧನೆ-ಎಂ. ಶೇಷಾದ್ರಿ, ೩೧-೩, ೪
ಭಾರತ ಇತಿಹಾಸವನ್ನು ಮತ್ತು ನಾಗರಿಕತೆಯನ್ನು ನಿರೂಪಿಸಿದ ಕಲ್ಹಣ-ಜಿ. ಸೀತಾರಾಮಯ್ಯ, ೩೭-೪
ಭಾಷೆಯ ಹುಟ್ಟು-ಎನ್. ಬಾಲಸುಬ್ರಹ್ಮಣ್ಯ, ೩೮-೨
ಭಾಷೆ:ಲೋಕೋಪಯೋಗಿ ಭಾವೋಪಯೋಗಿ-ಕು.ವೆಂ.ಪು. ೩೬-೪
ಭಾಸನು ಅರಿತಿದ್ದ ಬೃಹತ್ಕಥೆಯ ಪಾಠ ಯಾವುದು?-ಎಲ್. ಗುಂಡಪ್ಪ, ೧೮-೪
ಮಾನಸೋಲ್ಲಾಸದಲ್ಲಿ ಛಂದಸ್ಸು-ಡಿ.ಎಲ್.ಎನ್., ೪೫-೨
ಮಾಲ್‌ಖೇಡಿನ ರಾಷ್ಟ್ರಕೂಟರು ಎಲ್ಲಿಯವರು?-ಎನ್. ಲಕ್ಷ್ಮೀನಾರಾಯಣರಾವ್, ೨೦-೩
ಮೊಹೆಂಜೋದಾರೋದಲ್ಲಿ ಈಚೆಗೆ ನಡೆದ ಸಂಶೋಧನೆ-ಅನು:ಡಿ.ಎಲ್.ಎನ್., ೧೬-೪
ರಾಷ್ಟ್ರಕೂಟರ ಕಾಲದ ಭಾರತೀಯ ಸಾಹಿತ್ಯ-ಎನ್. ಅನಂತರಂಗಾಚಾರ್, ೩೮-೩
ಲೇಯಾಸ್ ದೇಶದ ಪಂಚತಂತ್ರ-ಅ. ವೆಂಕಟಸುಬ್ಬಯ್ಯ, ೪೦-೪
ಲೋಕೋಪಕಾರ-ಎನ್. ಅನಂತರಂಗಾಚಾರ್, ೧೮-೨
ವಚನಸಾಹಿತ್ಯದ ಉಗಮ- ಎಂ. ಚಿದಾನಂದ ಮೂರ್ತಿ, ೪೩-೨
ವಡ್ಡಾರಾಧನೆಯ ವೈಶಿಷ್ಟ್ಯಗಳು-ಕೆ.ಕೆ.ಗೌಡ, ೪೮-೨
ವಡ್ಡಾರಾಧನೆಯೆಂಬ ಹಳಗನ್ನಡ ಗದ್ಯಗ್ರಂಥ-ಅನು:ಡಿ.ಎಲ್.ಎನ್., ೨೪-೨
ಶಾಸನಕಾಲದ ಐತಿಹ್ಯಗಳು-ಪಿ.ಬಿ. ದೇಸಾಯಿ, ೨೬-೧
ಸಮಂತಭದ್ರನೇ ಶ್ರೀವಿಜಯನಿರಬಹುದೇ?-ದ.ರಾ. ಬೇಂದ್ರೆ, ೧೯-೧
ಸಂಸ್ಕೃತ ಗದ್ಯಕಲೆಯ ಸಂಕ್ಷಿಪ್ತ ಇತಿಹಾಸ-ಸಿ. ರಾಮಾಚಾರಿ, ೪೦-೪
ಸಂಸ್ಕೃತದಲ್ಲಿ ಕನ್ನಡ ಗ್ರಂಥಗಳು-ಕೆ. ವೆಂಕಟರಾಯಾಚಾರ್, ೪೦-೪
ಸಾಹಿತ್ಯ ಚರಿತ್ರೆಯ ಸ್ವರೂಪ-ಡಿ.ಎಲ್.ಎನ್., ೩೦-೨
ಸಿಂಧೂ ತೀರದ ಪುರಾತನ ಸಂಸ್ಕೃತಿ-ಹಟ್ಟಿ ಕೃಷ್ಣಯ್ಯಂಗಾರ್, ೧೪-೨
ಸೂಕ್ತಿಸುಧಾರ್ಣವದಲ್ಲಿಯ ಕೆಲವು ಪದ್ಯಗಳ ಆಕರಗಳು-ಎಸ್. ಶಿವಣ್ಣ
ಸೈಂಧವ ಸಂಸ್ಕೃತಿಯ ಕೆಲವು ಪ್ರತೀಕಗಳು-ಸಿ.ಬಿ. ಸೀತಾರಾಂ, ೨೯-೨

ಕನ್ನಡನುಡಿ

ಅಸಗನ ಕನ್ನಡ ಕುಮಾರಸಂಭವ-ವೆಂ.ಭೀ. ಲೋಕಾಪುರ, ೧೫-೧೨
ಈಗ ದೊರೆಯದ ಕೆಲವು ಹಳಗನ್ನಡ ಕಾವ್ಯಗಳು-ತೀ.ನಂ.ಶ್ರೀ., ೪-೬
ಎಟಿ-ಕೆ.ಪಿ. ಸೀತಾರಾಮ ಕೆದಿಲಾಯ, ೨೮-೪
ಕವಿರಾಜಮಾರ್ಗದ ಎರಡು ವೃತ್ತಗಳು-ಕೆ.ಪಿ. ಸೀತಾರಾಮ ಕೆದಿಲಾಯ, ೨೯-೭
ಕವಿರಾಜಮಾರ್ಗದಲ್ಲಿ ಕಾರಕ ವಿಚಾರ-ವಿ. ಕೃಷ್ಣಸ್ವಾಮಿ ಅಯ್ಯಂಗಾರ್, ೨೮-೨
ಕವಿರಾಜಮಾರ್ಗದ ಕೆಲವು ವೃತ್ತಗಳ ಛಂದಸ್ಸುಗಳು-ಕೆ.ಪಿ. ಸೀತಾರಾಮ ಕೆದಿಲಾಯ, ೨೯-೫
ಗಮಕಸಮಾಸ-ವಿ. ಕೃಷ್ಣಸ್ವಾಮಿ ಅಯ್ಯಂಗಾರ್, ೨೮-೪
ಗಮಕಸಮಾಸ-ತೆಕ್ಕುಂಜ ಗೋಪಾಲಕೃಷ್ಣಭಟ್ಟ, ೨೯-೮
ಗೀತಿಕೆಯೆಂಬುದರಿಂದ ಸಾಂಗತ್ಯ ಸಂಬಂಧಿಯಾಗಿರಬಹುದೆ?ಹೇಗೆ?-ಎಸ್. ಶಂಕರನಾರಾಯಣಭಟ್ಟ, ೧೬-೩
ಭುವನೈಕರಾಮಾಭ್ಯುದಯ ಭುವನೈಕರಾಮ-ಎಲ್.ಆರ್. ಹೆಗಡೆ, ೨೦-೫
ರನ್ನನ ಬಾಣ-ಹ. ನಾರಾಯಣರಾವ್, ೨೪-೨,೩(ಸಂದೇಹಗಳೂ ಸೂಚನೆಗಳೂ)
ವರ್ಣಕವಿ ವಸ್ತುಕವಿ-ಕೆ. ವೆಂಕಟರಾಯಾಚಾರ್ಯ, ೨೮-೧೦

ಜಯಕರ್ನಾಟಕ

ಅಕ್ಕಲಕೋಟೆಯ ತಾಲೂಕಿನ ಕನ್ನಡ ಅವಶೇಷಗಳು-ಎ.ಎಂ. ಅಣ್ಣಿಗೇರಿ, ೩೮-೪
ಅಸಗ ಕವಿಯ ಪರಿಚಯ-ವೆಂ. ಭೀ. ಲೋಕಾಪುರ, ೨೫-೪
೯ನೆಯ ಶತಮಾನದಲ್ಲಿದ್ದ ಅಚಲಾನಂದದಾಸರು-ಬೇಲೂರ ಕೇಶವದಾಸ, ೨-೧೧
ಕನ್ನಡ-ಮುಳಿಯ ತಿಮ್ಮಪ್ಪಯ್ಯ, ೪-೭, ೮
ಕನ್ನಡ ಛಂದಸ್ಸಿನ ಇತಿಹಾಸ-ಕುಲಕರ್ಣಿ ಪ್ರಹ್ಲಾದರಾಯರು, ೧೦-೧೨(ವಾದಭೂಮಿ)
ಕರ್ನಾಟಕದಲ್ಲಿ ಬೌದ್ಧಧರ್ಮ-ಎ.ಎಂ. ಅಣ್ಣಿಗೇರಿ, ೨೪-೫
ಕೊಪ್ಪಳವೇ ಕೊಪಣನಗರವು -೯-೯, (ಬಿಡಿ ನುಡಿಗಳು)
ಜಯಕೀರ್ತಿ ನಾಗವರ್ಮರ ಕಾಲದ ಷಟ್ಪದಿ-ಎಸ್.ಎಸ್. ಬಸವನಾಳ, ೨೫-೬
ಪ್ರಾಚೀನ ಕರ್ನಾಟಕದ ಒಬ್ಬ ನಟಶ್ರೇಷ್ಠ ಹಾಗೂ ಒಬ್ಬ ಆದಿಕವಿ-ಮಧುರಚೆನ್ನ, ೯-೫,೬
ಪುಲಿಗೆರೆನಾಡು-ಗದ್ದಿಗಿಮಠ ಬಿ.ಎಸ್.೩೫-೩
ಯತಿ-ಎಂ. ಶರಭಯ್ಯ, ೧೨-೮
ಶ್ರವಣಬೆಳ್ಗೊಳ ಕ್ಷೇತ್ರವು ಮತ್ತು ಕೊಪಣಕ್ಷೇತ್ರವು-ನಾ.ಶ್ರೀ. ರಾಜಪುರೋಹಿತ, ೯-೧೦
ಶಾಸನ ಕರ್ಣಾಟಕ-ಪಿ.ಬಿ. ದೇಸಾಯಿ, ೧೨-೯

ಶರಣ ಸಾಹಿತ್ಯ

ಚಿತ್ರದುರ್ಗ ಜಿಲ್ಲೆಯ ಬೌದ್ಧಧರ್ಮದ ಕುರುಹುಗಳು-ಹುಲ್ಲೂರು ಶ್ರೀನಿವಾಸ ಜೋಯಿಸ, ೧೯-೩,೪
ದಕ್ಷಿಣ ಭಾರತದಲ್ಲಿ ಜೈನಧರ್ಮದ ಪ್ರವೇಶ-ನೇಮಿಚಂದ್ರಶಾಸ್ತ್ರಿ, ೧೩-೧, ೨,೩
ನಾಗಾರ್ಜುನ ಸಮಸ್ಯೆ-ಅನು: ಹುಲ್ಲೂರು ಶ್ರೀನಿವಾಸ ಜೋಯಿಸ, ೧೮-೩,೪
ನೃಪತುಂಗನ ರಾಣಿ ಯಾರು?-ಕೆ. ವೆಂಕಟರಾಯಾಚಾರ್ಯ, ೧೮-೯
ಪಂಚತಂತ್ರ ವಿಸ್ತಾರ-ಕೆ. ವೆಂಕಟರಾಯಾಚಾರ್, ೧೩-೭
ಪ್ರಾಸವಿಚಾರ-ಡಿ. ರೇಣುಕಾಚಾರ್, ಕೆ. ದೊರೆಸ್ವಾಮಿ ೧-೬

ಜಯಂತಿ

ರಾಜನೂ ಕವಿಯೂ ಆದ ನೃಪತುಂಗ-ಪಂಚಮುಖಿ ಆರ್.ಎಸ್. ೧೯೪೭, ನವೆಂಬರ್
ಅಸಗನ ವರ್ಧಮಾನಪುರಾಣದ ವ್ಯಾಖ್ಯಾನ-ವೆಂ. ಭೀ. ಲೋಕಾಪುರ, ೧೮-೨
ವಾಗ್ಭೂಷಣ
ಗುಣಸೂರಿ ಯಾರು?- ದ.ರಾ. ಬೇಂದ್ರೆ, ೧-೧, ಹೊಸಸಂಚಿಕೆ, ೧೯೩೯
ಪಂಪ ನಾಗವರ್ಮರ ಮೂಲದೇಶ-ಹ. ನಾರಾಯಣರಾವ್, ೨೪-೧

ಜೀವನ

ಕವಿರಾಜಮಾರ್ಗದ ಕವಿ ಯಾರು?-ಕೆ. ವೆಂಕಟರಾಯಾಚಾರ್, ೧೫-೯
ಕವಿಚಕ್ರವರ್ತಿ ಪೊನ್ನನ ಮೋರು-ಎನ್. ಬಸವಾರಾಧ್ಯ(೧೮-೧೦)

ಇತರ ಲೇಖನಗಳು

ವಡ್ಡಾರಾಧನೆಯ ವೈಶಿಷ್ಟ್ಯ-ಹಂಪ ನಾಗರಾಜಯ್ಯ (ಸನ್ಮತಿ, ೧೧-೧೨)
ದುರ್ವಿನೀತನ ಕಾವ್ಯಗಳು-ಕೆ. ವೆಂಕಟರಾಯಾಚಾರ್(ಸುಬೋಧ, ೩೦-೨)
ಶಾಸನಗಳೂ ಜೈನಸಮಯವೂ-ಕೆ. ವೆಂಕಟರಾಯಾಚಾರ್(ಗುರುದೇವ, ೧೯೫೫, ಎಪ್ರಿಲ್)

ಪ್ರಾಕೃತ ಭಾಷೆಯಲ್ಲಿ ಜೈನಗ್ರಂಥಗಳು-ಎ.ಎನ್. ಉಪಾಧ್ಯೆ (ವಿವೇಕಾಭ್ಯುದಯ, ೧೯೪೯, ಮಾರ್ಚ)
ಪ್ರಾಚೀನ ಕವಿಗಳ ಅವ್ಯಕ್ತ ಗ್ರಂಥಗಳು-ಕೆ. ವೆಂಕಟರಾಯಾಚಾರ್ (ವೀಣಾ, ೧೯೫೩, ದೀಪಾವಳಿ)
ಬೆಳ್ವೊಲ ಮೂನೂಱು-ಶ್ರೀನಿವಾಸ ರಿತ್ತಿ(ಕರ್ನಾಟಕ ಭಾರತಿ, ೧-೧)

Indian Antiquary:

Amoghavarsh I as a patron of literature- Fleet xxxiii-197
A note on Amoghavarsha I- Fleet xx- 133
A note on Vimala- Haridas Shastri xix-378
Bhadrabahu Chandrgupta and Sravanabelgola-Feet xxi-156
Jain Sakatayana Contemporary with Amoghavarsha I- K.B. Pathak xLiii-205
Katha and vrattaka-Helen M. Johnson Lvi-17
Kavisvara's Kavirajamarga-Fleet xxxiii-258
Nisadhi and Gudda -Fleet xii-99
Old Kanarese literature-Rev. Kittle iv-15
Panchavara Variyim-S.K. Ayyangar, Lxi-81
Pujyapada and the authorship of Jianendra Vyakarana- K.B. Pathak xii
The Core of Karnata- H. Narayana Rao Lii-17
The Kundi Country-Fleet xxix-278
Vaddavara-Fleet, xxii-251
Vaddavara-B.L. Rice. xxiii-167

New Indian Antiquary:

Date of Asaga's Vardhamana Charita-K.Madhava Sharma, iv
Date of the Grammarian Bheemasena-P.K. Gode, ii
On the authorship of Mangal verse in inscriptions-A.N. Upadya, ii
The authorship of date of the Mricchakatika-R.D. Karmarkar, ii

Journal of the Royal Asiatic Society (New)

An old Sanskrit version of the Brihatkatha-R. Narasimhachar, xLv,
Brihatkatha - S. Krishnaswami Aiyangar, xxxiii
Dattaka Sutra- R. Narasimahachar, xLiii
Early History of Kannada Literature-B.L. Rice, xxii
Early Kannada authors-B.L. Rice-XV
Hindu Inscriptions-Walter Elliot, iv(old)
Remarks on Mr. R. Narasimhachar's note- Fleet, xLiii
The Brihatkatha in Markandeya-G.A.G. XLV
The Mysterious Paishachi-Alfred-master, 1943
The Poet Pampa- B.L. Rice, xiv

Journal of the Asiatic Society of Bombay(New)
A note on the Bhilsa inscription of Vachaspati - V.V. Mirashi xxxi and xxxii
Identity and date of Pravasasena the author of the Setubandha-A.D. Pusarkar xxxi and xxxii

Journal of the Bombay Branch of Royal Asiatic Society (Old)
Nripatunga and the authorship of Kavirajamarga A reply to Dr. Fleet - K.B. Pathak xxii
Nripatunga's Kavirajamarga- K.B. Pathak, xx

Journal of the Bombay branch of Royal Asiatic Society (New)
Chandonusasana of Jayakirti and ancient Kannada Metres-H.D. Velankar. xxi
Development of Kannada Drama-K.G. Kundangar, VL-i.ii
Kolhapur Copper plate grant of Akalavarshadeva-K.G. Kundangar, x-i,ii
On the date of Sakatayana-Chintamani-K.B. Pathak, vi-i,ii

Annals of Bhandarkar Oriental Research Institute
An analysis of authorities quoted in Sarnagadhara Paddhati- Haradatta Sharma-xviii
Kanarese Words in Desilesxcons-A.N. Upadhye-xii
On the date of Akalankadeva-K.B. Pathak, xiii
On the date of Samantabhadra-K.B. Pathak, xi

Journal of Mythic Society
Buddhism in Karnatak- M. Chidananda Murthy, Liii-iii
Buddhism and Mysore-P.S. Laxminarasu, xxxi-iii
Elephant lore in Pallava history-C. Minakshi, xxviii-iv
Family of Arikesari. Patron of Pampa-N. Laxminarayana Rao, xlv-iv
Family of Arikesari, II, Patron of Pampa-R.S. Panchamukhi, xlviii
Karnatak Kavirajamarga-S. xxiii-iii
Konda Kunda, his domicile-P.B. Desai, xlvi-i
Other versions of Brihatkatha-?
The age of Bharavi and Dandin or the literary history of the Pallava period-A. Rangaswami Saraswati, xiii

Jain Antiquary
A Pattavali of Senagana-A.N. Upadhye, xiii-ii
Jain Gurus of the name Pujyapada-J.P. Jain, xvi-i,ii, xviii-i
Lohacharya's Aradhana, a missing work-A.N. Upadhye, xxii-i
Pujayapada of the Chalukyan records- J.P. Jain, xix- i, xx-ii
Some more aliases of KundaKunda-J.P. Jain, xiii-i
Srivardhadeva and Tumbaluracharya-Govinda Pai, 1939, March

The birth place of Dhavala and Jayadhavala-J.P. Jain, xiv-ii
The date of Durvinita Ganga, the Royal patron of Pujyapada-J.P. Jain, xviii-ii
The Jain Bhagavati Sutra- B.C. Law, xiii-ii
The Predecessors of Swami Virasena-J.P. Jain, xii-ii

आचार्य कुंदकुंद कृत परिकर्मनामकग्रंथ–कैलासचद्रशास्त्री, xviii-ii
कविपरमेश्वर या कविपरमेष्ठी – आ. ने. उपाध्ये, xii-ii
मुनिवंशाभ्युदय, ऐतिहासिक काव्य – आचार्य देशभूषण महाराज, xvi-i
हुंबजक ग्रंथभांडार – के. भुजबलि शास्त्री, xii-ii

Jain Gazettee
Prasnottara Ratnamala-Govinda Pai, xxviii-i

Journal of Indian History
Chandragupta and Bhadrabahu-Mookarjee, xx-iii

Indian Historical quarterly
Jain-Ramayanas-D.L.N. 1939, Dec. Vol. xv, Part 4
The Adipurana and Brihatkatha-A. Venkatasubbaiah, v (1929)
The Adipurana and Brihatkatha-Kamala Prasad Jain, v (1929)

Karnatak Historical Review
Asaga and his works- A.N. Upadhye, ii-i

Tamil Culture
Introduction to Tamil Poetry-Chidambaranatha Chattiyar, vii-i
Earliest Jain and Buddhist teaching in the Tamil Country-Xaviah S. Thani Nayagam, viii-iv

Journal of Sri Venkateswar Oriental Institute, Tirupati
Dandi and his School-K.S.N. Brahman, xv-ii
Libraries in Ancient and medieval India-N. Subramanya Shastri, x-i
Spread of Southern Buddhism-N. Subramanya Shastri, vl-i
Sutralankara in Chinise-N. Aiyaswamy, ii-i

Sri Venkateswar University Journal Tirupati
Aindra School of Sanskrit Grammar-Varadarajumai, I-i, ii
ಕುಮಾರಸಂಭವಮುಲೋನಿ ಕನ್ನಡ ಪದಾಲು-iv

Journal of the University of Bombay (New)
King Sudraka on historical study-B.A. Saletore, xvi-i, xvi-iv

Nagavarma & Jayakirti on Kannada metres- Kundangar, xvi-ii

Journal of the Mysore University

Jainism in Mysore-Achyuta Rao, 1962. March

Journal of Karnatak University

ತ್ರಿಪದಿ: ಅದರ ಸ್ವರೂಪ ಮತ್ತು ಇತಿಹಾಸ-ಎಂ. ಚಿದಾನಂದಮೂರ್ತಿ, ix-1965

ಒನಕೆವಾಡು-ಎಂ. ಚಿದಾನಂದಮೂರ್ತಿ-xi-1967

The Journal of Oriental Research, Madras

A textual note on Brihatkathakosa-B.ch. Chabbar, xvi

Inscriptions of Sanskrit found in Nagarjunakonda-T.N. Ramachandra, xvi

Sangham literature-V. Narayan Iyar, ii

Some rare metres in Sanskrit- A, Venkatasubbayya, ix-i

The country of Sapada-laksha-N. Laxminarayan Rao, xviii

Vachaspati, General of Rashtrakuta Krishna III-M. Venkataramayya, xxii-i, iv(1952-53)

Annals of Oriental Research of the University, Madras:

A Common literary and Prosodical tradition in South-Indian languages-K. Ramakrishnaiah, xiii

Kannada Telugu literature, a Comparative Study, xvii-ii

Lives of the Telugu Poets(850-1000)-N. Venkata Rao viii-i, ii

ಕವಿಜಿಹ್ವಾಬಂಧನ-ಎಚ್. ಶೇಷಯ್ಯಂಗಾರ್, iv-i, ii; v-i

ಛಂದಸ್ಸಾರಂ-ಎಂ.ಎಂ. ಭಟ್, vii-i

ನಾಗವರ್ಮ ಕವಿಗಳು ಎಷ್ಟುಮಂದಿ?-ಎಚ್. ಶೇಷಯ್ಯಂಗಾರ್. vii-i

❖❖

ಸಂಕ್ಷೇಪಗಳು


ಅ. ಪುರಾಣ, ಅಜಿ. ಪುರಾಣ	- ಅಜಿತ ತೀರ್ಥಕರ ಪುರಾಣ
ಅನ. ಪುರಾಣ	- ಅನಂತನಾಥ ಪುರಾಣ
ಅ. ವಸ್ತುಕೋಶ	- ಅಭಿಧಾನ ವಸ್ತುಕೋಶ
ಅ.ದಶ. ಚರಿತೆ	- ಅಭಿನವ ದಶಕುಮಾರ ಚರಿತೆ
ಅ.ವ.ಚ.	- ಅಲ್ಲಮನ ವಚನ ಚಂದ್ರಿಕೆ
ಆ. ಪುರಾಣ	- ಆದಿಪುರಾಣ
ಕ.ಅ.ಮ.	- ಕರ್ನಾಟಕದ ಅರಸು ಮನೆತನಗಳು
ಕ.ಕ.ಚ.	- ಕರ್ನಾಟಕ ಕವಿಚರಿತೆ
ಕ.ಕಾ.ತತ್ವ	- ಕನ್ನಡದಲ್ಲಿ ಕಾವ್ಯತತ್ವ
ಕ.ಕಾರಕ	- ಕಲ್ಯಾಣಕಾರಕ
ಕ.ಕಾವ	- ಕಬ್ಬಿಗರ ಕಾವ
ಕ.ಕಾವ್ಯಾಲಂಕಾರ	- ಕನ್ನಡ ಕಾವ್ಯಾಲಂಕಾರ
ಕ.ಕೈ.	- ಕನ್ನಡ ಕೈಪಿಡಿ
ಕ.ಗ್ರ.ಸಂ.	- ಕನ್ನಡ ಗ್ರಂಥಸಂಪಾದನೆ
ಕ.ಜಿ. ಬಂಧನ	- ಕವಿಜಿಹ್ವಾ ಬಂಧನಂ
ಕ.ಭಾ.	- ಕರ್ನಾಟಕ ಭಾರತಿ
ಕ.ಭಾ.ಭೂ., ಕ.ಭಾ. ಭೂಷಣ	- ಕರ್ಣಾಟಕ ಭಾಷಾಭೂಷಣ
ಕ.ಮಾ., ಕ.ಮಾರ್ಗ	- ಕವಿರಾಜಮಾರ್ಗ
ಕ.ಸಾ.ಚ.	- ಕನ್ನಡ ಸಾಹಿತ್ಯಚರಿತ್ರೆ
ಕಾ.ದ., ಕಾ.ದರ್ಶ	- ಕಾವ್ಯಾದರ್ಶ
ಕಾ.ಲೋ., ಕಾ.ಲೋಕನ.	- ಕಾವ್ಯಾವಲೋಕನಂ
ಕಾ.ಸಾ.	- ಕಾವ್ಯಸಾರಂ
ಕು.ಭಾ., ಕು.ಭಾರತ	- ಕುಮಾರವ್ಯಾಸ ಭಾರತ
ಕು. ರಾಮಾಯಣ	- ಕುಮುದೇಂದು ರಾಮಾಯಣ
ಕೆ.ಜೀ.ಕಾ.	- ಕೆಲವು ಕನ್ನಡ ಕವಿಗಳ ಜೀವನಕಾಲ ವಿಚಾರ
ಕೊ.ಬ. ಚಾರಿತ್ರ	- ಕೊಟ್ಟೂರ ಬಸವೇಶ್ವರ ಚಾರಿತ್ರ

ಗ.ಯು.	-	ಗದಾಯುದ್ಧ
ಚಂ.ಪುರಾಣ	-	ಚಂದ್ರಪ್ರಭ ಪುರಾಣ
ಚಾ.ಪು., ಚಾ. ಪುರಾಣ	-	ಚಾವುಂಡರಾಯ ಪುರಾಣ
ಚಿ. ವಿಜಯ	-	ಚಿಕದೇವರಾಜ ವಿಜಯ
ಛಂ. ಶಾಸನ	-	ಛಂದೋನುಶಾಸನ
ಜಯ;ಜಯ ಕ.	-	ಜಯಕರ್ನಾಟಕ
ಜ. ವಿಜಯ	-	ಜಗನ್ನಾಥ ವಿಜಯ
ಜೀ. ಸಂ.	-	ಜೀವ ಸಂಬೋಧನೆ
ಜಾ. ತಿಲಕ	-	ಜಾತಕ ತಿಲಕಂ
ದೇ. ದಾ. ಪ್ರಶಸ್ತಿ	-	ದೇವರ ದಾಸಿಮಾರ್ಯ ಪ್ರಶಸ್ತಿ
ಧ. ಪರೀಕ್ಷೆ	-	ಧರ್ಮಪರೀಕ್ಷೆ
ಧರ್ಮ. ಪು.	-	ಧರ್ಮನಾಥ ಪುರಾಣ
ನಾ. ಪಂಪ	-	ನಾಡೋಜಪಂಪ
ನೇ.ಜಿ. ಸಂಗತಿ	-	ನೇಮಿಜಿನೇಶ ಸಂಗತಿ
ನೇ. ಪುರಾಣ	-	ನೇಮಿನಾಥ ಪುರಾಣ
ಪಂ. ತಂತ್ರ	-	ಪಂಚತಂತ್ರ
ಪಂ. ಭಾ	-	ಪಂಪಭಾರತ
ಪಂ. ರಾ	-	ಪಂಪ ರಾಮಾಯಣ
ಪ್ರ.ಕ.	-	ಪ್ರಬುದ್ಧ ಕರ್ನಾಟಕ
ಪಾ. ಪುರಾಣ;ಪಾರ್ಶ್ವ. ಪು; ಪಾರ್ಶ್ವ. ಪುರಾಣ	-	ಪಾರ್ಶ್ವನಾಥಪುರಾಣ
ಪುಷ್ಪ. ಪು;ಪುಷ್ಪ. ಪುರಾಣ; ಪು. ಪುರಾಣ	-	ಪುಷ್ಪದಂತಪುರಾಣ
ಬ.ಷ.ವ.	-	ಬಸವಣ್ಣನವರ ಷಟ್ಸ್ಥಲ ವಚನಗಳು
ಭ.ವೈ.	-	ಭರತೇಶವೈಭವ
ಭಾ.ಕಾ.ಮೀ.	-	ಭಾರತೀಯ ಕಾವ್ಯ ಮೀಮಾಂಸೆ
ಭೈ. ಕಾ. ರತ್ನಾಕರ	-	ಭೈರವೇಶ್ವರ ಕಾವ್ಯದ ಕಥಾಮಣಿಸೂತ್ರ ರತ್ನಾಕರ
ಮ. ತಿಲಕ	-	ಮದನತಿಲಕ
ಮ.ಪು.	-	ಮಹಾಪುರಾಣ
ಮ.ಸಾ.ಪ.ಪ.	-	ಮಹಾರಾಷ್ಟ್ರ ಸಾಹಿತ್ಯ ಪರಿಷತ್ ಪತ್ರಿಕೆ
ರ.ಕ.ಶ್ರಾ	-	ರತ್ನಕರಂಡಕ ಶ್ರಾವಕಾಚಾರ
ರ. ಮತ	-	ರಟ್ಟಮತ
ರ. ರತ್ನಾಕರ	-	ರಸರತ್ನಾಕರ
ರಾ. ಚರಿತೆ	-	ರಾಮನಾಥ ಚರಿತೆ
ವಡ್ಡಾ	-	ವಡ್ಡಾರಾಧನೆ
ವ. ಪುರಾಣ, ವರ್ಧ. ಪು	-	ವರ್ಧಮಾನ ಪುರಾಣ

ವಾಯು. ಪು.	-	ವಾಯು ಪುರಾಣ
ಶ.ಮ.ದ.;ಶ.ದರ್ಪಣ, ಶ.ಮ.ದರ್ಪಣ	-	ಶಬ್ದಮಣಿದರ್ಪಣ
ಶ. ಶಾಸನ	-	ಶಬ್ದಾನುಶಾಸನ
ಶಾ. ಪರಿಚಯ	-	ಶಾಸನಪರಿಚಯ
ಶ್ರೀ ವಿ.ದಾ. ಸುಳಾದಿ	-	ಶ್ರೀವಿಜಯದಾಸರ ಸುಳಾದಿ
ಶೃ. ರತ್ನಾಕರ	-	ಶೃಂಗಾರರತ್ನಾಕರ
ಸ.ಪರೀಕ್ಷೆ	-	ಸಮಯಪರೀಕ್ಷೆ
ಸಂ.ಕ.ಸಾ.ಚ.	-	ಸಂಕ್ಷಿಪ್ತ ಕನ್ನಡ ಸಾಹಿತ್ಯ ಚರಿತ್ರೆ
ಸಂ. ತರಂಗ	-	ಸಂಶೋಧನ ತರಂಗ
ಸಾ.ಪ.	-	ಸಾಹಿತ್ಯ ಪರಿಷತ್ ಪತ್ರಿಕೆ
ಸಾ.ಸಂ	-	ಸಾಹಿತ್ಯ ಸಂಶೋಧನೆ
ಸು. ಚರಿತೆ	-	ಸುಕುಮಾರ ಚರಿತ್ರೆ
ಸೂಕ್ತಿ	-	ಸೂಕ್ತಿಸುಧಾರ್ಣವಂ
ಸೋ. ಶತಕ	-	ಸೋಮೇಶ್ವರ ಶತಕ
AORM	-	Annals of Oriental Research Institute of the University of Madras
ARSIE	-	Annual Reports on South Indian Epigraphy
BKI	-	Bombay Karnatak Inscriptions
BRK	-	Brihatkathakosha. (Ed. A.N. Upadhye)
EC	-	Epigraphia Carnatica
EI	-	Epigraphia Indica
GOKI	-	Grammar of old Kannada Inscriptions
HAS	-	Hyderabad Archaeological Series
HIL	-	History of Indian literature (winterhitz)
HKL	-	History of Kannada Literature R. Narasimhachar
IA, I.Ant. Ind. Ant.	-	Indian Antiquary
JA	-	Jain Antiquary
JBAS	-	Journal of the Asiatic Society of Bombay
JBBRAS	-	Journal of the Bombay branch Royal Asiatic Society
JKU	-	Journal of Karnatak University
JORM	-	The Journal of Oriental Research, Madras
JRAS	-	Journal of the Royal Asiatic Society
JSHAI	-	The Jain Sources of the history of Ancient India
JSI	-	Jainism in South India

JUB	-	Journal of the University of Bombay
KI	-	Karnatak Inscriptions
MAR	-	Annual Report of the Mysore Archaeological Department
MASI	-	Memoirs of the Archaeological Survey of India
MCI	-	Mysore & Coorg from the Inscriptions- B.L. Rice
QJMS	-	Quarterly Journal of Mythio Society
RT	-	Rashtrakutas and their times
SKH	-	Sources of Karnatak History
S.I.I.	-	South Indian Inscriptions

❖❖



ಡಾ. ಎಂ. ಎಂ. ಕಲಬುರ್ಗಿ ಅವರು ಸುಪ್ರಸಿದ್ಧ ಸಂಶೋಧಕರು. ವ್ಯಕ್ತಿ ನೆಲೆಯಲ್ಲಿ ಅವರು ಬರೆದದ್ದು ಅಪಾರ; ಸಾಂಸ್ಥಿಕ ನೆಲೆಯಲ್ಲಿ ಅವರು ಮಾಡಿದ ಸಾಧನೆಗಳು ಶಿಖರಪ್ರಾಯವಾದವುಗಳು. ಗ್ರಾಮೀಣ ಶ್ರಮಸಂಸ್ಕೃತಿ ಹಾಗೂ ವಿಜಯಪುರ ಜಿಲ್ಲೆಯ, ಸಿಂದಗಿ ತಾಲ್ಲೂಕಿನ ಯರಗಲ್ಲ ಗ್ರಾಮದ ಅವಿಭಕ್ತ ಕುಟುಂಬ ಪರಿಸರ ಪ್ರಭಾವದಲ್ಲಿ ಬೆಳೆದು ಬಂದ ಡಾ. ಕಲಬುರ್ಗಿ ಅವರು ಇಡೀ ನಾಡನ್ನೇ ಅವಿಭಕ್ತವಾಗಿ ಕಂಡವರು.

ಹೀಗಾಗಿ ಅವರು ನಾಡಿನ ತುಂಬೆಲ್ಲ ಹರಡಿಕೊಂಡಿರುವ ಸಂಘ-ಸಂಸ್ಥೆಗಳೊಂದಿಗೆ ಮಠ-ಮಾನ್ಯಗಳೊಂದಿಗೆ ಸರಕಾರಿ ಇಲಾಖೆಗಳೊಂದಿಗೆ ಒಡನಾಟವಿಟ್ಟುಕೊಂಡು ಅನೇಕ ಯೋಜನೆಗಳನ್ನು ಹುಟ್ಟು ಹಾಕಿದರು. ಹಲವಾರು ಪ್ರತಿಷ್ಠಾನಗಳನ್ನು ಸ್ಥಾಪಿಸುತ್ತ ಅವುಗಳನ್ನು ಕನ್ನಡದ ಪ್ರಾತಿನಿಧಿಕ ಸಂಸ್ಥೆಗಳನ್ನಾಗಿ ರೂಪಿಸಿದರು.

ಇಂಥ ಅಪರೂಪದ ವ್ಯಕ್ತಿಯ ಬಹುಮುಖ ಸಾಧನೆಯನ್ನು ಅಕ್ಷರ, ದೃಶ್ಯ, ಧ್ವನಿ, ಚಿತ್ರ ಮಾಧ್ಯಮಗಳ ಮೂಲಕ ಪರಿಚಯಿಸುವುದು, ಅವರ ಸಮಗ್ರ ಸಾಹಿತ್ಯವನ್ನು ವಿಷಯಾನುಗುಣವಾಗಿ ವರ್ಗೀಕರಿಸಿ ಸಂಪುಟಗಳಲ್ಲಿ ಪ್ರಕಟಿಸುವುದು, 'ಡಾ.ಎಂ.ಎಂ.ಕಲಬುರ್ಗಿ ಸಮಗ್ರ ಸಾಹಿತ್ಯ ಪ್ರಕಟನ ಯೋಜನೆ'ಯ ಮುಖ್ಯ ಉದ್ದೇಶವಾಗಿದೆ.

ಈಗಾಗಲೇ ಇಂಥ ಹಲವು ಯೋಜನೆಗಳನ್ನು ಯಶಸ್ವಿಯಾಗಿ ಪೂರೈಸುತ್ತ ಬಂದ ನಮ್ಮ ವಚನ ಪಿತಾಮಹ ಡಾ. ಫ.ಗು.ಹಳಕಟ್ಟಿ ಸಂಶೋಧನ ಕೇಂದ್ರದ ಮೂಲಕ ಈ ಕಾರ್ಯವನ್ನು ಈಡೇರಿಸಲು ಅವಕಾಶ ದೊರೆತುದು ಸಂತೋಷದ ಸಂಗತಿ. ಈ ಕಾರ್ಯ ನಾವು ಭಾವಿಸಿದಷ್ಟು ಸುಲಭವಾದುದಲ್ಲ. ಅಲ್ಲಲ್ಲಿ ಚದುರಿ ಹೋಗಿರುವ ಪ್ರಕಟಿತ ಹಾಗೂ ಅಪ್ರಕಟಿತ ಕೃತಿಗಳು, ಚಿತ್ರಗಳು, ಧ್ವನಿ ಮುದ್ರಿಕೆಗಳು, ದೃಶ್ಯಮಾಧ್ಯಮಗಳು ಮತ್ತು ಪತ್ರಿಕೆಗಳಲ್ಲಿ ಪ್ರಕಟವಾದ ವಿಷಯಗಳನ್ನು ಸಂಗ್ರಹಿಸುವ ಹಂತಗಳಲ್ಲಿ ವಿದ್ವಾಂಸರು ವಿಶೇಷವಾಗಿ ಶ್ರಮಿಸಬೇಕಾಗುತ್ತದೆ. ನಮ್ಮ ಸುದೈವಕ್ಕೆ ಸಮರ್ಥ ಸಂಪಾದಕರಾದ ಡಾ. ವೀರಣ್ಣ ರಾಜೂರ ಹಾಗೂ ಎಲ್ಲ ಕಾರ್ಯಗಳನ್ನು ಸಂಯೋಜಿಸಲು ಡಾ. ಕೃಷ್ಣ ಕೊಲ್ಹಾರಕುಲಕರ್ಣಿ ಅವರು ದೊರಕಿದ್ದಾರೆ. ಈ ಯೋಜನೆಯ ಕಾರ್ಯದರ್ಶಿಗಳು, ಸಲಹಾ ಸಮಿತಿ ಸದಸ್ಯರು ಮತ್ತು ನಾಡಿನ ಹಲವಾರು ವಿದ್ವಾಂಸರು ಈ ಕಾರ್ಯದಲ್ಲಿ ಆಸಕ್ತಿವಹಿಸಿ ಕೈಜೋಡಿಸಿದ್ದಾರೆ. ಇವರೆಲ್ಲರ ಸಹಯೋಗದಲ್ಲಿ ಕನ್ನಡಕ್ಕೆ ಹೊಸದೊಂದು ಅಮೂಲ್ಯವಾದ ಆಕರ ಸಂಪತ್ತು ದೊರಕುವಂತಾದುದು ಹೆಮ್ಮೆಯ ಸಂಗತಿಯಾಗಿದೆ.

ಡಾ. ಎಂ.ಬಿ.ಪಾಟೀಲ

ಅಧ್ಯಕ್ಷರು, ಬಿ.ಎಲ್.ಡಿ.ಇ.ಸಂಸ್ಥೆ, ವಿಜಯಪುರ

ಗೃಹಸಚಿವರು, ಕರ್ನಾಟಕ ಸರ್ಕಾರ

ವಚನಪಿತಾಮಹ ಡಾ. ಫ.ಗು.ಹಳಕಟ್ಟಿ ಸಂಶೋಧನ ಕೇಂದ್ರ

ಬಿ.ಎಲ್.ಡಿ.ಇ.ಸಂಸ್ಥೆ, ವಿಜಯಪುರ – ೫೮೬೧೦೩

ದಿ ಪ್ರಿಂಟ್ ಪಾಯಿಂಟ್, ಬೆಂ. ಮೊ : 97390 67359